श्री महाशिवरात्री महोत्सवास
श्री क्षेत्र गोकर्णास

येणारे प्रवासी श्री वेदमूर्ती सुब्बाभट शेषभट मूळे याच्याकडे राहिल्यास, सर्व अनुकूलता करून देण्यात येईल

येथ तार ऑफीस आहे.

मोटार ऑफीस जवळ मादनगेरी

पत्ता— वे॥ सुब्बाभटजी शेषभटजी मूळे

पोस्ट- गोकर्ण.

ಶ್ರೀ ಮಹಾಶಿವರಾತ್ರಿಗೆ
ಶ್ರೀ ಕ್ಷೇತ್ರ ಗೋಕರ್ಣಕ್ಕೆ

ಪ್ರವಾಸಿಗಳಾಗಿ ಬರುವವರು, ಶ್ರೀ ವೇದಮೂರ್ತಿ ಸುಬ್ಬಾಭಟ್ಟ ಶೇಷಭಟ್ಟ ಮೂಳೆ ಇವರಲ್ಲಿ ಇಳಿದುಕೊಂಡರೆ ಎಲ್ಲಾ ತರದ ಅನುಕೂಲತೆಗಳನ್ನು ಮಾಡಿಕೊಡಲಾಗುವದು.

ಇಲ್ಲಿ ತಾರ ಆಫೀಸ ಇದೆ

ಮೋಟರ ಆಫೀಸ ಹತ್ತಿರ ಮಾದನಗೇರಿ

ಸಂಪೂರ್ಣಪತ್ತೆ:—

ವೇ॥ ರಾ॥ ರಾ॥ ಸುಬ್ಬಾಭಟ್ಟಜೀ ಶೇಷಂಭಟ್ಟಜೀ ಮೂಳೆ,

ಪೋಸ್ಟ:— ಗೋಕರ್ಣ

केनरा एज्युकेशन सोसायटीच सेक्रेटरि यांचें उत्तर.

रा. रा. कानडावृत्तकर्ते यास—

गेल्या सालीं आपल्या पत्रांत 'हितचिंतक' या टोपण नावानें एका सद्गृहस्थाने पत्र लिहून, केनरा एज्युकेशन सोसायटीच्या गेल्या रिपोर्टांतील हिशेबाच्या आकड्यासंबंधाने खुलासा विचारिला होता परंतु गव्हर्निंग बॉडीनें त्या पत्राचा पूर्ण विचार करून, सदरहू लेखकाला उत्तर देणें जरूर दिसत नाहीं, असा ठराव केला होता. अलीकडे 'कानडा शिक्षण सभेचा कारभार' या सदराखाली अंकोल्याचे रा. कृष्ण झळके यांच्या सहीनें 'हितचिंतकाच्याच लेखाचा बहुतेक अनुवाद करून, आपल्या पत्रांत प्रसिद्ध झालेला एक लेख आमच्या नजरेस आलेला आहे. त्या लेखांत त्यांनी गेल्या अकरा वर्षांच्या रिपोर्टांतील कांहीं आकड्यांचा खुलासा विचारिला आहे. हे गृहस्थ चांगले समजूतदार व सरळमनाचे असून, शाळेबद्दल त्यांच्या मनांत खरी कळकळ वसत आहे, हे आम्ही जाणून आहों. तरी शाळेचे रिपोर्ट वाचतांना यांच्या विचारास योग्य दिशा न मिळाल्याकारणानें सकृद्दर्शनी वर वर आंकडे पाहून, साहजिकच जी मनाची दिशाभूल होते, तशी याची झाली आहे, असें दुःखानें म्हणावे लागतें. तशांत, सर्वच अकरा वर्षांचे आकडे प्रसिद्ध झालेल्या तीनच रिपोर्टांत संकलित झाल्यामुळें, कोणतेंहि मत बनविण्यापूर्वी अथवा पूर्वग्रह करून घेण्याच्या अगोदर प्रतिवार्षिक आकडे, तत्संबंधीं ठराव व एतद्दर कागदपत्र यांचें परिशीलन करणे जरूर आहे हे त्यांच्या सारख्यासूज्ञास समजण्यासारख आहे

तूर्त इतक कळविणें जरूर आहे की, प्रसिद्ध झालेल्या रिपोर्टांतील चार वर्षांच्या, हिशेबापैकीं, पहिल्या दोन वर्षांचा हिशेब गव्हर्निंग बॉडीने नेमलेल्या हिशेब तपासनिसाकडून वेळींच तपासला गेला असून, सदर ऑडिट रिपोर्ट बॉडीपुढे येऊन पास होऊन, त्यावर कमिटीनें केलेल्या सूचनावरहुकूम काम चाललें आहे. त्यानंतरच्या दोन वर्षांच्या हिशेबाच्या तपासणीचे काम पूर्ण न झाल्यामुळे, व रिपोर्ट प्रसिद्ध करण्याची घाई असल्यामुळे, ऑडिट कमिटीनच त्या दोन वर्षांचा हिशेब तपासून घेऊन, चारहि वर्षांचा रिपोर्ट हिशेबासह प्रसिद्ध केला. तथापि त्या दोन वर्षांसाठी व गेल्या सालाबद्दलहि ऑडिटर नेमण्यात आला असून, त्याच्याकडून तपासणीचे काम चालू आहे. त्याच्याकडून ऑडिट रिपोर्ट हाती येताच तो रिपोर्ट व रा. पै यांचा लेख गव्हर्निंग बॉडीची स्पेशल सभा बोलावून त्यांच्यापुढे मांडण्यांत येईल व त्यांच्या हुकमाप्रमाणे रा. पै यांना उत्तर देण्यात येईल आणि बहुतेक त्याचवेळीं १९१९-२० या वर्षांचाही रिपोर्ट व हिशेब प्रसिद्ध करण्यात येऊन, यापुढे प्रत्येक वर्षाचे हिशेब वगैरे माहिती सालोसाल प्रसिद्ध करण्याचे ठरविले आहे. तथापि येथ इतके नमूद करणें जरूर आहे की, आम्ही यापुढें जो खुलासा करणार आहों त्यास लागणारे आकडे वगैरे माहिती सदरहू प्रसिद्ध झालेल्या तीनाहि रिपोर्टांतच असून, नवीन काहीं तयार करावयाची नाहीं. समाधानासाठीं जे काहीं पाहिजे आहे, ते त्यांतच असून, भिन्न भिन्न आंकड्यांमधील संबंध दर्शविण्यासाठीं कदाचित थोडाबहुत खुलासा करावा लागेल, त्वरेनें कळावे. हे विनंति.

कुमटा. ता. ३०-१२-१९२०.	जगन्नाथ विष्णु गावस्कर, सेक्रेटरी, केनरा एज्युकेशन सोसायटी,

ಎರಡನೇ ಜಿಲ್ಲಾ ಪರಿಷತ್ತು

ಅಯ್ಯಾ ಕಾನಡಾವೃತ್ತ ಪತ್ರದ ಸಂಪಾದಕರೆ

ಕಳೆದ ವರ್ಷ ಕಾರವಾರದಲ್ಲಿ ನೆರೆದ ಜಿಲ್ಲಾ ಪರಿಷತ್ತಿನಲ್ಲಿ ಮುಂದಿನ ಅಧಿವೇಶನವು ಶಿರಸಿಯಲ್ಲಿ ಕೂಡಬೇಕೆಂತ ಶಿರಸಿಯ ಪ್ರತಿನಿಧಿಗಳ ಅಪೇಕ್ಷೆಯಂತೆ ಅವರ ಕಡೆಯಿಂದ ನಾನು ಆಮಂತ್ರಣ ಕೊಟ್ಟಿರುತ್ತೇನೆ. ಪರಿಷತ್ತು ಕೂಡಿಸುವದರಿಂದ ಜನರಲ್ಲಿ ಜಾಗ್ರತೆಯನ್ನು ಹುಟ್ಟಿಸುವದಕ್ಕೂ, ರಾಜಕೀಯ ವಿಷಯದಲ್ಲಿ ಒಂದು ತರದ ಶಿಕ್ಷಣವನ್ನು ಕೊಡುವದಕ್ಕೂ ಅನುಕೂಲವಾಗುತ್ತದೆ, ಎಂಬ ಬಗ್ಗೆ ಸಂದೇಹವಿಲ್ಲ ಆದರೆ, ಕಳೆದ ವರ್ಷದ ಕಾರವಾರದ ಪರಿಷತ್ತಿನ ನಂತರ ಕಲಕತ್ತೆಯಲ್ಲಿ ಜಾಹೀರನ್ಯಾಸ ಮತ್ತು ಕಳೆದ ಡಿಸೆಂಬರದಲ್ಲಿ ನಾಗಪೂರದಲ್ಲಿ ರಾಷ್ಟ್ರೀಯ ಸಭೆ ಕೂಡಿದಂದಿನಿಂದ, ಎಲ್ಲ ಕಡೆಗೆ ಪರಿಸ್ಥಿತಿ ಬದಲಾಯಿಸಿ, ಮುಖಂಡರಲ್ಲಿ ಭಿನ್ನ ಮತಗಳು ಉತ್ಪನ್ನವಾಗಿ ಪರಸ್ಪರ ಭಿನ್ನವಾದ, ಸ್ವತಂತ್ರ ಶಾಖೆಗಳು ಅಸ್ತಿತ್ವದಲ್ಲಿ ಬಂದು ಗೊಂದಲ ಕಂಡುಬಿಸಿ ಅವೆ ಶಿರಸಿಯಲ್ಲಿ ನೆರಿಸಲಿಚ್ಛಿಸಿದ ಜಿಲ್ಲಾಪರಿಷತ್ತಿನ ವಿಷಯ ಆಲೋಚಿಸುತ್ತಿರುವಲ್ಲಿ, ಶಿರಸಿಯಲ್ಲಿ ದುರ್ದೈವದ ವಶಾತ ಪಕ್ಷಭೇದಕ್ಕೆ ಅನುಕೂಲವಾದ ಮತಭೇದಗಳು ಉಂಟಾದಲ್ಲಿ, ನಮ್ಮ ವೇಳ್ಯವ, ಶ್ರಮ ವೃಥಾ ವ್ಯಯವಾಗುವದು

ಆದರೆ ಪರಿಷತ್ತು ಕೂಡಿಸಲೇ ಬಾರದೆಂತ ನನ್ನ ಆಲೋಚನೆಯಿಲ್ಲ. ಜಿಲ್ಲಾ ಪರಿಷತ್ತಿನ ಸ್ವಾಗತ ಕಮಿಟಿಯು ಈ ಮೊದಲೇ ಜನ್ಮಗೊಂಡಿದೆ ಸದರೀ ಸ್ವಾಗತ ಮಂಡಳದವರು ಈ ವರುಷ ಜಿಲ್ಲಾ ಪರಿಷತ್ತು ಭರಾಯಿಸುವದು ಅವಶ್ಯವದೆ ಎಂತ ಅಭಿಪ್ರಾಯಪಡುವದಾದರೆ, ಅವರು ಅವಶ್ಯವಾಗಿ ಈ ಸಂದರ್ಭದಲ್ಲಿ ಮುಂದರಿಸಬಹುದು ನಾನು ನನ್ನಿಂದ ಕೂಡಿದಷ್ಟರಮಟ್ಟಿಗೆ ಅವರ ಸಂಗಡ ಸಹಕಾರಿತೆ ಮಾಡಲಿಕ್ಕೆ ತಯಾರಿದ್ದೇನೆ. ಮುಂದಾಳಾಗಿ ಕೆಲಸ ಮಾಡಲಿಕ್ಕೆ ಮಾತ್ರ, ನನ್ನ ಮನಸ್ಸು ಒಪ್ಪುವದಿಲ್ಲ ಎಂತ ನಾನು ವಿದಿತ ಮಾಡುತ್ತೇನೆ.

[illegible] ೧-೧-೧೯೨೧	ತಮ್ಮ ವಿಧೇಯ, ಎಸ್. ಎಸ್. ಕೇಶವಯ್ಯನ.

ನೋಟೀಸು.

ಮುಂಬಯಿ ಸರಕಾರದವರು ಕಾನಡಾ ಜಿಲ್ಲೆಯ ಫೋರೆಸ್ಟ ಪೊಲಿಸಿ ಕುರಿತು, ಕಳೆದ ತಾರೀಖು ೨೧ ನೆ ಸೆಪಟಂಬರ ೧೯೨೦ ದಿವಸ ಪ್ರಸಿದ್ಧ ಮಾಡಿದ "ಪ್ರೆಸ ನೋಟಿನ" ಧೋರಣೆ ವಿಷಯ ವಿಚಾರಮಾಡ ಪದಕ್ಕೆ ಬರುವ ತಾರೀಖು ೧೬ನೇ ಜನವರಿ ೧೯೨೧ನೇ ದಿವಸ ಕಾರವಾರ ಕಾನಡಾ ಡಿಸ್ಟ್ರಿಕ್ಟ ಕಮಿಟಿ ಹಾಪಿಸಿನಲ್ಲಿ (ಮುರಾರಿ ಸಖಾರಾಮ ಪಾಯ್ ಮೇಲೆ) ಸಾಯಂಕಾಲ ೪ ಘಂಟೆಗೆ ಕಾನಡಾ ಡಿಸ್ಟ್ರಿಕ್ಟ ಕಮಿಟಿಯು ತಾಲೂಕ ವ ಪೇಟಾಗಳಲ್ಲಿರುವ ಮೆಂಬರರ ಸಭೆ ಕೂಡುವದು ನಿಶ್ಚಯಿಸಿ ಅದೆ ಅದಕ್ಕೆ ಸದರ ಕಮಿಟಿಯು ಎಲ್ಲಾ ತಾಲೂಕ ವ ಪೇಟಾ ಮೆಂಬರರು ದಯಮಾಡಿ ತಪ್ಪದೇ ಹಾಜರ ಇರಬೇಕಾಗಿ ವಿನಂತಿ ಅದೆ

ಫೋರೆಸ್ಟ ಸಂಬಂಧಿ ವಿಷಯವು ನಮ್ಮ ಇಡೀ ಜಿಲ್ಹೆಗೆ ಮಹತ್ವದ್ದಾದರಿಂದ ತಾವು ಈ ಸಭೆಗೆ ಅವಶ್ಯ ಹಾಜರ ಇರಬೇಕಲ್ಲದೆ, ತಮ್ಮ ಕಡೆಯ ಈ ವಿಷಯದಲ್ಲಿ ತಕ್ಕರರ ತೆಯುಳ್ಳ ಇತರ ಪ್ರಮುಖರನ್ನು ಸಹಾ ಕರಕೊಂಡು ಬರುವಹಾಗೆ ಮಾಡಬೇಕಾಗಿ ವಿಶೇಷ ವಿನಂತಿ ಮಾಡುತ್ತೇನೆ ಉದಾಸೀನ ಮಾಡಲಿಕ್ಕಿಲ್ಲೆಂತಾ ನಂಬುತ್ತೇನೆ

ತಾಜಾ ಕಲಮ— ನಮ್ಮ ಜಿಲ್ಹೆಯಲ್ಲಿ ಜಂಗಲ ಸಂಬಂಧ ವ್ಯವಹಾರ ಸಂಭವಿಸ ವ ತ್ರಾಸ ವ ಸಕ್ತಿಗಳ ಸವಿಸ್ತರ ಹಕೀಕತ್ತು ಸಮಕ್ಷ ನಮ್ಮ ಇಲಾಖಾಧಿಪತಿ ನೇಕ ನಾಮದಾರ ಗವರ್ನರ ಸಾಹೇಬರವರ ಮುಂದೆ ಇಡಲಿಕ್ಕೆ ನಮಗೆ ಅನುಕೂಲವಾಗುವಹಾಗೆ, ನೇಕ ನಾಮದಾರ ಗವರ್ನರ ಇಲ್ಲಿಗೆ (ಕಾರವಾರಕ್ಕೆ) ಬರುತ್ತಿರುವಂತೆ ಈ ಜಿಲ್ಹೆ ತರ್ಫೇಯಿಂದ ವಿನಂತಿ ಮಾಡುವಹಾಗಿ ಸರ ನಾರಾಯಣರಾವ ಚಂದಾವರಕರ ಇವರಕಡಿಯಿಂದ ಸದ್ಯದಲ್ಲಿ ಸಗರನೆ ಬಂದಿರುತ್ತದೆ ಅದಕ್ಕೆ ತಮ್ಮೆಲ್ಲರ ಅನುಮತಿ ನಿಶ್ಚಯಿಸಿ, ಇರಲೇಬೇಕೆಂಬ ಕಾರಣದಿಂದ, ನಾವು (ಇಲ್ಲಿಯ ಕಮಿಟಿಯವರು) ಕಾಲಿಗೆ ಇದ್ದಬಗ್ಗೆ ತಂತಿದ್ವಾರಾ ಸರ ನಾರಾಯಣರಾಯರಿಗೆ ಉತ್ತರ ಕೊಟ್ಟಿರುತ್ತದೆ ಮತ್ತು ತಮ್ಮ ಲೇಖಿ ಸಂಮತಿ ಇರುವದಾಗಿ ಸಭೆಗೆ ಕೂಡಲೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಇವೆಲ್ಲ ಸಂಗತಿಗಳ ವಿಮರ್ಶನೆ, ಬರುವ ಜನವರಿಯೊಳಗೇನೇ ಮಾಡುವ ಅಗತ್ಯ ಉಂಟಾದ್ದರಿಂದ, ಸದರಿ ೧೬ ನೇ ತಾರೀಖಿನ ಸಭೆಗೆ ತಾವು ತಪ್ಪದೇ ವೇಳೆ ಸಾಧಿಸಿದಂತೆ ಹಾಜರ ಇರುವದಾಗಿ ಪೂರ್ಣ ನಂಬಿದ್ದೇವೆ

M. R. Telang

ಚೇರಮನ ಡಿಸ್ಟ್ರಿಕ್ಟ ಕಮಿಟಿ, ಕಾರವಾರ.

ಕಾನಡಾವೃತ್ತ

ಗುರುವಾರ, ತಾರೀಖು ೬ ನೇ ಜನವರಿ ೧೯೨೧.

ನಾಗಪೂರದಲ್ಲಿ ರಾಷ್ಟ್ರೀಯ ಸಭೆ!

ಅಪೂರ್ವ ಅನುಪಮೇಯ ಅಧಿವೇಶನ!!

ಅಸಹಕಾರಿತೆಯ ವಿಲಕ್ಷಣ ಪ್ರಭಾವ!!!

(ನಮ್ಮ ಖಾತವಿದಾರರಿಂದ)

ಕಲಕತ್ತೆಯ ಖಾಸಾ ರಾಷ್ಟ್ರೀಯ ಸಭೆಯಲ್ಲಿ ಮಹಾತ್ಮಾ ಗಾಂಧಿಯವರ ಅಸಹಕಾರಿತೆಯ ಕಾರ್ಯಕ್ರಮವು ಮಂಜೂರಾದಂದಿನಿಂದ, ಜನರೆಲ್ಲರೂ ವಿಶೇಷವಾಗಿ ಮಹಾತ್ಮರ ಕಾರ್ಯಕ್ರಮಕ್ಕೆ ಒಪ್ಪದವರು, ನಾಗಪುರದ ರಾಷ್ಟ್ರೀಯ ಸಭೆಯ ಕಡೆಗೆ ಕಣ್ಣಿಟ್ಟಿದ್ದರು. ಗಾಂಧಿ ಪಕ್ಷದವರು ಅಸಹಕಾರಿತೆಯನ್ನು ಆಚರಿಸಿ, ಸ್ವರಾಜ್ಯ-ಸಾಧನಕ್ಕೆ ಅಸಹಕಾರಿತೆಯು ಎಷ್ಟು ಉಪಯೋಗವಾದೀತೆಂಬದನ್ನು ತೋರಿಸುವದರಲ್ಲಿ ಮಗ್ನರಾಗಿದ್ದರು; ರಾಷ್ಟ್ರೀಯ ಪಕ್ಷದವರು ಗಾಂಧಿಯವರ ಕಾರ್ಯಕ್ರಮವನ್ನು ರಾಷ್ಟ್ರಾಜ್ಞೆಯೆಂದು ಮನ್ನಿಸಿದರೂ, ಗಾಂಧಿ ಕಾರ್ಯಕ್ರಮವು ಹ್ಯಾಗೆ ಅಪೂರ್ಣವದೆ, ಹ್ಯಾಗೆ ಅಪಾಯಕಾರಕವದೆ ಎಂಬದನ್ನು ತೋರಿಸಿ, ಇಷ್ಟ ಸುಧಾರಣೆಗಳನ್ನು ನಾಗಪುರದಲ್ಲಿ ಮಾಡಿಕೊಳ್ಳಬೇಕೆಂದು, ಕಳೆದ ೨-೩ ತಿಂಗಳಲ್ಲಿ ಚಳವಳಿ ಮಾಡುತ್ತಿದ್ದರು; ಕೆಲ ರಾಷ್ಟ್ರೀಯರು ಕಲಕತ್ತೆಯ ಠರಾವು ರಾಷ್ಟ್ರದ ಮತಪ್ರದರ್ಶಕವಲ್ಲೆಂದು ಹೇಳಿ, ಅದನ್ನು ಮಾನ್ಯ ಮಾಡಿ, ನಾಗಪುರದ ರಾಷ್ಟ್ರೀಯ ಸಭೆಯಲ್ಲಿ ತಮ್ಮ ಮತವೇ ರಾಷ್ಟ್ರದ ವಿಚಾರಿ ಮತವೆಂದು ನಾಗಪುರದಲ್ಲಿ ತೋರಿಸುತ್ತೇವೆಂದು ಹೇಳುತ್ತಿದ್ದರು. ಹೀಗೆ, ಪ್ರತಿಯೊಬ್ಬರು ನಾಗಪೂರದ ಕಡೆಗೆ ಕಣ್ಣಿಟ್ಟು ಕೂತುಕೊಂಡಿದ್ದರು. ಅವರೊಳಗೂ, ಈ ಅಧಿವೇಶನದಲ್ಲಿ ರಾಷ್ಟ್ರೀಯ ಸಭೆಯ ಘಟನೆ ತಿದ್ದುಪಡಿ ಮಾಡುವ ಒಂದು ಸೂಚನೆಯಿದೆ. 'ಹಿಂದೀ ಜನರ ಇಚ್ಛೆಯಂತೆ ಸ್ವರಾಜ್ಯ ಬೇಕು' ಎಂಬ ಮೋಘವು ಶಬ್ದಗಳನ್ನಿಡದ, ಘಟನೆಯಲ್ಲಿ 'ಬ್ರಿಟಿಶ ಸಂಬಂಧದ ಸ್ಪಷ್ಟ ಉಲ್ಲೇಖವಿರಬೇಕು, ಎಂದು ಒಂದು ಪಕ್ಷದ ಮತವಿದ್ದರೆ, ಇನ್ನೊಂದು ಪಕ್ಷವು ಬ್ರಿಟಿಶ ಸಂಬಂಧವಿರಲಿ, ಇರದಿರಲಿ, ಅದರ ವಿಷಯ ವಿಶೇಷ ಚರ್ಚೆಯೇಕೆ? ಸ್ವರಾಜ್ಯ ಪ್ರಾಪ್ತಿಯಾದಮೇಲೆ, ಬ್ರಿಟಿಶ ಸಂಬಂಧ ಬೇಕೋ, ಬೇಡವೆಂಬ ಸಂಗತಿಯನ್ನು ನಾವು ನಿರ್ಣಯಿಸುವಾ. ಈಗ ಬ್ರಿಟಿಶ ಸಂಬಂಧದ ವಿಷಯ ಅನಾವಶ್ಯಕ ವಾದವಿವಾದವೇಕೆ?' ಹೀಗನ್ನುತ್ತಿದ್ದರು. ಇದಲ್ಲದೆ, ಹೊಸ ಘಟನೆಯಂತೆ ಪ್ರತಿನಿಧಿಗಳ ಸಂಖ್ಯೆಯು ನಿಯಮಿತವಾಗುವದು. ಈ ಪರ್ಷ ಹೋಗಿ, ರಾಷ್ಟ್ರೀಯ ಪಾರ್ಲಿಮೆಂಟಿನ ಕಾರಭಾರ ನೋಡಿ ಬರುವಾ, ಎಂದು ಅನೇಕರು ಯೋಚಿಸಿದ್ದರು. ಅನೇಕ ಕಾರಣಗಳಿಂದ ನಾಗಪೂರದ ರಾಷ್ಟ್ರೀಯ ಸಭೆಗೆ ಅತಿ ಮಹತ್ವ ಪ್ರಾಪ್ತವಾಗಿತ್ತು.

* * * *

ಕಳೆದ ವಕ್ಷದಿಂದ, ಯಾಕೆ, ಕಳೆದ ಒಂದು ತಿಂಗಳಿನಿಂದ— ನಾಗಪುರದಲ್ಲಿ ತಮ್ಮ ಮತ ಪ್ರಚಾರಕ್ಕಾಗಿ, ಹಾಗೆ ನಾಗಪೂರದ ರಾಜಕೀಯ ಹವಾಮಾನ ನೋಡಲಿಕ್ಕೆಂದು, ಭರತಖಂಡದೊಳಗಿನ ಅಲ್ಲಲ್ಲಿಯ ಮುಂದಾಳುಗಳು ಉಪನ್ಯಾಸಗಳ ಮಳೆಗರೆಯುತ್ತಿದ್ದರೆಂದು ಹೇಳಿದರೆ, ಅದೇನು ಅತಿಶಯೋಕ್ತಿಯಾಗಲಿಕ್ಕಿಲ್ಲ. ಬಂಗಾಲದಿಂದ ಶ್ರೀಯುತ ಚಿತ್ತರಂಜನ ದಾಸರು ಕೌನ್ಸಿಲು ಬಹಿಷ್ಕಾರ, ಸರಕಾರೀ ಶಿಕ್ಷಣ ಸಂಸ್ಥೆಗಳ ಬಹಿಷ್ಕಾರ, ಇವುಗಳನ್ನು ನಿಷೇಧಿಸಿದರೆ, ಬೆಳಗಾವಿಯ ಶ್ರೀಯುತ ದೇಶಪಾಂಡೆಯವರು ಅವರ ತತ್ವಗಳನ್ನೆತ್ತಿ ಹಿಡಿಸಿ, ಗಾಂಧೀ ಪಕ್ಷವನ್ನು ಸಂಡಿಸಿದರು. ಕಾಂಗ್ರೆಸಿನ ಕಾರ್ಯದರ್ಶಿಗಳಾದ ಶ್ರೀಯುತ ಪಟೇಲರು ನಾಗಪೂರಕ್ಕೆ ಹೋಗಿಬರುತ್ತಿದ್ದರು. ಮಹಾತ್ಮಾ ಗಾಂಧಿಯವರಂತೂ ಇಡೀ ಭರತಖಂಡದೊಳಗಿನ ತಮ್ಮ ಪ್ರವಾಸವನ್ನು ಕಳೆದ ತಾರೀಖು ೨೬ ರಿಂದ ನಾಗಪೂರದಲ್ಲಿ ಮುಕ್ಕಾಮು ಮಾಡಿಕೊಂಡಿದ್ದಾರೆ; ಮೌಲಾನಾ ಶೌಕತ ಅಲ್ಲಿಯವರು ಮಹಾತ್ಮಾ ಗಾಂಧಿಯವರ ಸಂಗತ ನಾಗಪೂರಕ್ಕೆ ಬಂದಿದ್ದಾರೆಂದು ಹೇಳುವ ಅವಶ್ಯಕತೆ ಇರಲಿಲ್ಲ.

* * * *

ರಾಷ್ಟ್ರೀಯ ಸಭೆಯ ಅಧಿವೇಶನದ ತಯಾರಿಯನ್ನು ನಾಗಪೂರಕರರು ಬಲು ಉತ್ಸಾಹದಿಂದ ಹಗಲಿರುಳು ಮಾಡಿದರು. ಪ್ರತಿನಿಧಿಗಳಿಗೆ ರಾಷ್ಟ್ರೀಯ ಸಭೆಗೆ ಬರಹೋಗಲು ಸೋಯಿಯಾಗಬೇಕೆಂದು, ಒಂದು ಕೊಂಗ್ರೆಸ ನಗರವನ್ನು ನಿರ್ಮಿಸಿರುವರು. ಮಧ್ಯದಲ್ಲಿ ೧೫-೧೬ ಸಾವಿರ ಜನರು ಕೂಡಬಹುದಾದ ಅಂದವಾದ ಮಂಟಪವನ್ನು ನಿರ್ಮಿಸಿ, ಸುತ್ತಲೂ ಪ್ರತಿನಿಧಿಗಳಿಗೆ ಇಳಕೊಳ್ಳಲು, ಗುಡಾರಗಳನ್ನು ಹೊಡೆದಿರುವರು. ಸಾಹೇಬ ಪದ್ಧತಿಯಿಂದ ವಾಸಮಾಡುವವರಿಗಾಗಿ, ಬೇರೆ ಗುಡಾರಗಳ ವ್ಯವಸ್ಥೆ ಮಾಡಿರುವರು. ಪರಸ್ಥಳಿಕರಿಗೆ ಇದೊಂದು ಬೇರೆ ಊರೆಂಬಂತೆ ಭಾಸವಾಗುತ್ತಿತ್ತು. ಇಷ್ಟು ಈ ತಾತ್ಕಾಲಿಕ 'ಕಾಂಗ್ರೆಸು ನಗರಕ್ಕೆ' ಒಂದು ನಗರದ ಚಾವಟಿ ಇತ್ತು.

* * * *

ತಾರೀಖು ೨೦-೨೨ ರಿಂದ ರಾಷ್ಟ್ರಭಕ್ತರು ತಮ್ಮ ತಮ್ಮ ಗಂಟುಮೂಟೆಗಳನ್ನು ಕಟ್ಟಿಕೊಂಡು, ನಾಗಪುರಕೆ ಹೊರಟಿದ್ದರು. ಬಂಗಾಲ, ಬಿಹಾರ, ಮದ್ರಾಸ, ಮುಂಬಯಿ, ಪಂಜಾಬ, ಸಂಯುಕ್ತಪ್ರಾಂತ, ದಿಲ್ಲಿ ಮುಂತಾದ ಪ್ರಾಂತಗಳಿಂದ ಏಕಸಮನೆ ಪ್ರತಿನಿಧಿಗಳು ಬರಹತ್ತಿದ್ದರು. ಕೆಲ ಪ್ರಾಂತಗಳಿಂದ ಸ್ಪೆಶಲ ಉಗಿಬಂಡಿಯಿಂದ ಪ್ರತಿನಿಧಿಗಳು ಬಂದರು. ಈ ವರ್ಷ ಕರ್ನಾಟಕದಿಂದ ಎರಡು 'ಸ್ಪೆಶಲ' ಹೋದ ಸಂಗತಿಯು ಕರ್ನಾಟಕದ ಜಾಗ್ರತಿಯ ಲಕ್ಷಣವು. ಈ ವರ್ಷ ಒಟ್ಟು ಎಂಟು ಸ್ಪೆಶಲು ಟ್ರೇನುಗಳು ಬಂದಿದ್ದವು, ಸಂಯುಕ್ತ ಪ್ರಾಂತದಿಂದ ಒಂದು ಸಾವಿರ ಕಿಸಾನ (ಒಕ್ಕಲತನ ಮಾಡುವ ಜನರು) ಪ್ರತಿನಿಧಿಗಳು ಬಂದ ಸಂಗತಿಯು ನಮೂದಿಸತಕ್ಕದ್ದು ಅವಶ್ಯವು.

* * * *

ಅಧ್ಯಕ್ಷ ಶ್ರೀಯುತ ವಿಜಯರಾಘವಚಾರಿಯರು ಕಳೆದ ಶುಕ್ರವಾರ 'ಸ್ಪೇಶಲ' ಟ್ರೇನಿನಿಂದ, ಮುನ್ನೂರು ಪ್ರತಿನಿಧಿಗಳ ಸಮಾವೇಶ ಜೊತೆಗಿನ ಎಂಟು ಗಂಟೆಗೆ ಬಂದು ಮುಟ್ಟಿದರು. ಆಲ ಇಂಡಿಯಾ ಮುಸ್ಲೀಮ ಲೀಗಿನ ಅಧ್ಯಕ್ಷರಾದ ದಿಲ್ಲಿಯ ಡಾಕ್ಟರ ಅನ್ಸಾರಿಯವರು ೧೧॥ ಘಂಟೆಗೆ ಬಂದು ತಲ್ಪಿದರು. ಸ್ಟೇಶನಿನ ಮೇಲೆ ಸ್ವಾಗತ ಕಮಿಟಿಯ ಅಧ್ಯಕ್ಷ ಶೇಟ ಜಮನಾಲಾಲ, ಮಹಾತ್ಮಾ ಗಾಂಧಿ, ಲಾಲಾ ಲಜಪತರಾಯ, ಮೌಲಾನಾ ಶೌಕತ ಅಲ್ಲಿ, ಮಹಮ್ಮದ ಅಲ್ಲಿ, ಪಂಡಿತ ಮೋತಿಲಾಲ ನೆಹರು ಮುಂತಾದ ಮುಂದಾಳುಗಳು ಎದುರುಗೊಂಡಮೇಲೆ, ಮೆರವಣಿಗೆಗೆ ಪ್ರಾರಂಭವಾಯಿತು. ಮೊದಲಿನ ಮೋಟಾರಿನಲ್ಲಿ ಮಹಾತ್ಮಾ ಗಾಂಧಿಯವರು ಮಧ್ಯದಲ್ಲಿದ್ದು, ಅವರ ಎಡಬಲಕ್ಕೆ ರಾಷ್ಟ್ರೀಯ ಸಭೆಯ ಅಧ್ಯಕ್ಷ, ಆಲ ಇಂಡಿಯಾ ಮುಸ್ಲೀಮ ಲೀಗಿನ ಅಧ್ಯಕ್ಷ ಮಹಾಶಯರು ವಿರಾಜಮಾನರಾಗಿದ್ದರು. ಮೆರವಣಿಗೆಗೆ ಪ್ರಾರಂಭವಾದಲು ತಡವಾದ್ದರಿಂದ, ಮೆರವಣಿಗೆಯು ಶಹರದ ಮುಖ್ಯ ಮುಖ್ಯ ಮಾರ್ಗಗಳಿಂದ ಲಗುಬಗೆಯಿಂದ ನಡಿಸಬೇಕಾಯಿತು. ಮಾರ್ಗಗಳ ಎರಡೂ ಬಾಜುಗಳು ಜನಸಂದಣಿಯಿಂದ ತುಂಬಿಹೋಗಿದ್ದವು. ಮಾರ್ಗಗಳನ್ನು ಗುಡಿ-ತೋರಣ- ಪತಾಕೆಗಳಿಂದ ಜನರು ಬಲು ಉತ್ಸಾಹದಿಂದ ಅಲಂಕರಿಸಿದ್ದರು. ಮೆರವಣಿಗೆಯು ಸಾಗಿದಂತೆ, ಜನರ ಉತ್ಸಾಹಕ್ಕೆ ಭರತಿ ಬರುತ್ತಿತ್ತು. ಕಟ್ಟಕಡೆಗೆ, ಅಧ್ಯಕ್ಷರ ಮೋಟಾರು ಕೊಂಗ್ರೆಸನಗರಕ್ಕೆ ಬಂದು ಮುಟ್ಟಿತು.

* * * *

ರವಿವಾರ ಕಾಂಗ್ರೆಸಿನ ಅಧಿವೇಶನ! ಇಷ್ಟು ದಿವಸ ಚಾತಕ ಪಕ್ಷಿಯಂತೆ, ಹಾದಿ ಕಾಯುತ್ತಿದ್ದ ಅಧಿವೇಶನದ ಅಪೂರ್ವ ದಿವಸದ ಉದಯವಾಯಿತು! ಜನರೆಲ್ಲರು ನಿತ್ಯ ನೈಮಿತ್ತಿಕ ಕೆಲಸಗಳನ್ನು ಬೇಗನೆ ಮುಗಿಸಿ, ಕಾಂಗ್ರೆಸ ನಗರದ ಹಾದಿ ಹಿಡಿದರು. ಪ್ರತಿಯೊಬ್ಬರು ಒಂದೊಂದು ಆಸನವನ್ನು ಹಿಡಿದು ಕೂತುಕೊಂಡರು. ಕೊಂಗ್ರೆಸು ಪ್ರಾರಂಭವಾಗುವದು ಮಧ್ಯಾನ್ಹ ಒಂದು ಘಂಟೆಗಿದ್ದರು, ೧೦-೧೧ ಬಡಿಯುವದರೊಳಗೆ ಪ್ರತಿನಿಧಿಗಳೂ, ಪ್ರೇಕ್ಷಕರೂ ಇಷ್ಟು ಕೂತಿದರಲ್ಲ, ಇಡೀ ಅವಾಢವ್ಯ ಮಂಟಪದಲ್ಲಿ ಕಾಲೂರಲಿಕ್ಕೆ ಸ್ಥಳ ಸಿಗುವದು ಕಠಿಣವಾಯಿತು. ಪ್ರೇಕ್ಷಕರ ಟಿಕೀಟು ಬಂದ ಮಾಡಲ್ಪಟ್ಟವು, ಕಲ ಪ್ರೇಕ್ಷಕರು ಸ್ಥಳ ಸಿಗದೆ, ಮಂಡಪದ ಹೊರಗೆ ನಿಂತುಕೊಂಡರು. ಒಟ್ಟಿಗೆ ೧೬,೦೦೦ ಪ್ರತಿನಿಧಿಗಳು, ೩,೫೦೦ ಸ್ವಾಗತಕಮಿಟಿಯ ಸಭಾಸದರು, ೨,೫೦೦ ಪ್ರೇಕ್ಷಕರು ಹೀಗೆ ೨೨ ಸಾವಿರ ಶ್ರೋತೃವೃಂದವು ನೆರೆದಿತ್ತು! ಒಂದು ಸಾವಿರ ಸ್ತ್ರೀಯರು ಸಹ ಸಭೆಗೆ ಹಾಜರಿದ್ದರು! ರಾಷ್ಟ್ರೀಯ ಸಭೆಯ ಲೋಕಪ್ರಿಯತೆಯ ಹಾಗು ಜನರ ವಿಲಕ್ಷಣ ಜಾಗೃತಿಯ ಸಾಕ್ಷಿ ಇನ್ನೇನು ಬೇಕು?

* * * *

ನಾಗಪೂರಕರರು ರಾಷ್ಟ್ರೀಯ ಸಭೆಯ ಮಂಡಪವನ್ನು ಬಲು ಮನೋಹರವಾಗಿ ಶೃಂಗರಿಸಿದ್ದರು. ಅಲ್ಲಲ್ಲಿ ಪತಾಕೆ, ತೋರಣ, ಅವುಗಳಮೇಲೆ ಕೊರೆದ

ದೇಶಭಕ್ತರ ಮಹತ್ವದ ವಾಕ್ಯಗಳು ಶ್ರೋತೃವೃಂದಕ್ಕೆ ದೇಶಭಕ್ತಿಯ ಜ್ವಾಲೆಯನ್ನು ಉತ್ತೇಜಿಸುತ್ತಿದ್ದವು. ಉಚ್ಚಾಸನದ ಮುಂಭಾಗದಲ್ಲಿ ಭಾರತಮಾತೆಯ 'ತಿಲಕ' ರಾದ ಲೋಕಮಾನ್ಯ ಟಿಳಕರ ಸಂಗಮರವರಿ ಕಲ್ಲಿನ ಮೂರ್ತಿಯನ್ನು ಹೂಮಾಲೆಯಿಂದ ಭೂಷಿಸಿದ್ದರು. ಅದರಿಂದ ಇಡೀ ಮಂಟಪಕ್ಕೆ ವಿಲಕ್ಷಣ ಶೋಭೆ ಬಂದಿತ್ತು. ಇದಲ್ಲದೆ, ಲೋಕಮಾನ್ಯರ ಹಾಗು ಮಹಾತ್ಮರ ಎರಡು ಪುರುಷಾಕೃತಿಯ ಫೋಟೋಗಳನ್ನು ಅಧ್ಯಕ್ಷಸ್ಥಾನದ ಅಚೆ ಈಚೆಗೆ ತೂಗಡಿಸಿದ್ದರು. ಮಂಟಪದಲ್ಲಿ ಒಳ ಹೊಕ್ಕೊಡನೆ ಕೂಡಲೆ, ಪ್ರತಿಯೊಬ್ಬರ ದೃಷ್ಟಿಯು ಭಾರತಮಾತೆಯ 'ತಿಲಕ' ರ ಕಡೆಗೆ ಸಹಜವಾಗಿ ಹೋಗುತ್ತಿತ್ತು. ಒಟ್ಟಿಗೆ ನಾಗಪೂರಕರರು ಕಾಂಗ್ರೆಸ ಮಂಡಪವನ್ನು ಅಪೂರ್ವವಾಗಿ ಸುಶೋಭಿಸಿದ್ದರು. ಸಭೆಯ ಅಧಿವೇಶನವು ಅಪೂರ್ವವೇ! ಮಂಟಪಶೋಭೆಯು ಅಪೂರ್ವತರವು! ಇದಕ್ಕಾಗಿ ನಾಗಪೂರಕರರನ್ನು ಹೊಗಳಿದಷ್ಟು ಕಡಿಮೆ.

* * * *

ಸರಿಯಾಗಿ ೧॥ ಘಂಟೆಗೆ ಅಧ್ಯಕ್ಷ ಶ್ರೀಯುತ ಸಿ. ವಿಜಯರಾಘವಚಾರಿಯರು ಲಾಲಾ ಲಜಪತರಾಯ, ಪಂಡಿತ ಮೋತಿಲಾಲ ನೇಹರು ಮುಂತಾದ ಮಾಜಿ ಅಧ್ಯಕ್ಷರ ಸಹ ಮೇತ, ಮಂಟಪದಲ್ಲಿ ಪ್ರವೇಶಮಾಡಿದ ಕೂಡಲೆ 'ಬಂದೇ ಮಾತರಮ್' ದ ಹಿಂದೇ ಜಯಘೋಷವಾಯಿತು. ಸ್ವಾಗತ ಕಮಿಟಿಯ ಅಧ್ಯಕ್ಷ ಶ್ರೀ ಶೇಟ ಜಮುನಲಾಲ, ಡಾಕ್ಟರ ಮುಂಜೆ ಮುಂತಾದ ಪ್ರಮುಖ ಸಭಾಸದರು ಅಧ್ಯಕ್ಷರನ್ನು ಉಚ್ಚಾಸನಕ್ಕೆ ಕರೆದೊಯ್ದರು. ಅವರ ಹಿಂದೆ ಮಹಾತ್ಮಾ ಗಾಂಧಿಯವರ ಬಂದರು. ಆಗ 'ಮಹಾತ್ಮಾ ಗಾಂಧಿಕೀ ಜಯ' ಎಂಬ ಜಯಘೋಷದಿಂದ ಇಡೀ ಮಂಟಪವು ದುಮುದುಮಿಸಿತು. ಮಹಾತ್ಮರ ಆಗಮನದಿಂದ ಶ್ರೋತೃವೃಂದದಲ್ಲಿ ವಿಲಕ್ಷಣ ಉತ್ಸಾಹ ಉತ್ಪನ್ನವಾಯಿತು. ಮಹಾತ್ಮರ ಸಹವಾಸ ನೋಡುವವರಿಗೆ ಆ ನೋಟವು ಅಪೂರ್ವವಲ್ಲೆಂದು. ಯಾರು ಹೇಳರು? ಬ್ರಿಟಿಶ ಮಜೂರ ಪಕ್ಷದ ಮುಂದಾಳುಗಳಾದ, ಕರ್ನಲ ವೆಜ್ವುಡ, ಮಿ। ಬೆನ್ಸಪೂರ ಇವರ ಬಂದ ಕೂಡಲೆ, 'ಲೇಬರ ಪಾರ್ಟಿಕಿ ಜಯ' ಎಂಬ ಜಯಘೋಷದಿಂದ ಅವರನ್ನು ಸ್ವಾಗತೀಕರಿಸಿದರು.

* * * *

'ಬಂದೇ ಮಾತರಮ್' ದ ರಾಷ್ಟ್ರಗೀತವಾದಮೇಲೆ ಸ್ವಾಗತ ಕಮಿಟಿಯ ಅಧ್ಯಕ್ಷ ಶ್ರೀಯುತ ಶೇಟ ಜಮನಲಾಲ ಮಹಾಶಯರು ತಮ್ಮ ಸ್ವಾಗತ ಭಾಷಣವನ್ನು ಹಿಂದೀ ಭಾಷೆಯಲ್ಲಿ ಮಾಡಿದರು. ಭರತಖಂಡದ ದೇಶಭಕ್ತರಿಗೆ ಸ್ವಾಗತ ಮಾಡುವಾಗ ಶೆಟ್ಟರು ಸದ್ಯದ ಸ್ಥಿತಿಯ ಸಿಂಹಾವಲೋಕನವನ್ನು ಮಾಡಿ, ಅಸಹಕಾರಿತೆಯ ಹೊರತು ಶರಣೋಪಾಯವಿಲ್ಲೆಂದು ಹೇಳಿದರು. ಆಗ ಇಡೀ ಮಂಟಪದಲ್ಲಿ ಚಪ್ಪಾಳೆಗಳ ಘೋಷವಾಯಿತು. ಅಸಹಕಾರಿತೆಯಿಂದ ಸರಕಾರದ ಬಣ್ಣ ಇಳಿಯುತ್ತದೆ, ಆದರೆ ಕಠಿಣವಾಗ ಬೇಕೆಂಬುದನ್ನು ಸ್ವಲ್ಪದರಲ್ಲಿ ಸವಿಸ್ತಾರವಾಗಿ ನಿವೇದಿಸಿ ಸ್ವಸ್ಥಾನಾಪನ್ನರಾದರು.

* * * *

ಆಮೇಲೆ, ಪಂಡಿತ ವಿಶನನಾಥ ಶುಕ್ಲ ಇವರು ಹಿಂದೀ ಭಾಷೆಯಲ್ಲಿ ಶ್ರೀಯುತ ಚಾರಿಯರರ ದೇಶಸೇವೆಯನ್ನು ಹೊಗಳಿ, ಅವರ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಅರಿಕೆಮಾಡಿದರು. ಇದಕ್ಕೆ ಉರ್ದು ಭಾಷೆಯಲ್ಲಿ ಮಹಾತ್ಮಾ ಗಾಂಧಿಯವರು ಅನುಮೋದನ ಮಾಡಿದ್ದರು. ಮಹಾತ್ಮರು ಭಾಷಣ ಮಾಡುತ್ತಿರುವಾಗ ಚಪ್ಪಾಳೆ, ಧಿಕ್ಕಾರ ಮುಂತಾದ ಸಮ್ಮತಿ, ಅಥವಾ ನಿಷೇಧಪ್ರದರ್ಶಕ ಗದ್ದಲವನ್ನು ಮಾಡಬಾರದೆಂದು ವಿಶೇಷವಾಗಿ ಸೂಚಿಸಿದರು. ಇದೇ ಸೂಚನೆಗೆ ಪಂಡಿತ ಶ್ರೀಯುತ ಲಾಲಾ ಲಜಪತರಾಯ, ಬಂಗಾಲದ ಶ್ರೀಯುತ ಚಿತ್ತರಂಜನದಾಸ, ಮೌಲಾನಾ ಮಹಮ್ಮದ ಅಲ್ಲಿ ಮೊದಲಾದವರು ಪುಷ್ಟಿಯನಿತ್ತ ಮೇಲೆ ಅಧ್ಯಕ್ಷರ ಚಪ್ಪಾಳೆಗಳ ಜಯಘೋಷದಲ್ಲಿ ಅಧ್ಯಕ್ಷಪದವನ್ನು ಸ್ವೀಕರಿಸಿ ತಮ್ಮ ಭಾಷಣವನ್ನು ಓದಲಾರಂಭಿಸಿದರು.

* * * *

ಶ್ರೋತೃವೃಂದ [illegible] ಅಧ್ಯಕ್ಷರ ಭಾಷಣವು [illegible] ಕಠಿಣವಾ[illegible] ಪ್ರಸ್ತುತ ಚಳವಳಿ [illegible]

[illegible]

ಗಿರಿ [illegible]

ಕೂಡಲೆ [illegible] ವಿಷಯ [illegible] ಸೇರಿದರು [illegible] ರಾಷ್ಟ್ರೀಯ ಪಕ್ಷದವರ ಗಾಂಧಿ ಪಕ್ಷದ ವಿರುದ್ಧ [illegible] ಆದರೆ [illegible] ಪಕ್ಷದ ವಿಚಾರ [illegible] ಬಹುಮತವಾಯಿತು. ಗಾಂಧಿ ಪಕ್ಷದವರ ಅಸಹಕಾರಿತೆಯ ಅತ್ಯುತ್ಸಾಹದಲ್ಲಿ ಶ್ರೀ ದಾಸ ಪಕ್ಷದ ಪ್ರತಿನಿಧಿಗಳ [illegible] ಸಭೆಯಿಂದ ಸಭಾಸದರ ಚುನಾವಣೆಯ [illegible] ಮಾಡಿದರು. ಇದಕ್ಕೆ ದಾಸ ಪಕ್ಷದವರು ವಿರೋಧ ಮಾಡಿದರು. ಕೂಡಲೇ ಗಾಂಧಿ ಪಕ್ಷದವರ ಕಾಯಿಕ ಬಡದಾಟದಲ್ಲಿ ಪರಿಣಮಿಸಿತು. ಅಷ್ಟರಲ್ಲಿ ಅಧ್ಯಕ್ಷರು ಆ ಚುನಾವಣೆಯನ್ನು ರದ್ದುಪಡಿಸಿ, ಇನ್ನೊಮ್ಮೆ ಚುನಾವಣೆಗೆ ಅಪ್ಪಣೆ ಕೊಟ್ಟರು. ಎರಡನೆ ಚುನಾವಣೆಯನ್ನು ಮಾಡುವಾಗ, ಗಾಂಧಿ ಪಕ್ಷದವರು ಮೊದಲಿನ ಚುನಾವಣೆಯು ಕಾಯಿದೇಶೀರ ಇರುತ್ತದೆಂದು ಪ್ರತಿಪಾದಿಸಿದರು. ಇದೇ ಗದ್ದಲದಲ್ಲಿ ದಾಸ ಪಕ್ಷದವರು ತಮ್ಮ ಪಕ್ಷದವರ ಸಭಾಸದರನ್ನು ಆರಿಸಿಕೊಂಡರು. ಆಗ ಬಹಳೇ ಗೊಂದಲವಾಗಿ ಪ್ರತಿನಿಧಿಗಳು ಬೆತ್ತ, ಖುರ್ಚಿ ಮುಂತಾದ ಕೈಗೆ ಬಂದ ವಸ್ತುಗಳಿಂದ ಸ್ವಲ್ಪಕಾಲ ಯುದ್ಧ ಮಾಡಿದರು. ಇರಲಿ.

* * * *

ಸೋಮವಾರ ವಿಷಯನಿಯಾಮಕ ಮಂಡಳವು ಸಭೆಸೇರಿ, ಕಾಂಗ್ರೆಸದ ಧ್ಯೇಯದಮೇಲೆ ಬಹಳೇ ಚರ್ಚೆಯಾಯಿತು. 'ಬ್ರಿಟಿಶ ಸಂಬಂಧ' ದ ಸ್ವಲ್ಪ ಉಳಿದಿರಬೇಕೆಂದು ಕೆಲ ನೇಮಸ್ತ ರಾಷ್ಟ್ರೀಯರು ಅಭಿಪ್ರಾಯ ಪಟ್ಟರೆ 'ನಮಗೆ ಬ್ರಿಟಿಶ ಸಂಬಂಧವೇ ಬೇಡ. ನಾವು ರಿಪಬ್ಲಿಕ, ಅಂದರೆ, ಸ್ವತಂತ್ರ ರಾಷ್ಟ್ರವನ್ನೇ ಧ್ಯೇಯ ಮಾಡಬೇಕು' ಎಂದು ಜಹಾಲ ರಾಷ್ಟ್ರೀಯರು ಹೇಳಿದರು. ಕಟ್ಟಕಡೆಗೆ ಬಹಳ ವಾದವಿವಾದ ನಡೆದು, ಕಾಂಗ್ರೆಸ ಸಬ ಕಮಿಟಿಯು ಶಿಫಾರಸಿನಂತೆ ಯೋಗ್ಯ (legitimate) ಮತ್ತು ಶಾಂತ ಉಪಾಯಗಳಿಂದ ಹಿಂದೀ ಜನರ ಇಚ್ಛೆಯಂತೆ ಸ್ವರಾಜ್ಯ [illegible] ವಿಷಯನಿಯಾಮಕ ಮಂಡಳದಲ್ಲಿ ಬಹುಮತದಿಂದ ನಿರ್ಣಯವಾಯಿತು. ಧ್ಯೇಯದ ಬಗೆಗಿನ ಠರಾವು ಮಂಗಳವಾರ ೧೨ ಘಂಟೆಗೆ ರಾಷ್ಟ್ರೀಯ ಸಭೆಯ ಮುಂದೆ ಬಂತು.

* * * *

ಅಸಹಕಾರಿತೆಯ ಠರಾವಿನ ವಿಷಯ ತೀವ್ರ ಮತಭೇದ ನಡೆಯಿತು. ಗಾಂಧೀ ಪಕ್ಷದವರಂತೂ ತಮ್ಮ ಕಾರ್ಯಕ್ರಮವನ್ನು ಪ್ರಚಂಡ ಬಹುಮತದಿಂದ ಪಾಸುಮಾಡಿಸುವದೆ ಬಗೆಗಿಲ್ಲಿ ಸಂದೇಹವಿದ್ದಿಲ್ಲ. ಕಲಕತ್ತೆಯ ಒಂದಾ ಕಾಂಗ್ರೆಸಿನಮೇಲೆ ಸುಪ್ರಸಿದ್ಧ 'ಕೇಸರಿ' ಪತ್ರದ ಸಂಪಾದಕ, ಶ್ರೀಯುತ ನರಸೋಪಂತ ಕೇಳಕರ [illegible] ನೇತೃತ್ವದಲ್ಲಿ ಮಹಾರಾಷ್ಟ್ರದ ಲೋಕಮಾನ್ಯರ ಪಕ್ಷವು ಗಾಂಧಿ ಪಕ್ಷಕ್ಕೆ ಕೂಡಿಕೊಂಡಿದೆ. ಅದರಿಂದ ಮಹಾತ್ಮರ ಕಾರ್ಯಕ್ರಮವು ಕಾಂಗ್ರೆಸಿನಲ್ಲಿ ಪಾಸಿಯಾಗದಿದ್ದೀತೇ. ಅಲ್ಲ, ಕಾರ್ಯಕ್ಷಮವಾಗದು. ಆದರೂ ಮದ್ರಾಸ ಹಾಗು ಬಂಗಾಲ ರಾಷ್ಟ್ರೀಯರು ತಮ್ಮ ಕಡೆಯಿಂದ ಮಹಾತ್ಮಾ ಗಾಂಧಿಯವರ 'ರಾಷ್ಟ್ರಘಾತಕ' ಕಾರ್ಯಕ್ರಮದ ವಿರುದ್ಧ ಹೋರಾಡುತ್ತಿದ್ದರು. ಈ ವರ್ಷದ ಅಸಹಕಾರಿತೆಯಲ್ಲಿ ಪರದೇಶೀ ವಸ್ತುಗಳ ಬಹಿಷ್ಕಾರ, ಸ್ವದೇಶೀಯ ಪುರಸ್ಕಾರ ಈ ವಿಷಯಗಳು ಪ್ರಾಮುಖ್ಯವಾಗಿ ಬಂದೆ ಇರುವವು. ಹಿಂದೀ ವ್ಯಾಪಾರಸ್ಥರಿಗೆ ಪರದೇಶಿ ವಸ್ತುಗಳಿಗೆ ಕ್ರಮೇಣ ಬಹಿಷ್ಕಾರ ಹಾಕಬೇಕೆಂಬ ಆಜ್ಞೆಯನ್ನು ಮಾಡುವವರಿದ್ದಾರೆಂದು, ಪಟ್ಟ ವದಂತಿಯಿದೆ.

ಗೌಡ ಸಾರಸ್ವತ ಸ್ವಾರ್ಥ ಲೀಗ, ಮುಂಬಯಿ

ಶೋಕಪ್ರದರ್ಶಕ ಸಭೆ

ಗೌಡ ಸಾರಸ್ವತ ಲೀಗಿನ ಸನ್ಮಾನ್ಯ ಉಪಾಧ್ಯಕ್ಷ ಡಾಕ್ಟರ ನಾರಾಯಣ ಅಣ್ಣಾ ನ್ಯಾಕ ಇವರ ಅಕಾಲಿಕ ನಿಧನದಿಂದ, ಈ ಸಂಸ್ಥೆಗೆ ಹಾಗು ಜ್ಞಾತಿ ಬಂಧುಗಳಿಗೆ ಉಂಟಾದ ದುಃಖವನ್ನು ವ್ಯಕ್ತಗೊಳಿಸುವದಕ್ಕಾಗಿ, ರವಿವಾರ ತಾರೀಖು ೯ ನೇ ಜನವರಿ ೧೯೨೧ ನೇ ದಿವಸ ಸಾಯಂಕಾಲ ೪ ಘಂಟೆಗೆ ಮೋತಿಶಾ ಹೌಸ ನಂ ೩, ಎರಡನೇ ಮಾಳಿಗೆ, ತ್ರಿಭುವನ ರೋಡ ಗಿರಗಾಂವ, ಮುಂಬಯಿ, ಇಲ್ಲಿ ಲೀಗಿನ ವಿದ್ಯಮಾನ ಜ್ಞಾತಿ ಬಾಂಧವರದೊಂದು ಸಭೆಗೂಡುವದು. ಆ ಪ್ರಸಂಗದಲ್ಲಿ ಸಂಸ್ಥೆಯ ಸಭಾಸದರೂ, ವೈದ್ಯ ಡಾಕ್ಟರ ಮಹಾಶಯರೊಳಗೆ ಅವರ ಇರುವ ಜ್ಞಾತಿ ಬಾಂಧವರೂ ಅವಶ್ಯ ಹಾಜರ ಇರಬೇಕೆಂದು ವಿನಂತಿಯಿದೆ.

ವೆಂಕಟೇಶ್ವರ ಬಿಲ್ಡಿಂಗ, ಪ್ರಿನ್ಸೆಸ ಸ್ಟ್ರೀಟ, ತಾ ೧–೧–೨೧ } ನರಸಿಂಹ ಗೋವಿಂದ ಕಾಮತ. ಗೋವಿಂದ ಶ್ರೀಧರ ನಾಯಕ, ಕಾರ್ಯದರ್ಶಿಗಳು

ಸ್ಥಾನಿಕ ವೃತ್ತಾಂತ.

ಮಟಾ— ಹವಾಮಾನವು ಚಳಿಯದವೆ ಆದ ಜ್ವರ, ಕೆಮ್ಮು, ಮುಂತಾದ ರೋಗದಾಯಿ ಅಲ್ಲಲ್ಲಿ ಚತ್ತದೆ ಡಾಕ್ಟರ ಜನರಿಗೇನು ಅವಕಾಶವಿಲ್ಲ

ಬ ಹ್ಯಾಸ್ಕೂಲ ವಾರ್ಷಿಕ ತಪಾಸಣೆಬಗ್ಗೆ ದ ಭಾಗ ಇನಸ್ಪೆಕ್ಟರ ಸಾಹೇಬರು ಬಂದು ತಪಾಸಣೆ ಉತ್ತಿರುವರು ಕನ್ನಡ ಸ್ಕೂಲ ಮಾಸ್ತರ ಮಿ| ಯಾಜಿ ಕೆ ಎ ಸೂಸ್ಪ್ರೈಟಯು ಲೆಕ್ಕ ತಪಾಸಣೆಗೆ ನೇಮಿ ಟ ಕೆಲಸ ನಡೆದದೆ ?ಬ್ಬ ಹ್ಯಾಸ್ಕೂಲ ನಿಮಿತ್ತ ವು ಅಜ್ಞಖಾನೆಯಲ್ಲಿದೆಯಂತೆ '

ಷ್ಟಿಂದಿಗೆ ಶ್ಯಾನುಭೋಗರ ಸಂಪಿನ ಕಟ್ಟೆಯು ಎರಡೇ ಕತ್ತು ಹೋದರೂ, ಉಳಿದವು ಶ್ಯಾಬೀತ ಇದ್ದುವಂ ರಡು-ಮೂರು ಶ್ಯಾನುಭೋಗರಿಗೆ ಪ್ರಾಂತ ಸಾಹೇಬ ರನ್ನುವರಕ್ಕೆ ಜವಾಬಿಗೆ ಕರೆದಿದ್ದರಂತೆ ' ಅವರೆ ಮು ಕೊಳ್ಳದೆ ಮೋಹಬ್ಬತನಿ ಮಾಗಿದ್ದಾರಂತೆ '') ಕೆ ?

ೀಕರ್ಣ ತರ್ಫೇ ಬ| ಸ| ಇನಸ್ಪೆಕ್ಟರ ಮಿ| ಕಡೆ ಡಿಯವರು ಪ್ರಾಂತ ಸಾಹೇಬರ ಮುಕ್ತಾಫಲಗಳಿಗೆ ತ್ತು ಆ ಚಾರ್ಜು ಬಿಟ್ಟು ಉರಕೇರಿ ಶ್ಯಾನಭಾಗಿ ಪುನಃ ಹಿಡಿದು, ಕಟ್ಟೆ ಕಡೆಗೆ ಸಂಪಿನಲ್ಲಿ ಸೇರಿದ್ದು ಸಾನಹವಲ್ಲವೇ ?

ಮ್ಮ ದ ಭಾಗ ಕಮಿಶನರ ಸಾಹೇಬರು ನಮ್ಮ ಜಿ ವೇ ೧೦ನೇ ತಾರಿಖಿಗೆ ಬರುತ್ತಾರಂತ ಈಗಾದ ಶ್ಯಾನಭಾಗರ ಹೊಟ್ಟೆಬೆಂಕಿ ಶಮನವಾಗಬಹುದಾಗಿ ಕೆ.

ೀಲಿಸರು ಪರಿಶ್ರಮಪೂರ್ವಕ ಹಿಡಿದ ಜುಗಾರ ದ ಆರೋಪಿರಲ್ಲಿ ೯ ಜನರಿಗೆ ಹದಿನೈದು ರೂಪಾ ಕಿ ದಂಡದ ಶಿಕ್ಷೆ ವಿಧಿಸಲ್ಪಟ್ಟದೆ

ರವಾರದಿಂದ— ಕುಮಟಾವರೆಗೆ ಮೋಟಾರ ಬಂಡಿಗ ಡಿಯುತ್ತಾವೆ ರಸ್ತೆಗಳ ಅವ್ಯವಸ್ಥೆಯು ಮೂಲಕ ಟಾಯರುಗಳ ಉಪಯೋಗಕ್ಕೆ ಸರಕಾರಿ ಪ್ರತಿ ದೆಯಂತೆ ' ಇದರಿಂದ ನಿರುಪಾಯವಾಗಿ, ಮಾಂಧ ಬಂದಕ್ಕೆ ದುಪ್ಪಟ್ಟು ಹಾಕಲು ಹೇಳುತ್ತವೆ ರಸ್ತೆ ಭರಗಿಂದಾಗಲಿ

ಮ್ಮ ಲೋಕಪ್ರಿಯ ನ್ಯಾಯಪ್ರಿಯ ಸ| ಜಜ್ಜ ಮಿ|| ಳರವರು ಬಂದು ಹಾಜರಾಗಿ ಮಿ| ಕಲ್ಯಾಣಪೂ ಹಾದಿ ಕಾಯುತ್ತಿದ್ದಾರೆ

ಊ ತೇರ ರಾಮಾಕ್ಷೀ ದೇವಸ್ಥಾನದಲ್ಲಿ ಮಿ| ವಿ ವಿ | ವಿ ವಿ ರವರ ಅಧ್ಯಕ್ಷತೆಯಲ್ಲಿ ಗೌ| ಸಾ| ಬ್ರಾ| ಗೂಡಿ, ಡಾ| ನಾರಾಯಣರಾವ ಅಸ್ನಾ ನ್ಯಾಕರವರ ೀಕ ಪ್ರವಚನ ಕ ರವಾವು ಪಾಸಾಯಿತು.

ಪೂರ— ಈ ತಾಲೂಕ ಶ್ಯಾನುಭೋಗರು ಸಹ ಸಂಘದ ಅಪ್ಪಣೆಯಂತೆ ದಪ್ತರ ಬಂದ ಇಟ್ಟಿ ತೆ ' ಮೂಡಗಾಳಿಯು ಬೀಸ ತ್ತಿದ್ದರೂ, ಸಮು ಯಿಂದ ಈ ವಡವಾಗ್ನಿಯು ಘಟ್ಟಕ್ಕೆ ಸಹ ಬಡಿ ಮಾಮಲೇದಾರ ಸಾಹೇಬರ ಚಿಂತಾರದಾಗಿರು

ಕೋಲಾ— ಹವಾಮಾನವು ನೆಟ್ಟಗಿಲ್ಲ ಜ್ವ ಲ್ಮಾ ಕಡೆಯಲ್ಲಿದೆ ಮ್ಯಾಲಿಯೂ ತುರಳೆಕವದೆ ಡಾ| ಕಲ್ಲೇಕ್ಟರ ಮೆ|| ಗುಲಮಾಡಿ ಸಾಹೇಬರ ಸ್ವಾ ೕಪಿಸಸಮೇತ ಇಲ್ಲಿ ಬಂದವೆ ತಪಾಸಣೆ ಕೆಲಸ

ಯು ಶಾನಭೋಗರ ಸಂಪಿನ ೬ ಆರು ಜನರಿಗೆ ಫು ಂತಾ ಡಿಸಮಿಸ ಯಾಕೆ ಮಾಡಬಾರದೆಂತ ಜವಾ ಉವರೆ, ತಾರೀಖು ೧ನೇದಿವಸ ಸಮಕ್ಷ ಹಾಜರಾ ಗಿ ಸಾಹೇಬರು ನೋಟಿಸ ಕೊಟ್ಟದ್ದರಂತೆ ಅವರು ಹೋಗಿ । ತಾವೇನು ಫುಸಾರಿಗಳಲ್ಲ, ಸಂಘದ ಅಪ್ಪಣೆಯಂತೆ ನಾವು ಮಾಡಿದ್ದೇವೆ ೀರವೆಂತಲೇ ಮಾಡಿದ್ದೇವೆ ಇನ್ನು ಮರ್ಜಿಯಂ ಹುದು " ಎಂದು ರೋಖಠೋಖ ಜವಾಬು ಕ

ಜನರು ಕೊಟ್ಟರಂತೆ '

ಕೆಲವು ವೇನರನ ಶಾನಭೋಗರು ಚ್ಯಾರ್ಜತಕ್ಕೊಂಡರಂ ತೆ ಕಾರವಾರದಿಂದ ೫-೬ಜನ ಉಮೇದ್ವಾರರು ಬಂದುಚಾ ರ್ಜ ತಕ್ಕೊಂಡರು ಅವರಲ್ಲಿ ಬಿಸೇಯ ಚಾರ್ಜ ತಕ್ಕೊಂ ಡ ಉಮೇದ್ವಾರನೊಬ್ಬನು ಬಿಸೇಗೆ ಹೋದಾಗ್ಗೆ ಜನರು ಅವನ ವಿಷಯ ಅಸಹಕಾರಿತೆಯನ್ನು ಮಾಡಿದರಂತೆ' ಚ ಹಾ ದುಕಾನದಲ್ಲಿ ಹೋದರೆ, ಚಹಾ ಕೊಡಲಿಲ್ಲ. ಊಟದ ಸಾಮಾನು ತಕ್ಕೊಳ್ಳಲಿಕ್ಕೆ ಹೋದರೆ, ಸಾಮಾನು ಸಿಗಲಿ ಲ್ಲ ಪಾತ್ರಗಳೂ ಸಿಗಲಿಲ್ಲ ಹಗ್ಗ ಸಹ ಕೊಡಲಿಲ್ಲ ಹೀಗಾ ಗಿ ಉಪವಾಸವೇ, ನಾನು ಅಂಕೋಲೆಗೆ ಬಂದೆನು ಎಂತ ಎಲ್ಲ ವರದಿ ಮೇಲಾಧಿಕಾರಿಗಳಿಗೆ ಕೊಟ್ಟರಾಗಿ ತಿಳಿಯುತ್ತ ದೆ

ಖಿಲಾಫತ ಪ್ರಶ್ನೆಯ ಮಾಹೀತಿ ಮಾಡಿ ಜ್ಞಾತಿಬಾಂಧವ ರೊಳಗೆ ಜಾಗ್ರತೆಯನ್ನುಂಟು ಮಾಡುವರೆ ನಿಜಾಮು, ಹೈ ದರಾಬಾದದ ಒಬ್ಬ ಮೌಲಾನಾ ಸಾಹೇಬರು ಇಲ್ಲಿ ಬಂದಿ ರುವರು ಈಹೊತ್ತು ನಾಳೆ ಜಾಹೀರ ಸಭೆಯಾಗುವದದೆ

ಶಿರ್ಶಿ— ಪ್ರತಿ ಶನಿವಾರದಂತೆ, ಗಾಂಧಿ ಆಶ್ರಮ ದಲ್ಲಿ ವಿಜಯ ವ್ಯಾಖ್ಯಾನಮಾಲೆಯ ಮೂರನೇ ವ್ಯಾ ಖ್ಯಾನವು ಕಳೆದ ೨೯ ನೇ ತಾರೀಖಿನ ದಿವಸ ' ಭಾರ ತೀಯರ ಕರ್ತವ್ಯ ' ಎಂಬ ವಿಷಯದಮೇಲೆ ಆಗಿ, ಶ್ರೀ| ಹೊಪ್ಪೆ ಮೊಪಲಾಪವರ ಸುಶ್ರಾವ್ಯ ವ್ಯಾಖ್ಯಾ ನಗಳಾದವು

ಶ್ರೀಯುತ ಕೊಲ್ಹಾಳಿಯವರು ಮುನಿಸಿಪಾಲಿಟಿ ಯೊಳಗಿನ ತಮ್ಮ ಖುರ್ಚೆಗೆ ರಾಜೀನಾಮೆಯನ್ನು ಕೊಟ್ಟರುವರು

ಕುಮಟಾ, ಅಂಕೋಲಾ, ಹೊನ್ನಾವರ ತಾಲೂ ಕುಗಳಲ್ಲಿಯ ಶಾನಭೋಗರಲ್ಲಿರುವ ಐಕ್ಯವನ್ನೂ ಸರ ಳತನವನ್ನೂ ಕಂಡು, ಇಲ್ಲಿಯ ಶಾನಭೋಗರು ನಾಚಿ ಕೆಯಿಂದ ತಲೆ ಕೆಳಗೆ ಹಾಕಿಕೊಂಡು, ' ಕುಂಡೆ ಸುಟ್ಟ ಬೆಕ್ಕಿನಂತೆ" ಅತ್ತಿತ್ತ ಅಸ್ವಾಸ್ಥಿ ಕಟ್ಟಕಡೆಗೆ ಮುಸುಕು ಹಾಕಿಕೊಂಡು ಕೂತಿರುವರು ಸಂಪ್ರ ಮಾತಿ ಒಂದೆರಡು ತಿಂಗಳವರೆಗಾದರೂ, ಇವರಿಗೆ ಮನೆಯ ಖರ್ಚನ್ನೂ ಆಫೀಸಿನ ಖರ್ಚನ್ನೂ ಸಾಗಿ ಸುವದು ಕಠಿಣವೆಂತ ಕಾಣುತ್ತದೆ!

ಇಲ್ಲಿಯ ಇಂಗ್ಲೀಷ ಶಾಲೆಯಲ್ಲಿ ಸುಮಾರು ಇಪ್ಪ ತ್ತು ಹುಡುಗರು ಶಾಲೆಯನ್ನು ಬಿಟ್ಟಿರುವರಂತೆ!

ಹೋದ ಶನಿವಾರ ವಿಜಯ ವ್ಯಾಖ್ಯಾನಮಾಲೆಯ ನಾಲ್ಕನೆ ವ್ಯಾಖ್ಯಾನವು "ಹಿಂದುಸ್ಥಾನದ ಹೀನ ಸ್ಥಿತಿ ' ಎಂಬ ವಿಷಯದಮೇಲೆ ಆಗಿ, ಶ್ರೀ|| ಹೊಪ್ಪೆ, ಕಾಮತ, ಧಾಕಪ್ಪಾ ಇವರ ಸಮಯೋಚಿತ ಭಾಷಣ ಗಳಾದವು

ಹೊನ್ನಾವರ— ಡಿ. ಕಲೆಕ್ಟರ ಕೊಯಿಮುತ್ತೂರ ಸಾಹೇಬರ ಸ್ವಾರಿಯು ಇಲ್ಲಿಗೆ ಬಂದವೆ.

ಶ್ಯಾನಭೋಗ ಜನರ ಸಂಪು ಚಾಲು ಆದೆ ಅವರ ದಪ್ತರಗಳನ್ನು ಉಮೇದವಾರರು ತಕ್ಕೊಂಡಿರುತ್ತಾ ರಂತೆ! ಪಟೇಲ ಬನರು ತಮಗೆ ಪಗಾರು ಸಾಲದೆಂದು ಮಾಮಲೇದಾರ ಸಾಹೇಬರ ಕಡಿಗೆ ಅರ್ಜಿಮಾಡಿ ಕೊಂಡಿರುತ್ತಾರೆ ಉಗ್ರಾಣಿಜನರು ಸಹಾ ತಯಾರಿ ಮೇಲೆ ಇರುತ್ತಾರೆಂತ ತಿಳಿಯುತ್ತದೆ

ಡಿ| ಡೆ| ಕಲೆಕ್ಟರ ಸಾಹೇಬರ ಅಡಿಗೆಭಟ್ಟನು ವಿಷ ತಕ್ಕೊಂಡು ಪ್ರಾಣಬಿಟ್ಟನು ಕಾರಣವು " तोले तो मा मांग, नै बोलतो बाप कुत्ता खाताय" ಎಂಬಂತೆ ಆಗಿ ಅದೆ ಪಾಪವು ತಾನಾಗಿಯೇ ಮೇಲೆ ಬರುವದು.

ಜಯ!

ಾರತಪುತ್ರರ ಪರ್ಜೆ ವಿನಿರ ಬೇಕು ? ಅವರು ಮಾನದಿಂದ ಸುಖ-ಸಮಾಧಾನದಿಂದಿರಬೇಕು ಗ್ಗೆ ಭಾರತಪುತ್ರರ ಧ್ಯೇಯವೇನಿರ ಎಂಬುದು ಮಹತ್ವದ ಪ್ರಶ್ನೆಯಿದೆ ಸಾಮ್ರಾಜ್ಯದ ಪ್ರಶ್ನೆಯು ಕೇವಲ ತರವು. ನಮ್ಮ ರಾಷ್ಟ್ರದ ಸ್ವಾಭಿಮಾನ-ಸ್ವಾತ್ರ ದ ಸಂಗತಿಯು ಪ್ರಧಾನವು, ಬಳಿಕ ಸಾಮ್ರಾ ಸ್ವಾರ್ಥವು ಸಾಮ್ರಾಜ್ಯದಲ್ಲಿ ನಮಗೆ ಸುಖಿ ರೆ, ಸಾಮ್ರಾಜ್ಯದಿಂದ ನಮಗೇನು ಉಪಯೋ ಎಂದು ಹೇಳಿದರು. ಬಳಿಕ, ಬಾಬು ಬಿಪಿನ ಪಾಲರು ಇನ್ನಿಷ್ಟು ಮುಂದರಿದರು ಧ್ಯೇಯ ಮಗೆ ಬೇಕಂಥ ಸ್ವರಾಜ್ಯವೆಂದಮೇಲೆ, ಸಾಧನ ಗೊಡವೆ ನಮಗೇಕೆ ? ಧ್ಯೇಯವನ್ನು ಸಾಧ್ಯ ಕೊಳ್ಳಲು ಸಮರ್ಥವಿರುವ ಎಲ್ಲ ಉಪಾಯಗ ಗ್ರಾಹ್ಯವಿರುತ್ತವೆ. ಆದ್ದರಿಂದ ಮೂಲ ಠರಾವಿ ಗಿನ ' ಯೋಗ್ಯ ಮತ್ತು ಶಾಂತ ರೀತಿಯಿಂದ ' ಶಬ್ದಗಳನ್ನು ತೆಗೆದು ಹಾಕಿರೆಂದು ಬಾಬು ಚಂದ್ರ ಪಾಲರು ಆಗ್ರಹ ಹಿಡಿದರು. ಆದರೆ, ಸೂಚನೆಯು ಮಂಜೂರಾಗಲಿಲ್ಲ

* * * *

ಟ್ಟಕಡೆಗೆ ಮಹಾತ್ಮರು ಎಲ್ಲ ಆಕ್ಷೇಪಗಳಿಗೆ ಉ ಕೊಟ್ಟು, ವಾದವಿವಾದವನ್ನು ಮುಗಿಸಿದರು. ಪ್ರಕ್ಕೆ ಲೋಕಶಾಹಿ ಯಾ ಬಾದಶಾಹಿ, ಅ ಬ್ರಿಟಿಶ ಸಾಮ್ರಾಜ್ಯಾಂತರ್ಗತ ಮುಂತಾದ ವಿ ಗಳನ್ನು ಹುಟ್ಟುವದು ಅನಾವಶ್ಯಕವು ಇದಲ್ಲ ದರಿಂದ ರಾಷ್ಟ್ರೀಯ ಸಭೆಯೆಂಬುವದು ಏಕಪಕ್ಷಿ ಯಾಗುವದು ರಾಷ್ಟ್ರೀಯ ಸಂಸ್ಥೆಯಲ್ಲಿ ಎಲ್ಲ ಮುಂಗಾರುಗಳು ಸ್ವಾತಂತ್ರ್ಯವಾದಿಗಳು, ಬ್ರಿ ಸಾಮ್ರಾಜ್ಯವಾದಿಗಳು, ಬಾದಶಾಹೀ ರಾಜ್ಯಬೇ ವರು-ಎಂದು ತಮ್ಮ ಮತ ಪ್ರದರ್ಶಿಸಿ, ಬಹುಜನ ಇದವು ಯಾವ ಮತ ಪ್ರತಿಪಾದಿಸುವದೋ, ಅದೇ ವನ್ನು ನಾವು ನಮ್ಮ ಭರತಖಂಡದಲ್ಲಿ ಸ್ಥಾಪಿಸಬೇ ಸಂಕ್ಷಿಪ್ತವಾಗಿ ಹೇಳಬೇಕಾದರೆ, ಮಹಾತ್ಮರು ಸದ್ದೇಶವೆಂದರೆ, ನಮ್ಮ ಇಚ್ಛೆಯೇ, ನಮಗೆ ಯಾವ ಕಾರಬೇಕೆಂದು ನಿರ್ಣಯಿಸಬೇಕು ಇದೇ ಸ್ವಯಂ ಯವು. ಸಾಧನಗಳ ಸಂಬಂಧ ಮಾತ್ರ ಅವರು ತ್ಯಾಚಾರಿ ಸಾಧನಗಳಿಂದ ನಮಗೆ ಸ್ವರಾಜ್ಯ ಸಿಕ್ಕಿ ನ, ನಮಗೆ ಅದು ಬೇಡ ಸತ್ಯ, ಅಹಿಂಸಾ ಮುಂ ದ ಶಾಶ್ವತ ಮೂಲತತ್ವಗಳ ಮೇಲೆ ಸಂಪಾದಿಸಿದ ಜ್ಯವೇ ಚಿರಕಾಲ ಬಾಳುವದು, ಮತ್ತು ಜನರಿ ಹಿತಕಾರಕವಾಗುವದು, ಆದ್ದರಿಂದ ಎಲ್ಲ ಜನರು ಸೂಚನೆಯನ್ನು ಏಕಮತದಿಂದ ಮಂಜೂರ ಡಬೇಕೆಂದು ಪ್ರಾರ್ಥನೆ ಮಾಡಿದರು ಠರಾವಿನ ಮತ ತೆಗೆದುಕೊಳ್ಳಲು, ೧೫೦ ಮತಗಳು ಕೂಲ ಬಿದ್ದರೆ, ೩೦ ಪ್ರತಿಕೂಲ ಬಿದ್ದವು. ಹೀಗೆ ಯ ನಿಯಾಮಕ ಮಂಡಳದಲ್ಲಿ ರಾಷ್ಟ್ರೀಯ ಧ್ಯೇ ದ ಠರಾವು ಬಹುಮತದಿಂದ ಮಂಜೂರಾಯಿತು.

* * * *

ಮಂಗಳವಾರದ ಅಧಿವೇಶನಕ್ಕೆ ಇದೊಂದೇ ಠರಾ ಚರ್ಚೆಗಾಗಿ ಬಂತು. ಮಹಾತ್ಮಾ ಗಾಂಧಿಯ ವಿಷಯನಿಯಾಮಕ ಮಂಡಳದಲ್ಲಿ ಹೇಳಿದಂತೆ, ಷ್ಟ್ರೀಯ ಸಭೆಯಲ್ಲಿ ಭಾಷಣಮಾಡಿ, ಠರಾವನ್ನು

ದೇಶಭಕ್ತರ ಮಹತ್ವದ ವಾಕ್ಯಗಳು ಶ್ರೋ
ದಕ್ಕೆ ದೇಶಭಕ್ತಿಯ ಜ್ವಾಲೆಯನ್ನು ಉತ್ತೇ
ದ್ದವು ಉಚ್ಚಾಸನದ ಮುಂಭಾಗದಲ್ಲಿ ಭಾ
ತೆಯ 'ತಿಲಕ' ರಾದ ಲೋಕಮಾನ್ಯ ಟಿಳ
ಗಮುರವರ ಕಲ್ಪಿನ ಮೂರ್ತಿಯನ್ನು ಹ
ಯಿಂದ ಭೂಷಿಸಿದ್ದರು. ಅದರಿಂದ ಇಡೀ
ಪಕ್ಕೆ ವಿಲಕ್ಷಣ ಶೋಭೆ ಬಂದಿತ್ತು. ಇದಲ್ಲದೆ,
ಮಾನ್ಯರ ಹಾಗು ಮಹಾತ್ಮರ, ಎರಡು ಫ
ತಿಯ ಫೋಟೋಗಳನ್ನು ಅಧ್ಯಕ್ಷಸ್ಥಾನದ ಅ
ತೂಗಡಿಸಿದ್ದರು. ಮಂಡಪದಲ್ಲಿ ಒಳ ಹೊಕ್ಕೊ
ಡಲೆ, ಪ್ರತಿಯೊಬ್ಬರ ದೃಷ್ಟಿಯು ಭಾರತವ
'ತಿಲಕ' ರ ಕಡೆಗೆ ಸಹಜವಾಗಿ ಹೋ
ಒಟ್ಟಿಗೆ ನಾಗಪೂರಕರರು ಕಾಂಗ್ರೆಸ ಮಂ
ಅಪೂರ್ವವಾಗಿ ಸುಶೋಭಿಸಿದ್ದರು.
ಅಧಿವೇಶನವು ಅಪೂರ್ವವೇ! ಮಂಟಪಶೋ
ಅಪೂರ್ವತರವು!! ಇದಕ್ಕಾಗಿ ನಾಗಪೂರ
ಹೊಗಳಿದಷ್ಟು ಕಡಿಮೆ.

* * * *

ಸರಿಯಾಗಿ ೧॥ ಘಂಟೆಗೆ ಅಧ್ಯಕ್ಷ ಶ್ರೀಯ
ವಿಜಯರಾಘವಚಾರಿಯರು, ಲಾಲಾ ಲಜಪ
ಪಂಡಿತ ಮೋತಿಲಾಲ ನೇಹರು ಮುಂತಾದ
ಅಧ್ಯಕ್ಷರ ಸಮೇತ, ಮಂಟಪದಲ್ಲಿ ಪ್ರವೇ
ದ ಕೂಡಲೆ, 'ಬಂದೇ ಮಾತರಮ'ದ ಒಂ
ಘೋಷವಾಯಿತು. ಸ್ವಾಗತ ಕಮಿಟಿಯ
ಶ್ರೀ. ಶೇಟ ಜಮುನಲಾಲ, ಡಾಕ್ಟರ ಮುಂ
ತಾದ ಪ್ರಮುಖ ಸಭಾಸದರು ಅಧ್ಯಕ್ಷರನ್ನು
ಸನಕ್ಕೆ ಕರೆದೊಯ್ದರು. ಆನೇಲೆ, ಮಹಾತ
ಧಿಯವರ. ಬಂದರು. ಆಗ 'ಮಹಾತ್ಮಾ
ಜಯ' ಎಂಬ ಜಯಘೋಷದಿಂದ ಇಡೀ
ಪವು ದುಮುದುಮಿಸಿತು ಮಹಾತ್ಮರ ಆಗ
ದ ಶ್ರೋತೃವೃಂದದಲ್ಲಿ ವಿಲಕ್ಷಣ ಉತ್ಸಾಹ
ವಾಯಿತು. ಮಹಾತ್ಮರ ಮಹಾತ್ಮ್ಯ ನೇ
ರಿಗೆ, ಆ ನೋಟವು ಅಪೂರ್ವವಲ್ಲೆಂದು ಯ
ಳರು? ಬ್ರಿಟಿಶ ಮಜೂರ ಪಕ್ಷದ ಮುಂದಾ
ದ, ಕರ್ನಲ ವೆಜವುಡ, ಮಿ। ಬೆನ್ಸಸ್ಪೂ
ಬಂದ ಕೂಡಲೆ, 'ಲೇಬರ ಪಾರ್ಟಿಕಿ ಜಯ
ಜಯಘೋಷದಿಂದ ಅವರನ್ನು ಸ್ವಾಗತೀಕರಿ

* * * *

'ಬಂದೇ ಮಾತರಮ'ದ ರಾಷ್ಟ್ರಗೀತವಾ
ಸ್ವಾಗತ ಕಮಿಟಿಯ ಅಧ್ಯಕ್ಷ ಶ್ರೀಯುತ ಜ
ನಲಾಲ ಮಹಾಶಯರು ತಮ್ಮ ಸ್ವಾಗತ
ವನ್ನು ಹಿಂದೀ ಭಾಷೆಯಲ್ಲಿ ಮಾಡಿದರು
ಶದ ದೇಶಭಕ್ತರಿಗೆ ಸ್ವಾಗತ ಮಾಡುವಾ
ಸದ್ಯದ ಸ್ಥಿತಿಯ ಸಿಂಹಾವಲೋಕನವನ್ನು
ಅಸಹಕಾರಿತೆಯ ಹೊರತು, ತರಣೋಪಾಯ
ಹೇಳಿದರು. ಆಗ ಇಡೀ ಮಂಟಪದಲ್ಲಿ ಘ
ಘೋಷವಾಯಿತು. ಅಸಹಕಾರಿತೆಯೋ
ಕಾರದ ಒಣ ಇಭ್ರತು ಹ್ಯಾಗೆ ಕೆಡಿಸಿ
ದೆಂಬದನ್ನು ಸ್ವಲ್ಪದರಲ್ಲಿ ಸಮರ್ಥಕವಾಗಿ
ಸ್ವಸ್ಥಾನಾವನ್ನರಾದರು.

* * *

ಆಮೇಲೆ, ಪಂಡಿತ ಬಿಶನದತ್ತ ಶುಕ
ಹಿಂದೀ ಭಾಷೆಯಲ್ಲಿ ಶ್ರೀಯುತ ಚಾರಿಯ
ಸೇವೆಯನ್ನು ಹೊಗಳಿ, ಅವರು ಅಧ್ಯಕ್ಷ
ಸ್ವೀಕರಿಸಲು, ಅರಿಕೆಮಾಡಿದರು. ಇದಕ್ಕೆ
ಭಾಷೆಯಲ್ಲಿ ಮಹಾತ್ಮಾ ಗಾಂಧಿಗಳು ಅ
ನವನ್ನಿತ್ತರು. ಮಹಾತ್ಮರು ಭಾಷಣ ಮ
ಚಪ್ಪಾಳೆ, ಧಿಃಕಾರ ಮುಂತಾದ ಸಮ್ಮತಿ
ನಿಷೇಧಪ್ರದರ್ಶಕ ಗದ್ದಲವನ್ನು ಮಾಡ

ಆದರೂ, ಈ ಉದಾರ ಪ್ರಾಂತ ಸಾಹೇಬರ ಸಹ-
ಸಹವಾಸದೊಳಗಿದ್ದ ಆ ಬಡ ಪ್ರಾಣಿಯು ತನ್ನ ಜೀ
ವದಮೇಲೆ ಸಹ ಉದಾರನಾಗಿ, ಯಮಸದನಕ್ಕೆ
ತೆರಳಿದನೆಂಬುದೇ ಆಶ್ಚರ್ಯ ಸಾಹೇಬರಾದರೂ
ಅದಕ್ಕೇನು ಮಾಡ್ಯಾರು?

ಫಾರೆಸ್ಟ ಖಾತೆಯ ಕೊಲೆನ್ನ ಸಾಹೇಬರ ಸ್ವಾರಿ
ಯು ಬಂದದೆ ಬೆಟ್ಟಗಳನ್ನು ರೈತರಿಗೆ ಹಂಚಿ ಕೊಡು
ತ್ತಾರೋ ಬಂಡೆಗಲ್ಲುಗಳನ್ನು ಹಂಚಿ ಕೊಡುತ್ತಾರೋ
ನೋಡಬೇಕು

ನಾಳಿನ ಆದಿತ್ಯವಾರ ಇಲ್ಲಿಯ ಟವ್ನ ಹೊಲಿನಲ್ಲಿ
ಮ ಗಾಂಧಿಯವರನ್ನು ಇಲ್ಲಿಗೆ ಕರೆತರಿಸಬೇಕಾಗಿ
ಯೂ, ಅವರನ್ನು ಇಲ್ಲಿಗೆ ಕರೆತರಿಸುವದೆ ತಗಲುವ
ಖರ್ಚಿನ ವಿಷಯಕ್ಕೆ ವ ಯಾವಾಗ ಕರೆತರಿಸುವದು
ವಗೈರೆ ಎಲ್ಲಾ ವಿಷಯಗಳನ್ನು ಚರ್ಚೆಯಾಗುವ
ಒಂದು ಸಭೆಯು ಕೂಡುವದಿದೆ. ಈ ಸಭೆಗೆ ನಮ್ಮ ನಾ
ಗರಿಕರೆಲ್ಲರು ಬಂದು ಹಸ್ತ ಪರಹಸ್ತ ಧನ ಸಹಾಯ
ಮಾಡುವರೆ ಉತ್ಸುಕರಿರುವರು

ಇಲ್ಲಿಯ ಸ್ಕೂಲ ಬೋರ್ಡ ಮುನಸಿಪಾಲಿಟಿ ಸದಸ
ಮನ, ಇವರು ಕಾರಕೂನ ಪಿ। ಡಿ ... ಡ
ದ ಪ್ರಕರಣ ... ಮಾಡಿದ್ದಾರೆಂದು ಸುಳ್ಳೇ
ಆರೋಪ ಹೊರಿಸಿರುತ್ತಾರೆ ... ಸಂಗ್ತಿ ಮು
ದಿನ ಸಂಚಿಕೆಯಲ್ಲಿ

ಕೆಕ್ಕಾರ ಪಟೇಲ ರಾಮಕೃಷ್ಣ ... ಇತ
ಕೋಕಾ ಅಸ್ಸಳಿ ಪಾಟೀಲ ... ,
ಮಾಡಗೇರಿ ಪಾಟೀಲ ... ಹೆಗಡೆ
ತಮ್ಮ ಪಾಟೀಲಿ ಕೆಲಸಕ್ಕೆ ರಾಜಿನಾಮೆ ಕೊಟ್ಟಿರು
ತ್ತಾರೆ

ಹಳಿಯಾಳ— ಹವೆ ನೆಟ್ಟಗಿದೆ ಹೊಟ್ಟೆಯ ರೋ
ಯಿಯಾಗಬೇಕೆಂದು ಪಗಾರ ಬಿಡ್ತಿದೆ. ದೇವರಿಂದ ಈ
ತಾಲೂಕ ಕ ಳಕರ್ಣಿ ಜನರ ಜನವರಿ ಪ್ರಾರಂಭದಿಂದ
ತಿಂಗಳಲ್ಲಿ ೨೦ ಜನರ ಕೆಲಸ ಬಂದ ಇಟ್ಟರು. ಪ್ರತಿ
ಜನರಿಗೆ ಸಸ್ಪೆಂಡದ ಹುಕುಮು ಬಂದಿದೆ. ಡಿ। ಡೆ।
ಕಲೆಕ್ಟರ, ಮುಕ್ಕಾಂ ಅಂಕೋಲಾರವರ ಕಡಿಗೆ ಹಾಜರ
ರಾಗಲಿಕ್ಕೆ ಹುಕುಮು ಹೊರಟಿದೆ ತಿಳಿಯುತ್ತದೆ ಬಿಟಿ
ನ ಆತಚಿತ ಮುಂದೊಡ್ಡಿದ್ದಿದ್ದ, ಇಷ್ಟು ದೂರದ ಪ್ರವಾ
ಸದ ಹುಕುಮು ಕೊಡುವದು ಯಾವ ನ್ಯಾಯ? 'ಅಜಾ
ಪುತ್ರಂ ಬಲಿಂದದ್ಯಾತ್' ಎಂಬಂತಾಯಿತು.

ಆ ಡಿ।ಎ।ಇ। ಉಳ್ಳಾಳರು ಬಂದು ಮಾಸ್ತರ ಜನರ ಶಿಕ್ಷ
ಣವಿಷಯ ಮಾಹಿತಿ ಪೂರ್ಣ ವಿವೇಚನ ಮಾಡಿದರು

ಸಬಜಜ್ಜ ಪಾಟಕರರು ಇಲ್ಲಿಯ ಕೋರ್ಟಿನ ಬಗ್ಗೆ
ಇಮಾರತ್ತು ನೋಡಿ ಹೋದರು. ಇಮಾರತಿ ಕಟ್ಟಿಗೆ ದಾ
ರಣ ಮಂದಿ, ತೆರಗಾಂವದ ಕಂಟ್ರ್ಯಾಕ್ಟರ ರಂಗರಾವ ಬಾ
ಬಗಿರಿಸ್ಯಾಕರು ಮಹಾರಾಮಾರೀ ಖಟ್ಲೆಯ ನಿಕಾಲೆ ಆದ
ಸ್ಥಿತಿಯಲ್ಲಿ ಮಾಡಿಕೊಂಡರು ಇದು ಅವರಿಗೆ ಭೂಷಣ
ವೇ ತಾಲೂಕ ಸಭೆ ಕೂಡಿದಾಗ, ಇರಿಗೇಶನ ಖಾತೆಯ
ವರಿಂದ ತಲಾವ ದುರುಸ್ತಿ ಕೆಲಸ ಲೋಕಮತಕ್ಕೆ ಸರಿ
ಸರಿಯಾಗಿ ಆಗುವದಿಲ್ಲ ಎಂಬ ತಕ್ರಾರು ಇತ್ತು. ಅವು
ಈಗ ಸದರಿ ಖಾತೆಯವರು ದುರುಸ್ತ ಮಾಡಿದ್ದಾರೆಂದು
ಜ್ಯಾಹೀರಾಗಿದೆ. ಆದರೂ ಜನರು ಸಕಾಲಕ್ಕೆ ತಮ್ಮ ತ
ಕ್ರಾರು ಇದ್ದರೆ, ತಿಳಿಸಬಹುದು. 'ನಿಮಗೆ ಡಿಸ
ಮಿಸ ಯಾಕೆ ಮಾಡಬಾರದೆಂಬ ಬೆದರಿಕೆ ಕುಳ
ಕರ್ಣಿಯವರಿಗೆ ಹಾಕುತ್ತಿದ್ದಾರೆ' ಹುಣಸವಾಡಿ
ನ ಎರಡು ಆರೋಪಿಗಿಗೆ, ಹಟ್ಟಿಯಲ್ಲಿ ಜುಲುಮಿನಿಂದ ದನ
ಗಳನ್ನು ಹಾಕಿಟ್ಟ ಬಗ್ಗೆ ೫೦-೫೦ ರೂಪಾಯಿ ದಂಡವಾಯಿ
ತು. ಕುಳಕರ್ಣಿಯರ ಕೆಲಸದ ಬಿಡುವೇದವಾರರು ದಪ್ತರ
ಬಂದ ಇಟ್ಟಿದ್ದು, ಮಾಮಲೇದಾರರು ದಿನಕನರ ವಗೈರೆ
ಜನರ ತಪಾಸಣೆ ಮಾಡುತ್ತಿರುತ್ತಾರೆ'

ಜಾಹೀರ ವಿನಂತಿ.

ನಾನು ಬಂದರೆ ಕಾರಣದ ಸಲುವಾಗಿ ಶಾನಭೋ
ಗದ ಮೆಂಬರಿಕೆಗೆ ರಾಜೀನಾಮೆ ಕೊಟ್ಟಿದ್ದೆನು
ದರಿ ರಾಜಿನಾಮೆ ಮಂಜೂರಾಗಲಿಲ್ಲ. ಈಗ ಕುಮ
ಲೂಕ ಶಾ॥ರು ಪಗಾರ ಬಿಡ್ತಿಸಲುವಾಗಿ ಸಂಘ
ದ ಸರ್ಕಲ ಇನಸ್ಪೆಕ್ಟರೀ ಬದ್ದ ಮೇಲೆ ಇದ್ದ
ಸದರಿ ಬಿಟ್ಟಿ ಬಿಟ್ಟು, ಶಾನಭೋಗರ ಸಂಘಿಗೆ ಈಹೋ
ದ್ದೇನೆ
ತಾ ೩೧-೧೨-೧೯೨೦. } ಜಿ. ಆರ್. ಕಡೆಕೋ
ಅಪರಾಂತ. } ಊರಕೇರಿ ಪಿಕಾರ್' ಶ

ದುರ್ಮತಿ ಸಂ।ದ ಪಂಚಾಂಗ

ಮಾರಾಟಕ್ಕೆ ತಯಾರಾಗಿವೆ. ಬೇಕಾದವರು ಈ
ಪತ್ತೆಗೆ ಬರಕೊಳ್ಳಬಹುದು.
25ಕ್ಕೆ ರೂ. ೩-೮-೦. 50ಕ್ಕೆ ರೂ. ೬
100 ಕ್ಕೆ ರೂ. ೧೨-೮-೦.

ಕೃಷ್ಣರಾವ ಕೇಶವ ಶೇ
ಸ್ಟಾರ್ ಆಫ್ ಕೆನರಾ ಪ್ರೆಸ್, ಕು

ಸ್ಪೆಶಲ್ ಮೊಟರ ಬಂ
... ನಮ್ಮಲ್ಲಿ ಬಾಡಿಗೆ
ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ
... ಸವಲತ್ತಿಯ ದರಗಳು ಇಟ್ಟಿ
ನಮ್ಮ ಪತ್ತೆ —

ಗ್ಯಾತೊಂಡೇ ಬ್ರದ
ಮೊಟರ ಡೀಲರ್ಸ, ರಿಪೇರರ್
ಕಾರವ

ಲೋಕಮಾನ್ಯವಾ
ಚಹಾ ಮತ್ತು ನೀಲಗಿರಿ

ನೀಲಗಿರಿ ಗ್ಲೆಂಡೇಲ ಇಸ್ಟೇಟದ, ಎಲ್ಲಾ ತರದ
ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ
(ಯುಕೆಲಿಪ್ಟಸ ಓಯಿಲ್ಲ) ಲೋಕ ವ ಕೆ
ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ
ಇದೊಂದೇ ಸ್ಥಳವು. ಚಹಾ ಮತ್ತು ನೀಲಗಿ
ಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ
ದ್ವಾರ ದರದ ಖುಲಾಸೆ ಮಾಡಿಕೊಳ್ಳಿರಿ.

ವಿ. ಪಿ. ಶಾನಭಾಗ ಮತ್ತು ಬ್ರ
ಹೊನ್ನಾವರ। ಉತ್ತರ ಕ
HONAWAR (N Kan

॥ಶ್ರೀ ಭಗವತ್ಪ್ರೇರಣಾ ಹಿ ಜ

ವೈಷ್ಣವ ಬ್ರಾಹ್ಮಣರುಗಳೆ! ೧ ಆಣೆಯ
ವನ್ನು ಬೇಗ ಕಳುಹಿಸಿರಿ! ತಮ್ಮ ಪತ್ತೆಯನ್ನು
ಬರೆಯಿರಿ! ಕನ್ನಡ ವೈಷ್ಣವ ವೇದಾಂತ ಪುಸ್ತ
ಕಳುಹಿಸುವೆವು! ಜನವರಿ ತಿಂಗಳು ಮಾತ್ರ
ಸ್ನೇಹಿತರಿಗೂ ತಿಳುಹಿಸಿರಿ!

ಕುಮಟಾ—ನಾರಾಯಣಾಚಾ
ಶ್ರೀ ವೆಂಕಟರಮಣ ದೇವಸ್ಥಾನ.
ಮಂಗ

ಮಹಾತ್ಮಾ ಗಾಂಧಿಗಳ ವಿಜಯ!

ಇಪ್ಪತ್ತೊಂದರಲ್ಲಿ ಮೂವತ್ತಾರು!

ಹೌದು! ಇಪ್ಪತ್ತೊಂದರೊಳಗೆ ಮೂವತ್ತಾರಾಗಿ ಹೋಯಿತು! ಅಂಕಗಣಿತದೊಳಗಿನ ಪ್ರಮೇಯವು ಇದಾಗಿರುವದಕ್ಕಿಂತ ಇದೊಂದು ಬೀಜಗಣಿತ ಲೆಕ್ಕವಾಗಿದೆಂದು ಯಥಾರ್ಥವಾಗಿ ಹೇಳಬಹುದು. ಕ್ರಿಸ್ತ ಶಕಮಾನದ ಇಪ್ಪತ್ತನೇ ಶತಕದ ಇಪ್ಪತ್ತೊಂದನೇ ವರುಷವು ನಿನ್ನೆಗಿನ ಶನಿವಾರ ಪ್ರಾರಂಭಿಸಿತು. ಆದರೆ, ಈಗಲೇ ನಮ್ಮ ರಾಷ್ಟ್ರೀಯ ಸಭೆಯು ಮೂವತ್ತಾರನೇ ಅಧಿವೇಶನವು ತೀರಿತು. ಹೀಗಾಗಿ, ಮೇಲಿಂದ ಮೇಲೆ ನೋಡುವವರಿಗೆ ಇಪ್ಪತ್ತೊಂದರೊಳಗೆ ಮೂವತ್ತಾರು ಒಳಗೊಂಡಿತೆಂದು, ಇದೊಂದು ಅಂಕಗಳ ಒಗಟೆಂದು ಕಾಣುತ್ತದೆ. ನಿಜವಾಗಿ ಇದರೊಳಗೆ ಸೋಜಿಗವಾದ ಮಾತೇನಿಲ್ಲ. ಇದರ ಗೂಢವು ಬೀಜಗಣಿತದಲ್ಲಿದೆ. ೨೧ ಕ್ಕೆ, ಎಡಕೈಗೆ ಮುಪ್ಪಟ್ಟು ಸಂಖ್ಯೆ, ೩೬ ಕ್ಕೆ, ಬಲಕೈಗೆ ಮುಪ್ಪಟ್ಟು ಸಂಖ್ಯೆ; ಅಂತೂ, ಎಡಕೈಗೂ, ಬಲಕೈಗೂ ಮುಪ್ಪಟ್ಟು ಶಕ್ತಿಯುಂಟಾಗುತ್ತಿರುವ ಯುಗವಿದು. ಬೀಜವೆಂಬುದಿದೇ. ಗೂಢವೆಂಬುದಿದೇ. ನಮ್ಮ ರಾಷ್ಟ್ರೀಯ ಜೀವನದ ಶಕ್ತಿಯು ಮುಪ್ಪಟ್ಟಾಗಿದೆಂಬುದೇ ಸಾರವು. ಅದು ಎಷ್ಟು ಪಟ್ಟಾಗಿದೆಂದು ವಾಚಕರೇ ಎಣಿಸಲೆಂದು, ಇಂದಿಗೆ ಟಿಪ್ಪಣಿಗಳ ಮುಖಾಂತರ ಕಾಂಗ್ರೆಸದ ಇತಿವೃತ್ತವನ್ನು ಕೊಟ್ಟಿರುವೆವು. ಅದನ್ನು ಸಂದರ್ಶಿಸಿ, ನಮ್ಮ ರಾಷ್ಟ್ರೀಯತನವು ಎಷ್ಟು ಪಾಲು ಏರಿದೆಂದು ವಾಚಕರೇ ನಿರ್ಣಯಿಸಲಿ. ಟಿಪ್ಪಣಿಗಳನ್ನು ಕೊಡುವ ಮುಂಚೆ, ವಾಡಿಕೆಯಂತೆ, ಈ ಯುಗಾದಿಯ ಶುಭದಿವಸ, ನಮ್ಮ ಆಶ್ರಯದಾತರ ಕಲ್ಯಾಣವನ್ನೂ, ಆಯುರಾರೋಗ್ಯಾಭಿವೃದ್ಧಿಯನ್ನೂ, ಜಗದೊಡೆಯನ ಕೂಡ ಬೇಡುವೆವು.

ನಾಗಪೂರದ ರಾಷ್ಟ್ರೀಯ ಸಭೆಯ ಐತಿಹಾಸಿಕ ಅಧಿವೇಶನವು.

ಅಸಹಕಾರಿತೆಯಮೇಲೆ ಐಕಮತ್ಯ.

(ನಮ್ಮ ಬಾತಮೀದಾರರಿಂದ)

ಅಧ್ಯಕ್ಷರ ಭಾಷಣವಾದಮೇಲೆ, ನಾಗಪುರದ ರಾಷ್ಟ್ರೀಯ ಸಭೆಯ ರವಿವಾರದ ಕಾರ್ಯಕ್ರಮವು ಮುಗಿಯಿತು. ಬಳಿಕ, ಅಲ್ಲಲ್ಲಿಯ ಪ್ರತಿನಿಧಿಗಳು ಸಭೆಸೇರಿ, ವಿಷಯನಿಯಾಮಕ ಮಂಡಳದ ಚುನಾವಣೆಗೆ ಪ್ರಾರಂಭವಾಯಿತು. ವಿಷಯನಿಯಾಮಕ ಮಂಡಳದಲ್ಲಿ ಕೇವಲ ಅಸಹಕಾರಿ ವಾದಿಗಳೇ ಹೋಗಬೇಕೆಂದು ಲೋಕಮತವಿದ್ದದ್ದು ಸ್ಪಷ್ಟವಾಗಿ ಕಾಣುತ್ತಿತ್ತು. ಬಂಗಾಲೀ ಪ್ರತಿನಿಧಿಗಳು ಬಡಿದಾಡಿದ ಕಾರಣವಾದರೂ ಇದೇ. ಕಟ್ಟಕಡೆಗೆ ಬಂಗಾಲೀ ಪ್ರತಿನಿಧಿಗಳ ದೇಶಪ್ರೇಮ ಕಲಹವನ್ನು ಮಹಾತ್ಮಾ ಗಾಂಧಿಗಳು ಬಹು ಉದಾರ ಅಂತಃಕರಣದಿಂದ ದಾಸಪಕ್ಷದವರ ನೇಮಣೂಕಿಯನ್ನು ಮಂಜೂರಮಾಡಿ, ನಿರ್ಣಯಿಸಿದರು.

* * * *

ವಿಷಯ ನಿಯಾಮಕ ಮಂಡಳದಲ್ಲಿ ಮೊದಲು ಚರ್ಚಿಸಿ ಬಂದ ಠರಾವು, ಕಾಂಗ್ರೆಸಿನ ಧ್ಯೇಯದ ಬದಲಾವಣೆಗಾಗಿ, ಈ ಠರಾವಿನಮೇಲೆ ಎಂಟು ತಾಸು ಚರ್ಚೆ ನಡೆದು, ಕಟ್ಟಕಡೆಗೆ ಮಹಾತ್ಮಾ ಗಾಂಧಿಯವರಿಗೆ ವಿಜಯವಾಯಿತೆಂದು ನಾನು ಮೊದಲು ತಿಳಿಸಿದ್ದೇನೆ.

* * * *

ಕಾಂಗ್ರೆಸಿನ ಧ್ಯೇಯ ಬದಲಾಗಬೇಕೆಂದು, ಎಲ್ಲ ಪ್ರತಿನಿಧಿಗಳಲ್ಲಿ ಐಕಮತ್ಯವಿತ್ತು. ಪಂಡಿತ ಮದನಮೋಹನ ಮಾಲವೀಯರಂಥ ವಿಚಾರಿ, ಮತ್ತು ದೇಶಾಭಿಮಾನಿ ಮುಂದಾಳುಗಳು ಸಹ, ಹಳೇ ಧ್ಯೇಯವು ಸದ್ಯದ ಜಾಗೃತಾವಸ್ಥೆಯಲ್ಲಿ ನಿರುಪಯೋಗಿಯೆಂದು ಅಭಿಪ್ರಾಯಪಟ್ಟಿರುವರು. ಆದರೆ, ಪ್ರಶ್ನೆ ಒಂದೇ. ಅದು ಬದಲಾಗಬೇಕೆಂಬಬಗ್ಗೆ ಹೆಚ್ಚು ಮತಭೇದವಿದ್ದಿಲ್ಲ. ಆದರೆ ಅದು ಹ್ಯಾಗಿರಬೇಕು? ಎಂಬ ಹಿಂದೇ ಪ್ರಶ್ನೆಯಮೇಲೆ ಎಂಟು ತಾಸು ಚರ್ಚೆ ನಡೆಯಿತು ಮಹಾತ್ಮಾ ಗಾಂಧಿಯವರ ಠರಾವು ತೀರ ಸುಲಭವಿತ್ತು. ಸುಗಮವಿತ್ತು. 'ಸಮುಚಿತ (legitimate) ಮತ್ತು ಶಾಂತ ಸಾಧನಗಳಿಂದ, ಭಾರತವಾಸಿಯರ ಇಚ್ಛೆಯಂತೆ, ಸ್ವರಾಜ್ಯ ಸಂಪಾದಿಸುವದು ಹಿಂದೀ ರಾಷ್ಟ್ರೀಯ ಸಭೆಯ ಧ್ಯೇಯವು' ಎಂದು ಹೇಳಿದರು. ಸ್ವರಾಜ್ಯವೆಂದರೇನು? ಬ್ರಿಟಿಶ ಸಾಮ್ರಾಜ್ಯದ ಒಳಗೋ ಹೊರಗೋ? ಬಾದಶಾಹೀ ರಾಜ್ಯವೋ? ಲೋಕಶಾಹೀ ರಾಜ್ಯವೋ? ಎಂದು ಪ್ರತಿನಿಧಿಗಳು ಬಡಿದಾಡಿದರು. ಬಾಬು ಬಿಪಿನ ಚಂದ್ರಪಾಲರು 'ಲೋಕಶಾಹಿ' ಸ್ವರಾಜ್ಯವೆನ್ನಿರಿ, ಎಂದರು. ಬ್ರಿಟಿಶಛತ್ರದ ಆಶ್ರಯದ ಕೆಳಗಿನದು' ಎಂದು ಸ್ಪಷ್ಟವಾಗಿ ಉಲ್ಲೇಖಿಸಿರಿ, ಎಂದು ಬೆರಿಸ್ಟರ ಜಿನ್ನಾರವರು ವಕೀಲಿ ಮಾಡಿದರು. ಇಂಗ್ಲಂಡದಿಂದ ಸದ್ಯಕ್ಕೆ ಬಂದ ಕರ್ನಲ ವೆಜವುಡರಾದರೂ ಬ್ರಿಟಿಶ ಸಾಮ್ರಾಜ್ಯದ ಉಲ್ಲೇಖವಾದದಿದ್ದರೆ, 'ನಿಮಗೆ ಸಹಾಯಮಾಡುವದು ನನ್ನಂಥ ನಿಮ್ಮ ಇಂಗ್ರಜೀ ಮಿತ್ರರಿಗೆ ಕಠಿಣವಾದೀತು? ಎಂದು ಬೆದರಿಕೆ ಹಾಕಿದರು. ಆದರೆ, ಇವರಿಂದ ಬೆದರುವದರ ಬದಲು, ಪ್ರತಿನಿಧಿಗಳು ಸಿಟ್ಟಾಗಿ ಒಬ್ಬರ ಹಿಂದೊಬ್ಬರು ಎರಡು ತಾಸುತನಕ, ಕರ್ನಲ ವೆಜವುಡರನ್ನು ನಿರ್ಭೀತವಾಗಿ ಟೀಕಿಸಿದರು. ಮೌಲಾನಾ ಮಹಮ್ಮದ ಅಲ್ಲಿಯವರು ಬ್ರಿಟಿಶ ಸಂಬಂಧದ ವಿಷಯ ಪ್ರತಿಪಕ್ಷಕ್ಕೆ ಉತ್ತರ ಕೊಟ್ಟದ್ದು ಅತ್ಯಂತ ಸಮರ್ಪಕವಾಗಿತ್ತು. ಅವರು ಹೇಳಿದ್ದೇನಂದರೆ:—

* * * *

“ಬ್ರಿಟಿಶ ಸಾಮ್ರಾಜ್ಯವು ನಮಗೆ ಬೇಕೋ? ಬೇಡವೋ? ಎಂಬುದು ಮುಖ್ಯ ಪ್ರಶ್ನೆಯಲ್ಲ, ಭರತಖಂಡದಲ್ಲಿ ಭಾರತಪುತ್ರರ ದರ್ಜೆ ಏನಿರಬೇಕು? ಅವರು ಸ್ವಾಭಿಮಾನದಿಂದ ಸುಖ-ಸಮಾಧಾನದಿಂದಿರಬೇಕು ಎಂಬಬಗ್ಗೆ ಭಾರತಪುತ್ರರ ಧ್ಯೇಯವೇನಿರಬೇಕು, ಎಂಬುದು ಮಹತ್ವದ ಪ್ರಶ್ನೆಯಿದೆ. ಬ್ರಿಟಿಶ ಸಾಮ್ರಾಜ್ಯದ ಪ್ರಶ್ನೆಯು ಕೇವಲ ಅವಾಂತರವು. ನಮ್ಮ ರಾಷ್ಟ್ರದ ಸ್ವಾಭಿಮಾನ-ಸ್ವಾತಂತ್ರ್ಯದ ಸಂಗತಿಯು ಪ್ರಧಾನವು, ಬಳಿಕ ಸಾಮ್ರಾಜ್ಯದ ಸ್ವಾರ್ಥವು. ಸಾಮ್ರಾಜ್ಯದಲ್ಲಿ ನಮಗೆ ಸುಖಸಿಗದಿದ್ದರೆ, ಸಾಮ್ರಾಜ್ಯದಿಂದ ನಮಗೇನು ಉಪಯೋಗ?” ಎಂದು ಹೇಳಿದರು. ಬಳಿಕ, ಬಾಬು ಬಿಪಿನ ಚಂದ್ರ ಪಾಲರು ಇನ್ನಿಷ್ಟು ಮುಂದರಿದರು, ಧ್ಯೇಯವು, ನಮಗೆ ಬೇಕಂಥ ಸ್ವರಾಜ್ಯವೆಂದಮೇಲೆ, ಸಾಧನಗಳ ಗೊಡವೆ ನಮಗೇಕೆ? ಧ್ಯೇಯವನ್ನು ಸಾಧ್ಯಮಾಡಿಕೊಳ್ಳಲು ಸಮರ್ಥವಿರುವ ಎಲ್ಲ ಉಪಾಯಗಳು ಗ್ರಾಹ್ಯವಿರುತ್ತವೆ. ಆದ್ದರಿಂದ ಮೂಲ ಠರಾವಿನೊಳಗಿನ ‘ಯೋಗ್ಯ ಮತ್ತು ಶಾಂತ ರೀತಿಯಿಂದ’ ಎಂಬ ಶಬ್ದಗಳನ್ನು ತೆಗೆದು ಹಾಕಿರೆಂದು ಬಾಬು ಬಿಪಿನಚಂದ್ರ ಪಾಲರು ಆಗ್ರಹ ಹಿಡಿದರು. ಆದರೆ, ಈ ಸೂಚನೆಯು ಮಂಜೂರಾಗಲಿಲ್ಲ.

* * * *

ಕಟ್ಟಕಡೆಗೆ ಮಹಾತ್ಮರು ಎಲ್ಲ ಆಕ್ಷೇಪಗಳಿಗೆ ಉತ್ತರ ಕೊಟ್ಟು, ವಾದವಿವಾದವನ್ನು ಮುಗಿಸಿದರು. ಸ್ವರಾಜ್ಯಕ್ಕೆ ಲೋಕಶಾಹಿ, ಯಾ ಬಾದಶಾಹಿ, ಅಥವಾ ಬ್ರಿಟಿಶ ಸಾಮ್ರಾಜ್ಯಾಂತರ್ಗತ ಮುಂತಾದ ವಿಶೇಷಣಗಳನ್ನು ಹಚ್ಚುವದು ಅನಾವಶ್ಯಕವು. ಇದಲ್ಲದೆ, ಇದರಿಂದ ರಾಷ್ಟ್ರೀಯ ಸಭೆಯೆಂಬುದು ಏಕಪಕ್ಷ ಸಂಸ್ಥೆಯಾಗುವದು. ರಾಷ್ಟ್ರೀಯ ಸಂಸ್ಥೆಯಲ್ಲಿ ಎಲ್ಲ ಪಕ್ಷದ ಮುಂದಾಳುಗಳು-ಸ್ವಾತಂತ್ರ್ಯವಾದಿಗಳು, ಬ್ರಿಟಿಶ ಸಾಮ್ರಾಜ್ಯವಾದಿಗಳು, ಬಾದಶಾಹೀ ರಾಜ್ಯ ಬೇಕಾದವರು-ಎಂದು ತಮ್ಮ ಮತ ಪ್ರದರ್ಶಿಸಿ, ಬಹುಜನಸಮಾಜವು ಯಾವ ಮತ ಪ್ರತಿಪಾದಿಸುವದೋ, ಅದೇ ರಾಜ್ಯವನ್ನು ನಾವು ನಮ್ಮ ಭರತಖಂಡದಲ್ಲಿ ಸ್ಥಾಪಿಸಬೇಕು. ಸಂಕ್ಷಿಪ್ತವಾಗಿ ಹೇಳಬೇಕಾದರೆ, ಮಹಾತ್ಮರು ಅಂದದ್ದೇನಂದರೆ, ನಮ್ಮ ಇಚ್ಛೆಯೇ, ನಮಗೆ ಯಾವ ಸರಕಾರ ಬೇಕೆಂದು ನಿರ್ಣಯಿಸಬೇಕು. ಅದೇ ಸ್ವಯಂನಿರ್ಣಯವು. ಸಾಧನಗಳ ಸಂಬಂಧ ಮಾತ್ರ ಅವರು ಅತ್ಯಾಚಾರಿ ಸಾಧನಗಳಿಂದ ನಮಗೆ ಸ್ವರಾಜ್ಯ ಸಿಕ್ಕಿದರೂ, ನಮಗೆ ಅದು ಬೇಡ. ಸತ್ಯ, ಅಹಿಂಸಾ ಮುಂತಾದ ಶಾಶ್ವತ ಮೂಲತತ್ವಗಳ ಮೇಲೆ ಸಂಪಾದಿಸಿದ ಸ್ವರಾಜ್ಯವೇ ಚಿರಕಾಲ ಬಾಳುವದು; ಮತ್ತು ಜನರಿಗೂ ಹಿತಕಾರಕವಾಗುವದು, ಆದ್ದರಿಂದ ಎಲ್ಲ ಜನರು ತಮ್ಮ ಸೂಚನೆಯನ್ನು ಏಕಮತದಿಂದ ಮಂಜೂರ ಮಾಡಬೇಕೆಂದು ಪ್ರಾರ್ಥನೆ ಮಾಡಿದರು. ಠರಾವಿನ ಮೇಲೆ ಮತ ತೆಗೆದುಕೊಳ್ಳಲು, ೧೪೦ ಮತಗಳು ಅನುಕೂಲ ಬಿದ್ದರೆ, ೩೦ ಪ್ರತಿಕೂಲ ಬಿದ್ದವು. ಹೀಗೆ ವಿಷಯ ನಿಯಾಮಕ ಮಂಡಳದಲ್ಲಿ ರಾಷ್ಟ್ರೀಯ ಧ್ಯೇಯದ ಠರಾವು ಬಹುಮತದಿಂದ ಮಂಜೂರಾಯಿತು.

* * * *

ಮಂಗಳವಾರದ ಅಧಿವೇಶನಕ್ಕೆ ಇದೊಂದೇ ಠರಾವು ಚರ್ಚೆಗಾಗಿ ಬಂತು. ಮಹಾತ್ಮಾ ಗಾಂಧಿಯವರು ವಿಷಯನಿಯಾಮಕ ಮಂಡಳದಲ್ಲಿ ಹೇಳಿದಂತೆ, ರಾಷ್ಟ್ರೀಯ ಸಭೆಯಲ್ಲಿ ಭಾಷಣಮಾಡಿ, ಠರಾವನ್ನು

ಮುಂದಿಟ್ಟರು. ಈ ಠರಾವಿಗೆ ಪುಷ್ಟೀಕರಿಸಿ ಮಾಡಿದ ಲಾಲಾ ಲಜಪತರಾಯರ ಭಾಷಣವು, ಅಪ್ರತಿಮವಾಯಿತು. "ಬ್ರಿಟಿಶರ ಅತ್ಯಾಚಾರಗಳಿಂದ ಭರತಪುತ್ರರ ಮನಸ್ಸು ಹೇಗೆ ಬದಲಾಗಿದೆ ಎಂದು ನೋಡಬೇಕಾದರೆ, ಈ ಠರಾವನ್ನು ವಿಮರ್ಶಿಸಲಿ ಈ ಠರಾವು ಬ್ರಿಟಿಶ ಸರಕಾರಕ್ಕೆ ಒಂದು ತರದ ನೋಟೀಸು, ಇದರಿಂದ ಬ್ರಿಟಿಶರು ಯೋಗ್ಯ ಬೋಧ ಪಡೆಯದಿದ್ದರೆ, ಮುಂದೇನಾಗುವದೆಂದು ಯಾರು ಹೇಳುವದು? ಅತ್ಯಾಚಾರ ಬಿಡುವವರೆಗೆ, ಇಂಥ ಬ್ರಿಟಿಶ ಸಾಮ್ರಾಜ್ಯದ ಸಮಭಾಗಿಗಳಾಗಿರುವದಕ್ಕಿಂತ ಗುಲಾಮರಾಗಿರುವದು ಲೇಸೆಂದು" ಅವರು ಹೇಳಿದರು

* * * *

ಅವೇಳೆ ಮುಂಬಯಿಯ ಮಿ। ಜಿನ್ನಾ ಸಾಹೇಬರು ತಮ್ಮ ಬ್ಯಾರಿಸ್ಟರಿಯನ್ನು ಬಿಟ್ಟುಮಾಡಿ, ಈ ಠರಾವು ಸ್ವಾತಂತ್ರ್ಯವನ್ನು ಜಾಹೀರಮಾಡುತ್ತದೆ ಕೇವಲ ಒಬ್ಬಿಬ್ಬರ ಸವಲತಿಗಾಗಿ, ಇಡೀ ಧ್ಯೇಯವನ್ನು ಬದಲು ಮಾಡಬೇಡಿರಿ ಇದರೊಳಗ ಬ್ರಿಟಿಶ ಸಂಬಂಧದ ಸ್ಪಷ್ಟ ಉಲ್ಲೇಖ ಮಾಡಿರಿ, ಇಲ್ಲವಿದ್ದರೆ, ಶಿಕ್ಕ ಶಿಕ್ಕವರು, ಶಿಕ್ಕಹಾಗೆ ಇದರ ಮೇಲೆ ಭಾಷ್ಯ ಮಾಡುವರು, ಮುಂತಾದ ತರ್ಕಗಳನ್ನು ಹೇಳಿ ತಮ್ಮ ಅಸ್ಟಿಯನ್ನು ತೋರಿಸಿದರು

* * * *

ಆ ವೇಳೆ ಕರ್ನಲ ವೆಜವುಡ ಸಾಹೇಬರು ಉಪ್ಯಾಸನವನ್ನು ಅಲಂಕೃತಮಾಡಿ, ಭಾರತಮಂತ್ರಿ ಮೊಂಟೆಗ್ಯೂರವರ ವಕೀಲಿ ಮಾಡಹತ್ತಿದರು 'ಮಿ. ಮೊಂಟೆಗ್ಯೂರವರಂಥ ಸಕ್ರೆಟರಿಗಳು ಈ ವರೆಗೆ ಆಗಲಿಲ್ಲ. ಹಿಂದುಸ್ಥಾನಕ್ಕೆ 'ಜಬಾಬದಾರ ಸ್ವರಾಜ್ಯ ಕೊಟ್ಟರೆಂದು, ಅವರಮೇಲೆ ಇಂಗ್ರಜೀ ವೃತ್ತಪತ್ರಗಳು ಬಹಳ ಸಿಟ್ಟಾಗಿರುವವು ಇಲ್ಲಿಯ ಎಂಗ್ಲೋ ಇಂಡಿಯನರಂತೂ, ಅವರಿಗೆ ಹಗಲಿರುಳು ಬೈಯುತ್ತಾರೆ, ವಗೈರೆ ಪುರಾಣ ಹೇಳಿ, ಇಂದ ಪ್ರಸಂಗದಲ್ಲಿ ಹಿಂದುಸ್ಥಾನದ ಜನರು ಅವರಿಗೆ ಸಹಾಯಮಾಡಬೇಕೆಂದು ಸೂಚಿಸಿ, ಸ್ವಸ್ಥಾನಾಪನ್ನರಾದರು.

* * * *

ಮಹಾತ್ಮಾಗಾಂಧಿಯವರು ಉತ್ತರಕೊಟ್ಟ ವೇಳೆ ಆ ದಿವಸದ ಕಾರ್ಯಕ್ರಮವು ಮುಗಿಯಿತು ಠರಾವಿನಮೇಲೆ ಮತಗಳನ್ನು ತೆಗೆದುಕೊಳ್ಳುವದು ಮುಂದಿಟ್ಟರು

* * * *

ಪುನಃ ವಿಷಯನಿಯಾಮಕ ಮಂಡಳದ ಅಧಿವೇಶನಕ್ಕೆ ಪ್ರಾರಂಭವಾಯಿತು. ಈ ಹೊತ್ತಿನ ಠರಾವು ಅಸಹಕಾರಿತೆಯ ಮೇಲಿನದು, ಇಡೀ ರಾಷ್ಟ್ರದ ಭವಿತವ್ಯತೆಯನ್ನು ನಿರ್ಣಯಿಸುವ ಮಹತ್ವದ ಕೆಲಸವು ವಿಷಯನಿಯಾಮಕ ಮಂಡಳದಮೇಲೆ ಬಂದಿತ್ತು. 'ಅತಿ ಸ್ನೇಹಃ ಪಾಪಶಂಕೀ' ಎಂಬಂತೆ, ಮಹಾತ್ಮಾಗಾಂಧಿಯವರಿಗೆ ವಿಜಯವಾಗುತ್ತದೆಂಬ ಸಂಗತಿಯು ಪ್ರತಿಯೊಬ್ಬ ಪ್ರತಿನಿಧಿಯೂ ಮನಗಂಡಿದ್ದರೂ, ದಾಸಪಕ್ಷದವರು ಏನನ್ನುತ್ತಾರೆ? ಪಂಡಿತ ಮಾಲವೀಯರ ಮತಕ್ಕೆ ಎಷ್ಟು ಪುಷ್ಟಿ ಸಿಗುತ್ತದೆ? ಲಾಲಾ ಲಜಪತರಾಯರು ಯಾವ ಪಕ್ಷಕ್ಕೆ ಹೋಗುತ್ತಾರೆ? ಎಂದು, ಬಹು ಆತುರದಿಂದ ಹಾದೀ ಕಾಯುತ್ತಿದ್ದರು, ಕಟ್ಟಕಡೆಗೆ, ಮಹಾತ್ಮಾ ಗಾಂಧಿ ಮತ್ತು ಬೆರಿಸ್ಟರ ದಾಸ ಇವರ, ಇದರಮೇಲೆ ವಿಶೇಷ ಒಡಂಬಡಿಕೆಯಿಂದ, ಏಕಮತದಿಂದ ಒಂದು ಠರಾವು ಪಾಸಾಯಿತು ಪಂಡಿತ ಮದನಮೋಹನ ಮಾಲವೀಯರು ಜ್ವರದಿಂದ ಅಸ್ವಸ್ಥರಿದ್ದ ಮೂಲಕ, ವಿಷಯನಿಯಾಮಕ ಮಂಡಳದಲ್ಲಿ ಬರಲು ಅಸಮರ್ಥರಾದರು.

* * * *

ಈ ಅಸಹಕಾರಿತೆಯ ಠರಾವು ಬಹು ಉದ್ದವಾಗಿ, ತೀರ ವ್ಯವಹಾರಿಕವಿರುತ್ತದೆ. ಈ ಠರಾವಿನ ಸಾರಾಂಶವನ್ನು ನಾನು ತಂತಿಯಿಂದ ಈ ಮೊದಲೇ ತಿಳಿಸಿರುತ್ತೇನೆ ಇದರೊಳಗೆ ರಾಷ್ಟ್ರೀಯ ಸಭೆಯು ಕಲಕತ್ತೆಯ ಖಾಸಾ ಅಧಿವೇಶನದ ಠರಾವನ್ನು ಪುಷ್ಟೀಕರಿಸಿ, ಹೀಗೆ ಅಭಿಪ್ರಾಯಪಟ್ಟಿರುತ್ತದಲ್ಲ -ಪಂಜಾಬದ ಕೊಲೆ, ಖಿಲಾಫತ ಅನ್ಯಾಯ ಇವುಗಳಿಂದ ಬ್ರಿಟಿಶಸರಕಾರದ ಮೇಲಿನ ನಮ್ಮ ವಿಶ್ವಾಸವು ಹಾರಿಹೋಗಿರುತ್ತದೆ ಈ ಅನ್ಯಾಯಗಳು ಸ್ವರಾಜ್ಯ ಸಂಪಾದನೆಯ ಹೊರ್ತು ದೂರವಾಗುವದು ಅಶಕ್ಯವು ಸ್ವರಾಜ್ಯಸಾಧನವೆಂದು ನಾವು ಸರಿಗೆಯನ್ನು ಕಡೆ ತೆರಲಿಕ್ಕೆ ಅನುಕಾರ ಮಾಡಲಿಕ್ಕೆ ತಯಾರಿರಬೇಕೆಂದು ರಾಷ್ಟ್ರೀಯ ಸಭೆಯು ಅಪ್ಪಣೆ ಕೊಡುವದು. ಅದರ ಉಪಾಯ ಯೋಜನೆಯು ತೀರ ನಿರ್ಧಾರದ [illegible] ವ ಳಿನಲ್ಲಿ ಬಿರ ವದಲ್ಲ ಈ ಯೋಜನೆಯನ್ನು ಯಾವಾಗ ಮತ್ತು [illegible] ತಿಯಾ ಕೊಂಗ್ರೆಸ ಕಮಿಟಿ [illegible] ಮುಂದಿಗ (ಖಾಸಾ) ರಾಷ್ಟ್ರೀಯ ಸಭೆಯಾಗಲಿ, [illegible] ಸ್ಥಿತಿಯನ್ನು ಲಕ್ಷಿಸಿ ಅಪ್ಪಣೆ ಕೊಡುವವು. ಇಲ್ಲಿಯ ತನಕ, ಪೂರ್ವತಯಾರಿಯೆಂದು, ಎಲ್ಲ ನಾಗರಿಕರು ಕೆಳಗಿನ ಸಂಗತಿಗಳನ್ನು ಅನುಷ್ಠಾನದಲ್ಲಿ ತರಬೇಕು

* * * *

(೧) ಹದಿನಾರ ವರ್ಷದೊಳಗಿನ ಎಲ್ಲ ವಿದ್ಯಾರ್ಥಿಗಳು ಪಾಲಕರ [illegible] ಸ್ವರಿಸಿ ಅವರ ಅನುಜ್ಞೆಯಂತೆ, ಸರಕಾರದಿಂದ [illegible] ದ ಎಲ್ಲ ಸಂಸ್ಥೆಗಳನ್ನು ತ್ಯಜಿಸಬೇಕು.

(೨) ಹದಿನಾರ ವರ್ಷದ ಒಳಗಿನ ವಿದ್ಯಾರ್ಥಿಗಳ ಪಾಲಕರು ತಮ್ಮ ಹುಡುಗರನ್ನು ಸರಕಾರಿ ಸಂಸ್ಥೆಗಳೊಳಗಿಂದ ತೆಗೆದ, ರಾಷ್ಟ್ರೀಯ ಶಾಲೆಗಳಲ್ಲಿ ಕಳಿಸಬೇಕು.

(೩) ಖಾಸಗಿ ಶಿಕ್ಷಣ ಸಂಸ್ಥೆಗಳ ಸರಕಾರಿ ಅಂಕೆಯನ್ನು ಬಿಡಬೇಕೆಂದು ವಿನಂತಿಸುತ್ತದೆ

(೪) ವಕೀಲರೆಲ್ಲರು ತಮ್ಮ ವಕೀಲಿಯನ್ನು ತ್ಯಜಿಸಿ, ಪಂಚಾಯತುಗಳನ್ನು ಸ್ಥಾಪಿಸಿ ಮೊಕದ್ದಮೆಗಳನ್ನು ಅವುಗಳ ಮಾರ್ಫತ ನಿರ್ಣಯಿಸಬೇಕು

(೫) ಪರದೇಶಿ ವಸ್ತುಗಳನ್ನು ಕ್ರಮೇಣ ಬಹಿಷ್ಕಾರ ಮಾಡಲಿಕ್ಕೆ ಒಂದು ಕಮಿಟಿ ನೇಮಿಸುವ ಅಧಿಕಾರವು ಆಲ ಇಂಡಿಯಾ ಕೊಂಗ್ರೆಸ ಕಮಿಟಿಗೆ ಕೊಡುತ್ತದೆ

(೬) ಸುಧಾರಣಾ ಕಾನೂನಿನನ್ವಯ ನಿರ್ಮಿಸಲ್ಪಟ್ಟ ಕಾಯಿದೆ ಕೌನ್ಸಿಲುಗಳು, ಬಹುಜನ ಸಮಾಜದ ಬಹಿಷ್ಕಾರದ ಮೂಲಕ, ಪ್ರಜೆಗಳ ಪ್ರಾತಿನಿಧಿಕವಲ್ಲ, ಆದ್ದರಿಂದ ಕೌನ್ಸಿಲುಗಳಿಗೆ ಪ್ರತಿನಿಧಿಗಳೆಂದು ಹೋದವರು ತಮ್ಮ ಜಾಗೆಗಳ ರಾಜಿನಾಮೆಯನ್ನು ಕೊಡಬೇಕು.

(೭) ಸರಕಾರೀ ನೌಕರರು ಪ್ರಜೆಗಳ ಹತ್ತರ ಪ್ರಾಮಾಣಿಕತನದಿಂದ ನಡೆಯಬೇಕು; ಮತ್ತು ಸಾರ್ವಜನಿಕ ಸಭೆಗಳಿಗೆ ನಿರ್ಭೀತ ರೀತಿಯಿಂದ ಹಾಜರ ಇರತಕ್ಕದ್ದು;

(೮) ಈ ಅಸಹಕಾರಿತೆಯ ಕಾರ್ಯಕ್ರಮವನ್ನು ಕೇವಲ ಅಹಿಂಸ ತತ್ವವನ್ನು ಆಚರಿಸಿ, ಅಮಲಿನಲ್ಲಿ ತರತಕ್ಕದ್ದು;

ಇದಲ್ಲದೆ ಒಂದು ವರ್ಷದಲ್ಲಿ ಸ್ವರಾಜ್ಯ ಸಂಸ್ಥಾಪನೆಯಾಗಲು ಅನುಕೂಲವಾಗಬೇಕೆಂದು, ಹಿಂದು ಮುಸಲ್ಮಾನರು ಒಕ್ಕಟ್ಟಾಗಬೇಕು, ಬ್ರಾಹ್ಮಣ-ಅಬ್ರಾಹ್ಮಣರ ವಾದವನ್ನು ನಿರ್ಮೂಲಿಸಬೇಕು; ಅಸ್ಪೃಶ್ಯತೆಯನ್ನು ನಿವಾರಿಸಿ, ಹಿಂದೂ ಧರ್ಮದ ಮೇಲಿನ ಕಲಂಕವನ್ನು ತೊಳೆಯಬೇಕು.

* * * *

ಈ ಠರಾವು ಎಷ್ಟು ವ್ಯಾಪಕವದೆ, ಎಷ್ಟು ವ್ಯವಹಾರಿಕವದೆಂದು, ಇದನ್ನು ಚೆನ್ನಾಗಿ ಪರಿಶೀಲಿಸಿದರೆ, ತಿಳಿಯುವಹಾಗಿದೆ ಇದರ ಮೇಲಿಂದ ರಾಷ್ಟ್ರೀಯ ಸಭೆಯು ಕೈಲಾಸವಾಸಿ ಲೋಕಮಾನ್ಯ ಟಿಳಕರ ಆಶೆಯಂತೆ, ನಿಜವಾಗಿ ಕಾರ್ಯಕ್ಷಮವಾಯಿತು. ಕಲಕತ್ತೆಯ ಠರಾವಿಗಿಂತ ಇದು ಬಹಳೇ ಮುಂದರಿದದೆಂದು ಹೇಳಬೇಕೇನು? ಶ್ರೀಯುತ ಚಿತ್ತರಂಜನ ದಾಸರವರು ಇದನ್ನು ಸೂಚಿಸುವಾಗ, ಈ ಠರಾವು ಕಲಕತ್ತೆಯ ಅಸಹಕಾರಿತೆಯ ಠರಾವಿಗಿಂತ, 'ಹೆಚ್ಚು ದಿಟ್ಟತನದ್ದೂ, ಪರಿಪೂರ್ಣವಾದದ್ದೆಂ'ದು ಹೇಳಿದರು. ಮಹಾತ್ಮಾ ಗಾಂಧಿಯವರು ಅನುಮೋದಿಸುವಾಗ, ಈಗ ಅಸಹಕಾರಿತೆಯ ಠರಾವಿನಮೇಲೆ ಏಕಮತವಾದ ಮೂಲಕ, ಕಳೆದ ಮೂರುನಾಲ್ಕು ತಿಂಗಳುಗಳಿಂದ ನಡೆದ ವಿವಾದದೊಳಗಿನ ತೀಕ್ಷ್ಣತೆಯನ್ನಾಗಲೀ, ಕಠೋರತನವನ್ನಾಗಲೀ ಮರೆತು, ದೇಶಕಾರ್ಯಕ್ಕಾಗಿ ಹಿಮ್ಮನಸ್ಸಿನಿಂದ ದುಡಿಯಿರೆಂದು ಆಜ್ಞಾಪಿಸಿದರು.

* * * *

ಇದೇ ಠರಾವಿಗೆ ಲಾಲಾ ಲಜಪತರಾಯ, ಬಿಪಿನಚಂದ್ರಪಾಲ, ಡಾಕ್ಟರ ಕಿಚಲೂ, ಶ್ರೀ. ಕಸ್ತೂರಿರಂಗ ಅಯ್ಯಂಗಾರ, ಮೌಲಾನಾ ಹಜರತ ಮೊಹಾನಿ, ಶ್ರೀ ಜಿತೇಂದ್ರಲಾಲ ಬಾನರ್ಜಿ ಮುಂತಾದವರು ವಕ್ತೃತ್ವಪೂರ್ಣ ಭಾಷಣಗಳಿಂದ ಪುಷ್ಟೀಕರಿಸಿದರು ಮತಗಳನ್ನು ಎಣಿಸಲು ಠರಾವು ಏಕಮತದಿಂದ ಪಾಸಾಯಿತು. ಆಗ ಇಡೀ ಮಂಟಪವು 'ವಂದೇ ಮಾತರಮ್' 'ಮಹಾತ್ಮಾ ಗಾಂಧಿಕಿ ಜಯ' ಮುಂತಾದ ಜಯಘೋಷಗಳಿಂದ ದುಮದುಮಿಸಿತು ಉತ್ಸಾಹಭರದಲ್ಲಿ ಜನರು ತೊಪ್ಪಿ, ರುಮಾಲ ಮುಂತಾದವುಗಳನ್ನು ಹಾರಿಸಿದರು.

* * * *

ಇಡೀ ರಾಷ್ಟ್ರವು ಅಸಹಕಾರಿತೆಯನ್ನು ಆಚರಿಸುವ ನಿರ್ಧಾರ ಮಾಡಿದ್ದನ್ನು ನೋಡಿ, ಮಹಾತ್ಮರಿಗೆ ಸಹ ಇಷ್ಟು ಸಾತ್ವಿಕ ಆನಂದವಾಯಿತಲ್ಲ – ಅವರು ಆನಂದದ ಭರದಲ್ಲಿ ಇತರೇ ಜನರನ್ನು ಅನುಕರಿಸಿದರು. ಆ ಮೇಲೆ ರಾಷ್ಟ್ರೀಯ ಸಭೆಯ ಧ್ಯೇಯ ಬದಲಾವಣೆ ಠರಾವಿನಮೇಲೆ ಪ್ರಾಂತವಾರ ಮತ ತೆಗೆದುಕೊಳ್ಳಲಾಯಿತು. ಆಗ, ಇಡೀ ಮಂಟಪದಲ್ಲಿ ೨ ಮತಗಳು ವಿರುದ್ಧ ಬಿದ್ದ, ಅದು ಬಹುಮತದಿಂದ ಪಾಸಾಯಿತು. ಮಂಟಪದಲ್ಲಿ ವಿರೋಧ ಮಾಡುವ ಬೆರಿಸ್ಟರ ಜಿನ್ನಾರವರು ವಿರುದ್ಧ ಮತ ಕೊಡಲಿಕ್ಕೆ ಬರಲಿಲ್ಲೆಂಬ ಸಂಗತಿಯು ವಿಚಾರಣೀಯ ಸಂಗತಿಯು.

* * * *

ಈ ಎರಡು ಠರಾವುಗಳು ಪಾಸಾದಮೇಲೆ, ರಾಷ್ಟ್ರೀಯ ಸಭೆಯ ಮುಖ್ಯ ಕೆಲಸ ಮುಗಿಯಿತು. ಆಮೇಲೆ ಪರತ ಹುಂಡಿಯಿಂದ ಸರಕಾರವು ಮಾಡಿದ ಕಾಯಿದೆಯ ಸುಲಿಗೆ, ಮೊಂಟಗ್ಯೂರವರ 'ಜವಾಬದಾರ ಸ್ವರಾಜ್ಯ' ಕೌನ್ಸಿಲುಗಳನ್ನು ತೆರೆಯಲು, ಹಿಂದುಸ್ಥಾನಕ್ಕೆ ಬರುವ ಬಾದಶಾಹೀ ಪ್ರತಿನಿಧಿ ಡ್ಯೂಕ ಆಫ್ ಕೊನೊಟರವರ ಸನ್ಮಾನಕ್ಕೋಸು ನಡೆಯುವ ಸಮಾರಂಭಗಳಿಗೆ ಬಹಿಷ್ಕಾರ, ವಿಲಾಯತಿಯೊಳಗಿನ ಬ್ರಿಟಿಶ ಕಾಂಗ್ರೆಸು ಕಮಿಟಿಯನ್ನು ನಿಲ್ಲಿಸುವದ, ಹಾಗು ಅದರ ಮಾರ್ಫತ ನಡೆಯುವ 'ಇಂಡಿಯಾ' ವೃತ್ತಪತ್ರವನ್ನು ಬಂದ ಮಾಡುವದು, ಹಿಂದ ಹಿಸ್ಸೆಷೀ ಶ್ರೀಯುತ ಜೋಡಾಪುನ ಗಾಯ ತೋರ್ಪಡುವ

ಹಸ್ತದಲ್ಲಿರುವ ಫಿಜಿ, ಕೆನಡಾ, ಈಸ್ಟ್ ಆಫ್ರಿಕಾ, ಮುಂತಾದ ದೇಶಗಳಲ್ಲಿ ವಾಸವಾಗಿರುವ ಭಾರತೀಯರಿಗೆ ಬ್ರಿಟಿಶರು ನಡಿಸುವ ಅಪಮಾನಕಾರಕ ...ಯ ನಿಷೇಧ, ಮಜೂರ ಸಂಘಗಳ ವಿರ್ಮಾಣ..., ಸರಕಾರವು ಲೇಂಡ ಎಕ್ವಿಝಿಶನ ಆಕ್ಟಿನ ದುರುಪಯೋಗಮಾಡಿ, ಶ್ರೀಮಂತ ವ್ಯಾಪಾರಿಗಳಿಗೋಸ್ಕರ ಬಡ ರೈತರನ್ನು ಪೀಡಿಸುವ ಕೃತಿಯ ನಿಷೇಧ, ...ವಾದ ಠರಾವುಗಳು ಪಾಸಾದವು. ಕೊಂಗ್ರೆಸ ...ಟನೆಯ ನಿಯಮಗಳು ಪಾಸಾದವು. ಮುಂದಿನ ...ವರ್ಷದ ಅಧಿವೇಶನವು ಅಮದಾಬಾದದಲ್ಲಿ ಕೂಡಬೇಕೆಂದು ನಿಶ್ಚಯವಾಯಿತು.

* * * *

...ಷ್ಟ್ರೀಯ ಸಭೆಯ ಕಾರ್ಯಪ್ರಸಾರ ಮಾಡಲು ...ರ್ವಹಿಸಿದ ಓಲ ಇಂಡಿಯಾ ಟಿಳಕ ಮೆಮೋರಿಯಲ ಸ್ವರಾಜ್ಯ ಫಂಡಕ್ಕೆ ಉದಾರ ಹಸ್ತದಿಂದ ...ಯ ಮಾಡಬೇಕೆಂದು ಮಹಾತ್ಮಾ ಗಾಂಧಿಗಳು ...ಕೊಂಡರು. ಸ್ವಾಗತ ಕಮೀಟಿಯ ಅಧ್ಯಕ್ಷ ಶೇಟ ...ಲಾಲರು ಒಂದು ಲಕ್ಷ ರೂಪಾಯಿ ಕೊಟ್ಟರು. ...ಯಶಿಯಿಂದ ಕಾಂಗ್ರೇಸು ಅಧಿವೇಶನ ...ವ ಬಂದ್ದು ಬಂದು, ಪಾರ್ಲಮೆಂಟ ಮೆಂಬರ ... ವಿರಾಯತಿ ಮಜೂರ ಸಂಘದ ಮುಂ...ಗಳಾದ, ಮಿ॥ ಬೆನ್ಸಸ್ಪೂರರವರು ಅಧ್ಯಕ್ಷರ ...ರಗಳನ್ನು ಸಮಯೋಚಿತ ಶಬ್ದಗಳಲ್ಲಿ ಮನ್ನಿಸಿ...ದ, ಅಧ್ಯಕ್ಷರು ಸಮಾರೋಪ ಮಾತುಗಳ, ...ಭೂಮಿಯನ್ನು ಸ್ಮರಿಸಿ, ಬೇಕಾದ ಸ್ವಾರ್ಥ... ಮಾಡಿ, ನಮ್ಮ ಧ್ಯೇಯವಾದ ಸ್ವರಾಜ್ಯವನ್ನು ...ಬೇಕೆಂದು ಉಪದೇಶಮಾಡಿ, ರಾಷ್ಟ್ರೀಯ ಸಭೆಯ ...ವರ್ಷದ ಅಪೂರ್ವ ಅಧಿವೇಶನವನ್ನು ವಿಸರ್ಜನೆ ...ದರು. ಹೀಗೆ ರವಿವಾರದಿಂದ ಶುಕ್ರವಾರ ...ನಡೆದ ಐತಿಹಾಸಿಕ ಅಧಿವೇಶನವು, ಬಹು ಸಡಗರದಿಂದಲೂ ಉತ್ಸಾಹದಿಂದಲೂ, 'ವಂದೇ ಮಾತರಂ,' 'ಮಹಾತ್ಮಾ ಗಾಂಧಿಕಿ ಜಯ' ಮುಂತಾದ ಜಯ ಘೋಷಗಳಿಂದಲೂ ಕೊನೆಗಂಡಿತು. ...ಯ ಸಭೆಯಲ್ಲಿ ಕಲಹಗಳಾಗಿ, ಇಬ್ಬಾಗವಾಗುವದೆಂದು ಕಲ್ಪಿಸಿ, ಮನಸ್ಸಿನಲ್ಲಿ ಆನಂದಪಡುತ್ತಿರುವ ನೇಮಸ್ತರಿಗೂ, ಬ್ಯೂರೋಕ್ರಾಟಿ... ಹಿಂಬಾಲಕರಿಗೂ, ನಮ್ಮ ಮಾ-ಬಾಪ ಸರಕಾರಕ್ಕೂ ದುಃಖಾಶ್ಚರ್ಯಗಳಲ್ಲಿ ಮುಣಗಿಸಿ, ...ದಿನ ಕಾರ್ಯಕ್ಕೆಂದು ಎಲ್ಲ ಪ್ರತಿನಿಧಿಗಳು ತಮ್ಮ ಮನೆಗಳಿಗೆ ತೆರಳಿದರು.

...ವಂದೇ ಮಾತರಮ್, ಭಾರತಮಾತಾಕಿ ಜಯ

...ರಾ ಕಾನಡಾ ವೃತ್ತಕರ್ತರಿಗೆ ವಿನಂತಿ—
...ಗಿನ ಮಜಕೂರ ಬಹಳ ಜರೂರಿನದಾಗಿ ಮಹ...ಇರುವದರಿಂದ, ಇದೇ ಅಂಕದಲ್ಲಿ ದಯ... ಪ್ರಸಿದ್ಧಪಡಿಸಬೇಕಾಗಿ ವಿನಂತಿ ಅದೆ.

...೩೦ ನೇ ಡಿಸೆಂಬರ ೨೧ ಕ್ಕೆ ಕಾನಡಾಜಿಲ್ಹೆಯ ...ಲ ಸಂಬಂಧದಿಂದ ಸರಕಾರದವರು ಪ್ರಸಿದ್ಧ ಪಡಿಸಿದ ...ಸ್ ನೋಟಿನ ಕುರಿತು ವಿಚಾರ ಮಾಡುವ ಸಲುವಾಗಿ ಕಾರವಾರ ಜಿಲ್ಹಾ ಪರಿಷತ್ತಿನ ಆಫೀಸಿನಲ್ಲಿ ಸ್ಪೇಶಲ್ ಪರಿಷತ್ತು ಇದೇ ಜನವರಿ ೧೬ಕ್ಕೆ ಕೂಡಬೇಕೆಂದು ..., ಸರಕಾರದವರು ಇಲ್ಲಿಯ ಮೆಂಬರರಿಗೆ ...ದ್ದಾರೆ ಮತ್ತು ಸರ ನಾರಾಯಣರಾವ ಚಂದಾವರಕರರವರು ಗವರ್ನರ ಸಾಹೇಬರಿಗೆ ಕಾರವಾರಕ್ಕೆ ಕರೆಸಿ ...ವರ ಮುಂದೆ ನಮ್ಮ ಫೋರೆಸ್ಟ ಅಡಚಣಿಗಳನ್ನು ...ಕಾಗಿಯೂ ತಿಳಿಸಿದ್ದಾರೆ. ಈಬಗ್ಗೆ ವಿಚಾರ ಮಾಡುವ ...ಮುಂದೆ ಈಪತ್ತಿನ ದಿವಸ ಈ ತಾಲೂಕಿನ ಪುಢಾರಿ... ತಾಲೂಕ ಸಭೆ ಕೂಡಿತ್ತು. ಅದಕ್ಕೆ ಮುಂಡಗೋಡ... ...ಮೆಂಬರರೂ ಹಾಜರ ಇದ್ದರು. ಅದರಲ್ಲಿ ಕೆಳ... ...ರಾವು ಪಾಸಾಗಿರುತ್ತದೆ.
...ಗ ನಾವು ಮೇಲಿನ ಫೋರೆಸ್ಟ ವಿಷಯದ ಕುರಿತು ... ವಿಚಾರ ಮಾಡುವ ಅಗತ್ಯ ಉಳಿದುಲಿಲ್ಲಾ. ಯಾಕಂದರೆ, ಮಹತ್ವದ ವಿಷಯ ರಾಜಕೀಯ ಹಕ್ಕಿನಬಗ್ಗೆ ಅಸಹಕಾರಿತೆ ಸ್ವೀಕರಿಸಿದಮೇಲೆ, ಈ ಫೋರೆಸ್ಟಬಾಬು ಸಹಾ ಅದರಲ್ಲಿ ಸಮಾವೇಶವಾಗುತ್ತದೆ. ಆ ಕಾರಣ ಸ್ಪೇಶಲ್ ಪರಿಷತ್ತು ಕೂಡುವದು ಅಗತ್ಯವಿಲ್ಲೆಂತಲೂ ಅದಕ್ಕೆ ಶಿರ್ಶಿ, ಮುಂಡಗೋಡ ಪೇಟೆಯ ಮೆಂಬರರು ಹೋಗಬಾರದೆಂತಲೂ ಮತ್ತು ಗವರ್ನರ ಸಾಹೇಬರ ಮುಂದೆ ನಮ್ಮ ಹೇಳಿಕೆ ಇಡುವ ಕಾರಣವಿರುವದಿಲ್ಲಾ ಎಂತ ಠರಾವಾಗಿರುತ್ತದೆ. ಸರಕಾರದ ಮುಂದೆ ನಮ್ಮ ಹೇಳಿಕೆ ಅನೇಕ ವಿಧದಿಂದ ಅನೇಕ ಸರ್ತಿ ಇಟ್ಟದ್ದೇ ಉಂಟು. ಮತ್ತು ಸರಕಾರ ತರ್ಫೆನಿಂದ ಹಿಂದಿನ ಕಲೇಕ್ಟರರಾದ ಮಿ॥ ಬಿಪ್ಪರ ಸಾಹೇಬರು ಸಹಾ ಸರಕಾರಕ್ಕೆ ತಿಳಿಸಿದ್ದುಂಟು. ಕಾರಣ ಶಿರ್ಶಿ ಮತ್ತು ಮುಂಡಗೋಡ ಪೇಟೆಯ ಮೆಂಬರರು ಒಬ್ಬರೂ ಸಭೆಗೆ ಮತ್ತು ಗವರ್ನರ ಕಡಿಗೆ ಹೋಗಬಾರದೆಂತು ಕೂಡಾ ಠರಾಯಿಸಿರುತ್ತಾರೆ.

ಶಿರ್ಶಿ,೩-೧-೨೧ } ಗಂಗಾಧರ ರಾ. ಪಟವರ್ಧನ.

ನೋಟೀಸು.

ಈ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ —

ನನ್ನ ಅವಿಭಕ್ತ ತಮ್ಮಂದಿರು ತಾವು ಸ್ವತಹಾ ಏನೊಂದು ಯೋಗ್ಯ ಧಂದೆಯನ್ನು ನಡೆಯಿಸದೇ, ಹಲವು ವಿಘ್ನ-ಸಂತೋಷಿಗಳ ಮಬೋಧನೆಗಳಿಗೆ ಒಳಗಾಗಿ, ಇದೇ ಜನವರಿ ೪ನೆ ತಾರೀಖಿನ ಕಾನಡಾ ಧುರೀಣ ಪತ್ರಿಕೆಯಲ್ಲಿ ನಿರರ್ಥಕವಾದ ಒಂದು ಪ್ರಕಟಣೆಯನ್ನು ಕೊಟ್ಟಿರುತ್ತಾರೆ ನಮ್ಮ ಅವಿಭಕ್ತ ಕುಟುಂಬದಿಂದ ಏನೊಂದು ಸಹಾಯ ಪಡೆಯದೇ, ಗೌರವಯುಕ್ತವಾದ ಯೋಗ್ಯ ಧಂದೆಯನ್ನು ನಡೆಯಿಸುವ ಉದ್ದೇಶ್ಯ, ನಾನು ಒಂದು ಮೋಟರ ಕಂಪನಿಯನ್ನು ಚಾಲೂ ಮಾಡಿರುತ್ತೇನೆ. ಆ ಕಂಪನಿಯಲ್ಲಿ ಕಾರವಾರದಿಂದ ಹೊಂನಾವರದವರೆಗಿನ ಸಭ್ಯ ಜಮೀನುದಾರರು, ವರ್ತಕರು, ವಕೀಲರು ಸಹಾ ನನ್ನ ವಟ್ಟಿಗೆ ಭಾಗೀದಾರರಿರುತ್ತಾರೆ. ಈ ಊರಿನ ಕೆಲವು ಗೃಹಸ್ಥರು ಈ ಧಂದೆಯನ್ನು ತಾವು ಶುರುಮಾಡದೆ, ಇತರರಿಗೂ ಮಾಡಗೊಡಬಾರದೆಂತ ನಮ್ಮ ಕಂಪನಿಗೆ ಅನೇಕ ತರದ ವಿಘ್ನಗಳನ್ನು ತರಿಸಿದರೂ, ಮಾನ್ಯ ಭಾಗೀದಾರರ ಕೃಪೆಯಿಂದ ಕಂಪನಿ ಚಾಲೂ ಆಗಿಯದೆ. ಈ ರೀತಿ ಚಾಲೂ ಮಾಡಿರುವ ಸಂಗತಿ ನನ್ನ ದ್ವೇಷಿಕರೂ, ನನ್ನ ಯೋಗ್ಯ ಧಂದೆಯಲ್ಲಿ ವಿಘ್ನಕಾರಕರೂ ಆದ ಹಲವರ ಮನಸ್ಸಿಗೆ ಬಾರದ್ದರಿಂದ, ಅವರು ನನ್ನ ತಮ್ಮಂದಿರಿಂದ ಆ ರೀತಿ ಪ್ರಕಟಣೆಗಳನ್ನು ಹೊರಡಿಸಿರುವರು. ನಮ್ಮ ಅವಿಭಕ್ತ ಕುಟುಂಬದ ಆಡಳಿತೆಯು ನನ್ನ ಶೀರ್ಘರೂಪ ಚಿಕ್ಕ ತಂದೆಯವರಾದ ಶ್ಯಾಮರಾವ (ಸುಬ್ರಾವ) ನಾಡಕರ್ಣಿ ಇವರ ಕೈಕೆಳಗಿರುವದರಿಂದ, ನನ್ನ ಈಗಿನ ಸ್ವಂತ ಧಂದೆಯ ಬಗ್ಗೆ ನನ್ನ ತಮ್ಮಂದಿರು ಜವಾಬದಾರರಲ್ಲವೆಂಬ ಸಂಗತಿ ಪ್ರತ್ಯೇಕವಾಗಿ ಹೇಳುವ ಅಗತ್ಯವೇ ಇದ್ದಿಲ್ಲ ಆದರೆ, ನಾನು ನಡೆಯಿಸುವ ಈ ನನ್ನ ಸ್ವಂತ ಧಂದೆಯಲ್ಲಿ ನಷ್ಟವಾದರೆ, ನನ್ನ ತಮ್ಮಂದಿರು ಹೇಗೆ ಜವಾಬದಾರರಲ್ಲವೋ, ನಾನು ಪಡೆಯುವ ಲಾಭಗಳಿಗೂ, ಅವರು ಭಾಗೀದಾರರಲ್ಲವೆಂತ ನಾನು ಸ್ಪಷ್ಟವಾಗಿ ತಿಳಿಸುವದು ನನಗೆ ತುರ್ತ ಅವಶ್ಯವಿರುತ್ತದೆ. ನಮ್ಮ ಕುಟುಂಬದಲ್ಲಿ ಹೇರಳ ಆಸ್ತಿಯಿದ್ದು, ನನ್ನ ಪಾಲಿನ ಆಸ್ತಿಯು ಯಾರಿಗೂ ಇದುವರೇಗೆ ಪರಾಧೀನಮಾಡಿದ್ದು ಇಲ್ಲ, ಯಾ ಯಾವದೇ ಬೋಜೆ ಅದರಮೇಲೆ ಹೊರಿಸಿದ್ದೂ ಇಲ್ಲವೆಂಬ ಸಂಗತಿಯನ್ನು ನಾನು ತಿಳಿಸುವ ಅಗತ್ಯವಿರುತ್ತದೆ. ಆದ್ದರಿಂದ ನನ್ನ ತಮ್ಮಂದಿರೀಗೆ ಮೋಟರ ಕಂಪನಿಯಲ್ಲಿ ನನಗೆ ಸಿಕ್ಕುವ ಮುನಾಫೆಯಲ್ಲಿ ಅವರಿಗೂ ಭಾಗವುಂಟೆಂತ ಅವರು ಹೇಳಿದರೆ, ಅದು ಅತಿ ಸುಳ್ಳು ಮಾತಾಗಿರುತ್ತದೆ. ತಿಳಿದಿರುವದು.

ಕುಮಟಾ, ೫-೧-೨೧. } ವೆಂಕಟ್ರಾವ ವಿಶ್ವೇಶ್ವರ ನಾಡ್ಕರ್ಣಿ.

☞ ಈಪತ್ತಿನ ಪುರವಣಿ ನೋಡಿರಿ.)

ಕುಮಟ ಪೇಟೆ ಧಾರಣೆ

ಜೀನಸು.		ದರ.
ರಂಗೂನ ಬಿ. ಗೋಣಿ೧ಕ್ಕೆ	...	೧೩।
ಕುಚ್ಚಿಗೆ ಅಕ್ಕಿ ಮಾನಗಿ	...	೬।।।
ರಾಗಿ ನಿಡಕ್ಕೆ	...	೧೦—೧೧
ಗೋಧಿ ಗೋಣಿ ೧ಕ್ಕೆ	...	೧೯—೨೦
ಹುರುಳಿ ವಿಡ ,	...	೧೬
ಕಡಲೆ ಚೀಲ ೧ಕ್ಕೆ	...	೧೬।
ತೊಗರಿಬೇಳೆ ಗೋಣಿ ೧ಕ್ಕೆ	...	೨೧।—೨೨।।
ಹೆಸರು ಚೀಲ „	...	೨೦।।
ಮೋರಿಸ ಸಕ್ಕರೆ ಮಣ „	...	೮
ಮೆಣಸಿನ ಕಾಯಿ ಮಣ „	...	೫।।—೬
ಹರಳೆಣ್ಣೆ ಮಣ	...	೮।।।
ಕೊಬ್ಬರಿ ಎಣ್ಣೆ ಮಣ	...	೧೩।।
ಕೊತ್ತಂಬರಿ ಗೋಣಿ „	...	೧೨।।
ಉಪ್ಪು ಗೋಣಿ „	...	೪-೫-೦
ಕರೆಸಿನ ಸೂರ್ಯ „	...	೪-೨-೦
„ ಹಂಸ „	...	೩-೯-೬
ಬೆಲ್ಲ ಖಂಡಿ ೧ಕ್ಕೆ	..	೫೦—೫೨
ಗಾಂವಟಿ ಬೆಟ್ಟೆ „	...	೮೫—೯೫
„ ಗೋಟು „	...	೬೦—೭೦
„ ಚಾಲಿ „	...	೮೦—೮೫
„ ಚಿಕಣಿ „	...	೧೧೦—೧೨೦
ಮೆಣ್ಸು „	...	೧೫೦
ಯಾಲಕ್ಕಿ	...	೪೫—೫೦
ಯಲ್ಲಾಪೂರ ರಾಶಿ	.	೧೧೦—೧೨೫
ಶಿರ್ಶಿ ರಾಶಿ „	..	೧೨೦—೧೩೫
ಸಿದ್ದಾಪೂರ ರಾಶಿ „	..	೧೨೦—೧೩೫
ಹೇರೂರ ರಾಶಿ „	...	೧೦೫—೧೨೦

ಯೋಗ್ಯ ದರ.] **ಓದಿರಿ!** [ಒಳ್ಳೇ ಮಾಲು.

ಮಿತ್ರಬಾಂಧವರಿಗೆ ತೋರಿಸಿರಿ!

ಡೊಂಗರೆ ಬಾಲಾಮೃತ, ಎಲೆನ್ ಒಲೀಸ ಫುಡ, ವಿರೋಲ } ಮಕ್ಕಳಿಗೆ ಶಕ್ತಿವರ್ಧಕ, ರಕ್ತಶುದ್ಧಿಕಾರಕ,

ಎಲ್ಲಾ ಕೊಡ್ಲಿವರ ಒಯ್ಲಗಳು:— (ಹೊಸ ಮಾಲು)
ಸಲ್ಫರ ಬಿಟರ್ಸ್.— ಎಲ್ಲ ರೋಗಗಳಿಗೆ ಒಂದೇ.
ಸುಧಾಸಿಂಧು.— ಅನೇಕ ರೋಗಗಳಿಗೆ ಅಮೃತ.
ಅರ್ಕಶರ್ಪಾ:— ಅನೇಕ ರೋಗಕ್ಕೆ ಒಂದೇ ಔಷಧ
ಸೇನ್‌ಮೆಟಿಕೊ — ಎಲ್ಲಾ ತರದ ಗರ್ಮಿ ರೋಗಕ್ಕೆ ರಾಮಬಾಣ
ಕರ್ಣಿಕ ಒಗ್ಯುಮಿಕ್ಶರ:— (ಎಲ್ಲಾ ತರದ ಜ್ವರಕ್ಕೆ)
ಗ್ರಿಮೋಲ್ಲ ಮತ್ತು ಎಲ್ಲಾ ತರದ ಸಾಯರಪ್‌ಗಳು.
ಅಮೃತಾಂಜನ ಮತ್ತು ಸೂರ್ಯ ಅಮೃತಬಾಮು.
ಪಶುಸಂಜೀವನಿ — ಎಲ್ಲಾ ಜನಾವರಗಳ ರೋಗಕ್ಕೆ ಅತ್ಯುತ್ತಮ.
ಎಲಿಡ್ರಿಸ್ ಕೊಡೆಕ್ರಿಯ್ಲು.— ಸ್ತ್ರೀ ರೋಗಕ್ಕೆ

ಈ ವಿನಹಾ, ಕಫನಾಶಕ ಗುಳಿಗೆ, ಖಂಡಮ್ರೋಮು, ಉತ್ತಮ ನೀಲಗಿರಿ ಎಣ್ಣೆ, ಕಾಮಿನಿಯಾ ಮುಂತಾದ ಒಳ್ಳೇ ಸುಗಂಧಿಕ ತೈಲಗಳು, ಅನೇಕತರದ ಅತ್ತರಗಳು, ಸ್ಟೇಶನರಿ ಮತ್ತು ಕಟ್ಲರಿ ಸಾಮಾನು ಶೆಜವ್ (ಚಿನ್ನಕ್ಕೆ ಪುಟ ಕೊಡುವ ಎಣ್ಣೆ) ಮನೆ ಕಟ್ಟೋಣಕ್ಕೆ ತಗಲುವ ಕಬ್ಬಿಣದ ಸಾಮಾನು, ಗ್ಲಾಸವೇರಿ, ಸಾಪಾನು, ಮಂಟಪದ ಕಾಗದ ಮತ್ತು ಅನೇಕ ತರದ ಸಾಮಾನುಗಳು ನಮ್ಮಲ್ಲಿ ಸಿಗುತ್ತವೆ ಪತ್ರ ಬರೆದಲ್ಲಿ ದರವು ತಿಳಿಸಲ್ಪಡುವದು.

ಪತ್ತೆ:—

P. L. Shanbhag, KUMTA.

ಪುರುಷೋತ್ತಮ ಲಕ್ಷ್ಮಣಯ್ಯ ಶಾನಭಾಗ ಕುಮಟಾ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕೂಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕೂಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನೆಮದ್ದಾಗಿ ತಾ ೧೦-೮ ೧೯೦೮ನೇ ಇಸ್ವಿಯಿಂದ ತಾ|| ೧-೯ ೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒ ಬತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡತಕ್ಕದ್ದು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಔಷಧದಿಂದಲೇ ಗುಣಹೊಂದಿದ ಬಗ್ಗೆ ಮತ್ತು [illegible] ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ, ಇನಾಮು ಸರ್ಟಿಫಿಕೇಟುಗಳು ಸಹ ದೊರೆತಿರುತ್ತವೆ ಅವು ಬರೆಯಲಿಕ್ಕೆ ಕಾಗದವು ಸಾಲದ ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುತ್ತೀರೆಂದು ನಂಬುತ್ತೇನೆ ರೋಗದ ಪರೀಕ್ಷೆಯು ಸಹಾ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳಲ್ಲಿ [illegible] ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮಗಳು

ಕ್ಷಯರೋಗ ಹಡದರೋಗ ಪಾಂಡುರೋಗ ಗುಲ್ಮರೋಗ ಮೂಲರೋಗ, ಮಹಾಮಾರಿ(ಕಾಲರಾ), ಪ್ಲೇಗು, ಚಳಿಜ್ವರ,ವಿಷಮ ಜ್ವರ,ಇನ್‌ಫ್ಲೂಯೆಂಜಾಜ್ವರ ಅನೇಕಪ್ರಕಾರದಜ್ವರ, ಗಂಡಮಾಲೆ ಕಿವಿಶೂಲೆ ಮೂಗಿನೊಳಗಿನ ಪಿನಿಸಿ ಮೊದಲಾದ ರೋಗವು ಕಣ್ಣಿನೊಳಗೆ ಹೂವು ಬೆಳೆಯುವ ಮತ್ತು ಕಣ್ಣುನೋವು ಕೆಮ್ಮು, ದಮ್ಮು ಶ್ವಾಸ, ಆಡಗ್ಗೆ ಇದ್ದಲಿಸಿ, ಅಜೀರ್ಣ ಹೊಟ್ಟೆಶೂಲಿ ಮೈಶೂಲಿ, ಅರತಲೆಶೂಲಿ ನರಶೂಲಿ ವಾತಶೂಲಿ ರಕ್ತಜಿಷ್ಟು ಗುದ್ದ ಮಾನವೇನೆ, ಹುರುಕುಕಜ್ಜಿ, ಗಡಿಕಾಳ ಇಸಬು ತದ್ದು ಘಾಯಮಲ್ಕಾ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ ಆರವಿ ಕುಟ್ಟವೋವ, ಹೊಟ್ಟೆ ದೊಡ್ಡದಾಗೋಣ, ಮೈ ಮೂರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ, ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ಹಾಗೂ ನೆ ಉದ್ದಿಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ ಪಿ ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳ ತಗೊಂಡರ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇವಕ್ಕೆ ಒಂಭತ್ತು ಆಣೆ ಖರ್ಚು ಬೀಳುವದು ಒಂದರಿಂದ ಹನ್ನೊಂದು ಬಾಟ್ಲಿಯವರೆಗೆ ಕಮಿಶನ್ ಇಲ್ಲ ಇದಕ್ಕೆ ಆರು ಆಣೆ ಖರ್ಚು ಬೀಳುವದು ಒಂದು ಕಾಲು ತೊಲೆ ಬಾಟ್ಲಿ ಮೂರು ತಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಏಂಟು ಆಣೆ ಬೀಳುವದು ನಮ್ಮ ಔಷಧವು ಸುಳ್ಳು ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ಮ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟು ಲಗತ ಇಡದೆ ಹೊತರ್ ದೊರೆಯಲಿಕ್ಕಿಲ್ಲ ಅನುಮಾನಪತ್ರಿಕೆಯ [illegible] ಕನ್ನಡ ಮರಾಠಿ ಮುಸಲ್ಮಾನಿ ಭಾಷೆಗಳಲ್ಲಿ ಹಾಕಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗ್ಯೆರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್ [illegible], ಸಂಪಾದಕ ಅರ್ಕಶಫಾ

ಹೆಡ್ ಅಫೀಸು [illegible]

ಖ್ಯಾತಿಯಿಂದ ಗುಣಪಡಿಸುವ ಔಷದಗಳು.

1 [illegible] — [illegible] ಇಂದ್ರಿಯ ದೌರ್ಬಲ್ಯ [illegible] ಶರೀರಗಳ [illegible] 40 [illegible] 1ಕ್ಕೆ 1-1-0 [illegible]

2 [illegible]

3 [illegible]

4 [illegible] ಸಿದ್ಧ ಔಷದಿ [illegible]

5 [illegible]

ಎನ್. ಗಣಪಯ್ಯ [illegible] ಸನ್ಸ್

ನೇಟಿವ್ ಡೋಕ್ಟರ್ಸ್ ರಥಬೀದಿ

[illegible]

ಮೋಹಿನಿ

[illegible]
ಶಿರಸಿಯ [illegible] ಪ್ರತಿ ಗುರುವಾರ

[illegible] ಅಥವಾ ಶಿರಸಿಯಲ್ಲಿ ಆರಕಿಂತ ಹೆಚ್ಚು ಜನರು ಸಿಕ್ಕಬೇರೆ ದಿವಸಗಳಲ್ಲಿ ಸಹ ನಡಿಸುವೆವು

[illegible] ಶಿರಸಿಯಲ್ಲಿ [illegible] ನವರ ಇವರ ಅಂಗಡಿಯಲ್ಲಿ ಮತ್ತು [illegible] ಸ್ವೀಕರಿಸ ಪುಸ್ತಕ ಕೇಳಕರರ ಬಳಿ [illegible] ಸಿಗ ವವು

ಎಸ್. ಎಲ್. ಥಾಕಪ್ಪಾ.

ಹೊಸ ಪುಸ್ತಕಗಳು.

ಮಹಾತ್ಮಾ ಗಾಂಧಿಯರ ಸಚಿತ್ರ ಚರಿತ್ರೆ, ಲೇಖನ ಮತ್ತು ಭಾಷಣ ೦ ೧೨ ೦ ಸ್ವಾಮಿ ರಾಮತೀರ್ಥರ ಸಚಿತ್ರ ಚರಿತ್ರೆ ಮತ್ತು ಭಾಷಣ ೦-೮-೦, ರಾ|| ಬ|| ವಾರದ ಮಲ್ಲಪ್ಪನವರ ಸಚಿತ ಚರಿತ್ರೆ ೦-೧೨-೦, ಸ್ವಕರ್ತವ್ಯ ಸಿದ್ಧಾಂತ ೦ ೮-೦, ಬುದ್ಧಿಯು ಮಾತು ೦-೪-೦, ಆಧುನಿಕ ಜೀವನ ೦-೪-೦ ಪತಿತೋದ್ಧಾರ, ೦ ೪ ೦

ವಿಳಾಸ:— ಎಂ. ಎಂ. ಹರ್ಡೇಕರ.

ದಾವಣಗೇರಿ

ಜೋಸ ಕೋಥ! "ಓಂ" ಜೋಸಕೋಥ

ಗುಣ ಬಾರದಿದ್ದರೆ ಹಣಪರತು

(ಅತ್ಯಂತ ಪುಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ [illegible] ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆಡಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು ಬಹುದಿವಸದಿಂದ ಮನೆಮಾಡಿದ್ದ [illegible] ಸಂಬಂಧಿಯ ಸಿಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ [illegible] ದಿಂದದೂಷಿತ [illegible] ಶರೀರಕ್ಕೆ [illegible] ಅಪ್ರತಿಮ ಗುಣವುಳ್ಳ [illegible] ಈ ಪಾಕಸೇವನೆಯಿಂದ [illegible] ಆಗುವದಲ್ಲದೆ ಇನ್ನೂ ಅನೇಕ ಮಹತ್ವದ ಗುಣ [illegible] ಅನುಭವವು ಸೇವನೆಯ [illegible] ದರ್ಶನಕ್ಕೆ ಬರುವದು ಸ್ತ್ರೀಯರು [illegible] ಮೊದಲಾದ ಸ್ತ್ರೀಯರ ರೋಗಗಳ [illegible] ವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ [illegible] ದರಿಂದ ಸ್ತ್ರೀಯರು [illegible] ಗರ್ಭಧಾರಣೆಗೆ ಯೋಗ್ಯರಾಗುವರು. [illegible] ಒಂದು ಡಬ್ಬಿ ಪಾಕಿನಿಂದ [illegible] ಮೂರು ಡಬ್ಬಿ ಪಾಕಿನಿಂದ [illegible] ಗುಣ [illegible] ನಿದಾನ ಒಂದು ಸಾರಿಯಾದರೂ [illegible] ನೋಡಿರಿ.

[illegible] ಡಬ್ಬಿಗಳಿಗೆ [illegible] ಡಬ್ಬಿಗಳಿಗೆ [illegible] ಮೇಲೆ [illegible] ಡಬ್ಬಿ [illegible] ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ—ಸ್ಟ್ಯಾಂಡರ್ಡ್ ಬ್ರದರ್ಸ್ ಮತ್ತು ಕಂಪನಿ

ಫೋರ್ಟ ಸಿಪಾಯಿ, ಜಿ ಬೆಳಗಾಂವ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗ್ಯೆರೆ ಮಾಹಿತಿ ಕೆಳಗಿನ ಪತ್ತೆಗೆ ಪತ್ರ ಬರೆದು ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

ಅಮೌಲ್ಯವಾದ ಎಣ್ಣೆ.

ಈ ಎಣ್ಣೆ ಶಸ್ತ್ರ ಘಾಯ, ಬಿದ್ದ ಜಖಮು, ಪೆಟ್ಟಿನ ನೋವು ಯಾವದೇ ತರದ ಜಖಮು ಯಾ ಎಲುಬು ಮುರಿದಲ್ಲಿ ಸಹ ಇದನ್ನು ನೀರು ತಾಗಿಸದೇ ಹಚ್ಚಿದರೆ ಮೂರು ದಿವಸದಲ್ಲಿ ಗುಣ ಕ್ರಯ ಸೀಸೆ ೧ಕ್ಕೆ ಆಣೆ ೧೨ ತೋ ೧ ೨ ೦ ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ ಪತ್ತೆ — ಮುಂಬ್ಯಾಜಿ ಹೀರಾಲಾಲ ದಲ್ಲಾಳರಾವ ಗುಜರಾತ ಹಪ ಲಿ ಕುಮಟಾ

Printed and published by Krishnarao Keshav Shenvi, at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೪.

ಪತ್ರದ ವರ್ಗಣಿ.-

ಕುಮಟೆಯಲ್ಲಿ ಆಗಾವು ರೂಪಾಯಿ 2-0-0.

ಮನೆಯಾರ್ಡರಿಯಿಂದ ರೂ 2-13-0

ವ್ಹಿ. ಪಿ. ಅಂಚೆವೆಚ್ಚ ಸಹಿ ರೂಪಾಯಿ 2-15-0.

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ(೧೪ ಎಮ್‌ಅಗಲ) ೮ ಸಾಲುಗಳ ವರೆಗೆ ರೂ. 1 0 0

ಅನಂತ್ರ ಪ್ರತಿ ಸಾಲಿಗೆ 0-2-0.

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಪ್ರಮಾಣ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೩ ಮಾಹೆ ಜನವರಿ ಸನ್ ೧೯೨೧ ನೇ ಇಸವಿ.]

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿ, ಕಪ್ಪು, ಕೆಂಪು, ಜಾಂಬಳಿ ಇಂಕ್ಕೆ ಇಳಿಕೆ ಕಪ್ಪು ಮಾತ್ರ ನೀರಿನಲ್ಲಿ ಶಾಯಿ ಸೆಂಪಲಿಗೆ ಒಂದಾಣೆ ಕ ತಿಗದುಕೊಂಡರೆ, ಭರಪೂರ ಕಳಿಸಲಾಗು

ಪತ್ತೆ— ಎಸ್ ವ್ಹಿ ಭಾಗ್ವತ

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಕಾಲೋಪಯೋಗಿ ಪುಸ್ತಕಗಳು.

ಕನ್ನಡ ಮರಾಠಿ, ಸಂಸ್ಕೃತ, ಇಂಗ್ಲಿಷ, ಪುಸ್ತಕಗಳು ಸ್ಟೇಶನರಿ ಸಾಮಾನುಗಳನ್ನು ನಾವು ಪೂರೈಸುವೆವು

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ.

ಸತ್ಯಮೇವ ಜಯತೇ

(ಗುಣಬಾರದ್ದರೆ ಹಣವಾಪಸು)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕನಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ ವೀರ್ಯ ವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲಾ ಸಕ ಇಂದ್ರಿಯಸ್ತಂಭಕ ನಮಿರ್, (ಟಾಕಿ) ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲತರದ ಬಿಕ್ಕೆಗಳು ಹುಣ್ಣುಗಳು ಪಿತ್ತದ ಊಫೆಗಳು ಕಟಿಶೂಲ ವಾತರೋಗ ಮುಂತಾದವು ಆತಿಶ್ರದ್ಧೆ ಗುಣವಾಗಿ ಶರೀರಕ್ಕೆ ನಿರೋಗತೆಯೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ ಪ ಬೇರೆ ಅನುಪಾನ ಪತ್ರಿಕೆ ಔಷಧದ ಸಂಗಡ

ವಿಳಾಸ —**ಜಿ. ಎಲ್. ಜೋಶಿ ಕಂಪನಿ.**

ಪೋಷ್ಟ— ಸಿರಸಿ ಉತ್ತರ ಕಾನಡಾ

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ ರೋಕ ದರ, ಸವಲತಿದು ಇರುತ್ತದೆ

ಪತ್ತೆ:— ಬಿ ದಾಸ, ಕುಮಟಾ.

ಕಂಬಳಿಗಳು.

ದೊಡ್ಡ ಕಂಬಳಿಗಳು.

ಹೊಸ ಕಾಟಿಗೂ, ಕಾಟಿಗೂ, ಬಿಳ ಪಂಪವು, ಮತ್ತು ಹಾಸುಕೊಳ್ಳಲಿಕ್ಕೂ ಹೊದ್ದುಕೊಳ್ಳಲಿಕ್ಕೂ ಬಿಳುವಂಥವ ದಾವಣಗೇರಿ ದೊಡ್ಡ ಕಂಬಳಿಗಳು ಬೇಕಾದರೆ, ನಮಗೆ ಬರೆದು ತಿಳಿಸಿರಿ ಕೂಡ ಪ್ರಸ್ ವೆರಾಗ್ ಕಿಮ್ಮತ್ತಿ ಕಳಿಸುವೆವು

ಶಿರ್ಕೆ ಶ್ರೀನಿವಾಸರಾವ,

ದಾವಣಗೇರಿ, ಮೈಸೂರ ಪ್ರಾಂತ

☞ ನಮ್ಮಲ್ಲಿ ಸಿಗುವ ದಿವ್ಯ ಔಷಧಗಳು.

ಮೇಹರಾಜಚೂರ್ಣ— ಎಲ್ಲ ಕಂಗಣತರದ ಮಲಬದ್ಧತೆಯು ಜುಲಾಬ ಮಾಡಿಸುವ ನಿಶ್ಚಿತ್ಯ ಚೂರ್ಣ ಕ್ರಯ— ಪುಡಿ (೧ಕ್ಕೆ ೧ ಆಣೆ) ೧೨ಕ್ಕೆ ೧ ೨-೦ ಬಿರಬಾಲ ಸಂಜೀವನಿ ವಡಾ— ಈ ಮಾತ್ರೆಯು ಕೂಸಗಳಿಗೆ ಉಪಯೋಗಿಸಿದರೆ ಯಾವತೇತರದ ೬ ವರ ವ್ಯಾಧಿಯು ಬರಲಾರದು ಇದು ಬಾಟ್ಲಿ ೧ಕ್ಕೆ ರೂ ೨॥ ಶ್ವಾಸ ಕ್ವಾಸ ಗುಟಿಕಾ— ಯಾವತೇತರದ ಶ್ವಾಸಕಾಸ ದಮ್ಮು ಕೆಮ್ಮು ಇವುಗಳಮೇಲೆ ಉಪಯೋಗಿಸುವದು. ಕ್ರಯ— ೧ಕ್ಕೆ ೨ ಆಣೆ ೧೨ ಕ್ಕೆ ೧। ರೂ

ವ್ರಣನಾಶಕ ಚೂರ್ಣ— ಯಾವತೇತರವೆ ವ್ರಣ ಹುಣ್ಣು ನಮೇಲೆ ಹಚ್ಚಿದರೆ ೮ ದಿವಸಗಳಲ್ಲಿ ಗುಣ ಕ್ರಯ— ದೊಡ್ಡ ಪುಡಿ ೧ ಕ್ಕೆ ರೂ ೨-೦-೦

ಪಿ. ಆಯುರ್ವೇದ ವೈದ್ಯ ಶಾಲಾ,

ಆರ್ ಎನ್. ವೈದ್ಯ, ಗುರಜಗಪೇಟ್ ಕುಮಟಾ

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕಳಿಸ ವತ್ತಾಯಮೇಲೆ ಬರೆಕೊಳ್ಳಬಹುದು ಸವಲತ್ತಿಯ ದರಗಳು ಇಟ್ಟಿರುವೆವು ನಮ್ಮ ಪತ್ತೆ —

ಗ್ಯಾತೋಂಡೇ ಬ್ರದರ್ಸ.

ಮೋಟರ ಡೀಲರ್ಸ, ರಿಪೇರರ್ಸ,

ಕಾರವಾರ

ಅನುಭವಸಿದ್ಧವಾದ ಔಷಧಗಳು !!!

ನಿಷ್ಪ್ರಯೋಜನಂ ಜಗತ್ ॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ

ಈ ವಿನಹಾ, ಶಕ್ತಿವರ್ಧಕ ಗುಳಿಗೆ, ಹಂಶುವೊಮು, ಉತ್ತಮ ನೀಲಗಿರಿ ಎಣ್ಣೆ, ಕಾಮಿನಿಯಾ ಮುಂತಾದ ಒಳ್ಳೇ ಸುಗಂಧಿಕ ತೈಲಗಳು, ಅನೇಕತರದ ಅತ್ತರಗಳು, ಸ್ಟಿವನರಿ ಮತ್ತು ಕಟ್ಲರಿ ಸಾಮಾನು, ತೆಜಪ್ (ಚಿನ್ನಕ್ಕೆ ಥಳಕ ಕೊಡುವ ಎಣ್ಣೆ) ಮನೆ ಕಟ್ಟೋಣಕ್ಕೆ ತಗಲುವ ಕಬ್ಬಿಣದ ಸಾಮಾನು, ಗ್ಲಾಸವೇರ ಸಾಮಾನು, ಮಂಜಿಪರ ಕಾಗದ ಮತ್ತು ಅನೇಕ ತರದ ಸಾಮಾನುಗಳು ನಮ್ಮಲ್ಲಿ ಸಿಗುತ್ತವೆ ಪತ್ರಬರೆದಲ್ಲಿ ದರವು ತಿಳಿಸಲ್ಪಡುವದು.

ಪತ್ತೆ:

P. L. Shanbhag, KUMTA.

ಪುರುಷೋತ್ತಮ ಲಕ್ಷ್ಮಣಯ್ಯ ಶಾನಭಾಗ, ಕುಮಟಾ,

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ. ೧೮೭೬ ನೇ ಇಸ್ವಿಯ ೨೫ ನೇ ಆಕ್ಟನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ... ಔಷಧವು ಮುವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೨-೧೯೦೭ ನೇ ಇಸವಿಯಂದ ತಾ|| ೧೯ ... ನೇ ಇಸ್ವಿಯ ವರೆಗೆ ಮೂವತ್ತು ಸಾವಿರ ಬಾಟ್ಲಿಗಳ ಖರ್ಚಾದವು ಮತ್ತು ... ನೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಬತ್ತು ಸಾವಿರ ... ಗಳು. ಔಷಧವು ಅಂತ ಅವಶ್ಯವಿದ್ದವರಿಗೆ ಸಾ ದೊಡ್ಡ ಬಾಟ್ಲಿಗಳ ... ಮೂವತ್ತೊಂಬತ್ತು ಸಾವಿರ ಬಾಟ್ಲಿಗಳು ಔಷಧವು ... ಔಷಧವು ... ಮೌಲ್ಯವಾದ ಅದೆ ... ಯಾವತ್ತರ ... ಭವಕ್ಕೆ ತಂದು ಪ್ರತಿಯೊಂದು ... ಒಂದು ಬಾಟ್ಲಿ ಇಟ್ಟು ಕೊಂಡು ... ಸ್ವೀಕಾರವಾಗತಕ್ಕದ್ದೇನು ಈ ಆರೋಗ್ಯಬಿಂದ ... ಕರ್ನಾಟಕ ದೇಶ... ಯಾವತ್ತು ರೋಗಕ್ಕೆ ... ಎಷ್ಟೋ ... ವೈದ್ಯ ... ಔಷಧವನ್ನು ... ರೋಗಗಳಿಗೆ ... ಪರೀಕ್ಷೆಯ ... ಡಾಕ್ಟರರ ಮತ್ತು ವೈದ್ಯರ ... ಒಂದ ವೇಳೆ ಈ ಆರೋಗ್ಯಬಿಂದುವಿನ ಮೇಲೆ ... ರೋಗಗಳ ... ಮಾಡಿಕೊಳ್ಳಬೇಕು

ರೋಗದ ನಾಮಗಳು

ಕ್ಷಯರೋಗ, ಶ್ವಾಸರೋಗ, ಪಾಂಡುರೋಗ, ಗ...ರೋಗ, ಮಲರೋಗ, ಮಹಾಮಾರಿ(ಕಾಲರಾ), ಪ್ಲೇಗ, ಚಳಿಜ್ವರ, ವಿಷಮ ಜ್ವರ ಇನ್‌ಫ್ಲುಯೆಂಜಾಜ್ವರ ಅನೇಕಪ್ರಕಾರದಜ್ವರ, ... ವಾಂತಿ, ಕಿವಿಶೂಲೆ, ಮೂಗಿನೊಳಗಿನ ... ವಾದ ರೋಗವು ಕಣ್ಣಿನೊಳಗೆ ಹೂವು ... ಮತ್ತು ಕಣ್ಣುಬೇನೆ, ಕೆಮ್ಮು, ದಮ್ಮು, ಶ್ವಾಸ ಅಡಗ್ಗೆ ... ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರತಲೆಶೂಲಿ, ನಡಶೂಲಿ, ವಾತಶೂಲಿ, ರಕ್ತಜಡ್ಡು, ಗುದ ಪ್ರಸವಬೇನೆ, ... ಗಜಕರ್ಣ, ... ಕೆಡ್ಡು, ಕ್ಷಯವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟ ಶೂಲಿ, ಹಡದಬಂಜು, ಸಣ್ಣ ಕೂಸುಗಳ ಬಾಲಗ್ರಹ ಅರವಿ ಮುಟ್ಟಬೇನೆ, ಹೊಟ್ಟೆ ದೊಡ್ಡದಾಗೋಣ, ಮೈ ಸೊರಬೀಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ. ಅಮೌಲ್ಯ ಕಂಡು ಒಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಒದಗ ಕಡಿವೆ ಬೆಲೆ ಇಟ್ಟಿರುತ್ತದೆ. ಒಂದು ... ತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ನಮೂ... ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ ಪಿ ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇದಕ್ಕೆ ಒಂದು ... ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದವರು ಬಾಟ್ಲಿಯರಿಗೆ ಕಮಿಶನ್ ಇಲ್ಲ ಇದಕ್ಕೆ ... ಆಣೆ ಖರ್ಚು ಬರುವದು ಒಂದು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಮೋಸ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟು ... ಅನುಪಾನದ ... ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ... ವಿಳಾಸ ... ಅಥವಾ ಕನ್ನಡದಲ್ಲಿ ನಾಮ ವ ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

... ಸಂಪಾದಕ ಅರ್ಕಶಫಾ, ಹೆಡ್ ಆಫೀಸು ಶಹಾಪೂರ, ಬೆಳಗಾಂವ

ಖಾತ್ರಿಯಿಂದ ಗುಣಪಡಿಸುವ ಔಷಧಗಳು.

1 ... ಕಾಮೋತ್ತೇಜಕ ತೇಲ — ... ವಂತ ... ಕರೂ, ಮತ್ತು ಇಂದ್ರಿಯ ... ಅಜೀರ್ಣ ಎದೆಕೆಳವ ... ರೋಗಗಳ ... ಶಕ್ತಿ ... ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ ಧಾತುಪುಷ್ಟಿ ಮತ್ತು ... ಕಾಂತಿ ... 40 ದಿಲ ಸೇವಿಸುವ ತೇಲ ... 1-1-0 ... 1-12-0.

2 ... — ಖಾತ್ರಿ ಗುಣ) – ... ನಿಮೋನಿಯಾ, ... ಜ್ವರಗಳ ... 1 ಕ್ಕೆ 0-8-0

3 ... ಗುಟಿಕೆ — ... ಮಕ್ಕಳ ... 0 10 0

4 ... ಗುಟಿಕೆ ಇದು ... ಒಂದೇ ಗುಟಿಕೆ ... 1 ಕ್ಕೆ 0 10 0

5 ... 1 ಕ್ಕೆ 0 12 0

ಎಮ್. ಗಣಪಯ್ಯಾ ಅಂಡ ಸನ್ಸ್,
ನೆಟಿವ ಡ್ರಗ್ಗಿಸ್ಟ್ಸ ರಥಬೀದಿ
... ಕ.

ಮೋಟಾರ.

... ಸಿರಸಿ ... ಸಿರಸಿಯಿಂದ ... ಪ್ರತಿ ಆದಿತ್ಯವಾರ ಗುರುವಾರ ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ ... ಬೆಳಿಗ್ಗೆ ... ಘಂಟೆ ಮತ್ತು ಸಿರಸಿಯಿಂದ ಮಧ್ಯಾಹ್ನ ... ಘಂಟೆಗೆ ಹೊರಡುವದು ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಆರಕ್ಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸ ಬಹುದು.
ಟಿಕೀಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು.

ಎಸ್. ಎಲ್. ಧಾಕಪ್ಪಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಪತ್ರ ಬರೆದು ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯಾ ಶ್ಯಾನಭಾಗ.
ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हें औषध दुर्गम अशा महाडांतील अनेक वनस्पतींच्या रसात पौष्टिक औषधीकल्कांचा रसार्क मिश्र करून, खाली दिलेल्या रोगांस उपयुक्त अशी भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीनें तयार केला आहे. हा बिंदु सेवन केल्यानें नपुंसकत्व, स्वप्नजन्य धातुपात, लघवीच्या पूर्वी अगर नंतर स्रवणारा धातुपात नाहींसा करून वीर्य वृद्धि व रक्तशुद्धि होते. कितीहि जुनाट कडकी असो (एक सतकातच) नाश पावते आणि उपदंश संबंधी मुरलेले विकार नाहींसे होऊन हातपाय, डोळे यांचा दाह व धातुक्षय घातक सर्व विकार नष्ट होऊन, शरीर वज्राप्रमाणें बनतें, हा बिंदु साक्षात्‌पणें उतारवयाच्या मनुष्याचा कामविकार सुद्धां प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोग यांचा समूळ नाश होतो हे औषध स्त्रियांनी सेवन केल्यास, त्यांचे जननेंद्रियांचे कोणत्याहि प्रकारचे विकार न राहता त्या गर्भधारणास योग्य होतात. ह्याच्या सेवनानें दिवसातून तीन वेळ जेवले तरी भूक चांगली लागत जाऊन शौच ... साफ होते याचा अनुभव औषध घेतल्या... पहिल्या दिवशी येतो. तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूचे सेवन करून, यांतील खरी मजा पहावी फार दिवसांचा रोग असल्यास, पूर्ण गुणास तीन बाटल्या औषध घेतलें पाहिजे नवीन रोगास एक बाटली औषध सेवन केले असता, गुण येईल. एका बाटलीमध्ये १० तोळे औषध असते. त्या एका बाटलीची किमत १। रुपया. तीन बाटल्यांची किंमत ३। रुपये. एक डझन (१२) बाटल्यांची किमत १० रुपये याशिवाय टपाल, व प्याकिंग खर्च निराळा पडेल तीन बाटल्या सेवन करणाऱ्यांनीं ३० तोळे औषधाची एक मोठी बाटली मागवून घ्यावी म्हणजे थोडी मोड... पडेल.

म्यानेजर,
के, एम, हनुमान प्रासादिक कंप...
जिल्हा बेळगांव, मु. पो. निपा...

अತ್ಯುತ್ತಮವಾದ ಮಂಗಳೂರ ನಶ್ಯ... ಮತ್ತು ನೇದಾದ ಬೀಡಿಗಳು ನಮ್ಮಲ್ಲಿ ... ವೆ. ರೋಕ ದರ ಸವಲತಿನ ...

ಪತ್ತೆ:— ಬಿ ದಾಸ, ಕುಮ...

Printed and published by Krishnarao Keshav Shenvi, at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೦.

ಪತ್ರದ ವರ್ಗಣಿ -

ಕುಮಟೆಯಲ್ಲಿ ಒಗಾವು ರೂಪಾಯಿ 2-0-0.

ಮನೆಯಾರ್ಡರಿಯಿಂದ ರೂ 2-13-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-15-0

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:- ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ(೧೫ ಎಮ್‌ಬ್ರಾಡ್) ೫ ಸಾಲುಗಳ ವರೆಗೆ ರೂ. 1-0-0 ಅನಂತ್ರ ಪ್ರತಿ ಸಾಲಿಗೆ ೦-೨-೦. ಹೆಚ್ಚಿಂಗದ ಸಾಲು ಎಷ್ಟು, ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು. ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವವು

[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೪ ಮಾಹೆ ಫೆಬ್ರುವರಿ ಸನ್ ೧೯೨೧ ನೇ ಇಸವಿ.]

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿ, ಕಪ್ಪು, ಕೆಂಪು ಬಣ್ಣದ ಶಾಯಿ ಪುಡಿಗಳು ಪತ್ರ ವ್ಯವಹಾರಕ್ಕೆ ಯೋಗ್ಯವಾಗಿವೆ. ಶಾಯಿ ಸಂಬಂಧವಾಗಿ [illegible] ತೆಗೆದುಕೊಂಡರೆ, ಧರಪೂರ ಕಮಿಶನ್

ಪತ್ತೆ— ಎಸ್ ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಭಜತೀ ಭ್ರಾತೃಸಂಘದ

ಅನುಭವಸಿದ್ಧ ಔಷಧ

[illegible] ರದ ಗುಳಿಗೆಗಳು. [illegible] ಉತ್ತಮ ನೀಲಗಿರಿ ಎಣ್ಣೆ, ಹಿಮಾಲಯ ಶಿಲಾಜಿತ್, [illegible] ಹಿಂಗು, ಇದಲ್ಲದೆ [illegible] ದೇವರ ಫೋಟೋಗಳೂ, [illegible] ಳೂ, ಕಾಲೋಪಯೋಗಿ ಪುಸ್ತಕಗಳೂ ಸ್ವೆಟರು [illegible] ಮುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಜತೀ ಭ್ರಾತೃಸಂಘ.

ಗೋಕರ್ಣ.

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣವಾಪಸು)

ಧಾತುಪೌಷ್ಟಿಕ ಕಾಮೋತ್ತೇಜಕ [illegible] ಸ್ತಂಭಕವ [illegible]

ಮದನೋದ್ಭವ ಗುಳಿಗೆ.

ಜನೇಂದ್ರಿಯದ ಶಿಥಿಲತೆ, [illegible] ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ [illegible] ವಾಗಿ ಧಾತುಪೌಷ್ಟಿಕ [illegible] ವರ್ಧಕ, [illegible] ಕಾಮೋತ್ತೇಜಕ [illegible] ದಕ [illegible] ಗರ್ಮಿ, (ಮೇಹ) ಗುಪ್ತಪ್ರದೇಶದ [illegible] ಎಲ್ಲತರದ [illegible] ಗಳು [illegible] ಬಾಧೆಗಳು [illegible] ತಕ್ಷಣ [illegible] ಗುಣವಾಗಿ ಶರೀರಕ್ಕೆ [illegible] ತಿಯೂ ರತಿಸುಖಕ್ಕೆ ಸಂಪೂರ್ಣ [illegible] ಬರುತ್ತವೆ. [illegible] ೬೦ ಗುಳಿಗೆಗಳು [illegible] ತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ [illegible] ಅನುಭವಪತ್ರಿಕೆ ಔಷಧದ ಸಂಗಡ

ವಿಳಾಸ— ಜಿ ಎಲ್. ಜೋಶಿ ಕಂಪನಿ

ಪೋಸ್ಟ— ಸಿರಸಿ. ಉತ್ತರ ಕಾನಡಾ-

ಕಂಬಳಿಗಳು.

ದೊಡ್ಡ ಕಂಬಳಿಗಳು

[illegible] ಕೋಟೆಗೂ [illegible] ಪೊಟ್ಟೆಗೂ, [illegible] ಹೊದ್ದುಕೊಳ್ಳಲಿಕ್ಕೂ [illegible] ದೊರೆಯುವವು. [illegible] ಕಂಬಳಿಗಳು ಬೇಕಾದರೆ, ನಮಗೆ [illegible] ಕೆಲೀ ಮೋಹ್ಯ ಕಿಮ್ಮತ್ತಿಗೆ ಕಳಿಸುವೆವು.

ಶಿರ್ಕೆ ಶ್ರೀನಿವಾಸರಾವ,

ದಾವಣಗೇರಿ, ಮೈಸೂರ ಪ್ರಾಂತ.

[illegible]

[illegible] ಮೋಹನಾಪಟೋಲ — ಎಲ್ಲ ತರದ [illegible] ಪ್ರಯೋಗ ಪತ್ರ [illegible] ಸ್ವಪ್ನಾವಸ್ಥೆ [illegible] ಯಾದಿಗಳ [illegible]

ಸಿ. ಆಯುರ್ವೇದ ವೈದ್ಯ ಶಾಲಾ,

ಆರ್ ಎನ್. ವೈದ್ಯ, ಗುರುಕುಲವೇದ ಕುಮಟಾ

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕಳಗಿನ ವ್ಯಾಯಮೋಳಿ [illegible] ಸವಲತ್ತಿಯ ದರಗಳು [illegible] ನಮ್ಮ ಪತ್ತೆ—

ಗ್ವಾತೋಂಡೇ ಬ್ರದರ್ಸ.

ಮೋಟರ ಡೀಲರ್ಸ ಅರ್ಪೇರರ್ಸ,

ಕಾರವಾರ.

ಅನುಭವಸಿದ್ಧವಾದ ಔಷಧಗಳು !!!

[illegible] ಜಗತ್ ॥

ರಕ್ತಶುದ್ಧಿ. ಧಾತುವೃದ್ಧಿಯಮೇಲೆ ಅತಿ ಉತ್ತಮ.

ಪ್ರವಾಳ, ಕೇಶರ, ಅಭ್ರಕಸತ್ವ, ಶಿಲಾಜಿತು,

ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, [illegible] ಸ್ವಪ್ನಾವಸ್ಥೆ, ರಕ್ತದೂಷಿತ್ವರೋಗ, [illegible] ನರಗಳ ಅಶಕ್ತತೆ, [illegible] ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, [illegible] ಮುಂತಾದ, ಅನೇಕ ವಿಕಾರಗಳು. [illegible] ಗುಣವಾಗಿ, ಶರೀರಕ್ಕೆ [illegible] ಸ್ಮರಣಶಕ್ತಿಯೂ, [illegible] ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ [illegible] ಗುಳಿಗೆ ೮೪ ಕ್ಕೆ ರೂ. ೪-೦-೦.

(೧) [illegible] — [illegible] ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ್ದು [illegible] ಗೆ ೩೦ ಕ್ಕೆ ರೂ. ೧-೦-೦. (೨) ಸ್ವಪ್ನನಾಶಕ [illegible] ೧೪ ದಿವಸದ ಔಷಧಕ್ಕೆ ರೂ ೨-೦-೦. (೩) [illegible] — [illegible] ೦-೮-೦ (೪) [illegible] ಗುಳಿಗೆ ೩೦ ಕ್ಕೆ ರೂ ೨-೦-೦

ಅನುಭವಪತ್ರ ಔಷಧಿಯ ಸಂಗಡ [illegible]

ವಿಳಾಸ— ವೈದ್ಯ ವ್ಹಿ. ಎಸ್. ಮೋಡಕ ಮತ್ತು ಕಂಪನಿ, ಪೋಸ್ಟ ಸಿರಸಿ.

ಜಿಲ್ಲಾ ಉತ್ತರಕಾನಡಾ.

अनुभव गुण न आल्यास पैसे परत [illegible]

शक्तिवर्धक हलवा.

हा हलवा [illegible] — [illegible] शुद्धि, धातुपुष्टि. अति [illegible] तळचे [illegible] होते. [illegible] ज्वर, खोकला, पित्तविकार, [illegible] मुळाचे उष्णताविकार वगैरे जलद गुणकारी होतात २० तो. ३ रु.

पत्ता [illegible] शक्तिवर्धक हलवा डिपो, पो कुमठा. जि उ कानडा

ಗಂಧದ ಲಿಲಾವಿನ ಜಾಹೀರನಾಮೆ.

ಕೆಳಗೆ ಸಹಿ ಮಾಡುವವರು ಕುಮಟಾ ಮುಕ್ಕಾಮಿನಲ್ಲಿ ತಾರೀಖು ೧೪ ಮಾರ್ಚ ೧೯೨೧ ನೇ ದಿವಸ ಅಜಮಾಸ ೮೦ ಖಂಡಿ ಗಂಧದ ಸಲಾಖಿ ಬೇರು, ಖರಗಸ ಬುಕಣಿ-ಇವನ್ನು ಲಿಲಾಂವ್ ಮಾಡುವರು

ಸವಾಲ ಖಂಡಿಮೇಲೆ ಮಾಡತಕ್ಕದ್ದು ೧ ಖಂಡಿ ಅಂದರೆ ೫೬೦ ಸ್ಟೆಂಡರ್ಡ ಪೌಂಡು

ಯಾವದೇ ಸವಾಲು ಮಂಜೂರ ಆಗರ ನಾಮಂಜೂರ ಮಾಡುವದು, ಕೆಳಗೆ ಸಹಿ [illegible] ವರ ಮುನಾಸಬಿನಮೇಲೆ ಅವಲಂಬಿಸಿರುತ್ತದೆ

ಲಿಲಾಂ ರಕಮಿನ ¼ ರಕಮು [illegible] ರೂಪಾಯಿ (ಯಾವದು ಹೆಚ್ಚು ಅದದೆ [illegible]) ರೋಖ ಅಗರ ತಿಜೋರಿ ಚಲನ ಲಗ್ತ [illegible] ತಾರ ಅಗರ ಪತ್ರದ್ವಾರ ಕಳುಹಿಸಿದ ಸವ [illegible] ವದರಲ್ಲಿ ಬರಲಿಕ್ಕಿಲ್ಲ

ಸವಾಲ ರಕಮು ಈ ಕೆಳಗಿನಂತೆ ಕೊಡತಕ್ಕದ್ದು ಸವಾಲು ಮಂಜೂರಾದ ಕೂಡಲೇ, ಮತ್ತು ಬಾಕಿ ರಕಮು ೩೧ ಮಾರ್ಚ ೧೯೨೧ ತಾರೀಖಿನ ಒಳಗೆ ಅಗರ ಅದರ ಮೊದಲು ಮಾಲು ಒಯ್ಯುವದಾದಲ್ಲಿ ಮಾಲು ಸ್ಥಳಾಂತರ ಮಾಡುವ ಮೊದಲು ಭರಣಾ ಮಾಡತಕ್ಕದ್ದು

ಇನ್ನು ಹೆಚ್ಚಿಗೆ ಮಾಹಿತಿ ಬೇಕಾದಲ್ಲಿ ನಮ್ಮ ಕಛೇರಿಗೆ (ಕುಮಟಾ ಪೋಸ್ಟ) ಬರೆದು ಪಡೆಯಬಹುದು.

ಮ ಕ್ಯಾಂ ಅಂಕೋಲಾ ಮಾರಿಫತ್ ತಾ ೧೭-೨-೨೧	Sd C. Gilbert Divisional For. Officer C D Kumta

"For Freedom & for Honour."

ಮೆಹರ್ಬಾನ ಸಿರ್ಸಿ ಮುನಿಸಿಪಲ್ [illegible] ಅರಮನ್ ಅವರ ಸನ್ನಿಧಾನಕ್ಕೆ ಮಾಡಿದ ಪತ್ರದ ಉ[illegible]

ಈ ಕೆಳಗೆ ಸಹಿ ಮಾಡಿದ [illegible] ಇಂಗ್ಲಿಷ ಮ ಕನ್ನಡ ಸ್ಕೂಲ ವಿದ್ಯಾರ್ಥಿಗಳು ಮಾಡುವ ಸವಿನಯ ವಿನಂತಿ—

ಇದೇ ಫೆಬ್ರುವರಿ ೧೦ ನೇ ತಾರೀಖಿನ ದಿವಸ ತಾವು ಶಾಲೆಗೆ ಬಂದು ಪದಕುಗಳನ್ನು ನಮಗೆ ಹಂಚಿದ್ದಿರಷ್ಟೇ ಆದರೆ, ಪದಕುಗಳನ್ನು ಕೊಡುವಾಗ್ಯೆ ಇವುಗಳನ್ನು ನಮಗೆ ಯಾತಕ್ಕೆ ಕೊಡುತ್ತಾರೆ ಯಾರ ಕಡೆಯಿಂದ ಬಂದಿದ್ದುವೆ, ಯಾವ ಉದ್ದೇಶದಿಂದ ಕೊಡುತ್ತಾರೆ ಎಂಬದ ನಮಗೆ ಯಾರು ಸ್ಪಷ್ಟೀಕರಿಸಿ ಹೇಳಲಿಲ್ಲ ಆದರೆ ಪದಕುಗಳನ್ನು ತಾವು ತಮ್ಮ ಕೈಯಿಂದ ಕೊಟ್ಟದ್ದರಿಂದ ನಾವು ವಿಧೇಯಪೂರ್ವಕವಾಗಿ ಸ್ವೀಕರಿಸಿದೆವು ಆದರೆ ಅವುಗಳನ್ನು ತಕ್ಕೊಂಡಮೇಲೆ ಅವುಗಳನ್ನು ಓದಿ ನೋಡಲು, ಹೀಗೆ ಕಂಡುಬರುತ್ತದಲ್ಲ— ಇವು "ಸ್ವತಂತ್ರತೆ ಮತ್ತು ದೇಶದ ಮಾನ"ವನ್ನು ಕಾದುಕೊಳ್ಳಲಿಕ್ಕೆ ಮಾಡಿದ ಮಹಾಯುದ್ಧದ ವಿಜಯಸ್ಮಾರಕವೆಂತ ನಮಗೆ ಸಾಮ್ರಾಜ್ಯ ಸರಕಾರದಿಂದ ಕೊಟ್ಟಿರುತ್ತದಾಗಿ ತಿಳಿಯುತ್ತದೆ ಆದರೆ ಯುದ್ಧದ ಪರಿಣಾಮವು ನಮ್ಮ ದೇಶದ "ಸ್ವತಂತ್ರತೆ ಮತ್ತು ಮಾನ" ಇವುಗಳ ರಕ್ಷಣೆ ಆಗುವದರ ಬದಲಾಗಿ ಅವುಗಳ ಹೀನಾವಸ್ಥೆಯೇ ಆಗಿರುತ್ತದೆಂತ ನಾವು ಮನಗಂಡಿರುತ್ತೇವೆ ಯಾಕಂದರೆ ಯುದ್ಧ ಸಮಾಪ್ತಿಗೆ ಬರಲು, ರೌಲಟ್ ಎಕ್ಟ ಎಂಬ ಕಾಯದೆಯನ್ನು ನಮ್ಮ ವ್ಹಾಯಿಸರೊಯ್ ಕೌನ್ಸಿಲಿನೊಳಗೆ ಇದ್ದ ಲೋಕಪ್ರತಿನಿಧಿಗಳೆಲ್ಲರೂ, ಸದರ ಕಾಯದೆಯು ನಮ್ಮ ಸ್ವಾತಂತ್ರ್ಯಕ್ಕೂ ಮತ್ತು ರಾಜಭಕ್ತಿಗೂ, ಊನತ್ವವನ್ನು ತರುವದೆಂತ ಸಾರಿ ಸಾರಿ ಹೇಳಿದರೂ, ಅವರ ಮತಗಳನ್ನು ಧಿಃಕರಿಸಿ ಆ ಕಾಯದೆಯನ್ನು ಪಾಸಮಾಡಿಕೊಂಡರು ನಂತರ ಪಂಜಾಬದಲ್ಲಿ ನಮ್ಮ ಬಂಧು ಭಗಿನಿಯರಿಗೆ ಅನೇಕ ತರದಿಂದ ಕೆಲವು ಅಧಿಕಾರಿ ಜನರು ಮಾನಹಾನಿ ಮಾಡಿದರ [illegible] ರೆ ಅವರಿಗೆ ಯೋಗ್ಯ ಶಿಕ್ಷೆ ಕೊಡಲಿಲ್ಲ ಲಟ ಸದರ ಪ್ರಕರಣದಲ್ಲಿದ್ದ ಪಂಜಾಬದ ಗವ್ಹರ್ನರರಿಗೆ ಸದರೇನ ಮಾಡಿದ್ದಾರೆ ಮತ ದಕ್ಷಿಣ ಆಫ್ರಿಕಾದಲ್ಲಿ ಸಹ ನಮ್ಮ ಜನರಿಗೆ ಅಮಾನುಷ್ಯತನದಿಂದ ನಡಿಸುತ್ತಾರೆಂತ ನಮಗೆ ಸಿ ಎಫ್ ಅಂಡ್ರೂಸ ಎಂಬ ಒಬ್ಬ ಮಹನೀಯರೂ ವಿಶ್ವಸನೀಯರೂ ಆದ ಇಂಗ್ಲೀಷ ಗೃಹಸ್ಥರೇ ಹೇಳುತ್ತಾರ ಇದಲ್ಲದೆ ನಮ್ಮ ಮುಸಲ್ಮಾನ ಬಂಧುವರ ಧರ್ಮಕ್ಕೂ ಬಾಧಕ ಬಂದಿರುತ್ತದೆ [illegible] ಮೇಲಿಂದ ನಮಗೆ [illegible] ದಕಗಳು ನಮ್ಮ ದೇಶದ ಮಾನ [illegible] ಬದಲಾಗಿ [illegible] ನಮಗೆ ತೋರುತ್ತದೆ [illegible] ದಕಗಳನ್ನು [illegible] ಒರೆದ [illegible] ವ್ಯದ [illegible]

[illegible]

[illegible]

Vidyarthi [illegible] Bhat
[illegible] Vidyarthi [illegible]

ದೇಶಭಕ್ತರು ಯಾರು?

[illegible] ಪ್ರತಿ [illegible] ಇದೇ [illegible] ಆದರೆ [illegible] ನಾವು [illegible] ವಿವೇಕಾನಂದರವರ ಈ ಕೆಳಗಿನ [illegible] ದಿಂದ ಸ್ಪಷ್ಟವಾಗಿ ತಿಳಿಯುತ್ತದೆ

ಜನರು [illegible] ದೇಶಭಕ್ತಿಯ ವಿಷಯವಾಗಿ ಮಾತಾಡುತ್ತಿರುತ್ತಾರೆ ನನ್ನಲ್ಲಿಯೂ ಸ್ವದೇಶಭಕ್ತಿಯು ಇದ್ದೇ ಇರುತ್ತದೆ ಮತ್ತು ಸ್ವದೇಶಭಕ್ತಿ ಎಂದರೇನೆಂಬದಕ್ಕೆ ನನಗೂ ಒಂದು ರಚಿಸಿದ ಧ್ಯಾನ ಇರದೆ ಯಾವದಾದರೂ ಮಹತ್ಕಾರ್ಯಕ್ಕಾದಿಯಲ್ಲಿ ಮೂರು ಸಂಗತಿಗಳ ಅಸ್ತಿತ್ವವು ಅವಶ್ಯವಿರುತ್ತದೆ ಕೇವಲ ಬುದ್ಧಿಯಿಲ್ಲಾಗಲಿ ತರ್ಕಶಕ್ತಿಯಲ್ಲಾಗಲಿ ಪ್ರಯೋಜನವೇನಿದೆ? ಬುದ್ಧಿಯು ಅಥವಾ ತರ್ಕಶಕ್ತಿಯು ಕೆಲವು ಹೆಜ್ಜೆ ಮುಂದೆ ಹೋಗಬಹುದು ಆದರೆ ಮುಂದಿನ ಯಾವತ್ತೂ ಕಾರ್ಯಗಳನ್ನು ನೆರವೇರಿಸುವ ಶಕ್ತಿಯು ಅವರಲ್ಲಿಲ್ಲದ್ದರಿಂದ, [illegible] ಬೀಳುತ್ತವೆ ಮತ್ತು ಅದರ ಗತಿಯು ಕುಂಠಿತವಾಗುತ್ತದೆ ಸ್ಫೂರ್ತಿಯ ಹಳ್ಳವು ಯಾವಾಗಲೂ ಅಂತಃಕರಣದೊಳಗಿಂದಲೇ ಹರಿಯುತ್ತದೆ ಬುದ್ಧಿಗೆ ತೆರೆಯಲಶಕ್ಯವಾದ ಬಾಗಿಲುಗಳನ್ನು ಸ್ಫೂರ್ತಿಯೇ ತೆರೆಯಲು ಸಮರ್ಥವಾದದ್ದು ಜಗತ್ತಿನ ಅಂತರಂಗದಲ್ಲಿದ್ದ ಗುಟ್ಟುಗಳನ್ನು ಹೊರಗೆಡಹುವ ಬಾಗಿಲುಗಳನ್ನು ತೆರೆಯಲು ಪ್ರೇಮವೇ ಸಮರ್ಥವಿರುತ್ತದೆ ಆದುದರಿಂದ ನನ್ನ ಭಾವೀ ಸುಧಾರಕರೇ, ಮತ್ತು ನನ್ನ ಭಾವೀ ಸ್ವದೇಶಭಕ್ತರೇ, ದೇವರ ಮತ್ತು ಋಷಿಗಳ ಕೋಟ್ಯಾವಧಿ ವಂಶಜರು ಪಶುಗಳ ಪಂಕ್ತಿಯಲ್ಲಿ ಹೋಗಿ ಕುಳಿತಿರುತ್ತಾರೆಂಬದನ್ನು ನೀವು ನೋಡೇ ನೋಡುತ್ತೀರಿ ಇದರ ವಿಷಯವಾಗಿ ನಿಮ್ಮ ಹೃದಯವು ವಿದೀರ್ಣವಾಗಿರುವದೋ? ದೇಶದೊಳಗಿನ ಲಕ್ಷಾವಧಿ ಜನರು ಹಸಿವೆಯಿಂದ ಸಾಯುತ್ತಿದ್ದಾರೆ ನೂರಾರು ವರ್ಷಗಳಿಂದ ಕ್ಷುಧಾಪೀಡೆಯಿಂದ ತಳಮಳಿಸುತ್ತಿದ್ದಾರೆ ಇದನ್ನು ನೋಡಿ ನೋಡಿ, ನಿಮ್ಮ ಅಂತಃಕರಣವು ತಳಮಳಗೊಂಡಿರುವದೋ? ಆಕಾಶದೊಳಗಿನ ಕಾರ್ಮೋಡದಂತೆ ಎಲ್ಲಿ ನೋಡಿದರೂ ಅಜ್ಞಾನಾಂಧಃಕಾರವು ಪಸರಿಸಿಕೊಂಡಿದೆ ಇದರಿಂದ ನಿಮ್ಮ ಅಂತಃಕರಣವು ತಳಮಳಿಸುವದಿಲ್ಲವೋ? ಇದೇ ಚಿಂತೆಯಿಂದ ನಿಮಗೆ ನಿದ್ದೆ ಬಾರದ ಹಾಗೆ ಆಗಿದೆಯೋ? ನಿಮ್ಮ [illegible] ಸಹ ವಿಶ್ರಾಂತಿ ಸಿಗದೆ ಹಾಗಾಗಿದೆಯೋ? ಈ [illegible] ಸ್ಥಿತಿಯ ವಿಚಾರವು ನಿಮ್ಮ ರಕ್ತವಾಹಿನಿಗಳಲ್ಲಿ [illegible] ತ್ತದೆಯೋ? ಹೃದಯದ ಪ್ರತಿ [illegible] ಸಂಗಡ ನಿಮ್ಮ ಅಂತಃಕರಣದ [illegible] ತನದ [illegible] ಸಮಾನಗತಿಯಿಂದ ಹರಿಯುತ್ತಿರುತ್ತದೆಯೋ? ಈ [illegible] ದಿಂದ ನಿಮಗೆ ಹುಚ್ಚು ಹಿಡಿದಂತಾಗಿದೆಯೋ? ತಮ್ಮ ಸುತ್ತಲು ಪಸರಿಸಿರುವ ದುಃಖವು ಹೃದಯದಲ್ಲ ಸೇರಿ ತಮ್ಮ ಹೆಸರು ಕೀರ್ತಿ, ಹೆಂಡರು ಮಕ್ಕಳು ಸಂಪತ್ತು ಶರೀರ ಮೊದಲಾದವುಗಳ ಬಗ್ಗೆ ನಿಮಗೆ ವಿಸ್ಮರಣೆ ಹೊಂದಿರುವದೋ? ಹೀಗಾಗುವದೇ ಸ್ವದೇಶಭಕ್ತಿಯ ಮೊದಲನೆಯ ಲಕ್ಷಣವು ಎರಡನೇ ಸಂಗತಿಯೇನ [illegible] ಅಂತಃಕರಣದಲ್ಲಿ ಈ ಪ್ರಕಾರದ [illegible] ಬಹುದು ಆದರೆ ಅಷ್ಟರಿಂದ ಎಲ್ಲಾ ಕೆಲಸವಾಗುವದಿಲ್ಲ ಸ್ವದೇಶಭಕ್ತಿಯ ವಿಷಯವಾಗಿ ಬರೇ ದೊಡ್ಡ ದೊಡ್ಡ ಮಾತುಗಳನ್ನಾಡಿ, ಯಾರೂ ಎಂದೂ ಸ್ವದೇಶಭಕ್ತರಾಗುವದಿಲ್ಲ ನಿಮಗೆ ಯಾವದಾದರೊಂದು ತರಹೊ [illegible] ವದೇನು? ಸ್ವದೇಶೋದ್ಧಾರದ [illegible] ಮಾಡಬೇಕೆಂಬದರ ಬಗ್ಗೆ ಯಾವದಾದರೊಂದು ಉಪಾಯವನ್ನು ಕಂಡುಹಿಡಿದಿರುವಿರೋ? ದ[illegible] ಸಾಗರದಲ್ಲಿ ಮುಳುಗಿದವರ ನಿಂದೆ ಮಾಡದೆ, ಅವರ [illegible] ಸಮಾಧಾನವನ್ನು ಹುಟ್ಟಿಸುವಂಥ ಎರಡು ಪ್ರೇಮದ ಶಬ್ದಗಳು ನಿಮ್ಮಲ್ಲಿ ಇರುತ್ತವೆಯೋ? ಜನರನ್ನು [illegible] ಮೃತ್ಯುವಿನಿಂದ ಉದ್ಧಾರ ಮಾಡುವ [illegible] ಉಪಾಯವನ್ನು ಹುಡುಕಿರುತ್ತೀರೋ? ಉಪಾಯದ ಯೋಜನೆಯು ದೇಶಭಕ್ತಿಯ ಎರಡನೇ ಲಕ್ಷಣವು ಆದರೆ ಇಷ್ಟರಿಂದಲೂ ಎಲ್ಲಾ ಕೆಲಸಗಳಾಗುವದಿಲ್ಲ ಪರ್ವತಪ್ರಾಯವಾದ ಸಂಕಟಗಳನ್ನು ಉಲ್ಲಂಘನ ಮಾಡುವಷ್ಟು ಪ್ರಬಲವಾದ ಇಚ್ಛಾಶಕ್ತಿಯು ನಿಮ್ಮಲ್ಲಿರುವದೋ? ಇಡೀ ಜಗತ್ತು ಕೈಯಲ್ಲಿ [illegible] ತ್ತಿಯನ್ನು ಹಿಡಕೊಂಡು ನಿಮಗೆ ಅಡ್ಡಬಂದು ನಿಂತರೂ ಸಹ ತಮಗೆ ನ್ಯಾಯವಾಗಿ ಕಂಡದ್ದನ್ನೇ ಮಾಡುವಂಥ ಮನೋಧೈರ್ಯವು ನಿಮ್ಮಲ್ಲಿರುತ್ತದೆಯೋ? ನಿಮ್ಮ ಹೆಂಡರು ಮಕ್ಕಳು ನಿಮ್ಮನ್ನು ವಿರೋಧಿಸಹತ್ತಿದರೂ, ನಿಮ್ಮ ಸಂಪತ್ತು ನಷ್ಟವಾದರೂ ನಿಮ್ಮ ಕೀರ್ತಿಗೆ ಖಗ್ರಾಸ ಗ್ರಹಣ ಹಿಡಿದರೂ, ತಾವು ಮಾತ್ರ ಸ್ವಪಕ್ಷದ ಧ್ವಜಾವಲಂಬನವನ್ನು ಮಾಡೇ ತೀರುವೆವೆಂದು ಟೊಂಕ ಕಟ್ಟಿರುವಿರೋ? [illegible] ಷ್ಟೆಲ್ಲ ಸಂಕಟಗಳ ಬಲೆಯು ನಿಮ್ಮ ಸುತ್ತಲು ಪಸರಿಸಲ್ಪಟ್ಟಿದ್ದರೂ ಸಹ, ತಮ್ಮ ಧ್ಯೇಯದ ಕಡೆಗೆ ಧೈರ್ಯದಿಂದಲೂ ದೃಢನಿಶ್ಚಯದಿಂದಲೂ ಹೋಗಲಿಕ್ಕೆ ಸಿದ್ಧರಾಗಿರುವಿರೋ? ಈ ಮೂರು ಸಂಗತಿಗಳು ನಿಮ್ಮಲ್ಲಿದ್ದರೇ ಮಾತ್ರ ಸ್ವದೇಶಭಕ್ತರೆಂಬ ಸಂಜ್ಞೆಗೆ ತಾವು ಪಾತ್ರರಾಗುವಿರಿ ಮತ್ತು ಬೇಕಾದ ಮಹತ್ಕಾರ್ಯವನ್ನು ಕೈಕೊಳ್ಳಲಿಕ್ಕೆ ನೀವು ಸಮರ್ಥರಾಗುವಿರಿ"

ಗಾಂಧಿ ಆಶ್ರಮ ಸಿರ್ಸಿ	ಸ್ವಾಮಿ ವಿವೇಕಾನಂದ

G. S. B. Perishad.

[To] The Editor, Kanara News,

[Si]r,

Will you kindly publish the ac[co]mpanying balance sheet of the [Pa]rishada in your esteemed paper, [wi]th the following request over the [na]mes of the Secretaries, added at [th]e bottom viz -

"Suggestions are invited from [con]tributors to the Parishada, as to [th]e best way of utilizing the above [ba]lance of Rs 2000.

The suggestion should be address[ed] to the secretaries in time to [en]able the Managing Committee to [di]spose of the said amount by the [en]d of June 1921"

A N Kabad
G P. Verty
Secretaries

The Kanara G.S B. Parishad 5th Session, Karwar Statement of Receipt & Expendi[t]ure made up to 14th April 1920

Receipts	Rs As Ps
To amount received as subscription	4935 10 4
" Delegates' and Visitors' fees.	796 0 0
Interest on Deposit with Co operative Credit Society up to 14th April 1920	546 0 3
" amount realised from sale of pendal material, furniture, provision and cattle	2318 8 10
Total	8596 3 5

Expenditure	Rs As. Ps
By Pendal & furniture	1143 13 1
" provision and cattle	3175 0 4
" General expenses and including cooks' & servants' wages & lighting expenses	1036 4 3
Stationery and Printing	418 13 0
" Postage & Telegrams	111 1 0
" Refreshments	700-9 9
Amount paid to the Central office of the Parishada	200 0-0
Amount lost at Marmagoa (written off under special permission of the Managing Committee)	28 0 0
Balance with Co operative Credit Society - On Fixed Deposit Account as at 14 4 1920. 2110-0 0; On current A/c 14 4 1920 144-0-0	2254 0 0
Total	8596-3-5

I have examined the above statement with the books, statements and vouchers as far as they are available and found to be in accordance therewith.

M S Muzumdar
Hon Auditor.

We hereby certify that the above balance sheet contains the true statement of this account.

P. S Muzumdar *Accountant* — M V Karkini *Treasurer.*
A N Kabad
G P Verty *Secretaries* — D B Nadkarni. *Vice President*

Halge Conference.

To, The Editor, Kanara News,

Dear Sir,

It is painful to read the letter about the Halge Conference sent to you by a correspondent

From some of the inaccuracies I notice in the account of the first two days, when I attended the conference I seriously doubt whether that correspondent was present at the conference

The e is a studied attempt in the communication to treat the promoters and the President of the conference with ridicule and contempt The tone of it only just fies the complaint of the backward classes like the Marathas that their interests are not always safe in the hands of the advanced classes, who control the public offices, the public platform and the public print.

I should expect the conductor of a paper to discountenance the throwing of cold water on the efforts of a backward sister community to rise The abuses hurled at President of the Conference & the light-heartedly approving reference to an alleged assault on him & his companions on the day of departure & to his so called mysterious disappearance are all very unbecoming, & far from reflect credit on the writer or on the readers who are expected to derive pleasure from the reading of his letter Yours &c

Karwar, 15 2 21 } V V WAGH

First N. C. O-ing student of Karwar High School.

The following is the letter written by Mr V G. Shenvi, a student of the Karwar High school to the Headmaster —

Sir,

I have no mind to appear for the School Leaving Examination I wish to appear with the permission of my father for the entrance examination of the National College, started in accordance with the Congress Resolution, as I think the education imparted there is superior to that given in Government Universities For, arrangements are made therein to impart industrial education which is not the case in the prevailing system of education. So, if I learn there, I shall be able to stand on my own legs, whereas the sort of education will fit me for nothing but service, Government or otherwise Under these circumstances I hope that you will excuse me for my not appearing for the S L Examination and send me a certificate of conduct and progress

I beg to remain,
your most obedient pupil
V G Shenvi

[We should like to see many more students of Mr Shenvi's type It is hoped that the letter will be read by other students in Kanara, with the attention it deserves.

Editor]

ಅವರ್ಸಾ ಸಾರ್ವಜನಿಕ ಸಭೆ.

ಮಾ। ಮಾ। ಕಾನಡಾವೃತ್ತಕರ್ತರ ಬಗೆಗೆ—

ಈ ಎರಡು ಮೂರು ದಿವಸಗಳ ಮೊದಲು ನಮ್ಮ ಅವರ್ಸಾ ಗ್ರಾಮದಲ್ಲಿ ಎತ್ತಸೋಡಿದರತ್ತ ೧೮-೨-೨೧ ಸಹಿನಿಸಿ ಅಗ್ರಹಪೂರ್ವಕ ಜನರನ್ನು ಸಭೆಗೆ ಕರೆಯುವದಕ್ಕೋಸ್ಕರ ಜಾಹೀರಾತಿಗಳು ಕಾಣುತ್ತಿದ್ದವು ಆ ಪ್ರಕಾರ ನಿನ್ನೆ ತಾರೀಖು ೧೩ನೇ ರವಿವಾರ ಮಧ್ಯಾನ್ಹ ೩ ಘಂಟೆಗೆ ಅವರ್ಸಾ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಡಾ॥ ವಿಶ್ವನಾಥ ಅನಂತ ಹೇಗಡೆ ಇವರ ಅಧ್ಯಕ್ಷತೆ ಕೆಳಗೆ ಮೊನ್ನೆ ಸದ್ಯಕ್ಕೆ ನಡೆದ ನಾಗಪೂರ ಕಾಂಗ್ರೇಸಿನ ಠರಾವುಗಳನ್ನು ಅಮಲಿನಲ್ಲಿ ತರುವ ಕುರಿತು ಸಭೆಯು ನಡೆಯಿತು ಈ ಸಭೆಯನ್ನು ಲೋ। ಟಿಳಕರ ಛಾಯಾಚಿತ್ರ ಇಟ್ಟು ಡಾ॥ ಪದ್ಮನಾಭ ನಾಗಪ್ಪ ಪೈ ಇವರು ಬಹಳ ಉತ್ಸಾಹದಿಂದ ಶೃಂಗರಿಸಿದ್ದರು ಸಭೆಗೆ ಸುಮಾರು ೩೦೦ ಜನರು ಹಾಜರ ಇದ್ದರು, ಈ ಜನ ಸಮೂಹದಲ್ಲಿ ಒಬ್ಬ ಕಪ್ಪುಕಗಲೆಯ ಪೋಲೀಸ ಹವಾಲದಾರನು ಹಾಜರ ಇದ್ದನು ಈತನೂ ರಾವಸಾಹೇಬ ಮಾಮಲೇದಾರರೂ ಅವರ್ಸಾದಲ್ಲಿ ಅರಿತ್ಯಾವಾರ ಸಭೆಗೂಡುವದೆಂಬ ಪದಂತೆ ಕೇಳಿ, ಮ್ಯಾಜಿಸ್ಟ್ರೇಟ ಕಾರಕೂನ ವ ಪಟ್ಟೆವಾಲಾ ಇವರೊಡನೆ ನಿನ್ನೇ ದಿವಸ ಬೆಳಿಗ್ಗೆ ಅವರ್ಸಾ ಗ್ರಾಮಚಾವಡಿಯನ್ನು ಪ್ರವೇಶಿಸಿದ್ದರಂತೆ! ಸದರಿಯವರು ಅವರ್ಸಾಯಲ್ಲಿ ಪ್ರವೇಶಿಸಿದ ಸುದ್ದಿ ಕೇಳಿ, ಅವರಿಗೆ ಹಾಲು ಯಾರೂ ಕೊಡಲಿಲ್ಲ ಇಡೀ ಊರಲ್ಲಿ ೯ ಘಂಟೆಯವರೆಗೆ ಎಷ್ಟು ಹುಡುಕಿದರೂ ಹಾಲು ಸಿಗಲಿಲ್ಲವಂತೆ! ಮಾಮಲೇದಾರರ ಚಹಾ ಮಡಿಕೆಯು ಒಲೆಯ ಮೇಲೆ ಕಿಟಿಕಿಟಿ ಎಂಬ ಸಪ್ಪಳವು ಮಾಡುತ್ತಿತ್ತು ಉಗ್ರಾಣಿಯ ಕಾಲುಗಳು ಮಾತ್ರ ಪಾಪ ಮಾಡಿದ್ದಾವಂತ ಕಾಣುತ್ತದೆ. ದೈವಗತಿಯಿಂದ ಯಾವನೋ ಒಬ್ಬ ತಿಳಿಗೇಡಿಯು ಹಾಲನ್ನು ಒಯ್ದುಕೊಟ್ಟು ಪಾತ್ರೆಯ ಕಿಟಿಕಿಟಿಯನ್ನು ನಿಲ್ಲಿಸಿ ಬಿಟ್ಟನು ಇದೊಂದು ಸಾಹೇಬರ ಪೂರ್ವಪುಣ್ಯವೇ ಇರಲಿ

ಸಾರಾಂಶ ಹೇಳತಕ್ಕದ್ದೇನಂದರೆ, ನಾನು ಸಭಾಗೃಹವನ್ನು ಪ್ರವೇಶಿಸಿದ ಕೂಡಲೇ, ಸಾಹೆಬರು— ಈ ಹೊತ್ತು ನಿಮ್ಮ ಸಭೆಯು ನೆರೆಯುವದಂತ, ನಾವು ಬಂದರೆ ಅಡಿಗೇನು ನಾವು ಬಂದರೆ ಅಡಿಗೇನು, ಎಂತ ನನಗೂ ಕೇಳುತ್ತಿದ್ದರು ನಿನಗೂ ಕೇಳುತ್ತಿದ್ದರು ಎಂದು ಕೆಲ

(೬ ನೇ ಪಾನಿನ ಮೇಲೆ ಮುಂದುವರಿದಿದೆ)

ಕಾನಡಾವೃತ್ತ.

ಗುರುವಾರ, ತಾರೀಖು ೨೪ ಮಾಹೆ ಫೆಬ್ರವರಿ ೧೯೩೧

ಈ ಪ್ರಸಂಗ ವ್ಯರ್ಥ ಕಳೆಯಬೇಡಿರಿ. ಪ್ರದರ್ಶನ ಹೂಡಿರಿ.

ಕಳೆದ ೧೭ ನೇ ಸಂಚಿಕೆಯಲ್ಲಿ ಮುಂಬಯಿಯ ಶ್ರೀ|| ವಾಮನರಾವ ದುಭಾಷೆಯವರು ಕೊಟ್ಟ, ನಮ್ಮ ಇಲಾಖಾಧಿಪತಿ ನೇಕನಾಮದಾರ ಗವ್ಹರ್ನರಸಾಹೇಬರು ನಮ್ಮ ಜಿಲ್ಲೆಗೆ ಚಿತ್ತೈಸುತ್ತಾರೆಂಬ ವಿಶ್ವಸನೀಯ ಸಮಾಚಾರದಿಂದ, ನಮ್ಮ ಜಿಲ್ಲೆಯಲ್ಲಿ ಅವರ ಸ್ವಾಗತಕ್ಕಾಗಿ, ಜಂಗಲ ನಿರ್ಬಂಧ ಮುಂತಾದ ಪರಿಸ್ಥಿತಿಯಿಂದ ಉಂಟಾದ ಯೋಗ್ಯ ಪ್ರದರ್ಶನವನ್ನು ಏರ್ಪಡಿಸಬೇಕಾಗಿ, ಮರಾಟಿಯಿಂದ ಒಂದು ಲೇಖವನ್ನು ಪ್ರಕಟಿಸಿತ್ತಷ್ಟೇ. ಅದು ಬಹು ಮನೋರಂಜಕವಾಗಿಯೂ, ಜಂಗಲ ಸ್ಥಿತಿಯ ಯಥಾರ್ಥ ಬೋಧಪ್ರದವಾಗಿಯೂ ಇದ್ದದರಿಂದ ಅದನ್ನು ನಮ್ಮ ಕನ್ನಡ ವಾಚಕರಿಗೋಸ್ಕರ ಇಂದಿನ ಅಗ್ರಲೇಖದ ಸ್ಥಾನದಲ್ಲಿ ಯಥಾರ್ಥವಾಗಿ ಅವತರಿಸಿಕೊಡಲಿಚ್ಛಿಸುವೆವು —

" ಕಾನಡಾ ಜಿಲ್ಲೆಯಲ್ಲಿ ಜಂಗಲ ಖಾತೆಯೊಳಗಿನ ನೌಕರಶಾಹಿಯು ಈಗ ಎಷ್ಟೋ ವರ್ಷಗಳಿಂದ ಅತ್ಯಂತ ಅರೇರಾವಿಯ ಪದ್ಧತಿಯಿಂದ ಕಾರಭಾರ ನಡಿಸಿದ ಮೂಲಕ, ಸಾರ್ವಜನಿಕರೀತ್ಯಾ ಭಯಂಕರ ಅಸಂತೋಷವು ಆಗಿದೆ. ಈ ಸಂಗತಿ ಸರಕಾರಕ್ಕೆ ಮಾನ್ಯವಿರಲಿ, ಯಾ ಇರದಿರಲಿ. ಈ ಪದ್ಧತಿಯ ಪರಿಣಾಮವು ಪಟ್ಟಣದಲ್ಲಿಯೂ, ಹಳ್ಳಿಗಳಲ್ಲಿಯೂ ಒಂದೇ ಸಮನೆ ಕಾಣುತ್ತದೆ. ಇದು ನಿರ್ವಿಕಾರ ಮನಸ್ಸಿನಿಂದ ನೋಡುವವರಿಗೆ ಕಾಣದಿರದು. ಜಂಗಲಖಾತೆಯ ಅಧಿಕಾರಿಗಳು ಜನರ ಲಕ್ಷ್ಯಕ್ಕೆ ಬರುವಂತೆ, ಮತ್ತು ಕೆಲ ಪ್ರಸಂಗಗಳಲ್ಲಿ ಅವರಿಗೆ ತಿಳಿಯದ ಉಪಾಯಗಳಿಂದ, ಅವರ ವಂಶಪರಂಪರೆಯ ಮಾಮೂಲ ಹಕ್ಕುಗಳನ್ನು ಕಸಕೊಂಡರು. ಒರೇ ಉತ್ಪನ್ನದ ಸಂಚಿ ಬೆಳೆದದ್ದು ನೋಡಿ, ಆನಂದಪಟ್ಟ, "ಖಾಸಾ ಖಾಸ' ಅನ್ನುವ ಇಲಾಖಾ ಸರಕಾರದ್ದ ಸಹ, ಜನರ ಬಡ ಮತ್ತು ಹೀನ ಸ್ಥಿತಿಯು ಕಡೆಗೆ ನೋಡದಂತಾಯಿತು. ರೆವ್ಹಿನ್ಯೂ ಅಧಿಕಾರಿಗಳು ಅಡವಿ ರಕ್ಷಕ ವೀರರ ಉತ್ಕಂಠಿತ ವೃತ್ತಿಯನ್ನು ಮಟ್ಟಮಾಡಲು ಅಣಗಿಸದೆ ಸುಮ್ಮಗಾದ್ದರಿಂದ, ಅವರು, ಮುಂದೆ ನಿರ್ಬಂಧ ನಿಕ್ಕೇಹಾಗದೆ, ಮರಳಿ ಅವರಿಗೆ ಬೆದರಿಸಹತ್ತಿದರು. ಇಂಥ ಸ್ಥಿತಿಯಲ್ಲಿ ನಿರಾಶ ಮತ್ತು ನಿರ್ಬಲರಾದ ರೆವ್ಹಿನ್ಯೂ ಅಧಿಕಾರಿಗಳು ಈ ಜಂಗಲಿ ಮರಿಷ್ಟರ ಕಡೆಗೆ ನೋಡ ಮರು ಬಿಟ್ಟುಕೊಟ್ಟರು. ಮತ್ತು ಬಡ ಜನರ ಹೀನ ಸ್ಥಿತಿಯು ಬೆಳೆಯಲಾರಂಭಿಸಿತು. ಇಂಥ ಪರಿಸ್ಥಿತಿಯಲ್ಲಿ ಅಂತಃಕರಣದ ದಯೆ-ಪ್ರೀತಿಗಳ ಸಂಚಯವಿದ್ದ ಮಿ|| ಟಪ್ಪರ ಸಾಹೇಬರಂಥ ಒಬ್ಬ ರೆವ್ಹಿನ್ಯೂ ಅಧಿಕಾರಿ ಬಂದು, ಜನರ ಪರತಿಯಿಂದ ಆಕಾಂಡ-ತಾಂಡವ ಮಾಡತೊಡಗಿದರೆ ಏನು ಪರಿಣಾಮವಾದೀತು? ಅಡವಿಯಿಂದಾಗುವ ಅನ್ಯಾಯಗಳ ಈ ಅರಣ್ಯರೋದನವು ಅವರ ಸ್ಥಾನತ್ಯಾಗದ ಸಂಗಡಲೇ ಬಂದಾಗುವದು, ಬಂದಾಯಿತು! ಮುಂದೆ ಸಮತೋಲ ವಿಚಾರದ ಮತ್ತು ಪ್ರಜಾಪ್ರೇಮದ ಆವಿರ್ಭಾವ ತೋರಿಸಿ, ಇಲಾಖಾಸರಕಾರವು "ಶಾಂತಿರಸ್ತು! ಪುಷ್ಟಿರಸ್ತು! ತುಷ್ಟಿರಸ್ತು!" ಮಾಡಲಿಕ್ಕೆ ಮುಂದರಿಯಿತು. ಅದು ರೆವ್ಹಿನ್ಯೂ ಅಧಿಕಾರಿಗಳ ಬೆನ್ನು ಪ್ರಜಾವಾತ್ಸಲ್ಯದ ಒತ್ತೆ ಚಪ್ಪರಿಸಿತು. ಆದರೆ, ಅಜ್ಞಾನದ ಶಿಕ್ಕೆಯನ್ನು ಅವರಮೇಲೆ ಹೊಡೆದು, ಮತ್ತು ಜಂಗಲಿನೌಕರರಿಗೆ ಬುದ್ಧಿವಂತಿಕೆಯಿಂದ ವರ್ತಿಸಲಿಕ್ಕೆ ಸೂಚನೆ ಕೊಟ್ಟ, ಅವರ ಇಚ್ಛೆಗಳು ಸಂಪೂರ್ಣವಾಗುವವೆಂದು ಸಾಹಾನುಭೂತಿಯಿಂದ ಆಶ್ವಾಸನ ಕೊಡೋಣವಾಯಿತು. ಈ ಎಲ್ಲ ಗಡಬಡಿಯಲ್ಲಿ ಬಡ ಜನತೆಯು ಮಾತ್ರ ಅವರ ದೃಷ್ಟಿಯ ಅಸ್ತ ಆಗಿ, ಮತ್ತು ಜಂಗ್ಲಿ ನೀತಿ ಯ ಪಾಲಿಸಿ'ಯನ್ನ ಸ್ವಪ್ರೀತಿಯಿಂದ ಜನರಿಗೆ ಕಲಿಸಿ ಹೇಳಿ ಇನ್ನು ಮುಂದೆ ರೆವ್ಹಿನ್ಯೂ ಮತ್ತು ಜಂಗಲಿ ಅಧಿಕಾರಿಗಳಲ್ಲಿ ಮತಭೇದವಾಗಬಾರದೆಂಬ ಹೇತುವಿನಿಂದ, ಸ್ವಷ್ಟ ಮಾಡಿದರೆ ಒಬ್ಬ ಅಧಿಕಾರಿಯು ಕಾನಡಾ ಜಿಲ್ಲೆಗೆ ಕಳಿಸಲ್ಪಟ್ಟನು.

ಇಲಾಖಾ ಸರಕಾರದ ಅಂತಿಮ ಹೇತು ಜನತೆಗೆ ತಿಳಿದಕೂಡಲೆ, ಅವರು ನಿರಾಶರಾಗಿ ನಿರಾಶೆಯ ಮಾರ್ಗವನ್ನವಲಂಬಿಸಿದರು. ಅಸಹಕಾರಿತೆಯ ವ್ರತವನ್ನು ಅವರು ಆಚರಿಸಿದರು. ರಾಷ್ಟ್ರಸೇವ, ದೇಶಬಾಂಧವರು ತಮ್ಮ ತಮ್ಮ ಸಾಹೇಬಿ, ಬಹಾದ್ದೂರಿಗಳನ್ನು ದೂರದಿಂದ ಪ್ರತ್ಯಕ್ಷ ಗಿದ್ದರು, ಅವರವರಿಗೆ ತಿರುಗಿ ಅರ್ಪಣ ಮಾಡಿದರು, ಮತ್ತು ಈ ರಾಜನೀತಿಯು, ಇಲ್ಲವೇ ಅದೂರದರ್ಶಿ ಧೋರಣದ ನಿಷೇಧ ಮಾಡಿದರು. ತಾತ್ಪರ್ಯ, ಈ ಪ್ರಕರಣವು ಕಿಂಚಿತ ಪ್ರಜ್ವಲಿಸಿದಂತಾಗಿ, ಅದರ ಜ್ವಾಲೆಯು ಇಡಿ ಕಾನಡಾ ಜಿಲ್ಲೆಯಲ್ಲಿ ಪಸರಿಸಹತ್ತಿತು. ಮತ್ತು ಈ ಜ್ವಾಲೆಯ ಪ್ರಕಾಶವು ಇಲಾಖಾಧಿಪತಿಗಳ ರಾಜಧಾನಿಯವರೆಗೆ ಬಂದು ಮುಟ್ಟಿತು. ಇಲಾಖಾಧಿಪತಿಗಳು ಜಾಗ್ರತರಾಗಿ ಈ ಜ್ವಾಲೆಗಳನ್ನು ಪ್ರತ್ಯಕ್ಷ ನೋಡಲಿಕ್ಕೆ ಹೋಗುತ್ತಾರೆಂಬುದು ಕೇಳಿಬರುತ್ತದೆ. ಆದರೆ, ಸರಕಾರಿ ಪದ್ಧತಿಯಿಂದ ಈ ವರೆಗಾದರೂ ಈ ಸಂಗತಿಯಲ್ಲಿ ಎಷ್ಟು ತಥ್ಯಾಂಶವಿರುತ್ತದೆಂಬುದು ತಿಳಿದಿದ್ದಿಲ್ಲ ಇರಲಿ.

ಇಲಾಖಾಧಿಪತಿಗಳು ನಿಜವಾಗಿ ಕಾನಡಾ ಜಿಲ್ಲೆಯ ಭೆಟ್ಟಿಗಾಗಿ ಹೋಗುತ್ತಾರಾದರೆ, ಜನರು ಆ ಕುರಿತು ಏನು ಮಾಡಬೇಕೆಂಬ ಚರ್ಚೆ ಈಗಿಂದಲೇ ಆಗಲಾರಂಭಿಸಿದೆ. ... ವರು ಸಹಕಾರಿತೆ ಮಾಡಿರೆಂದೂ, ಕೆಲವ... ಅಸಹಕಾರಿತೆ ಮಾಡಿರೆಂದೂ ಹೇಳ್ಯಾಡುತ್ತಾ... ನಮ್ಮ ಮತಕ್ಕೆ ಈ ಭೆಟ್ಟಿಗೆ ಸಹಕಾರಿತೆಯ ಯಾ ಅಸಹಕಾರಿತೆಯ ಸಂಬಂಧವೇ ಇಲ್ಲ. ಇದರ ಕಾರಣವು ಸ್ಪಷ್ಟ ಉಂಟು... ಇಲಾಖಾಧಿಪತಿಗಳು ಜಿಲ್ಲೆಯ ಶಹರಕ್ಕೆ ಪಾದಸ್ಪರ್ಶ ಮಾಡಿದಕೂಡಲೇ, ಅವರಿಗೆ ಸನ್ಮಾನಪೂರ್ವಕ ಸ್ವಾಗತಮಾಡಲ್ಪಡುವದೆಂಬದು ಸಂದೇಹವಿಲ್ಲ ಮತ್ತು ಅವರಿಗೆ ಗೌರವ... ರ್ಣ ಭಾಷೆಯಿಂದ ಅವರ ಸತ್ಕಾರಮಾಡುವದು ಮತ್ತು ಹಾಗೆ ಮಾಡೋಣಾದ್ದ... ಯಾರ ಫಾಯಿದೆಯೂ ಇಲ್ಲ, ಯಾ ಹಾನಿ... ಇಲ್ಲ. ಇವೆಲ್ಲ ಈಗಿನ ಸುಧಾರಣೆ ಕಾ... ಉಪಚಾರಗಳಾಗಿರುವವು. ಈ ಉಪಚಾ... ಪದ್ಧತಿಯ ಹೊರಗೆ ನಿಲ್ಲುವದುಕಕ್ಕ್ಯವಿಲ್ಲ ... ಹಾಗ ನಿತ್ತು ವಿಶೇಷ ಫಾಯಿದೆಯೂ ... ಕಾನಡಾ ಜಿಲ್ಲೆಯೊಳಗಣ ಸಹಕಾರಿತಾ ... ಮತ್ತು ಅಸಹಕಾರಿತಾ-ವಾದಿ ಬಂಧು... ತಮ್ಮ ಮನಸ್ಸಿನಲ್ಲಿ ಕೇಳುವ ಪ್ರಶ್ನೆ ಎಂಬ... ಇಲಾಖಾಧಿಪತಿಗಳು ನಮ್ಮ ದರಿದ್ರಿ ಜಿ... ಯಾಕೆ ಬರುತ್ತಾರೆ? ಈ ಪ್ರಶ್ನೆಯ ... ಉತ್ತರವಿಷ್ಟೇ ಜನತೆಯ ದಾರಿದ್ರ್ಯ... ಅವರು ನೋಡಲಿಕ್ಕೆ ಬರುತ್ತಾರೆ! ಎರ... ಪ್ರಶ್ನೆ—ಅಂದರೆ—ಈ ದಾರಿದ್ರ್ಯದ ಬು... ಇರುವ ಅನೇಕ ಕಾರಣಗಳಲ್ಲಿರುವ ಅ... ಮಹತ್ವದ ಕಾರಣ ಯಾವದು? ಆ ಕಾ... ವೆಂದರೆ, ದಕ್ಕಿಲ್ಲದೆ ಬೆಳೆದ ಅಡವಿ ಮತ್ತು... ದರ ಸುರಕ್ಷಿತತೆಗಾಗಿ ಅಮಲಿನಲ್ಲಿರುವ ... ರ ಕಾಯಿದೆಯಾಗಿರುತ್ತದೆ. ತಾತ್ಪರ್ಯ... ನಮ್ಮ ಜಿಲ್ಲೆಗೆ ಆಗಮಿಸುವ—ಅವರು ಬ... ನರೆ ಯಾವದೇ ಹೇತುವಿನಿಂದ ಬರಲಿ—... ಲಾಖಾಧಿಪತಿಗಳಿಗೆ ನಮ್ಮ ದಾರಿದ್ರ್ಯವನ್ನು... ಪ್ರತ್ಯಕ್ಷರೀತಿಯಿಂದ ತೋರಿಸುವದು, ... ಜಂಗಲ ಕಾಯಿದೆಗಳಿಂದ ಉಂಟಾದ ... ರಿಣಾಮಗಳ ಮಾದರಿಗಳನ್ನು ಅತ್ಯಾದರ... ಅವರ ಕಣ್ಣೆದುರಿಕೆಗೆ ತರುವದು, ನಮ್ಮ ಕ... ಕರ್ತವ್ಯವಲ್ಲವೇನು? ಬಂಧುಗಳೇ, ನಾ... ತಾವಾದಿಗಳಿರುವೆವು. ನಿಷ್ಕಾಮ ಸೇವೆ ... ನಮ್ಮ ಸ್ವಂತ ಪ್ರಪಂಚದ ದುರ್ದಶೆ ... ಲಿಕ್ಕೆ ಈ ವರೆಗೆ ಧನ್ಯರೆನಿಸಿಕೊಂಡೆವು ... ದು ದವಡೆಯಮೇಲೆ ಅಧಿಕಾರಿಗಳು ತಪ... ಹೊಡೆದರೆ, ಇನ್ನೊಂದು ದವಡೆ ... ಮಾತಿ, ಆ ತಪರಾಖಿ ಸಹ ಬಹು ಆದರ... ನಾವು ಸಹಿಸಿದೆವು. ಮತ್ತು ಯೇಸುಕ್ರಿ... ಸಂದೇಶವನ್ನು, ಯಾವ ರಾಜಕರ್ತರು ... ಸಮಿಲ್ಲ, ಅಂಥ ಸಂದೇಶವನ್ನು ನಾವ... ಸಿ ತೋರಿಸಿದೆವು. ನಿಮಗೆ ಫಲದ ಇಚ್ಛೆ... ಇಷ್ಟು ನೀವು ನಿರಪೇಕ್ಷರಾಗಿರುವಿರೋ...

ಆದರೆ, ಇಲಾಖಾಧಿಪತಿಗಳ ಕಡೆಯಿಂದ ಬೇಡಿಕೊಳ್ಳುವದೇನು? ನೀವು ಕೇಳಬೇಡಿರಿ. ಯಾವದೊಂದು ಯಾಚನೆ ಮಾಡಬೇಡಿರಿ. ನಿಮ್ಮ ಬೇಡಿಕೆಗಳನ್ನು ಹೇಳಿ, ನಿಮ್ಮ ದಾರಿದ್ರ್ಯವನ್ನು ತೋರಿಸಬೇಡಿರಿ. ಆದರೆ, ನೀವು ನಿಮ್ಮ ಮನೆಗಳಲ್ಲಿ ಅತಿಥಿಗಳು ಬಂದರೆ, ಅಂಥ ಅತಿಥಿಗಳಿಗೆ ಯೋಗ್ಯವಾದ ಮಾಸರಿಗಳನ್ನು ತೋರಿಸಿ ಅವರ ಮನಸ್ಸನ್ನು ರಂಜಿಸುತ್ತೀರಿ, ನೀವು ತಿನ್ನುತ್ತಿರುವ ಉಪ್ಪು-ಗಂಜಿಯನ್ನು ಅವರಿಗೆ ಕೊಟ್ಟು ಅವರ ಕ್ಷುಧಾ-ಶಾಂತಿ ಮಾಡುತ್ತೀರಿ, ಮತ್ತು ನಿಮ್ಮ ಬಾವಿಯ ಸ್ವಚ್ಛ ನೀರು ಮತ್ತು ಬೆಲ್ಲ ಕೊಟ್ಟು ಅವರ ತೃಷಾ ಶಾಂತಮಾಡುತ್ತೀರಿ. ಹಾಗೆಯೇ ಇವರಿಗೂ ಮಾಡಿರಿ. ಮಲಗಲಿಕ್ಕೆ ನಿಮ್ಮ ಹತ್ತರವಿರುವ ಹುಲ್ಲಿನ ಹಾಸಿಗೆಗಳನ್ನು ಅವರಿಗೆ ಕೊಟ್ಟು, ನೆಲದಮೇಲೆ ಸಹ ಮಲಗಲಿಕ್ಕೆ ನೀವು ಕಡಿಮೆಮಾಡುವದಿಲ್ಲ. ಇದೇನು, ನಿಮ್ಮೊಳಗಿನ ಅತಿಥಿ ಸತ್ಕಾರದ ಬಹು ಬೆಲೆಯ ಗುಣವನ್ನು ಅಸಹಕಾರಿತೆಯ ಮರುಳಿಗೆ ಬಿದ್ದು ವ್ಯರ್ಥವಾಗಿ ಕಳಕೊಳ್ಳಬೇಡಿರಿ ಇಷ್ಟೇ ನನ್ನ ಸೆರಗೊಡ್ಡಿ ಬೇಡುವಿಕೆ. ಇಲಾಖಾಧಿಪತಿಗಳು ನಿಜವಾಗಿ ನಿಮ್ಮ ಜಿಲ್ಲೆಗೆ ಸಂದರ್ಶಿಸುತ್ತಾರಾದರೆ, ಅವರು ಯಾವ ಯಾವ ಸ್ಥಳಕ್ಕೆ ಹೋಗುತ್ತಾರೋ ಆಯಾಯ ಸ್ಥಳಗಳಲ್ಲಿ ಪ್ರದರ್ಶನ ಹೂಡಿ, ಅವುಗಳನ್ನು ಅವರ ಹಸ್ತದಿಂದ ತೆರೆಯಿರಿ. ಆ ಪ್ರದರ್ಶನಗಳಲ್ಲಿ ಇಡುವಂಥ ವಸ್ತುಗಳ್ಯಾವವೆಂಬುದು ನಮ್ಮ ಬಂಧುಗಳು— ಬಸರೂರ, ಮಾಸೂರ, ಪಟವರ್ಧನ, ರಿತ್ತಿ, ವಗೈರೆ— ಲೋಕನಾಯಕರು ಹೇಳಬಲ್ಲರು. ಆದರೆ, ನಿಮ್ಮ ಪರವಾನಗಿಯಿಂದ ಕೆಲವು ವಸ್ತುಗಳನ್ನು ಸೂಚಿಸುವೆನು. ಅವುಗಳನ್ನು ಕೂಡಿಸಿ, ಈ ಪ್ರದರ್ಶನಗಳಲ್ಲಿ ಮುದ್ದಾಂ ಇಡಿರಿ. ಅಂದರೆ, ಬರೇ ವಸ್ತುಪಾರ ಪದ್ಧತಿಯಿಂದ ಹ್ಯಾಗೆ ಅಜ್ಞಾನಿ ಹುಡುಗರಿಗೆ ಪದಾರ್ಥಗಳ ಜ್ಞಾನವಾಗುತ್ತದೋ, ಹಾಗೆಯೇ ವಸ್ತುಸ್ಥಿತಿ ವಿಷಯದಲ್ಲಿ ಅಜ್ಞಾನಿಯಾಗಿದ್ದ ನಮ್ಮ ಇಲಾಖಾಧಿಪತಿಗಳಿಗೆ ಸಹ ಈ ದರ್ಶನದಿಂದ ನಿಜವಾದ ಜ್ಞಾನ ಉಂಟಾದೀತು. ಜ್ಞಾನದಾನ ಮಾಡುವದೊಂದು ದೊಡ್ಡ ಪುಣ್ಯದ ಕೆಲಸವು. ಈ ಕೆಲಸದಲ್ಲಿ ಅಸಹಕಾರಿತೆ ಉಪಯೋಗವುಳ್ಳದ್ದಲ್ಲ. ಆದ್ದರಿಂದ ಪ್ರದರ್ಶನ ಹೂಡಿ, ಅತಿಥಿಗಳ ಮನರಂಜನ ಮಾಡಿರೆಂದಿಷ್ಟೇ ಪ್ರಾರ್ಥನೆ ಮಾಡುತ್ತೇನೆ.

ಪ್ರದರ್ಶನದ ಮಂಟಪವೆಂದರೆ, ಒಬ್ಬ ಶೇತಕಿಯ ಮೇಲೆ ಜೀವಿಸುವ ಬಡ ದುಸ್ಥಿತಿಯವನ ಗುಡಿಸಲು ಇರಬೇಕು. ಅದರ ಸುತ್ತುಮುತ್ತು ದನಗಳನ್ನು ಕಟ್ಟಲಿಕ್ಕೆಂದು ಮಾಡಿದ ನಮೂನೆಯ—ಮಳೆ ಮತ್ತು ಬಿಸಿಲು ಸ್ವತಂತ್ರವಾಗಿ ಪ್ರವೇಶಮಾಡಶಕ್ಯವಾದ— ಒಂದು ಭವ್ಯ ಮಂಟಪವನ್ನು ನಿರ್ಮಿಸಬೇಕು. ಈ ಸಂಗ್ರಹಾಲಯದಲ್ಲಿ ಚಳಿಜ್ವರದಿಂದ ನಡಗುವವರು, ಜಲೋದರಿಗಳು, ಜ್ವರಗಡ್ಡೆ ಬೆಳೆದವರು, ಅಂಥ ಸಂತುಷ್ಟ ಪ್ರಜಾ ಜನರ ಮಾದರಿಗಳನ್ನು ಇಡಬೇಕು. ಬಡ ಜನರ ಅನ್ನ ಹ್ಯಾಗಿರುತ್ತದೆಂಬುದು ತೋರಿಸಲಿಕ್ಕೆ—ಅವರು ಉಪಯೋಗಿಸುವ ಧೂಳು, ಸುಚ್ಚು, ಕಪ್ಪು ಬೇಯಿಸಿದ ಕುಚ್ಚಿಗೆ ಅಕ್ಕಿ, ತಾಳಿಚಕ್ಕೆ ವ ಅದರ ಹಿಟ್ಟು, ಕೊಳೆತ ಉಪ್ಪಿನಕಾಯಿ, ಹಸಿ ಮೆಣಸು, ಮಾವಿನಕಾಯಿ ಸೊಪ್ಪು, ಹಳೆ ನಾತ ಬರುವ ಮೀನು, ಉಪ್ಪಿನ ಮಣ್ಣು, ಅನ್ನ ಬೇಯಿಸುವ ಬೋಡ್ಡೆ, ಗೆರಟೆಯ ಸವಟು, ಕಟ್ಟಿಗೆಯ ಹರಿವಾಣ, ದೀಪದ ಹಣತಿಗೆ, ಹರಕು ಗೊಂಗಡಿ, ಪ್ರತಿನಿತ್ಯ ಧರಿಸುವ ಹಳೆ ಹರಕು ಮತ್ತು ಬೆವರಿನ ವಸ್ತ್ರಗಳು, ಕತ್ತಿ, ಹಲಗತ್ತಿಗಳು, ನಿರುಪಯೋಗಿಯಾದ ಬಂದೂಕುಗಳು, ನೇಗಿಲುಗಳು ವಗೈರೆ ಬಡ ಜನರ ಸಂಪತ್ತು, ಕಾಚು ಮಣಿಗಳ ಮಾಳೆ, ತೊಗರ ಮತ್ತು ಹಿತ್ತಾಳೆಯ ದಾಗಿನೆಗಳು, ಬಡೆ ಬಿದ್ದ ಜನಾವರಗಳು, ನಿಃಸತ್ವ ಬೆಳೆಯ ಮಾದರಿಗಳು, ಗೈರ ಉಪಯೋಗಿ ಮೇವು, ನಿಃಕಾರ ಗೊಬ್ಬರ, ಇವೇ ಇರಬೇಕು. ಈ ಪ್ರದರ್ಶನದಲ್ಲಿ ಜಂಗಲಿ ಕಾಯಿದೆಗಳ ಯಥಾರ್ಥ ಜ್ಞಾನವಾಗಬೇಕೆಂದು ಕೆಲವು ಚಿತ್ರಗಳು, ಭಾವಚಿತ್ರಗಳು, ಕೆಲವು ಕಾಯಿದೆಗಳನ್ನು ದೊಡ್ಡ ಅಕ್ಷರಗಳಲ್ಲಿ ಬರೆದು ಅವುಗಳ ಪರಗಳು, ಜಂಗಲಿ ಜನಾವರಗಳಿಂದ ನಷ್ಟಪಟ್ಟ ಪೀಕು— ಬೆಳೆಯ ಮಾದರಿಗಳು, ಸಹ ಇಡಲರ್ಹವು. ಇದಲ್ಲದೆ, ಕೆಲವು ಸ್ತ್ರೀ-ಪುರುಷ—ಮಕ್ಕಳಿಗೆ ನಿತ್ಯದ ಪೋಷಾಕು ಹಾಕಿ, ಅವರ ಮುಲಾಖತು ಮಾಡಿಸಬೇಕು. ಎರಡೆರಡು ಹರದಾರಿಯಿಂದ ಕಟ್ಟಿಗೆ ಹೊರೆ ತಂದು, ಆಯಾಯ ಪ್ರಸಂಗದಲ್ಲಿ ಎರಡು ಆಣೆ ಹ್ಯಾಗೆ ಗಳಿಸುತ್ತಾರೆ, ಯಾ ನಾಲ್ಕಾಣೆ ಮತ್ತು ಕತ್ತಿ ಹ್ಯಾಗೆ ದಂಡ ಕೊಡಬೇಕಾಗುತ್ತದೆ, ಇದರ ಸಜೀವ ನಾಟಕ ಮಾಡಿ ತೋರಿಸಬೇಕು. ಈ ಪ್ರದರ್ಶನದ ಈ ವರ್ಣನೆಯಿಂದ ಸಾಮಾನ್ಯ ಕಲ್ಪನೆ ಬಂದೇ ಬರುವದು. ಆದರೂ ಅದು ವಿಶೇಷ ಚಿತ್ತಾಕರ್ಷಕವಾಗಿ, ನಿಜ ಸ್ಥಿತಿಯ ದರ್ಶಕವಾಗುವದಂತೂ, ನಮ್ಮ ಲೋಕನಾಯಕರ ಕೈಯಲ್ಲಿದೆ. ಅವರು ಯಥಾಯೋಗ್ಯವಾಗಿ ಇಲಾಖಾಧಿಪತಿಗಳ ಸ್ವಾಗತಮಾಡ್ಯಾರೋ? ಅವರು ಮುದ್ದಾಂ ಮಾಡಬೇಕಾಗಿ ನಮ್ಮ ಪ್ರಾರ್ಥನೆ ಇದೆ."

ಸ್ಫುಟ ಸೂಚನೆಗಳು.

೧. ಬಾದಶಹರ ಪ್ರತಿನಿಧಿಗಳಾಗಿ, ನಮ್ಮ ಹತಭಾಗಿ ದೇಶಕ್ಕೆ ಚಿತ್ತೈಸಿದ ಡ್ಯೂಕ ಆವ ಕನೋಟ ಸಾಹೇಬರ ಆಗಮನವು, ಮೊನ್ನೆ ೨೧ ನೇ ತಾರೀಖಿನ ದಿವಸ ನಮ್ಮ ಮುಂಬಯಿ ಇಲಾಖೆಯೊಳಗಾಗಿದೆ. ಹೊಸ ಕೌನ್ಸಿಲುಗಳನ್ನು ತೆರೆದು, ಅವುಗಳಿಗೆ ಆಶೀರ್ವಾದಗಳನ್ನು ಗೆಯ್ಯುವರೆ, ಮುಂಬಯಿ ನಗರಕ್ಕೆ ಅವರು ಬಂದಿದ್ದರೆಂದು ಎಲ್ಲರೂ ಬಲ್ಲರು. ಇಂಥ ರಾಜಕೀಯ ಸಮಾರಂಭಗಳ ಘನತೆಯ ದೃಷ್ಟಿಯಿಂದ, ಮತ್ತು ಪ. ಪೂ. ಬಾದಶಹರ, ಹಾಗೂ ವಿಕ್ಟೋರಿಯಾ ಮಹಾರಾಣಿಯವರ ವಂಶಜರ ಕೂಡ ಇರುವ ಹಿಂದೀ ಪ್ರಜೆಗಳ ಭಕ್ತಿ-ಪ್ರೀತಿಗಳ ಕರ್ತವ್ಯಗಳಿಗಾಗಿ, ತಾವು ಎಷ್ಟು ಆನಂದದಿಂದ, ಮತ್ತು ಉಲ್ಹಾಸದಿಂದ ಈ ಸಮಾರಂಭವನ್ನು ಜರುಗಿಸುತ್ತಿದ್ದೆವೆಂದು, ನಮ್ಮ ಪೂರ್ವೇತಿಹಾಸವು ಹೇಳುವದು. ಡ್ಯೂಕ ಸಾಹೇಬರಿಗೂ ಹಿಂದೀ ಜನರ ಸ್ವಭಾವದ ಚಲೋ ಪರಿಚಯವಿದ್ದ ಮೂಲಕ, ತಮ್ಮ ರಾಜಕುಲದ ವಿಷಯವಾಗಿ ನಮಗೆ ಎಷ್ಟು ಅಭಿಮಾನವಿದೆ, ಭಕ್ತಿಯಿದೆಂದು ಮೊದಲೇ ಗೊತ್ತಿದೆ. ಆದರೆ, ಅವರ ಸ್ವಾಗತ ಸತ್ಕಾರಗಳ ಸಮಾರಂಭಗಳಲ್ಲಿ, ಹಿಂದುಸ್ಥಾನದೊಳಗಿನ ಸದ್ಯದ ರಾಜಕೀಯ ಪರಿಸ್ಥಿತಿಯೊಳಗೆ, ಮುಖ್ಯತಃ ಬಾದಶಹರ ಪ್ರತಿನಿಧಿಗಳಾಗಿ ಇಲ್ಲಿಯ ರಾಜ್ಯಕಾರಭಾರವನ್ನು ನಡಿಸುವ, ವ್ಹಾಯಿಸರಾಯರಂಥ ಅಧಿಕಾರಿಗಳ ಕಳೆದ ೨-೩ ವರುಷಗಳ ತೀರ ಅಸಮಾಧಾನಕಾರಕ ಆಡಳಿತದಿಂದ, ಪ್ರಜೆಗಳಿಗೆ ಪಾಲುಗಾರರಾಗಲಿಕ್ಕಾಗುವದಿಲ್ಲೆಂದು ಡ್ಯೂಕ ಸಾಹೇಬರಿಗೆ ಇಷ್ಟೊಂದಿಗೆ ತಿಳಿದಿರಲಿಕ್ಕೆ ಸಾಕು. ಹಿಟ್ಟಿಗೆ, ಬಹುಜನ ಸಮಾಜಕ್ಕೆ, ಅವರ ಸತ್ಕಾರ ಸಮಾರಂಭಗಳ ಮೇಲೆ ಬಹಿಷ್ಕಾರವನ್ನು ಹಾಕುವ ತೀರ ಅಪ್ರಿಯ ಕೆಲಸವನ್ನು ಮಾಡದೇಕಾಗಿದೆಂಬುದು ಶೋಚನೀಯವು. ಇದಲ್ಲದೆ ಇವೇ ಕಾರಣಗಳ ಮೂಲಕ, ಈಗಿನ ಕೌನ್ಸಿಲುಗಳು ಜನರ ಪ್ರತಿನಿಧಿಗಳ ನ್ಯಾಯ್ಯ ಸಭೆಗಳಾಗದಿದ್ದ ಕಾರಣ, ಅವು ಡ್ಯೂಕ ಸಾಹೇಬರವರದ ಹಸ್ತಗಳಿಂದ ತೆರೆಯಿಸಲ್ಪಡಲು ಪಾತ್ರವಲ್ಲೆಂದು ಲೋಕಮತವು ಸ್ಫುಟವಾಗಿದೆ. ಇವೆಲ್ಲವುಗಳ ಪರಿಹಾರವನ್ನು ಡ್ಯೂಕ ಸಾಹೇಬರು ಪರಿಷ್ಕೃತ ಕೌನ್ಸಿಲುಗಳನ್ನು ದಿಲ್ಲಿಯಲ್ಲಿ ತೆರೆಯುವಾಗ, 'ಅರ್ಪಿಸಿದ' ಬಾದಶಹರ ಸಂದೇಶದಿಂದ ಮಾಡಲಿಕ್ಕಾಗುವದೆಂದು ಹಾದಿ ಕಾಯುತ್ತಿದ್ದ ಆಶಾವಾದಿಗಳ ಆಶೆಯೂ ಬಹುತಃ ನಿರಾಶೆಯಾಯಿತೆಂದು, ಡ್ಯೂಕ ಸಾಹೇಬರಿಗೂ ಕಂಡುಬರುವದು. ಒಟ್ಟಿಗೆ ಸತ್ಯ ಸ್ಥಿತಿಯನ್ನು ಕಣ್ಣಾರೆ ಕಂಡು, ಡ್ಯೂಕ ಸಾಹೇಬರು ಮರುಳಿ ಸ್ವದೇಶಕ್ಕೆ ಹೋದ ನಂತರ, ಹಿಂದುಸ್ಥಾನದಲ್ಲೆಲ್ಲ ಅಸಂತೋಷದ ಮತ್ತು ನಿರಾಶೆಯ ಸಾಮ್ರಾಜ್ಯವು ಹಬ್ಬಿದೆಂದು, ಬಾದಶಹರಿಗೆ ತಿಳಿಸಿ, ಅವುಗಳ ನಿವಾರಣೆಗೆ ಪೂರ್ಣ ಸ್ವರಾಜ್ಯವೇ ಉಪಾಯವೆಂದು ಸೂಚಿಸಿದರೆ, ಮುದಿತನದಲ್ಲಿ ಇಷ್ಟು ಆಯಾಸಕರ ಪ್ರವಾಸವನ್ನೂ, ಅದರ ತೊಂದರೆಗಳನ್ನೂ ಸಹಿಸಿ, ಹಿಂದೂ ದೇಶವನ್ನು ಸಂದರ್ಶಿಸಿದ ಪರಿಶ್ರಮಗಳ ಸಾರ್ಥಕತೆಯಾಗುವದು; ಮತ್ತು ತಮ್ಮ ಪ್ರಿಯ ಹಿಂದೀ ಮಿತ್ರರನ್ನು, ಸಾಮ್ರಾಜ್ಯ ಬಾಂಧವರನ್ನು ಉಪಕರಿಸಿದಂತಾಗುವದೆಂದು, ಡ್ಯೂಕಸಾಹೇಬರಿಗೆ ನಮ್ಮ ಪ್ರೀತಿಪೂರ್ವಕವಾದ, ವಿನಯಪೂರ್ವಕವಾದ ಅರಿಕೆ ಇದೆ.

---

೨. ಮುಂಬಯಿ ಸರಕಾರದವರು ಮಿ|| ಕೆಡೆಲ ಸಾಹೇಬರಿಗೆ ಸರಕಾರದ ತರ್ಫೆನಿಂದ ಹೊಸ ಕೌನ್ಸಿಲದ ಮೆಂಬರರಾಗಿ ನೇಮಿಸಿದ್ದಾರೆಂದು ಜಾಹೀರಾಗಿದೆ. ಮೆಹಬೂಬನರಂಥ ಜವಾಬದಾರ ಅಧಿಕಾರಿಗಳ ಮೇಲೆ ಅನುಚಿತ ಮತ್ತು ಅಶ್ಲಾಘ್ಯ ವರ್ತನದ ಆರೋಪವಿದ್ದಾಗ, ಅದರ ನಿರಾಕರಣೆಯಾಗುವತನಕ, ಅವರಿಗೆ ಮತ್ತೂ ಹೆಚ್ಚಿನ ಜವಾಬದಾರಿಯ ಯಾವದೇ ವಿಧದ ಅಧಿಕಾರವನ್ನು ಕೊಡುವದು ಜವಾಬದಾ

ರ ರಾಜ್ಯಪದ್ಧತಿಯ ಧೋರಣಕ್ಕಂತೂ ಸುಸಂಗತವಲ್ಲ ನ್ಯಾಯನೀತಿಗಳಿಗೂ ಇಂಥ ನೇಮಣೂಕಿಯು ಮಾನ್ಯವಾಗದು. ಇದಿಷ್ಟು ಒತ್ತಟ್ಟಿಗಿರಲಿ ಮೆ॥ ಕೆಡೆಲಸಾಹೇಬರ ವಿಷಯವಾಗಿ ಪತ್ರಿಕ್ಯಾದ ಲೋಕಮತವು ಇಂಥ ನೇಮಣೂಕಿಯಿಂದ ಆದರಿಸಿದಂತಾಗುವದೋ, ಧಿಃಕರಿಸಿದಂತಾಗುವದೋ? ಇದನ್ನಾದರೂ ಈಗಿನ ಸರಕಾರವು ವಿಚಾರಿಸತಕ್ಕದ್ದಿಲ್ಲವೇ? ಸಕಾರಣವಾಗಿ ಪ್ರಕ್ಷುಬ್ಧವಾದ ಇಡೀ ಜಿಲ್ಲೆಯ ಲೋಕಮತವನ್ನು ಶಾಂತಗೊಳಿಸುವ ಉಪಾಯವು ನಿಶ್ಚಿತವಾಗಿ ಇದಲ್ಲೆಂದು ನಾವು ಸರಕಾರಕ್ಕೆ ತಿಳಿಸುವೆವು. ಲೋಕಮತದ ಸಂಭಾವನೆಯನ್ನು ಇಂಥ ವಿಪರೀತ ಉಪಾಯಗಳಿಂದ ಮಾಡುವದು, ನಿಜವಾಗಿ ಜವಾಬದಾರ ರಾಜ್ಯಪದ್ಧತಿಯಲ್ಲಿ. ಇಂಥ ನೇಮಣೂಕಿಯಂಥ ಸಣ್ಣ ಸಣ್ಣ ಸಂಗತಿಗಳೇ, ಪೊಂಟಿಗನ್ನು ಸ್ವರಾಜ್ಯದ ರಾಜ್ಯಪದ್ಧತಿಯು, ಜವಾಬದಾರ ರಾಜ್ಯಪದ್ಧತಿಯ ವಿಡಂಬನೆಯಾಗುವದನ್ನು ತೋರ್ಪಡಿಸುವದು, ನಿಷ್ಪ್ರಯೋಜಕವಾಗಿರುವದೆಂದು, ತೋರಿಸುವದಿಲ್ಲವೇ? ಅವರ ಬದಲಿಗೆ ನೇಮಿಸಲಿಕ್ಕೆ ಬೇರೆ ಪಾತ್ರರಾದ ಅಧಿಕಾರಿಗಳಿದ್ದಿಲ್ಲೆಂದು ಹೇಳಲಿಕ್ಕಾಗದು. ಹೀಗಿದ್ದಾಗ, ಅವರನ್ನೇ ನೇಮಿಸಿದ್ದು ಲೋಕಮತದ ತಿರಸ್ಕಾರವಾಗಿದೆ. ಅದಕ್ಕಾಗಿ ಹೊಸ ರಾಜ್ಯಪದ್ಧತಿಯು ಬೇಜವಾಬದಾರತನದ ಪ್ರದರ್ಶಕವಾಗಿದೆಂದು ಹೇಳಿದ ಹೊರತು ಗತ್ಯಂತರವಿಲ್ಲ. ಈ ಕಾರಣಗಳ ಮೂಲಕ, ಮಿ॥ ಕಡೆಲರವರ ನೇಮಣೂಕಿಯನ್ನು, ಲೋಕಮತದ ಸತ್ಯಾರ್ಥವನ್ನು ಸರಕಾರಕ್ಕೆ ತಿಳಿಸಲು ನಾವು ತೀವ್ರವಾಗಿ ನಿಷೇಧಿಸುವೆವು.

---

೨ ಇನ್ನು ಅಲ್ಪ ದಿವಸಗಳಲ್ಲಿ ಇಡೀ ಜಿಲ್ಲೆಯಲ್ಲಿ ಶೇಂದಿ, ಗಾಂಜಾ ಮುಕ್ತೆಗಳ ಲಿಲಾವು ಆಗುವದೆಂದು ಜಾಹೀರಾಗಿದೆ. ಮದ್ಯಪಾನದಂಥ ಭಯಂಕರ ದುರ್ವ್ಯಸನದ ವಿಷಯವಾಗಿ, ಮಹಾತ್ಮಾ ಗಾಂಧಿಗಳ ಅಪ್ಪಣೆಯು ಏನಾಗಿದೆಂಬುದು, ನಾವು ಮೊದಲೇ ತಿಳಿಸಿದ್ದೇವೆ. ರಾಷ್ಟ್ರದ ಅವನತಿಗೆ, ಅದರ ನಾಶಕ್ಕೆ ಕಾರಣವಾಗುವ ಇಂಥ ದುರ್ವ್ಯಸನಗಳಿಗೆ ಉತ್ತೇಜನ ಕೊಡಬೇಕೆಂಬ ಉದ್ದೇಶದಿಂದ, ಸರಕಾರವು ಅಬಕಾರೀ ಧೋರಣವನ್ನು ನಿಶ್ಚಯಿಸಿಲ್ಲೆಂದು ನಾವು ತಿಳಿಯುವೆವು. ಎಷ್ಟು ಸುಧಾರಿಸಿದ ರಾಷ್ಟ್ರಗಳಿಗೆ ಈ ವ್ಯಸನದಿಂದ ಜನಾಂಗಕ್ಕಾಗುವ ದುಷ್ಪರಿಣಾಮಗಳು ಕಂಡು ಬಂದು, ಮದ್ಯಪಾನದ ವ್ಯಸನವನ್ನು ಪೂರ್ಣವಾಗಿ ನಿರ್ಮೂಲಿಸುವ ಯೋಜನೆಗಳನ್ನು ಅವು ಕೈಕೊಳ್ಳುತ್ತಿರುವವು. ಅಮೇರಿಕೆಯಲ್ಲಿಂತೂ, ಮದ್ಯಪಾನವನ್ನು ಸಂಪೂರ್ಣವಾಗಿ ನಿರ್ಬಂಧಿಸಿರುವದು. ಹೆಂಡಕುಡುಕರಿಗೆ ಅಲ್ಲಿ ಕಾಯಿದೆಯಿಂದ ದಂಡಿಸುವ ಯೋಜನೆಯಾಗಿದೆ. ನಮ್ಮ ಸರಕಾರವು ಸಹ ಮದ್ಯಪಾನವನ್ನು ಅನೇಕಸಾರೆ ನಿಷೇಧಿಸಿರುವದು; ಆದರೆ ಜನರಿಗೆ ಉಣ್ಣುವ ಸ್ವಾತಂತ್ರ್ಯವಿದ್ದಂತೆ, ಕುಡಿಯುವ ಸ್ವಾತಂತ್ರ್ಯವಿರುವ ಮೂಲಕ, ಅವರ ಪಾನ-ಸ್ವಾತಂತ್ರ್ಯವನ್ನು ಅಪಹರಿಸುವದು ನ್ಯಾಯವಾಗದೆಂದು, ಅಸ್ತು ಆಸ್ತೆ ಅದನ್ನು ಕಡಿಮೆ ಮಾಡಲಿಚ್ಛಿಸುವದು, ಕ್ರಮಶಃ ಮದ್ಯಪಾನವನ್ನು ನಾಶಪಡಿಸುವದೇ, ಈಗಿನ ಸರಕಾರದ ಅಬಕಾರಿ ಧೋರಣವಿದೆ. ಇನ್ನು ಜನರೇ ವಿಧವಿಧದ ಅಸಹಕಾರಿತೆಯಿಂದ ಅದನ್ನು ನಿರ್ಮೂಲಿಸಲಿಚ್ಛಿಸಿದರೆ, ಜನರ ಮದ್ಯಪಾನ ನಿಷೇಧದ ಪ್ರಯತ್ನಗಳು ಸರಕಾರಿ ಧೋರಣಕ್ಕೆ ವಿಸಂಗತವಾಗವು. ತತ್ಕಾರಣ, ಮುಕ್ತೇದಾರರಿಗೆ ನಾವು ಹೇಳುವದೇನಂದರೆ, ನೀವು ಈ ಅತಿ ನಿಂದ್ಯವಾದ ಧಂದೆಯನ್ನು ಬಿಟ್ಟುಬಿಡಿರಿ. ತೋಟಿಗರಿಗೆ ನಾವು ಅತ್ಯಾಗ್ರಹಪೂರ್ವಕವಾಗಿ ಬಿನ್ನೈಸುವದೇನಂದರೆ— ನೀವು ನಿಮ್ಮ ತೆಂಗಿನ ಮರಗಳನ್ನು ಗುತ್ತಿಗೆ ಕೊಡದೆ, ನಿಮ್ಮ ಕೈಯಿಂದ ಈ ಮಹಾಪಾತಕಕ್ಕೆ ಪ್ರತ್ಯಕ್ಷವಾಗಿ ಉತ್ತೇಜನ ಕೊಡಬೇಡಿರಿ ಮತ್ತು ಸರಾಯಿಯನ್ನು ಕುಡಿಯುವ ದುರ್ವ್ಯಸನಿಗಳಿಗೆ ನಾವು ತಿಳಿಸುವದೇನಂದರೆ— ಮದ್ಯಪಾನದ ಕೂಡ ಸತ್ಯಾಗ್ರಹವನ್ನು ಆಚರಿಸಲು, ಮ॥ ಗಾಂಧಿಗಳ ನಾಮಸ್ಮರಣಮಾಡಿ, ಈ ದುರ್ವ್ಯಸನದಿಂದ ಸಂಪೂರ್ಣವಾಗಿ ಅಲಿಪ್ತರಾಗುವ ನಿರ್ಧಾರವನ್ನು ಮಾಡಿರಿ. ಇನ್ನು ಮುಂದಿನ ಯುಗದೊಳಗೆ ಮದ್ಯಪಾನವನ್ನು ಮಾಡುವ ಜನರು— ಅವರು ಯಾವದೇ ಜಾತಿಯವರಿರಲಿ— ನಿಶ್ಚಿತವಾಗಿ ಅಸ್ಪೃಶ್ಯರೆಂದೆಣಿಸಲ್ಪಡುವರೆಂದು ಅವರು ತಿಳಿದಿರಲಿ. ಈಗಿರುವ ಅಸ್ಪೃಶ್ಯರು ಇನ್ನು ಅಸ್ಪೃಶ್ಯರಲ್ಲ; ಕುಡಿಯುವ [illegible] ನಿಜವಾದ ಅಸ್ಪೃಶ್ಯರು. ಇದೇ [illegible] ನಿರ್ಣಯವಾಗಿರುವದು. ಇದಿಷ್ಟು [illegible] ದಾರರೂ, ಮರಗಳ ಮಾಲೀಕರೂ, [illegible] ಲಕ್ಷಪೂರ್ವಕವಾಗಿ ವಿಚಾರಿಸಲಿ.

---

೩ ವಿದ್ಯಾ [illegible] ಸ್ವತಂತ್ರ [illegible] ಯೊಳಗಿನ [illegible] ವಾಗಿದ್ದ [illegible] ದ ಬಾಪೃಷೀ [illegible] ಬರಿಸಲ್ಲಿ [illegible] ಧಾರ್ಮಿಕ [illegible] ತಿಳಿದು, ನಮಗೆ ಅತ್ಯಂತ [illegible] ರಣಾದದ್ದಲ್ಲಿ ? [illegible] ಶಿಕ್ಷಣವನ್ನು ಪಡೆದ [illegible] ಯು ಪ್ರಸಿದ್ಧರಾಗಿದ್ದರು. ವಿದ್ಯಾರ್ಥಿ ದಶೆಯಲ್ಲಿ ಅವರ ವಿದ್ಯಾ [illegible] ಹೊಗ [illegible] ದ್ದರು. [illegible] ಸ್ಕಾಲರ್‌ಶಿಪ್‌ಗಳನ್ನು ಸಂಪಾದಿಸಿ [illegible] ಧಗ ಕಾಲಿನ ದಂಡೆ ಶಿಕ್ಷಣವನ್ನು ಪಡೆದ [illegible], ಸರದೇಶಕ್ಕೆ ಪ್ರಯಾಣ ಬೆಳೆಸುವ ಸಾಹಸವನ್ನು ಕೈಕೊಂಡರು. ಜಪಾನಾಯುಕೆಯೊಳಗೆ ತಮ್ಮ ಶಿಕ್ಷಣಕ್ಕೆ ಅಲ್ಲಿಯ ಧಂದೆಗಾರರ ಮುಖದಿಂದ ಅನೇಕ ವಿಷ್ನ ಸಂಭವಿಸಿದರೂ, "ಪ್ರಾರಬ್ಧಿಗಳ ಉತ್ತಮೋತ್ತಮ ಪರಿತ್ಯಜಂತಿ" ಎಂಬ ನಿಧಾರದಿಂದ ಈ [illegible] ವಿದ್ಯಾರ್ಥಿಗಳು ಎದೆಗುಂದದೆ ಬಹಳೇ ತಜಾಗ್ರತೆಯಿಂದ ತಮ್ಮ ಸಾಧ್ಯವನ್ನು ಸಾಧಿಸಿಕೊಂಡರು. ಕಾಜಿನ ಧಂದೆಯನ್ನು ಕಲಿತು, ಯುರೋಪಖಂಡದಲ್ಲಿ ಪ್ರವಾಸಮಾಡಿ, ಅವರು ಮರಳಿ ಸ್ವದೇಶಕ್ಕೆ ಬಂದರು. ಆದರೆ ಇಲ್ಲಿಯ ಧನಿಕರಿಂದ ತಕ್ಕ ಉತ್ತೇಜನ ಸಿಗದೇ, ಅವರಿಗೆ ಇತರ ವ್ಯವಸಾಯವನ್ನು ನಡಿಸಬೇಕಾಯಿತು. ಇತ್ತಲಾಗಿ ೧೦-೧೫ ವರ್ಷಗಳಲ್ಲಿ ಪರದೇಶದ ವರ್ತಕರ ಕೂಡ ವ್ಯಾಪಾರವನ್ನು ನಡಿಸುವ ದೊಡ್ಡದೊಂದು ಸ್ವತಂತ್ರ ಪೇಢಿಯನ್ನೇ ಅವರು ನಡಿಸುತ್ತಿದ್ದರು. ಇವರ ಇಡೀ ಚರಿತ್ರವು ಬೋಧಪ್ರದವದೆ. ಇವರು ಚತುರರೂ, ಸಾಹಸಿಗಳೂ, ಸುಸ್ವಭಾವದವರೂ ಆಗಿದ್ದರು. ಸ್ಪಷ್ಟವಕ್ತೃಗಳೂ, ಪ್ರಮಾಣಿಕ ವ್ಯಾಪಾರಿಗಳೂ, ಎಂತಲೂ ಇವರ ಖ್ಯಾತಿಯಿದೆ. ಇಂಥ ವಿಖ್ಯಾತ ಪುರುಷರ ನಿಧನದಿಂದ ಕಾನಡಾಜಿಲ್ಲೆಯು ಒಬ್ಬ ಮುಖಂಡರನ್ನು ನಾವು ಕಳಕೊಂಡಂತಾಗಿದೆ. ಅವರ ಆಪ್ತಮಿತ್ರರ ಕೂಡ ನಮ್ಮ ಸಹತಾಪವನ್ನು ನಾವು ವ್ಯಕ್ತಪಡಿಸುವೆವು ಮತ್ತು ಅವರ ಶೋಕಾಕುಲ ಹೆಂಡತಿಯೂ, ತನುಜರೂ ಈ ಆಪತ್ತಿನಲ್ಲಿ ಅನೇಕರು ಪಾಲುಗಾರರಿದ್ದಾರೆಂದು ಅರಿತು ಈ ಸಂಸಾರಿಕ ದುಃಖದೊಳಗೆ ತಮ್ಮ ಸಾಂತ್ವನಮಾಡಿಕೊಳ್ಳುವರೆಂದು ನಂಬುವೆವು.

---

೪ ಅಂಕೋಲೆಯೊಳಗೆ ಕೊಂಗ್ರೆಸದ ಅಪ್ಪಣೆಯಂತೆ ಸ್ವತಂತ್ರ ಶಿಕ್ಷಣವನ್ನು ಕೊಡುವ ಹಿಂದು ವಿದ್ಯಾಲಯವನ್ನು ಸ್ಥಾಪಿಸುವ ಯೋಜನೆಯಾಗಿದೆಂದು, ಈಗಲೇ ನಮಗೆ ಆನಂದಕರ ಸುದ್ದಿ ಬಂದಿದೆ. ಈ ವಿದ್ಯಾಲಯದಲ್ಲಿ ೬ ನೇ ಮತ್ತು ೭ ನೇ ಈ ಯತ್ತೆಗಳಲ್ಲಿ ಇಂಗ್ರೇಜಿ ಕಲಿಸುವ ಹಾಯಸ್ಕೂಲು ವಿದ್ಯಾರ್ಥಿಗಳಿಗೆ ಶಿಕ್ಷಣವು ಕೊಡಲಾಗುವದೆಂತಲೂ, ಬರುವ ೭ ನೇ ತಿಂಗಳಿನಿಂದ ನೂಲು ತೆಗೆಯುವ ಮತ್ತು ಕೈಮಗ್ಗಗಳಿಂದ ಬಟ್ಟೆ ನೇಯುವ ಧಂದೆ ಶಿಕ್ಷಣವನ್ನು ಸಹ ಕೊಡುವ ವಿಚಾರ ನಡೆದದೆಂತಲೂ, ಹಿಂದೀ ಭಾಷೆಯನ್ನು ಕಲಿಸುವ ವ್ಯವಸ್ಥೆಯೂ ಮೊದಲಿನಿಂದ ಜಾರಿ ಆಗುವದೆಂತಲೂ, ನಮ್ಮ ಬಾತ್ಮೀದಾರರು ತಿಳಿಸುತ್ತಾರೆ. ವಿದ್ಯಾಲಯವು ಪಾಠಕರ ಸಹಾಯವನ್ನು ಸಹ ನಿರೀಕ್ಷಿಸುವದು. ಅದಕ್ಕಾಗಿ, ಈ ವಿದ್ಯಾಲಯದ ಪ್ರವೇಶವನ್ನು ಹೊಂದಲಿಚ್ಛಿಸುವವರು ಪಾಲಕರ ಅನುಮತಿಯನ್ನು ಪಡೆದು, ಸಿದ್ಧರಾಗಿರಬೇಕು ಮತ್ತು ಈ ವಿಷಯದ ಪತ್ರವ್ಯವಹಾರವನ್ನು 'ಸ್ವತಂತ್ರ ಶ್ರೀ ಗಣೇಶ ವಿದ್ಯಾಲಯ ಹಳೆ ಪೋಸ್ಟ ಆಫೀಸ, ಅಂಕೋಲಾ' ಈ ವಿಳಾಸಕ್ಕೆ ಮಾಡಬೇಕು. ಈ ವಿದ್ಯಾಲಯದ ಶಿಲಾನ್ಯಾಸದ ವೃತ್ತಾಂತವನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು. ಅನುಭವಿಕ ಶಿಕ್ಷಕರಿಂದ ನಡಿಸಲ್ಪಡುವ ಈ ಹೊಸ ಸಂಸ್ಥೆಗೆ ಶಿಕ್ಷಣಪ್ರೇಮಿ ಪಾಲಕರೂ, ವಿದ್ಯಾರ್ಥಿಗಳೂ, ನೆರವಾಗುವರೆಂದು ನಾವು ನಂಬುವೆವು.

ಪತ್ರಸ್ವೀಕಾರ.

M. V. Haldipur— ತಮ್ಮ ಪತ್ರವು ಪ್ರಸಿದ್ಧಿಸಲು ಯೋಗ್ಯವಾಗಿಲ್ಲ. ತಮ್ಮ ಪ್ರತಿಪಕ್ಷಿಗಳ ವಿಧಾನಗಳಿಗೆ ಸಮರ್ಪಕ ಉತ್ತರವು ಮೊದಲೇ "ನವಶಕ್ತಿ" ಮತ್ತು "ಹಿತಚಿಂತಕ"ದ ಪತ್ರಗಳಲ್ಲಿ ಪ್ರಸಿದ್ಧವಾದ ಕಾರಣ, ಅದೇ ವಿಷಯದ ಚರ್ಚಿತ ಚರ್ವಣ ಮಾಡುವ ಪ್ರಯೋಜನವಿಲ್ಲ. ದೊರೆತ ಅವಕಾಶದಿಂದ ಸಂಬಂಧಪಟ್ಟ ಜವಾಬದಾರರು [illegible] ಹೊಸದಾಗಿ ಲೇಖಪತ್ರಗಳನ್ನು ಪ್ರಸಿದ್ಧಿಸಿ, ಸ್ವಪರ ಪೋಷಣ-ರ್ಥವಾಗಿ ಮುಂದರಿಯುವವರಿದ್ದರಿಂದ, ಜವಾಬದಾರ ವ್ಯಕ್ತಿಗಳು ಒಬ್ಬರಿಗೊಬ್ಬರು [illegible] ಮಾಡಿ, ಇಷ್ಟವೇ ಪರಸ್ಪರರಲ್ಲಿ ಟೀಕೆಯ "ಪಿಚಕಾರಿ ಫೂತ್ಕಾರಗಳನ್ನು" ಹಾರಿಸುವದಕ್ಕಿಂತ, ಜಿಲ್ಲೆಯಲ್ಲಿ ಪ್ರಸಿದ್ಧರಾಗುವ ಜವಾಬದಾರ ಅಧಿಕಾರಿಗಳ ಲೇಖಪತ್ರಗಳ ಕಡೆಗೆ ಲಕ್ಷ ಪೂರೈಸುವದು, ಹೆಚ್ಚು ಶ್ರೇಯಸ್ಕರವೆಂದು ನಮ್ಮ ಮತವು.

ಸ್ಥಾನಿಕ ವೃತ್ತಾಂತ.

ಕುಮಟಾ— ಚಳಿಯು ಬೀಳುತ್ತದೆ. ರೋಗರಾಯಿ ಸಮೃದ್ಧಿಗೇನೂ ಕೊರತೆಯಿಂದ ಭಕ್ತ-ಶಕ್ತಿ ಜುಬಿಲಿ ಬರುತ್ತಿರುತ್ತದೆ. ಧಾರಣೆ ಮಾನ ಸ್ವಲ್ಪ ಕುಗ್ಗಿದೆ.

ಉ॥ ಕಾನಡಾ ಗೌ॥ ಸಾ॥ ಬ್ರಾಹ್ಮಣ ಶಿಕ್ಷಣಾಭಿವೃದ್ಧಿ ಫಂಡಿನ, ೮-೧೦ ವರ್ಷಗಳಿಂದ ಗಾಢ ನಿದ್ರೆಯಲ್ಲಿದ್ದ [illegible] ಕಾರ್ಯಕಾರಿ ಮಂಡಳದ (ಈ ಊರಲ್ಲಿ ವಾಸಿಸುವ) ಪೆ [illegible] ಪೂರ್ವ

ಬಂದು (informal) ಅಕ್ರಮ ಕಮಿಟಿಯನ್ನು ಅವರ ಉಪಾಧ್ಯಕ್ಷ ಶ್ರೀ। ರಾ ಅ. ವೈದ್ಯ ಕಳೆದ ತಾ. ೧೩ಕ್ಕೆ ಕರೆದು, ಮೆಂಬರರ ಮುಖಭೇಟಿಯ ಯೋಗಾಯೋಗ ತಂದಿದ್ದರು. ಕೆಲವು ಪ್ರಶ್ನೋತ್ತರಗಳಾದಮೇಲೆ, ಕ್ರಮವಾಗಿ ಆ ಮಂಡಳದ ಸಭೆಯನ್ನು ಬರುವ ತಾ ೨೮ನೇ ಸುಮಾರಿಗೆ ಕೂಡಿಸಬೇಕೆಂದು ನಿಶ್ಚಯಿಸಿರುವರು.

"ಈ ತಾಲೂಕ ಸಂಬಂಧ ಕೇಳಿದ ಬೆಹುತೇಕ ಎಲ್ಲಾ ವ್ಯಾಸುಭೋಗಗಳು ತಮ್ಮ ತಮ್ಮ ಹಾಜರಿ ರಿಪೋರ್ಟ್ ಗಳನ್ನು ತಮ್ಮ ಮಾನ್ಯ ಲೇಬಾರದ ವಿದ್ವನಾನ ಸಣ್ಣ (ಫ್ರಾಂಸ) ಸಾಹೇಬರ ಕಡೆಗೆ ಕಳುಹಿಸಿರುವರಂತೆ! ಈ ಕ್ರೂರ ಸಾಹೇಬರು ಈಗ ಏನು ಮಾಡುತ್ತಾರೆ, ನೋಡಬೇಕು !!

ಇಲ್ಲಿಯ ಗೌ, ಸಾ। ಬ್ರಾಹ್ಮಣ ಹಸ್ತು ಸಮಸ್ತರು. ನಿನ್ನೆ-ಸುಮಾರು ೩೦೦ ಜನರು-ಶ್ರೀ ವೆಂಕಟರಮಣ ದೇವರಲ್ಲಿ ಕೂಡಿ-ಶ್ರೀ ದೇವರ ಪರ್ವಣಿ-ಉತ್ಸವಗಳಲ್ಲಿ ಆಗುವ ಕಾರ್ಯನಿರ್ವಾಹದ ಸಾಂಗ್ಯ ವ್ಯವಸ್ಥೆ ಮಾಡುವ ಉದ್ದಿಶ್ಯದಿಂದ ಯೋಗ್ಯ ಕಾನೂನುಗಳನ್ನೂ, ಉಪಾಯಗಳನ್ನೂ ಯೋಚಿಸಿ, ರಿಪೋರ್ಟ್ ಕೊಡಲು, ಮಹಾಸಭೆಯ ಅಧ್ಯಕ್ಷ ಶ್ರೀ। ರಾ. ಅ ವೈದ್ಯರ ಅಧ್ಯಕ್ಷತೆ ಯಿಂದೊಡಗೂಡಿದ ೨೧ ಜನ ಚುನಾಯಿಸಿದ ಮೆಂಬರರ ಪೋಟ ಕಮಿಟಿಯು ಸ್ಥಾಪಿಸಲ್ಪಟ್ಟಿತು. ಇಷ್ಟು ಸಣ್ಣ ಕೆಲಸಕ್ಕೆ ಇಷ್ಟು ಮೆಂಬರರ ಮತ್ತು ಆ ಮಹಾನುಭಾವರ ಅಧ್ಯಕ್ಷತೆಯ ಅವಶ್ಯಕತೆಯು ಇತ್ತೆಂಬುದೇ ಆಶ್ಚರ್ಯ! ಸದ್ಯದ ಅವರ ಪ್ರಕೃತಿಯ ಮಾನದಿಂದ, ಎದ್ದರೆ, ಕೂರಲಾರದ, ಕುಂತರೆ, ಏಳಲಾರದ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದು, ಇಂಥ ಶ್ರೀ ದೇವರ ಸಾನ್ನಿಧ್ಯದ ಪವಿತ್ರ ಕಾರಭಾರದೊಳಗಿಂದ ಅವರನ್ನು ಈಗಲಾದರೂ ಬಿಡುಗಡೆ ಮಾಡದೆ, ಅವರಿಗೆ ಕಷ್ಟಕೊಡುವದು ಸಮಾಜಕ್ಕೆ ಎಷ್ಟಕ್ಕೂ ಈಗ ಸಲ್ಲದು!

ಇಲ್ಲಿಯ ಹಿಟ್ಟಿ ಪೋಲೀಸ ಸಿಪಾಯಿಯು ೫-೬ ದಿವಸಗಳ ಹಿಂದೆ, ರಾತ್ರೆ ೮-೯ ಘಂಟೆ ಸಮಯ ಗೆಂಡ ಕುಡಿದು ಘಟ್ಟಕ್ಕೆ ಹೋಗುವ ಗಾಡಿಯ ಆಳಿಗೂ, ಮಾಲೀಕರಿಗೂ, ಹೊಡೆದು ಬಡೆದು, ಪುಂಡು ಮಾಡಿದ್ದು ಜನರು ಕೇಳಿ, ಅದನ್ನು ತಡೆಯಲಿಕ್ಕೆ ಹೋದವರಿಗೂ ಸಹ ಪ್ರಹಾರಗಳು ಯಥಾಪ್ರಕಾರ ಬಿದ್ದು, ಇನಸ್ಪೆಕ್ಟರರಿಗೂ ಕರೆ ಬಂದದ್ದು ತಿಳಿದಿತ್ತು. ಅವರು ಹೋಗಿ, ಏನು ಮಾಡಿದರೆಂಬುದು ತಿಳಿಯಲಿಲ್ಲ. ಈ ಸಿಪಾಯಿಯು ಕಡೆಲ ಸಾಹೇಬರ ದೋಸ್ತಿ ಎಂದು ಹಿಡಿದವನು, ಮತ್ತು ಅವರು ಅವನಮೇಲೆ ತಮ್ಮ ವರದಹಸ್ತವನ್ನು ಎಂದು ಇತ್ತರು? ನೋಡುವಾ, ಮೇಲಾಧಿಕಾರಿಗಳು ಅವನಿಗೆ ಯಾವ ಬಕ್ಷೀಸು ಹುದ್ದೆಯ ಜಾಗ ಕೊಡುತ್ತಾರೆಂಬುದು!

ಮಿ॥ ಕಾಸಿಮುಡ ಕಮುರುದ್ದಿನ ಸಾಹೇಬರ ಅಂಗಡಿಯಿಂದ ಕಳವು ಮಾಡಿದ ತೆರ್ಕ ನಾಯ್ಕರ ವಿಠೋಬಾ ಪರಮೇಶ್ವರ ಎಂಬವನು ಬೇರೆ. ಮತ್ತು ಅದೇ ಊರ ನಾಯ್ಕರ ವಿಠೋಬಾ ಪರಮೇಶ್ವರ ಗಾಂವಕಾರ ಎಂಬ ವ್ಯಾಪಾರಸ್ಥರು ಬೇರೆ, ಇದ್ದಾರೆಂದು ತಿಳಿಯತಕ್ಕದ್ದು.

ಕುಮಟಾ—ಹೊನ್ನಾವರ ಟಾಂಗಾ ಕಂಪನಿಯ ಟಾಂಗೆಗಳನ್ನೂ, ಟ್ರಂಚಿಟುಗಳನ್ನೂ ಕ್ಯಾಪ್ಟನ್ನರ ಅಧಿಕಾರಿಗಳು ತಪಾಸ ಮಾಡಿ, ಸರ್ಟಿಫಿಕೇಟು ಕೊಟ್ಟಿರುವರೇನು? ಹಾಗಾದರೆ, ಆ ಮೇಲೆ ಅವು ಎಷ್ಟು ಸಲ ನಾದುರುಸ್ತ ಆಗಿ, ಹಾದಿಯಲ್ಲಿ ಪೆಸೆಂಜರರಿಗೆ ಎಷ್ಟು ಕಷ್ಟವಾಯಿತೆಂಬುದು ತಪಾಸಮಾಡಿದರೇನು? ಟಾಂಗೆ, ಟ್ರಂಚೀಟು ನೋಡಿದರೆ, ತಪಾಸಕರಿಗೆ ಕಣ್ಣು ಘಂಟೆ ಕಾಣಸುವದಿಲ್ಲ!! "ಪಂಡಿತರ" ಟಾಂಗೆ ಎಂತೇ ಸರ್ಟಿಫಿಕೇಟ ಕೊಟ್ಟರೆ, ಕೊಟ್ಟರದೇಕು!!' ಪ್ರಯಾಣಿಕರ ಕೂಟ-ಸೋಯಿಯೋ ಮುಖ್ಯವಾದದ್ದು.

ಅಂಕೋಲಾ— ಜವಾಬ್ದಾರ ಘುರ್ವರಂತ. ರೋಗನಾಯ ಮುಖ ಸ್ಥಿತಿ. ಮಿ॥ ಕಳಕ್ಕರ ಸಾ॥ ರ ಸ್ವಾರಿಯ ಗುಂಟಬಾಳರಿಯಲ್ಲಿರುವರು.

ನಿಜಾಮ ಹೈದರಾಬಾದ ಪೋಲಿಸ ಸೈದ ಅಹಮ್ಮದ ಸಾಬ ತಾ. ೨೧ನೇ ದಿವಸ ಇಲ್ಲಿ ಬಂದು ಮಸೀದಿಯಲ್ಲಿ ಸೈದ ಭದ್ರುದ್ದಿನ್ ಸಾಹೇಬ ಪೀರಜಾದೆ ಇವರ ಅಧ್ಯಕ್ಷತೆ ಕೆಳಗೆ ಸಭೆಕೂಡಿ ವ್ಯಾಖ್ಯಾನವಾಯಿತು. ಒಂದು ಖಿಲಾಫತ ಕಮಿಟಿಯೂ ಸ್ಥಾಪನೆ ಮಾಡಲ್ಪಟ್ಟಿತು.

ದಿ ಯೂನಾಯಿಟೆಡ ಕರ್ನಾಟಕ ಮೋಟರ ಕಂಪನಿಯ ಮೀಟಿಂಗು ಶ್ರೀಮುಖಾಗಿ ಮುನಾಲೆ ಕಂಪನಿಯವರ ಮಾಳಿಗೆಯ ಮೇಲೆ ಶೇರ್ಹೋಲ್ಡರ್ ಗಳ ಮೇಲೆ ಕಂಪನಿಕೂಡಿನ ದಬಗ್ಗೆ ನೆರವಿತ್ತು. ಅದರ ಸ್ಕೀಮು ಮಾಡಿಗಡ, ಸಭೆಯು ವಿಸರ್ಜನೆಯಾಯಿತು.

ಇಲ್ಲಿ ಒಂದು ಸ್ವತಂತ್ರ ವಿದ್ಯಾಲಯವನ್ನು ಸ್ಥಾಪಿಸಿ ಮೇಲಿನ ಊಯತ್ತೆಗೆಳ ವಿದ್ಯಾರ್ಥಿಗಳಿಗೆ ಹೊಸ ಧರ್ತಿಯಂತೆ ಶಿಕ್ಷಣವನ್ನು ಕೊಡುವ ಯೋಜನೆಯನ್ನು ವಿಚಾರಿಸಲು, ಸಾರ್ವಜನಿಕ ಸಭೆ ಕರದಿತ್ತು. ಸಭೆಗೆ ಬಹಳ ಜನ ಸಮೂಹವು ಕೂಡಿತ್ತು. ಇವರಲ್ಲದ ಮಾಮಲೇದಾರ, ಛಸ್ತೇದಾರ, ಫೌಜದಾರ ಮುಂತಾದ ಅಮಲುದಾರರೂ ಚಿತ್ರಕ್ಷಿನವಲ್ಲದೆ, ಡಿಸ್ಟ್ರಿಕ್ಟಸುಪರಿಂಟೇಂಡೆಂಟ ಆಫ್ ಪೋಲೀಸ ಮಿ॥ ಹರಿಶ್ಚಂದ್ರ ಸಾಹೇಬರೂ ಹಾಜರ ಇದ್ದರು. ಶ್ರೀ। ವಿಶ್ವನಾಥ ಪ್ರಭುಗಳವರು ಮರಿಯಿಂದ ಸುಶ್ರಾವ್ಯ ಭಾಷಣಮಾಡಿ ಹೊಸ ಶಿಕ್ಷಣದ ಯೋಜನೆಯನ್ನು ಜನರ ಮುಂದಿಟ್ಟರು. ತಮ್ಮ ಭಾಷಣದಲ್ಲಿ ಶಿಕ್ಷಣದ ಪೂರ್ವೇತಿಹಾಸ, ಈಗಿದ್ದ ಶಿಕ್ಷಣದ ನ್ಯೂನತೆಗಳು, ಅವರ ಮೇಲಿನ ಆಕ್ಷೇಪಗಳು, ಅದರ ಸುಧಾರಣೆಯ ಅವಶ್ಯಕತೆ, ಜೊತೆಯ ಕೊರತೆ, ಖಾಸಗಿ ಪ್ರಯತ್ನಗಳ ಅವಶ್ಯಕತೆ, ಮುಂತಾದವುಗಳ ವಿವೇಚನೆಗಳನ್ನು ಸದ್ಯಕ್ಕೆ ನವೀನ ಶಿಕ್ಷಣ ವಿಷಯಕ ಚಳವಳದೊಳಗೆ ವಿಧಾಯಕ ಪ್ರಯತ್ನಗಳನ್ನು ಮಾಡಿ, ಅನೇಕ ಲಾಭಗಳನ್ನು ಪಡೆಯತಕ್ಕದ್ದೆಂದು ಹೇಳಿದರು. ಅದಕ್ಕಾಗಿ, ರಾಷ್ಟ್ರೀಯ ಕರ್ತವ್ಯವೆಂದು ಇಲ್ಲಿ ಹೊಸದೊಂದು ವಿದ್ಯಾಲಯವನ್ನು ಸ್ಥಾಪಿಸುವ ಯೋಜನೆಯನ್ನು ಜನರ ಮುಂದಿಟ್ಟರು. ಅವರ ಯೋಜನೆಯಂತೆ ೬ ನೇ ಹಿನೇ ವರ್ಗದ ವಿದ್ಯಾರ್ಥಿಗಳಿಗೆ ಇಂಗ್ರಜಿ ಶಿಕ್ಷಣ ಕೊಡುವಾಗಲೇ, ದೇಶಭಾಷೆಗಳ ಮತ್ತು ಹಿಂದೀ ಭಾಷೆಯ ಶಿಕ್ಷಣವನ್ನು ವಿಶೇಷವಾಗಿ ಕೊಡುವದು, ಮತ್ತು ದೇಹ ಶಿಕ್ಷಣಕ್ಕಾಗಿ ನೂಲು ತೆಗಿಯುವ ಹಾಗೂ ಬಟ್ಟೆ ನೇಯುವ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಇರುವದು, ಮತ್ತು ವ್ಯಾಪಾರೀ ಶಿಕ್ಷಣವನ್ನು ಕೊಡುವದು, ಇಷ್ಟೇ ಯೋಜನೆಯನ್ನು ಕೈಕೊಂಡು ಅದನ್ನು ಯಶಸ್ವಿ ಮಾಡಲಿಕ್ಕೆ ಈಗ ಬೇಕಾಗುವ ಸಾಮುಗ್ರಿಯ ದೆಸೆಯಿಂದ, ಆಜಮಾಸ ೧೦೦೦೦ ರೂಪಾಯಿ ವೆಚ್ಚ ತಗಲುವದೆಂತಲೂ ಹೇಳಿ, ಇಂಥ ವಿಧಾಯಕ ಪ್ರಯತ್ನಗಳಿಂದ ಯಾರಿಗೂ ಅಕಲ್ಯಾಣವಾಗದೆಂದು ಹೇಳಿ, ಅದನ್ನು ಅಂಗೀಕರಿಸಲಿಕ್ಕೆ ಜನರಿಗೆ ಆಗ್ರಹಪೂರ್ವಕ ವಿನಂತಿ ಮಾಡಿ, ಬೇಕಾದವರು ಈ ವಿಷಯವನ್ನು ಈಗಲೇ ತಮ್ಮ ತಮ್ಮ ಮತದಂತೆ ಚರ್ಚೆ ಸಬಹುದೆಂದು ಸೂಚಿಸಿ, ತಮ್ಮ ವ್ಯಾಖ್ಯಾನವನ್ನು ಮುಗಿಸಿದರು. ನಂತರ ಶ್ರೀ। ಕಾಮರಾವ ಕೀರ್ತಿಕರರು ಬಹಳೇ ವಿಚಾರಪರಿಪ್ಲುತ ಭಾಷಣವನ್ನು ಮಾಡಿ, ತಾನು ತಾಯಿ ಸ್ಕೂಲು ಶಿಕ್ಷಣವನ್ನು ಮುಗಿಸಿದರೂ, ನೌಕರಿಯ ಹೊರತು ಅನ್ಯ ಕೆಲಸಕ್ಕೆ ತಾನು ಹ್ಯಾಗೆ ಅಪಾತ್ರನಾಗಿದ್ದನು. ವ್ಯವಹಾರಿಕ ಶಿಕ್ಷಣದ ಗಂಧವು ಸಹ ನನಗೆ ಹ್ಯಾಗೆ ಇಲ್ಲ. ಅದನ್ನು ಹೊಸದಾಗಿ ತನಗೆ ಹ್ಯಾಗೆ ತಿಳಕೊಳ್ಳಬೇಕಾಯಿತು ಎಂದು ಸ್ವಾನುಭವವನ್ನು ಹೇಳಿ, ಸದ್ಯದ ಕಾಲದಲ್ಲಿ ಪ್ರತಿಯೊಬ್ಬರು ದೇಶಸಮಾಜದ ಕಾಲವನ್ನು ತೀರಿಸಲಿಕ್ಕೆ ಮಾಡಿಯನ್ನು ಸ್ಮರಿಸಿ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಬೇಕಾಗಿದೆ. ಈಗ ಪ್ರತಿ ಒಬ್ಬರು ತನ್ನ ಕಾಲಿನ ಮೇಲೆ ತಾನೇ ನಿಂತು, ಆತ್ಮೋನ್ನತಿಯನ್ನು ಮಾಡಿಕೊಳ್ಳಬೇಕಾಗಿದೆ. ಸ್ವಾವಲಂಬನವೇ ಈಗ ತರಣೋಪಾಯವು, ಎಂದು ಬಹಳೇ ಗಹನ ವಿಚಾರಗಳನ್ನು ಪ್ರಕಟಿಸಿ, ಈ ಕಾರ್ಯಕ್ಕೆ ತಾನು ತನ್ನ ಶಕ್ತಿ ಮೀರಿ ೧೦೧ ರೂ. ವಂತಿಗೆ ಕೊಡುತ್ತೇನೆಂದು ಆಶ್ವಾಸನೆ ಕೊಟ್ಟರು. ನಂತರ, ಎಲ್ಲರೂ ಈ ಯೋಜನೆಯನ್ನು ಏಕಮತದಿಂದ ಮಾನ್ಯ ಮಾಡಿದರು. ಅಲ್ಲಿಂದಲ್ಲೇ ವಂತಿಗೆಯ ಕೆಲವರು ಹಾಳಲು, ೩೦೦ ರೂಪಾಯಿ ಆಜಮಾಸು ವಂತಿಗೆಗಳು ಬಿದ್ದವು. ಸ್ವಲ್ಪ ಅಂಕಿಗೆಯಿಂದಲೇ ಇಷ್ಟು ರೂಪಾಯಿ ಆಗಿದೆ. ನಂತರ ಅಧ್ಯಕ್ಷ ಶ್ರೀ। ಶಂಕರರಾವ ಸಾತಕರ್ಣಿಯವರು ವಿದ್ಯಾವೃದ್ಧಿಯ ಕೆಲಸವು ಮುಖ್ಯವಿದೆಂದು ಹೇಳಿ, ಯೋಗ್ಯ ರೀತಿಯಿಂದ ನಡಿಸಿ ಅದು ಯಶಸ್ವಿಯಾಗಲೆಂದು ಬಯಸಿದರು. ನಂತರ ಸಭೆಯು ವಿಸರ್ಜನೆಯಾಯಿತು.

ಹಳಿಯಾಳ— ಚಳಿ ಬೀಳುತ್ತದೆ. ಹವಾಮಾನ ಸಾಧಾರಣ ಇದೆ. ಧಾರಣೆ ಧಾನ್ಯದ ಮಂದಿ ಇದ್ದು, ಬಾಕಿ ತೇಜಿ ಆದೆ. ಸರಕಾರಿ ವಸೂಲಿ ಜಾರಿಯಿಂದ ನಡೆದದೆ. ಆ. ಡಿ. ಎ. ಇ. ಇಲ್ಲಾಳರು ಬಂದಿರುವರು. ಕೊ. ಆ. ಸೊಸಾಯಟಿ ಆ. ನಾಯರ್ಖರ ಮಿ॥ ಕೇಶವೈಯ್ಯನವರು ಬಂದು, ಮುಂದಿನ ಚಾಲು ಕೆಲಸದಬಗ್ಗೆ ಯೋಗ್ಯ ಸಲ್ಲೆ ಕೊಟ್ಟು, ಸೊಸಾಯಟಿ ಕೆಲಸ ಚಾಲು ಮಾಡಿ ಹೋದರು. ಇಲ್ಲಿ ಇಂಗ್ರಜಿ ಶಿಕ್ಷಣದ ಅಡಚಣೆ ದೂರಮಾಡುವರೆ, ಒಂದು ಶಾಲೆಯು ಶ್ರೀಮಂತ ವಹ್ಯಾ ಬಿದರ ದೇಶಪಾಂಡೆರವರ ಹಸ್ತ ತೆರೆಯಲ್ಪಟ್ಟಿತು. ಅದರಬಗ್ಗೆ ವಾರ್ಷಿಕ ದೇಣಿಗಿ ವಿವರ.— ರಾ. ೧೫೦ ದತ್ತಾತ್ರಯ ವಾಮನರಾವ ದೇಶಪಾಂಡೆ, ೬೦ ಶಂಕರರಾವ ಸದಾಶಿವ ಹುಣಸವಾಡಕರ, ೬೦ ಮಹಾದೆವರಾವ ತೆರಗಾಂವಕರ, ೬೦ ಅಬದುಲ ಕರೀಮ ಸಾ॥ ಮುಲ್ಲಾ ಮುನ್ನಾರ, ೬೦ ನಿಂಗಪ್ಪಾ ಹಳ್ಳಿಕೇರಿ, ೬೦ ನಾರಾಯಣರಾವ ಬಿಡ್ರಿ, ೬೦ ಪಂಡಾಪ್ಪಾ ಆನೆಗುಂದಿ ಹೀಗೆ ರೂ ೪೮೦ ಸಿಲ್ಕು ತೆರಗಾಂವಕರರವರ ಕಡೆಗೆ ಉಂಟು. ಇಂಗ್ರಜಿ ಕ್ಲಾಸ ಚಾಲು ಮಾಡಿರುತ್ತದೆ. ಮುರುಕವಾಡದಲ್ಲಿ ಕೆಲಕಾಲ ಜನರ ಸಭೆ ಆಗುವದದೆ. ಅದರಲ್ಲಿ "ಆತ್ಮಹಿತ" ಅಂದರೆ ನಮ್ಮ ಹಿತದಬಗ್ಗೆ ಸಮಾಜದವರು ಏನು ಮಾಡಬೇಕು, ಎಂಬುವ ವಿಚಾರ ಆಗುವದದೆ. ಇಲ್ಲಿಯ ಮಾರವಾಡಿ ವ್ಯಾಪಾರಿ ಶ್ರೀ। ಮಲ್ಲಪ್ಪನವರುಚಂದರವರು ಕೈಲಾಸವಾಸಿ ಆದ ಬಗ್ಗೆ ಸುದ್ದಿ ಇತ್ತು. ಆದರೆ, ಆಮ ಸುಳ್ಳು ಇದ್ದು, ಅವರು ಕ್ಷೇಮಿಯಿದ್ದು ಇಲ್ಲಿ ಪ್ರತ್ಯಕ್ಷ ಬಂದಿರುತ್ತಾರೆ. ಇವರತಿ ಕಟ್ಟಿಗೆಯ ವರ ಮಂದಿ ಆದೆ. ಉಳಿದ ಯಾತ್ರಸ್ಥರು ಸ್ವಲ್ಪ ಕಡಿಮೆ ಪ್ರಮಾಣದಿಂದ ಬರಹತ್ತಿರುವರು.

ಸಿದ್ದಾಪುರ— ಈ ವರ್ಷ ಅಡಿಕೆ ಪೀಕು ಸರಿಯಾಗಿಲ್ಲ, ಕೊಳರೋಗದಿಂದಲೂ, ಅದೇ ವೇಳ್ಯ ಮಳೆ-ಥಾಲಿ ಜೋರಿನಿಂದಲೂ ಬಹಳೇ ಲುಕ್ಸಾನು ಆಗಿದೆ. ಹೀಗಾಗಿ, ಹೆಚ್ಚೆಂದರೆ, ೩-೪ ಆಣೆ ಪೀಕು ಆದೀತು ಆಗದಿ ಜಾಸ್ತಿ ಸ್ಥಳಗಳಲ್ಲಿ ೪-೬ ಆಣೆ ಪೀಕು ಬಂದದ್ದುಂಟು. ಈ ಕುರಿತು ಜನರು ಆಕಟೋಬರ ತಿಂಗಳಿನಿಂದಲೇ ಅರ್ಜಿ ಮಾಡಿದ್ದರಿಂದ, ಗ್ರಾಮಸ್ಥರು ತಪಾಸುಮಾಡಿ, ೩ ಮೂರಾಣೆಯಿಂದ ೫-೬ ವರೆಗೆ ಪೀಕು ಇರುತ್ತದೆಂದು ರಿಪೋರ್ಟ ಮಾಡಿದರು. ಮಾಮಲೇದಾರರು ಮೇಲತಪಾಸಕ್ಕೆ ಬಂದವರು ೧೧-೧೨ ಗ್ರಾಮಗಳನ್ನು ಒಮ್ಮೆಲೆ ತಿರುಗಿ, ತಪಾಸಿನ ಫಾಸುಲವಾಡಿ, ೬ ಆಣೆ ಪೀಕಂತ ಅದಕ್ಕೆ ಶಿಕ್ಕ ಹೊಡೆದರು. ಆದಾಗೆಕಂತ ಕಡಿಮೆ ಅದಲ್ಲ, ನೇಮಪಂತ ತಹಕೂಬಿ ಕೊಡಬೇಕಾದದ್ದು, ಅದು ಸಹ ಕೊಡಬಾರದೆಂಬದರಿಂದ ಹೀಗೆ ಮಾಡಿರಬಹುದು. ಕಲೆಕ್ಟರರಿಗೆ ವಿನಂತಿ ಮಾಡಿದರೆ-ಅರ್ಜಿ ಕೊಟ್ಟವರಿಗೆ, ತಾಲೂಕಿನಿಂದ ಅರು ಆಣೆ ಅಣೇವಾರಿಯಾಗಿದೆಂತಲೂ, ಅರ್ಜಿ ಕೊಡದಿದ್ದವರಿಗೆ, ಮೊದಲು ಯಾಕೆ ಅರ್ಜಿ ಕೊಡಲಿಲ್ಲವೆಂತಲೂ, ಬಾಯಿಕಟ್ಟಿ ಸುಮ್ಮಗೊಳಿಸಿದರು. ಪ್ರತ್ಯಕ್ಷ ಪೀಕು ತಗಿಸಿ ಅಣೇವಾರಿಯನ್ನು ಯಾರೂ ನಿಶ್ಚಯಿಸಲಿಲ್ಲ. ಪಂಚರ ಮದ್ದತಂತೂ ಕೊಳ್ಳಲಿಲ್ಲ. ಈ ದಯಿತರು ಸರಕಾರಕ್ಕೆ ಅವರಸ್ಸು ಬಂದುಗ್ಗ ವಾರಲೋನು ಕೆಂಟ್ಟು ಮುದ್ದತ್ತು ಮಾಡಿದ್ದರು. ಈ ಆ

ಪತ್ರಿಗೆ ಸರಕಾರವು ಸಹಾಯ ಮಾಡಲಿಕ್ಕೆ ನೋ?' ನೇಮಗಳ ಪಾಲನೆ ಅಂತಃಕರಣಕ್ಕೆ ಸರಿಯಾಗಿ ಮಾಡಬೇಕೋ ಧಾರ್ಮಿಕವಾಗಬೇಕೋ?' ಯೋಗ್ಯ ಫೀಕು ಬಗ್ಗದ್ದರಿಂದ ಜನರು ತಿರ್ವೆ ವಸೂಲಿ ಕೊಡಬಾರದೆಂದು ನಿಶ್ಚಯಿಸಿರುವರು. ಅಧಿಕಾರಿಗಳು ಪತ್ತಾಯ ಮಾಡುತ್ತಿದ್ದಾರೆ. ಅದ್ದರಿಂದ, ಮಾಮಲೇದಾರರು ಮಂಜಾಗ್ರತೆಯಿಂದ ತಿರ್ವೆ ವಸೂಲ ಮಾಡಬೇಕೆಂತಿದ್ದ ಪರಮೇಶ್ವರ ರಾಮ ಭಟ್ಟ ಗೋಳಿಗೋಡ, ಫಿಕಾರ ಮೆಲೂರ, ಮತ್ತು ಪರಶ ... ಸುಬ್ಬ ... ಕಿಚ್ಚ ಕೇಲ-ಪಿಕಾರ ಹಸರುಗೋಡ, ಇವರ್ ... ಪೀಕ ಎಷ್ಟು ಆಯಿತೆಂದು ಸರಕಾರದ ತರ್ಫೆಯಿಂದ ಪ್ರಾಸೀರ ನಡಿಸಿ, ಅವರ ಬಿಟ್ಟು ಕ್ಷೇತ್ರ ಮತ್ತು ಪೀಕು, ... ದ ವರ್ಷದ ಪೀಕು, ಲಾಗವಾದ ಖರ್ಚು, ಪಗ್ಗೆರ ಕುಲನಾಶ್ಯಕ ಕೋಷ್ಟಕ ಕೊಟ್ಟು, ತಾವು ನಿಶ್ಚಯಿಸಿದ ಆಕಾರಣಿಯನ್ನು ಕ್ಯಾಟೀತ ಮಾಡಲಾರರೋ?'

ಹೊನ್ನಾವರ — ಇಲ್ಲಿಯ ಮುನ್ಸಿಪಾಲ್ಟಿ ಇಲೆಕ್ಷನವು ಕಳೆದ ತಾ. ೧೨ ನೇದಕ್ಕೆ ಆಯಿತು. ಹೊಸ ಹೊಸ ಉಮೇದ್ವಾರರು ಆರಿಸಿ ಬಂದಿರುವರು. ಅದ್ದರಿಂದ ಮುನ್ಸಿಪಾಲ್ಟಿಯಲ್ಲಿ ಲೋಕಹಿತದ ಬಹಳ ಕೆಲಸಗಳಾಗುವವೆಂದು ಕಂಡುಬರುತ್ತವೆ.

ಇನಕಮ್ ಟೆಕ್ಸ ಇನಸ್ಪೇಕ್ಟರರು ಒಂದು ಸಾವಕಾರ ಜನರ ಲೆಕ್ಕ ತಪಾಸಣೆ ಕೆಲಸ ನಡೆದಿದೆ. ಇವರು ವ್ಯಾಪಾರಿಗಳ ಲೆಕ್ಕಗಳನ್ನು ಒಳ್ಳೇ ನಾಜೂಕ ರೀತಿಯಿಂದ ತಪಾಸ ಮಾಡುವದು ನೋಡಿದಲ್ಲಿ, ಇನಕಮ ಟೆಕ್ಸ ಕೊಡುವಷ್ಟು ಫಾಯಿದೆ ಆಗಿದ್ದವರಿಗೇನೇ ಖಾತ್ರಿ ಮಾಡಿಕೊಂಡು, ಅಕಣೀ ಮಾಡಿದ್ದಲ್ಲಿ ಮಾತ್ರ, ಇವರು ನಾಜೂಕ ರೀತಿಯಿಂದ ತಪಾಸ ಮಾಡಿದ್ದು ಸಾರ್ಥಕವಾಗುವದು.

ಶಿರ್ಶಿಯಲ್ಲಿ ದೇಶಭಕ್ತರ ಆಗಮನ.

ಈಗ ೧೫ ದಿವಸದ ಲಾಗ್ಯಾಯಿತು ಧಾರವಾಡದಿಂದ ಕೆಲ ದೇಶಭಕ್ತರು ಬರುವರೆಂಬ ಬಾತಮಿಯು ಊರೊಳಗೆಲ್ಲ ದಟ್ಟವಾಗಿ ಹಬ್ಬಿತ್ತು. ಅದರಂತೆ ಕಳೆದ ಗುರುವಾರ ತಾ. ೧೭-೨-೨೧ ನೇ ದಿವಸ ೩ ಘಂಟೆಗೆ ಸರಿಯಾಗಿ ಮೋಟಾರಿನ ಮೇಲೆ ದೇಶಭಕ್ತರ ಆಗಮನವಾಯಿತು. ಆ ವೇಳೆಗೆ ಮುಂಚಿತವಾಗಿಯೇ ಊರೊಳಗಿನ ಯಾವತ್ತು ಪ್ರಮುಖ ಜನರು ಕೂಡಿ ಊರ ಹೊರಗೆ ಹೋಗಿ ಸಮಾರಂಭದೊಡನೆಯೂ, ವಾದ್ಯಬಜಂತ್ರಿಯರೊಡನೆಯೂ, ಊರೊಳಗೆ ಸ್ವಾಗತ ಮಾಡಿ, ಕರಕೊಂಡು ಬಂದರು. ನಂತರ ಅದೇ ದಿವಸ ಹಾಗೂ ಅದರ ಮುಂದಿನ ಎರಡು ದಿವಸ ಬಿಡಕೇ(?) ಬೈಲಿನಲ್ಲಿ ೫ ಘಂಟೆಗೆ ಸಭೆಯು ಕೂಡಿಸಲ್ಪಟ್ಟಿತು. ವೇ|| ಮುದವೇಡಕರರೇ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು.

ವೇ|| ಮಳಿಯೇ ಇವರು ಪಂಜಾಬದ ಅತ್ಯಾಚಾರ, ಅಸಹಕಾರ, ಮತ್ತು ವಿಧ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ಬಿಡುವ ಅವಶ್ಯಕತೆ, ಹಾಗೂ ಈ ಸರಕಾರದ ಸಂಗತ ಸಹಕಾರ ಮಾಡುವವರ ಅಶಕ್ಯತೆ, ಇವೇ ಮೊದಲಾದ ವಿಷಯಗಳನ್ನು ಮನೋರಂಜಕವಾಗಿಯೂ ಜನರ ಮೇಲೆ ಪರಿಣಾಮವಾಗುವಂತೆಯೂ ಚರ್ಚಿಸಿದರು.

ವೇ|| ಹರ್ಡೀಕರ ಇವರು ಅತ್ಮನಿವೇದನ, ಅಸಹಕಾರಿತೆಯು ತನ್ನ, ಸ್ವದೇಶಿವ್ರತ, ರಾಷ್ಟ್ರೀಯ ಶಾಲೆ ಮತ್ತು ಗ್ರಾಮ ಪಂಚಾಯತನ, ಇವುಗಳ ಸ್ಥಾಪನೆಯ ವಿಷಯವಾಗಿ ಬಹಳ ಚನ್ನಾಗಿ ಭಾಷಣ ಮಾಡಿದರು. ಅವರು ಅಂದದ್ದೇನಂದರೆ, « ಹಿಂದುಸ್ಥಾನವು ಈಗ ದೊಡ್ಡದೊಂದು ತಪಸ್ಸನ್ನು ಆಚರಿಸುತ್ತಿದ್ದು ಅದರಲ್ಲಿ ಆತ್ಮಯಜ್ಞ ಮಾಡುವ ಪ್ರಸಂಗಳು ಮೇಲಿಂದ ಮೇಲೆ ಬರುತ್ತವೆ. ಅವುಗಳಿಗೆ ಭಾರತೀಯರು ಸೊಪ್ಪು ಹಾಕಬಾರದು ಹಿಂದುಸ್ಥಾನದ ಧ್ಯೇಯವು ಸ್ವರಾಜ್ಯವನ್ನಷ್ಟೇ ಗಳಿಸುವದಾಗಿರದೇ, ಈಗಿನ ರಾಕ್ಷಸೀ ವರ್ಗದ ಮದ್ದುಗುಂಡುಗಳ ಅಧಿಕಾರವನ್ನು ಕುಗ್ಗಿಸಿ, ಈ ಜಗತ್ತಿನಲ್ಲಿಯೇ ಆತ್ಮಬಲದ ಪ್ರತಿಷ್ಠಾಪನೆಯನ್ನು ಮಾಡುವದಾಗಿರುತ್ತದೆ '

ವೇ|| ಕ ಲಕರ್ಣಿಯವರು ಬ್ರಿಟಿಶರ ರಾಜ್ಯಾಡಳಿತದಲ್ಲಿ ಹಿಂದುಸ್ಥಾನವು ಅನುಭವಿಸಿದ ತರತರದ ಸಂಕಟಗಳು, ಅಸಹಕಾರಿತೆಯ ಅವಶ್ಯಕತೆ ಮತ್ತು ಗ್ರಾಮಪಂಚಾಯತನದ ಪುನರ್ಘಟನೆ, ಇವುಗಳನ್ನು ಸವಿಸ್ತರವಾಗಿ ವರ್ಣಿಸಿ ಹೇಳಿದರು. (ಮುಂದರಿಯುವದು)

ಕೆಲವು ಶಿಕ್ಷಕರ ದಿಗರ ಜಿಲ್ಲೆಗೆ ವರ್ಗಾವರ್ಗಿಯು.

ಈ ಕಳೆದ ಮೂರನೇ ವರ್ಷದ ಟ್ರೇನಿಂಗ ಶಿಕ್ಷಕರಿಗೆ ಏನೊಂದೂ ಅಪರಾಧವಿಲ್ಲದೆ, ಅಕಸ್ಮಾತ್ತಾಗಿ ಬಿಜಾಪೂರ ಮತ್ತು ಬೆಳಗಾವಿ ಸ್ಥಳಗಳಿಗೆ ವರ್ಗವಾದ ಸಂಗತಿ ಕೇಳಿ, ಸಖೇದಾಶ್ಚರ್ಯವಾಗುತ್ತದೆ. ವರ್ಗವಾದ ಶಿಕ್ಷಕರು (೧) ಗ ತಿ ಭಟ್ಟ (೨) ರಾ ನಾ ಹೆಗಡೆ (೩) ಸು. ದೆ ನಾಯ್ಕ ... . ಬೇರೆ ಜಿಲ್ಲೆಯಲ್ಲಿ ಕೆಲಸ ಮಾಡುವ ... ಕೊಟ್ಟಿಲ್ಲ... ೧ ನೇ ವರ್ಷದ ಶಿಕ್ಷಕರ ಬೇರೆ ಜಿಲ್ಲೆಯಲ್ಲಿ ಹೋಗಲಿಕ್ಕೆ ತಯಾರಿ ... ಅವರಿಗೆ ವರ್ಗದ ಕಹಿಮೆಯಿರುವ ... ಅಧಿಕಾರಿಗಳು ಏನೊಂದೂ ... ಸದ್ರಿ ೩ ನೇ ವರ್ಷದ ಶಿಕ್ಷಕರಿಗೆ ದಿಗರ ಜಿಲ್ಲೆಗೆ ವರ್ಗವಾಗಿದ್ದಾರೆ. ಇದು ಎಂಥ ಅನ್ಯಾಯದ ಬಲವು? ... ವ ಎಲ್ಲ ಶಿಕ್ಷಕರ ಮನಸ್ಸು ಕ್ಷೋಭಿಸದಿರದು. ಇದರ ಬಗ್ಗೆ ಜಿಲ್ಲಾ ಶಿಕ್ಷಕ ಸಂಘದವರು ವಿಚಾರ ... ರೋ? ... ಅಧಿಕಾರಿಗಳ ... ಬಗ್ಗೆ ಕ ಪರೆ..., ನೋಡಬೇಕು.

ಒಬ್ಬ ಶಿಕ್ಷಕ.

ಯಲ್ಲಾಪುರಕ್ಕೆ ಗವರ್ನರ ಸಾಹೇಬರ ಆಗಮನ.

ನಾ. ನಾ। ಗವರ್ನರ ಸಾಹೇಬರು ಮೊನ್ನೆ ಯಲ್ಲಾಪುರಕ್ಕೆ ಬಂದ ಸುದ್ದಿ, ಶಿಕಾರಿಯ ವೃತ್ತಾಂತ, ಸಾಹೇಬರ ... ಮನದ ಬಾತ್ಮಿ ಪಗೈರೆ ತಮ್ಮ ಪತ್ರದಲ್ಲಿ ಪ್ರಸಿದ್ಧವಾಗಿದೆ. ಆದರೆ, ಇವೆಲ್ಲಪ್ರತ್ಯಕ್ಷ ... ಇನ್ನೊಂದು ನ ಡೆದ ಸಂಗತಿಯು ತಮ್ಮ ಬಾತ್ಮೀದಾರರು ... ಈ ಪತ್ರವನ್ನು ಬರಕೊಂಡಿರುತ್ತೇನೆ

ಗವರ್ನರ ಸಾಹೇಬರು ಶಿಕಾರಿಯಿಂದ ತಿರುಗಿ ಬರುವಾಗ, ಒಂದು ತೋಟವನ್ನು ಕಂಡು, ಅದನ್ನು ನೋಡುವದಕ್ಕೆ ಒಳಗೆ ಹೊಕ್ಕಿದರು. ಅದನ್ನು ನೋಡುತ್ತ, ನೋಡುತ್ತ, ತಿರುಗಾಡುವಾಗ, ತೋಟಿಗನ ಮನೆಯು ಸಾಹೇಬರ ಕಣ್ಣಿಗೆ ಬಿತ್ತು. ಅದರೊಳಗಿನ ವಸ್ತುಗಳನ್ನು ನೋಡುವ ಇಚ್ಛೆಯನ್ನು ಸಾಹೇಬರು ದರ್ಶಿಸಲು, ಸಂಗಡ ಇದ್ದವರು ಒಪ್ಪಿಗೆಯನ್ನು ಕೊಟ್ಟರು. ಸಾಹೇಬರು ಮನೆಯೊಳಗಿನ ಮಣ್ಣಿನ ಗಡಿಗೆ, ಕಟ್ಟಿಗೆ ಸಾಮಾನು, ವಸ್ತ್ರಗಳು, ಇತರ ಉಪಕರಣಗಳನ್ನು ಬಾಗಿಲಿನೊಳಗಿಂದ ನೋಡಿದರು. ದಾ(?) ಜಮಾನೆಯಂಥ ಬಂಗಲೆಯೊಳಗೆ, ಸರದಾರರಂತೆ ಇದ್ದ ಈ ಸಾಹೇಬರು, ಆ ಹಳ್ಳಿಗನ ಮನೆಯನ್ನು, ಅದರೊಳಗಿನ ಒಡಕು-ಮುರುಕು ಸಾಮಾನುಗಳನ್ನು ನೋಡಿ ಬೆರಗಾದರು. ನಂತರ, ಮಾಲೀಕನಿಗೆ ಕರೆದು, « ಬೇಕಾದದ್ದು ಬೇಡೆಂದು, " ಸಾಹೇಬರು ಹೇಳಿದರು. ಮಾಲೀಕನು « ಕುರುಡನು ಎರಡು ಕಣ್ಣು " ಬೇಡುವಂತೆ, « ತನಗೆ ರೂಪಾಯಿಗೀಪಾಯಿಗಳೇನು ಬೇಡ, ಈ ತೋಟಕ್ಕೆ ಆರು ಎಕರೆ ಬೆಟ್ಟ ಕಡಿಮೆ ಬೀಳುತ್ತದೆ, ಅಷ್ಟೊಂದು ಕೊಡಿರಿ." ಎಂದು ಬೇಡಿದನು. ಸಾಹೇಬರು ಸವಿಸಾಪದ ಬೆಟ್ಟಕ್ಕೆ ಬೊಟ್ಟು ತೋರಿಸಿ, ಇದರೊಳಗಿಂದ ಸೊಪ್ಪು ಕಡದು ಉಪಯೋಗಿಸೆಂದು ಅನ್ನಲು. ಇದರೊಳಗಿನ ಸೊಪ್ಪು ಕಡಿವಕೆ, ಜಂಗಲ ಗುತ್ತಿಗೆ ಪತ್ರದಾಗಿ, ತನ್ನ ಕಲೆ ಹಾಕೇ ಕಡಕೊಂಡರಾಗುವ ... ರೋಟಿವೆ ಮಾಲೀಕನು ನಿಜಸ್ಥಿತಿಯನ್ನು ಧೈರ್ಯತನದಿಂದ ನಿವೇದಿಸಲು, ಸಾಹೇಬರು ನಕ್ಕು « ನೀನು ಬೇಡಿದ ಆರು ಎಕರೆ ಬೆಟ್ಟ ಕೊಟ್ಟಿದ್ದೇನೆ " ಎಂದು ವಚನವಿತ್ತರು ಮರುದಿನ, ಮಾಮಲೇದಾರ ಸಾಹೇಬರು ಹೋಗಿ ಮೋಜಣಿ ಮಾಡಿ, ಬೆಟ್ಟ ಸ್ವಾಧೀನ ಕೊಟ್ಟರಂತೆ !

ಈ ವಿಷಯವು ಜಂಗಲಖಾತೆಯ ಘೋರಣದಿಂದ ಪೀಡಿತವಾದ ಈ ಜಿಲ್ಲೆಗೆ ಆಶಾಜನಕ ಸಂಗತಿಯಾಗಿರುವದು ವಿ। ಮರುಷಿಯವರು ಹಿಂದೆ ತಮ್ಮ ಪತ್ರದಲ್ಲಿ ಸೂಚಿಸಿದಂತೆ, ನಮ್ಮ ಜಂಗಲ ದುಃಖದ ನಿಜ ಪ್ರದರ್ಶನವನ್ನು ಸಾಹೇಬರ ಮುಂದೆ ಹೂಡಿದರೆ, ಬಹಳೇ ಲಾಭವಾಗುವದ, ಸುಳಿವಾಗ ಪದೆಂದು ಹೇಳಲು ಅಡ್ಡಿಯಿಲ್ಲ. ಸಾಹೇಬರ ಸದ್ಯಕ್ಕೆ ಕಾರವಾರಕ್ಕೆ ಬರುವವರಿದ್ದಾರೆಂದು ತಿಳಿದ ತ್ತದೆ ಆಗ ಈ ಉಪಕ್ರಮವನ್ನು ಮುಖಂಡರು ಕೈಕೊಳ್ಳುವರೆಂದು ನಂಬಿರುವೆನು

ಯಲ್ಲಾಪುರ,
ತಾ. ೧೯-೨-೨೧ } ಪ್ರೇಕ್ಷಕ.

೩ನೇ ಪಾನಿನಮೇಲಿಂದ ಮುಂದರಿಸಿದ್ದು]

ಸ ... ಕರ ಪಡುವ ವರ್ತಮಾನವು ಕೇಳಿತು. ಇಷ್ಟರೊಳಗೆ ಸಭೆ ... ಯುವರ ಲೇಕ್ಚರಳಿಗೆ ಪ್ರಾರಂಭವಾಯಿತು. ರಾ। ವಿಶ್ವನಾಥ ಅನಂತ ಹಗಡೆಯವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು ರಾ। ನಿರಾವ ಲಕ್ಷ್ಮಣರಾವ ಕುಲಕರ್ಣಿಯವರು ಅಸಹಕಾರಿತೆಯನ್ನು ಕೈಕೊಳ್ಳುವ ಉದ್ದೇಶವನ್ನು ಸೂಚಿಸುವಾಗ, ಅಕಸ್ಮಾತ್ ಮಾಮಲೇದಾರ, ಪಾಟೀಲ, ಶಾಲಾ ಮಾಸ್ತರ ಮೊದಲಾದ ೩-೮ ಜನರ ಸಮೂಹವು ಒಳಹೊಕ್ಕಿತು. ಆದರೆ, ಇವರ ಸ್ವಾಗತ ಯಾರೂ ಮಾತ ... ಲ್ಲ ಎದ್ದು ನಿಂತವರು, ಯಾರೂ ಕಾಣಲಿಲ್ಲ. ಇವು ಒಳಹೊಕ್ಕಿದ ಕೂಡಲೇ, ಸಭೆಯಲ್ಲಿ ನೃಪದ ಭಾಷಣವಾಗುವದೆಂದ ಸಾಹೇಬರು ತಮ್ಮಷ್ಟಕ್ಕೆ ತಿಳಿದಿದ್ದರು. ಆದರೆ, ... ಯಲ್ಲಿ ವಿ। ಕೆಡೆಲರು ಮಾಡಿದ ನೀಚಕೃತ್ಯದ ವಿಷೇವವು ಒಳ್ಳೇ ಭರದಿಂದ ಸಾಗಿತು. ಅನಂತರ ಪೀಕಪಾಹಣಿಯ ಸಂಬಂಧ ಕ್ಯಾನುಳಾಗ, ಮಾಮಲೇದಾರ ವಗೈರೆ ... ವ ಸುಳ್ಳು ಬರುವಣಿಗೆಯ ಸಂಬಂಧ ಭಾಷಣವು ಸಾಗಿತು ಮಾಮಲೇದಾರರು ಅಚೆ ಈಚೆ ನೋಡುತ್ತ, ಎಲ್ಲಿ ಕೂಡ್ರುವದೆಂಬುದು ತಿಳಿಯದೆ, ಒಂದು ಕಡೆಯಲ್ಲಿ ಒಪೆಯಮೇಲೆ ಕುಳಿತುಕೊಂಡರು. ರಾ। ನಿರಾಯರ ಅಸಹಕಾರಿತೆಯ ಒಳ್ಳೇ ಸ್ಫೂರ್ತಿದಾಯಕ ಭಾಷಣವು ಮಾಡುತ್ತಿರುವಾಗ, ಸಾಹೇಬರು ಒಂದು ಪ್ರಶ್ನೆಯನ್ನು ಮಾಡಿದರೂ, ಆ ಪ್ರಶ್ನಕ್ಕೆ ಜವಾಬು ಯಾರೂ ಕೊಡಲಿಲ್ಲ. ಅನಂತರ ರಾ। ಗೋವಿಂದ ದುತ್ತಪ್ಪಾ ನಾಡಕರ್ಣಿ (ಬಾಪ್ಟಿಸ್ಟ ಇಂಗ್ಲೀಷ ಶಾಲಾ ಮಾಸ್ತರ ಅಡಸೂರ) ಇವರು ಸರಕಾರದ ನ್ಯಾಯ - ಅನ್ಯಾಯವರ್ತನದ ಸಲುವಾಗಿ, ಜನರಿಗೆ ಒಳ್ಳೇ ಜ್ಞಾನವನ್ನು ಮಾಡಿಕೊಟ್ಟರು. ಆ ಮೇಲೆ ರಾ। ಗಣಪತ ಪಾಂಡುರಂಗ ಕುಲಕರ್ಣಿಯವರು ಅಸಹಕಾರಿತೆಯ ಸಮ್ಮಂಧ ನಾಗಪೂರ ರಾಷ್ಟ್ರೀಯ ಸಭೆಯ ಮತವಂತೆ, ಠರಾವು ಪಾಸ ಮಾಡುವರೆ, ಈಗ ರಾತ್ರಿಯು ಬಹಳೇ ಆದ್ದರಿಂದ, ಯಾವತ್ತೂ ಜನರು ಮುಂದಿನ ಆದಿತ್ಯವಾರ ಸಭೆಗೆ ಬರಬೇಕೆಂದು ವಿನಂತಿ ಮಾಡಿಕೊಂಡರು ಕಡೆಗೆ ಅಧ್ಯಕ್ಷರ ಭಾಷಣಗಳಾಗಿ ವಂದೇ ಮಾತರಮ್, ಮಹಾತ್ಮಾ ಗಾಂಧಿ ಮಹಾರಾಜಕೀಜಯ್, ಲೋಕಮಾನ್ಯ ಟಿಳಕ ಮಹಾರಾಜಕೀ ಜಯ್, ಹಿಂದೂ-ಮುಸಲ್ಮಾನಕೀ ಜಯ್, ಎಂಬ ಜಯಘೋಷಗಳಾಗಿ, ಸಭೆಯು ವಿಸರ್ಜನೆಯಾಯಿತು. ಸಾಹೇಬರು ಮಾತ್ರ ಒಂದಸಾರಿಗೆ ಸುಂಕವಿಲ್ಲ ಎಂಬಂತೆ, ಹೊರಟು ಹೋದರು. ಆದರೂ, ನಮ್ಮ ಹಳ್ಳಿವಾಡ ಜನರು ಈತರದ ಅಸಹಕಾರಿತೆಯನ್ನು ಕೈಕೊಂಡದ್ದಕ್ಕೆ ನಾನು ಅವರ ಆಭಾರಿಯಾಗಿರುತ್ತೇನೆ. ಬಾಕಿ ವರ್ತಮಾನವು ಮುಂದಿನ ಆದಿತ್ಯವಾರ ನಡೆದದ್ದು ನೋಡಿ, ಹಿಂದಿನಿಂದ ನಿವೇದಿಸುವೆನು.

ಅಡಸೂರ,
ತಾ ೧೪-೨-೨೧ } ಒಬ್ಬ ಪ್ರೇಕ್ಷಕ.

...ರವಾರ — ಸುಂಕೇರಿಗುಲ್ಲಿ ಒಂದು ಕೊ...ರೇಟಿವ ಕ್ರೆಡಿಟ ಸೊಸೈಟಿ ಸ್ಥಾಪನೆಯಾಗಿ, ೮ ಜ...ದೊಂದು ವ್ಯವಸ್ಥಾಪಕ ಕಮಿಟಿ ನೇಮಿಸಿದರು ...ಗೆಯಲ್ಲಿ ಕಾರವಾರ ಖಿಲಾಫತ ಕಮೀಟಿ ವತಿಯಿ...ಶ್ರೀ॥ ಶಂಕರರಾವ ದೇಸಾಯಿ ಇವರ ಅಧ್ಯಕ್ಷತೆ...ಲ್ಲಿ ಸಭೆಗೂಡಿ, (೧) ನಾಗಪೂರ ರಾಷ್ಟ್ರೀಯ ಸ...ಯ ಅಸಹಕಾರಿತೆಯ ಠರಾವು ಮಾನ್ಯತೆಯು. (೨) ...ಯಲ್ಲಿ ಕೆಲವ ಶಾಹಿಯ ಅತ್ಯಾಚಾರ ನಿಷೇಧಪ... ಮತ್ತು ಬಂಗಾಲ ಅನ್ಯಾಯಗಳನ್ನು ಸ್ವಾವಲಂಬನ...ದನ್ನೇ ಸಿರಾಕರಿಸುವ ಠರಾವುಗಳು ಪಾಸಾದವು

...ಸ ಬೋಧ! "ಓಂ" ಹೊಸಬೋಧ"

ಗುಣ ಬಾರದಿದ್ದರೆ ಹಣಪರತು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ನಮಸ್ಕಾರಗಳು ತರುವಾಯ — ಇದೇ ಮೇ ತಿಂಗಳ ೧೯,೨೦ ೨೧ ನೇಯ ತಾರೀಖುಗಳಲ್ಲಿ ಚಿಕ್ಕ ಮಂಗಳೂರಿನಲ್ಲಿ ನೆರೆಯುವ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ, ಕರ್ನಾಟಕದ ಅಭ್ಯುದಯಕ್ಕೋಸ್ಕರ ಹೋರಾಡುತ್ತಿರುವ ದೈನಿಕ, ಸಾಪ್ತಾಹಿಕ, ಪಾಕ್ಷಿಕ, ಮಾಸಿಕ, ತ್ರೈಮಾಸಿಕ ಕನ್ನಡಪತ್ರಿಕೆಗಳ ಹಿಂದೆ ಎಷ್ಟಿದ್ದವು ಹಾಗು ಈಗ ಎಷ್ಟಿರುತ್ತವೆ ಎಂಬದನ್ನು ಕನ್ನಡಿಗರ ನಿದರ್ಶನಕ್ಕೆ ತಂದು ಕೊಡಬೇಕೆಂದು ‘ಪತ್ರಿಕೆಗಳ ಪ್ರದರ್ಶನ’ವನ್ನು ಮಾಡುವವರಿದ್ದೇವೆ ಈ ಪ್ರದರ್ಶನದಿಂದ ಪತ್ರಿಕೆಯ ಪರಿಚಯವು ಸಮಸ್ತ ಕನ್ನಡಿಗರಿಗೂ ಉಂಟಾಗಿ ಆ ಪತ್ರಿಕೆಯ ಪ್ರಸಾರಕ್ಕೂ ಅನಾಯಾಸವಾಗಿ ಸಹಾಯ್ಯವಾಗುವದು ಆದುದರಿಂದ ಪತ್ರಿಕಾಸಂಪಾದಕರು ತಮ್ಮ ತಮ್ಮ ಪತ್ರಿಕೆಯ ಮಾದರಿಯ ಸಂಚಿಕೆಯೊಂದನ್ನು ಕೆಳಗೆ ಒರೆದ ವಿಳಾಸಕ್ಕೆ ಮೇ ತಿಂಗಳ ೫ ನೇ ತಾರೀಖಿನೊಳಗಾಗಿ ಕಳಿಸಿ ಕೊಡಬೇಕೆಂದು ಪ್ರಾರ್ಥನೆ ಇದೂ ಪತ್ರಿಕೆಯ ಚರಿತ್ರೆಯನ್ನೂ ಬರೆದು ನಮಗೆ ತಿಳಿಸಬೇಕೆಂದು ನಮ್ಮ ವಿಜ್ಞಾಪನೆ. ತಮ್ಮ,

ಕರ್ನಾಟಕ ಸೇವಕರಾದ

ಪತ್ರ ಕಾರ್ಯಾಲಯ ಕಾಮನಕಟ್ಟಿ ಧಾರವಾಡ ತಾ॥ ೨೨-೪-೧೯೨೧	ನಾ. ಶ್ರೀ. ರಾಜಪುರೋಹಿತ ದ ರಾ ಬೇಂದ್ರೆ

ಲೇಖಕರಿಗೆ-ಬಾತ್ಮೀದಾರರಿಗೆ.

ವಿನಯಪೂರ್ವಕ ಅರಿಕೆ ಮಾಡುವದೇನಂದರೆ— ಲೇಖಗಳು ಬಾತ್ಮಿಗಳು ಅತಿಶಯ ವಿಲಂಬವಾಗಿ ಬಂದರೆ, ಅವುಗಳನ್ನು ಹಾಕಿ, ನಿಶ್ಚಯಿಸಿದ ವಾರಕ್ಕೆ ಪ್ರಸಿದ್ಧಿಸಲಿಕ್ಕೆ ಬಹಳೇ ಅಡಚಣೆಯಾಗುತ್ತದೆಂಬುದನ್ನು ಲಕ್ಷಕ್ಕೆ ತಂದು, ಅವರು, ತಮ್ಮ ಲೇಖಗಳನ್ನು ಸೋಮವಾರಕ್ಕೆ ಮುಟ್ಟುವಂತೆಯೂ, ಬಾತ್ಮಿಗಳನ್ನು ಬುಧವಾರಕ್ಕೆ ತಪ್ಪದೆ ಮುಟ್ಟುವಂತೆಯೂ, ಕಳುಹಿಸಬೇಕಾಗಿ ಅರಿಕೆ ಮಾಡುವೆವು ಇದಕ್ಕೆ ತಪ್ಪಿ ಬಂದ ಲೇಖ-ಬಾತ್ಮಿಗಳು ನಿರುಪಾಯದಿಂದ ಮುಂದೆ ಇಡಲ್ಪಡುವವು

— ಮೆನೇಜರ ಕಾ. ವೃ.

ಕಾನಡಾವೃತ್ತ.

ಗುರುವಾರ, ತಾರೀಖು ೨೮ ನೇ ಎಪ್ರಿಲ ೧೯೨೧

ಪರಿಷತ್ತಿನ ಬಗೆ ಏನು ?

ಎಪ್ರಿಲ ತಿಂಗಳಂತೂ ಮುಗಿಯುತ್ತ ಬಂತು ಆದರೆ ನಮ್ಮ ಜಿಲ್ಲಾ ಪರಿಷತ್ತಿನ ಸುದ್ದಿಯು ಏನೂ ಕೇಳಿ ಬರುವದಿಲ್ಲ ಕಳೆದ ವರ್ಷ ಮೇ ತಿಂಗಳಲ್ಲಿ ಕಾರವಾರ ಜಿಲ್ಲಾ ಪರಿಷತ್ತು ನೆರೆದ ನಂತರ, ಇಂದಿನ ತನಕ ಜನರ ರಾಜಕೀಯ ಧೋರಣದೊಳಗೆ ಎಷ್ಟೋ ಸ್ಥಿತ್ಯಂತರವಾಗಿದೆ, ಆದಕ್ಕಾಗಿ, ನಮ್ಮ ರಾಜಕೀಯ ಚಳವಳಿಯು ಮತ್ತು ಲೋಕಶಿಕ್ಷಣದ ಕಾರ್ಯಕ್ರಮವನ್ನು ಎಷ್ಟರಮಟ್ಟಿಗೆ ತಿದ್ದುಪಡಿಸಬೇಕಾಗಿದೆ, ಎಂಬುದನ್ನೆಲ್ಲ ನಿರ್ಣಯಿಸಲಿಕ್ಕೆ ಮತ್ತು ಇತರ ಜಿಲ್ಲೆಗಳಲ್ಲಿ ನಡೆದ ಉಪಕ್ರಮದ ಅನುಭೋಧದಿಂದ, ಜನರಿಗೆ ಒಹು ಸಮ್ಮತವಾದ ದಾರಿಯನ್ನು ತೋರಿಸಲಿಕ್ಕೆ ಜಿಲ್ಲಾ ಪರಿಷತ್ತನ್ನು ವಿಲಂಬವಾಗದೆ ಕೂಡಿಸತಕ್ಕದ್ದೆಂದು ಇನ್ನು ಹೇಳಬೇಕೇನು ? ಇಂಥ ಕರ್ತವ್ಯ ಭರದ ಪರಿಸ್ಥಿತಿಯಲ್ಲಿ ನಮ್ಮ ಪರಿಷತ್ತಿನ ಬಗೆ ಏನು' ಎಂದು ಕೇಳಬೇಕಾದದ್ದು ದ ಪ್ರಾಪ್ತವು

ಈಗಿನ ಕಾಲದಲ್ಲಿ ರಾಜಕೀಯ ಚಳವಳವು ಬರದಿಂದ ಮುಂದರಿಯುತ್ತಿರುವಾಗ, ಅನೇಕ ಸಾರ್ವಜನಿಕ ಪ್ರಶ್ನೆಗಳನ್ನು ಹೊಸ ಧೋರಣದಂತೆ ಬಿಡಿಸುವದು ಅವಶ್ಯಕವಾದಾಗ ನಮ್ಮ ಸ್ಥಾನಿಕ ಕಷ್ಟ-ಸಂಕಷ್ಟಗಳನ್ನು ಸ್ವಾಭಿಮಾನದ ಮತ್ತು ಸ್ವಾವಲಂಬನದ ಹೊಸ ಉಪಾಯಗಳಿಂದ ದೂರಪಡಿಸಿಕೊಳ್ಳಬೇಕಾದಾಗ ಜನರ ನಿಜವಾದ ಪ್ರತಿನಿಧಿಗಳು ಒತ್ತಟ್ಟಿಗೆ ಕೂಡಿ, ತಮ್ಮ ವಿಚಾರಗಳ ಮಂಥನ ಮಾಡಿ, ಜನರಿಗೆ ಮಾರ್ಗದರ್ಶಕವಾಗುವ ನಿರ್ಣಯಗಳನ್ನು ಇನ್ನು ಬೇಗನೆ ಜಾಹೀರಪಡಿಸಬೇಕಾಗಿಲ್ಲವೇ ? ಇಂಥ ಮಹತ್ವದ ದೇಶಕಾರ್ಯದಲ್ಲಿ ಮೈಗಳ್ಳತನದಿಂದಾಗಲಿ, ಮನೋದೌರ್ಬಲ್ಯದಿಂದಾಗಲಿ, ಹಿಂದೆ ಮುಂದೆ ನೋಡುತ್ತ ಕೂಡ್ರುವದು ಆತ್ಮಘಾತಕಿ ಧೋರಣವಾಗುವದಲ್ಲವೇ ? ಕೋಳಿ ಕೂಗಿತು ಎಂದು ಹೇಳಲು ಇನ್ನು ಅವಕಾಶವಿಲ್ಲ ಎಂದೋ ಬೆಳಗಾಗಿ, ಬೆಳಕೆಲ್ಲ ಇಡೀ ಭರತಖಂಡದಲ್ಲಿ ಪ್ರಸರಿಸುತ್ತಿದೆ ನಾವು ಮಾತ್ರ ನಾಲ್ಕು ದಿಕ್ಕುಗಳನ್ನು ಪರದೆಗಳಿಂದ ಮುಚ್ಚಿಟ್ಟು ಕತ್ತಲೆಯೊಳಗೆ ನಿದ್ರೆ ಮಾಡುತ್ತಿದ್ದೇವೆ [illegible]

[illegible]

[illegible]

[illegible] ಎರಡನೇ ಉಪದೇಶವೂ ತ್ರಿಶಂಕುವಿನಂತೆ ಅಂತರಾಳದಲ್ಲಿ ನಿಂತಿದೆ ಅದರ ಬಗ್ಗೆ ಏನೆಂದು ಯಾರಿಗೂ ಕೇಳಬೇಕಾಗಿದೆ ತೀರ್ಯ ಮ ಬಂದರು ಕೊಟ್ಟ ಆಶ್ವಾಸನೆಯು ಹಾಗು ದುರ್ದೈವದಿಂದ ಮಾತು ಕೊಟ್ಟರು, ವಚನ ಕೊಡಲಿಲ್ಲ" ಎಂಬಂತೆ ಆದದ್ದರಿಂದ, ಈ ಗತಿಯಾಗಿದೆ ಇನ್ನು ಯಾರಿಗಾದರೂ ದಂಪನೆ ಕೊಡುತ್ತ ಕುಳಿತುಕೊಳ್ಳಲು ಅವಕಾಶವಿಲ್ಲ ಬುದ್ಧಿಪೂರ್ವಕವಾದ ದೇಶಕಾರ್ಯಕ್ಕೆ ಯಾವದೇ ಉಪಾಯದಿಂದ ಭುಜವನ್ನು ಕೊಟ್ಟು, ಅದನ್ನು ಏಳಿಸಲೇ ಬೇಕು ಹೊನ್ನಾವರದಲ್ಲಿ ಜಿಲ್ಲಾ ಕಾಂಗ್ರೆಸ ಕಮಿಟಿಯು ಸ್ಥಾಪನೆಯಾಗಿದೆ ಇದೊಂದು ಬಹಳೇ ಸುದೈವದ ಸಂಗತಿಯು. ಜನರ ಕಣ್ಣುಗಳೆಲ್ಲ ಇನ್ನು ಹೊನ್ನಾವರ ಕಮಿಟಿಯ ಕಡೆಗೆ ತಿರುಗಿ ನಿಂತಿರುವವು ಈಗಿನ ಅಕಲ್ಪಿತ ಪರಿಸ್ಥಿತಿಯೊಳಗೆ ಅಸಾಧ್ಯವೆಂದು ಕಾಣುವ ಎರಡನೇ ಉಪದೇಶವು, ಸಾಧ್ಯವಾಗಬೇಕಾದರೆ, ಇದೇ ಕಮಿಟಿಯ ಕೈಯಿಂದ ಅದು ಆದೀತು ಮೊದಲನೆಯ ಅಧಿವೇಶನದಲ್ಲಿ ಆರಿಸಲ್ಪಟ್ಟ ಜಿಲ್ಲಾ ಸಭೆಯ ಕಾರ್ಯಕಾರಿ ಕಮಿಟಿಯು ಹೊಸ ಕಮಿಟಿಗೆ ತನ್ನ ಮನಃಪೂರ್ವಕ ಸಹಕಾರಿತೆಯನ್ನು ನೀಡುವದೆಂದು ನಾವು ನಂಬಿರುವೆವು. ಪ[illegible]ಜ, ಜಿಲ್ಲೆಯ ಕಾರ್ಯವನ್ನು ಹ್ಯಾಗೂ ಮ[illegible] ಮುಂದರಿಸಿದ ಹೊರತು ಗತ್ಯಂತರವಿಲ್ಲ. [illegible]ಸ ಮನ್ಯಂತರದೊಳಗೆ ಒಳಗಿನ ಸಹಕಾರಿತೆಯು ಪರಿಪೂರ್ಣವಾಗಿದ್ದ ಹೊರತು ಹೊರಗಿನ ಅಸಹಕಾರಿತೆಯು ಫಲಪ್ರದವಾಗ[illegible] ಆದ ಕಾರಣ ಒಳಗಿನ ಸಹಕಾರಿತೆಗ[illegible] ಜಿಲ್ಲೆಯ ಪ್ರತಿನಿಧಿಗಳ ಸಮ್ಮೇಲನವು [illegible] ಅತ್ಯವಶ್ಯಕವಾಗಿರುವದು

ಈಗ ಸದ್ಯಕ್ಕೆ ನಡೆದ ಜಂಗಲ ಕಮಿಟಿ[illegible] ಉಪಕ್ರಮದಿಂದ ಕೆಲವರಿಗೆ "ನೀವು ಪ್ರ[illegible]ಣವನ್ನು ಸಾಗಿಸಿರಿ, ನಾವು ಹೊಲಕ್ಕೆ ಹೋ[illegible] ಬರುತ್ತೇವೆ ಎಂಬಂತೆ ಆಗಿದೆಂದು, ನಾ[illegible] ಒಪ್ಪಿವು ಇಂದಿವರ ಹೊಲವು ಉತ್ತಮವಾ[illegible] ಬೆಳೆದು, ಹೊಲ ತುಂಬ ಬೆಳೆಯು ಬೇಡಬೇ[illegible]ದು ಕೇಳಿದರೂ ಅವರ ಉಗ್ರಾಣದೊಳಗೆ ಸ[illegible]ರುವದೆಂದು ನಮಗೆ ತೋರುತ್ತಿದೆ ಲೋಕಮ[illegible]ವನ್ನು ದಿಕ್ಕು ತಪ್ಪಿಸಿ ಉದ್ಧಾರಿಗೆ ಬಯ್ಯು[illegible] ಕಮಿಶನುಗಳ ಸಮರಸಾಮಗ್ರಿ, ಉದ್ದೇಶ[illegible] ನಮ್ಮಲ್ಲಿ ಇಷ್ಟರೊಳಗೆ ಕೆಲ ಮಟ್ಟಿಗೆ ಸ[illegible]ವಾಗಿರೆ ಈ ಮೋಹಿನಿಯಿಂದ, ಜಿಲ್ಲಾ ಪ[illegible]ತ್ತಿನ ಕಾರ್ಯಕ್ಕೆ ತೊಂದರೆಯಾಗುವದೆಂ[illegible] ಅಂಜಿ ಪ್ರಯೋಜನವಿಲ್ಲ ಲೋಕಹಿತದ ಸ[illegible]ಂಕಲ್ಪಗಳು ಎಂದೂ ಫಲಿಸದಿರುವದಿ[illegible] ಮೋಹಿನಿಯು ಉಪಾಸಕರಿಗೆ, ಅರ್ಜುನ[illegible] ಎಂಬಂತೆ, ಕಾಂಗ್ರೆಸಿನ ಹೊಸ ಘಟನೆ[illegible] ಹಿಡಿ ಸೇರಲಿಕ್ಕೆ ಮುಕ್ತ ದ್ವಾರವೇ ಇ[illegible] ಯಾದಾಗಿ ಸಹಕಾರಿತೆಯನ್ನು ಕೊಡುವ[illegible]ದೆ ಅದಂತೆ ಆತ್ಯಾನಂದಕರವು, ಅತಿ ಸ[illegible]ತ್ಯವು. ವ್ಯಕ್ತಿಗಳ ಆತಂಕದಿಂದ ಸಾರ್ವಜನಿಕ ಕಾರ್ಯವು ಇನ್ನೇನು ತಡೆಯದು ಒಟ್ಟಿಗೆ, [illegible]ಲ್ಲ ತೊಂದರೆಗಳನ್ನು ಪರಿಹರಿಸಿಕೊಂಡು, ಪ[illegible]ಷತ್ತಿನ ನಾವೆಯು ಕಾರವಾರ ಬಂದರಕ್ಕೆ ಮು[illegible]ಟ್ಟದ್ದು, ಅಲ್ಲೇ ಮುಣುಗಿಸಗೊಡದೆ, ಕುಶಲ[illegible]ಯಿಂದ, ಮೇ ತಿಂಗಳಲ್ಲಾದರೂ, ಹೊನ್ನಾವರ ಬಂದರಕ್ಕೆ ಒಯ್ದು, ಇಷ್ಟ ಕಾರ್ಯವನ್ನು ಕೊನೆಗಾಣಿಸಬೇಕೆಂದು, ಮುಖಂಡರಿಗೂ, [illegible]ಲ್ಲ ದೇಶಬಾಂಧವರಿಗೂ, ಕಾರವಾರ ಕಮಿಟಿಗೂ ಹೊನ್ನಾವರ ಕಾಂಗ್ರೆಸ ಕಮಿಟಿಗೂ ನಮ್ಮ ಆಗ್ರಹದ ಅರಿಕೆ ಇರಲಿ. ಪರಿಷತ್ತಿನ ಬಗೆ ಏನೆಂಬ ಸಮಸ್ಯೆ ಅದನ್ನು ನೆ[illegible]ವೇರಿಸಿ, ಉತ್ತರ ಕೊಡಬೇಕೆಂಬುದೇ ಕಾ[illegible]ರ್ಯವು

ಸ್ಫುಟ ಸೂಚನೆಗಳು.

ಜಂಗಲ್ ಕಮಿಶನ್ನ ವಿಷಯ ಎಲ್ಲ ಸಂಬಂಧಕ ವಿಚಾರಗಳನ್ನು ಮೂರು ಅಗ್ರಲೇಖಗಳಲ್ಲಿ ನಾವು ಪ್ರಕಟಿಸಿರುವಾಗ, ಮತ್ತೆ ಈ ವಿಷಯದ ಚರ್ಚೆ ವಿವರಣವನ್ನು ಮಾಡುವ ಅವಶ್ಯಕತೆಯುಂಟೆಂದು ನಮಗೇನು ತೋರುವದಿಲ್ಲ. ಬರೇ ಅಸಹಕಾರಿತೆಯ ದೃಷ್ಟಿಯಿಂದ ಈ ವಿಷಯವನ್ನು ನಾವು ಪರ್ಯಾಲೋಚಿಸಿಲ್ಲ. ವ್ಯಾಪಕ ದೃಷ್ಟಿಯಿಂದಲೇ ಅದನ್ನು ಚರ್ಚಿಸಿರುವೆವು. ಕಮಿಶನಿನಿಂದ ನಮಗೆ ಹಿತವಾಗುವದೋ, ಅಹಿತವಾಗುವದೋ, ಇದೇ ನಮ್ಮ ಮುಂದಿನ ಪ್ರಶ್ನೆಯು. ಹಿತವಾಗುವದಿದ್ದರೆ, ರಾಷ್ಟ್ರದ ಅಪೇಕ್ಷೆಯನ್ನು ಮುರಿದರೆ, ಒಂದು ಕಡೆಯಿಂದ ಇಲ್ಲವೆ ಸಂಕುಚಿತ ಸ್ವಾರ್ಥ ದೃಷ್ಟಿಯಿಂದಾದರೂ ನಮ್ಮ ಅಪರಾಧವು ಕ್ಷಮ್ಯವಾದೀತು. ಇಂಥ ಸ್ವಾರ್ಥವು ಕೂಡ ಸಾಧಿಸುವದು ಅಲ್ಪ ಪ್ರಮಾಣದಿಂದ ಸಹ ಶಕ್ಯವಿಲ್ಲೆಂದು, ನಮ್ಮ ಪ್ರಮಾಣಿಕ ಮತವಿದೆ. ಹೀಗಿದ್ದಾಗ ಕಮಿಶನಿನ ಕೂಡ ಸಹಕಾರಿತೆಯನ್ನು ಆಚರಿಸೆಂದು ನಮ್ಮಿಂದೇನು ಹೇಳಲಿಕ್ಕೆ ಆಗದು. ಪ್ರತಿಯೊಬ್ಬನಿಗೆ ಅವರವರ ಸದಸದ್ವಿವೇಕ ಬುದ್ಧಿಯು ಸೂಚಿಸಿದಂತೆ, ವರ್ತಿಸುವದು ಅವರ ಸ್ವಾತಂತ್ರ್ಯವು. ನಾವು ಯಾವ ಧರ್ಮವನ್ನು ಸ್ವೀಕರಿಸಬೇಕೆಂದು ಒಬ್ಬರೂ ನಮ್ಮೊಬ್ಬರಿಗೆ ಹೇಳುವ ಮಾತು ಇವರೊಳಗಿಲ್ಲ. ತನ್ನ ಸ್ವಾಭಿಮಾನವನ್ನೂ, ಸ್ವಾವಲಂಬನವನ್ನೂ, ವಿಚಾರ ಸ್ವಾತಂತ್ರ್ಯವನ್ನೂ ಕಳಕೊಳ್ಳದೆ, ವರ್ತಿಸಲಿಕ್ಕೆ ಸಹಕಾರಿತೆಯು ಫಲದಾಯಕವಾಗುವದೋ, ಅಸಹಕಾರಿತೆಯು ಫಲದಾಯಕವಾಗುವದೋ, ಎಂಬುದು ನಿಮ್ಮ ವಿವೇಕ ಬುದ್ಧಿಗೆ ಕೇಳಿ, ವರ್ತಿಸಿರಿ. ಹೆಚ್ಚೇನು ನಾವು ಈಗ ಹೇಳುವದಿಲ್ಲ.

೨ ಈ ಕಮಿಶನಿನ ವಿಷಯವಾಗಿ, ಇಷ್ಟು ದಿವಸ ಮೂಕ ವೃತ್ತಿಯನ್ನು ತಾಳಿದ, ನಮ್ಮ ಸ್ಥಾನಿಕ ವ್ಯವಸ್ಥೆಯ ಬಂಧುಗಳು. ಕಟ್ಟಕಡೆಗೆ ನೊಣ್ಣ ಎರಡು ಮಾತುಗಳನ್ನು ನುಡಿಯುವ ಸಾಹಸವನ್ನು ಮಾಡಿತು. ಅದರ ವಿಚಾರಸರಣಿಯು ಹಿಡಿ-ಬಿಡು ಧೋರಣದ ಅತ್ಯುತ್ತಮ ಮಾದರಿಯು ಎಂದು ಯಾರಿಗೂ ಕಾಣುವದು. ಧರ್ಮವು ಅಸಹಕಾರಿತೆಯ ಹಾದಿಗೆ ಹೋಗಲಿಕ್ಕೆ ಹೆದರಿ, ಅದಕ್ಕೆ ಹೋಗುವ ಧೈರ್ಯವು, ಅದಕ್ಕೆ ಸಾಲುವದಿಲ್ಲ. ಈ ಹಾವು ಸಾಯದು, ಕೋಲು ಮುರಿಯಬಾರದು, ತನ್ನ ಯಜಮಾನರು, ಕಾನಡಾ ಜಿಲ್ಲೆಯ ಪುಢಾರಿಗಳ ಅಗ್ರಣಿಗಳಾಗಿ, ಸ್ವೀಕರಿಸಿದ ಧೋರಣದ ಕೋಲು ಮುರಿಯಬಾರದು, ಇಂಥ ವಿಕಂಚನೆಯಲ್ಲಿ ಅದಕ್ಕೆ ದಾರಿ ತೆಗೆಯುವದೇ, ಕಠಿಣವಾಗಿ ಇಷ್ಟು ದಿವಸ ಸುಮ್ಮಗುಳಿದು, ಅದು ಈಗ ಹೊರಬಿದ್ದಿದೆ. ಸೂರ್ಯೋದಯವಾಗ ಸಹಕಾರಿತೆಯ ಮುಂಬರಿ ಸ್ವರವನ್ನು ಎಳೆದ ಹೊರತು ಅದಕ್ಕೆ ಗತ್ಯಂತರವಿಲ್ಲದೆ ಇಂಥ ಹಾದು ನಿಜವಾಗಿ, ಕರುಣಾಸ್ಪದವು ಆದರೆ, ತನ್ನ ಹಿಡಿ-ಬಿಡು ಧೋರಣವನ್ನು ಸಮರ್ಥಿಸಲಿಕ್ಕೆಂದು, ಧುರೀಣರು ಮಾಡಿದ ಒಂದು ವಿಧಾನವನ್ನು ನಿರಾಕರಿಸಿದ ಹೊರತು, ಇರಲಾಗದು. ಜಂಗಲ ಕಷ್ಟಗಳನ್ನು ಪರಿಹರಿಸಿಕೊಳ್ಳಲಿಕ್ಕೆ ರೈತರು ಪರಾವಲಂಬಿಗಳೆಂದು, ಹೇಳುವದೆಂದರೆ, ನಮ್ಮ ಇದೇ ಧ್ಯೇಯಕ್ಕೆ. ಅಸಹಯೋಗ ಧರ್ಮಕ್ಕೆ, ಮೂಲೋಚ್ಛೇದಕವೇ ಸರಿ. ಜಂಗಲದ ಕಷ್ಟಗಳಿರಲಿ, ಬೇಸಾಯದ ಕಷ್ಟಗಳಿರಲಿ, ಅವುಗಳನ್ನು ಪೂರೈಸಿಕೊಳ್ಳಲು, ನಾವು ಪರಾವಲಂಬಿಗಳಿದ್ದೇವೆಂದು ತಿಳಿಯುವ ತನಕ, ಅವುಗಳನ್ನು ನಿರ್ಮೂಲಿಸುವದು ಯಾರಿಗೂ ಸಾಧ್ಯವಿಲ್ಲ. ಅವನ್ನು ಅವುಗಳೊಳಗೆ ನಾವು ನರಳುತ್ತಲೇ ಬೇಕಾಗುವದು. ಸ್ವಾವಲಂಬನದ ಭಾವನೆಯು ನಮ್ಮಲ್ಲಿ ಬೆಳೆದರೆ ಮಾತ್ರ, ನಮ್ಮ ಕಷ್ಟಗಳು ತನ್ನಿಂದ ತಾನೇ ದೂರವಾಗುವವು. ಧುರೀಣಕಾರರಿಗೆ ನಾವು ಸ್ಪಷ್ಟವಾಗಿ ಹೇಳುತ್ತೇವಲ್ಲ— ಪರಾವಲಂಬನದೊಳಗೆ ನಮಗೆ ತರಣೋಪಾಯವಿಲ್ಲ. ಸ್ವಾವಲಂಬನದ ವಿಶ್ವಾಸವೇ ನಮ್ಮ ಶಾಶ್ವತಿಕ ಕಷ್ಟ-ಸಂಕಷ್ಟಗಳ ಪರಿಹಾರವನ್ನು ಮಾಡುವದು. ಸಾತ್ವಿಕ ಬುದ್ಧಿಯಿಂದ, ವಿನಯಶೀಲತೆಯಿಂದ, ನಾವು ವರ್ತಿಸಿದರಾಯಿತು. ಅಂದರೆ, ಎಲ್ಲ ಕಷ್ಟಗಳ ಸಂಗಡ, ಜಂಗಲ ಕಷ್ಟಗಳಾದರೂ, ಸ್ವಪ್ರಯತ್ನದಿಂದಲೇ, ಇಂದಲ್ಲದಿದ್ದರೆ ನಾಳೆಯಾದರೂ, ದೂರವಾಗುವವು. ಸ್ವಾರ್ಥಕ್ಕಾಗಿ ಪರಾವಲಂಬನದಲ್ಲಿ ನಂಬಿಗೆ ಇಡುವದು, ಇನ್ನು ಹಿತಕರವಲ್ಲ. ಅದರಿಂದ ಲಾಭವೇನಿಲ್ಲ. ನಮ್ಮ ರಾಷ್ಟ್ರೀಯ ಧ್ಯೇಯದ ಹಾನಿಯನ್ನಷ್ಟು ಮಾಡಿದಂತಾಗುವದು.

೩ ಒಂದು ವರ್ಷ ಹಿಂದಿನ ವರೆಗೆ ನಮ್ಮ ಜಿಲ್ಲೆಯ ಲೋಕಲಬೋರ್ಡು, ಸಿಮಿ ಸರಕಾರಿ ಲೋಕ ಸಂಸ್ಥೆ ಎಂದು ಹೇಳಲ್ಪಡುತ್ತಿದ್ದರೂ ಅದು ನಮ್ಮ ಕಲೆಕ್ಟರ ಸಾಹೇಬರ ಅಧಿಪತ್ಯದೊಳಗೆ ಇರುತ್ತಿತ್ತು. ಅವರೇ ಅದರ ಪೂರ್ಣ ಕಾರಭಾರ ನಡಿಸುವ ಮುಖ್ಯಸ್ಥರಾಗಿದ್ದರು. ಅವರ ಕೈಕೆಳಗಿನ ಇಬ್ಬರೂ ಅಸಿ. ಕಲೆಕ್ಟರರು ತಮ್ಮ ತಮ್ಮ ಡಿವ್ಹಿಜನದಲ್ಲಿಯ ತಾಲೂಕಾ ಬೋರ್ಡಿನ ಪ್ರೆಸಿಡೆಂಟರಾಗಿಯೂ, ಮಾಮಲೇದಾರರು ತಮ್ಮ ತಮ್ಮ ತಾಲೂಕಾ ಬೋರ್ಡಿನ ವ್ಹಾಯಿಸ ಪ್ರೆಸಿಡೆಂಟರಾಗಿಯೂ, ಲೋಕಲಬೋರ್ಡ ಎಂದರೆ, ಅದೊಂದು ಸರಕಾರದ ಉಪಾಂಗವೆಂದೇ ತಿಳಿಯಲ್ಪಡುತ್ತಿತ್ತು. ಆದರೆ ಅದರ ವಿರುದ್ಧ, ನಾನ್ ಅಫೀಶಿಯಲರು ಕೌನ್ಸಿಲದಲ್ಲಿ ಬಿತ್ತರದ ಚಳುವಳ ನಡಿಸಿ, ಈ ಸಂಸ್ಥೆಗಳ ಜನಕರಾದ ಲೋರ್ಡ ರಿಪನ ದೊರೆಗಳ ಉದಾತ್ತ ವಿಚಾರಗಳನ್ನನುಸರಿಸಲು ಬೋಧಿಸಲು, ನಮ್ಮ ಸರಕಾರವು ಸ್ವಲ್ಪ ಎಚ್ಚತ್ತು ಈ ಕಾರಭಾರದಿಂದ ತನ್ನ ಅಂಗವನ್ನು ಬಾಹ್ಯತಃ ತೆಗೆದುಕೊಂಡಿದೆಂದು ಹೇಳಬಹುದಾದರೂ, ಅದರ ಲಗಾಮುನ್ನಷ್ಟು ತನ್ನ ಕಡೆಗೆ ಇಟ್ಟುಕೊಂಡಿದೆಂದು ಹೇಳಬಹುದು. ಆ ಲಗಾಮನ್ನು ತೊರೆದ ಹೊರತು, ಆ ಬೋರ್ಡು ಸ್ವತಂತ್ರವಾಗಲಾರದು.

೪. ಪ್ರಸ್ತುತ, ಸರಕಾರದಿಂದ ಆರಿಸಿ ನೇಮಿಸಲ್ಪಟ್ಟ ಆ ಬೋರ್ಡಿನ ಅಧ್ಯಕ್ಷರೂ, ಆ ಬೋರ್ಡಿನ ಕೆಲಸಕ್ಕೆಂದು ಕಟ್ಟಿದ ಸರಕಾರಿ (chief officer) ಹಸ್ತಕರೂ, ಈಗ ಪ್ರತಿ ತಾಲೂಕಿನಲ್ಲಿ ಸಂಚಾರಮಾಡಿ, ಆಯಾಯ ತಾಲೂಕಿನ ಕೊರತೆಗಳನ್ನು ಸ್ವತಃ ಲಕ್ಷಿಸಿ, ಕೈಕೊಂಡ ಕೆಲಸಗಳ ತಪಾಸ ಮಾಡಿ, ತಮ್ಮ ಕರ್ತವ್ಯಗಳನ್ನು ದಕ್ಷತೆಯಿಂದ ನಿರ್ವಹಿಸಲು ಬದ್ಧಕಂಕಣರಾಗಿ, ನಮ್ಮ ತಾಲೂಕಿಗೆ ಅದ ಅವರ ಆಗಮನವು ಅಭಿನಂದನೀಯವು. ಆದರೆ, ಈ ಬೋರ್ಡಿನ ಮುಖ್ಯ ಮತ್ತು ಬಡ ರಯತರ ಸುಖ-ಸೋಯಿಗೆ ಆಧಾರವಾದ ಕರ್ತವ್ಯವೆಂದರೆ, ಅದರ ಅಧೀನದಲ್ಲಿದ್ದ ಮಾರ್ಗಗಳನ್ನು ಸುವ್ಯವಸ್ಥಿತವಾಗಿ ಇಡುವದು, ಅವಶ್ಯವಿದ್ದಲ್ಲಿ ಹೊಸವುಗಳನ್ನು ಏರ್ಪಡಿಸುವದೇ ಆಗಿರುವದು. ಈ ಜಿಲ್ಲೆಯ ಲೋಕಲಬೋರ್ಡ ಮಾರ್ಗಗಳೂ, ಆವುಗಳ ವ್ಯವಸ್ಥೆಯೂ, ಪ್ರತ್ಯೇಕ ಇಡುವ ಉಪಕ್ರಮವು, ಮತ್ತು ಅದರಮೇಲಣ ಶಿಬಂದಿಯೂ, ನಮ್ಮ ನೆರೆಯ ದಕ್ಷಿಣ ಕನ್ನಡ ಜಿಲ್ಲೆಗೂ ಯಾ ಮೈಸೂರ ಪ್ರಾಂತಕ್ಕೂ ಮುಟ್ಟಿ ಹೋಗಿ ಹೋಲಿಸಿ ನೋಡಿದರೆ, ಇಲ್ಲಿಯ ಮಾರ್ಗಗಳ ಹೀನ ಸ್ಥಿತಿಯೂ, ಅದರ ಕಾರ್ಯ-ಕಾರಣ ಭಾವವೂ ಎಂಥವರಿಗೂ ಮನಗಾಣದಿರದು. ಅದನ್ನಷ್ಟು ಸುಧಾರಣೆ ಮಾಡಿದರೆ, ನಮ್ಮ ಬೋರ್ಡು ಯಶಸ್ವಿಯಾಯಿತೆನ್ನಬಹುದು. ಉತ್ಪನ್ನದ ಮಾನದಿಂದ ಈ ಜಿಲ್ಲೆಯು ಆ ಎರಡೂ ಪ್ರಾಂತಗಳಿಗೆ ಹೋಲುವದಾಗಿಲ್ಲದಿದ್ದರೂ, ಈ ಜಿಲ್ಲೆಯ ಸಾವಿರಗಟ್ಟಲೆ ಎಕರೆ ಕ್ಷೇತ್ರವು ವರ್ಷ ಪ್ರತಿ ವರ್ಷ ಜಂಗಲಖಾತೆಗೆ ಕೂಡಿ, ಅಷ್ಟಷ್ಟು ಉತ್ಪನ್ನ ಬಾಡು ಆಗುತ್ತ ಹೋಗಿದೆ. ಇಷ್ಟೇ ಅಲ್ಲ, ನಮ್ಮ ಜಿಲ್ಲೆಯ ಜಂಗಲು ಕಾಮಗಿರಿಯಿಂದ ಈ ಮಾರ್ಗಗಳು ಹೇಳಬಾರದಷ್ಟು ವಿಧ್ವಂಸವಾಗುತ್ತವೆಂಬುದು ಎಲ್ಲರೂ ಅರಿತಿರುವರು. ಅವುಗಳ ಜೀರ್ಣೋದ್ಧಾರಕ್ಕೆ ಜಂಗಲು ಖಾತೆಯು ಮುಖ್ಯವಾಗಿ ಜವಾಬದಾರ ಆಗಿದ್ದರೂ, ಆ ಖಾತೆಯಿಂದ ಇದುವರೆಗೆ ಏನೂ ವಾರ್ಷಿಕ ವಂತಿಗೆ ಕೊಳ್ಳಲಿಲ್ಲ. ಈಗಾದರೂ ಅದರ ಉತ್ಪನ್ನದ ನಾಲ್ಕನೇ ೧ ಅಂಶಕ್ಕೆ ಕಡಿಮೆಯಾಗದ ವಂತಿಗೆ ಈ ಬೋರ್ಡು ಪಾತ್ರವಾಗಿದೆಂದು ನ್ಯಾಯ್ಯವಾಗಿ ಹೇಳಬೇಕಾಗಿದೆ. ಅದನ್ನಷ್ಟು ತತಾರಬಿ-ಶರಾರಬಿ ಗಳಿಸಿ, ಅಧ್ಯಕ್ಷರು ತಮಗೊಪ್ಪಿದ ಕರ್ತವ್ಯಗಳನ್ನು ಸಾಂಗ್ಯವಾಗಿ ನೆರವೇರಿಸಿ, ಸರಕಾರದಿಂದ ವಹಿಸಿದ ಈ ನೂತನ ಕಾರ್ಯಭಾರದ ತಮ್ಮ ಬಿನ್ ಸರಕಾರಿ ಯೋಗ್ಯತೆಯನ್ನು ಸಾಕ್ಷಾತ್ಕರಿಸುವರೆಂದು ಹಾರಯಿಸುವೆವು. ಹಾಗೂ ರಯತರು ಸಹಕಾರಿತೆಯಿಂದ ತಮ್ಮ ತಮ್ಮ ಗ್ರಾಮದ ಅಡಚಣೆಗಳನ್ನು ಮುಂದೊಡ್ಡುವ ಶ್ರಮವನ್ನು ಕೈಕೊಳ್ಳುವರೆಂದು ಕೋರುವೆವು.

೫ ಕಳೆದ ತಾ ೨೨ ನೇ ಶುಕ್ರವಾರ ದಿವಸ ಗದಗಿನಲ್ಲಿ ಕರ್ನಾಟಕ ಸರ್ಕಲಿನ ಸಭೆಯು ದೇ. ದೇಶಪಾಂಡೆಯವರ ಅಧ್ಯಕ್ಷತೆ ಕೆಳಗೆ ಕೂಡಿ, ಇಡಿ ಕರ್ನಾಟಕದ ಕಾರ್ಯನಿರ್ವಾಹಕ ಮಂಡಲವು ಸ್ಥಾಪಿಸಲ್ಪಟ್ಟಿತು. ದೇ. ಗಂಗಾಧರರಾವ ದೇಶಪಾಂಡೆಯವರು - ಅಧ್ಯಕ್ಷರಾಗಿರುವರು. ಈ ಮಂಡಳದಲ್ಲಿ ಈ ಜಿಲ್ಲೆಯ ಕಡೆಯಿಂದ ಶ್ರೀ। ಶಾಸ್ತ್ರಿ ಮತ್ತು ಕರ್ಕಿಯವರು ಮೆಂಬರರಾಗಿರುವರು. ಆ ಸಭೆಗೆ ಸೇರಿದ ಮುಂದಾಳುಗಳೊಳಗೆ ನಮ್ಮ ಜಿಲ್ಲೆಯ ಕನಮುಖಿಗಳ ವಿಷಯ ನೇಮಿಸಲ್ಪಡುವ ಕಮಿಶನದ ವಿಷಯವು ಚರ್ಚೆಗೆ ಬಂದು, ಅದಕ್ಕೆ ಕಾಂಗ್ರೆಸ ಠರಾವಿನಂತೆ ಬಹಿಷ್ಕಾರ ಹಾಕಬೇಕಾಗಿಯೇ ಅವರೆಲ್ಲರ ಅಭಿಪ್ರಾಯವಾಗಿದೆಂಬ ಬಗ್ಗೆ ಒಬ್ಬ ಭಾಷ್ಯಕಾರರಿಂದ ಬಂದ ತಂತಿಯ ಮಜಕೂರು ಮತ್ತೊಂದೆಡೆಗೆ ಕೊಟ್ಟಿರುವೆವಷ್ಟೇ. ಆ ಸರಕಾರಿ ಕಮಿಶನಿಗೆ ವಿರೋಧವಾಗಿ, ನಮ್ಮದೊಂದು ಸ್ವತಂತ್ರ ಕಮಿಟಿ— ಈ ಜಿಲ್ಲೆಯ ಕಡೆಯಿಂದ, ಇಬ್ಬರು, ಬೆಳಗಾಂವ, ಧಾರವಾಡ, ಮತ್ತು ಬಿಜಾಪೂರ ಜಿಲ್ಲೆಗಳ ಕಡೆಯಿಂದ ಒಬ್ಬೊಬ್ಬರು— ಹೀಗೆ, ಐದು ಮುಖಂಡರದೊಂದು ಕಮಿಟಿ ಕೂಡಿಸಿ, ವ್ಯಾಪಕ ರೀತಿಯಿಂದ ನಮ್ಮ ನಮ್ಮ ಕನಮುಖಿಗಳ ಬಗ್ಗಾಗಿ ಪದ್ಧತಿ ಪ್ರಕಾರ ಸಾಕ್ಷಿಗಳನ್ನು ಕೊಂಡು, ಅವುಗಳ ಅನುರೋಧದಿಂದ ನಮ್ಮ ಹಕ್ಕು-ಸ್ವಾತಂತ್ರ್ಯಗಳ ಟಿಪ್ಪಣಿ ಸಹಿತ ರಿಪೋರ್ಟು ತಯಾರಿಸಿ, ಅದನ್ನು ಜಂಗಲ ಖಾತೆಯ ದಿವಾಣಿ ಪರಾಂಬರಿಕೆ ಬಗ್ಗೆ ಕಳುಹಿಸಬೇಕಾಗಿ ಸಹ ಸೂಚನೆ ಬಂದಿದೆ. ಇದು ಈಗಿನ ಪರಿಸ್ಥಿತಿಯಲ್ಲಿ ಮತ್ತು ಈಹತ್ತಿನ "ಪೂರ್ಣ ಅಸಹಕಾರಿತಾವಾದಿ"ಯ ಲೇಖದೊಳಗಿನ ಕಮಿಟಿ ನೇಮಣೂಕಿಯ ಪ್ರಸಕ್ತಿಗಳಲ್ಲಿ, ಇದು ಸೂಕ್ತ

ಉಪಕ್ರಮವೆಂದು ಎಲ್ಲರೂ ಒಪ್ಪುವರು. ಈ ಸಾರಿ [illegible] ವ್ಯವಸ್ಥೆ ಮಾಡುವ ಉದ್ದೇಶ್ಯದಿಂದ ಗಂಗಾಧರರಾವ ದೇಶಪಾಂಡೆಯವರು ಮುಂದಿನ ವಾರದಲ್ಲಿ ನಮ್ಮ ಜಿಲ್ಹೆಗೆ ಬಿತ್ತೈಸುವರಾಗಿ ತಿಳಿಯ [illegible]ದೆ. ಇದ್ದರಿಂದ, ನಮ್ಮ ಜಿಲ್ಲೆಯ ಎಲ್ಲ ಕಡೆಯವರೂ ಒಂದಾಗಿ ಒಮ್ಮನಸ್ಸಿನಿಂದ ಸರಕಾರಿ ಕಮಿಟಿ [illegible] ಗೆ ಹೋಗದೆ, ಈ ಸ್ವತಂತ್ರ ಕಮಿಟಿಯನ್ನು ಯಶಸ್ವಿಯಾಗಿ ಮಾಡುವದು ಉತ್ತಮವಿದೆ [illegible].

―――◇―――

ಸ್ಥಾನಿಕ ವೃತ್ತಾಂತ.

ಕುಮಟಾ— ರೋಗಗಳು ಬಹಳ ತ್ವರೇ ಇವೆ. [illegible] ಕೆಮ್ಮು ಬಹಳ ಜ್ವರ ಕೆಮ್ಮು [illegible] ರೋಗಗಳು ಇದ್ದೇ ಇರುವವು.

ಡಿ॥ ಲೋ॥ ಬೋರ್ಡ ಅಧ್ಯಕ್ಷರು ಆಫೀಸ ಸಹಿತ ಹಳ್ಳಿಗಳಲ್ಲಿ ಸರ್ಕೀಟು ಮಾಡಿ, [illegible] ತಪಾಸ ಮಾಡಿದರು. [illegible] ಬಗೆ ಏನು?

ಇಲ್ಲಿಯ [illegible] ಲ್ಲಿ ಸಕ್ಕರೆ ಹಂಚುವ [illegible] ವಿಷಯದ ಮೂಲಕ ರದ್ದು ಮಾಡಿರುವರು.

ಈ ತಾಲೂಕ [illegible] ಕೆಲಸಕ್ಕೆ [illegible] ಶ್ರೀ॥ ರಂಗರಾಯರು ಬಂದಿರುವರು. ಶ್ರೀ॥ [illegible] ರ ಕುರಿತು ಇನ್‌ಚ್ಯಾರ್ಜ ಮಾಡ [illegible].

ಮದ್ಯಪಾನ ನಿಷೇಧಕ್ಕಾಗಿ ಸ್ವಯಂ ಸೇವಕರು [illegible] ತರೂ ದುಡಿಯುತ್ತಿರುವರು [illegible] ಮಾಡಿದರೆ, ಕಾರ್ಯ ಸಿದ್ಧಿಯಾಗಬಹುದು.

ಸರಕಾರದಿಂದ ನೇಮಿಸಲ್ಪಟ್ಟ [illegible] ಸಂಬಂಧ ತಯಾರಿ ಮಾಡುವ [illegible] ಯಿಂದ ಬಂದ [illegible] ಶ್ರೀ॥ ಮಾಸೂರರ ಜೊತೆಯಿಂದ ಹೊನ್ನಾವರಕ್ಕೆ ಹೋಗಿ ತಿರುಗಿ ಹೋದರಂತೆ.

ಗೋಕರ್ಣ— ಇಲ್ಲಿ [illegible] ಸ್ಥಾಪನೆ ಮಾಡುವ ಉದ್ದೇಶದಿಂದ, (ಆಸಪಕಾರ ಶಕ್ತ [illegible] ಬಿಟ್ಟು ಬಂದ) ಶ್ರೀ॥ [illegible] ಮತ್ತು ಡಿ ಎಸ್ ಕೋಟ್ನೀಕರ ಇವರ [illegible] ಜನರ ಭೆಟ್ಟಿ ತೆಗೆದುಕೊಂಡರು. [illegible] ನೇ ತಾರೀಖಿಗೆ ಒಂದು ಜಾಹೀರ ಸಭೆ ಕರೆದು ಗ್ರಾಮ ಕಮಿಟಿಯನ್ನು ಸ್ಥಾಪಿಸುವರೆ [illegible] ತರದಿಂದ ಠರಾವು ಪಾಸಾಯಿತು.

ಇಲ್ಲಿಯ ಮುನಸಿಪಾಲಿಟಿಯು [illegible] ಮಾಡಿದ ಮನೆ [illegible] ವಿಷಯ [illegible] ವರೆ, ಒಂದು ನಾಗರಿಕರ ಸಭೆ ಕರೆದು, ಜನರಲ್ಲಿ ಆದ ಅಸಂತೋಷವನ್ನು ಲಕ್ಷದಲ್ಲಿ ತಂದು, ಸದರಿ [illegible] ಯ ಠರಾವನ್ನು ಮುನಸಿಪಾಲಿಟಿಯು ರದ್ದ ಪಡಿಸಬೇಕು, ಎಂಬ ಮಹತ್ವದ ಠರಾವು ಪಾಸಾಯಿತು ಮತ್ತು ಸದರಿ ಠರಾವನ್ನು ಮುನಸಿಪಲ್ ಕಮಿಟಿಗೆ [illegible] ಬಗ್ಗೆ ೧೩ ಜನರ ಮಂಡಳವನ್ನು ಕಳಹಿಸುವ ಠರಾವಾಯಿತು. ಮಾರನೇ ದಿವಸ ಮುನಸಿಪಲ್ ಕಮಿಟಿ [illegible] ಕರೆದು, ಜನರಲ್ಲಿ ಆದ ಅಸಂತೋಷವನ್ನು ಲಕ್ಷಕ್ಕೆ ತಂದು ಮೊದಲು ಮಾಡಿದ ಮನೆ ತೆರಿಗೆಯ ಠರಾವನ್ನು ರದ್ದ ಪಡಿಸುವ ಠರಾವು [illegible] ಗೆ ಬಂದು ಸದರಿ ಠರಾವು ಬಹುಮತದಿಂದ ಪಾಸಾಯಿತು. ರಾ। ನಾಗಪ್ಪ [illegible] ರಾಂಕ, ರಾ। ರಾಮಚಂದ್ರ ಮಂಗೇಶಯ್ಯಾ [illegible], ಮತ್ತು ರಾ। ದತ್ತಾತ್ರಯ ನಾಡಕರ್ಣಿ ಇವರು ಜನರ ಅಂದೋಲನದ ಕಡೆಗೆ [illegible] ಲಕ್ಷಕೊಡದೆ, [illegible] ಹಟವನ್ನು [illegible] ಹಿಡಿದ, ಸದರಿ ಠರಾವಿಗೆ ವಿರುದ್ಧ ಅಭಿಪ್ರಾಯ ಕೊಟ್ಟದ್ದು ನೋಡಲು, ಈ ಮೂರು ಸದ್ಗೃಹಸ್ಥರು ಮುನಸಿಪಾಲಿಟಿಯಂಥ ಸ್ಥಾನಿಕ ಸಂಸ್ಥೆಯಲ್ಲಿ ಇರಲಿಕ್ಕೆ [illegible] ಅಯೋಗ್ಯರಿದ್ದಾರೆಂದು ಹೇಳಬೇಕಾಗಿ [illegible] ಲಕ್ಷಕೊ

ಟ್ಟು ಮುಂದಿನವರ್ಷ ಇವರನ್ನು ಪುನಃ ನೇಮಿಸದೆ ಜನರ ವಿಶ್ವಾಸಕ್ಕೆ ಪಾತ್ರರಾದ ಬೇರೆಯವರನ್ನು ನೇಮಿಸುವರೋ?

ಶಿರಶಿ— ಶ್ರೀ॥ [illegible] ಗಣಪತ ಭಟ್ಟರ ಮನೆಗೆ [illegible] ಮೇಲೆ ಜಾಹೀರ ಸಭೆಯಾಗಿ ಡಾ॥ ಎಸ್ ಎಮ್ ಹರ್ಡೀಕರ ದಾವಣಗೇರಿ ಇವರು ಕೊಂಗ್ರೆಸ ಕಮಿಟಿ ಪರವಾಗಿ ಭಾಷಣ ಮಾಡಿದರು.

ಇಂಗ್ಲೀಷ ಶಾಲೆಯ [illegible] ಬಿದ್ದಿರುವ ಮೇಲಿಂದ [illegible] ಕ್ಕಾಗಿ ಶ್ರೀ॥ ಹೊಸ್ಥಳ್ಳಿ ಮರ ಮತ್ತು ಶ್ರೀ॥ ಕೃಷ್ಣ ನಾಟಕ ಕಂಪನಿಯಿಂದ ಎರಡು ಪ್ರತ್ಯೇಕ [illegible] ಗಳು ಮುನಸಿಪಾಲಿಟಿಯ ವಶಕ್ಕೆ ಈ ಮೊದಲೇ ಬಂದಿರುತ್ತವಷ್ಟೇ? ಅದರೆ ವಾರ್ಷಿಕ ಪರೀಕ್ಷೆಯಾಗಿ [illegible] ತಿಂಗಳಾಗಿ [illegible] ಪೂಜಾರಿಯು ನ್ಯಾಯ [illegible] ಮುನಸಿಪಾಲಿಟಿಯವರು ಅದರ ವಿನಿಯೋಗವ [illegible] ಮಾಡಿದ್ದು ಕಂಡು ಬರುವದಿಲ್ಲ. ಚೀಫ ಆಫೀಸರರ [illegible] ಇಂದು [illegible] ಅವರು ಯಾವ ನ್ಯಾಯದ [illegible] ಅಂಗೀಕರಿಸು [illegible] ನೋಡಬೇಕಾಗಿದೆ.

[illegible] ಶಿಕ್ಷಕರಿಗೆ [illegible] ಸಂಬಳ [illegible] ತೆ ದೀವು [illegible] ಮೇಲಧಿಕಾರಿಗಳ [illegible] ಜೀವಿದ್ದವರ [illegible] ಬಗ್ಗೆ ಏನು [illegible] ಮಾಡುವಂತಿಲ್ಲ.

[illegible] ವ್ಯಾಖ್ಯಾನ ಕೊಡುವದಕ್ಕಾಗಿ [illegible] ಶಾಲೆಯ [illegible] ಹೋಗಿದ್ದರು [illegible] ಸಹಕಾರಿಗಳ [illegible] ನಿರುತ್ಸಾಹ [illegible] ವಿಷಯ [illegible] ಬರೀತು, [illegible] ತ! [illegible] ಕೂಡಿದ [illegible] ಪ್ರಶ್ನೆಯಿಂದ ನಗಾರಿಗೆ [illegible] ಕೃಷ್ಣ [illegible] ಗಳು [illegible] ಹೋದರು. ಅವರ [illegible] ಯನ್ನು [illegible] ಕೂಡಿ [illegible] ಮೊದಲ [illegible] ಹಾಕಿ [illegible] ಹೋಗಲಿಲ್ಲವೆ?

[illegible] ದೇಶಪಾಂಡೆಯವ [illegible] ಬರತಕ್ಕವರಿದ್ದರು.

ಅಂಕೋಲಾ— ಇಲ್ಲಿ [illegible] ತಾರೀ [illegible] ರಾತ್ರಿ [illegible] ಗಾಡಿಗಳು ಕಾರವಾರದಿಂದ ಬಂದು [illegible] ಸಾಮಾನ [illegible] ಬಿಟ್ಟಿಗೆ [illegible] ದರು. ಒಂದ ಗಾಡಿಯ [illegible] ಬಿಟ್ಟಿ [illegible] ಒಬ್ಬ ಬಿಟ್ಟಿಗೆ ಹಿಡಿದ ಗಾಡಿಯನ್ನು ಮುಂದಿನ ಹಳ್ಳಿಗೆ [illegible] ಬಿಟ್ಟಿಯ ವಿಷಯ “ಸ್ಟೇಡಿಂಗ [illegible]” ಗಳಲ್ಲಿ [illegible] ಬಿಟ್ಟಿಗೆ ಹಿಡಿದ [illegible] ಅಧಿಕಾರಿಗಳ ದೃಷ್ಟಿಗೆ ಬರಲಿಲ್ಲವೋ? [illegible]

ಅಂಕೋಲಾ ತಾಲೂಕ ಕೊಂಗ್ರೆಸ ಕಮಿಟಿ ಸ್ಥಾಪನೆ ಮಾಡುವದ ವಿಚಾರ [illegible], ಒಂದು ಕಾರ್ಯಕಾರಿ [illegible] ಸಭೆ [illegible] ತಿಂಗಳ ೧ ನೇ ತಾರೀಖಿಗೆ [illegible] ಸಭೆ ಯಾಗುವದೆಂದು ತಿಳಿಯುತ್ತದೆ.

ಹಳಗೆ— ಹಳಗೆ [illegible] ತಿಂಗಳ ೧ ನೇ ತಾರೀಖಿನಿಂದ ಕಲೆಕ್ಟರರ [illegible] ಬಂದ [illegible] ಬಹಳ [illegible].

ಕಾರವಾರ— ಕಲೆಕ್ಟರರ [illegible] ಗ ಬಾಗ, ಕದ್ರಲ್ಲಿ [illegible] ಗಾಡಿಗಳನ್ನು ಪಡೆಯೀ [illegible] ದರಂತೆ.

ಬಿಟ್ಟಿಗೆ ಹಿಡಿದ ಗಾಡಿಗಳ ಪೈಕಿ, ಒಂದು ಗಾಡಿಯು ೧ ಕೋಲ [illegible], ಅದರ ಗೋಸ್ಕರ ಮಾಲೀಕನಿಗೆ [illegible] ಕೊಟ್ಟರಂತೆ! ಮಿ॥ ಹೆಗ್ಗ ಸಾಹೇಬರ ಈ ವರ್ತನವು ಬಹಳೇ ಅನುಕರಣೀಯವು. ಇವರಂತೆ ಮೇಲಾಧಿಕಾರಿಗಳು ವರ್ತಿಸಿದರೆ, ಬಿಟ್ಟಿಯಿಂದ [illegible] ಆಗುವ ತ್ರಾಸು ಕಡಿಮೆಯಾಗುವದು.

ಇಲ್ಲಿ ಸಾಲಕಟ್ಟಾ ಸೊಸೈಟಿಯ ಆಫೀಸಿನಲ್ಲಿ [illegible] ಉಪ್ಪಿನ [illegible] ಚೀಲಗಳಲ್ಲಿ [illegible] ಮಣಕ್ಕಿಂತ ಕಡಿಮೆ ಇರುತ್ತವೆ, ಅದ್ದರಿಂದ ಅಳತೆ ಮಾಡಿ ಕೊಡಿರೆಂದು [illegible] ತಕ್ರಾರು ಮಾಡಲು, “ಚೀಲಗಳು ಮೊದಲೇ ಅಳತೆ ಮಾಡಿದ್ದೇ ಇವೆ. ಬೇಕಾದರೆ, ಇದ್ದ ಹಾಗೆ ಒಯ್ಯಿರಿ,” ಎಂಬ ಆಕ್ಷೇಪದ ಉತ್ತರವು ದೊರೆಯುವದರಿಂದ ಜನರಲ್ಲಿ ಬಹಳೇ ಅಸಂತೋಷ ಉಂಟಾಗಿದೆ. ಈ [illegible] ಪ್ರತೀಕಾರ ಮಾಡಲಿಕ್ಕೆ, ಕೆಲವು ವ್ಯಾಪಾರಿಗಳ [illegible] ಉಪ್ಪು ತರಿಸಿ, ಕಡಿಮೆ ದರಕ್ಕೆ [illegible] ಉಪ್ಪು ಹಗುರಾಗಿ ಇರುವದರಿಂದ, [illegible] ಕಾರಣಗಳಿಗೆ [illegible] ಈ ಉಪ್ಪಿನಲ್ಲಿ ಕಸದ ಅಂಶವು ಕಡಿಮೆ ಇರುವದರಿಂದ, ಜನರ ಸಾಲಕಟ್ಟೆಯ ಉಪ್ಪಿಗಿಂತ, ಇದನ್ನು ಖರೀದಿ ಮಾಡುತ್ತಾರೆ. [illegible] ಕಡೆಗೆ ಸಾಲಕಟ್ಟಾ ಸೊಸೈಟಿಯಾಗಲಿ [illegible] ಅಧಿಕಾರಿಗಳಾಗಲಿ, ಲಕ್ಷ ಕೊಡುವರೋ?

ಹಳಿಯಾಳ— [illegible] ಸಾಧಾರಣವಾದ [illegible] ಮಳೆ ಬಿದ್ದು ಶೇತಕಿ ಕೆಲಸಗಳು ಸಾಗುತ್ತಿವೆ. ಅಸಹಕಾರಿತೆಯ ಸ್ವಯಂಸೇವಕ ಮಿ॥ ಗುಲಮಾ [illegible] ಮತ್ತು [illegible] ಬಂದು, ಕೊಂಗ್ರೆಸ ಕಮಿಟಿಯ [illegible] ಮಾಹಿತಿ ಕೊಟ್ಟು ಹೋದರು. ಗೋಗ್ರಾಸ [illegible] ಮಂಡಳದ ವಾರ್ಷಿಕ ಉತ್ಸವ, ಭಜನ ಪುರಾಣ ಗೋಪೂಜನ ಮುಂತಾದವೆಲ್ಲ ಆದವು. [illegible] ದೇಶ [illegible] ವಿಷಯದ ಮೇಲೆ ಭಾಷಣ [illegible] ಈ ಸಂಸ್ಥೆಯ ವಾರ್ಷಿಕ ವರದಿ ರೀತ್ಯಾ—

ಜಮಾ.

೭೯೮-೯-೧೦	ಹಿಂದಿನ ಶಿಲಕು
೧೬೪-೨-೩॥	ಧಂಡು
೪೦ ೫-೫॥	ದಕ್ಷಿಣೆ.
೩೪೬-೧೫-೯	ಅಕ್ಕಿ ವಿಕ್ರಿ
೨೯-೧೦-೭	ಬಡ್ಡಿ
೫೫ ೦-೦	ಸಲತಕ್ಕದ್ದು
೧೩೩೭-೬-೫॥	ಒಂದು

ಖರ್ಚ.

೧೨—೮—೦	ಉತ್ಸವ.
೧೧—೮—೦	ಸಾಮಾನು
೬—೦—೦	ಮನೆ ಭಾಡಿಗೆ
೨೯—೯—೬	ಪಿನ್ಸ[illegible]
೮೭—೪—೦	ಹುಲ್ಲು
೧೪೦—೦—೦	ಪಗಾರು
೯೭—೯—೦	ಆಕಳುಗಳು
೫೨—೦—೦	ದವಸಗಳು
೫—೬—೯	ಚಿಲ್ಲರೆ
೪೭೨—೫—೬	ಒಂದು
೭—೦—೦	ಬರತಕ್ಕದ್ದು
೭೮೧—೪—೮	ಕೈ ಶಿಲಕು [illegible]
೭೬—೫—೩॥	ಬಿನಬಾಕಿ[illegible]
೧೩೩೭—೬—೫॥	ಒಂದು

[illegible] ಕಾಂಗ್ರೆಸ ಕಮಿಟಿಯು ಸ್ಥಾಪನೆಯಾಗಿ [illegible] ಸೋಂದಿನ ಕೆಲಸ [illegible] ಆದ [illegible] ಜನರ ಪ್ರಯತ್ನ ನಡೆದಿದೆ [illegible] ಕೆಲ್ಲಿಬಿಟ್ಟವು [illegible] ಮಾಡಿದ [illegible] ಕೆಲಸವು [illegible] ಕೊಳ್ಳಬಾರದೆಂದು [illegible] ಸರಕಾರ [illegible] ಅವಂತಿ [illegible]

ವಿದ್ಯಾಖಾತೆಯ ಟೊಣ್ಣೆಶಾಹಿ.

ಸಂಪಾದಕರೇ, ಕೆಳಗಿನ ನಾಲ್ಕು ಮಾತುಗಳಿಗೆ ತಮ್ಮ [illegible] ಪತ್ರದಲ್ಲಿ ಇಂಬು ದೊರೆಯುವದಾಗಿ ನಂಬುತ್ತೇನೆ.

ನಮ್ಮ ಶಾಲೆಯಲ್ಲಿ ನವಂಬರ ೧೯೧೯ ರಿಂದ ಹುಡುಗರ ಸಂಖ್ಯೆ ಆಕೆಯ ಬೆಳೆವ ಮೂಲಕ, ೮ ತಿಂಗಳ ವರೆಗೆ ಬಹಳ ಸಾರೆ ವಿನಂತಿ ಮಾಡಿಕೊಂಡರೂ, ಇನಾಮು ಸಿಗಲಿಲ್ಲ. ಅದರಿಂದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಿಗೆ, ಡೆಪ್ಯುಟಿಯವರ ವಿದ್ಯಮಾನ ಅರ್ಜಿ ಮಾಡಿದೆನು. ಅದಕ್ಕೆ ಉತ್ತರ ಸಿಗದೆ, ೪ ನೇ ಇಯತ್ತೆಯನ್ನು ಕಡಿಮೆ ಮಾಡುವಂತೆ ಡೆಪ್ಯುಟಿಯವರ ಹುಕುಂ ಆಯಿತು. ತಮ್ಮ ವಿದ್ಯಮಾನ ಬಂದ ಎಲ್ಲ ಅರ್ಜಿಗಳನ್ನು ಡೆಪ್ಯುಟಿಯವರು ಮುಂದೆ ಕಳಿಸುವರೋ? ಶಾಲೆಯಲ್ಲಿ ೪ ನೇ ಇಯತ್ತೆಯವರಿಗೆ ಸಹ ಕಲಿಸಬಾರದೆಂದು ಹೇಳುವದು, ಗವರ್ನಮೆಂಟ ಠರಾವಿನ ವಿರುದ್ಧವಲ್ಲವೋ? ಅದರಿಂದ ಸದರೀ ಹುಕುಂ ರದ್ದು ಮಾಡಿ, ನಮಗೆ ಇನಾಮು ಕೊಡಬೇಕೆಂದು ನಿಡುವಾದರಿಂದ ಪರಭಾರ ಅಪೀಲು ಮಾಡಲ್ಪಟ್ಟಿತು. ಮತ್ತು [illegible] ಬರೆದ, ಡಿ. ಡಿ. ಕಲೆಕ್ಟರ ಸಿರ್ಸಿ ಇವರ [illegible] ನಕಲನ್ನು ಪರಬಾರೆ ಶಾಲೆಯ ಹಕೀಕತ ತಿಳಿಸಿ [illegible] ಮಾಡುವ ಬಗ್ಗೆ ಕಳಿಸಿದ್ದು, ಆ ಬಗ್ಗೆ ಏನು ವ್ಯವಸ್ಥೆಯಾದರೆ ರೂಪಾಯಿ ೩-೦-೦ ರ ದಂಡ!

ಸಂಪಾದಕ ಮಹಾಶಯರೇ, ಲೋಕದೃಷ್ಟಿಯಿಂದ ನನಗಾದ ಅನ್ಯಾಯದ ವಿಚಾರದ ಅಪೇಕ್ಷೆ ಭರದಲ್ಲಿ ಈ ಅಂದಾಧುಂದಿಯನ್ನು ಸರಕಾರದ ನಜರಿಗೆ ತರಬೇಕೆಂದೇ ಸೆನ್ಸಸ್ ಕೆಲಸಕ್ಕೆ ಕರಣ ಜೋಡೆದೆನು ಅಲ್ಲದೆ, ಸರಕಾರದ ವಿರುದ್ಧ ಅಸಹಕಾರಿತೆಯ ಚಳವಳಿಯನ್ನು ಪ್ರಚಾರಿಸಬೇಕೆಂದಲ್ಲ. ಸರಕಾರಕ್ಕೆ ಈ ಸಂಗತಿಯನ್ನು ತಿಂಗಳುಗಳ ಮೊದಲೇ ತಿಳಿಸಿರುವ ಮೂಲಕ, ಇದು ಸ್ವಾರ್ಥಪರ ಅಲ್ಲ, ಉದ್ಧಟತನವಲ್ಲ. ಅಪೀಲ ದಸ್ತೆಯೇ [illegible] ಕಾಣದ ಮೂಲಕ, ಈ ಪ್ರಕಾರ ವರ್ತಿಸಿದ್ದಿರುತ್ತದೆ [illegible] ಗಿದ್ದು, ವಿಚಾರ ಮಾಡದೆ, (ಡೆಪ್ಯುಟಿಯವರ ವಿದ್ಯಮಾನ ನಾಲ್ಕು ಅರ್ಜಿಗಳನ್ನು ಕಳಿಸಿದರೂ,) ಉತ್ತರ ಕೊಡದೆ, ೧ ಗ್ರೇಡ ಕಡಿಮೆ ಪಗಾರದಮೇಲೆ ಮುಂದಿನ [illegible] ಸ್ಥಿತಿಯಂಥ ಕೆಟ್ಟ ಹವೆಯ ಅಸಿ॥ ಜಂಗಲ್ ಎ. ಡಿ. ಡೆಪ್ಯುಟಿ ಬಾಗಿಲದವರಿಂದ ವರ್ಗಮಾಡಲ್ಪಟ್ಟಿತು!!! ಡೆಪ್ಯುಟಿಯವರೇ, ಶಾಲೆಯಲ್ಲಿ ಉತ್ತಮ ಕೆಲಸ ಮಾಡುವಿರೋ? ಡೆಪ್ಯುಟಿಯವರಮೇಲೆ ಅಪೀಲು ಮಾಡುವಿರೋ? ಹಾಗೆ ಮಾಡುತ್ತಿದ್ದರೆ ಹುಷಾರ!! ನಾನಂತೂ ಇದರಲ್ಲಿ ನ್ಯಾಯ ಸಿಗದಿದ್ದರೆ ರಾಜೀನಾಮೆ ಕೊಡಲಿಕ್ಕೆ ತಯಾರ ಇದ್ದೇನೆ. ಹೊಸ ಸುಧಾರಣೆಯಂತೆ, ಈಗ ಮಿನಿಸ್ಟರರ ವರೆಗೆ ಎಲ್ಲ ಸರಕಾರೀ ಅಧಿಕಾರಿಗಳಿಗೆ ಇದು ಸಮ್ಮತವೋ? ಹೌದಾದರೆ ಅಸಹಕಾರಿತೆಗೆ ಇದೊಂದು ಮಹಾಬಾಪ ಸಲಕಾರೀ ಮುದ್ದತು!!!

ಅನಂತ ಶಿವರಾಮ ಹೆಗಡೆ

ಸ್ಕೂಲ ಹೆಡ್‌ಮಾಸ್ತರ ಗೋಕರ್ಣ ನಂ II

ಅಗಸರ ಸಬ್ಬಕಾರವು.

ವಾಚಕಮಹಾಶಯರೇ, ನೋಡಿದಿರಾ?

ಕರೋ ಲೇಖವನ್ನು ಓದಿದಾಕ್ಷಣವೇ, ಎಲ್ಲ ನನ್ನ ವ್ಯವಸಾಯಿಗಳಾದ ಈ ಹಿಂದು ದೇಶದ ಬಂಧು ಭಗಿನಿಯರಿಗೆ ಆದರ ಸ್ವಾರಸ್ಯವು ಲಕ್ಷ್ಯದಲ್ಲಿ ಬರುವಂತಿದೆ. ಹೇಗಂದರೆ—

॥ ಕಂದ ॥

ದುಡಿಯ್ಯ ಸುಖಮಂ ಪಡೆಯ್ಯ॥
ದುಡಿಯದ ಮನುಜಂಗೆ ದುಃಖ ಮುಂದುಂ ಬಿಡದ್ಯ॥
ಗಿಡಮೊಳಗೆ ಬಿಟ್ಟ ಫಲಗಳ್‌।
ದುಡು! ದುಡು!! ದುಡು!! ತಾನೆ ಬಂದು
ಬೀಳ್ಗುವೆ ಬಾಯೊಳ್ ॥ ೧ ॥

ಪ್ರಿಯ ದೇಶಬಾಂಧವರೇ, ಸಬ್ಬಕಾರ ಮಾಡುವ ಕ್ರಮ ಹೇಗಂದರೆ— ಎತ್ತರವಾಗಿ ಕಟ್ಟಿದ್ದೊಂದು ಹೌದಿನೊಳಗೆ ನೀರು ಹಾಕಿ, ಅದರಲ್ಲಿ ಹೊಸ ಸುಣ್ಣ, ಸೌಳಕಾರ, ಇವೆರಡೂ ಸಮಭಾಗ ಚಲ್ಲಬೇಕು. ಆ ಹೌದಿನ ಬುಡದಲ್ಲಿ ಇರುವ ತೂತಿನೊಳಗಿಂದ ನೀರು ಒಸರಿ ಕೆಳಗಿರುವ ಬೇರೊಂದು ಹೌದಿನೊಳಗೆ, ಬೀಳಬೇಕು. ಬಳಿಕ, ಕಲ್ಲದ ಕೊಪ್ಪರಿಗೆಯುಂಥಾದ್ದೊಂದು ದೊಡ್ಡ ಕೊಪ್ಪರಿಗೆಯನ್ನು ಒಲೆಯಮೇಲಿಟ್ಟು, ಅದರಲ್ಲಿ ಕೆಳಗಿನ ಹೌದಿನೊಳಗಿನ ಕ್ಷಾರದ ನೀರು ೫೦ ಕೊಡ, ಇಪ್ಪೇ ಕಾಯಿಯ ಎಣ್ಣೆ ೩೦ ಮಣ ಹಾಕಿ, ಒಳಿತಾಗಿ ಕುದಿಸಬೇಕು. ಆ ಕೊಪ್ಪರಿಗೆಯೊಳಗಿಂದ ಹೊಲಸು ನೀರು ಹರಿದು ಹೋಗಲಿಕ್ಕೆ ದ್ವಾರವಿಡಬೇಕು. ಆ ಕೆಟ್ಟ ನೀರೆಲ್ಲ ಹೋಗಿ, ಉಳಿದ ಮಿಶ್ರಣವು ಕುದಿದು ಕುದಿದು ಗಟ್ಟಿಯಾಗಿ ಕಡೆಯಲ್ಲಿ ಗೋವಿನ ಜೋಳದ ಕಾಳಿನಂತೆ ಕೊಪ್ಪರಿಗೆಯಲ್ಲಿ ಸಬ್ಬಕಾರದ ಕಾಳುಗಳು ಕಾಣಿಸಹತ್ತುವವು. ಆ ಕೂಡಲೆ ಕೊಪ್ಪರಿಗೆಯೊಳಗಿನ ಸಬ್ಬಕಾರ ತೆಗೆದು, ಅರಿವೆ ವಡಿಗಳನ್ನು ಕಟ್ಟಬೇಕು. ಇದೇ ಅಗಸರ ಸಬ್ಬಕಾರವು.

ಬಂಧುಭಗಿನಿಯರೇ? ನೀವೆಲ್ಲರೂ ಈ ಮಾತಿನ ವಿಚಾರಮಾಡಿ, ನಿಮ್ಮ ಈ ಹಿಂದೂ ದೇಶವನ್ನು ಸ್ವರಾಜ್ಯದ ಮಾರ್ಗಕ್ಕೆ ಹಚ್ಚಬೇಕೆಂದು, ಈ ಸೂಚನೆಯನ್ನು ತಮ್ಮೆದುರು ಇಟ್ಟಿರುತ್ತೇನೆ. ಈ ನನ್ನ ಸೂಚನೆಯು ಸರಿದೋರಿದಲ್ಲಿ, ಇದರಂತೆ ಪರೀಕ್ಷಿಸಿ ಸಬ್ಬಕಾರ ಮಾಡುವ ಕಾರಖಾನೆಗಳನ್ನಿಟ್ಟು ಧನವಂತರಾಗಿರೆಂದು ಸರ್ವೇಶನ [illegible] ಪ್ರಾರ್ಥನೆಯನ್ನು ಅನನ್ಯ ಭಾವದಿಂದ ಮಾಡಿಕೊಂಡು, ನನ್ನ ಈ ಕಿರು ಲೇಖವನ್ನು ಬರೆದುದಕ್ಕೆ ಕ್ಷಮೆ ಇಲ್ಲಿಗೆ ನಿಲ್ಲಿಸಿ ನನ್ನ ಲೇಖನಿಗೆ ವಿಶ್ರಾಂತಿ ಕೊಡುತ್ತೇನೆ.

[illegible] ಕಾರ್ತಿಕ — ವದ್ಯ [illegible]	ಹಿಂದೂ ದೇಶದ ಹಿತಚಿಂತಕರ ಅಡಿದಾವರೆ [illegible] ಮನಸಾ [illegible] ಕರ [illegible] ಸ್ಕೂಲ ಹೆಡ್ ಮಾಸ್ತರ [illegible]

ಕುಮಟೆ ಪೇಟೆ ಧಾರಣೆ

ಜಿನಸು		ದರ
ರಂಗೂನ ದೊಡ್ಡ ಗೋಣಿ ೧ಕ್ಕೆ	.	೧೨॥
ಕಚ್ಚಿದ ಅಕ್ಕಿ ಕಳಸಿಗೆ		೫॥—೬
ರಾಗಿ ಖಂಡಿಗೆ		೯—೯॥
ಗೋದಿ ಗೋಣಿ ೧ಕ್ಕೆ		೧೬—೨೦
ಹುರುಳಿ ಖಂಡಿ ,		೧೬
ತೊಗರೆ ಬೇಳೆ ೧ಕ್ಕೆ		೧೬—೧೬॥
ತೊಗರೇಬೇಳೆ ಗೋಣಿ ೧ಕ್ಕೆ		೧೯—೨೦
ಹೆಸರು ಬೇಳೆ „		೧೯—೨೨
ಮೊರಿಶ ಸಕ್ಕರೆ ಮಣ „		೧೧—೧೧॥
ಮೆಣಸಿನ ಕಾಯಿ ಮಣ ,	.	೬—೫॥
ಹರಳೆಣ್ಣೆ ಮಣ		೭॥—೭॥
ಕೊಬ್ಬರಿ ಎಣ್ಣೆ ಮಣ	..	೯।
ಕೊತ್ತಂಬರಿ ಗೋಣಿ „	.	೧೦—೧೦॥
ಉಪ್ಪು ಗೋಣಿ „	...	೬-೫-೦
ಕೆರೆಸಿನ ಡಬ್ಬಿಯ „	.	೪ ೭-೦
ಹಂಡ „		೩-೧೧-೪
ಬೆಲ್ಲ ಖಂಡಿ ೧ಕ್ಕೆ		೪೫—೫೦
ಗಾಂಜಟ ಬೆಟ್ಟೆ	..	೧೧೫—೧೨೦
ಗೋಟು		೭೦—೭೫
ಹಾಲಿ		೮೦—೯೦
ಚಿಕಣಿ	...	೧೧೫—೧೨೫
ಮೆಣಸು	..	೧೪೧—೧೪೫
ಯಾಲಕ್ಕಿ		೩೦—೪೦
ಯಲ್ಲಾಪೂರ ರಾತಿ		೧೨೦—೧೪೦
ಶಿರಸಿ ರಾತಿ	.	೧೩೦—೧೯೦
ಸಿದ್ದಾಪೂರ ರಾತಿ	.	೧೨೫—೧೬೦
ಹೇರೂರ ರಾತಿ	...	೧೨೦—೧೩೫

ಲೋಕಮಾನ್ಯವಾದ ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ಲೆಂಡೆಲ ಇಸ್ಟೇಟದ, ಎಲ್ಲಾ ತರದ ಚಹಾ ಮತ್ತು ಊಟಕಮುಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯೂಕಲಿಪ್ಟಸ ಓಯಿಲ್) ರಿಟೇಲ್ ವ ಹೋಲಸೇಲ ದರದಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು. ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ. ಪತ್ರದ್ವಾರ ದರದ ವಿಚಾರಣೆ ಮಾಡಿಕೊಳ್ಳಿರಿ.

ವಿ. ಪಿ. ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ. ಉತ್ತರ ಕಾನಡಾ.

HONAWAR (N. Kanara.)

ಹೊಸ ಶೋಧ! "ಓಂ" ಹೊಸಶೋಧ!!

ಗುಣ ಬಾರದಿದ್ದರೆ ಹಣವಾಪಸು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರಕವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವು ಮಿಶ್ರಮಾಡಿ ಅನುಭವಿಕ ರೀತಿಯಿಂದ್ದರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ, ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಒರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಒರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳೆಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ರೋಗ ಇದ್ದರೆ, ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿಧಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಕಿಂ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು ೧ ಆಣೆ ೩. ೩ ಡಬ್ಬಿಗಳಿಗೆ ೪ ರು ೮ ಆಣೆ ೬ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಕಾಣಿಕೆ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ, ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ.

ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ. ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕೇಶಫಾ ಅಥವಾ ಆರೋಗ್ಯಬಿಂದು.

ಈ ಆರ್ಕೇಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೯೦೮-೧೯೦೯ನೇ ಇಸ್ವಿಯಿಂದ ತಾ|| ೧೯೧೦ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೦ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳ ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಆದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಆರ್ಕೇಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗವಾದ ಪ್ರಯುಕ್ತ ಎಷ್ಟೋ, ಇನಾಮು ಸರ್ಟಿಫಿಕೇಟುಗಳ ಸಹ ದೊರೆಯುತ್ತವೆ ಓಪ್ರೊ ಓದಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇವೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಪುಲಕ್ಷ ಮಾಡದೆ ಕೆಳಗೆ ಓದಿದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗಗಳ ನಾಮಗಳು

ಕ್ಷಯರೋಗ ಹಡಪರೋಗ, ಪಾಂಡುರೋಗ ಗುಲ್ಮರೋಗ ಮೂಲರೋಗ, ಮಹಾಮಾರಿ (ಕಾಲರಾ) ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ ಅನೇಕಪ್ರಕಾರದಜ್ವರಗಳು, ಗಂಡಮಾಲೆ, ಕಿವಿಶೂಲೆ ಮತ್ತು ಕಿವಿಸೋರಿಗೆ ಒಸರಿ ಮೊದಲಾದ ರೋಗಗಳು ಕಣ್ಣಿನೊಳಗೆ ಹೂವು ಬೀಳೋದು, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ, ಅತಿಗ್ಗೆ ಇದ್ದ ಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರತಲೇಶೂಲಿ ನಡಶೂಲಿ, ವಾತಶೂಲಿ, ಕೀಲ್ಮೊಜಪ್ಪು, ಗುದ್ದಪ್ಪನಜೇನೆ, ಸುರುಸುಕಜ್ಜಿ, ಗಜಕರ್ಣ, ಇಸಬು ಕಡ್ಡಿ, ಘಾಮಪ್ಪರ್ಣ, ನಾರಹುಣ್ಣು, ಸ್ತ್ರೀಯರ ಮುಟ್ಟುಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ ಅರವಿ, ಮುಟ್ಟುದೋಷ, ಹೊಟ್ಟೆ ದೊಡ್ಡದಾಗೋದು ಮೈ ಹೊರಬೀಳೋದು, ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ನಮೂನೆ ಬಾಟ್ಲಿಕ್ಕೆ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ ಪಿ ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇನೆ ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದವು ಬಾಟ್ಲಿಯವರಿಗೆ ಕಮಿಶನ್ ಇಲ್ಲ ಇದಕ್ಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇನೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟು ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ ಅನುಪಾನಪತ್ರಿಕೆಯು ಕನ್ನಡ ಮರಾಠಿ ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲೀಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್. ಎ. ಮುಲ್ಲಾ, ಸಂಪಾದಕ ಆರ್ಕೇಶಫಾ ಹೆಡ್ ಆಫೀಸು ಕಂ. ಹು. ಸ್ಟ್ರೀಟ ಬೆಳಗಾಂವ

ಖ್ಯಾತಿಯಿಂದ ಗುಣದಾಯಕವ

ಔಷಧಗಳು.

1 [illegible] — [illegible] ರಕ್ತಶುದ್ಧಿ [illegible] 1-1-0

2 [illegible]

3 [illegible]

4 [illegible]

5 [illegible]

ಎಸ್. ಗಣಪಯ್ಯ [illegible] ಸನ್ಸ್ [illegible]

ಸೂಚನೆ.

ಈ ಪೇಟೆ [illegible] ಸಿರಸಿಗೆ [illegible] ಸಿರಸಿಯಿಂದ ಕಾರ, ಪ್ರತಿ ಆದಿತ್ಯವಾರ-ಗುರುವಾರ ದಿವಸ ನಡಿಸುವ ವ್ಯವಸ್ಥೆ ಇಟ್ಟಿದೆ ಕುಮಟೆಯಿಂದ ಬೆಳಿಗ್ಗೆ ೬ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಆರಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೇಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇಗರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನ ಹತ್ತರ ಶ್ರೀಧರರ ಹೊಟೆಲಿನಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಟಿಕ್ಕಿ ತಿರಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಯ್ಯ ಶ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडातील अनेक वनस्पतींच्या रसात पौष्टिक औषधीफळाचा रसार्क मिश्र करून, खाली दिलेल्या रोगावर उपयुक्त अशी भस्मे घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहीसा करून, वीर्य वृद्धि व रक्तशुद्धि होते कितीहि जुनाट उष्णता असो (एक सप्तकातच) नाश पावत आणि उपदंशा संबंधी मुरलेले विकार नाहीसे होऊन हातपाय, डोळे यांचा दाह व धातुविनाशक सर्व विकार नष्ट होऊन, शरीर वज्राप्रमाणे बनते, हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोग याचा समूळ नाश होतो हे औषध स्त्रियांनी सेवन केल्यास, त्यांचे जननेंद्रियांचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळा जरी नरी भूक चांगली लागत जाऊन शौचास साफ होते याचा अनुभव औषध घेतल्याच्या पहिल्या दिवशी येतो तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूचे सेवन करून, यातील खरी मजा पहावी फार दिवसाचा रोग असल्यास पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असता, गुण येईल. एका बाटलीमध्ये १० तोळे औषध असते त्या एका बाटलीची किंमत १ रुपया. तीन बाटल्यांची किंमत ३। रुपये एक डझन (१२) बाटल्यांची किंमत १० रुपये याशिवाय टपाल, व प्याकिंगखर्च निराळा पडेल तीन बाटल्या सेवन करणाऱ्यांनी ३० तोळे औषधाची एक मोठी बाटली मागवून घ्यावी म्हणजे थोडी सोईस्कर पडेल

मॅनेजर,

के, एम, हनुमान माणादिक कंपनी

जिल्हा बेळगाव, मु. पो. निपाणी.

ಅತ್ಯುತ್ತಮವಾದ ಮಂಗಳೂರ ಸೋಪ್ರಾಣಿ, ಮತ್ತು ಬೀದಿಯ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ರೋಕ ದರ, ಸವಲತಿಯು ಇರುತ್ತದೆ

ಪತ್ತೆ:— ಬಿ ದಾಸ, ಕುಮಟಾ

Printed and published by Krishnarao Keshav Shenvi at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೮.

ಪತ್ರದ ವರ್ಗಣಿ—
ಕುಮಟೆಯಲ್ಲಿ ಆಗಾವು
ರೂಪಾಯಿ 2-0-0
ಮನೆಯಾರ್ಧರಿಯಿಂದ
ರೂ 2-13-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 2-15-0.
ಬಿಡಿ ಸಂಚಿಕೆಗೆ 0-1-0.

नृपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:-
ಕನ್ನಡ, ಇಂಗ್ಲಿಷ ಸ್ಥಳಾ
ಸ್ಪೈಸ(೧೫ ಎಮ್‌ಎಮ್) ೮
ಸಾಲುಗಳ ಪಂಕ್ತಿಗೆ ರೂ. ೧-೮-೦.
ಅನಂತರ ಪ್ರತಿ ಸಾಲಿಗೆ ೦-೩-೦.
ಪತ್ರಿಕೆ ಗಳು ಎಲ್ಲ
ಬೆಳ್ಳಿ ... ಬಂದ ಅಕ್ಷ ಸಾಲುಗಳು ...
ಮಸ್ಕೂರು.
ಬಾಕಿ ಜಾಹಿರಾತುಗಳ ದರ
ಪತ್ರದ್ವಾರ ಯಾ ಸಾಕ್ಷಾತ್
ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೫ ಮಾಹೆ ಮೇ ಸನ್ ೧೯೨೧ ನೇ ಇಸವಿ.]—

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು, ಜಾಂಬಳಿ ೧೦೦ಕ್ಕೆ ೧೪ಅಣೆ ಕಪ್ಪು ಮಾತ್ರ ೧೨ಅಣೆ. ಶಾಯಿ ಸೆಂಪಲಿಗೆ ಒಂದಾಣೆ ಕಾರ್ಡ ಕಳಿಸಿದರೆ ಕೊಂಡರೆ, ಭರಪೂರ ಕಮಿಶನ್

ಪತ್ರೆ— ಎಸ್. ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

೪ ರವ ಗುಳಿಗೆಗಳು. ಕ್ರಯ — ಎರಡಕ್ಕೆ ೦-೧೦-೦ ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಬ್ಬು, ಉಂಚಿ ಕ. ಒಳ್ಳೇ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ ಶಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ರೆ— ಭಡತೀ ಭ್ರಾತೃಸಂಘ,

ಗೋಕರ್ಣ.

ಅತ್ಯಂತ ಬೋಧಪ್ರದ–ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ೧ರೂ (೨) ಸತ್ಯಪ್ರಕಾಶ. ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ ಬೆಲೆ ೧೨ ಆಣೆ

ಪತ್ತೆ— ಬಸವಾರ್ಯ ಬೂದೀಹಾಳಮಠ,

ಹೆಡ್ ಮಾಸ್ತರ, ಮುಕ್ಕಾಂ ಅಲೂರ

ಪೋಸ್ಟ— ಅಲೂರ—ಹಾನಗಲ್ಲ, ಜಿ ಧಾರವಾಡ.

ಕಾರ್ಡಸ್ಸಾಜ ಫೋಟೋ.

ಮಹಾತ್ಮಾ ಗಾಂಧಿ, ಕೈ। ಲೋ। ಟಿಳಕ ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಸಾಜದ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ — ೧ಕ್ಕೆ ೬ಪೈ, ಡಜನಕ್ಕೆ ೪ಆಣೆ, ಶೇಕಡಾ ೧ ೧೭-೦ ಟಪಾಲ ಹಾಶಿಲ ಬೇರೆ. ಸೆಂಪಲಗಳು ಬೇಕಾದರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ,

ಕುಮಟಾ (ಎನ್ ಕೆನರಾ,)

ಖಾಕಿ] ಅತ್ಯುತ್ತಮ [ಸ್ಯಾಲು.

ಅತ್ಯುತ್ತಮ ಸ್ವದೇಶೀ ಶಾಯಿ ಗುಳಿಗೆಗಳು ನಮ್ಮ ಸ್ವಂತ INK TABLETSಕ್ಕೆ ಮಾತ್ರ ನಿ.ಕಸರಿಂದ ತಯಾರಿಸಿದ ನೀಲಿ, ಜಾಂಬಳಿ, ಕೆಂಪು, ಹಸರು ೧೪೪ ಶಾಯಿ ಗುಳಿಗೆ ಇರುವ ೧ ಗೋಟಿನ ಡಬ್ಬಿಗೆ ರೂ ೧-೧೨-೦ ೧ ಡಜನ ಗ್ರೋಸಿಗೆ ರೂ ೮ ಸೆಂಪಲಿಗೆ ಅರಾಣೆ ಪೋಸ್ಟಗಟ್ಟ ಕಳಿಸಿ ಕೊಂಡರೆ, ಶೀರ ಕಡಿಮೆ ದರದಲ್ಲಿ ಕೊಡುವೆವು ದೊಡ್ಡ ವ್ಯಾಪಾರಸ್ಥರಿಗೆ ಭರಪೂರ ಕಮಿಶನ ಸಿಗುವದು ೧ಗ್ರೋಸಿಗಿಂತ ಕಡಿಮೆ ಕಳುಹಿಸಲಾರೆವು ವಿ ಪಿ ಟಪಾಲ ಖರ್ಚು ಸೇರಿಸಿಲ್ಲವು.

ದಿ ಸ್ವದೇಶೀ ಇಂಕ ಸ್ಟೋರ್ಸ,

ಕಠೆ, ಕಾನರಾ.

ಬಹು ಸುಂದರವಾದ ಚಿನ್ನದ ಒಡವೆಗಳನ್ನು ಖರೀದಿಸುವಿರಾ

ಚಿನ್ನದ ಭಾವಲೀ, ಹೀರೆ ಕೂಡಿಸಿದ ಉಂಗುರಗಳು, ತರತರದ ಪರದಿಂದ ಮನೋಜ್ಞವು, ನಾತ್ತು ಹಳ್ಳು ಕಲ್ಲುಗಳ ಬಾಜಿತು ೩ ರಾ ಕಟ್ಟೋಣ, ಪಟ್ಟಗಿರಿ ಕಟ್ಟೋಣ, ಕಾಂದಣ, ಬಿಂದಿ, ಮೂಗುಬೊಟ್ಟುಗಳು ವಿನಹ ವೈಚನ ಚೈನುಗಳು, ವೆಹ್ಲುಗಳು, ನವರತ್ನದ ಪದಕಗಳು ವ ಮುಚ್ಚುಗಳು ನೂತನವಾದ ಸೂರ್ಯಕಾಂತಿ ಹೂವುಗಳು, ಗುಲಾಬಿ ಹೂವುಗಳು, ಸಂಪಿಗೆ ಹೂವುಗಳು ವಾಲ್ಲಿಗೆ ಹಾರಗಳು, ಮುಂತಾದ ಎಲ್ಲಾ ದಾಗಿನೆಗಳು ನಮ್ಮಲ್ಲಿ ಆಗುತ್ತವೆ ಬೇಕಾದವರಿಗೆ ಯೋಗ್ಯ ಚಾರ್ಜಿನಿಂದ ಮಾಡಿಕೊಡುವೆವು

ಸಿತಾರಾಮ ಗೋವಿಂದ ಶೇಟ,

ಕೊಚ್ಚಿಕರ. ಗುರ್ಜರಗಲ್ಲಿ, ಕುಮಟಾ.

ಸ್ಪೆಶಲ್ ಮೊಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರಕೊಳ್ಳಬಹುದು. ಸವಲತ್ತಿಯ ದರಗಳು ಇಟ್ಟಿರುವೆವು.

ನಮ್ಮ ಪತ್ತೆ —

ಗ್ಯಾತೊಂಡೇ ಬ್ರದರ್ಸ,

ಮೊಟರ ಡೀಲರ್ಸ, ಓನರ್ಸ,

ಕಾರವಾರ.

ಹೊಸ ಜವಳಿ ದುಕಾನು.

ನಮ್ಮಲ್ಲಿ ತರತರದ ಖೊಂಬ್ಯ, ಶಾಲು, ಚಿಟ್ಟಗಳು, ಟ್ವೀಲಗಳು, ಕರ್ಟಿಂಗ ವಸ್ತ್ರಗಳು ಕ ನಮೂನೆವಾರ ಪಟ್ಟೆ ಧೋತರ ಜೋಡುಗಳೂ. ಮಹಾತ್ಮಾ ಗಾಂಧಿಯವರ ಟೊಪ್ಪಿಗೆಗಳೂ, ಕ ಕೋಟಿನ ಕುಪ್ಪಸ ಸ್ಕರ್ಟಿನ ಖಾದಿಗಳೂ, ಸೊಲ್ಲಾಪೂರ ಗಿರಣಿಯ ತರ್ಹೇವಾರ ಸೀರೆಗಳೂ, ಕೋಟಿನ ವಸ್ತ್ರಗಳೂ, ಅರುವಾಟಿದ, ನಾಗಪೂರ ಮೊದಲಾದ ದೇಶಗಳ ಧೋತರ ಜೋಡುಗಳೂ, ಕವಾರ್ಪೂರ, ಗದಗ, ಹುಬ್ಬಳ್ಳಿಯ ಉತ್ತಮ ಪ್ರತಿಯ ಸೀರೆಗಳೂ, ಇಳಕಲ ನಮೂನೆ ತರವಾರ ಸೀರೆಗಳೂ, ಮಲಬಾರ ಪಟ್ಟ ಪಟ್ಟೆ ತರತರದ ನಮೂನೆಯ ತರವಾರ ಸೀರೆಗಳೂ, ಕೆಂಪು ಗುಳೂ, ಸೀಲಿಂ ಮಹುರಿಯ ಕಮಾಲುಗಳೂ, ಕ ಚೀಟಿ ವಸ್ತ್ರಗಳೂ ಕ ಅಗ್ಗದ ಎಲ್ಲಾ ಬಗೆಯ ಮಗ್ಗದ ಪಟ್ಟೆಗಳೂ, ಬನಿಯನ್ ಕೋಟು, ಯತಿಗಳಿಗೆ ಬೇಕಾದ ಕಾಶ್ಮೀರ ತರವಾರ ನಮೂನೆವಾರ ಸೀರೆಗಳೂ, ಪಟ್ಟ ಮಿಶನ ತರತರದ ಚಿತ್ರಗಳೂ ಮಾರಾಟಕ್ಕ ಸರಿದಿಂದ ನಮ್ಮಲ್ಲಿ ಮಾರಾಟ ಮಾಡಲ್ಪಡುತ್ತವೆ ಬೇಕಾದ ವ್ಯಾಲಿಗೆ ಅದನ್ನ ಕಳುಹಿಸಿ ಕೊಡಲ್ಪಡುವವು

ಚಿತ್ರಿಗಿ ಗೋಪಾಳ ಸು. ಶ್ಯಾನಭಾಗ,

ಕ್ಲಾತ ಮರಚಂಟ ಎಂಡ ಕಮಿಶನ

ಏಜಂಟ ಕುಮಟಾ.

ಹೊಸ] ಉತ್ತಮ ಎಲ್ಲಾ ತರದ] ಸ್ಯಾಲು.

ಶಾಯಿ ಗುಳಿಗೆಗಳು ಮತ್ತು ಪೆಕೆಟ್ಟುಗಳು ಸಿಗುವವು ಒಂದಾವರ್ತಿ ಉಪಯೋಗಿಸಿ ನೋಡಿರಿ. ಗುಳಿಗೆ ೧೦೦ ಕ್ಕೆ ೧೫ ಆಣೆ. ಪೆಕೆಟ್ಟು ೧೦೦ ಕ್ಕೆ ೧೪ ಆಣೆ ಸೆಂಪಲಿಗೆ ೧ ಆಣೆ ಪೋಸ್ಟ ತಗೆದುಕೊಂಡರೆ ಭರಪೂರ ಕಮಿಶನು ಕೊಡುವೆವು ೧೦೦ ಕ್ಕಿಂತ ಕಡಿಮೆ ಕಳುಹಿಸಲಾರೆವು

ಪತ್ತೆ — ದಿ. ನೆಶ್ನಲ್ ನ್ಯೂ ಇಂಕ ಕಂಪನಿ,

ಹೊನ್ನಾವರ.

ಲೋಕಮಾನ್ಯವಾದ ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ಲೆಂಡೇಲ ಇಷ್ಟೇಟಿನ, ಎಲ್ಲಾ ತರದ ಚಹಾ ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್) ಹೋಲ ಕ ಕಿರಕೋಳ ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ ಈಗಲೇ ಬಂದಿರುತ್ತದೆ. ಪತ್ರದ್ವಾರ ದರದ ವಿಚಾರಿಸಿ ಕೊಳ್ಳಿರಿ.-

ವಿ. ಪಿ. ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ. ಉತ್ತರ ಕಾನಡಾ.

HONAWAR. (N. Kanara)

NOTICE.

Wanted temporarily for service in North Kanara five vernacular clerks for rain gauge observation work. Pay Rs 30/- per month (consolidated). Apply immediately in writing to the Engineer, in charge Hydro-Electric Surveys, Southern Division, Belgaum.

S. V. Richards
Engineer, in charge Hydro-Electric Surveys, Southern Division,
BELGAUM.

NOTICE.

Sales of the annual Coupes of S. D. Kanara, will be held at 2 P. M on Monday, the 9th May 1921, at Honawar by the undersigned.

Honavar. 30-4-1921 — **M. S. Tuggerse.** Divisional Forest Officer, Kanara S. D.

WANTED AT ONCE

A **qualified Engineer** with experience of **Saw Mill work** to take charge of the **Ramanguli Saw Mill** in C D Kanara. **Salary Rs. 100** - per Mensem, with Rs 15 - Local allowance.

Applications to be sent to Undersigned together with copies of testimonials

Camp— Ankola, 1st May, 1921. — **C. GILBERT.** *Divisional Forest Officer C. D. Kanara.*

"ಅಧಿಕಾರಿ ವರ್ಗದ ದುರಾಗ್ರಹ."

ಈ ತಾಲೂಕಿನೊಳಗಿನ ಕೆಲವು ಜಮೀನದಾರರಾದ ಮತ್ತು, ಸ್ವಾಭಿಮಾನವುಳ್ಳ ಪಟೇಲರು ರಾಜೀನಾಮೆ ಕೊಟ್ಟಿರುವದು ಜಾಹೀರ ಸಂಗತಿಯಾಗಿರುತ್ತದೆ. ಇಂಥವರಮೇಲಿರುವ ತಮ್ಮ ವಕ್ರ ಕಟಾಕ್ಷವನ್ನು ಸ್ಥಾನಿಕ ಅಧಿಕಾರಿಗಳು ಅನೇಕ ವಿಧದಿಂದ ವ್ಯಕ್ತಪಡಿಸುತ್ತಿದ್ದಾರೆ. ರಾಜೀನಾಮೆ ಕೊಟ್ಟ ಪಟೇಲರು ತೀರ್ವೆ ಹಣವನ್ನು ಮುದ್ದತ್ತಿನಲ್ಲಿ ಕೊಡಲಿಲ್ಲವೆಂಬ ನೆವದಿಂದ ಪುನಸ್ತಿಗೆ ಬಂದ ಹಾಗೆ ತಂಡ ಆಕರಣೆಮಾಡುತ್ತಾರೆ. ಇಲ್ಲಿಯ ಪೈಕಿ ಸದಾಶಿವಳ್ಳಿ ಫಿರ್ಕಾ ಭೈರುಂಬೆಯಲ್ಲಿರುವ ವೆಂಕಪ್ಪ ಹೆಗಡೆ ಎಂಬವನು ೮೦೨-೦-೦ ತೀರ್ವೆ ಕೊಡುವ ಜಮೀನದಾರನಾಗಿದ್ದು, ಸದ್ರಿಯವನ ಮಗನು ಮೊದಲನೇ ಹಪ್ತೆ ವಸೂಲಿ ಶುರು ಆಗುವದರ ಮೊದಲೇ, ತನ್ನ ಪಟೇಲಿಗೆ ರಾಜೀನಾಮೆ ಕೊಟ್ಟಿರುತ್ತಿದ್ದನು ಚ್ಯಾರ್ಜ ಆ ಫಿರ್ಕಾ ಶಾನಭೋಗನ ಕಡೆ ಇತ್ತು. ಪರಂತು ವಸೂಲಿ ಕಾಲಕ್ಕೆ ಸದ್ರಿ ಶ್ಯಾನಭೋಗ ಲಕ್ಷ್ಮಣರಾವ ರಾವಪಟ್ಟಿ ಎಂಬವನು ಮರಣೋನ್ಮುಖನಾಗಿ ಬಿದ್ದಿರುತ್ತಿದ್ದಾಗ್ಯೂ ಆತನು ಮರಣಪಟ್ಟು ಕೆಲವು ದಿನಗಳ ವರೆಗೆ ಚ್ಯಾರ್ಜ ಜೇರ್ಳಾರ ಕಡಿಗೆ ಕೊಡಸಲಿಲ್ಲ. ಇಂಥ ಪ್ರಸಂಗದಲ್ಲಿ ಮೇಲೆ ಹೇಳಿದ ಖಾತೇದಾರನ ಮಗನು ೮-೧೦ ಮೈಲು ದೂರದಿಂದ ಶಿರ್ಸಿಗೆ ಬಂದು, ಇನಚ್ಯಾರ್ಜ ಶ್ಯಾನಭೋಗನ ತಪಾಸ ಹತ್ತವೆ ಪರತ ಹೋಗಬೇಕಾದ್ದರಿಂದ, ಮುದ್ದತ್ತಿನ ಒಳಗೆ ಅಂದರೆ ಫೇಬ್ರುವರಿ ೧೫ ರ ಒಳಗೆ ತೀರ್ವೆ ಹಣ ತುಂಬಲಿಕ್ಕೆ ಶಕ್ತನಾಗಲಿಲ್ಲ ಎರಡು ಮೂರು ದಿವಸಗಳ ತರುವಾಯ, ಅಂದರೆ ೧೮ ನೇ ತಾರೀಕಿಗೆ ಪುನಃ ಆತನು ಶಿರ್ಸಿಗೆ ಬಂದು ತಪಾಸ ಮಾಡಲಾಗಿ, ಮುದ್ದತ್ತ ವಿಸರುವ ದಿವಸ ಚ್ಯಾರ್ಜ ಹೊಸಬನ ಕಡೆ ಕೊಡಿಸಿತ್ತಾಗಿ ತಿಳಿದದ್ದರಿಂದ ಸದ್ರಿ ಹೊಸ ಶ್ಯಾನಭೋಗನ ಕಡೆ ೯ ದಿವಸವೇ ಹಣ ಕೊಟ್ಟನು. ಇದರಲ್ಲಿ ಖಾತೆದಾರನ ತಪ್ಪು ಎಳ್ಳಷ್ಟಾದರೂ ಇಲ್ಲದೇ ಇದ್ದಾಗ್ಯೂ, ಆತನು ಭೈರುಂಬೆ ಗ್ರಾಮಕ್ಕೆ ಕೊಡಬೇಕಾದ ೩೦೦-೦-೦ ರ ರಕಮಿಗೆ ೪೦-೦-೦ ಮತ್ತು ಇನ್ನೊಂದು ಗ್ರಾಮಕ್ಕೆ ಕೊಡಬೇಕಾದ ೧೪ ೦-೦ ರಕಮಿಗೆ ೪-೦-೦ ಅಂತೂ ರೂ. ೨೪-೦-೦ ದಂಡ ಆಕರಣೆಯಾಗಿ ಜಪ್ತಿಯಿಂದ ವಸೂಲ ಮಾಡ ಪತೆ [illegible] ಈ ವಿಷಯದಲ್ಲಿ ಇನ್ನೊಂದು [illegible] ಸಂಗತಿ ಎಂದರೆ, ಅದೇ ತಾರೀಕಿಗೆ [illegible] ತೀರ್ವೆಯನ್ನು ಕೊಟ್ಟಿರುತ್ತಿದ್ದಾಗ್ಯೂ, [illegible] ಇಲ್ಲ. ಇದರಿಂದ [illegible] ಅಧಿಕಾರಿ [illegible] ತನ್ನ [illegible]

[illegible]

—————

ಸಾಕ್ಷರತೆಯೂ, ಅದರ ಪ್ರಸಾರವೂ.

[illegible] ವಹೋ, ಅವನು ಸಾಕ್ಷರಕಿದ್ದ ಎಳ್ಳಷ್ಟಾಗ [illegible] ಮಾರಿಗಿಂತ ಲೂ, ಹೆಸರು ' ವೆಂಕಟರಮಣ ' ನೆಂದಿದ್ದರೆ, ವೆಂಕಟ ರಾಜು, ಎಂದಾಗಲಿ, ಇಲ್ಲವೆ ' ವೆಂಕ [illegible] ', ಎಂದಾಗಲಿ ಸಹಿ ಮಾಡುವವರಿಗಿಂತಲೂ ಇವನು [illegible] ಪಟ್ಟಿನಿಂದ [illegible] ಶ್ರೇಷ್ಠನೂ ಇರುವನು. ನಮ್ಮಲ್ಲಿ ಎತ್ತು, ಹಬ್ಬೆರಳಿನ ಗುರುತಿನವರ ಸಂಖ್ಯೆಯೇ ಅಪರಿಮಿತವೆಂದು ಹೇಳಿದರೆ, ಅತಿಶಯೋಕ್ತಿಯು ಎಂದಿಗೂ ಆಗಲಾರದು. ಇಂಥ ನಿರಕ್ಷರಕುಕ್ಷಿಗಳ ಬಾಳುವೆಗಿಂತಲೂ, ಪಶುಪಕ್ಷಿಗಳ ಬಾಳುವಿಕೆಯೇ ಮೇಲ್ತರದ್ದಲ್ಲವೇ? ಇವರಿಗೆ ಸೃಷ್ಟಿಕರ್ತ ನಿತ್ತ ಬುದ್ಧಿಯೆಂಬದೊಂದು ಅತ್ಯಂತ ಅಮೌಲ್ಯವಾದ ಶಕ್ತಿಯಿರುತ್ತಿದ್ದರೂ, ಕೇವಲ ಆಹಾರ-ನಿದ್ರಾ-ಭಯ-ಮೈಥುನಾರ್ಥವಾಗಿ, ಈ ಪ್ರಪಂಚದಲ್ಲಿ ತಾವು ಏನೇನೋ ಕೃತ್ಯಗಳನ್ನೆಸಗುವರು, ಎಂತೆಂತೋ ಜೀವಿಸುವರು, ಕಡೆಗೆ ಒಂದು ದಿನ ಥಕ್ಕನೆ ಮೃತ್ಯುವಿನ ಬಾಯಿಗೆ ತುತ್ತಾಗಿ, ಎಲ್ಲಿಯೋ ಅದೃಶ್ಯವಾಗಿ ಹೋಗುವರು! ಇರಲಿ.

ಮನುಷ್ಯನು ಸುಶಿಕ್ಷಿತನಿರಲಿ, ಅಶಿಕ್ಷಿತನಿರಲಿ, ಜ್ಞಾನಿಯಾಗಿರಲಿ, ಇಲ್ಲವೆ ಅಜ್ಞಾನಿಯಾಗಿರಲಿ, ಆತನು ಓದುಬರೆಯು ಬಲ್ಲವನಾದರೆ, ಸಾಕ್ಷರನೆಂದು ಕರೆಯಲ್ಪಡುವನು. ಹೀಗೆ ಪಂಡಿತ ಪಾಮರರೀರ್ವರಲ್ಲಿಯ ಈ ಆರತಕ್ಕ ಸಾಕ್ಷರತೆಯು ಒಂದೇಯಾಗಿರುವದು. ನಮ್ಮ ದೇಶದಲ್ಲಿ ೧೦೦ರಲ್ಲಿ ೩ ಜನರು ಮಾತ್ರ ಸಾಕ್ಷರರು ಸಿಗುವರು. ಆದರೆ ಜಪಾನ, ಅಮೇರಿಕಾ, ಇಂಗ್ಲಂಡ ಮೊದಲಾದ ದೇಶಗಳಲ್ಲಿ ೧೦೦ರಲ್ಲಿ ೫-೬ ಜನರು ನಿರಕ್ಷರರಿದ್ದರೆ, ಪರಮಾವಧಿಯಾಯಿತು. ನೋಡಿರಿ, ನಮ್ಮ ದೇಶವು ಇನ್ನೂ ಎಷ್ಟು ಹೀನ ಸ್ಥಿತಿಯಲ್ಲಿರುವದು? ಇತರ ದೇಶಗಳಲ್ಲಿ ೧೦೦ರಲ್ಲಿ ೫-೬ ಜನರು ಮಾತ್ರ ನಿರಕ್ಷರರಾಗಿದ್ದರೆ, ನಮ್ಮ ದೇಶದಲ್ಲಿ ಅವರಷ್ಟೇ ಜನರು ಸಾಕ್ಷರರೂ ಕೂಡ ದುರ್ಲಭ! ಅವರು ಸ್ವಾವಲಂಬಿಗಳೂ, ಸ್ವಾತಂತ್ರ್ಯಪ್ರಿಯರೂ, ಸತತೋದ್ಯೋಗಿಗಳೂ ಆಗಿದ್ದರೆ, ನಾವು ಸದಾ ಪರಾವಲಂಬಿಗಳೂ, ಪಾರತಂತ್ರಿಗಳೂ ನಿರುದ್ಯೋಗಿಗಳೂ ಆಗಿ, ಬಾಳುವೆವು. ಅವರಲ್ಲಿಯೂ, ನಮ್ಮಲ್ಲಿಯೂ ಇಷ್ಟೊಂದು ಮಹದಂತರವುಂಟಾಗಲು, ಕಾರಣಗಳು ಯಾವವೆಂಬದನ್ನು ಸಾವೀಗ ವಿವರಿಸತೊಡಗುವದಿಲ್ಲ. ಮತ್ತು ಅದು ನಮ್ಮ ಪ್ರಸ್ತುತದ ವಿಷಯವೂ ಅಲ್ಲ. ಆದರೆ, ಈಗಿನ ಕಾಲದಲ್ಲಿ ಸಾಕ್ಷರತೆಯ ಮಹತ್ವವೆಷ್ಟಿರುವದು, ಮತ್ತು ಅದರ ಆವಶ್ಯಕತೆಯೇನು, ಸಾಕ್ಷರತಾಪ್ರಸಾರದಲ್ಲಿ ನಮ್ಮ ದೇಶವು ಇತರ ದೇಶಗಳಿಗಿಂತಲೂ, ತೀರ ಹಿಂದುಳಿದದ್ದರ ಕಾರಣವೇನು, ನಮ್ಮಲ್ಲಿಯ ಸುಶಿಕ್ಷಿತರು ಈ ಸಾಕ್ಷರತಾಪ್ರಸಾರದ ಸಂಬಂಧದಿಂದ ಮಾಡತಕ್ಕ ಕರ್ತವ್ಯಗಳಾವವು, ಸಾಕ್ಷರತಾಪ್ರಸಾರಣೆಯು ಕೇವಲ ದೇಶದೊಳಗಿನ ಸುಶಿಕ್ಷಿತ ಜನರನ್ನೇ ಹೆಚ್ಚಾಗಿ ಅವಲಂಬಿಸಿರುವದಲ್ಲದೆ, ಸರಕಾರವನ್ನು ಅವಲಂಬಿಸಿರುವದಿಲ್ಲ, ಆದರೆ, ಸರಕಾರವು ಮಾರ್ಗದರ್ಶಕವಾಗಿ ಮಾತ್ರವಿರುವದು, ಇಂಥ ಕಾರ್ಯವನ್ನು ಎಂಥವರು ಕೈಕೊಳ್ಳಬೇಕು ಎಂಬೀ ಕೆಲವು ಸಂಗತಿಗಳನ್ನು ಕುರಿತು ಕೆಲವು ವಿವೇಚನೆಗಳನ್ನು ನಮಗೀಗ ಅತ್ಯವಶ್ಯವಾಗಿ ಮಾಡಬೇಕಾಗಿರುವದು.

ಈಗ ಗ್ರಂಥಸ್ಥವಾದ ಪ್ರತಿಯೊಂದು ಭಾಷೆಗೂ ಲಿಪಿಯು ಇದ್ದೇ ಇರುವದು ಪೂರ್ವಕಾಲದಲ್ಲಿ ಈಗಿನಂತೆ ಪುಸ್ತಕಗಳೇ ಇದ್ದಿಲ್ಲ ಯಾಕಂದರೆ, ನಮ್ಮ ಆರ್ಯರು ಹೊಟ್ಟೆಯೊಳಗೆ ತಮಗೆ ಬೇಕಾದಷ್ಟು ಜ್ಞಾನಸಂಗ್ರಹ ಮಾಡಿಕೊಂಡು, ಅದನ್ನು ತಮ್ಮ ಸ್ಮರಣದಲ್ಲಿಯೇ ಇಟ್ಟುಕೊಳ್ಳುತ್ತಿದ್ದರು. ಮತ್ತು ತಮ್ಮ ಮಕ್ಕಳ ಸ್ಮರಣದಲ್ಲಿ ಯಾದರೂ ಅದು ಉಳಿಯುವಂತೆ, ಪ್ರತಿನಿತ್ಯವೂ ಅವರಿಗೆ ಪಠಿಸಿದಂತೆ ಎಲ್ಲವನ್ನೂ ಹೇಳಿಕೊಡುತ್ತಿದ್ದರು. ಇದೇ ಕ್ರಮವು ವಂಶಪರಂಪರೆಯಿಂದ ಮುಂದೆ ಎಷ್ಟೋ ಕಾಲಗಳ ವರೆಗೆ ಸಾಗಿತು. ಬಳಿಕ ಲಿಪಿಯು ಪ್ರಚಾರದಲ್ಲಿ ಬಂದಂದಿನಿಂದ ಲೇಖನವು ತಲೆದೋರಲಾರಂಭಿಸಿತು. ಆದರೂ, ಈಗಿನಂತೆ ಆಗ ಕಾಗದಗಳಿಲ್ಲದ್ದರಿಂದ, ತಾಳಪತ್ರದ ಮೇಲೆ ಮುಖ್ಯಮುಖ್ಯ ವಿಷಯಗಳನ್ನಷ್ಟೇ ಬರೆಯುತ್ತಿದ್ದರು ಇದುವರೂ ಎಲ್ಲರಿಗೂ ಸಾಧ್ಯವಿದ್ದಿಲ್ಲ. ಮತ್ತು ಈ ರೀತಿ ಬರೆದದ್ದನ್ನು ಓದಲಿಕ್ಕಾದರೂ ಅಲ್ಪ ಜನರಿಗೇ ಮಾತ್ರ ಗೊತ್ತಾಗುತ್ತಿತ್ತು. ಇಷ್ಟೊಂದು ವಿವರಿಸಲಿಕ್ಕೆ ಕಾರಣವೇನಂದರೆ, ಮೊದಲಿನ ಕಾಲದಲ್ಲಿ ಓದು-ಬರಹವು ಎಲ್ಲರಿಗೂ ಬರುತ್ತಿರಲಿಲ್ಲ. ಮತ್ತು ಅದಕ್ಕೆ ಆಗ ಅಷ್ಟೊಂದು ಮಹತ್ವವು ಕೂಡ ಇದ್ದಿಲ್ಲ. ಆದರೆ, ಸಾಕ್ಷರತೆಯು ಈ ಕಾಲದಲ್ಲಿ ಜನ್ಮವನ್ನು ಮಹತ್ವ ಹೊಂದಿದ್ದಿತೆಂದು ಹೇಳಬಹುದು. ಸದ್ಯಃ ಕಾಲದಲ್ಲಿ ಅದಕ್ಕೆ ಪೂರ್ಣ ಯೌವನಾವಸ್ಥೆಯು ಪ್ರಾಪ್ತವಾಗಿರುವದು. ನಿರಕ್ಷರರು ಸಾಕ್ಷರರ ಸಾಕ್ಷರತೆಯನ್ನು ಕಂಡು ಬೆರಗಾಗಿ, ತಮ್ಮ ನಿರಕ್ಷರತೆಯ ವಿಷಯವಾಗಿ ಬಹಳ ಪಶ್ಚಾತ್ತಾಪ ಬಡುವರು. ತಾವು ಸಾಯುವತನಕ ಹೀಗೆಯೇ ಇರಬೇಕಾಗುವದೆಂದು ಅವರು ವ್ಯಸನಪ್ರಾಯರಾಗುವರು. ಅವರ ಈ ವ್ಯಸನವನ್ನು ದೂರ ಮಾಡುವವರು ಯಾರೂ ಇಲ್ಲವೇ? ಇದ್ದೇ ಇರುವರು ಅವರು ಯಾರೆಂಬುದನ್ನು, ಅವರು ಮಾಡತಕ್ಕದ್ದೇನೆಂಬದನ್ನೂ ನಾವು ಮುಂದೆ ವಿವರಿಸುವೆವು. ನಿರಕ್ಷರರು ತಮ್ಮ ಸಾಕ್ಷರರನ್ನು ಕಂಡರೆ, ದೇವರೆಂದೇ ಭಾವಿಸುವರು ಯಾಕಂದರೆ, ಸಾಕ್ಷರತೆಯೆಂಬದೊಂದು ಅಘಟಿತಘಟನಾ ಸಾಮರ್ಥ್ಯವೆಂದು ಅವರು ತಿಳಿಯುವರು ಇದರ ಮೇಲಿಂದಲೇ ಸಾಕ್ಷರತೆಯ ಮಹತ್ವವೆಷ್ಟಿರುತ್ತದೆಂಬುದು ಬಹಳ ಚನ್ನಾಗಿ ಗೊತ್ತಾಗುವದು. ಜನರಿಗೆ ತಮ್ಮ ನಿತ್ಯವ್ಯವಹಾರದಲ್ಲಿ ಅಡಿಗಡಿಗೆ ಅದರ ಮಹತ್ವವು ಅನುಭವಕ್ಕೆ ಬಂದದ್ದಾಗಿರುವದು. ಕೋರ್ಟು ಕಚೇರಿಗಳ ಆಫೀಸುಗಳಂತೂ ಅದರ ಹೊರತು ಬೇರೆ ಗತಿಯೇ ಇರುವದಿಲ್ಲ.

(ಮುಂದರಿಯುವದು.)

“ ಹಿಂದುಸ್ಥಾನದ ಸಾಂಪತ್ತಿಕ ಕ್ಷಯರೋಗವೂ ಅದರ ಪ್ರತೀಕಾರವೂ. ”

[ಲೇಖಕ— ಕೃಷ್ಣದಾಸ, ೩೯.]

ಜೇವಾಂಕಲದೊಳಗಿನ ವ್ಯಕ್ತಿ ಒಂದು ಹಾಸ್ಪತ್ರೆ, ದವಾಖಾನೆಯಲ್ಲಿ ಎಚ್ಚತ್ತು, ತನ್ನ ಉತ್ಕರ್ಷವನ್ನು ಸಾಧಿಸಿಕೊಂಡು, ಸುಖದಿಂದ ಜೀವಿಸ ಹತ್ತಿ ಎಷ್ಟೋ ಸಂವತ್ಸರಗಳಾಗಿ ಹೋದರೂ ಕುಂಭಕರ್ಣನಂತೆ ನಿದ್ರಾಸುಖವನ್ನು ಅನುಭವಿಸುತ್ತಲಿದ್ದ ಭಾರತೀಯ ರಾಜ ನಾವು ಮಾತ್ರ, ಮೊನ್ನೆ ಮೊನ್ನೆ ಜಾಲಿಯಾನವಾಲಾ ಬಾಗಕ್ಕೆ ಮಾನವೀ ರಕ್ತದಿಂದ ಬಣ್ಣ ಕೊಟ್ಟಿರುವ ಸಾಜ್ಯಸಿದ್ಧ ಡಾಯರ (ಬಣ್ಣ ಕೊಡುವವ) ನ ತೋಫು ಕುಡುಕಿಗಳ ಗರ್ಜನೆಗೆ ಗಾಬರಿಯಾಗಿ ಎಚ್ಚತ್ತು, ಮುಸುಕಿನೊಳಗೆ ಎಡಲೋ, ಅದೇ ನಿದ್ರಿಸಬೇಕೆಂದು ಹಿಡಿಗೊಟ್ಟು ಕೇಳುತ್ತಿರಲು, ಪಂಜಾಬದ ಕೊಲೆಯ ಕೋಲಾಹಲವೂ, ಅಲ್ಲಿಯ ಬಾಲವೃದ್ಧರ ಕರುಣಾಜನಕವಾದ ಆಕ್ರಂದನವೂ, ಖಿಲಾಫತ್ತಿನ ಸಲುವಾಗಿ ಹೊಟ್ಟೆಯಲ್ಲಿ ಬೆಂಕಿ ಬಿದ್ದು ತಳಮಳಿಸುತ್ತಿರುವ ಕೆಲವು ಮಹಮ್ಮದೀ ಬಾಂಧವರ « ಅರೇ ಅಲ್ಲಾ ? » ಎಂಬ ಗೋಳಾಟವೂ, ಒಂದೇಸಾರಿ ನಮ್ಮ ಕರ್ಣರಂಧ್ರಗಳನ್ನು ಕೊರೆಯ ಹತ್ತಿದವು. ಆದ್ದರಿಂದ ನಾವು ನಮ್ಮ ಆಲಸ್ಯವನ್ನು ಕ್ಷಣ ಹೊತ್ತು ಬದಿಗಿಟ್ಟು ಹ್ಯಾಗಾದರೂ ಮಾಡಿ ಹಾಸಿಗೆಯ ಮೇಲೆಯೇ ಎದ್ದು ಕೂತಿರಲು, ಮಹಾತ್ಮಾ ಗಾಂಧಿ, ಮೌಲಾನಾ ಶೌಕತ ಅಲ್ಲಿ, ಮೊದಲಾದ ಮಹಾನ್ ಪುರುಷ ಪ್ರಭೃತರ ಅಸಹಕಾರವೆಂಬ ರಣಗರ್ಜನೆಯನ್ನು ಕೇಳಿದ ಕೂಡಲೇ, ಕುವಿಚಾರಿಗಳೂ ಬೆದರಿದರು. ಆದ ಎಷ್ಟೋ ನಮ್ಮ ಬಾಂಧವರು ಅವರನ್ನು ಹಿಂಬಾಲಿಸಿ ನಡೆದರು. ಆದರೆ ನಾವು ಮಾತ್ರ ಕೈಲಾಗದ ಹೇಡಿಗಳಂತೆ, ತಲೆ ಕೆರೆಕೊಳ್ಳುತ್ತ ಕಣ್ಣು ತಿಕ್ಕಿಕೊಳ್ಳುತ್ತ, ಮತ್ತು « ಹ » ಎಂದು ಆಕಳಿಸುತ್ತ, ಗಾಢವಾದ ಬಾಯಿ ತೆರೆದು ತಿರುಗಿ ಕೈಕಾಲು ಚಾಚಿಕೊಳ್ಳುವ ಆಲೋಚನೆಯಲ್ಲಿಯೇ ಇರುವದು ಹಾಸ್ಯಾಸ್ಪದವೇ ಸರಿ.

ಈಗ ಭರದಿಂದ ಸಾಗಿರುವ ಅಸಹಕಾರವೆಂಬ ಯುದ್ಧಕ್ಕೆ ಶಸ್ತ್ರಬಲದ ಅವಶ್ಯಕತೆಯೇ ಇಲ್ಲ. ಅದಕ್ಕೆ ಪವಿತ್ರವಾದ ಆತ್ಮಿಕ ಬಲವೇ ಬೇಕಾಗಿದೆ. ಇಷ್ಟು ದಿವಸಗಳ ಯಾಚಕವೃತ್ತಿಯ ಅನುಭವದಿಂದ, ನಾವು «ಉದ್ಧರೇದಾತ್ಮನಾತ್ಮಾನಂ» ಎಂಬ ಭಗವದುಕ್ತಿಯನ್ನನುಸರಿಸದಿದ್ದರೆ, ನಮಗೆ ಗತ್ಯಂತರವೇ ಇಲ್ಲ. ಆದ್ದರಿಂದ, ಎರವನೇಯವರ ಮೇಲೆ ಅವಲಂಬಿಸಿರದೆ, ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳಬೇಕಾಗಿದೆ. ನಮ್ಮ ದೇಶಕ್ಕೆ ಸಾಂಪತ್ತಿಕ ಕ್ಷಯರೋಗವು ಹತ್ತಿರುತ್ತದೆ. ಪರದೇಶೀ ಮಾಲು ಎಂಬುವದೇ ಆ ರೋಗವು. ಆಹಾರ ಶಾರೀರಿಕ ಕ್ಷಯರೋಗವು ಮನುಷ್ಯನ ಶರೀರವನ್ನು ಹಿಂಡಿ, ಹಿಪ್ಪಿ ಮಾಡುವಂತೆ, ಸಾಂಪತ್ತಿಕ ಕ್ಷಯರೋಗವು ನಮ್ಮ ದೇಶದ ಸಂಪತ್ತನ್ನು ವಿಪರೀತವಾಗಿ ಹೀರಿ, ನಮ್ಮನ್ನು ಇಂಥ ನಿಕೃಷ್ಟಾವಸ್ಥೆಗೆ ತಂದಿರುತ್ತದೆ. ಮತ್ತು ಆ ರೋಗದ ಯಥಾರ್ಥ ಜ್ಞಾನವು ವಾಚಕರಿಗೆ ಆಗಬೇಕೆಂಬ ಉದ್ದೇಶದಿಂದ, ಪ್ರತಿ ವರ್ಷ ನಮ್ಮಲ್ಲಿಂದ ಯಾವ ಯಾವ ಮಾಲಿನ ಮೂಲಕ ಪರದೇಶಕ್ಕೆ ಹೋಗುತ್ತಿರುವ ಸಾಂಪತ್ತಿಕ ವಿವರವು ಇದರಡಿಯಲ್ಲಿ ಕೊಟ್ಟಿರುತ್ತದೆ. ಅದನ್ನಷ್ಟು ನಾವು ನೋಡಿಕೊಂಡು ಮುಂದೆ ಸರಳುವಾ.

ಪ್ರತಿವರ್ಷ ಪರದೇಶಗಳಿಗೆ ಹೋಗುತ್ತಿರುವ ನಮ್ಮ ದ್ರವ್ಯರೂಪಿ ರಕ್ತಪ್ರವಾಹ—

(೧) ವಸ್ತ್ರ, ೫೦ ಕೋಟಿ; (೨) ಯಂತ್ರ, ೩೧ ಕೋಟಿ, (೩) ರೇಶಿಮೇ ವಸ್ತ್ರ, ೨॥ ಕೋಟಿ; (೪) ಘನ್ಸಕವ ಸ್ಟೀಲನ ೧॥ ಕೋಟಿ, (೫) ದಿವದ, ೪ ಕೋಟಿ. (೬) ಬೀಜದ ಕಾಜು, ೧ ಕೋಟಿ, (೭) ಬೆಂಕಿಪೆಟ್ಟಿಗೆ ೧॥ ಕೋಟಿ; (೮) ಸಕ್ಕರೆ, ೧೭ ಕೋಟಿ; (೯) ಕಾಗದ ೧॥ ಕೋಟಿ; (೧೦) ಬಣ್ಣ, ೪೬ ಲಕ್ಷ; (೧೧) ಬಿಸ್ಕೀಟು, ೩೫ ಲಕ್ಷ; (೧೨) ಕೃತ್ರಿಮ ಹಾಲು ೩೩ ಲಕ್ಷ, (೧೩) ಇತರ ಖಾದ್ಯ ೪೩॥ ಲಕ್ಷ; (೧೪) ಹಾರ್ಮೋನಿಯಮ್ ವಗೈರೆ ವಾದ್ಯ ೭॥ ಲಕ್ಷ, (೧೫) ಟಾಯ್ಲೆಟಸ್, ೨೨ ಲಕ್ಷ; (೧೬) ಚಾಕು ವ ಕತ್ತರಿ, ೭॥ ಲಕ್ಷ, (೧೭) ಒಳೆ, ೨೩ ಲಕ್ಷ, (೧೮) ಕೊಡೆ, ೩೨ ಲಕ್ಷ; (೧೯) ವ್ಯಾಪಾರದ್ರವ್ಯ, ೭॥ ಲಕ್ಷ; (೨೦) ಪೇಟೆಂಟ ಔಷಧಿ, ೨೦ ಲಕ್ಷ, (೨೧) ಬೀಡಿ ವ ಸಿಗರೇಟ, ೮೦ ಲಕ್ಷ, (೨೨) ರಬರ, ೯೧ ಲಕ್ಷ, (೨೩) ಮೋಟರ, ೧ ಕೋಟಿ ೩೯ ಲಕ್ಷ, (೨೪) ಆಟದ ಸಾಮಾನು, ೩೧ ಲಕ್ಷ, (೨೫) ಬೊಂಬೆಗೆ ವಗೈರೆ, ೧೨ ಲಕ್ಷ; (೨೬) ಬೂಟು, ೩೭॥ ಲಕ್ಷ ರೂಪಾಯಿ. ಅಂದರೆ, ಒಟ್ಟಿನಲ್ಲಿ ವರ್ಷ ನಮ್ಮಲ್ಲಿಂದ ಪರದೇಶಕ್ಕೆ ೧೧೬ ಕೋಟಿ, ೫೮ ಲಕ್ಷ ರೂಪಾಯಿಗಳು ಹೋಗುತ್ತವೆಂದಂತಾಯಿತು.

ಮೇಲೆ ಕೊಟ್ಟಿರುವ ಅಂಕೆಗಳು ೫ ವರ್ಷ ಹಿಂದಿನವು. ಅಂದರೆ ೧೯೧೫-೧೯೧೬ನೇ ಸಾಲಿನವಾಗಿದ್ದು, ಈಗಿನಂಥ ಮಿತಿಮೀರಿದ ತುಟ್ಟಿಯ ಕಾಲದಲ್ಲಿ ಅವು ಎಲ್ಲಿಗೆ ಬಂದು ಮುಟ್ಟುತ್ತವೆಂದು, ಲೆಕ್ಕ ಹಾಕಿ ನೋಡಿದರೆ, ನಮ್ಮ ಎದೆ ಒಡೆಯದೇ ಇರಲಿಕ್ಕಿಲ್ಲ. ಇದಲ್ಲದೆ, ಇನ್ನು ಕೋಟ್ಯಾವಧಿ ರೂಪಾಯಿಯ ಬೇರೆ ಮಾಲು ಸಹ ನಮ್ಮ ಹಿಂದುಸ್ಥಾನಕ್ಕೆ ಬರುತ್ತದೆ. ಮತ್ತು ಆ ಮಾಲದಿಂದ ನೋಡಿದರೆ, ನಮ್ಮಲ್ಲಿಂದ ಪರದೇಶಗಳಿಗೆ ಹೋಗುವ ಮಾಲು ಬಹಳ ಕಡಿಮೆ ಇರುತ್ತದೆ ಇದಲ್ಲದೆ ಇಲ್ಲಿಂದ ಹೊರಗೆ ಹೋಗುವ ಕಚ್ಚಾ ಮಾಲಿಗಿಂತ ಪರದೇಶಗಳಿಂದ ತಯಾರಾಗಿ ನಮ್ಮಲ್ಲಿ ಬರುವ ಮಾಲಿನ ಕಿಮ್ಮತ್ತು ಎಷ್ಟೋ ಪಟ್ಟು ಹೆಚ್ಚಾಗಿರುವದು. ಆ ಎಲ್ಲ ಫಾಯಿದೆಯು ಪರದೇಶದವರಿಗೇ ಆಗುತ್ತದೆ ಮತ್ತು ಕಚ್ಚಾ ಮಾಲಿನಿಂದ ಪಕ್ಕಾ ಮಾಲು ತಯಾರಿಸುವಾಗ, ಬೀಳುವ ಮಜೂರಿ ವ್ಯಾಪಾರಸ್ಥರ ಲಾಭ, ರೇಲವೆ, ವ ಹಡಗದ ಬಾಡಿಗೆ ವಗೈರೆ ಪರದೇಶದವರ ಪಾಲಿಗೆ ಬರುವವು. ಈ ರೀತಿಯಲ್ಲಿ ಪರದೇಶದ ಮಾಲೆಂಬ ಕ್ಷಯರೋಗವು ಮೈಗೆ ಹತ್ತಿದ ಜಿಗಳೆಯಂತೆ, ನಮ್ಮ ದೇಶದ ಸಂಪತ್ತನ್ನು ಮಿತಿಮೀರಿ ಎಳೆಕೊಳ್ಳ ಹತ್ತಿದೆ « ಹನಿ ಹನಿ ಕೂಡಿ ಹಳ್ಳ, ತೆನಿ ತೆನಿ ಕೂಡಿ ರಾಶಿ » ಎಂಬಂತೆ ಚಿಲ್ಲರೆ ಬಿಲ್ಲರೆಗಳಿಂದ ಸಹ ನಾವು ಕೋಟ್ಯಾವಧಿ ರೂಪಾಯಿಗಳನ್ನು ಕಳಕೊಳ್ಳ ಹತ್ತಿದ್ದೇವೆ. ಮಹಾತ್ಮಾ ಗಾಂಧಿಯವರು ನಮ್ಮ ಉತ್ಕರ್ಷಕ್ಕಾಗಿ, ಹಲವು ಸಾತ್ವಿಕ ಶಸ್ತ್ರಗಳನ್ನು ತೋರಿಸಿರುವರು. ಅವುಗಳಲ್ಲಿ ನಮ್ಮ ಸಾಂಪತ್ತಿಕ ಕ್ಷಯರೋಗಕ್ಕೆ « ಪರದೇಶೀ ಮಾಲಿಗೆ ಬಹಿಷ್ಕಾರ » ಎಂಬುವದು ರಾಮಬಾಣ ಔಷಧಿಯಾಗಿದೆ. ಆದ್ದರಿಂದ, ನಾವೆಲ್ಲರೂ ಅದನ್ನು ವಿಳಂಬ ಮಾಡದೆ, ಉಪಯೋಗಿಸ ತಕ್ಕದ್ದು ಅದರ ಕ್ರಮವೆಂದರೆ — (೧) ಶ್ರೀಮಂತರು ನಮ್ಮಲ್ಲಿ ಸಿಗುವ ಕಚ್ಚಾ ಮಾಲಿನಿಂದಲೇ ಬೇಕಾದ ಪಕ್ಕಾ ಮಾಲನ್ನು ನಮ್ಮ ದೇಶದಲ್ಲಿಯೇ ತಯಾರಿಸುವ ಏರ್ಪಾಡು ಮಾಡುವದು (೨) ವ್ಯಾಪಾರಸ್ಥರು ಪರದೇಶದ ಮಾಲನ್ನು ತರಿಸಲಿಕ್ಕಿಲ್ಲೆಂದು ನಿರ್ಧಾರ ಮಾಡುವದು. (೩) ಗಿರಾಕಿಗಳು ಸ್ವದೇಶೀ ಮಾಲನ್ನೇ ಕೊಂಡುಕೊಳ್ಳುವದಲ್ಲದೆ ಪರದೇಶೀ ಮಾಲನ್ನು ಮುಟ್ಟಲಿಕ್ಕಿಲ್ಲೆಂದು ನಿಶ್ಚಯಿಸುವದು ಹೀಗೆ ಮಾಡುವದರಿಂದ, ನಮ್ಮ ಸಾಂಪತ್ತಿಕ ಸ್ಥಿತಿಯು ಬೇಗನೇ ಸುಧಾರಿಸಿ, ನಮ್ಮ ದೇಶವೂ, ಇತರ ದೇಶಗಳಂತೆ ಅಭಿವೃದ್ಧಿಯನ್ನೈಯ್ದುವದರಲ್ಲಿ ಏನೂ ಸಂದೇಹವಿಲ್ಲ

ಜಂಗಲ ಕಮಿಶನ.

ಮುಂಬಯಿ ಸರಕಾರದ ಮಂತ್ರಿಗಳಾದ ನಾಮದಾರ ಮೇಥಾ ಸಾಹೇಬರು ಕಾರವಾರ ಜಿಲ್ಲೆಯ ರೈತರ ಕಾನನದ ಕಷ್ಟಗಳನ್ನು ಕಣ್ಣಾರೆ ನೋಡುವದಕ್ಕಾಗಿ, ಆ ಜಿಲ್ಲೆಯಲ್ಲಿ ತಿರುಗಾಡುತ್ತಿರುವರು. ಇವರ ಸಂಗಡ ಕನ್ಸರವೇಟರ, ಡಿಪ್ಟಿ ಜನಲ ಕನ್ಸರವೇಟರ, ಮುಂತಾದವರು ಇದ್ದು, ಇವರ ಮುಖದಿಂದಲೇ ರೈತರ ಕಷ್ಟನಷ್ಟಗಳನ್ನು ತಿಳಕೊಳ್ಳುತ್ತಿರುವರು. ನಾಮದಾರ ಮೋಟಿಗು ಸಾಹೇಬರನ್ನು ಕೆ ನ್ಯಾಯಾಸನದಲ್ಲಿಟ್ಟು, ವಿಚಾರಣೆ ನಡೆಯಿತೆಂದು ಹೇಳಲ್ಪಟ್ಟಿತು. ಅದೇ ಪ್ರಕಾರ ಬಿಹಾರದಲ್ಲಿಯಾದರೂ, ಕಸೂರದಲ್ಲಿಯೂ, ನಾಮದಾರ ಮೇಥಾ ಸಾಹೇಬರ ಮರ್ಜಿ ಹಿಡಿಸಾಗಿರುತ್ತದೆ.

ಸ್ವತಃ ಎಲ್ಲ ವಿದ್ಯಮಾನಗಳನ್ನು ತಿಳಕೊಂಡ ನಂತರ, ಇವರು ಐವರದೊಂದು ಕಮಿಟಿಯನ್ನು ನೇಮಿಸುವರು. ಅದರಲ್ಲಿ ಮೂವರು ಸರಕಾರಿ ಸ್ಥಾನದಾರರಾಗಿದ್ದು ಇಬ್ಬರು ರಂಗವಂಥವರಾಗುವರು. ಈ ಕಮಿಟಿಯ ಮುಂದೆ ಸಾಕ್ಷೀ ಹೇಳಲಿಕ್ಕೆ ಬನ್ನಿರೆಂದು, ಕಾಯದೆ ಕೌನ್ಸಿಲದ ಮೆಂಬರರಾದ ಮಿ॥ ಮುಧೋಳಕರರು ವರ್ತಮಾನ ಪತ್ರದಲ್ಲಿ ಪ್ರಸಿದ್ಧಪಡಿಸುತ್ತಾರೆ. ಆದರೆ ರೈತರು ಕಷ್ಟಾವಸ್ಥೆ ಎನ್ನುವ ಲಕ್ಷಣ ತೋರುವದಿಲ್ಲ. ನಾಮದಾರ ಮೇಥಾ ಸಾಹೇಬರು ತಮ್ಮನ್ನು ಕಾಣಲಿಕ್ಕೆ ಅಸಹಕಾರದ ಮುಂದಾಳುಗಳನ್ನು ಕರೆಸಿದರು. ಆದರೆ ಅವರು ಹೋಗಲೇ ಇಲ್ಲ. ಅಸಹಕಾರಿಗಳಿಗೆ ಈ ಕಮಿಟಿ ಅಥವಾ ಅದರ ಅಗತ್ಯವೇ ಇಲ್ಲೆಂದು ಹೇಳುತ್ತಿರುವರು. ಈ ಮೂಲಕ ಮುಂದೆ ಕೂಡುವ ಕಮಿಟಿಯಲ್ಲಿ ಸಾಕ್ಷೀ ನುಡಿಯುವದಕ್ಕಾಗಿ, ಯಾರೂ ಹೋಗಲಾರರೆಂದು ಹೇಳುವಂತಾಗಿರುತ್ತದೆ.

ಅಸಹಕಾರವಾದಿಗಳು ಈ ಕಮಿಶನದ ಮುಂದೆ ಸಾಕ್ಷೀ ನುಡಿಯಲಿಕ್ಕೆ ಹೋಗದಿದ್ದರೂ, ತಮ್ಮದೊಂದು ಕಮಿಟಿ ನೇಮಿಸಿ, ಪದ್ಧತಿ ಪ್ರಕಾರ ಮುಖ್ಯ ಮುಖ್ಯ ಠಾವುಗಳ ಬಗ್ಗೆ ಸಾಕ್ಷೀ ಕೇಳಿಕೊಂಡು, ಇಂಥ ಹಕ್ಕು ಸ್ವಾತಂತ್ರ್ಯಗಳು ದೊರೆಯಬೇಕೆಂದು ಜಾಹೀರ ರೀತಿಯಿಂದ ಪ್ರಸಿದ್ಧಪಡಿಸಿ, ಅದರದೊಂದು ಪ್ರತಿಯನ್ನು ನಾಮದಾರ ಮೇಥಾ ಸಾಹೇಬರಿಗೆ ಕಳಿಸಿಕೊಡಬೇಕೆಂದು ಸೂಚಿಸುತ್ತೇವೆ.

—ವಿಜಯ.

ಮಾಲೆಗಾಂವದಲ್ಲಿ ದಂಗೆ!

ನಾಶೀಕ ಜಿಲ್ಲೆಯ ಮಾಲೇಗಾಂವ ಎಂಬ ಪಟ್ಟಣದಲ್ಲಿ ಕಳೆದ ಎಪ್ರಿಲ ೨೫-೨೬ ನೇ ದಿವಸಗಳಲ್ಲಿ ಒಂದು ಕೋಲಾಹಲೀಯ ಪ್ರಕಾರದ ದಂಗೆಯು ಸಂಭವಿಸಿ, ೭-೮ ಮಂದಿಗಳ ಪ್ರಾಣಹಾನಿಯಾಯಿತು. ಈ ಪಟ್ಟಣದಲ್ಲಿ ಬಹುತೇಕ ಮುಸಲ್ಮಾನ ನೇಕಾರರ ವಸ್ತಿ ಇರುತ್ತಿದ್ದು, ಪ್ರಚಲಿತ ಅಸಹಕಾರದ ಮತ್ತು ಖಿಲಾಫತ ಚಳವಳಿಯು ಹಿಂದು-ಮುಸಲಮಾನರ ಐಕ್ಯದಿಂದ ಅಲ್ಲಿ ವಿಶೇಷ ಜೋರಿನಿಂದ ನಡೆಯುತ್ತಿತ್ತು. ಸದ್ಯಕ್ಕೆ ಮೀರಠದ ಒಬ್ಬ ಮೌಲವೀ ಬಂದು ವ್ಯಾಖ್ಯಾನಕ್ಕೆ ಬಂದ ಬಳಿಕ, ಅವರ ಉಪದೇಶದಿಂದ ಮಾಮಲೇದಾರರ ಹುಕುಮಿನ ವಿರುದ್ಧ ಸ್ವಯಂಸೇವಕರು ಕೈಯಲ್ಲಿ ದಂಡವನ್ನು ಹಿಡಿದುಕೊಂಡು. ತಿರುಗಾಡಿದ್ದಕ್ಕೆ ಅವರಮೇಲೆ ಖಟ್ಲೆಯಾಗಿ, ಫೌಜದಾರ ಬಹಾದ್ದೂರರ ಕಚ್ಚೇರಿಯಿಂದಲೂ ಜೋರಿನ ಆರ್ಡರದಿಂದ ಪ್ರತಿ ಒಬ್ಬರಿಗೆ ೫೦ ರೂ. ದಂಡವಾಯಿತು. ಕಚೇರಿಯಲ್ಲಿ ದಟ್ಟವಾದ ಜನಸಂದಣಿಯು ಕೂಡಿತ್ತು. ಖಟ್ಲೆಯು ತೀರಿ ಮಾಮಲೇದಾರ ಸಾಹೇಬರು ಮನೆಗೆ ಬರುವಾಗ, ಅವರ ಮೇಲೆ ಕಲ್ಲು ಒಗೆದರು. ಕೂಡಲೇ ಫೌಜದಾರರೂ, ಪೋಲಿಸರೂ ಹತ್ಯಾರ ಬಂದರಾಗಿ ಕಲ್ಲಿಗೆ ಬಿದ್ದ ಕೂಡಲೇ, ಧಕ್ಕಾಮುಕ್ಕಿಗೆ ಪ್ರಾರಂಭವಾಗಿ, ಒಬ್ಬ ಪೋಲೀಸನಿಗೆ ಬಹಳ ಪೆಟ್ಟು ಆಯಿತು. ಫೌಜದಾರರು ಭಯದಿಂದ ಗಾಳಿಯಲ್ಲಿ ಗುಂಡು ಹಾರಿಸಿ ಸಮೀಪದ ಮನೆಯಲ್ಲಿ ಅಡಗಿಕೊಂಡರು. ಫೌಜದಾರನು ಒಳಗಿಂದ ಗುಂಡು ಹಾರಿಸಿದ್ದಕ್ಕೆ ಆ ಮನೆಯನ್ನೇ ಸುಟ್ಟುಬಿಡಬೇಕೆಂದು ತಯಾರಿಯಾಗಿ, ಹೆಂಗಸರಿಗೆ ಸುರಕ್ಷಿತವಾಗಿ ಹೊರಬಿಡಲು, ಸ್ತ್ರೀವೇಷದಿಂದ ಪಲಾಯನ ಮಾಡುವ ಫೌಜದಾರನನ್ನು ಹಿಡಿದು ಸುಡುವ ಮನೆಯಲ್ಲಿ ಹಾಕಿ ಸುಟ್ಟುಬಿಟ್ಟರು. ಆಮೇಲೆ ಜನರೆಲ್ಲರು ಜೈಲಕ್ಕೆ ಹೋಗಿ, ಅಲ್ಲಿ ಇಟ್ಟ ಸ್ವಯಂಸೇವಕರನ್ನು ಬಿಡಿಸಿ ತಂದರು. ಜೈಲ ಶಿಪಾಯರು ಭೀತಿಯಿಂದ ತಟಸ್ಥರಿದ್ದ

[೬ನೇ ಪಾನಿನಮೇಲೆ ಮುಂದರಿಸಿದೆ.]

ಲೇಖಕರಿಗೆ—ಬಾತ್ಮೀದಾರರಿಗೆ.

ವಿನಯಪೂರ್ವಕ ಅರಿಕೆ ಮಾಡುವದೇನಂದರೆ— ಲೇಖಗಳು-ಬಾತ್ಮಿಗಳು ಅತಿಶಯ ವಿಳಂಬವಾಗಿ ಬಂದರೆ, ಅವುಗಳನ್ನು ಹಾಕಿ, ನಿಯಮಿಸಿದ ವಾರಕ್ಕೆ ಪ್ರಸಿದ್ಧಿಸಲಿಕ್ಕೆ ಬಹಳೇ ಅಡಚಣಿಯಾಗುತ್ತದೆಂಬದನ್ನು ಲಕ್ಷ್ಯಕ್ಕೆ ತಂದು, ಅವರು, ತಮ್ಮ ಲೇಖಗಳನ್ನು ಸೋಮವಾರಕ್ಕೆ ಮುಟ್ಟುವಂತೆಯೂ, ಬಾತ್ಮಿಗಳನ್ನು ಬುಧವಾರಕ್ಕೆ ತಪ್ಪದೆ ಮುಟ್ಟುವಂತೆಯೂ, ಕಳುಹಿಸಬೇಕಾಗಿ ಅರಿಕೆ ಮಾಡುವೆವು. ಇದಕ್ಕೆ ತಪ್ಪಿ ಬಂದ ಲೇಖ-ಬಾತ್ಮಿಗಳು ನಿರುಪಾಯದಿಂದ ಮುಂದೆ ಇಡಲ್ಪಡುವವು

—ಮೆನೇಜರ ಕಾ. ವೃ.

ಕಾನಡಾವೃತ್ತ.

ಗುರುವಾರ, ತಾರೀಖು ೫ ಮಾರ್ಚ ಮೇ ೧೯೩೧

ಪ್ರಾಂತಿಕ ಕಾಂಗ್ರೆಸು ಮಂಡಲವು.

ಕಾಂಗ್ರೇಸಿನ ಹೊಸ ಘಟನೆಯೊಳಗೆ ಕರ್ನಾಟಕವು ಸ್ವತಂತ್ರ ಪ್ರಾಂತವಾಗಿದೆಂದು ಜನರು ಅರಿತಿರುವರಷ್ಟೇ. ನಮ್ಮ ಪ್ರಾಂತದ ಕಾಂಗ್ರೇಸ ಕಮಿಟಿಯನ್ನು ಸ್ಥಾಪಿಸಲಿಕ್ಕೆ ಹೊಸ ನೇಮಗಳ ಅನುಮೋದದಿಂದ ವ್ಯವಸ್ಥಿತವಾಗಿ, ಅವ್ಯಾಹತವಾಗಿ ಪ್ರಯತ್ನಗಳು ನಡೆದವೆಂಬುದು ಕರ್ನಾಟಕದ ಮಟ್ಟಿಗೆ ಬಹಳೇ ಅಭಿನಂದನಾಸ್ಪದವು. ಮೊನ್ನಿನ ೨೩ನೇ ತಾರೀಕಿನ ದಿವಸ, ಕರ್ನಾಟಕದ ಪ್ರಾಂತಿಕ ಪಟ್ಟಣವಾದ ಗದಗಿನಲ್ಲಿ ನಮ್ಮ ಪ್ರತಿನಿಧಿಗಳ ಸಭೆಯು ನೆರೆದಿತ್ತು. ಸಭೆಗೆ ಧಾರವಾಡ, ಬೆಳಗಾಂವ, ವಿಜಾಪುರ, ಕಾರವಾರ, ಬಳ್ಳಾರಿ ಮಂಗಳೂರ ಮೊದಲಾದ ಕರ್ನಾಟಕದ ಎಲ್ಲ ಭಾಗಗಳಿಂದ ೫೨ ಜನ ಪ್ರತಿನಿಧಿಗಳು ಬಂದಿದ್ದರು. ಅಧ್ಯಕ್ಷಸ್ಥಾನವನ್ನು ವಿಖ್ಯಾತ ದೇಶಭಕ್ತರಾದ ಗಂಗಾಧರರಾವ ದೇಶಪಾಂಡೆಯವರು ಅಲಂಕರಿಸಿದ್ದರು. ಕರ್ನಾಟಕ ಪ್ರಾಂತದ ಕಾರ್ಯಕಾರಿ ಕಮಿಟಿಯನ್ನು ಆರಿಸುವ ಮಹತ್ವದ ಕೆಲಸವನ್ನು ಕೊನೆಗಾಣಿಸಲು, ಇದೊಂದು ವೈಶೇಷಿಕ ಸಭೆಯು ಕೂಡಿಸಲ್ಪಟ್ಟಿತ್ತು. ಸಭೆಯೊಳಗಾದ ನಿರ್ಣಯಗಳು ಇನ್ನು ಪ್ರಾಂತಗಳೊಳಗೆ ಜಾಹೀರ ಆಗುವದು ಅವಶ್ಯಕವಾದದ್ದರಿಂದ, ಅದರ ವೃತ್ತಾಂತವನ್ನು ಇಂದಿಗೆ ನಿವೇದಿಸುವೆವು

ಪ್ರಾಂತಿಕ ಮಂಡಲದ ಆದಾಯ-ವೆಚ್ಚಗಳ ಬಗ್ಗೆ ಮೊದಲು ಈ ಸಭೆಯಲ್ಲಿ ಚರ್ಚೆ ನಡೆಯಿತು. ವರ್ಷದ ವೆಚ್ಚಕ್ಕಾಗಿ ೩,೦೦೦ ರೂಪಾಯಿ ಬೇಕಾಗುವವೆಂದು ಕಲ್ಪಿಸಿ, ಈ ಅಂದಾಜಿನಂತೆ, ಈ ವರುಷ ಕಡಿಮೆ ಬೀಳಬಹುದಾದ ರಕ್ಕಂವನ್ನು ಹಳೇ ಪ್ರಾಂತಿಕ ಸಭೆಗಳಲ್ಲಿ ಶಿಲಕು ಇರುವ ಹಣದೊಳಗಿಂದ ಮತ್ತು ಹೋಮರೂಲ ಲೀಗಗಳ ಶಿಲಕಿನೊಳಗಿಂದ, ಇಸುಕೊಳ್ಳಬೇಕೆಂದು ನಿರ್ಣಯವಾಗಿದೆ. ಈ ಸಭೆಯೊಳಗಾದ ಶೀರ ಮಹತ್ವದ ನಿರ್ಣಯವೆಂದರೆ ಕಾರ್ಯಕಾರಿ ಸಭೆಯ ಸಭಾಸ್ಯರನ್ನು ಆರಿಸಿದ್ದಾಗಿದೆ. ಕಾಂಗ್ರೆಸಿನ ಪ್ರಾಂತಿಕ ಕಾರಭಾರವನ್ನು ನಡೆಸುವ ಈ ಮಂಡಲದ ಅಧ್ಯಕ್ಷರು ದೇಶಭಕ್ತ ಗಂಗಾಧರರಾಯರು ಆರಿಸಲ್ಪಟ್ಟಿದ್ದು ಸರ್ವ-ಸಮ್ಮತವಾಗುವದು ಒಂದು ಬದಿಯಿರಲಿ ಲೋಕಮಾನ್ಯರ ಪಟ್ಟಶಿಷ್ಯರು, ವರ್ತಮಾನ ಕಾಲದ ಮಹಾತ್ಮಾ ಗಾಂಧಿಯವರ ಕೈಕೆಳಗಿನ ನಿಷ್ಠಾವಂತ ಸೈನಿಕರ ಸೇನಾನಿಗಳೂ ಸತ್ಯಾಗ್ರಹಿಗಳೂ ಆದ ದೇಶಭಕ್ತ ಗಂಗಾಧರ ಪಂತರು, ನಮ್ಮ ಪ್ರಾಂತಿಕ ಮಂಡಳದ ಚಾಲಕರಾದದ್ದು ಪ್ರಾಂತದ ದೊಡ್ಡ ಸುದೈವವು. ಅವರು ಕರ್ಣಧಾರರಾದದ್ದಕ್ಕಾಗಿ, ನಮ್ಮ ಪ್ರಾಂತಿಕ ನಾವೆಯು ನೆಟ್ಟಗೆ ಮುಂದಕ್ಕೆ [illegible] ಬಂದರಗ[illegible] ನಮ್ಮ ನಾವೆಯನ್ನು ಮುಟ್ಟಿಸುವ [illegible] ಇನ್ನುಳಿದ [illegible] ಶ್ರೀ [illegible] ಜೋಶಿ ವಕೀಲರ, [illegible] ಶ್ರೀ ಶ್ರೀನಿವಾಸರಾವ ಕೌಜಲಗಿ ವಿಜಾಪುರ ಮತ್ತು ಶ್ರೀ ಕರ್ನಾಡ ಸದಾಶಿವರಾವ, ಮಂಗಳೂರ — ಇವರು ದೇಶಸೇವಕರು. [illegible] ಆರಿಸಲ್ಪಟ್ಟಿರುವವರು ಶ್ರೀ. [illegible] ಮತ್ತು ಶ್ರೀ [illegible] ಇವರು ಸೆಕ್ರೆಟರಿಗಳಾಗಿ [illegible] ನಿಯಮಿಸಲ್ಪಟ್ಟರು. ಜಿಲ್ಲಾ ನಿಹಾಯ ೧ ಶ್ರೀ ವಿಶ್ವನಾಥರಾವ ಜೋಶಿ, (ಹುಬ್ಬಳ್ಳಿ), ೨ ಶ್ರೀ ರಂಗನಾಥರಾವ [illegible], ೩ ಶ್ರೀ ಮುಜಲಿ ೪ ಶ್ರೀ ಕರಗುಪ್ಪಿ, (ಬೆಳಗಾಂವಿ) ೫ ಶ್ರೀ ಕಂಬಾಳಿ, ೬ ಶ್ರೀ ಕಿರಸೂರ (ವಿಜಾಪುರ) ೭ ಶ್ರೀ ಶಾಸ್ತ್ರಿ, ೮ ಶ್ರೀ ಶರ್ಕೆ, (ಕಾರವಾರ), ೯ ಶ್ರೀ ಭೀಮಸೇನರಾವ, ೧೦ ಶ್ರೀ ವೆಂಕೋಬಾಚಾರಿ, (ಬಳ್ಳಾರಿ) ೧೧ ಶ್ರೀ ಭೋಜರಾವ, ೧೨ ಶ್ರೀ ಭಾರದ್ವಾಜ, (ಮಂಗಳೂರ), ಇದಲ್ಲದೆ ಎಲ್ಲ ಭಾಗಗಳು ಒಟ್ಟಿನಲ್ಲಿ ೧೦ ಜನ ಪ್ರತಿನಿಧಿಗಳನ್ನು ಆರಿಸಿರುವರು. ಇದೇ ನಮ್ಮ ಕರ್ನಾಟಕ ಪ್ರಾಂತದ ಕಾಂಗ್ರೆಸ ಮಂಡಲವು. ಈ ಮಂಡಲದ ಸಭೆಗಳು ವರುಷದಲ್ಲಿ ಕನಿಷ್ಟ ಪಕ್ಷಕ್ಕೆ ಎರಡಾವರ್ತಿಯಾದರೂ, ಕೂಡಲೇ ಬೇಕೆಂದು, ಗೊತ್ತಾಗಿ ಅದೆ. ಮಂಡಲದ ಸದಸ್ಯರನ್ನು ನೋಡಿದರೆ, ಪ್ರತಿ ಒಂದು ಜಿಲ್ಲೆಯ ನಿಜವಾದ ಪ್ರತಿನಿಧಿಗಳೇ ಆರಿಸಲ್ಪಟ್ಟಿರುವರೆಂದು, ಯಾರ ಮನ[illegible] ಈ ಮಂಡಲದೊಳಗೆ ಸ್ವಯಂಮನ್ಯ ಧುರೀಣರಾಗಲೀ, ಬೆಕ್ಕಿನ ಬಿಡಾರದವರಾಗಲಿ ಯಾರಿಲ್ಲ. ನಿಜವಾದ ಲೋಕಕಾರ್ಯ ಘಟನೆಯಿದು.

ಈ ಅಧಿವೇಶನದೊಳಗಾದ ಮತ್ತೊಂದು ಮಹತ್ವದ ನಿರ್ಣಯವು ಪ್ರಾಂತಿಕ ಪರಿಷತ್ತಿನ ಅಧಿವೇಶನಕ್ಕೆ ಸಂಬಂಧಿಸಿದೆ. ಕರ್ನಾಟಕದ ಮೊದಲನೇ ರಾಜಕೀಯ ಪರಿಷತ್ತು ದಿವಾನ ಶ್ರೀ ಮಾಧವರಾಯರ ಅಧ್ಯಕ್ಷತೆಯೊಳಗೆ ಹೋದ ವರ್ಷ ಮೇ ತಿಂಗಳಲ್ಲಿ ಬಲು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತ್ತು. ೨ ನೇ ಪರಿಷತ್ತು ಬಾಗಲಕೋಟೆಯಲ್ಲಿ ನೆರವೇರಿಸಬೇಕೆಂದು ಯೋಜನೆಯಾದಾಗ್ಯೂ, ವಿಜಾಪುರ ಜಿಲ್ಲೆಯಲ್ಲಿ ಸದ್ಯಕ್ಕೆ ದುರ್ದೈವದಿಂದ ಬರಬಿದ್ದಿರುವ ಮೂಲಕ, ಚಿಂತಾಜನಕ ಸ್ಥಿತಿಯುಂಟಾಗಿತ್ತು. ಹೋದ ವರ್ಷವೇ, ದಾ ಯು ರಾಮರಾಯರು ಮಂಗಳೂರವರ ಪರವಾಗಿ, ಪರಿಷತ್ತಿಗೆ ಆಮಂತ್ರಿಸಲು, ತಂತಿಯನ್ನು ಕಳುಹಿಸಿದ್ದರು. ಅದೊಂದು ಯೋಗಾಯೋಗವಾಗಿತ್ತು. ಮೊನ್ನಿನ ಸಭೆಯಲ್ಲಿ ಮಂಗಳೂರದ ಪ್ರತಿನಿಧಿಗಳು ಅತ್ಯಂತ ಉತ್ಸಾಹದಿಂದ ಪರಿಷತ್ತಿಗೆ ಆಮಂತ್ರಣೆಯನ್ನು ಕೊಡಲು, ಎಲ್ಲರೂ ಒಮ್ಮನಸ್ಸಿನಿಂದ ಅದನ್ನು ಸ್ವೀಕರಿಸಿದರು. ಇದೇ ತಿಂಗಳ ಒಳಗಾಗಿಯೇ ಪರಿಷತ್ತು ಜರಗುವದೆಂದು ಗೊತ್ತಾಗಿದೆ. ಉತ್ತರಕಾನಡಾ ಜಿಲ್ಲೆಯೊಳಗಿನ ಜನರಿಗೆ ಇದೊಂದು ಅತ್ಯಾನಂದಕರ ವಾರ್ತೆಯಾಗುವದು. ಒಂದೇ ಕಾನಡಾ ಜಿಲ್ಲೆಯೊಳಗಿದ್ದ ಕಾನಡಿಗರಿಗೆ ಬ್ರಿಟಿಷ ಅಮಲಿನ ರಾಜ್ಯಕಾರಭಾರದ ವ್ಯವಸ್ಥೆಗಾಗಿ, ಬೇರೆ ಬೇರೆ ಪ್ರಾಂತದ ನಿವಾಸಿಗಳಾಗುವ ವಿಯೋಗದ ದುರ್ದೈವವು ಸಂಭವಿಸಿ, ೧ ಶತಮಾನವು ಕಳೆಯಿತು. ಇನ್ನು ತನಕ ನಾವು ವಿಯೋಗದ ದುಃಖದಲ್ಲಿಯೇ ಬಳಲುತ್ತಿದ್ದೆವು. ಉತ್ತರಕಾನಡಾ ಜಿಲ್ಲೆಯು ದಕ್ಷಿಣಕಾನಡಾ ಜಿಲ್ಲೆಗಿಂತ ಪ್ರಗತಿಯ ಮೇಲಾಟದಲ್ಲಿ ನೂರಾರು ಯೋಜನ ಹಿಂದುಳಿಯಲಿಕ್ಕೆ, ಇದೇ ಕೃತ್ರಿಮ ವಿಯೋಗವು ಕಾರಣವಾಗಿದೆಂದು ಹೇಳಿದರೂ ಹೇಳಬಹುದು. ಪ್ರಿಯಬಾಂಧವರಲ್ಲಿ ಉಂಟಾದ ಈ ವಿಯೋಗವು ಜನರಷ್ಟಕ್ಕೆ ಒನದೆಳಗೆ ಅಳಿಯಲು ಸುಪ್ರಸಂಗವು ಬಂದೊದಗುವದು ಎಂದು ಅರಿತು, ಕಾನಡಿಗರು ಹರ್ಷಭರಿತರಾಗುವದು ಸಹಜವು. ಈ ದೃಷ್ಟಿಯಿಂದ ಮಂಗಳೂರದಲ್ಲಿ, ಪ್ರಾಂತಿಕ ಪರಿಷತ್ತಿನ ಎರಡನೇ ಅಧಿವೇಶನವು ಕೂಡುವದದು ಕಾನಡಿಗರ ಮಹದ್ಭಾಗ್ಯವು. ಉತ್ತರ ದಕ್ಷಿಣ ಕನ್ನಡದ ಕಾನಡಿಗರು ಪರಿಷತ್ತಿನೊಳಗೆ ಭುಜಕ್ಕೆ ಭುಜ ಹಾಕಿ ರಾಷ್ಟ್ರಸೇವೆಯಲ್ಲಿ ದುಡಿಯುವರೆಂದರೆ, ಇದೆಂದ ಆಹ್ಲಾದಜನಕ ನೋಟವಾಗುವದೆಂದು ನಾವು ಹೇಳಬೇಕೇನು? ನಮ್ಮ ಜಿಲ್ಲಾ ಪರಿಷತ್ತು ಯಾರಿಗೆ [illegible] ನಿದ್ದರೂ ನಮ್ಮ ಪ್ರಾಂತಿ ಪರಿಷತ್ತಾದರೂ ಇದೇ ತಿಂಗಳ ಕೊನೆಯೊಳಗಾಗಿ ಜರುಗುವದು. ಮತ್ತು ನಮಗೆ,

ಕಂಟಕಪ್ರಾಯವಾದ ಈಗಿನ ರಾಜನೀತಿಯ ಜಾಲದಲ್ಲಿ ಬಿಕ್ಕಟ್ಟಿನಿಂದ ದಾರಿ ತೋರಿಸುವರೆಂದು ಭಾವಿಸಿ, ನಾವು ಈಗಲೇ ಕೃತಜ್ಞರಾಗಿರುವೆವು. ಮಂಗಳೂರ ಪರಿಷತ್ತಿಗೆ ನಮ್ಮ ಮುಂದಾಳುಗಳೂ, ನಾಯಕರೂ, ತಪ್ಪದೇ ಬಿಜಯಿಸಿ, ನಮ್ಮ ಜನ-ಧನ ಬಲಗಳನ್ನು ಲೋಕಕ್ಕಾಗಿಗೆ ಒಪ್ಪುವ ಸಾಧನಗಳಿಂದ ದೂರವಿಟ್ಟುಕೊಳ್ಳುವ ಸ್ವಾವಲಂಬನದ ಯೋಜನೆಯನ್ನು ಏರ್ಪಡಿಸಿಕೊಳ್ಳುವರೆಂದು, ತುಂಬಾ ನಂಬುವೆವು ಮತ್ತು ಇಂಥ ಸುಯೋಗವನ್ನು ಯೋಜಿಸಿದ ನಮ್ಮ ಮಂಗಳೂರದ ಬಾಂಧವರಿಗೆ, ಅವರ ಔದಾರ್ಯಕ್ಕಾಗಿ, ಸ್ವದೇಶಾಭಿಮಾನಕ್ಕಾಗಿ, ಕರ್ತವ್ಯನಿಷ್ಠೆಗಾಗಿ, ಹೃತ್ಪೂರ್ವಕವಾಗಿ ಅಭಿನಂದಿಸುವೆವು.

ಸ್ಫುಟ ಸೂಚನೆಗಳು.

೧ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಮಂಡಲದಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳಾಗಿ, ಶ್ರೀ. ಎಮ್. ಡಿ. ಕರ್ಕಿ ಮತ್ತು ಶ್ರೀ. ಶಿವರಾಮ ಶಾಸ್ತ್ರಿ, ಇವರೀರ್ವರು ದೇಶಸೇವಕರು ಆರಿಸಲ್ಪಟ್ಟಿರುವರೆಂದು ಮೇಲೆ ಹೇಳಿರುತ್ತೇವಷ್ಟೇ. ಉಭಯತರೂ ಒಮ್ಮತ ವಿಶ್ವಾಸಕ್ಕೂ, ಆದರಕ್ಕೂ ಪಾತ್ರರಾದ ಮುಂದಾಳುಗಳಾಗಿದ್ದು, ಅವರು ಸರ್ವ ಕಾನಡಿಗರಿಗೆ ಮಾನ್ಯರು, ಮತ್ತು ಗ್ರಾಹ್ಯರೆಂದು ಅವರಿಗೆ ಮನಃಪೂರ್ವಕ ಅಭಿನಂದಿಸುವೆವು. ಇನ್ನು ಜಿಲ್ಲೆಯ ಸ್ಥಾನಿಕ ಪ್ರಶ್ನೆಗಳನ್ನು ಮೇಲಿಂದಮೇಲೆ ನಿರೀಕ್ಷಿಸಿ, ಅವುಗಳನ್ನು ಪ್ರಾಂತಿಕ ಮಂಡಲದ ಮುಂದಿಟ್ಟು, ಜನರ ಕಷ್ಟ-ಸಂಕಷ್ಟಗಳನ್ನು ಪರಿಹರಿಸುವ ಸ್ವಾವಲಂಬನದ ಸಾತ್ವಿಕ ಉಪಾಯಗಳನ್ನು ಅವರು ಜನರಿಗೆ ಸೂಚಿಸುತ್ತಿರುವರೆಂದು ನಂಬಿರುವೆವು. ಪ್ರತಿನಿಧಿಗಳ ಸಂಗತಿ, ಅದರ ದೊಡ್ಡ ಜವಾಬದಾರಿಗಳೂ, ಕರ್ತವ್ಯಗಳೂ, ಅವರ ಮೇಲೆ ಹೊರಿಸಲ್ಪಟ್ಟಿರುವವು. ಇಂಥ ಹೊಣೆಯನ್ನು ಹೊರುವವರೇ ನಿಜವಾದ ಧುರೀಣರು, ಇತರರು ಬರೀ ಸ್ವಾರ್ಥಲಂಪಟ ನಾಮಧಾರಿಗಳು, ಇಷ್ಟೇ ಭೇದವು. ಇವರು ದಕ್ಷತೆಯಿಂದ ತಮ್ಮ ಕರ್ತವ್ಯಗಳನ್ನು ಜರುಗಿಸುತ್ತಿರುವರೆಂದು ನಮಗಂತೂ ಪರಿಪೂರ್ಣ ವಿಶ್ವಾಸವಿದೆ. ಇನ್ನು ಇವರಿಬ್ಬರು ನಮ್ಮ ಹವ್ಯಕ ಬಂಧುಗಳು ಬ್ರಾಹ್ಮಣರು, ಇಬ್ಬರೂ ಒಂದೇ ಜಾತಿಯವರೆಂದು, ಈ ಚುನಾವಣೆಯನ್ನು ಟೀಕಿಸುವವರು ತಿಳಿಯಲಿ. ಇಂಥ ನಿಂದಕರಿಗೆ ಕಾಂಗ್ರೆಸಿನ ಧ್ಯೇಯವಾಗಲಿ, ಲೋಕಶಾಹಿಯ ತತ್ವಗಳಾಗಲಿ, ಏನೂ ಗೊತ್ತಿಲ್ಲೆಂದು ನಾವು ಸ್ಪಷ್ಟವಾಗಿ ಹೇಳುತ್ತೇವೆ. ಸರಕಾರಿ ಜಂಗಲ ಕಮಿಶನಿಗೆ ಜಾತಿ ತತ್ವಗಳ ಮೇಲೆ ಸಭಾಸದರನ್ನು ಆರಿಸಬಹುದಾಗುತ್ತಿರುವದರಿಂದ, ನಮ್ಮ ಪ್ರಾಂತಿಕ ಕಮಿಟಿಯು ಈ ಚುನಾವಣೆಯಿಂದ ಮೋಗದ ಮೇಲೆ ಬಗ್ಗಿ ನೋಡಿದಂತಾಗಿದೆ. ಇವರು ಒಂದೇ ಜಾತಿಯ ಪ್ರತಿನಿಧಿಗಳಾದರೂ, ಅವರು ಪಾತ್ರರಿದ್ದಾಗ್ಯೂ, ನಮ್ಮ ಸಾರ್ವಜನಿಕ ಹಿತದ ಗಂಗೆ ಎಷ್ಟು ಕುಂಟುಗುವದು, ಯಾವ ಕಾರಣದಿಂದ ಕುಗ್ಗುವದು, ಈ ಸ್ವಯಂಮನ್ನರೇ ಹೇಳಲಿ. ಇವೆಂದು ತಳ ಧುರೀಣಶಾಹಿಯ ಒಣ ಹೆಗ್ಗಳಿಕೆಯು ತ್ಯಧಿಗವು, ಇಲ್ಲವೆ ವೃಥಾ ಆಶಯು. ಇಂಥ ಆಕ್ಷೇಪಗಳನ್ನು ಯಾರೂ ಲೆಕ್ಕಿಸಲಿಕ್ಕಿಲ್ಲೆಂದು ತೋರುವದು.

೨. ಕರ್ನಾಟಕ ಪ್ರಾಂತಿಕ ಪರಿಷತ್ತು, ಶೃಂಗಪ್ರವೇಶವಾಗುವ ವೇಳೆಯಲ್ಲಿ, 'ಇದೇ ಮೇ ತಿಂಗಳೊಳಗೆ, ಮಂಗಳೂರಿನಲ್ಲಿ ಕೂಡುವದು ಇನ್ನು ನಿಶ್ಚಿತವಾಯಿತು. ಮಂಗಳೂರಿನಂಥ ದೊಡ್ಡ ಪಟ್ಟಣದಲ್ಲಿ ಪರಿಷತ್ತಿನ ಸಿದ್ಧತೆಗೆ ಕೊರತೆಗಳು ತೀರ ಕಡಿಮೆಯಾಗಿದ್ದಾಗ, ಅಧಿವೇಶನಕ್ಕೆ ಅನಾವಶ್ಯಕ ವಿಲಂಬವೂ ಆಗದು. ಆದಕಾರಣ, ಎಲ್ಲ ಜಿಲ್ಲೆಯ ಪ್ರತಿನಿಧಿಗಳು ಬೇಗನೆ ಮಂಗಳೂರಿಗೆ ಪ್ರಯಾಣಮಾಡಲಿಕ್ಕೆ ಸಜ್ಜರಾಗಿರುವರೆಂದು ತೋರುತ್ತದೆ. ದಕ್ಷಿಣಕಾನಡಾ ಜಿಲ್ಲೆಯವರೂ, ನಮಗೆ ಅದೊಂದು ಕಾನಡಾ ಪ್ರಾಂತವೇ. ನಮಗೆ ಈ ಕಾರ್ಯದಲ್ಲಿ ವಿಶೇಷ ಉತ್ಸಾಹವಿದೆ. ಅದನ್ನು ನಾವು ಕೃತಿಯಿಂದ ತೋರಿಸಬೇಕಾಗಿದೆ. ಇಸ್ಲಾಂಪುರ ಪರಿಷತ್ತಿನ ಅಧ್ಯಕ್ಷರ ಚುನಾವಣೆಯು ನಡೆದಿದೆ. ಮಹಾ ಕಾಂಗ್ರೆಸ ಮಹಾಸಭೆಯ ಕರ್ಣಾಧ್ಯಕ್ಷ ಮತ್ತು ಜಿ.ಆರ್.ಕೆ. ಕಾರ್ಯದರ್ಶಿಗಳಾದ ಮದ್ರಾಸದ ಶ್ರೀ ರಾಜಗೋಪಾಲಾಚಾರ್ಯರು ಅಧ್ಯಕ್ಷರಾಗಿ ಆರಿಸಲ್ಪಟ್ಟರೆಂದು ಸುದ್ದಿಯಿದೆ. ಇದು ನಿಜವಿದ್ದರೆ, ನಿಯೋಜಿತ ಅಧ್ಯಕ್ಷರು ಸರ್ವಮಾನ್ಯರಿದ್ದಾರೆಂದು ಹೇಳುವೆವು. ಪ್ರಚಲಿತ ರಾಜಕಾರಣದೊಳಗೆ ದಿಟ್ಟರು, ಕುಶಲರು, ಜಾಣರು, ಅಕೃತ್ರಿಮ ಸ್ವದೇಶಾಭಿಮಾನಿ, ಎಲೆ ಮುಂದಾಳುಗಳೆಂದು ಶ್ರೀ ರಾಜಗೋಪಾಲರು ಖ್ಯಾತಿಹೊಂದಿರುವರು. ಪಂಡಿತ ಮೋತಿಲಾಲ ನೆಹರು ಅವರ ಜೊತೆಗೆ, ಇವರು ಇತ್ತೀ ಕಾಂಗ್ರೆಸ ಸಭೆಯ ಸೆಕ್ರೆಟರಿಗಳಾಗಿ ಆರಿಸಲ್ಪಟ್ಟಿದ್ದವರು. ಇಂಥ ಮಹನೀಯರ ಅಧ್ಯಕ್ಷತೆಯೊಳಗೆ ನಮ್ಮ ಪ್ರಾಂತಿಕ ಪರಿಷತ್ತು ಪರಿಪೂರ್ಣವಾಗಿ ಯಶಸ್ವಿಯಾಗದೆಂದು ಶಂಕಿಸುವವರಾರು? ಅದೇ ಪರಿಷತ್ತಿನಲ್ಲಿ ನಮ್ಮ ಜಿಲ್ಲೆಯ ಪ್ರತಿನಿಧಿಗಳು ತಮ್ಮ ಮನದ ಬೇಗೆಯನ್ನು ಮುಂದಿಟ್ಟು, ಸಪ್ಪೆಯ ಸರಕಾರಿ ಕಮಿಶನಿನ ಯೋಜನೆಯನ್ನು ವಿವಾದಿಸಿ ಸ್ವತಂತ್ರ ಕಾಂಗ್ರೆಸ ಕಮಿಶನಿನ ಆವಶ್ಯಕತೆಗಳನ್ನು ಬಿಂಬಿಸಿ, ಜನರಿಗೆ ಯೋಗ್ಯ ದಾರಿಯನ್ನು ತೋರಿಸಬೇಕೆಂದು ನಮ್ಮ ಆಗ್ರಹವಿರುತ್ತದೆ. ಪ್ರಾಂತಿಕ ಪರಿಷತ್ತಿನ ನಿರ್ಣಯವೇ ಈ ವಿಷಯದ ಕೊನೆಯ ತೀರ್ಪೆಂದು, ಜನರು ಎಣಿಸುವರೆಂದು, ನಮ್ಮ ಪ್ರತಿನಿಧಿಗಳು ತಿಳಿದಿರಲಿ.

೩ ಮುಂಬಯಿಯಲ್ಲಿ ಪ್ರಸಿದ್ಧ ಡಾಕ್ಟರರಾದ ನರಸಿಂಗರಾವರವರು (ಡಾ. ಬಾದ ರಾಘವೇಂದ್ರರಾಯರ ಸಹೋದರ) ಕಳೆದ ೧೭ ನೇ ಎಪ್ರೀಲಕ್ಕೆ ಮುಂಬಯಿಯಲ್ಲಿ ನಿಧನಹೊಂದಿದ ದುರ್ವಾರ್ತೆಯನ್ನು ಕೇಳಿ ಯಾರಿಗೆ ವ್ಯಸನವಾಗದು? ಅವರು ಬಹು ಪರೋಪಕಾರಿ, ಉದಾರ ಮನಸ್ಸಿನವರಾಗಿದ್ದು, ಅವರ ಎಲ್ಲ ಪರಿಚಿತರಿಂದ ಪ್ರೀತಿಸಲ್ಪಡುತ್ತಿದ್ದರು. ಔಷಧೋಪಚಾರವಿಲ್ಲದೆ, ರೋಗಿಗಳಿಗೆ ಗುಣವಾದರಿಕ್ಕಾಗುತ್ತದೆಂಬ ತತ್ವದಲ್ಲಿ ಅವರ ವಿಶ್ವಾಸವಿದ್ದದರಿಂದ, ಅಂಥಂಥ ಅನಿವಾರ್ಯದ ರೋಗಿಗಳಿಗೆ ಮಾತ್ರ ಅವರು ಔಷಧ ಕೊಡುತ್ತಿದ್ದರು. ಅವರು ತಮ್ಮ ನೈಸರ್ಗಿಕ ಗಿರಾಕಿಗಳ ಮತ್ತು ಅವರ ಉತ್ಪನ್ನದ ಬಗ್ಗೆ ಬುದ್ಧಿಶಕ್ತಿಶರಾಗಿದ್ದಿಲ್ಲ. ಅವರು ಸ್ವಾರ್ಥರಹಿತರೂ, ವಿನಯಶೀಲರೂ, ಲೋಕಪ್ರಿಯ ಚಿಕಿತ್ಸಕರೂ ಆಗಿದ್ದರು. ಅವರು ರೋಗಿಗಳ ಶುಶ್ರೂಷೆಯನ್ನು ಜಾಗ್ರತೆಯಿಂದ ಸೂಕ್ಷ್ಮವಾಗಿ, ಮತ್ತು ಪರಿಪೂರ್ಣ ಮಾಡುತ್ತಿದ್ದದರಿಂದ, ಅವರು ಬಹು ಶ್ಲಾಘಿಸಲ್ಪಡುತ್ತಿದ್ದರು. ಹಿಟ್ಟಿಗೆ, ಅವರ ಪಿತೃಕೀಯ ಚಿಕಿತ್ಸೆಯಿಂದ ಅನುಕರಣೆಗೆ ಅರ್ಹರಾದ, ತಮ್ಮ ಮಾದರಿಯ ಡಾಕ್ಟರರು ಅವರಾಗಿದ್ದರು. ಅವರ ನಿಧನದ ಬಗ್ಗೆ ನಮ್ಮ ಅತೀವ ವ್ಯಸನವನ್ನೂ, ಅವರ ಕುಟುಂಬಿಕರಿಗೂ ಮತ್ತು ಡಾ। ರಾವ ರಾಘವೇಂದ್ರರಾಯರಿಗೂ ಅವರ ದುಃಖದ ವಿಯೋಗ ದುಃಖದಲ್ಲಿ ನಮ್ಮ ಸಹಾನುಭೂತಿಯನ್ನೂ ವ್ಯಕ್ತಗೊಳಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಬೇಡುವೆವು.

೪. ಮುಂಬಯಿಯ ದೈನಿಕ ಕ್ರಾನಿಕಲ ಪತ್ರದಲ್ಲಿ ಕಾನಡಾ ಜಂಗಲ ಕಮಿಟಿಯ ಮೆಂಬರರಿಗೆ ಡಾ. ರಹು ಮಾಡಿದ ಹೊನ್ನಾವರದ ಶ್ರೀ ಶಾಸ್ತ್ರಿಗಳವರ ಬದಲಿಗೆ, ಕಾರವಾರದ ವಕೀಲರಾದ ಜಿ. ವಿ. ವಿ. ವಾಘಲೆರವರಿಗೆ ಕೇಳಿಕೊಳ್ಳಲಾಗಿದೆಂತಲೂ, ಮತ್ತು ಅದಕ್ಕೆ ಅವರು ಬಹುಶಃ ಕಬೂಲಿ ಕೊಡುತ್ತಾರೆಂತಲೂ ಪತ್ರ ವದಂತಿಯುಂಟು. ಕಾನಡಾ ಜಿಲ್ಲೆಯ ಧುರೀಣರೆಂದೆನ್ನಿಸಿಕೊಳ್ಳುವ ಕೆಲವು ಧುರೀಣರು ಕಳೆದವಾರ ಸಾಣೆಕಟ್ಟೆಯಲ್ಲಿ ಕೂಡಿ, ಕಾನಡಾ ಜಿಲ್ಲೆಯ ಮುಖಂಡರ ಪರಿಯಿಂದ ಕೆಲವು ಮಹತ್ವದ ಕೆಲಸವನ್ನು ಜರುಗಿಸಿದ ವಾರ್ತೆಯುಂಟು. ಹಾಗಾದರೆ, ಸಾಣೆಕಟ್ಟೆಗೆ ಈಗೀಗ ತಾಲೂಕಿನ ಸ್ಥಳಕ್ಕಿಂತ ಹೆಚ್ಚು ಮಹತ್ವ ಬಂದಿವೆಂಬುದು ಇದರಿಂದ ವ್ಯಕ್ತವಾಯಿತು. ಅವರ ಸಾದ್ಯಂತ ಹಕೀಕತು ಇನ್ನು ತಿಳಿದಿಲ್ಲ. ಧುರೀಣರ ಬೆಕ್ಕಿನ ವಿಚಾರದ ಇದೊಂದು ಅತ್ಯುತ್ತಮ ಮಾದರಿಯ ಉದಾಹರಣೆಯೆಂಬುದಕ್ಕೆ ಸಂದೇಹವಿಲ್ಲ. ನಮಗೆ ತಿಳಿದಷ್ಟರಮಟ್ಟಿನ ಹಕೀಗತು ಸಹ ಈಗಲೇ ಪ್ರಕಟಿಸಲಾರೆವು, ಯಾ ಅದರಮೇಲೆ ಟೀಕೆಮಾಡಲಾರೆವು. ಸಾಣೆಕಟ್ಟೆಯಲ್ಲಿ ಕೂಡಿದ ಈ ಕೂಟದೊಳಗಿನ ಯಾರಾದರೂ ಕಿಟಕಿ ತೆರೆದು ನೋಡಿದ ಈ ಘಟನೆಯ ಮಾಹಿತಿಯನ್ನು ಪ್ರಸಿದ್ಧಿಸಿ, ಕಾನಡಾ ಜಿಲ್ಲೆಯ ಸಾರ್ವಜನಿಕ ಜನತೆಯ ನ್ಯಾಯಕ್ಕೂ, ತಮ್ಮ ಕರ್ತವ್ಯಕ್ಕೂ, ಎಡೆ ಕೊಡುತ್ತಾರೋ? ಅವರ ನಿರೀಕ್ಷಣೆಯಮೇಲೆ ಕಾದುಕೆಂದು ತುರ್ತ ಅದನ್ನು ಟೀಕಿಸಲಿಚ್ಛಿಸುವದಿಲ್ಲ.

೫ ಕುಮಟಾ ತಾಲೂಕ ಕಾಂಗ್ರೆಸ ಕಮಿಟಿಯನ್ನು ಸ್ಥಾಪಿಸುವದಕ್ಕೆ ಇಲ್ಲಿಯ ಸ್ವರಾಜ್ಯಸಂಘದ ಸೆಕ್ರೆಟರಿ ಶ್ರೀ ವಿ. ಟಿ. ಹೆಗಡೆಯವರು ಈ ತಾಲೂಕಿನ ಎಲ್ಲ ಗ್ರಾಮದವರನ್ನು ಉದ್ದೇಶಿಸಿ ಒಂದು ಜಾಹೀರ ವಿನಂತಿಯನ್ನು ಪ್ರಕಟಿಸಿರುವರು. ಈ ಸಭೆಯು ಇದೇ ಬರುವ ತಾ ೧೦ ಮೇ ೧೯೩೧ ನೇ ದಿವಸ ಹಗಲು ೩ ಘಂಟೆ ಸುಮಾರಿಗೆ ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಕೂಡುವದೆಂದು ಗೊತ್ತಾಗಿದೆ. ಪ್ರಸ್ತುತ ರಾಜಕಾರಣದೊಳಗೆ ಇಂಥ ತಾಲೂಕ ಕಮಿಟಿಯ ಮಹತ್ವವೂ, ಅವಶ್ಯಕತೆಯೂ ಎಷ್ಟಿರುವದೆಂದು ನಾವು ಇನ್ನು ಹೇಳಬೇಕಾಗಿಲ್ಲ. ಈ ಕಮಿಟಿಯು ಸ್ಥಾಪನೆಯಾದ ಹೊರತು ನಮ್ಮ ಚಳವಳಿಯ ರಥವು ಮುಂದರಿಯುವದು ಕಷ್ಟಸಾಧ್ಯವೆಂದು ಎಲ್ಲರೂ ಅರಿತಿರುವರು. ಇದನ್ನಷ್ಟು ಲಕ್ಷ್ಯದಲ್ಲಿಟ್ಟು, ಪ್ರತಿ ಒಂದು ಗ್ರಾಮದ ಜನರು ಬಂದು, ತಮ್ಮ ತಮ್ಮ ಯೋಗ್ಯ ಪ್ರತಿನಿಧಿಗಳನ್ನು ಆರಿಸಿ ಕೊಟ್ಟು, ಕಾಂಗ್ರೆಸ ಚಳವಳದ ಗಣೇಶಪೂಜೆಯನ್ನು ಯಥಾಸಾಂಗ್ಯವಾಗಿ ನೆರವೇರಿಸುವರೆಂದು ಕೋರುವೆವು. ಒಂದೊಮ್ಮೆ ಕಳೆದ ಇಂಥ ಸುಯೋಗವನ್ನು ಇದರ ಮಹತ್ವಕ್ಕೆ ಸಾಕಷ್ಟು ಜನಸಮೂಹವು ಕೂಡದಿದ್ದ ಪಕ್ಷ ಅಪಾಯವಾಗಿ ತಕರಾರು ಇದರಿಂದಾದ ಸಂಗತಿ

ಯನ್ನೂ, ಹಾಗೂ ಇತರ ತಾಲೂಕುಗಳಲ್ಲಿ ಈ ವಿಷಯ ಉತ್ಸಾಹದಿಂದ ಕೆಲಸ ನಡೆದಿರುವದನ್ನೂ, ಅನು ಲಕ್ಷಿಸಿ, ಎಲ್ಲ ಗ್ರಾಮದ ಕರ್ತವ್ಯದಕ್ಷ ನಾಗರಿಕರು ಬರುವ ೧೨ ನೇ ತಾರೀಕಿನ ಸಭೆಗೆ ತಪ್ಪದೇ ಚಿತ್ತೈಸುವರೆಂಬವಕ್ಕೆ ನಮಗೇನು ಸಂದೇಹವಿಲ್ಲ.

---

೬. ನಮ್ಮ ಹಳ್ಳಿಯ ಅಸಹಕಾರಿ ಸ್ವಯಂಸೇವಕರ ವ್ಯವಸ್ಥೆ ಮಾಡಿಸುವರೆ, ಮುಂಬಯಿಯಲ್ಲಿ ನೇಮಿಸಲ್ಪಟ್ಟ ಅಸಹಕಾರಿ ಮಂಡಳದ ಅಧ್ಯಕ್ಷರಾದ ಶ್ರೀಯುತ ರಾಮರಾವ ಪಡಬಿದ್ರಿ ಎಮ್. ಎ. ಇವರು ಇದೀ ಜಿಲ್ಲೆಯನ್ನು ಸಂದರ್ಶಿಸಿ, ಅಸಹಕಾರದ ಚಳವಳವನ್ನು ಇನ್ನಷ್ಟು ಉತ್ತೇಜಿಸಿ ಚೇತರಿಸುವರೆ, ಈ ಹೊತ್ತಿನ ಬೋಟಿಯಿಂದ ಕಾರವಾರದಿಂದ ಇಲ್ಲಿಗೆ ಬಂದಿರುವರು. ಶ್ರೀಯುತ ಪಡಬಿದ್ರಿಯವರು ಹಗಲಿರಳು ಮನಮುಟ್ಟಿ ದುಡಿಯುವ ಒಬ್ಬ ನಿಸ್ವಾರ್ಥಿ ದೇಶಸೇವಕರು. ಅವರ ಉತ್ಕಟ ದೇಶಾಭಿಮಾನವೂ, ಅಮಿತ ಸ್ವಾರ್ಥತ್ಯಾಗವೂ, ನಿಗರ್ವಿ ಸ್ವಭಾವವೂ, ನಮ್ಮ ತರುಣರಿಗೆ ಅನುಕರಣೀಯವಾಗಿರುವವು. ಇವರು ಮುಂಬಯಿಯ ಮರಾಠಾ ಹೈಸ್ಕೂಲಿನ ಮಾನ್ಯ ಪ್ರಿನ್ಸಿಪಾಲರಾಗಿದ್ದರು. ಆದರೆ, ಕಳೆದ ರಾಷ್ಟ್ರೀಯ ಸಭೆಯ ಅನುಜ್ಞೆಯನ್ನು ಶಿರಸಾವಹಿಸಿ, ಆ ಉಚ್ಚ ಪದವಿಯನ್ನು ತ್ಯಜಿಸಿ, ಸ್ವಾರ್ಥವನ್ನು ಬಿಡಿಗೊಟ್ಟು, ಮುಂಬಯಿಯ ರಾಷ್ಟ್ರೀಯ ಶಾಲೆಯ ಮುಖ್ಯಾಧ್ಯಾಪಕರಾಗಿ ಅಲ್ಪ ಪಗಾರದ ಮೇಲೆ ಈಗ ಕೆಲಸ ಮಾಡುತ್ತಿರುವರು. ಮುಂಬಯಿಯಲ್ಲಿ ಅಸಹಕಾರದ ಚಳವಳದಲ್ಲಿ ಅವಿಶ್ರಾಂತ ದುಡಿಯುವ ಗಾಂಧಿಭಕ್ತರಲ್ಲಿ ಇವರೊಬ್ಬರಾಗಿರುವರು. ಇವರ ಸಹಧರ್ಮಚಾರಿಣಿಯರೂ ಇವರಿಗೆ ನೆರವಾಗುತ್ತಿರುವರೆಂಬುದು. ಇವರಿಗೆ ಇನ್ನಿಷ್ಟು ಭೂಷಣಾವಹವು. ಮೊನ್ನೆ ಈ ದಂಪತಿಗಳು ಕಾರವಾರದಲ್ಲಿ ತಮ್ಮ ಭಾಷಣಗಳಿಂದಲೂ, ಕೃತಿಯ ಪ್ರದರ್ಶನದಿಂದಲೂ, ಹೊಸ ಸ್ಫೂರ್ತಿಯನ್ನು ಹುಟ್ಟಿಸಿರುವರು. ಈ ಪ್ರಕಾರ ಇವರಿಬ್ಬರೂ ಊರೂರಿಗೆ ಹೋಗಿ, ಇದೇ ಕ್ರಮವನ್ನು ಮುಂದರಿಸುವರಿದ್ದಾರೆಂದು ತಿಳಿಯುತ್ತದೆ. ಇವರಿಗೆ ಹೋದ ಕಡೆಯಲ್ಲಿ ಪ್ರೇಮಪುರಸ್ಸರ ಸ್ವಾಗತವೂ, ಲೋಕಾಶ್ರಯವೂ ಸಿಕ್ಕಿ, ಇವರ ದೇಶಸೇವಾ ವ್ರತ ಕೊನೆಗಾಣಲೆಂದು ಹಾರೈಸುವೆವು.

—⊂⊃—

ಮಾಲೆಗಾಂವದಲ್ಲಿ ದಂಗೆ!

[೩ನೇ ಪಾನಿನಿಂದ ಮುಂದರಿಸಿದ್ದು]

ರಂತೆ' ಇಷ್ಟರಿಂದ ತೀರದೆ ಇವರ ಶಾಂತಿಯನ್ನು ಕದಡಿದರು.' ಇದರಿಂದ ಈ ಎಲ್ಲ ಬುತ್ತಿಯನ್ನು ಕಾಮಲೇದಾರರು ಮತ್ತು ಜನರನ್ನು ಕರೆಸಿ, ಕಲೆಕ್ಟರ ಸಾಹೇಬರಿಗೆ ತಿಳಿಸಿದ ನಂತರ ದೇವಲಾಲಿಯಿಂದ ೮೦೦ ಯುರೋಪಿಯನ್ನ ಸೈನ್ಯವು ಬಂದು ಮುಟ್ಟಿದೆ.

ಈ ಬಗ್ಗೆ ನಿಜವಾದ ಕಾರಣಗಳನ್ನು ಶೋಧಿಸಲು ಮುಂಬಯಿ ಕ್ರೋನಿಕಲಿನ ಕಡೆಯಿಂದ ಒಬ್ಬ ಖಾಸ ಪ್ರತಿನಿಧಿಯು ಮಾಲೇಗಾಂವಿಗೆ ಹೋಗಿದ್ದಾನೆ. 'ಅಲ್ಲಿಯ ಸ್ಥಾನಿಕ ಅಧಿಕಾರಿಗಳು ವಿಶೇಷವಾಗಿ ಮೈನಾ ಭಾಸ್ಕರರಾವ ಮಯೂರೆಯವರು ದಂಗೆಗೆ ಪ್ರವೃತ್ತಿಕಾರಕ ವರ್ತನವನ್ನು ಮಾಡಿದ್ದರಿಂದ, ಜನರು ಆತ್ಮಸಂಯಮನವನ್ನು ತೊರೆದು ಈ ಶೋಚನೀಯ ಪ್ರಕಾರವನ್ನು ಆಚರಿಸಿದರು,' ಎಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ವರ್ತಮಾನ

ಓಕಟಂತಕ— ಸಪಡಿನಂತೆ.

ಸ್ಥಾಪಕನಾತಿ ಮ ಲದಿನ ಗೆಂಜಿಸಿಸ್ಸೆ

ಸ್ಥಾನಿಕ ವೃತ್ತಾಂತ.

ಕುಮಟಾ— ಮೋಡಗಳು ಇದ್ದೇ ಇರುವವು. ಸ್ವಲ್ಪ ಸ್ವಲ್ಪ ಮಿಂಚೂ ಉಂಟು. ಸೆಕೆ ವಿಪರೀತವಾಗಿದೆ. ಮಳೆಯು ಆಗಿಂದಾಗ ಸ್ವಲ್ಪ ಸ್ವಲ್ಪ ಹನಿಸುತ್ತದೆ. ರೋಗರಾಯಿ ಇದ್ದಂತೆಯೇ.

ಆಗಬೋಟಿಯ ಆಗಮನ ಸಮಾಪ್ತವಾಗುವ ದಿನಗಳು ಸಮೀಪಿಸುತ್ತಿರುವವು. ಆದ್ದರಿಂದ ದವಸುಧಾನ್ಯ ತುಟ್ಟಿಯಾಗತಕ್ಕದ್ದೆ! ಆಗಬೋಟಿಯಿಂದ ಬರುವ ಮಾಲು ಟ್ಯಾಕ್ಸು ತಪ್ಪುವಂತೂ ಮುಟ್ಟುವದಿಲ್ಲ!! ಬಡ ಜನರ ಗೋಳೇ ಗೋಳು!!!

ಮುನ್ಸಿಪಾಲಿಟಿಯಿಂದ ಆಕ್ಟ್ರಾಯ ಟ್ಯಾಕ್ಸದ ಬದಲಾಗಿ ಟರ್ಮಿನಲ ಟ್ಯಾಕ್ಸ ವಸೂಲಿಗೆ ತಾ ೧ರಿಂದ ಶುರುವಾಗಿದೆ. ವ್ಯಾಪಾರಸ್ಥರಲ್ಲಿ ಆ ಸಂಬಂಧ ಹಾಹಾಕಾರ ಉಂಟಾಗಿ, ಆ ಕುರಿತು ನಿವೇದನಾರ್ಥ ಮತ್ತು ಅದರ ದುರುಸ್ತಿ ವಿಚಾರಕ್ಕಾಗಿ, ಸಾರ್ವಜನಿಕ ಸಭೆಗೂಡಿಸುವ ವಿಚಾರವು ಅವರಲ್ಲಿ ತಲೆದೋರುತ್ತಿದೆ!

ಕಳೆದ ತಾ [illegible] ಅಲ್ಲಿನ ಕೋರ್ಟ ... ಕ್ರಿಮಿನಲ ... ಸಭೆಗೂಡಿ, ... ರೂಪಾಯಿಗೆ ... ಕೊಡಬೇಕಾಗಿಯೂ, ಕಳೆದ ವರ್ಷದ ಕಮಿಟಿಯನ್ನೇ ಈ ವರ್ಷಕ್ಕೆ ಸ್ಥಿರಗೊಳಿಸಿ, ಶ್ರೀ ಮಾಧವ ... ಸಭಾಸದರು ... ಗಳಾಗಿಯ ... ಈ ... [illegible]

ಈ ... ಕಮಿಟಿ ಸ್ಥಾಪನೆ ... [illegible]

ಈ ... [illegible]

ಉತ್ತರ ಕನ್ನಡ ... ಸಭೆಯ ... [illegible] ... ತ್ತಾರೆ.

... ಕಮಿಶನರ ಮಿ ... [illegible] ... ಶ್ರೀಕ್ಷೇತ್ರ ... ಅವರ ... ನಾಗರಿಕರು ... ಉತ್ಸಾಹದ ಸ್ವಾಗತ ಮಾಡಿದ ಬಗ್ಗೆ ... ಕೊಟ್ಟ ಸೂಚನೆಯ ಮೇರೆಗೆ ಶ್ರೀ ... ಅಧ್ಯಕ್ಷತೆಯ ಕೆಳಗೆ ಕೂಡಿದ ಸಾರ್ವಜನಿಕ ಸಭೆಯಲ್ಲಿ ಸ್ವಾಗತವನ್ನು ಕೈಕೊಂಡವರೆಲ್ಲರೂ ತಮ್ಮ ಪಶ್ಚಾತ್ತಾಪ ವ್ಯಕ್ತ ಮಾಡಿದರೂ, ಮುನಿಸಿಪಾಲಿಟಿ ಚೇರಮನ ಶ್ರೀ ... ವಿಶ್ವೇಶ್ವರ ... ಮಾತ್ರ ತಮ್ಮ ಪಶ್ಚಾತ್ತಾಪ ವ್ಯಕ್ತ ಮಾಡಲಿಲ್ಲವಂತೆ!

ಶಿರಸಿ— ಕಳೆದ ೩೦ ನೇ ತಾರೀಖಿನ ದಿವಸ ರಾಷ್ಟ್ರೀಯ ಶಾಲೆಯ ಶಿಕ್ಷಕರಾದ ದೇ ಹೊನ್ನೆ ಮತ್ತು ... ಯವರು ಹುಲೇಕಲ್ಲಿಗೆ ಹೋಗಿ ಅಸಹಕಾರಿತೆ ಮೇಲೆ ವ್ಯಾಖ್ಯಾನ ಕೊಟ್ಟರು. ಸಭೆಗೆ ಸುಮಾರು ೧೦೦ ಜನರು ಹಾಜರಿದ್ದರು. ... ವ್ಯಾಪಾರಿಗಳಾದ ಶ್ರೀ ... ಅಧ್ಯಕ್ಷ ... ಇವರ ... ಸ್ಥಾನಕ್ಕೆ ... ರಾಜೀನಾಮೆ ಕೊಡತಕ್ಕವರಾಗಿ, ... ಸಭೆ

ಕೂಡಿಸುವದು ನಿಶ್ಚಯಿಸಲ್ಪಟ್ಟಿತು.

ಮುನಿಸಿಪಾಲಿಟಿಯವರು ಏನೋ ಧೈರ್ಯ ಮಾಡಿ ಕಚರಾ ಗಾಡಿಯವರ ಪ್ರಕರಣದ ಬಾಬತಿನ ದಂಡವನ್ನು ೫೦-೬೦ ರೂಪಾಯಿ ... ಮಾಡಿ ವಸೂಲ ಕೊಂಡು, ಮುಂದೆ ಅಪೀಲಿನ ಬಗ್ಗೆ ಜನರಲ್ ಕಮಿಟಿಯಲ್ಲಿ ಚರ್ಚೆ ನಡೆದು, ಕಟ್ಟಕಡೆಗೆ "ಹತ್ತಿ ಹಾದಿಂಗಾ! ಹಾದಿಂಗಾ!! ಥೂ!!!" ಎಂಬಂತೆ ಆಯಿತು.

ಆದರೆ ಸದ್ರಿ ಪ್ರಕರಣದ ಜಜ್ಜಮೆಂಟಿನಲ್ಲಿ ತಮ್ಮ ಮೇಲೆ ಅನವಶ್ಯಕವಾದ ಅನ್ಯಾಯದ ಟೀಕೆಯು ಮಾಡಿರುತ್ತದೆಂತ ಸ್ಯಾನಿಟರಿ ಕಮಿಟಿಯ ಮಾಜೀ ಚೇರಮನ್‌ರಾದ ಶ್ರೀ ವಾಸುದೇವರಾವ ಧಾರೇಶ್ವರ ಇವರು ರಿವಿಜನಕ್ಕಾಗಿ ಹೈಕೋರ್ಟಿಗೆ ಅರ್ಜಿ ಮಾಡತಕ್ಕವರಿದ್ದಾರೆ.

ಕಾಂಗ್ರೆಸ್ ಕಮಿಟಿಯ ಸ್ಥಾಪನೆಯ ವಿಷಯವಾಗಿಯೂ, ಬೆಳಗಾಂವಿಯ ದೇ। ಗಂಗಾಧರರಾವ ದೇಶಪಾಂಡೆಯವರನ್ನು ಕರೆತರುವ ವಿಷಯವಾಗಿಯೂ, ನಾಳೆ ೫ ನೇ ತಾರೀಖಿನ ದಿವಸ ಸಭೆ ಕೂಡತಕ್ಕದ್ದಿದೆ.

ಹಳಿಯಾಳ— ಹವಾಮಾನ ಸಾಧಾರಣ ಇದೆ. ಮಳೆ ಅಲ್ಪ ಸ್ವಲ್ಪ ಬಿದ್ದಿದ್ದು ಹೊಲ ಮನೆ ಕೆಲಸ ಚಾಲು ಇದೆ. ತೇರಗಾಂವದಲ್ಲಿ ಅಸಹಕಾರಿ ಸ್ವಯಂಸೇವಕ ವಿ॥ ಗುಲವಾಡಿ, ಮಂಕೀಕರ, ಮತ್ತು ಗೋವಿಂದರಾವ ಅಣ್ಣಾವರರ ಮೊದಲಾದವರ ಭಾಷಣಗಳಾಗಿ, ತಾಲೂಕ ಕಾಂಗ್ರೆಸ ಕಮಿಟಿಗೆ ಸಭಾಸದರನ್ನು ಕೂಡಿಸುವ ಕೆಲಸ ನಡೆದದೆ. ಅದರಂತೆಯೇ ಮುಂಗಳವಾಡದಲ್ಲಿ "ಅಸಹಕಾರ" ದಮೇಲೆ ವಿ॥ ಮಂಕೀಕರ, ಗುಲವಾಡಿ ಹಾಗೂ ವಿ॥ ಎಸ. ಜಿ. ಭಟ್ರಿ ಇವರ ಭಾಷಣಗಳಾದವು. ಕಾ। ಕ। ಕೆಲಸ ಜಾರಿಯಿಂದ ನಡೆದದೆ. ಹಳಿಯಾಳದಲ್ಲಿ ಈ ತನಕ ೬೦೦ ಕ್ಕೆ ಮಿಕ್ಕಿ ಕಾ। ಕ। ಮೆಂಬರರಾಗಿರುವರು. ಹಳ್ಳಿಹಳ್ಳಿಗಳಲ್ಲಿ ಸಭಾಸದರನ್ನು ಕೂಡಿಸುವ ಕೆಲಸವು ನಡೆದದೆ.

ಮದ್ಯನಿಷೇಧಕ ಚಳವಳವು ಬಹು ಭರದಿಂದ ಸಾಗಿದೆ. ಕಳ್ಳ, ಬ್ರಾಂದಿ, ಗಾಂಜಾ, ಅಫು ವಗೈರೆ ಬುದ್ಧಿಕೆಡಿಸುವ ಮಾದಕ ವರ್ಜ ಪದಾರ್ಥಗಳನ್ನು ತ್ಯಜಿಸುವಂತೆ ಅವರವರ ಸಮಾಜದವರು ಅವರವರಿಗೆ ಯೋಗ್ಯ ಶಿಕ್ಷೆ ಮಾಡುವರೆ ಈ ಮೊದಲೇ ವ್ಯವಸ್ಥೆಯಾಗಿದೆ. ಸಾರಾಯಿ ತೆಗೆಯುವ ಕೈಯಾಳಿನ ಪ್ರಸಾದ ಸ್ವಾಗೆ ಬೇಕಬೇಕೆಂಬ ವಿಚಾರ ನಡೆದದೆ.

ಕೋಳಿವಾಡೇಶ್ವರ ಸೊಸೈಟಿಯ ವಾರ್ಷಿಕ ಸಭೆಯಾಗಿ ಹೊಸ ಕಾರ್ಯಕಾರಿ ಮಂಡಳವು ... ರುವದು. ... ಇವರ ಚೇರಮನರಾಗಿರುವರು.

ಊಂಗಳಮಾಡ ವಗೈರೆ ಗ್ರಾಮದವರು ಹುಲ್ಲುಬನ್ನಿ ಬಗ್ಗೆ ಮಾ। ಕಮಿಶನ ಸಾಹೇಬರ ಬಳಿಗೆ ಮನವಿಯನ್ನು ಮಾಡಿದ್ದಾರಂತೆ!

ದೇ। ಭ। ಲಾಲಾಜಿಯವರ ಅಂಬೋಣ.

"ಹಿಂದುಸ್ತಾನದ ಬೇರೆ ಬೇರೆ ಭಾಗಗಳನ್ನು ನಾನು ಸಂದರ್ಶಿಸಿದಾಗ, ಜನಸಾಮಾನ್ಯರೂ ದ್ರವ್ಯವು ತರಗತಿಯವರೂ ಅಸಹ್ಯಭಾವವನ್ನು ತಳೆದು ಇದ್ದಾರೆಂದೂ, ... ದಾಯವನ್ನು ತಮ್ಮ ಬಾಕಿಮಾಡಿಕೊಳ್ಳಿರಿ ಎಂದು ಕಾಂಗ್ರೆಸಿನವರು ಹೇಳಿದರೆ, ಸಿದ್ಧರಾಗಿ ಜನರು ಸಿದ್ಧರಿದ್ದಾರೆಂಬುದು ನನಗೆ ತಿಳಿದು ಬಂತು. ಬಹಳ ಉಚ್ಚ ಮಧ್ಯಮದ ಜನರ ಬೆನ್ನ ಹಿಂದೆಯೇ ಇದೆ ಎಂದು ಖಂಡಿತವಾಗಿ ನಾನು ಹೇಳಬಲ್ಲೆ. ಈ ಚಳವಳವು ಅತ್ಯಲ್ಪ ಕಾಲದಲ್ಲಿ

ಜನಸಾಮಾನ್ಯರಲ್ಲಿ ಜಾಗೃತಿಯನ್ನು ಉಂಟುಮಾಡಿದ್ದೆ ಗಾಂಧಿಯವರ ಮೇಲೆ ಜನಗಳ ವಿಶ್ವಾಸವು ಅಚಲವಾಗಿದೆ ಮತ್ತು ಹಿಂದೂ-ಮುಸಲ್ಮಾನ ಭ್ರಾತೃತ್ವದ ಕಟ್ಟು ಚನ್ನಾಗಿ ಬಿಗಿದಿದೆ, ಎಂಬುದು ನಿರ್ವಿವಾದ. ಹೀಗಿದ್ದರೂ ಅಸಹಕಾರಿತೆಯು ಮುಂದಿನ ಮೆಟ್ಟಲುಗಳಲ್ಲಿ ಅದಿ ಇತಕಿಕ್ಕೆ ಬಿಜಾಪುರದಲ್ಲಿ ಜರಗಿದ ಕಾಂಗ್ರೆಸ ಕಮಿಟಿಯು ಅಧಿವೇಶನವು ಸಮ್ಮತಿಕೊಡ ಇರುವುದಕ್ಕೆ ಬಲವಾದ ಕಾರಣಗಳಿವೆ. ಈ ಚಳವಳವು ಜನಸಾಮಾನ್ಯರ ಮನಸ್ಸುಗಳಲ್ಲಿ ಬೇರು ಬೇರೂರಿಕೊಳ್ಳ ಬೇಕಾದರೆ ಪ್ರಥಮತಃ ಯುಕ್ತಿಸಬೇಕು. ಅಸಹಕಾರಿತೆಯ ತತ್ವಗಳಲ್ಲಿ ಜನರಿಗೆ ಚನ್ನಾಗಿ ಶಿಕ್ಷಣವು ಸಿಗಬೇಕು. ಅದಕ್ಕೆ ಮುಂಚಿತವಾಗಿ ಕಾನೂನು ಉಲ್ಲಂಘನೆಯ ಹೆಜ್ಜೆಯನ್ನು ಕೈಕೊಂಡರೆ, ಸರಕಾರವು ತಾನಾಗಿಯೇ ಉದ್ಧಟವರ್ತನ ತೋರಿಸುವಾಗ, ಜನರೂ ಅತ್ಯಾಚಾರಕ್ಕೆ ಇಳಿದು ಬಿಟ್ಟಾರು, ಇದನ್ನು ಹೇಗಾದರೂ ನಾವು ಅಡ್ಡಕಟ್ಟಲೇ ಬೇಕು. ಇದಲ್ಲದೆ, ಹೊಸ ವ್ಯಸನಗಳು ಬಂದಿದ್ದಾರೆ. ಇಲ್ಲಿಯ ಸ್ಥಿತಿಯನ್ನು ಅವರು ವಿವೇಚಿಸಿ ತಿಳಿದುಕೊಂಡರ ವರೆಗೆ ಅವರಿಗೆ ನಾವು ಸಾಕಷ್ಟು ಅವಕಾಶ ಕೊಡುವುದು ಯುಕ್ತವೆಂದು ನಮ್ಮಲ್ಲಿ ಕೆಲವರ ಅಭಿಪ್ರಾಯವಿತ್ತು.

ಲೋಕಲ್ ಬೋರ್ಡಿಂಗರು ಜನತೆಯಲ್ಲಿ ನಿರಾಶೆಯನ್ನು ಹುಟ್ಟಿಸಿದರೆ, ಅಸಹಕಾರಿತೆಗೆ ಪುಟವಿಟ್ಟಂತಾಗುವುದು. ಅಲ್ಲಿಯವರೆಗೆ ಈ ತತ್ವಗಳ ಪ್ರಚಾರಕ್ಕೆ ಜನ-ಧನಗಳ ಸಂಗ್ರಹ ಮತ್ತು ಸ್ವದೇಶೀಯ ಪ್ರಚಾರವನ್ನು ಮಾಡುವುದರಲ್ಲಿ ಕೈ ಹಿಂತೆಗೆಯಲಾರೆವು. ಹಿಂದುಸ್ಥಾನದಲ್ಲಿ ಬಲವಾದ ತಂತವೆಂದರೆ, ಕಾಂಗ್ರೆಸಿನ ತಂತವೇ ಆಗಿದೆ. ಬಿರೋಧಿಸಿಯ ಪಕ್ಷ ಪುಟಗಳಲ್ಲಿ ಸೇರಿದ್ದು ಅಸಹಕಾರಿತೆಯನ್ನು ನಿರ್ನಾಮ ಮಾಡಬೇಕೆಂದು ಯುಕ್ತಿಸುವುದು, ಜನತೆಯಲ್ಲಿ ಬಹಳ ಅಸಮಾಧಾನವುಂಟು ಮಾಡಿದೆ. ಮೊಡರೇಟರು ಬಹಿರಂಗವಾಗಿ ತೋರ್ಪಡಿಸದೆ, ಹಿಂದಿನಿಂದ ಗುಪ್ತವಾಗಿ ಸರಕಾರಕ್ಕೆ ಕಿವಿ ಚುಚ್ಚುತ್ತಿದ್ದುದರಿಂದಲೇ, ಸರಕಾರವು ಈಗ ಕಠಿಣ ದಮನದ ಕ್ರಮವನ್ನು ಕೈಕೊಂಡಿದೆ. ಇದರಿಂದ ಸ್ವರಾಜ್ಯ ಕಾಂಕ್ಷೆಗೆ ಗೊಬ್ಬರವಿಟ್ಟಂತಾದೀತು. ಅಸಹಕಾರಿಗಳ ಮೇಲೆ ಅವ ಮೊಕದ್ದಮೆಗಳಲ್ಲಿ ಬಹು ಮಂದಿ ಎದುರುವಾದ ಮಾಡದೆ ಇದ್ದರು. ಮಾತ್ರವಲ್ಲ, ಅಂಥ ವ್ಯಥೆಯ ಕಾಲದಲ್ಲಿಯೂ ಜನತೆಯ ಮನಸ್ಸನ್ನು ಸ್ಥಿರ ಮಾಡಿಕೊಂಡದ್ದಲ್ಲದೆ, ಕಲ್ಲಿಸಲಿಲ್ಲ. ಅಸಹಕಾರಿತೆಯು ಬಲವು ಹೆಚ್ಚಾದಷ್ಟಕ್ಕೆ ಸ್ವರಾಜ್ಯ ಸಂಪಾದನೆಗೆ ದಾರಿ ಸುಗಮವಾಗುವುದು. ಪ್ರಕೃತ ಆಸ್ಯದಲ್ಲಿ ಬ್ರಿಟಿಶರ ಸ್ಥಿತಿಯನ್ನು ಸ್ಮರಣೆಗೆ ತಂದು, ಸಾಧ್ಯವಿದ್ದಷ್ಟು ಬೇಗನೇ ಸ್ವರಾಜ್ಯದ ಅದಷ್ಟು ದೊಡ್ಡ ಅಂಶವನ್ನು ಹಿಂದುಸ್ಥಾನಕ್ಕೆ ಬ್ರಿಟಿಶ ಜನಾಂಗವು ಕೊಡುವುದು ಯುಕ್ತವಾಗಿದೆ, ಎಂದು ತಿಳಿಸಿರಿ.

—ಸ್ವದೇಶಾಭಿಮಾನಿ.

ವರ್ತಮಾನಸಂಗ್ರಹ.

ಜರ್ಮನಿಯಿಂದ ಮಿತ್ರರಿಗೆ ಸಲ್ಲತಕ್ಕ ಹಣವು ಇನ್ನೂ ಸರಿಯಾಗಿ ಕೈಸೇರಿಲ್ಲವೆಂದೂ, ಜರ್ಮನರು ಸಂಧಿಶರ್ತಗಳಿಗೆ ಸರಿಯಾಗಿ ನಡೆದುದಿಲ್ಲವೆಂದೂ, ವಿಚಾರಮಾಡಿ, ಇನ್ನೂ ಕೆಲ ಜರ್ಮನ ರಾಷ್ಟ್ರಗಳಲ್ಲಿ ನುಗ್ಗಿ, ಮಿತ್ರರು ಸೈನ್ಯಗಳನ್ನಿರಿಸಿ ಕಂದಾಯ ಸುಂಕ ವಸೂಲ್ಮಾಡಿಸುವ ಯೋಜನೆಯುಳ್ಳಿರುವರಾಗಿ ತಿಳಿಯುತ್ತಿದೆ.

ಖಿಲಾಫತ್ತಿನ ಕಡೆಯಿಂದ ಹೋದ ಹಿಂದೀಮುಸಲ್ಮಾನ ಮುಖಂಡರು ಅವರಿಗೆ ತೃಪ್ತಿಯಾಗುವಂಥ ವಿಶ್ವಮಾನಗಳು ದೊರೆವವೆಂದು ಇಂಗ್ಲಿಷ ಸರಕಾರದ ಪ್ರತಿನಿಧಿಗಳಿಗೆ ಇಷ್ಟರಲ್ಲಿ ತಿಳಿಸಿರುವರಾಗಿಯೂ, ಇವರನ್ನು ಸಹಾನುಭೂತಿಯಿಂದ ಸದರಿ ಪ್ರತಿನಿಧಿಗಳು ಕಂಡರಾಗಿಯೂ, ವರ್ತಮಾನ.

ಮಾಜಿ ವಾಯ್ಸರಾಯರಾದ ಚೆಮ್ಸಫರ್ಡರು ವಿಲಾಯಿತಿಗೆ ಇದೇ ತಾ. 17 ರಲ್ಲಿ ತಲಪಿದರು. ಅವರು ಈಗ ಹಿಂದುಸ್ಥಾನದಲ್ಲಿ ಉಂಟಾಗಿರುವ ಕೌನ್ಸಿಲುಗಳು ಪರಮೋಪಯೋಗಿಯಾಗುವುವೆಂದೂ, ಕೌನ್ಸಿಲಯುಗಳ ಕಳೆ ನೆಟ್ಟಗಿದೆಯೆಂದೂ, ನಿಷ್ಪಕ್ಷಪಾತರದ ಪ್ರಚಾರವು ಹುನಾಗಿ ಮುರಿದು ಹೋಗುವದೆಂದೂ, ತಿಳಿಸಿರುವರು. ಲಂಡನಿನ "ಟೈಮ್ಸ" ಪತ್ರಿಕೆಯು ಇವರನ್ನು ಹೊಗಳುವ ಸಂದರ್ಭದಲ್ಲಿ ಮಾತ್ರ, ಪಂಜಾಬು ಪ್ರಕರಣದ ಸಂಬಂಧ, ಇವರು ತಟಸ್ಥರಾದುದೂ, ರವಲೇಟ್ ಆಕ್ಟನ್ನು ಇವರು (ನಿಮಯೋಗದ ಆಕ್ಟನ್ನು) ಇನ್ನೂ ಇಟ್ಟುಕೊಂಡಿದ್ದುದೂ, ಅನ್ಯಾಯವೆಂದೂ ತಿಳಿಸಿಬಿಟ್ಟಿದೆ.

ಸ್ಕಾಟ್ಲಂಡಿನಲ್ಲಿ ಗನಿಗಾರರು ನಾನಾ ಉಪದ್ರಗಳನ್ನು ಕೊಡುತ್ತಿರುವರು. 900 ಹಡಗುಗಳು ವ್ಯಾಪಾರವಿಲ್ಲದೆ ಸುಮ್ಮಗಾಗಿ, ಲಂಗರ ಹಾಕಿವೆ. ಹಡಗ ಕಟ್ಟುವ 56000 ಮಂದಿಗೆ ಕೆಲಸವಿಲ್ಲ. 170000 ಲೋಹ ಕಾರ್ಖಾನೆಯವರಿಗೆ ದಿಕ್ಕಿಲ್ಲ. ಹಡಗುಗಳ ಬೆಲೆ ತೀರ ಕಡಿಮೆಯಾಗಿವೆ. 90000 ಪವನಿಗೂ ಬೆಲೆಯುಳ್ಳ ಹಡಗವನ್ನು ಈಗ 32000 ಪವನಿಗೆ ಕೇಳುತ್ತಾರಂತೆ. ಕೂಲಿಯವರಿಗೆ ಮಜೂರಿಯೂ ಅತಿ ಕಡಿಮೆಯಾಗುತ್ತ ನಡೆಸ್ತಿದೆ.

ಟಾಟಾಕಂಪನಿಯವರು ದೊಡ್ಡ ಒಂದು ಕೆರೆ ಕಡಿಯುವದಕ್ಕಾಗಿ ಮೊಳಶಿ ಸರಕಾರದವರು 54 ಹಳ್ಳಿಗಳನ್ನು ಅವರಿಗೆ ಕೊಟ್ಟು, ಅಲ್ಲಿನ ಜನಗಳನ್ನು ಬೇರೆ ಕಡೆಗೆ ಸ್ಥಳ ಅಥವಾ ಹಣಕೊಟ್ಟು ಕಳುಹವೆಂದು ತಿಳಿಸಿದರು. ಆದರೆ ಆ ಜನಗಳು ಸತ್ಯಾಗ್ರಹವನ್ನು ಕೈಕೊಂಡು, ಆ ಕೆಲಸ ನಡಿಸುವ ಸ್ಥಳದಲ್ಲಿ ಅಡ್ಡಸಾಲಾಗಿ ಮಲಗಿ, ಬಿಸಿ ನೀರು ಹೊಯಿದರೂ ಅಲ್ಲಿಂದ ಏಳದಿರುವ ಪ್ರಯುಕ್ತ ಆ ಕೆಲಸವನ್ನು ನಿಲ್ಲಿಸಲಾಗಿದೆ. ಇವರ ಸಫಲತೆಯನ್ನು ನೋಡಿ, ಬೇರೆ ಸ್ಥಳವನ್ನು ಅಥವಾ ತುಂಬಾ ಹಣವನ್ನು ಅವರಿಗೆ ಕೊಡಿಸುವದೆಂದು ಸರಕಾರದವರು ಸಾರಿದರೂ, ಇವಕ್ಕೆ ಕೈಕರು ಒಪ್ಪದೆ ಸತ್ಯಾಗ್ರಹವನ್ನು ಕಳೆದ ೨-೩ ದಿವಸ ಬಂದು ಕೆಲಸದಮೇಲೆ ದಿನ್ನಾವಿಟ್ಟು ಕೂತಿರಲು. ಟಾಟಾಕಂಪನಿಗೂ ಈ ಮನವಿಯ ಸತ್ಯಾಗ್ರಹಿಗಳಿಗೂ ಒಪ್ಪಂದವಾಗಿ ಮುಂದಿನ ದೀಪಾವಳಿಯವರೆಗೆ ಬಾಂಧಿನ ಕೆಲಸ ನಿಲ್ಲಿಸಬೇಕೆಂತ ಠರಾಯಿಸಲ್ಪಟ್ಟಿತು. ಪರ್ಕ್ಯ ಸತ್ಯಾಗ್ರಹದ ವಿಜಯವಾಯಿತು.

ಕುಮಟ ಪೇಟೆ ಧಾರಣೆ.

ಜಿನಸು.		ದರ.
ರಂಗೂನದ ಗೋಣಿ ೧ಕ್ಕೆ	...	೧೩।
ಕುಚ್ಚಿಗೆ ಅಕ್ಕಿ ಮಾನಗಿ	..	೫॥—೬
ರಾಗಿಸಿ ಡಕ್ಕೆ	..	೯—೯॥
ಗೋಧಿಗೋಣಿ ೧ಕ್ಕೆ	...	೧೮—೨೨
ಹುರುಳಿ ಸಿದ ,	.	೧೬
ಕಡಲೆ ಬೇಳ ೧ಕ್ಕೆ	..	೧೭
ತೊಗರಿಬೇಳೆ ಗೋಣಿ ೧ಕ್ಕೆ	...	೨೦—೨೮
ಹಸರು ಬೇಲ ,,	...	೩೦—೩೨
ಮಾರಿಶ ಸಕ್ಕರೆ ಮಣ ,,	...	೧೧।—೧೧॥
ಮೆಣಸಿನ ಕಾಯಿ ಮಣ ,,	...	೪—೬
ಹರಳೆಣ್ಣೆ ಮಣ	...	೭॥—೭॥।
ಕೊಬ್ರಿ ಎಣ್ಣೆ ಮಣ	...	೯॥
ಕೊತ್ತಂಬರಿ ಗೋಣಿ ,,	...	೧೩॥—೧೧
ಉಪ್ಪು ಗೋಣಿ ,,	...	೪-೫-೦
ಕರಿಸಿನ ಹೂಯಿಲ ,,	...	೪-೭-೦
,, ಹಂಸ ,,	...	೩-೧೧-೬
ಬೆಲ್ಲ ಖಂಡಿ ೧ಕ್ಕೆ	...	೪೫—೫೦
ಗಾಂಜಟೆ ಬೆಲ್ಲ ,	...	೧೧೫—೧೨೦
,, ಗೋಟು ,,	...	೭೦—೭೫
,, ಹಾಲಿ ,,	..	೯೦—೯೫
,, ಚಿಕಣ ,,	...	೧೫೦
ಮೆಣಸು ,	...	೧೪೧—೧೪೫
ಯಾಲಕ್ಕಿ ,	...	೩೦—೩೨
ಯಲ್ಲಾಪುರದ ರಾಶಿ ,	..	೧೨೦—೧೪೦
ಶಿರ್ಸಿ ರಾಶಿ ,	...	೧೩೦—೧೫೦
ಸಿದ್ದಾಪುರ ರಾಶಿ ,	...	೧೨೫—೧೪೦
ಸೊರಬದ ರಾಶಿ ,	...	೧೨೦—೧೩೫

ವಿಜಯಶ್ರೀ ರತ್ನಮಾಲಾ.

ಈವರೆಗೆ ಈ ಸಂಸ್ಥೆಗೆ ಸಹಾಯವನ್ನು ಮಾಡಿದ ವಿವರ.—

೧. ಶ್ರೀ ಜಾ. ತಿ. ಭಟ್ಟ, ಮಾಸ್ತರ ದೊಡ್ಡಮನೆ ೫ ರೂ.
೨. ಎಸ್. ಆರ್. ಪಿ. ಭಟ್ಟ ಮಾ ಯಲ್ಲಾಪುರ ೫ ರೂ.
೩. ವಿ ಆರ್. ಭಟ್ಟ ಯಲ್ಲಾಪುರಕರ ... ೫ ರೂ.
೪. ಮುಕುಂದರಾವ ಹೊನ್ನಪ್ಪಾ ... ೧ ರೂ.
೫. ಎಸ್. ಎಸ್. ಹೆಗಡೆ, ಮಾಸ್ತರ ಕುಮಟಾ ೫ ರೂ.

ಇವರಲ್ಲಿ, ಮೊದಲಿನ ಇಬ್ಬರು ಕಾಯಂ ಈ ಸಂಸ್ಥೆಯ ಒಂದ್ನೊಂದಾಂಕ ಪ್ರತಿದಾರರಾಗಲಿಕ್ಕೆ ಒಪ್ಪಿರುವರು.

ಅಂಕೋಲಾ ೨೩-೪-೩೦. } **ವಿ. ಪ. ಹೆಗಡೆ, ಬಾಡ.**
ಮಾಸ್ತರ ಸ್ಕೂಲ ನಂ 11

ಹೊಸ ಶೋಧ! "ಹಿಂ" ಹೊಸ ಶೋಧ!!

ಗುಣ ಬಾರದಿದ್ದರೆ, ಹಣವಾಪಸು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಹೊಸರೀತಿಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ, ವೀರ್ಯ ವೃದ್ಧಿಯಾಗುವದು, ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿರುವದಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಕಣ್ಣಿಗೆ ಯಾವ್ಯಾವ ಅತ್ಯಂತ ಗುಣವುಂಟಾಗದೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವ ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ರೋಗವಿದ್ದರೆ, ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ; ೧೪ ತೊಲೆಯ ಡಬ್ಬಿಗೆ ರು. ೧ ಆಣೆ೭. ೩ ಡಬ್ಬಿಗಳಿಗೆ ೪ ರು ೮ ಆಣೆ ೬ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ನಂ. ೧೮೭೬೩ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ... [illegible]

ರೋಗಗಳ ನಾಮಗಳು.

[illegible]

[illegible]

ಬ್ರಾತಿಯಿಂದ ಗುಣಪಡಿಸುವ

ಔಷಧಗಳು.

1. [illegible]

2. [illegible]

3. [illegible]

4. [illegible]

5. [illegible]

ಎಸ್. ಗಣಪಯ್ಯ ... ಸನ್ಸ್, [illegible]

ಮೋಟಾರ.

[illegible] ಪ್ರತಿ ಆದಿತ್ಯವಾರ-ಗುರುವಾರ ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ [illegible]

ಎಸ್. ಎಲ್. ಫಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

[illegible]

ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हें औषध दुर्गम अशा पहाडांतील अनेक वनस्पतींच्या उमात पौष्टिक औषधीफळांचा रसार्क मिश्र करून, खालीं दिलेल्या रोगांवर उपयुक्त अशी भस्में घालून, हा वज्रांग बिंदु फार प्राचीनकालच्या वैदिक शास्त्रकर्तानें तयार केला आहे. हा बिंदु सेवन केल्यानें नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहींसा करून, वीर्य वृद्धि व रक्तशुद्धि होते. कितीहि जुनाट कडक असा (एक सतकांतन) नाश. पावत आणि उपदंश संबंधी सुरलेले विकार नाहींसे होऊन हातपाय, डोळे यांचा दाह व धातुविनाशक सर्व विकार नष्ट होऊन, शरीर वज्राप्रमाणे बनतें, हा बिंदु खाल्ल्यानें उतारवयाच्या मनुष्याचा कामविकार सुद्धां प्रज्वलित होऊन, क्षुधा व शक्ति भरपूर वाढते आणि स्तनीय अपायकारक असे गर्भाशयस्थ रोग यांचा समूळ नाश होतो. हें औषध स्त्रियांनीं सेवन केल्यास, त्यांचे जननेंद्रियाचे कोणत्याहि प्रकारचे विकार न राहतां, त्या गर्भधारणास योग्य होतात. ह्याच्या सेवनानें दिवसांतून तीन वेळां जवळ तरा, भूक चांगली लागत जाऊन शौचास साफ होतें. याचा अनुभव औषध घेतल्याच्या पहिल्या दिवशीं येतो. तरी वरील रोगांत तरुण आणि वृद्ध, स्त्रिया व पुरुष यांनीं या वज्रांग बिंदूचें सेवन करून, यांतील खरी मजा पहावी. फार दिवसांचा रोग असल्यास, पूर्ण गुणास तीन बाटल्या औषध घेतलें पाहिजे. नवीन रागास एक बाटली औषध सेवन केलें असतां, गुण येईल. एका बाटलींत १० तोळे औषध असतें. त्या एका बाटलीची किंमत १ रुपया. तीन बाटल्यांची किंमत ३। रुपये एक डझन (१२) बाटल्यांची किंमत १० रुपये. याशिवाय टपाल, व प्याकिंग खर्च निराळा पडेल. तीन बाटल्या सेवन करणाऱ्यांनीं २० तोळे औषधाची एक मोठी बाटली मागवून घ्यावी म्हणजे थोडी सोइस्कर पडेल.

मॅनेजर,

के. एम. हनुमान प्रासादिक कंपनी.

जिल्हा बेळगांव, मु. पो. निपाणी.

ಅತ್ಯುತ್ತಮವಾದ ಮಂಗಳೂರ ನಶ್ಯವು, ಮತ್ತು ಸೀಧಾ-ಬೀಡಿಗಳು ನಮ್ಮಲ್ಲಿ ಸಿಗುವವು. ಕೋಕ ದರ, ನಮೆಲತಿದು ಉದಬತ್ತಿ.

ಪತ್ತೆ:— ಬಿ. ದಾಸ, ಕುಮಟಾ

Printed and published by Krishnarao Keshav Shenvi at his Star of Kanara Press, Kumta.

Reg No.B.1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೮.

ಪತ್ರದ ವರ್ಗಣಿ.—
ಕುಮಟೆಯಲ್ಲಿ ಆಗಾವು
ರೂಪಾಯಿ 2-0-0.
ಮನೆಯಾವರೆರಿಯಿಂದ
ರೂ. 2-13-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 2-10-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:—
ಕನ್ನಡ, ಇಂಗ್ಲಿಷ ಸ್ಮಾಲ
ಪ್ಯಾಯಿಕ(೧೫ ಎಮ್ ಬಕ್ಸ) ೮
ಸಾಲುಗಳ ವರೆಗೆ ರೂ. 1-0-0
ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಂದ ಸಾಲು ಎಷ್ಟು
ದೊಡ್ಡದಿರುವದೋ ಆ ಮಾನ
ದಿಂದ ಅಷ್ಟು ಸಾಲುಗಳು ಹಿಡಿ
ಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ
ಪತ್ರದ್ವಾರ ಯಾ ಸಮಕ್ಷ
ತಿಳಿಸಲ್ಪಡುವದು.

-[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೧೭ನವಂಬರ್ ಮೋ ಸನ್ ೧೯೨೧ ನೇ ಇಸವಿ.]-

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿ ಕಪ್ಪು, ಕೆಂಪು, ಜಾಂಬಳಿ ೧೦ಂಕ್ಕೆ ೧ ಆಣೆ
ಕಪ್ಪು ಮಾತ್ರ ೧೨ಆಣೆ. ಶಾಯಿ ಸಂಪಲಿಗೆ ಒಂದಾಣೆ.
ಸ್ಟೋಕ ತೆಗೆದುಕೊಂಡರೆ, ಭರಪೂರ ಕಮಿಶನ್.

ಪತ್ತೆ— ಎಸ್. ವ್ಹಿ. ಭಾಗ್ವತ.
ಪೋಸ್ಟ— ಹೆಗಡೆ, ಉತ್ತರ ಕಾನಡಾ.

ಭಡತೀ ಭ್ರಾತೃಸಂಘದ

ಅನುಭವಸಿದ್ಧ ಔಷಧ

ಜರದ ಗುಳಿಗೆಗಳು. ಕ್ರಯ:— ೨೫ ಕ್ಕೆ ೦-೧೦-೦.
ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಬ್ಬು, ಉಂಚೆ ಕಾ
ಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ
ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗ
ಳೂ, ಶಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾ
ನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

ಅತ್ಯಂತ ಬೋಧಪ್ರದ-ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ
ಪ್ರಯತ್ನ ಬೆಲೆ ೧ರೂ. (೨) ಸತ್ಯಪ್ರಕಾಶ.
ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ
ಬೆಲೆ ೧೨ ಆಣೆ.

ಪತ್ತೆ— ಬಸವಾರ್ಯ ಬೂದೀಹಾಳಮಠ,
ಹೆಡ್ ಮಾಸ್ತರ, ಮುಕ್ಕಾಂ ಆಲೂರ.
ಪೋಸ್ಟ— ಆಲೂರ—ಹಾನಗಲ್ಲ, ಜಿ. ಧಾರವಾಡ.

ಕಾರ್ಡಸ್ಯಾಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ
ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾ
ಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗ
ಳು ನಮ್ಮಲ್ಲಿ ಸಿಗುವವು.
ಕ್ರಯ:— ೧ಕ್ಕೆ ೬ಪೈ, ಡಜನಕ್ಕೆ ೪ಆಣೆ, ಶೇಕಡಾ
-೧೦-೦. ಟಪಾಲ ಹಾಸಲ ಬೇರೆ. ಸಂಪಲಗಳು ಬೇಕಾದ
ರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು.
ಪತ್ತೆ— ಸ್ಟಾರ ಓಫ್ ಕೆನರಾ ಪ್ರೆಸ್ಸ್,
ಕುಮಟಾ (ಎನ್. ಕೆನರಾ.)

ಶಾಸ್ತ್ರಿ] ಅತ್ಯುತ್ತಮ [ಸ್ಟಾಲಿ.

ಅತ್ಯುತ್ತಮ ಸ್ವದೇಶೀ ಶಾಯಿ ಗುಳಿಗೆಗಳು.
ಪರ ಸುಲಭ [INK TABLETS] ಶ್ವರ ಶಾಸ್ತ್ರಿ
ಇವರಿಂದ ತಯಾರಿಸಿದ ನೀಲಿ, ಜಾಂಬಳಿ, ಕೆಂಪು,
ಹಸಿರು ೧೪೪ ಶಾಯಿ ಗುಳಿಗೆ ಅಥವಾ ೧ ಗ್ರೋಸಿನ ಡ
ಬ್ಬಿಗೆ ರೂ ೦-೧೨-೦. ೧ ಡಜನ ಗ್ರೋಸಿಗೆ ರೂ. ೮ ಸಂಪ
ಲಿಗೆ ಅರ್ಧಾಣೆ. ಶೇಕಡೆ ಪ್ರತೆಗೆದುಕೊಂಡರೆ, ತೀರ ಕಡಿ
ಮೆ ದರದಲ್ಲಿ ಕೊಡುವೆವು. ಮಾತ್ರ ಏಜಂಟರ ಮೇಲೆ ಭ
ರಪೂರ ಕಮಿಶನ ಸಿಗುವದು. ೧ ಗ್ರೋಸಿಗಿಂತ ಕಡಿಮೆ ಕ
ಳುಹಿಸಲಾರೆವು. ಏಜಂಟರು ಬೇಕು! ಕಮಿಶನ ಸಿಗುವದು.

ದಿ ಸ್ವದೇಶೀ ಇಂಕ ಸ್ಟೋರ್ಸ್,

ಬಹು ನೂತನವಾದ ಚಿನ್ನದ
ಒಡವೆಗಳನ್ನು ತಯಾರಿಸುವೆವು



ಮಾನಖಾವತೀ, ಮೇಲೆ ತೋರಿಸಿದ ಉಂಗುರಗಳೂ,
ತರತರದ ಆಕಾರದಿಂದ ಮೊನೋಗ್ರಾಮು, ಮತ್ತು ಹಳ್ಳ
ಕಲ್ಲುಗಳ ಬಳಿತು ಬಿಲ್ಲಾ ಕಟ್ಟೋಣ, ಪಟ್ಟಗಿರಿ ಕ
ಟ್ಟೋಣ, ಕುಂದಣ, ಬಿಂಟಿ, ಮೂಗುಬಟ್ಟುಗಳು, ಈ
ವಿನಹ ಮೋಜಿನ ಚೈನುಗಳು, ಮಣಿಗಳು, ನವರತ್ನದ
ಪದಕಗಳು ವ ಮಣಿಗಳು, ನೂತನವಾದ ಸೂರ್ಯ
ಕಾಂತಿ ಹೂವುಗಳು, ಗುಲಾಬಿ ಹೂವುಗಳು, ಸಂಪಿಗೆ ಹೂ
ವುಗಳು, ಮಲ್ಲಿಗೆ ಹಾರಗಳು, ಮುಂತಾದ ಎಲ್ಲಾ ಬಾಗಿನ
ಗಳು ನಮ್ಮಲ್ಲಿ ಆಗುತ್ತವೆ. ಬೇಕಾದವರಿಗೆ ಯೋಗ್ಯ
ಚಾರ್ಜಿನಿಂದ ಮಾಡಿಕೊಡುವೆವು.

ಸಿತಾರಾಮ ಗೋವಿಂದ ಶೇಟ,
ಕೊಟ್ಟಿಕೆರ. ಗುರ್ಜರಗಲ್ಲಿ, ಕುಮಟಾ.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಕೊ
ಳ್ಳಬಹುದು. ಸವಲತ್ತಿಯ ದರಗಳು ಇಟ್ಟಿರುವೆವು.
ನಮ್ಮ ಪತ್ತೆ:—

ಗ್ಯಾತೋಂಡೇ ಬ್ರದರ್ಸ್,
ಮೋಟರ ಡೀಲರ್ಸ, ರಿಪೇರರ್ಸ,
ಕಾರವಾರ.

ಹೊಸ ಕೊ(ಫ)... ಹೊಸ ...
ಗುಣ ಬಾರದಿದ್ದರೆ, ಹಣಪರತು.
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ.)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನ
ಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನು
ಮಿಶ್ರಮಾಡಿ ಅನುಭವಿಕ ದೇಶೀ ವೈದ್ಯರ ಯೋಜನೆ
ಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂ
ತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ
ಪಾಕಸೇವನೆಯಿಂದ ಸ್ವಪ್ನಾವಸ್ಥೆಯ ಮೂತ್ರದ
ಮೊದಲು ಅಥವಾ ಆದಮೇಲೆ ಧಾತು ಬೀಳುವದು
ನಿಲ್ಲುತ್ತದೆ, ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿ
ಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂ
ದ ಮನವಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ
ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚ
ನ್ನಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತ
ವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂ
ಟಾಗಬೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂ
ಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣ
ಗಳೂ ಬರುವವು. ಇದರ ಅನುಭವವು ಸೇವನೆಯ
ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀ
ಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ ಸ್ತ್ರೀಯ
ರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು
ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯ
ರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವ
ರು. ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಿನಿಂದ
ಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂ
ದಲೂ ಗುಣ ಬರುವದು. ನಿದಾನ ಒಂದು ಸಾರಿಯಾ
ದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿ
ಗೆ ರು. ೧ ಆಣೆ೨. ೩ ಡಬ್ಬಿಗಳಿಗೆ ೪ ರು ೪ ಆಣೆ.
೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ
ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನ
ಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ

NOTICE.

Wanted temporarily for service in North Kanara five vernacular clerks for rain gauge observation work. Pay Rs 30/- per month (consolidated) Apply immediately in writing to the Engineer, in charge Hydro-Electric Surveys, Southern Division, Belgaum

S V. Richards.

Engineer, in charge Hydro Electric Surveys, Southern Division,
BELGAUM

WANTED AT ONCE

A qualified Engineer with experience of **Saw Mill work** to take charge of the **Ramanguli Saw Mill** in C D Kanara **Salary Rs.100 -** per Mensem with Rs 15 - Local allowance

Applications to be sent to Undersigned together with copies of testimonials

Camp —
Ankola,
1st May,
1921.

C. GILBERT.
Divisional Forest Officer,
C D Kanara

ಸಾಕ್ಷರತೆಯೂ, ಅದರ ಪ್ರಸಾರವೂ.

(ಲೇಖಕ— ಜ ಎನ್ ಕುಂದಗೋಳ.)

ಈಗಿನ ಕಾಲದಲ್ಲಿ ಈ ಸಾಕ್ಷರತೆಯ ವಿಷಯದಲ್ಲಿ [illegible] ಅಭಿಪ್ರಾಯವುಳ್ಳ ಒಂದು ವ್ಯಕ್ತಿಯು ಕೂಡ ದೊರೆಯ[illegible] ಉತ್ಕ್ರಾಂತಿ ತತ್ವದಂತೆ [illegible] ಈಗ ದಿನದಿನಕ್ಕೆ ಸುಧಾರಣೆಯ ಪಥದಲ್ಲಿ ಒಂದೊಂದು ಹೆಜ್ಜೆಯನ್ನು ಮುಂದಿಡುತ್ತ ಸಾಗಿರುವದು, [illegible] ಮೇಲಿಂದ ಮೇಲೆ ಬದಲಾಗುತ್ತಿರುವದು, ವರ್ತಮಾನ ಪತ್ರಗಳು ತಮ್ಮ ಕರ್ತವ್ಯಗಳನ್ನು ಒಳ್ಳೇ ಭರದಿಂದ ನಡಿಸುತ್ತಿರುವದು, ಇನ್ನೂ ಅನ್ಯ [illegible] ವೃದ್ಧಿಗೊಳಿಸಿ, ಎಲ್ಲೆಡೆಯಲ್ಲಿಯೂ ನಡೆಯುವ ವಿಚಾರದಲ್ಲಿರುವದು, ಎಲ್ಲೆಲ್ಲಿಯೂ ಜನರೊಳಗೆ ಹೊಸ ಹೊಸ ಕಲ್ಪನೆಗಳು ದಿನದಿಂದಮೇಲೆ ಉತ್ಪನ್ನವಾಗುತ್ತಿರುವದು, [illegible] ದೇಶೋದ್ಧಾರಕ್ಕಾಗಿಯೇ ಸ್ವಾರ್ಥತ್ಯಾಗಿಗಳಾಗಿ ಎಷ್ಟೋ ಜನರು ಕಷ್ಟನಷ್ಟ ಪರಂಪರೆಗಳನ್ನು ಒಂದೇ ಸಮನೆ ಸಹಿಸಿ [illegible], ದೇಶದ ತುಂಬ ಸಂಚರಿಸುತ್ತಿರುವರು, ಇದರ ಮುಖದ ಮಾತು ಒಂದೇ ಉಂಟಾಗಿರುವದು, ಅದು ಯಾವದೆಂದರೆ ನಮ್ಮ ದೇಶದಲ್ಲಿ ಸಾಕ್ಷರರು ತೀರ ಕಡಿಮೆ. ಕೋಟಿಗಟ್ಟಲೆ [illegible], ನಿರಕ್ಷರರಿಗೆ ವರ್ತಮಾನ ಪತ್ರಗಳ [illegible] ಉಪಯೋಗವೇನು? ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಸಾಕ್ಷರತೆಯ ಮಹತ್ವವೆಷ್ಟು, ಮತ್ತು ಅದರ ಅವಶ್ಯಕತೆಯೆಷ್ಟೆಂಬುದು ವಾಚಕರಿಗೆ ನಮ್ಮ ವಿವೇಚನೆಗಳ ಮೂಲಕ ತಿಳಿದು ಬಂದರೂ ಗೊತ್ತಾಗದಿರದು.

ನಮ್ಮ ದೇಶದಲ್ಲಿ ಸಾಕ್ಷರರ ಸಂಖ್ಯೆಯು ಬೆಳೆಯದಿರುವದಕ್ಕೆ ಮುಖ್ಯವಾಗಿ ಎರಡ ಕಾರಣಗಳು, ಅವು ಯಾವವೆಂದರೆ, [illegible] ನಿರಕ್ಷರರಿಗೆ ಸಾಕ್ಷರರನ್ನಾಗಿ ಮಾಡಬೇಕೆಂಬ ಇಚ್ಛೆಯೇ ಇರುವದಿಲ್ಲ, ಇದು ಮೊದಲನೆಯದು. ಇನ್ನು [illegible] ಅವರ ನಮ್ಮ ದೇಶಬಾಂಧವರೆಂದು ತಿಳಿದು, ತಮ್ಮ ಸ್ವಂತ [illegible] ಪ್ರಯತ್ನದಿಂದ ಅವರನ್ನು ಸಾಕ್ಷರರನ್ನಾಗಿ ಮಾಡುವ ಕೆಲಸವನು ಕೈಕೊಳ್ಳುವ ಉತ್ಸುಕತೆಯುಳ್ಳವರಿರುವದಿಲ್ಲ, ಒಂದು ವೇಳೆ ಕೆಲವರು ಇದ್ದರೂ, ಅವರಿಗೆ ಸ್ವಯಂಸ್ಫೂರ್ತಿಯಿಂದಲೂ, ಸ್ವಾರ್ಥತ್ಯಾಗದಿಂದಲೂ, ನಿಃಪಕ್ಷಪಾತದಿಂದಲೂ, ಜಾತಿಭೇದ ನಿರಪೇಕ್ಷತೆಯಿಂದಲೂ ಸತತವಾಗಿ ದುಡಿಯುವಂಥ ಸ್ವಯಂಸೇವಕರು ಸಿಗುವದು [illegible] ಇದು ಎರಡನೆಯದು. ಈ ಎರಡ ಕಾರಣಗಳಲ್ಲಿ ಮೊದಲನೆಯ ಕಾರಣವು ಬಹುಶಃ ಸ್ವಾಭಾವಿಕವಾದದ್ದೆಂದೇ ಹೇಳಬೇಕಾಗುವದು, ಯಾಕೆಂದರೆ ಮಾವಿನ ಹಣ್ಣು ಹ್ಯಾಗಿರುವದೆಂಬುದನ್ನರಿಯದವನು ಮಾವಿನ ಹಣ್ಣಿನ ರುಚಿಯನ್ನೇನು ಬಲ್ಲನು? ಅವನಿಗೆ ಅದರ ರುಚಿಯನ್ನು ಬಲ್ಲವನು ಮಾವಿನ ಹಣ್ಣನ್ನು ತೋರಿಸಿಕೊಟ್ಟು, ತರುವಾಯ ನೀನದನ್ನು ತಿಂದು ನೋಡು. ಹಿತಕರ [illegible] ಯಾಗುವದೆಂದು ಹೇಳಿದರೆ ಮಾತ್ರ ಅವನದನ್ನು ತಿನ್ನುವನಲ್ಲದೆ ಅದರ ರುಚಿಯ ಸ್ವಾದವೂ ಚನ್ನಾಗಿ ಅರಿಯುತ್ತಾನೆ. [illegible] ಸಾಕ್ಷರತೆಯ [illegible] ನಿರಕ್ಷರರಲ್ಲಿ ಚನ್ನಾಗಿ [illegible] ಹುಟ್ಟಿಸಿದರೆ ಅವರಲ್ಲಿ [illegible] ಆದಕಾರಣ ಮೊದಲನೆಯ ಕಾರಣವೇ ನಮ್ಮ ದೇಶವು ಇನ್ನೂ ನಿರಕ್ಷರದಿಂದ [illegible] ಪ್ರತ್ಯಕ್ಷವಾಗಿದೆ [illegible]

[illegible]

[illegible] ಸಾಕ್ಷರತೆಯ [illegible] ಸ್ವಯಂಸೇವಕರಿಗೆ [illegible] ಸಾಕ್ಷರರನ್ನು [illegible] ಬೆಳೆಯುತ್ತ ನಡೆದರೆ, [illegible] ಸಾಕ್ಷರತೆ [illegible] ಪ್ರಸಾರ [illegible] ವಿಚಾರ [illegible] ಭಾಂಗ [illegible]

[illegible] ಅನಕ್ಷರರ [illegible] ಪ್ರತಿಯೊಂದು ಊರಲ್ಲಿ ಸಾಕ್ಷರತಾ ಪ್ರಸಾರಕ ಮಂಡಳಗಳೊಂದನ್ನು ಸ್ಥಾಪಿಸಬೇಕು. ಈ ಮಂಡಳದಲ್ಲಿ [illegible] ಸ್ವಯಂಸೇವಕರು [illegible] ನಿರಕ್ಷರರನ್ನು [illegible] ಸಾಕ್ಷರರನ್ನಾಗಿ ಮಾಡಲು [illegible] ಸ್ವಯಂಸೇವಕರು [illegible] ಮಂಡಳಗಳ [illegible] ಸಾಕ್ಷರತಾ ಪ್ರಸಾರದ ಕಾರ್ಯವನ್ನು [illegible]

ಇನ್ನು ಈ ಕೆಲಸಕ್ಕಾಗಿ ವೇಳೆಯನ್ನೊಂದನ್ನು ಗೊತ್ತುಪಡಿಸುವದವಶ್ಯವಿದೆ, ಯಾಕೆಂದರೆ ನಮ್ಮ ದೇಶದಲ್ಲಿ ಬಹು ಜನರು [illegible] ವೇಳೆಯಲ್ಲಿ [illegible] ಕೆಲಸವನ್ನು [illegible] ರಾತ್ರಿಯ ಕಾಲದಲ್ಲಿ [illegible] ವಿಶ್ರಾಂತಿಯ ಕಾಲವಾದ್ದರಿಂದ [illegible] ಕೆಲಸಕ್ಕಾದರೂ [illegible] ಇದು ಯೋಗ್ಯವಾದ ಕಾಲವಾಗಿದೆ. [illegible] ಯೋಗ್ಯವೇಳೆಯಾಗುವದು. [illegible] ಮಂಡಳವೇ [illegible]

(ಮುಂದಿನ ಸುದರು)

ಮೋಸ ಹೋಗಬೇಡಿರಿ.

ಆಯ್ಯಾ ಪತ್ರಾಧಿಪರೇ,

ನಾನೇನು ಅಸಹಕಾರಿತಾವಾದಿಯಲ್ಲಿ, ಸಹಕಾರಿತಾವಾದಿಯಂತೂ ಅಲ್ಲೇ ಅಲ್ಲ. ಕೇವಲ ನಿಃಪಕ್ಷಪಾತಿಯು, ಸ್ವತಂತ್ರ ವಿಚಾರಿಯು. ಇದೇ ದೃಷ್ಟಿಯಿಂದ ಸರಕಾರದಿಂದ ನೇಮಿಸಲಾಗಿಯಾದ ಜಂಗಲ ಕಮೀಟಿಯ ವಿಷಯ ವಿಚಾರ ಮಾಡುವೆನು.

ಜಂಗಲ ಕಮೀಟಿಯ ಮೇಲೆ ಚರ್ಚೆ ನಡೆಸುವ ಭಾಷಣಕಾರರು ಒಡೆದ ರೇಖೆಯನ್ನು ಓದಿ ಬಹಳೇ ಆಶ್ಚರ್ಯವಾಯಿತು. ರಾಜಕೀಯಗಳ ನಾಶ ಸಮರ್ಥಿಸಲು ಜನರಿಗೆ ಬಳಿಕ ಮಾಡುವ ಬುದ್ಧಿಯಿಂದ ಪ್ರೇರಿತರಾಗಿ ಈ ಕರಾರನ್ನು ಧೈರ್ಯದಿಂದ ಮುಂದೆ ತಂದರು' ಮತ್ತು ಅದನ್ನು ನಾವೆ ಧಾರವರು ಬಹುಜನ ಸಮಾಜದ ಹಿತವನ್ನು ಸಾಧಿಸುವ ಉದ್ದೇಶದಿಂದ ಪ್ರೇರಿತರಾಗಿ ಕರಾರನ್ನು ಅಂಗೀಕರಿಸಿದರು' ಎಂದು ಬರೆಯುತ್ತಾರೆ ಆದರೆ, ನಾನು ಸರಕಾರದ ಜಂಗಲ ಧೋರಣದ ವಿಷಯ ಎರಡು ಅವತರಣಗಳನ್ನು ಕೊಟ್ಟು ಜಂಗಲ ಕಮೀಟಿಯಿಂದ ನಮಗೆ ಒಳಿತಾಗುವದು ಎತ್ತಟ್ಟಿಗಿರಲಿ, ಕೇಡು ಮಾತ್ರ ಬೇಕಷ್ಟು ಆಗುವದೆಂದು ತೋರುತ್ತದೆ.

ಮೂರು-ನಾಲ್ಕು ವರ್ಷಗಳ ಹಿಂದೆ, ಕುಮಟೆಯಲ್ಲಿ ಡೆಮೊನ್‌ಸ್ಟ್ರೇಶನ ಫಾರ್ಮ ಸ್ಥಾಪಿಸುವಾಗ ನಾವೆಲ್ಲರೂ ಸಂತೋಷಪಟ್ಟೆವು. ಈ ಫಾರ್ಮಿನಲ್ಲಿಯ ಪ್ರಯೋಗದಿಂದ ಬೇಸಾಯದ ಏಳ್ಗೆಯಾಗುವದು, ಒಕ್ಕಲಿಗರ ಅಭಿವೃದ್ಧಿಯಾಗುವದೆಂದು ಜನರಿಗೆಲ್ಲ ಮರುಳುಹಾಕಿದರು. ಫಾರ್ಮ ಸುಪರಿಂಟೆಂಡೆಂಟರ ಪ್ರಯೋಗ ಶಾಲೆಯ ಪ್ರಯೋಗಗಳನ್ನು ನೋಡಿ, ಅದೊಂದು ರೈತರಿಗೆ ಮೋಸ ಹಾಕುವ ಯುಕ್ತಿಯೆಂದು ಕೆಲವರು ತರ್ಕಿಸಿದರು. ಕಟ್ಟಕಡೆಗೆ ಕಳೆದ ವರ್ಷದ ಬಜೆಟ್‌ದಲ್ಲಿ ಪ್ರಕಟಿಸಿದ ಸರಕಾರದ ಪ್ರಸನೋಟದಿಂದ ಈ ತರ್ಕವೇ ನಿಜವೆಂದು ಖಾತ್ರಿಯಾಯಿತು. ಸೊಪ್ಪಿಲ್ಲದೆ ಗದ್ದೆಗಳನ್ನು ಸಾಗು ಮಾಡುವದು ಎಷ್ಟರಮಟ್ಟಿಗೆ ಸಾಧ್ಯವೆಂಬದನ್ನು ಪ್ರಯೋಗಿಸಲಿಕ್ಕೆ ಕುಮಟೆಯಲ್ಲಿ ಪ್ರಯೋಗ ಶಾಲೆಯನ್ನು ಸ್ಥಾಪಿಸಿದ್ದಾರೆಂದು ಸರಕಾರವು ಹೇಳುತ್ತದೆ (A Demonstration farm has been estaolished at Kumta to prove how far rice cultivation can dispense with soppu) ನಿಮ್ಮ ಭೂಮಿಗೆ ಸೊಪ್ಪಿನ ಗೊಬ್ಬರ ಬೇಡೆಂದು ಗೊಬ್ಬರಕ್ಕೆ ಕೆಲಸಕ್ಕೆ ಬೀಳುವದಿಲ್ಲ. ರೈತರು ಸೊಪ್ಪಿಗಾಗಿ ಜಂಗಲ ಹಕ್ಕುಗಳನ್ನು ಕೇಳುತ್ತಾರೆ. ಅವನ್ನು ನಿರಾಕರಿಸಿ, ಜಂಗಲ ಹಕ್ಕುಗಳ ಅವಶ್ಯಕತೆಯೇ ಇಲ್ಲ ಎಂತ ತೋರಿಸಲು ಈ ಪ್ರಯೋಗ ಶಾಲೆಯನ್ನು ಸರಕಾರವು ಸ್ಥಾಪಿಸಿರುವದು. ಇದನ್ನು ನಾವು ದುರ್ಭಾಗ್ಯದ ಅಲ್ಲಗಳೆಯಬೇಕು ' ಇವರಕೋಲಿಂದ ಕ ಮಾಡಿದ ಪ್ರಯೋಗ ಶಾಲೆಯಿಂದ ರೈತರ ಹಿತವಾಗುವ ಸಂಭವವಿದೆಯೋ? ಉಚಿತವಾಗಿ ಸಿಗುವ ಸೊಪ್ಪನ್ನು ಬಿಟ್ಟು, ಹಿಂಡಿ, ಎಲುಬಿನ ಹುಡಿ ಮುಂತಾದ ದ್ರವ್ಯಗಳನ್ನು ಕೊಂಡು ಗದ್ದೆಯ ಬಡ ರೈತರು ಉಪಯೋಗಿಸಲು ಶಕ್ಯವಿದೆಯೋ? ಇದನ್ನು ರಾಜಕೀಯ ಭಾಷಿಗಳೇ ಹೇಳಲಿ

ಜಂಗಲ ಕಮೀಟಿಯ ಸಂಬಂಧ ನಾವು ಮೇಲಾದವರು ಆಡಿದ ವಾಕ್ಯವನ್ನು ಚೆನ್ನಾಗಿ ಮನನಮಾಡಿ, ಅಮೇಲೆ ಕಮೀಟಿಗೆ ಸ್ವಾಗತ ಅಥವಾ ಬಹಿಷ್ಕಾರ ಮಾಡಬೇಕಾಗಿ ವಿನಂತಿ ಇದೆ (Not only was agricul ture dependent on forestry, but it was necessary to have a permanent population in the district, it it was desired to expoit the fores's to the fullest extent.) " ಒಕ್ಕಲತನವು ಜಂಗಲುಗಳ ಮೇಲೆ ಆವಲಂಬಿಸಿರುತ್ತದೆಂಬ ಸಂಗತಿಯು ನಿರ್ವಿವಾದವು. ಜಂಗಲದ್ರವ್ಯವನ್ನು ಸಂಪೂರ್ಣವಾಗಿ ಉಪಯೋಗಿಸಬೇಕೆಂದು ಸರಕಾರದ ಇಚ್ಛೆ ಇದ್ದರೆ ಜಿಲ್ಲೆಯಲ್ಲಿ ಕಾಯಂ ಜನವಸ್ತಿ ಇರುವದು ಆವಶ್ಯವಿರುತ್ತದೆ " ಈ ವಾಕ್ಯವೊಳಗೆ ಅಜಾಜನಕ ಸಂಗತಿ ಏನಿರುವದೆಂಬದು ನಮಗೇನು ತಿಳಿಯದು , ಪ್ರಸಿದ್ಧ ಫ್ರೆಂಚ್ ವಿದ್ವಾಂಸ ತಿಳಿಸುವ ಈ ಕ ವಿಚಾರವು ನೇಮಿಸುವ ಮುನ್ನ ಉಪ್ಪೇರಿವು ರಮಾಕರ ಬೇಸಾಯದ ಅಭಿವೃದ್ಧಿಯಲ್ಲಿ ಜಂಗಲಗಳನ್ನು ಕೊಡಿಸಿ, ಸರಕಾರ ಉತ್ಪನ್ನವನ್ನು ಹ್ಯಾಗೆ ಬೆಳಿಸಬೇಕೆಂಬ ಜಂಗಲ ಇನ್ಸಪೆಕ್ಟರರ ಧ್ಯೇಯವೇ ಸ್ಪಷ್ಟವಾಗಿ ಕಾಣುತ್ತದೆ ಬಡವರಿಗೆ ಬೇಕಾದದ್ದು ರಮಣೀಯ ಅಲ್ಲ, ಬೇಸಾಯವು ಅಲ್ಲ. ಜಂಗಲುಗಳನ್ನು ಸಂರಕ್ಷಣೆ ಇಲ್ಲಿ ಯಾರೋಪಿಯನ ಅಥವಾ ಬಹು ಶ್ರೀಮಂತರಿಯಂತ ಬಂಡವಲುಗಾರರ ಕೈಕೆಳಗೆ ಗುಲಾಮರಂತೆ ಕೆಲಸ ಮಾಡುವ ಆಳುಮಕ್ಕಳು ಬೇಕು; ಇದನ್ನು ಬೌಳಿ ಮಾಡಿ, ಸುಕರ ಮಾಡಲಿಕ್ಕೆ ಈ ಕಮೀಟಿಯು ನೇಮಿಸಲ್ಪಟ್ಟಿದೆಂದು ನನಗೊಂದು ಭೀತಿಯು. ಮತ್ತು ಕುಮಟಾ ಡೆಮೊ ಫಾರ್ಮಿನ ಉದ್ದೇಶದ ಉದಾಹರಣೆಯಿಂದಂತೂ ಈ ಭೀತಿಯು ಇನ್ನಿಷ್ಟು ದೃಢವಾಗುತ್ತದೆ.

ಹೀಗಿರಲು, ಇಂಥ ಭಾಷಣವನ್ನು ಓದಿ, ನಾವು ಭಾಷಣರಂಥ ಜಾಣ ಪಂಡಿತರು ಜನರಿಂದಿಂದ ಕ ನಿಯಮದವರನ್ನು ನೋಡಿದರೆ ಮಹದಾಶ್ಚರ್ಯವಾಗುತ್ತದೆ ಇಷ್ಟು ವಂಚನೆಯೂ ಬಹುದು ಇದೇ. ತಮ್ಮ ವಿನೀಯ,

ತಾ. ೨೫-೪ ೨೧. ನಿಃಪಕ್ಷಪಾತಿ

ಫೋರೆಸ್ಟ ಕಂಟ್ರಾಕ್ಟರರಿಗೆ ನೋಟೀಸು.

ಕಾನಡಾ ಮಧ್ಯಭಾಗ ಡಿವ್ಹಿಜನದ ರಾಮನಗುಳಿ ರೇಂಜಿನಲ್ಲಿ ಈ ಕೆಳಗೆ ನಮೂದಿಸಿದ ಹಿಂಬರ ಕಂಟ್ರಾಕ್ಟಗಳು ಈ ವರ್ಷ ಟೆಂಡರು ಕರೆಯಲ್ಪಟ್ಟಿರುತ್ತಾವೆ --

(೧) ಬ್ಲಾಕ XXV ಕಂಪಾರ್ಟಮೆಂಟ 54 55, ಬಿಪ್ಪಳ್ಳಿ, ಡೊಂಗ್ರಿ, 1921—23 ನೇ ಸಾಲಿನಲ್ಲಿ
(೨) „ XXIV „ 19 (ಭಾಗ 2 ವ 3) ರಾಮನಗುಳಿ, 1921 ನೇ ಸಾಲಿನಲ್ಲಿ
(೩), XXIV „ 27 (ಭಾಗ 1) ಹೆಬ್ಬುಳ 1921 ನೇ ಡಿ
(೪) „ XXIV „ 17—18, ಕುಂಕಸಾಳ 1921-22ನೇ ಡಿ

ಇವುಗಳೊಳಗಿಂದ ಸಾಗವಾನಿ, ಶಿಸಂ, ಮತ್ತಿ, ಹೊನ್ನೆ ವಗೈರೆ ಗಿಡಗಳು ವಿಕಾಣಿ ಮಾಡಿದ್ದು ಕಟ್ಟಿಗೆ, ನಾಟುಗಳು ತಯಾರಮಾಡಿ, ಡಿಪೋಗೆ ಸಾಗಿಸುವದು ಹೋಗುವದು

ಈ ಡಿವ್ಹಿ ರಾಮನಗುಳಿ ಮತ್ತು ಹೆಬ್ಬುಳದಲ್ಲಿ ಕೆಲವು ರಿಜರವೇಶನ್ ಕ್ಷೇತ್ರಗಳು ಪೂರ್ತ ಕಡಿಯುವ ಕೆಲಸ (clear cutting) ಮಾಡುವದು

ಆನೆಯಿಂದ ನಾಟು ಎಳೆಯುವ ಕೆಲಸ ಮಾಡಿದರೆ ಕೆಲಸ ಸುಲಭವಾದೀತು. ಆದರೆ ಆನೆಯು ಅಗದಿ ಅವಶ್ಯ ಬೇಕೆಂತಿಲ್ಲ.

ಯಾರೂ ಈ ಕಂಟ್ರಾಕ್ಟಗಳನ್ನು ತಕ್ಕೊಳ್ಳಲಿಕ್ಕೆ ಖುಶಿ ಇದ್ದಾರೆಯೋ, ಅವರು ಟೆಂಡರಿನ ಮಾಹಿತಿಗೋಸ್ಕರ ನಮ್ಮ' ಕಡೆಗೆ ಏಕದಮ್ ಬರಬೇಕು ಕೇಳಬೇಕು. ಅಥವಾ ನಮಗೆ ಅಗಸುರ ಮುಕ್ಕಾಮಿನಲ್ಲಿ ಈ ತಿಂಗಳ ತಾರೀಕು 11 ರಿಂದ 15 ವರೆಗೆ ಮತ್ತು 18-19 ತಾರೀಕಿನ ದಿವಸ, ಹಟ್ಟಿಕೇರಿ ಮುಕ್ಕಾಮಿನಲ್ಲಿ ತಾರೀಕು 16-17ನೇ ದಿವಸ, ಹೊಸಾಕಂಬಿಯಲ್ಲಿ 20 ರಿಂದ 24 ನೇ ತಾರೀಕಿನ ವರೆಗೆ ಸಮಕ್ಷ ಭೆಟ್ಟಿ ಸಿಗಬಹುದು.

ಮುಕ್ಕಾಂ ರಾಮನಗುಳಿ, ತಾರೀಕು ೮ ಮೇ ೧೯೨೧.

Sd/ C. GILBERT.
ಡಿವ್ಹಿಜನಲ್ ಫೋರೆಸ್ಟ ಆಫೀಸರ,
ಮಧ್ಯಭಾಗ ಕಾನಡಾ.

ಮಹಾರಾಷ್ಟ್ರ ಪ್ರಾಂತಿಕ. ಪರಿಷತ್ತು.

ಅಸ್ಸಲ ದೇಶೀ ಟೋಪಿ ಟೀಪು!

(ಮುಂಬಯಿ ಬಾತ್ಮೀದಾರರಿಂದ.)

ನಾಗಪುರದಲ್ಲಿ ಮಂಜೂರಾದ ಹೊಸ ಘಟನೆಗನುಸರಿಸಿ, ಮೊದಲನೇ ಮಹಾರಾಷ್ಟ್ರ ಪ್ರಾಂತಿಕ ಪರಿಷತ್ತು ವಸಯಿಯಲ್ಲಿ ಕಳೆದ ತಾರೀಖು ೨೭ನೇ ದಿವಸ ಕೆಂಗಿನ ತೋಟದಲ್ಲಿ ರಚಿಸಿದ ರಮಣೀಯವಾದ ಮಂಟಪದಲ್ಲಿ ವಿಜೃಂಭಣೆಯಿಂದಲೂ, ಉತ್ಸಾಹದಿಂದಲೂ, ನೆರವೇರಿತು. ಅಧ್ಯಕ್ಷ ಸ್ಥಾನವನ್ನು ನಾಗಪುರದ ಸುಪ್ರಸಿದ್ಧ ಪುಢಾರಿಗಳಾದ ನಾರ್ಶ್ವರ ಮುಂಜೇಯವರು ಅಲಂಕರಿಸಿದ್ದರು.

ಮಂಟಪದ ಒಳಭಾಗದಲ್ಲಿ ಹಿಂದಿನ ಪರಿಷತ್ತುಗಳಲ್ಲಿರುವಂತೆ ಖುರ್ಚಿಗಳಾಗಲೀ, ಬೆಂಚುಗಳಾಗಲೀ ಕಾಣುತ್ತಿದ್ದಿಲ್ಲ ಇಡೀ ಮಂಟಪವು ಶುದ್ಧ ಸ್ವದೇಶಿಯಾಗಿತ್ತು. ಇಡೀ ಮಂಟಪದಲ್ಲಿ ಚಾಪೆಗಳನ್ನು ಹಾಸಿ, ಅವುಗಳ ಮೇಲೆ ಲೋಡುಗಳನ್ನಿಟ್ಟಿದ್ದರು. ಅಧ್ಯಕ್ಷರು ವಿರಾಜಮಾನರಾದ ಉಚ್ಚಾಸನದ ಮೇಲೆ ಖಾದಿ ಲೋಡುಗಳೇ ಇದ್ದವು ಸಾಧಾರಣವಾಗಿ ಇಡೀ ಮಂಟಪದಲ್ಲಿ ೬-೭ ಸಾವಿರ ಪ್ರೇಕ್ಷಕಮಂಡಳಿಯು ದೇಶಸೇವೋತ್ಸುಕರಾಗಿ ನೆರೆದಿದ್ದರು ವ್ಯಾಸಪೀಠದ ಮೇಲೆ, ಅಧ್ಯಕ್ಷರ ಹಿಂದೆ ಲೋಕಮಾನ್ಯ ಟಿಳಕರ ಮೂರ್ತಿಯನ್ನು ನಿಲ್ಲಿಸಿದ್ದಲ್ಲದೆ, ಎಲ್ಲಾ ಭಾಗಗಳಲ್ಲಿ ಟಿಳಕ—ಗಾಂಧಿಯವರ ಚಿತ್ರಗಳನ್ನು ಇಟ್ಟಿದ್ದರು. ಸ್ವಯಂಸೇವಕರೆಲ್ಲರು ಖಾದಿಯ ಅಂಗಿಗಳನ್ನು ಗಾಂಧಿ ಟೊಪ್ಪಿಗೆಗಳನ್ನು ಧರಿಸಿ, ಪರಿಷತ್ತಿನಲ್ಲಿ ಪ್ರತಿನಿಧಿಗಳ ವ್ಯವಸ್ಥೆಯನ್ನು ಇಡುವದರಲ್ಲಿ ತೊಡಗಿಕೊಂಡಿದ್ದರು. ಮಹಮ್ಮದೀ ಸ್ವಯಂಸೇವಕರು ಸಹ ಖಾದಿಯ ಅಂಗಿಗಳನ್ನು, ಪೈಜಾಮಗಳನ್ನು, ಗಾಂಧಿ ಟೊಪ್ಪಿಗೆಗಳನ್ನು ಹಾಕಿ ದೇಶಭಕ್ತರ ಸೇವೆಗಾಗಿ ಅತ್ತಿತ್ತ ಓಡಾಡುವದನ್ನು ನೋಡಿದರೆ, ಹಿಂದುಮುಸಲ್ಮಾನರು ಸ್ವರಾಜ್ಯಕ್ಕಾಗಿ ಎಷ್ಟು ಏಕರೂಪರಾಗಿರುತ್ತಾರೆಂದು ಪ್ರತ್ಯಕ್ಷ ಕಾಣುತ್ತಿತ್ತು. ಮೊದಲನೇ ದಿವಸ ಸ್ವಾಗತ ಅಧ್ಯಕ್ಷ ಶ್ರೀಯುತ ಮೇಥಾ, ಅಧ್ಯಕ್ಷ ನಾ ಮುಂಜೆ ಇವರ ಭಾಷಣಗಳಾದವು. ಎರಡನೇ ದಿವಸ ಮಹಾತ್ಮ ಗಾಂಧಿಯವರ ಆಗಮನವಾಗುವದೆಂದು ಗೊತ್ತಾದ್ದರಿಂದ ಮಂಟಪದಲ್ಲಿ ಹೇಳಲಾರದಷ್ಟು ಜನಸ್ತೋಮವು ನೆರೆದಿತ್ತು. ಮುಳಸಿ ಪೇಟೆಯ ಸತ್ಯಾಗ್ರಹದ ಠರಾವಿನ ಮೇಲೆ ಮಹಾತ್ಮರು ವಿಸ್ತಾರವಾಗಿ ಸ್ಫೂರ್ತಿದಾಯಕ ಭಾಷಣವನ್ನು ಮಾಡಿದರು ಮತ್ತು ಬೇರೊಂದ ಜಂಗಲದಲ್ಲಿ ನಡೆದ ಜುಲುಮಿ ಅತ್ಯಾಚಾರವನ್ನು ನಿಷೇಧಿಸಿ ಆ ಬಗ್ಗೆ ಚೌಕಶಿ ಮಾಡಲು, ಶ್ರೀ ಕೃಷ್ಣ ಕೇಳಕರ, ಮೇಥಾ, ಜೋಶಿಯವರ ಒಂದು ಕಮೀಟಿ ನೇಮಿಸಲ್ಪಟ್ಟಿತು. ನಾಗಪುರದೊಳಗೆ ಮಂಜೂರಾದ ಅಸಹಕಾರಿತೆಯ ಠರಾವನ್ನು, ಈ ಪರಿಷತ್ತು ಪುಷ್ಟೀಕರಿಸಿ, ಆ ಬಗ್ಗೆ ವಿಶೇಷ ಪ್ರಯತ್ನ ಮಾಡಬೇಕೆಂದು ಮಹಾರಾಷ್ಟ್ರೀಯ ಜನಗಳಿಗೆ ವಿನಂತಿ ಮಾಡಿತ್ತು.

ಲೇಖಕರಿಗೆ-ಬಾತ್ಮೀದಾರರಿಗೆ.

ವಿನಯಪೂರ್ವಕ ಅರಿಕೆ ಮಾಡುವದೇನಂದರೆ— ಲೇಖಗಳು-ಬಾತ್ಮಿಗಳು ಅತಿಶಯ ವಿಲಂಬವಾಗಿ ಬಂದರೆ, ಅವುಗಳನ್ನು ಹಾಕಿ, ನಿಶ್ಚಯಿಸಿದ ವಾರಕ್ಕೆ ಪ್ರಸಿದ್ಧಿಸಲಿಕ್ಕೆ ಬಹಳೇ ಅಡಚಣಿಯಾಗುತ್ತದೆಂಬದನ್ನು ಲಕ್ಷಕ್ಕೆ ತಂದು, ಅವರು, ತಮ್ಮ ಲೇಖಗಳನ್ನು ಸೋಮವಾರಕ್ಕೆ ಮುಟ್ಟುವಂತೆಯೂ, ಬಾತ್ಮಿಗಳನ್ನು ಬುಧವಾರಕ್ಕೆ ತಪ್ಪದೆ ಮುಟ್ಟುವಂತೆಯೂ, ಕಳುಹಿಸಬೇಕಾಗಿ ಅರಿಕೆ ಮಾಡುವೆವು. ಇದಕ್ಕೆ ತಪ್ಪಿ ಬಂದ ಲೇಖ-ಬಾತ್ಮಿಗಳು ನಿರುಪಾಯದಿಂದ ಮುಂದೆ ಇಡಲ್ಪಡುವವು

—ಮ್ಯಾನೇಜರ ಕಾ ವೃ

ಕಾನಡಾವೃತ್ತ.

ಗುರುವಾರ ತಾರೀಖು ೧೨ ಮಾಹೆ ಮೇ ೧೯೨೧

ಜಂಗಲ ಕವಿಾಶನು.

ನೇಮಿಸದಿದ್ದರೆ?

ಜಂಗಲ ಕವಿಾಶನಿನ ವಿಷಯ ಎಲ್ಲ [illegible] ಕ ಬಾಧಕ ಚರ್ಚೆಯನ್ನು ನಾವು ಮುಂದಿ [illegible] ಗ್ರಲೇಖಗಳಲ್ಲಿ ಮಾಡಿದೆವು ಅವುಗಳಮೇಲಿಂದ ಕವಿಾಶನು ತೀರ ನಿರುಪಯೋಗಿಯೆಂದು ನಿಷ್ಪಕ್ಷಪಾತದಿಂದ ವಿಚಾರಮಾಡುವವರಿಗೆ ತಿಳಿಯುವಹಾಗಿದೆ ಆದರೂ ಈ ಕವಿಾಶನು ನೇಮಿಸದಿದ್ದರೆ, ಜಿಲ್ಲೆಯಲ್ಲಿ ಪ್ರಳಯವೇ ಸಂಭವಿಸುವದೆಂದು ಕೆಲವರು ಪೂರ್ವಪಕ್ಷ ಮಾಡುತ್ತಾರೆ ಆದ್ದರಿಂದ ಈಹೊತ್ತು ಕವಿಾಶನು ನೇಮಣೂಕಿಯಾಗದಿದ್ದರೆ, ನಮಗೆ ಹಿತವಾಗುತ್ತಿತ್ತೋ? ಅಹಿತವಾಗುತ್ತಿತ್ತೋ? ಎಂಬ ಪ್ರಶ್ನೆಯನ್ನು ಸ್ವಲ್ಪ ವಿಸ್ತಾರತಃ ಚರ್ಚಿಸಲಿಚ್ಛಿಸುತ್ತೇವೆ. ನಿಜವಾಗಿ ಈ ಪ್ರಶ್ನೆಯು ಊಹಾಪೋಹವು ಮಾಡದಲೇ ಆಗಿರುತ್ತದೆ ಆದರ ಈ ಬಗ್ಗೆ ಸ್ವತಂತ್ರವಾಗಿ ವಿವೇಚಿಸಿದರ, ಕೆಲ ಶಂಕಾಗ್ರಸ್ತರಿಗೆ ಸಮಾಧಾನವಾಗುವದೆಂದು ನಂಬಿದ್ದೇವೆ

ಮಹಾತ್ಮಾ ಗಾಂಧಿಯವರ ಅಸಹಕಾರಿತೆಯ ಚಳವಳಿಯಿಂದ, ಸಧ್ಯದ ರಾಜ್ಯಪದ್ಧತಿಯ ಮೇಲೆ ಮೂಲೋತ್ಪಾಟವಾಗಿದೆ ಮಹಾತ್ಮಾ ಗಾಂಧಿಯವರು ಈ ರಾಜ್ಯಪದ್ಧತಿಯು ಪ್ರಜಾಕಲ್ಯಾಣಕರವಲ್ಲೆಂದು ಅಭಿಪ್ರಾಯಪಟ್ಟಿರುತ್ತಾರೆ. ಆದರಿಂದ ಈ ಪದ್ಧತಿಯಿಂದ ಪ್ರಜೆಗಳ ಕಲ್ಯಾಣ ಸಾಧಿಸಲಿಕ್ಕಾಗುತ್ತದೆಂದು ತೋರಿಸುವ ಜವಾಬದಾರಿಯು ಸರಕಾರದ ಮೇಲೆ ಬಿದ್ದಿದೆ. ಅಸಹಕಾರಿತೆಯ ಚಳವಳಿಯನ್ನು ಮುರಿಯುವ ಉಪಾಯವು ಇದೇ ಎಂದು ಸರಕಾರವು ಮನಗಂಡಿದೆ ಕಳೆದ ಫೇಬ್ರುವರಿಯಲ್ಲಿ ದಿಲ್ಲಿಯಲ್ಲಿ ನೆರೆದ ಲೇಜಿಸ್ಲೇಟಿವ ಎಸ್ಸೆಂಬ್ಲಿಯಲ್ಲಿ, 'ಅಸಹಕಾರಿತೆಯನ್ನು ಹ್ಯಾಗೆ ನಿರ್ಮೂಲಿಸಲಿಚ್ಛಿಸುತ್ತೀರಿ? ಈ ಬಗ್ಗೆ ನಿಮ್ಮ ಧೋರಣ ವೇನು?' ಎಂದು ಸಭಾಸದರು ಸರಕಾರಕ್ಕೆ ಪ್ರಶ್ನೆ ಮಾಡಲು, ಅದಕ್ಕೆ ಸರಕಾರದ ತರ್ಫಿನಿಂದ ಸರ ವಿಲಿಯಮ್ ವಿನ್ಸೆಂಟರವರು ತಮ್ಮ

ಭವಿಷ್ಯದ ಧೋರಣವನ್ನು

ಜಾಹೀರುಮಾಡಿದರು 'ಅಸಹಕಾರಿತೆಯನ್ನು ನಾಶಪಡಿಸುವ ಉಪಾಯಗಳು ಮೂರು, ಅವೆ ಅಸಹಕಾರಿತಾ ವಾದಿಗಳು ಬೇಡುವ ಎಲ್ಲ ಹಕ್ಕುಗಳನ್ನು ಅಂದರೆ, ಒಂದೇ ಗಂಟಿನಿಂದ ಸ್ವರಾಜ್ಯವನ್ನು ಕೊಟ್ಟು ಬಿಡುವದು [illegible] ಹಿಂದಿನ ಅಸಹಕಾರಿತೆಯನ್ನು ಬಡಿದ ಹಾಕುವದೇ ಎರಡನೇ [illegible]

[illegible]

ಬೇಸಾಯ, ಕೆಂಪು [illegible] ಗಳಲ್ಲಿ ಜನರಿಗಾಗುವ [illegible] ವಗಳನ್ನು ತಪ್ಪಿಸಲು ಸರಕಾರ [illegible] ದಷ್ಟು ಪ್ರಯತ್ನ ಮಾಡುವದು."

[illegible] up [illegible] labor [illegible] do our best to [illegible] that [illegible] ಈ ಧೋರಣವನ್ನು ಜಾಹೀರ ಮಾಡಿದವರು ಸರ ವಿಲಿಯಮ ವಿನ್ಸೆಂಟರು ಇದರಮೇಲಿಂದ, ಜಂಗಲ ಕವಿಾಶನು ನೇಮಿಸದಿದ್ದರೆ, ಅದಕ್ಕೆ ನಾವು ಸ್ವೀಕರಿಸದಿದ್ದರೆ ನಮ್ಮ ಜಂಗಲ ಉಪದ್ರವಗಳು ಹಾಗೆಯೇ ಉಳಿಯುತ್ತಿದ್ದವೆಂದು ಹೇಳುವವರು ಎಷ್ಟು ಸತ್ಯಾಪಲಾಪವನ್ನು ಮಾಡುತ್ತಾರೆಂದು ತಿಳಿಯುವಹಾಗಿದೆ

ಈ ಧೋರಣವನ್ನು ಪೃಥಕ್ಕರಿಸಿ ವಿಚಾರಿಸಿದರ ವಾಸ್ತವಿಕವಾಗಿ ಕೆಳಗಿನ

ಮೂರು ಅನುಮಾನಗಳು

ದೊರೆಯುತ್ತವೆ

(೧) ರಾಷ್ಟ್ರೀಯ ಸಭೆಯ ಅಸಹಕಾರಿತೆಯ ಚಳವಳವು ಬಹುಜನ ಸಮಾಜದಲ್ಲಿ, ವಿಶೇಷವಾಗಿ ಬೇಸಾಯಗಾರರಲ್ಲಿ, ಕೂಲಿ ಕಷ್ಟ ಮಾಡುವವರಲ್ಲಿ ಹಬ್ಬು [illegible] ರದಂಗ ಅವರನ್ನು ಸಮಾಧಾನಗೊಳಿಸುವದು, ಸರಕಾರಕ್ಕೆ ಅಗತ್ಯವಾಗಿದೆ,

(೨) ಜನರಿಗೆ ಸಮಾಧಾನಪಡಿಸಬೇಕಾದರೆ, ಅವರ ನಿಜವಾದ ಉಪದ್ರವಗಳನ್ನು ದೂರಪಡಿಸಿದ ಹೊರ್ತು ಗತ್ಯಂತರವಿಲ್ಲ,

(೩) ಈ ಚಳವಳವು ಬೇರೂರುವ ಮೊದಲು ಅಂದರೆ ಆದಷ್ಟು ಬೇಗ ಅವರನ್ನು ತೃಪ್ತಿಗೊಳಿಸಬೇಕು.

ಈ ಮೂರು ಸಂಗತಿಗಳನ್ನು ಚನ್ನಾಗಿ ಲಕ್ಷದಲ್ಲಿಟ್ಟುಕೊಂಡರೆ, "ಕವಿಾಶನು

ನೇಮಿಸದಿದ್ದರೇನಾಗುವದು?"

ಎಂಬ ಪ್ರಶ್ನೆಗೆ ಉತ್ತರ ಏನು ದೊರೆಯುತ್ತದೆ? ಕವಿಾಶನು ನೇಮಿಸದಿದ್ದಲ್ಲಿ, ನಮ್ಮ ಹಿಂದಿನ ಅಸಹಕಾರದ ಮತ್ತು ಅಸಮಾಧಾನದ ಧೋರಣವನ್ನು ಅನುಸರಿಸಿದರೆ, ನಮ್ಮ ಚಳವಳಿಯ ಪ್ರಮಾಣದಂತೆ ಹೆಚ್ಚುಕಟ್ಟು ಹಕ್ಕುಗಳು ತಮ್ಮಿಂದ ತಾವೇ ನಮಗೆ ಕೈವಶವಾಗುತ್ತಿದ್ದಲ್ಲವೇ? ಮತ್ತು ಪ್ರಸ್ತುತದ ಅಸಹಕಾರದ ಚಳವಳವನ್ನು, ಸ್ವರಾಜ್ಯದ ಉಚ್ಚ ಧ್ಯೇಯಕ್ಕಲ್ಲಾದರೆ, ಬರೇ ನಮ್ಮ ಜಿಲ್ಲೆಯ ಸ್ವಾರ್ಥದ ದೃಷ್ಟಿಯಿಂದ, ನಮ್ಮ 'ಬೇಸಾಯ ಸ್ವರಾಜ್ಯ'ಕ್ಕಾಗಿ ಆದರೂ ನಮ್ಮ ಜಿಲ್ಲೆಯಲ್ಲಿ ಪ್ರಚುರಗೊಳಿಸಿದರೆ,

ಪ್ರದಕ್ಷಿಣೆಯಷ್ಟು ದಕ್ಷಿಣೆ

ಎಂಬಂತೆ ನಮಗೆ ಹೆಚ್ಚು ಹಿತಕರವಾಗುವದೆಂದು ಸರಕಾರದ ಧೋರಣವೇ ಸಾರುತ್ತದೆ ಇದ್ದಲ್ಲದೆ, ಕವಿಾಶನು ನೇಮಣೂಕಿಯಾಗದಿದ್ದರೆ ಇಡೀ ಜಂಗಲ ಪ್ರಕರಣವನ್ನು ವಿಚಾರಮಾಡುವೆವೆಂದು ಅಮದಾರ ರಾ| ದುಭಾಷಿಯವರಿಗೆ ಕೊಟ್ಟ ಅಶ್ವಾಸನೆಕ್ಕನುಸರಿಸಿ, ೧-೨ ತಿಂಗಳೊಳಗೆ ಜಂಗಲ ಉಪದ್ರವಗಳನ್ನು ಸರಕಾರವೇ ಹೊಸ ಧೋರಣಕ್ಕನುಸರಿಸಿ ಪರಿಹರಿಸುವದು ಸರಕಾರಕ್ಕೆ ಅಗತ್ಯವಾಗಿತ್ತು ಹೀಗಿರಲು ಈಗ ಕವಿಾಶನಿನ ಮೊಂಬರಾಗಲಿಕ್ಕೆ ಅಹಮಹಮಿಕೆಯಿಂದ ಮುಂದರಿಯುವ ದುರೀಣರು 'ಜಂಗಲ ಕವಿಾಶನಿನಿಂದಲೇ ನಮ್ಮ ಉದ್ಧಾರವಾಗಬೇಕು, ಅದರ ಹೊರ್ತು ನಮ್ಮ ತರಣೋಪಾಯವಿಲ್ಲ' ವೆಂದು ಘೋಷಿಸುವದೆಂದರೆ, ಅದು ಅವರ ಅಜ್ಞಾನವಲ, ಅತ್ಯಾದರವದ ಸುಖಸ್ವಪ್ನದೋಳಗಿನ

ಕೇವಲ ಭ್ರಮೆಯು.

ಇಂಥ ಘೋಷಣೆಯಿಂದ ಕವಿಾಶನಿನ ಅಮಿಷವನ್ನು ಜನರಿಗೆ ತೋರಿಸಿ, ನಮ್ಮನಮ್ಮೊಳಗೆ ಒಡಕು ಹುಟ್ಟಿಸುವರೆರ ಬದಲು, ಕಾಸ್ಗ್ರೆಸ ಬಹಿಷ್ಕಾರದ ಕಾಲದಲ್ಲಿ ಮಾಡಿದಂತೆ, ನಿಸ್ವಾರ್ಥ ಬುದ್ಧಿಯಿಂದ, ಒಕ್ಕಟ್ಟಿನಿಂದ ಅಸಹಯೋಗವನ್ನು ಆಚರಿಸಿದರೆ ನಮ್ಮ ಪಾಮಾಲ ಜಂಗಲ ಹಕ್ಕುಗಳು ತಮ್ಮಿಂದ ತಾವೇ ೧ ೨ ತಿಂಗಳೊಳಗೆ ನಮ್ಮೆಡೆಗೆ ಹಿಡಿ ಬರುತ್ತಿದ್ದವೆಂದು ಹೇಳಿದರೆ ಅತಿಶಯೋಕ್ತಿಯಾಗದು

ಇರಲಿ ಇದು ಅಸಹಕಾರದ ಮಾತಾಯಿತು.

ಈಗ ಕಮಿಶನನ್ನು ಆದರಿಸಿ, ಸಹಕಾರವನ್ನು ಅಂಗೀಕರಿಸಿದರೆ, ನಾವೇನು ಸಾಧಿಸುವೆವೆಂದು ಸರಕಾರದ ಹೊಸ ಧೋರಣದ ದೃಷ್ಟಿಯಿಂದಲೇ ಸ್ವಲ್ಪದರಲ್ಲಿ ವಿಚಾರಿಸುವಾ. ಕಮಿಶನು ನೇಮಣೂಕಿಯಿಂದ ಹುರುಳಿಹೋಗಿ, ನಮ್ಮ ಧುರೀಣರೂ, ಅ[illegible]ರೂ ಕಮಿಶನಿನ ಕಡೆಗೆ ಮೋರೆ ತಿರುವಿ ಕೂತರೆಂದರೆ, ನಮ್ಮ ಅಸಹಕಾರಿತೆಯ ಚಳವಳಿಯ ಮುಂದಿನ ನೆಲೆಗಟ್ಟು ಕುಸಿದು ಹೋದಂತಾಗಿ, ಮುಂದಿನ ಚಳವಳಿಯು ಅಲ್ಲಿಯೇ ಬೇಡ ಎಲ್ಲ ಮುಖಂಡರು ಸಾಕ್ಷಿ ಕೊಡುವದರಲ್ಲಿ, ಕೂಡಿಸುವದರಲ್ಲಿ, ಕಮಿಶನು ಮೆಂಬರರಿಗೆ ಆದರಾತಿಥ್ಯ ಗೈಯುವದರಲ್ಲಿ ಮಗ್ನರಾದರಂತೂ ತೀರಿತು- ಹಾಗಾಗುವದು ಸಹಜವು ಹೀಗೆ

ಚಳವಳಿಯು ಶೂನ್ಯ

ವಾಯಿತೆಂದರೆ, ಸರಕಾರದ ಹೊಸ ಧೋರಣದಂತೆ, ನಮಗೇನು ದೊರಕುವದೆಂದು ಹೇಳಲಿಕ್ಕೆ ಗಣಿತಜ್ಞರು ಬೇಕಾಗಿಲ್ಲ. ಕಮಿಶನು ಕೂಡ್ರುವದರಲ್ಲಿ, ಏಳುವದರಲ್ಲಿ ಈ ಸಾಂಕ್ರಮಿಕ ಏನು ಚಳವಳಿಯ ಮಹಾಪೂರವು ಹರಿದು ಹೋಯಿತೆಂದರೆ, ಮುಂದಿನ ಶಾಂತ ವಾತಾವರಣದಲ್ಲಿ ನಮ್ಮ ಕಷ್ಟ-ಸಂಕಷ್ಟಗಳಿಗೆ ಲಕ್ಷ್ಯಗೊಡುವವರಾರು? ಶಾಂತ ವಾತಾವರಣದೊಳಗಿನ 'ಸಸದುಶೀರ ಚಳವಳವು' ಎಷ್ಟು ನಿಷ್ಫಲವಿರುತ್ತದೆಂದು ರಾಷ್ಟ್ರೀಯ ಸಭೆಯ ಇತಿಹಾಸವೇ ಸಾರುತ್ತದೆ. ಒಟ್ಟಿಗೆ ಸಾರ್ವತ್ರಿಕ ಅಸಹಕಾರದೊಳಗೆ ಅಸಹಕಾರದ ವ್ರತವನ್ನು ಧಿಕ್ಕರಿಸಿ, ಬೆಕ್ಕಿನ ಬಿಡಾರ ಬೇರೆ ಎಂಬಂತೆ, ಕಮಿಶನಿನ ಕೂಡ ಸಹಕಾರಿತೆಯನ್ನು ಅಂಗೀಕರಿಸಿದರೆ,

ಪರಿಣಾಮದಲ್ಲಿ ಭೇದವಿಷ್ಟೇ:—

(೧) ಚಳವಳಿಯಿಂದ ಸಿಗಬಹುದಾದ ಹಕ್ಕುಗಳ ಬದಲಾಗಿ, ಇತರ ಸರಕಾರದ ಕಮಿಶನುಗಳಂತೆ 'ಗುಡ್ಡ ಕೊರೆದು ಇಲಿ' ಹೊರಬೀಳುವದೋ ಏನು ಎಂದು ಸಕಾರಣ ಭೀತಿಯುಂಟಾಗಿದೆ

(೨) ಸಹಕಾರದಿಂದ ಸಿಗುವದೇನೂ ಇರಲಿ, ಕಮಿಶನು ನೇಮಣೂಕಿಯಾಗದಿದ್ದರೆ, ೧೨ ತಿಂಗಳು ಹಾದಿ ನೋಡುವದರ ಬದಲು, ಈಗ ೧೨ ವರ್ಷಗಳ ವರೆಗೆ, ಹಾದೀ ಕಾಯ್ದು ಬಡ ರೈತರ ಹೆಣ ಹಾರುವದೋ ಏನು ಎಂದು ಸಂಶಯ ಉಂಟಾಗಿದೆ.

ಆದ್ದರಿಂದ ನಾವು ಹೇಳುವದೇನಂದರೆ, ಸರಕಾರ-ಪ್ರಜಾ ಇವರೊಳಗೆ ಹಕ್ಕುಗಳಿಗಾಗಿ ನಡೆಯುತ್ತಿರುವ ಸಾರ್ವತ್ರಿಕ ಜಗ್ಗಾಟದಲ್ಲಿ ಸರಕಾರವು ತನ್ನ ಹೊಸ ಧೋರಣವನ್ನು ಜಾಹೀರುಮಾಡಿದಂತೆ, ನಾವು ಸಹ ನಿಃಸ್ವಾರ್ಥ ಬುದ್ಧಿಯಿಂದಲೂ, ನಿರ್ವಿಕಾರ ಮನಸ್ಸಿನಿಂದಲೂ, ಆಲೋಚಿಸಿ ನಮ್ಮ ಧೋರಣವನ್ನು ತರ್ಕಿಸುವದು ಅಗತ್ಯವು. ಆದ್ದರಿಂದ ಕಮಿಶನಿನ ಹರವು ಪ್ರಸಾದದಿಂದಿನಿಂದ, 'ಸಹಕಾರ ಮಾಡಿರಿ, ಸಹಕಾರ ಮಾಡಿರಿ' ಎಂದು ಸಾರುತ್ತಿರುವ ಸಹಕಾರಿತಾವಾದಿಗಳು ತಮ್ಮ ಉಪದೇಶದಿಂದ ಜಿಲ್ಲೆಯ ಹಿತವನ್ನು ಸಾಧಿಸಿದರೋ, ಅಹಿತವನ್ನು ಸಾಧಿಸಿದರೋ ಎಂದು ಪುನಃ ವಿಚಾರಿಸಿ, ತಮ್ಮ ಮುಂದಿನ ಧೋರಣವನ್ನು ನಿಶ್ಚಯಿಸಲಿಕ್ಕೆ ಅವರಿಗೆ

ಇನ್ನೂ ಅವಕಾಶವಿದೆ.

ನಾ| ಮೋದಾರವರು ಪ್ರಾಮಾಣಿಕರು, ರಾ| ಫಸಾಂಡಿಸರು, ನಮಗೆ ಮುಕದಮಕಾತ ಮಾಡಿರುವರು, ಎಂಬ ಸಂಗತಿಗಳಿಂದ ನಮ್ಮ ಬಡಜನರ ಹೊಟ್ಟೆ ತುಂಬುವದಿಲ್ಲ. ಆದ್ದರಿಂದ, ಸಹಕಾರಿತಾವಾದಿಗಳು ವ್ಯಕ್ತಿ ವಿಷಯಕ ಗುಣಾವಗುಣಗಳನ್ನು ಬದಿಗಿಟ್ಟು, ತತ್ವತಃ ಕಮಿಶನ ನೇಮಣೂಕಿಯಿಂದ ಹಿತವಾಗುವದೋ? ಅಹಿತವಾಗುವದೋ? ಎಂಬುದನ್ನೇ ವಿಚಾರಿಸಿ, ತಮ್ಮ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸುವರೆಂದು ತುಂಬಾ ಕೋರುತ್ತೇವೆ

——<*>——

ಸ್ಫುಟ ಸೂಚನೆಗಳು.

೧ ಸರಕಾರದಿಂದ ನೇಮಿಸಲ್ಪಡುವ ಜಂಗಲ ಕಮಿಶನು ನಾಳಿನ ೧೫ನೇ ತಾರೀಖಿಗೆ [illegible] ಕೆಲಕಸ್ತು ತಾಗಿ, ೨-೩ ಸಪ್ತಾಹಗಳಲ್ಲಿ ನಮ್ಮ ಜನರ [illegible] ಕೇಳಿಕೊಂಡು ಅವನ್ನು ಬಗ್ಗೆ ನಿರ್ಣಯವನ್ನು ಕೊಡುವ ವಿಚಾರದಲ್ಲಿದೆಂದು ನಾವು ಕೇಳುತ್ತೇವೆ. ಕಾರವಾರ, ಕುಮಟಾ ಶಿರಸಿ, ಮುಂತಾದ ಮುಖ್ಯ ಮುಕಾಮುಗಳಿಗೆ ಕಮಿಶನ ಗರ್ಜನದ ಅಧಿವೇಶನವು ಆಗುವದೆಂದು ಅಂದಾಜಿದೆ. ಏತತ್ತು ಮೂರು ರಾಣೆಗಳಲ್ಲಿ ಮುಕ್ಕಾಮು ಮಾಡಿ ೧೫-೨೦ ದಿವಸಗಳಲ್ಲಿ ಪುರಾವೆಯನ್ನು ಸಂಗ್ರಹಿಸಿ, ಮಾಡುವ ರಿಪೋರ್ಟು [illegible]ಯಿಂದ ದೇಸಾಯಗಾರರ ಕೊರತೆಗಳನ್ನು ಎಷ್ಟರಮಟ್ಟಿಗೆ ದೂರಪಡಿಸುವದೆಂದು, ಸಹಕಾರಿತಾವಾದಿಗಳೇ ಹೇಳಲಿ. ಕಮಿಶನಿನ ಕುಷುವೆಯನ್ನು ಇಷ್ಟು ವೇಗದಿಂದ ಹಿಡಿಸುವ ಕಾರ್ಯಕ್ರಮವು ನಿಜವಾಗಿ ರಚಿಸಲ್ಪಟ್ಟರೆ, ಅದರ ಪರಿಶ್ರಮಗಳು ತೀರ ನಿರರ್ಥಕವಾಗುವದೆಂದು ನಮ್ಮದಂತೂ ಮತವು. ಸರಕಾರಿ ತಿಜೋರಿಯೊಳಗಿನ ಜನರ ತೆರಿಗೆಯ ಹಣವನ್ನು ಸಾವಿರಗಟ್ಟಲೆ ವೆಚ್ಚಮಾಡಿ, ತಿಜೋರಿಗೊಂದು ಹೊಡತ ಬೀಳುವ ಹಾನಿಯಷ್ಟು ಸರಕಾರಕ್ಕೂ, ಜನರಿಗೂ ಆಗುವದು. ಇದೇ ಈಗಿನ ವಿವಂಚನೆಯು. ಇನ್ನು ಕಮಿಶನಿನ ಮುಂದೆ ಯಾರ್‍ಯಾರ ಸಾಕ್ಷಿಗಳನ್ನು ತಕ್ಕೊಳ್ಳಬಹುದೆಂದು, ಸಾಕ್ಷಿಗಾರರನ್ನು ಹುಡುಕಲಿಕ್ಕೆ ಪ್ರತಿ ತಾಲೂಕಿನ ಮಾಮಲೇದಾರರಿಗೆ ತಿಳಿಸಿದ್ದಾರಂತೆ! ಮಾಮಲೇದಾರರು ಮುಂದಿಟ್ಟ ಸಾಕ್ಷಿದಾರರ ಪುರಾವೆಯು ಕಮಿಶನಿನ ರಿಕಾರ್ಡಿನಲ್ಲಿ ದಾಖಲಾಗುವದು ಬೇಕಾದವರಿಗೆ ಕಮಿಶನಿನ ಮುಂದೆ ತಮ್ಮ ದೂರುಗಳನ್ನು ಇಡಲಿಕ್ಕೆ ಮುಕ್ತದ್ವಾರವಿಲ್ಲೆಂದು ಇದರ ಅರ್ಥವೋ? ಯಾ ಮತ್ಯಾವ ಅರ್ಥವೋ? ಮಿತಿಮಿತ ಧುರೀಣರ ಪುರಾವೆಯು ಸರಕಾರದ ಧೋರಣಕ್ಕೆ ಹೆಚ್ಚು ಅನುಕೂಲವಾಗುವದೋ, ದೇಸಾಯಗಾರರ ನ್ಯಾಯ್ಯ ಹಕ್ಕುಗಳಿಗೆ ಹೆಚ್ಚು ಅನುಕೂಲವಾಗುವದೋ ಎಂಬುದನ್ನು ಮಾಮೂಲ ಪ್ರತಿಷ್ಠಿತ ಧುರೀಣತನದ ಹಿಂದಿನ ಅನುಭವದ ಜನರಿಗೆ ಇನ್ನೂ ಮನಗಾಣಿಸುವದಿರುವದಿಲ್ಲ. ಹಳೇ ಧುರೀಣತೆಯು ಪೂರ್ವಕರ್ಮದ ಪ್ರಾಯಶ್ಚಿತ್ತವನ್ನು ವರ್ತಮಾನಕಾಲದಲ್ಲಿ ನಾವು ಭೋಗಿಸುತ್ತೇವಲ್ಲವೇ? ಇಂಥ ಮಾಮೂಲ ಪ್ರತಿಷ್ಠಿತರ ಸಾಕ್ಷಿಗಳಿಂದ ದೇಸಾಯಗಾರರಿಗೆ ಕಲ್ಯಾಣವಾಗುವದೆಂಬುದು ಕನಸಿನೊಳಗಿನ ಗಂಟೇ ಸರಿ. ಹೆಸರಿಗೆ ಮಾತ್ರ ಬಿನ್ ಸರಕಾರಿ ಬಹುಮತವೆಂದು ಹೇಳಲ್ಪಡುವ ಸರಕಾರಿ ನೇಮಣೂಕಿಯ ಕಮಿಶನು, ಅದರ ರಿಪೋರ್ಟು ಕಾರ್ಯಕ್ರಮ, ಮತ್ತು ಮಾಮಲೇದಾರರ ಪಸಂತಿಯ ಸಾಕ್ಷಿದಾರರು, ಇಂಥ ಸಮಾರಾಧನೆಯ ಮುಖಾ ಭೋಜನದೊಳಗೆ ದೇಸಾಯಗಾರರ ಹಸಿವು ಎಷ್ಟು ಶಾಂತವಾಗುವದೆಂದು ಹೇಳಬೇಕೇನು? ಧುರೀಣಕಾರರು ಹೇಳುವ ಗುಟ್ಟಿಯು ಇದೇ ಅಲ್ಲವೇ? ನಿಷ್ಠೆ ಬಿದ್ದರೆ, ಇದೇ ಗುಟ್ಟಿಯಲ್ಲಿ ಬೀಳಬೇಕು, ಮತ್ತೆಲ್ಲಿಯೂ ಬೀಳದು. ದೇಸಾಯಗಾರರಿಗೆ ನಿಷ್ಠೆಗೈಯುವವರು ಮತ್ತೇನು ಹೇಳುವರು?

---

೨ ಇನ್ನು ಈ ಕಮಿಶನಿನ ಸಭಾಸದರಾಗುವ ಬಹುಮಾನವು ಯಾರ್‍ಯಾರಿಗೆ ದೊರೆಯುವದೆಂದು ತರ್ಕ-ವಿತರ್ಕಗಳು ಸಹಕಾರಿಗಳಲ್ಲಿ ಜೋರಿನಿಂದ ನಡೆದಿವೆಂದು ಕಾಣುತ್ತವೆ. ಕಾರವಾರದ ವೆನತಸರ ಮುನಸಿಫ ರಾ| ವೆಂಕಟರಾವ ವಾಘರವರಿಗೆ ಅವರ ಅನುಮತಿ ಕೇಳಿದ್ದರೆಂದು ನಾವು ಮೊದಲೇ ತಿಳಿಸಿದ್ದೆವು. ಅವರಿಗೆ ರಾ| ಮಾಸೂರರ ಬದಲಿಗಾಗಲಿ, ಸರಕಾರಿ ಮೆಂಬರರ ಬದಲಿಗಾಗಲಿ ನೇಮಿಸಲಿಕ್ಕೆಂದು ಅವರ ಅನುಮತಿ ಕೇಳಿರಲಿಕ್ಕಿಲ್ಲೆಂದು ನಮ್ಮದು ನಿಶ್ಚಿತ ತರ್ಕವು ಆದ್ದರಿಂದಾಗಿ, ಮುಕ್ತಪಟ್ಟ ಉಮೇದವಾರರಾದ ರಾ| ಶಾಸ್ತ್ರಿಗಳ ಬದಲಿಗೆ ರಾ| ವಾಘರವರಿಗೆ ಸರಕಾರವು ನೇಮಿಸಲಿಚ್ಛಿಸುತ್ತದೆಂಬುದು ಸಹಜ ಅನುಮಾನವು. ಶ್ರೀ| ಶಿವರಾವ ಶಾಸ್ತ್ರಿಗಳ ನೇಮಣೂಕಿಗೆ ಅಡ್ಡಿ ಮಾಡಿದವರ್‍ಯಾರು? ಯಾವ ಕಾರಣದಿಂದ ಅವರು ಬೇಡ? ಅವರ ಸಹಕಾರಿ ಮಿತ್ರರೇ (?) ಅವರು ಬೇಡೆಂದು ಹೇಳುವ ಕಾರಸ್ಥಾನವನ್ನು ಪುಷ್ಟೀಕರಿಸಿದ್ದಾರೋ ಏನು? ಇವರ "ಅಂದರಕೀಬಾತ" ಮಿತ್ರರಿಗೇ ಗೊತ್ತು. ಸರಕಾರವೇ ಅವರ ನೇಮಣೂಕಿಗೆ ಒಪ್ಪುವದಿಲ್ಲಾದರೆ, ಯಾಕೆ ಒಪ್ಪುವದಿಲ್ಲೆಂದು ಕಮಿಶನ ಪಕ್ಷದವರಾದರೂ ಜಾಹೀರಪಡಿಸಲಿ. ಇಲ್ಲದಿದ್ದರೆ, ಈ ಕಾರಸ್ಥಾನದಲ್ಲಿ ಎಷ್ಟರ ಒಳಸಂಚಿದೆಂದು ಜನರ ಭಾವನೆಯಾದರೆ, ಅದು ಸಕಾರಣವಾಗುವದು, ಯಾವದೇ ಕಾರಣದಿಂದ ಯಾರೂ ಮೆಂಬರರಾಗಲಿ, ಯಾರೂ ಮೆಂಬರರಾಗದಿರಲಿ, ಸರಕಾರದ ಮತ್ತು ಅವರ 'ಹೋಯಿಬಾ' ಸಹಕಾರಿ ಧುರೀಣರ ಕಾರಸ್ಥಾನಗಳ ಮರ್ಮವು ತಿಳಿಯದಿರುವಷ್ಟು ತಾಯಿ ಮೊಲೆ ಕುಡಿಯುವ ಶಿಶುಗಳು ಇನ್ನಾರಿಲ್ಲ. ಒಟ್ಟಿಗೆ, ಕಮಿಶನಿನ ಅಧ್ಯಕ್ಷರು ಬಿನ ಸರಕಾರಿಗಳಿದ್ದರೂ ಸ್ಪೆಶಲ್ ನೇಮಣೂಕಿಯವರು. ಇಬ್ಬರು ಸಭಾಸದರಂತೂ ಪೂರ್ಣ ಅಧಿಕಾರಿಗಳೇ ಇನ್ನು, ಕಾನಡಾ ಜಿಲ್ಲೆಯೊಳಗಿನ ಸ್ಥಾನಿಕ ಪ್ರತಿನಿಧಿಗಳೆಂದು ನೇಮಿಸಲ್ಪಡುವವರಂತೂ ಮಾಜಿ ರಾವಸಾಹೇಬ ರಾ| ಗಣಪತರಾಯ ಮಾಸೂರರು, ಹೀಗೆ, ನಾಲ್ಕೂ ಜನರು ಸರಕಾರಿ ಪಕ್ಷದ ಸಭಾಸದರಿದ್ದಾಗ್ಯೂ, ಉಳಿದ ಒಂದು ಸಭಾಸದರ ಜಾಗೆಗೆ ಲೋಕಪಕ್ಷದ ವಿಶ್ವಾ

ಸಕ್ಕೆ ಪಾತ್ರರಾದ ಶ್ರೀ ಶಾಸ್ತ್ರಿಗಳಂಥ ಒಬ್ಬ ಮುಖಂಡರು ಸಹ ನೇಮಿಸಲ್ಪಡುವದಿಲ್ಲೆಂದರೆ, ಸರಕಾರವೇ ಈ ಕವಿಸಾಕನಿನ ಕಾರಭಾರದಿಂದ 'ನಿಮಗೆ ಬೇಕಾದದ್ದು ಸಿಗದು, ನಮಗೆ ಬೇಕಾದದ್ದನ್ನು, ನಮ್ಮಿಂದ ಕೊಡಲಿಕ್ಕಾಗುವಷ್ಟು ನಾವು ಕೊಡುವೆವು' ಎಂದು ಅಪ್ರತ್ಯಕ್ಷವಾಗಿ ಜನರಿಗೆ ತಿಳಿಸಿದಂತಾಗುವದಿಲ್ಲವೆ? ಸಹಕಾರಿತಾವಾದಿಗಳೇ ಇಂಥ ಸಾಧಾರ ಶಂಕೆಗಳನ್ನು ದೂರಪಡಿಸಿದರೆ ಅವರ ಸಹಕಾರಿತೆಗಾದರೂ ಹಿತಕರವಾಗುವದೆಂದು ಅವರಿಗೆ ಹ್ಯಾಗೆ ತಿಳಿಯುವದಿಲ್ಲ? ಇಂಥ ಮಿಳಿಮಿಳಿತ ಸೌಭಾಗ್ಯದ ಸಹಕಾರಿತೆಗಿಂತ, ಥಳಥಳಿತ ವೈಧವ್ಯದ ಅಸಹಕಾರಿತೆಯೇ ಲೇಸೆಂದು ಅಸಹಕಾರಿಗಳಲ್ಲಿಯ ತ್ರಯಸ್ಥರಿಗೆ ಅನಿಸಿದರೆ, ಅದರೊಳಗೆ ತಪ್ಪು ಯಾರದು? ಇದೆಲ್ಲ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸಿ ನಮಗ ತು ಕಾಣುವದೇನಂದರೆ, ಜನರ ಸ್ವತಂತ್ರ ಕ[illegible] ಕೂಡ್ರಿಸಿ ಅದರ ನಿರ್ಣಯಗಳನ್ನು ಜಾಹೀರಪಡಿಸಿದ ಹೊರತು ಬೇಸಾಯಗಾರರ ಮೇಲಿನಾವಸ್ಥೆಯು ಪರಿಹರಿಸಲ್ಪಡುವದು [illegible] ಸ್ವಾವಲಂಬನದೊಳಗಿರುವ ಫಲವನ್ನು ಅರಿತವರಿಗೆ ನಮ್ಮ ಮತವು ಮಾನ್ಯವಾಗಲಿಕ್ಕಿಲ್ಲ.

---

೨. ಶಾನುಭೋಗರ ಸಂಪ [illegible] ಳು ಮುಗಿದು ಹೆಚ್ಚವಷ್ಟು ಅದರ [illegible] ಮುಗಳಿಗೆ ಕೆಲವರಿಗೆ ಪೂರ್ಣವಾಗಿ ಖಾ[illegible] ಕೊಂಡರು, ೩-೪ ಜನರಿಗೆ ಹಾಜರಾದವರಿಗ [illegible] ಬಿಡಿಸಿದರು ಅಂಕೋಲಾ ಹಳಿಯಾಳ ತಾಲೂಕುಗಳಲ್ಲಿ ಸಂಪಗಾರರಿಗೆ ಹಾಜರಪಡಿಸಿಕೊಳ್ಳದೆ, [illegible] ತಪ್ಪು ಮಾಡಿದರೆಂದು ತಿಳಿದ [illegible] ನಾಯಕರೆಂದು ಕೆಲವರಿಗೆ ಕಾಯಂ [illegible] ಟಪ್ಪ ಹೊಡೆದು ನೌಕರಿಯ ಹೊರಗೆ ದೂಡಿ [illegible] ದವರು ಇದೆಲ್ಲ [illegible] ಕೇವಲ ಅನ್ಯಾಯದ ಹೊರತು ಸುಸಂಗತ ತತ್ವವೆ [illegible] ದಿಷ್ಟಿ ಅನೇಕ ದೃಷ್ಟಿಯಿಂದ ಹಾಜರಾದವರಿಗೆ ಸಹ ಅನ್ಯಾಯವಾಗಿದೆಂದು ನಮ್ಮ ಮತವು. [illegible] ದಿನ ಅವಧಿಯ ಸಂಬಳವು ಸಿಗಲೇ ಇಲ್ಲ [illegible] ಅವರಿಗೆ ಹೊಸಬರಂತೆ, ಮೊದಲಿನ [illegible] ಪಗಾರಿನಮೇಲೆ ಹಾಜರಪಡಿಸಿಕೊಂಡಿದ್ದಾರಂತೆ [illegible] ಶ್ಯಾನುಭೋಗರು ಸಂಪ ಮಾಡಿ, [illegible] ತಿಂಗಳು ಕಳೆದವೂ, ತಮ್ಮ ಬಿಡತಿ[illegible] ದ್ಯ ಬೇಡಿಕೆಗಳನ್ನು ಸರಕಾರವು ಅನುಗ್ರಹಿಸುವದಿಲ್ಲೆಂದು ನಮ್ಮ ಜಿಲ್ಲೆಯ ಶ್ಯಾನುಭೋಗರು ಸಂಪಿನೊಳಗೆ ಸೇರಿದ್ದರೆಂಬ ಸಂಗತಿಯನ್ನು ನಮ್ಮ ಕಲೆಕ್ಟರರಾದರೂ ಬಲ್ಲರು ನಾಮದಾರ ಸರ ಇಬ್ರಾಹಿಮ. ಮಂತ್ರಿಗಳು ಕೌನ್ಸಿಲದೊಳಗೆ ಹೇಳಿದಂತೆ, ಶ್ಯಾನುಭೋಗರಿಗೆ ತಮ್ಮ ಕಷ್ಟಗಳ ಮತ್ತು ಅಸಂತೋಷದ (striking proof) ಢಳಢಳ ಪುರಾವೆಯನ್ನೇ ಸಂಪಿನ ಸಾಧನದಿಂದ ಅನಿವಾರ್ಯವಾಗಿ ಅವರಿಗೆ ಸ್ವೀಕರಿಸಬೇಕಾಗಿತ್ತು ಬರೇ ಹೊಟ್ಟೆಗಾಗಿ ಈ ಸಾಧನವನ್ನು ಅವರು ಉಪಯೋಗಿಸಬೇಕಾಗಿತ್ತೆಂದು ನಾವು ಪುನಃ ಹೇಳಿದ್ದೇವೆ. ಸಂಪು ಬಿಸಿಯಾದ ಹೊರತು, ಮಿದುಮಿದುವಾದ ಬೆಣ್ಣೆಯು ಸಹ ಕರಗುವದಿಲ್ಲೆಂಬುದು, ತಿಳಿಯುವದು. ಜನರ ಸಂಸಾರದ ಅನುಭವವು. ಅದಕ್ಕೆ ಶ್ಯಾನುಭೋಗರ ವರ್ತನವು ಅಪವಾದಕವಾಗದಿದ್ದರೆ, ಅದೇನು ಅಕ್ಷಮ್ಯ ಅಪರಾಧವಲ್ಲ. ಅವರು ಮೊದಲು ನಿಃಸ್ವಾರ್ಥಕ್ಕಾಗಿ ಸ್ವಲ್ಪ ಬಿಸಿ ಮಾಡಿದರೆಂದ, ಕಣ್ಣುಗಾಣಮೇಲೆ [illegible] ಸುವದು. ಪರಿಷ್ಕಾರ ಕೆಲಸವಲ್ಲವೇ? 'ಮೊದಲು ನೀವು ಬಿಸಿಯಾಗಿದ್ದೀರಿ, ಈಗ ನಾವು ಬಿಸಿಯಾಗಿದ್ದೇವೆ' ಎಂದು ಹೇಳುವದು, ಸರಕಾರದ ಘನತೆಗೂ, ನ್ಯಾಯಕ್ಕೂ ಶೋಭಿಸದು. ಆದದ್ದಾಯಿತು, ಇನ್ನು ಮುಂದೆ ಇಂಥ ಪರಿಸ್ಥಿತಿಯು ಸಂಭವಿಸದಷ್ಟು ಜಾಗ್ರತೆಯನ್ನು ಉಭಯತರೂ ಇಟ್ಟು, ಪೂರ್ವವತ್ ಇಮಾನಿಯಿಂದ, ಪ್ರೀತಿಯಿಂದ ಸರಕಾರಿ ಸಂಸಾರವನ್ನು ವರಿಷ್ಠರೂ, ಕನಿಷ್ಠರೂ ನಡಿಸಲಿಕ್ಕೆ ಈಗ ಅತಂಕವೇನಿಲ್ಲ. ಕೆಲವರು ಹಾಜರ ಆಗಲಿಕ್ಕೆ ಪ್ರಾಂತ ಸಾಹೇಬರ ಹುಕುಮಿನ ನಿರೀಕ್ಷಣೆಯಿಂದ ತಡಮಾಡಿದರೆಂದೂ ಅವರಿಗೆ ಬಡತರ್ಫ ಮಾಡಿದರೆಂಬುದೂ, ಕೆಲವರಿಗೆ ನಾಯಕರೆಂದು ಗಲ್ಲಿಗೆ ಹಾಕುವದೂ, ಹಾಜರಾದವರಿಗೆ ಹೊಸಬರಂತೆ ನಡಿಸುವದೂ, ಅವರ ಹಿಂದಿನ ಸರ್ವಿಸನ್ನು ರದ್ದುಪಡಿಸುವದೂ, ಹಿಂದಕ್ಕಿಂತ ಒಂದು ಹೆಚ್ಚು ಅನ್ಯಾಯಕರ ಅಪ್ಪಣೆಗಳಾಗುವವು. ಈ [illegible] ದಿನದೊಳಗೆ ಹಿಂದಾಳು ಮುಂದಾಳು ಭೇದವೇನು ಇಟ್ಟಿಲ್ಲ ಪರಿಷ್ಕಾರ ಅಪ್ಪಣೆ ಮಾಡಬೇಕೆಂತು, ಇ[illegible] ಸರಕಾರದ ಯಂತ್ರವನ್ನು ಥಕ್ಕನೆ ತಡೆಸದೇ [illegible] ಈ [illegible] ಉಪದ್ವ್ಯಾಪವನ್ನು ಸಂಪುಗಾರ[illegible] ಹೊ ಇದ್ದಿಲ್ಲ ಅಧಿಕಾರಿಗಳಿಗೂ ಸರಕಾರ[illegible] ಸಂಪಿನ ಸಾಮಾ ಕಾರಣಗಳ ಯಥಾರ್ಥ ಜ್ಞಾನವಾಗಿದೆ [illegible] ಅವರ ಕೌನ್ಸಿಲದೊಳಗಿನ ನುಡಿಗಳಿಂದ [illegible] ಹೀಗಿದ್ದು [illegible] ಶ್ಯಾನುಭೋಗರಿಗೆ ಮತ್ತೆ [illegible] ಅನ್ಯಾಯಕರವಾಗುವಷ್ಟು [illegible] ಸಂಪುಗಾರ ಶ್ಯಾನುಭೋಗ [illegible] ಗಳ [illegible] ಇನ್ನು ಪರಿಷ್ಕಾರ [illegible] ಯುಕ್ತಿಯಿಂದ ಮುಖ್ಯ [illegible] ಶ್ಯಾನುಭೋಗರ ಸಂಸಾರವೇ [illegible] ಪರಿಷ್ಕಾರ [illegible] ಗ್ರಹಿಸಲಿ.

---

೩. ನಮ್ಮ ಜಿಲ್ಲೆಯೊಳಗಿನ ಜನಸಂಖ್ಯೆಯು ೧೮೭೧ ನೇ ಇಸ್ವಿಯಿಂದ ಹ್ಯಾಗೆ ಉತ್ತರೋತ್ತರ ಕ್ಷೀಣವಾಗುತ್ತ ನಡೆದದೆಂದು ನಾವು ಬೇರೆ ಕಡೆಗೆ ಕೊಟ್ಟ ಖಾನೇಸುಮಾರಿಯ ಅಂಕಗಳಿಂದ ಕಂಡು ಬರುವದು. ಈ ಕ್ಷಯವು ಎಡೆಬಿಡದೆ ಪ್ರತಿ ಒಂದು ತಾಲೂಕಿಗೆ ಸೋಂಕಿದೆಂಬು[illegible] ಇದೇ [illegible] ತಿಂಗಳಲ್ಲಿ ನಡೆದ ಖಾನೇಸುಮಾರಿಯ ಅಂಕಿಗಳ ಸಾರವು ಈ ಶೋಚನೀಯ ಸಂಗತಿಯ ಕಾರಣ [illegible] ಕಾರಭಾರಕ್ಕೆ ದೋಷತಪ್ಪದೆಂತೆ [illegible] ಹೇಳುವ [illegible] ಪ್ರಸಂಗವು ಪ್ರಾಂತಿಕ ಖಾನೇಸುಮಾರಿ ಸುಪರಿಂಟೆಂಡೆಂಟರಮೇಲೆ ಬಂದೊದಗಿದ್ದಾಗ, ಅವರು ತ[illegible] ಬಿಲಾಯಿಯನ್ನು ಮಾಡಿ ತುರ್ತಕ್ಕೆ [illegible] ಗಿರುವರು ಮುಲ್ಲಾ ಪೂರ ಸೂಪಾ, ಹಳಿಯಾಳ ಮುಂತಗೋಡ ಇವುಗಳೊಳಗಿನ ವಿಶೇಷ ಕ್ಷೀಣತೆಯನ್ನು ಲಕ್ಷಿಸಿ, ಅವರು ಹೇಳುವದೇನಂದರೆ — ಕ್ರಮೇಣ ಹಾಗು ಭರದಿಂದ ಕ್ಷೀಣವಾಗುತ್ತಿರುವ ಜನವಸ್ತಿಯ ಕಾರಣಗಳನ್ನು ಅನೇಕರು ಅನೇಕ ರೀತಿಯಿಂದ ವಿವರಿಸ ಪರ ದಿನೇ ದಿನೇ ವೃದ್ಧಿಯಾಗುತ್ತಿರುವ ಕಾಡು ಹಂದಿಗಳ ಕಾಟದಿಂದ ಭೂಮಿಯ ಸಾಗುವಳಿಯು ಕಷ್ಟಕರವು, ನಿಷ್ಪ್ರಯೋಜಕವೂ ಆಗಿರುವದರಿಂದ ಜನಸಂಖ್ಯೆಯು ಕುಗ್ಗಿತೆಂದು ವಾದಿಸಿಯಾಗಿ ಲೋಕಪಕ್ಷದ ಅಭಿಪ್ರಾಯವಿದೆ. ಆದರೆ ಈ ಪ್ರದೇಶದಮೇಲೆ ಮೇಘರಾಜನ ಕೃಪೆಯೂ ಹೆಚ್ಚಾಗಿ ಇದ್ದು, ಹವೆಯು ಸರಿ ಹಿತಕರವದೆಂಬ ಸಂಗತಿಯನ್ನು ಮರೆಮಾಡದು. ಮತ್ತು ಚಳಿಜ್ವರದ ಬಾಧೆ ಇದ್ದರೂ, ಇದಾಖಿಲೆಯೊಳಗಿನ ಇತರ ಪ್ರದೇಶಗಳಿಗಿಂತ ವಿಶೇಷ ಅಹಿತಕರವೆಂದು ಹೇಳಲಾಗದು. ಹಳೇ ಇನಷ್ಟು ಎಂದೂ ಜ್ವರದ ಸೋಂಕು ಬೇನೆಯು ಇಲ್ಲದಿದ್ದರೆ, ಈ ದಶಕದಲ್ಲಿ ಕಳೆದ ದಶಕಕ್ಕಿಂತ ಕ್ಷೀಣತೆಯ ಪ್ರಮಾಣವು ಕಡಿಮೆಯಾಗಬಹುದಾಗಿತ್ತಂತೆ. ಕಂಪು [illegible] ರ ಮಾಗಿದೆ ಇರಲಿ ಕೊನೆಯ ದೊಡ್ಡ ರಿಪೋರ್ಟಿನಲ್ಲಿ ಇದರ ಕಾರ್ಯಕಾರಣ ಭಾವವನ್ನು ಸ್ವಲ್ಪ ವಿಸ್ತಾರ ಚರ್ಚಿಸುವೆನು."

---

೪. 'ನಮ್ಮ ಜಿಲ್ಲೆಯಮೇಲೆ ಮೇಘರಾಜನ ಕೃಪೆ ಇರುತ್ತದೆ, ಹವೆಯೂ ಹಿತಕರವದೆ' ಎಂದು ಖಾನೇಸುಮಾರಿ ಸುಪರಿಂಟೆಂಡೆಂಟರು ಒಪ್ಪಿಕೊಂಡಿರುವಾಗ, ಸ್ವಾಭಾವಿಕವಾಗಿ ಜನಸಂಖ್ಯೆಯು ಇಳಿಯುವದರ ಬದಲಾಗಿ ಏರಬೇಕಾಗಿತ್ತೆಂದು ಯಾರೂ ಹೇಳುವರು. ಆದರೆ, ಅದಕ್ಕೆ ಸರಿ ವಿರುದ್ಧವಾಗಿ ಯಾಕೆ ಕ್ಷೀಣವಾಯಿತೆಂದು ಈ ತಜ್ಞ ಸಾಹೇಬರು ಹೇಳುವದು ಅತ್ಯವಶ್ಯವಿತ್ತು. ಅದನ್ನು ಬಿಟ್ಟು, ಇನಷ್ಟು ಎಂದೂ ಜ್ವರದ ಹಾವಳಿ ಇಲ್ಲದಿದ್ದರೆ, ಈ ಇಳಕದ ಪ್ರಮಾಣವು ಇಳಿಯುತ್ತಿತ್ತೆಂದು ಇವರು ನಮಗೆ ಸಮಾಧಾನ ಹೇಳುತ್ತಾರೆ. ಇನಷ್ಟು ಎಂದೂ ಬೇನೆಯು ಇರಲಿ, ಇರದಿರಲಿ, ನಮ್ಮ ಹಣೆಯೊಳಗಿನ ಜನಸಂಖ್ಯೆಯೊಳಗಿನ ಕ್ಷೀಣತೆ ಏನು ನಮಗೆ ತೋಗಲದು ಎಂಬುದೇ ಮುಖ್ಯ ಸಂಗತಿಯು. ಸರಕಾರದ ಜಂಗಲ ಧೋರಣವೇ, ಲೋಕಸಂಖ್ಯೆಯ ಕ್ಷೀಣತೆಯ ಕಾರಣವೆಂದು ಈಗ ನಮಗೆಲ್ಲ ಸರ್ವಾನುಮತವಾದ ಸಂಗತಿಯೇ 'ಜಂಗಲು ಬೆಳೆಕೆಯಿಂದ ಹಂದಿಗಳ ಕುಲವು ವೃದ್ಧಿ ಹೊಂದಿತು, ಜಂಗಲು ವಿಸ್ತಾರವಾದ ಹಾಗೆ ಚಳಿಜ್ವರದ ಸಾಮ್ರಾಜ್ಯವು ಹಬ್ಬಿತು, ಜಂಗಲು ನಿರ್ಬಂಧನೆಗಳಿಂದಲೇ ಬೇಸಾಯಗಾರರು ಸೋತು, ಸಾಗುವಳಿ ಕಡಿಮೆ ಇವೆಲ್ಲ ಕಾರಣಗಳಿಂದಲೇ ಜನಸಂಖ್ಯೆಯು ಕುಗ್ಗಿತು.' ಎಂಬುದು ಸರಕಾರದ ಜೂನಿಯರ ಬಾಲವೃದ್ಧರಿಗೆಲ್ಲ ಸಮ್ಮತವಾದ ಸಂಗತಿಯೇ ಮತ್ತು ಈ ಸಂಗತಿಯನ್ನು ಅಲ್ಲಗಳೆಯಲಿಕ್ಕೆ ಅವಕಾಶವಿಲ್ಲ. ಆದರಿಂದಲೇ ಈ ತಜ್ಞ ಸಾಹೇಬರು ಈ ಅಪ್ರಿಯ ಸತ್ಯವನ್ನು ವಿಸ್ತೃತವಾದಿಂದ ಒಪ್ಪಿಕೊಳ್ಳುವ ಸಾಹಸಮಾಡದೆ, 'ಕಾನಡಾ ಜಿಲ್ಲೆಯ ಜನಸಂಖ್ಯೆಯ ಕ್ಷೀಣತೆಯ ಕಾರಣವು ಬಹು ಗೂಢವದೆ, ಗಹನವದೆ, ಫುರಸತ್ತು ನೋಡಿ ವಿಚಾರಮಾಡುವೆನೆಂದು' ಆಶ್ವಾಸನವನ್ನಿತ್ತು ಮಾನಾಗಬೇಕಾಯಿತು. ಒಟ್ಟಿಗೆ ನಮ್ಮ ಮೂಲ ನಿದಾನಕ್ಕೆ ಪ್ರತಿಕೂಲವಾದ ಒಂದು ಸಹ ಆಕ್ಷೇಪ ತೋರಿಸದ್ದರಿಂದ, ಅವರು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಮುಗ್ಧತೆಯಿಂದಲೇ ಇದಕ್ಕೆ ಒಲಿದೊರಿರುವರೆಂದು ನಾವು ಎಣಿಸುವೆವು. ಇರಲಿ ಕೊನೆಯ ರಿಪೋರ್ಟಿನಲ್ಲಿ ಇನ್ನು ಯಾವ ಯಾವ ಹೊಸ ಶೋಧಗಳನ್ನು ಹುಡುಕುತ್ತಾರೆಂದು ನೋಡುವಾ.

---

೬. ನಿಜಾಮ ಹೈದರಾಬಾದಿನ ಮಾನ್ಯ ನಾಗರಿಕರಾದ ಮೌಲಾನಾ ಮೌಲವಿ ಸಯ್ಯದ ಅಹಮ್ಮದ ಇವರು ಕಳೆದ ೨-೩ ತಿಂಗಳುಗಳಿಂದ ನಮ್ಮ ಜಿಲ್ಲೆಯಲ್ಲಿ ಅಪ್ಪಾಡಿ ಖಿಲಾಫತ ಅಸಹಕಾರಿತೆ ವಿಷಯಗಳಮೇಲೆ ಬೋಧಪ್ರದ ಉಪನ್ಯಾಸಗಳನ್ನು ಮಾಡಿ ಲೋಕಮತವನ್ನು ಜಾಗೃತಿ ಸುತ್ತಿದ್ದರೆಂಬ. ನಮ್ಮ ವಾಚಕರಿಗೆ ವಿದಿತವದೆ. ಅದರಮೇಲೆ ಮೊನ್ನೆ ದಿ| ಮೆಜಿಸ್ಟ್ರೇಟರ ಅಪ್ಪಣೆಯಂತೆ ಇಲ್ಲಿ ಈ ಜಿಲ್ಲೆಯನ್ನು ಬಿಟ್ಟು ಹೋಗಬೇಕೆಂದು ಹದ್ದಪಾರಿನ ವಾರಂಟು ಜಾರಿ ಮಾಡಿದ ಸಂಗತಿಯನ್ನು ಕೇಳಿ ನಮಗೆ ಬಹು ವಿಷಾದವೆನಿಸುತ್ತದೆ. ಮೌಲಾನಾರವರು ಕಾನಡಾಜಿಲ್ಲೆಯಲ್ಲಿದ್ದರೆ, ಯಾವ ಜಿಲ್ಹೆಕ್ಕೆ ಬೆಂಕಿ ಹತ್ತಿ ಏನು ಅನರ್ಥವಾಗುವದೆಂದು ಡಿ| ಮ ಜಿಸ್ಟ್ರೇಟರು ನಮಗೆ ತಿಳಿಸಿದ್ದರೆ ಒಳಿತಾಗಿತ್ತು. ಒಂದು ಬದಿಯಿಂದ ಸರಕಾರವು ಶಾಂತತಾಭಂಗ ಮಾಡುವವರನ್ನು ಮಾತ್ರ ನ್ಯಾಯಾಸನಕ್ಕೆ ಒಳಪಡಿಸುವ್ಬು (Prosecute ಮಾಡಿಸುವ್ವೆ)ವೆಂದು ಹೇಳುತ್ತದೆ. ಮತ್ತೊಂದು ಬದಿಯಿಂದ ಶಾಂತತೆಯಿಂದ ಲೋಕಶಿಕ್ಷಣದ ಪವಿತ್ರ ಕಾರ್ಯ ಮಾಡುವ ದಿ| ಮೌಲವಿಯವರಿಗೆ ಹದ್ದಪಾರ ಮಾಡುತ್ತದೆ. ಅಸಹಕಾರಿತೆಯು ಶಾಂತ ಇಳಿವಳಿಯಿಂದ ಸರಕಾರ[illegible] ತೆಯು ಭಂಗವಾಗಿ ಸರಕಾರವು ಇಂಥ ಉದ್ರೇಕಜನಕ ವರ್ತನವನ್ನು ಮಾಡತೊಡಗಿದೆ[illegible] ಮಾನಿಸಿದರೆ ತಪ್ಪು ದೀತನು. ' ಗದ್ದರೂ ಜನರು ಶಾಂತಸಂಯಮನ ಬಿಡದೆ ಸರಕಾರ [illegible] ಗಳನ್ನು [illegible] ತಕ್ಕುದಲ್ಲವಂತೆ [illegible] ಇದಕ್ಕೆ [illegible] ಇಲ್ಲ ಯಾಕಂದರೆ [illegible] ಹಿಂಸೆಯು ಅಸಹಕಾರಿತೆಯ ಮೂಲ ಧರ್ಮ.

... ಇಲ್ಲಿಯ ವಜಾದೇ ವಕೀಲ ಶ್ರೀ ಅನಂತಯ್ಯಾ ...ರ್ಣೇಕರ್ಯಾ ... ಕರ್ಣೀಯವರು ಶ್ರೀಕ್ಷೇತ್ರ ಗೋಕ ...ರ್ಣದಲ್ಲಿ ಕಳೆದ ವೈ ಶು|| ೩ಗೆ ಮಂಗಳವಾರ ದಿವಸ ...ತಮ್ಮ ವಯಸ್ಸಿನ ೮೩ ನೇ ವರ್ಷದಲ್ಲಿ ದಿವಂಗತರಾದ ...ದ್ದು ನಮಗೆ ಖೇದಕರವೆನಿಸಿತು. ಹೊಸ ಹಳೇಯ ... ಈ ಕೋರ್ಟುಗಳಿಗೆ ಬರುವವರಿಗೆ ಆಗಿನ ಪರಿಸ್ಥಿತಿ ...ಲ್ಲಿ ಪ್ರಮುಖ ವಕೀಲರಲ್ಲಿ ಇವರೊಬ್ಬರಾಗಿದ್ದರೆಂದು ಹೇಳಲು ಅಡ್ಡಿಯಿಲ್ಲ. ಇವರು ಸ್ಥಾನಿಕ ಮ್ಯುನಿಸಿಪಾಲಿಟಿಯಲ್ಲಿ ಬಹಳ ವರ್ಷ ಮ್ಯಾನೇಜಿಂಗ ಕಮಿಟಿಯ ...ರಾಗಿದ್ದರು. ಕಟ್ಟಕಡೆಗೆ ತಮ್ಮ ಮುಪ್ಪಿನ ವ...ಲ್ಲಿ ಆ ಧಂದೆಯನ್ನು ಬಿಟ್ಟುಕೊಟ್ಟು, ಶ್ರೀಗೋಕರ್ಣದಲ್ಲಿ ವಾಸಮಾಡಿ, ಉಳಿದ ಆಯುಷ್ಯವನ್ನು ಶ್ರೀದೇವರ ಭಕ್ತಿಭಾವದಲ್ಲಿಯೂ ದೇವಲ ಕಮಿಟಿ ಮೆಂಬರರು ...

ಅವರ ಸುಧಾರಣೆ, ನಿಗೆವಾಣಿಯಲ್ಲಿಯೂ ಕಳೆದು ಲೋಕಾದರಕ್ಕೆ ಪಾತ್ರರಾಗಿದ್ದರು. ಇವರ ನಿಧನದಿಂದ ಇವರ ದೊಡ್ಡ ಕುಟುಂಬದವರಿಗಿನ ಸಮ್ಮಾನ್ಯ ಅಭಿಮಾನಿ ...ಗಳಿಗೆ ಬಹಳ ... ಇಲ್ಲದಂತಾದರು. ಇವರ ಹಿಂದೆ ಇದ್ದ ... ಬಂಧುವರ್ಗದವರೊಡನೆ ನಮ್ಮ ಸಹಾನುಭೂತಿಯನ್ನು ವ್ಯಕ್ತಗೊಳಿಸಿ ಅವರ ಆತ್ಮಕ್ಕೆ ಚಿರಶಾಂತಿ ದೊರಕಲೆಂದು ಜಗನ್ನಿಯಂತನನ್ನು ಹೃತ್ಪೂರ್ವಕ ಪ್ರಾರ್ಥಿಸುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ರೋಗಗಳು ಮೊದಲಿನಷ್ಟು ಇಲ್ಲ ...ವೆನ್ನುವ ವರ್ಗದ ಇದ್ದೇ ಇರುವವು.

ದವಸಧಾನ್ಯಗಳ ಧಾರಣ ಯಥಾಸ್ಥಿತಿ ಉಂಟು. ಘಟ್ಟ ... ಬಂದ ಅಡಿಕೆ ಮೆಣಸು ಆಯಾತ ... ಪಾರಿ ಬಾಳುಗಂ... ಬಿಡುತ್ತಲಿದೆ. ಮುನ್ಸಿಪಲ್ ಟರ್ಮಿನಲ್ ಟೆಕ್ಸ ವಸೂಲು ಅವಶ್ಯವೆಂದು ತೋರುತ್ತಿದೆ.

... ಯಿಂದ ಬಂದ ದೇಶಭಕ್ತ ಪಟವರ್ಧನ ... ರಾಯರು ತಮ್ಮ ಧರ್ಮಚಾರಿಣಿಯೊಡನೆ ಶ್ರೀಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಒಂದು ಸ್ತ್ರೀಯರ ಸಭೆಯನ್ನು ಕೂಡಿಸಿ ಕೈರಾಟೆಯಿಂದ ನೂಲು ತೆಗೆಯುವದನ್ನು ತೋರಿಸಿ, ದೇಶೋದ್ಧಾರಕ್ಕೆ ಎಲ್ಲ ಸ್ತ್ರೀಯರು ... ಬೇಕೆಂದು ಉಪದೇಶ ಮಾಡಿದರು. ಇದಲ್ಲದೆ, ರಾತ್ರೆ ... ಷರ ಸಭೆಯನ್ನು ಕೂಡಿಸಿ, ಅಸಹಕಾರದ ಮಹತ್ವವನ್ನು ದೃಷ್ಟಾಂತಗಳಿಂದ ಚನ್ನಾಗಿ ಮಾಡಿ ನೆರೆದ ಸ...ಕರನ್ನು ಬಿಂಬಿಸಿದರು. ಅವರ ಉಪದೇಶದಂತೆ ಕೈರಾಟೆ ... ಒಂದು ವರ್ಗವನ್ನು ಶ್ರೀಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ತೆರೆಯುವರೆಂದು ಕೇಳುತ್ತೇವೆ.

ಅನಗೋಡಕೊಪ್ಪ (ಶಿರ್ಸಿ)— ...ಮೇ|| ...ಶಂಭು ಲಿಂಗಭಟ್ಟರ ೧೪ನೇ ದಿವಸದ ಸಂತರ್ಪಣೆಗೆ ಕೂಡಿದ ಹವ್ಯಕ ಸಮುದಾಯದವರು ವೇ|| ಸುಬ್ರಹ್ಮಣ್ಯ ಪರಮೇಶ್ವರ ದೀಕ್ಷಿತ ಚಿತ್ರಗೇರಿ ಇವರ ಅಧ್ಯಕ್ಷತೆಯು ಸಭೆ ಸೇರಿ, ವೇ|| ವೆಂಕಟರಮಣ ದ್ಯಾವ ಭಟ್ಟ ... ನಮಾಸಿ ಇವರು ಅನಗೋಡಕೊಪ್ಪ ಗ್ರಾಮದಲ್ಲಿ ಮು...ಸಂಘ ಮಾಡಬೇಕಾಗಿಯೂ, ಸ್ವದೇಶಿ ಮಾಲುಗಳನ್ನೇ ಉಪಯೋಗಿಸಬೇಕಾಗಿಯೂ ತಂದ ಠರಾವು ಸರ್ವಾನುಮತದಿಂದ ಪಾಸುಮಾಡಲ್ಪಟ್ಟಿತು. ಹಾಗು ವೇ|| ಸುಬ್ರಾಯ ಭಟ್ಟ ಶಂಭು ಲಿಂಗಭಟ್ಟ ಇವರು ಕರ್ನಾಟಕದ ಹಾಗು ಕಾರವಾರ ಜಿಲ್ಲೆಯ ಸದ್ಯಸ್ಥಿತಿ ಎಂಬ ವಿಷಯದ ಮೇಲೆ ...ಪ್ರಾಯ ಉಪನ್ಯಾಸವನ್ನು ಮಾಡಿ, ಕಾರವಾರ ಜಿಲ್ಲಾ ಸ...ದ ... ನೇ ಅಧಿವೇಶನವನ್ನು ಶಿರ್ಸಿಯ ರಾಷ್ಟ್ರೀಯ ಶಾಲೆಗೆ ... ಇನ್ನೂ ಕೂಡಿಸದಿದ್ದರ ಬಗ್ಗೆ ಅಂತಃಕರಣ ...ಕವಾಗಿ ತಮ್ಮ ಪಶ್ಚಾತ್ತಾಪವನ್ನು ವ್ಯಕ್ತಗೊಳಿಸಿದರು. ಇದಲ್ಲದೆ, ವೇ|| ವೆಂಕಟರಮಣ ಶಂಭುಭಟ್ಟ ಬಿಸಲಕೊಪ್ಪ, ...ಮ್ಮಾ ಮಂಜಪ್ಪ ಹೆಗಡೆ, ... ವರ್ಗೆಯವರ ... ಸ್ಫೂರ್ತಿದಾಯಕ ಭಾಷಣಗಳಾದವು.

ಈ ಸಂಸ್ಥೆಯು ಎಷ್ಟೋ ವರ್ಷಗಳ ಲೆಕ್ಕವು ಇತರ ಸಾರ್ವಜನಿಕ ಸಂಸ್ಥೆಗಳಲ್ಲಿರುವಂತೆ, ಸ್ವತಂತ್ರ ಆಡಿಟರರಿಂದ ತಪಾಸಣೆ ಮಾಡದೆ, ಈ ತನಕ ಪ್ರಕಟವಾಗಿರುವದು ಇನ್ನೇ ರಾ। ಕೃಷ್ಣ ಮಹಾಳಶೆಟ್ಟಿಯಾಗಲಿ, ನಾನಾಗಲಿ ಬೇರೆ ಆಸೀ ಈ ಸಂಸ್ಥೆಯ ಹಿತಚಿಂತಕರಾಗಲಿ ತೆಗೆದ ಮುಖ್ಯ ಆಕ್ಷೇಪವು. ಈಗ ಈ ಸ್ಪಷ್ಟೀಕರಣದಿಂದ ಈ ಆಕ್ಷೇಪದ ನಿರಸನವಿಲ್ಲಾಯಿತು, ಎಂಬುದನ್ನು ವಿಚಾರಿಸುವ ಗಿಬ್ಬ ಹೈಸ್ಕೂಲು ಸಂಸ್ಥೆಯು ಸ್ಥಾಪನೆಮಾಡಿದಂದಿನಿಂದ, ಅಂದರೆ ೧೯೧೦ನೇ ಜೂನ ತಿಂಗಳಿಂದ ೧೯೧೯ರಲ್ಲಿ ಕಾನಡಾ ಶಿಕ್ಷಣ ಸಂಘವಾಗುವ ವರೆಗೆ, ಅದರ ಜಮಾಖರ್ಚಿನ ಲೆಕ್ಕದ ತಪಾಸಣೆಯನ್ನು ಸ್ವತಂತ್ರರೀತಿಯಿಂದ ಇನ್ನೂ ಆಗಿರುವದಿಲ್ಲ, ಮಾಡುವ ಇಚ್ಛೆಯೂ ಸೂತ್ರಧಾರರಿಗಿಲ್ಲ. ತಪಾಸಣೆ ಮಾಡಲಿಕ್ಕೆ ಏನು ಅಡಚಣೆಗಳಿರುವವೆಂದು ಸ್ಪಷ್ಟೀಕರಣದಲ್ಲಿ ಸಹ ನಮೂದಾಗಲಿಲ್ಲ. ಈ ಬಗ್ಗೆ ಪುನಃ ಪುನಃ ಚೌಕಶಿ ಕೇಳಿದರೂ, ಇದಕ್ಕೆ ಸಮರ್ಪಕ ಉತ್ತರವು ಇನ್ನೂ ದೊರೆಯಲಿಲ್ಲೆಂದು ನೋಡಿ ವ್ಯಸನವಾಗುತ್ತದೆ. ಅವರೆ, ಆಕ್ಷೇಪಿಸಿದ್ದರು ಸೂತ್ರಧಾರರ ಕಡೆಗೆ ಸಮಕ್ಷ ಬಂದು ಲೆಕ್ಕವನ್ನು ನೋಡಬಹುದೆಂಬ ಉದಾರ ಸವಲತ್ತು ನನಗೆ ದಯಪಾಲಿಸಿದ್ದಾರೆಂದು ಸ್ಪಷ್ಟೀಕರಣವು ಸಾರುತ್ತಿದೆ. ಆದರೆ, ನನ್ನ ಆಂದೋಲನದ ಮರ್ಮವು ತಿಳಿಯದಿದ್ದದ್ದು, ಅಥವಾ, ಅದರ ವಿಲಕ್ಷಣ ಅರ್ಥ ಮಾಡಿದ್ದು, ಅವರ ಅಪೂರ್ಣ ಭಾವನೆಯ ಸ್ವಭಾವದಿಂದಲೆಂದು ಹೇಳಬೇಕಾಗಿದೆ. 'ನಾನೇನು ಸಂಘಕ್ಕಾಗಿ ಉದಾರ ಸವಲತ್ತನ್ನಾಗಲಿ, ಉಪಕಾರವನ್ನಾಗಲಿ ಕೇಳಿದ್ದಿಲ್ಲ. ಈಗಲೂ ನನಗೆ ಇಂಥ ಸವಲತ್ತಾಗಲಿ, ಉಪಕಾರವಾಗಲಿ ಬೇಡ. ಸಾರ್ವಜನಿಕ ಹಣದಿಂದ ನಡೆಯುವ ಸಾರ್ವಜನಿಕ ಸಂಸ್ಥೆಯು ಮಾಡಬೇಕಾದ ಕರ್ತವ್ಯವನ್ನಷ್ಟು ಮಾಡಿರೆಂದು ನಾನು ಸ್ಪಷ್ಟವಾಗಿ ಹೇಳಿದೆನು. ಇಂಥ ಪ್ರತಿಯೊಂದು ಸಂಸ್ಥೆಯು ತನ್ನ ಕಾರ್ಯಭಾರದ ಲೆಕ್ಕವನ್ನು ಸ್ವತಂತ್ರ ಆಡಿಟರರಿಂದ ತಪಾಸಿಸಿ, ಪ್ರಸಿದ್ಧಿಸುವಂತೆ ಇವರಾದವರು ಕರ್ತವ್ಯವಿತ್ತು. ಅದನ್ನು ಬಿಟ್ಟಿಗೊತ್ತು, ಆಕ್ಷೇಪಕರಿಗೆ ಸಮಕ್ಷ ಬಂದು ಲೆಕ್ಕನೋಡಲಿಕ್ಕೆ ಮುಕ್ತದ್ವಾರವಿರುತ್ತದೆಂದು ಮಹಾನುಭಾವತನದಿಂದ ಪ್ರಸಿದ್ಧಿಸುವದು ಬಹು ಆಶ್ಚರ್ಯಕರವು. ಇಂಥ ಸೋಟಕ್ರಮವನ್ನು ಮುಂದೊತ್ತಿ, ಲೆಕ್ಕ ತಪಾಸ ಮಾಡದೆ ಇರುವದು, ಇದೊಂದು ಗಿಬ್ಬ ಹೈಸ್ಕೂಲಿನ ಹೊಸ ಉಪಕ್ರಮವೇ ಸರಿ ರಾವಸಾಹೇಬ ಪಂಡಿತರು ನಮ್ಮ ಜಿಲ್ಲೆಯಲ್ಲಿ ಸಹಕಾರೀ ಸಂಘಗಳ ಒರ್ಗನೈಜರರ ಕೆಲಸವನ್ನು ಬಹು ಕಾಲದಿಂದ ಮಾಡಿರುವರು. ಇವರಿಗೆ ಸಾರ್ವಜನಿಕ ಸಂಸ್ಥೆಯ ಲೆಕ್ಕದ ತಪಾಸಣೆಯನ್ನು ಯಾಕೆ ಮಾಡುತ್ತಾರೆ? ಅದರ ಉಪಯುಕ್ತತೆಯು, ಸಾರ್ವಜನಿಕ ರೀತಿಯಿಂದಲೂ, ಖಾಸಗಿ ರೀತಿಯಿಂದಲೂ, ಎಷ್ಟಿರುತ್ತದೆ ಎಂದು ಇನ್ನೂ ತಿಳಿಯದಿದ್ದದ್ದು ಪರಮಾಶ್ಚರ್ಯವು. ತಪಾಸಣೆಯು ಸರ್ವಸಾಧಾರಣ ನಿಯಮವು ಗಿಬ್ಬ ಹೈಸ್ಕೂಲಿನ ಲೆಕ್ಕಕ್ಕೆ ಮಾತ್ರ ಬಾಧಿಸದಿದ್ದರೆ ೧೯೧೯ರಲ್ಲಿ ಸಂಘವಾದಮೇಲೆ, ಲೆಕ್ಕವನ್ನು ತಪಾಸಣೆ ಮಾಡುವ ಆವಶ್ಯಕತೆ ಏನಿತ್ತು? ಹಿತಚಿಂತಕರ ಕೇಳುವದರೆ, ಮೊದಲಿನ ಲೆಕ್ಕ ಸೋಟಬಂದುದಾಗ, ಮುಂದಿನ ಲೆಕ್ಕ ಸಹ ನೋಡಿ ಹೋಗ ಬೇಕಿದ್ದರಲ್ಲವೇ? ರಾ। ಯಾಜೇರಂಥ ಆಡಿಟ ತಜ್ಞರಿಗೆ (?) ಹಿತರೆಂದು ತಪಾಸಣೆಯ ಪ್ರಕ್ಷೋಭೆಗಳಲ್ಲಿ ಹಾಕುವ ಆವಶ್ಯಕತೆ ಏನಿತ್ತು? ಇರಲಿ, ಸಂಕ್ಷೇಪವಾಗಿ ಹೇಳಬೇಕಾದರೆ, ಈ ಆವಧಿಯೊಳಗಿನ ಲೆಕ್ಕವನ್ನು ಸ್ವತಂತ್ರತಜ್ಞರಿಂದ ತಪಾಸಣೆ ಮಾಡಿದ ಹೊರ್ತು, ಯಾರೊಬ್ಬರಿಗೆ ಲೆಕ್ಕವನ್ನು ಸಮಕ್ಷ ನೋಡಿ ಸಮಾಧಾನ ಮಾಡಿಕೊಳ್ಳಿರೆಂದು ಅಪ್ಪಣೆ ಮಾಡಿದರೆ, ಸಂಸ್ಥೆಯು ತನ್ನ ಕರ್ತವ್ಯದಿಂದ ಮುಕ್ತವಾಯಿತೆಂದು ಹೇಳಲಾಗದು. ಮತ್ತು ಅದು ಹಾಗೆ ತಪಾಸಣೆಯಾಗದಿದ್ದರೆ, ಅದನ್ನು ತಪಾಸ ಮಾಡಿರೆಂದು ಆಗ್ರಹ ಹಿಡಿಯುವದು ಸಂಸ್ಥೆಯ ಪ್ರತಿಯೊಬ್ಬ ನಿಜವಾದ ಹಿತಚಿಂತಕರ ಹಕ್ಕು, ಇಷ್ಟೇ ಅಲ್ಲ, ಕರ್ತವ್ಯವೆಂದು ನಾನು ಎಣಿಸುವೆನು. ಇದ್ದರಿಂದ ವೃತ್ತಪತ್ರದ ಕಾಲವು ಗಳು ಸುಲಭವಾಗಿ ಸಿಕ್ಕಿವೆಂದು, ೧೦-೧೫ ಕಾಲಮು ಸ್ಪಷ್ಟೀಕರಣವನ್ನು ಬರೆಯುವ ಖಟಾಟೋಪ ಮಾಡುವದಕ್ಕಿಂತ, ನಾನು ಮೊದಲಿನಿಂದ ಹೇಳುವಂತೆ, ಸರಳವಾಗಿ ತಜ್ಞರಿಂದ ಲೆಕ್ಕ ತಪಾಸ ಮಾಡಿದರೆ, ಈಗ ಪುನಃ ವೃತ್ತಪತ್ರದೊಳಗಿನ ಕಾಲಮುಗಳನ್ನು ತುಂಬುವ ಆವಶ್ಯಕತೆಯು ಉಳಿಯುತ್ತಿದ್ದಿಲ್ಲ.

ರಾ। ಸಾ। ಪಂಡಿತರ ಸ್ಪಷ್ಟೀಕರಣದಿಂದ, ಒಂದು ಸಂಗತಿಯು ಸ್ಪಷ್ಟವಾಗಿ ಕಾಣುತ್ತದೆ. ಅದೇನಂದರೆ, ಸಂಘದ ಘಟನೆಯಾಗುವ ಮೊದಲು, ಮೂವರು ಟ್ರಸ್ಟಿಗಳ ಒಂದು ಬೋರ್ಡು ನೇಮಕವಾಗಿದ್ದರೂ, ಇಡಿ ಕಾರಭಾರವನ್ನು ರಾವಸಾಹೇಬ ಪಂಡಿತ, ರಾ। ಪಾಂಡುರಂಗ ಶೈ, ಮತ್ತು ರಾ। ಪಾಂಡುರಂಗ ಪೈರವೈ ವೈಕುಂಟಪಾಸಿಗಳಾದ ಮೇಲೆ, ರಾ। ಸಾ। ರಾಮಚಂದ್ರ ಪೈ— ಇವರು ಟ್ರಸ್ಟಿಗಳಲ್ಲಿದ್ದರೂ— ಹೀಗೆ ಇಬ್ಬರೇ ಅನಿಯಂತ್ರಿತವಾಗಿ ನಡೆಸುತ್ತಿದ್ದರು. ರಾ। ಸಾ। ಪಂಡಿತರು ತಮ್ಮ ಸ್ಪಷ್ಟೀಕರಣದ ಮುಖ್ಯ ಭಾಗವನ್ನು ಪಂಡಿತ-ಪೈಗಳಿಯ ಲೆಕ್ಕವನ್ನು ತಿಳಿಸಿ ಹೇಳುವದರಲ್ಲಿ ಖರ್ಚು ಮಾಡಿದ್ದಾರೆ ಈಗ ಸ್ಪಷ್ಟೀಕರಣವು ಎಷ್ಟು ಅಪೂರ್ಣವದೆ, ಅಸಮಾಧಾನಕರವದೆ, ಎಂಬದನ್ನು ಕೆಲ ಉದಾಹರಣೆಗಳಿಂದ ತೋರಿಸುವೆನು.

(೧) ಫೋಕಳ ಜಮಾಖರ್ಚು.

ಈ ಸ್ಪಷ್ಟೀಕರಣದಲ್ಲಿ 'ಫೋಕಳ ಜಮಾಖರ್ಚು' ಎಂಬ ಒಂದು ಸದರನ್ನು ಹಾಕಿರುವರು. ಈ ಸದರಿನಲ್ಲಿ ಖರ್ಚಾದ ಅಂಕಿಗಳು ಮಾತ್ರ ಕಾಣುತ್ತವೆ, ಹೊರ್ತು ಆವರಿಂಗ ಜರುಗಿಸಿದ ಕರ್ತಬಗಾರಿಯು (extra special work done) ನಾಮ ನಿರ್ದೇಶವು ಸಹ ಇರುವದಿಲ್ಲ. ಸಾರ್ವಜನಿಕ ಸಂಸ್ಥೆಗಳ ಜಮಾಖರ್ಚಿನಲ್ಲಿ ಈ ನಮೂನೆಯ ಫೋಕಳ ಅಂಕಬಾರವನ್ನು ನಾನು ಹೊಸದಾಗಿ ಇಲ್ಲಿಯೇ ನೋಡಿದೆನು. ಫೋಕಳ ಜಮಾಖರ್ಚಿನ ಸದರು ಇರುವದಂತೆ ಪ್ರಸಂಗವು ಹ್ಯಾಗೆ ಬಂತು? ಈ ಸದರಿನಲ್ಲಿ ೫-೬ ಸುವಿರಗಳ ರಕಮು ಆಡಗಿಕೊಂಡಿವೆ. ಇಷ್ಟು ದೊಡ್ಡ ರಕಮಿನ ವಿವರ ಕೇಳಿದರೆ, ರಾ। ಸಾ। ಪಂಡಿತರು ಹೇಳುವದಿಷ್ಟೇ.— 'ರಾ। ಸಾ। ಪೈರು ಹಾಗು ನಾನು, ಶಾಲೆಯ ಬಗ್ಗೆ ನಮ್ಮ ಕೈಯಿಂದ, ನಮಗೆ ಯೋಗ್ಯ ಕಂಡ ಕಾರಣಕ್ಕೋಸ್ಕರ ಖರ್ಚು ಮಾಡಿದ್ದೇವೆ.' ಆದರಮೇಲಿಂದ ಈ ಬಗ್ಗೆ ಅವರಿಗೆ ಈ ಬಾಬುಗಳ ಖುಲಾಸೆಯನ್ನು ಯಾರಾದರೂ ಕೇಳುವದೂ, ಅಥವಾ ಅವರಾಗಿ ಜನರಿಗೆ ಹೇಳುವದೂ ಅವಶ್ಯವಿಲ್ಲೆಂದು ಅವರು ಸೂಚಿಸುವರೇನು? ಯಾವನೊಬ್ಬ ಗೃಹಸ್ಥನು ಒಂದು ಸ್ಕೂಲ ಕೆಲಸಕ್ಕೆಂದು ದೇಣಿಗಿಯನ್ನು ಕೊಟ್ಟರೆ, ಚಾಲಕರು ಆ ದೇಣಿಗಿಯ ವ್ಯವಸ್ಥೆಯನ್ನು ಹ್ಯಾಗೆ ಮಾಡಿದರೆಂದು ಖುಲಾಸೆಯನ್ನು ತಮ್ಮ ಜಮಾಖರ್ಚಿನ ಲೆಕ್ಕದಲ್ಲಿ ಜನರಿಗೆ ಸ್ಪಷ್ಟಪಡಿಸುವದು ಅವರ ಕರ್ತವ್ಯವಲ್ಲವೇ? ರಾ। ಸಾ। ಪಂಡಿತ-ಪೈರು ದಾತಾ (donor) ಈ ನಾತೆಯಿಂದ ಸಂಸ್ಥೆಗೆ ಕೊಟ್ಟ ದೇಣಿಗಿಯನ್ನು ಟ್ರಸ್ಟೀ ಈ ನಾತೆಯಿಂದ ಹ್ಯಾಗೆ, ಎಷ್ಟಷ್ಟು, ಖರ್ಚು ಮಾಡಿದರೆಂದು ಪ್ರಕಟಿಸ ಬೇಡುವದರ ಕರ್ತವ್ಯವಿದ್ದಿಲ್ಲೇನು? ದಾತೃಗಳೇ ಟ್ರಸ್ಟಿಯಾದರೆಂದು, ಟ್ರಸ್ಟಿಯಾದವರು ಮಾಡಬೇಕಾದ ಕರ್ತವ್ಯವನ್ನು ಅವರು ಮಾಡದಿದ್ದರೆ, ಅದು ಕ್ಷಮ್ಯವಾದೀತೇನು? ರಾ। ಸಾ। ಪಂಡಿತ-ಪೈರ ಹಿರಿಯರಾಗಿ, ಅನ್ಯಾಯವಾದವೂ ಟ್ರಸ್ಟಿಗಳಿದ್ದು ತಮಗೆ ಯುಕ್ತ ಕಂಡಂತೆ, ಈ ಹಣವನ್ನು ಗುಪ್ತರೀತಿಯಿಂದ ಖರ್ಚು ಮಾಡಿದ್ದರೆ, ರಾವಸಾಹೇಬರ್ದ್ವಯರು ಸುಮ್ಮನಿರುತ್ತಿದ್ದರೇನು? ಕರ್ಮಾಧರ್ಮ ಸಂಯೋಗದಿಂದ ಎರಡೂ ನಾತೆಗಳ ಸಂಯೋಗವಾದ್ದರಿಂದ, ಖುಲಾಸೆ ಕೊಡುವ ಟ್ರಸ್ಟಿಯವರ ಜಬಾಬುದಾರಿಯು ಅವರ ಮೇಲಿಂದ ಹೋಗಲಿಲ್ಲವು. ಆದ್ದರಿಂದ ಇವರು ಸ್ಕೂಲ ಬೋನೇಶನ ಎಂದು ಕೊಟ್ಟಿದ್ದರೆ, ಯಾವ ಸ್ಕೂಲ ಕೆಲಸಕ್ಕೆ ಕೊಟ್ಟಿದ್ದರು, ಯಾರಿಗೆ, ಯಾವ ಕೆಲಸಕ್ಕೆ ಎಷ್ಟೆಷ್ಟು ಖರ್ಚಾಯಿತೆಂಬ ವಿವರವನ್ನು ಇವರು ಕೊಡುವದು ಇವರ ಕರ್ತವ್ಯವಾಗಿದೆ. ಇವರಲ್ಲಿ ತೋರಿಸಿದ ಕೆಲ ರಕಮುಗಳು ತೀರ ಬೋಧಪ್ರದ ಮತ್ತು ಚಮತ್ಕಾರಿಕ ಇರುವವು. ಉದಾಹರಣಾರ್ಥವಾಗಿ, ರೂಪಾಯಿ ೬೦೦, ಮತ್ತು ೧,೨೦೦ (bonus for extra special work done.) ರೂಪಾಯಿ ೧೮೦ (special extra expenditure on account of school) ಮತ್ತು ರೂಪಾಯಿ ೧೦೦ miscellaneous ಎಂದು ಖರ್ಚು ಬರೆದದೆ! ಈ ಎರಡನೆ ರಕಮು ಶಾಲೆಯ ಸಂಬಂಧ ಖರ್ಚು ಬಿದ್ದಿದ್ದರೆ, ಉಳಿದ ರಕಮುಗಳು ಯಾರ ಬಗ್ಗೆ ಖರ್ಚಾದವು? ೧,೩೦೦ ರೂಪಾಯಿಗಳಷ್ಟು ದೊಡ್ಡ ರಕಮು ಯಾರಿಗೆ, ಯಾವ ಜಾದಾ ಬಹುಮಾನ (extra special) ಸಲ್ಲಿಸಿದ ಬಗ್ಗೆ ಕೊಟ್ಟಿದ್ದಾರು? ಈ ಫೋಕಳ ಜಮಾಖರ್ಚಿನಲ್ಲಿ ಇನ್ನೊಂದು ಚಮತ್ಕಾರವಿದೆ. ಸ್ಕೂಲ ಬೋನೇಶನದೊಳಗಿನ ಕೆಲ ಬಾಗವು (ಅಂದರೆ ರೂ। ೧,೫೪೦-೮-೩೫ ರೂ. ೬,೩೩-೧೧-೫) ಇಷ್ಟು ಹಣವು ಬೇರೆ ಖರ್ಚಿನ ಸದರಿನಲ್ಲಿ ಅಂಕ ಅಂಕಿತ ಒಳಗೊಂಡಿರುವದು! ಇದಲ್ಲದೆ, ಈ ಸ್ಕೂಲ ಬೋನೇಶನು ಸ್ಕೂಲ ಕೆಲಸಗಳಿಗೆ ಮಾತ್ರ ಖರ್ಚಾಗದ್ದಲ್ಲದೆ, ಶಿರಕೋಳ ಕೆಲಸಕ್ಕೆ ಸಹ ಖರ್ಚಾಗಿರುವದು! ಇದರಮೇಲಿಂದ ಒಂದೇ ಅನುಮಾನವು ಹೊರಡುತ್ತದೆ- ಖರ್ಚಿನ ಕೆಲ ಬಾಬುಗಳ ವಿವರ ಕೊಡತಕ್ಕವರು ಕಠಿಣವಾದ್ದರಿಂದ, ಅಥವಾ ಯೋಗ್ಯ ರೀತಿಯಿಂದ ಖರ್ಚು ಆಗದ್ದರಿಂದ. ಅವುಗಳಿಗೆ ಇಂಥ ಫೋಕಳ ಹೆಸರು ಕೊಟ್ಟು, ಫೋಕಳ ಖರ್ಚಿನಲ್ಲಿ ಅಡಗಿಸಿಟ್ಟರಬೇಕು, ಎಂದು ಯಾರಾದರೂ ಅನುಮಾನಿಸಿದರೆ, ತಪ್ಪುದೀತೇನು? ಆದ್ದರಿಂದ ಈ ರಕಮುಗಳ ಖುಲಾಸೆ ಕೊಟ್ಟು, ಸೂತ್ರಧಾರರು ಇಂಥ ಸಂಶಯನಿರಸನ ಮಾಡಿದ ಹೊರತು ಈ ಪ್ರಕರಣದ ಸಮಾಧಾನಕರ ನಿಚಾಲೆಯಾಯಿತೆಂದು ತಿಳಿಯಲಾಗದು.

(ಮುಂದರಿಯುವದು.)

श्रीभीमकुंडदर्शन.

या चित्रकल्या पुस्तकास प्रख्यात बालब्रह्मचारी यांनी प्रस्तावना लिहिली आहे.

श्री क्षेत्र गोकर्ण येथले एक पुण्यस्थान श्री भीमकुंड याचा प्राचीन व आर्वाचीन वृत्तांत यावरून प्रसिद्ध झाला आहे. कि. ६ पै.

पत्ता— मंजीकेरी मंजनाथभट्ट, गोकर्ण

ಕಾನಡಾವೃತ್ತ.

ಗುರುವಾರ, ತಾರೀಖು ೧೪ ಮಾಹೆ ಜುಲೈ ೧೯೨೧

ಧಾರವಾಡದೊಳಗಾದ
ಘೋರ ಅನರ್ಥವು.

ಈ ತಿಂಗಳ ೧ ನೇ ತಾರೀಖಿನ ಸಂಧ್ಯಾಕಾಲದ ಸಮಯ ಕರ್ನಾಟಕದೊಳಗಿನ ಪ್ರಮುಖ ಪಟ್ಟಣವಾದ ಧಾರವಾಡದೊಳಗೆ ಅತಿ ಭಯಂಕರವಾದ ಪಾಪಕೃತ್ಯವು ಸಂಭವಿಸಿದೆ. ಶಾಂತತೆಯನ್ನು ಕಾಪಾಡಲಿಕ್ಕೆಂದು, ಸಂಬಳ ಕೊಟ್ಟು ಜನರು ಕೊಡುವ ತೆರಿಗೆಯಿಂದ ಪೋಷಿಸಲ್ಪಡುವ ಪೋಲೀಸರೊಳಗಿನ ಒಬ್ಬ ಫೌಜದಾರ ಬಹಾದ್ದೂರನಿಂದ ಈ ಪಾಪಕೃತ್ಯವು ಸಂಭವಿಸಿದೆಂದು ಕೇಳಿಯಂತೂ ಮನಸ್ಸಿಗೆ ಅತ್ಯಂತ ವಿಷಾದವಾಗುತ್ತದೆ. ಶಿವಲಿಂಗಪ್ಪನೆಂಬ ಈ ಕಾವಲುಗಾರರ ನಾಯಕನು ತನ್ನ ಜೊತೆಯ ಶಿಪಾಯಿಗಳೊಂದಿಗೆ ಧಾರವಾಡದೊಳಗಿನ ಸರಾಯಿ ಅಂಗಡಿಯ ಮುಂದೆ ತುಪಾಕಿ ಗುಂಡುಗಳನ್ನು ಹಾರಿಸಿ, ತನ್ನ ಮೂರು ಜನ ದೇಶಬಾಂಧವರನ್ನು ಕೊಂದು ಸುಮಾರು ೪೦ ಜನರನ್ನು ಗಾಯಪಡಿಸಿ, ಈ ಘೋರ ಅನಾಹುತಕ್ಕೆ ಕಾರಣನಾಗಿರುವನು. ಇದರ ಸಾದ್ಯಂತ ವೃತ್ತವು ಜನರಿಂದ ಮತ್ತು ಸರಕಾರದವರಿಂದ ಪ್ರಸಿದ್ಧ ಪತ್ರಗಳ ಮುಖಾಂತರ ನೋಡಲೇ ಪ್ರಕಾಶಿಸಲ್ಪಟ್ಟಿದೆ. ಸರಕಾರಿ ಪ್ರಕಟನೆಗೆ ಪ್ರತ್ಯುತ್ತರವಾಗಿ ಧಾರವಾಡದ ಜಿಲ್ಲಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರು ಗವ್ಹರ್ನರರಿಗೂ, ಗವ್ಹರ್ನರ ಜನರಲ್‌ರಿಗೂ ಕಳಿಸಿದ ತಂತಿಗಳಲ್ಲಿಯೂ ಇದರ ಪುನರುಚ್ಚಾರವಾಗಿದೆ. ಜಿಲ್ಲಾ ಕಾಂಗ್ರೆಸ ಕಮಿಟಿಯು ತಂತಿಗಳೊಳಗಿನ ಆ ವೃತ್ತವನ್ನು ಅಲ್ಲಿಯ ಜಿಲ್ಲಾ [illegible] ಕೊಟ್ಟಿರುವ ಮೂಲಕ ಈ ಅನರ್ಥದ ಕಾರಣಬಾವನವನ್ನು ಅರಿಯುವದಕ್ಕಾಗಿ ತಿಳಿಸಬೇಕೆಂದು ಅವನ್ನು ಕೆಳಗೆ ಎತ್ತಿ ಕೊಡುವೆವು.

ಸರಕಾರದ ಸಂಗಡ ಹಾಕಿದ ಪ್ರಕರಣದ ವಿಷಯವಾಗಿ, ತಪ್ಪು ತಿಳುವಳಿಕೆಯನ್ನುಂಟುಮಾಡುವ ಮತ್ತು ಅಪವಾದದಿಂದ ಕೂಡಿರುವ ಸರಕಾರದವರ ಪ್ರಸಿದ್ಧಿ ಪತ್ರಕವನ್ನು ಓದಿ ಜನರ ಮನಸ್ಸು ಅತಿಶಯ ಬೇಗುದಿಗೊಳ್ಳ[illegible] ದಕ್ಷಿಣ ಮರಾಠಾ [illegible] ಸ್ವಭಾವದಲ್ಲಿ ಇರುತ್ತದೆ. ಆ ದಿವಸ ಮೂರು ಘಂಟೆ ಸುಮಾರಕ್ಕೆ ಶಿಕ್ಷೆ ಮಾಡಲ್ಪಟ್ಟ ಸ್ವಯಂಸೇವಕರನ್ನು ಕೂಡಿದ ಜನರು ತುರಂಗದ ವರೆಗೆ ಮುಟ್ಟಿಸಿ, ತಮ್ಮ ತಮ್ಮ ಮನೆಗೆ ಹೋಗಿದ್ದರು. ಆನಂತರ ನಾಲ್ಕು ತಾಸುಗಳ ವರೆಗೆ ಯಾವತರದ ಅತ್ಯಾಚಾರವೂ ಸಂಭವಿಸಲಿಲ್ಲ. ಹತ್ಯಾರಬಂದ ಪೋಲೀಸರು ಅಂದಿನ ಸಾಯಂಕಾಲದಲ್ಲಿ ಮಾರ್ಕೇಟಿನ ಗಡಂಗಗಳನ್ನು ಕಾಯುತ್ತಿದ್ದರು. ಇಂಥ ಅಪೂರ್ವ ಕಾವಲು ವಾಡಿಕೆಯದಲ್ಲಾದ್ದರಿಂದ, ಸ್ವಾಭಾವಿಕವಾಗಿಯೇ ಜನರ ಗದ್ದಲವು ನೆರೆಯಿತು. ಪಿಕೆಟಿಂಗದ ಕೆಲಸವು ಎಂದಿನಂತೆ ಶಾಂತತೆಯಿಂದ ನಡೆದಿತ್ತು. ಶಸ್ತ್ರಾಸ್ತ್ರಗಳಿಂದ ಸಜ್ಜರಾದ ಪೋಲೀಸರ ಮತ್ತೊಂದು ತಂಡವು ಅಲ್ಲಿಗೆ ಬಂತು. ಆಗ್ಗೆ ಜನರು 'ಮಹಾತ್ಮಾ ಗಾಂಧಿಕೀ ಜಯ' 'ಹಿಂದೂ ಮುಸಲ್ಮಾನಕೀ ಜಯ' ಎಂದು ಘೋಷಿಸಿದರು. ಅದನ್ನು ನೋಡಿ ಸಬ ಇನ್ಸಪೆಕ್ಟರ ಶಿವಲಿಂಗಪ್ಪನು ಯಾವಗೂ ಇಶಾರೆಯನ್ನು ಕೊಡದೆ ನಿಷ್ಕಾರಣವಾಗಿ ಕ್ರೂರತನದಿಂದ ನಿಂತಲ್ಲಿಯೇ ನಿಂತ ಜನರಮೇಲೆ ಗುಂಡು ಹಾರಿಸಹತ್ತಿದನು. ಇದೇ ಸೂಚನೆಯೆಂದು ತಿಳಿದು ಪೋಲೀಸರು ಏನೂ ವಿಚಾರವಿಲ್ಲದೆ ಗುಂಡಿನ ಮಳೆ ಸುರಿಸಹತ್ತಿದರು. ಇದರಿಂದ ಇಬ್ಬರು ಅಲ್ಲಿಂದಲೇ ಸತ್ತರು (ಮತ್ತೊಬ್ಬನು ನಂತರ ಸತ್ತನು) ಮತ್ತು ಅಜಮಾಸ ೪೦ ಜನ ಗಾಯಪಟ್ಟರು. ಕ್ಷಣ ಕೊತ್ತಿನಮೇಲೆ ಗಾಯಪಟ್ಟವರ ಸಹಾಯಕ್ಕಾಗಿ ಹೋದ ಜನರು ಸಹ [illegible] ಗಾಯಪಡೆದರು. ಆ ಕಾಲಕ್ಕೆ ಯಾವ ಮೆಜಿಸ್ಟ್ರೇಟನೂ ಹಾಜರಿರಲಿಲ್ಲ. ಸರಕಾರಿ ಪತ್ರಿಕೆಯಲ್ಲಿ [illegible] ಸಭೆಯು, ಅಂದಿನ [illegible] ಪ್ರಸಿದ್ಧಪಡಿಸಿದ [illegible] ಸ್ವರಾಜ್ಯ ಫಂಡಿನ ಸಭೆಗೆ ಕೂಡಿಸಲ್ಪಟ್ಟಿತ್ತು. ಈ ಘಟನೆಯು ನಡೆದಿರುವಾಗಲೇ ಗಾಯಪಟ್ಟ ಜನರು ಅದರ ಮುರಿಕಿನಿಂದ ಒಯ್ಯಲ್ಪಡುತ್ತಿದ್ದರು. ಜನರು ಬೆಂಕಿ ಹಚ್ಚಲಿಕ್ಕೆ ಪ್ರಯತ್ನ ಮಾಡಿದರ [illegible] ಪೋಲೀಸರಮೇಲೆ ಹಲ್ಲೆ ಮಾಡಿದರೆಂಬುದೂ ಕಲ್ಲು ಒಗೆದರೆಂಬುದೂ, ತೀರ ಸುಳ್ಳು [illegible] ನಿಷ್ಕಾರಣವಾಗಿ [illegible] ಬುದ್ಧಿಪೂರ್ವಕವಾಗಿ [illegible] ಹೊಡೆದು [illegible] ಮಾಡಿದ ಕೃತ್ಯಗಳನ್ನು ಮುಚ್ಚಿಕೊಳ್ಳುವದರ ಸಲುವಾಗಿ, ಹಿಂದಿನಿಂದ ಈ ಕಾರಣಗಳನ್ನು ಹುಟ್ಟಿಸಿದ್ದಾರೆ. ಈ ರೀತಿ ಗುಂಡು ಹಾರಿಸುವ ಕಾರಸ್ಥಾನವು ಮುಂದಾಗಿಯೇ ಬುದ್ಧಿಪೂರ್ವಕವಾಗಿ ತಯಾರಿಸಲ್ಪಟ್ಟಿತ್ತು. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಾದ ಮಿ| ಪೇಂಟರರವರು ಹಿಂದಿನ ದಿವಸವೇ ಈಗ ಹಿಡಿಯಲ್ಪಟ್ಟ ಕರ್ಮವೀರ ಪತ್ರದ ಸಂಪಾದಕರಾದ, ಮಿ| [illegible] ಮತ್ತು ಮಿ| ದಿವಾಕರ ಇವರಿಗೆ 'ನಾನು ನಿಮ್ಮ ರಕ್ತವನ್ನು ಕುಡಿಯಲು ನಿಶ್ಚಯಿಸಿದ್ದೇನೆ. ನಿಮಗೆ ಒಂದು ವರ್ಷದ ತುರಂಗವಾದದ್ದನ್ನು ನೋಡ [illegible] ತನಕ ನನ್ನ ಸಮಾಧಾನವಾಗದು' ಎಂದು ಅಡಿದ್ದರು. ಸಂಕೇರಿ ಪ್ರಸಿದ್ಧ ಪತ್ರಿಕೆಯೊಳಗಿನ ವಿಧಾನಗಳು ಸುಳ್ಳಾಗಿರುತ್ತವೆಂದು ನಾವು ಸಾರಿ ಹೇಳುತ್ತೇವೆ. ಸಬ ಇನ್ಸಪೆಕ್ಟರನ ಮೇಲೂ, ಅವನ ಕೈಕೆಳಗಿನವರ ಮೇಲೂ ಬುದ್ಧಿಪೂರ್ವಕ ಕೊಲೆ ಮಾಡಿದ ಆರೋಪವನ್ನು ನಾವು ಹೊರಿಸುತ್ತೇವೆ. ಡಿ ಮೆಜಿಸ್ಟ್ರೇಟ ಮತ್ತು ಪೋಲಿಸ ಸುಪರಿಂಟೆಂಡೆಂಟ, ಇವರ ಮೇಲೂ, ಅಸಹಕಾರಿತೆಯನ್ನು ಎಷ್ಟೇ ಹಾನಿಯಾದರೂ, ಮುರಿಬಡಿಯಬೇಕೆಂಬ ಒಳಸಂಚಿನ ಆರೋಪವನ್ನು ನಾವು ಹೊರಿಸುತ್ತೇವೆ." ಇತ್ಯಾದಿ

ಈ ಪ್ರಕರಣದ ಚೌಕಶಿಯು ಸ್ವತಂತ್ರ ಕಮಿಶನದ ಮುಖಾಂತರ ನಡೆದು, ಅದರ ತೀರ್ಪು ಹೊರಬೀಳುವದಿದ್ದದರಿಂದ, ಮೇಲೆ ಎತ್ತಿ ಕೊಟ್ಟ ಲೋಕಪಕ್ಷದ ಹೇಳಿಕೆಯು ಸದ್ಯಕ್ಕೆ ಏಕತರ್ಫಿಯಾಗಿದೆಂದೇ ನಾವು ತಿಳಿಯುವೆವು. ಹೀಗಿದ್ದರೂ ಕೆಲವು ಸಂಗತಿಗಳ ಬಗ್ಗೆ ಸರಕಾರಿ ಮತ್ತು ಬಿನ್ ಸರಕಾರಿ ವರದಿಗಳಲ್ಲಿ ಮತಭೇದವೇನೂ ಇಲ್ಲ. ಮೆಜಿಸ್ಟ್ರೇಟರು ಸ್ವತಃ ಹಾಜರಿಲ್ಲದೇ ಹಾಜರಿದ್ದು ಸ್ವತಃ ಅವರು ಹುಕುಮು ಕೊಡದೇ, ಪೋಲೀಸ ಫೌಜದಾರನು ಗುಂಡುಗಳನ್ನು ಹಾರಿಸಿದನು. ಸ್ವಯಂಸೇವಕರಿಗೆ ತುರಂಗಿಗೆ ಮುಟ್ಟಿಸಿ ಬಂದ ನಂತರ ಮೂರು ಘಂಟೆಯಿಂದ ೭ ಘಂಟೆಯ ತನಕ ಊರಲ್ಲೆಲ್ಲ ಶಾಂತತೆಯೇ ನೆಲೆಗೊಂಡಿತ್ತು. ಈ ನಾಲ್ಕು ತಾಸು ಅವಧಿಯೊಳಗೆ ಎಲ್ಲಿಯೂ ದಂಗಾಟವಾದದ್ದು ಕಂಡುಬಂದಿಲ್ಲ. [illegible] ಸಮಯವೇ ಧಕ್ಕನೆ ದಂಗೆಯಾಗಿ ಆಕ್ರಮಣವೇ ರಾ| ಶಿವಲಿಂಗಪ್ಪನು ಗುಂಡು ಹಾರಿಸಿ, ಅದನ್ನು ಮುರಿದಂತಾಗಿದೆ. ಆನಂತರ ೧೫ ಸಾವಿರ ಜನರು ಕೂಡಿ, ದೊಡ್ಡ ಸ್ಮಶಾನಯಾತ್ರೆಯು ಮರುದಿವಸ ಹೊರಟರೂ, ಒಲ್ಪ ಸಹ ಅತ್ಯಾಚಾರವು ಎಲ್ಲಿಯೂ ಸಂಭವಿಸಿಲ್ಲ. ಮರುದಿವಸವೇ ಎಲ್ಲ ಕಡೆಯಲ್ಲಿ ಶಾಂತತೆಯು ನೆಲೆಗೊಂಡಿರುತ್ತದೆಂದು ಸರಕಾರಿ ವರದಿಯೇ ಒಪ್ಪಿದೆ. ಹೀಗಿದ್ದಾಗ್ಯೂ ಊರೊಳಗೆ ಅತ್ಯಾಚಾರವನ್ನು ದಾಖಲೆ, ದಂಗೆಯನ್ನೆಬ್ಬಿಸುವ [illegible] ಜನರೇ ಮಾಡಿದ್ದರಿಂದ ಅನುಮಾನಿಸಲಿಕ್ಕೆ ಎಳ್ಳಷ್ಟೂ ಅವಕಾಶವಿಲ್ಲ. ಆದಕಾರಣ, ಸದ್ಯಕ್ಕಾದರೂ ಸರಕಾರದ ಪ್ರಸಿದ್ಧಿ ಪತ್ರಿಕೆಯೊಳಗಿನ ವಿಧಾನಗಳಿಗಿಂತ, ಜನಹಿತಪಕ್ಷದೊಳಗಿನ ವಿಧಾನಗಳು ಲೋಕಮತಕ್ಕೆ ಗ್ರಾಹ್ಯವಾಗಿರುವವು. ಲೋಕಮತವು ಯಾವಾಗಲೂ ಸತ್ಯಪಕ್ಷಪಾತಿಯಾಗಿರುವದು. ಈ ಪ್ರಕರಣದ ಸತ್ಯವನ್ನು ಅರಿತುಕೊಳ್ಳಲಿಕ್ಕೆ ಅದು ಅತ್ಯುತ್ಸುಕವಾಗಿರುವದು. ನ್ಯಾಯರಾಹಿಯನ್ನು ಸಮರ್ಥಿಸುವ ಸ್ವತಂತ್ರ ಲೋಕಮತದ ತೃಪ್ತಿಯಾಗಲು ಇಂದ ಸತ್ಯಾಗ್ರಹ [illegible] ಆದರ ಸಂಕೋಚವು ಮಾತ್ರ ಬಳೆಯುವದು.

[illegible] ಬಹಾದ್ದೂರನ ಅತ್ಯಾಚಾರದ [illegible] ನಿಷ್ಕರ್ಷೆ ಇನ್ನು ಬೇಗ ಆಗಬೇಕಾಗಿದೆ, ಇಂದ ಶೀಘ್ರ ಉಪಾಯವ

ನ್ನು ಕೈಕೊಳ್ಳುವ ಅವಶ್ಯಕತೆಯು ಧಾರವಾಡದ ಪರಿಸ್ಥಿತಿಯೊಳಗೆ ಎಳ್ಳಷ್ಟು ಉಂಟಾಗಿದ್ದಿಲ್ಲೆಂದು ನಮ್ಮ ಮನಸ್ಸಾಕ್ಷಿಯು ನಮಗೆ ಆಭಾಸಿಸುತ್ತಿದ್ದ ಮೂಲಕ, ನಿಷ್ಕಾರಣವಾಗಿ ನಡೆದ ಈ ಮನುಷ್ಯ ಹತ್ಯೆಯಂಥ ಕೊಲೆಗಾಗಿ, ಪೋಲೀಸ ಕೊಲೆಗಾರರ ಕೃತ್ಯವನ್ನು ತೀವ್ರವಾಗಿ ನಾವು ನಿಷೇಧಿಸುವೆವು. ಆಕಾಶದೊಳಗೆ ಹತ್ತೆಂಟು ಗುಂಡುಗಳನ್ನು ಹಾರಿಸಿದ ಕೂಡಲೆ, ಎಕ್ಕಾನಾಕಾರಿ ಓಡುವ ನಿಶ್ಶಸ್ತ್ರ ಜನರ ಗುಂಪಿನವರಿಗೆ ಎಚ್ಚರಿಕೆಯನ್ನು ಸಹ ಕೊಡದೆ, ಗುಂಡು ಹಾರಿಸುವವರ ಮನೋವೃತ್ತಿಯು ಮಾನವೀ ವೃತ್ತಿಯಲ್ಲ. ನಿಸ್ಸಂಶಯವಾಗಿ ಅದು ರಾಕ್ಷಸೀ ವೃತ್ತಿಯು. ಮನುಷ್ಯತ್ವದ ನೈತಿಕ ರಕ್ಷಣೆಗಾಗಿ, ಈ ಘೋರ ಪಾಪವನ್ನೂ, ಇದರ ಅಕ್ಷಮ್ಯ ಕ್ರೂರತೆಯನ್ನೂ, ಎಲ್ಲರೂ ನಿಷೇಧಿಸದಿರರು. ಧಾರವಾಡದೊಳಗಾದ ಕೊಲೆಗಳ ಹಿಂಬದಿಗೆ ಯಾವ್ಯಾವ ಕೂಟಗಳಿದ್ದಾವೆ, ಅವುಗಳ ನಿಜ ಸ್ವರೂಪವೇನಿದೆ, ಎಂಬುದೇನು ಈಗಲೇ ತಿಳಿಯುವದು ಸಾಧ್ಯವಿಲ್ಲ. ಸಾಕ್ಷಿ ಪುರಾವೆಗಳ ಸಹಿತ ಎಲ್ಲ ಕಾರಸ್ಥಾನವು ಹೊರಬೀಳುವದಿದ್ದಾಗ, ಈಗಲೇ ಅದನ್ನು ನಾವು ಚರ್ಚಿಸಲಿಚ್ಛಿಸುವದಿಲ್ಲ. ಸದ್ಯಕ್ಕೆ ಈ ಘೋರ ಅನರ್ಥಕ್ಕೆ ಕಾರಣವಾದ ಪೋಲೀಸರ ಅತ್ಯಾಚಾರಗಳನ್ನಷ್ಟು ಪುನಃ ಪುನಃ ನಿಷೇಧಿಸುವೆವು ಮತ್ತು ಅವುಗಳಿಗೆ ಬಲಿಬಿದ್ದ ದೇಶಬಾಂಧವರ ಆಪ್ತ ಮಿತ್ರರಿಗೆ ನಮ್ಮ ಮನಃಪೂರ್ವಕ ಸಹಾನುಭೂತಿಯನ್ನು ತೋರಿಸುವೆವು.

ಸ್ಫುಟ ಸೂಚನೆಗಳು.

೧. ಧಾರವಾಡದಲ್ಲಾದ ಅನಾಹುತದ ಪ್ರಸಂಗದಲ್ಲಿ ಧಾರವಾಡದ ರಾಷ್ಟ್ರೀಯ ವೃತ್ತಗಳ ಸಂಪಾದಕರನ್ನು ದಸ್ತಗೀರ ಮಾಡಿದ್ದರಿಂದ ಈ ಅವರ ವೃಥಾ ಸಂಕಷ್ಟದಲ್ಲಿ ನಾವು ಮನಃಪೂರ್ವಕ ನಮ್ಮ ಸಹಭಾವವನ್ನು ವ್ಯಕ್ತಮಾಡುವೆವು. ಅವರು ನಮ್ಮ ಧೈರ್ಯಶಾಲಿ ವ್ಯವಸಾಯ ಬಂಧುಗಳಾಗಿದ್ದು, ತಮ್ಮ ಹಿಂದಮಾತೆಯ ಉದ್ಧಾರಕ್ಕಾಗಿ ಕಷ್ಟಪಡುತ್ತಿರುವರು. ಜನತೆಯ ಬಗ್ಗೆ ಪ್ರಾಮಾಣಿಕತನದಿಂದ ವಹಿಸಿಕೊಂಡ ಕರ್ತವ್ಯದಕ್ಷತೆಗಾಗಿ, ಅವರು ಶಿಕ್ಷಿಸಲ್ಪಡುವರು. ಅವರೇನು ವೃಥಾ ಕಷ್ಟಪಡುವದಿಲ್ಲ. ಈ ಭರತಖಂಡದ ಹಳೆ ಯುಗದೊಳಗಿಂದ ಹೊಸ ಯುಗವನ್ನು ಅವರು ನಿರ್ಮಿಸುತ್ತಿರುವರು. ಅವರು ತಮ್ಮ ಸ್ವಕೃತ ಕರ್ತವ್ಯದಿಂದ ಜನರಿಗೆ ಸ್ವಾರ್ಥತ್ಯಾಗದ ಮತ್ತು ದೇಶಸೇವೆಯ ಪಾಠಗಳನ್ನು ಕೊಡುತ್ತಿರುವರು. ಇದು ಅವರ ತಪ್ಪೆಂದಾದರೆ, ಪ್ರಾಮಾಣಿಕತನದಿಂದಲೇ ಆದ ತಪ್ಪು ಇರುವದು. ಈ ಅವರ ಸಂಕಷ್ಟಗಳಿಂದ ಸಾರ್ವಜನಿಕ ಜೀವಕ್ರಮವನ್ನು ಅವರು ಇನ್ನಷ್ಟು ಘನವಾಗಿಯೂ, ಶುದ್ಧವಾಗಿಯೂ ಮಾಡುವರು. ಇಂಥ ನಮ್ಮ ವ್ಯವಸಾಯ ಬಂಧುತ್ವಕ್ಕಾಗಿಯೂ, ಅವರ ದೇಶಸೇವೆಗಾಗಿಯೂ, ಅವರ ಮೇಲೆ ಬಂದ ವೃಥಾ ಆಪತ್ತಿನಲ್ಲಿ ನಮ್ಮ ಕೃತಜ್ಞತೆಯ ಸಾಲವನ್ನೂ, ಸಹಭಾವವನ್ನೂ ಅರ್ಪಿಸುವೆವು. ನಕ್ತ ಆರ್ಥಿಕ ಅವಶ್ಯವಿದ್ದರೆ ಜನತೆಯು ಪ್ರತ್ಯಕ್ಷ ಸಹಾಯಮಾಡಿ, ಅವರ ದೇಶಸೇವೆಯ ಬಗ್ಗೆ ತನ್ನ ಆದರವನ್ನೂ, ಕೃತಜ್ಞತೆಯನ್ನೂ ಅರ್ಪಿಸುವರೆಂದು ಆಶಿಸುವೆವು.

---

೨. ಧಾರವಾಡದಲ್ಲಾದ ಗೋಳೀಬಾರದ ಪರವಾಗಿ, ಮುಂಬಯಿ ಸರಕಾರದವರು ನಿನ್ನೆಗಿನ ೮ ನೇ ತಾರೀಖಿಗೆ ಮತ್ತೊಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿರುವರು. ಅದು ಈಗಲೇ ನಮ್ಮ ಕೈಸೇರಿತು. ಅದರೊಳಗೆ ಕಾಂಗ್ರೆಸ ಕಮಿಟಿಯ ತಂತಿಯೊಳಗಿನ ಆರೋಪಗಳ ಮತ್ತು ಬಹುತರ ಎಲ್ಲ ವಿಧಾನಗಳ ನಿರಾಕರಣೆಯು ಮಾಡಿಸಲ್ಪಟ್ಟಿದೆ. ಲೋಕಪಕ್ಷದ ಹೇಳಿಕೆಯು ಕೇವಲ ನಿರಾಧಾರ ಮತ್ತು ಸುಳ್ಳಿನಂತಲೇ ಈ ಪತ್ರಿಕೆಯು ಧ್ವನಿಸುತ್ತದೆ. ಸರಕಾರ ಪಕ್ಷದ ಹೇಳಿಕೆಯು ನಿಜವಿದ್ದರೆ, ಜನರೇ ಅತ್ಯಾಚಾರವನ್ನು ಮಾಡತಾರಂಭಿಸಿದ್ದರಿಂದ, ಪೋಲೀಸರಿಗೆ ಅದನ್ನು ಮುರಿಬಡಿಯಲಿಕ್ಕೆಂದು ಗೋಳೀಬಾರ ಮಾಡಬೇಕಾಯಿತೆಂದು ಸಮರ್ಥನೆಯನ್ನು ಮಾಡುವದು ಒಂದು ಪಕ್ಷಕ್ಕೆ ಕ್ಷಮ್ಯವಾಗುವದು. ಇನ್ನು ನ್ಯಾಯಕೋರ್ಟಿನ ನಿರ್ಣಯಗಳು, ಕಾಂಗ್ರೆಸ ಕಮಿಶನಿನ ರಿಪೋರ್ಟ ಸತ್ಯವನ್ನು ಬೈಲಿಗೆ ತಂದೇ ತರುವವು. ಅವ್ವರ ತನಕ, ನಾವಾವರೂ ಹಾದಿ ನೋಡುತ್ತಿರುವೆವು. ಈ ವಿಷಯವನ್ನು ಲಕ್ಷಿಸಿ, ಅಸಹಕಾರ-ಧುರೀಣರ ಅನುರೋಧದಿಂದ ಒಂದು ಸಂಗತಿಯನ್ನು ಸ್ಪಷ್ಟವಾಗಿ ಸರಕಾರಕ್ಕೆ ತಿಳಿಸುವೆವು. ಅಸಹಕಾರ ಪಕ್ಷಕ್ಕೆ ತನ್ನ ಇಜ್ಜತ್ತನ್ನು ಕಾಪಾಡಿಕೊಳ್ಳಬೇಕೆಂಬ ಕೆಟ್ಟ ಕಲ್ಪನೆಯು ಎಂದೆಂದು ಮಾನ್ಯವಾಗದು. ಅದಕ್ಕೆ ಯಾವಾಗಲೂ ನ್ಯಾಯವು ಬೇಕು, ಸತ್ಯವು ಬೇಕು. ಅತ್ಯಾಚಾರಿ ಅಪರಾಧಿಗಳಿಗೆ ದಂಡನೆಯಾದರೆ, ಅಸಹಕಾರಿಗಳಿಗೆ ಎಳ್ಳಷ್ಟು ವ್ಯಥೆಯಾಗದು; ಪ್ರತ್ಯುತ, ಅವರಿಗೆ ಆನಂದವೇ ಆಗುವದು. ಅಸಹಕಾರದ ನಿಷ್ಕಲಂಕ ಹೆಸರನ್ನು ಕಾಪಾಡಲಿಕ್ಕೆಂದು, ಮ|| ಗಾಂಧಿಯವರು ಅಲ್ಲಿ ಬಂಧುಗಳ ಕಡೆಯಿಂದ ಬರೇ ಸಂಶಯಪರಿಹಾರಕ್ಕಾಗಿ, ಮಾಫಿ ಬೇಡಿಸಲಿಲ್ಲವೇನು? ಮಹಾತ್ಮರು,— ಸರಕಾರದವರ ವಿಧಾನಗಳು ನಿಜವೆಂದು ಸಿದ್ಧವಾದರೆ- ಹಿಟಸನ್ ದಿವಸಗಳ ದೇರಹಿನೊಳಗೆ ದಂಗೆ ನಡಿಸುವ ಹುಚ್ಚು ದಂಗೆಖೋರರಿಗೆ ಹತ್ತಾರ ಕೈ ಗಲ್ಲಿಗೆ ಹಾಕಿದರೂ, ಸರಕಾರದವರಿಗೆ "ಶಾಬಾಸ" ಎಂತಲೇ ಹೊಗಳುವರೆಂದು, ಸರಕಾರವು ನಂಬಿರಲಿ. ಇದೇ ಸರಳ ನೀತಿಯನ್ನೂ, ಸತ್ಯಪ್ರೀತಿಯನ್ನೂ, ಆದರಿಸಿ, ತಮ್ಮ ಅಧಿಕಾರಿಗಳ ಇಜ್ಜತ್ತಿನ ರಕ್ಷಣೆಯ ಕಲ್ಪನೆಗಳನ್ನು ಪರಿಪೂರ್ಣವಾಗಿ ತೊರೆದು, ಜನರ ಮನಸ್ಸಾಕ್ಷಿಗೆ ಒಪ್ಪುವ ತೀರ್ಪನ್ನು ಸರಕಾರದವರೂ ಹೊರಡಿಸಿದರೆ, ಅಸಹಕಾರ ಪಕ್ಷವು ಸರಕಾರದವರನ್ನು ಆನಂದದಿಂದ ಅಭಿನಂದಿಸುವದು. ಇಂಥ ಯೋಗವು ಬರುವದೋ ನೋಡುವ!

---

೩. ಇನ್ನು ನಿರಪರಾಧಿಗಳಿಗೆ ಅನ್ಯಾಯದಿಂದ ಶಿಕ್ಷೆಯಾದರೆ, ಇಲ್ಲವೆ ಸೆರೆಮನೆಗೆ ಹೋಗಬೇಕಾದರೆ, ಅವಾವರೂ ಅಸಹಕಾರಿಗಳಿಗೆ ಇಷ್ಟಾಪತ್ತಿಯೇ. ಈ ತತ್ವದ ಇಂಗಿತವನ್ನು ತಿಳಿಯಲಿಚ್ಛಿಸುವವರಿಗೆ ಮಹಾತ್ಮರ ಮಾತುಗಳನ್ನೇ ಎತ್ತಿಕೊಟ್ಟರೆ, ಎಲ್ಲವೂ ತಿಳಿಯುವದು— "ಸ್ವರಾಜ್ಯ ಸಂಪಾದನೆಗಾಗಿ, ಸೆರೆಮನೆಯ ಯಾತನೆಗಳಿಗೆ ಗುರಿಯಾಗುವದು ಸಾಧನವಲ್ಲವೆಂದು ಎಷ್ಟೋ ಸುಶಿಕ್ಷಿತರ ಕಲ್ಪನೆಯಿರುವದು. ಲೋಕಮಾನ್ಯ ಟಿಳಕರ ಲೋಕಮಾನ್ಯತ್ವವು, ವರ್ಚಸ್ಸೂ, ಅವರು ಸೆರೆಮನೆಯನ್ನು ಸೇರಿದ್ದಕ್ಕೆ ದೊರೆತ ಫಲಗಳೆಂದು ಈ ಸಂಶಯಾತ್ಮರು ಮರೆಯುತ್ತಾರೆ. ಕ್ರೈಸ್ತನು ಕ್ರಾಸಿನಮೇಲೆ ಮರಣಹೊಂದಿದ್ದು, ಅವನ ಪರಮವಿಜಯವೆ. ಕರಬಲಾ ರಣಾಂಗಣದ ಮೇಲೆ ಇಮಾಮ ಹಸನ್ ಇವರು ತೋರಿಸಿದ ವೀರಾವೇಶವೇ ಇಸ್ಲಾಮಿ ಧರ್ಮಭಾವದ ಬೀಜವು. ತನ್ನ ಅಸಂಖ್ಯವಾದ ದುಃಖ ಕಷ್ಟಗಳಿಂದಲೇ, ಹರಿಶ್ಚಂದ್ರನು ಅಜರಾಮರನಾಗಿರುವನಲ್ಲವೆ? ಲಕ್ಷಾವಧಿ ಜನರು ತಮ್ಮ ಜಯವನ್ನು ಬಯಸುತ್ತಿದ್ದರೆ, ತಾವು ನಿರಪರಾಧಿಗಳಿದ್ದರೂ ಸೆರೆಮನೆಗೆ ಹೋಗಲಿಕ್ಕೆ ಸಿದ್ಧರಾಗದೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವು ಸಿಗಲಾರದು." ಈ ವಿಧಾನಸರಣಿಯನ್ನು ನಿರಪರಾಧಿ ಭಯತ್ರಸ್ತರು ಮನನಮಾಡಲಿ, ಅಂದರೆ, ಅವರ ಭೀತಿಯು ನಿರ್ಮೂಲನಾಗುವದು. ಅಹಿಂಸಾಪರರಾಗಿ, ಬಹಳ ಜಾಗ್ರತೆಯಿಂದ ಮದ್ಯಪಾನ ನಿಷೇಧದ ಚಳವಳಿಯನ್ನು ನಡಿಸಿದರೂ, ಧಾರವಾಡದಲ್ಲಾದ ಅನರ್ಥದಂಥ ಅನಾಹುತಗಳಿಗೆ ಇಂಬು ದೊರೆಯುತ್ತಿದ್ದ ಮೂಲಕ, ಚಳವಳಿಯನ್ನೂ ಪಿಕೆಟಿಂಗವನ್ನೂ ಬಿಟ್ಟುಬಿಡಿರಿ ಎಂದು ಹೇಳುವ ಉಪದೇಶಕರಿಗೆ ಮಹಾತ್ಮರ ಉಪದೇಶವನ್ನು ಮನನಮಾಡಿರೆಂದು ಹೇಳುವೆವು. ಗಂಟಲಿನಲ್ಲಿ ತುತ್ತು ಸಿಕ್ಕಿಯಾವಾವರೂ ಸತ್ತರೆಂದು, ಅನ್ನ ಉಣ್ಣುವದನ್ನೇ ಬಿಟ್ಟುಬಿಡುವದು ಜಾಣತನವಾಗುತದೇನು?

---

೪. ಇಂಥ ರಾಷ್ಟ್ರೀಯ ತ್ಯಾಗದ ದೃಷ್ಟಿಯಿಂದ, ಧಾರವಾಡದ ತರುಣ ಮೆಜಿಸ್ಟ್ರೇಟರು ಪಿಕೆಟಿಂಗದ ಇಬ್ಬರು (ಶಿಲಾಧರ) ಸ್ವಯಂಸೇವಕರಿಗೆ, ೬ ತಿಂಗಳು ಸಕ್ತ ಮಜೂರಿಯ ತುರಂಗದ ಕಠಿಣ ಶಿಕ್ಷೆಯನ್ನು ವಿಧಿಸಿದ್ದು, ಒಂದು ವಿಧದ ಇಷ್ಟಾಪತ್ತಿಯೇ ಸರಿ. ದೇಶಸೇವೆಯನ್ನು ಮಾಡುವ ಸ್ವಾರ್ಥತ್ಯಾಗಿ ಸದಾಚಾರಿ ಸ್ವಯಂಸೇವಕರು, ಒಬ್ಬ ಹೆಂಡಕಲಾಲನಿಂದ ೧೦-೧೨ ಆಣೆ ಕಾಸುಗಳನ್ನು ಕಸಕೊಂಡು, ಜಬರಿ ಕಳವು ಮಾಡುವ ಅಪ್ರಮಾಣಿಕ ಹೇತುವಿನಿಂದ ಪ್ರವರ್ತಿಸಿದ್ದರೆಂದು ಹೇಳುವದು ಹ್ಯಾಗೆ? ಅವರು ಒಂದೇ ಬದಮಾಶರಿರಬೇಕು, ಇಲ್ಲವೆ ನಿರಪರಾಧಿಯಾಗಿರಬೇಕು. ಇವೆರಡರೊಳಗೆ ಯಾವದೇ ಕ್ಲಾಸಿನಲ್ಲಿದ್ದರೂ ಅವರಿಗಾದ ಭಾರೀ ಶಿಕ್ಷೆಯ ಪರಿಣಾಮವು ಇಷ್ಟವೇ? ನಮ್ಮ ಮತಕ್ಕೆ ಅವರು ನಿರಪರಾಧಿಗಳು ಮತ್ತು ಅವರಿಗಾದ ಶಿಕ್ಷೆಯು ಅನ್ಯಾಯದ್ದು. ದೇಶದ ಕಲ್ಯಾಣಕ್ಕಾಗಿ, ಮದ್ಯಪಾನದಂಥ ಭಯಂಕರ ದುರ್ವ್ಯಸನವನ್ನು ಸಾತ್ವಿಕ ಉಪಾಯಗಳಿಂದ ನಿರ್ಮೂಲಿಸಲಿಕ್ಕೆಂದು ದುಡಿದದ್ದಕ್ಕಾಗಿ, ಅವರಿಗೆ ಸೆರೆಮನೆಯ ಪ್ರಾಯಶ್ಚಿತ್ತವು ದೊರೆತದೆಂದು ನಮ್ಮ ಭಾವನೆಯು. ನಿರಪರಾಧಿಗಳಾಗಿ ತುರಂಗದ ಯಾತನೆಗಳನ್ನು ಸಹಿಸುವದು, ದೇಶದ ಉದ್ಧಾರಕ್ಕಾಗಿ ಆಚರಿಸಬೇಕಾದ ಕಠಿಣ ತಪಶ್ಚರ್ಯವೇ ಸರಿ. ನಮ್ಮ ಭಾವನೆಯು ತಪ್ಪಿದ್ದರೆ, ಬದಮಾಶರಿಗೆ ಶಿಕ್ಷೆಯಾದದ್ದಂತೂ ನ್ಯಾಯ್ಯವೇ. ನಮ್ಮ ಸ್ವಯಂಸೇವಕರೊಳಗೆ ಯಾರಾದರೂ ಬದಮಾಶರಿದ್ದರೆ, ನಾನಾಗಿ ಅವರಿಗೆ "go out" ಎಂದು ಹೇಳಿ, ಹೊರದೂಡಲಿಕ್ಕೆ ಸಿದ್ಧರಿದ್ದೇವೆ. ಆದರೆ, ಪ್ರಕೃತ ಸ್ವಯಂಸೇವಕರು ಸದಾಚಾರಿ ವಿನಯಶೀಲ ಯುವಕರೆಂದು ಮನಗಂಡು, ಅವರಿಗೆ ಸಂಭವಿಸಿದ ಕಷ್ಟಗಳಿಗಾಗಿ, ಅತ್ಯಾದರಪೂರ್ವಕ ನಮ್ಮ ಸಹಾನುಭೂತಿಯನ್ನು ತೋರಿಸುವೆವು. ಮತ್ತು ದೇಶಹಿತಕ್ಕಾಗಿ ಅವರು ತುರಂಗದ ಯಾತನೆಗಳನ್ನು

...ತ್ತಿರುವ ಕಾರಣ ಅವರನ್ನು ಕೃತಜ್ಞತೆಯಿಂದ ಹೊಗಳುವೆವು. ಶಾಂತಿಮಯ ಅಸಹಕಾರವು ಈ ಬಗೆ ಸೇವಕರ ಕಷ್ಟಗಳಿಂದ ಮತ್ತಿಷ್ಟು ಉಜ್ವಲವಾಗುವದು; ದೇಶಭಕ್ತರ ಬೆನ್ನೆಲಬು ಮತ್ತೂ ಪಟ್ಟಿಯಾಗುವದು; ಸ್ವಯಂಸೇವಕರೊಳಗೆ ಆತ್ಮಶುದ್ಧಿಯ ತೇಜಸ್ಸು ಹೆಚ್ಚೆಚ್ಚು ಹೊಳೆಯುವದು.

ಪಂಜಾಬದೊಳಗಿನ [illegible] ಜಿಲ್ಲೆಯಲ್ಲಿ [illegible] ಹಳ್ಳಿಗಳೊಳಗಿನ ಒಂದು [illegible] ಬೆಳಸಬೇಕೆಂದು ಪಂಜಾಬ ಸರಕಾರವು ಯೋಚಿಸಿ, ಯೋಜನೆಯಂತೆ ಉತ್ತರ ವಿಧಿ [illegible] ಆಗಿದೆಯಷ್ಟೇ. ಇಷ್ಟರೊಳಗೆ ೧೫ ಹಳ್ಳಿಗಳೊಳಗೆ [illegible] ನಡೆದವೆಂದೂ, [illegible] ಧ್ಯಕ್ಷರಾದ [illegible] ಬಾಹಿರವಡಿಸಿರುವ [illegible] ಪದ್ಧತಿ [illegible] ಯುರೋಪದೊಳಗಿನ [illegible] ಒಂದಾಗಿರುವದು [illegible] ಹಳ್ಳಿ [illegible] ಅವರು [illegible] ಹಳ್ಳಿ [illegible] ಕಾರಿದವರು [illegible] ಪ್ರದೇಶಗಳಲ್ಲಿ ಕೃಷಿಯ [illegible] ಕೆಲಸವೆಯುಳ್ಳ ಕಟ್ಟಿಗೆ [illegible] ಹಣವ [illegible] ಕಟ್ಟುವ [illegible] ಸರಕಾರದ [illegible] ನಮ್ಮ ತೋಟದಲ್ಲಿ [illegible] ಗಳನ್ನು ಹೆಚ್ಚು ಬೆಳೆಸುವಾ [illegible] ಯೊಳಗ ನಮ್ಮ ತಿಜೋರಿಗಳನ್ನು [illegible] ಈ ನಾಲ್ಕು [illegible] ಬೇಕಲಿ [illegible] ಮನಗಳನ್ನು [illegible] ಅಷ್ಟು ಇಲ್ಲಿಂದು ಹೇಳಿದರೆ ಒಂದೆ [illegible]

ಲೋಭ [illegible] ಹೇಳುವ [illegible] ಅಸ್ತು [illegible] ಬಿಟ್ಟು ಪರದೇಶಕ್ಕೆ ಹೋಗುವ [illegible] ಹತಭಾಗಿಗಳೇ [illegible] "Home Sweet Home" ಎಂಬ [illegible] ಸಂಗೀತದ [illegible] ಈ ವಿಚಾರ [illegible] ದೇಶಗಳಲ್ಲಿ [illegible] ರಾಜ್ಯವಷ್ಟೆಯು [illegible] ತಮ್ಮ ಕಾರ್ಯಭಾರವನ್ನು [illegible] ಶಕ್ತಿ ಮಾಡಿ [illegible] ಪ್ರಾಂತದ [illegible] ವನ್ನು [illegible] ಹಳ್ಳಿಗಳಿಗೆ ನಮ್ಮ ಜಿಲ್ಲೆಯ [illegible] ಅವರ [illegible]

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

ಈ ತಾಲೂಕ ಪಿಕೆಟಿಂಗ ಕೆಲಸ [illegible] ಅಳವಳಿ [illegible] ಜನರು, ಹರಕಂತ್ರ ಜನರು ಹೊನ್ನಗದ್ದೆಯ ಕುಡುಕರ ಪ್ರತಿಜ್ಞೆ ಮಾಡಿ ಮದ್ಯಪಾನವನ್ನು ವಿರೋಧಿಸಿದರು. ಸ್ವಯಂಸೇವಕರ ಮತ್ತು [illegible] ಪ್ರಯತ್ನಗಳು ಸತತ ನಡೆದಿವೆ. ಅವರೆಲ್ಲರನ್ನು ಅಭಿನಂದಿಸುವೆವು.

ಈ ತಾಲೂಕ ಕಾಂಗ್ರೆಸ ಕಮಿಟಿ ಕೂಡಿ [illegible] "ಪರದೇಶಿ ವಸ್ತ್ರ ತರಿಸಿದ್ದಾ [illegible] ತರಿಸಬಾರದೆಂದು ಪ್ರಸ್ತಾವ ತೆಗೆದು [illegible] ಪರದೇಶಿ ವಸ್ತ್ರಕ್ಕೆ ಬಹಿಷ್ಕಾರ [illegible] ಮಾಡಲ್ಪಟ್ಟಿತು.

[illegible] ಮಾಡಿದ ಪ್ರಕ [illegible] ಧ್ಯಕ್ಷರು [illegible] ತುರಂಗಕ್ಕೆ ಸಪ್ಪಂದ [illegible] ಸಾಕ್ಷಿ [illegible]

[illegible] ಸ್ವರಾಜ್ಯ [illegible] ಕೂಡಿಸುವ ಕೆಲಸವು [illegible] ಸಂಖ್ಯೆ ೨೦೦ [illegible]

ಶಿರ್ಸಿ— [illegible] ಮರಾಠ [illegible] ಹಿಂದೆ ಬಿದ್ದಿರುವವರನ್ನು [illegible] ದೇಶಭಕ್ತರಾದ [illegible] ದೇವರಾವ [illegible] ತಿಮ್ಮಯ್ಯ ಹೆಗಡೆ [illegible] ಅಲ್ಲಿಗೆ ಹೋಗಿ ಅವರನ್ನು ತಮ್ಮ ವಕ್ತೃತ್ವದಿಂದ [illegible] ಜವನಾದರೂ ಬತ್ತಿ [illegible] ಶ್ರೀ [illegible] ಶಾಸ್ತ್ರಿ [illegible] ಅಲ್ಲಿಯ [illegible] ಬ್ರಾಹ್ಮಣೇತರ [illegible] ವೆಂಬ ಗಿಡವು ಪುನಃ ತಲೆ ಎತ್ತದಂತೆ ಮಾಡಿರುವರು.

ಪಿಕೆಟಿಂಗ ಕೆಲಸದಲ್ಲಿ [illegible] ದತ್ತಾತ್ರಯ [illegible] ವ [illegible] ಬಾಲಕ [illegible] ಮತ್ತು [illegible] ಹಸನ ಸಾಹೇಬ (ಮಾಸ್ತರ [illegible] ಸಾಹೇಬ) (ಬನವಸಿ) [illegible] ಅಭಿನಂದನೀಯವು.

ಧಾರವಾಡದ [illegible] ನಿರಪರಾಧಿ [illegible] ಮೇಲೆ [illegible] ಯೊಳಗಿನ [illegible] ಒಂದಾಗಿ [illegible] ಕಾಲದಲ್ಲಿ [illegible] ದೇವರಾವ [illegible] ಸಮಯೋಚಿತ [illegible] ಅಬ್ಕಾರಿ ನಿಷೇಧಕ [illegible] ವಿರುದ್ಧವಾದ [illegible] ಬ್ರಾಹ್ಮಣೇತರ [illegible] ಸರಕಾರದ [illegible] ಬಂಧ [illegible] ಅವರು [illegible] ಸಹಕಾರದ [illegible] ಸ್ವೀಕರಿಸುತ್ತಿರುವರು. [illegible] ಬ್ರಾಹ್ಮಣೇತರರು ಮಾತ್ರ ಸ್ವಾರ್ಥಸಾಧಕರ [illegible] ಸರಕಾರದ [illegible] ಸಹಕಾರ [illegible] ಹಾಸ್ಯಾಸ್ಪದವೇ [illegible] ಧಾರವಾಡದ [illegible] ನೋಡಿ [illegible] ಬ್ರಾಹ್ಮಣೇತರ [illegible] ಸ್ಥಾನದಲ್ಲಿ [illegible] ೩೦–೪೦ [illegible] ಜನರ ಸರದ [illegible]

...ಳಾಗಿದ್ದು ನಿಮ್ಮ ಹಿತದ ಮಾರ್ಗವಲ್ಲವೇ? ಇನ್ನು ನಾವಾದರೂ ಅವರನ್ನು ಅನುಸರಿಸಲಿಕ್ಕೆ ಸಿದ್ಧರೇ ಇದ್ದೇವೆ. ನಮ್ಮನ್ನು ಆ ಸ್ಥಿತಿಗೆ ಮುಟ್ಟಿಸುವ ಇಚ್ಛೆ ಇದ್ದರೆ, ಸರಾಯಿಯನ್ನು ಯಥೇಷ್ಟವಾಗಿ ಕುಡಿಯಿರಿ. ಇಲ್ಲದಿದ್ದರೆ ಅದನ್ನು ಮುಟ್ಟಲಿಕ್ಕಿಲ್ಲೆಂತ ದೃಢನಿಶ್ಚಯ ಮಾಡಿರಿ. ಹೀಗೆ ಮಾಡುವದರಿಂದ ನೀವು ಸ್ವಾರ್ಥಪರಮಾರ್ಥಗಳೆರಡನ್ನೂ ಸಾಧಿಸಿದಂತಾಗುವದು. ಯಾಕೆಂದರೆ ಅದರಿಂದ ನಿಮ್ಮ ಕೈಯಲ್ಲಿ ನಾಲ್ಕು ದುಡ್ಡು ಉಳಿದ[illegible] ಕಾಲುಕಡಿ ತುಟ್ಟಿಯಾದರೂ [illegible] ಹೋಗುವ ಪ್ರಸಂಗವು ನಿಮ್ಮಮೇಲೆ ಬರದೆ [illegible] ದಂಥ ಅನಾಹುತಗಳೂ ತಪ್ಪುವವು.

ನಮ್ಮ ಮುಹಮ್ಮದೀ ಬಂಧುಗಳಿಗೆ ಪ್ರಾರ್ಥನೆಯ ವೇಳೆಯಲ್ಲಿ ತೊಂದರೆಯಾಗಬಾರದೆಂದು, ಹಿಂದೂ [illegible] ಮಸೀದೆಗಳ ಮುಂದಿನಿಂದ ಹೋಗುವಾಗ [illegible] ವಗೈರೆ ಬಂದಿಸುವ ವ್ಯವಸ್ಥೆ ಮಾಡಿರುವದು [illegible] ಪ್ರೀತಿಗೆ ಕಾರಣವಾಗಿದೆ.

ಕುಮಟೆಯ ಕೀರ್ತನಕಾರರಾದ ಶ್ರೀ ಚಿತ್ರಿಗಿ [illegible] ರ ಎರಡು ಕೀರ್ತನಗಳಾದವು. ಅವರ ಕೀರ್ತನೆಯು ಈಗಿನವರಿಸ್ಥಿತಿಗನುಸರಿಸಿದ್ದರಿಂದ ಸರ್ವಾಂಗಸುಂದರವಾಗಿತ್ತೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಯೋಗ್ಯ ಅನುಕೂಲತೆಗಳು ಒದಗಿ ಬಂದಲ್ಲಿ, ಅವರು ಕಾನಡಾ ಜಿಲ್ಲೆಯ ಕೀರ್ತನಕೇಸರಿಗಳಾಗಿ [illegible] ಅನೇಕ [illegible] ಗಳನ್ನು [illegible] ಇಲ್ಲಿಗೆ ಬಂದು ಜನರಿಗೆ ತಮ್ಮ ಕೀರ್ತನದ ಲಾಭವನ್ನು ಮಾಡಿಕೊಟ್ಟದ್ದಕ್ಕಾಗಿ, ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು. [illegible] ಕುಂಭಕರ್ಣ [illegible] ಬಕಾಸುರರನ್ನು [illegible] ವದರಲ್ಲಿ ತಮ್ಮ [illegible] ಸಾಮರ್ಥ್ಯವನ್ನೆಲ್ಲ [illegible] ರುವ ಇತರ ಹರಿದಾಸರು ಇವರ ಅನುಕರಣವನ್ನು ಮಾಡಿದರೆ, ಎಷ್ಟೋ ರಾಷ್ಟ್ರಕಾರ್ಯ [illegible]

ಸರಾಯಿ ಅಂಗಡಿಗಳನ್ನು ತಮ್ಮ ಹದ್ದಿನೊಳಗಿಂದ ಹೊರಗೆ ಹಾಕಬೇಕೆಂಬದಾಗಿ ಮುನಿಸಿಪಾಲಿಟಿಯಲ್ಲಿ ಒಂದು ಠರಾವು ಬರತಕ್ಕದ್ದಿದೆ. ಇದೊಂದು ಪರೀಕ್ಷೆಯ ಕಾಲವೇ.

ಮುನಿಸಿಪಲ್ ಇಂಗ್ಲೀಷ ಶಾಲೆಯ [illegible] ಕರಾದ [illegible] ಹೊದ್ದೆ ಇವರ ಪಿಕೆಟಿಂಗದಲ್ಲಿ ಕೈ ಹಾಕಿದ್ದಕ್ಕಾಗಿ [illegible] ಬೋರ್ಡಿನವರು ಅದಕ್ಕೆ ಆಕ್ಷೇಪವನ್ನು ತೆಗೆದುಕೊಳ್ಳಲು, ಕಮಿಟಿಯಲ್ಲಿ [illegible] ಮದ್ಯಪಾನ ನಿಷೇಧಕ ಚಳವಳಿಯು [illegible] ಕೀಯ [illegible] ವಲ್ಲದ್ದರಿಂದ [illegible] ಪರವಾನಗಿ ಕೊಟ್ಟದ್ದವೆಂತಲೂ ಇಷ್ಟೇ ಅಲ್ಲ [illegible] ರು ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸರಾಯಿ ಕುಡಿಯುವ [illegible] ಉಪದೇಶಿಸುವ [illegible] ಕರು [illegible] ತಪ್ಪಾಗುವದೆಂತ ಹೇಳುವದು ತೀರ ಹಾಸ್ಯಾಸ್ಪದವಾಗಿರುವದರಿಂದ ಈ ವಿಷಯದಲ್ಲಿ ಅವರ [illegible] ಆತಂಕ ಮಾಡುವದೆಂದರೆ ನ್ಯಾಯದೇವತೆಯ [illegible] ಮಾಡಿದಂತಾಗುವದೆಂದು [illegible] ಗಳನ್ನು [illegible] ಜನರು [illegible] ಗೆ ಮಾಡಿ ಬಿಟ್ಟಿತು. ಇನ್ನು ಅದರಲ್ಲಿ [illegible] ಜನರು ನ್ಯಾಯದೇವತೆಯನ್ನೂ ಮನೋದೇವತೆಯನ್ನೂ [illegible] ಜನರೆಲ್ಲ ನಿರೀಕ್ಷಿಸುತ್ತಿರುವರು.

ಧಾರವಾಡದಲ್ಲಿ ತನ್ನ ವ್ಯವಸಾಯ [illegible] ಮೆ [illegible] ದೇಶಭಕ್ತ [illegible] ಕೃಷ್ಣರಾವ ಮುದ್ವೇಡಕರ [illegible] ಬಗ್ಗೆ [illegible] ಗೆ [illegible] ನಮ್ಮ [illegible] ಹೊಂದಿರುವ [illegible] ಕ್ಷೇತ್ರದವರ [illegible] ಯರ್ಥವೇನು? [illegible] ಮಾಮಲೇದಾರ [illegible] ನಮ್ಮ [illegible] ಹೀಗೆ [illegible] ಮನೆಗಳ ಮೇಲೆ [illegible] ಪೋಲೀಸರ [illegible] ತಿಲಕ [illegible] ಕರಶಂಡ [illegible] ಅವರನ್ನು [illegible] ಶ್ರೀಪಾದ [illegible] ಅಲ್ಲಿಗೆ [illegible] ಸ್ವಾಮಿ [illegible]

ನೆಕಸ್ತ ಪೋಲೀಸರೊಂದಿಗೆ ಬಂದು ದಾಖಲಾದರು. ಕಂಟ್ರಾಕ್ಟರ ಸಾಹೇಬರೂ ತಮ್ಮ ಸೇವಕರೊಂದಿಗೆ ಹಾಜರಾದರು. ಇವರು ಒಮ್ಮೆ ತಮ್ಮ ಬಳಿಯಲ್ಲಿ ಪೋಲೀಸರಿದ್ದು ದೂರು ವದರಿಂದ, ತಮ್ಮ ಮನೆಯ ಹತ್ತರ ಪಿಕೆಟಿಂಗಕ್ಕಂತ ಯಾರೂ ಬರಕೂಡದೆಂತಲೂ ಇನ್ನೊಮ್ಮೆ ಹಿಂದೂ ಜನರು ಎರಡೂ ಅಡ್ಡಿ ಇಲ್ಲ ಮುಸಲ್ಮಾನರನ್ನು ಮಾತ್ರ ಬರಗೊಡಬಾರದೆಂತಲೂ ಹೇಳಿದರು. ಅದಕ್ಕೆ ಅಬ್ದುಲ್ ಸನ್ಮದ ಸಾಹೇಬರವರು ಕಂಟ್ರಾಕ್ಟರ ಸಾಹೇಬರಿಗೆ ನಿಮ್ಮ ಸೂಚನೆಯ ಮೇಲಿಂದಲೇ ನೀವು ಸರಾಯಿ ಅಂಗಡಿಯನ್ನು ಮನೆಯಲ್ಲಿ ಮಾಡುವದು ಸಿದ್ಧವಾಗುತ್ತದೆ. ಹೀಗಿದ್ದು ಕುತೂಹಲರು ಮಾತ್ರ ಪೋಲೀಸರಿಂದ ಬಳಿಯಲ್ಲಿ ಎರಡಕ್ಕೂ ಅಡ್ಡಿ ಇಲ್ಲ ಮತ್ತು ಊರೊಳಗಿನ ಸಾಮ್ರಾಜ್ಯದ ಬಗ್ಗೆ ಮಾತ್ರ ಆಕ್ಷೇಪವೇ? ಎಂದು ಹೇಳಿ, ಮಾಮಲೇದಾರ ಸಾಹೇಬರಿಗೆ ಕಂಟ್ರಾಕ್ಟರನ ಸೇವಕರ ವರ್ತನೆಯನ್ನು ಮನದಟ್ಟಿಸಲು, ಈ ಮೊದಲು ಓ ಜನರಮೇಲೆ ಫಿರ್ಯಾದಿ ಕೊಟ್ಟಿರುವ ಸೇವಕರನ್ನು ಅವರಮೇಲೆ ಕೈ ಎತ್ತಿಕೊಂಡು ಆವೇಶದಿಂದ ಹರಿ ಹೋಗಲು, ಮಾಮಲೇದಾರ ಸಾಹೇಬರಿಗೆ ಪ್ರತ್ಯಕ್ಷ ಅನುಭವಕ್ಕೆ ಬಂತು. ಇದು ಒಬ್ಬ ವ್ಯಕ್ತಿಯ ವಿಷಯವಾಯಿತು. ಹಾಗೆ ಮತ್ತೊಬ್ಬ ಸಾಮಾನ್ಯ ಗೃಹಸ್ಥರು ಹೇಳಿದ್ದೇನೆಂದರೆ, ಇಂಥಾದ್ದೇ ಮತ್ತೊಂದು ವ್ಯಕ್ತಿಯು ಸರಾಯಿಯ ಬಾಟ್ಲಿಯನ್ನು ತೆಗೆದುಕೊಂಡು ಹೋಗುತ್ತಿರಲು ನಮ್ಮ ಪೈಕಿ ಒಬ್ಬ ಸ್ವಯಂಸೇವಕನು ಹಿಂದಿಂದ ಸ್ವಲ್ಪ ದೂರ ಹೋಗಲು ಅವನು ಬಾಟ್ಲಿಯನ್ನು ಧಾರಾಳ ಮಾಡಲು ಹಿಂಬಾಲಿಸಿ ಹೋದವನು ಮೂರ್ತಿಯ ದರ್ಶನ ಲಾಭವನ್ನು ಪಡೆದನಿಷ್ಟೇ ಅಲ್ಲ, ಮೇಲಿಂದ ಒಂದು ಸಲಾಮು ಹೊಡೆದು, ಸುಮ್ಮನೇ ಹೊರಟು ಬಂದಿರುವನು. ಈ ರೀತಿಯಲ್ಲಿ ನಾವು ಎಷ್ಟು ಶಾಂತ ರೀತಿಯಿಂದ ಪಿಕೆಟಿಂಗ ನಡಿಸುತ್ತಿದ್ದರೂ, ನಮ್ಮ ಮೇಲೆ ಇಲ್ಲದ ಆರೋಪಗಳು ಬರಹತ್ತಿವೆ. ಈ ಸುದ್ದಿಯನ್ನು ಕೇಳಿ ಎಲ್ಲರೂ ಬೊಬ್ಬೆಯಿಡುತ್ತಾರೆ. ಮತ್ತು ಮರುದಿವಸವೇ ಕಮೀಶನರ ಸಂಯೋಗದಿಂದ ಇತ್ತೀಚಿನ ಅನ್ಯೋನ್ಯ ಸೇವಕನ ಕಲ್ಲು ಹೊಡೆದವನೆಂಬಬಗ್ಗೆ ಸಂಶಯವಾಯಾಗಿರುತ್ತದೆ. ಇದರ ಮೇಲಿಂದಂತೂ, ಪಿಕೆಟಿಂಗ ಮಾಡುವವರು ತೀರ ನಿರುಪದ್ರವಿಗಳೆಂದೂ, ಅವರಮೇಲೆ ಬಂದ ಆರೋಪಗಳೆಂದರೆ ಈ ತರದ ಬಂದೋಬಸ್ತಿಯೊಳಗಿನ ಮಾತುಗಳೆಂತಲೂ, ಮಾಮಲೇದಾರ ಸಾಹೇಬರಿಗೆ ಖಾತ್ರಿಯಾಗಿರುವದು ಸಹಜವದೆ. ಪ್ರಾಣವು ಮಾತ್ರ ಸೋತಹೋಗಿದೆ.

ಪಿ. ಓ. ಶ್ರೀಮಿಮುತ್ತೂರ ಸಾಹೇಬರು ಬಂದು ಪಿಕೆಟಿಂಗದಬಗ್ಗೆ ಮಾಹಿತಿ ತೆಗೆದುಕೊಂಡಿರುವರು.

ಇಷ್ಟು ದಿವಸಗಳವರೆಗೆ ಬಹಿರಂಗವಾಗಿ ಲೂಟಮಾಡಿ ತೃಪ್ತನಾದರೂ, ತನ್ನನ್ನು ಕೇಳುವವನೇ ಇಲ್ಲೆಂಬ ಹೆಮ್ಮೆಯಿಂದ ಜುಗಾರಿನ ಪಾರಿಯು ಪೋಸ್ಟುಗಳಂತಾಗಿ ಸಂತೆಯಂಥ ಸ್ಥಳಗಳಲ್ಲಿ ಒಂದು ಅದೇಷ್ಟವಾಗಿ ವಿಹರಿಸಿ ಪೊಟ್ಟೆಮೊಟ್ಟೆಗಳನ್ನು ತುಂಬಿಕೊಂಡು ಕೂತಿರುವ ಮ ಒಬ್ಬ ಮನುಷ್ಯನೇ ೫೦ ರೂಪಾಯಿಯ ಕಾಣಿಕೆಯನ್ನು ಕೊಟ್ಟು ತಲೆಯಮೇಲೆ ಕೈ ಇಟ್ಟುಕೊಂಡು ಹೋದನಂತೆ! ಇದ ವ್ಯಸನಿಗಳ ನಾಶಾಯಿತು ಇನ್ನು ಭೋಳೆಸ್ವಭಾವದ ಹಳ್ಳಿಹಾತದ ಜನರೂ, ಅಜ್ಞಾನಿಗಳಾದ ಬಾಲಕರೂ, ಇದರ ಮೋಹಕ್ಕೆ ಒಳಗಾಗಿ, ದೀಪದಮೇಲೆ ಬೀಳುವ ಹುಳಗಳಂತೆ ನಷ್ಟಕ್ಕೊಳಗಾಗುತ್ತಿರುವರು. ಇತ್ತ ಸ್ಥಾಪಿತ ಅಧಿಕಾರಿಗಳಿಗೆ ಇದರ ಪರಿವೆಯೇ ಇಲ್ಲವೆಂತ ಕಾಣುತ್ತದೆ. ಉಪಾಯವಿಲ್ಲ. ಬೇಲಿಯೇ ಎದ್ದು ಹೊಲ ಮೇಯ ಹತ್ತಿದರೆ, ಕಾಯುವವರಾರು?

ಕಾರವಾರ— ಇಲ್ಲಿಯ ಮುನಸಿಪಾಲಟಿಯ ಹೇ॥ ಆಫೀಸರರಮೇಲೆ ಸಾಯಕಲ್ ಹಿಡಿದಬಗ್ಗೆ ನಡೆದ ಖಟ್ಲೆಯ ನಿಕಾಲೆಯನ್ನು ಮಿ ಕಿಣಿ ೧ ನೇ ವರ್ಗದ ಮೆಜಿಸ್ಟ್ರೇಟರು ಹೋದ ೪ ನೇ ತಾರೀಕಿಗೆ ಕೊಟ್ಟರು. ಫಿರ್ಯಾದಿ ಪಕ್ಷದ ಪುರಾವೆಯು ಚಲೋ ಸಮಾಧಾನಕರವಲ್ಲೆಂಬ ಕಾರಣಮೇಲೆ ಆರೋಪಿಗೆ ಬಿಟ್ಟುಕೊಟ್ಟರಷ್ಟೇ. ಆದರೆ ಹೇ॥ ಆಫೀಸರರ ವರ್ತನದಮೇಲೆ ಬಹಳ ಟೀಕೆ ಮಾಡಿರುತ್ತಾರೆ. ಈರೀತಿ ನೋಡಬೇಕು ಕೆಲವು ನಂಬರ ತೀರಿಸುವ ಕಾಯಿದ್ಯೇ ಕೃತ್ಯವನ್ನು ಒಡಿಗೆಟ್ಟು, ಎಕದಮ್ ಕೇಶ ಇನ್ಸ್ಪೆಕ್ಟರನ ಸಾಯಕಲ್ಲನ್ನು ಹಿಡಿದದ್ದು ತೀರ ಬೇಕಾಯಿದೇಶೀರವಿರುತ್ತದೆಂತಲೂ, ನಂಬರ ಕೊಡುವದೇ? ಜವಗಿ ಅವರ ಹೇತು ಇದ್ದರೆ, ೫ ಮಿನಿಟುಗಳಿಗಿಂತ ಹೆಚ್ಚು ಸಾಯಕಲ್ ನಿಲ್ಲಿಸುವದು ಜರೂರಿದ್ದಿಲ್ಲೆಂತಲೂ, ಹೀಗಿರುತ್ತಾ ಸದ್ರಿ ಸಾಯಕಲ್ಲನ್ನು ಹಿಡಿದದ್ದು ಅವರ ಕಾರಭಾರದಮೇಲೆ ಫಿರ್ಯಾದಿಯು ತಂದೆಯಾದ ಕೇಶ ಅರವ ಸಾಹೇಬರು ತಮ್ಮ 'ವಿಚಾರಿ' ಪತ್ರದಲ್ಲಿ ಮಾಡಿದ ಟೀಕೆಯಿಂದ ಅವರಲ್ಲಿ ಉದ್ಭವಿಸಿದ ದ್ವೇಷದ ಫಲವೆ ಇರುವದೆಂತಲೂ ಈರೀತಿ ಅವರ ಬೇಕಾಯಿದೇಶೀರ ವರ್ತನದಿಂದ ಇಲ್ಲಿಯ ಮುನಸಿಪಾಲಟಿಯ ಅವಸ್ಥೆಯು ಸುರತ ಮುನಸಿಪಾಲಟಿಯಂತೆ ಆಗುವ ಸಂಭವವದೆ ಎಂತಲೂ ವಗೈರೆ ವಗೈರೆ ಮೆಜಿಸ್ಟ್ರೇಟರು ತಮ್ಮ ಉದ್ದವಾದ ಜಜ್ಜಮೆಂಟನಲ್ಲಿ ಬರೆದಿದ್ದಾರೆ. 'ಚಾಣರಿಗೆ ಕಬ್ಬುಗಳ ಪ್ರಹಾರ' ಎಂಬಂತೆ, ಈ ಖಟ್ಲೆಯಲ್ಲಿ ಮೆಜಿಸ್ಟ್ರೇಟರು ಆರೋಪಿಗೆ ಉಪದೇಶಮಾಡಿದ ಮಾರ್ಗದ ಸಾರವಂತೆ ತಿಳುಕೊಂಡಿರಬಹುದಾಗಿ ತೋರುತ್ತದೆ. ಇಲ್ಲಿ ಸಾಯಕಲ್ಲನ್ನು ಈರೀತಿ ಹಿಡಿದಬಗ್ಗೆ ಹೇ॥ ಆಫೀಸರರಾದ ಮಿ ಪಡುಕೋಣ ಇವರಮೇಲೆ ಫಿರ್ಯಾದಿ ಕೊಡಿಸುವ ಧೈರ್ಯ ತೋರಿಸಿ ಅವರ ಆದರದಲ್ಲಿ ಅವರ ಅರೇರಾವಿ ವರ್ತನವನ್ನು ಬೈಲಿಗೆ ತಂದಬಗ್ಗೆ ಇಲ್ಲಿಯ ನಾಗರೀಕರು ಆದಮ ಸಾಹೇಬರನ್ನು ಅಭಿನಂದಿಸುವರು. ಹಾಗೆಯೇ ನಿರ್ಭೀಡೆಯಿಂದ ಆರೋಪಿಯ ವರ್ತನವನ್ನು ನಿಷೇಧಿಸಿದ ಬಗ್ಗೆ ಮಿ ಕಿಣಿಯವರನ್ನು ಅಭಿನಂದಿಸುವರು. ಈ ಖಟ್ಲೆಯ ಪ್ರಕರಣವನ್ನೆಲ್ಲಾ ಉಪಸುವದರಿಂದ್ಧಾರೆಂತ ವಿಚಾರಿಪತ್ರದಲ್ಲಿ ಬರೆದನ.

ಹೋದ ೯ ನೇ ತಾರೀಕಿಗೆ ಇಲ್ಲಿಯ ತಾಲೂಕ ಕಾಂಗ್ರೆಸ ಕಮಿಟಿಯು ಕೂಡಿದಾಗ ೧೧೦೦ ಮೇಲೆ ಕಾಂಗ್ರೆಸ ಸಭಾಸದರೂ, ಸುಮಾರು ೧೫೦೦ ರೂ ಫಂಡು ಕೂಡಿತೆಂತಲೂ ತಿಳಿಯುತ್ತದೆ. ಸ್ವಯಂಸೇವಕರ ಅಭಾವದಿಂದ ಈರೀತಿ ನಮ್ಮ ತಾಲೂಕಿನ ಪಾಲಿಗೆ ಬಂದ ರಕಮು ವ ಸಭಾಸದರ ಸಂಖ್ಯೆಯು ಪೂರ್ಣವಾಗದೆ ಇರುತ್ತದೆ. ಹೊರ ಗ್ರಾಮಗಳ ಕಾರಣಗಳಿಂದ ಅಲ್ಲ. ಯಾಕೆಂದರೆ ಇನ್ನೂ ಈ ತಾಲೂಕಿನ ಕೆಲವು ಗ್ರಾಮಗಳನ್ನು ಬಿಟ್ಟು ಉಳಿದ ಹಳ್ಳಿಗಳಲ್ಲಿ ಈವಿಷಯ ಪ್ರಯತ್ನವೇನೂ ನಡೆಯಲಿಲ್ಲ.

ಸಿರ್ಸಿಯ ಬಿಸಲಗೊಪ್ಪ ಹೆಗಡೆಯವರಮೇಲೆ ನಡೆದ ಖಟ್ಲೆಯಲ್ಲಿ ಮಿ ಕೊಯಿಮುತ್ತೂರ ಸಾಹೇಬರು ಇಬ್ಬರನ್ನು ಬಿಟ್ಟುಕೊಟ್ಟು ಇಬ್ಬರಮೇಲೆ ಚಾರ್ಜ ಹಾಕಿದರೆಂತ ತಿಳಿಯುತ್ತದೆ.

ಅಂಕೋಲಾ— ಹೋದ ೪ ನೇ ತಾರೀಕಿಗೆ ಇಲ್ಲಿಯ (೧) ಜವಳಿಮುಕಾನದಾರ ರಾಮಕೃಷ್ಣ ವಿಠ್ಠಲಭಟ (೨) ಗಂಗಾನಾಥ ಮುಕುಂದಪ್ಪ (೩) ಗೋವಿಂದ ಕೇಶವ ಕಾಮತ (೪) ರಾಮಕೃಷ್ಣ ಶ್ರೀನಿವಾಸ ಭಟ (೫) ಕಾಮತ್ ಪಿನ್ ಪೂಕ್ಸಾ ಪಡತಿ ಈ ೫ ಜನರಮೇಲೆ ಶಾಂತತೆ ಭಂಗಮಾಡಿದ ಬಗ್ಗೆ ಪೋಲೀಸರು ಇಲ್ಲಿಯ ಮೆಜಿಸ್ಟ್ರೇಟ ಕೋರ್ಟನಲ್ಲಿ ಖಟ್ಲೆ ಮಾಡಿರುವರಾಗಿಯೂ, ಅದು ಇದೇ ೧೬ ನೇ ತಾರೀಕಿಗೆ ಇಟ್ಟಿರುವದಾಗಿಯೂ ತಿಳಿಯುತ್ತದೆ. ಇದು ಮೇಲಿನ ೫ ನೇ ಕಾಮತ್ನು ೧ ನೇ ರಾಮಕೃಷ್ಣ ವಿಠ್ಠಲ ಭಟ್ಟರಿಗೆ ತೋರಿಸಿದ ಶಾಂತತಾಭಂಗವಾಗುವಂಥ ವರ್ತನದಿಂದ ಉದ್ಭವಿಸಿರುವದು. ಈಪ್ರಕಾರ ಮಾಡಿದ ವರ್ತನದ ಬಗ್ಗೆ ಇನ್ನುಮುಂದೆ ಹಾಗೆ ಮಾಡದೆ ಹಾಗೆ ಸದ್ರಿ ಕಾಮತ್ನಕಡೆಯಿಂದ ಜಾಮೀನು ತಕ್ಕೊಳ್ಳಬೇಕೆಂತ ಸದ್ರಿ ರಾಮಕೃಷ್ಣ ಭಟ್ಟರು ಹೋದ ೫ ನೇ ತಾರೀಕಿಗೆ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಲ್ಲಿ ಕೊಟ್ಟ ಅರ್ಜಿಯಮೇಲಿಂದ ಸದ್ರಿ ಪ್ರಕರಣವನ್ನು ಅವರು ಅಲ್ಲಿಯ ೧ ನೇ ವರ್ಗದ ಮೆಜಿಸ್ಟ್ರೇಟರಾದ ಮಿ ಕಿಣಿಯವರ ಕಡೆಗೆ ವಿಚಾರದ ಬಗ್ಗೆ ಕಳುಹಿಸಿಕೊಟ್ಟರೆಂತಲೂ, ಮಿ ಕಿಣಿ ಇವರು ಸದ್ರಿ ಕಾಮತ್ನು ೫೦೦ ರೂ ಜಾಮೀನು ಯಾಕೆ ಕೊಡಬಾರದಾಗಿ ಬ

(☞ ಈ ಹೊತ್ತಿನ ಪುರವಣಿ ನೋಡಿರಿ.)

ಪ್ರಕಟಣೆ.

1934 ನೇ ಇಸವಿಯಲ್ಲಿ ಪ್ರಾರಂಭವಾಗುವ ಪರ್ಯಾಯದಲ್ಲಿ ಫಲಿಮಾರು ಮಠದ ಶ್ರೀಪಾದಂಗಳವರು ಮಾಡುವ ಉಡುಪಿ ಶ್ರೀ ಕೃಷ್ಣದೇವರ ಪೂಜೆಯ ಸಹಾಯಾರ್ಥವಾಗಿ "ಶ್ರೀ ಕೃಷ್ಣ ಸೋಡ್ತಿ" ಎಂಬ ಹೆಸರಿನ ಒಂದು ಲೋಟರಿ ಯಾನೆ ಸೋಡ್ತಿಯನ್ನು ಏರ್ಪಡಿಸಿರುವುದು ಟಿಕೇಟಿನ ದರ ಒಂದರ ಒಂದು ರೂಪಾಯಿ ಆಗಿರುತ್ತದೆ. ಅದರಲ್ಲಿ 1 ನೇ ಇನಾಂ ರೂಪಾಯಿ 2,000-0-0 ರದ್ದು, 2 ನೇ ಇನಾಂ ರೂಪಾಯಿ 1,000-0-0 ರದ್ದು ರೂಪಾಯಿ 100-0-0 ರ ಇನಾಮುಗಳು ೨, ರೂಪಾಯಿ 10-0-0 ರ ಇನಾಮುಗಳು ನೂರು, ರೂಪಾಯಿ ೨-0-0 ರ ಇನಾಮುಗಳ್. 200 ಎಂತಲೂ ನಿಶ್ಚಯಿಸಿರುವುದು. ಟಿಕೇಟು ಮಾರಾಟಮಾಡುವರಿಗೆ ಧಾರಾಳ ಕಮಿಶನ್ ಕೊಡಲಾಗುತ್ತದೆ. ಆದ್ದರಿಂದ ಎಲ್ಲ ಸುಜನರುಗಳು ತಮ್ಮ ಶಕ್ತಿ ಮೀರಿ ಟಿಕೇಟುಗಳನ್ನು ಪಡೆದು ಶ್ರೀ ಹರಿ ವಾಯುಗಳ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುವವನಾಗುತ್ತೇನೆ. ಎಲ್ಲ ಪತ್ರವ್ಯವಹಾರಗಳನ್ನು ಈ ಕೆಳಗಿನ ವಿಳಾಸಕ್ಕೆ ಮಾಡತಕ್ಕದ್ದು.

ಮ್ಯಾನೇಜರ್ ಸೆಕ್ರೆಟರಿ,

ಶ್ರೀ ಕೃಷ್ಣ ಸೋಡ್ತಿ,

ಕೊಡಿಯಾಲ ಬೈಲ,

ಪೋಸ್ಟ— ಮಂಗಳೂರು ದ ಕ

ಹೊಸ ಜವಳಿ ದುಕಾನು.

ನಮ್ಮಲ್ಲಿ ತರತರದ ಬೊಂಬಾಯಿ, ದೇಶಿ, ಚಿಕ್ಕಗಳು, ಟ್ವೀಲಗಳು, ಕಟಿಂಗ ವಸ್ತ್ರಗಳು ವ ನಮೂನೆವಾರ ದೇಶೀ ಧೋತರ ಜೋಡುಗಳೂ, ಮಹಾತ್ಮಾ ಗಾಂಧಿಯವರ ಟೋಪಿಗಳೂ, ವ ಕೋಟ ಮತ್ತು ಶೃಂಗಾರದ ಸಾರಿಗಳೂ, ಕೊಲ್ಹಾಪೂರ ಗಿರಣಿಯ ನಮೂನೆವಾರ ಸೀರೆಗಳೂ ಕಾಟನ ವಸ್ತ್ರಗಳೂ ಅಮದಾಬಾದ, ನಾಗಪೂರ ಮೊದಲಾದ ದೇಶಗಳ ಧೋತರ ಜೋಡುಗಳೂ, ಶಹಾಪೂರ, ಗದಗ ಹುಬ್ಬಳ್ಳಿಯ ಉತ್ತಮ ಪ್ರತಿಯ ಸೀರೆಗಳೂ, ಇಳಕಲ ನಮೂನೆ ತರವಾರ ಸೀರೆಗಳೂ, ಹುಲಗುಂಟ ಸ್ವಚ್ಛ ದರದ ತರತರದ ನಮೂನೆಯ ತರವಾರ ಸೀರೆಗಳೂ, ಕುಂಚಗಳೂ, ಶೀಲಂ ಮಧುರೆಯ ರುಮಾಲುಗಳೂ, ವ ಜರೀ ವಸ್ತ್ರಗಳೂ ವ ಅಗ್ಗದ ಎಲ್ಲಾ ಊರಿನ ಮಗ್ಗದ ವಸ್ತ್ರಗಳೂ, ಉರವಕೊಂಡ, ಯಮಗನೂರ, ದೇಶಾವರದ ಕಂಬ್ಳೀ ಕಡಾದ ನಮೂನೆವಾರ ಸೀರೆಗಳೂ ಪಶ್ಮಿನ ತರತರದ ಛತ್ರಿಗಳೂ ಮಾಫಕ ದರದಿಂದ ನಮ್ಮಲ್ಲಿ ಹೋಲ ವ ಚಿಲ್ಲರೆ ಸಿಗುತ್ತವೆ. ಬೇಕಾದವರಿಗೆ ಆರ್ಡರ ಕೊಟ್ಟಲ್ಲಿ ಪೂರೈಸುವೆವು.

ಚಿತ್ರಿಗಿ ಗೋಪಾಳ ಸುಬ್ಬಯ್ಯ

ಶ್ಯಾನಭಾಗ,

ಕ್ಲೋತ ಮರ್ಚಂಟ ಎಂಡ ಕಮಿಶನ

ಏಜಂಟ ಕುಮಟಾ

ಲೋಕಮಾನ್ಯವಾದ

ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ರೇಂಡೆಲ ಇಸ್ಟೇಟದ, ಎಲ್ಲಾ ತರದ ಚಹಾ ಮತ್ತು ಊಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯೂಕಲಿಪ್ಟಸ ಆಯಿಲ) ಹೋಲ ವ ಚಿಲ್ಲರೆ ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು. ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ. ಪತ್ರದ್ವಾರ ದರದ ಖುಲಾಸೆ ಮಾಡಿಕೊಳ್ಳಿರಿ,

ವಿ. ಪಿ. ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ ಉತ್ತರ ಕಾನಡಾ

HONAWAR (N. Kanara)

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮ [illegible] ನೇ ಇಸ್ವಿಯು [illegible] ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಮೂವತ್ತು ರೋಗಗಳ ಮನವರಿಕೆಯಾಗಿ [illegible] ನೇ ಇಸ್ವಿಯಿಂದ [illegible] ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳ ಖರ್ಚಾದವು [illegible] ಇಸ್ವಿಯ [illegible] ತಿಂಗಳಿನ [illegible] ಒಂದೇ ತಿಂಗಳಲ್ಲಿ ಒಂಬತ್ತು ಸಾವಿರ ಬಾಟಲಿಗಳು ಖರ್ಚಾದವು ಅಂತು ಈವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಬತ್ತು ಸಾವಿರ [illegible] ಗಳು ಖರ್ಚಾದವು [illegible] ಔಷಧವು [illegible] ಮೌಲ್ಯವಾನ [illegible] ಯಾವತ್ತು ನಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರ ತಮ್ಮ [illegible] ಒಂದು ಬಾಟ್ಲಿ ಇಟ್ಟು [illegible] ಎಂದು ತಿಳಿದು [illegible]

[illegible]

[illegible]

ಕೆನ್ ಇಲ್ಲ ಇದಕ್ಕೆ ಆರು ಆಣೆ [illegible] ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ [illegible] ಇದಕ್ಕೆ [illegible] ಏಂಟು ಆಣೆ [illegible] ನಮ್ಮ ಔಷಧವು ಖೋಟಿ ಹೊರಟರೆ ಪರತ ತೆಗೆದುಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ [illegible] ಟಿಕೇಟ ಲಗತ ಇಡದೆ ಹೊತರ್ ದೊರೆಯಲಿಕ್ಕಿಲ್ಲ ಅನುಮಾನವ [illegible] ಕನ್ನಡ ಮರಾಠಿ [illegible] ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಾರಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ನಿಮ್ಮ ವಿಳಾಸ [illegible] ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್ ಎಂ [illegible] ಸಂಪಾದಕ ಅರ್ಕಶಫಾ

ಹೆಡ್ ಆಫೀಸ [illegible] ಶಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾ[illegible] ಲೋಹ — ಬಹಳ ಶ್ರಮಪಟ್ಟು ಕೆಲ [illegible] ಮಾಡ ವ ಲೇಖಿಕರೂ, ಮತ್ತು ಇಂದ್ರಿಯ [illegible] ಅಜೀರ್ಣ ಎದೆನೋವು [illegible] ಪಳತದಿಂದ ಅಶಕ್ತಿ ಹೊಂದಿದ ಪ್ರಕೃತಿ [illegible] ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, [illegible] ಮತ್ತು ಮುಖದಲ್ಲಿ ಕಾಂತಿ ಗೊಳಿಸುವದ [illegible] ಸೇವಿಸುವ ಲೋಹ ಡಬ್ಬಿ 1 ಕ್ಕೆ 1-12-0 [illegible] 4 12-0

2 ಮಹಾ[illegible] — (ಖಾತ್ರಿ ಗುಣ) [illegible] ದಿವಸದೊಳ್ಳೆ [illegible] ಜ್ವರಗಳ [illegible] ಬಾಟ್ಲಿ 1 ಕೆ 0-8-0

3 [illegible] — [illegible] ಮಕ್ಕಳ [illegible] 1 ಕ್ಕೆ 0 10 0

4 [illegible] ಬಾಟ್ಲಿ 1 ಕ್ಕೆ 0 10 0

5 [illegible] 1 ಕ್ಕೆ [illegible]

ಎಸ್. ಗಣಪಯ್ಯಾ [illegible]

[illegible] ರಥಬೀದಿ

[illegible]

[illegible]

[illegible] ಮತ್ತು ಸಿರಸಿಯಿಂದ [illegible] ಆದಿತ್ಯವಾರ ಗುರುವಾರದ [illegible] ಘಂಟೆಗೆ ಮತ್ತು ಸಿರಸಿಯಿಂದ [illegible] ಹೊರಡುವದು [illegible] ಸಿರಸಿಯಲ್ಲಿ [illegible] ಹೆಚ್ಚು [illegible] ದಿವಸಗಳಲ್ಲಿ [illegible]

[illegible] ಗರು ಸಿರಸಿಯಲ್ಲಿ ಶೇಷಗಿರಿರಾವ [illegible] ಇವರ [illegible] ಮತ್ತು [illegible] ಹತ್ತರ [illegible] ಬಗ್ಗೆ ಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

[illegible] ಭಾಡಿಗೆಯು ದರವಾರ [illegible] ಬೇಕಾದ್ದ [illegible] ಬಹುದು

[illegible]

ಶೇಟಜೀ [illegible], ದುಕಾನ, ಕುಮಟಾ

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडातील अनेक वनस्पतींच्या रसात पौष्टिक औषधीफळांचा रसार्क मिश्र करून, खाली दिलेल्या रोगावर उपयुक्त अशी भस्मे घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने न पुंसकत्व, स्वप्नजन्य व [illegible], लघवीच्यापूर्वी अगर नंतर [illegible] धातुपात नाहीसा करून वीर्य वृद्धि व रक्तशुद्ध होते कितीहि जुनाट [illegible] असो (एक [illegible]) नाश पावत आणि उपदंश मवरी [illegible] विकार नाहीसे होऊन हातपाय, डोळे [illegible] दाह व धातुवि घातक सर्व विकार नष्ट होऊन, शरीर [illegible] बनते, हा बिंदु खाल्ल्यानं उतारवयाच्या [illegible] त्याचा कामविकार मुद्दा प्रज्वलित होऊन [illegible] धाग्नि व शक्ति भरपूर वाढत आणि [illegible] अपायकारक असे गर्भाशयस्थ रोग याचा [illegible] मूळ नाश होतो हे औषध स्त्रियांनी सेवन केल्यास त्यांचे [illegible] कोणत्याहि प्रकारचे विकार न राहता त्या गर्भधारणास योग्य होतात ह्याच्या सेवनाने दिवसातून तीन वेळा जेवले तरी, भूक चांगली लागत जाऊन शौचास साफ होते याचा अनुभव औषध घेतल्यानंतर पहिल्या दिवशी येतो तरी बरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूचे सेवन करून यातील [illegible] पहावी फार दिवसाचा रोग [illegible] असल्यास, पूर्ण गुणास तीन बाटल्या औषध सेवन केले पाहिजे नवीन रोगास एक बाटली औषध सेवन केले असता, गुण येईल एका बाटलीमध्ये १० तोळे औषध असते त्या एका बाटलीची किंमत १ रुपया तीन बाटल्यांची किंमत ३ रुपये एक डझन (१२) बाटल्यांची किंमत १० रुपये याशिवाय [illegible] सर्व निराळा पडेल तीन बाटल्या सेवन करणाऱ्यांनी ३० ताळे औषधाची एक मोठी बाटली मागवून [illegible] थोडे [illegible] पडेल

म्यानेजर,

के एम हनुमान [illegible] कंपनी

जिल्हा बेळगांव [illegible]

ಅತ್ಯುತ್ತಮವಾದ ಮಂಗಳೂರ [illegible] ಮತ್ತು [illegible] ಸಹ್ಯಾದ್ರಿ [illegible], [illegible]

ಪತ್ತೆ:— ಬಿ ದಾಸ, ಕುಮಟಾ

Printed a[illegible] by Kr[illegible] at the S[illegible] K[illegible] Press Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩೯.

ಪತ್ರದ ದರಗಳು:-

ಈ ವರ್ಷದಲ್ಲಿ ಅಗಾವು ರೂಪಾಯಿ 2-0-0.

ವರ್ಷಾಖೇರಿಯಿಂದ ರೂ 2-13-0

ವಿ ಅಂಚೆವೆಚ್ಚ ಸೇರಿ ರೂಪಾಯಿ 2-10-0.

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ:-

ಕನ್ನಡ, ಇಂಗ್ಲಿಷ ಮುಂತಾದ ಯಾವ (ಭಾಷೆಯ) ಜಾಹಿರಾತಿಗಾದರೂ ಮೊದಲನೇ ಸಲಕ್ಕೆ ಸಾಲಿಗೆ 0-1-0.

ಅನಂತರ ಪ್ರತಿ ಸಾಲಿಗೆ 0-2-0

ಹೆಚ್ಚಿನ ಸಲ ಜಾಹಿರಾತು ಹಾಕುವವರೊಡನೆ ವಿಶೇಷ ಸವಲತ್ತುಗಳು ಒದಗಿಸಲ್ಪಡುವವು.

ಜಾಹಿರಾತುಗಳ ಹಣ ಅಗಾವು ಕಳಿಸಲ್ಪಡಬೇಕು.

"सत्पतिहितकर्ता श्रेष्ठतां याति लोके जनपदहितकर्ता त्यज्यते पार्थिवेन्द्रैः इति महति विरोधे वर्तमाने समाने नृपतिजनपदानां दुर्लभः कार्यकर्ता" ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೯ ನೆಯ ಜುಲೈ ಸನ್ ೧೯೨೦ ನೇ ಇಸವಿ]

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿ, ಕಪ್ಪು, ಕೆಂಪು, ಜಾಂಬಳಿ ಬಣ್ಣಗಳ ಕಪ್ಪು ಪಾಕೀಟುಗಳಲ್ಲದೆ ಶಾಯಿ ಸೆಂಪಲಿಗೆ ಒಂದಾಣೆ [illegible] ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್ ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

[illegible]

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಷ್ಯ, ಉಂಚೆ ಕಾಡಿ, ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಕಾಲೋಪಯೋಗಿ ಪುಸ್ತಕಗಳೂ, ಸ್ವದೇಶೀ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,

ಗೋಕರ್ಣ.

ಅತ್ಯಂತ ಬೋಧಪ್ರದ-ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ರೂ (೨) ಸತ್ಯಪ್ರಕಾಶ. ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ ಬೆಲೆ ೧೨ ಆಣೆ

ಪತ್ತೆ— ಬಸವಾರ್ಯ ಬೂದೀಹಾಳಮಠ, ಹೆಡ್ ಮಾಸ್ತರ, ಮುಕ್ಕಾಂ ಅಲೂರ

ಪೋಸ್ಟ— ಅಲೂರ—ಹಾನಗಲ್ಲ, ಜಿ. ಧಾರವಾಡ

ಕಾರ್ಡಸ್ಯಾಜ ಫೋಟೋ.

ಮಹಾತ್ಮಾ ಗಾಂಧೀ, ಕೈ. ಲೋ। ಟಿಳಕ ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ — ೧ಕ್ಕೆ ೬ಪೈ, ಹಜನಕ್ಕೆ ೪ಆಣೆ, ಶೇಕಡಾ ೧ರೂ೧೦ ಟಪಾಲು ಹಾಸಲು ಬೇರೆ ಸೆಂಪಲಗಳು ಬೇಕಾದರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ಟಾರ ಓಫ್ ಕೆನರಾ ಪ್ರೆಸ್ಸ,

ಕುಮಟಾ (ಎನ್. ಕೆನರಾ,)

ಖಾತ್ರಿ] ಅತ್ಯುತ್ತಮ [ಸ್ವಾಲು

ಅತ್ಯುತ್ತಮ ಸ್ವದೇಶೀ ಶಾಯಿ ಗುಳಿಗೆಗಳು ಪರ ಸ್ಟಾಂಪ[INK TABLETS]ಕ್ಕೆ ಖಾತ್ರಿ

ವಿಶೇಷರಿಂದ ತಯಾರಿಸಿದ ನೀಲಿ ಜಾಂಬು ಕೆಂಪು ಹಸಿರು ೧೪ ಶಾಯಿ ಗುಳಿಗೆ ಇರುವ ೧ ಗ್ರೋಸಿನ ಡಬ್ಬಿಗೆ ರೂ ೬ಗಳೂ ೧ ಡಜನ ಗ್ರೋಸಿಗೆ ರೂ ೮ ಸೆಂಪಲಿಗೆ ಅರ್ಧಾಣೆ ಟಿಕೀಟಗಳು ತೆಗೆದುಕೊಂಡರೆ, ತೀರ ಕಡಿಮೆ ದಾರದಲ್ಲಿ ಕೊಡುವೆವು ಮೊತ್ತ ಖರೀದಿದಾರರಿಗೆ ಭರಪೂರ ಕಮೀಶನ ಸಿಗುವದು ೧ ಗ್ರೋಸಿಗಿಂತ ಕಡಿಮೆ ಕೊಳ್ಳುವವರಿಗೆ ಏಜಂಟರು [illegible] ಕಮೀಶನ ಸಿಗುವದು

ದಿ ಸ್ವದೇಶೀ ಇಂಕ ಸ್ಟೋರ್ಸ,

ಶಶೀ, ಕೆನರಾ.

ಬಹು ನೂತನವಾದ ಚಿನ್ನದ ಒಡವೆಗಳನ್ನು ತಯಾರಿಸುವೆವು

ಮಹಾನುಭಾವರೇ ಮೇಲೆ ತೋರಿಸಿದ ಉಂಗುರಗಳೂ, ತರತರದ ಬರಕದಿಂದ ಪೇಟೋಗ್ರಾಮ, ಮತ್ತು ಹಳ್ಳಿ ಕಲ್ಲುಗಳ ಬಾಬತು ಓಲಾ ಕಟ್ಲೇಸ, ಪಚ್ಚೆಗಿರಿ ಕಟ್ಲೇಸ, ಕಾಂಟಾ, ಬುಂಟಿ, ಮೂಗುಬಟ್ಟುಗಳು, ಈ ವಿಸಾ ಫ್ಯಾಶನ ಚೈನುಗಳು, ಮೆಟ್ಲುಗಳು, ನವರತ್ನದ ಪದಕಗಳು ವ ಪೆಂಡ್ಲುಗಳು, ನೂತನವಾದ ಸೂರ್ಯ ಕಾಂತಿ ಹೂವುಗಳು, ಗುಲಾಬಿ ಹೂವುಗಳು, ಸಂಪಿಗೆ ಹೂವುಗಳು, ಮಲ್ಲಿಗೆ ಹಾಳೆಗಳು, ಮುಂತಾದ ಎಲ್ಲಾ ದಾಗಿನೆಗಳು ನಮ್ಮಲ್ಲಿ ಆಗುತ್ತವೆ ಬೇಕಾದವರಿಗೆ ಯೋಗ್ಯ ಚಾರ್ಜಿನಿಂದ ಮಾಡಿಕೊಡುವೆವು

ಸಿತಾರಾಮ ಗೋವಿಂದ ಶೇಟ,

ಕೊಟ್ಟಿಕರ. ಗುರ್ಜರಗಲ್ಲಿ, ಕುಮಟಾ.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಯಬಹುದು ಸವಲತ್ತಿಯ ದರಗಳು ಇಟ್ಟಿರುವೆವು

ನಮ್ಮ ಪತ್ತೆ —

ಗ್ವಾತೋಂಡೇ ಬ್ರದರ್ಸ,

ಮೋಟರ ಡೀಲರ್ಸ, ರಿಪೇರರ್ಸ,

ಕಾರವಾರ.

ಹೊಸ ಶೋಧ! — "ಓಂ" ಹೊಸ ಶೋಧ!!

ಬೇಗ ಬಾರದಿದ್ದರೆ, ಹಣಹೋಗುತ್ತದೆ

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕಸು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳೆ ಪ್ರಯಾಸದಿಂದ, ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಜೊತೆಗೆ ಅಥವಾ ಅದಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಶಕ್ತಿ ಹೆಚ್ಚಿಗೆಯಾಗಿ, ವೀರ್ಯವೃದ್ಧಿಯಾಗುವದು, ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿರದ್ದಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಒದುವದು ಸ್ತ್ರೀಯರು ಸೇವಿಸಿದಲ್ಲಿ ಬಿಳೇಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ, ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧ಳ ತೊಲೆಯ ಡಬ್ಬಿಗೆ ರು ೧ ಆಣೆ೨. ೩ ಡಬ್ಬಿಗಳಿಗೆ ೪ ರು ೮ ಆಣೆ ೬ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ.

ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಪರದೇಶಿ ಅರಿವೆಯ ಬಹಿಷ್ಕಾರ.

ಆರು ಉಪಾಯಗಳು.

ಪರದೇಶಿ ಅರಿವೆಗಳನ್ನು ಬಹಿಷ್ಕರಿಸುವದೇನು ಮುಯ್ಯಿಗೆ ಮುಯ್ಯಿ ತೀರಿಸುವ ಬುದ್ಧಿಯಿಂದ ಪ್ರೇರಿತವಾಗಿಲ್ಲ, ಮಾನವೀ ಜೀವನಕ್ಕೆ ಶ್ವಾಸೋಚ್ಛ್ವಾಸವು ಅವಶ್ಯವಿದ್ದಂತೆ, ರಾಷ್ಟ್ರೀಯ ಜೀವನಕ್ಕೆ ಬಹಿಷ್ಕಾರವು ಅಗತ್ಯವಿರುತ್ತದೆ. ಈ ಸಂಗತಿಗಳನ್ನು ನಾನು ಈಗ ಹೊಸದಾಗಿ ಹೇಳಬೇಕೆಂದಿಲ್ಲ. ಆದ್ದರಿಂದ ಇಂಥ ಬಹಿಷ್ಕಾರವನ್ನು ನಾವು ಅಲ್ಪ ಅವಧಿಯಲ್ಲಿ ಸಾಧಿಸಿದಷ್ಟು ಶ್ರೇಯಸ್ಕರವು. ಇದರ ಹೊರತು ಸ್ವರಾಜ್ಯಸ್ಥಾಪನೆಯ ಸಾಮರ್ಥ್ಯವು ನಮ್ಮಲ್ಲಿ ಉಂಟಾಗಲಾರದು, ಒಂದು ವೇಳೆ ಸ್ಥಾಪಿಸಿದರೂ ಸ್ವರಾಜ್ಯವು ಬಹಳ ಹೊತ್ತು ಬಾಳಲಾರದು. ಈ ಬಹಿಷ್ಕಾರವು ಅಗಸ್ಟ ೧ ನೇ ತಾರೀಖಿನ ಮೊದಲು ಹ್ಯಾಗೆ ಅಮಲಿನಲ್ಲಿ ತರಬಹುದೆಂದು ಆಲೋಚಿಸುವದು ಅವಶ್ಯವಿರುತ್ತದೆ.

ಬಹಿಷ್ಕಾರವು ಶೀಘ್ರವಾಗಿ ಕೊನೆಗಾಣುವ ಕಾರಣದಿಂದ ಕೆಳಗೆ ನಮೂದಿಸಿದ ಸಂಗತಿಗಳನ್ನು ನಾವು ಮಾಡಬೇಕು —

(೧) ಗಿರಣಿಗಳ ಮಾಲೀಕರು ತಮ್ಮ ಲಾಭವನ್ನು ಮಿತವಾಗಿಟ್ಟು, ಹಿಂದೀ ಜನರಿಗೆ ಅವಶ್ಯವುಳ್ಳ ಅರಿವೆಯನ್ನೇ ಪ್ರಮುಖವಾಗಿ ತಯಾರಿಸಬೇಕು.

(೨) ಪರದೇಶಿ ಅರಿವೆಯನ್ನು ಆಮದು ಮಾಡುವ ವ್ಯಾಪಾರಿಗಳು ಅದನ್ನು ನಿಲ್ಲಿಸಬೇಕು. [illegible] ಪ್ರಮುಖ ವ್ಯಾಪಾರಿಗಳು ಹೀಗೆ ಮಾಡಲಿಕ್ಕೆ ಪ್ರಾರಂಭ ಸಹ ಮಾಡಿರುವರು.

(೩) ಗಿರಾಕಿಗಳು ಯಾವದೇ ತರದ ಪರದೇಶಿ ಅರಿವೆಯನ್ನು ಕೊಳ್ಳದೆ ಬರೇ ಖಾದಿಯನ್ನೇ ಶಕ್ಯವಿದ್ದಷ್ಟು ಧರಿಸಬೇಕು.

(೪) ಸುಶಿಕ್ಷಿತ ಗಿರಾಕಿಗಳು ಖಾದಿಯನ್ನೇ ಉಪಯೋಗಿಸಬೇಕು ಮತ್ತು ಗಿರಣಿಯೊಳಗೆ ತಯಾರಾಗುವ ಅರಿವೆಯನ್ನು ಸ್ವದೇಶಿ-ಪರದೇಶಿ ಭೇದವನ್ನರಿಯದ ಅಜ್ಞ, ಬಡವರಿಗಾಗಿ ಕಾಯಬೇಕು.

(೫) ಸ್ವರಾಜ್ಯ-ಸ್ಥಾಪನೆಯಾಗುವವರೆಗೆ ಹಾಗು ಅದರಿಂದ ಪ್ರಾಪ್ತಿಯಾಗುವವರೆಗೆ, ಹೊದ್ದುಕೊಳ್ಳಲಿಕ್ಕೆ ಅಗತ್ಯವಿರುವ ಅರಿವೆಯನ್ನಷ್ಟೇ ಉಪಯೋಗಿಸಬೇಕು.

(೬) ಹೆಂಡಗಳ ಕೆಲಸವನ್ನು ತ್ಯಜಿಸಿ [illegible] ಸ್ವೀಕರಿಸಿದ ಕೂಡಲೆ, [illegible] ನಾವು [illegible], ಪರದೇಶೀ ಅರಿವೆಯನ್ನು [illegible] ಮಾಡಬೇಕು, [illegible] ಅದನ್ನು [illegible] ಇಷ್ಟರ ಮೇಲೆ [illegible] ಕೆಲಸ ಮಾಡುವಾಗ ಅದನ್ನು ಧರಿಸಬೇಕು.

ಮೇಲೆ ಹೇಳಿದ ಎಲ್ಲ ಪ್ರಕಾರದ [illegible] ಸಂಪೂರ್ಣ ರೀತಿಯಿಂದ ಒಪ್ಪಿಕೊಳ್ಳಬಹುದೆಂದು ನಾನು ಅರಿತಿದ್ದೇನೆ. ಆದರೆ ಇದರಿಂದ ಬಹಿಷ್ಕಾರವು [illegible], ಅವರು [illegible] ಧರಿಸಲು ಎಂದೂ ಒಪ್ಪಲಾರರು.

—ಮಹಾತ್ಮಾ ಗಾಂಧಿ.

ಹತ್ತು ಕಾರಣಗಳು.

ಮಾನವೀ ಜೀವನಕ್ರಮದಲ್ಲಿ ಅತಿ ಮಹತ್ವದ ಸಂಗತಿಗಳಲ್ಲಿ ಸಹ ವಾದವಿವಾದ ಉಂಟಾಗಿ, ಕೆಲ ಪ್ರಸಂಗಗಳಲ್ಲಿ ಗೊಂದಲವಾಗುತ್ತದೆ. ಆದಕಾರಣ, ಪರದೇಶೀ ಅರಿವೆಯನ್ನು ನಾವು ಒಮ್ಮೆಲೇ ಯಾಕೆ ತೊರೆಯಬೇಕೆಂಬುದರ ಕಾರಣಗಳನ್ನು ಇಲ್ಲಿ ನಮೂದಿಸುವೆನು.

(೧) ಬ್ರಿಟಿಶರ ಪ್ರವೇಶವಾಗುವ ಮೊದಲು ನಾವು ನಮಗೆ ಬೇಕಾಗುವ ಎಲ್ಲ ಅರಿವೆಯನ್ನು ತಯಾರಿಸುತ್ತಿದ್ದೆವು. ಇಷ್ಟೇ ಅಲ್ಲ, ಪರದೇಶಕ್ಕೆ ಸಹ ರಫ್ತ ಮಾಡುತ್ತಿದ್ದೆವು.

(೨) [illegible] ಲಿಸಿದ್ದರಿಂದ [illegible] ನರಿಗೆ ಕುಮಕಿನ ಉದ್ಯೋಗವು [illegible] ಉತ್ಪನ್ನವು ಕಡಿಮೆಯಾಯಿತು.

(೩) ಪರದೇಶಿ ಅರಿವೆಯನ್ನು ತ್ಯಜಿಸಿ [illegible] ಧರಿಸುವದೆಂದರೆ, [illegible] ಪಾವಿತ್ರ್ಯವನ್ನು ರಕ್ಷಿಸುವದು. ಅವರ [illegible] ನೂಲು ನೆಯುವ ಉದ್ಯೋಗ ನಷ್ಟವಾದ್ದರಿಂದ ಅವರು ಗಿರಣಿ ಕಾರಖಾನೆ [illegible] ಮನೆಯ ಹೊರಗೆ ಕೆಲಸ ಮಾಡಬೇಕಾಗುತ್ತದೆ. ಅದರಿಂದ ಅವರ [illegible] ಪ್ರಮಾಣ [illegible] ಗುತ್ತದೆ.

(೪) [illegible] ಪರದೇಶಿ ಅರಿವೆಯಲ್ಲಿ ಹೆಚ್ಚು [illegible] ಇದೊಂದ ಕಾರ್ಯವೇ ಸರಿ.

(೫) [illegible] ಲಕ್ಷಾವಧಿ [illegible] ದಿನೇ ದಿನೇ ವೃದ್ಧಿ ಹೊಂದುವ ದಾರಿದ್ರ್ಯವನ್ನು ನಿವಾರಿಸಬೇಕಾದರೆ ಚರಕದ ಉದ್ಧಾರ ಮಾಡಬೇಕು.

(೬) ಪರದೇಶಿ ಅರಿವೆಯ ಬಹಿಷ್ಕಾರದಿಂದ, ನಮಗೆ ೬೦ ಕೋಟಿ ರೂಪಾಯಿಗಳ ಉಳಿತಾಯವಾಗುವದು. ಈ ಯೋಜನೆಯಿಂದ ಬೇರೆ ಯಾವ ಉದ್ಯೋಗಕ್ಕಾಗಲಿ, ಕೂಲಿಕಾರರಿಗಾಗಲಿ ಅಪಾಯವಾಗಲಿಕ್ಕಿಲ್ಲ.

(೭) ಪರದೇಶಿ ಅರಿವೆಯಷ್ಟು ಹಾನಿಕಾರಕ ವಸ್ತು ನಮಗೆ ಬೇರೊಂದಿಲ್ಲ.

(೮) ೧೯೧೯-೨೦ ನೇ ಇಸವಿಯ ೧೪೭ ಕೋಟಿ ಆಮದಿನಲ್ಲಿ, ೬೦ ಕೋಟಿ ರೂಪಾಯಿಗಳ ಅಂದರೆ ಸುಮಾರದರಲ್ಲಿ [illegible] ವಸ್ತ್ರವಿತ್ತು. ಎರಡನೇ ನಂಬರ [illegible] ಕೋಟಿ ರೂಪಾಯಿಗಳು ಸಕ್ಕರೆಯದು.

(೯) ಅರಿವೆಯ ರಫ್ತಿನಿಂದ ಇಂಗ್ಲಂಡದ ಸ್ವಾರ್ಥವು ಅವಲಂಬಿತವಾಗಿದೆ; ಜಪಾನವು ಸಹ ಅದೇ ಅವಸ್ಥೆಗೆ ಹೋಗುತ್ತಿದ್ದು, ಅಲ್ಲಿಂದ ಅರಿವೆಯ ರಫ್ತಿಯು ಹೀಗೆಯೇ ನಡೆದರೆ ಇಂಗ್ಲಂಡದಂತೆ ಜಪಾನದ ಕಾಲು ನಾವು ಹಿಡಿಯಬೇಕಾದೀತು.

(೧೦) ಹಿಂದುಸ್ಥಾನದಂಥ ದೊಡ್ಡ ದೇಶವು ಹೊದಿಕೆಗಾಗಿ, ಪರದೇಶಗಳ ಮೇಲೆ ಅವಲಂಬಿಸಿರುವದು ಅತ್ಯಂತ ಘಾತಕವೇ ಸರಿ. ಆಹಾರದಷ್ಟೇ ಅರಿವೆಯೂ ಜೀವನಕ್ಕೆ ಅವಶ್ಯವಿದೆ.

ಇದೇ ಬರುವ ಅಗಸ್ಟ ಮೊದಲನೇ ತಾರೀಖಿಗೆ ಪರದೇಶಿ ಅರಿವೆಯನ್ನು ಸಂಪೂರ್ಣವಾಗಿ ಎಷ್ಟು ಸುಲಭರೀತಿಯಿಂದ ಬಹಿಷ್ಕರಿಸಬಹುದೆಂಬುದನ್ನು ನಾನು ಈ ಮೊದಲೇ ತಿಳಿಸಿದ್ದೇನೆ. ನಾನು ಮೇಲೆ ತೋರಿಸಿದ ಕಾರಣಗಳು ಯೋಗ್ಯ ಹಾಗೂ ಸಿಂಧುವಿದ್ದರೆ, ನಾವು ಒಂದು ಕ್ಷಣ ತಡಮಾಡಬಾರದು. ನಾವು ಈವರೆಗೆ ನಿರೀಕ್ಷಣೆ ಮಾಡಿ ಹೊತ್ತು ಕಳೆದದ್ದೇ ದೊಡ್ಡ ತಪ್ಪು. ನಮ್ಮ ರಾಷ್ಟ್ರೀಯ ಜೀವನಕ್ಕೆ ಅವಶ್ಯವಾದ ಈ ಕ್ರಾಂತಿಯನ್ನು ಶಾಂತ ರೀತಿಯಿಂದ ಸಾಧಿಸುವದರಲ್ಲಿ ನಾವು ತಪಶ್ಚರ್ಯೆ ಮಾಡಿದಷ್ಟು ಕಡಿಮೆ. ಈ ಕ್ರಾಂತಿಯಲ್ಲಿ ಶ್ರೀಮಂತರೂ, ಬಡವರೂ, ಸರಕಾರವೂ, ಇತರರೂ, ಸ್ತ್ರೀ-ಪುರುಷರೂ ಒಟ್ಟಾಗಿ ಸೇರಬಹುದು. ಪರದೇಶಿ ಅರಿವೆಯನ್ನು ಇನ್ನು ಆಮದು ಮಾಡುವದಿಲ್ಲೆಂದು ಅನೇಕ ವ್ಯಾಪಾರಸ್ಥರು ಪ್ರತಿಜ್ಞೆಯನ್ನು ಕೈಕೊಂಡಿರುವರು. ಗಿರಾಕಿಗಳು ಮಾತ್ರ ಬಹಿಷ್ಕಾರ ವ್ರತವನ್ನು ಕೂಡಲೇ ಪ್ರಾರಂಭಿಸಬೇಕು. ಅಗಸ್ಟ ಮೊದಲನೇ ತಾರೀಖಿಗೆ ಯಾರಾದರೂ ಪರದೇಶಿ ಅರಿವೆಯನ್ನು ಧರಿಸುವದಾಗಲಿ, ಅಂಗಡಿಗಳಲ್ಲಿ ವಿಕ್ರಯಕ್ಕೆ ಇಡುವದಾಗಲಿ, ಒಂದು ವಿಲಕ್ಷಣ ಪ್ರಕಾರವೆಂದು ನಮಗೆ ತೋರಬೇಕು.

ಈ ಲೇಖದ ವಾಚಕರು ಸ್ತ್ರೀಯರಿರಲಿ, ಪುರುಷರಿರಲಿ—ತಮಗೆ ಅವಶ್ಯವುಳ್ಳ ಖಾದಿಯನ್ನಷ್ಟೇ ಉಪಯೋಗಿಸುವದಲ್ಲದೆ, ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ನೂಲು ತೆಗೆಯುವದನ್ನೂ, ನೇಯುವದನ್ನೂ ಕಲಿಯುವರೆಂದು ತುಂಬಾ ಕೋರುತ್ತೇನೆ.

—ಮಹಾತ್ಮಾ ಗಾಂಧಿ.

ಹೊಸ] ಉತ್ತಮ ಎಲ್ಲಾತರದ [ಶ್ಯಾಹಿ

ಶಾಯಿ ಗುಳಿಗೆಗಳು ಮತ್ತು ಪೆಕೆಟ್ಟುಗಳು ಸಿಗುವವು. ಒಂದಾವರ್ತಿ ಉಪಯೋಗಿಸಿ ನೋಡಿರಿ. ಗುಳಿಗೆ ೧೦೦ ಕ್ಕೆ ೧೫ ಆಣೆ. ಪೆಕೆಟ್ಟು ೧೦೦ ಕ್ಕೆ ೧೪ ಆಣೆ. ನಂಬರಿಗೆ ೧ [illegible] ಥೋಕ ತೆಗೆದುಕೊಂಡರೆ, ಭರಪೂರ ಕಮಿಶನು ಕೊಡುವೆವು. ೧೦೦ ಕ್ಕಿಂತ ಕಡಿಮೆ ಕಳುಹಿಸಲಾರೆವು. ಪತ್ತೆ — ದಿ ನೆಶ್ನಲ್ ಸ್ಟ್ಯಾ ಇಂಕ ಕಂಪನಿ,

ಹೊನ್ನಾವರ

ಹೊಸ ಜವಳಿ-ದುಕಾನು.

ನಮ್ಮಲ್ಲಿ ತರತರದ ಬೂಂದ್ಯಾ, ದೇಶಿ, ಚಿಕ್ಕಗಳು, [illegible] ಲಗಳು ಕರ್ನಾಟಕದ ವಸ್ತ್ರಗಳು [illegible] ಧೋತರ ಜೋಡುಗಳೂ, ಮಹಾತ್ಮಾ ಗಾಂಧಿಯವರ ಟೊಪ್ಪಿಗೆಗಳೂ, [illegible] ಕೋಟಿನ ಮತ್ತು [illegible], ಸೊಲ್ಲಾಪೂರ ಗಿರಣಿಯ ನವ-ನಮೂನಾ ಸೀರೆಗಳೂ, ಕೋಟಿನ ವಸ್ತ್ರಗಳೂ, ಅಹಮದಾಬಾದ, ನಾಗಪೂರ ಮೊದಲಾದ ದೇಶಗಳ ಧೋತರ ಜೋಡುಗಳೂ, ಶಹಾಪೂರ, ಗದಗ ಹುಬ್ಬಳ್ಳಿಯ ಉತ್ತಮ ಪ್ರತಿಯ ಸೀರೆಗಳೂ, ಇಳಕಲ ನಮೂನೆ ತರಹಾರ ಸೀರೆಗಳೂ, ಪಾಲಗಾಟ ಸ್ವದೇಶಿ ತರತರದ ನವ ನಮೂನೆಯ ತರಹಾರ ಸೀರೆಗಳೂ, [illegible] ಗಳೂ, ರೇಶಿಮೆ ಮಧುರೆಯ ರುಮಾಲುಗಳೂ ಜರಿ ವಸ್ತ್ರಗಳೂ ಈ ಅಗ್ಗದ ಎಲ್ಲಾ ಊರಿನ ಮುಗ್ಗದ ವಸ್ತ್ರಗಳೂ ಉರವಕೊಂಡ, ಧುಮುಗನೂರ, ದೇವಾಂಗದ ಕಂಪ್ಲೀಟ [illegible] ನವ ನಮೂನಾ ಸೀರೆಗಳೂ, [illegible] ತರತರದ ಚಿತ್ರಗಳೂ ಮಾಫಕ ದರದಿಂದ ನಮ್ಮಲ್ಲಿ ರೊಕ್ಕ ಮಾರಲ್ಪಡುತ್ತವೆ. ಬೇಕಾದ ಮಾಲಿಗೆ ಆರ್ಡರ ಕೊಟ್ಟರೆ ಪೂರೈಸುವೆವು.

ಚಿತ್ರಿಗಿ ಗೋಪಾಳ ಸುಬ್ರಾಯ,

ಶ್ಯಾನಭಾಗ,

ಕೆಲ್ಲತೆ ಮರಚಂಟ ಎಂಡ ಕಮಿಶನ

ಏಜಂಟ ಕುಮಟಾ.

From
The President, Kanara Distt Congress Committee, Honavar
To The Vice President, Honavar Municipality, Honavar

Honavar, 12th July 1921.

I have the honour to address you on the following subject with an earnest hope that your Committee will be good enough to consider it indulgently.

Your Committee may be aware, that we have recently started a campaign against the drink evil in the Municipal limits as well as outside it and that we have arranged by a pretty thorough system of picketing peacefully carried on to put an end to the growing vice to the best possible extent. I am glad to say that our efforts in the indicated direction have so far been successful to an appreciable extent. However, we are in need of substantial support from local bodies, such as Municipalities and Local Boards in the district, to achieve thoroughly satisfactory results.

Probably you are aware that in Thana and Poona Districts, the District Local Board and the Municipality have decided to allot some funds towards picketing expenses and arranged other consistent means to meet the "drink problem".

My Committee would be grateful if you will in consultation with your Committee consent to take possible steps to strengthen the work begun by us, and kindly make a grant to meet a portion of the picketing expenses, we are to incur, suiting the financial convenience of your Municipality and grant may be made and all possible moral aid given us.

I need hardly add, that the work started by us is a philanthropic one, in which your Municipality as representing the ratepayers of Honavar, and having their welfare at heart, has to be most interested. Any indulgent and earliest consideration your Municipality would be disposed to give, this appeal might certainly prompt other Municipalities and Local Boards in the district.

I have the honour, to be,
Sir,
Your most obedient servant,
Sd/ **S. S. Shastri.**
President, Dt. Congress Committee.

ಧಾರವಾಡದಲ್ಲಿ ಪೋಲೀಸರಶಾಹಿ.

ಮ। ಗಾಂಧಿಗಳ ಸಂದೇಶ.

ಧಾರವಾಡ ಪ್ರಕರಣದ ಸಂಬಂಧದ ಎಲ್ಲ ಸರಕಾರೀ ಕೃತ್ಯಗಳ ಕಡೆಗೆ ನನ್ನ ಪೂರ್ಣ ಲಕ್ಷವದೆ. ಧಾರವಾಡದ ಅಧಿಕಾರೀ ವರ್ಗದ ಜುಲುಮಿಗೆ ಬಲಿಬಿದ್ದ ಎಲ್ಲ ಜನರ ಕಡೆಗೆ ನನ್ನ ಪೂರ್ಣ ಸಹಾನುಭೂತಿ ಇರುತ್ತದೆ. ಬಲಿಬಿದ್ದವರ ಆಪ್ತೇಷ್ಟರೂ, ಇತರ ಸರ್ವಸಾಧಾರಣ ಜನತೆಯೂ ಅಂಥ ಪ್ರಸಂಗದಲ್ಲಿ ತೋರಿಸಿದ ಶಾಂತತೆ ಹಾಗು ಧೈರ್ಯ ಇವುಗಳಬಗ್ಗೆ ನಾನು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುವೆನು. ಧಾರವಾಡದ ಅಧಿಕಾರಿಗಳ ಗಿರಫದಾರಿಯ ಕೋಲಾಹಲದಲ್ಲಿ ಸಹ ಗಾಬರಿಯಾಗದೆ, ಜನತೆಯು ಅತಿ ಧೈರ್ಯದಿಂದಲೂ, ಸ್ಥೈರ್ಯದಿಂದಲೂ ತನ್ನ ಶಾಂತ ಚಳವಳಿಯನ್ನು ಇದುವರೆಗೆ ನಡಿಸಿದ ಸುದ್ದಿಯನ್ನು ಕೇಳಿ ನನಗೆ ಅತಿ ಆನಂದವಾಗುತ್ತದೆ. ನಾವು ಧೈರ್ಯವನ್ನು ತ್ಯಜಿಸದೆ, ನಮ್ಮ ಧ್ಯೇಯವನ್ನು ಬಿಡದೆ, ಚಳವಳಿಯನ್ನು ಶಾಂತತೆಯಿಂದ ನಡಿಸಿದರೆ, ಧಾರವಾಡದಲ್ಲಿ ಒದಗಿದ ಪ್ರಕಾರದಿಂದಲೇ ನಾವು ಸ್ವರಾಜ್ಯವನ್ನು ಶೀಘ್ರವೇ ಗಳಿಸುವೆವೆಂಬುದಕ್ಕೆ ಸಂಶಯವಿಲ್ಲ. ಇದರ ಕಾರಣವೇನಂದರೆ, ನಾದಿರಶಾಹಿ ವಿಚಾರದಿಂದಲೂ, ದೂರ ದೃಷ್ಟಿಯಿಂದಲೂ, ನಾವು 'ಮಯ್ಯಿಗೆ ಮುಯ್ಯಿ' ಎನ್ನುವ ಧೋರಣವನ್ನು ಬಿಟ್ಟುಕೊಟ್ಟಿದ್ದೇವೆ, ಆದ್ದರಿಂದ ನಮ್ಮ ಸಾತ್ವಿಕ ಹಾಗು ಪವಿತ್ರ ಕಾರ್ಯಕ್ಕೆ ವಿಶೇಷ ಪ್ರಾಪ್ತಿ ಬಂದು, ಜನರ ಉತ್ಸಾಹವು ದ್ವಿಗುಣಿತವಾಗುತ್ತದೆ. ಆದ್ದರಿಂದ ನಾವು ಅಧಿಕಾರಿ ವರ್ಗದ ಬಲಾತ್ಕಾರಕ್ಕೆ ಬೆದರದೆ, ನಮ್ಮ ಪವಿತ್ರ ಧ್ಯೇಯವನ್ನು ಸಾಧ್ಯಮಾಡಲಿಕ್ಕೆ ಯತ್ನಿಸಬೇಕು. ಧಾರವಾಡದ ಜನರೊಳಗೆ ಪಕ್ಷಗಳಿದ್ದಾವೆ, ಅವರು ತಮ್ಮ ತಮ್ಮೊಳಗೆ ಜಗಳಾಡುತ್ತಾರೆ ಇದನ್ನು ನಾನು ಅರಿತಿರುವೆನು. ಆದರೂ ಈ ಹೊತ್ತು ಎಲ್ಲ ಜನತೆಯಮೇಲೆ ಬಂದೊದಗಿದ ಸಂಕಟವನ್ನು ನಿವಾರಿಸುವದಕ್ಕಾಗಿ, ನಮ್ಮ ನಮ್ಮೊಳಗಿನ ಭೇದಭಾವಗಳನ್ನು ಮರೆತು ಒಮ್ಮನಸ್ಸಿನಿಂದ ಸಂಕಷ್ಟಗಳಿಗೆ ಎದುರಾಗಬೇಕೆಂದು, ಧಾರವಾಡಕರರಿಗೆ ನನ್ನ ಆಗ್ರಹದ ಸೂಚನೆಯಿದೆ. ಅಸಹಕಾರಿತಾವಾದಿಗಳಂತೂ ಈ ಸಂಗತಿಯನ್ನು ಎಂದೂ ಮರೆಯಲಾಗದು. ಬಲಾತ್ಕಾರವು ಎಷ್ಟೇ ಆಗಲಿ, ಪ್ರಬಲ ವೈರಿಗೆ ಸೋಲಿಸಲಿಕ್ಕೆಂದು ಅದನ್ನು ಅವರು ಶಾಂತರೀತಿಯಿಂದ ಸಹಿಸಬೇಕು. ಹೀಗೆ ಮಾಡಿದರೆ ಮಾತ್ರ, ಅವರಿಗೆ ಶತ್ರುಗಳಮೇಲೆ ನಿಜವಾಗಿ ವಿಜಯ ಸಿಕ್ಕೀತು. ಶತ್ರುಗಳ ಅಂತಃಕರಣದೊಳಗಿನ ದ್ವೇಷಬುದ್ಧಿಯನ್ನು ನಿರ್ಮೂಲಿಸಲಿಕ್ಕೆ ಪ್ರೇಮ ಮತ್ತು ಭೂತದಯೆ ಇವುಗಳಿಗಿಂತ ಅನ್ಯ ಔಷಧಗಳೇ ಇಲ್ಲ.

ಹೊನ್ನಾವರ— ಈ ವಾರದಲ್ಲಿ ಮಳೆಯು ರೈತರಿಗೆ ಸಾಕಾದಷ್ಟು ಬಿದ್ದರೆ ಇನ್ನುಮುಂದೆ ಸಹಾ ಇದೇ ಪ್ರಕಾರ ಮೇಘರಾಜನು ಕೃಪಾ ಇಟ್ಟಲ್ಲಿ ಬೆಳೆಯು ಸಮೃದ್ಧಿಯಾಗಲಿಕ್ಕೆ ಅಡ್ಡಿ ಇಲ್ಲ.

ಇಲ್ಲಿಯ ಚಾರೋಡ ಜಾತಿಯವರು. ಗಣಪತಿ ದೇವಸ್ಥಾನದ ಎದುರಿಗೆ ಹೊಸದಾಗಿ ಕಟ್ಟಿಸಿದ ದೇವಸ್ಥಾನದಲ್ಲಿ ಮೊನ್ನೆ ದಿವಸ "ಆರಡಾಂಬಿಕೆ" ಎಂಬ ದೇವರನ್ನು ಪ್ರತಿಷ್ಠೆ ಮಾಡಿಸಿರುವರು. ಪ್ರತಿಷ್ಠೆಗೆ ಈ ತಾಲೂಕಿನ ಹಳ್ಳಿಪಾಡದಲ್ಲಿ ಚಾರೋಡ ಜಾತಿಯ ಯಾವತ್ತು ಜನರು ಬಂದು ಪ್ರತಿಷ್ಠೆಯ ಕೆಲಸವು ಒಳ್ಳೇ ಸಮಾರಂಭದಿಂದ ನಾಗಿ ನಿನ್ನೆ ರಾತ್ರೆ ಆ ದೇವರ ಉತ್ಸವವು ಬಾಜಾರದಿಂದ ತಗೆದರು. ಉತ್ಸವಕ್ಕೆ ನಾನಾ ಜಾತಿಯವರು ಹೋಗಿ, ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ಈ ಚಾರೋಡ ಜಾತಿಯವರು ಮದ್ಯಪಾನವನ್ನು ಪೂರ್ಣ ತ್ಯಾಜ್ಯ ಮಾಡಿದರಿಂದ, ಅವರಲ್ಲಿ ದೇವರಬಗ್ಗೆ ಭಕ್ತಿ ಹುಟ್ಟಿದ್ದಲ್ಲದೆ, ಮೊನ್ನಿನ ಉತ್ಸವದ ಕೆಲಸವು ಜಗಳ ತಂಟೆ ಇಲ್ಲದೆ ಶಾಂತ ರೀತಿಯಿಂದ ನೆರವೇರಿಸಿದರು. ಈ ದೇವಸ್ಥಾನ ಕಟ್ಟಿ ಇಂದಿಗೆ ೮ ವರ್ಷಗಳಾಗಿ ಈ ವರೆಗೆ ಪ್ರತಿಷ್ಠೆ ಕೆಲಸ ಮಾಡಿಸಲಿಕ್ಕೆ ಅವರಿಗೆ ಸಾಧ್ಯವಾಗದೇ ಇದ್ದ ಕಾರಣ ಸುರಾಪಾನದಿಂದಲೇ.

ಮದ್ಯಪಾನದಿಂದ ಆಗುವ ಹಾನಿ ದೃಷ್ಟ್ಯಾನಿ ಆಗುವದನ್ನು ಅರಿತು, ಈ ಜನರಿಗೆ ಈಗ ತಿಳಿದುಬಂದದರಿಂದ ಅವರ ಕೈಯಲ್ಲಿ ಇತ್ತಲಾಗಿ ಕೆಲಕೆಲವು ಹಣ ಸೇರಲಿಕ್ಕೆ ಆಗಹತ್ತಿದ್ದು, ಈ ವಿಷಯ ಗುತ್ತೆದಾರರಿಗೆ ಸಹನವಾಗದೆ, ಅವರು ೪-೫ ದಿವಸದಿಂದ ತಮ್ಮ ಸ್ವಾರ್ಥವನ್ನು ಸಾಧಿಸುವದಕ್ಕೋಸ್ಕರ ೫-೬ ಜನರಿಗೆ ಪ್ರತಿದಿವಸ ಪ್ರತ್ಯಕ್ಷವಾಗಿ ಯಥೇಚ್ಛ ಸರಾಯಿ ಕುಡಿಸಿ "ಪಿಕೆಟಿಂಗ" ಮಾಡುವ ಸ್ವಯಂಸೇವಕರಿಗೆ ಬಾಯಿಗೆ ಬಂದಂತೆ ಕೆಟ್ಟ ಬೈಗಳನ್ನು ಬೈಯಿಸುವದು ಮೀನು ಮಾರುವ ಹೆಂಗಸರ ಮೈಮೇಲೆ ಬೀಳಿಸುವದು ಇತ್ಯಾದಿ ಕೆಲಸವು ನಡೆದದೆ. ಈ ನಿರ್ಲಜ್ಜ ದುಷ್ಟಪ್ರಕೃತಿ ಗುತ್ತೆದಾರರು ಲೋಕಮತದ ವಿರುದ್ಧವಾಗಿ ಮನೋವಿಜಯ ನಾಟಕದೊಳಗಿನ "ಮಹಾಮಾಯೆ"ಯಂತೆ ಜನರನ್ನು ಪುನಃ ತನ್ನ ಸುರಾಪಾನದ ಮಾಯಾಜಾಲದಲ್ಲಿ ಬೀಳುವಂತೆ ಪ್ರಯತ್ನ ಮಾಡುತ್ತಿದ್ದರಿಂದ, ಗುತ್ತೆದಾರರಿಗೆ ಇದರಿಂದ ಲಾಭವಾಗದೆ "ಪಿಕೆಟಿಂಗ" ಕೆಲಸಕ್ಕೆ ಮಾತ್ರ ಮಹತ್ವ ಆಗುವದು.

ತಾ ೧೩ ನೇ ದಿವಸ ಮುಲ್ಲುಕರ್ವೆಯ ಒಬ್ಬ ಒಕ್ಕಲಿಗ ಮತ್ತು ತಾ ೧೪ ನೇ ದಿವಸ ಇಲ್ಲಿಯ ಕಲಾವಂತ ಜಾತಿಯವನೊಬ್ಬ ಇವರಿಬ್ಬರೂ ಯಥೇಚ್ಛ ಸರಾಯಿ ಕುಡಿದು ಉಟ್ಟ ವಸ್ತ್ರದ ಸ್ಮರಣೆ ಇಲ್ಲದೆ, ಪೇಟೆಯಲ್ಲಿ ಮಾರ್ಗದ ಗಟಾರಿಯಲ್ಲಿ ಸಿಕ್ಕಸಿಕ್ಕವರಿಗೆ ಬೈಯುತ್ತ ಬಿದ್ದವರನ್ನು ಪೋಲೀಸರು ತಕ್ಕೊಂಡು ಕಚೇರಿಗೆ ಒಯ್ದರ ಪೋಲೀಸರಿಗೆ ಇದೊಂದು ಹೊಸ ಕೆಲಸವಾಗಿದೆ.

ಇಲ್ಲಿಯ ಗುತ್ತೆದಾರರಾದ ಮುಸಲ್ಮಾನರ ಇವರ ಜಾಗೆಮೇಲೆ ಮೊದಲಿನ ಕಾಯಂ ಗುತ್ತೆದಾರರಾದ ಬಸ್ರೂರರವರು ಘಟ್ಟಗಳಿಂದ ಬಂದು ಹಾಜರಾಗಿರುತ್ತಾರೆ. ಹಾಗೆ ಚಕ್ರಿಯ ಅಟ್ಟೆಯಲ್ಲಿ ಇವರು ಯಾವತರದ ನಿಶಾಣೇ ಕೊಡುತ್ತಾರೋ ನೋಡಬೇಕು.

ಬರುವ ತಾ ೨೨ ನೇಗೆ ಲಖನೌದಲ್ಲಿ ಜರುಗುವ ಆಲ ಇಂಡಿಯಾ ಕೋಂಗ್ರೆಸ ಕಮೀಟಿಗೆ ನಮ್ಮ ಜಿಲ್ಲೆಯ ತರ್ಫೆಸಿಂದ ಶ್ರೀ। ಭದ್ರಿಯವರು ಹೋಗುವವರಿದ್ದಾರೆ. ಕಾರವಾರ, ಕುಮಟಾ ಮತ್ತು ಮೋಟೆ ಎಂಬಲ್ಲಿ ಇಲ್ಲಿಯಂತೆ ಅಲ್ಲಿಯ ಕ್ರಿಶ್ಚನ್ನ ಬಂಧುಗಳು ಸರಾಯಿ ಮತ್ತು ಹೆಂಡವನ್ನು ಪೂರ್ಣ ತ್ಯಾಜ್ಯಮಾಡಿರುವರು. ಇದರಂತೆ ಹಳೆದಿಪ್ಪರ, ಕಾರೀಯ ಪುಢಾರಿಗಳು ಮನಸ್ಸು ತಕ್ಕೊಂಡು ಅಲ್ಲಿ ಸನಾಸ ರಾಮಾಸ ಒಂದು ನಡೆಸುವರೇನು ?

ವೇ।। ಕರ್ಕಿ ಮತ್ತು ಸಾತಕರ್ಣಿ ಇವರು ಸಿದ್ದಾಪುರಕ್ಕೆ ಹೋಗಿ, ಅಲ್ಲಿ ಮದ್ಯಪಾನ ನಿಷೇಧದಬಗ್ಗೆ, ಜನರಲ್ಲಿ ಜಾಗ್ರತೆಯನ್ನುಂಟು ಮಾಡಿ, ಹಾಗೆ ಮುಂದೆ ಬಿಳಗಿಗೆ ಹೋಗಿ ಅಲ್ಲಿ ಒಂದು ಸಾವಿರ ಮೆಂಬರರನ್ನು, ೧. ಸಾವಿರ ರೂಪಾಯಿ ಸ್ವರಾಜ್ಯಫಂಡವೂ ಕೂಡಿಸಿ ಅವರು ಅಲ್ಲಿಂದ ಧಾರವಾಡಕ್ಕೆ ತೆರಳುವವರಿದ್ದಾರೆಂಬುದಾಗಿ ವಾರ್ತೆ ಇದೆ.

ಇಲ್ಲಿಯ III ನೇ ವರ್ಗದ ಮ್ಯಾಜಿಸ್ಟ್ರೇಟರಲ್ಲಿ ಹಾಸ್ಯಕ್ಕೆ ಸಮ್ಮಂದದ ಘೋರಪ್ಪ ಖಟ್ಲೆಯು ನಾಲ್ಕೈದು ದಿವಸದಿಂದ ನಡಿಯುತ್ತದೆ. ಸದರ ಖಟ್ಲೆಯಲ್ಲಿ ೩೭ ಜನ ಆರೋಪಿಯರಿದ್ದು ಈ ಖಟ್ಲೆಯು ಗುಂಡಬಾಳ ಘೋರಪ್ಪರ ಮತ್ತು ಗ್ಯಾರ್ನು ಕೂಡಿ ಸುಳ್ಳು ತೋಹಮತ ಹಾಕಿ ಮಾಡಿಕೊಟ್ಟದ್ದಾಗಿರುತ್ತದಂತೆ ! ಈ ಖಟ್ಲೆಯು ಈಗ ೩ ತಿಂಗಳಿಂದಾಗಾಯಿತು ನಡಿಯುತ್ತದೆ. ಈ ೩೭ ಜನ ಆರೋಪಿ, ರೈತ ಜನರಿಗೆ ಈಗ ಖನ ಬೇಸಾಯದ ಸಮಯವಾ

(೬ನೇ ಪಾನಿನಮೇಲೆ ಮುಂದರಿಸಿದೆ)

ಕಾನಡಾವೃತ್ತ.

ಗುರುವಾರ, ತಾರೀಖು ೨೧ ಮಾಹೆ ಜುಲೈ ೧೯೨೧

ಸ್ವದೇಶಿ—ವಿದೇಶಿ.

ಯುದ್ಧದೊಳಗೆ ಒಂದು ಕೋಟೆಯನ್ನು ಗೆದ್ದ ಕೂಡಲೆ, ಹಾಸಿಗೆ ಹಾಸಿ ಮಲಗುವಾ ಎಂದು ಹೇಳುವ ಸೈನಿಕರಿಗೆ ಮರುಳರೆಂದೆನ್ನುವರು. ಚಾಣಾಕ್ಷನಾದ ಸೇನಾಪತಿಯು ಮೊದಲನೇ ವಿಜಯದಿಂದ ಹಿಗ್ಗಿ, ಕರ್ತವ್ಯಮೂಢನಾಗದೆ, ವಿಜಯಾವೇಶದ ಭರದೊಳಗೆ ಮತ್ತೊಂದು ಕೋಟೆಯ ಕಡೆಗೆ ಗುರಿ ಹಿಡಿಯುತ್ತಾನೆ. ಮೊದಲಿನಂತೆ ಸಾಮಾನ್ಯನವಿಂದ ಸೈನಿಕರೊಳಗೆ ಗೊಂದಲವಾಗದಂತೆ, ಅವರ ಸತ್ವಶಕ್ತಿಯನ್ನು ಕುಗ್ಗಗೊಡದೆ, ಶಾಂತವಾಗಿ ಮತ್ತೊಂದು ಹಲ್ಲೆಯನ್ನು ಏರಿಸುವನು. ಅಸಹಕಾರಿತೆಯ ನೈತಿಕ ಯುದ್ಧದೊಳಗೆ ಇವೇ ಚಮತ್ಕಾರಗಳು ಕಣ್ಣಿಗೆ ಬೀಳಹತ್ತಿರುವವು. ಟಿಳಕ ಸ್ವರಾಜ್ಯ ಫಂಡಿನ ಒಂದು ಕೋಟಿಯಂತೂ ಪರಿಪೂರ್ಣವಾಗಿ ಕೈವಶವಾಯಿತು, ಈ ವಿಜಯವು ಕಲ್ಪನಾತೀತವಾಗಿ ದೊರೆಯಿತು. ಇನ್ನು ಮತ್ತೊಂದು ಕೋಟೆಯ ಕಡೆಗೆ ಕಣ್ಣಿಟ್ಟು, ಮೊದಲಿನಷ್ಟೇ ದೃಢನಿಶ್ಚಯದಿಂದ ಕೂಚುಮಾಡಬೇಕಾಗಿದೆ. ಸೇನಾಪತಿಗಳ ಅಪ್ಪಣೆಯೂ ಇದೇ. ಮಹಾತ್ಮಾ ಗಾಂಧಿಗಳು ಇದೇ ನಿರ್ಧಾರವನ್ನು ಜಾಹೀರಪಡಿಸಿರುವರು. ಈ ಕೋಟೆ ಎಂಬುದು ವಿದೇಶೀ ಬಟ್ಟೆಗಳ ವ್ಯಾಪಾರಗಳು. ಸಾರಾಂಶ, ವಿದೇಶೀ ಬಟ್ಟೆಗಳ ಮೇಲೆ, ನಾಳಿನ ಒಂದನೇ ಆಗಸ್ಟ ತಾರೀಖಿನ ಲೋಕಮಾನ್ಯ ಟಿಳಕರ ಪುಣ್ಯ ತಿಥಿಯೊಳಗಾಗಿ ಬಹಿಷ್ಕಾರವನ್ನು ಹಾಕಬೇಕೆಂಬುದೇ ಅಹಿಂಸಾತ್ಮಕ ಅಸಹಕಾರಿಗಳ ಮುಂದಿನ ಕಾರ್ಯವು. ಅದಾದರೂ ಅವಧಿಯೊಳಗೆ ಕೊನೆಗಾಣಿಸಬೇಕಾಗಿದೆ.

ನಮ್ಮ ದೇಶಕ್ಕೆ ೧೦೨ ಕೋಟಿ ರೂಪಾಯಿಗಳ ವಸ್ತ್ರಗಳು ಪರದೇಶದಿಂದ ಆಯಾತವಾಗುತ್ತಿವೆ. ಇದರೊಳಗೆ ೬೦ ಕೋಟಿ ಬೆಲೆಯ ಬಟ್ಟೆಗಳೇ ಇರುವವು. ಮಹಾತ್ಮಾ ಗಾಂಧಿಯವರು ತಮ್ಮ "ನವಜೀವನ"ದಲ್ಲಿ ಹೇಳುವದೇನಂದರೆ, ೬೦ ಕೋಟಿ ಬೆಲೆಯ ಪರದೇಶೀ ಬಟ್ಟೆಗಳ ಪೂರೈಕೆಯನ್ನು ನಮ್ಮಕ್ಕೆ ನಾವೇ ಮಾಡಿಕೊಳ್ಳುವದು ಅಸಾಧ್ಯವಾದ ಮಾತೇನಲ್ಲ. ಪ್ರತಿ ಒಬ್ಬ ಮನುಷ್ಯನು ಎರಡು ರೂಪಾಯಿ ಬೆಲೆಯ ನೂಲನ್ನು ತೆಗೆದರೆ, ಈ ಅಡಚಣಿಯು ತನ್ನಿಂದ ತಾನೇ ದೂರವಾಗುವದು. "ಇಂಗ್ಲಂಡ, ಜಪಾನ, ಇಲ್ಲವೇ ಅಮೇರಿಕೆ ಇವುಗಳೊಳಗಿನ ಯಾವದೇ ದೇಶದೊಳಗಿಂದ ಎರಡು ಮೊಳ ವಸ್ತ್ರವನ್ನು ನೀವು ತರಿಸಿದರೆ, ನಿಮ್ಮೊಬ್ಬ ದೇಶಬಾಂಧವನ ಬಾಯೊಳಗಿಂದ ಮೂರು ಆಣೆಯ ಅನ್ನವನ್ನು ಏನೂ ಮೋಬದಲೆಯಿಲ್ಲದೆ, ಕಸಕೊಂಡಂತಾಗುವದು" ಎಂದು ಮಹಾತ್ಮರು ಮುಂಬೈಯೊಳಗಿನ ಪರದೇಶೀ ಬಟ್ಟೆಗಳ ವರ್ತಕರಿಗೆ ಮಾಡಿದ ಉಪದೇಶದಲ್ಲಿ ಹೇಳಿರುವರು. ಮಹಾತ್ಮರು ಈ ವ್ಯಾಪಾರಿಗಳಿಗೆ ಉಪದೇಶಿಸಿದ್ದೇನೆಂದರೆ— "ನೀವು ಪರದೇಶೀ ಬಟ್ಟೆಗಳ ಆಯಾತವನ್ನು ಬಂದ ಮಾಡಿದರೆ, ಕೈಯಿಂದ ನೂಲು ತೆಗೆಯುವ ಮತ್ತು ನೇಯುವ ಹಿಂದುಸ್ತಾನದ ಸನ್ಮಾನನೀಯ ಸನಾತನ ಧರ್ಮವನ್ನು ಪುನರುಜ್ಜೀವನ ಮಾಡಿದ ಅನಂತ ಶ್ರೇಯವು ನಿಮಗೆ ದೊರೆಯುವದು. ಪ್ರತಿ ವರುಷ ೬೦ ಕೋಟಿ ರೂಪಾಯಿಗಳನ್ನು ಉಳಿಸಿದರೆ, ಅದರ ಪರಿಣಾಮವು ನಮ್ಮ ಬಾಂಧವರುಗಳಮೇಲೆ ಎಷ್ಟಾಗುವದೆಂದು ನೀವೇ ನೋಡಿರಿ. ಹತ್ತಿಯಮೇಲಾಗುವ ಎಲ್ಲ ಸಂಸ್ಕಾರಗಳು ಇಲ್ಲೇ ಆಗುವವು. ಅನಂತ ದರಿದ್ರಿಗಳಿಗೆ ಉಪಜೀವಿಕೆಯ ಸಾಧನವು ದೊರೆಯುವದು. ನಿಮಗೂ ಧಂದೆಯು ಸಿಗುವದು. ನಿಮ್ಮ ಸಂಪತ್ತು ವೃದ್ಧಿಹೊಂದುವದಲ್ಲದೆ, ನಿಮ್ಮ ದೇಶದ ಅವನತಿಯ ನಾಶಕ್ಕೆ ಅದು ಕಾರಣವಾಗದು. ಪರದೇಶಿ ಬಟ್ಟೆಗಳ ಅಪವಿತ್ರ ವ್ಯಾಪಾರವನ್ನು ಬಿಟ್ಟುಬಿಡುವದೆಂದರೆ, ಸ್ವದೇಶಿ ಬಟ್ಟೆಗಳನ್ನು ತಯಾರಿಸುವದೂ ಮತ್ತು ಅದನ್ನು ಸರ್ವತ್ರ ಪ್ರಚಾರಿಸುವದು. ಈ ಉದ್ಯೋಗವು ಸಾಹಸದ್ದಿದ್ದರೂ, ನಿಮ್ಮ ದೇಶಾಭಿಮಾನಕ್ಕೆ ಶೋಭಿಸುವಂತಿದೆ. ನೀವು ನನ್ನ ಕಿವಿಯಲ್ಲಿ ಹೇಳುವದರ ಅರ್ಥವು ನನಗೆ ತಿಳಿಯುತ್ತದೆ. ವಿದೇಶಿಯನ್ನು ಧಿಕ್ಕರಿಸಿ ಸ್ವದೇಶಿಯನ್ನು ಪ್ರಚಾರಿಸುವ ವ್ಯವಸ್ಥೆಗೆ ಕೆಲವು ವರ್ಷಗಳ ಅವಧಿಯು ಬೇಕೆಂದು ನೀವು ಹೇಳುತ್ತೀರಿ. ಇದಕ್ಕೆ ಪ್ರತ್ಯುತ್ತರವಾಗಿ ನಾನೂ ನಿಮಗ ಕೇಳುತ್ತೇನಲ್ಲ, ಸದ್ಯದ ನಿಮ್ಮ ಪರದೇಶೀ ಧಂದೆಯನ್ನು ಒಂದೇ ಕ್ಷಣದೊಳಗೆ ನೀವು ಬಿಡಿಸಲಿಕ್ಕೆ. ಈಗಿನ ವ್ಯಾಪಾರದಿಂದ ಹಿಂದುಸ್ತಾನಕ್ಕೆ ಭಿಕ್ಷೆ ಬೇಡುವ ಗತಿಯು ಪ್ರಾಪ್ತವಾಗಿದೆ. ಆದಕಾರಣ, ವ್ಯಾಪಾರೀ ವರ್ಗಕ್ಕೆ ನಾನು ಬಿನ್ನೈಸುವದೇನಂದರೆ, ನಿಮ್ಮ ಗಿರಾಕಿಗಳ ವಿಡಂಬನೆಯನ್ನು ಮಾಡಬೇಡಿರಿ. ಹೆಂಗಸರಾಗಲಿ, ಗಂಡಸರಾಗಲಿ, ನಿಮ್ಮ ಅಂಗಡಿಗೆ ಬಂದಾಗ, ಅವರಿಗೆ ಜಪಾನೀ ಧೋತರಗಳನ್ನು ಮತ್ತು ಸಾಡಿಗಳನ್ನು ತೋರಿಸಿ, ಮೋಹಿಸಬೇಡಿರಿ. ಇದಕ್ಕಿಂತ ಖಾದಿಯ ಅರಿವೆ ಸೊಬಗನ್ನೇ ಗಿರಾಕಿಗಳ ಕಣ್ಣಿಗೆ ತಂದು, ಅದರ ರುಚಿಯನ್ನೇ ಅವರಿಗೆ ಹಚ್ಚಿರಿ. ರೇಶಿಮೆಯಿಂದ ಅತ್ಯುತ್ಕೃಷ್ಟವಾದ ಗುಲಾಬದ ಹೂವನ್ನು ರಚಿಸಿದರೆ, ಅದರೊಳಗೆ ನಮ್ಮ ತೋಟದಲ್ಲೇ ಅರಳಿದ ಗುಲಾಬಿನ ನೈಸರ್ಗಿಕ ಸೊಬಗು, ಅದರ ಸಜೀವಕಳೆಯು ಕಂಡುಬರುವದೇನು? ಅದರಂತೆ ವಿದೇಶಿ-ಸ್ವದೇಶಿ ಬಟ್ಟೆಗಳ ಚಾತುರತೆಯಲ್ಲಿ ಮಹದಂತರವಿದೆಂದು ತಿಳಿಯಿರಿ. ಹಿಂದುಸ್ತಾನದ ದೃಷ್ಟಿಯಿಂದ ಸ್ವದೇಶಿ ಎಂದರೆ, ವಿದೇಶಿ ಬಟ್ಟೆಗಳಮೇಲಿನ ಶಾಶ್ವತಿಕ ಬಹಿಷ್ಕಾರವು. ಈ ಕಾರ್ಯದಲ್ಲಿ ನೀವು ಮುಂದರಿಯುವರೆಂದು ನಾನು ಹಾರೈಸುವೆನು."— ಇತ್ಯಾದಿ.

ಮಹಾತ್ಮರು ಪರದೇಶಿ ಬಟ್ಟೆಗಳ ವ್ಯಾಪಾರಿಗಳಿಗೆ ಮಾಡಿದ ಉಪದೇಶದೊಳಗಿನ ಅವತರಣಿಕೆಗಳಿವು. ಅದರಂತೆ ದಲಾಲರಿಗೂ, ಅಂಗಡಿಕಾರರಿಗೂ, ಗಿರಾಕಿಗಳಿಗೂ ಅವರು ವಿನಯಪೂರ್ವಕ ಅಪ್ಪಣೆ ಮಾಡಿಸಿರುವರು. ಹಿಂದಿ ಜನರ ದೈವದುರ್ವಿಲಸಿತವೇ ಇಷ್ಟು ವಿಚಿತ್ರವದೆ— ಅವರಿಗೆ ಪ್ರತಿ ಒಂದು ಹೆಜ್ಜೆಯನ್ನು ಇಡಬೇಕಾದರೆ, ಪರರ ಸಹಾಯವನ್ನು ನಿರೀಕ್ಷಿಸಬೇಕಾಗಿದೆ. ನಮ್ಮ ಮನೆಯೊಳಗೆ ದೀಪ ಹಚ್ಚಿ, ಬೆಳಕು ಮಾಡುವವರು ಪರರು. ನಮ್ಮ ಭಗಿನಿಯರಿಗೆ ಬಳೆಗಳನ್ನು ಹಾಕುವದಾದರೂ, ಪರದೇಶದಕಡೆಗೆ ನೋಡಬೇಕಾಗುತ್ತದೆ. ಯುರೋಪವೇ ನಮ್ಮ ಸ್ತ್ರೀಯರ ಸೌಭಾಗ್ಯವನ್ನು ಮಂಡಿತಮಾಡಬೇಕಲ್ಲವೇ? ಪರದೇಶಿ ಬಟ್ಟೆಗಳೇ ನಮಗೆ ಹೊದಿಸಿ, ನಮ್ಮ ಲಜ್ಜೆಯನ್ನು ಕಾಪಾಡಬೇಕಾಗಿದೆ. ಇಷ್ಟು ದಿಗಂಬರ ವೃತ್ತಿಯು, ನಮ್ಮ ಮೈಗಳ್ಳತನದಿಂದ, ಸ್ವಾರ್ಥದಿಂದ, ಪರಾವಲಂಬಿತನದಿಂದ ನಮಗೆ ಪ್ರಾಪ್ತವಾಗಿದೆ. ನಮಗೆ ಬೇಕಾದಷ್ಟು ಹತ್ತಿಯು ನಮ್ಮ ದೇಶದಲ್ಲಿ ಬೆಳೆಯುತ್ತಿದ್ದು, ಅದರ ವಸ್ತ್ರವನ್ನು ನೇಯುವದಾದರೆ, ಪರದೇಶಕ್ಕೆ ಅದನ್ನು ಕಳುಹಿಸಿ, ಅಲ್ಲಿ ತಯಾರಾದ ಬಟ್ಟೆಗಳನ್ನು ಪುನಃ ಇಲ್ಲಿಗೆ ತಂದು, ನಾವು ಅವನ್ನು ಕೊಂಡುಕೊಳ್ಳುವದೆಂದರೆ, ನಮ್ಮ ಪರಾವಲಂಬಿತನದ ಪರಾಕಾಷ್ಠೆಯಾಯಿತೆಂದು ಹೇಳಬೇಕಲ್ಲವೇ? ಪರದೇಶಿ ಗಿರಣಿಗಳು ನಮ್ಮ ಉದ್ಯೋಗ ಧಂದೆಗಳನ್ನು ಮುಳುಗಿಸುವ ಮೊದಲು, ಬ್ರಿಟಿಷ ರಾಜ್ಯವು ಪ್ರಾರಂಭಿಸುವ ಪೂರ್ವದಲ್ಲಿ, ನಾವು ತೊಗಟೆಗಳನ್ನೂ, ಚರ್ಮಗಳನ್ನೂ ಹೊದ್ದುಕೊಂಡು, ಸಂಸಾರಯಾತ್ರೆಯನ್ನು ನಡೆಸುತ್ತಿದ್ದಿಲ್ಲ. ವಿಧವಿಧದ ಉತ್ತಮೋತ್ತಮ ಬಟ್ಟೆಗಳು ಇಲ್ಲಿ ತಯಾರಾಗಿ, ಪರದೇಶಕ್ಕೂ ಸಾಗಿಸುವಷ್ಟು ಅವು ಖ್ಯಾತಿಹೊಂದಿದ್ದವು. ಈಗ ನೋಡಿದರೆ, ಅದರ ತೀರ ವಿಪರೀತ ಸ್ಥಿತಿಯಾಗಿದೆ. ಸುದೈವದ ಮಾತೆಂಬದಿಷ್ಟೇ— ನಮ್ಮ ಉದ್ಧಾರವನ್ನು ನಾವೇ ಮಾಡಿಕೊಳ್ಳುವದು ಇನ್ನೂ ಶಕ್ಯವಿದೆ. ರೋಗವು ಸೂಂಕಿ ಭಯಂಕರವಾದರೂ, ಅದು ತಲೆಗೇರಿಲ್ಲ. ಅಸಾಧ್ಯವಾಗಿಲ್ಲ. ವಿದೇಶಿ ಬಟ್ಟೆಗಳ ಬಹಿಷ್ಕಾರದ ಔಷಧಿಯನ್ನು ವ್ಯವಸ್ಥಿತ ರೀತಿಯಿಂದ ಹೊತ್ತುಹೊತ್ತಿಗೆ ದೇಶಕ್ಕೆ ಕುಡಿಸಿದರೆ, ಅದರೊಂದಿಗೆ ಕೈರಾಟಿಯ, ಕೈಮಗ್ಗಗಳ ಅನುಪಾನವನ್ನು ಸಾಗಿಸಿದರೆ ನಿಃಸಂಶಯವಾಗಿ ರೋಗ ಪರಿಹಾರವಾ

ಗುವದು ಮಹಾತ್ಮರಿಂದ ಚಿಕಿತ್ಸಕರ ಕೈಯೊಳಗೆ ಇರುವ ಪರಾವಲಂಬಿತನದ ಬೇನೆಯು ಎಷ್ಟು ಜಡ್ಡಾದರೂ, ಅರೆಕ್ಷಣ ಸಹ ತಡಿಯದು. ಅವರ ಉಪಾಯಗಳು ರಾಮಬಾಣದಂತಿವೆಂಬದು, ಜನರಿಗೆ ಮತ್ತೊಮ್ಮೆ ಮನಗಾಣಿಸುವ ಅವಶ್ಯಕತೆಯೇನಿಲ್ಲ. ಜನರು ಹೇಳಹೇಳಿದ ಉಪಚಾರಗಳನ್ನು ಶಾಂತವಾಗಿ, ವಿಶ್ವಾಸಪೂರ್ವಕವಾಗಿ, ಅತ್ಯಗ್ರರಿಗೆ ಸಹ ಉಪದ್ರವವಾಗಗೊಡದೆ, ಚಿಕಾಟಿಯಿಂದ ನಡಿಸುತ್ತಿರಬೇಕು. ಕುಪಥ್ಯವನ್ನು ನಡಿಸುವವರು ವೈದ್ಯರಾದರೆ ಮಾತ್ರ, ವೈದ್ಯರ ಉಪಾಯಗಳೆಲ್ಲ ಗಾಳಿಯಲ್ಲೇ ಹಾರಿ ಹೋಗುವವು. ಇದನ್ನಷ್ಟು ಎಚ್ಚರಿಡಿರಿ, ಮತ್ತು ಎಚ್ಚರಿಟ್ಟು ದೃಢನಿಶ್ಚಯದಿಂದ ವಿದೇಶಿಯ ಬಹಿಷ್ಕಾರವನ್ನು ನಡಿಸಿದರೆ, ಅವಧಿಯೊಳಗೆ ಯಶ ದೊರೆಯದಿರದು. ವಿಶ್ವಾಸಃ ಫಲದಾಯಕಃ ಎಂದು ತುದಿಯಲ್ಲಿ ಖಾತ್ರಿಯಿಂದ ನೀವು ಮನಗಾಣುವಿರಿ.

ಸ್ಫುಟ ಸೂಚನೆಗಳು.

೧. ಲೋಕಮಾನ್ಯ ಟಿಳಕರ ಪುಣ್ಯತಿಥಿಯು ನಾಳಿನ ಆಗೋಸ್ತ ೧ ನೇ ತಾರೀಖಿಗಾಗುವದು. ಈ ದಿವಸವನ್ನು ಎಲ್ಲ ರಾಷ್ಟ್ರೀಯರು ಭಕ್ತಿಯಿಂದ ಪಾಲಿಸುವರೆಂದು ಕೋರುವೆವು. ಲೋಕಮಾನ್ಯರ ದಿವ್ಯ ಚರಿತ್ರವು ಅಜರಾಮರವಾಗಿದೆ. ಅವರ ಪ್ರಭೆಯು ಹಿಂದಿ ಜನತೆಯೊಳಗೆ, ಅವರ ಅಂತಃಕರಣದಲ್ಲಿ, ತೇಜೋಮಯವಾಗಿ ಸದೈವ ಹೊಳೆಯುತ್ತಿರುವದು. ಅವರು ನಿರ್ಮಿಸಿದ ದೇಶಭಕ್ತಿಯ ಜ್ಯೋತಿಯು ನಮಗೆ ಸ್ವರಾಜ್ಯದ ದಾರಿಯಲ್ಲಿ ಸರಳ ಗತಿಯಿಂದ ಮುಂದರಿಯಲಿಕ್ಕೆ ಒಂದೇ ಒಂದು ಆಧಾರವಾಗಿರುವದು. ಇಂಥ ಪುಣ್ಯಾತ್ಮ ದೇಶಭಕ್ತರ ಪುಣ್ಯತಿಥಿಯನ್ನು ತಕ್ಕ ಕಾರ್ಯಕ್ರಮದಿಂದ ನೆರವೇರಿಸುವದು ನಮ್ಮೆಲ್ಲರ ಕರ್ತವ್ಯವು. ನಮ್ಮ "ಜನ್ಮಸಿದ್ಧ ಹಕ್ಕುಗಳಿಗಾಗಿ," ನಾವು ನಡಿಸುತ್ತಿದ್ದ ಕಾದಾಟವನ್ನು ನೋಡಿ, ಸ್ವರ್ಗಲೋಕದೊಳಗೆ ಅವರು ಹರ್ಷಭರಿತರಾಗಿರಲಿಕ್ಕೆ ಸಾಕು. ಇನ್ನು ಈ ದಿವಸವು ರಾಷ್ಟ್ರೀಯ ದಿನವೆಂದು ವರ್ಷಾನುವರ್ಷ ನಾವು ಪಾಲಿಸುತ್ತಿರಬೇಕು. ಈ ವರುಷ ಪುಣ್ಯಾತ್ಮರ ಸಂತರ್ಪಣೆಗಾಗಿ, ಒಂದು ವಿಶಿಷ್ಟ ಕಾರ್ಯವನ್ನು ಈ ದಿವಸ ಜರುಗಿಸಬೇಕಾಗಿದೆ. ಅದೇನೆಂದರೆ— ವಿದೇಶಿ ಬಟ್ಟೆಗಳನ್ನೆಲ್ಲ ತ್ಯಜಿಸಿ, ಪೂರ್ಣ ಸ್ವದೇಶಿ ಬಟ್ಟೆಗಳನ್ನು ಎಲ್ಲರೂ ಧರಿಸುವಂತೆ ಯೋಜನೆಯನ್ನು ಮಾಡಿಕೊಂಡು, ಅದನ್ನು ಈ ಪುಣ್ಯತಿಥಿಯ ದಿವಸ ಪೂರ್ಣಮಾಡಿಸತಕ್ಕದ್ದು. ವಿದೇಶಿಯ ಬಹಿಷ್ಕಾರ, ಸ್ವದೇಶಿಯ ಸ್ವೀಕಾರ, ಇವೆರಡನ್ನೂ ಸಾಧಿಸಿದರೆ, ಲೋಕಮಾನ್ಯರಿಗೆ ಇದರಿಂದಾದಷ್ಟು ತೃಪ್ತಿಯು ಮತ್ತಾವದರಿಂದಲೂ ಆಗದು. ಕಾಂಗ್ರೆಸ ಸಭೆಗೆ ಬಹಿಷ್ಕಾರದ ಉಪಾಯವು ಮಾನ್ಯವಾಗಬೇಕೆಂದು ಲೋಕಮಾನ್ಯರು ಅಷ್ಟಿಷ್ಟು ಹೆಣಗಿಲ್ಲ. ಅವರಿಗೆ ಅತಿ ಪ್ರಿಯವಾದ ಚಳವಳಿಯಿದು. ಅದನ್ನು ಕೃತಜ್ಞತೆಯಿಂದ ಕೊನೆಗಾಣಿಸುವದು, ನಾವು ಅವರಿಗೆ ತೀರಿಸತಕ್ಕ ಸಾಲವಾಗಿರುವದು. ಆದಕಾರಣ ೧ ನೇ ತಾರೀಖಿನ ಶುಭ ದಿವಸ ವಿದೇಶಿ ಬಟ್ಟೆಗಳ ಬಹಿಷ್ಕಾರವನ್ನು ಸರ್ವತ್ರ ಪ್ರಕಟಿಸಿ, ಕೃತಿಯಿಂದ ಆಚರಿಸಿ, ಶಾಂತಿಮಯ ಅಸಹಕಾರದ ಎರಡನೇ ಅಧಿಯೋಗದೊಳಗೆ ಪರಿಪೂರ್ಣ ಜಯವನ್ನು ರಾಷ್ಟ್ರೀಯರೆಲ್ಲರು ಹೊಂದುವರೆಂದು ಹಾರೈಸುವೆವು.

೨. "ವಿಚಾರಿ" ಪತ್ರದ ಕಳೆದ ಸಂಚಿಕೆಯೊಳಗೆ ಕಾರವಾರದಲ್ಲಿ ನಡೆದ ಸಾಯಕಲ್ ಖಟ್ಲೆಯ ಕಾಗದಗಳು ಜಾಹೀರಾಗಿವೆ. ಮ್ಯುನಿಸಿಪಾಲಿಟಿಗಳ ಅಧಿಕಾರಿಗಳಿಗೆ, ತೆರಿಗೆ ಕೊಡದ ಮಾಲೀಕರ ಕಡೆಯಿಂದ, ಅವರ ತೆರಿಗೆಗೆ ಪಾತ್ರವಾದ ಜಿನಸಿಯನ್ನು ಮಾಲೀಕರ ಒಪ್ಪಿಗೆಯಿಲ್ಲದೆ, ನೋಟೀಸು ಮಾಡದೆ, ಅಕ್ರಮ ಜಪ್ತ ಮಾಡಿದಂತೆ, ಕಿತ್ತಿಡಲಿಕ್ಕಾಗುತ್ತದೇನು, ಎಂಬುದೇ ಈ ಪ್ರಕರಣದೊಳಗೆ ಮುದ್ದೆಯ ಸಂಗತಿಯಾಗಿತ್ತು. ಸಾಯಕಲದ ತೆರಿಗೆ ಕೊಡಲಿಲ್ಲೆಂದು, ಅದಕ್ಕೆ ಮ್ಯುನಿಸಿಪಲ ನಂಬರು ಇಲ್ಲೆಂದು, ಅದನ್ನು ಮಾಲೀಕನಿಂದ ತೆಗೆದುಕೊಂಡು ಹೋಗಲಿಕ್ಕಾಗುತ್ತದೇನು? ಎಂಬುದು ಪ್ರತ್ಯಕ್ಷ ಫಿರ್ಯಾದಿಯೊಳಗೆ ವಿಚಾರಣೆಯಾಗಿದೆ. ಮಾಜಿಸ್ಟ್ರೇಟರು ತಮ್ಮ ೧೧-೧೨ ಪ್ಯಾರಾಗಳಲ್ಲಿ ಈ ಮುದ್ದೆಯ ತೀರ್ಪು ಕೊಟ್ಟಿರುವರು. ಅದನ್ನು ಫಿರ್ಯಾದಿಗೆ ಪೂರ್ಣವಾಗಿ ಅನುಕೂಲವಾಗಿದೆ. ಇದರಮೇಲಿಂದ, ಆರೋಪಿಯು, ಮ್ಯುನಿಸಿಪಲ ಆಕ್ಟಿನ ಕಲಮು ೮೨, ೧೯೫, ೧೬೮ ಮತ್ತು ಪೋಟ ಕಾನೂನುಗಳ ನಿಯಮ ೧೨, ಇವುಗಳನ್ನೆಲ್ಲ, ಕಾಲ್ಕೆಳಗೆ ಹಾಕಿಕೊಂಡು, ದಮನಿ ಅಧಿಕಾರವನ್ನು ನಡಿಸಿದಂತಾಗಿದೆಯೆಂದು ಧ್ವನಿತವಾಗುತ್ತದೆ. ಇವರೊಳಗೆ ಆರೋಪಿತ ಚೀಫ ಆಫೀಸರನಿಗೂ ಫಿರ್ಯಾದಿಯ ತಂದೆಗೂ ಪರಸ್ಪರ ದ್ವೇಷವಿತ್ತೆಂದು ಕಂಡುಬಂದಾಗ, ಇಂಥ ದಮನಿ ಕೃತ್ಯವನ್ನು ನಡಿಸುವದರಲ್ಲಿ ಆರೋಪಿತನ ದ್ವೇಷಭಾವನೆಯು ಕಾರಣವಾಗಬಹುದಾದ್ದರಿಂದ, ಅವನ ಅಪ್ರಾಮಾಣಿಕ ಹೇತುವು ಕಂಡುಬರುವದು (This taking possession & retaining the cycle appeared to have been influenced by the ill-will, the accused bore towards the complainant's father) ಎಂದು ಮಾಜಿಸ್ಟ್ರೇಟರು ಅನ್ನುತ್ತಾರೆ. ಹೀಗಿದ್ದರೆ, ಆರೋಪಿತನು ನಿರ್ದೋಷಿಯಾಗಿ ಯಾಕೆ ಬಿಡಲ್ಪಟ್ಟನು? ಪುರಾವೆ ಕಾಯಿದೆಯ ಸೂಕ್ಷ್ಮದರ್ಶಕ ಯಂತ್ರದೊಳಗಿಂದ, ಅವನು ಕಾಣದೇ ಹೋದದ್ದರಿಂದ ಪಾರಾಗಿರಲಿಕ್ಕೆ ಸಾಕು. ಅನುಭವಿಕ ಕಾರಭಾರಿಗಳು ಅಧ್ಯಕ್ಷರಿದ್ದ ಮ್ಯುನಿಸಿಪಾಲಿಟಿಯಲ್ಲಿ, ಕೆಲವು ಖಾತೆಯ ಕೆಲಸದಲ್ಲಿ ಪರಿಣತ ಮತ್ತು ತಜ್ಞರೆಂದು ಎಣಿಸಲ್ಪಡುವ, ಚೀಫ ಆಫೀಸರನು, ಇಂಥ 'ಹವಾ ಕರೇನೂ ಕಾಯಿದೆ'ಯ ಅಮಲು ನಡಿಸಿದ್ದು, ಆಶ್ಚರ್ಯಕರವು. ಇಂಥ ಆಫೀಸರನು ಎಲ್ಲಿ ಮ್ಯುನಿಸಿಪಾಲಿಟಿಗಳಿಗೆ ದೊರೆತರೆ, ಅಧ್ಯಕ್ಷರೂ ಬೇಡ, ಮೆಂಬರರೂ ಬೇಡ; ಎಲ್ಲ ಕೆಲಸವನ್ನು ಇವನೊಬ್ಬನೇ ನಡಿಸ್ಯಾನು. ಮತ್ತು ಸ್ಥಾನಿಕ ಸ್ವರಾಜ್ಯವನ್ನು ಮುರಿದು, ಚೀಫ ಆಫೀಸರೀ ಸ್ವರಾಜ್ಯವನ್ನು ಸರಕಾರವು ಸ್ಥಾಪಿಸಿದಂತಾಗುವದು.

೩. ಶಿರಸಿಯಲ್ಲಿ ನಡೆದ ಪಿಕೆಟಿಂಗ ಕೆಲಸದಲ್ಲಿ ಅಬಕಾರಿ ಕಂಟ್ರ್ಯಾಕ್ಟರನು ನಡಿಸಿದ ನಿಂದ್ಯ ಕುಯುಕ್ತಿಗಳು ಹೊರಬಿದ್ದಿರುವವು. ಅವರ ಸಾದ್ಯಂತ ಇತಿಹಾಸವನ್ನು ಒಬ್ಬ 'ಪ್ರೇಕ್ಷಕನು' ನಮ್ಮ ಕಳೆದ ಸಂಚಿಕೆಯೊಳಗೆ ಪ್ರಕಟಿಸಿರುವನು. ಮದ್ಯಪಾನ ನಿಷೇಧದ ಕಾರ್ಯಕ್ರಮದೊಳಗೆ ಅತ್ಯಾಚಾರಿಗಳು ಯಾರೆಂದು ಮಾಮಲೇದಾರರಿಗೆ ಸಹ ಮನಗಾಣಿಸಿದ್ದಕ್ಕೆ ನಾವು ಕಂಟ್ರ್ಯಾಕ್ಟರರಿಗೆ ಯಾಕೆ ಹೊಗಳಬಾರದು? ನಿಷ್ಪಾಪಿ ಸ್ವಯಂಸೇವಕರಿಗೆ ಅತ್ಯಾಚಾರಿಗಳೆಂದು ಅಚ್ಚು ಹೊಡಿಸುವ ಮತ್ತು ದಂಡಿಸುವ ವ್ಯೂಹದ ಪೂರ್ವ ರಂಗವು ಯಶಸ್ವಿಯಾಯಿತೆಂದು ಕಂಟ್ರ್ಯಾಕ್ಟರನು ತಿಳಿಯುವದರೊಳಗೆ, ಅವನ ವ್ಯೂಹವು ಹೊರಬಿತ್ತು. ತನ್ನ ನೌಕರನ ಕಡೆಯಿಂದ ರಾತ್ರಿ ಹೊತ್ತಿನಲ್ಲಿ ಮಾಮಲೇದಾರನಂಥ ಅಧಿಕಾರಿಗಳ ಮನೆಯ ಮೇಲೆ ಕಲ್ಲು ಒಗೆಸುವ ಈ ಕಂಟ್ರ್ಯಾಕ್ಟರನು, ತನ್ನ ಸ್ವಾರ್ಥಕ್ಕಾಗಿ ಮತ್ತೇನು ಮಾಡನು? ಸತ್ಯವು ಇಷ್ಟರೊಳಗೆ ಹೊರಬೀಳದಿದ್ದರೆ, ಎಂಥೆಂಥ ಅನರ್ಥಕ್ಕೆ ಇವನು ಕಾರಣನಾಗುತ್ತಿದ್ದನೆಂದು, ನಮ್ಮಿಂದ ಹೇಳಲಿಕ್ಕಾಗದು. ಮಾಮಲೇದಾರರಿಗೆ ಪೋಲಿಸ ಪಾರ್ಟಿಯನ್ನು ಕರೆಸುವ ಅಗತ್ಯ ಬೀಳುವಷ್ಟು ಮಟ್ಟಿಗೆ ಇವನ ಕಾರಸ್ಥಾನವು ಮುಂದರಿದಿತ್ತು. ಮಾಮಲೇದಾರರ ಮನೆಗೆ ೧೦೦-೧೫೦ ಜನರೂ ನೆರೆದಿದ್ದರು. ಪೋಲಿಸರು ಇವನಿಗೆ ನೆರವಾಗಿದ್ದರೆ, ದಂಗೆಯಾಯಿತೆಂದು ಕೂಗಲಿಕ್ಕೂ ಆಸ್ಪದವಾಗುತ್ತಿತ್ತು. ಮತ್ತೇನೇನು ಆಗುತ್ತಿತ್ತೆಂದು ಈಗ ಹ್ಯಾಗೆ ಹೇಳುವದು? ಬೆಂಕಿಯ ಸಣ್ಣ ಕಿಡಿಯನ್ನು ಮನೆಗೆ ಹಚ್ಚಿದರೆ, ಮನೆಯೆಲ್ಲ ಬೆಂಕಿಯೇ ಬೆಂಕಿಯಾಗುವದಕ್ಕೆ ಎಷ್ಟು ಹೊತ್ತು? ಧಾರವಾಡದಲ್ಲಿ ಇದೇ ಪ್ರಕಾರವಾಗಿದೆಂದು, ಲೋಕಪಕ್ಷವು ಮನಗಂಡಿರುವದು. ಶಿರಸಿಯಲ್ಲಿ ಹೊರಬಿದ್ದ ಸತ್ಯದ ಬೆಳಕಿನಿಂದ ಧಾರವಾಡದಮೇಲೆ ಮತ್ತಿಷ್ಟು ಪ್ರಕಾಶವು ಬೀಳುವದೆಂದು ನಮಗೆ ಕಾಣುತ್ತದೆ. ಇದೇನೂ ಇರಲಿ. ಶಿರಸಿಯ ಮಾಮಲೇದಾರರೂ, ಪೋಲಿಸರೂ ಸತ್ಯವನ್ನು ಹೊರಗೆ ತರಲಿಕ್ಕೆ ಯತ್ನಿಸಿದ್ದಕ್ಕಾಗಿ, ಮತ್ತು ನ್ಯಾಯಬುದ್ಧಿಯನ್ನು ತೋರಿಸಿದ್ದಕ್ಕಾಗಿ, ಅವರನ್ನು ಮನಃಪೂರ್ವಕ ಹೊಗಳುವೆವು. ನಿರಪರಾಧಿ ಸ್ವಯಂಸೇವಕರಮೇಲೆ ಬಂದ ಆಪತ್ತಿಯನ್ನು ನ್ಯಾಯ್ಯ ಅಧಿಕಾರಿಗಳು, ಖರೆ ನ್ಯಾಯ್ಯ ವರ್ತನದಿಂದ ಹ್ಯಾಗೆ ಪರಿಹರಿಸಬಹುದೆಂಬದನ್ನು ತೋರಿಸಲಿಕ್ಕೆ ಇದೊಂದು ದೃಷ್ಟಾಂತವು. ಅದನ್ನೇ ಎಲ್ಲ ಕಡೆಯ ಅಧಿಕಾರಿಗಳು ಅನುಕರಿಸಿದರೆ, ಅತ್ಯಾಚಾರದ ಸ್ಪರ್ಶ ಸಹ ಆಗದೇ, ಮದ್ಯಪಾನದಂಥ ಅನರ್ಥಕರ ವ್ಯಸನದ ಉಚ್ಚಾಟನವು ಅಲ್ಪಾವಧಿಯಲ್ಲಾಗದಿರದು.

೪. ಅಂಕೋಲಾ ಮತ್ತು ಸಿದ್ದಾಪೂರ ತಾಲೂಕುಗಳು ಸ್ವರಾಜ್ಯ ಫಂಡಿನ ವಿಷಯವಾಗಿ, ಹಳ್ಳಿಹಳ್ಳಿಗಳಲ್ಲಿ ಮಾತ್ರ ವಸೂಲಿಕ್ರಮವು ನಡೆಯುತ್ತಿದ್ದು, ಅವುಗಳ ಒಟ್ಟು ರಕಮು ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಗೆ ತಿಳಿಸಲಿಲ್ಲಾದ್ದರಿಂದ, ಅದು ಪ್ರಸಿದ್ಧವಾಗಲಿಲ್ಲ. ಈಗ ಆ ಫಂಡಿನ ರಕಮುಗಳು ನಿಶ್ಚಿತವಾಗಿ, ಅಂಕೋಲೆಯಲ್ಲಿ ೨,೫೦೦ ಮತ್ತು ಸಿದ್ದಾಪೂರದಲ್ಲಿ ೩,೦೦೦ ರೂ ವರೆಗೆ ಬಂದು ಮುಟ್ಟಿದ್ದಾವೆಂದು ತಿಳಿಯುತ್ತದೆ, ಈ ರಕಮುಗಳಿಗಿಂತ ಇಷ್ಟರಲ್ಲಿ ಮತ್ತೊಂದು ಸಾವಿರ ರೂಪಾಯಿ ಕೂಡಿರಬೇಕು. ಕಮಿಟಿಗಳು ಹೊಸದಾಗಿಯೂ, ಅನುಭವವಿಲ್ಲದವುಗಳಾಗಿಯೂ ಇದ್ದ ಮೂಲಕ, ಅಂಕೋಲೆಯಲ್ಲಿ ಶ್ರೀ ಬಸ್ರೂರ ಮತ್ತು ಬಳಕೂರವರ ಸಹಾಯವೂ, ಸಿದ್ದಾಪೂರದಲ್ಲಿ ಶ್ರೀ ಕರ್ಕಿಯವರ ಸಹಾಯವೂ, ಆಯಾಯ ಜನರಿಗೆ ಸಿಕ್ಕಿದ್ದು ಬಹಳೇ ಉಪಯೋಗವಾಯಿತು. ಡಿಸ್ಟ್ರಿಕ್ಟ ಕಮಿಟಿಯಿಂದ ತಾಲೂಕಾ ಕಮಿಟಿಗೆ ಆಗಬಹುದಾದ ಸಹಾಯವೆಂದರೆ, ಇದೇ ಸರಿ. ಹೀಗಾಗಿ ಅಂಕೋಲಾ ಮತ್ತು ಸಿದ್ದಾಪೂರದ ಕಮಿಟಿಗಳು ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಗೂ ಮತ್ತು

ಬಸ್ರೂರ, ಬೆಳಕೂರ, ಮತ್ತು ಕಕೇರಂಥ ಬೆರಗಿಗೂ, ಅವರು ಕೊಟ್ಟ ಸಹಾಯ ಮತ್ತು ಗೇಪದರ್ಶಕತ್ವದ ಬಗ್ಗೆ ಋಣಿಗಳಾಗಿರುವರು ಶ್ರಮಃ ಯಾರಿಗಾದರೂ ಇನ್ನಷ್ಟು ವಂತಿಗೆ ಕೊಡ್ಬೇಕಾಗಿದ್ದರೆ, ಅದನ್ನು ಕೊಟ್ಟು ಡಿಸ್ಟ್ರಿಕ್ಟ ಕಾಂಗ್ರೆಸ ಕಮಿಟಿಯ ಕಡೆಂದ ತಮ್ಮ ತಮ್ಮ ಸಾಲವನ್ನು ತೀರುವರೆಂದು ಕೋರುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಯು ಚನ್ನಾಗಿ ಬೀಳುತ್ತದೆ. ಈವರೆಗೆ ೫೬-೬೦ ಇಂಚು ಬಿದ್ದ ಬಳಿಕ ರ ಕೆಮ್ಮು ಸನ್ನಿಪಾತ ವಗೈರೆ ರೋಗಗಳು ಇದ್ದೇ ಇರುವವು. ಸುಧಾನ್ಯಗಳ ಧಾರಣೆ ಮಾನವೇನು ಇಳಿಯಲಿಲ್ಲ.

ಈ ತಾಲೂಕ ಕಾಂಗ್ರೆಸ ಕಮಿಟಿ ವತಿಯಿಂದ ಗಳೂ ಟಿಳಕ ಸ್ವರಾಜ್ಯ ಫಂಡು ಮತ್ತು ಮೆಂಬರ ಕೂಡಿಸುತ್ತಿರುವರು. ಈ ವರೆಗೆ ಫಂಡು ೩,೦೦೦ ವರೆಗೆ, ಮೆಂಬರರು ೩,೨೦೦ರ ವರೆಗೆ ಹೋಗಿರುವದೆ. ಮದ್ಯಪಾನ ನಿಷೇಧಕ್ಕಾಗಿ, ಪಿಕೆಟಿಂಗ ಕೆಲಸದ ಸ್ವಯಂಸೇವಕರ ಜನಾವಳಿ ಮಾಡುವ ವಿಚಾರ ನಡೆದು ಸಧ್ಯಕ್ಕೆ ಅದರ ಪೂರ್ಣತೆಯಾಗುವ ಚಿಹ್ನೆಗಳು ಕಾಣುತ್ತವೆ. ಇಷ್ಟರಲ್ಲಿಯೇ ಅಳವೆಕೋಡಿ ಮತ್ತು ಚಿತ್ರಗಿ ಕೇರಿ ಅಂಗಡಿಗಳಲ್ಲಿ ಕಳೆಯ ವಿಕ್ರಿಯು ಕಡಿಮೆಯಾಗಿದೆಂದು ತಿಳಿಯುತ್ತದೆ. ಹಳ್ಳಿಗಳಲ್ಲಿ ಸ್ವಾಭಿಮಾನದಿಂದ ಹರಕಂತ್ರ, ಅಂಬೀರ ಪ್ರಾಮುಖ್ಯ, ಕ್ರಿಶ್ಚನ, ಮುಕ್ರಿ ಜಾತಿಗಳ ಕೂಟಗಳಾಗಿ, ಕಳೆ ಕುಡಿಯಬಾರದಾಗಿ ಠರಾವುಗಳಾಗಿ ಜಾರಿಯಲ್ಲಿ ಬಂದವೆ.

ಈ ಶಹರದ ಹರಕಂತ್ರ ಜ್ಞಾತಿಯಲ್ಲಿ ಸಹ, ಒಂದು ಪ್ರೀತ ದರ್ಶನ ಕಾಲಕ್ಕೆ ಅಪ್ಪಿತಂ ಕೆಲವರಿಗೆ ಬೇರೆ ಹಣಗಳಲ್ಲಾದ ಅಪಮಾನದಿಂದ, ನಿನ್ನೆ ಎಲ್ಲ ಗಂಡಸರು, ಹೆಂಗಸರು ಮಕ್ಕಳ ಉಪದೇಶ ಸಹಾಯ ಕಡಿದು, ಈ ಹೊತ್ತಿನಿಂದ ಅದನ್ನು ಪೂರ್ಣ ತ್ಯಾಜ್ಯ ಮಾಡಬೇಕು, ಗಡಿ ... ಕ ದಿವಸರಿಗೆ ೫ ರೂಪಾಯಿ ದಂಡ ಮಾಡಿ, ಅದನ್ನು ಹಿಡಕೊಟ್ಟವರಿಗೆ ಕೊಡಬೇಕಾಗಿದೆ ೧ ರೂಪಾಯಿ ಬಾಕಸಾಯಿತಂತೆ.

ಸತತ ಪಿಕೆಟಿಂಗದಿಂದ ಹೆಂಡಕುಡಿ ಕತನವನ್ನು ಅಪಯಾಪಿ ನಿರ್ಮೂಲಿಸಬಹುದಾದರೂ, ನಮ್ಮ ಪವಿತ್ರ ದೇವಾಲಯಗಳಲ್ಲಿ ದೇವರ ನಿತ್ಯ ಸೇವೆ ಮಾಡುವ ಪೂಜಾರ್ತಿ ಜನರ ದುಶ್ಚಟವು ಅನ್ಯಾಯ ಮತ್ತು ಸರ್ವ ಪೂಜನದಿಂದ ನಿಷ್ಕಳಂಕಕ್ಕೆ ಎಷ್ಟರ ಅಡ್ಡಿಯು ಪವಿತ್ರತೆಗೆ ಎಷ್ಟು ಹಾನಿ ಎಂಬುದು ಬಹು ದುಃಖದ ವಿಚಾರವಾಗಿದೆ. ಇದಕ್ಕಾದರೂ ಒಂದು ಸುವಿಚಾರವೇ ಸರಿ.

ಕುಂದಾಪುರ ಗೌಡಸಾರಸ್ವತ ವಿದ್ಯಾರ್ಥಿನಿಯ ಆರೋಪಿಯ ಅಪರಾಧಕ್ಕಾಗಿ, ಅದರ ಹಿತವಾದಿಗಳ ವಾಪಿಸಾಗಿ ನ್ಯಾಯದಾನವೇನು ಕೊಟ್ಟಂತಾಗಿಲ್ಲ. ಡಿಪಾರ್ಟಮೆಂಟಿನ ಪ್ರಕರಣದಿಂದ ಮಾತ್ರ ಎಂಥ ನ್ಯಾಯ ಸಿಗುತ್ತದೆಂದು ಜನರು ಕಾದು ನೋಡುತ್ತಿರುವರು.

ಹಿರೇಗುತ್ತಿ ಗ್ರಾಮದ ನಿವಾಸಿಗಳ ನೈತಿಕ, ಧಾರ್ಮಿಕ, ಸಾಂಪತ್ತಿಕ, ಮೊದಲಾದವುಗಳಲ್ಲಿ ಏರುವ ಸಮಸ್ತ ಒಳಸೇತಿಯನ್ನು ಸುಧಾರಿಸುವ ಕಡೆ ಸಮಸ್ತರ ಕೆಲವು ಗೃಹಸ್ಥರ ಪ್ರಯತ್ನದಿಂದ ಈ ತಾ ೨೦ ನೇ ಜುಲೈ ಸನ್ ೧೯೩೧ ನೇ ಇಸವಿ ದಿವಸ ವೃದ್ಧ ಶ್ರೀ ಬಾಲಕೃಷ್ಣಮಾಸ್ತರ ... ಇವರ ಅಧ್ಯಕ್ಷತೆಯಲ್ಲಿ ಹಿರೇಗುತ್ತಿ ಗ್ರಾಮದ ನಿವಾಸಿಗಳ ಎಲ್ಲಾ ಜಾತಿಯವರ ಮಹಾ ಸಭೆಗೂಡಿ, ಆದ ಠರಾವುಗಳು —

೧ ಹಿರೇಗುತ್ತಿಯಲ್ಲಿ ಗ್ರಾಮಸಂಸ್ಥಾ ಸ್ಥಾಪನ ಮಾಡಬೇಕಾಗಿ ಗೊತ್ತುಪಡಿಸಿತು.

೨ ಪ್ರತಿಯೊಂದು ಜಾತಿಯಲ್ಲಿ ಜಾತಿವಾರ ಕಮಿಟಿ ವ್ಯವಸ್ಥಾಪಕ ಕಮಿಟಿ ಇರಬೇಕಾಗಿ ಗೊತ್ತುಪಡಿಸಿತು.

೩ ಪ್ರತಿಯೊಂದು ಜಾತಿಯಲ್ಲಿ ಯಾವದೇ ಒಂದು ತರದ ವ್ಯಾಜ್ಯಗಳುಂಟಾದರೆ ಅವು ಜಾತಿವಾರ ಕಮಿಟಿಯ ತರಿಂದ ನಿಕಾಲೆಗೆ ತಂದುಕೊಳ್ಳಬೇಕು. ಅಲ್ಲಿ ನಿಕಾಲೆಗೆ ಬಾರದೆ ಇರುವಂಥಾದ್ದು ವ್ಯವಸ್ಥಾಪಕ ಕಮಿಟಿ ಮುಂದೆ ಬಂದು ನಿಕಾಲೆ ಆಗಬೇಕು.

೪ ದೇಶೀ ವಸ್ತುಗಳನ್ನೇ ಉಪಯೋಗಿಸಬೇಕು.

೫ ಮದ್ಯಪಾನ ನಿಷೇಧ ಮಾಡಬೇಕು.

೬ ಈ ಸಂಸ್ಥೆಯ ಬಗ್ಗೆ ಪ್ರತಿವರ್ಷದ ಚೈತ್ರ ಶುದ್ಧ ೧೦ ರ ದಿವಸ ಎಲ್ಲಾ ಜಾತಿಯ ಗಂಡು ಹೆಣ್ಣು ಹುಡುಗರು ಕೂಡಾ ತಲೆಗೆ ೧ ಆಣೆಯಂತೆ ವಾರ್ಷಿಕ ವರ್ಗಣಿ ಕೊಡಬೇಕು.

ಈ ರೀತಿ ಠರಾವಾಗಿ ಈ ಬಗ್ಗೆ ಶ್ರೀ ಕಾಶಿನಾಥ ಹುಂಗನೇಟಿಯ ಮಾಸ್ತರ ರಾಮಕರ್ಣ ಶ್ರೀ ಗೆರಸಪ್ಪಾ ರಾಮಪ್ಪ, ಶ್ರೀ ಅನಂದರಾವ ... ಜೀರಣ್ಣ ನಾಯಕ ಮಾಸ್ತರ ವಗೈರೆರ ಎಲ್ಲ ಜನರ ಮನಸ್ಸು ಸಮಾಧಾನಗೊಳಿಸುವಂತೆ ಭಾಷಣ ಮಾಡಿದರು. ಅದರಂತೆ ಗ್ರಾಮಸಂಸ್ಥೆ ಸ್ಥಾಪನೆ ಆಗಿ ಈ ವರೆಗೆ ಜಾತಿವಾರ ಕಮಿಟಿಯಲ್ಲಾಗಲಿ, ವ್ಯವಸ್ಥಾಪಕ ಕಮಿಟಿಯಲ್ಲಾಗಲಿ ಸರಿಯಾಗಿ ಕೆಲಸ ನಡೆಯದೆ ... ದಿವಸದಿಂದ ನಮ್ಮಲ್ಲಿ ಕೇರಿ ... ಜಾತಿ ಪೈಕಿ ಪಡ್ತಿ, ಹರಕಂತ್ರ, ... ಜಾತಿ ... ಕೇರಿ ... ದ ... ಭಕ್ತ ಹಳ್ಳೇರ ಜಾತಿ ಮತ್ತು ... ಮಾತ್ರ ಒಂದೇ ಸರ್ತಿ ಒಂದು ಮಾಡಲಿಕ್ಕೆ ಆಗುವದಿಲ್ಲಂತ ಉಪಾಯ ಹೇಳಿ, ಅಸ್ತ್ರ ಶಸ್ತ್ರ ಕಡಿಮೆ ಮಾಡಿ ... ತಿಂಗಳೊಳಗೆ ಪೂರ್ಣ ಬಂದಮಾಡುತ್ತೇವೆಂತ ಸಭೆಯಲ್ಲಿ ವಚನಕೊಟ್ಟರು ... ತಾ ೧೭-೬ ೨೧ ನೇ ದಿವಸ ಆರೇರಜಾತಿ ... ಜಾತಿ ತಮ್ಮ ತಮ್ಮೊಳಗೆ ಸಭೆಸೇರಿ ಕೇರಿ ಕುಡಿಯುವದು ಪೂರ್ಣ ಬಂದಮಾಡಿ ... ಕುಡಿದರೆ ಪ್ರತಿ ಒಬ್ಬನು ... ತಮ್ಮ ಜಾತಿಗೆ ೫ ರೂಪಾಯಿ ದಂಡ ಕೊಡಬೇಕಾಗಿ ಮತ್ತು ಹಿಡಕೊಟ್ಟವರಿಗೆ ೨ ರೂಪಾಯಿ ಕೊಡಬೇಕಾಗಿ ಠರಾಯಿಸಿರುವರು. ಆ ದಿವಸದಿಂದ ಕೇರಿ ಅಂಗಡಿಯಲ್ಲಿ ಭಕ್ತ ನೊರೆಗಳ ವ್ಯಾಪಾರವೇ ನಮ್ಮಲ್ಲಿ ನಡೆದರೆ ವ್ಯಾಪಾರ ಕಾಣುವದಿಲ್ಲ. ಪರದೇಶೀ ವಸ್ತ್ರಗಳು ಯಾರೂ ಉಪಯೋಗಿಸಿದ್ದು ಕಂಡುಬರುವದಿಲ್ಲ.

ಶಿರಸಿ— ಕಳೆದ ಏಕಾದಶಿ ದಿವಸ ಜಾಹೀರ ಸಭೆಯಾಗಿ ಪರದೇಶೀ ವಸ್ತ್ರಗಳಿಗೆ ಬಹಿಷ್ಕಾರ ಹಾಕುವ ಕುರಿತು ಒಂದು ಪ್ರತಿಜ್ಞಾ ಪತ್ರಿಕೆಯು ತಯಾರಿಸಲ್ಪಟ್ಟು ಅದರ ಮೇಲೆ ಯಾವತ್ತು ಜನರ ದಸ್ತಾವೇಜ ಸಹಿಯು ಆಗಹತ್ತಿದೆ.

ಲಿಸಾದ ಕೋರ್ಟಿನಲ್ಲಿ ಈ ವರೆಗೆ ೧೧೧ ದಾವೆಗಳು ದಾಖಲಾಗಿದ್ದು ಅವುಗಳ ಪೈಕಿ ೪೦ ನಿಕಾಲೆಯಾಗಿರುವವು.

ಶ್ರೀ ಮಂಜಪ್ಪ ಹೆಗಡೆ ಹೊಸ್ಮನೆ ಇವರು ಎರಡು ವರ್ಗಗಳನ್ನು ತೆರೆದಿರುವದರಿಂದ, ನೂಲುವ ಕೆಲಸಕ್ಕೆ ಹೆಚ್ಚು ಪ್ರೋತ್ಸಾಹನವು ಸಿಕ್ಕಂತಾಗಿದೆ.

ಪಿಕೆಟಿಂಗದ ಕೆಲಸವು ನಡೆದೇ ಇದೆ. ಹಾದಿ, ಸಾಹೇಬರೂ ಅವರಂತೆ ಜವಳೀ ದುಕಾನದಾರರಾದ ಮಿ। ಒಸ್ಮಾಂವ ವ ಜ ... ಇವರು ತಮ್ಮ ಸಮಾಜದಲ್ಲಿ ಆದಷ್ಟು ಪ್ರಯತ್ನ ಮಾಡುತ್ತಿರುವರು. ಆದರೆ, ಸಮಾಜದ ನಿರ್ಬಂಧಗಳನ್ನು ಲೆಕ್ಕಿಸದ, ಸ್ವೇಚ್ಛಾಚಾರಿಗಳಾಗಿರುವ ಕೆಲವರು ಮಾತ್ರ ಬಹಿರಂಗವಾಗಿಯೇ ಬಾಟ್ಲಿಗಳನ್ನು ಎತ್ತುತ್ತಿರುವರು ಹಿಂದಾಯಲಿಲ್ಲ.

ಸಿದ್ದಾಪುರ— ಪುನರ್ವಸೂ ನಕ್ಷತ್ರದ ಮಳೆಯು ಸಹ ಹೇಳಿದ ಹಾಗೆ ಗದ್ದೆಯಲ್ಲಿ ನೀರು ಆಗದೆ ಇದರ ದರ್ಶನ ಪ್ರಕರ ನೋಡಹೋಗುತ್ತ ಕಾಡುತ್ತಿದೆ. ಇದರ ಮೇಲಿಂದ ನಮ್ಮ ಪೇಟೆಯಲ್ಲಿ ಈ ವರ್ಷ ಮಿಶ್ರ ಕೆಲ ಬೆಳೆಗೆ ಕಿರುಕ್ಷತಿಯು ಮಾತು ಖಂಡಿತವಾಗಿ ತಿಳಿಯುತ್ತದೆ. ಇಲ್ಲಿಯ ಶ್ರೀ ರಾಮಲಿಂಗ ದೇವರಲ್ಲಿ ಭಜನೆ ಸಪ್ತಾಹ ಬಲೋ ಉತ್ಸಾಹದಿಂದ ಜರಗಿತು. ಈ ಹೊತ್ತು ಮಧ್ಯಾನ್ಹಕ್ಕೆ ಸಪ್ತಾಹದ ಕಾರ್ಯವು ತೀರಿತು.

ಇಲ್ಲಿಯ ಮಹಾಲ್ಕರಿ ಮಿ। ಜಾಂಬೆಕರ ಇವರು ರಜೆ ಮೇಲೆ ಹೋಗಿರುತ್ತಾರೆ.

ಈ ಪೇಟೆಯಲ್ಲಿ ಈ ಹೊತ್ತಿನವರೆಗೆ ಸುಮಾರು ೩೦ ಕಾ. ಸೆಕ್ರೆಟರಿಯವರಬಳಿಗೆ ರೊಕ್ಕ ರಕಮು ಟಿಳಕ ಸ್ವರಾಜ್ಯ ಫಂಡದ ಬಾಬತು ೧೮೩ ರೂ. ಮತ್ತು ಸಭಾಸದ ೨೨೩ ಈ ರೀತಿ ಆಗಿರುತ್ತದೆ. ಬಾಕಿ ಫಿರ್ಕಾ ಕಮಿಟಿಯವರ ಕಡೆಯಿಂದ ಇನ್ನೂ ಲೆಕ್ಕ ತಿಳಿಯಲಿಲ್ಲ. ಕಾರಣ, ಪತ್ತೆ ತಿಳಿಸುವರೆ ಉಪಾಯವಿಲ್ಲವಾಗಿ ತಿಳಿಯುತ್ತದೆ.

ಸೂಪಾ ಶಹರದ ಸುತ್ತಲೂ, ಎರಡು ಫರ್ಲಾಂಗ ಜಂಗಲ ಕಡಿದು ಮೈದಾನ ಮಾಡಿ ಹವೆ ಸ್ವಚ್ಛತೆಬಗ್ಗೆ ಮೆ। ಕಲೆಕ್ಟರರು ಲಕ್ಷ್ಯಕೊಟ್ಟು ಠರಾಯಿಸಿದಂತೆ, ಜಂಗಲ ಕಡಿದು ಸಫಾ ಮಾಡಿಕೊಟ್ಟು ಕಟ್ಟಿಗೆ ಮೊದಲಾದ ಬಯ್ಯೆಯವರ ಖಾರಿಸ್ತಾನೆಯಿಂದ ಮ. ಕೆ. ಎ. ಸಾಮಂತ ಇವರಿಗೆ ಕಂತ್ರಾಕ್ಟ ಕೊಟ್ಟಂತೆ, ಸದ್ರಿಯವರು ತಮ್ಮ ಸೋಯಿಯಂತೆ ಕಟ್ಟಿಗೆ ಕಡಿಮೆಯಾಯ್ತುವದು ಠರಾಯಿಸಿರುತ್ತದೆ. ಕಂತ್ರಾಕ್ಟರರ ಗುತ್ತಿನ ಅವಧಿ ಮಾರ್ಚ ಒಳಗಾಗಿ ಸಫಾ ಮಾಡುವದು ಇದ್ದು, ಕಟ್ಟಿಗೆ ಕಡಿದು, ಒಯ್ಯಲಿಕ್ಕೆ ಸಮಯಾಗದೆ ಮೂಲಕ ಹಾಗೆ ಬಿದ್ದಿರುತ್ತದೆ. ಕಟ್ಟಿಗೆ ಜಂಗಲದಲ್ಲಿ ಬಿದ್ದಿರುವದರಿಂದ, ಜಂಗಲಕ್ಕೆ ಬೆಂಕಿ ಹಾಕಿ ಸುಡಲಿಲ್ಲ. ಸದ್ರಿ ಜಂಗಲ ಜಾಗಾ ಸುಡದೆ ಇರುವದರಿಂದ, ಕಡಿದ ಗಿಡಗಳ ಬೊಂಗ ತಪ್ಪಲ ವಗೈರೆ ಕೊಳೆತು ನೀರಿನ ಮೌನದಲ್ಲಿ ಮಲೇರಿಯಾ ಕ್ರಿಮಿಗಳು ಹೆಚ್ಚು ಬೆಳೆದಿರುತ್ತವೆ. ಇದರ ಕಡೆಗೆ ಊರ ಜನರು ಯಾರೂ ಲಕ್ಷ್ಯಕೊಡುವದಿಲ್ಲ.

ಕಂತ್ರಾಕ್ಟರರ ಸೋಯಿಮೇಲೆಯಿಂದ ಊರ ಜನರಿಗೆ ಮಲೇರಿಯಾದ ಕ್ಷೋಭೆಯೋ ಏನೋ ತಿಳಿಯುವದಿಲ್ಲ. ಇದಕ್ಕೆ ಜವಾಬದಾರ ಯಾರು, ಕಂತ್ರಾಕ್ಟರರೋ ಫಾರೆಸ್ಟ ಅಮಲದಾರರೋ, ತಿಳಿಯದು. ಇವರ ಕಡೆಗೆ ಮೆ। ಕಲೆಕ್ಟರ ಸಾಹೇಬ ಕಾನವಾರದವರು ಲಕ್ಷ್ಯಕೊಡುವರೇನು?

(೩ನೇ ಪಾನಿನಮೇಲಿಂದ ಮುಂದರಿಸಿದ್ದು)

ವರಿಂದ, ಮೆಜಿಸ್ಟ್ರೇಟರು ಆದಷ್ಟು ತೀವ್ರ ಒಟ್ಟು ವಿಚಾರ ನಡಿಸಿ, ಅವರನ್ನು ಮೋಕಳೆ ಮಾಡುವರೇನು?

ಶ್ರೀ। ಬಸಪ್ಪ ಮತ್ತು ಶಿಳಕಾರೇಕರು ಟಿಳಕ ಸ್ವರಾಜ್ಯಫಂಡು ಮತ್ತು ಮೆಂಬರರನ್ನು ಕೂಡಿಸುವದಕ್ಕೆಯಿಂದ ಇಲ್ಲಿಂದ ಕುಮಟಾ, ಅಂಕೋಲಾ, ಕಾರವಾರದ ವರೆಗೆ ಹೋಗಿರುತ್ತಾರೆ. ಅವರಿಗೆ ಅಲ್ಲಿಯ ಪುಢಾರಿಗಳು ಕೂಡಿ, ಇದೇ ದೇಶಕಾರ್ಯಕ್ಕೆ ಮದ್ದತ್ತು ಮಾಡುವರೆ ಹಿಂಜರಿಯಲಿಕ್ಕಿಲ್ಲವಂತ ತೋರುತ್ತದೆ. ಪಿಕೆಟಿಂಗದ ಕೆಲಸವು ಚನ್ನಾಗಿ, ನಡೆಯುತ್ತದೆ. ರಾತ್ರೆ ೮ ಘಂಟೆ ನಂತರ ಕಳೆ ಮಾರುವದು ಮತ್ತು ಬಾಟ್ಲಿಗಳನ್ನು ಕದ್ದು ಮನೆ ಮನೆಗೆ ಕಳುಹಿಸುವದು ಮಾತ್ರ ಯಥಾಸ್ಥಿತಿ ನಡೆಯುತ್ತದೆ. ಈ ಬಗ್ಗೆ ಅಬಕಾರಿ ಖಾತೆಯವರು ಕಣ್ಣೆತ್ತಿ ನೋಡುವದಿಲ್ಲಾದರೆ ಈ ಖಾತೆಯು ಯಾವ ಬಂದೋಬಸ್ತಿಗೆ ಇಟ್ಟದ್ದಾರೆ?

ಶ್ರೀ। ಶಾಸ್ತ್ರಿಯವರು ಮುರಡೆಶ್ವರ, ಬೈಲೂರ ಅತ್ತಕಡೆಗೆ ಹೋಗಿ, ಅಲ್ಲಿಯ ಜನರಿಗೆ ಮದ್ಯಪಾನದಿಂದಾಗುವ ಮಾನಹಾನಿ ದ್ರವ್ಯಹಾನಿ ಇದರ ವಿಷಯ ಪಿಕೆಟಿಂಗ ಕೂಡಿಸಿ, ಜನರಿಗೆ ಈ ಕಳೆಗೆ ಆದ ದುರ್ವ್ಯಸನದ ಬಗ್ಗೆ ತಿಳಿಸಿ ಅಸಹ್ಯಪಟ್ಟದ್ದಾಗಿಯೂ, ಇನ್ನುಮುಂದೆ ದುರಂಗಿಸ್ತಿರು. ಕಳೆ ಕುಡಿಯುವದಿಲ್ಲವೆಂತ ಪ್ರತಿಜ್ಞೆ ಮಾಡಿ ... ಹಿಂದ ... ದಾಗಿರುತ್ತದಂತೆ.

ಇಲ್ಲಿಯ ಪೋಲೀಸ ಸಬ್ ಇನಸ್ಪೆಕ್ಟರ ಡಿ. ಸಿಲ್ವಾ ಇವರಿಗೆ ಕುಮಟೆಗೆ ವರ್ಗವಾಗಿದೆ ಎಂಬುದಾಗಿಯೂ, ಅವರಿಗೆ ... ತಿಂಗಳ ಹಕ್ಕು ರಜೆ ಕೊಡುವದು ... ಇನಸ್ಪೆಕ್ಟರ ಜಾಗಕ್ಕೆ ಬಂದ್ದಿಯಾಗಿದೆ ಎಂತಲೂ. ಊರಲ್ಲಿ ದಕ್ಕಿ, ಪೆಡಂತಿ ಆದೆ ಇವರು ಇಲ್ಲಿಯ "ಪಿಕೆಟಿಂಗ" ಕೆಲಸದಲ್ಲಿ ಗುತ್ತು ದಾರರ ಪಂಚ್ರಕ್ಕೆ ಮಾರಗ ಕಾಣಿಸದಂತ ರೀತಿಯಿಂದ ನಡೆಸುತ್ತಿದ್ದರು.

ಮದ್ಯಪಾನನಿಷೇಧ-ಸ್ವಯಂಸೇವಕರ ಸಂವಾದ.

(ತ್ರಿಪುಟ— ಒಂದಾಗೋಣವೆ ತನ್ನ ಬೀದಿಯ ಎಂಬಂತೆ, ದಾಟಿ.)

ಇಂದು ಗೆಳೆಯನೆ ಬಂದು ಕೆಲಸವ ಮಾಡಿ ನಾವ್ಹೊ ಕೀರ್ತಿಯಾ।
ಕೊಂಡೆವೆಂಬೆ ಅಂಜಬ್ಯಾಡೆ ವ್ಯಸನ ಮಾತ್ರಿಯ ಕಾರ್ಯವಾ॥ ಪಲ್ಲ॥
ಗತಂಗದಲ್ಲಿ ಹೆಂಡಗಾರ ಕೇರು ಹೆಂಡ ಕುಡಿದೂ ಬೀಳುತಾ।
ಹೆಂಡರವರು ಕಾರಿದರು ತುಂಡು ರೊಟ್ಟಿಯು ಅನ್ನವಾ॥ ೧॥
ವ್ಯಸನದಿಂದಾ ದೇಹ ಕೆಟ್ಟತು ಹಣವಿಗನ್ನವು ದೊರಕದೂ।
ದಾಸಗಾಪವು ಸಾಷ್ಟ ವರದಾ ಮಾಳ ಬಿದ್ದಿತು ಕೊರಳೊಳು॥ ೨॥
ಒಬ್ಬ ಉದಾರನು ಹೆಂಡ ಕುಡಿಯುತ ಬಡವನಾದನು ಗೆಳೆಯನೆ।
ಮುಬ್ಬು ಒಂದಿತು ಕಣ್ಣಗೆವಸಾ ಉಬ್ಬಿ ಬಿದ್ದನು ಧರೆಯೊಳು॥ ೩॥
ಕೆರೆಯ ಕೆಂಡಿಯ ಸಾರಾಯ ಸಿಂಡಿಯು ಅರವುಗೆಡಿಸಿತು ಗೆಳೆಯನೆ।
ನರನು ಪರಿಪರಿಯ ಂಥ ಕಾಡಿಯುತ ನೀತಿ ಮರೆತನು ಗೆಳೆಯನೆ॥ ೪॥
ದುಷ್ಟ ಕಲಿಲನು ಕೆಟ್ಟ ವ್ಯಸನವ ವನಕೊಟ್ಟು ಕೊಂಡನು ಗೆಳೆಯನೆ।
ನಷ್ಟವಾಗುವದೆಂದು ಭ್ರಷ್ಟನು ಅಟ್ಟಿಸಾಸರಿ ಮರೆವನೂ॥ ೫॥
ಭ್ರಷ್ಟ ಕುಡುಕರಿಗೆಷ್ಟು ಹೇಳಿದೆಷ್ಟು ಸಾಲದು ಗೆಳೆಯನೆ।
ಕಷ್ಟಕಾಲವು ದ್ರವ್ಯನಷ್ಟವು ನಮ್ಮ ದೇಶಕೆ ಗೆಳೆಯನೆ॥ ೬॥
ವಾದ ಬಳಸದೆ ಸಾರಿ ತೋರಿಸಿ ನಾದ ಬಿಡಿಸ್ವ ಹೆಂಡದಾ।
ಕಾರಿದರೆ ಕೇಳರವರೂ ಪಾದಕೆರಗ್ವ ಗೆಳೆಯನೇ॥ ೭॥
ಇಂದು ಕುಡಿವವ ಒಂದು ಕುಡಿದವ ಹೆಂಡ ಬಾರದ ತೆರದೊಳು।
ಸಂದಿಗೊಂದಿಗಳಲ್ಲಿ ದೃಷ್ಟಿಸಿ ಮಂದಿಗರುಹ್ವ ಗೆಳೆಯನೇ॥ ೮॥
ಒಚ್ಚೆ ಬ್ರಾಹ್ಮಣಾ ಮದ್ಯ ಕುಡಿದರೆ ಅಚ್ಚೆ ಹೊಲಿಯರು ಗೆಳೆಯನೇ।
ನಿಶ್ಚಯವ ಮಾಡಿದರು ಬಿಡರೂ ಇಚ್ಛೆ ಅವರದು ಗೆಳೆಯನೇ॥ ೯॥
ಕುಡುಕನಾಗೆದ ಹೊಲೆಯನೊಬ್ಬನು ಕೆಡಕು ವ್ಯಸನವ ಬಿಡಿಸ ತಾ।
ದೃಢದಿ ಉಪದೇಶಿಸಲು ಹಾವಿಲಾ ಒರದೆ ನಾಚಿಕೆ ಗೆಳೆಯನೇ॥ ೧೦॥
ವರ್ಮ ನಮ್ಮದು ಹೋಗ್ಗಿ ಬಿಟ್ಟಿತು ಕರ್ಮ ಫಲಿಸಿತು ಗೆಳೆಯನೇ।
ನಿರ್ಮಲ ನಾವು ಮಾಡಬೇಕೂ ಮದ್ಯಪಾನವ ಗೆಳೆಯನೇ॥ ೧೧॥
ಕದ್ದು ಕುಡಿವವನಿದ್ದರಾವಿಗೆ ಸದ್ದು ಮಾಡದೆ ಹೋಗೆ ವಾ।
ಮದ್ದಿಗಾಗಿ ಕುಡಿವೆನೆಂಬನು ಬುದ್ಧಿ ಭ್ರಷ್ಟನು ಗೆಳೆಯನೇ॥ ೧೨॥
ಅಬಕಾರಿ ಸಂಸ್ಥೆಯ ಕುಭಟ ಧೋರಣೆಗಳು ವ್ಯಸನ ಬೆಳೆಸುತ ಗೆಳೆಯನೇ।
ಉಪಕಾರ ತಿಳಿದರು ಮೂತರಪಕಾರ ತರುವರು ಗೆಳೆಯನೇ॥ ೧೩॥
ರಾಜನಾದರು ಪಾಠ ಇರುವನು ನಿಜವ ತಿಳಿಯನು ಗೆಳೆಯನೇ।
ಕುಜನರಾದ ರಾಜದ್ರೋಹರು ಸ್ವಜನ ದ್ರೋಹವ ಮಾಳ್ಪರೂ॥ ೧೪॥
ಬೀದಿ ಬೀದಿಗೆ ಸಾರೆಯ ಅಂಗಡಿ ಕೇರಿ ಇರುವದು ಗೆಳೆಯನೇ।
ಸಾರಿ ಸಾರಿಗೆ ನಿಂತು ನೀನು ಬೋಧಿಸಯ್ಯಾ ಗೆಳೆಯನೇ॥ ೧೫॥
ಗಾಂಧಿ ಮಹಾತ್ಮನ ಒಂದೆ ಮಂತ್ರವ ಇಂದು ಪಠಿಸ್ವೆ ಗೆಳೆಯನೇ।
ಒಂದಸವು ನಿನಗೆಂದು ಬಾರದು ತಂದೆ ಆಜ್ಞೆಯು ಗೆಳೆಯನೇ॥ ೧೬॥

ಆಷಾಢ ಶುದ್ಧ ವಿಜಾಪತಿ, } ಎಸ್. ಜಗನ್ನಾಥ ಗೋಖಲೆ, ಮುಂಡಗೋಡ

ಸಿದ್ದಾಪೂರ— ಕಳೆದ ತಾ ೨೬-೬-೧೯೨೧ ನೇ ದಿವಸ ಇಲ್ಲಿ ಪ್ರಥಮತಃ ತಾಲೂಕಾಸಭೆಯು ನೆರವೇರಿ ಕಾರ್ಯಕಾರಿ ಮಂಡಳಿ ಸ್ಥಾಪನೆಯಾಗಿ ಕೆಲಸ ಪ್ರಾರಂಭವಾಯಿತು. ನಾವು ಈಗ ಜಿಲ್ಲೆಯಲ್ಲಿ ಹಿಂದುಳಿದವರಾದ್ದರಿಂದ ನಮ್ಮ ಕೆಲಸವು ಹಿಂದೆ ಪ್ರಾರಂಭವಾಗುವದು ಸಹಜವೇ. ಅದರ ಸಲುವಾಗಿ ನಾವು ಹಲವರಿಗೆ ದೇಶಭಕ್ತ ಬಂದವರಿಗೆ, ಇದೊಂದು ತಮ್ಮ ಜಿಲ್ಲೆಯ ದೇಹದ ಭಾಗವಾದ್ದರಿಂದ ಅಂಗವೈಕಲ್ಯತೆಯಾಯಿತೆಂದು ಭಾಸವಾಯಿತು. ಅದರ ಪರಿಣಾಮವಾಗಿ ಶಿರಸಿಯ ದೇಶಭಕ್ತ ವಾಸುದೇವರಾವ ಡಾಕಪ್ಪನ, ಚೌಲೂರ ರಾಂಡೀ, ಹೊನ್ನಾವರದ ಮೋಹನರಾಯ, ಅಲೇಕರ, ಪಣ್ಣೆಕರು ಇಲ್ಲಿಗೆ ದಯಮಾಡಿ ತಾ ೭-೭-೧೯೨೧ ನೇ ದಿವಸ ಜಾಹೀರಸಭೆಯಾಗಿ ಮದ್ಯಪಾನನಿಷೇಧ, ಸ್ವದೇಶ, ಅಸಹಕಾರ, ಈ ವಿಷಯಗಳ ಮೇಲೆ ಹಿಂದೆ ದೇಶಭಕ್ತರ ವ ಇಲ್ಲಿಯವರ ಸಹಾ ಭಾಷಣಗಳಾಗಿ ಮಹಾತ್ಮಾಗಾಂಧಿಯವರ ಉದ್ದೇಶದ ಪರಿಚಯ, ದೇಶದ ಲ್ಲಿ ನಡೆದ ಚಳವಳ ಅದರಿಂದ ದೊರೆಯುವ ಸ್ವರಾಜ್ಯ, ದಾರಿದ್ರ್ಯ ನಿವಾರಣೆ ಮುಂತಾದ ಜ್ಞಾನವು ಜನರಲ್ಲಿ ತುಂಬಲಾರಿಸಿ ನಿರೀಕ್ಷಣ ಒದ್ದಿಯ ಜಿಜ್ಞಾಸೆಯೂ ಉಂಟಾದವು. ಇವರು ಈಗ ಹೊರಟು ಹೋದಬಳಿಕ, ಹೊನ್ನಾವರದಿಂದ ದೇಶಭಕ್ತ ವಕೀಲ ಮಂಜಬಟ್ಟ ಕರ್ಕಿ, ಗುಲವಾಡಿ, ತಿಮ್ಮಾಜಿಭಟ್ಟ, ನಾಡಕರ್ಣಿ ಇವರು ದಯಮಾಡಿಸಿ ಹಳ್ಳಿಹಳ್ಳಿಯ ಹಳೇ ಪೈಕ (ನಾಮಧಾರಿ) ಸಮಾಜದವರಿಗೆ ಪಾರ್ಥಿಯಾಗಿ ತಾ ೧೧-೭-೧೯೨೧ ನೇ ದಿವಸ ಮತ್ತು ತಾ ೧೨-೭-೧೯೨೧ ನೇ ದಿವಸ ವಿಶಾಲ ಬೈಲಸ್ಥಳಗಳಲ್ಲಿ ಸಭೆಗಳಾಗಿ ದೇಶಭಕ್ತ ಕರ್ಕಿಯವರ ಅಂತ್ಯಂತ ಕಳಕಳಿಯ ಉಪದೇಶವ ಭಾಷಣವಾಯಿತು. ಉಳಿದ ದೇಶಭಕ್ತರೂ ಬೇರೆಬೇರೆ ವಿಷಯಗಳಲ್ಲಿ ಪ್ರವಚನಮಾಡಿದರು. ಸ್ವರಾಜ್ಯಫಂಡು ಮೆಂಬರರ ಸಂಖ್ಯೆಯು ಬೆಳೆಯುತ್ತದೆ. ಪಿಕೆಟಿಂಗವ ಕೆಲಸವು ತಾ. ೭-೭-೧೯೨೧ ನೇ ದಿವಸದಿಂದ ಶಾಂತರೀತಿಯಿಂದ ನಡೆದದೆ. ಇಲ್ಲಿ ಹೆಚ್ಚಾಗಿ ಪಿಕೆಟಿಂಗದ ಕೆಲಸವು ಹೆಚ್ಚು ಬೀಳಲಿಕ್ಕಿಲ್ಲ ಯಾಕಂದರೆ, ಇಲ್ಲಿಯ ದೊಡ್ಡ ಜನಾಂಗವು ನಾಮಧಾರಿ, ಹಳೆಪೈಕ ಸಮಾಜದ ಧುರೀಣರು ಪ್ರತಿಜ್ಞೆ ಮಾಡಿದ್ದು ತಮ್ಮ ಜ್ಞಾತಿ ವರ್ಗದವರಲ್ಲಿ ಕುಡುಕತನವನ್ನು ಮುರಿಯುವ ಕಟ್ಟಳೆ ಮಾಡುತ್ತಿದ್ದಾರೆ. ಮೆಂಬರರ ಸಂಖ್ಯೆ ಇಲ್ಲಿ ಬೆಳಗಿನವರೆಗೆ ೩೫೦ ರವರೆಗೆ ಆಗಿದೆ.

ಓದಿ ನೋಡಿ ' ಕಾಲ ಕಳೆಯಬೇಡಿ '' ತ್ವರೆ ಮಾಡಿರಿ ''

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯಸಂಜೀವನಿಮಾತ್ರೆ.

ಶುಕ್ಲಧಾತುವನ್ನು ಹೆಚ್ಚಿಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರಠತನವನ್ನೂ ರೋಗವನ್ನೂ ದೂರಪಡಿಸಿ, ಆರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಇವುಗಳನ್ನು ಬಿಡದೇ ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ನಿಸ್ತೇಜವೂ ಆಗಿ ಉತ್ಸಾಹವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈ ಬಿಸುಪು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಆಲಸ್ಯ, ಮರವು ಮತ್ತು ಶರೀರದ ಸಾರವೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವು ಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥, ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩

ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ್,
ಕರ್ಕಿ. (ಕೆನರಾ.)

ಲೋಕಮಾನ್ಯವಾದ

ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ಲೆಂಡೆಲ ಎಸ್ಟೇಟದ, ಎಲ್ಲಾ ತರದ ಚಹಾ ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್) ತೋಕ ವ ಕಿರಕೋಳ ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು. ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ. ಪತ್ರವ್ಯಾವಹಾರ ಮಾಡಿಕೊಳ್ಳಿರಿ

ವಿ. ಪಿ. ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ. ಉತ್ತರ ಕಾನಡಾ.

HONAWAR. (N. Kanara

श्रीभीमकुंडदर्शन.

या विमुकल्या पुस्तकास प्रख्यात बालहरिदास यानी प्रस्तावना लिहिली आहे.

श्री क्षेत्र गोकर्ण येथले एक पुण्यस्थान श्री भीमकुंड याचा प्राचीन व आर्वाचीन वृत्तांत छापून प्रसिद्ध झाला आहे. कि. ९ पै.

पत्ता— मंडीकेरी मंजनाथभट्ट, गोकर्ण.

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

ಫಕ್ತ ರೂ ೨-೧೩ ರ ಮನಿಯಾರ್ಡರ ಮಾಡಿದರೆ, ೧ ವರ್ಷದತನಕ ನಿಮ್ಮಲ್ಲಿಗೆ ಬರುವದು.

ಪತ್ತೆ— ಕಾನಡಾವೃತ್ತ ಆಫೀಸ, ಕುಮಟಾ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕೂಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕೂಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦ ೮-೧೯೦೮ನೇ ಇಸ್ವಿಯಿಂದ ತಾ ೧ ೯ ೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಇದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟು ಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇದೀ ಕರ್ನಾಟಕ ದೇಶಕ್ಕೆಲ್ಲ ಹೋಗಿ ರೋಗಿಗಳ ಈ ಅರ್ಕೂಶಫಾದಿಂದಲೇ ಗುಣಹೊಂದಿದೆ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರೆತಿರುತ್ತವೆ ಅವು ಬರೆಯುವದಕ್ಕೆ ಕಾಗದವು ಸಾಲದು. ಇದರ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯು ಸಹವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರ ಬೀಳಲಿಕ್ಕಿಲ್ಲ ಒಂದೆ ಮೇಲೆ ಈ ಆರೋಗ್ಯಬಿಂದು ದಿನ ಮೇಲೆ ಪರೀಕ್ಷೆ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಬರೆದ ರೋಗವಾಗಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮುಗಳು

ಕ್ಷಯರೋಗ, ಹೊಟ್ಟೆರೋಗ, ಮೂಂಡುರೋಗ ಗುಲ್ಮರೋಗ ಮೂಲರೋಗ ಮಹಾಮಾರಿ(ಕಾಲರಾ) ಪ್ಲೇಗು ಚಳಿಜ್ವರ ವಿಷಮ ಜ್ವರ,ಇನ್‌ಫ್ಲುಯಂಜಾಜ್ವರ,ಅನೇಕಪ್ರಕಾರದಜ್ವರ ಗಂಡಮಾಲೆ ಕೆಮ್ಮು, ಮೂಗಿನೊಳಗಿನ ಎಸಿಸಿ ಮೂದಲಾದ ರೋಗವು ಕಣ್ಣಿನೊಳಗೆ ಹೂವು ಬೆಳೆಯುವ ಕಣ್ಣು ನೋವು ಕಿವಿ ದಮ್ಮು, ಶ್ವಾಸ ಆಹಗ್ಗ ಇಸಳಿ, ಅಜೀರ್ಣ, ಹೊಟ್ಟೆಶೂಲಿ, ಮೈಕೂಡಿ ಅರತಲೆಶೂಲಿ ನಡಶೂಲಿ ಸಂಧಿಶೂಲಿ, ರಕ್ತಪಿತ್ತ, ಗರ್ಭಪ್ರಸವ, ಮೂರ್ಛಾರೋಗ, ಗಜಕರ್ಣ, ಇಸಬು ಕಜ್ಜಿ, ಫೋಡುವ್ರಣ, ನಾರುಹುಣ್ಣು, ಸ್ತ್ರೀಯರ ಮುಟ್ಟಿನ ಕಾವುದನಿಂದು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಹುಟ್ಟುದೋಷ, ಹೊಟ್ಟೆ ದೊಡ್ಡ ರೋಗ, ಮೈ ಹೊರಡುವ ರೋಗ ಸಣ್ಣ ಕೂಸುಗಳಿಗೆ ಮೈ ಹರಿದುಬರುವ ರೋಗ ಇದ ಅನೇಕ ರೋಗಗಳು ಮಾತ್ರದಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅದೆ ಒಂದು ಕಡಿಮೆ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರ ಕ್ರಯ ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ರಜಾರಿನಾಣ್ಯ ನಮೂನೆ ಇದ್ದಕ್ಕೆ ಐದು ಆಣೆ ತೊಲೆ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ. ಪಿ. ಖರ್ಚು ಬೇರೆ ಒಂದ ಡಜನ ಬಾಟ್ಲಿಗಳು ತಕ್ಕೊಂಡರೆ ಸಣ್ಣ ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇದಕ್ಕೆ ಒಂಭತ್ತು ಆಣೆ ಖರ್ಚು ಬರುವದು ಒಂದರಿಂದ ತಕ್ಕೊಂಡವರು ಬಾಟ್ಲಿಯಾಗಿ ಕಮಿಶನ್ ಇಲ್ಲ ಇದಕ್ಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೇರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಕಳಿಸಿದ ಹೊರತು ದೊರೆಯಲಿಕ್ಕಿಲ್ಲ ಅನುಪಾನದ ಪ್ರಕ್ರಿಯೆ ಕನ್ನಡ ಮರಾಠಿ ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾವ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್. ಎಂ. ಮುಲ್ಲಾ, ಸಂಪಾದಕ ಅರ್ಕೂಶಫಾ,
ಹೆಡ ಆಫೀಸು ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮದನ ಕಾಮೇಶ್ವರಿ ಲೇಹ — ಬಹು ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ, ಶರೀರಗಳ ಫಲಿತದಿಂದ ಅಶಕ್ತಿ ಹೊಂದಿದ ಪ್ರತ್ಯೇಕವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಹೊಳೆಯುವದು. 40 ಸಲ ಸೇವಿಸುವ ಲೇಹ ಡಬ್ಬಿ 1ಕ್ಕೆ 1-1-0 3 ಡಬ್ಬಿಗಳಿಗೆ 4-12 0

2 ಮ ಹಾಜ್ವರಾಂಕುಶ — (ಮಾತ್ರೆಗಳು) – ಇನ್‌ಫ್ಲುಯೆಂಜಾ, ನಿಮೋನಿಯಾ, ದಿವಸಕ್ಕೊಮ್ಮೆ, ದ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ ನಿವಾರಣೆಗಾಗಿ ಬಾಟ್ಲಿ 1 ಕ್ಕೆ 0-8-0

3 ಬಾಲಗ್ರಹ ಗುಟಿಕೆ — ಕೂಸು ಮಕ್ಕಳ ಆಪತ್ಕಾಲಕ್ಕೆ ರಾಮಬಾಣ ಬಾಟ್ಲಿ 1ಕ್ಕೆ 0 10 0

4 ಕಾಸಕುಠಾರ ಗುಟಿಕೆ ಇದು ಕಾಸಕ್ಕೆ ಸಿದ್ಧ ಔಷಧಿ ಒಂದೇ ಗುಟಿಕೆಯಿಂದ ಕಫ, ಉಬ್ಬಸ ಕೆಮ್ಮು ಇವು ಗುಣ ಬಾಟ್ಲಿ 1 ಕ್ಕೆ 0 10 0

5 ಇಚ್ಛಾಬೇದಿ — ಬಯಾಸನನ್ನು ಇಂಟುಮಾಡದ ಸುಖವಿರೇಚಕ ಬಾಟ್ಲಿ 1ಕ್ಕೆ 0 12 0

ಎಸ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡಾಕ್ಟರ್ಸ ರಥಬೀದಿ.
ಮಂಗಳೂರ ಪಟ್ಟಣ.

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಅದಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೇಟುಗಳು ಸಿರಸಿಯ ಲ್ಲಿ ಲೋಹಗಿರಿರಾವ ಧೂಳಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರವ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಬಾಡಿಗೆಯ ದರವಾದ ಪತ್ರಿಕೆ ಕಳಿಸಿ ಕೇಳಿಸಿದ ಪತ್ತೆಗೆ ಮನ್ನಾ ಕೆಸ್ತ ತಿಳಿಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಯ್ಯ ಕ್ಯಾನಬಾಗ.

ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडांतील अनेक वनस्पतींच्या रसात पोष्टिक औषधीफळाचा रसार्क मिश्र करून, खाली दिलेल्या रोगावर उपयुक्त अशीं भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहीसा करून, वीर्य वृद्धि व रक्तशुद्धि होते कितीहि जुनाट कढकी असो (एक ससकानत्र) नाश पावत आणि उपदंशा संबंधी सुरलेले विकार नाहींस होऊन हातपाय, डोळे यांचा दाह व धातुवि घातक सर्व विकार नष्ट होऊन,शरीर वज्राप्रमाणे बनते. हा बिंदु खाल्ल्याने उतारवयाच्या म प्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोग याचा समूळ नाश होतो. हे औषध स्त्रियांनी सेवन केल्यास, त्याचे जननेंद्रियांचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळा जेवले तरी, भूक चांगली लागत जाऊन शौचास साफ होते. याचा अनुभव औषध घेतल्याच्या पहिल्या दिवशीं येतो तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूचे सेवन करून, यातील खरी मजा पहावी फार दिवसाचा रोग असल्यास, पूर्ण गुणास तीन बाटल्या औषध घेतलें पाहिजे. नवीन रोगास एक बाटली औषध सेवन केल असता, गुण येईल. एका बाटलीमध्यें १० तोळे औषध असते त्या एका बाटलीची किंमत १ रुपया तीन बाटल्यांची किंमत ३॥ रुपये एक डझन (१२) बाटल्यांची किंमत १० रुपये याशिवाय टपाल, व प्याकिंगखर्च निराळा पडेल तीन बाटल्या सेवन करणाऱ्यांनी ३० तोळे औषधाची एक मोठी बाटली मागवून घ्यावी म्हणजे थोडा सोइस्कर पडेल म्यानेजर,

के. एम. हनुमान शासाटिक कंपनी

जिल्हा बेळगाव मु. पो. निपाणी

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ರೋಖ ದರ, ಸವಲತಿಯು ಇರುತ್ತದೆ

ಪತ್ತೆ:— ಬಿ ದಾಸ, ಕುಮಟಾ

Printed and published by Krishnarao Keshav Shenvi at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೯೦

ಪತ್ರದ ವರ್ಗಣಿ.—

ಕುಮಟೆಯಲ್ಲಿ ಆಗಾವು ರೂಪಾಯಿ 2-0-0.

ಟಪಾಲ ಸುಂಕದಿಂದ ರೂ 2-13-0

ವ್ಹಿ. ಪಿ. ಖರ್ಚಿನೊಡನೆ ರೂಪಾಯಿ 2-15-0

ಬಿಡಿ ಸಂಚಿಕೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ —

ಕನ್ನಡ, ಇಂಗ್ಲಿಷ ಪೈಕಾ ಟೈಪಿನ(೧೫ ಎಮ್‌ಅಗಲ) ೩ ಸಾಲುಗಳ ವರೆಗೆ ರೂ 1 0 0

ಅವಂತ ಪ್ರತಿ ಸಾಲಿಗೆ 0-2-0.

ಹೆಚ್ಚಿಂಗದ ಸಾಲು ಎಷ್ಟು ಕೊಡತಿರುವದೋ ಆ ಪ್ರಮಾಣದಿಂದ ಅಪ್ಪುಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಸಮಕ್ಷ ತಿಳಿಸಲ್ಪಡುವದು.

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೮ ನೇ ಜುಲೈ ಸನ್ ೧೯೨೧ ನೇ ಇಸವಿ]—

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು ಜಾಂಬಳೆ ೧೦ಂಕ್ಕೆ ೧ಳಿಆಗೆ ಕಪ್ಪು ವಹುತ್ತಿಗೆ ಶಾಯಿ ಸಂಪಲಿಗೆ ಒಂದಾಣೆ ಕಳಿಸಿ ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್ ವ್ಹಿ. ಭಾಗ್ವತ

ಪೋಸ್ಟ— ಡಗಡೆ, ಉತ್ತರ ಕಾನಡಾ

ಭಡತೀ ಭ್ರಾತೃಸಂಘದ

ಅಪರೂಪವಸ್ತುವಾದ

ಚಂದದ ಗುಳಿಗೆಗಳ ಕ್ರಯ — ೨೫ ಕ್ಕೆ ೦-೧೦-೦ ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳೆ ನಿಬ್ಬ, ಖಂಡಿ ಕಾಶ್ಮೀರೀ ಹಿಂಗು, ಇದಲ್ಲದೆ ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ ಶ್ರೀ ಮಂದಿರದ ಫೋಟೋಗಳೂ, ಪಾಠೋಪಯೋಗಿ ಪುಸ್ತಕಗಳು, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ

ಅತ್ಯಂತ ಬೋಧಪ್ರದ-ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ೧೨ ಆ (೨) ಸತ್ಯಪ್ರಕಾಶ ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ ಬೆಲೆ ೧೨ ಆಣೆ

ಪತ್ತೆ— ಬಸವಾಚಾರ್ಯ ಬೂದೀಹಾಳಮಠ, ಹೆಡ್ ಮಾಸ್ತರ, ಮುಕಾಂ ಬಿಜೂರ

ಪೋಸ್ಟ— ಕಲಘಟಗಿ—ಹಾನಗಲ್ಲು, ಜಿ. ಧಾರವಾಡ

ಕಾರ್ಡಸೈಜ ಫೋಟೋ.

ಮಹಾತ್ಮಾ ಗಾಂಧಿ, ಕೈ। ಲೋ। ಟಿಳಕ ನವಾಬಜಾದಾ ಶೌಕತ್ತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸೈಜಿನ ಫೋಟೋಗಳು ನಮ್ಮಲ್ಲಿ ಸಿಗುವವು

ಕ್ರಯ — ೧ಕ್ಕೆ ೬ಪೈ, ಡಜನಕ್ಕೆ ೪ಆಣೆ, ಶೇಕಡಾ ೧-೧೦-೦ ಟಪಾಲ ಹಾಸಲು ಬೇರೆ ಸಂಪಲಗಳು ಬೇಕಾದರೆ, ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ, ಕುಮಟಾ (ಎನ್. ಕೆನರಾ,)

ಖಾತ್ರಿ] ಅತ್ಯುತ್ತಮ [ಸ್ವಾಲು

ಅತ್ಯುತ್ತಮ ಸ್ವದೇಶೀ ಶಾಯಿ ಗುಳಿಗೆಗಳು ಪರ ಸುಂಚ INK TABLETS]ಕ್ಕೆ ಪತ್ರಿ

ನಿಮಿಷದಿಂದ ತಯಾರಿಸಿದ ನೀಲಿ ಜಾಂಬಳೆ ಕೆಂಪು ಹಸರು ೧೪೪ ಶಾಯಿ ಗುಳಿಗೆ ಇರುವ ೧ ಗ್ರೋಸಿನ ಡಬ್ಬಿಗೆ ರೂ ೧೯ ಸಂ ೧ ಡಜನ ಗ್ರೋಸಿಗೆ ರೂ ಡ್ಡ ಸ್ಯಾಂಪಲಿಗೆ ಅರ್ಧಾಣೆ ತಿಕೀಟುಗಟ್ಟಲೆ ಬಗೆದುಕೊಂಡರೆ, ಶೀಘ್ರ ಕಳಿಸುವರು ಪರವಳ್ಳಿ ಕೈಗೊಡುವೆವು ದೊಡ್ಡ ಆರ್ಡರ ಮೇಲೆ ಪ ರ್ಸೆಂಟೇಜ ಕಮಿಶನ ಸಿಗುವದು ೧ ಗ್ರೋಸ್‌ಗಿಂತ ಕಡಿಮೆ ಕಳುಹಿಸಲಾರೆವು ಏಜಂಟರು ಬೇಕು ಕಮಿಶನ ಸಿಗುವದು

ದಿ ಸ್ವದೇಶೀ ಇಂಕ ಸ್ಟೋರ್ಸ್,

ಶಿರ್ಶಿ, ಕೆನರಾ.

ಬಹುನೂತನವಾದ ಚಿನ್ನದ ಒಡವೆಗಳನ್ನು ತಯಾರಿಸುವೆವು



ಪಾನಖಾವರ ಮೇಲೆ ತೋರಿಸಿದ ಉಂಗುರಗಳೂ, ತರತರದ ಬಗೆಯಿಂದ ಮೊನೋಗ್ರಾಮ, ಮತ್ತು ಹರಳು ಕಲ್ಲುಗಳ ಮಾಡಿಸಿದ ಬಿಲ್ಲೆ ಕಾಲ್ಲರ್, ಪಟ್ಟಿ ಸಿರ ಕೆ ಬ್ರೂಚ, ಬಳೆ, ಬಿಂದಿ, ಮಾಗುಬಟ್ಟುಗಳು, ಈ ವಿವಿಧ ಪಾಕೆಟ ವ್ಹಾಚುಗಳು, ವಾಚುಗಳು, ನವರತ್ನದ ಪದಕಗಳು, ವಜ್ರದ ಡಬ್ಬಿಗಳು ನೂತನವಾದ ಸೂರ್ಯಕಾಂತಿ ಹಾರಗಳು, ಗುಲಾಬಿ ಹೂವುಗಳು, ಸಂಪಿಗೆ ಹೂವುಗಳು ಮಲ್ಲಿಗೆ ಹಾರಗಳು, ಮುಂತಾದ ಎಲ್ಲಾ ದಾಗಿನಗಳು ನಮ್ಮಲ್ಲಿ ಆಗುತ್ತವೆ ಬೇಕಾದವರಿಗೆ ಯೋಗ್ಯ ಚಾರ್ಜಿನಿಂದ ಮಾಡಿಕೊಡುವೆವು

ಸಿತಾರಾಮ ಗೋವಿಂದ ಶೇಟ,

ಕೊಟ್ಟಿಕರ ಗುಜರಗಲ್ಲಿ, ಕುಮಟಾ.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಕೊಳ್ಳಬಹುದು ಸವಲತ್ತಿನ ದರಗಳು ಇಟ್ಟಿರುವೆವು

ನಮ್ಮ ಪತ್ತೆ —

ಗ್ರಾತೊಂಡೇ ಬ್ರದರ್ಸ,

ಮೋಟರ ಡೀಲರ್ಸ, ರಿಪೇರರ್ಸ,

ಕಾರವಾರ.

ಹೊಸ ಶೋಧ! "ಓಂ" ಹೊಸ ಶೋಧ!

ಗುಣ ಬಾರದಿದ್ದರೆ, ಹಣವಾಪಸು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರಕವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ವಿಶೇಷವಾಗಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಜೊತೆಯಲು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ, ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವದು ಬಹುದಿವಸದಿಂದ ಮನೆಮಾಡಿದ್ದ ಮೇಹ,ಉಷ್ಣ ಸಂಬಂಧಿಯು ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿರಲ್ಲಾಗಿ ಹೊಟ್ಟೆ ಹಸಿಯುವದು ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗದೇಕೊ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಒದುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಒದುವದು ಸ್ತ್ರೀಯರು ಸೇವಿಸಿದಲ್ಲಿ ಎಳೆಶಿರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕಸೇವನೆಯು, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣಬರುವದು ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು ೧ ಆಣೆ೨ ೩ ಡಬ್ಬಿಗಳಿಗೆ ೪ ರು ೮ ಆಣೆ ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ

ಪೋಸ್ಟ ನಿಪ್ಪಾಣಿ, ಜಿ ಬೆಳಗಾಂ

ಧಾರವಾಡದಿಂದ, ಸಾತಾರೆಯ ಕರಂದೀಕರ ವಕೀಲ ಇವರ ಮುಖಾಂತರವಾಗಿ, ನಾ॥ ಗವ್ಹರ್ನರರವರಿಗೆ ಆರೋಪಿತರು ಕೊಟ್ಟ ತಂತಿಯು.

ಕೆಳಗೆ ಸಹಿ ಮಾಡಿದ ೨೮ ಮಂದಿ ಆರೋಪಿತರು ತಮಗೆ ತಿಳಿಸುವದೇನಂದರೆ – ನಾವೆಲ್ಲರೂ ನಿಜವಾಗಿ ನಿರ್ದೋಷಿಗಳಿರುತ್ತೇವೆಂದು ನಮಗೆ ಗೊತ್ತಿದ್ದರೂ ಕೂಡ ಯೋಗ್ಯ ನ್ಯಾಯವಿಚಾರಣೆಯು ನಮಗೆ ಮಾನ್ಯವಿರುತ್ತದೆ. ಆದರೆ ಅನೇಕ ಶಾಂತ ಮತ್ತು ಮರ್ಯಾದೆಯುಳ್ಳವರಾದ ಗೃಹಸ್ಥರನ್ನು ಅವಿಚಾರದಿಂದ ಸಿಗಹಾಕಿ ತಾವೇ ಗುಂಡು ಹಾರಿಸಿದ್ದನ್ನು ಸಮರ್ಥಿಸಿಕೊಳ್ಳುವದಕ್ಕಾಗಿ ಯೂ, ಮತ್ತು ತಾವು ಉಳಿಸಿಕೊಳ್ಳುವದಕ್ಕಾಗಿಯೂ ಸುಳ್ಳು ಸಾಕ್ಷಿಯನ್ನು ಹುಟ್ಟಿಸುತ್ತಲಿದ್ದ ಡಿ. ಪೋಲೀಸ ಸುಪರಿಂಟೆಂಡೆಂಟ ಮತ್ತು ಅವರ ಹಸ್ತಕರ ಕಡೆಯಿಂದ ಅಪರಾಧಿಗಳ ಶೋಧನಕ್ರಿಯೆಯನ್ನು ಇನ್ನೂ ತಕ್ಕೊಳ್ಳುವದನ್ನು ನಾವು ನಿವೇದಿಸುತ್ತೇವೆ. ಡಿ. ಮ್ಯಾಜಿಸ್ಟ್ರೇಟರು ಪ್ರತ್ಯಕ್ಷವಲ್ಲದಿದ್ದರೆ ಅಪ್ರತ್ಯಕ್ಷರೀತಿಯಿಂದಾದರೂ ಸಹಾಯ ಹೊಂದಿದಂಥವರು, ಮತ್ತು ಯಾರ ಕೈಯಿಂದಲೇ ಕೊಲೆಯಾಯಿತೆಂದು ನಾವು ಅನ್ನುತ್ತೇವೋ ಅಂಥವರಿಂದ ನಡೆಯಲ್ಪಟ್ಟ ಅಪರಾಧ ಶೋಧನವು ಕೇವಲ ನಾಟಕ ರೂಪದ್ದಿದ್ದು, ಜನರಲ್ಲಿ ... ಕ್ಷೋಭವನ್ನುಂಟುಮಾಡತಕ್ಕ ಲಕ್ಷಣವುಳ್ಳದ್ದಾಗಿದೆ.

ಅಪರಾಧ ಶೋಧನಾ ಕಾರ್ಯವನ್ನು ಡಿ. ಪೋಲೀಸ ಸುಪರಿಂಟೆಂಡೆಂಟ ಮತ್ತು ಅವರ ಕೈಕೆಳಗಿನ ಜನರ ಕಡೆಯಿಂದ ಬೇರೆ ಮಾಡುವಂತೆ, ನಮ್ಮ ಆಗ್ರಹದ ಪ್ರಾರ್ಥನೆಯಿದೆ. ಇಷ್ಟಲ್ಲದೆ, ಈ ಎಲ್ಲ ಪ್ರಕರಣಕ್ಕೆ ಮೂಲಕಾರಣರಾದ ಶಿವಲಿಂಗಪ್ಪ ಫೌಜದಾರರನ್ನೂ ಡಿ. ಸುಪರಿಂಟೆಂಡೆಂಟರನ್ನೂ ಈ ಜಿಲ್ಲೆಯಿಂದ ತೆಗೆದು ಹಾಕಬೇಕೆಂತಲೂ ನಮ್ಮ ಪ್ರಾರ್ಥನೆಯಿದೆ.

ಗೌರವವೆಂಬ ಉಪ್ಪು ತಿಳಿವಳಿಕೆಯ ... ಯೋಗ್ಯವಾದ ನ್ಯಾಯಾಚರಣೆಯಲ್ಲಿ ಅಡ್ಡ ಬರಲಿಕ್ಕಿಲ್ಲವೆಂಬ ನಮ್ಮ ನಂಬಿಗೆ ಇದೆ. ಆದಕಾರಣ ಶೋಧನ ಕ್ರಿಯೆಯನ್ನು ಸಧ್ಯದ ಅಧಿಕಾರಿಗಳ ಕಡೆಯಿಂದ ತೆಗೆದು ಹಾಕುವದೂ, ಮತ್ತೂ ಇದುವರೆಗೆ ಆದ ಆತುರದ ಕಾರ್ಯವನ್ನು ಮರೆಗೊಳಿಸಿ ಬಿಡುವದೇ ನಿಜವಾದ ನ್ಯಾಯವಾಗಿದೆ.

(ಸಹಿ— ದಿವಾಕರ ಕಟ್ಟೂರ ... ಪತ್ರ ...)

'ಸನ್ಮಾನನೀಯ' ಹೇಮರ್ಡರ ಆಗಮನವು.

ತಾ. ೧೫ನೇ ದಿವಸ ಮುಂಬಯಿ ಸರಕಾರದ ಕಾರ್ಯಕಾರೀ ಕೌನ್ಸಿಲಿನ ಸಭಾಸದರಾಗಿ ನ್ಯಾಯ ಖಾತೆಯ ಕಾರ್ಯಭಾರವನ್ನು ಹೊತ್ತಿರುವ, ಹೇಮರ್ಡ ಸಾಹೇಬರು ಇಲ್ಲಿಗೆ ದಯಮಾಡಿಸಿದರು. ಅವರ ಬಂದಿರುವ ಸುದ್ದಿಯು ಊರೊಳಗೆ ಹಬ್ಬಿದ ಕೂಡಲೇ, ಅನೇಕರು ಅನೇಕ ವಿಧವಾದ ಕಲ್ಪನೆಗಳನ್ನು ಮಾಡಹತ್ತಿದರು. ಇಲ್ಲಿಯ ಕಾಂಗ್ರೆಸ ಕಮಿಟಿಯವರು ಸರಕಾರಕ್ಕೆ ಕಳುಹಿಸಿದ ತಂತಿಗಳಿಗೆ ಕಿವಿಗೊಟ್ಟು, ನ್ಯಾಯನಿಷ್ಠುರ ಸಿಂಹಗರ್ಜನೆಯಿಂದ ಇವರು ಬಂದು, ಅವರು ಸ್ಥಾನಿಕ ಅಧಿಕಾರಿಗಳ ಬಂಡಾಟವನ್ನು ಬಿಂಬಿಸಿ, ನ್ಯಾಯಮಾರ್ಗವನ್ನು ಹಿಡಿಯುವರೆಂದು, ಕೆಲವರು ಊಹಿಸಹತ್ತಿದರು. ಇನ್ನು ಕೆಲವರು ಸ್ಥಾನಿಕ ಅಧಿಕಾರಿಗಳು ಮಾಡಿದ ತಪ್ಪುಗಳನ್ನು ಮುಚ್ಚಿ ಮತ್ತಷ್ಟು ಅವರ ಪಕ್ಷವನ್ನು ಬಲಪಡಿಸಲಿಕ್ಕೆ ಬಂದಿರುವರೆಂದು ತರ್ಕಮಾಡಿದರು. ಆ ದಿವಸವೇ ಊರಲ್ಲಿರುವ ಕೆಲವು ಜನ ಪ್ರಮುಖರಿಗೆ ಅವರಿಂದ ಆಮಂತ್ರಣಗಳೂ ಬಂದವು. ಅವರಲ್ಲಿ ಕೆಲವು ಕಾಂಗ್ರೆಸ ಪಕ್ಷದವರ ಹೆಸರುಗಳೂ ಕೆಲವು ಸರಕಾರ ಪಕ್ಷದವರ ಹೆಸರುಗಳೂ ಇದ್ದವು. ಹೀಗಾಗಿ ಮರುದಿವಸ ಉಭಯಪಕ್ಷದವರೂ ಸಾಹೇಬರ ಕಡೆಗೆ ಹೋಗಿ ಬಂದರು. ಅವರಲ್ಲಿ ಕಾಂಗ್ರೆಸ ಪಕ್ಷದವರನ್ನು ನಾವು ಕಂಡುಕೊಂಡೆವು. ಅವರು ಸಾಹೇಬರಿಗೆ ಸ್ಥಾನಿಕ ಅಧಿಕಾರಿಗಳು ಈ ಪ್ರಕರಣದಲ್ಲಿ ಅಪರಾಧಿಗಳಿರುವದರಿಂದ, ಅವರ ಕೈಯಲ್ಲಿ ಸಾಕ್ಷಿಗಳನ್ನು ಶೋಧಮಾಡಿ ಈ ಖಟ್ಲೆಯ ಪೂರ್ವಸಿದ್ಧತೆಯನ್ನು ಒಪ್ಪಿಸುವದು ಸರ್ವಥಾ ನ್ಯಾಯವಾಗಲರಿಯದೆಂತಲೂ, ಹಾಗೆ ಮಾಡುವದೆಂದರೆ, ನ್ಯಾಯವೆಂದರೆ ನಾಟಕವೆಂದು ಜನರ ಗ್ರಹಿಕೆಯಾಗಿ, ಪರಮಾವಧಿಯಾದ ಅಸಂತೋಷಕ್ಕೆ ಕಾರಣವಾಗುವದೆಂದಲೂ, ಹೇಳಿದರಂತೆ! ಮತ್ತು ಜಾತಿ ಜಾತಿಗಳಲ್ಲಿರುವ ದ್ವೇಷಭಾವಗಳ ಅನ್ಯಾಯ ಲಾಭತಕ್ಕೊಂಡು, ಸ್ಥಾನಿಕ ಪೋಲೀಸರು ಸುಳ್ಳು ಸಾಕ್ಷಿಗಳನ್ನು ಹುಟ್ಟಿಸಲಿಕ್ಕೆ ಮಾರ್ಗವಾಗುವದರಿಂದ, ನ್ಯಾಯದೊರೆಯುವ ಸಂಭವವಿಲ್ಲವೆಂದು ಅವರು ತೋರಿಸಿದರಂತೆ!! ಇದರಲ್ಲಿ ಶಿವಲಿಂಗಪ್ಪನವರಂಥ ಕಪಟ ಕಂಟಕ ಸಬ್ ಇನ್ಸಪೆಕ್ಟರನ ಸಹಾಯದಿಂದ ಮಾಡಿದ ಶೋಧದಿಂದ ಇಂಥ ಮಹತ್ವವುಳ್ಳ ಪ್ರಕರಣಕ್ಕೆ ಹಾನಿಯುಂಟಾಗದೆ ಇರದೆಂದು ಸ್ಪಷ್ಟವಾಗಿ ತಿಳಿಸಿದರಂತೆ! ಅದಕ್ಕೆ ಸಾಹೇಬರು ಆಶ್ವಾಸನ ಕೊಟ್ಟದ್ದೇನಂದರೆ, ಒಳ್ಳೇ ಸ್ವತಂತ್ರಬುದ್ಧಿಯ ಹೊರಗಿನ ಮ್ಯಾಜಿಸ್ಟ್ರೇಟರು ಈ ಖಟ್ಲೆಯ ವಿಚಾರಣೆಗೆ ನಿಯಮಿಸಲ್ಪಟ್ಟಿದ್ದಾರೆ. ಅವರೆದುರಿಗೆ ಉಭಯ ಪಕ್ಷದವರು ತಮ್ಮ ಇಚ್ಛಾನುಸಾರವಾಗಿ ಸಾಕ್ಷಿಗಳ ಕೊಟ್ಟು ಸತ್ಯಶೋಧನಕ್ಕೆ ಸಹಾಯ್ಯಮಾಡಿ ನ್ಯಾಯಪಡೆಯಬಹುದು. ಇಷ್ಟು ಆ ದಿವಸ ಹೇಳಿ, ಮರುದಿವಸ ಇನ್ನೂ ಕೆಲವು ಜನರ ಭೆಟ್ಟಿಗಳನ್ನು ತಕ್ಕೊಂಡು, ಅದೇ ದಿವಸ ಹುಬ್ಬಳ್ಳಿಯ ಸ್ಟೇಶನಕ್ಕೆ ಹೊರಟು ಹೋದರು. ಅವರು ಹೋದ ದಿವಸವೇ ೧-೨ ತಾಸಿನ ಅಂತರದಲ್ಲಿ ಸ್ಪೆಶಲ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಾದ ಲಾರೆನ್ಸ ಸಾಹೇಬರೂ, ಸರಕಾರದ ಪರಿಯಿಂದ ಕೆಲಸನಡಿಸಲಿಕ್ಕೆ ಬ್ಯಾರಿಸ್ಟರ ಕೆಂಪಸಾಹೇಬರೂ ದಯಮಾಡಿಸಿದರು. ಈ ಸಂಗತಿಗಳ ಮೇಲಿಂದ ಸ್ಪೆಶಲ ಮ್ಯಾಜಿಸ್ಟ್ರೇಟರನ್ನು ನೇಮಕಮಾಡಿದ್ದು ಹೇಮರ್ಡ ಸಾಹೇಬರು ಇಲ್ಲಿಯವರೆಗೆ ಬಂದು ಮುಖಂಡರ ಭೆಟ್ಟಿಗಳನ್ನು ತಕ್ಕೊಂಡದ್ದರ ಪರಿಣಾಮವಲ್ಲವೆಂದು ಜನರ ಮನವರಿಕೆಯಾಗಿದೆ. ಅದು ಮೊದಲೇ ಮಾಡಿದ ವ್ಯವಸ್ಥೆಯಾದ್ದರಿಂದ, ಹೇಮರ್ಡ ಸಾಹೇಬರು ಹೆಚ್ಚಿನದೇನೂ ಮಾಡದೇ ಹೋದರೆಂದು ತಿಳಿದು ಜನರು ನಿರಾಶೆಯುಳ್ಳವರಾಗಿರುವರು.

ಮೆ॥ ಸ್ಪೆಶಲ್ ಮ್ಯಾಜಿಸ್ಟ್ರೇಟ ಧಾರವಾಡ, ಇವರ ಕೋರ್ಟಿಗೆ—

ನಾವು ಧಾರವಾಡದ ಗೋಳೀಬಾರದ ಖಟ್ಲೆಯಲ್ಲಿಯ ಆರೋಪಿತರು. ಕೋರ್ಟಿಗೆ ಈ ಲೇಖದಿಂದ ತಿಳಿಸುವದೇನಂದರೆ, ನಾವು ಕೆಳಗೆ ಬರೆದ ಕಾರಣಗಳಿಗಾಗಿ ಈ ಖಟ್ಲೆಯ ಕೆಲಸವನ್ನು ಈ ಕೋರ್ಟಿನಲ್ಲಿ ನಡಿಸಲಿಕ್ಕೆ ಕಬೂಲ ಇರುವದಿಲ್ಲ.

೧ ನಿಷ್ಕಾರಣವಾಗಿ ಜನರ ಮೇಲೆ ಗೋಳೀಬಾರು ಮಾಡಿದ ಮನುಷ್ಯನ ಕೈಯಲ್ಲಿಯೇ, ಇನ್ನೂ ಈ ಖಟ್ಲೆಯ ತಪಾಸಣೆಯ ಕೆಲಸವು ಇರುತ್ತದೆ. ಆತನೇ ನಮ್ಮ ವಿರುದ್ಧ ಸಾಕ್ಷಿ ಪುರಾವೆಗಳನ್ನು ಸಿದ್ಧಮಾಡಿ ಕೋರ್ಟಿನಲ್ಲಿ ಹಾಜರು ಮಾಡಿಸುವ ಕೆಲಸವನ್ನು ಆರಂಭಮಾಡುತ್ತಿದ್ದಾನೆ.

೨ ಧಾರವಾಡದಲ್ಲಿ ಸಂಭವಿಸಿದ ಅನರ್ಥಕ್ಕೆ ಹೊಣೆಗಾರರಾದ ಅಧಿಕಾರಸ್ಥರು ಅವರೇ ನಿಜವಾದ ಗುನ್ಹೆಗಾರರಿದ್ದು, ಇನ್ನೂವರೆಗೆ ಅಧಿಕಾರದಿಂದ ಮೊಗಮಾಡಲ್ಪಟ್ಟಿದ್ದಾರೆ. ಪ್ರತ್ಯಕ್ಷವಾಗಿ ಇಲ್ಲಿಯೇ ಕೆಲಸ ಮಾಡುತ್ತಲಿದ್ದಾರೆ.

೩ ಜೇಲಿನ ಹೊರಗಿನ ದ್ವಾರದಲ್ಲಿ ಆರೋಪಿತರ ವಕೀಲರಿಗೆ ಆರೋಪಿತರ ಹತ್ತರ ಪಾಸ ಇದ್ದರೂ, ಒಳಗೆ ಬಿಡಲಿಲ್ಲ. ಅದೇ, ಸರಕಾರ ತರ್ಫೆಯಿಂದ ಬಂದ ವಕೀಲರಿಗೆ ಮತ್ತು ಫಿರ್ಯಾದಿಯ ತರ್ಫೆಯ ವಕೀಲರಿಗೆ ಪಾಸು ಇಲ್ಲದೆ ಯಾವ ಪ್ರಶ್ನೆಯನ್ನು ಮಾಡದೆ ಒಳಗೆ ಬಿಟ್ಟರು. ಸರಕಾರ ತರ್ಫೆಯ ವಕೀಲರಾದ ಮಿ॥ ಕೆಂಪ ಇವರು ಒಳಗೆ ಹೋಗುವ ಕಾಲಕ್ಕೆ ಆರೋಪಿತರ ವಕೀಲರು ಮಿ॥ ಕರಂದೀಕರ ಇವರು ದ್ವಾರದಲ್ಲಿ ನಿಂತಿರುವದನ್ನು ಲಕ್ಷಕ್ಕೆ ತಾರದೆ ಒಳನುಗ್ಗಿದರು. ಆವೇಳೆ ಸಹ ಆರೋಪಿತರ ಕೆಲವು ವಕೀಲರು ತಮ್ಮ ಕೈಯೊಳಗಿನ ಪಾಸುಗಳನ್ನು ತೋರಿಸಿದರೂ, ಅವರನ್ನು ಹಿಂದಕ್ಕೆ ದಬ್ಬಿ ಹಾಕಿದರು.

೪ ಈ ಪ್ರಕಾರ ವಕೀಲರಿಗೆ ಮಾನಭಂಗವಾದದ್ದರಿಂದ, ಈ ಊರಲ್ಲಿ ನಮಗೆ ವಿಶ್ವಾಸವಿದ್ದ ಒಬ್ಬ ವಕೀಲನೂ ನಮ್ಮ ಪರಿಯಿಂದ ಹಾಜರಾಗಲಿಕ್ಕೆ ಕಬೂಲ ಇರುವದಿಲ್ಲ. ಅದೇ ವೇಳೆಗೆ ಸಾತಾರೆಯ ಮಿ॥ ಕರಂದೀಕರರೂ ಈಗ ಕೋರ್ಟು ಇರುವ ಸ್ಥಳದಲ್ಲಿ ಕೆಲಸ ನಡಿಸಲಿಕ್ಕೆ ಕಬೂಲ ಇರುವದಿಲ್ಲ. ಆದ್ದರಿಂದ ಆರೋಪಿತರಿಗೆ ವಕೀಲರಿಲ್ಲದೆ, ಕೂಡಬೇಕಾಗಿದೆ.

೫ ಜೇಲಿನ ಕಾಂಪೌಂಡದಲ್ಲಿದ್ದ ಚೌಕಸಿಯ ಸ್ಥಳವನ್ನು ನೋಡಿದರಂತೂ, ನಿಷ್ಪಕ್ಷಪಾತ ಚೌಕಸಿಯು ಸಿಗುವದಿಲ್ಲೆಂದೇ ನಮಗೆ ಖಾತ್ರಿಯಾಗಿದೆ. ಮತ್ತು ಬ್ರಿಟಿಶ ನ್ಯಾಯದೊಳಗಿನ ವಿಶ್ವಾಸವು ಪೂರಾ ನಷ್ಟವಾಗಲಿಕ್ಕೆ ಇದು ಕಾರಣವಾಗಿದೆ.

೬ ಜೇಲ ಕಾಂಪೌಂಡದೊಳಗಿನ ಕೋರ್ಟಿಗೆ ಯಾರನ್ನು ಬಿಡಬೇಕು, ಯಾರನ್ನು ಬಿಡಬಾರದು, ಈ ಬಗ್ಗೆ ಪ್ರಸಿದ್ಧ ಮಾಡಿದ ನೋಟೀಸಿನಲ್ಲಿ ನ್ಯಾಯಕೋರ್ಟಿಗೆ ಜನರು ಹೋಗಿ ಬರಲಿಕ್ಕೆ ನಿಷ್ಕಾರಣ ನಿರ್ಬಂಧಗಳಿರುತ್ತವೆ. ಅವುಗಳ ಮೂಲಕ, ಆರೋಪಿತರಿಗೆ ತಮಗೆ ಬೇಕಾದ ಜನರ ಆಪ್ತೇಷ್ಟರ ಹಾಗೂ ಮಿತ್ರರ ಸಲ್ಲಾ ಮಸಲತುಗಳನ್ನು ತೆಗೆದುಕೊಳ್ಳಲಿಕ್ಕೂ, ತಮ್ಮ ವಿರುದ್ಧವಾಗಿ ಬೇರೆ ಬೇರೆ ಕಡೆಯಿಂದ ಬರುವ ನೂರಾರು ಸಾಕ್ಷಿದಾರರ ಬಗ್ಗೆ ಬೇಕಾದ ಮಾಹಿತಿಯನ್ನು ಪಡೆಯಲಿಕ್ಕೂ ಅತ್ಯಂತ ಅಡಚಣೆಯುಂಟಾಗಿದೆ. ಈ ಸಂಬಂಧದಿಂದ ಪುಷ್ಕಳ ಜನರು ಆರೋಪಿತರಿಗೆ ಸಹಾಯಮಾಡಲಿಕ್ಕೆ ಕೋರ್ಟಿನಲ್ಲಿ ಇರಬೇಕಾಗುತ್ತದೆ. ಆದರೆ ನೋಟೀಸಿನಲ್ಲಿ ಕೇವಲ ಮೂವತ್ತೇ ಮಂದಿಗೆ ಒಳಗೆ ಬಿಡಲಾಗುವದೆಂದು ನಿರ್ಬಂಧ ಮಾಡಿದ್ದಾರೆ.

ಈ ಕಾರಣಗಳ ಮೂಲಕ, ಇನ್ನು ಮುಂದೆ ಆರೋಪಿತರಿಗೆ ಈ ಖಟ್ಲೆಯಲ್ಲಿ ಭಾಗ ತೆಗೆದುಕೊಳ್ಳುವ ಇಚ್ಛೆಯಿಲ್ಲ.

—ಆರೋಪಿತರು

ಮುಂಬಯಿಯಲ್ಲಿ ಕರ್ನಾಟಕಸಭೆ.

ಕೆಳಗೆ ಬರೆದಂತೆ ನಿರ್ಣಯಗಳಾದವು.

(೧) ತಾ। ೧-೬-೧೯೨೧ ನೇ ದಿವಸ ಧಾರವಾಡದ ಜನರ ಮೇಲೆ ಅಲ್ಲಿಯ ಪೋಲೀಸು ಗುಂಡು ಹಾರಿಸಿದ್ದು ಈ ಸಭೆಯವರ ಮನಸ್ಸಿಗೆ ಅಸಹ್ಯವಾಗಿಯೂ ಕ್ಲೇಶಕಾರಕವಾಗಿಯೂ ಆದದ್ದೆಂದು ಅನಿಸುತ್ತದೆ. ಮತ್ತು ಅವಿಚಾರದಿಂದ ಹಾರಿಸಿದ ಗುಂಡುಗಳಿಗೆ ಬಲಿ ಬಿದ್ದ ಜನರ ಮನೆಯವರಿಗೆ ಸಮ್ಮ ದುಃಖವನ್ನು ವ್ಯಕ್ತಪಡಿಸುತ್ತೇವೆ. ತಮಗೆ ಒದಗಿದ ಸಂಕಟದಲ್ಲಿ, ಧೈರ್ಯವನ್ನೂ ಶಾಂತಿಯನ್ನೂ ಧಾರವಾಡದ ಜನರು ತೋರಿಸಿದ್ದಕ್ಕಾಗಿ ಈ ಸಭೆಗೆ ಬಹಳೇ ಆನಂದವೆನಿಸುತ್ತದೆ. ಮಹತ್ತರವಾದ ಅರೋಪಗಳಿಂದ ಹೇರಲ್ಪಟ್ಟ ಅಧಿಕಾರಿಗಳ ಕಡೆಗೆ ಈಗ ಹಿಡಿದು ಹಾಕಿದ ಜನರಮೇಲೆ ಮಾಡತಕ್ಕ ಖಟ್ಲೆಯ ಕೆಲಸವನ್ನು ಒಪ್ಪಿಸಿದ್ದನ್ನು ಈ ಸಭೆಯು ನಿಷೇಧಿಸುತ್ತದೆ.

(೨) ಸಭೆಯು ಗವ್ಹರ್ನರ ಸಾಹೇಬರಿಗೆ ಬೇಡಿಕೊಳ್ಳುವದೇನಂದರೆ, ತಾವೇ ಆದಷ್ಟು ತೀವ್ರ ಧಾರವಾಡಕ್ಕೆ ಹೋಗಿ, ಆರೋಪಗಳ ವಿಷಯವನ್ನು ತಿಳಿದುಕೊಂಡು ಬರಬೇಕು.

ಇದರಲ್ಲಿದ್ದ ಅಧಿಕಾರಿಗಳ ವರ್ತನದ ಬಗ್ಗೆ ವಿಚಾರಣೆಯನ್ನು ಮಾಡುವದಕ್ಕಾಗಿ, ಒಂದು ನಿಷ್ಪಕ್ಷಪಾತ ಮಂಡಳವನ್ನು ನೇಮಿಸಬೇಕು. ಇದಾಗುವವರೆಗೂ, ಇದರಲ್ಲಿ ಆರೋಪಿಸಲ್ಪಟ್ಟ ಅಧಿಕಾರಿಗಳನ್ನು (ಡಿ. ಮ್ಯಾಜಿಸ್ಟ್ರೇಟ ಮತ್ತು

ಸುಪರಿಂಟೆಂಡೆಂಟ ಸಹಿತ) ಕೇಲಸದಿಂದ ಕೆಲಕಾಲ ದೂರನಾಗಬೇಕು. ಅಲ್ಲದೆ, ಹಿಡಿದು ಹಾಕಿದ ಜನರ ವಿರುದ್ಧವಾಗಿ ಮುಂದೆ ಕಾರ್ಯವು ಸರ್ಕಾರಕ್ಕೆ ನಡಿಸಬಾರದಂತೆ ಮಾಡಬೇಕು.

(೩) ಧಾರವಾಡದಲ್ಲಾದ ಗುಂಡಿನ ಪ್ರಕರಣದ ವಿಷಯದಲ್ಲಿ ಮುಂಬಯಿ ಕ್ರಾನಿಕಲ ಪತ್ರವು ವಿಶೇಷರೀತಿಯಿಂದಲೂ, ನಿಷ್ಪಕ್ಷಪಾತದಿಂದಲೂ ಸ್ವತಂತ್ರರೀತಿಯಿಂದಲೂ, ಎಲ್ಲ ನಿಜ ಸಂಗತಿಗಳನ್ನು ಬೈಲಿಗೆ ತಂದು ಕೊಟ್ಟದ್ದಕ್ಕಾಗಿ, ಈ ಸಭೆಯು ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ಪತ್ರಿಕೆಗಳ ಅಂಬೋಣ.

ಕುಸಂತಾನಕ್ಕಿಂತ ನಿಃಸಂತಾನವೇ ಲೇಸು!

ಎಂದು ನಾವ ಹಿರಿಯರು ಹೇಳುವದುಂಟು, ಆದರೆ, ಧಾರವಾಡದಲ್ಲಾದ ಕೊಲೆಯ ಸಂಗತಿಯಿಂದ ನಮಗೀಗ ಕುರಾಜ್ಯಕ್ಕಿಂತ ಅರಾಜಕವೇ ಒಳ್ಳೇದೆಂದು ಹೇಳುವ ಪ್ರಸಂಗವು ಬಂದಿದೆ! ಸುಧಾರಣೆಯ ಕಾನೂನಿಗನುಸಾರವಾಗಿ, ಸರಕಾರದವರು ನಮಗೆ ನಮ್ಮ ಜನರನ್ನೇ ಅಧ್ಯಕ್ಷರನ್ನಾಗಿಯೂ, ನಮ್ಮ ಜನರನ್ನೇ ಕೌನ್ಸಿಲರನ್ನಾಗಿಯೂ ನಮ್ಮ ಜನರನ್ನೇ ದಿವಾಣರನ್ನಾಗಿಯೂ ಕೊಟ್ಟು, ನಮ್ಮ ಕೈಯಿಂದ ನಮ್ಮ ಕಣ್ಣಲ್ಲಿಯೇ ಬೊಟ್ಟು ಚುಚ್ಚಲಿಕ್ಕೆ ಈ ಹೊತ್ತು ಆಳರಸರು ಪ್ರವೃತ್ತರಾಗಿದ್ದಾರೆ! ಕೊಲ್ಲುವವರೆಲ್ಲ ನಮ್ಮವರೇ! ಅದರ ಕೊಲಿಸುವವರು ಮಾತ್ರ ಅಳರಸರು! ಈ ತರದ ದ್ವಿಮುಖವಾದ ರಾಜ್ಯಚಕ್ರದಿಂದ ಸರಕಾರದ ಸುಧಾರಣೆಯ ಕಾನೂನು ಹಸಗೆಟ್ಟು ಹೋಗಿ ಅದರ ದುರ್ಗಂಧವು ಇಂಗ್ಲಂಡದವರಿಗೆ ಇಡಿಗಿದ್ದರೂ, ನಮ್ಮ ನಾ|| ಶಾಸ್ತ್ರಿ, ಶಿವರ್ಡ ಮತ್ತು ಚಂದಾವರಕರಾದಿಗಳು ಇನ್ನೂ ಅದರ ಸೌಗಂಧ್ಯಕ್ಕೆ ಲೋಲುಪರಾಗಿಯೇ ಲೊಟ್ಟಾಡುತ್ತಿರುವರು! ಆಯಾ ಪ್ರಾಂತಗಳಲ್ಲಿ ನಮ್ಮ ದೇಶದ ದಿವಾಣರೂ, ಅಧ್ಯಕ್ಷರೂ, ದೊಡ್ಡ ದೊಡ್ಡ ಸಾಬಳದ ಉಂಬಳಿಯಿಂದ ರಾರಾಜಿಸುತ್ತಿದ್ದರೂ, ಕಳವಳ ಮನಸಿನಿಂದ ಉತ್ಪನ್ನವಾದಂಥ ದಬ್ಬಾಳಿಕೆಯೆಂಬ ವಿಷಮಯ ಮಹಾಮಾರಿಯು ಜನಾಂಗದೊಳಗೆ ಹಾಗೇ ಸ್ವಚ್ಛಂದವಾಗಿ ವಿಹರಿಸುತ್ತಲಿದೆ! ಇದರ ಇಂಗಿತವೇನು? ಮತ್ತು ವಸ್ತುಸ್ಥಿತಿಯು ಹೀಗಿರಲು, ಲಾಲಾಜಿಯವರು ಮೊದಲಾದವರಿಗೆ (ಮಹಾತ್ಮರಿಗೆ) ದೇಶದ್ರೋಹಿಗಳೆಂದು ಆರೋಪಿಸಿದರೂ, ಮೂಗಿಗೆ ಮೊಣಕಿನಷ್ಟು ಹಚ್ಚಿದಂತೆ ಚೀರಾಡುವದೇಕೆ? ದೇಶದಬಗ್ಗೆ ತಮ್ಮಲ್ಲಿ ಎಷ್ಟು ಕಳವಳವಿರುವದೆಂದು ತೋರಗೊಡಿಸುವ ಹಬ್ಬದ ಅಳಿಯಂದಿರಾದ ಕೌನ್ಸಿಲ್ಲಿನ ಪ್ರತಿನಿಧಿಗಳು ಈ ಸಮಯದಲ್ಲಿ ಗೊಗ್ಗಯ್ಯನಂತೆ ಎಲ್ಲಡಗಿರುವರೋ ಏನೋ! ಅಜ್ಞ ಜನರಿಗೆ ಇಲ್ಲದ ಸಲ್ಲದ ಬೋಧನೆಗಳನ್ನು ಕೊಟ್ಟು, ಅವರಿಂದ ಮತವನ್ನು ತೆಗೆದುಕೊಳ್ಳಲಿಕ್ಕೆ ಮಾಡಿದ ಮಾತುಗಾರಿಕೆಯು ಈಗೆಲ್ಲಿ ಗಡಪ್ಪಾಯಿತು! ಅಸಹಕಾರಿಗಳಮೇಲೆ ಬಿಟ್ಟ ನಡೆದಿರುವದೆಂದು ಬಂದಾಗ ಇವರು ಬಾಯಿ ಮುಚ್ಚಿಕೊಂಡಿದ್ದರೂ, ಇರಬಹುದು! ಆದರೆ ಧಾರವಾಡದೊಳಗೆ ಶಿವಲಿಂಗಪ್ಪನ ತುಟುಕಿಯ ಗುಂಡಿಗೆ ತುತ್ತಾದ ಹದಿನೈದು ವರ್ಷದ ಬಾಲಕನೂ ಅಸಹಕಾರಿಯಾಗಿದ್ದನೋ! ಅಥವಾ ಆತನು ಅವರಿಗೆ ಮತಕೊಟ್ಟಿದ್ದಿಲ್ಲವೆಂದೆ. ಅವನ ವಿಷಯವಾಗಿ ಇಷ್ಟೊಂದು ಅನಾದರವೋ! ಮಂಡಳ ಸಂಗಡದ ಪ್ರತಿನಿಧಿಗಳೇ! ಇವಿಷಯವಾಗಿ ಮಾನವೀ ಹಿತದ ದೃಷ್ಟಿಯಿಂದಾದರೂ, ನೀವು ನಿಮ್ಮ ಕರ್ತವ್ಯವನ್ನು ಬಡುಗಿಸದಿದ್ದರೆ, ಜಗತ್ತೇ ನಿಮಗೆ ಉಗಳದೇ ಇರದು! ಪ್ರಜೆಗಳ ಪ್ರತಿನಿಧಿಗಳೆಂದು ಮೆರೆಯುವ ನಿಮ್ಮ ಯೋಗ್ಯತೆಯು ಭಟ್ಟಂಗಿಗಳಿಗಿಂತಲೂ ಕಡೆಯಾಯಿತೇ! ಪ್ರಜಾ ಪ್ರತಿನಿಧಿಯೆಂಬ ಹೆಸರನ್ನು ಉದ್ಧಾರಮಾಡಿದಿರಿ!

—ಕರ್ನಾಟಕಮಿತ್ರ.

ಯಂಗ ಇಂಡಿಯಾ ಪತ್ರದ ಅವತರಣಿಕೆ

ಬಸಿಯುತ್ತಿರುವ ಗಾಯವು

ಸಂಯುಕ್ತ ಪ್ರಾಂತದ 'ಲಿಬರಲ್ ಲೀಗ' ದ ಪ್ರತಿನಿಧಿಗಳಿಗೆ ಮಹಾತ್ಮರು ಕೊಟ್ಟ ಉತ್ತರವನ್ನು ಕುರಿತು ಮ. ಗಾಂಧೀಯವರು ೧೩ನೇ ತಾರೀಖಿನ ಯಂಗ ಇಂಡಿಯಾ ಪತ್ರದಲ್ಲಿ ಅಗ್ರಲೇಖವನ್ನು ಬರೆದಿರುವರು. ಅದರ ಭಾವತಾತ್ಪರ್ಯವು ಇಂತಿರುವದು "'ಮರೆಯಿರಿ' ಮರೆಯಿರಿ' ಮುಂದೆ ಆ ಪಂಜಾಬದ ಕೊಲೆಯನ್ನು ಮರೆಯಿರಿ' ಎಂದು ಒಂದೇ ಸಮನೆ ಇಂಗ್ಲಿಷ ಜನರಂತೆಯೇ ನ್ಯಾಯಸರಾಯರೂ ಅನ್ನುವರು. ಖಿಲಾಫತನ್ನೂ ಮರೆಯಿರಿ, ಎಂದೆನ್ನುವದಿಲ್ಲ. ಇದೊಂದು ಭಾಗ್ಯವೇ! ತಿರುಗಾ ಮರುಗಾ ಮರೆಯಿರಿ ಅದೇ ಮಾತು ಮರೆಯಿರಿ. ಹೌದು ಮರೆಯುವ ಬಗೆ ಹೇಗೆ? ಮರೆಸಲಿಕ್ಕೆ ಹಚ್ಚಿರಿ ಮರೆಯುವಂತೆ ಮಾಡಿರಿ. ಮರೆಯಬಹುದು! ಆರೋಪಿಗಳಿಗೆ ಮನೆಯೊಳಗೆ ಕೂಡಿಸಿ, ಪೆನಶನ್ ಕೊಡಿರಿ, ಬಡತಿಯ ಮೇಲೆ ಬಡತಿ ಮಾಡಿರಿ ಮತ್ತು ಮೇಲೆ ಮರೆಯಿರಿ, ಮರೆಯಿರಿ ಅನ್ನಿರಿ. ಇದೇನು ಮೆರೆಯುವ ರೀತಿಯಲ್ಲ, ನಡತೆಯಲ್ಲ! ಆರೋಪಿಗಳನ್ನು ಕೆಲಸದಿಂದ ಕಿತ್ತುಹಾಕಿರಿ, ಅವರ ಹೃದಯದೊಳಗೆ ನಮ್ಮ ಮತ್ತು ಸ್ವರೂಪ ಬೇಡಿರಿ, ಜಗತ್ತಿನ ಕಣ್ಣು ಮರೆಗಿಲ್ಲದಿದ್ದರೂ, ನಮ್ಮ ಕಣ್ಣು ಮರೆಗಾದರೂ, ಅವರನ್ನು ಮಾಡಿರಿ ಹೀಗೆ ಮಾಡಿದರೇನೋ ಹೌದೆಂದೇವು. ಅದನ್ನೆಲ್ಲ ಬಿಟ್ಟು ಹಾಕಿದ್ದೇ ಹಾಡು, ಒಣಾರಗಳ 'ಮರೆಯಿರಿ ಮರೆಯಿರಿ' ಏನು ಮರೆಯಬೇಕು? ಹೇಗೆ ಮರೆಯಬೇಕು? ಬಸಿಯುವ ಗಾಯದಲ್ಲಿ ಮುಳಗಳನ್ನು ಹೆಟ್ಟಿ, ಮರೆಯಿರೆಂದೆನ್ನುವರೇ! ಆದೆಂದಿಗೂ ಆಗದ ಮಾತು! ಯಾರಿಂದಲೂ ಆಗದ ಮಾತು. ಪಂಜಾಬದಲ್ಲಿ ನಮ್ಮಿಂದಲೂ ತಪ್ಪಾಯಿತು ನಾವು ಅದನ್ನು ಒಂದು ಸಲ ಅಲ್ಲ, ಹತ್ತೆಂಟು ಸಲ ಒಪ್ಪಿರುವೆವು. ನಮ್ಮಿಂದ ಒಂದು ಪಟ್ಟು ತಪ್ಪಾಗಿದ್ದರೆ, ನಿಮ್ಮಿಂದ ಇಪ್ಪತ್ತು ಪಟ್ಟು ತಪ್ಪಾಗಿರುವದು. ಇಷ್ಟಾಗಿ ಒಪ್ಪಿಕೊಳ್ಳುವ ಮಾತು ಸುಳ್ಳೇ ಸುಳ್ಳು. ಮೇಲೆ, ಇಲ್ಲದ ಒಣ ದಿಮಾಖು ಮತ್ತೆ ಅಸಹಕಾರ ಯಾಕೆ ಮಾಡುತ್ತೀರಿ, ಎಂದು ತಿಳಿದೂ ತಿಳಿದು ಕೇಳಿ ಕೇಳಿ ಕೇಳುವರು. ಇಂಗ್ಲಿಷರ ಕಣ್ಣುಗಳು ನೆತ್ತಿಯಮೇಲೆ ಏರಿರುವವು ಅವು ಇದ್ದ ಸ್ಥಳಕ್ಕೆ ಬರಿಸಲಿಕ್ಕೆ ಅಸಹಕಾರವೇ ಮದ್ದು! ಇಂಗ್ಲಿಷರು ತಾವು ಸ್ವರ್ಗದಿಂದ ಇಳಿದು ಬಂದವರು, ನಾವು ನರಕದೊಳಗಿನ ಹುಳಗಳು, ಎಂದು ತಿಳಕೊಂಡಿರುವರು. ಇದು ನಮಗೆ ಅಸಹ್ಯವಾಗಿದೆ. ನಿಮ್ಮ ಕೂಡ ಹಗೆತನ ಮಾಡಿ ನಮಗೇನು ಬರುವದು? ನಿಮ್ಮ ನಮ್ಮ ಹಿತವಿರಬೇಕು, ನಾವು ನೀವು ಸರಿ ಸಮಾನರೆಂದು ತಿಳಕೊಳ್ಳಬೇಕು, ಹಾಗೆ ಪರಸ್ಪರರು ನಡಕೊಳ್ಳಬೇಕು, ಇದೇ ನಮ್ಮ ಬಯಕೆ. ನಾವು ಅಶಕ್ತರಿರುವೆವು, ಇದನ್ನು ನಾವು ಬಲ್ಲೆವು, ನೀವು ಸಮರ್ಥರಿರುವಿರಿ, ಇದನ್ನು ಬಲ್ಲೆವು. ಆದರೆ ನೀವು ಮನಬಲ್ಲಂತೆ ನಮ್ಮ ಬಾಗಿದ ಬೆನ್ನಮೇಲೆ ಕುಣಿದಾಡಿದರ ನಿಮ್ಮಿಂದ ಸಹಕೊಳ್ಳುವದಾಗದು. ಸರ್ವಥಾ ಆಗದು. ನಾವು ನೀವು ಒಂದೇ ಎಂದು ಬಾಯಿಂದ ಅನ್ನುತ್ತೀರಿ. ಕೃತಿಯಿಂದ ಮಾಡುವದಿಲ್ಲ. ಆಡಿದ್ದು ಆಡಿ ಹೋಯಿತು, ಮಾಡಿದ್ದು ಮಾಡಿ ಹೋಯಿತು. ಇದೇನು ಕೂಡಿ ಇರುವ ಲಕ್ಷಣವೇ? ಮನೆಮುರುಕರ ಲಕ್ಷಣವಿದು, ಫಾರ್ಸೀ ಜನರು ಸ್ವಲ್ಪೇ ಇರುವರು. ಅವರು ನಮ್ಮ ಕೂಡ ಗೆಳೆತನದಿಂದಿಲ್ಲವೇ? ಅವರ ರಕ್ಷಣವನ್ನು ಯಾರು ಮಾಡುತ್ತಿರುವರು? ಇಂಗ್ಲಿಷರಿಗೆ ಮಾತ್ರ ಸಂರಕ್ಷಣಕ್ಕೆ ದಂಡಾಳುಗಳು ಬೇಕು. ಕಳ್ಳನ ಜೀವ ಹುಳ್ಳುಳ್ಳಗೆ' ದಂತು ತನ್ನ ಗುಂಡು ತನ್ನ, ಮಾಡುವ ಕಸರತ್ತು ಮಾಡಿರಿ, ನಿಮ್ಮದೂ ತೀರಲಿ ನಮ್ಮದೊಂದು ಗಟ್ಟಿಮಾತು, ತಿಳಕರಿ, ಕೇಳಕರಿ, ತಿಪ್ಪರಗಾಲು ಬಡೆಯಿರಿ, ಆ ಮಾತು ನಾವು ಬಿಡುವದಂತಿಲ್ಲ. "ಅಸಹಕಾರ" ನಿಮ್ಮ ಸಂಗತಿ ಬೇಡ. ಇದರ ಹೊರತು ಇನ್ನೊಂದು ದಾರಿಲ್ಲ. ತಪ್ಪು ಒಪ್ಪಿಕೊಳ್ಳಿರಿ, ಅವನ್ನು ತಿದ್ದಿಕೊಳ್ಳಿರಿ, ಮುಂದೆಂದೂ ಹೀಗೆ ಮಾಡುವದಿಲ್ಲೆಂದು ವಚನ ಕೊಡಿರಿ, ನಮಗೆ ಸರಶಿನ ಬೇಡಿರಿ, ಹೀಗೆ ನೀವಾಗಿ ಮಾಡುವದೊಂದೇ ತಡ ನಾವು ನಿಮ್ಮನ್ನು ಕೂಡಿಕೊಳ್ಳಲಿಕ್ಕೆ ಸಿದ್ಧವೆಂದು ತಿಳಿಯಿರಿ. ಅಸಹಕಾರಿಗಳು ಹೊಟ್ಟೆಕಿಚ್ಚಿನವರು ಹೀಗೆ ಅನ್ನುವದರಲ್ಲಿ ಏನೂ ಅರ್ಥವಿಲ್ಲ. ಒಣ ಚಿಂತೆಯನ್ನು ನೂಂದಿಸಬೇಡಿರಿ. ನಿಮ್ಮ ಭೇದಬುದ್ಧಿಯು ಇಲ್ಲದಾಗಬೇಕೆಂದೇ ನಾವು ನಿಮ್ಮ ಸಂಗತಿಯನ್ನು ಬಿಟ್ಟಿದ್ದು. ಕಣ್ಣು ತೆರೆಯಿರಿ, ಎಚ್ಚರಾಗಿರಿ, "ಕೂಡಿ ಆಡಬೇಕು, ಕೂಡಿ ಮಾಡಬೇಕು, ಕೂಡಿ ಉಣಬೇಕು, ಕೂಡಿ ಉಡಬೇಕು, ಕೂಡಿ ಕೂಡಿ ಇರಬೇಕು." ಇದೇ ನಮ್ಮ ಇಚ್ಛೆ. ಈ ಬುದ್ಧಿ ನಿಮ್ಮಲ್ಲಿ ಹುಟ್ಟುವವರೆಗೆ ನಿಮ್ಮ ಕೂಡ ನಾವು ಇರಬಾರದು. "ಕೂಡಿ ಇರಬಾರದು" ಎಂದು ನಮ್ಮಲ್ಲಿ ಹುಟ್ಟಿದ ಬುದ್ಧಿಗೆ ಜ್ಞಾನವೂ, ಪ್ರೀತಿಯೂ ಕಾರಣವು. ಅಜ್ಞಾನವೂ ಅಪ್ರೀತಿಯೂ ಅಲ್ಲ. ನಾವೂ ನೀವೂ ಎಂಥ ಸರಿಸಮಾನ ಅಣ್ಣತಮ್ಮಂದಿರಂತೆ ಒಂದಾದೇವೋ ಎಂದು ಬಾಯಿಬಿಟ್ಟೇ ನಾನಂತೂ ಕೂಗುತಿರುವೆನು. ದೇವರೇ! ಈ ಬುದ್ಧಿಯು ಲೇಡಿಂಗರಿಗಷ್ಟು ಬರಲಿ. ಜಗತ್ತಿನ ಕಲ್ಯಾಣವಾಗಲಿ."

ಶಾಂತಿಃ ಶಾಂತಿಃ ಶಾಂತಿಃ

—ಕರ್ಮವೀರ ಧಾರವಾಡ

ಅಖಿಲ ಭಾರತೀಯ ಕೊಂಗ್ರೆಸು ಕಮಿಟಿ.

ನಾಗಪೂರದ ಘಟನೆಯಂತೆ, ಪರ್ಮನೆಂಟ ರಾಷ್ಟ್ರೀಯ ಸಭೆಯ ಕಾರ್ಯಕಾರೀ ಕಮಿಟಿಯಾದ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ಬೈಠಕಿಯು ಈ ಹೊತ್ತು ಮುಂಬಾಯಿನಗರಿಯಲ್ಲಿ ನೆರೆಯುವದು. ಈ ಬೈಠಕಿಯಲ್ಲಿ ಸತ್ಯಾಗ್ರಹ, ಕಿರ್ದೆ ಕಹಿತೂಡಿ ಕೈಕೊಳ್ಳಲಿಕ್ಕೆ ಜನತೆಯು ಎಷ್ಟರಮಟ್ಟಿಗೆ ತಯಾರಿದೆ, ಎಂಬುದು ವಿಚಾರವಾಗುವದು. ಮಹಾತ್ಮರು ಪ್ರತಿನಿಧಿಗಳಿಗೆ ತಮ್ಮ ತಮ್ಮ ಪ್ರಾಂತಗಳ ಲೋಕಮತವನ್ನೂ, ಜನತೆಯೊಳಗಿನ ಜಾಗೃತೆಯನ್ನೂ ಚನ್ನಾಗಿ ಪರೀಕ್ಷಿಸಿ, ಯೋಗ್ಯಮತ ಪ್ರತಿಪಾದಿಸಲಿಕ್ಕೆ ಮನಃಪೂರ್ವಕ ವಿನಂತಿ ಮಾಡಿರುವರು. ಇದಲ್ಲದೆ, ಪ್ರತಿನಿಧಿಗಳು ಕೆಳಗಿನ ಸಂಗತಿಗಳ ಬಗ್ಗೆ ನಿಕ್ಕಿ ಮಾಹಿತಿ ಪೂರೈಸಬೇಕು.

(೧) ಟಿಳಕ ಸ್ವರಾಜ್ಯ ಫಂಡಿಗೆ ಕೂಡಿದ ಹಣ
(೨) ಕೊಂಗ್ರೆಸ ಮೆಂಬರರ ಸಂಖ್ಯೆ.
(೩) ಚಾಲು ಚರಕಗಳೆಷ್ಟು? ಅವುಗಳ ನೂಲಿನ ಉತ್ಪನ್ನವೆಷ್ಟು?
(೪) ಹತ್ತಿ ಹಸನ ಮಾಡುವವರ ಸಂಖ್ಯೆ
(೫) ನೇಕಾರರೆಷ್ಟು?
  (ಅ) ಕೈರಾಟಿ ನೂಲು ನೇಯುವವರು;
  (ಆ) ಹಿಂದುಸ್ತಾನದಲ್ಲಿಯ ಗಿರಣಿ ನೂಲನ್ನು ಉಪಯೋಗಿಸುವವರ,—
  (ಇ) ಪರದೇಶೀ ನೂಲನ್ನು ಉಪಯೋಗಿಸುವವರು.
(೬) ಪರದೇಶೀ ಅರಿವೆಯನ್ನು ಮಾರುವ ವ್ಯಾಪಾರಸ್ಥರ ಸಂಖ್ಯೆ

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

ರೂ ೨-೧೪ರ ಮನಿಯಾರ್ಡರ ಮಾಡ್ರಿ ಅಂದರೆ, ೧ ವರ್ಷದತನಕ ನಿಮ್ಮಲ್ಲಿಗೆ ಬರುವದು.

ಪತ್ತೆ:— ಕಾನಡಾವೃತ್ತ ಅಫೀಸು, ಕುಮಟಾ.

ಕಾನಡಾವೃತ್ತ.

ಗುರುವಾರ, ತಾರೀಖು ೨೮ ಮಾಹೆ ಜುಲೈ ೧೯೨೧

ಕೈ। ಲೋ। ಬಾಳ ಗಂಗಾಧರ ಟಿಳಕ.

" तव स्मरण सतत स्फुरणदायि आम्हा घडो ।
त्वदीय गुणकीर्तन-ध्वनि सुरम्य कांनीं पडो ।

स्वदेशहितचिंतनाविण दुर्जी कथा नावडो ।
तुझ्याममचि आसुर्चा तनुहि देशकार्यी पडो ' ॥

ಲೋಕಮಾನ್ಯರ ಪುಣ್ಯ ಸ್ಮರಣವು.

ಲೋಕಮಾನ್ಯ ಟಿಳಕರು ದಿವಂಗತರಾಗಿ, ಒಂದು ವರುಷವು ಪೂರಾಯಿತು. ಈ ವರುಷದಲ್ಲಿ ೧೨ ತಿಂಗಳುಗಳಿದ್ದವೆಂದ ಪ್ರಸಂಗ ಲೆಕ್ಕ ಹೊತಿದರೆ, ಮನಸ್ಸು ಒಪ್ಪುವದಿಲ್ಲ. ತೀರ ಮೊನ್ನೆ ಸಂಭವಿಸಿದ ಸಂಗತಿಯೆಂಬಂತೆ, ಅದರ ಸ್ಮೃತಿಯು ಇನ್ನು ತಾಜಾ ಇರುವದು. ರೌದ್ರಿ ಸಂವತ್ಸರದ ಆಷಾಢ ಶುದ್ಧ ಪೌರ್ಣಿಮೆಯು ಚಂದ್ರನು ಅಸ್ತಮಾನಾಗಲೇ ಪ್ರತಿಪದೆಯ ಉಷಃಕಾಲದಲ್ಲಿ ಇನ್ನೊಂದು ತೇಜೋಮಯವಾದ ರಾಷ್ಟ್ರೀಯ ರವಿಯು ಅಸ್ತನಾಗಿದ್ದ. ಈಗ ಅವರ ನೆನಪಿನೇ ಪುಣ್ಯಕಾಲದ ತಿಥಿಯು ಬಂದ ಅವರ ಗುಣ ಸ್ಮರಣವನ್ನು ಮಾಡುವದು ನಮ್ಮ ಕರ್ತವ್ಯವಾಗಿದೆ.

ಲೋಕಮಾನ್ಯರ ದೇಹ ಇಲ್ಲಿಯು ನಷ್ಟವಾದರೂ, ಅವರ ರಾಷ್ಟ್ರೀಯ ಸಂಜೀವನದ ಪ್ರೇರಣಾ ಕಾರ್ಯವು ಅವ್ಯಾಹತವಾಗಿ, ಸಜೀವತೆಯಿಂದ ಇನ್ನೂ ಮುಂದರಿಯುತ್ತಿರುವಾಗ, ಅವರ ಅಸ್ತಿತ್ವದ ಆಭಾಸವು ಇಂದಿಗೂ ನಮಗೆ ಆಗುತ್ತಿರುವದಲ್ಲವೇ? ಅವರ ಮಾನಸಪುತ್ರನಾದ ಕೇಸರಿಯು ೪೧ ವರ್ಷ ಸಂಪಾದಿಸಿದ 'ವಿಕ್ರಮಾರ್ಜಿತ ಸತ್ವ'ವನ್ನು ಅಂದಿಗೂ ಪ್ರಕಟಿಸುತ್ತಿದೆ. ಅವರು ಪ್ರಾರಂಭಿಸಿದ ರಾಷ್ಟ್ರಕಾರ್ಯ ಪರಂಪರೆಯ ಪ್ರವಾಹವು ಇಂದಿನ ಭರದಿಂದ ಹರಿಯುತ್ತಿದೆ. ಅವರು ನೆಟ್ಟ ಸ್ವರಾಜ್ಯ ಸಂಪ್ರದಾಯದ ಬೀಜವು ಅಂಕುರಿಸಿ, ಬೇಗನೆ ದೊಡ್ಡ ವೃಕ್ಷವಾಗುವದೆಂದು ಕಾಣ ಹತ್ತಿದೆ. ಸಾರಾಂಶ ಲೋಕಮಾನ್ಯರ ರಾಷ್ಟ್ರೀಯ ಆತ್ಮವು ಚಿರಂಜೀವಿಯಾಗಿ ಬಾಳುತಿರುವದು.

ಹದಿನಾಲ್ಕು ವರುಷಗಳ ಹಿಂದೆ, ೧೯೦೭ ನೇ ಇಸವಿಯ ಜಾನೇವರೀ ತಿಂಗಳಲ್ಲಿ ಕಲಕತ್ತೆಯಲ್ಲಿ ಲೋಕಮಾನ್ಯರದೊಂದು ವ್ಯಾಖ್ಯಾನವಾಗಿತ್ತು. ವ್ಯಾಖ್ಯಾನದ ವಿಷಯವು "ಹೊಸ ಪಕ್ಷದ ತತ್ವ"ಗಳೆಂಬುದಾಗಿತ್ತು. ಈ ಉಪನ್ಯಾಸದೊಳಗೆ ಪ್ರಕಟಿಸಿದ ಅವರ ವಿಚಾರಗಳು ಇಂದಿಗೆ ಸಹ ಅಕ್ಷರಶಃ ಯಥಾರ್ಥವಾಗಿರುವವು ಸತ್ಯವಾಗಿರುವವು. ಅವರು ಹೇಳಿದ್ದೇನಂದರೆ — "ನಿಮ್ಮ ಭವಿಷ್ಯಕಾಲವು ನಿಮ್ಮ ಕೈಯಲ್ಲೇ ಇದೆಂಬ ಮಾತು ನಿಮಗೆ ಮನಗಾಣಿಸಬೇಕೆಂಬುದೇ, ಹೊಸ (ರಾಷ್ಟ್ರೀಯ) ಪಕ್ಷದ ಆಕಾಂಕ್ಷೆಯು. ಸ್ವತಂತ್ರರಾಗಬೇಕೆಂಬ ಸದೃಢ ಸಂಕಲ್ಪವನ್ನು ನೀವು ಮಾಡುವಿರಿ, ಆಗಲೇ ನೀವು ಸ್ವಾತಂತ್ರ್ಯರಾಗುವಿರಿ. ಸ್ವಾತಂತ್ರ್ಯದ ಆಕಾಂಕ್ಷೆಯು ನಿಮಗಾಗದಿದ್ದರೆ, ನಿಮ್ಮ ಅಧೋಗತಿಯು ನಿಶ್ಚಿತವಾಗ್ಯಾಗುವದೆಂದು ತಿಳಿಯಿರಿ. ನಿಮಗೆಲ್ಲರಿಗೂ ಶಸ್ತ್ರಾಸ್ತ್ರಗಳನ್ನು ಉಪಯೋಗಿಸುವ ಅವಶ್ಯಕತೆಯಿಲ್ಲೇ ಇಲ್ಲ. ಇಂಥ ಪ್ರತ್ಯಕ್ಷ ಪ್ರತಿಕಾರವನ್ನು ಮಾಡುವ ಶಾರೀರಿಕ ಶಕ್ತಿ ನಿಮಗಿಲ್ಲದಿದ್ದರೂ, ಪರಕೀಯ ಸರಕಾರಕ್ಕೆ ನಮ್ಮನ್ನು ಆಳಗೊಡುವ ಕೆಲಸದಲ್ಲಿ ಪ್ರತ್ಯಕ್ಷವಾಗಿ ಸಹಾಯವಾಗದಿರುವಷ್ಟು ಆತ್ಮಸಂಯಮನವೂ, ಸ್ವಾರ್ಥತ್ಯಾಗವೂ ನಿಮ್ಮಲ್ಲಿದೆಯೋ ಇಲ್ಲವೋ? ಬಹಿಷ್ಕಾರವೆಂಬುದಿದೇ ಬಹಿಷ್ಕಾರವು (ಈಗಿನ ಅಸಹಕಾರವು) ರಾಜಕೀಯ ಶಸ್ತ್ರವದೆಂದು ಇದಕ್ಕಾಗಿಯೇ ನಾವು ಹೇಳುವೆವು. ಕರಗಳನ್ನು ವಸೂಲ ಮಾಡುವ ಮತ್ತು ಶಾಂತತೆಯನ್ನು ರಕ್ಷಿಸುವ ಕೆಲಸಗಳಲ್ಲಿ, ನೀವಾಗಿ ಸಹಾಯವನ್ನರ್ಪಿಸಕೂಡದು. ಹಿಂದುಸ್ಥಾನದ ದುಡ್ಡು ಮತ್ತು ಹಿಂದೀ ರಕ್ತವು, ದೇಶದ ಹೊರಗಿನ ಯುದ್ಧಗಳನ್ನು ಕಾದಾಡಲಿಕ್ಕೆ ವೆಚ್ಚವಾಗಕೂಡದು. ನ್ಯಾಯ ಮನಸೊಬುಗಳಲ್ಲಿ ಸಹ ಸಂಬಂಧವಿಡದೆ, ನಮ್ಮ ಸ್ವಂತ ನ್ಯಾಯಕೋರ್ಟುಗಳನ್ನು ಸ್ಥಾಪಿಸಿ, ಹೊತ್ತು ಬಂದರೆ, ಕರಿಗೆಗಳನ್ನೂ ಕೊಡದಿರಬೇಕಾಗುವದು. ನಮ್ಮೆಲ್ಲರ ಒಗ್ಗಟ್ಟಿನಿಂದ ಇವೆಲ್ಲ ಸಾಧಿಸುವದು ಶಕ್ಯವಿಲ್ಲೇನು? ಶಕ್ಯವಿದ್ದರೆ, ನೀವು ಸ್ವತಂತ್ರರಾಗಲಿಕ್ಕೆಷ್ಟು ಹೊತ್ತು?" ಈ ವಿಚಾರಸರಣಿಯು ಮಹಾತ್ಮಾ ಗಾಂಧಿಗಳ ತತ್ವಗಳಿಗೆ ಎಷ್ಟು ತಂತೋತಂತವಾಗಿ ಕೂಡುತ್ತದೆಂದು ಹೇಳಬೇಕೇನು? ಲೋಕಮಾನ್ಯರ ಕಾರ್ಯವನ್ನೇ ಮಹಾತ್ಮರು ಮುಂದರಿಸಿದ್ದಾರೆಂದು ಹೇಳಲು, ಬೇರೆ ಪ್ರಮಾಣವೇಕೆ.

ಲೋಕಮಾನ್ಯರು ಇಂದಿದ್ದರೆ, ಮಹಾತ್ಮರ ಅಸಹಕಾರಿತೆಯ ಚಳವಳಿಯ ವಿಷಯವಾಗಿ, ಅವರು ಯಾವ ಧೋರಣವನ್ನು ಸ್ವೀಕರಿಸುತ್ತಿದ್ದರು, ಎಂಬ ಬಗ್ಗೆ ಕೆಲವೆಡೆಯಲ್ಲಿ ವಾದವಿವಾದವು ನಡೆಯುತ್ತಿದೆ. ಅಧ್ಯಾತ್ಮಿಕ ದೃಷ್ಟಿಯಿಂದ ವಿಚಾರಿಸಿದರೆ, ಈ ವಿಷಯವಾಗಿ ಒಂದು ಅಪೂರ್ವ ಯೋಗಾಯೋಗವು ಸಂಭವಿಸಿದೆಂದು ಹೇಳಬಹುದು. ಲೋಕಮಾನ್ಯರ ಪ್ರಾಣಜ್ಯೋತಿಯು ವಿಲಯಹೊಂದಲಿಕ್ಕೂ, ಮಹಾತ್ಮರ ಅಸಹಕಾರವು ಸಕ್ರಿಯವಾಗಿ ಪ್ರಾರಂಭವಾಗಲಿಕ್ಕೂ, ಒಂದೇ ಗಂಟು ಬಿದ್ದಿತ್ತು. ಮೊದಲನೇ ಹರತಾಳದ ದಿವಸವೇ ಇದೆಲ್ಲ ಸಂಭವಿಸಿದೆ. ಅಸಹಕಾರದ ಪ್ರಚಂಡ ಚಳವಳಿಯ ಮೊದಲನೇ ದಿವಸವಿದೇ. ಆದಕಾರಣ, ಈ ಅಸ್ತೋದಯದೊಳಗೆ ವ್ಯಾಪಕ ಸಂಕಲ್ಪವದೆಂದು ಕೆಲ ಭಾವಿಕರ ಭಾವನೆಯು ಆಗಿದೆ. ಈ ದೃಷ್ಟಿಯಿಂದ ಲೋಕಮಾನ್ಯರ ರಾಷ್ಟ್ರಕಾರ್ಯವನ್ನೇ ಮಹಾತ್ಮರು ಮುಂದರಿಸಿದ್ದಾರೆಂದು ಹೇಳಬಹುದು. ಈ ಇಬ್ಬರು ಲೋಕಾಗ್ರಣಿಗಳ ವಿಚಾರಸರಣಿಯೊಳಗೆ ತತ್ವಭೇದವು

ತೀರ ಕಡಿಮೆ ಇನ್ನು ಅಸಹಕಾರಿತೆಯ ಕಾರ್ಯಕ್ರಮದ ತಪಶೀಲದಲ್ಲಿ ಇಬ್ಬರದೂ ಮತಭೇದವಾಗುವ ಸಂಭವವಿತ್ತೆಂದು ಲೋಕಮಾನ್ಯರ ಪಟ್ಟಶಿಷ್ಯರ ಅಭಿಪ್ರಾಯವಾಗಿದೆ ಅದು ಸಕಾರಣವೆಂದು ನಮ್ಮ ಮತವು ಟಿಳಕರ ಮಾರ್ಗವು ಪ್ರವೃತ್ತಿಪರವಿದ್ದಾಗ, ಗಾಂಧಿ ಮಾರ್ಗವು ನಿವೃತ್ತಿಪರವದೆಂದು ಸೂಕ್ಷ್ಮ ದೃಷ್ಟಿಯಿಂದ ನೋಡುವವರಿಗೆ ಕಂಡುಬರುವದು "ಲೋಕಮಾನ್ಯರು ಬಾಳಿದ್ದರೆ, ಅಸಹಕಾರಿತೆಯನ್ನು ಎಂದೂ ವಿರೋಧಿಸುತ್ತಿದ್ದಿಲ್ಲ ಅದನ್ನು ಹೆಚ್ಚು ವೇಗಾಂಗೀಕಾರ ಮಾಡಿಕೊಳ್ಳುತ್ತಿದ್ದರು." ಎಂದು ಶ್ರೀಯುತ ಕೇಳಕರರು ಪ್ರತಿಪಾದಿಸಿದ್ದು ಯಥಾರ್ಥವಾಗಿ "ಒಮ್ಮೆಗೇ ಸರ್ವಸ್ವವನ್ನು ತ್ಯಾಗಮಾಡಿರೆಂದು ಹೇಳಿದರೆ, ಅದು ಎಲ್ಲರಿಗೂ ಮಾನ್ಯವಾಗದು. ಮತ್ತು ಯಾರ ಕೈಯಿಂದಲೂ ಆಚರಣಾ ಅದು ಸಾಧ್ಯವಾಗದು— ಎಂಬ ಮನುಷ್ಯ ಸ್ವಭಾವದ ಮರ್ಮವನ್ನು ಗಾಂಧಿಗಿಂತ ಟಿಳಕರಿಗೇ ಹೆಚ್ಚು ಗೊತ್ತಿತ್ತೆಂಬ ಮಾತು ಒಂದಾವರ್ತಿ ಸ್ವತಃ ಮಹಾತ್ಮರಿಗೂ ಮಾನ್ಯವಾಗಬಹುದು." ಎಂಬ "ಕೇಸರಿ' ಯ ಅಂಬೋಣದ ಕಾರಣವಾದರೂ ಇದೇ. "ನನ್ನ ಮತ್ತು ಟಿಳಕರ ಮಾರ್ಗಗಳು ಭಿನ್ನವಾಗಿದ್ದವು" ಎಂದು ಮಹಾತ್ಮರು ಕದಾಚಿತ್ ಇದೇ ಅರ್ಥದಿಂದ ಹೇಳಿರಬಹುದೆಂದು "ಕೇಸರಿ" ಯ ಮತವದೆ ವಸ್ತುತಃ ಇಂಥ ವಾದವಿವಾದವು ಹೆಚ್ಚಾಗಿ ಕಲ್ಪನಾಪ್ರಧಾನವಾಗಿರುವದು. ದಾದಾಭಾಯಿ ನವರೋಜಿಗಳು ಇಂದಿಗಿದ್ದರೆ, ಏನು ಮಾಡುತ್ತಿದ್ದರು, ಗೋಖಲೇ, ಮೇಹ್ತಾ, ತೇಲಂಗ, ರಾನಡೇ ಇವರು ಬಾಳಿದ್ದರೆ, ಇಂದಿಗೆ ಯಾವ ತತ್ವಗಳನ್ನು ಆದರಿಸುತ್ತಿದ್ದರು? ನೂರಾರು ವರ್ಷ ನಡಿಸಿದ ವಿಶ್ವಾಸಪೂರ್ಣ ಸಹಕಾರಿತೆಯು ನಿಷ್ಫಲವಾಯಿತೆಂದು, ಅಸಹಕಾರಿತೆಯ ಮಾರ್ಗವನ್ನು ಅವರು ಅವಲಂಬಿಸುತ್ತಿದ್ದರೋ, ಇಲ್ಲವೋ? ಇಂದ ವಿವಾದದೊಳಗೆ 'ಹೌದು" "ಇಲ್ಲ" ಹೀಗೆರಡೂ ಪಕ್ಷಗಳು ತಮ್ಮ ತಮ್ಮ ತರ್ಕಶಾಸ್ತ್ರವನ್ನು ಪ್ರತಿಪಾದಿಸದಿರವು ನಮಗಂತೂ, ಇದೆಲ್ಲ ಕಾಲ್ಪನಿಕ ಚರ್ಚೆಯೆಂದು ಕಾಣುತ್ತದೆ ಎಷ್ಟು ಭಿನ್ನ ಮತದ ನಾಯಕರಿದ್ದರೂ, ರಾಷ್ಟ್ರೋದ್ಧಾರದ ಹೋರಯಲ್ಲಿ ಎಲ್ಲರ ಸೇವೆಯು ಹೆಚ್ಚುಕಡಿಮೆ ಪ್ರಮಾಣದಿಂದ ಫಲದಾಯಕವಾಗುತ್ತಿದೆಂದು, ವ್ಯಾಪಕದೃಷ್ಟಿಯಿಂದ ನೋಡಿದರೆ ತಿಳಿಯುವದು. ಎಲ್ಲ ಮುಖಂಡರ ಸಾಧನಗಳಲ್ಲಿ ದೇಶೋನ್ನತಿಯ ಒಂದೇ ಸೂತ್ರವು ಗ್ರಥಿತವಾಗಿರುವದು. ಎಲ್ಲರ ಪರಾಗತಿಯು ಸ್ವರಾಜ್ಯವೇ. ಒಬ್ಬರಿಗಿಂತ ಮತ್ತೊಬ್ಬರಲ್ಲಿ ಆತ್ಮವಿಶ್ವಾಸವು ಹೆಚ್ಚಿರಬಹುದು ಒಬ್ಬರಿಗಿಂತ ಮತ್ತೊಬ್ಬರಲ್ಲಿ ಸ್ವಾವಲಂಬನವು ಹೆಚ್ಚಿರಲಿಕ್ಕೆ ಸಾಕು, ಒಬ್ಬರಿಗಿಂತ ಮತ್ತೊಬ್ಬರಿಗೆ ಸತ್ಯಸ್ಥಿತಿಯ ಜ್ಞಾನವು, ವ್ಯವಹಾರಕುಶಲತೆಯೂ ಹೆಚ್ಚಿರಲಿಕ್ಕೆ ಸಾಕು ಹೀಗಿದ್ದರೂ, ಎಲ್ಲರೂ ಒಂದೇ ದಿಕ್ಕಿಗೆ ಪ್ರಗತಿ ಮಾಡಿ ನಡೆದಿರುವರಲ್ಲವೇ

ಇರಲಿ ಇಂಥ ಪ್ರಚಂಡ ರಾಷ್ಟ್ರಕಾರ್ಯದೊಳಗೆ ತನ್ನ ಇಡೀ ಆಯುಷ್ಯವನ್ನೂ, ದೇಹವನ್ನೂ ವೆಚ್ಚಮಾಡಿ, ನಿಜವಾದ ಲೋಕನಾಯಕರಲ್ಲಿರುವ ನಿರ್ಭಯತೆ, ಸತ್ಯನಿಷ್ಠೆ, ಸ್ವಾರ್ಥತ್ಯಾಗ, ದೃಢನಿಶ್ಚಯ, ನೀತಿನಿಪುಣತೆ ಮತ್ತು ಸದಾಚಾರಗಳಂಥ ಅಲೌಕಿಕ ಗುಣಗಳನ್ನು ತಮ್ಮ ನಿಷ್ಕಲಂಕ ಚರಿತ್ರದಿಂದ ತೋರಿಸಿದ ಲೋಕಮಾನ್ಯರಂಥ ರಾಷ್ಟ್ರಪುರುಷರು, ಲೋಕನಾಯಕರು ಜಗತ್ತಿನೊಳಗೆ ವಿರಳರು ಇಂಥ ದೈವಿಕ ಪುರುಷರ ಕಾರ್ಯಗಳು ದೈವಿಕ ಪ್ರೇರಣೆಯಿಂದಲೇ ಮುಂದರಿಯುತ್ತವೆ ಅದೇ ಕಾರ್ಯವು ಈಶ್ವರಾಜ್ಞೆಯಾದಂತೆ, ಮಹಾತ್ಮಾ ಗಾಂಧಿಗಳ ಕೈಯಿಂದ ಮುಂದೆ ಸಾಗಿದೆ ಅದಕಾರಣ, ಲೋಕಮಾನ್ಯರ ಪುಣ್ಯಸ್ಮರಣಾರ್ಥವಾಗಿ ನಾವೆಲ್ಲರು ನಮ್ಮ ಭೇದಭಾವಗಳನ್ನು ಮರೆತು, ಅನನ್ಯ ಭಾವದಿಂದ ಜಗದೀಶನ ಕೂಡ ಪ್ರಾರ್ಥಿಸುವದೇನಂದರೆ— 'ದೇವರೇ ಈ ಬಡ ರಾಷ್ಟ್ರವನ್ನು ಉದ್ಧರಿಸು ಮತ್ತು ಇದಕ್ಕೆ ಆದಷ್ಟು ಬೇಗ ಸ್ವರಾಜ್ಯಪ್ರಾಪ್ತಿಯನ್ನು ದಯಪಾಲಿಸು ಲೋಕಮಾನ್ಯರ ಆತ್ಮವು ಇಂಥ ಭಕ್ತಿಯಿಂದ, ಇಂಥ ನಮ್ಮ ಪ್ರಾರ್ಥನೆಯಿಂದ ಮತ್ತು ಇದಕ್ಕೆ ತಕ್ಕ ನಮ್ಮ ಆಚರಣೆಯಿಂದ ಸದೈವ ಚಿರಶಾಂತಿಯನ್ನು ಹೊಂದುವದೆಂದು ನಾವು ನಂಬಿರುವೆವು.

ಸ್ಫುಟ ಸೂಚನೆಗಳು.

೧ ನಮ್ಮ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಶ್ರೀ। ಶಾಸ್ತ್ರಿಗಳವರು ಹೊನ್ನಾವರ ಮ್ಯುನಿಸಿಪಾಲಿಟಿಗೆ ಪತ್ರ ಬರೆದು, ಕಮಿಟಿಯು ಹೊನ್ನಾವರದಲ್ಲಿ ನಡಿಸಿದ ಮದ್ಯಪಾನ ನಿಷೇಧದ ಕಾರ್ಯಕ್ಕಾಗಿ ಪ್ರತ್ಯಕ್ಷ ಸಹಾಯವನ್ನು ಬೇಡಿರುವರು. ಈ ಕಾರ್ಯವು ಸ್ತುತ್ಯವದೆ, ಪವಿತ್ರವದೆಂಬ ಬಗ್ಗೆ ಅಧಿಕಾರಿಗಳಲ್ಲಿಯೂ ಜನರಲ್ಲಿಯೂ ಮತಭೇದವಿರುವದು ಶಕ್ಯವಿಲ್ಲ ನೆರೆ ಕುಡುಕರ ಅತಿ ಹಾನಿಕರ ದುರ್ವ್ಯಸನವನ್ನು ನಿರ್ಮೂಲಿಸಬಾರದೆಂದು ಹೇಳುವ ಸರಕಾರವು ಜಗತ್ತಿನಲ್ಲೆಲ್ಲಿಯೂ ಸಿಗದು ಮ್ಯುನಿಸಿಪಾಲಿಟಿಗಳಂಥ ಸ್ಥಾನಿಕ ಸಂಸ್ಥೆಗಳು ಆರ್ಥಿಕ ಮತ್ತು ನೈತಿಕ ಸಹಾಯವನ್ನು ಕೊಟ್ಟು, ಈ ಕಾರ್ಯವನ್ನು ನಡಿಸುವದಲ್ಲದೆ, ಮತ್ಯಾರು ನಡಿಸುವರು? ಅವುಗಳ ಕರ್ತವ್ಯ ಕ್ಷೇತ್ರದೊಳಗಿನ ಕೆಲಸವಿದೇ. ಶಿಕ್ಷಣ ವಿಷಯಕ ಮತ್ತು ಆರೋಗ್ಯರಕ್ಷಣೆಯ ಕರ್ತವ್ಯಗಳಲ್ಲಿಯೇ ಇದು ಒಳಗೊಂಡಿದೆ ಇದೇ ದೃಷ್ಟಿಯಿಂದ ಠಾಣಾಜಿಲ್ಲೆಯ ಲೋ। ಬೋರ್ಡು, ಈ ಕಾರ್ಯಕ್ಕೆ ದ್ರವ್ಯಸಹಾಯ ಮಾಡಬೇಕೆಂದು ಠರಾವು ಮಾಡಿರುವದು. ಹೊನ್ನಾವರ ಮತ್ತು ಬೇರೆ ಕಡೆಯ ಮ್ಯುನಿಸಿಪಾಲಿಟಿಗಳು ತಮ್ಮ ಕರ್ತವ್ಯಕ್ಕೆ ಎಚ್ಚತ್ತು, ಇಂಥ ಚಳವಳಿಗಳನ್ನು ಆದರಿಸುವರೆಂದು ಕೋರುವೆವು ಸ್ಥಾನಿಕ ಸ್ವರಾಜ್ಯವು, ಸೂತ್ರಗಳನ್ನು ಎಳೆದಂತೆ ಕುಣಿದಾಡುವ ಗೊಂಬೆಗಳ ಆಟವಲ್ಲ ಇದು ಸರ್ವ ಸಭಾಸದರ, ಜನರ ನಿಜವಾದ ಪ್ರತಿನಿಧಿಗಳ ಸಾಹಸನಿಷ್ಠೆಯಿಂದ ಕೃತಿಯಿಂದ ತೋರಿಸುವ, ಸುಗಂಧಿಯಿದು. ಇದನ್ನು ಹೋಗಲಾಡಿಸುವದು ಅಕ್ಷಮ್ಯ ಕರ್ತವ್ಯಪರಾಙ್ಮುಖತೆಯಾಗುವದು.

ಸಿರ್ಸಿಯಲ್ಲಿ ಅಲ್ಲಿಯ ಮುನಿಸಿಪಾಲಿಟಿಯ ನೌಕರನಾದ ಒಬ್ಬ ಭಂಗಿಯು, ಅಲ್ಲಿಯ ಪೋಲೀಸ ಫೌಜದಾರನು ತನಗೆ ನಿಷ್ಕಾರಣ ಹೊಡೆದು, ದುಃಖ ಪಡಿಸಿದನೆಂದು, ಫಿರ್ಯಾದು ಮಾಡಿದ್ದನು ಪುರಾವೆಯು ಏನೂ ಇಲ್ಲೆಂಬ ಕಾರಣದಿಂದ ಮಾಜಿಸ್ಟ್ರೇಟರು ಆರೋಪಿತರನ್ನು ನಿರ್ದೋಷಿಗಳೆಂದು ಬಿಡುವಾಗ, ತಮ್ಮ ಜಡ್ಜಮೆಂಟಿನಲ್ಲಿ, ಅಸಹಕಾರಿತೆಯನ್ನು ಹಿಂಬದಿಯಿಂದ ಹೊಡೆಯಬೇಕೆಂದು, ಅಪ್ರಸ್ತುತ ವಿಧಾನಗಳ ಪುರಾಣವನ್ನು ಬರೆದು, ಈ ಖಟ್ಲೆಯಲ್ಲಿ ಯಾವದೇ ಸ್ವರೂಪದಿಂದ ಕೋರ್ಟಿನಮುಂದೆ ಎದುರಾಗದ ಒಬ್ಬ ಸದ್ಗೃಹಸ್ಥರಾದ ಶ್ರೀ। ಧಾಕಪ್ಪನವರ ಮೇಲೆ ವೃಥಾ ಆರೋಪಗಳನ್ನು ಹೊರಿಸಿದ್ದರು. ಹೈಕೋರ್ಟಿನಲ್ಲಿ ಅದರ ಮೇಲ್ವಿಚಾರಣೆಯಾಗಿ, ನ್ಯಾಯಾಧೀಶರು, ಮೇಜಿಸ್ಟ್ರೇಟರ ತೀರ್ಪಿನೊಳಗಿನ ಅಪ್ರಸ್ತುತ ಭಾಗವನ್ನು ನಿರಾಕರಿಸಿ, ಶ್ರೀ। ಧಾಕಪ್ಪನವರಿಗಾದ ಅನ್ಯಾಯವನ್ನು ದೂರ ಪಡಿಸಿರುವರು. ಮಾಜಿಸ್ಟ್ರೇಟರ ಲೆಕ್ಕಣಿಕೆಗಾದರೂ ಲಗಾಮಿದೆಂದು ಇನ್ನಾದರೂ ಇವರಿಗೆ ತಿಳಿಯುವದೇನು? ಅಸಹಕಾರಿತೆಯು ಶತ್ರುತೆಯೊಳಗೆಂದೂ ತಿರುಗಾಡುವದಿಲ್ಲ. ದಿವಸದ ಬೆಳಕಿನಲ್ಲೇ ನಮ್ರತೆಯಿಂದ, ಶಾಂತತೆಯಿಂದ ಅದು ಸಂಚರಿಸುತ್ತದೆ ಇದಕ್ಕೆ ಹಿಂಬದಿಯಿಂದ ಹೊಡೆಯುವ ಆಯಾಸವನ್ನು ಈ ಮೇಜಿಸ್ಟ್ರೇಟರು ಯಾಕೆ ತಕ್ಕೊಂಡರು? ಅಸಹಕಾರಿಗಳೇ ಈ ಸುಳ್ಳು ಫಿರ್ಯಾದನ್ನು ಎಬ್ಬಿಸಿದ್ದರೆಂದು ಆರೋಪವಮಾಡುವದಿದ್ದರೆ, ಕೋರ್ಟುಗಳಿದ್ದಾವೆ, ನ್ಯಾಯಾಧೀಶರಿದ್ದಾರೆ ಫಿರ್ಯಾದು ಮಾಡಲಿಕ್ಕೆ ಈ ಮಾಜಿಸ್ಟ್ರೇಟರೇ ತಮ್ಮ ತೀರ್ಪಿನೊಳಗೆ ಫಿರ್ಯಾದಿಯಾಗಿದ್ದಾರೆ ಹೀಗಿದ್ದಾಗ, ಈ ಆರೋಪದ ಸ್ವತಂತ್ರ ವಿಚಾರಣೆ ಯಾಕಾಗಲಿಲ್ಲ? ಹೈಕೋರ್ಟಿನ ನ್ಯಾಯಾಧೀಶರಿಗೂ ಇದೇ ಗೂಢವಾಗಿರಲಿಕ್ಕೆ ಸಾಕು. ಒಬ್ಬಗೆ ಹಿಂದು ಆರೋಪದ ತೀರ್ಪು ಕೊಡುವಾಗ, ಮತ್ತೊಂದು ಆರೋಪವನ್ನು ಮತ್ತೊಬ್ಬರ ಮೇಲೆ ಹೊರಿಸಿ, ಪುರಾವೆಗಿರಾವೆಯ ಹಾದಿ ಕಾಯದೆ, ಅದರ ನಿರ್ಣಯವನ್ನು ಅದೇ ತೀರ್ಪಿನಲ್ಲಿ ಕೊಟ್ಟುಬಿಡುವದು, ಬುದ್ಧಿಯ ಮಿತವ್ಯಯವಾಗಿದ್ದರೂ ನ್ಯಾಯದ ಕೊಲೆಯಾಗುವದೆಂದು ಎಲ್ಲ ಮೆಜಿಸ್ಟ್ರೇಟರು ತಿಳಿದಿರಲಿ. ಇಂಥ ನ್ಯಾಯಪತಿಗಳು ಲೆಕ್ಕಣಿಕೆಯಿಂದ ಅಸಹಕಾರಿತೆಯನ್ನು ಹಿಂಬದಿಯಿಂದ ಬಡಿಯಲಿಚ್ಛಿಸಿದರೆ, ಅವರ ಲೆಕ್ಕಣಿಕೆಯೇ ಮುರಿಯುವದು. ನಿರಪರಾಧಿ ಅಸಹಕಾರಿತೆಗೇನು ನೋವಾಗದು

---

೩ ಮುಂಬಯಿಯ ಪ್ರಖ್ಯಾತ ನ್ಯೂಹೈಸ್ಕೂಲಿನ ಜ್ವಾಯಿಂಟ ಪ್ರಿನ್ಸಿಪಾಲರಾದ, ಮಿ। ಬಾಲಭಾಯ ಡಿ. ಭಡಾರ್ ಇವರು ವಿಷಮ ಜ್ವರದಿಂದ ಕಳೆದ ಬುಧವಾರ ತಾರೀಖು ೧೩ನೇ ಜುಂದಾನೆ ದಿವಂಗತರಾದರೆಂದು ತಿಳಿಸಲು ಬಹಳ ವ್ಯಸನವಾಗುತ್ತದೆ. ೧೮೯೦ರಲ್ಲಿ ಮಿ। ಭಡಾರ್ ಇವರು ಮಿ। ಕೈಕೋಬಾದ ಮರ್ಜಬಾನ ಇವರ ಸಾಹಚರ್ಯದಿಂದ ನ್ಯೂಹೈಸ್ಕೂಲನ್ನು ಸ್ಥಾಪಿಸಿ, (ಅದನ್ನು ಉರ್ಜಿತಾವಸ್ಥೆಗೆ ತರಲು ಕಳೆದ ೩೦ ವರ್ಷಗಳಿಂದ ಅವಿಶ್ರಾಂತ 'ಮಹ

ದಿರುವದು. ಈಗ ಈ ಹ್ಯಾಸ್ಕೂಲು ಇಡೀ ಮುಂಬಯಿ ಇಲಾಖೆಯಲ್ಲಿ ಅತ್ಯುತ್ತಮ ಮಾಧ್ಯಮಿಕ ಶಿಕ್ಷಣದ ಒಂದು ಸಂಸ್ಥೆಯಾಗಿರುವದು ಇದರ ಶ್ರೇಯವು ಬಹುಪರಿಯಿಂದ ದ. ವಾ. ಮಿ। ಭಡಾರ್ಕ ಇವರದೇ ಎಂದು ನ್ಯೂಹ್ಯಾಸ್ಕೂಲಿನ ಲೋಕಪ್ರಿಯ ಹೆಸರಾದ ಭಡಾರ್ಕಸ್ಕೂಲೇ ಸಾರುತ್ತದೆ. ಮಿ। ಬಡಾರ್ಕ ಇವರು ಶಾಲೆಯನ್ನು ಸ್ಥಾಪಿಸಿದ ಮೇಲೆ, ಇಂಗ್ಲಂಡಕ್ಕೆ ಹೋಗಿ, ಅಲ್ಲಿಯ ಶಾಲೆಗಳ ವ್ಯವಸ್ಥೆ, ಶಿಕ್ಷಣದ ಶೈಲಿ ಮುಂತಾದವುಗಳನ್ನು ಕಲಿತುಕೊಂಡು ಬಂದು, ಅವೇ ಮಾರ್ಗಗಳನ್ನು ತಮ್ಮ ಸಂಸ್ಥೆಯಲ್ಲಿ ಸೇರಿಸಿ ಶಾಲೆಯ ಉಪಯುಕ್ತತೆಯನ್ನು ಮತ್ತೂ ಮಿಗಿಲಾಗಿ ಮಾಡಿದ್ದರು. ವಿದ್ಯಾರ್ಥಿಗಳಿಗೆ ಕಲಿಸುವ ಇವರ ಶೈಲಿಯು ಅಪ್ರತಿಮವಿತ್ತು. ವಿದ್ಯಾರ್ಥಿಗಳಿಗೆ ಅವರೊಳಗಿನ ಒಬ್ಬನಂತೆ, ಕೇವಲ ಸಂಶಯಮಾನಸ್ಕಂದರಂತೆ ವರ್ತಿಸಿ, ಗೆಳೆಯನಂತೆ ಜ್ಞಾನದಾನ ಮಾಡುತ್ತಿದ್ದರು. ಹಿಂದೆ ಸ್ಥಾನದ ಶಿಕ್ಷಣವು ಸಾಂಕ್ರಾಮಿಕ ಅವಸ್ಥೆಯಲ್ಲಿರುವಾಗ, ಕೇವಲ ಸ್ವಾವಲಂಬನದಿಂದಲೂ ಬುದ್ಧಿ ಬಲದಿಂದಲೂ ಮಾಧ್ಯಮಿಕ ಶಿಕ್ಷಣದಲ್ಲಿ ತಜ್ಞರೆಂದು ಪ್ರಸಿದ್ಧರಾದ ವಿ। ಬಡಾರ್ಕ ಇವರನ್ನು ಕಳಕೊಳ್ಳುವದು ನಮ್ಮ ದುರ್ದೈವವು. ಅವರ ವರು ಪ್ರೀತಿಯ ನ್ಯೂಹೈಸ್ಕೂಲ ಸಂಸ್ಥೆಗಂತೂ ಅಪರಿಮಿತ ಹಾನಿಯಾಗಿದೆ. ಈ ಪ್ರಸಂಗದಲ್ಲಿ ಅವರ ಸಹಚಾರಿಗಳು ಧೈರ್ಯಹಿಡಿದು, ನ್ಯೂಹೈಸ್ಕೂಲನ್ನು ಅವರ ಘನತೆಗನುಗುಣವಾಗಿ ನಡಿಸುವರೆಂದು ಹಾರೈಸಿ, ಸ್ವರ್ಗಸ್ಥರಿಗೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುವೆವು.

ಗೌಡ ಸಾರಸ್ವತ ಸ್ಕೊಲರಶಿಪ ಲೀಗ ಮುಂಬಯಿ.

ಸ್ಥಾನಿಕ ಪ್ರತಿನಿಧಿಗಳು

ಕಾರವಾರ— ಡಾ। ವಾಸುದೇವ ರಾಮಚಂದ್ರ ಪಾಳದೇಕರಕರ ಬಿ. ಏ.
ಡಾ। ಜನಾರ್ದನ ಪುರುಷೋತ್ತಮ ಶೇಣವಿ, ಸಾವಕಾರ

ಅಂಕೋಲಾ— ರಾ. ಪಂಜನಾಥ ಗಿ. ಪ್ರಭು, ಸಾವಕಾರ
ರಾ. ಮಾಧವ ಮುಕುಂದ ಪೈ

ಕುಮಟಾ— ರಾ। ಪುರುಷೋತ್ತಮ ಲಕ್ಷ್ಮಣ ಮಲ್ಯ, ಕಾನಗಾಗ ಹೆಗಡೇಕರ
ರಾ। ಅನಂತ ಶ್ರೀ. ಪ್ರಭು, ಕನ್ಯಾಕ ಕಾಲೇಜ ಮತ ಶಾಸ್ತ್ರ ಡೇರವಲ್ಕೆ

ಹೊನ್ನಾವರ— ಶಾಂತ್ಲ ರಾ। ವಾಸುದೇವ ಪಾಂಡುರಂಗ ಚಿನಭಾಗ, ಸಾವಕಾರ

ಸ್ಥಾನಿಕ ವೃತ್ತಾಂತ.

ಕುಮಟಾ—ಇಷ್ಟರೊಳಗಿನ ಮಳೆಯು ೭೮-೫೮ ಇಂಚಾಯಿತು. ಬೆಳೆಯು ಸ್ಥಿತಿಯು ಅಪ್ಪುಮಟ್ಟಿಗೆ ನೆಟ್ಟಗಿದೆ. ಜ್ವರ, ಕೆಮ್ಮು, ಅಮಾಂಶ ವಗೈರೆ ರೋಗಗ್ರಸ್ತರು ಇದ್ದೇ ಇರುವರು. ವಿಸರ್ಜನೋಪಚಾರವೂ ನಡೆಯುತ್ತಲಿದೆ. ದವಸ-ಧಾನ್ಯಗಳ ಧಾರಣೆಯಂತೂ ಇದ್ದ ಹಾಗೆಯೇ ಸರಿ.

ಪೋಲೀಸ ಸುಪರಿಂಟೆಂಡೆಂಟರು ಬಂದು, ಕುಮಟಾ ಹೊನ್ನಾವರ ಟಾಂಗಾ ಕಂಪನಿಯ ಟಾಂಗಾ ಕುದುರೆಗಳ ತಪಾಸ ಮಾಡಿ ಹೋದರಂತೆ! ಇಂಥ ತಪಾಸದಿಂದ ಪ್ರವಾಸಿಕರ ಸುಖ-ಸೋಯಿಗಳೇನು ಅಗುವದಾಗಿಲ್ಲ. ಟಾಂಗಗಳು ನಡಿಯುವಾಗಲೇ ಟಾಂಗ-ಕುದುರೆಗಳ ಸ್ಥಿತಿಯು ತಿಳಿಯುತ್ತದೆ. ಆಗಲೇ ಮಂಜೂರಾದವುಗಳು ಯಾವವು, ಉಪಯೋಗಿಸಲ್ಪಡುವವು ಯಾವವು ಎಂದು ತಿಳಿಯುತ್ತದೆ. ಅನ್ಯ ಸಾಧನವೇ ಇಲ್ಲ.

ಶೇಂದಿ, ಸರಾಯಿ ಕುಡಿಯಬಾರದೆಂದೂ, ಕುಡಿದರೆ, ೫ ರೂ ಗುರುಮಠಕ್ಕೆ, ೫ ರೂ ಶ್ರೀ ಕುಲದೇವರಿಗೆ, ೫ ರೂ ಜ್ಞಾತಿ ಹತ್ತು ಸಮಸ್ತರಿಗೆ ಕೊಡುವದಲ್ಲದೆ, ಗೋಕರ್ಣಕ್ಕೆ ಹೋಗಿ ಪ್ರಾಯಶ್ಚಿತ್ತ ಪಡಿಯಬೇಕಾಗಿಯೂ ಇಲ್ಲಿಯ ಸುಕ್ಕೇರಿ, ಮಾಸೂರ, ಕೆಕ್ಕಾರ, ಧಾರೇಶ್ವರದ ಅಂಬೀರ ಯಾನೆ ಗಂಗೆ ಪುತ್ರರೂ ಸಹ ಠರಾವು ಮಾಡಿಕೊಂಡಿರುವರು. ಹೀಗಾಗಿ, ಕುಡುಕರ ಸಂಖ್ಯೆ ದಿನೇ ದಿನೇ ಕಡಿಮೆಯಾಗುವದಾಗಿ ಮಕ್ತೆದಾರರ ಮುಖಚರ್ಯೆಯು ಬಾಡುತ್ತಲಿದೆ. ಆದರೂ ಪಿಕೆಟಿಂಗದಿಂದಲೇ ಈ ವ್ಯಸನಕ್ಕೆ ಉದ್ದುಗೋಲ ಹಾಕಿದಂತಾಗುವದೆಂದು ಜನರ ಮತವಾಗಿದೆ. ಹಾಗಾದರೆ ಇನ್ನು ತಡವ್ಯಾಕೆ?

ಇಲ್ಲಿಂದ-ಅಂಕೋಲೆಗೆ ನಡಿಯುವ ಮೋಟಾರದಲ್ಲಿ ಬರೇ ನಾಲ್ಕು ಜನರು ಕೂರ್ತ ಕುಳ್ಳಲು ಡಿ। ಪೋ। ಸುಪರಿಂಟೆಂಡೆಂಟರು ಮಂಜೂರ ಮಾಡಿರುವರು. ಪ್ರಯಾಣಿಕರಿಗೆ ಇದೊಂದು ಸುಖವು.

ಇದೇ ಬರುವ ಅಗೋಸ್ತ ತಾ ೭ ನೇಗೆ ಈ ತಾಲೂಕ ಕಾಂಗ್ರೆಸ ಕಮಿಟಿ ಕೂಡುವದದೆ. ಅದಕ್ಕೆ ಆಯಾಯ ಹಳ್ಳಿಗಳ ಕಮಿಟಿಗಳು ಕೂಡಿ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕಾಗಿ ವಿನಂತಿ ಮಾಡಲಾಗಿದೆ.

ಇಲ್ಲಿಯ ಪೋ. ಸಬ ಇನಸ್ಪೆಕ್ಟರರು ಯಲ್ಲಾಪೂರಕ್ಕೆ ಬದ್ಲಿಯಾಗಿ ಹೊನ್ನಾವರದವರು ಇಲ್ಲಿಗೆ ಬಂದಿರುವರು.

ರಸ್ತೆಯಮೇಲಣ ದನಗಳನ್ನು ಹಿಡಿದು ಹಟ್ಟಿಗೆ ಕಟ್ಟುವ ಪೋಲಿಸರ ಕಾಪು ನಡಿಯುತ್ತಲೇ ಇದೆ. ತಾರತಮ್ಯವಿಲ್ಲದ ಈ ಅಮಲಬಜಾವಣಿಯನ್ನು ತಡಿಸುವದು ಹ್ಯಾಗೆಂಬದೊಂದು ಪ್ರಶ್ನೆಯು.

ಇಲ್ಲಿ ಒಂದು ಜುಗಾರದ ಮರಿಯು ಎಲ್ಲಿಯೋ ಅಡಗಿಕೊಂಡಿರುವದಂತೆ! ಅದನ್ನು ಪೋಲಿಸ ಅಮಲದಾರರು ತಮ್ಮ ದಿವ್ಯಾಕ್ಷ ಪೃಷ್ಟಿಯಿಂದ ಹುಡುಕಿ ಕಿತ್ತೊಗೆಯಲಾರರೋ? ಅದು ಅವರ ಕರ್ತವ್ಯವು.

ಯೆಲ್ಲಾಪೂರ— ಹವಾಮಾನವು ನೆಟ್ಟಗಿಲ್ಲ. ಕಳೆದ ೨ ದಿವಸಗಳ ಬಾಗಾಯಿತು ಭಯಂಕರವಾದ ಮಳೆಯೂ ಪ್ರಚಂಡವಾದ ಬಿರುಗಾಳಿಯೊಡನೆ ಹಗಲು ರಾತ್ರಿ ಒಂದೇ ಸಮನೆ ಬೀಳಹತ್ತಿದೆ. ಎಷ್ಟೋ ಸರಕಾರೀ ಇಮಾರತುಗಳಮೇಲಿನ ಹಂಚುಗಳು ಗಾಳಿಯಿಂದ ಭದ್ರನೆ ಹಾರಿ, ಎಷ್ಟೋ ಬಡವರ ಮನೆಗಳಮೇಲೆ ಬಿದ್ದವು. ಆ ಬಡವರ ಸುದೈವವೆಂದೇ ಹೇಳಬೇಕು. ಇಲ್ಲಿಯ ಹಳ್ಳಿಯೊಳಗಿನ ಇಬ್ಬರು ಪವಿತ್ರ ಬಾಹ್ಮಣರು ಪವಿತ್ರ ಸರಾಯಿಯು ಭಟ್ಟಿಯೊಡನೆ ಅಬಕಾರಿ ಖಾತೆಯಿಂದ ಹಿಡಿಯಲ್ಪಟ್ಟು, ಅವರೀರ್ವರಿಗೂ ಕ್ರಮವಾಗಿ ೩-೨ ತಿಂಗಳ ಶಿಕ್ಷೆಯಾಯಿತು. ಇವರಿಬ್ಬರ ಈ ಬೆಲ್ಲದ ಸರಾಯಿಯು ಪೀಕ ಲಾಭವು, ಯಾವತ್ತೂ ಹವ್ಯಕ ಸಮಾಜಕ್ಕೆ ಹೀನತ್ವ ತಂದಿರುವದು. ಇಲ್ಲಿ ದಿನಾಲು ದೇವರ ಭಜನೆ ಮೇಳವು ಕಳೆದ ೨-೩ ದಿವಸಗಳಿಂದ ಪ್ರಾರಂಭವಾಗಿರುವದು.

ಅಂಕೋಲಾ— ಮಳೆಯು ಹಂಗಾಮು ಇಂದಿನ ತನಕ ಚಲೋ ನಡೆದದೆ. ಆದಾಗ್ಯೂ, ಅತಿಸಾರದಂಥ ಬೇನೆಗಳು ಅಲ್ಲಲ್ಲಿದ್ದಾವೆ. ಅಕ್ಕಿ ದರವು ಸ್ವಲ್ಪ ಇಳಿದದೆ.

ಅಲ್ಲಿಯ ಹೊಸ ಮಾಮಲೇದಾರರು ಬಂದ ಕೂಡಲೆ, ನಿಕಾಲೆ ಮಾಡಿದ ಪ್ರಖ್ಯಾತ ಅತ್ತೆ-ಸೊಸೆ ಖಟ್ಲೆಯು, ಡಿ॥ ಮಾಜಿಸ್ತ್ರೇಟರ ಕೈಯಿಂದ ಹೈಕೋರ್ಟಿನ ಮೇಲ್ವಿಚಾರಣೆಗಾಗಿ ಕಳುಹಿಸಲ್ಪಟ್ಟದೆಂದು ತಿಳಿಯುತ್ತದೆ. ಜಿಲ್ಲ ಮಾಜಿಸ್ಟ್ರೇಟರಿಗೂ ಅದರ ಮೇಲ್ವಿಚಾರಣೆಯಾಗುವದು ಅವಶ್ಯವದೆಂದು ಕಂಡುಬಂತಲ್ಲವೇ?

ಇದೇ ಮಾಮಲೇದಾರರು ಮೋಟಾರ ಡ್ರಾಯವರ ರಾ। ವೆಂಕಟರಾಯ ಶೇಣವಿರಿಗೆ ಕೊಟ್ಟ, ೧೦೦ ರೂ ದಂಡ, ೧ ದಿವಸದ ಕೈದಿನ ಭಾರೀ ಶಿಕ್ಷೆಯು, ಡಿ॥ ಮಾಜಿಸ್ಟ್ರೇಟರು ಪುನರ್ವಿಚಾರಣೆ ಮಾಡಿ, ಪೂರಾ ರದ್ದು ಪಡಿಸಿ, ರಾ। ಶೇಣವಿರಿಗೆ ದೋಷಮುಕ್ತ ಮಾಡಿದರೆ. ಈ ಖಟ್ಲೆಯೊಳಗೆ ಭಾರಿ ಶಿಕ್ಷೆ ಕೊಡುವ ಭರದಲ್ಲಿ ಮಾಮಲೇದಾರನ್ಯಾಯಪತಿಗಳು ಕಾಯದೆಯ ಕ್ರಮವನ್ನೇ ಮರೆತು ಹೋದದೆಂದು ಕಂಡುಬಂತು. ಕಾಯಿದೆ ಕ್ರಮವನ್ನು ತಿಳಿಯದವರಿಗೆ ಮಾಜಿಸ್ಟ್ರೇಟನಾಗಿ ಎಷ್ಟು ಎತ್ತರ ಹಾರಿಸಿದರೂ, ಅವರಿಂದೆಲ್ಲಿ ನ್ಯಾಯ ದೊರಕಲಿಕ್ಕಾಗುವದು?

ಕಾಂಗ್ರೆಸ ಕಮಿಟಿಯು ಕೆಲಸವು ಇಷ್ಟು ದಿವಸ ಚಲೋ ನಡದು, ಟಿ. ಸ್ವ. ಫಂಡಿಗೆ ಇಷ್ಟರಲ್ಲಿಗೆ ೨,೬೦೦ ರೂ. ಹೆಚ್ಚು ಕಡಿಮೆ ಕೂಡಿರುವದು. ಕಮಿಟಿಗೆ, ರಾ। ಬಸರೂರ, ರಾ। ಬಳಕೂರ ಈ ಇಬ್ಬರು ಮುಖಂಡರ ಬಹಳೇ ಸಹಾಯವು ದೊರೆಯಿತು. ಅವರ ಉಪಕಾರವನ್ನು ಅಂಕೋಲೆಯು ಎಂದೂ ಮರೆಯದು. ಊರ ಪ್ರಮುಖರೂ, ಈ ಉಭಯ ಮಹಾನುಭಾವರೂ ಈಗ ಮದ್ಯಪಾನವನ್ನು ತಗ್ಗಿಸುವದರಲ್ಲಿ ತೊಡಗಿದ್ದಾರೆ. ಗಾಬೀತ, ಹರಿಕಂತ್ರ ಜಾತಿಯವರು, ಮೊದಲಿಗೆಯಿಂದ, ದೇವಸ್ಥಾನಗಳಿಗೆ ಹೋಗಿ, ಅಣೆ ತಕ್ಕೊಂಡು, ಸೆರೆ ಕುಡಿಯುವದಿಲ್ಲೆಂದು, ದೇವರ ಮುಂದೆ ಪ್ರತಿಜ್ಞೆ ಮಾಡಿರುವರು. ಹೊಲೆಯರೂ ಈಗ ತಯಾರಾಗಿದ್ದಾರೆ. ದೇವರ ಗಾಳಿಯೇ ಇವರಿಗೆಲ್ಲ ಬಡಿಯುತ್ತದೆಂದು ಹೇಳಬೇಕಲ್ಲವೇ? ಮುಕ್ತೆದಾರರ ಮೋರೆಯು ಮಾತ್ರ ಬಾಡುತ್ತಿದೆ. ಮುಖಂಡರಕೂಡ ಬಂದು, ಅವರು ಕೈಕಾಲು ಬೀಳುತ್ತಿದ್ದಾರೆ. ಜನರಿಗೆ ಸೆರೆ ಕುಡಿಸಿ ತಮಗೆ ಬದುಕಿಸಿರೆಂದು, ಈ ಮರುಳರು ಹೇಳಹತ್ತಿರುವರು. ಒಬ್ಬನ ಮನುಷ್ಯಗೆ ನೂರಾರು ಮಂದಿ ಭ್ರಷ್ಟರಾಗಿ ಹೆಂಡ ಕುಡಿಯುವ ಪಾಪ ಮಾಡಬೇಕೆಂದು ಇವರ ಹೇಳಿಕೆ!

ಶಿರ್ಶಿ— ಸರಾಯಿಯ ದುಕಾನಗಳನ್ನು ಮುನಸಿಪಲ್ ಹದ್ದಿನ ಹೊರಗೆ ಹಾಕುವದೇ ನೂರಾರು ನಾಗರಿಕರ ಸಹಿಯುಳ್ಳಂಥ ಒಂದು ಅರ್ಜಿಯು ಪ್ರೆಸಿಡೆಂಟ ಸಾಹೇಬರಿಗೆ ಮಾಡಿದುತ್ತದೆ. ಮತ್ತು ನಂ॥ ಶನಿವಾರದ ಜನರಲ್ ಕಮಿಟಿಯಲ್ಲಾದರೂ ಅದೇ ವಿಷಯದ ಠರಾವು ಒದಗತಕ್ಕದ್ದಿರುವದಲ್ಲದೆ ವಿ। ಕೊಡ್ಡೆಯವರ ಪಿಕೆಟಿಂಗದ ವಿಷಯವೂ ಅದು ಇನ್ನುಮೇಲೆ ಮುನಿಸಿಪಲ್ ನವಕರರಿಗೆ ಪಿಕೆಟಿಂಗಕ್ಕೆ ಹೋಗಲು ಪರವಾನಗಿ ಕೊಡುವ ಬಗ್ಗೆಯೂ ಚರ್ಚೆ ನಡಿಯತಕ್ಕದ್ದಿದೆ. ಒಟ್ಟಿನಲ್ಲಿ ಆದೊಂದು ಮುನಿಸಿಪಾಲಿಟಿಯ ಪರೀಕ್ಷೆಯ ಕಾಲವಾಗಿದ್ದು, ಅದರಲ್ಲಿ ಎಷ್ಟು ಜನರು ಜಯಕ್ಕೆ ಲಾಯಕ ಆಗಿದ್ದಾರೆಂಬವರ ನಿರ್ಣಯವಾಗುವದದೆ. ಪರೀಕ್ಷೆಯ ಪರಿಣಾಮವು ಮುಂದಿನ ಪತ್ರದಲ್ಲಿ.

ಸಂಗೂರ ಹಳ್ಳದ ಪೂಲಿನಮೇಲಿಂದ ನೀರು ಹರಿಯುತ್ತಿರುವದರಿಂದ ಟಪಾಲು ವೇಳೆಗೆ ಸರಿಯಾಗಿ ಬರುವದು ದುಸ್ತರವಾಗಿದ, ವರ್ಷಕಲ್ಲಾ ಇದೇ ಪಾಡು.

ಬಡ ಭಂಗಿಯವರ ಖಟ್ಲೆಯಲ್ಲಿ ಶ್ರೀ। ವಾಸುದೇವರಾವ ಧಾಕಪ್ಪನವರಮೇಲೆ ತೋರಿಸಿದ ತನ್ನ ಲೇಖಣಿಯ ಪ್ರಭಾವವನ್ನು ಕಂಡು ಮರಿತರು ಹಿರಿಹಿರಿ ಹಿಗ್ಗಿ, ತನ್ನ ಬೆನ್ನು ಚಪ್ಪರಿಸುವರೆಂತ ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತಿದ್ದ ಮಾಮಲೇದಾರ ಸಾಹೇಬರದೇ ಆ ಮೊನೆ ಆಜ ಲಿನ ನಿಕಾಲೆಯು ವಿರುದ್ಧ ಹೈಕೋರ್ಟಿನವರು ದೊಡ್ಡ ದೊಡ್ಡ ಅಪಶ್ರೀಕಾಯಿ ಕೆಂಪನ್ನು ಕಳ್ಳ ಬಿಟ್ಟಿರುವರು.

ಜಾಹೀರ ವಿನಂತಿ.

ಇದೇ ಬರುವ ಆಗೋಸ್ಟ ೩ ನೇ ತಾರೀಖಿನ ದಿವಸ ಕಲ್ಲಿಯ ಶ್ರೀ ಕಾಂಚೀರ ಕಾಮಾಕ್ಷಿ ದೇವಸ್ಥಾನದಲ್ಲಿ ಮಧ್ಯಾಹ್ನ ೪ ಘಂಟೆಗೆ ಕುಮಟಾ ತಾಲೂಕಿನ ಕೊಂಗ್ರೆಸ ಕಮಿಟಿಗಳ ಯಾವತ್ತು ಮೆಂಬರರ ಒಂದು ಸಭೆಯು ಕೂಡಿಸಬೇಕಾಗಿ ನಿಶ್ಚಯಿಸಿ ಅದೆ. ಆದ್ದರಿಂದ ಈ ಸಭೆಗೆ ಉಪ್ಪಿನಕೇರಿ ಹೊಳೆಗದ್ದೆ ಮುರೂರ ಮತ್ತು ಗೋಕರ್ಣ ಕಮಿಟಿಯವರು ತಮ್ಮ ತಮ್ಮ ಸ್ಥಳದೊಳಗಿದ್ದ ಮೆಂಬರರ ಸಭೆಯನ್ನು ಕರೆದು, ಪ್ರತಿನಿಧಿಗಳನ್ನು ಆರಿಸಿ ಈ ಸಭೆಗೆ ಕಳುಹಿಸಿಕೊಡಬೇಕು ಮತ್ತು ಬಾಕಿ ಗ್ರಾಮಗಳಲ್ಲಿರುವ ಯಾವತ್ತು ಮೆಂಬರರು ಚಿತ್ತೈಸಬೇಕಾಗಿ ವಿನಂತಿ ಅದೆ.

೧ ಕುಮಟಾ ತಾಲೂಕಾ ಕೊಂಗ್ರೆಸ ಕಮಿಟಿಯ ವ್ಯವಸ್ಥಾಪಕ ಮಂಡಳವನ್ನು ನೇಮಿಸುವದು.
೨ ಕಾನಡಾ ಜಿಲ್ಲಾ ಕೊಂಗ್ರೆಸ ಕಮಿಟಿಗೆ ನಮ್ಮ ತಾಲೂಕಿನ ತರ್ಫೆನಿಂದ ಪ್ರತಿನಿಧಿಗಳನ್ನು ಆರಿಸುವದು.
೩ ಡಿಸೆಂಬರದಲ್ಲಿ ಕೂಡುವ ರಾಷ್ಟ್ರೀಯ ಸಭೆಯ ಅಧ್ಯಕ್ಷರನ್ನು ಆರಿಸುವದು

ಶಂಕರ ದತ್ತಾತ್ರೇಯ ನಾಡಕರ್ಣಿ
ಸೆಕ್ರೆಟರಿ ತಾಲೂಕಾ ಕೊಂಗ್ರೆಸ ಕಮಿಟಿ ಕುಮಟಾ
ತಾ. ೨೩-೭-೧೯೩೧.

ದೇಶಬಾಂಧವರೇ!

ಕರ್ನಾಟಕಸ್ಥರೇ ನೆರವಾಗಿರಿ!!

ಧಾರವಾಡದಮೇಲೆ ಒದಗಿದ ಈ ಭಯಂಕರ ಗಂಡಾಂತರದಲ್ಲಿ ಸಿಕ್ಕು, ಮೂವರು ಸತ್ತಿರುವರು. ಈಗಾಗಲೇ ೨೧ ಜನರು ತುರಂಗದಲ್ಲಿ ಬಿದ್ದಿರುವರು ಇನ್ನೂ ಎಷ್ಟು ಜನರಮೇಲೆ ಪ್ರಸಂಗ ಬರುಗುವದೋ, ನೇಮವಿಲ್ಲ. ಇವರಲ್ಲಿ ೪ ಜನ ಪತ್ರಕರ್ತರಿರುವರು, ೩ ಜನ ವಕೀಲರಿರುವರು, ೧೪ ಜನ ಸದ್ಗೃಹಸ್ಥರಿರುವರು, ಇದಲ್ಲದೆ ೪೦-೫೦ ಜನರು ಗಾಯಹೊಂದಿರುವರು. ಇವರಲ್ಲಿ ಇಬ್ಬರು ಬ್ರಾಹ್ಮಣರಿರುವರು. ೧೬ ಜನ ಮುಸಲ್ಮಾನರಿರುವರು, ೬ ಜನ ಲಿಂಗಾಯತರಿರುವರು, ಮತ್ತು ಉಳಿದ ಜಾತಿಯ ಜನರ ನೇಕಾರರಿರುವರು. ಕೆಲವರು ಹಾಸಿಗೆಯಲ್ಲಿ ನರಳುತ್ತಿರುವರು. ಕೆಲವರು ಉದ್ಯೋಗ ಮಾಡಲಿಕ್ಕೆ ಶಕ್ಯವಿಲ್ಲದ್ದರಿಂದ ಹಾಗೆ ಬಡತನದಲ್ಲಿ ಬಳಲುತ್ತಿರುವರು. ಅನೇಕ ಕುಟುಂಬಗಳಲ್ಲಿ ಮುಖ್ಯಸ್ಥರು ಇಲ್ಲದಾಗಿ, ಅವರ ಹೆಂಡರು ಮಕ್ಕಳು ಸಂಕಟದಲ್ಲಿ ಹೊರಳಾಡುತ್ತಿರುವರು! ಹೀಗೆ ಸರ್ವರೀತಿಯಿಂದ ದುಃಖವನ್ನನುಭವಿಸುತ್ತಿರುವ ಜನರಿಗೆ ಎಲ್ಲ ರೀತಿಯಿಂದಲೂ ನೆರವಾಗುವದು ನಮ್ಮೆಲ್ಲರ ಕರ್ತವ್ಯವಲ್ಲವೋ? ಬಂದಿವಾಸವನ್ನು ಅನುಭವಿಸುತ್ತಿರುವವರನ್ನು ಬಂಧಮುಕ್ತರನ್ನಾಗಿ ಮಾಡುವದಕ್ಕು, ರೋಗಿಗಳ ಶುಶ್ರೂಷೆ ಮಾಡುವದಕ್ಕು, ಅವರ ಕುಟುಂಬದವರ ತೊಂದರೆಗಳನ್ನು ದೂರಮಾಡುವದಕ್ಕು ನಮಗೆ ಧನವು ಬೇಕಾಗಿದೆ. ಇಲ್ಲಿಯ ಹೃದಯದ್ರಾವಕವಾದ ಸ್ಥಿತಿಯನ್ನು ಕಂಡು, ಅಥವಾ ಕೇಳಿ ಮರುಕನ ಮರುಗದ ಪ್ರಾಣಿಯು ಯಾರು? ಅದಕಾರಣ ನಾವು ತಮ್ಮೆಲ್ಲರಿಗೂ ಕೈಜೋಡಿಸಿ ಬೇಡಿಕೊಳ್ಳುವದೇನಂದರೆ— ಬಾಂಧವರೇ, ಈ ಹೊತ್ತಿನಲ್ಲಿ ನೀವು ನಿಮ್ಮ ಶಕ್ತ್ಯನುಸಾರ ಧನಸಹಾಯ ಮಾಡಿರಿ. ಯಾರಾದರೂ ಮನೆಗೆ ಬಂದು ಭಿಕ್ಷೆ ಬೇಡುವ ಹಾದಿಯನ್ನು ನೋಡಬೇಡಿರಿ. ನೀವಾಗಿಯೇ ಕೆಳಗಿನ ವಿಳಾಸಕ್ಕೆ ಹಣ ಕಳಿಸಿರಿ ಇದಲ್ಲದೆ, ಯಾರು ಯಾರಿಗೆ ಯಾವ ಯಾವ ರೀತಿಯಿಂದ ನೆರವಾಗುವದು ಶಕ್ಯವಿದೆಯೋ ಆ ರೀತಿಯಿಂದ ನೆರವಾಗಿರಿ. ಇದು ಸುಮ್ಮನೆ ಉದಾಸೀನರಾಗಿ ಕುಳಿತುಕೊಳ್ಳುವ ಕಾಲವಲ್ಲ. ದೇಶಾಭಿಮಾನಿಗಳು ನಮ್ಮ ಈ ಪ್ರಾರ್ಥನೆಯನ್ನು ಆಲಿಸುವರೆಂದು ಕೋರುತ್ತೇವೆ.

ಈ ಸತ್ಕಾರ್ಯದಲ್ಲಿ ಧನಸಹಾಯ ಮಾಡಲಿಚ್ಛಿಸುವವರು ತಮ್ಮ ತಮ್ಮ ತಾಲೂಕ ಅಥವಾ ಜಿಲ್ಲಾ ಕಾಂಗ್ರೆಸ ಕಮಿಟಿಯ ಆಫೀಸಿಗೆ ಹಣ ಕಳಿಸಿ, ಪಾವತಿ ಪಡೆಯಬೇಕು. ಪಾವತಿ ಇಲ್ಲದೆ, ಯಾರೂ ಹಣ ಕೊಡಕೂಡದು

ಶ್ರೀಯುತ ಶಿವರಾಜ ಮಡಿವಾಳ ನ್ಯಾಮಗೌಡ ಹುಬ್ಬಳ್ಳಿ
„ ರಾಮಚಂದ್ರ ಕೃಷ್ಣ ಕೇಸರೆ, ಕೇಸರೆ ಟೀಂಬೆ ಮತ್ತು ಕಂಪನಿ ಹುಬ್ಬಳ್ಳಿ.
„ ವಿಶ್ವನಾಥರಾವ ಜೋಗ ಬಿ ಎ ಎಲ್ ಎಲ್. ಬಿ ವಕೀಲ ಧಾರವಾಡ.
„ ನಾರಾಯಣರಾವ ಕರಗುದರಿ ಬಿ ಎ ಎಲ್ ಎಲ್. ಬಿ ವಕೀಲ ಧಾರವಾಡ.
„ ವಿಶ್ವನಾಥರಾವ ಜೋಶಿ ಹುಬ್ಬಳ್ಳಿ
„ ರಾಘವೇಂದ್ರರಾವ ಕಡಪಾ ಧಾರವಾಡ
„ ವೆಂಕಟರಾವ ಹುಯಿಲಗೋಳ ಎಮ್. ಬಿ ಬಿ. ಎಸ್ ಗದಗ
„ ವಾಸುದೇವರಾವ ಉಮಚಗಿ, ಎಲ್ ಎಮ್. ಎಂಡ ಎಸ್ ಗದಗ

ಧಾರವಾಡ ತಾ. ೫-೭-೧೯೩೧.

ಖರೇ ಮಾತು! ಖಾಜಾ ಕಲ್ಮು!! ತ್ವರೆ ಗ್ಯಾರಂಟಿ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯಸಂಜೀವನಿಮಾತ್ರೆ.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಕಾಡುವ ಜರತನವನ್ನೂ ರೋಗವನ್ನೂ ದೂರಪಡಿಸಿ, ಆರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಧಮುಕಂಕೆ ಇವುಗಳನ್ನು ಬೇಗನೆ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಮೈಥುನದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ವಿಸ್ತ್ರಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನಗಳಲ್ಲಿಯೂ ಸಹ ಹೋಗುವದಿಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈ ಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಆಲಸ್ಯ, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥, ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩.

ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ,
ಕಕ್ಕೀ. (ಕೆನರಾ.)

ಅಗ್ಗ] ಮಳೆಗಾಲ. [ಅಗ್ಗ

ಮಳೆಗಾಲ ಮತ್ತು ಬಿಸಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು ಈ ಕೆಳಗಿನ ವಿಳಾಸಕ್ಕೆ ಅಗದೀ ಕಡಿಮೆ ದರದಿಂದ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಸವಲತ್ತುಗಳು ಸಿಗುವವು.

ಎಸ್. ಎಲ್. ಧಾಕಪ್ಪನವರ, ಶಿರ್ಸಿ.

ಹೊಸ ಜವಳಿ ದುಕಾನು.

ನಮ್ಮಲ್ಲಿ ತರತರದ ಬೋಂಬೈ, ಪೇಟ, ಚೆಕ್ಕಗಳು, ಟ್ವೀಲಗಳು, ಕರ್ಟಿಂಗ ವಸ್ತ್ರಗಳು ವ ನಮೂನೆವಾರ ದೇಶಿ ಧೋತರ ಜೋಡುಗಳೂ, ಮಹಾತ್ಮಾ ಗಾಂಧಿಯವರ ಟೋಪಿಗೆಗಳೂ, ವ ಕೋಟಿನ ಮತ್ತು ಸೈದಾಣದ ಚಾದರಿಗಳೂ, ಸೊಲ್ಲಾಪೂರ ಗಿರಣಿಯ ನಮೂನೆವಾರ ಸೀರೆಗಳೂ, ಕೋಟಿನ ವಸ್ತ್ರಗಳೂ, ಅಮದಾಬಾದ, ನಾಗಪೂರ ಮೊದಲಾದ ದೇಶಗಳ ಧೋತರ ಜೋಡುಗಳೂ ಕಲಾಪೂರ, ಗದಗ ಹುಬ್ಬಳ್ಳಿಯ ಉತ್ತಮ ಪ್ರತಿಯ ಸೀರೆಗಳೂ, ಇಳಕಲ ನಮೂನೆ ತರವಾರ ಸೀರೆಗಳೂ, ಮಲ್ಲಗಾಟ ಸ್ವದೇಶ ದರದ ತರತರದ ನಮೂನೆಯ ತರವಾರ ಸೀರೆಗಳೂ. ಟುಂಡುಗಳೂ, ರೇಶಿಮ ಮಢರೆಯ ರುಮಾಲುಗಳೂ, ವ ಜರೀ ವಸ್ತ್ರಗಳೂ ವ ಅಗ್ಗದ ಎಲ್ಲ ಊರಿನ ಮಗ್ಗದ ವಸ್ತ್ರಗಳೂ, ಬಾಗಲಕೋಟ, ಯಮಕನೂರ, ಬೆಳಗಾವಿಯ ಕಂಪ್ಲೀಟ ತರವಾರ ನಮೂನೆವಾರ ಸೀರೆಗಳೂ, ಪಕ್ಕಾ ಮಿಲಿನ ತರತರದ ವಸ್ತ್ರಗಳೂ ಮಾಫಕ ದರದಿಂದ ನಮ್ಮಲ್ಲಿ ರೋಖ ವ ಬೆಲ್ಲರಿಗೆ ಸಿಗುತ್ತವೆ ಬೇಕಾದ ಮಾಲಿಗೆ ಆರಡರ ಕೊಟ್ಟಲ್ಲಿ ಪೂರೈಸುವೆವು.

ಚಿತ್ರಿಗಿ ಗೋಪಾಳ ಸುಬ್ಬಯ್ಯಾ
ಶ್ಯಾನಭಾಗ,
ಕ್ಲೋತ ಮರ್ಚಂಟ ಎಂಡ ಕಮಿಶನ
ಏಜಂಟ ಕುಮಟಾ

ಹೊಸ] ಉತ್ತಮ ಎಲ್ಲಾ ತರದ [ಮಾಲು.

ಶಾಯಿ ಗುಳಿಗೆಗಳು ಮತ್ತು ಪಕೆಟ್ಟುಗಳು ಸಿಗುವವು. ಒಂದಾವರ್ತಿ ಉಪಯೋಗಿಸಿ ನೋಡಿರಿ. ಗುಳಿಗೆ ೧೦೦ ಕ್ಕೆ ೧೫ ಆಣೆ. ಪಕೆಟ್ಟು ೧೦೦ ಕ್ಕೆ ೧೪ ಆಣೆ. ಶೀಷಲಿಗೆ ೧ ಆಣೆ. ರೋಖ ತೆಗೆದುಕೊಂಡರೆ, ಭರಪೂರ ಕಮಿಶನು ಕೊಡುವೆವು ೧೦೦ ಕ್ಕಿಂತ ಕಡಿಮೆ ಕಳುಹಿಸಲಾರೆವು. ಪತ್ತೆ:— ದಿ ನೆಕ್ಕಸಲ್ ಸ್ಯಾ. ಇಂಕ ಕಂಪನಿ,

ಹೊನ್ನಾವರ.

ಲೋಕಮಾನ್ಯವಾದ ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ಲೆಂಡೇಲ ಇಸ್ಟೇಟದ, ಎಲ್ಲಾ ತರದ ಚಹಾ ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್) ರೋಖ ವ ಕಿರಕೋಳ ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ. ಪತ್ರದ್ವಾರ ದರದ ಖುಲಾಸೆ ಮಾಡಿಕೊಳ್ಳಿರಿ

ವಿ. ಪಿ. ಶಾನಭಾಗ ಮತ್ತು ಬ್ರದರ್ಸ
ಹೊನ್ನಾವರ. ಉತ್ತರ ಕಾನಡಾ.
HONAWAR. (N. Kanara.

श्रीभीमकुंडदर्शन.

या चिमुकल्या पुस्तकास प्रख्यात बालहरिदास यांनी प्रस्तावना लिहिली आहे.

श्री क्षेत्र गोकर्ण येथलें एक पुण्यस्थान श्री भिमकुंड याचा प्राचीन व आर्वाचीन वृत्तांत छापून प्रसिद्ध झाला आहे. कि. ९ पै.

पत्ता— भंडीकेरी मंजनाथभट्ट, गोकर्ण.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಗಳಿಗೆ ... ಸನ ೧೮೯೦ ನೇ ಇಸ್ವಿಯಿಂದ ತಾ|| ೧೯೧೮ ನೇ ಇಸ್ವಿಯವರೆಗೆ ... ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಬತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವರೆಗೆ ... ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ... ಅಷ್ಟು ಮೌಲ್ಯವಾದ ಅದೆ ಇದು ಯಾವತ್ತರು ಸಾವೇ ಆಸ ಬವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅದು ತವೇ ಎಂದು ... ಈ ಆರೋಗ್ಯಬಿಂದ ಇಡೀ ಕರ್ನಾಟಕ ದೇಶಕ್ಕೆಲ್ಲಾ ... ರೋಗಿಗಳ ಈ ಅರ್ಕಶಫಾದಿಂದಲೇ ಗುಣಹೊಂದಿದ ... ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ... ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರಿತ್ತವೆ ಅವು ಒಂದುಲಿಕ್ಕೆ ಕಾಗದವು ಸಾಲದು ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ... ರೋಗರಹಿತರಾಗುವರೆಂದು ನಂಬುತ್ತೇನ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕ

ರೋಗಗಳ ನಾಮಗಳು

ಕ್ಷಯರೋಗ ಶತಪದರೋಗ ಮಾಂಜ ರೋಗ ಗುಲ್ಮರೋಗ ... ಲರೋಗ, ... (ಕಾಲರಾ) ಪ್ಲೇಗು, ಚಳಿ ಜ್ವರ ... ಜ್ವರ ಇನ್‌ಫ್ಲುಯಂಜಾಜ್ವರ ಅನೇಕಪ್ರಕಾರದ ಜ್ವರ ... ಹೊಟ್ಟಿಶೂಲಿ, ... ಪಾಂಡುರೋಗ ... ಮತ್ತು ... ಕೆಮ್ಮು ದಮು ... ಅಜೀರ್ಣ ... ಹೊಟ್ಟೆಶೂಲಿ ... ಅರತಲೆಶೂಲಿ ... ವಾತಶೂಲಿ ... ಗಧ್ವನಸಬೇನೆ, ... ಗಡಿಕರ್ಣ, ... ನಾರಹುಣ್ಣು ಸ್ತ್ರೀಯರ ಮುಟ್ಟಿ ... ಹೊಟ್ಟೆ ದೊಡ್ಡದಾಗೋದು ... ನೀರಡಿಕೆ ... ವಿಸ್ತರಿಸುವ ... ಅನೇಕ ರೋಗಗಳು ಮಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಿಯ ... ಬಡವರಿಗೂ ಧನವಂತರಿಗೂ ಸರಸವಾಗಿ ... ಬೆಲೆ ಇಟ್ಟಿರುತ್ತದೆ ಒಂದು ... ತೊಲೆ ಬಾಟ್ಲಿ ಒಂದಕ್ಕೆ ... ನಮೂನೆ ... ಬಾಟ್ಲಿ ಒಂದಕ್ಕೆ ... ಬೇಕ ... ಒಂದು ... ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳ ... ಕೊಡುತ್ತೇವೆ ಇದಕ್ಕೆ ... ಒಂದರಿಂದ ಕಸ್ಟೊಂಡರು ಬಾಟ್ಲಿ ... ಶನ್ ಇಲ್ಲ ಇದಕ್ಕೆ ... ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ... ಪಂಟು ಆಣೆ ಬರುವದು ನಮ್ಮ ಔಷಧವು ನೋಟಿ ದೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದೆ ಹೊರ್ತು ದೊರೆಯಲಿಕ್ಕಿಲ್ಲ ಅನುಪಾನಪತ್ರಿಕೆಯು ಕನ್ನಡ ಮರಾಠಿ ಮತ್ತು ... ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ... ಸಿಗುವದು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯ ... ಬೇಕು

ಎಚ್ ಎಂ ಮುಲ್ಲಾ, ಸಂಪಾದಕ ಅರ್ಕಶಫಾ

ಹೆಡ್ ಆಫೀಸು ... ಪೂರ ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷದಗಳು.

1 ಮಹಾ ಮದನ ... ಲೇಹ — ... ಕೆಲಸ ಮಾಡ ವ ... ಇಂದ್ರಿಯ ದೌರ್ಬಲ್ಯ ಅಜೀರ್ಣ ... ವ ಲಬದ್ಧತೆ, ... ಪಳಿತದಿಂದ ... ಲಾದ ... ಇದನ್ನು ... ರಕ್ತಶುದ್ಧಿ, ... ಪುಷ್ಟಿ ಮತ್ತು ... ಗೊಳಿಸುವದು. 40 ... ಸೇವಿಸುವ ... 1ಕ್ಕೆ 1-12-0 3 ... 4 1 0

2 ಮಹಾಜ್ವರ ... — (... ಇನ್‌ಫ್ಲುಯಂಜಾ ... ದ್ವಿತೀಯ ತೃತೀಯ ... ಜ್ವರಗಳ ... ... 1 ಕ್ಕೆ 0 ...

3- ... — ... ಅಪಸ್ಮಾರಕ್ಕೆ ... 1ಕ್ಕೆ 0 ...

4 ... ಸಿದ್ಧ ಔಷಧಿ ಒಂದೇ ಗುಳಿಗೆ ... ಕೆಮ್ಮು ... 1 ಡಬ್ಬಿಯು 0 1 0

5 ... — ... ಕ್ಕೆ 0 1 0

ಎಸ್. ಗಣಪಯ್ಯಾ ಎಂಡ ಸನ್ಸ್

ನೆಟಿವ್ ಡ್ರಗ್ಗಿಸ್ಟ್ಸ್ ... ಬೀದಿ

ಮಂಗಳೂರ ...

ಮೋಟಾರ.

... ವೆ ರಿಯಿಂದ— ಸಿರಸಿ ಮತ್ತು ಸಿರಸಿಯಿಂದ ಹಾವೇರಿ, ಪ್ರತಿ **ಆದಿತ್ಯವಾರ-ಗುರುವಾರ** ... ನಡಿಸುವ ... ಇದ್ದು ... ರಿಯಿಂದ ಬೆಳಿಗ್ಗೆ ... ಮತ್ತು ಸಿರಸಿಯಿಂದ ... ಹೊರಡುವವು ಹಾವೇರಿ ... ಅಥವಾ ಸಿರಸಿಯಲ್ಲಿ ಬರುವಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

... ಸಿರಸಿಯಲ್ಲಿ ... ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ... ಹತ್ತರ ... ಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಬಾಡಿಗೆಗೆ ಇಟ್ಟಿರುವೆವು.

... ಬಾಡಿಗೆಯ ದರವಾರ ವಗೈರೆ ... ಕೆಳಗಿನ ಪತ್ತೆಗೆ ... ತಿಳಕೊಳ್ಳಬಹುದು

... ಲಕ್ಷ್ಮಣಯ್ಯ ಗ್ಯಾಸಭಾಗ

ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडातील अनेक वनस्पतींच्या रसात पोष्टिक औषधीफळाचा रसार्क मिश्र करून, खाली दिलेल्या रोगावर उपयुक्त अशी भस्मे घालून, हा वज्रांग बिंदु ... प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने ... प्रमकत्व स्वप्नजन्य धातुपात, लघवीच्यापूर्वी अगर नंतर ... धातुपात नाहीसा करून ... वृद्धि व रक्तशुद्धि होत कितीहि जुनाट ... असो (एक सप्तकातच) नाश पावत आणि उपदंशा संबंधी मुरलेल विकार नाहीसे होऊन हातपाय डोळे याचा दाह व धातुविनाशक सर्व विकार नष्ट होऊन, शरीर वज्राप्रमाण बनते हा बिंदु खाल्ल्याने उतारवयाच्या म... ल्याना कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि सतत... अपायकारक असे गर्भाशयस्थ रोग त्याचा समूळ नाश होतो हे औषध स्त्रियांनी सेवन केल्यास, त्यांचे जननेंद्रियाचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळा जवळ तरी भूक चांगली लागत जाऊन शौचास साफ होते याचा अनुभव औषध घेतल्याच्या पहिल्या दिवशी येतो तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदुचे सेवन करून, यातील खरी मजा पहावी फार दिवसाचा रोग असल्यास, पूर्ण गुणास तीन बाटल्या औषध घेतल पाहिजे नवीन रोगास एक बाटली औषध सेवन केले असता, गुण येईल एका बाटलीमध्ये १० तोळे औषध असते त्या एका बाटलीची किंमत १ रुपया तीन बाटल्यांची किंमत ३। रुपये एक डझन (१२) बाटल्यांची किंमत १० रुपये याशिवाय टपाल, व प्याकिंग खर्च निराळा पडेल तीन बाटल्या सेवन करणाऱ्यांनी २० तोळे औषधाचा एक मोठी बाटली मागवून घ्यावी म्हणजे थोडी सोईस्कर पडेल

म्यानेजर

के, एम, हनुमान प्रामाणिक कंपनी

जिल्हा बेळगाव मु पो निपाणी

... ಮಂಗಳೂರ ನಶ್ಯ ... ಮತ್ತು ... ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ... ದರ ... ಇರುತ್ತದ

ಪತ್ತೆ— ಬಿ ... ಕುಮಟಾ

Printed and published by Krishnarao Keshav Shenvi at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೧೯.

ಪತ್ರದ ವರ್ಗಣಿ –
ಕುಮಟೆಯಲ್ಲಿ ಆದ್ರೆ ರೂಪಾಯ 2-0-0.
ಮನೆಯಾರ್ಡರಿಯಿಂದ ರೂ 2-12-0
ವಿ. ಪಿ. ಅಂಚೆಯಿಂದ್ದ ಕೇರಿ ರೂಪಾಯ 2-15-0
ಬಿಡಿ ಸಂಚಿಕೆ 0-1-0

ನರಪತಿहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ –
ಕನ್ನಡ ಇಂಗ್ಲಿಷ ಪ್ರಾಕಾ ಕ್ಷಾಪಿನ(೧೫ ಏಮ್‌ಬ್ರ) ೪ ಸಾಲುಗಳ ವರೆಗೆ ರೂ 1-0-0
ಅನಂತರ ಪ್ರತಿ ಸಾಲಿಗೆ 0-2-0
ಹೆಚ್ಚಿಂಗದ ಸಾಲು ಎಷ್ಟು ಹೊತ್ತು ಬಿಡುವದೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಪಡುಸ್ತಿ ತಿಳಿಸಲ್ಪಡುವದು

–[ಕುಮಟಾ— ಕಾನಡಾವೃತ್ತ-ಗುರುವಾರ, ತಾರೀಖು ೬ ನೇಹ ಅಗೊಸ್ತ್ರ ಸನ್ ೧೯೩೧ನೇ ಇಸವಿ]–

ಪ್ರಸಿದ್ಧ ಚಾಯಿ ಪುಡಿಗಳು.

ನೀಲಗಿರಿ ಕಂಪು ಜಾಂಟ್ಸ ೧೦೬ಕ್ಕೆ ೧೪೪ನೆ ಕಪ್ಪ ಪತ್ರ ೧೨೪ ಚಾಯಿ ಸೆಂಪಲ್ಗೆ ಒಂದಾಣೆ ಕಳಿಸಿ ತರಿಸಿಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್ ವ್ಹಿ. ಭಾಗ್ವತ

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಭಡತೀ ಭ್ರಾತೃಸಂಘದ

ಅನುಭವಸಿದ್ಧ ಚಹಾ

ಚಹದ ದರಗಳು. ಕ್ರಯ — ಪೌಂಡಕ್ಕೆ ೧-೧೦-೦ ಉತ್ತಮ ನೀಲಗಿರಿ ಚಹಾ, ಹಿತ್ತಾಳಿ ಸಿಲ್ವರ್ ಭಾಂಡೆ ಕಾಗದದ ರೀಂಗು. ಇದಲ್ಲದೆ ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ ಶ್ರೀ ಮಂದಿರದ ಫೋಟೋಗ ಳೂ ಜಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ

ಅತ್ಯಂತ ಬೋಧಪ್ರದ-ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ೧ರೂ (೨) ಸತ್ಯಪ್ರಕಾಶ ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ ಬೆಲೆ ೧೨ ಆಣೆ

ಪತ್ತೆ— ಬಸವಾರ್ಯ ಬೂದೀಹಾಳಮಠ,
ಹೆಡ್ ಮಾಸ್ತರ, ಮುಕ್ಕಾಂ ಅಲೂರ
ಪೋಸ್ಟ— ಅಲೂರ—ಶಾನಗಲ್ಲ, ಜಿ ಧಾರವಾಡ

ಕಾರ್ಡಸ್ಯಾಜ ಫೋಟೋ.

ಮಹಾತ್ಮಾ ಗಾಂಧಿ, ಕೈ! ಲೋ! ಟಿಳಕ ಮೌಲಾನಾ ಶೌಕತ ಅಲ್ಲಿ, ದೇ! ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ — ೧ಕ್ಕೆ ೬ಪೈ, ಡಜನಕ್ಕೆ ೪ಆಣೆ, ಶೇಕಡಾ ೧-೧೦-೦ ಟಪಾಲಹಾಸಲ ಬೇರೆ ಸಂಪಲಗಳು ಬೇಕಾದರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ (ಎನ್. ಕೆನರಾ,)

ಖಾತ್ರಿ] ಅತ್ಯುತ್ತಮ [ನ್ಹಾಲು

ಅತ್ಯುತ್ತಮ ಸ್ವದೇಶೀ ಶಾಯಿ ಗುಳಿಗಗಳು ವರ ಸೂಚ[INK TABLETS]ಕ್ಕೆ ಪ್ರಾಪ್ತಿ

ಮಿಶನರಿಂದ ತಯಾರಿಸಿದ ನೀಲಿ, ಜಾಂಬಳಿ, ಕೆಂಪು ಹಸರು ೧೪೪ ಶಾಯಿ ಗುಳಿಗೆ ಇರುವ ೧ ಗ್ರೋಸಿನ ಡಬ್ಬಿಗೆ ರೂ ೦-೧೫-೦ ೧ ಡಜನ ಗ್ರೋಸಿಗೆ ರೂ ೬ ಕಂಪನಿಗೆ ಆರ್ಡರ ಕೊಟ್ಟು ತರಿಸಿಕೊಂಡರೆ ತೀರ ಕಡಿಮೆ ದರದಲ್ಲಿ ಕೊಡುವೆವು. ದೊಡ್ಡ ಆರ್ಡರಿನ ಮೇಲೆ ಭರಪೂರ ಕಮಿಶನ ಸಿಗುವದು ೧ ಗ್ರೋಸಿಗಿಂತ ಕಡಿಮೆ ಕಳುಹಿಸಲಾರೆವು ಏಜಂಟರ ರು ಕಮಿಶನ ಸಿಗುವದು

ದಿ ಸ್ವದೇಶೀ ಇಂಕ ಸ್ಟೋರ್ಸ,
ಕಕೀ, ಕೆನರಾ

ಬಹುನೂತನವಾದ ಚಿನ್ನದ ಒಡವೆಗಳನ್ನು ತಯಾರಿಸುವೆವು

ಮಹನಭಾವರೇ ಮೇಲೆ ತೋರಿಸಿದ ಉಂಗುರಗಳೂ ತರತರದ ಶಿರಪದಿಂದ ಚೊಕ್ಕಾಗುತ್ತವೆ, ಮತ್ತು ಹಳ್ಳಿಕಲ್ಲುಗಳ ಬಾಬತು ಬುಲಾಕು, ಕಟ್ಟೋಣ, ಪದಕಗಿರಿ ಕಟ್ಟೋಣ ಕಂದೀ ಬಾಪ ಮೊಗುಬಟ್ಟುಗಳು ಈ ವಿನಹ ಪ್ಯಾಟನ ಚೈನುಗಳು, ಬೆತ್ತುಗಳು, ನವರತ್ನದ ಪದಕಗಳು ಪ ಮೆಡಲುಗಳು ನೂತನವಾದ ಸೂರ್ಯಕಾಂತಿ ಹೂವುಗಳು, ಗುಲಾಬಿ ಹೂವುಗಳು, ಸಂಪಿಗೆ ಹೂವುಗಳು ಮಲ್ಲಿಗೆ ಹಾಳಿಗಳು ಮುಂತಾದ ಎಲ್ಲಾ ದಾಗಿನೆಗಳು ನಮ್ಮಲ್ಲಿ ಆಗುತ್ತವೆ ಬೇಕಾದವರಿಗೆ ಯೋಗ್ಯ ಚಾರ್ಜಿನಿಂದ ಮಾಡಿಕೊಡುವೆವು

ಸಿತಾರಾಮ ಗೋವಿಂದ ಶೇಟ,
ಕೊಟ್ಟೆಕರ ಗುರ್ಜರಗಲ್ಲಿ, ಕುಮಟಾ

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರಕೊಳ್ಳಬಹುದು. ಸವಲತ್ತಿಯ ದರಗಳು ಇಟ್ಟಿರುವೆವು

ನಮ್ಮ ಪತ್ತೆ —

ಗ್ಯಾತೊಂಡೇ ಬ್ರದರ್ಸ,
ಮೋಟರ ಡೀಲರ್ಸ, ರಿಪೇರರ್ಸ,
ಕಾರವಾರ.

ಹೊಸ ಬೋಧ "ಓಂ" ಹೊಸ ಬೋಧ!

ಗುಣ ಬಾರದಿದ್ದರೆ ಹಣಪರತು

(ಅತ್ಯಂತ ಪೌಷ್ಟಿಕ ಹಾಗೂ ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀ ವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತ ವಾಗುವಂತೆ ಬಹಳ ಪ್ರಯಾಸದಿಂದ, ತಯ್ಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ರೋಗಗಳು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿರದ್ದಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ಪೀಡಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಒದಗುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ, ಒಂದು ಡಬ್ಬಿ ಪಾಕನಿಂದಲೂ, ಹಳೇ ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು. ೧ ಆಣೆ ೨ ಡಬ್ಬಿಗಳಿಗೆ ೪ ರು ೮ ಆಣೆ ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ— ಎ. ಆರ್. ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಗಾಂಧಿ ಟೊಪ್ಪಿಗೆ.

ಅದರಿಂದಾಗುವ ಲಾಭಗಳು.

ದೇಶದ್ರೋಹಿ ಹಾಗು ಕೇವಲ ಸ್ವಾರ್ಥಸಾಧಕ ಜನರಿಂದ ನಾವು ಗುಲಾಮರಾದೆವು, ಮತ್ತು ಸ್ವಾರ್ಥಿಗಳು ಸ್ವಾರ್ಥತ್ಯಾಗಮಾಡುವದಿಲ್ಲೆಂದು ನಾವು ಇನ್ನೂ ಗುಲಾಮರಿದ್ದೇವೆ. ಸ್ವದೇಶಿ ಚಳವಳಿಯು ಪ್ರಾರಂಭವಾದಕೂಡಲೆ, ತಕ್ಕ [illegible] ಸ್ವಾರ್ಥ ಸಾಧಿಸಲಿಕ್ಕೆ ಹೆಚ್ಚು ಅವಕಾಶ ಸಿಕ್ಕಿತು. ಮುಂಬಯಿಯಲ್ಲಿ ಕೆಲವರು ಪರದೇಶದ ಕೆಟ್ಟ ಬನಾತ, ಸಾಟಿನ, ಹಾಗು ನೂಲನ್ನು ಉಪಯೋಗಿಸಿ, ಸ್ವದೇಶಿ ಮತ್ತು ನನ್ನ ಹೆಸರಿನಲ್ಲಿ ಟೊಪ್ಪಿಗೆಗಳನ್ನು ಮಾಡುತ್ತಾರೆ, ಅವುಗಳ ಬಣ್ಣ ಕಪ್ಪು. ಸ್ವದೇಶೀ ಟೊಪ್ಪಿಗೆಯನ್ನು ಉಪಯೋಗಿಸುವವರು ಬಿಳೇ ಬಣ್ಣದ ಖಾದೀ ಟೊಪ್ಪಿಗೆಯನ್ನೇ ಧರಿಸಬೇಕೆಂದು ನನ್ನ ಸೂಚನೆ ಇದೆ. ಬಿಳೇ ಟೊಪ್ಪಿಗೆಯಲ್ಲಿ ಸೊಬಗವೆ, ಸ್ವಚ್ಛತೆಯಿದೆ; ಅನುಕೂಲತೆಯಿದೆ; ಈ ಗುಣಗಳು ಬಣ್ಣದ ಟೊಪ್ಪಿಗೆಗಳಲ್ಲಿಲ್ಲ. ಬಿಳೇ ಟೊಪ್ಪಿಗೆಯನ್ನು ಯಾವಾಗಲೂ ತೊಳೆಯಬಹುದು. ಕಪ್ಪು ಟೊಪ್ಪಿಗೆಗೆ ಬೆವರಿನ ಪುಟಗಳಿಂದ ಹೊಲಸು ವಾಸ ಬರುತ್ತದೆ. ಸ್ವಚ್ಛತೆಯನ್ನು ಪುರಸ್ಕರಿಸುವವರು ಇಂಥ ಕಪ್ಪು ಟೊಪ್ಪಿಗೆಗಳನ್ನು ಎಂದೂ ಧರಿಸಲಾರರು. ಚರ್ಮವೇಷ್ಟಣವಿದ್ದ ಟೊಪ್ಪಿಗೆಯಿಂದ ಮೆದುವಿನಮೇಲೆ ಕೆಟ್ಟ ಪರಿಣಾಮವಾಗುತ್ತದೆ. ಹಿಂದೂ ಧರ್ಮಾನುಯಾಯಿಯು ಚರ್ಮವೇಷ್ಟಿತ ಟೊಪ್ಪಿಗೆಯನ್ನು ಹೇಗೆ ಧರಿಸುತ್ತಾನೆ? ಇಂಗ್ಲಿಷರು ಚರ್ಮದ ಟೊಪ್ಪಿಗೆಗಳನ್ನು ಉಪಯೋಗಿಸುತ್ತಾರೆ. ಆದರೆ ಅವನ್ನು ತಿರುಗಾಡಲಿಕ್ಕೆ ಹೋಗುವಾಗ ಮಾತ್ರ ಧರಿಸುತ್ತಾರೆ, ಇದಲ್ಲದೆ, ಅವರು ಆಗಾಗ್ಗೆ ಹೊಸ ಹೊಸ ಟೊಪ್ಪಿಗೆಗಳನ್ನು ಕೊಂಡುಕೊಳ್ಳುತ್ತಾರೆ. ನಾವು ಒಂದೇ ಟೊಪ್ಪಿಗೆಯನ್ನು ವರ್ಷಗಟ್ಲೆ ಉಪಯೋಗಿಸುತ್ತೇವಲ್ಲದೆ, ಅದನ್ನು ಯಾವಾಗಲೂ ತಲೆಯ ಮೇಲೆಯೇ ಇಟ್ಟುಕೊಳ್ಳುತ್ತೇವೆ. ಇಂಥವರಿಗೆ ಚರ್ಮವೇಷ್ಟಿತ ಟೊಪ್ಪಿಗೆಯಾಗಲಿ, ಮಗಜಿಯಾಗಲಿ ಅಸಹ್ಯ ತೋರಲೇಬೇಕು. ಖಾದಿಯ ಬಿಳೀ ಟೊಪ್ಪಿಗೆಯು ಸ್ವಚ್ಛ ಹಾಗು ಹಗುರಿರುವದರಿಂದ, ಅದು ನಿರ್ದೋಷವು. ದಪ್ಪ ಖಾದಿಯನ್ನು ಟೊಪ್ಪಿಗೆ ಮಾಡುವದರಲ್ಲಿ ಉಪಯೋಗಿಸುವದು ಸ್ವಾಭಾವಿಕವು. ಸಕಲಾಂಗ ಖಾದಿಯನ್ನೇ ಉಪಯೋಗಿಸುವ ಉತ್ಸಾಹವಿದ್ದರೆ, ಮೊದಲು ತಲೆಯಿಂದಲೇ ಪ್ರಾರಂಭಿಸಬೇಕು. ಯಾಕಂದರೆ, ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ, ಇರುವದಿಲ್ಲವೇ? ಶ್ರೀಮಂತರೂ, ಬಡವರೂ ಖಾದಿಯ ಟೊಪ್ಪಿಗೆಯನ್ನು ಧರಿಸಬಹುದು. ಖಾದಿಯ ಟೊಪ್ಪಿಗೆಯನ್ನು ಶ್ರೀಮಂತರು [illegible] ಶೃಂಗರಿಸಬಹುದು, ಅದರಮೇಲೆ ಕಿಂಖಾಪಿನ [illegible] ಬಿಡಿಸಬಹುದು. [illegible] ಮಾಡಬಹುದು, [illegible] ಎಷ್ಟು ಮಾಡಿದರೂ, ಎಲ್ಲರೂ [illegible] ಅಂದರೆ, ಖಾದಿಯ ಟೊಪ್ಪಿಗೆಯನ್ನೇ ಉಪಯೋಗಿಸುವದು ಅವಶ್ಯವು ಅಲ್ಲ. ([illegible] ಧರಿಸುವ) ವಿಚಾರವು ತಾತ್ಪರ್ಯವಲ್ಲ.

ಕಟ್ಟಕಡೆಗೆ ಹೇಳುವದಿಷ್ಟೇ. ಖಾದಿ ಟೊಪ್ಪಿಗೆಯೇ ಸ್ವದೇಶೀ ಟೊಪ್ಪಿಗೆಯೆಂದು ತಿಳಿಯತಕ್ಕದ್ದು. ಅದಕ್ಕೆ ನಿಶಾನಿ ಇಡುವ ಅವಶ್ಯಕತೆ ಇಲ್ಲ. ಸಣ್ಣ ಹುಡುಗರಿಗೆ ಸಹ ಸ್ವದೇಶೀ ಟೊಪ್ಪಿಗೆ ಯಾವದೆಂದು ತಿಳಿಯುವದು. ಸ್ವರಾಜ್ಯವಾದಿಗಳು ತಮ್ಮ ಮನಸ್ಸಿನೊಳಗಿಂದ ಹಣ ಡೌಲು, ವ್ಯರ್ಥ ಚಿಕಿತ್ಸೆಯನ್ನು ನಿರ್ಮೂಲಿಸುವಂತೆ, ಸ್ವದೇಶೀ ಭಕ್ತರು ಟೊಪ್ಪಿಗೆಗೆ ಕೂಡಿಸುವ ಡೌಲನ್ನು ತ್ಯಜಿಸಬೇಕು. ಸ್ವದೇಶಿ ಎಂದು ಪರದೇಶಿ ಟೊಪ್ಪಿಗೆಯನ್ನು ಮಾರುವವರ ಹತ್ತರ, ನನ್ನ ಬೇಡಿಕೆ ಇಷ್ಟೆ— ಅವರಿಗೆ ರಕ್ಕಸತನವನ್ನು ಆಶ್ರಯಿಸಿಯೇ ಹೊರತು, ತಮ್ಮ ಉದ್ಯೋಗವನ್ನು ನಡಿಸುವದು ಅಶಕ್ಯವಾದರೆ, ದೇಶಹಿತವನ್ನಾದರೂ ಲಕ್ಷಿಸಿ, ಅವರು ಅಪ್ರಮಾಣಿಕರಾಗಬಾರದು. ಕಳ್ಳರಲ್ಲಿ ಸಹ ಒಂದು ತರದ ನೀತಿಯಿದೆ. ಕಳ್ಳರು ತಮ್ಮ ಮನೆಗಳಲ್ಲಿ ಕಳವು ಮಾಡುವದಿಲ್ಲ. ಕೆಲವರು ಜಾತಿಯವರಲ್ಲಿ ಕಳವು ಮಾಡುವದಿಲ್ಲ. ಇಡೀ ದೇಶದಲ್ಲಿ ಈಗ ಮಹಾಯಜ್ಞವು ನಡೆದಿದೆ. ಇಂಥ ಪ್ರಸಂಗದಲ್ಲಿ ನೀಚ ಸ್ವಾರ್ಥಸಾಧಕರ ರಕ್ಕಸತನದಿಂದ ನಾವು ಪಾರಾಗಲಿಕ್ಕಿಲ್ಲೇನು? ಯಾರಾದರೂ ವ್ಯಾಪಾರಿಗಳು ಜನರಿಗೆ ಈ ರೀತಿ ಮೋಸಮಾಡಿದರೆ ಜನರೆಲ್ಲರೂ ಅಂಥ ವ್ಯಾಪಾರಿಗಳನ್ನು ಎಲ್ಲ ರೀತಿಯಿಂದ ಬಹಿಷ್ಕರಿಸಬೇಕೆಂದು ನನ್ನ ಅಂಬೋಣವಿದೆ.

—ಮಹಾತ್ಮಾ ಗಾಂಧಿ.

ಅಜ್ಜನ ಅಂಬೋಣ

“ಹುಚ್ಚರು ಯಾರು; ನಾವೋ, ನೀವೋ?”

(ಲೇಖಕ - ಸತ್ಯವಾನ [illegible])

ಪರದೇಶೀ ವಸ್ತುಗಳಿಗೆ ಬಹಿಷ್ಕಾರ ಹಾಕುವ ಕುರಿತು, ಸಾರ್ವಜನಿಕ ಸಭೆ ಇಟ್ಟಿರುತ್ತದಾಗಿ ಮೊದಲೇ ಜಾಹೀರಾಗಿತ್ತು. ಅದರಂತೆ ನಿಯಮಿತ ಕಾಲವು ಸಮೀಪಿಸಿದಕೂಡಲೆ, ಎಲ್ಲ ಕಡೆಯಿಂದಲೂ ಜನರು ಸಾಲುಸಾಲಾಗಿ ಸಭಾಸ್ಥಾನವನ್ನು ಸೇರಹತ್ತಿದರು. ಬಾಲ-ಬಾಲಿಕೆಯರು, ತರುಣ-ತರುಣಿಯರು, ಮುದುಕ-ಮುದುಕಿಯರು, ಒಟ್ಟಿನಲ್ಲಿ ಆಬಾಲವೃದ್ಧರು ಒಂದು ತಮತಮಗುಚಿತವಾದ ಆಸನಗಳನ್ನಲಂಕರಿಸಹತ್ತಿದರು. ಈ ರೀತಿಯಲ್ಲಿ ಜನಸಮುದಾಯವು ಸಾಕಷ್ಟು ನೆರೆಯಲು, ಅಧ್ಯಕ್ಷರ ಹಾಗೂ ಒಬ್ಬಿಬ್ಬ ಪ್ರಮುಖರ ಸಮಯೋಚಿತ ಭಾಷಣಗಳಾದವು. ಅದರ ಸಾರಾಂಶವೆಂದರೆ—

“ಪರದೇಶದ ವ್ಯಾಪಾರಸ್ಥರು ನಮ್ಮಲ್ಲಿ [illegible] ಪ್ರತಿ ವರ್ಷ ೬೦ ಕೋಟಿ ರೂಪಾಯಿಗಳ ಲೂಟಿ ನಡಿಸಿರುವರು. ಮೊದಲೇ ಎಷ್ಟೋ ಪರದಾಸ್ಯಗಳ ಕೈಯಲ್ಲಿ ಸಿಕ್ಕು ಬಳಲಿ ಬೆಂಡಾಗಿರುವ ನಮ್ಮ ಈ [illegible] ಈ ಒಂದು ಕ್ಷಯರೋಗವೇ ಅತ್ತಿದಂತಾಗಿದೆ. ಮತ್ತು ಅದನ್ನು ಪರಿಹರಿಸುವದಕ್ಕಾಗಿ, ಮನಮುಟ್ಟಿ ದುಡಿಯುವದು ಪ್ರತಿ ಒಬ್ಬ ಹಿಂದವಾಸಿಯ ಆದ್ಯ ಕರ್ತವ್ಯವಾಗಿದೆ. ಈ ಮೊದಲು ನಮಗೆ ಬೇಕಾದ-ಬಟ್ಟೆಗಳೆಲ್ಲ ನಮ್ಮ ದೇಶದಲ್ಲಿಯೇ ತಯಾರಾಗುತ್ತಿದ್ದವಲ್ಲದೆ, ಸ್ವಾವಲಂಬಿಗಳಿಂದ ನಮ್ಮ ಪೂರ್ವಜರು, ಪರಾವಲಂಬಿಗಳಾದವರೂ, ಸುಧಾರಣೆಯ [illegible] ಬೆಳೆಯುತ್ತಿರುವ ಸಮಯದಲ್ಲಿ ಎಷ್ಟೋ ಮಾಲು ಸುಖದಿಂದ ಜೀವಿಸುತ್ತಿದ್ದರು. ಆದರೆ ಬರಬರುತ್ತ ಪಾಶ್ಚಾತ್ಯರ ಪರಿಚಯದಿಂದ, ನಾವು ಸುಧಾರಣೆಯ ವಿಚಾರವಾದದ, ಅರಣ್ಯಪಂಡಿತರಂತೆ, ಅವರ ಅನುಕರಣವನ್ನು ಮಾಡಹತ್ತಲು, ಅದಕ್ಕೆ ತಕ್ಕಂತೆ ಅವರು ಮಾಯಾಬಾಜಾರಗಳನ್ನಾದರೂ ರಚಿಸತೊಡಗಿದರು. ಹೀಗಾಗಿ, ನಮ್ಮ ಆಚಾರ ವಿಚಾರಗಳಲ್ಲಿಯೂ ಆಹಾರವಿಹಾರಗಳಲ್ಲಿಯೂ ಪಾಶ್ಚಾತ್ಯ ಸಂಸ್ಕೃತಿಯು ನೆಲೆಗೊಳ್ಳುತ್ತ ಹೋದಂತೆ, ಪ್ರಾಚೀನ ಭಾರತೀಯ ಸಂಸ್ಕೃತಿಯು ಕ್ರಮೇಣ ಲೋಪವಾಗುತ್ತ ನಡೆದು, ಅದರ ಸಂಗಡಲೇ ನಮ್ಮ ಜಗದ್ವಿಖ್ಯಾತವಾದ ಕೈಗಾರಿಕೆಯ ಕೌಶಲ್ಯವು ಲಯಂಗತವಾಯಿತು. ಇನ್ನು ಅದರ ಪುನರುದ್ಧಾರವನ್ನು ಮಾಡುವದೇ ನಮ್ಮ ಸಾಂಪತ್ತಿಕ ಕ್ಷಯರೋಗದ ನಿಜವಾದ ನಿವಾರಣೋಪಾಯವಾಗಿರುವದರಿಂದ, ನಾವು ಒಮ್ಮನಸ್ಸಿನಿಂದ ಸ್ವದೇಶೀ ವ್ರತವನ್ನು ಸ್ವೀಕರಿಸಬೇಕಾಗಿದೆ. ಇದಲ್ಲದೆ ಸ್ವದೇಶಿಯೆಂಬುವದೇ ಸ್ವರಾಜ್ಯವೆಂದು ಮಹಾತ್ಮಾ ಗಾಂಧಿಗಳು ಸಾರಿ ಹೇಳುತ್ತಿರುವರು. ಯಾಕಂದರೆ, ಒಂದು ಜವಳಿಯ [illegible] ಲಕವೇ ಪ್ರತಿ ವರ್ಷ ಪರದೇಶದ ವ್ಯಾಪಾರಸ್ಥರು ನಮ್ಮ ೬೦ ಕೋಟಿ ರೂಪಾಯಿಗಳನ್ನು ನುಂಗಿ, ನೀರು ಕುಡಿಯುತ್ತಿರುವದರಿಂದ, ನಾವು ಪರದೇಶದ ಬಟ್ಟೆಗಳಿಗೆ ಮೊದಲು ಬಹಿಷ್ಕಾರ ಹಾಕಿ, ಮಹಾತ್ಮರ ಸುದರ್ಶನ ಚಕ್ರವನ್ನು (ರಾಟಿ) ಗರಗರನೆ ತಿರುವುತ್ತ ಕೂತೆವೆಂದರೆ, ವಿಲಾಯತಿಯ ಕಂದೊಗಲಿನ ಕಾರಖಾನದಾರರ ಹೊಟ್ಟೆಯಲ್ಲಿ ಬೆಂಕಿ ಬಿದ್ದು, ಅವರು ಲಬೋ ಲಬೋ ಹೊಯ್ಕೊಳ್ಳಹತ್ತಲು, ತನ್ನ ಮುದ್ದು ಮಕ್ಕಳು ತಳಮಳಿಸುವದನ್ನು ನೋಡಲಾರದ, ಪಾರ್ಲಿಮೆಂಟಮ್ಮನವರು ಮೆತ್ತಗಾಗಿ “ಮಹಾಶಯರೇ, ನಿಮ್ಮ ರಾಜ್ಯವನ್ನು ನೀವೇ ತೆಗೆದುಕೊಳ್ಳಿರಿ. ಆದರೆ, ನನ್ನ ಮಕ್ಕಳ ಬಾಯಲ್ಲಿ ಮಾತ್ರ, ಸರ್ವಥಾ ಮಣ್ಣುಹಾಕಬೇಡಿರಪ್ಪಾ. ನಾನು ಅವರ ಗೋಳನ್ನು ಸಹಿಸಲಾರೆನು,” ಎಂದು ಸೆರಗೊಡ್ಡಿ ಬೇಡಿಕೊಳ್ಳುವಳು. ಅದರಿಂದ ನಾವು ನಮ್ಮ ಪ್ರಾಚೀನ ಆರ್ಯ ಸಂಸ್ಕೃತಿಯನ್ನವಲಂಬಿಸಿ, ಅರ್ವಾಚೀನ ಪಾಶ್ಚಾತ್ಯ ಸಂಸ್ಕೃತಿಯನ್ನು ಹೊರದೂಡಿ, ಪರದೇಶೀ ವಸ್ತುಗಳಿಗೆ ವಿಶೇಷವಾಗಿ ಜವಳಿಗೆ ಬಹಿಷ್ಕಾರ ಹಾಕಿದರೆ, ನಮ್ಮ ಇಷ್ಟಾರ್ಥಗಳೆಲ್ಲ ಕೈಗೂಡುವವೆಂಬಲ್ಲೇನೂ ಸಂದೇಹವಿಲ್ಲ.”

ಇಷ್ಟರಲ್ಲಿ ಒಬ್ಬ ವ್ಯಕ್ತಿಯು ವ್ಯಾಸಪೀಠವನ್ನು ಸಮೀಪಿಸಹತ್ತಿದನು. ಅವನ ನಿಲುವಿಕೆ, ಎತ್ತರ ಮುದುಕನಾದರೂ, [illegible]. ನಮ್ಮ ಸೂಕ್ಷ್ಮವಾದ [illegible] ಅಂಗಡಿಗಳು ನಮ್ಮ ಸೂಕ್ಷ್ಮ ಪ್ರಕೃತಿಯ ದ್ಯೋತಕವಾಗಿರುವಂತೆ, ಉಡಲಿಕ್ಕೆ “ಕುಂಡೆ ಮುಚ್ಚುವರೂ ಪಟ್ಟಿ ಹರಿಯದು,” ಎಂಬಂತಿರುವ ಧೋತರ, ತೊಡಲಿಕ್ಕೆ ಒಂದು ಸಾದಾ ಅಂಗಿ, ಧರಿಸಲಿಕ್ಕೆ ದೊಡ್ಡದೊಂದು ದಪ್ಪನ್ನ ಮುಂಡಾಸ ಮತ್ತು ಹೊದ್ದುಕೊಳ್ಳಲಿಕ್ಕೆ ಅನಮಾನ್ಯವಾದರೂ ಕಟ್ಟಬಹುದಾದ ಹಚ್ಚಡ, ಇವೇ ಅವನ ಸಾಮುಕ್ಯರದ ಸಾಕ್ಷಿಯಾಗಿದ್ದವು. ಮತ್ತು ಇವನೇ ನಮ್ಮ ಜೀವಜ್ಜನು. ಒಬ್ಬ ಹಳೇ ಕಾದರಿಯ ಮುಪ್ಪಿನ ಮುದುಕನಾದ್ದರಿಂದ ಎಲ್ಲರೂ ಅವನನ್ನು ಅಜ್ಜನೆಂತಲೇ ಸಂಬೋಧಿಸುವ ವಾಡಿಕೆಯು. ಇನ್ನು ಹೆಸರಿಗೆ ತಕ್ಕಂತೆ ಜೀವನೇ ಆಗಿದ್ದರಿಂದ, ಸಹಜವಾಗಿ ಎಲ್ಲರೂ ಅವನನ್ನು ಮಿಕಿಮಿಕಿ ನೋಡಹತ್ತಿದರು. ಆಗ ಅವನು ತನ್ನ ಗಂಭೀರವಾದ ವಾಣಿಯಿಂದ ಹೇಳಿದ್ದೇನಂದರೆ —

“ಪ್ರಿಯ ಬಂಧುಭಗಿನಿಯರೇ, ನಾನೊಬ್ಬ ಹುಚ್ಚನಾಗಿದ್ದು, ನಿಮ್ಮನ್ನಾದರೂ ನನ್ನಂತೆಯೇ ಹುಚ್ಚರನ್ನಾಗಿ ಮಾಡುವ ಪ್ರಯತ್ನದಲ್ಲಿಯೇ ಈ ನನ್ನ ಗಡ್ಡಮೀಸೆಗಳೆಲ್ಲ ಹಣ್ಣಾಗಿ ಹೋಗಿರುತ್ತವೆಂಬುವದು ತಮಗೆ ಗೊತ್ತಿದ್ದ ಸಂಗತಿಯೋ ಬಗೆದೆ. ಯಾಕಂದರೆ, ಪರದೇಶದ ಥಳಥಳ ಬಾಜಾರಗಳಿಗೆ ಮರುಳಾಗಿ ಮೋಸಹೋಗಬೇಡಿರೆಂದು, ನಾನು ಸಾರಿ ಹೇಳಿದ್ದಕ್ಕೆ, “ಜಂಗ್ಲಿ” ಯೆಂದು ಕರಿಸಿಕೊಳ್ಳಬೇಕಾಯಿತು! ಆದರೆ ಅವರೇ ಈಗ ನನ್ನಂತೆಯೇ “ಜಂಗ್ಲಿ” ಗಳಾಗಲು, ಟೊಂಕ ಕಟ್ಟಿರುವದನ್ನು ಕಂಡ ನನಗೆ ಆಶ್ಚರ್ಯವಾಗಿದೆ! ಪಾಶ್ಚಾತ್ಯ ಸಂಸ್ಕೃತಿಗೆ ಬಳಗಾಗದೆ, ಅನ್ನಪಾನಗಳಲ್ಲಿಯೂ, ಉಡಿಗೆ-ತೊಡಿಗೆಗಳಲ್ಲಿಯೂ, ನಡೆನುಡಿಗಳಲ್ಲಿಯೂ ನಮ್ಮ ಪ್ರಾಚೀನ ಪೂರ್ವಜರ ಅನುಕರಣವನ್ನು ತಪ್ಪದೇ ಮಾಡಿರೆಂದು, [illegible] ದರೆ ಅದಕ್ಕೆ ಪ್ರತಿಯಾಗಿ ನಾನು “ಅಶಿಕ್ಷಿತ” ನೆಂದು ಅನಿ

ಕೊಳ್ಳಬೇಕಾಯಿತು' ಮೊಳಗಾಗುವದರಲ್ಲಿ ನಾನು ನನ್ನ ಸ್ವದೇಶೀ ವ್ರತಧಾರಿಗಳ ತಾಳೀ ಕೊಡೆಯನ್ನು ತೆಗೆದುಕೊಂಡು ತಿರುಗುವೆನೆಂದರೆ, ನನಗೆ "ಕೃಪಣ' ಅಥವಾ "ಬೇಜವಾಬ್ದಾರ" ಎಂಬ ಅಭಿಧಾನಗಳು ಪ್ರಾಪ್ತವಾಗುತ್ತಿದ್ದವು ಇಷ್ಟೇ ಅಲ್ಲ, ಎಂದಾದರೂ ಕಂಬಳಿಯನ್ನು ಕಂಕುಳದಲ್ಲಿ ಕಟ್ಟಿಕೊಂಡು ಹೊರಟರೆ, ಕೆಲವು ಹುಡುಗರು ಕೂಡ "ಜೇನುನೊಣ" ಎಂದು ಬೆನ್ನಹತ್ತಿ ಹಾಸ್ಯಮಾಡುತ್ತಿದ್ದರು. ಇದರ ಇಲ್ಲಿ ಇಂದು ಹಾಕುವ ಎಷ್ಟೋ "ಅಪ್ಪನವರು" ನನ್ನಂತೆಯೇ "ಅಪ್ಪನವರು" ಯಾಕೆ ಆಗಿರುವರೆಂಬುದು ನನಗೆ ತಿಳಿಯದ ಮಾತಾಗಿದೆ. ಸ್ವಧರ್ಮವನ್ನು ಬಿಟ್ಟವರಂತಲೋ ಅಥವಾ ಪಾಶ್ಚಾತ್ಯರಂತೆ ಆದಾದರೂ ಕೆಂಪು ಕೋಟು ತೊಡುವವರಾಗಬೇಕೆಂಬ ಬಯಲಿಕೆಯಿಂದಲೋ ಚಹಾ-ಕಾಫಿ, ಸಿಗರ-ಸಿಗರೇಟು, ಸೋಡಾ-ಲೆಮನೇಡ, ಬ್ರಾಂಡಿ-ಬೀರ, ಹೋಟೆಲ್-ಪಾರ್ಟಿ ಮೊದಲಾದ ಅಪಾಯಕಾರಕ ಪದಾರ್ಥಗಳನ್ನು ವಿಶಿಷ್ಟರು ಸೇವಿಸುವವರ ಸಾಲಲ್ಲಿ ಹಣೇ ಹಣೇ ಬರೆದುಕೊಂಡು ಬೇಕಾದಂತೆ ಬೀದಿಕೆಯಿಂದರೂ, ಅದನ್ನು ಅವರು ಒಂದು ಕಿವಿಯಿಂದ ಕೇಳಿ, ಇನ್ನೊಂದು ಕಿವಿಯಿಂದ ಬಿಡುವ ಪರಿಪಾಠವನ್ನಿಟ್ಟಿದ್ದರು. ಈ ನಮ್ಮ ಹೆಣ್ಣುಮಕ್ಕಳಿಗೆ ನೀವಾದರೂ ಪವಿತ್ರವಾದ ಪ್ರಾಚೀನ ಪದ್ಧತಿಯನ್ನು ಪಾಲಿಸಿರೆಂತ ಹೇಳಿದರೆ, ಅವರು ತಮ್ಮ ಗಂಡಸರನ್ನು ದಾರಿಗೆ ತರುವದು ಬಿಟ್ಟುಬಿಡಲಿ, ತಾವೇ ಪಾಶ್ಚಾತ್ಯ ಪದ್ಧತಿಯನ್ನು ಸ್ವೀಕರಿಸಿ ಕರೆಯುತ್ತಿದ್ದರಿಂದ, ನನ್ನ ಮಾತುಗಳೆಂದರೆ, ತಬ್ಬಿಕೊಂಡ ಜನರೆದುರಿನ ನೀರೇ ಆಗುತ್ತಿದ್ದವು ಇಷ್ಟೇ ಅಲ್ಲ, ಕೆಲವರಂತೂ ನನ್ನನ್ನು ಕಂಡರೆ, ಮೂಗು ಮುರಿಯುತ್ತ ಸೊಟ್ಟಮೋರೆ ಮಾಡಿಕೊಂಡು "ಮುದಿ ಹುಚ್ಚ" ಎಂದು ಹಳಿಯುತ್ತಿದ್ದರು, ಒಟ್ಟಿನಲ್ಲಿ ಎಲ್ಲರಿಗೂ ನಾನೊಬ್ಬ 'ಹುಚ್ಚ' ನೇ ಆಗಿದ್ದೆನು. ಆದರೆ ಅವರೆಲ್ಲರೂ ಈಗ ನನಗೆ ದಯಪಾಲಿಸಿದ ಅಭಿಧಾನಗಳನ್ನೆಲ್ಲ ಸ್ವತಃ ಧರಿಸಲಿಕ್ಕೆ ಸಿದ್ಧರಾಗಿ, ನನ್ನಂತೆಯೇ ಹುಚ್ಚರಾಗಲು ಟೊಂಕಕಟ್ಟಿರುವದನ್ನು ಕಂಡು ನನಗೆ ಹೊಟ್ಟೆಯಲ್ಲಿ ಹಿಡಿಸಲಾರದಷ್ಟು ಹರ್ಷವಾಗಿದೆ ಇದೆಲ್ಲ ಆ ಒರೇ ಹುಚ್ಚನಾದ ಮಹಾತ್ಮಾ ಗಾಂಧಿಯವರ ಅಂಜನದ ಪ್ರಭಾವವಲ್ಲವೇ? ಇರಲಿ ನನ್ನ ಹಿಂದಿನಿಂದ ಬಗಿಸಿಯವರೇ, ಇನ್ನು "ಹುಚ್ಚರು ಯಾರು, ನಾವೋ, ನೀವೋ?"

ಪ್ರಿಯ ವಾಚಕರೇ, ನಮ್ಮ ಭೀಮಜ್ಜನ ಮರ್ಮಭೇದಕವಾದ ಮಾತುಗಳನ್ನು ಕೇಳಿದಿರೋ? ನೀವಾದರೂ ಈ ಮೊದಲು ಇಂಥ ಎಷ್ಟೋ ಮುದುಕರ ಬಂಗಾರದಂಥ ಬುದ್ಧಿಯ ಮಾತುಗಳನ್ನು ಮೂಲೆಗೊತ್ತಿರಬಹುದಲ್ಲವೇ? ಇರಲಿ. ಆದದ್ದಾಯಿತು. ಮಿಂಚಿಹೋದವಾತಿಗೆ, ಚಿಂತಿಸಿ ಫಲವೇನು? ಇನ್ನಾದರೂ ನಾವು ಎಚ್ಚತ್ತು ತ್ರಿಕಾಲಗಳಲ್ಲಿಯೂ ಆಧಾರಭೂತವಾಗಿರುವ ನಮ್ಮ ಪರಮಪೂಜ್ಯವಾದ ಭಾರತಮಾತೆಯ ಉದ್ಧಾರಕ್ಕಾಗಿ ಯತ್ನಿಸುವದು ನಮ್ಮ ಆದ್ಯಕರ್ತವ್ಯವಲ್ಲವೇ? ಆದ್ದರಿಂದ ಭಾರತಭೂಮಿಯು ಯಾತನೆಗಳಿಂದ ಮುಕ್ತವಾಗಿ, ಇಷ್ಟಾರ್ಥಸಿದ್ಧಿಗಾಗಿ, ನಾಳೆ ಆಗಸ್ಟ ೧ ನೇ ತಾರೀಖಿನ ಲೋಕಮಾನ್ಯರ ಪುಣ್ಯತಿಥಿಯ ಪ್ರಾತಃಕಾಲದಲ್ಲಿ ಎಲ್ಲರೂ ಸ್ನಾನಾದಿಗಳಿಂದ ಶುಚಿರ್ಭೂತರಾಗಿ, ಇಷ್ಟದೇವತೆಯನ್ನು ಸ್ಮರಿಸಿ ಸ್ವದೇಶೀ ವ್ರತಧಾರಿಗಳಾಗಬೇಕೆಂಬುವದೇ ಮಹಾತ್ಮರ ಆತ್ಮಾಗ್ರಹದ ವಿನಂತಿಯು.

"ಬಹಿಷ್ಕಾರದ ತತ್ವ"

ಪ್ರಿಯ ಬಾಂಧವರೇ, ನಮ್ಮ ಪರಮಪೂಜ್ಯ ಮಹಾತ್ಮಾ ಗಾಂಧಿಗಳವರ ಆಜ್ಞೆಯಂತೆ, ಇದೇ ಆಗಸ್ಟ ತಿಂಗಳಿಂದ ಪರದೇಶೀಯ ವಸ್ತುಗಳಮೇಲೆ ಬಹಿಷ್ಕಾರ ಹಾಕುವರೆ ನಿಶ್ಚಯಿಸಲ್ಪಟ್ಟಿರುವದಷ್ಟೇ, ಆದರೆ ನಮ್ಮ ಕಾನಡಾಜಿಲ್ಲೆಯು ಇದರಬಗ್ಗೆ ಯಾವಪ್ರಕಾರದಿಂದ ಪ್ರಯತ್ನಿಸಲ್ಪಡುವದೆಂಬುದನ್ನು ನೋಡಬೇಕಾಗಿದೆ. ಈಗಲಂತೂ ಪ್ರತಿಯೊಬ್ಬ ಕಾನಡಿಗನು ಪರಾವಲಂಬನವೆಂಬ ಶೃಂಖಲೆ ಪಾಶದಿಂದ ಬದ್ಧನಾಗಿರುತ್ತಾನೆಂದು ಹೇಳಬಹುದು. ಇನ್ನಲ್ಲಿಯ ಜನರು ಪರೋಪಕಾರವಿಚಾರ ಮಾಡದೆ, ಕೇವಲ ಕ್ಷಣಿಕ ಲಾಭವಾಗುವ ಪರದೇಶೀಯ ವಸ್ತುಗಳನ್ನು ಬಹಳ ಬೆಲೆ ಕೊಟ್ಟಾದರೂ ಕೊಳ್ಳುವರು. ಇದರ ಕಡೆಗೆ ಕಿಮ್ಮತ್ತಿಗೆ ದೊರೆಯುವ ದೇಶೀ ವಸ್ತುಗಳನ್ನು ತಿರಸ್ಕರಿಸುವರು. ಹಾಗೂ ನಮ್ಮ ದೇಶಬಾಂಧವರನ್ನು ನಿರುದ್ಯೋಗಿಗಳನ್ನಾಗಿ ಮಾಡಿರುವರು. ಆಹಾ! ಇದು ಬುದ್ಧಿಯ ಕೌಶಲ್ಯವೋ? ಪಾಶ್ಚಾತ್ ಶಿಕ್ಷಣದ ಜವಾಬ್ದಾರಿ ಪ್ರಭಾವವೋ? ನಮಗಂತೂ ತಿಳಿಯದು. ಹಿಂಬಾಲಕ ಸುಧಾರಕವಾದಿಗಳ ಅನುಕರಣದ ದಾರಿಯಿಂದ ಪ್ರತಿಷ್ಠಿತ ವನಸ್ಥ ಪರದೇಶೀಯ ವಸ್ತುಗಳ ಸರಬರಾಯ ಮಾಡಿ, ಸ್ವಲ್ಪಕಾಲದ ಮಿದುಳಿನಲ್ಲಿ ಹಣ ಸೇರಿಕೊಂಡು ಅದರ ಸ್ವಾರ್ಥಿಯಾಗಿ ವ್ಯಾಪಾರಕ್ಕೆ ಪ್ರಯತ್ನಿಸುವರೆಂದು ಹೇಳಿದರೆ, ಅತಿಶಯೋಕ್ತಿಯೆನಿಸದು. ಸುಧಾರಿಸಿದ ಜಪಾನದಂಥ ಸಾಹಸಿಗಳು ಪರದೇಶದ ವಸ್ತುಗಳನ್ನು ಕೊಳ್ಳುವ ಅಭ್ಯಾಸದಲ್ಲಿ ತೊಡಗದೆ, ಅಂಥ ಯಂತ್ರಕಲೆಗಳನ್ನು ಕಲಿತು ತಮ್ಮಲ್ಲಿಯೇ ಮಾಡತೊಡಗಿ, ಈಗ ಇಷ್ಟು ಪ್ರಸಿದ್ಧಿಗೆ ಬಂದಿರುವರು. ಇವರೆ ನಮ್ಮ ಭಾರತವರ್ಷದ ಪದ್ಧತಿಯು ಇದಕ್ಕೆ ತೀರ ವ್ಯತ್ಯಸ್ತವಾಗಿರುವದು ಇರಲಿ.

ಈಗ ಮೊಳಗಾಟವಾದ್ದರಿಂದ ಸ್ವದೇಶ ವಸ್ತ್ರಗಳನ್ನು ಕೈಯಲ್ಲಿ ಕೊಂಡು, ತಾಳೀಮಟ್ಟ ಕೊಡೆಗಳನ್ನು ತಕ್ಕೊಂಡು ತಿರುಗುವ ದೇಶಪ್ರಿಯರನ್ನು ಹೀಯಾಳಿಸುವವರ ಸಂಖ್ಯೆಯೇ ಬಹಳ. ನಮ್ಮ ಕುಂಭಾಸ್ರಿಯಂತೂ ಸ್ವದೇಶ ಛತ್ರಗಳಿಂದಲೇ ಕಂಗೊಳಿಸುವದು ಅದಕ್ಕಾಗಿ ಇದರ ವಿಚಾರದ ಮೆಟ್ಟನ್ನು ಸ್ವಲ್ಪ ಮುಂದಕ್ಕೆ ಒಯ್ಯಬೇಕಾಗಿದೆ. ಈಹೊತ್ತಿನ ವರೆಗೆ ನಮಗೆ ಪರದೇಶೀ ಫಿರಂಗಿ ಕೊಡೆಗಳನ್ನೇ ತಕ್ಕೊಂಡು ತಿರುಗುವ ಸಾಂಸರ್ಗಿಕ ಚಟಬಿದ್ದಿರುವದರಿಂದ, ಈಗ ೩ ರೂ ಗಳಿಗಾದರೂ ದೊರೆಯುವ ಅಂಥ ಕೊಡೆಗಳನ್ನು ತಕ್ಕೊಳ್ಳುವೆವು ಇದಲ್ಲದೆ ಸ್ವದೇಶೀ ಕ್ಷೇತ್ರ ಛತ್ರಿಗಳೊಡನೆ ಅಸಹಕಾರ ಮಾಡುವೆವು. ಇದು ಎಂಥ ವಿಚಾರಸರಣಿಯು? ಬಂಧುವರ್ಗರೇ, ಇನ್ನಾದರೂ ಕಣ್ತೆರೆಯಿರಿ. ಸ ಧಾರಣಾ ಕೊಡೆಗಳನ್ನು ಹಿಡಿಯವಾಗ ಒಡಲಕಾಲವು ಅಜ್ಞಾನದಲ್ಲಿ ಕಳೆಯಿತು. ಮಹಾತ್ಮರ ಅಪ್ಪಣೆಯಂತೆ ವರ್ತಿಸಿರಿ. ಮುಖ್ಯವಾಗಿ ಅಲ್ಲಲ್ಲಿಯ ಮುಖಂಡರು ತಮ್ಮ ಫಿರಂಗಿಕೊಡೆಗೂ ಪರದೇಶೀ ವಸ್ತ್ರಗಳಿಗೂ ಬಹಿಷ್ಕಾರಹಾಕಿ, ಏಕಾದಶೀ ಮೊದಲಾದ ಪವಿತ್ರವ್ರತಗಳಂತಿದ್ದ ಈ ಸ್ವದೇಶೀ ವ್ರತವನ್ನು ಆಚರಿಸತಕ್ಕದ್ದು. ಅದರಿಂದ ಉಳಿದವರು ಸಹಜವಾಗಿ ಹಿಂಬಾಲಿಸುವರು.

ಇತರ ಹಿಂದೂವರ್ಗದವರ ಕೆಟ್ಟ ರೀತಿಯಾಚರಣವನ್ನು ಹೋಗಲಾಡಿಸಿ ಸನ್ಮಾರ್ಗ ಪ್ರವರ್ತಕರನ್ನಾಗಿ ಮಾಡಿದಂತ ಮೇಲುಜ್ಞಾತಿವರ್ಗದವರನ್ನು "ಕರ್ಮಭ್ರಷ್ಟ ಆಚಾರಹೀನ"ರಿಂದ ದೂರಪಡಿಸುವದಾಗಿದ್ದರೆ,

'दुसऱ्यांसांगे ब्रह्मज्ञान आपण कोरडा पाषाण'

ಎಂಬ ಗಾದೆಯನ್ನನುಸರಿಸಿದಂತಾಗುವದಲ್ಲವೇ. ಕೆಲವು ವಿಚಕ್ಷಣ ಬುದ್ಧಿಯುವರು ಇನ್ನುಮುಂದೆ ಫಿರಂಗಿ ಕೊಡೆಗಳನ್ನು ತಕ್ಕೊಳ್ಳಲಾರೆವೆಂದೂ, ಇದ್ದ ಕೊಡೆಹರಿಯುವ ತನಕ ಬಳಸುತ್ತೇವೆಂದೂ ಹೇಳುವರು ಇದು ವಿಚಾರದೃಷ್ಟಿಯಿಂದ ಕೆಲವರಿಗೆ ನಿಜವಿದ್ದರೂ, ಆಧುನಿಕ ಪರಿಸ್ಥಿತಿಯ ದೃಷ್ಟಿಯಿಂದ ತೀರ ಭಿನ್ನವಾಗಿರುವದು. ದೇಶಭಕ್ತ ಸಿ. ಆರ್. ದಾಸರಂಥ ಮಹನೀಯರು ತಮ್ಮ ಆಗಣಿತ ಉತ್ಪನ್ನಕ್ಕೆ ಸಹ ತಿಲಾಂಜಲಿಯನ್ನು ಕೊಟ್ಟು ಸ್ವದೇಶೀ ವ್ರತವನ್ನು ಕೈಕೊಂಡಿರುವಾಗ್ಗೆ, ನಮ್ಮಂಥವರು ಇಂಥ ನೆವಗಳನ್ನು ಹೇಳಿದ್ದಲ್ಲಿ, ನಿರಕ್ಷರ ಕುಕ್ಷಿಗಳು ಸಹ ಸಹಿಸಲಾರರು. ಅವಶ್ಯ ಬಂಗಾಲೀ ಜನರ ಅನುಕರಣ ಮಾಡತಕ್ಕದ್ದು. ಇನ್ನು ಸರಕಾರಿ ನೌಕರರೂ ಸಹ ತಾವು ಕೇಳಮಟ್ಟ ಸ್ಥಾನಗಳನ್ನು ತಕ್ಕೊಂಡಲ್ಲಿ ಯಾವ ಕಾಯಿದೆಯಿಂದಲೂ ಅವರಿಗೆ ಪ್ರತಿಬಂಧವಾಗದು.

ಒಟ್ಟಿನಲ್ಲಿ ಬುದ್ಧಿಯುಳ್ಳಂಥ ಪ್ರತಿಯೊಬ್ಬ ಬಂಧು ಭಗಿನಿಯರು ಸ್ವದೇಶೀ ವಸ್ತ್ರ, ಕೊಡೆ ಮೊದಲಾದ ವಸ್ತುಗಳನ್ನೇ ಕೊಳ್ಳಬೇಕಲ್ಲದೆ, ಪರದೇಶದ ವಸ್ತುಗಳನ್ನು ತಕ್ಕೊಳ್ಳದೆ ತಮ್ಮ ಸ್ವದೇಶಪ್ರೇಮದ ಕೀರ್ತಿಯನ್ನು ಹಾಕಿಕೊಟ್ಟು ಈ ವ್ರತವನ್ನು ಜಾರಿಗೆ ತರಬೇಕಾಗಿ ಕೋರುವೆವು.

ಒಬ್ಬ ಸ್ವಧರ್ಮರಕ್ಷಕ ಕಾಂಕ್ಷಿ.

To The Editor,

Kanara News, Kumta.

Dear Sir,

In reply to the interpellation put by Mr. Kalbhor, M L C in the local Legislative Council, in the matter of recruitment of higher officials Government was pleased to state that the "principle of admixture of castes has been and will be kept before the appointing Officers". This is no doubt a very good principle embodied in G, R No 625 of 23-1-1914 published in Govt. Gazett of 21-8-20, to which no objection can be taken by any one, if only it is always observed by those appointing Officers, for whom it was meant. But unfortunately our experience is that the principle has been up-to-now more honoured in the breach than in its observance And hence all the deep discontent and dissatisfaction at the way in which these appointments are brought about—

Let me, for instance, refer to recruitment to one class of appointments in the Kanara District During the last ten years or so, of the nine or ten persons of the District, appointed as Sub-Judges, I am sorry to find all without an exception belonging to one community. If the above principle had been up-to now kept before the appointing Officers, as alleged in the reply, I fail to see how this state of things would have been possible.

As regards recruitment to another class of appointments, viz probationers to the post of Mamlatdars, similar has been the case, though not to this extent. I know that candidates of some communities have been rejected, though there were none of that community appointed so far to these posts. Although this has been the case up to now I have no doubt that this principle of admixture of castes will be observed in future in view of the assurance given by Government.

Bombay.

Yours faithfully,
KANARITE.

ಕಾನಡಾವೃತ್ತ.

ಗುರುವಾರ ತಾರೀಖು ೪ ಮಾಹೆ ಅಗೋಸ್ತ ೧೯೩೧

ಶಿಕ್ಷಣದ ಪುನರ್ಘಟನೆ.

ಸದ್ಯಕ್ಕೆ ನಡೆದ ರಾಜಕೀಯ ಚಳವಳಿಯಲ್ಲಿ ಇದು ಮತಭೇದವಿಲ್ಲದ ವಿಷಯವಿಲ್ಲೆಂದೆಂದರೂ, ಅನ್ನಬಹುದು ಒಂದು ವಿಷಯದಮೇಲೆ ಮಾತ್ರ ಏಕಮತವಿದೆಂದ ಹೇಳಬಹುದು ಅದ್ಯಾವದೆಂದರೆ, ನಮ್ಮ ಶಿಕ್ಷಣದ ಸುಧಾರಣೆಯೂ, ಅದರ ಪುನರ್ಘಟನೆಯೂ ಆಗಬೇಕೆಂದ, ಸಹಕಾರಿ-ಅಸಹಕಾರಿ ಪಕ್ಷದವರಿಗೂ [illegible] ವಾಗಿ ಮಾನ್ಯವದೆ ದೃಷ್ಟಿಕೋನದ ಭೇದದಿಂದ, ಈ ವಿಷಯದೊಳಗಣ ಸಾಫಲ್ಯದ ಪರಿಮಿತಿ ಮತ್ತು ಸಾಧನಗಳ ವ್ಯಾಪಕತೆ ಇವುಗಳ ವಿಷಯದ ಮತಭೇದವದೆಂದು ಕಂಡುಬಂದರೂ ಸ್ಥೂಲದ ಸಿದ್ಧಾಂತವು ಎಲ್ಲರಿಗೂ ಆಗಿದೆಂಬುದು ಅಲ್ಲಗಳೆಯಲಿಕ್ಕಾಗದು. ಈಗಿನ ಶಿಕ್ಷಣಪದ್ಧತಿಯ ದೋಷಗಳು ಇಷ್ಟು ಸ್ಪಷ್ಟವಾಗಿವೆಯಲ್ಲ ಅದರಿಂದ ರಾಷ್ಟ್ರಕ್ಕಾದ ಹಾನಿಯು ಇಷ್ಟು ಢಳಢಳವಾಗಿ ಆಗಿದೆಯಲ್ಲ ಅವುಗಳನ್ನು ಸವಿಸ್ತಾರ ಪ್ರಮಾಣಗಳ ಸಹಿತ ಸಿದ್ಧಪಡಿಸುವದು ಇನ್ನು ಅವಶ್ಯಕವಿಲ್ಲ. ಹಿಂದುಸ್ಥಾನದ ಸದ್ಯದ ರಾಜಕೀಯ ಸಾಮಾಜಿಕ, ಆರ್ಥಿಕ ಸ್ಥಿತಿಯೇ ಇಷ್ಟು ದಿವಸ ನಮಗೆ ದೊರತ ವಿದೇಶೀ ಶಿಕ್ಷಣದ ದುರ್ಬಲತೆಯ ಪ್ರಮಾಣವು.

ಎಲ್ಲಿ ನೋಡಿದಲ್ಲಿ ಕೇಳಿದಲ್ಲಿ, ಪರದೇಶೀ ಮಾಲ, ಪರದೇಶೀ ವಸ್ತ್ರ, ಪರದೇಶೀ ವೇಷ, ಪರಕೀಯ ಧರ್ಮ ಪರಕೀಯ ಆಚಾರ-ವಿಚಾರ, ಪರಕೀಯ ಊಟ ಉಡಪು, ಪರದೇಶೀ ಶಿಕ್ಷಣ ಪರದೇಶೀ ನ್ಯಾಯಪದ್ಧತಿ ಪರದೇಶೀ ಪುಸ್ತಕ, ಪೂಜ್ಯ ಐತಿಹಾಸಿಕ ಪುರುಷರೆಂದರೆ, ನೆಪೋಲಿಯನ, ವೆಲಿಂಗಟನ್, ಕ್ರೊಮವೆಲ್ ನೆಲ್ಸನ್, ರಿಚರ್ಡ ಮುಂತಾದವರು ಮಹಾಪ್ರತಿಭಾಶಾಲಿಯಾದಂಥ ರಾಜ್ಯವೆಂದರೆ, ಬ್ರಿಟಿಶ ಸಾಮ್ರಾಜ್ಯವು ಪೂಜ್ಯವಿದ್ದದ್ದೆಲ್ಲ ಅವರದು ಹೀನಾಯವಾದದ್ದೆಲ್ಲ ನಮ್ಮದು ನಮ್ಮ ಉದ್ಧಾರದ ಗಳಿಗೆ [illegible], ಅವರಿಂದಲೇ, ಅವರ ಶಿಕ್ಷಣದಿಂದಲೇ ಅವರ ಪುಸ್ತಕಗಳಿಂದಲೇ ಅವರ ಶಿಕ್ಷಕರಿಂದ ನಮ್ಮಲ್ಲಿ ಸಾಮರ್ಥ್ಯವಿಲ್ಲ, ಮಹಾಪುರುಷರಿಲ್ಲ, ಪುಸ್ತಕ [illegible] ಇಲ್ಲ, ಇವೇ ಮುಂತಾದ ವಿಚಾರಗಳು ನಮ್ಮಲ್ಲಿ ಬೇರೂರಿ, ಪರಕೀಯರು ಹೇಳಿದಂತೆ ಕುಣಿಯಲಿಕ್ಕೆ [illegible] ಭೂತವಾದದ್ದು ರಾಷ್ಟ್ರೀಯ ಶಿಕ್ಷಣದ ಅಭಾವವು "— [illegible]

ಸಹಕಾರಿ ಶಿಕ್ಷಣ ಸಂಪ್ರದಾಯದವರಿಗೆ ಮಾನ್ಯವಾಗಿದ್ದರೂ, ಸದ್ಯದ ನಮ್ಮ ಶಿಕ್ಷಣವು ಬಹಳೇ ದೋಷಪೂರ್ಣವದೆಂದು ತಮ್ಮ ವಾಡಿಕೆಯ ನೇಮಸ್ತತನದ ನುಡಿಗಳಿಂದ ಸಹಕಾರಿಗಳು ಹೇಳುತ್ತಿರುವರು. ಹೀಗಾಗಿ, ಸದ್ಯಕ್ಕೆ ರಾಷ್ಟ್ರೀಯ ಶಿಕ್ಷಣದ ಯೋಜನೆಗಳು ಒಂದು ಬದಿಯಿಂದ ಮುಂದರಿಯುತ್ತಿರುವಾಗ ಸರಕಾರದವರ ಬದಿಯಿಂದ ಶಿಕ್ಷಣಖಾತೆಯ ದಿವಾಣರು ಎಲ್ಲ ಪ್ರಾಂತಗಳಲ್ಲಿ ತಮ್ಮತಮ್ಮ ಶಿಕ್ಷಣ ಸುಧಾರಣೆಯ ಯೋಜನೆಗಳನ್ನು ಮುಂದಿಡುತ್ತಿರುವರು. ತಮ್ಮ ಶಿಕ್ಷಣವಿಷಯಕ ಕಾರ್ಯಕ್ರಮವನ್ನು ಅವರು ಒಲ್ಲಲ್ಲಿ ಜಾಹೀರಪಡಿಸಿರುವರು. ಈಬಗೆಯಿಂದ ಲೋಕಶಾಹಿಯು ಸ್ವಾವಲಂಬನದ ಕಾರ್ಯಕ್ರಮವು ಒಂದೆಡೆಗೆ, ಅಧಿಕಾರಶಾಹಿಯ ಕಾರ್ಯಕ್ರಮವು ಮತ್ತೊಂದೆಡೆಗಾಗಿ ನಮ್ಮ ಶಿಕ್ಷಣದ ಪುನರ್ಘಟನೆಯ [illegible]ಗೆ ಸದ್ಯಕ್ಕೆ ಒಂದು ವಿಧದ ಜಗ್ಗಾಟವೇ ನಡೆದಿದೆಯೆಂದು ಹೇಳಬೇಕಾಗಿದೆ

ಅಧಿಕಾರಶಾಹಿಯು ಮುಂದಿಟ್ಟ ಯೋಜನೆಗಳನ್ನು ಲಕ್ಷಿಸಿದರೆ ಕೆಲವು ಸಂಗತಿಗಳು ಸ್ಪಷ್ಟವಾಗಿ ಕಂಡುಬರುವವು. ದಿವಾಣರ ಮಾತುಗಳಲ್ಲಿ ಸರ್ವತ್ರ ಒಂದೇ ರಾಗವು ಕೇಳಿಬರುತ್ತದೆ. ಶಿಕ್ಷಣ ಪ್ರಸಾರದ ಕಾರ್ಯಕ್ಕೆ ದುಡ್ಡಿಲ್ಲ, ಹಣವಿಲ್ಲ, ಎಂಬ [illegible]ವೇ ಈ ರಾಗವು! ಅನುಕೂಲತೆಯುಂಟಾದಷ್ಟು ಮುಂದರಿಯುವ, ಎಂಬುದೇ ಅವರ ವಾದವು. ಈ ದಿವಾಣರಿಗೆ ದ್ರವ್ಯಾಭಾವ, ಸಂಸ್ಕಾರ ಪರಂಪರೆಯ ಅಭಾವ, ಧ್ಯೇಯಾಭಾವ ಹೀಗೆ ಮೂರು ಅಭಾವಗಳು ಬಾಧಕವಾಗಿ ನಿಂತಿರುವವು. ದ್ರವ್ಯಾಭಾವದ ಅರಿವು ಅವರಿಗೆ ಪೂರ್ಣವಾಗಿ ಆಗಿದೆ. ಆದರೆ, ನಮ್ಮ ಪೂರ್ವ ಸಂಸ್ಕೃತಿಗಳ ಮತ್ತು ರಾಷ್ಟ್ರೀಯ ಧ್ಯೇಯದ ಅಭಾವಗಳ ತಿಳಿವು ಉಂಟಾದ್ದೇನು ಕಾಣುವದಿಲ್ಲ. ಅದಕಾರಣ, ಹೊಸ ಕಾಲೇಜದ ದಿವಾಣರಿಂದ, ಹೆಚ್ಚಿಂದರೆ ಶಿಕ್ಷಣದ ವಿಸ್ತಾರವು ಅತ್ಯಲ್ಪ ಪ್ರಮಾಣದಿಂದ ಸಾಧಿಸಲಿಕ್ಕಾಗುವದು. ಹೆಸರಿಗೆ ಮಾತ್ರ ಶಿಕ್ಷಿತರೆಂದೆನಿಸಿಕೊಳ್ಳುವವರ ಸಂಖ್ಯಾಪ್ರಮಾಣವು ಅಲ್ಪ ಮಟ್ಟಿಗೆ ಹೆಚ್ಚಿಸಲ್ಪಡಬಹುದು. ಇಂಥ ಶಿಕ್ಷಣ ವಿಸ್ತಾರದಿಂದ ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಬೌದ್ಧಿಕ ಉನ್ನತಿಯು ಇವುಗಳ ವ್ಯಾಪಕವಾದ ಬೆಳೆಗೆಯು ಎಷ್ಟರಮಟ್ಟಿಗಾಗುವದು, ಇದರಿಂದ ಹಿಂದೀ ರಾಷ್ಟ್ರದ ಹೊಸ ಕಟ್ಟಡಕ್ಕೆ ಎಷ್ಟು ಸಹಾಯವಾಗುವದು, ಎಂಬುದನ್ನೇನು ದಿವಾಣರು ವಿಚಾರಿಸಿರುವರೋ? ಸದ್ಯದ ಶಿಕ್ಷಣಕ್ರಮದೊಳಗೂ, ಶಿಕ್ಷಣಪದ್ಧತಿಯೊಳಗೂ, ಪೂರ್ಣವಾದ ಕ್ರಾಂತಿಯನ್ನು ಮಾಡಿದ ಹೊರತು ಈಗಿದ್ದ ಅವನತಿಯನ್ನು ನೀಗಲಾಡಿಸಲಿಕ್ಕಾಗದೆಂದು ನಮ್ಮ ನಿಶ್ಚಿತ ಮತವು. ಇಂಥ ಕ್ರಾಂತಿಕಾರಕ ಸುಧಾರಣೆಯನ್ನು ಮಾಡಲಿಕ್ಕೆ ನಮ್ಮ ಪೂರ್ವಸಂಸ್ಕಾರಗಳ ಮತ್ತು ರಾಷ್ಟ್ರೀಯ ಧ್ಯೇಯದ ಅರಿವು ಸುಧಾರಕರಲ್ಲಿ ಉಂಟಾಗಲಿಲ್ಲವಾದರೆ, ಶಿಕ್ಷಣಖಾತೆಗಾಗಿ ಮಾಡುವ ವೆಚ್ಚದ ವೆಚ್ಚವೆಲ್ಲ ನಿರರ್ಥಕವಾಗುವದಲ್ಲವೇ? ಹೊಸ ಶಿಕ್ಷಣಕ್ರಮದಲ್ಲಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯತನದ ಮತ್ತು ರಾಷ್ಟ್ರೀಯ ದೃಷ್ಟಿಯ ವಿಕಾಸವಾಗುವ ಶಿಕ್ಷಣವನ್ನು ಕೊಡಬೇಕಾಗಿರುವದಲ್ಲದೆ, ಹುಡುಗರೊಳಗೆ ಸ್ವಾತಂತ್ರ್ಯ, ಸಾಹಸ, ಕಾರ್ಯಕರ್ತೃತ್ವದಂಥ ವಿಶಿಷ್ಟ ಗುಣಗಳನ್ನು ಬೆಳಸುವ ಶಿಕ್ಷಣವು ಅವರಿಗೆ ದೊರೆಯಬೇಕಾಗುವದು. ಪ್ರಾಥಮಿಕ, ಮಾಧ್ಯಮಿಕ, ಮತ್ತು ಉಚ್ಚ ಶಿಕ್ಷಣದ ಕ್ಷೇತ್ರದಲ್ಲಿ ಇದೇ ದೃಷ್ಟಿಯಿಂದ ಸುಧಾರಣೆಯಾಗತಕ್ಕದ್ದು. ಪ್ರಾಥಮಿಕ ಶಾಲೆಗಳಲ್ಲಾದರೂ ಈಗಿರುವ ಓದುಬರಹದ ಶಿಕ್ಷಣದೊಂದಿಗೆ ಧಂದೆ ಶಿಕ್ಷಣದ ಅನುಕೂಲತೆಯನ್ನು ಮಾಡಿಕೊಡುವದು ಅವಶ್ಯಕವು. ನಾಗರಿಕತೆಯ ಕಲ್ಪನೆಗಳು ಅಂಕುರಿಸಲು, ಬಾಲಕರ ಮನೋಭೂಮಿಯಲ್ಲಿ ರಾಷ್ಟ್ರೀಯತನದ ಬೀಜವನ್ನು ನೆಡಲಿಕ್ಕೆ ಇನ್ನು ಮುಂದ ಪ್ರಾಥಮಿಕ ಶಾಲೆಗಳಲ್ಲಿಯೇ ಪ್ರಾರಂಭಿಸಬೇಕಾಗುವದು. ಗೃಹಶಿಕ್ಷಣಕ್ಕೂ, ಶಾಲೆಯ ಶಿಕ್ಷಣಕ್ಕೂ, ಈಗಿರುವ ವಿಸಂಗತ ಭೇದವನ್ನು ತೊರೆದು, ಸುಸಂಗತವಾಗಿ ಅವುಗಳ ಗಂಟು ಕೂಡಿಸಬೇಕಾಗುವದು. ದೇಶಾಭಿಮಾನ, ದೇಶಸೇವೆ, ಧೈರ್ಯಶಾಲಿತ, ರಾಷ್ಟ್ರದ ಪೂರ್ವಜರ ಅಭಿಮಾನ, ರಾಷ್ಟ್ರೀಯ ವೀರರ ಇತಿಹಾಸದ ಮನನ, ಪೂರ್ವದ ಮತ್ತು ಈಗಿನ ಮುಂದಾರ ಚರಿತ್ರದ ಅನುಕರಣ, ಇವೆಲ್ಲವುಗಳನ್ನು ಸಾಧಿಸಲಿಕ್ಕಾಗುವಂತೆ, ವರಿಷ್ಠ-ಕನಿಷ್ಠ ಎಲ್ಲ ಶಿಕ್ಷಣಸಂಸ್ಥೆಗಳಲ್ಲಿ ಅಧ್ಯಾಪಕರು ಶಿಕ್ಷಣವನ್ನು ಇನ್ನು ಕೊಡಬೇಕಾಗಿದೆ. ಒಟ್ಟಿಗೆ ಶಿಕ್ಷಣಸುಧಾರಣೆಯು ಕ್ರಾಂತಿಯಾದ ಹೊರತು, ನಮ್ಮ ಏಳಿಗೆಯು ಕೈಗೂಡದು. ಇಂಥ ವ್ಯಾಪಕವಾದ ಸುಧಾರಣೆಯನ್ನು ಮಾಡುವ ಸಂಕಲ್ಪವನ್ನು ಧಿಟ್ಟತನದಿಂದ ದಿವಾಣರು ಮಾಡಿದರೆ ಮಾತ್ರ, ಅವರ ದಿವಾಣಗಿರಿಯು ಸಾರ್ಥಕತೆಯಾಗುವದೆಂದು ಅವರು ತಿಳಿದಿರಲಿ. ಕಮಿಟಿಗಳನ್ನು ನೇಮಿಸಿ, ಇಲ್ಲವೆ ಸಣ್ಣ ಸಣ್ಣ ಯೋಜನೆಗಳನ್ನು ಮುಂದಿಟ್ಟು, ರಾಷ್ಟ್ರದ ಶಿಕ್ಷಣದ ಹಸಿವೆಯು ಇನ್ನು ಶಮನವಾಗದು.

ಸ್ಫುಟ ಸೂಚನೆಗಳು.

೧ ಧಾರವಾಡದ ಗೋಳೀಬಾರ ಪ್ರಕರಣದಲ್ಲಿ ಸರಕಾರಿ ಧೋರಣವು ಬುಡದಿಂದ ಪಕ್ಷಪಾತದ್ದಾಗಿದೆಂದ. ಲೋಕಮತವಾಗಲಿಕ್ಕೆ [illegible] ನಾಗರಿಕ ಲೋಕಪಕ್ಷದ ಹೇಳಿಕೆಯನ್ನು ಸಂಕರಾವದವರು ಎಳ್ಳಷ್ಟು ಆದರಿಸಿಲ್ಲ ಯಾವದೇ ಕಾಯಿದೆಯ ಆಧಾರವಿಲ್ಲದೆ, ಮಾ॥ ಮಾಜಿಸ್ಟ್ರೇಟರ ಹುಕುಮಿಲ್ಲದೆ, ಜನರ ಮೇಲೆ ಗುಂಡು ಹಾರಿಸಿದ [illegible] ಅಧಿಕಾರವನ್ನು [illegible] ಮಾಡುವದಿರಲಿ, ಅದನ್ನು ಸಮರ್ಥಿಸ[illegible]

ನ್ಯಾಯಿಕ ಚೌಕಶಿಯ ಕೆಲಸವನ್ನು ಬೇರೆಯವರ ಕಡೆಯಿಂದ ನಡಿಸ ನಷ್ಟ ನ್ಯಾಯವನ್ನು ಸಹ ಸರಕಾರವು ಕೊಡಲಿಚ್ಛಿಸಿಲ್ಲ. ಈ ಪ್ರಕರಣದ ವಿಷಯವಾಗಿ ಕೌನ್ಸಿಲದಲ್ಲಿ ಚರ್ಚೆಯನ್ನು ನಡಿಸಬೇಕೆಂದು ರಾ|| ಓ|| ಚಿಕಳೇಕರವರು ಪರವಾನಗಿಯನ್ನು ಬೇಡಲು, ಕೌನ್ಸಿಲಿನ ಅಧ್ಯಕ್ಷರು, ಕಾಯಿದೆ ಕೋರ್ಟಿನಲ್ಲೇ ಅದರ ತನಖಿ ನಡೆಯಿತೆಂಬ ಕಾರಣವನ್ನು ಹೇಳಿ, ರಾ| ಚಿಕಳೇಕರವರ ಸೂಚನೆಯನ್ನು ತಿರಸ್ಕರಿಸಿದರು. ಇದೆಲ್ಲ ಠೀಕ್ ಪೂರ್ ನೋಡಿ, ಲೋಕಮತವು ಮತ್ತೂ ನಿರಾಶೆಯೊಳಗ ಸೇರಿದರೆ ದೋಷವು ಯಾರದು? ಕೋರ್ಟಿನಲ್ಲಿ ತನಖಿ ನಡೆದಿದೆಂಬುದು ಯಾವದು? ಫೌಜದಾರನೂ ಅವನ ಕೈಕೆಳಗಿನವರೂ ಆರೋಪಿತರೆಂದು ಹಿಡಿಸಿದ ಜನರ ಮೇಲೆ ಖಟ್ಲೆ ನಡೆದದೆ, ಫೌಜದಾರನ ಮೇಲೇನು ಖಟ್ಲೆ ನಡಿಯುವದಿಲ್ಲ. ಆದರಿಂದ ಫೌಜದಾರನು ಇನ್ನುತನಕ ಆರೋಪಿಯೆಂದೆಣಿಸಲ್ಪಡಲಿಲ್ಲ, ಫಿರ್ಯಾದಿಯೇ ಆಗಿರುವನು. ಅವನೂ, ಅವನ ಜೊತೆಗಾರರೂ ಮಾಡಿದ ಗೋಳಿಬಾರದ ವಿಚಾರಣೆಯು ಈ ಖಟ್ಲೆಯಲ್ಲಿ ಪ್ರತ್ಯಕ್ಷವಾಗಿ ನಡಿಯಲಿಕ್ಕೆ ಆಸ್ಪದವೇ ಇಲ್ಲ. ಹೀಗಿದ್ದಾಗ, ಕೌನ್ಸಿಲದೊಳಗೆ ಚರ್ಚೆ ನಡಿಸಗೊಡುವದು ನ್ಯಾಯ್ಯವಾಗಿತ್ತು. ಅದಕ್ಕೂ ಅಧ್ಯಕ್ಷರ ಹರಕತ್ತು. ಇದೆಲ್ಲ ಅಕ್ಷರಶಃ ಪಬ್ಲಿಕೆಯು. ಮುಂಬಯಿ ಸರಕಾರದ ಮೇಲೆ ಹಿಂದೀ ಮಂತ್ರಿಗಳ ಕಾರಭಾರದ ಪರಿಣಾಮವು ಹೊಸ ಘಟನೆಯೊಳಗೆ ಎಷ್ಟಾಗುತ್ತದೆಂದು ಪರೀಕ್ಷಿಸಲಿಕ್ಕೆ ದಾರವಾಡ ಪ್ರಕರಣವು ಒರೆಕಲ್ಲಾಗಿದೆಂದು ಸರ್ವಂಟ ಆಫ ಇಂಡಿಯಾ ಮುಂತಾದ ಸಮಸ್ತ ಪತ್ರಿಕೆಗಳು ಸಹ ಉದ್ಗರಿಸುತ್ತಿರುವವು. ನ್ಯಾಯಬುದ್ಧಿಗಾಗಿ, ಸಮತೋಲ ವಿಚಾರಕ್ಕಾಗಿ ಕೀರ್ತಿ ಪಡೆದ, ಸರ ಜೋರ್ಜ ಲ್ಯಾಡ ಗವ್ಹರ್ನರರ ಆಳಿಕೆಯು ಈ ಪ್ರಕರಣದೊಳಗೆ ಶ್ರಮಜೀವಿಗಳಿಗೆ ಸಹ ನಿರಾಶೆಪಡಿಸಿತೆಂಬುದು ಅತಿ ಶೋಚನೀಯವು. ಪಬ್ಲಿಕೆಯೇ 'ಬಲೀಯಸೀ' ಎಂದು ಇನ್ನು ಹೇಳಬೇಕಾಗಿದೆ. ಅದರ ಮೋಹವು ಇಷ್ಟು ಬಲವತ್ತರವಾದ ಮತ್ತೇನು?

---

೧ ಇನ್ನು ಮುಂದೆ ಕ್ಯಾದೆ ಕೌನ್ಸಿಲಕ್ಕೆ ಮೆಂಬರರಾಗುವ ಉಮೇದವಾರರಿಗೆ ಮತಗಳನ್ನು ಕೊಡಲಿಕ್ಕೆ ಸ್ತ್ರೀಯರಿಗೆ ಹಕ್ಕು ಕೊಡುವ ಠರಾವು ಇದೇ ಕಳೆದ ಕೌನ್ಸಿಲ ಸಭೆಯಲ್ಲಿ ಬಹುಮತದಿಂದ ಪಾಸಾಗಿದೆ. ಇದರಮೇಲಿಂದ ಗಂಡಸರಿಗೆ ಆಗುವ ಇದರ ನೇಮುಗಳಂತೆಯೇ ಮತದಾರರಿಗೆ ಹಕ್ಕುಳ್ಳ ಸ್ತ್ರೀಯರು ಸಹ ತಮ್ಮ ಮತಕೊಡಬಹುದಾದರೂ, ಮೆಂಬರರಾಗಲು ಮಾತ್ರ ಅವರು ಪಾತ್ರವಿಲ್ಲೆಂತಾಯಿತು. ಈ ಕುರಿತು ಆದ ವಾದವಿವಾದವು ಬಹಳ ಉದ್ದವಾಗಿ, ಯುರೋಪಿಯನ ಮೆಂಬರರು ಸಹ ಈ ಸೂಚನೆಯನ್ನು ವಿರೋಧಿಸಿದರೂ, ಅದು ಬಹುಮತವಾಗಿ ಪಾಸಾಯಿತು. ಈ ಸೂಚನೆಗೆ ನಮ್ಮ ಜಿಲ್ಲೆಯ ಮೆಂಬರ ಮಿ| ದುಭಾಷೆಯವರು ಸಹ ಮತ ಕೊಟ್ಟರು. ಈ ಸೂಚನೆಯು ಪಾರ್ಲಿಮೆಂಟಿನ ಜೊಯಿಂಟ ಕಮಿಟಿಯಲ್ಲಿ ವಿಚಾರವಾಗುತ್ತಿದ್ದಾಗ, ಅವರು ಈ ಕುರಿತು ಹೊಸ ಕೌನ್ಸಿಲುಗಳಲ್ಲಿಯೇ ನಿರ್ಣಯಿಸುವದುತ್ತಮವೆಂದು ಸೂಚಿಸಿದ್ದರು. ಅದಕ್ಕನುಸರಿಸಿ, ಬಹಳ ಕೌನ್ಸಿಲುಗಳಲ್ಲಿ ನಿರ್ಣಯವಾಗಿದೆ. ಈ ಮುಂಬೈ ಕೌನ್ಸಿಲಿನ ನಿರ್ಣಯವು ನ್ಯಾಯದ್ದು ಮತ್ತು ಬುದ್ಧಿವಂತಿಕೆಯದ್ದೆಂದು ಎಲ್ಲ ರಾಷ್ಟ್ರೀಯರು ಹರಿಸುವರು. ಆದರೆ ಎಷ್ಟು ಸ್ತ್ರೀಯರು ಈ ಬಗ್ಗೆ ಸಹಕಾರ ಮಾಡಲು ಶಕ್ಯರು? ಮತ್ತು ಇಂಥ ಸ್ತ್ರೀಯರ ಮತದಾರಿಯಿಂದ ಗಂಡಸರ ಅಸಹಕಾರದ ಬದಲಾಯಿ ಮಾಡಿತೋ ಎಂಬುದೊಂದು ಪ್ರಶ್ನೆಯು. ಇವರು ಏನು ಮಾಡುತ್ತಾರೆಂಬುದು ನೋಡುವ. ಇವರು (ಸ್ತ್ರೀಯರು) ಸಹ ಗಂಡಸರಂತೆಯೇ ಮತಕೊಡದಿದ್ದರೆ, ಈ ಠರಾವು ಸದ್ಯಕ್ಕಾದರೂ ನಿರರ್ಥಕವಾಗುವದೇ ಸರಿ.

---

೨ ವಿಜಾಪುರ ಜಿಲ್ಲೆಯಲ್ಲಿ ನಡೆದ ಪಿಕೆಟಿಂಗವನ್ನು ಪ್ರತಿಬಂಧಿಸುವ ಹೆಂಡರಸನ ಸಾಹೇಬರ ಹುಕುಮುಗಳ ವಿಷಯವಾಗಿ, ರಾ| ಸಾ| ಶಿರಾಣಾಲ ದೇಸಾಯಿರವರು ಕೌನ್ಸಿಲದೊಳಗೆ ಪ್ರಶ್ನೆಯನ್ನು ಕೇಳಿದಾಗ, ಕಾರ್ಯಕಾರಿ ಮಂತ್ರಿಗಳು ಖುಲಾಸೆಯ ಉತ್ತರವನ್ನು ಕೊಟ್ಟಿರುವರು. ಬಿಜಾಪುರ ಜಿಲ್ಲಾ ಕೊಂಗ್ರೆಸ ಕಮಿಟಿಯು ಈ ವಿಷಯವಾಗಿ ಮಾಡಿದ ಮನವಿಯು ದಿವಾಣದ ವಿಚಾರಣೆಯಲ್ಲವೆಂದು ತಿಳಿಸಿ, ಸದ್ಯ ಮದ್ಯಪಾನ ನಿಷೇಧದ ಚಳವಳಿಯು ಪರವಾಗಿ ಮುಂಬಯಿ ಸರಕಾರದ ಅಭಿಪ್ರಾಯವನ್ನು ಮಂತ್ರಿಗಳು ಪ್ರಕಟಿಸಿದರು. ಮದ್ಯಪಾನವನ್ನು ತಗ್ಗಿಸುವ ಎಲ್ಲ ಉಪಾಯಗಳ ಬಗ್ಗೆ ಸರಕಾರದ ಸಹಾನುಭೂತಿ ಇದೆ. ಆದರೆ, ಈ ಉಪಾಯಗಳಿಂದ ಬೇರೆ ಉಪದ್ರವವೂ, ಅನಾನುಕೂಲತೆಯೂ ಆಗಕೂಡದು. ಪ್ರಜೆಗಳ ಸ್ವಾತಂತ್ರ್ಯಕ್ಕೆ ಮತ್ತು ಕಾಯಿದೆಗೆ ಸಮ್ಮತವಾದ ವೃತ್ತಿ ಧಂದೆಗಳಿಗೂ, ಶಾಂತತೆಗೂ, ವ್ಯವಸ್ಥೆಗೂ, ಕಾಯಿದೆಗೂ ಇವುಗಳಿಂದ ಬಾಧೆಯಾಗಕೂಡದು. ಪಿಕೆಟಿಂಗ ಚಳವಳಿಯಿಂದ ಇಂಥ ಪರಿಣಾಮಗಳು ಬಹಳ ಕಡೆಯಲ್ಲಿ ಸಂಭವಿಸಿವೆ. ವ್ಯಕ್ತಿಗಳನ್ನೂ ಜನತೆಯನ್ನೂ ರಕ್ಷಿಸಲಿಕ್ಕೆ ಅವಶ್ಯವಾದ ಉಪಾಯ ಯೋಜನೆಗಳನ್ನು ಕೈಕೊಳ್ಳುವ ಅಧಿಕಾರವು ಸರಕಾರದ ಕೈಯಲ್ಲಿದೆ. ಈ ವಿಷಯದಮೇಲೆ ಯಾವದೇ ಸರ್ವಸಾಧಾರಣ ಆಜ್ಞೆಗಳನ್ನು ಸರಕಾರವು ಇನ್ನುತನಕ ಮಾಡಿಲ್ಲ. ಆದರೂ ಪೋಲೀಸರೂ, ಮೆಜಿಸ್ಟ್ರೇಟರೂ, ಕಾಯಿದೆಯ ಭಂಗವಾಗದಂತೆ, ಕಾಯಿದೇಶೀರ ಹಕ್ಕುಗಳನ್ನು ಮುರಿದವರಿಗೆ ದಂಡಿಸುವಂತೆ, ತಕ್ಕ ಇಲಾಜುಗಳನ್ನು ನಡಿಸಲಿಕ್ಕೆ, ಸಿದ್ಧರಾಗಿರಬೇಕೆಂದು ಸರಕಾರದವರು ನಂಬಿರುವರು.

---

೪ ಈ ಅಭಿಪ್ರಾಯಗಳನ್ನು ನೋಡಿ, ಪಿಕೆಟಿಂಗಕ್ಕೆ ಶಾಬ್ದಿಕ ಸಹಾನುಭೂತಿಯು ಹೊರತು ಹೆಚ್ಚಿನ ಸಹಾಯ ಮಾಡಲಿಕ್ಕೆ ಸರಕಾರವು ಸಿದ್ಧವಿಲ್ಲೆಂದು ತಿಳಿಯುವದೋ ಏನು? ಮದ್ಯಪಾನದಂಥ ವ್ಯಸನವು ಬರೇ ಶಾಬ್ದಿಕ ಪ್ರೋತ್ಸಾಹನೆಯಿಂದ ನಿರ್ಮೂಲಿಸಲಿಕ್ಕಾಗುವದೆಂದು ಸರಕಾರದ ಹಿಂದಿನ ಅನುಭವವಾದರೂ ಹೇಳುತ್ತದೇನು? ಮದ್ಯಪಾನವನ್ನು ಬಿಡದವರು ಸಹಿತ ಕಿತ್ತುಹಾಕಬೇಕೆಂದು, ಪ್ರತಿಪಾದಿಸುವ ನೇಮಸ್ತ ಮುಖಂಡರು ದಿವಾಣಗಿರಿಯ ಪದವಿಯನ್ನು ಧರಿಸಿದ ಕೂಡಲೇ, ಅವರಿಗೂ ಈ "ಹಿಡಿ–ಬಡು" ಧೋರಣವು ಮಾನ್ಯವಾಗಿದೆಂದಾಯಿತಲ್ಲವೇ? ಅಬಕಾರಿ ಖಾತೆಯ ಉತ್ಪನ್ನದ ಮೋಹವನ್ನು ಬಿಡಲಿಕ್ಕಾಗುವದಿಲ್ಲಾದರೆ, ಮದ್ಯಪಾನ ನಿಷೇಧದ ಚಳವಳಿಯು ತಮಗೆ ಮಾನ್ಯವಿಲ್ಲೆಂದು ಸರಕಾರವು ಸ್ಪಷ್ಟವಾಗಿ ಹೇಳುವದು ಉತ್ತಮವು. ಇಂಥ ಕಣ್ಣುಮುಚ್ಚಾಲೆಯ ಆಟದಿಂದ ಶಾಂತತೆಯ ಭಂಗವನ್ನು ಕೃತ್ರಿಮ ಸ್ವರೂಪದಿಂದ ಉಂಟುಮಾಡಲಿಕ್ಕೆ ಆಸ್ಪದವು ದೊರೆಯುವದಲ್ಲದೆ, ಶಾಂತತಾ ರಕ್ಷಣೆಯ ಉದ್ದಿಷ್ಟವು ಎಂದೂ ಸಫಲವಾಗದು. ಕಾಯಿದೆಯ ಅಸಿಧಾರಾವ್ರತಗಳನ್ನು ಆಚರಿಸಿಯಾದರೂ, ಈ ಭಯಂಕರ ಮದ್ಯವ್ಯಸನವನ್ನು ರಾಷ್ಟ್ರದಿಂದ ನಿರ್ಮೂಲಿಸಲಿಕ್ಕೆ ಯತ್ನಿಸಬೇಕಾಗಿದೆ. ಈ ರಾಷ್ಟ್ರಕಾರ್ಯದೊಳಗಿನ ಮುಂದಾಳುಗಳಿಗೂ, ಸ್ವಯಂಸೇವಕರಿಗೂ, '[illegible] ಬರಲಿ, ಗೋವಿಂದನ ದಯೆಯೊಂದು ಇರಲಿ' ಎಂದು ಹೇಳಿ, ತಮ್ಮ ಕಾರ್ಯವನ್ನು ಶಾಂತವಾಗಿ ನಡಿಸುವದರ ಹೊರತು ಗತ್ಯಂತರವಿಲ್ಲ. ಅವರಷ್ಟು ನಿರ್ಧಾರದವರಾಗಿದ್ದಾರೆಂದು ಸರಕಾರವು ತಿಳಿದಿರಲಿ.

---

೫ ಇಲ್ಲಿ ಕಳೆದ ತಾ ೧ನೇ ಸೋಮವಾರ ಮಧ್ಯಾಹ್ನಕ್ಕೆ ಲೋಕಮಾನ್ಯರ ಪುಣ್ಯತಿಥಿಯ ಉತ್ಸವವು ಇಲ್ಲಿ ರಾಷ್ಟ್ರಾಭಿಮಾನಿ ನಾಗರಿಕರಿಂದ ಯೋಗ್ಯವಾಗಿ ನೆರವೇರಿಸಲ್ಪಟ್ಟಿತು. ಲೋಕಮಾನ್ಯರ ಛಾಯಾಚಿತ್ರವು ಕುದುರೆಯ ಗಾಡಿಯಮೇಲಿರಿಸಿ, ಅದರಮೇಲೆ ಪುಷ್ಪಾಲಂಕಾರದಿಂದ ಶೃಂಗರಿಸಿದ ಸ್ವದೇಶೀ ತಾಳಿಮದ್ದಳದ ಕೊಡೆಯನ್ನು ಹಿಡಿದು, ಮೆರವಣಿಗೆಯು ಊರ ಪ್ರದಕ್ಷಿಣೆ ಮಾಡಿ ತಿರುಗಿ ಬಂದವೇಳೆ, ಶ್ರೀ| ವಕೀಲ ಶಾಸ್ತ್ರಿ, ಕಲ್ಯಾಣಪೂರಕರ, ಮತ್ತು ಶ್ರೀ| ಶಂಕರರಾವ ನಾಡಕರ್ಣೀ ಮತ್ತು ಮಾಧವ ಶ್ಯಾನಭಾಗರವರು ಲೋಕಮಾನ್ಯರ ಗುಣಾನುವಾದ ಮಾಡಿ, ತಮ್ಮ ಸ್ವದೇಶಪ್ರೀತಿಯಿಂದ ಅವರು ಮಾಡಿದ ಸಾಹಸದ ಕರ್ತವ್ಯಗಳನ್ನು ಬಿಂಬಿಸಿ ಅವರಂತೆಯೇ ಎಲ್ಲರೂ ದೇಶೋದ್ಧಾರಕ್ಕಾಗಿ ದುಡಿಯಬೇಕಾಗಿ ಸಮಯೋಚಿತ ಭಾಷಣಗಳನ್ನು ಮಾಡಿ, ಉಪಕರಿಸಿದರು. ಇದು ಅವರಿಗೆ ಬಹು ಶ್ರೇಯಸ್ಕರವಿಷ್ಟೇ ಅಲ್ಲ, ಜನತೆಯು ಸಹ ಅವರಿಗೆ ಋಣಿಯಾಗಿರುವದು. ಯಾಕಂದರೆ, ಲೋಕಮಾನ್ಯರ ಉದಾಹರಣೆಗಳಿಂದ ಜನರಲ್ಲಿ ಒಂದು ತರದ ಸ್ವದೇಶಭಕ್ತಿಯುಂಟಾಗಿ, 'ಸ್ವರಾಜ್ಯವೆಂಬುದು ತಮ್ಮ ಜನ್ಮಸಿದ್ಧ ಹಕ್ಕು" ಎಂದು ಲೋಕಮಾನ್ಯರು ಪದೇ ಪದೇ ಪ್ರತಿಪಾದಿಸಿದ ಧ್ಯೇಯಕ್ಕೆ ಮುಟ್ಟಿಸುವಂಥ ಸನ್ಮಾರ್ಗಕ್ಕೆ ಅದು ಹಚ್ಚುವಂತಾಗುತ್ತದೆ. ಆದ್ದರಿಂದ ಇಂಥ ಉತ್ಸವಗಳಲ್ಲಿ ದುಡಿಯುತ್ತಿರುವ ಮುಂದಾಳುಗಳು ನಮ್ಮ ವಂದನೆಗೆ ಪಾತ್ರರೆಂದು ಬೇರೆ ಹೇಳಬೇಕೇನು?

ಸ್ಥಾನಿಕ ವೃತ್ತಾಂತ.

ಕುಮಟಾ— ಇತ್ತೀಚಿಗೆ ಮಳೆಯು [illegible] ಇಂಚು ಬಿತ್ತು. ಬೆಳೆಯ ಸ್ಥಿತಿ ನೆಟ್ಟಗಿದೆ. ರೋಗರಾಯಿ ಇದ್ದ ಹಾಗೇ ಇದೆ.

ಈ ಮುನಿಸಿಪಾಲಿಟಿಯು ಕ್ವಾರ್ಟರ್ಲಿ ಸಭೆಗೂಡಿ ಬಜಾರ ಮತ್ತು [illegible] ದ ಕಾನಗಳಮೇಲೆ ವರ್ಷಕ್ಕೆ ೩ ರೂಪಾಯಿಯ ಕರದ ಆಕರಣೆಯಾಯಿತು. ಮುನಿಸಿಪಾಲಿಟಿಯು ಅಸಹಾಯ ಸ್ಥಿತಿಗನುಸರಿಸಿ ಸರಕಾರ ೧೦೦೦೦ ರೂಪಾಯಿಗಳ ಪ್ರಾಮಿಸರಿ ನೋಟುಗಳ ವಿಕ್ರಿ ಮಾಡಬೇಕಾಗಿ ಗೊತ್ತಾಯಿತು. ಪೋಲೀಸರು ತಪಸಿಲದಲ್ಲಿ ಹಿಡಿದು ಹಟ್ಟಿಗೆ ಹಾಕಿದ ದನಗಳ ಬಗ್ಗೆ ಅವರಿಗೆ ಇನಾಮು ಕೊಡಿಸಬೇಕಾಗಿ, ಮೆ| ಪ್ರೆ| ಸುಪರಿಂಟೆಂಡೆಂಟರು ಶಿಫಾರಸು ಮಾಡಿದ ಪ್ರಕರಣದಲ್ಲಿ, ಅಂಥ ಇನಾಮು ಕೊಡಿಸಲಾಗದೆಂದು ನಿಶ್ಚಯಿಸಿತು.

ತಾ ೧ ನೇ ದಿವಸ ಲೋಕಮಾನ್ಯರ ಛಾಯಾಚಿತ್ರದ ಮೆರವಣಿಗೆಯು ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಿಂದ ಬಹು ವಿಜೃಂಭಣೆಯಿಂದ ಹೊರಟು, ಊರ ಪ್ರದಕ್ಷಣೆ ಮಾಡಿ, ತಿರುಗಿ ಅಲ್ಲೇ ಬಂದು, ಲೋಕಮಾನ್ಯರ ಚರಿತ್ರದ ಮುಖ್ಯ ಸಾರವನ್ನು ಸ್ಮರಣೆ ಮಾಡಿ, ಸ್ವದೇಶಾಭಿಮಾನ, ಸ್ವರಾಜ್ಯದ ಧ್ಯೇಯಗಳಿಗನುಸರಿಸಿ, ಅವರ ಪುಣ್ಯತಿಥಿಯ ಶುಭ ದಿವಸ

ಳಿಂದ ಪರದೇಶಿ ವಸ್ತ್ರಗಳಿಗೆ ಬಹಿಷ್ಕಾರ ಹಾಕಬೇಕಾಗಿ ವಗೈರೆ ಬಹು ಬೋಧಪ್ರದ ಸಮಯೋಚಿತ ಭಾಷಣಗಳಾದವು. ಜನರಲ್ಲಿ ಅಪೂರ್ವ ಉತ್ಸಾಹ ಉಂಟಾಗಿತ್ತು. ಮೆರವಣಿಗೆಯು ಬರಬರುತ್ತ ಒಬ್ಬ ಜವಳಿ ದುಕಾನದಾರರು ಪರದೇಶಿ ಹಿಂಡು ವಂಚನೆಯನ್ನಾದರೂ ಸುಟ್ಟು ಅವರಮೇಲಣ ತಮ್ಮ ತಿರಸ್ಕಾರವನ್ನು ವ್ಯಕ್ತಮಾಡಿದರು.

ಇಲ್ಲಿಯ ವ್ಯಾಪಾರಸ್ಥರು ನಿನ್ನೆ ರಾತ್ರಿ ಒಟ್ಟುಗೂಡಿ ಸಪ್ಪಕ್ಕೆ ಮಣಕ್ಕೆ ರೂಪಾಯಿ ೮ ರಂತೆ ಮಾರಲ್ಪಡುವ ಸಕ್ಕರೆಯು ಇನ್ನು ಮುಂದೆ ರೂಪಾಯಿ ೧೧ ರ ಕಿಂತ ಕಡಿಮೆ ಕೊಡಲಾಗದೆಂದೂ ಕೊಟ್ಟರೆ ಹಿಂದಿನ ಕಾಲು ರೂಪಾಯಿ ದಂಡ ಹಿಡಕೊಟ್ಟವರಿಗೆ ರೂ - ಇನಾಮು ಕೊಡಬೇಕಾಗಿಯೂ, ಇನ್ನು ಮುಂದೆ ಸಕ್ಕರೆ ತರಿಸಬಾರದಾಗಿಯೂ ಕೂಡ ಠರಾವು ಮಾಡಿರುತ್ತಾರಂತೆ! ಇನು ಈಗಿನ ಚಳವಳಿಯ ದಿನಗಳಲ್ಲಿ "ಗಾಡಿಯ ಎತ್ತು ಹಿಂದೆ, ಗಾಡಿ ಮುಂದೆ" ಹಾಕಿದಂತಾಗಿದೆಂಬ ಲೋಕದ ನಾಣ್ಣುಡಿ ತಪ್ಪೇನು? ಪೆಟ್ಟಿಗೆ ಅವರಿಗೆ ನ ಹಾತ್ಕಾರ ತತ್ವವೇ ತಿಳಿದಿಲ್ಲ, ಸ್ಥಿರಪ್ರವೃತ್ತಿಯೇ ಇಲ್ಲವೆಂಬಂತಾಗಿದಲ್ಲವೆ.

ಈಗೀಗ ಚರಾಟ, ಕೈಮಗ್ಗ ಖಾದಿ ವಸ್ತ್ರ ದೇಶಿ ಅರಿವೆಗಳ ಮಾತುಗಳೇ ಹೆಚ್ಚಾಗಿ ಕೇಳುತ್ತಿದ್ದು ನೂಲು ತೆಗೆಯುವ ಚರಕಗಳ ಮತ್ತು ಮಗ್ಗಗಳ ಪ್ರಸಾರವು ಘಮಾಕಿ ಹಾರಾಟದಿಂದ ನಡೆದದೆ. ಈ ಬಗ್ಗೆ ಮ ದಪ್ಪಂ ಹತ್ತಿಯ ಗಟ್ಟಿದೀನ ತರಿಸಲ್ಪಟ್ಟಿದೆ. ವಗ್ಗ ಮತ್ತು ಕೈರಾಟಿಗಳ ಕಾರಖಾನೆಯಂತೂ ಹೇಳತಾಸಲ್ಲ. ಗಾಡಕರು, ಹೆಂಗಸರು, ಮಕ್ಕಳು ಸಹ ನೂಲು ತೆಗೆಯುವದನ್ನು ಕಲಿಯಲು ಉತ್ಸುಕರಾಗಿರುವರು. ಉತ್ಸುಕತೆಯು ಹೀಗೇ ಮುಂದರಿದರೆ, ಈ ಮಗ್ಗಗಳಮೇಲೆ ಬೇಕಾದಷ್ಟು ಖಾದಿ ವಸ್ತ್ರವನ್ನು ಪೂರೈಸಬಹುದು. ಇಷ್ಟಾದರೆ ಶುದ್ಧ ಸ್ವದೇಶೀ ವಸ್ತ್ರವೇ ಗಳಿಸಿದಂತಾಯಿತು.

ಕೇಂದ್ರ-ಶರಾಬು ಮಕ್ತೆದಾರರು ತಮ್ಮ ವಿಕ್ರಿ ಕಡಿಮೆಯಾಗುತ್ತ ಬಂದದ್ದರಿಂದ, ಅಬಕಾರಿ ಮತ್ತು ರೆವಿನ್ಯು ಅಧಿಕಾರಿಗಳಿಗೆ ತಾವು ಕಟ್ಟಿದ ಹಣ ಮರಳಿ ಕೊಡಿಸಬೇಕಾಗಿ ಅರ್ಜಿ ಮಾಡಿದರಂತೆ! ಅಷ್ಟಾದರೆ ಅವರು ಶುದ್ಧೈವಿಗನೇ ಸರಿ.

ಪಿಕೆಟಿಂಗ ಬಾರು ಮಾಡಬೇಕಾಗಿಯೂ ಸ್ವಯಂಸೇವಕರ ಪೂರೈಕೆ ಮಾಡುತ್ತೇವೆಂದಾಗಿಯೂ ಅಭಿವಚನ ಕೊಟ್ಟರೂ ಇನ್ನು ಯಾಕೆ ತಡ?

ಕಾರವಾರದಿಂದ ಡಾ। ಡೀ। ಕಲಕ್ತ್ರರಸಾಹೇಬರು ಮುಂದ್ವಾಯ ಬಂದು ಹೊನ್ನಾವರಕ್ಕೆ ಹೋಗಿ ತಿರುಗಿ ನಿನ್ನೆ ಇಲ್ಲಿ ಬಂದು ಈಹೊತ್ತು ಕರವಾರಕ್ಕೆ ಹೋದರು. ಈ ವರೆಗಾಲದಲ್ಲಿ ದುರ್ಬಲ ಜತ್ತಿವೆಲ್ಲಿ ತರಾತರಿ ಸರ್ಕಾರು ಮಾಡಿ ನಷ್ಟು ಪ ಹಸ್ತದ ಕೆಲಸ ವರ್ಣ ಇನವೆಂಬ ಮಾತು ತಿಳಿಯಲಿಲ್ಲ.

ಹೊನ್ನಾವರ— ತಾ ೩೦-೭-೩೧ ನೇ ದಿವಸ ಮಧ್ಯಾಹ್ನ ೪ ಘಂಟೆ ಸಮಯಕ್ಕೆ ಇಲ್ಲಿಯ ಸ್ತ್ರೀಯರ ಜಾಹೀರ ಸಭೆಯು ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಕೂಡಿ ಇಂದಿನಿಂದ ತಾವು ವಿಲಾಯತಿ ವಸ್ತ್ರ (ವಿಲಾಯತಿ ಸೂರಿ ಸೀರೆ) ಮತ್ತು ಕೈಬಳೆಗಳು ಉಪಯೋಗಿಸುವದಿಲ್ಲವೆಂತ ವ್ರತಧಾರಿಸಿದ್ದಲ್ಲದೆ ಅಂದಿನ ದಿವಸ ಪರದೇಶಿ ಕೈಬಳೆಗಳನ್ನು ತೆಗೆದು ದೇಶೀ ಕಾಚಿನ ಬಳೆಗಳನ್ನು ತೊಟ್ಟುಕೊಂಡರು. ಕೈರಾಟಿಯಿಂದ ನೂಲು ತೆಗೆವ ಕೆಲಸವು ಜೋರಿಯಿಂದ ನಡೆದದೆ.

ತಾ ೩೧-೭-೩೧ ನೇ ದಿವಸ ಮಧ್ಯಾಹ್ನ ೪ ನೆ ಟಗೆ ಶ್ರೀ ಪ್ರಶ್ನ ಹೋಲಿನಲ್ಲಿ .. ವಿದ್ಯಾರ್ಥಿ ... ಸಭೆಯು ಕೂಡಿತ್ತು. ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಯುತ ಅನಂತರಾವ ಬಸ್ರೂರ ಇವರು ಸ್ವೀಕರಿಸಬೇಕಾಗಿ ಯಾವತ್ತೂ ವಿದ್ಯಾರ್ಥಿಗಳು ಅನುಮೋದ ಕೊಟ್ಟಂತೆ ಅವರು ಸ್ವೀಕರಿಸಿದ ನಂತರ ಸಭೆ ಕೂಡಿಸುವ ಕಾರಣ ಮುಂದೆ ನಾವು ತ್ಯಾಗ ನಡಕೊಳ್ಳಬೇಕು. ಪರದೇಶೀ ವಸ್ತ್ರದ ಬಹಿಷ್ಕಾರ ಸ್ವದೇಶಿ ಆಚರಣೆ ವಗೈರೆಗಳ ಕುರಿತು ವಕ್ತರ ಸಮಯೋಚಿತ ಭಾಷಣಗಳಾದಮೇಲೆ ಸಭೆಯ ಕೆಲಸವು ಪೂರ್ಣವಾಯಿತು.

ಸ್ವದೇಶಿ ಪ್ರಚಾರ ಮತ್ತು ಆಚರಣೆ ಮಾಡುವ "ಸ್ವದೇಶಿ ಸಂಘ" ಸ್ಥಾಪಿಸಿ ಈ ಸಂಘದ ತರ್ಫೆಯಿಂದ ವಿದ್ಯಾರ್ಥಿಗಳ "ಸ್ವದೇಶೀ ಕೋಬುಪರೇಟಿವ್ಹ ಸ್ಟೋರ್ಸ" ತೆಗೆಯುವ ಬಗ್ಗೆ ಸೂಚನೆಯಾಗಿ ಸದರ ಸಂಘವನ್ನು ಸ್ಥಾಪಿಸುವ ಬಗ್ಗೆ ನಾಳೆ ರವಿವಾರಕ್ಕೆ ಸಭೆಯು ಕರೆಯುವದೆಂಬುದು ನಿರ್ಣಯವಾಯಿತು.

ತಾ ೩೧-೭-೩೧ ನೇ ದಿವಸ ಶ್ರೀ ಲೋಕಮಾನ್ಯ ಟಿಳಕರ ಪುಣ್ಯತಿಥಿ ಇದ್ದವರಿಂದ ಯಾವತ್ತೂ ಜನರು ಮಧ್ಯಾಹ್ನದ ನಂತರ ತಮ್ಮ ತಮ್ಮ ದುಕಾನ ಮತ್ತು ಉದ್ಯೋಗ ಬಂದ ಮಾಡಿ ೩ ಘಂಟೆಗೆ ಶ್ರೀ ವೆಂಕಟರಮಣ ದೇವಸ್ಥಾನದ ಹತ್ತರ ಕೂಡಬೇಕೆಂದು ಟವನ ಕ್ರಿಯರ ತಿಳಿಸಿದ ಪ್ರಕಾರ ಯಾವತ್ತು ನಾಗರೀಕ ಮತ್ತು ಬಹಳ ವ್ಯಾಪಾರಸ್ಥರ ಬಂದವರದ ವ್ಯಾಪಾರಸ್ಥರ ಸವೇರಿ ೩ ಘಂಟೆಗೆ ಶ್ರೀ ವೆಂಕಟರಮಣ ದೇವಸ್ಥಾನದಿಂದ ಶ್ರೀ ಲೋಕಮಾನ್ಯ ಟಿಳಕರ ಫೋಟೋ ಕುದುರೆ ಟಾಂಗೆಮೇಲೆ ಕುಳ್ಳಿರಿಸಿಕೊಂಡು ಮ। ಗಾಂಧಿ ಮಹಾರಾಜಕೀ ಜೈ, ಲೋ। ಟಿಳಕ ಮಹಾರಾಜಕೀ ಜೈ, ಹಿಂದು ಮುಸಲಮಾನಕೀ ಜೈ ಎಂತ ಜಯ ಜಯಕಾರ ಮತ್ತು ರಾಷ್ಟ್ರಗೀತಪೊಡನೆ ಹೊರಟು ಪೇಟೆ ರವಳಿಗೆಯು ಬಜಾರದಿಂದ ಬಂದರ ದ ಗಾರ್ಕೇರಿ ಮಾರ್ಗವಾಗಿ ಟವನ ಹೋಲಿನಲ್ಲಿ ಬಂದು ಅಲ್ಲಿ ಶ್ರೀ ಲೋ। ಟಿಳಕರ ಫೋಟೋ ಉಚ್ಚ ಸ್ಥಾನದಲ್ಲಿ ಕುಳ್ಳಿರಿಸಿ ಎಡಬಲದಲ್ಲಿ 'स्वराज्य माझा जन्म सिद्ध हक्क आहे' ಎಂತ ದೊಡ್ಡ ಅಕ್ಷರದಿಂದ ಬರೆದ ಪತಾಕೆಗಳನ್ನಿಟ್ಟು ಅಲ್ಲಿ ಮಹಾ ಸಭೆ ಕೂಡಿತು. ರಾಷ್ಟ್ರಗೀತ ಹಾಡಿದ ನಂತರ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀಯುತ ಕರ್ಕಿಯವರು ಸ್ವೀಕರಿಸಬೇಕಾಗಿ ಅನುಮೋದನೆ ಕೊಟ್ಟಂತೆ ಅವರು ಅಧ್ಯಕ್ಷಸ್ಥಾನಕ್ಕೆ ವಿರಾಜಮಾನರಾದರು. ಅಧ್ಯಕ್ಷರು ಕೈ। ಲೋ। ಟಿಳಕರ ಬಗ್ಗೆ ಸ್ಮರಣೆಯು ನಾವು ಮಾಡತಕ್ಕ ಕರ್ತವ್ಯ, ಸ್ವದೇಶೀ ವ್ರತ ಪರದೇಶೀ ವಸ್ತ್ರಾಲು ಬಿಡವರಿಗೆ ದಾನ ಮಾಡುವದು ಅಥವಾ ಸುಡುವದು. ಮದ್ಯಪಾನ ಮತ್ತು ವಿಲಾಯತಿ ಸಕ್ಕರೆ ನಿಷೇಧ ವಗೈರೆದರವೇಲೆ ಶ್ರೀಯುತ ಬಸ್ರೂರ, ಬಳಕೂರ, ನಾಡಕರ್ಣಿ ರಾಮಪ್ಪ ಮೊದಲಾದ ವಕ್ತರ ಸ್ವದೇಶೀ ಆಚರಣೆ ಕೈರಾಟಿಗಳು ಪ್ರಚಾರ ವಗೈರೆದರವೇಲೆ ಬೋಧಪ್ರದ ಭಾಷಣಗಳಾದವು. ಮತ್ತು ಇಂದಿನಿಂದ ಪ್ರತಿಯೊಬ್ಬ ಗಂಡಸ ರಾಡುಗೆ ಮತ್ತು ಭಗಿನಿಯರು ಸಹ ಸ್ವದೇಶೀ ಬಟ್ಟೆಯನ್ನೇ ತೊಟ್ಟುಕೊಳ್ಳಬೇಕು. ಮತ್ತು ಪರದೇಶಿ ವಸ್ತ್ರವನ್ನು ಅನುಕೂಲವಿದ್ದವರ ಸುಟ್ಟುಬಿಡಬೇಕು. ಬಾಕಿಯವರು ಬಡವರಿಗೆ ಕೊಡಬೇಕು. ಪ್ರಥಮ ಮನೆಯಲ್ಲಿ ಹೊಲಸು ಕೆಲಸಕ್ಕೆ ಉಪಯೋಗಿಸಬೇಕು ಎಂಬುದರ ಬಗ್ಗೆ ಸೂಚನೆ ಬಂದ ಕೂಡಲೇ ಜನರು ತಮ್ಮ ತಮ್ಮ ಮೈಮೇಲಿನ ಪರದೇಶೀ ವಸ್ತ್ರ ಟೊಪ್ಪಿಗೆ ತೆಗೆದು ಬಗೆದರು. ಸಭೆ ವಿಸರ್ಜನೆಯಾದ ಬಳಿಕ, ಅವರು ಒಯ್ಯಿಂದ ತೆಗೆದು ಕೊಟ್ಟ ವಸ್ತ್ರ ಮತ್ತು ಟೊಪ್ಪಿಗೆಗಳನ್ನು ಸುಟ್ಟು ಹೋಳಿ ಮಾಡಿದರು. ಸಭೆಗೆ ೧ ಸಾವಿರ ಜನಸಮುದಾಯ ಕೂಡಿತ್ತು. ಸಭೆಯ ಅಧ್ಯಕ್ಷರು ಪೂರಾ ದೇಶಿ ಖಾದಿ ವಸ್ತ್ರ ಮತ್ತು ಟೊಪ್ಪಿಗೆ ಧರಿಸಿದಂತೆ, ಇತರ ಮುಖಂಡರೂ ನಾಗರಿಕರೂ ಸಹ ಬಿಳೇ ಗಾಂಧಿ ಟೊಪ್ಪಿಗೆಯನ್ನೇ ಧರಿಸಿದ್ದರು. ಇಷ್ಟು ದಿವಸ ಕೂಡಿದ ಸಭೆಯ ಕ್ಕಿಂತ ಇದೇ ಸಭೆಗೆ ಹೆಚ್ಚು ಜನರ ಕೂಡಿ ಸಭೆಯ ಕೆಲಸವು ನಿರ್ವಿಘ್ನದಿಂದ ನೆರವೇರಿತು.

ನಾಳೆ ಇಲ್ಲಿ ಒಂದು ರಾಷ್ಟ್ರೀಯ ಶಾಲೆ ಮತ್ತು ಲಾಲಾ ಕೇಸ ... ಸ್ಥಾಪಿಸಬೇಕೆಂದು ಠರಾವು ಆದ್ದರಿಂದ ನಾಳೆ ಯುಧವಾರದಿಂದ ಮುಷ್ಟಿಫಂಡು ಎತ್ತುವದು ನಿಶ್ಚಯವಾಯಿತು. ಮತ್ತು ಕೈಮಗ್ಗದ ಕಾರಖಾನೆ ಇಡುವದಕ್ಕೆ ಮುನಿಸಿಪಾಲಿಟಿ ಹದ್ದಿನೊಳಗಿದ್ದ ಬೋಗ ಮಂದ ಜಾಗವು ಕೊಡಿಸಬೇಕೆಂದು ನಾಗರೀಕರು ಮುನಿಸಿಪಾಲಿಟಿ ತರ್ಫೆಯಿಂದ ಕೇಳಿದಕ್ಕೆ ಕಲೆಕ್ಟರ ಸಾಹೇಬರು ಸಮ್ಮತಿಸಲಿಲ್ಲವೆಂತ ವದಂತಿ ಇದೆ. ಮು। ಹದ್ದಿನೊಳಗಿದ್ದ ಜಾಗಾ ಲೋಕಕಲ್ಯಾಣಕ್ಕಾಗಿ ಸಾರ್ವಜನಿಕ ಕೆಲಸಕ್ಕೆ ದೊರಕಿಸುವರೆ ಈ ಮುನಿಸಿಪಾಲಿಟಿಯಿಂದ ಸಾಧ್ಯವಾಗುವದಿಲ್ಲವೋ ಅಂಥಾ ಮುನಿಸಿಪಾಲಿಟಿಯಿಂದ ಮತ್ಯಾವ ಕಾರ್ಯ ಸಾಧಿಸುತು? ಮತ್ತು ಆ ಮುನಿಸಿಪಾಲಿಟಿ ಯಾವ ಕೆಲಸಕ್ಕೆ? ಸದರ ಜಾಗಾ ಸಿಗುವ ತನಕ ನಾವು ಮುನಿಸಿಪಾಲಿಟಿಗೆ ಕೊಡುವ ತೆರಿಗೆ ತಡಕೊಂಡು ಇಡುವದು. ಮತ್ತು ನಾಳಿನ ರವಿವಾರ ಇದರ ಬಗ್ಗೆ ಆಲೋಚಿಸಲು ಸಭೆ ಕೂಡಿಸುವದೆಂತ ನಿರ್ಣಯವಾಯಿತು.

೪. ಊರಿದ್ದಲ್ಲಿ ಮಸ್ತಾರವಾಡೆ ಎಂಬುದೊಂದು ಗಾದೆಮಾತಿದೆ. ದೇಸಾಯಿಯವರಿಗೆ ಅಡವಿಯ ಕಾರಭಾರದಿಂದ ಅಸಹ್ಯವಾದ ಅನಾಠ ಕಷ್ಟಗಳಾಗುತ್ತವೆಂದು ಹೊಸಹೊಸದಲ್ಲಿ ಕಂಡುಬರುತ್ತಿದೆ. ಆಂಧ್ರ ಪ್ರಾಂತದ ಗಂಟೂರ ಜಿಲ್ಲೆಯ ಪಾಲನಾಡ ತಾಲೂಕಿನಲ್ಲಿ ಕಾಡಿನ ಕಟ್ಟಳೆಗಳಿಂದ ಜಟ್ಟಿ-ಶಿಕ್ಷಗಳ ಯಾತನೆಗಳನ್ನು ಸಹಿಸಿ, ಕಟ್ಟಕಡೆಗೆ ತಾಳಲಾರದೆ, ರೈತರೆಲ್ಲರೂ ಸಾಮಾಜಿಕ ಬಹಿಷ್ಕಾರವನ್ನು ಕೈಕೊಂಡು ಜಂಗಲ ಅಧಿಕಾರಿಗಳಿಗೆ ಕಷ್ಟಮಾಡಿದರು. ಪರಿಸ್ಥಿತಿಯು ಇಷ್ಟು ವಿಕೋಪಕ್ಕೆ ಯಾಕೆ ಮುಟ್ಟಿದೆಂದು ನೋಡಲಿಕ್ಕೂ, ತಕ್ಕ ಉಪಾಯಗಳನ್ನು ಸೂಚಿಸಲಿಕ್ಕೂ, ಗಂಟೂರ ಜಿಲ್ಲಾ ಕೊಂಗ್ರೆಸ ಕಮಿಟಿಯು ತನ್ನ ಅಧ್ಯಕ್ಷರಾದ ಶ್ರೀ॥ ಲಕ್ಷ್ಮೀನಾರಾಯಣರವರನ್ನೂ, ಮತ್ತೊಬ್ಬ ವಕೀಲ ಶ್ರೀ॥ ನರಸಿಂಹಾಚಾರ್ಯರನ್ನೂ, ಪಾಲನಾಡಿಗೆ ಕಳುಹಿಸಿತು. ಅವರು ಹಳ್ಳಿಹಳ್ಳಿಗೆ ಹೋಗಿ ಸಭೆಗೂಡಿಸಿ ಜನರ ತಕ್ರಾರಿಗಳ ಚವಕಶಿಯನ್ನು ನಡಿಸುತ್ತಿರುವಾಗ ಅಲ್ಲಿಯ ಕಲೆಕ್ಟರರೂ, ಕನ್ಸರವೇಟರರೂ, ಪೋಲಿಸ-ಸುಪರಿಂಟೆಂಡೆಂಟರೂ ಅಲ್ಲಿಗೆ ಬಂದು ಠಾಣೆ ಹಾಕಿದರು. ಕಲೆಕ್ಟರರ ಹೇಳಿಕೆಯಂತೆ ಶ್ರೀ॥ ಲಕ್ಷ್ಮೀನಾರಾಯಣರವರು ಅವರಿಗೆ ಭೆಟ್ಟಿಯಾಗಿ ವಸ್ತುಸ್ಥಿತಿಯನ್ನು ಅವರ ಮುಂದಿಟ್ಟು ಜಂಗಲ ಕಾರಭಾರದ ವಿಷಯವಾಗಿ ಕೆಲವು ಸೂಚನೆಗಳನ್ನು ಮಾಡಲು, ಕಲೆಕ್ಟರರೇನೂ ಒಪ್ಪದೆ, ಬಹಿ

ಷ್ಕಾರವನ್ನು ತೆಗಿಯರೆಂದು ಹೇಳಿದರ ಶ್ರೀ | ಲಕ್ಷ್ಮೀ ನಾರಾಯಣರವರು ಜಂಗಲು ನಿರ್ಬಂಧಗಳು ದೂರವಾಗುವವರೆಗೆ ಕಟ್ಟು ಮುರಿಯುವದು ಸಾಧ್ಯವಿಲ್ಲೆಂದು ತಿಳಿಸಿದರು. ಇಷ್ಟಾದರೂ ೧೮ ನೇ ಕಲಮಿನ ಜಾಮೀನಕಿಯು ಮುದರ್ಶನ ಪತ್ರವು ಶ್ರೀ| ಲಕ್ಷ್ಮೀನಾರಾಯಣಯ್ಯ ಮ ಶ್ರೀ| ನರಸಿಂಹಾಚಾರ್ಯ ಇವರ ಮೇಲೆ ಬಿದ್ದಿತ್ತು. ಅವರ ಜಾಮೀನ ಕೊಡದಿದ್ದ ಕಾರಣ ಅವರಿಗೆ ಒಂದು ವರ್ಷದ ಕಠಿಣ ಶಿಕ್ಷೆಯಾಯಿತು. ಕೈಯುಡಾಯಿಯಿಂದ ಜೇಲಿಗೆ ಅವರನ್ನು ಒಯ್ಯುವಾಗ ಜನರು ದೊಡ್ಡ ಮೆರವಣಿಗೆಯನ್ನು ತೆಗೆದು ಅವರ ಸತ್ಕರಿಸಿದರು. ಗಾಂಧಿ ಇದ್ದ ಸಮಕ್ಷ ಶ್ರೀ| ಲಕ್ಷ್ಮೀನಾರಾಯಣರವರ ಸಹಧರ್ಮಚಾರಿಣಿಯು ತಂದಿರಿಗೆ ಭೆಟ್ಟಿಯಾಗಿ ಅವರಿಗೆ ಹೂಮಾಲೆಯನ್ನು ಹಾಕಿದಳು. ಪತ್ರದ ದೇಶಸೇವಕರಾಗಿ ದೇಶಸೇವೆಯನ್ನು ನಡಿಸುವ ಶ್ರೀಯುತರ ಅಕ್ಷರಗಳನ್ನು ವಡೆದರು. ಊರೊಳಗೆಲ್ಲ ೨ ದಿವಸ ಹರತಾಳ ಆಚರಿಸಲ್ಪಟ್ಟಿತು. ಅವರ ಮನೆ ಬಾಗಿಲಿಯನ್ನು ಬಿಟ್ಟರ ಹೀಗೆಲ್ಲ ಪ್ರಕಾಶಿಯ ಮನ ದೆಯೂ ಅವರೊಬ್ಬರೇ ಪಬ್ಲಿಕ್ ಪ್ರಾಸಿಕ್ಯೂಟರರು ಸ್ಟಾನ್ಲಿ ಗಾಲೂರಿನಲ್ಲಿ ಹಬ್ಬಿದೆ. ಇದಕ್ಕೆಲ್ಲ ಕಾರಣವು ಪಾಲನಾತನ ಕಾಡಿನ ಕಾರಭಾರವು. ಇದಕ್ಕಾಗಿ ಬೆಟ್ಟಗಳಿದ್ದ ಮಾತ್ರ ಬೆಟ್ಟಗಳಿಗೆ ಹಿಡಿದಿದ್ದರೆ? ಎಂಬದೊಂದೆ ಸಂಗತಿಯನ್ನು ಲಕ್ಷ್ಯಾರಿಗಳೆ ವಿಚಾರಿಸಿದ್ದರೆ ಇದೆಲ್ಲ ಅನರ್ಥ ಮರೆಯದೆ ಹಿಡಿಸು ತ್ತಿತ್ತೆ? ಆಂಧ್ರ ಪ್ರಾಂತವು ಈಗ ಎಚ್ಚರವಾಗಿದೆ. ಮತ್ತಾಳಿಕೆಯಿಂದ ಅದು ಹಿಮ್ಮೆಟ್ಟದು.

ಪ್ರಸಿದ್ಧ ಕ್ರಿಕೆಟ (ಚಂಡು ಆಟ) ಪಟುಗಳಾದ ದಾ| ವಿಠ್ಠಲರಾವ ಕಂಟಕರವರು ಮುಂಬಯಿಯಲ್ಲಿ ವಿಷಮ ಜ್ವರದಿಂದ ತೀರಿಹೋದ ಪ್ರಾಯದಲ್ಲಿ ನಿಧನಹೊಂದಿದರೆಂದು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಕಾನಡಿಗರೊಳಗೆ ಬುದ್ಧಿಶಕ್ತಿಯಿಂದ ಖ್ಯಾತಿ ಹೊಂದಿದ ಮನುಷ್ಯರಿದ್ದಾರೆ. ಆದರೆ ಕ್ರೀಡಾಂಗಣದಲ್ಲಿ ಹೆಸರು ಹೊಂದಿದವರು ವಿರಳರಿದ್ದಾರೆ. ಕ್ರಿಕೆಟದಂಥ ವಿಖ್ಯಾತ ಆಟದಲ್ಲಿ ಪ್ರಾವೀಣ್ಯವನ್ನು ಸಂಪಾದಿಸಿ, ಹಿಂದು ಆಟಗಾರರಲ್ಲಿ ಮೊದಲನೇ ದರ್ಜೆಯವರೊಳಗೆ ಪದವಿಯನ್ನು ಹೊಂದುವದು ಅಸಾಮಾನ್ಯವಾದ ಕೀರ್ತಿಯಾಗಿರುವದು. ಅಂಥ ಕೀರ್ತಿಯನ್ನು ಶ್ರೀ| ಕಂಟಕರವರು ಪಡೆದು, ಹಿಂದು ಕ್ರಿಕೆಟ ಆಟಕ್ಕೆ ಭೂಷಣಭೂತರಾಗಿದ್ದರು. ಅವರ ಕೀರ್ತಿಯು ಕಾನಡಿಗರಿಗೂ ಭೂಷಣವಾಗಿತ್ತು. ಅನೇಕ ಆಟಗಳಲ್ಲಿ ಅವರು ತಮ್ಮ ಕ್ರೀಡಾಕೌಶಲ್ಯವನ್ನು ತೋರಿಸಿ ಇಂಗ್ರಜ ಪಾರಸಿ, ಮುಸಲ್ಮಾನ, ಮುಂತಾದ ಪ್ರತಿಸ್ಪರ್ಧಿಗಳಿಗೆ ಬಹಳಾವರ್ತಿ ಆಶ್ಚರ್ಯಗೊಳಿಸಿದ್ದರು. ಇಂಥ ಅಸಾಮಾನ್ಯ ನಿಪುಣತೆಯ ಆಟಗಾರರು ಯೌವನದಲ್ಲೇ ನಿಧನಹೊಂದಿದ್ದು ಹಿಂದು ಕ್ರಿಕೆಟದ ಮಹದ್ದುರ್ದೈವವು. ಇದರಿಂದ ಆದ ಹಾನಿಯು ಬೇಗ ತುಂಬಿಬರಲಾರದು. ಅವರ ಆಕಸ್ಮಿಕ ಮರಣದಿಂದ ಹಿಂದು ಸಮಾಜಕ್ಕೆ, ಅನೇಕ ಆಪ್ತಮಿತ್ರರಿಗೆ ಹೇಳಲಿಕ್ಕಾಗದಷ್ಟು ದುಃಖವಾಗಿದೆ. ಅವರ ಚಿಕ್ಕ ವತ್ನಿಯು ನಾಲ್ಕಾರು ತಿಂಗಳ ಕೂಸು ಮರಿದುಬಿದ್ದಂತಾಗಿದೆ. ಈಶ್ವರೇಚ್ಛೆಗೆ ಮಾನವರ ಉಪಾಯವೇನು? ಇವರ ಸಂಸಾರದ ಈ ಅಸಹ್ಯ ದುಃಖದ ಕಾಲದಲ್ಲಿ ಅವರಿದ್ದಾರೆಂದು ತಿಳಿದ, ಎಲ್ಲರೂ ಸಂತಾಪ

ಮಾಡಿಕೊಳ್ಳುವರು. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಬೇಡುವೆವು.

ಈ ಪತ್ರದ ಕಳೆದ ಫೇಬ್ರುವರಿ ತಿಂಗಳ ೧೦ ನೇಯ ಸಂಚಿಕೆಯ ಪಾನು 6 B ದರಲ್ಲಿ ಶಿರ್ಸಿಯ ಮುನ್ಸಿಪಲ ನೌಕರರಾದ ಇಬ್ಬರು ಭಂಗಿಯರಿಗೆ ಅಲ್ಲಿಯ ಪೋಲೀಸ ಸಬ ಇನಸ್ಪೆಕ್ಟರ ಮಿ| ಕುಲಕರ್ಣಿಯವರು ಪೆಟ್ಟಿನಿಂದ ಹೊಡೆದರೆಂಬ ವರ್ತಿಯು ಸುದ್ದಿಯು ಪ್ರಸಿದ್ಧವಾಗಿತ್ತು. ಅದರ ಮೆಜಿಸ್ತ್ರೇಟ ಕೋರ್ಟಿನಲ್ಲಿ ಆ ಭಂಗಿಯವರು ಮೊಕದ್ದಮೆ ಮಾಡಿದ ಫಿರ್ಯಾದಿಯಲ್ಲಿ ಪೋಲೀಸ ಸಬ ಇನಸ್ಪೆಕ್ಟರರು ನಿರ್ದೋಷಿಗಳಾಗಿದ್ದಾರೆಂದು ನಿರ್ಣಯವಾದ ಮೂಲಕ, ಸದರಿ ಬಾತ್ಮಿಯು ಪ್ರಮಾಣಿಕ ಹೇತುವಿನಿಂದ ಪ್ರಕಟಿಸಲ್ಪಟ್ಟರೂ ಅದು ಈಗ ನಿರಾಧಾರವವೆಂದು ನ್ಯಾಯಕೋರ್ಟಿನಲ್ಲಿ ಸಿದ್ಧವಾಗಿರುವದರಿಂದ, ಅದನ್ನು ಪ್ರಕಟಪಡಿಸಿದ ಬಗ್ಗೆ ನಾವು ವ್ಯಸನಪಡುತ್ತೇವೆ. ಪೋಲೀಸ ಸಬ ಇನಸ್ಪೆಕ್ಟರರು ನಿರ್ದೋಷಿಯಾಗಿದ್ದಾರೆಂದು ನಾವು ಮೊದಲೇ ಜಾಹೀರಮಾಡಿದ್ದು ಅವರ ಬಗ್ಗೆ ವ್ಯಕ್ತಿಶಃ ದ್ವೇಷ ಇಲ್ಲವೆ ಮತ್ಸರ ಬುದ್ಧಿಯಿಂದ ನಾವು ಈ ಪ್ರಕರಣದ ಸುದ್ದಿಯನ್ನು ಎಂದೂ ಪ್ರಕಟಿಸಲಿಲ್ಲವಾದ ಮೂಲಕ ನಿರ್ದೋಷಿಯಾದಬಗ್ಗೆ ಈಗ ಮತ್ತೊಮ್ಮೆ ಅವರಿಗೆ ಆನಂದದಿಂದ ಅಭಿನಂದಿಸುತ್ತೇವೆ.

ಕುಮಟಾ ತಾ ೧೬-೮-೨೧	ಕೃಷ್ಣರಾವ ಕೇಶವ ಶೇಣವಿ ಸಂಪಾದಕ ಮತ್ತು ಪ್ರಕಾಶಕ

ಅಹಮ್ಮದಾಬಾದ ಕಾಂಗ್ರೆಸು.

ಅಹಮ್ಮದಾಬಾದ ಸ್ವಾಗತ ಕಮಿಟಿಯ ಸಭೆಯು ಕಳೆದ ೧೫ ನೇ ತಾರೀಖಿಗೆ ನೆರೆದು, ಬಂಗಾಲದ ಸುಪ್ರಸಿದ್ಧ ದೇಶಭಕ್ತ ಚಿತ್ತರಂಜನದಾಸ ಇವರಿಗೆ ಎಲ್ಲ ಪ್ರಾಂತಗಳ ಏಕಮತದಿಂದ ಸೂಚಿಸಿದ್ದರಿಂದ, ಅವರನ್ನೇ ಅಧ್ಯಕ್ಷರನ್ನಾಗಿ ಚುನಾಯಿಸಿತು.

ಶ್ರೀಯುತ ವಿಠ್ಠಲಭಾಯಿ ಪಟೇಲ ಇವರಿಗೆ ಸ್ವಾಗತ ಕಮಿಟಿಯ ಚೇರಮನ್ನಾಗಿ ನೇಮಿಸಲ್ಪಟ್ಟರು.

ಕಾಂಗ್ರೆಸು ಮಂಡಪ, ಪ್ರದರ್ಶನ ವಗೈರೆಗಾಗಿ ತಯಾರಿಯು ಜೋರಿನಿಂದ ನಡೆದದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಇಷ್ಟರಿಂದಿಗೆ ಮಳೆಯು ೯೩ ಅಂಗುಲ ಬಿಂತು ಆಯಿತು. ಬೆಳೆಯ ಸ್ಥಿತಿಯು ನೆಟ್ಟಗಿದೆ. ಜ್ವರ, ಸನ್ನಿಪಾತ ಮುಂತಾದ ಹಲವು ರೋಗಗಳು ಇದ್ದವಾಗೆ ಅವೆ.

ಇಲ್ಲಿಯ ದನಗಳ ದವಾಖಾನೆಯು ಚಿತ್ರಿಗಿ ದರ್ವಾಜಾ ಲಿಯಿಂದ ಜುಬಿಲಿ ಧರ್ಮಶಾಲೆಯಲ್ಲಿ ತಂದಿರ ತ್ತದೆ.

ಈ ಶಹರದ ದನಗಳ ಬಗ್ಗೆ ಬೆಟ್ಟ ಗೋಚರವು ಬಿಟ್ಟು ಅವುಗಳ ಸಂಖೆಯ ಪ್ರಮಾಣಕ್ಕೆ ಕಡಿಮೆ ಎಂದು ಕೂಗುತ್ತಿರುವಾಗ, ನಮ್ಮಲ್ಲಿಯ ಕೇಶರಿ ಪ್ರಯೋಗ ಶಾಲೆಗೆ ೧೦೦ ೨೦೦ ಎಕರೆ ಬೆಟ್ಟವು ದಿಸಫೋರೆಸ್ಟ ಮಾಡಿಕೊಡಲ್ಪಟ್ಟದೆಂದು ತಿಳಿಯುತ್ತದೆ! ಅಂತು ಇಂತು ಇವರಿಂದ ತಮಗೆ ಏನು ಬೇಕು ಏನು ಬೇಡವೆಂದು ಹೇಳಲರಿಯದ ದನಗಳ ಬಾಯಿಯಲ್ಲಿ ಬರೇ ಮಣ್ಣು ಹಾಕಿದಂತಾಗಿದೆ!

ಇಲ್ಲಿಯ ಕಸಬು ಕೆಂಪಿ-ಕಡಾಟಿ ಅಂಗಡಿಗಳ ಎದುರಿನಲ್ಲಿ ೩-೪ ದಿವಸಗಳಿಂದ ಪಿಕೆಟಿಂಗ ಚಾಲು ಆದದ್ದು ಆನಂದಕರವು. ಅಳವೆಕೋಡಿ ಕೆಂಪಿ-ಕಡೆಯ ದುಕಾನಕ್ಕೆ ಬರುವ ಗಾಬಿತ ಹರಿಕಂತ್ರ ಮತ್ತು ಮುಕ್ರಿ ಜನರು ಮದ್ಯಪಾನವನ್ನು ಮಾಡಬಾರದಾಗಿ ನಿರ್ಧಾರದ ಪ್ರತಿಜ್ಞೆ ಮಾಡಿರುವರಂತೆ! ಒಟ್ಟಿಗೆ ಮಕ್ತೆದಾರರ ಕನಿಕರ ಸ್ಥಿತಿಯು!! ಈಗ ಅವರಮೇಲೆ ಮಾ-ಬಾಪ ಸರಕಾರವು ಒಲಿಯಬೇಕು, ಮುನಿದರೆ ಅವರ ದುಃಸ್ಥಿತಿಗೆ ಪಾರಾವಾರವಿಲ್ಲ.

ಕುಮಟಾ-ಹೊನ್ನಾವರ ಟಾಂಗೆಗಳ ನಡಿಸೋಣವು ದಿನೇ ದಿನೇ ಪ್ರವಾಸಿಕರಿಗೆ ತೀರ ಅಸಹ್ಯವಾಗಿದೆ' ಅಕ್ಷರಶ್ಯ ವಾಗಿದೆ!' ಪ್ರತಿ ದಿನವೆಂಬಂತೆ, ಗಾಡಿಗಳು ಮರಿದು ಪ್ರಯಾಣಸ್ಥರಿಗೆ ಗಾಯಪಡಿಸಿಯಾದ ಸುದ್ದಿ ಕುದುರೆಗಳು ನಡಿಯದ ಸುದ್ದಿ ಬರಹತ್ತಿವೆ. ಡಿ ಪೋ| ಸುಪರಿಂಟೆಂಡೆಂಟ ಸಾಹೇಬರು ಏನು ತಪಾಸ ಮಾಡಿದರು, ಅವರಿಗೇ ಗೊತ್ತು. ಇಂಥ ತಪಾಸಿನ ಫಾರ್ಸ ಮಾಡುವದರಿಂದ, ಜನತೆಯ ಹಿತವು ಎಳ್ಳಷ್ಟು ಸಾಧ್ಯವಾಗದಿದ್ದರೆ ಆ ಕ್ಷೋಭೆಯು ಟಾಂಗೆ ಕಂಪನಿಯಕಿಂತ ಈ ಅಧಿಕಾರಿಗಳಿಗೇ ವಿಶೇಷ ತಟ್ಟುವದೆಂದು ಲೋಕಮತವಾಗಿದೆ.

ನಾಳೆ ಬರುವ ೨೧ ನೇ ತಾರೀಕಿನ ಈ ಜಿಲ್ಲೆಯ ತಾಲೂಕ ಕಾಂಗ್ರೆಸಕಮಿಟಿಗಳಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಇಲ್ಲಿಗೆ ಸಭೆಸೇರಿ, ಮೊದಲಿನ ತಾತ್ಪೂರ್ತಿಕ ಜಿಲ್ಲಾ ಕಮಿಟಿಯ ಕಾರ್ಯಕಾರಿ ಮಂಡಳದ ಬದಲಿಗೆ ಹೊಸಬರನ್ನು ನೇಮಿಸುವವರಿದ್ದಾರೆ.

ಕಾರವಾರ— ಇಲ್ಲಿಯ ವಿಶ್ವಕರ್ಮಸಮಾಜದ ವಾರ್ಷಿಕ ಬಹುಮಾನ ಸಮಾರಂಭವು ಕೆಲವು ದಿವಸಗಳ ಹಿಂದೆ ಜರುಗಿತು. ಆ ಸಮಯದಲ್ಲಿ ಇಲ್ಲಿಯ ಧುರೀಣ ಶಿರೋಮಣಿಗಳೊಬ್ಬರು ಬೇರೊಬ್ಬ ಸರಕಾರೀ ಅಧಿಕಾರಸ್ಥರ ದಿಟ್ಟಿಯಲ್ಲಿ ಈ ಶಹರಿನಲ್ಲಿ ಪಿಕೆಟಿಂಗದ ಗಡಬಡಿಯು ವಿಶೇಷ ಇಲ್ಲೆಂಬ ಬಗ್ಗೆ ತಮ್ಮ ಆನಂದವನ್ನು ವ್ಯಕ್ತಗೊಳಿಸಿದರಂತೆ! ಸ್ತುತ್ಯ ಸಂತೋಷ!! ಇಲ್ಲಿ ಉತ್ಸಾಹೀ ತರುಣ ಸ್ವಯಂಸೇವಕರು ಸಾಕಷ್ಟು ಇಲ್ಲೆಂಬದರಿಂದ ಪಿಕೆಟಿಂಗದ ಚಲವಲವು ಜೋರಿನಿಂದ ನಡೆಯಲಿಕ್ಕೆ ಆಸ್ಪದವಿಲ್ಲೆಂದು ಸಾರ್ವಜನಿಕ ಹಿತ ಬಯಸುವವರೆಲ್ಲರು ಮರುಗುತ್ತಿರುವರು. ಇವರಿಗೆ ಅದರಿಂದಲೇ ಆನಂದ! ಇಲ್ಲಿ ಪಿಕೆಟಿಂಗದ ಚಲವಲವು ಜೋರಿನಿಂದ ನಡೆದಿರುತ್ತಿದ್ದರೆ ಇವರಿಗೆ ಈಗ ಮುಪ್ಪಿನಕಾಲದಲ್ಲಿ ನಿದ್ರೆ ಬೀಳುತ್ತಿತ್ತೋ ಇಲ್ಲವೋ ದೇವರೇ ಬಲ್ಲ!!

ಇಲ್ಲಿಯ ತಾಲೂಕಾ ಕಾಂಗ್ರೆಸ ಕಮಿಟಿಯ ಸಾಧಾರಣ ಸಭೆಯು ರವಿವಾರ ತಾ ೧೪ ನೇ ದಿವಸ ಕೂಡಿ, ಹೊಸ ಮೆನೇಜಿಂಗ ಕಮಿಟಿಯು ನೇಮಕವಾಯಿತು. ಹಾಗೂ ಈ ಕೆಳಗೆ ಕಾಣಿಸಿದ ೧೩ ಜನರು ಜಿಲ್ಲಾ ಕಮಿಟಿಯ ಸಭಾಸದರಾಗಿ ಆರಿಸಲ್ಪಟ್ಟಿರು —

ಶ್ರೀಯುತ ಮಂಗೇಶರಾವ ರಾಮಕೃಷ್ಣ ತೇಲಂಗ, ಹರಿ ಬಾಬು ಕಾಮತ, ಗೋವಿಂದ ಮಾಧವ ಶೇಣವಿ ಸುಂಕೇರಿ, ವೆಂಕಟರಾವ ರಾಮಚಂದ್ರ ಹಳದೀಪೂರಕರ, ಮಾಧವ ಮಂಜುನಾಥ ಕಾನಡೆ, ಕೃಷ್ಣರಾವ ರಾಮಚಂದ್ರ ಹಳದೀಪೂರಕರ, ಮಹಾಬಲೇಶ್ವರ ದತ್ತಾತ್ರಯ ನಾತಕರ್ಣಿ, ಸಯ್ಯದ ಆದಮ, ಕಾರವಾರ, ಶಂಕರ ವಿನಾಯಕ ದೇಸಾಯಿ, ಹಳಗೆ, ಕಾಂತಾರಾಮರಾವ ಕುಳಕರ್ಣಿ ಪತ್ತಾ ಸುಬ್ಬ ನ್ಯಾಕ ಪದಮಾ ಪುರುಷೋತ್ತಮ ಕೀಟ, ಸಯ್ಯದ ಹೈದರ ಸಯ್ಯದ ಇಸೂಫ, ಕಿನ್ನರ.

ಇಲ್ಲಿಯ ಮ್ಯುನಸಿಪಲ ಅಧಿಕಾರಸ್ಥರು ಜವಳಿ ಅಂಗಡಿಯಿಂದ ಶೀರೆಗಳನ್ನು ಜಪ್ತ ಮಾಡಿ ತೆಗೆದುಕೊಂಡು ಹೋದ ಬಗ್ಗೆ ನಡೆದ ಖಟ್ಲೆಯಲ್ಲಿ ಮ್ಯುನಸಿಪಾಲಿಟಿಯಿಂದ ವಕೀಲರನ್ನು ಕೊಡಿಸಬೇಕೋ ಏನೆಂಬ ಬಗ್ಗೆ ಮೆಂಬರ ಜನರ ಮತಗಳನ್ನು ನೋಟಿಸ ದ್ವಾರಾ ತೆಗೆದ ಕೊಳ್ಳುವ ಫಾರ್ಸ, ಏನೋ ಒಂದು ಆದಂತೆ ಮಾಡಿ ವಕಾಲತ ಪತ್ರವು ಪ್ರಸಿದ್ಧರಾ| ಚೆಂದಾವರಕರ ಮಹಾಶಯರಿಗೇ ಅರ್ಪಿಸಲ್ಪಟ್ಟಿತಂತೆ. ಸ್ತುತ್ಯವು' ಮ್ಯುನಸಿಪಾಲಿಟಿಯು ಕಾಯಿದೇಪಂಡಿತತನದ ಜನ್ಮಸಿದ್ಧ ಅಧಿಕಾರತ್ವವನ್ನು ಇವರು ಪಡೆದಿರುತ್ತಾರೆಯೋ ಏನೋ! ಮ್ಯುನಸಿಪಾಲಿಟಿಯಿಂದ ಆರ್ಥಿಕ ಲಾಭ ಹೊಂದುವಂಥ ಸಂಗತಿಯಲ್ಲಿ ಮ್ಯುನಸಿಪಲ ಮೆಂಬರರ ಸಂಬಂಧವಿರಬಾರದೆಂ—

(☞ ಈಹೊತ್ತಿನ ಪುರವಣಿ ನೋಡಿರಿ.)

The late Mr V V. Kantak,

(popularly known as 'Bablya')

Some Reminiscences

by— S. G. Warty

Sorrow darkens hamlet and hall
— *Tennyson*

The paths of glory lead but to the grave"
— *Gray*

On the 9th of August, happened the tragic death of a very brilliant sportsman, the best that Kanara has till now produced and one to always occupy the front rank in the province of Bombay I took so loving an interest in his career that I feel as it were in duty bound to jot down some reminiscences regarding this worthy son of Kanara

It was about the beginning of 1903 that I first heard of 'Bablya I was then a student in the 6th standard in the Private High School of Karwar (now extinct) conducted by the enterprising Mr M P Kulkarni, B A I was desirous to know Bablya, the tales of his adventure, his great success in foot-ball matches, especially with European players and the out-spoken praise and appreciation of his skilfulness by the sports man like Europeans, were the most common topics among students in those days, and it was natural that these should have caught my youthful fancy. As if to satisfy my curiosity Bablya soon left the Government High School to join ours, because Mr Kulkarnee's fame as a good teacher and tutor had spread around He was in the 7th Standard and I was in the 6th There was still some distance between us. We never got personally acquainted with each other during that year Of course, he used to frequent our boarding house almost every day especially in the morning, to eat the lion's share of the delicious 'Sanja', most a daily feature in those happy days with us

It was well-known that before he joined the Private High School, the subject he was least serious about, was his school studies. And it was not possible for him to make up within one year In 1903, he failed in the Matriculation examination, and now our time came, to be in constant contact with each other, He was particularly weak in Mathematics and he thought in my company he would improve. Jolly good fellow that he was, in his own tastefully humorous way, still with a deeper touch than was apparent, of a very sincere appreciation, he used to call me 'Deduction Mam' for what he thought to be my proficiency in Geometry In all things else, he regarded me as his junior and I frankly recognised him as my elder But during hours of tuition, he sat under me like a lamb and most obediently worked out the examples, the theorems or whatever it happened to be.

By this time he had completely given up his play His unrestrained ways for which he had to be known, had totally forsaken him He was a changed Bablya Only his humour his playfulness, his buoyancy of spirit, his sweet jokes, remained with him What brought about a sudden change in his character is still a mystery to me To the end of his life he of course took the world joyously He was never out of temper with it But since he joined the P H School there was a distinct change in his ways of thinking He seemed to recognise some responsibility Perhaps, his innate good sense, which had temporarily suffered an eclipse, prevailed, or perhaps wisdom accompanied age, anyway, the change was remarkable and sudden

That year, that is, in 1904, he appeared at the Matriculation examination with me He had got himself well-trained in all subjects He passed in all, except in one, i e Marathi which he had selected as his optional language according to the rules then in force He got 30 marks in that subject and failed by only 3. It was a very great disappointment to him He had indeed worked hard He eminently deserved success, and he was confident of it But the pleasure and happiness that a successful candidate feels, however momentary and vain, were unfortunately denied him.

Then I lost touch with him He was employed in office and I was a student in the college We never met each other for years I can't say how it so happened But again since 1915, we occasionally met and exchanged many thoughts and even some pleasant remembrances But I know not why he now seemed more shy in my presence It could not be his natural modesty For with me, he used to be extremely free He had cultivated a tone of respectfulness to me I was really sorry for it I valued his geniality Did I appear to him with a 'taint' of respectability?

It was in 1915, if I remember rightly, that he first became famous I never know before then, that he was attending the cricket He made his first name in the triangular match when he scored a century And mark you, the play was remarkable not merely for the score, but for the entirely faultless way of his playing Some well known English cricketeer, then and there inquired if he had received his training in England Since then he came to be almost invariably included in the Hindu eleven, and needless to say he kept up his reputation Even when it seemed hopeless for the Hindus to win as long as Mr Kantak was not out the Hindu spectators never got disappointed Such was the confidence that he inspired His name used to be on the lips of thousands and thouands in Bombay and outside in the mofussil, perhaps, of many more As I pass by the play grounds, which were the scenes of his triumphs, tears irresistibly appear in my eyes, that so a good fellow, so genial a friend, so fine a sportsman, one who had brought fame to his district and raised its status in the eyes of the world, passed away from amidst us, at so early an age Where shall we find our Bablya again? Gone to the place of rest for ever and leaving us to bewail his loss in this mortal world

"Oh, for the touch of a loving hand,
And the sound of the voice that is still"

The small number of Kanara men resident in Bombay, deserve well of their brothren in the District. From amongst them have risen not a few, who earned provincial reputation and raised the status of Kanara to a high level in the minds of the public of the Presidency. Within the last twelve months, we lost three such men In September, we lost Mr A S Wagh, the father of the Bombay Social Service League a reputed social reformer and a man of almost saintly life, whom our good friend Mr. N M Joshi styled as the one Guru of his life Then in February died Mr. N B Wagle, whose adventurous career is too well known And now has passed away Mr Kantak, our favourite 'Bablya', all too young for the death that overtook him.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೮-೧೯೦೮ ನೇ ಇಸ್ವಿಯಿಂದ ತಾ|| ೧ ೯ ೧೯೧೮ ನೇ ಇಸ್ವಿಯವರೆಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ಇನ್‌ಫ್ಲುಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟಲಿಗಳು ಖರ್ಚಾದವು ಅಂತು ಈವತ್ತಿನವರೆಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಅಮೌಲ್ಯವಾದದ್ದು ಇದು ಯಾವತ್ತರು ಜನರ ಅನುಭವಕ್ಕೆ ಬಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಳ್ಳತಕ್ಕದ್ದು ಎಂದು ತಿಳಿದು ಉಪಕಾರವಾಗುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರಟಿಫಿಕೇಟುಗಳು ಸಹ ದೊರೆತಿರುತ್ತವೆ ಅವು ಬರೆಯಲಿಕ್ಕೆ ಕಾಗದವು ಸಾಲದ ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದ ವಿನ ಮೇಲೆ ದ ಲಕ್ಷ್ಯ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗವಾಗಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮಗಳು

ಕ್ಷಯರೋಗ ಹಡದರೋಗ ಪಂಡುರೋಗ ಗುಲ್ಮರೋಗ ಪಲರೋಗ ವಾಂತಿಭೇದಿ (ಕಾಲರಾ), ಪ್ಲೇಗು ಚಳಿ ಜ್ವರ ವಿಷಮ ಜ್ವರ ಇನ್‌ಫ್ಲುಯಂಜಾಜ್ವರ ಅನೇಕಪ್ರಕಾರದಜ್ವರ ಗಂಟಲವಾತ ಕಿವಿಶೂಲೆ ಮೂಗಿನೊಳಗಿನ ಬಿಸಿ ಮೊದಲಾದ ರೋಗವು ಕಣ್ಣಿನೊಳಗೆ ಹೂವು ಬಿಳುಪು ಮತ್ತು ಕಣ್ಣುಕೆಂಪು ಕೆಮ್ಮು ದಮ್ಮು ಶ್ವಾಸ ಅಜೀರ್ಣ ಇದರಿಂದ ಅಜೀರ್ಣ, ಹೊಟ್ಟೆಶೂಲಿ ಮೈಶೂಲಿ ಅರತಲೆಶೂಲಿ ನಡುಶೂಲಿ ವಾತಶೂಲಿ ರೇತ್ಸಜನ್ಮ, ಗುದವ್ಯಸನಜೇನೆ ಮೂಲವ್ಯಾಧಿ ಕಜ್ಜಿ ಗಜಕರ್ಣ ಇಸಬು ಕಪ್ಪು ಘಾಯಿವ್ರಣ ಗಾರಿಹುಣ್ಣು ಸ್ತ್ರೀಯರ ಮುಟ್ಟಿನ ಬಾಧೆ ಹಡದನಂಜು ಸಣ್ಣ ಕೂಸುಗಳ ಬಾಲಗ್ರಹ ಆರವಿ ಮುಟ್ಟದೋಷ ಹೊಟ್ಟ ಮೊದ್ದುರಾಗೋಣ, ಮೈ ಹೊರಬೀಳೋಣ ಸಣ್ಣ ಕೂಸಗಳಿಗೆ ವೈದ್ಯರಿಗೂ ಸಹ ತಿಳಿಯದ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಒಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ನಮೂನೆ ಉದ್ದೇಶ್ಯ ಐದು ಆಣೆ ತೂಕದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ ಪಿ ಖರ್ಚ ಬೇರೆ ಒಂದ ಡಜನ್ ಬಾಟ್ಲಿಗಳು ತಕ್ಕೊಂಡರೆ ಸಣ್ಣ ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದವು ಬಾಟ್ಲಿಯವರಿಗೆ ಕಮಿಶನ್ ಇಲ್ಲ ಇದಕ್ಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ಟಿಕೀಟು ಲಗತ ಇಡದೆ ಹೊರ್ತು ದೊರೆಯಲಿಕ್ಕಿಲ್ಲ ಅನುಮಾನವ ತ್ರಿಕೆಯು ಕನ್ನಡ ಮರಾಠಿ ಮುಸಲ್ಮಾನಿ ಬಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ಪತ್ತೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್ ಎ ಮುಲ್ಲಾ, ಸಂಪಾದಕ ಅರ್ಕಶಫಾ
ಹೆಡ್ ಆಫೀಸು ಶಾಹಾಪೂರ ಬೆಳಗಾಂವ

ಪ್ರಕೃತಿಯಿಂದ ಗುಣಪಡಿಸುವ

ಔಷಧಗಳು.

1 ಮದನ ಕಾಮೇಶ್ವರಿ ಲೇಹ — ಒಹಳ ಶ್ರಮ ಪಟ್ಟು ಕೆಲಸ ಮಾಡುವ ಲೇಖಕರೂ ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ ಮದಸೋಲ ಮಲಬದ್ಧತೆ ಶರೀರಗಳ ಪಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯ ಸ್ಥಿರವಾಗಿ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಸಿದ್ಧಿ ಶಾಂತಿ ಗೊಳ್ಳುವದು 40 ಸಲ ಸೇವಿಸುವ ಲೇಹ ದಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-1 0

2 ಮಹಾಜ್ವರಾಂಕುಶ — (ಪತ್ರಿ ಗುಣ) ಇನ್‌ಫ್ಲುಯೆಂಜಾ ನ್ಯುಮೋನಿಯಾ, ದಿವಸಕ್ಕೊಮ್ಮೆ ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1 ಕ್ಕೆ 0 8 0

3 ಬಾಲಗ್ರಹ ಗುಟಿಕೆ — ಕೂಸು ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಬಾಟ್ಲಿ 1ರಕ್ರಯ 0 10 0

4 ಶ್ವಾಸಕುಟಾರ ಗುಟಿಕೆ ಇದು ಶ್ವಾಸಕ್ಕೆ ಸಿದ್ಧ ಔಷಧಿ ಒಂದೇ ಗುಟಿಕೆಯಿಂದ ಕಫ ಬಿಟ್ಟು ಸ ಕೆಮ್ಮು ಇವು ಗುಣ ಬಾಟ್ಲಿ 1 ರ ಕ್ರಯ 0 10 0

5 ಇತ್ಪಾಬೇದಿ — ಅಜೀರ್ಣಸವನ್ನು ಗುಂಟ ಮಾಡದ ಸುಪಿರೂಕ ಬಾಟ್ಲಿ 1ಕ್ಕೆ 0 12 0

ಎಮ್. ಗಣಪಯ್ಯಾ ಎಂಡ ಸನ್ಸ್
ನೇಟಿವ್ ಡ್ರಗ್ಗಿಸ್ಟ್ ರಥಬೀದಿ
ಮಂಗಳೂರ ದ ಕ

ಮೋಟಾರ.

ಹ ವೇರಿಯಿಂದ — ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ ಪ್ರತಿ **ಆದಿತ್ಯವಾರ–ಗುರುವಾರ** ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ ಹಾವೇರಿಯಿಂದ ಬೆಳಿಗ್ಗೆ ೮ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಅದಕಿಂತ ಹೆಚ್ಚು ಜನರ ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೆಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾದ ವಗೈರೆ ನಮ್ಮ ಕೆಳಗಿನ ಪತ್ತೆಗೆ ಮಕ್ತಾ ಠಿಕ್ಕ ಠರಿಸಿಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನಬಾಗ.
ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडातील अनेक वनस्पतींच्या रसात पौष्टिक औषधीफळाचा रसार्क मिश्र करून, खाली दिलेल्या रोगावर उपयुक्त अशी भस्मे घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने नपुंसकत्व स्वप्नजन्य धातुपात, लघवीच्यापूर्वी अगर नंतर स्रवणारा धातुपात नाहीसा करून, वीर्य वृद्धि व रक्तशुद्धि होते कितीहि जुनाट कल्की असो (एक सप्तकातच) नाश पावत आणि उपदंश संबंधी मुरलेले विकार नाहीसे होऊन हातपाय डोळे यांचा दाह व धातुविघातक सर्व विकार नष्ट होऊन, शरीर वज्राप्रमाण बनते हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधा व शक्ति भरपूर वाढत आणि संततीस अपायकारक असे गर्भाशयस्थ रोगांचा समूळ नाश होतो हे औषध स्त्रियांनी सेवन केल्यास त्यांचे जननेंद्रियाचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळा जेवले तरी भूक चांगली लागत जाऊन शौचास साफ होते याचा अनुभव औषध घेतल्यानंतर पाहिल्या दिवशीं येतो तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदुचे सेवन करून, यातील खरी मजा पहावी फार दिवसाचा रोग असल्यास, पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असता, गुण येईल एका बाटलीमध्ये १० तोळे औषध असते त्या एका बाटलीची किंमत १। रुपया तीन बाटल्यांची किंमत ३। रुपये एक डझन (१२) बाटल्यांची किंमत १० रुपये याशिवाय ट्पाल व प्याकिंग खर्च निराळा पडेल

म्यानेजर

के एम हनुमान प्रासादिक कंपनी
जिल्हा बेळगाव, मु पो निपाणी

कानडावृत्तवु

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

ರೂ ೩-೧೪ ರ ಮನಿಯಾರ್ಡರ ಮಾತ್ರ ಅಂಚೆ ೧ ವರ್ಷದತನಕ ನಿಮ್ಮಲ್ಲಿಗೆ ಬರುವದು ಪತ್ತೆ— ಕಾನಡಾವೃತ್ತ ಆಫೀಸ ಕುಮಟ

Printed and pubish d by Krishnarao Keshav Shenvi at the Star o Kanara Press Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೪.

ಪತ್ರದ ವರ್ಗಣಿ –

ಊರ ಜೆಯಲ್ಲಿ ಆಗಾವು
ರೂಪಾಯಿ 2-0-0

ಪ ನಂ ಜಾರ್ ರಿಯಿಂದ
ರೂ 2 13 0

ವ್ಹಿ ಪಿ ಅಂಚೆವೆಚ್ಚ ಸೇರಿ
ರೂಪಾಯಿ 2-15-0

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ –

ಕನ್ನಡ ಇಂಗ್ಲಿಷ ವ್ಯಾಕಾ ಪ್ಯಾಸಿಸ(೧೫ ಎಮ್‌ಟಪ್ಪ) ೫ ಸಾಲುಗಳ ವರೆಗೆ ರೂ 1 0 0 ಮುಂದಿನ ಪ್ರತಿ ಸಾಲಿಗೆ 0-2-0

ಹೆಚ್ಚಿನ ಸಾಲು ಎಷ್ಟು ಮೊತ್ತವಿರುವವೋ ಆ ಮಾನ ದಿಂದ ಅಷ್ಟುಸಾಲುಗಳು ಹಿಡಿ ಯ್ಯುತ್ತುವವು

ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ಕೇಳಿಕೊಳ್ಳತಕ್ಕದ್ದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೫ ನೂಹ' ಆಗೋಸ್ತ ಸನ್ ೧೯೨೧ ನೇ ಇಸವಿ]—

ಪ್ರಸಿದ್ಧ ಶಾಯಿ ಪುಡಿಗಳು.

ನೇರಿಳೆ, ಕೆಂಪು, ಜಾಂಬಳಿ ೧೦೦ಕ್ಕೆ ೧೪ ಆಣೆ ಕಪ್ಪು ಮಾತ್ರ ೧೨ ಆಣೆ ಶಾಯಿ ಸಂಪಳಿಗೆ ಒಂದಾಣೆ ಕಡೆ ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್ ವ್ಹಿ ಭಾಗ್ವತ

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಭಡತೀ ಭ್ರಾತೃಸಂಘದ

ಅನುಭವಸಿದ್ಧ ...

ಜರದ ಗುಳಿಗೆಗಳು ಕ್ರಯ — ೨೫ಕ್ಕೆ ೦-೧೦-೦ ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳೆ ಫಳ್ಳಿ, ಉಂಚಿ ಕಾಬೂಲೀ ಹಿಂಗು, ಇದಲ್ಲದೆ ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಉಪಯೋಗಿ ಪುಸ್ತಕಗಳೂ, ಸೈಕಲ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ

ಅತ್ಯಂತ ಬೋಧಪ್ರದ-ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ೧೨ ಅ (೨) ಸತ್ಯಪ್ರಕಾಶ ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ ಬೆಲೆ ೧೨ ಅಣೆ

ಪತ್ತೆ— ಬಸವಾಚಾರ್ಯ ಬೂದೀಹಾಳಮಠ,
ಕೇರ್ ಮಾಸ್ತರ ಮುಕ್ಕಾಂ ಆಲೂರ
ಪೋಸ್ಟ— ಆಲೂರ—ಹಾನಗಲ್ಲ, ಜಿ ಧಾರವಾಡ,

ಕಾರ್ಡಸ್ಯಾಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ — ೧ಕ್ಕೆ ಒಬ್ಬ ಡಜನಕ್ಕೆ ೪ ಆಣೆ ಡೀಕಡಾ ೧ ೧೦-೦ ಟಪಾಲ ಹಾಸಲ ಬೇರೆ ಪಂಪಲಗಳು ಬೇಕಾದ ೦ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ಟಾರ್ ಆಫ್ ಕೆನರಾ ಪ್ರೆಸ್ಸ,
ಕುಮಟಾ (ಎನ್ ಕೆನರಾ,)

ಬಿರೇ ಪಪ್ಪಾಲು ! ಹಾಜಾ ಕಲ್ಮ ಪ್ಯಾರೆ ಗ್ಯಾಯ!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿ... ತಾರುಣ್ಯಸಂಜೀ...

ಬೆಳ್ಳಿಗೆ ವನ್ನು ಬೆಳೆಸಿ ಪ್ರರ ... ಗಿಯೂ ಸ್ತ್ರೀಯರಿಗೆ ಪುರುಷ ವಿಷಯ... ಮುಕ ಶಕ್ತಿಯನ್ನು ... ಜರತನವನ್ನೂ ರೋಗವನ್ನೂ ದೂರಪಡಿಸಿ ಆಯುರಾರೋಗ್ಯವನ್ನೂ ರತಿಯಲ್ಲಿ ಹೆಗ್ಗಳವಾದ ಕೌತುಕಲವನ್ನೂ ತೋರಿಸ ಪ್ರೀತಿ ಶಕ್ತಿಯ ಉತ್ಸಾಹವನ್ನೂ ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವನದ ಕಳೆಯನ್ನೂ ತೋರಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಇವುಗಳನ್ನು ಬೇಗನೆ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ ದೇಶಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಸ್ಪರ್ಶನದಿಂದಲೂ ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವು, ತಿಳುವು ನಿಸ್ತೇಜವು ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿ ಹೋಗುವದಲ್ಲದೆ ನಪುಂಸಕತ್ವ ಶರೀರ ಕ್ಷೀಣತೆ ಆಲಸ್ಯ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ ತಲೆಯಲ್ಲಿಯೂ ನೋವು, ... ನಿದ್ರೆಯಿಲ್ಲದೆ ... ಸ್ವಪ್ನ ... ವರವು ಮತ್ತು ಶರೀರದ ಕಾಂತಿ ... ಚೇತನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ್ಳ ಸೀಸೆಗೆ ರೂ ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ್,
ಶಿರ್ಸಿ (ಕೆನರಾ)

ಅಗ್ಗ] ಮಳೆಗಾಲ. [ಅಗ್ಗ

ಮಳೆಗಾಲ ಮತ್ತು ಬಿಸಲು ವೇಳೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು ಈ ಕೆಳಗಿನ ವಿಳಾಸಕ್ಕೆ ಅಗದೀ ಕಡಿಮೆ ದರದಿಂದ ಸಿಗುವವು ವ್ಯಾಪಾರಸ್ಥರಿಗೆ ಯೋಗ್ಯ ಸವಲತ್ತುಗಳು ಸಿಗುವವು

ಎಸ್ ಎಲ್ ಧಾಕಪ್ಪನವರ, ಶಿರ್ಸಿ

ಹೊಸ ಶೋಧ! "ಟೀ" ಹೊಸ ಶೋಧ!

ಗುಣ ಬಾರದಿದ್ದಲ್ಲಿ ಹಣಪರತು

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ... ವೃತ್ತ, ಮೂತ್ರದ ಮೊದಲು ಅಥವಾ ಅದಮೇಲೆ ಧಾತು ಹೋಗುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಈ ಕ್ಷಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸಂಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ, ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿವಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು ೧ ಆಣೆ ೩ ಡಬ್ಬಿಗಳಿಗೆ ೪ ರು ೮ ಆಣೆ ೧೨ ಡಬ್ಬಿಗಳಿಗೆ ೧೫ ರು ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ— ವ್ಹಿ, ಆರ್ ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಶ್ರೀ। ಕಮಲಾಬಾಯಿಯ
ಅಬಲಾ ಸಂಜೀವನಿ ಗುಳಿಗೆ
ಬರೇ ಸ್ತ್ರೀಯರಿಗೋಸ್ಕರ

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಆಪಾಯಕರ ಮತ್ತು ತೀಕ್ಷ್ಣ ಮನೋವೇದಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ ೨೫ ವರ್ಷಗಳಾರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ ತಪಸೀಲ ಮಾಹಿತಿಯು ಕೇಟಲಾಗ [illegible] ೦ ೨ ಸ್ಟ್ಯಾಂಪ ಕಳುಹಿಸಿದರೆ ಉಚಿತ ಸಿಗ ಪದ ಬಾಟ್ಲಿ ೧ ರ ಕ್ರಯ ೧ ೮ ೦ ಟಪಾಲ ಖರ್ಚ [illegible] ವ್ಯಾಪಾರಿಗಳಿಗೆ ಯೋಗ್ಯ ದರ

ಶ್ರೀ। ಕಮಲ ಬಾಯಿ ಜಿ ಎಮ್ ಸಿ ಪಂವರ್ [illegible] ಬಾಮದೇವಿ ಎದುರಿಗೆ ಮುಂಬಯಿ

ಡಾ ನವರತ್ನಕರ
ವಿದ್ಯುತ್ಶಕ್ತಿಯ ಹಿಂದಿ ಕೂದಲಿನ ಬಣ್ಣ
ಪಕ್ಕಾ ಕಲಾಪ

ಇದರಿಂದ ಬೂದಿ ಬಣ್ಣದ ಕೂದಲು ಕಾಗೆ ಕಪ್ಪಾಗುತ್ತವೆ ಈ ಕಲಾಪಿನಗುಣಗಳು — ಸುಲಭ ಹಚ್ಚೋಣ ಇಂಪಾದ ಪರಿಮಳ ಆಗ ಕ್ರಯವೇ ಸರಿ ಬಳಿಸಿದವರೆಲ್ಲರು ಸಮಾಧಾನಪಟ್ಟಿರುವರು

ಕ್ರಯ ೧—೮—೦ ಅಂಚೆ ವೆಚ್ಚ ಬೇರೆ

೧೨ ಕ್ಕೆ ೧೫—೮—೦

ನವರತ್ನ ಮತ್ತು ಸನ್
1೧೧ ಕ [illegible] ಭುಂದೇವಿ ರೋಡ ಮುಂಬಯಿ

तापहर पाटणकर एम्यूमिक्श्चर

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಶ್ಚರ

ಮಲಶುದ್ಧಿಯಾಗುತ್ತದ ಜಿವರು ಬಂದ [illegible] ಜ್ವರವು [illegible]ಡುತ್ತದೆ ಕ್ರಯ ೧_೧೨ ರೋಕ ಪ್ಯಾದೆಂವಸ್ಥರಿಗೆ [illegible]

ಪಾಟಣಕರ ಮಾಯಾದೇವ ಕಂಪನಿ
ಮುಂಬಯಿ ४

[illegible] ಜಯತೇ
([illegible]ಬಾರದಿದ್ದ [illegible]ದರತ
ಧಾತ ಪೌಷ್ಟಿಕ ಕಾಮೋತ್ತೇಜಕ ಇ ಪ್ರಿಯ ಸ್ತಂಭಕವ ಪ

ಮದನೋದ್ಭವ ಗುಳಿಗೆ

[illegible]ನೇಂದ್ರಿಯ ದ ಬಲತೆ [illegible] ಸಕತ [illegible] ವಸ್ಥೆ ಮೊದಲಾದವು ಈ ಗ ಳಿಗೆ [illegible] ವಸೆಯಿಂದ [illegible] ಧಾತ ಪ [illegible] ವರ್ಧಕ ರಕ್ತಶೋಧಕ ಕಾಮೋತ್ತೇಜಕ ಮನೋಲ್ಲಾದ [illegible] ದ್ರಿಯಸ್ತಂಭಕ [illegible] (ಜಿ.೩) ಎತ್ತಪ್ಪರೆ ಕದಮೇತ್ತೆ ಹುಟ್ಟಿರವ ಎಲ್ಲಕಂದ [illegible]ಗಳು [illegible] ಚಿತ್ತದ [illegible] ವಾತರೋಗ [illegible] ಅತಿಶ [illegible] ಗುಣ [illegible] ಶರೀರಕ್ಕೆ ನಿರೋಗ [illegible] ಸಂಪೂರ್ಣ ಶಕ್ತಿಯೂ [illegible] ಗುಳಿಗೆಗಳು ಬೇಕಾ [illegible] ಗೆ ೪ ರೂಪಾಯಿ [illegible] ಔಷದದ ಸಂಗಡ

ಪಿಳಾಸ **ಜಿ. ಎಲ್ ಜೋಶಿ ಕಂಪನಿ**
ಪೋಸ್ಟ — [illegible]ರಸಿ ಉತ್ತರ ಕಾನಡಾ

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ ರೊಕ ದರ ಸವಲತಿದು ಇರುತ್ತಗೆ

ಪತ್ತೆ:— ಬಿ ದಾಸ, ಕುಮಟಾ

ಲೋಕಮಾನ್ಯವಾದ
ಚಹಾ ಮತ್ತು ನೀಲಗಿರಿ ಎಣ್ಣೆ.

[illegible] ಇಷ್ಟೆ [illegible] ಎಲ್ಲಾ ತರಹ ಚಹಾ [illegible] ದವ ಪ್ರಸಿದ್ಧ ನೀಲಗಿರಿ ಎಣ್ಣೆ [illegible] ಯಲ್ಲಿ) ಲೋಕ [illegible] ಸಿಗದೆ ಕಡಿಮೆ ದರದಿಂದ [illegible] ಚಹಾ ಮತ್ತು ನೀಲಗಿರಿ ಎಣ್ಣೆ [illegible] ಸ್ಟಾಕ್ ಈಗಲೇ ಬ ದಿರುತ್ತದೆ ಪತ್ರ [illegible] ಮಾಡಿಕೊಳ್ಳಿರಿ

ವಿ ಪಿ ಶಾನಬಾಗ ಮತ್ತು ಬ್ರದರ್ಸ
ಹೊನ್ನಾವರ ಉತ್ತರ ಕಾನಡಾ

HONAVAR (N Kanara)

FREE. FREE.
In place of [illegible] four [illegible] Ringworm Ointment price As 4 per tin or of 12 Phial of Otto Mushkh [illegible] Price As 12 per tube will be sent

A WRIST WATCH FREE!

King George Coronation Co., BOMBAY No. 4.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರಕೊಳ್ಳಬಹುದು ಸವಲತ್ತಿಯ ದರಗಳು ಇಟ್ಟಿರುವೆವು

ನಮ್ಮ ಪತ್ತೆ—

ಗ್ಯಾತೊಂಡೇ ಬ್ರದರ್ಸ,
ಮೋಟರ ಡೀಲರ್ಸ, ರಿಪೇರರ್ಸ,
ಕಾರವಾರ.

ಅನುಭವಸಿದ್ಧವಾದ ಔಷಧಗಳು !!!

ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ ಪ್ರವಾಳ [illegible]ಕರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇವರಿಂದ ಕ್ಷೀಣತೆ ದುರ್ಬಲತೆ, ನಪುಂಸಕತ್ವ ಸ್ವಪ್ನಾವಸ್ಥೆ ರಕ್ತದೂಷಿತರೋಗ ಮೇಂದುವಿಕಾರ ನರಗಳ ಅಶಕ್ತತೆ ಅಂಗನಿಸ್ತೇಜತ್ವ ಧಾತುಹೋಗುವದ ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ ಉಪದಂಶವಿಕಾರ ಮಸ್ತಕಶೂಲಿ ಮುಂತಾದ, ಅನೇಕ ವಿಕಾರಗಳು ಶೀಘ್ರದಿಂದ ಗುಣವಾಗಿ ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕಾಂತ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪ ೦ ೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದು ಗುಳಿಗೆ ೩೦ ಕ್ಕೆ ರೂ ೧ ೦ ೦ (೨) ಸ್ವಪ್ನಾವಸ್ಥೆ ಮೇಲೆ ಚೂರ್ಣ — ೧೪ ದಿವಸದ ಔಷದಕ್ಕೆ ರೂ ೨-೦-೦ (೩) ಗಜಕರ್ಣ ನಾಶಕ ಮಲಮು — ಡಬ್ಬಿಗೆ ಆಣೆ ೦ ೮ ೦ (೪) ಮಲೇರಿಯಾ ಜ್ವರ ನಾಶಕಗುಳಿಗೆ — ಪಿಳು ಬಿಗೆಯು ಮ [illegible] ವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಪಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬರೆ

ವಿಳಾಸ— **ವೈದ್ಯ ವ್ಹಿ. ಎಸ್ ಮೋಡಕ, ಮತ್ತು ಕೆಂಪಣಿ, ಪೋಸ್ಟ ಸಿರಸಿ,**
ಜಿಲ್ಲಾ ಉತ್ತರಕಾನಡಾ

ರಾಷ್ಟ್ರೀಯ ಪಕ್ಷದ [illegible]ರಪತ್ರಿಕೆ

ನವೀನ ಭಾರತ.
(ವಾರ್ಷಿಕ ವರ್ಗಣಿ ಅಂಚೆ ವೆಚ್ಚ ಸಹಿ ರೂ ೨)

ಇದರಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳ ನಿಷ್ಪಕ್ಷಪಾತದಿಂದಲೂ ಮನೋವೇಧಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶಿ, ಬಹಿಷ್ಕಾರ, ಮದ್ಯಪಾನ ನಿಷೇಧ ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖಗಳೂ ಪ್ರಕಟಿಸಲ್ಪಡುವವು ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ, ಜಾಹೀರಾತುಗಾರರಿಗೂ ಅತಿಶಯ. ಅನುಕೂಲ

ವಿಳಾಸ — ನವೀನ ಭಾರತ ಕಾರ್ಯಾಲಯ,
ಬಾಗಲಕೋಟೆ (ಜಿ. ವಿಜಾಪೂರ)

श्रीभीमकुंडदर्शन.

या [illegible]पुस्तकास प्रख्यात बालहरिदास यांनी प्रस्तावना लिहिली आहे

श्री क्षेत्र गोकर्ण येथील एक पुण्यस्थान श्री भीमकुंड याचा प्राचीन व आर्वाचीन वृत्तांत छापून प्रसिद्ध झाला आहे कि ९ प

पत्ता— भडीकेरी मजनाथभट्ट, गोकर्ण

UNIVERSITY OF BOMBAY.

Revised Electoral Roll of the University Constituency of the Bombay Legislative Council

It is hereby notified that the revised Electoral Roll of the Bombay University Constituency of the Bombay Legislative Council was published at the headquarters of the University on the 15th July 1921, and is open for public inspection at the office of the University Registrar

2 Persons who possess the qualification necessary to vote in the above Constituency but whose names are not shown in the Roll are requested to apply for the enrolment of their names to the Collector of the District, in which they are residing (or to the Collector of Bombay in the case of persons residing in the city of Bombay) on or before the 15th of September 1921 The nature of their qualification should be shown in their applications Those who fail to apply for enrolment on or before the above date, will have subsequently to apply to the Sub Judge within the local limits of whose ordinary jurisdiction they are residing (or in the case of the city of Bombay to the Chief Judge of the Court of Small Causes at Bombay)

3 Any person who on the 1st day of April next preceding the publication of the Roll was a member of the Senate or an Honorary Fellow of the University or a graduate of the University of seven years' standing and had a place of residence in the Bombay Presidency, (excluding the Native States and Aden) is entitled to have his name registered as an elector in the University Constituency

FARDUNJI M DASTUR,
Registrar University of Bombay
and
Returning Officer

Bombay, 20th August 1921

ಸಾವಿಗೆ ಬೆದರಬೇಡಿರಿ.

ಮಹಾತ್ಮಾ ಗಾಂಧಿಯವರ ಲೇಖ.

ಆ ೇಕ ದಿನಗಳಿಂದ ನಾನು ಸ್ವರಾಜ್ಯದ ವ್ಯಾಖ್ಯೆಗಳನ್ನು ಬಿಟ್ಟುಗೊಡುತ್ತಿದ್ದೇನೆ ಅವುಗಳಲ್ಲಿಯೇ ಸ್ವರಾಜ್ಯವೆಂದರೆ, ಮೃತ್ಯುಭಯದ ತ್ಯಾಗವೆಂಬಿದೊಂದಿದೆ ಸಾವಿಗೆ ಹೆದರುವವರು ಸ್ವರಾಜ್ಯಪ್ರಾಪ್ತಿಯ ಆಶೆಯನ್ನು ಬಿಡುವದೇ ಲೇಸು ಇಂಗ್ಲಿಷರು ಸಾವಿಗೆ ಹೇಬಿನೊಳಗಿಟ್ಟುಕೊಂಡು ತಿರುಗಾಡುತ್ತಾರೆ ಅರಬೀಯರೂ, ಪಠಾಣರೂ ಸಾವೆಂದರೆ ಒಂದು ಸಾಮಾನ್ಯ ರೋಗವೆಂದು ತಿಳಿಯುತ್ತಾರೆ ಯಾರೊಬ್ಬ ಅಪ್ತನು ನಿಧನಹೊಂದಿದರೆ ಅವರ ಅಳುತ್ತ ಕೂಡ್ರುವದಿಲ್ಲ ಬೋಯರ ಜನರಿಗಂತೂ ಸಾವಿನ ಮಹತ್ವವು ಗೊತ್ತಿಲ್ಲವೆಂಬಂತೆ ತೋರುತ್ತದೆ ಮೊದಲು ಬೋಯರಯುದ್ಧದಿಂದ ಸಾವಿರಾರು ಯುವತಿಗಳು ವಿಧವೆಗಳಾದರು. ಆದರೂ ಅವರು ತಮ್ಮ ಧೈರ್ಯವನ್ನು ಬಿಡಲಿಲ್ಲ ನಮ್ಮ ಯುವಜನರ ಪ್ರಾಣಗಳನ್ನು ತೆಕ್ಕೊಳ್ಳಲಿ ಅಥವಾ ನಮ್ಮ ಹುಡುಗರಿಗೆ ಕೊಲ್ಲಿರಿ ಸ್ವಾತಂತ್ರ್ಯದ ಮೂಲಕ ನಮ್ಮ ದೇಶದ ಮಾನವನ್ನು ಕಾಯಿರಿ ಮಾತೃಭೂಮಿಯ ಗುಲಾಮಗಿರಿಯಲ್ಲಿ ಹೊರಳಾಡುತ್ತಿರ ವಾಗ, ಯುವಜನರಿಗಿಟ್ಟುಕೊಂಡು ಪ್ರಯೋಜನವೇನು ? ಗುಲಾಮ ಸಂತತಿಯನ್ನು ಬೆಳಿಸುವದಕ್ಕಿಂತ, ಅವರು ರಣಾಂಗಣದ ಮೇಲೆ ಹೋರಾಡಿ ಸಾಯುವದೇ ಹೆಚ್ಚು ಶ್ರೇಯಸ್ಕರವು ಆಗ ಅವರ ಪ್ರಾಯಶ್ಚಿತ್ತವೇ ಸುಖದಾಯಕವಿರುತ್ತದೆ ಹೀಗೆ ವಿಚಾರಮಾಡಿ ಎದೆಗುಂದದೆ ಬೋಯರಸ್ತ್ರೀಯರು ತಮ್ಮ ಪ್ರಾಣಪ್ರಿಯ ಪತಿಗಳ ಆಹುತಿಗಳನ್ನು ಧೈರ್ಯದಿಂದ ಕೊಟ್ಟರು

ಇಷ್ಟು ಅನ್ಯರಿಗೆ ಕೊಂಡು ಸ್ವತಃ ನಾವಿಗೆ ಈ ಮಗುವನ್ನ ವಿಷಯವಾಯಿತು ಆದರೆ ಬೇರವರಿಗೆ ಕೊಲ್ಲದೆ ಕೊಡೆಯದೆ ಬಡಿಯದೆ ಸ್ವತಃ ತಾವೇ ಮೃತ್ಯುವಿನ ಬಾಯಲ್ಲಿ ಬೀಳುವವರ ಗತಿ ಏನು ಇಡೀ ಜಗತ್ತೇ ಅವರನ್ನು ಪೂಜಿಸಲು ಸಿದ್ಧವಾಗುತ್ತದೆ ಅವರ ಸಾವಿನಿಂದ ದೇಶದ ಕಲ್ಯಾಣವಾಗುತ್ತದೆ ಇಂಗ್ಲಿಷರೂ ಜರ್ಮನರು ತಮ್ಮೊಳಗೆ ಹೋರಾಡದೇ ಇಬ್ಬರೂ ಬಿಟ್ಟುಕೊಟ್ಟರ ವಾಗುತ್ತಿಂದರೆ ಅವರ ಈಗಿನ ಅನ್ಯರ ಪರಿಣಾಮವೇನಾಯಿತು ? ದಿನ ದಿನ ದಿವಸಕ್ಕೆ ವೈರಭಾವವು ವೃದ್ಧಿಹೊಂದುತ್ತದೆ ಅಸ್ವಸ್ಥತೆಯು ಬೆಳೆಯುತ್ತಲಿದೆ, ಒಟ್ಟಿಗೆ ಈಗಿನ ಯುರೋಪಖಂಡದ ಸ್ಥಿತಿಯು ಅನುಕಂಪನೀಯವಾಗಿದೆ ನಾಸ್ತಿಕತ್ವವು ಉತ್ತರೋತ್ತರ ವೃದ್ಧಿಹೊಂದುತ್ತಿದೆ ಅನ್ಯೋನ್ಯ ವೈರಭಾವವಂತೂ ಅತಿಶಯ ಬೆಳೆದಿದೆ ನಮ್ಮ ಸ್ಥಿತಿಯು ತೀರ ಭಿನ್ನವು ನಾವು ಸಾವಿನ ಭಯದೊಳಗಿಂದ ಮುಕ್ತರಾಗುವ ತಯಾರಿಯಲ್ಲಿದ್ದೇವೆ ನಾವು ಶುದ್ಧೀಕರಣದ ಯಜ್ಞವನ್ನು ಪ್ರಾರಂಭಿಸಿದ್ದೇವೆ ಮತ್ತು ಅನೇಕ ಸ್ಥಲಗಳಲ್ಲಿಯು ಅಂಗೀಕೃತ ಕಾರ್ಯವು ಯಶಸ್ವಿಯಾಗುವ ಚಿನ್ಹಗಳು ತಲೆದೋರುತ್ತಿವೆ

ನಮಗೆ ಸ್ವರಾಜ್ಯಪ್ರಾಪ್ತಿಯಾಗುವ ಕಾಲಕ್ಕೆ ಬಹುಜನಸಮಾಜವು ಮೃತ್ಯುಭಯದಿಂದ ಮುಕ್ತರಾಗಿರಬೇಕು ಇಲ್ಲದಿದ್ದರೆ ಸ್ವರಾಜ್ಯ ಪ್ರಾಪ್ತಿಯಾಗಲಾರದು. ಈವರೆಗಿನ ಹಕೀಕತನ್ನು ಲಕ್ಷಿಸಿದರೆ ಈವರೆಗೆ ನಿಧನಹೊಂದಿದ ವೀರರು ತರುಣರೇ ಅಲೀಗಡದಲ್ಲಿ ನಿಧನಪಟ್ಟವರಲ್ಲಿ ೨೫ ವರ್ಷದೊಳಗಿನವರೇ ಬಹಳ ಮಂದಿ ಇದ್ದರು. ಯಾವನೊಬ್ಬ ಬಾಲಕನಾಗಲೀ ಹರೆಯದವನಾಗಲೀ ಮುದುಕನಾಗಲೀ ಮರಣಪಟ್ಟರೆ ನಾವು ಇಷ್ಟು ಯಾಕೆ ಬೆದರಬೇಕು ? ಜಗತ್ತಿನಲ್ಲಿ ಪ್ರತಿಯೊಂದು ಕ್ಷಣಕ್ಕೆ ಒಬ್ಬನು ಜನಿಸುತ್ತಾನೆ ಇನ್ನೊಬ್ಬನು ಸಾಯುತ್ತಾನೆ (ಹೀಗೆ ಜನನ—ಮರಣವು ಅವ್ಯಾಹತ ನಡೆದದೆ, ಜನ್ಮವಾಯಿತೆಂದು ಸಂತೋಷಪಡುವದು ನಿಧನಹೊಂದಿದರೆಂದು ಶೋಕಪಡುವದು, ಇದೆಲ್ಲ ಮೂರ್ಖತನದ ಚೇಷ್ಟೆಯು ಎಂದು ನಾವು ತಿಳಿಯಬೇಕು ಆತ್ಮವಾದಿಗಳಿದ್ದವರೆಲ್ಲರೂ— ನಾವೆಲ್ಲ ಆತ್ಮವಾದಿಗಳೇ ಹಿಂದೂ ಮುಸಲ್ಮಾನ ಪಾರಸಿ ಇವರು ಆತ್ಮದ ಅಸ್ತಿತ್ವವನ್ನು ನಂಬುವದಿಲ್ಲೇನು ?—ಆತ್ಮಕ್ಕೆ ಸಾವಿಲ್ಲವೆಂದು ಅರಿತಿರುವರು ಎಲ್ಲ ಪ್ರಾಣಿಮಾತ್ರಗಳಲ್ಲಿ ಒಂದೇ ಜೀವನ ರಸವು ತುಂಬಿರುವದು, ಆದರ ಗುಣಧರ್ಮಗಳು ಸರ್ವಸಾಧಾರಣವಿರುವವು ಜಗತ್ತಿನ ಉತ್ಪತ್ತಿಯೂ, ಲಯವೂ ಒಂದೇ ಸವನೆ ನಡೆದಿರುವವು ಇಂಥ ಪ್ರಸಕ್ತಿಯಲ್ಲಿ ಆನಂದ—ದುಃಖಗಳಿಗೆ ಎಡೆ ಎಲ್ಲಿದೆ ? ದೇಶಭಕ್ತಿಯಿಂದ ಪ್ರೇರಿತರಾಗಿ ನಾವು ಮೃತ್ಯುಪಥವನ್ನೇ ಆಕ್ರಮಿಸಿದರೆ, ಅದು ಮರಣವಲ್ಲದೆ, ಜೀವನವೇ ಎಂದು ತಿಳಕೊಂಡಲ್ಲಿ, ಅದರೊಳಗೆ ಶೋಕವಾಗುವದು ? ದೇಶಸೇವೆಯನ್ನು ಜರುಗಿಸುವದರಲ್ಲಿ ಯಾವನೊಬ್ಬನು ಮರಣಕ್ಕೀಡಾದರೆ, ನಾವು ಅಳುತ್ತ ಕೂಡ್ರುವದಕ್ಕಾಗಿ ಕೊಳ್ಳುವ ಬದಲು ನಮ್ಮ ಕರ್ತವ್ಯ ನಡಿಸಿಕೊಂಡು ಹೋದರೆ ಶ್ರೇಯಸ್ಕರವಲ್ಲವೇ ? ಹೀಗೆ ವಿಚಾರಮಾಡಿ ನಾವು ಮರಣಭಯವನ್ನು ತೊರೆಯಬೇಕು

ಭಾರತವಾಸೀಯರು ಇತರ ಯಾವದೇ ದೇಶನಿವಾಸಿಗಳಿಗಿಂತ ಹೆಚ್ಚು ಜ್ಞಾನಿಗಳೂ, ತತ್ವವಾದಿಗಳೂ ಇರುವರೆಂದು ಜಂಬ ಬಡಿಯುತ್ತಿದ್ದರೂ, ಸಾವಿನ ಬೆದರಿಕೆ ಇತರ ದೇಶಗಳ ಜನರಿಗಿಂತ ನಮಗೇ ಹೆಚ್ಚಾಗಿರುತ್ತದೆ ಭಾರತವಾಸಿಯರ ವಿಶೇಷವಾಗಿ ಹಿಂದೂಗಳು ಸಾವೆಂದ ಕೂಡಲೆ ಗರ್ಭಗಳಿತರಾಗುವಷ್ಟು ಅವರು ಗಾಬರಿಯಾಗುವದಿಲ್ಲೆಂದು ನನ್ನ ತಿಳುವಳಿಕೆಯಾಗಿದೆ ಮನೆಯಲ್ಲಿ ಜನನವಾದ ಕೂಡಲೆ ನಾವು ಆನಂದಾತಿಶಯದಿಂದ ಕಣಿಯುತ್ತೇವೆ ಮತ್ತು ನಿಧನವಾದರೇನು ಕೇಳುವದು ? ಆಕ್ರೋಶವನ್ನೇ ಪ್ರಾರಂಭಿಸಿ ನೆರೆಹೊರೆಯವರಲ್ಲೆಲ್ಲ ಸಮಾನ ಭೀತಿಯನ್ನು ಹುಟ್ಟಿಸುತ್ತೇವೆ ನಾವು ಸ್ವರಾಜ್ಯವನ್ನು ಗಳಿಸಬೇಕಾದರೆ ಅದನ್ನು ಗಳಿಸಿ ಶೋಭಿಸಿಕೊಳ್ಳಬೇಕಾದರೆ, ನಾವು ಮರಣಭಯವನ್ನು ಸಂಪೂರ್ಣವಾಗಿ ತ್ಯಜಿಸಿ ಮುಕ್ತರಾಗಬೇಕು

ಮರಣಭಯದಿಂದ ಮುಕ್ತರಾದವರಿಗೆ ಕಾರಾಗೃಹಗಳ ಬೆದರಿಕೆಯು ಎಂದೂ ಸ್ಪರ್ಶಿಸಲಾರದು ವಾಚಕರು ವಿಚಾರಮಾಡಿದರೆ ಸ್ವರಾಜ್ಯ ಪ್ರಾಪ್ತಿಗೆ ಹೆಚ್ಚು ಕಡಿಮೆ ಕಾಲಾವಧಿ ತಗಲುವ ಕಾರಣವಾದರೂ ನಮ್ಮ ಮೃತ್ಯುಭಯವು ಅದಕ್ಕನುಷಂಗಿಕವಾದ ದುಃಖವೇ ಎಂದು ಅವರಿಗೆ ಕೂಡಲೇ ತಿಳಿಯುವದಾಗಿದೆ

ಹತ್ತೆಂಟು ನಿರ್ದೋಷಿ ಜನರು ಬುದ್ಧ್ಯಾ ಮೃತ್ಯುಪಥವನ್ನು ಆಕ್ರಮಿಸಲು ಸಿದ್ಧರಾದ ಹಾಗೆ ಇತರೇ ಜನರ ರಕ್ಷಣವಾಗುತ್ತದೆ, ಹಾಗೆಯೇ ದುಃಖವೂ ಕಡಿಮೆಯಾಗುತ್ತದೆ ಸಂತೋಷದಿಂದಲೂ ಖುಷಿಯಿಂದಲೂ ದುಃಖವನ್ನೇ ಅನುಭವಿಸಿದರೆ, ಅದರಿಂದ ದುಃಖವಾಗದೆ ಸುಖವಾಗುತ್ತದೆ ದುಃಖದಿಂದ ದೂರ ಓಡುವವನು ದುರ್ಬಲನು ದುಃಖಕ್ಕೊಳಗಾದ ಕೂಡಲೆ, ಅವನು ಅಳುಮೋರೆ ಮಾಡುವನು ಆದರೆ ಆನಂದದಿಂದ ದುಃಖವನ್ನು ಅನುಭವಿಸುವವನಿಗೆ ದುಃಖದ ತೀವ್ರತೆಯೇನು ಭಾಸವಾಗುವದು ? ಆಗಿನ ಆವನ ಆನಂದವು ಹರ್ಷೋತ್ಕರ್ಷದ್ದೋ ಹುದುವೇ

ಈ ವಿಷಯದ ಮೇಲೆ ನನಗೆ ಈಹೊತ್ತು ಬರೆಯಬೇಕಾಯಿತು. ಯಾಕೆಂದರೆ ಇದೇ ವರ್ಷಕ್ಕೆ ಸ್ವರಾಜ್ಯ ಗಳಿಸಬೇಕಾದರೆ, ಈಗ ನಾವು ಮರಣದ ಸಂಬಂಧ ಸಹ ವಿಚಾರಮಾಡಬೇಕಾಗಿದೆ ಮೊದಲಿನಿಂದ ನಾವು ಸಿದ್ಧರಾಗಿದ್ದರೆ ವಿಶೇಷ ಪ್ರಸಂಗದಲ್ಲಿ ನಮ್ಮ ರಕ್ಷಣೆಯಾಗುವ ಸಂಭವವಿದೆ ಇದೇ ದೃಢಭಾವನೆಯಿಂದ ಪ್ರೇರಿತರಾಗಿ, ನಾವು ಸ್ವದೇಶಿಯನ್ನು ಪುರಸ್ಕರಿಸಿದ್ದೇವೆ ಸ್ವದೇಶಿ ಚಳವಳಿಯಲ್ಲಿ ನಾವು ಯಶಸ್ಸನ್ನು ಪಡೆದರೆ, ಬಳಿಕ ಸರಕಾರದ ಅಥವಾ ಇತರ ಯಾವದೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವೆಂದು ತಿಳಿಯಲಡ್ಡಿಯಿಲ್ಲ

ನಾವು ಯಾವದೇ ರೀತಿಯಿಂದ ನಿಷ್ಕಾಳಜಿಯಿಂದ ವರ್ತಿಸಬಾರದು ಅಧಿಕಾರಕ್ಕೆ ಕಣ್ಣು ಇಲ್ಲ, ಕಿವಿಯೂ ಇಲ್ಲ ಕಣ್ಮುಂದೆ ಏನು ನಡೆದದೆಂಬುದು ಅದಕ್ಕೆ ತಿಳಿಯುವದಿಲ್ಲ ಅದರ ಬೆನ್ನಿಗೇ ಎಷ್ಟು ಬಡಿದಾಡಿದರೂ, ಅದಕ್ಕೆ ಕೇಳುವದಿಲ್ಲ ಇನ್ನುಮುಂದೆ ಸರಕಾರವು ಹೇಗೆ ವರ್ತಿಸುವರೆಂದು ಯಾರು ಹೇಳಬಲ್ಲರು ? ಆದಕಾರಣ ದೇಶಸೇವೆಯನ್ನು ಮಾಡುವವರು ಸಾವಿಗಾಗಲೀ, ಕಾರಾಗೃಹಕ್ಕಾಗಲೀ, ಇತರ ಯಾವದೇ ಉಪದ್ರಗಳಿಗಾಗಲೀ ಬೆದರಬಾರದೆಂದು ನನಗೆ ತೋರಹತ್ತಿದೆ ಈ ಸಂಕಟಗಳೇ ನಮ್ಮ ಗೆಳೆಯರೆಂದು ಭಾವಿಸಿ, ನಾವು ಅವುಗಳನ್ನು ಆನಂದದಿಂದ ಸ್ವಾಗತೀಕರಿಸಬೇಕು

ಶೂರ ವೀರರು ಸಾವನ್ನು ನಗುಮೋರೆಯಿಂದ ಆಲಿಂಗಿಸುತ್ತಾರೆ, ಹಾಗೆಯೇ ಅವರು ಜಾಗರೂಕರಿರುತ್ತಾರೆ ಈ ಶಾಂತಿಮಯ ಯುದ್ಧದಲ್ಲಿ ನಾವು ಶಸ್ತ್ರವನ್ನು ಸರ್ವಥಾ ತ್ಯಜಿಸಬೇಕು ನೀತಿಗೆ ವಿರುದ್ಧವಾಗಿ ವರ್ತಿಸಿ, ಅದಕ್ಕೆ ಅನುರೂಪವಾದ ಕಾರಾಗೃಹದ ಶಿಕ್ಷೆಯನ್ನಾಗಲೀ ದೇಹಾಂತ ಶಿಕ್ಷೆಯನ್ನಾಗಲೀ ಅನುಭವಿಸುವದೇನಿಲ್ಲ ನಾವು ಸರಕಾರದ ಜುಲುಮಿಕಾಯಿದೆಗಳನ್ನು ಮುರಿಯಲು ಹೊರಡುತ್ತೇವೆ, ಮತ್ತು ಇದಕ್ಕಾಗಿಯೇ ನಾವು ವಿಶೇಷ ಪ್ರಸಂಗದಲ್ಲಿ ಫಾಶೀ ಶಿಕ್ಷೆಗೆ ಸಹ ತಯಾರಿರಬೇಕು.

ಆಶ್ರಯದಾತರಿಗೆ ಆಗ್ರಹದ ವಿನಂತಿ.

ಇದು ೫ ನೇ ವರ್ಷದ ೪೪ ನೇ ಸಂಚಿಕೆಯು. ಇನ್ನು ೪ ಸಂಚಿಕೆಗಳಿಂದ ಈ ೫ ನೇ ವರ್ಷವು ಮುಗಿಯುತ್ತದೆ. ಈ ಐದು ವರ್ಷಗಳ ಅವಧಿಯಲ್ಲಿ ನಮ್ಮಿಂದ ಜರುಗಿಸಲ್ಪಟ್ಟ ಕರ್ತವ್ಯಕ್ಕನುರೂಪವಾದ ಪ್ರೋತ್ಸಾಹನೆಯಂತೂ ಸಿಗಲೇ ಇಲ್ಲ. ಸಿಕ್ಕಿದ ಪ್ರೋತ್ಸಾಹನೆಯಿಂದಲೂ ಕಾಗದ-ಮಸಿ ಮುಂತಾದ ಛಾಪಿ ಸಾಹಿತ್ಯದ ತುಟ್ಟಿ ಧಾರಣೆಯಿಂದಲೂ ಈ ಧಂದೆಯನ್ನು ನಡಿಸುವದು ಬಹು ಕಷ್ಟವಾಗಿದೆ. ಕಾರಣ, ಮುಂದಿನ ವರ್ಷಕ್ಕೆ ಈ ಪತ್ರದ ವರ್ಗಣಿ ಊರಲ್ಲಿ, ರೂಪಾಯಿ ೩-೪-೦, ಅಂಚೇ ವೆಚ್ಚ ಸೇರಿ, ರೂಪಾಯಿ ೨-೮-೦ ವ್ಹಿ. ಪಿ. ಯಿಂದ ರೂಪಾಯಿ ೩-೨-೦ ಇಟ್ಟಿದೆ. ಇನ್ನು ವ್ಹಿ. ಪಿ. ಪದ್ಧತಿಯಿಂದ ಹಣ ವಸೂಲ ಮಾಡುವದು ಉಭಯತರಿಗೂ ಹಿತಕರವಲ್ಲೆಂದು ಸಿದ್ಧವಾಗಿದೆ. ಆದ್ದರಿಂದ ಆಶ್ರಯದಾತರು ತಮ್ಮ ತಮ್ಮ ವರ್ಗಣಿಯ ಹಣವನ್ನು ಮನಿಯಾರ್ಡರಿಯಿಂದಲೇ ಹೊಸ ವರ್ಷದ ಪ್ರಾರಂಭಕ್ಕೆ ತಪ್ಪದೆ ಕಳುಹಿಸಿ, ಪ್ರೋತ್ಸಾಹಿಸುವರೆಂದು ಕೋರುವೆವು. ಹೊಸ ವರ್ಗಣಿದಾರರಾಗಲಿಚ್ಛಿಸುವವರು ತಮ್ಮ ವರ್ಗಣಿಯ ಹಣವನ್ನು ಮನಿಯಾರ್ಡರಿಯಿಂದ ಕಳಿಸುವದುತ್ತಮ. ಪತ್ರವು ಯಾವದೇ ಸಂಚಿಕೆಯಿಂದ ಚಾಲೂ ಮಾಡಬಹುದು. ಪತ್ರವನ್ನು ಕೊಳ್ಳಬಿಡುವವರು ಮುಂದಾಗಿಯೇ ನಮಗೆ ತಿಳಿಸಿದರೆ, ನಾವು ಅವರಿಗೆ ಆಭಾರಿಯಾಗುವೆವು. ಹಾಗೆ ತಿಳಿಸದ್ದರಿಂದ ನಾವು ಬಹಳೇ ಹಾನಿಗೆ ಗುರಿಯಾಗಿರುವೆವು. ಇಷ್ಟೇ ನಮ್ಮ ಪ್ರಾರ್ಥನೆ.

—ಮೆನೇಜರ ಕಾ॰ ವೃ॰

ಕಾನಡಾವೃತ್ತ.

ಗುರುವಾರ ತಾರೀಖು ೨೫ ಮಾಹೆ ಅಗೋಸ್ತ ೧೯೨೧

ಜಿಲ್ಹಾ ಕೊಂಗ್ರೆಸ ಕಮಿಟಿ.

ನಾಗಪೂರ ಕಾಂಗ್ರೆಸಿನಲ್ಲಿ ಏರ್ಪಡಿಸಲ್ಪಟ್ಟ ಕಾಂಗ್ರೆಸಿನ ಹೊಸ ಘಟನೆಯಂತೆ, ಪ್ರತಿ ಒಂದು ಪ್ರಾಂತದಲ್ಲಿ ಪ್ರತಿ ಒಂದು ಜಿಲ್ಲೆಯಲ್ಲಿ, ಮತ್ತು ಪ್ರತಿ ಒಂದು ತಾಲೂಕಿನಲ್ಲಿ ಕಾಂಗ್ರೆಸಿನ ಕಾರ್ಯವನ್ನು ನಡಿಸಲಿಕ್ಕೆ ತಾತ್ಕಾಲಿಕ ಕಾರ್ಯನಿರ್ವಾಹಕ ಕಮಿಟಿಗಳು ಸ್ಥಾಪಿಸಲ್ಪಟ್ಟದ್ದವು. ಪ್ರಾತಿನಿಧಿಕ ತತ್ವದಂತೆ, ಚುನಾಯಿಸಿ ಕಮಿಟಿಗಳನ್ನು ಸ್ಥಾಪಿಸುವ ಕೆಲಸವು ಎಲ್ಲಕಡೆಯಲ್ಲಿ ಈಗೀಗ ನಡೆದದೆ. ಅದರಂತೆ ನಮ್ಮ ಜಿಲ್ಲೆಯ ಕಾಂಗ್ರೆಸ ಕಮಿಟಿಯನ್ನು ಸ್ಥಾಪಿಸುವದಕ್ಕೆ ಕಳೆದ ಆದಿತ್ಯವಾರ ದಿವಸ ಪ್ರತಿ ಒಂದು ತಾಲೂಕಿನೊಳಗಿನ (ಯಲ್ಲಾಪೂರ ತಾಲೂಕು ಬಿಟ್ಟು) ಪ್ರತಿನಿಧಿಗಳು ಇಲ್ಲಿಗೆ ಕೂಡಿದ್ದರು. ಕಾರವಾರದ ಪರಿಷತ್ತಿನ ನಂತರ, ಇದೇ ಜಿಲ್ಲೆಯ ಮುಖಂಡರು ದೇಶಕಾರ್ಯಕ್ಕಾಗಿ ಒಂದು ಕಡೆಗೆ ಕೂಡಿದ್ದು ಇದೇ ಎರಡನೇ ಪ್ರಸಂಗವು. ಇಂಥ ಸಮ್ಮೇಲನಗಳಿಗೆ ಈಗಿನ ವಿಧಾಯಕ ದೇಶಕಾರ್ಯದ ಯುಗದೊಳಗೆ ವಿಶಿಷ್ಟ ಮಹತ್ವವದೆ. ಪರಾವಲಂಬನದ ಸಹಕಾರಿತೆಯನ್ನು ಒಂದು ಶತಮಾನ ನಡಿಸಿ, ಅದು ನಿಷ್ಫಲವಾಯಿತೆಂದು ಮನಗಂಡು, ಜನತೆಯು ಸ್ವಾವಲಂಬನದ ಸಹಕಾರಿತೆಯನ್ನು ಕೈಕೊಂಡು ಸ್ವರಾಜ್ಯಪ್ರಾಪ್ತಿಗಾಗಿ ದುಡಿಯುವ ಸಾಧನಗಳು ಇವೇ ಸಮ್ಮೇಲನಗಳು. ಹಳೆ-ಹೊಸ ಸಾಧನಗಳೊಳಗಿನ ಭೇದಗಳು ಇನ್ನು ಸ್ಪಷ್ಟವಾಗಿ ತಿಳಿಯಹತ್ತಿವೆಂಬದರ ಪ್ರತ್ಯಯವು ಇದೇ ಕಮಿಟಿಗಳಿಂದ ಹೊಳೆಯುವದು. ತಾನಾಯಿತು, ತನ್ನ ಕೆಲಸವಾಯಿತು, ಎಂಬ ಸ್ವಾರ್ಥಿ ಸಂಕುಚಿತ ಭಾವನೆಯ ಬದಲು, ಮಾತೃಭೂಮಿಯಾಯಿತು ಅದರ ಕೆಲಸವಾದರಾಯಿತು, ಎಂಬ ಭಾವನೆಯು ಸುಶಿಕ್ಷಿತ-ಅಶಿಕ್ಷಿತ ಜನತೆಯೊಳಗೆ ಈಗ ಹಬ್ಬಿದಷ್ಟು ಪೂರ್ವದಲ್ಲಿ ಎಂದೂ ಹಬ್ಬಿದ್ದಿಲ್ಲ. ದೇಶಭಕ್ತ ಎಂಬ ಶಬ್ದವು ಮೊದಲು ತುಟಿಗಳಿಂದಲೇ ಉಚ್ಚರಿಸಲ್ಪಡುತ್ತಿತ್ತು. ಕೈಗಳಿಂದ ಅದರ ಆಚರಣೆಯು ಅಪರೂಪವಾಗಿತ್ತು. ಈಗ ದೇಶಭಕ್ತಿಯನ್ನು ಆಡಿ ತೋರಿಸುವದಕ್ಕಿಂತ, ಮಾಡಿ ತೋರಿಸುವದು ನಿಜವಾದ ಮತ್ತು ಫಲದಾಯಕ ಕರ್ತವ್ಯವೆಂದು ದೇಶಸೇವಕರು ಮನಗಂಡಿರುವರು. ಇಂಥ ಕರ್ತವ್ಯ ಸೇವನೆಯ ಬುದ್ಧಿಯಿಂದಲೇ ಜಿಲ್ಲೆಯ ಮುಖಂಡರು ದೂರದೂರಿನ ಪ್ರವಾಸದ ಆಯಾಸಗಳನ್ನು ಆನಂದದಿಂದ ಸಹಿಸಿ, ಮುಖಪ್ರವೇಶದ ಮೇಘರಾಜನು ಪೂರ್ಣವಾಗಿ ಪ್ರಸನ್ನನಾದಾಗ ಕುಮಟೆಗೆ ಚಿತ್ತೈಸಿದ್ದು ದೇಶಭಕ್ತಿಯ ಕೃತಿಯಲ್ಲದೆ ಮತ್ತೇನು? ದೇಶದೊಳಗೆ ಸಂಚರಿಸಹತ್ತಿದ ನವಜೀವನದ ದೃಷ್ಟಾಂತವಿದು.

ಈ ಕಮಿಟಿಗೆ, ಯಲ್ಲಾಪೂರ ಮತ್ತು ಸುಪಾ-ಮುಂಡಗೋಡ ಪೇಟಾಗಳು ಬಿಟ್ಟು, ಇತರ ಎಲ್ಲ ತಾಲೂಕುಗಳಿಂದ ಒಟ್ಟು ೫೧ ಪ್ರತಿನಿಧಿಗಳು ಆಗಮಿಸಿದ್ದರು. ತಪಶೀಲವಾರ ಕಾರ್ಯಕ್ರಮದ ಗೋಷ್ವಾರೆಯು ಬೇರೆ ಕಡೆಗೆ ಕೊಟ್ಟದೆ. ಜಿಲ್ಲಾ ಕಾಂಗ್ರೆಸ ಕಮಿಟಿಯು ಹೊನ್ನಾವರದಲ್ಲೇ ಸ್ಥಾಪಿಸಲ್ಪಟ್ಟಿತೆಂಬದು ಒಳಿತಾಯಿತು. ಕಾಂಗ್ರೆಸ ಕೆಲಸದಾರಂಭವಾದಿ, ಇತರ ತಾಲೂಕುಗಳಿಗೆ ರಾಷ್ಟ್ರೀಯ ಸೇವೆಯ ಮಾರ್ಗದರ್ಶಕತ್ವವನ್ನು ತೋರಿಸಿದ್ದು ಹೊನ್ನಾವರವೇ ಸರಿ. ಟಿಳಕ ಸ್ವರಾಜ್ಯ ಫಂಡಿಕೆ ೫-೬ ಸಾವಿರಷ್ಟು ದೊಡ್ಡ ರಕಮು ಕೂಡಿಸಿಕೊಟ್ಟು, ಮದ್ಯಪಾನ ನಿಷೇಧಕ್ಕಾಗಿ ಉತ್ತಮ ರೀತಿಯಿಂದ ಕಾರ್ಯನಿರ್ವಾಹ ಮಾಡುತ್ತಿರುವದು ಹೊನ್ನಾವರವೇ. ಅದು ಇಂಥ ರಾಷ್ಟ್ರೀಯ ಕಾರ್ಯಗಳನ್ನು ಸ್ವಾರ್ಥತ್ಯಾಗದಿಂದ ಕೈಕೊಂಡದ್ದಕ್ಕಾಗಿಯೇ ಈ ಮಾನಕ್ಕೆ ಅರ್ಹವಾಯಿತು. ಈಗಾದರೂ ಈ ನೂತನ ಜವಾಬದಾರಿಕೆಗಳು ಆ ಕಮಿಟಿಯಿಂದ ಬಹು ತತ್ಪರತೆಯಿಂದಲೂ, ಶ್ರದ್ಧೆಯಿಂದಲೂ ನಿರ್ವಹಿಸಲ್ಪಡುವವೆಂದು ಇಡಿ ಜಿಲ್ಲೆಯು ತಿಳಿದಿರುವದು.

ಶ್ರೀ॥ ಮಂಜುನಾಥ ದೇವರ ಭಟ ಕರ್ಕಿಯವರು ಸರ್ವಾನುಮತವಾಗಿ ಆ ಕಮಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು. ಇವರು ಸದ್ಯದ ವಕೀಲಿ ಧಂದೆಗೆ ಸರ್ಕಾರದಿಂದ ನೂತನವಾಗಿ ಏರ್ಪಡಿಸಲ್ಪಟ್ಟ ಫೀ ವಗೈರೆ ನೇಮಗಳ ಆಧಾರದಿಂದ ಸಿಗಬಹುದಾದ ವಿಶೇಷ ಲಾಭದ ಸ್ವಾರ್ಥವನ್ನು ಬದಿಗೊತ್ತಿ, ದೇಶಭಕ್ತಿಯಿಂದ ಈ ಕೆಲಸಕ್ಕೆ ವಹಿಸಿಕೊಂಡದ್ದು ಅವರಿಗೆ ಬಹು ಶ್ರೇಯಸ್ಕರವು. ಹೀಗಾಗಿ, ಅವರಲ್ಲಿ ಇಡಿ ಜಿಲ್ಲೆಯ ಜನತೆಗ ಈಗ ವಿಶ್ವಾಸ ಉಂಟಾಗಿದೆ. ಅವರು ಅಧ್ಯಕ್ಷ ಪದದ ಜವಾಬದಾರಿ ಕರ್ತವ್ಯಗಳನ್ನು ಜನತೆಗೆ ಸಮಾಧಾನವಾಗುವಂತೆ ನೆರವೇರಿಸುವರೆಂದು ನಾವು ಪೂರ್ಣ ಕೋರುವೆವು. ಹಾಗೆಯೇ, ಹಳಿಯಾಳದ ಶ್ರೀ॥ ಭದ್ರಿಯವರು ಉಪಾಧ್ಯಕ್ಷರಾಗಿರುವರು. ಅವರೂ ಸಹ ದೇಶಸೇವೆಯನ್ನು ವಿಕಸನಿಷ್ಠೆಯಿಂದ ಮಾಡಿ, ಈ ಮಾನಕ್ಕೆ ಅರ್ಹರಾಗಿರುವರು. ಅವರು ನಮ್ಮ ಪ್ರತಿಯಿಂದ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಪ್ರತಿನಿಧಿಗಳಾಗಿರುವರು. ಇಂಥ ಮುಖಂಡರ ಮಾರ್ಗದರ್ಶಕತ್ವದಿಂದ ನಮ್ಮ ಕಾನಡಾ ಜಿಲ್ಲೆಯು ಇತರ ಜಿಲ್ಲೆಗಳ ಸಂಗಡ ಸ್ವರಾಜ್ಯದ ಮಾರ್ಗಕ್ರಮಣ ಮಾಡುವದೆಂಬುದು ನಿಸ್ಸಂದೇಹವು. ಇಂಥ ಎಲ್ಲ ಶಾಂತಿಮಯ ಮತ್ತು ನ್ಯಾಯ್ಯವಾದ ಸಾಧನಗಳಿಂದ ನಮ್ಮ ದೇಶವು ಸ್ವತಂತ್ರತೆಯ ಮೋಕ್ಷವನ್ನು ಸಾಧಿಸಲಿಕ್ಕೆ ಉದ್ಯುಕ್ತವಾಗಿರುವದು. ಅದು ಸಾಧ್ಯವಾಗದಿದ್ದರೆ, ಅವರು ಕರ್ತವ್ಯಪರಾಙ್ಮುಖತೆಗೂ, ಆಲಸ್ಯಕ್ಕೂ ಬಲಿಬಿದ್ದಂತಾಗುವರು. ಮದ್ಯಪಾನ ನಿಷೇಧ, ಸ್ವದೇಶಿವ್ರತ, ಬಹಿಷ್ಕಾರ, ಅಸ್ಪೃಶ್ಯತಾನಿವಾರಣೆಗಳಂಥ ಮಹತ್ವದ ಕರ್ತವ್ಯಗಳು ನಮ್ಮ ಮುಂದೆ ಈಗ "ದತ್" ಎಂದು ನಿಂತಿರುವವು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಕಾನಡಾ ಜಿಲ್ಲೆಯು ಈಗ ನೇಮಕವಾದ ಕಮಿಟಿಯ ಮಾರ್ಗದರ್ಶಕತ್ವದಿಂದ ತನ್ನ ಕರ್ತವ್ಯವನ್ನು ನೆರವೇರಿಸಿ, ವಿಕಸನಿಷ್ಠೆಯಿಂದ ಸ್ವರಾಜ್ಯ ಸಾಧ್ಯತೆಯನ್ನು ಗಳಿಸುವದೆಂದು ಪೂರ್ಣ ನಂಬಿರುವೆವು.

ಸ್ಫುಟ ಸೂಚನೆಗಳು.

೧. ಮುಂಬಯಿಯ ಕನಡಾ ಯೂನಿಯನ್ನದ ವಾರ್ಷಿಕ ಸಮ್ಮೇಲನವು ವಿಜೃಂಭಣೆಯಿಂದ ಕೊನೆಗಂಡಿತೆಂದು ತಿಳಿಸಲು ತುಂಬಾ ಸಂತೋಷಪಡುವೆವು. ಸಂಘದ ಚಾಲಕರಾದ ಶ್ರೀ॥ ನರಹರಪಂತ ಭೇನೆರವರು ವಾರ್ಷಿಕ ವೃತ್ತಾಂತವನ್ನು ನಿವೇದಿಸಿ, ಶ್ರೀ॥ ಶಿವರಾವ ನಾಡಕರಣಿಗ ಸನ್ಮಾನ್ಯ ಸಭಾಧ್ಯಕ್ಷರಾಗಿ ಆರಿಸಬೇಕೆಂದು ಸೂಚನೆ ಮಾಡಿ,

ಸಂಘದ ಒಪ್ಪಿಗೆಯನ್ನು ಪಡೆದರು. ಸಂಘವು ತಮ್ಮ ಶಿಕ್ಷಣ ವಿಷಯಕ ಮತ್ತು ಸಾಮಾಜಿಕ ಏಳಿಗೆಯ ಕಾರ್ಯವನ್ನು ಸುಸೂತ್ರವಾಗಿ ವ್ಯವಸ್ಥಿತ ರೀತಿಯಿಂದ ನಡಿಸುತ್ತದೆಂದು ಅರಿತು ನಾವು ಅದನ್ನು ಹೊಗಳುವೆವು. ಭಾವಿ ಕಾನಡಿಗ ಮುಂದಾಳುಗಳನ್ನು ತಯಾರಿಸುವ ಸಣ್ಣ ಪ್ರಯೋಗ ಶಾಲೆಯನ್ನು ನಿಃಸ್ವಾರ್ಥಬುದ್ಧಿಯಿಂದ ತಾವು ನಡಿಸುತ್ತೇವೆಂಬ ಭಾವನೆಯಿಂದ ಅದರ ಚಾಲಕರು ಮುಂದರಿಯುತ್ತಿರಲು, ಸಂಸ್ಥೆಯ ಉತ್ತರೋತ್ತರ ಉತ್ಕರ್ಷವು ನೆರವೇರುವದೆಂದು ನಾವು ಹೇಳುವೆವು. ಪ್ರಕೃತ ಸಮ್ಮೇಲನದ ಅಧ್ಯಕ್ಷರು ನಮ್ಮಾನ್ಯ ಕಾನಡಿಗರಾದ ಬ್ಯಾರಿಸ್ಟರ ಮಿ। ವೆಂಕಣ್ಣಾ ನ್ಯಾಕ (ಗೊನೆಹಳ್ಳಿ) ರವರಾಗಿದ್ದರು. ಅವರು ಸಮಯೋಚಿತ ಮತ್ತು ವಿಚಾರಪರಿಪ್ಲುತ ಉಪನ್ಯಾಸವನ್ನು ಮಾಡಿರುವರು. ಕಾನಡಾ ಜಿಲ್ಲೆಯ ಏಳಿಗೆಗಾಗಿ ಸುಸಂಘಟಿತ ಪ್ರಯತ್ನಗಳನ್ನು ಮಾಡಬೇಕಾಗಿಯೂ, ಎಲ್ಲ ಶಿಕ್ಷಣಾಭಿಮಾನಿಗಳು ವರ್ಷಾನುವರ್ಷ ಶಿಕ್ಷಣ ಪರಿಷತ್ತನ್ನು ಕೂಡಿಸಿ, ಸಾಧ್ಯ ಸಾಧನಗಳನ್ನು ಚರ್ಚಿಸಬೇಕೆಂತಲೂ, ಬಡ ವಿದ್ಯಾರ್ಥಿಗಳಿಗೆ ಬಡ ಶಾಲೆಗಳಿಗೆ ದ್ರವ್ಯ ಸಹಾಯ ಮಾಡುವ ಯೋಜನೆಯನ್ನು ಕೈಕೊಳ್ಳಬೇಕೆಂತಲೂ, ಅವರು ತಮ್ಮ ಭಾಷಣದಲ್ಲಿ ಸೂಚಿಸಿರುವರು. ಇಂಥ ಸೂಚನೆಗಳು ಸರ್ವಸಮ್ಮತವಾಗುವವೆಂದು ತಿಳಿಯುವೆವು ಅವರ ಸೂಚನೆಗಳನ್ನು ಕೃತಿಯಲ್ಲಿ ರೂಪಾಂತರ ಮಾಡಲಿಕ್ಕೆ ಶಿಕ್ಷಣಪುರಸ್ಕರ್ತರು ಬೇಗನೇ ಯತ್ನಿಸುವರೆಂದು ಕೋರುವೆವು. ನಮ್ಮ ಎಲ್ಲ ಸುಧಾರಣೆಗೆ ಶಿಕ್ಷಣವೇ ಆಧಾರಭೂತವಾಗಿದೆಂದು ಮುಖಂಡರು ತಿಳಿದಿರಲಿ.

---

೨ ದೇಶಭಕ್ತ ಶ್ರೀ। ರಾಮರಾವ ಪಡಬಿದ್ರಿಗಳವರು ಮೊನ್ನೆ ಮುಂಬಯಿಯ ಗಿರಿಗಾವ ತಾಲೂಕಾ ಕಾಂಗ್ರೆಸ ಕಮಿಟಿಯವತಿಯಿಂದ ಕೂಡಿಸಿದ ಸಾರ್ವಜನಿಕ ಸಭೆಯಲ್ಲಿ ಸ್ವದೇಶಿಯಮೇಲೆ ಮಹತ್ವದ ಉಪನ್ಯಾಸವನ್ನು ಮಾಡಿರುವರು. ಅರ್ಥಶಾಸ್ತ್ರದೃಷ್ಟಿಯಿಂದ ಸ್ವದೇಶಿಯ ಪ್ರಸಾರವನ್ನು ಮಾಡುವದು ಅಸಾಧ್ಯ ಕೋಟಿಯೊಳಗಿನ ಸಂಗತಿಯಾಗಿದೆಂದು ಹೇಳುವ ಶಾಸ್ತ್ರಿ—ಪಂಡಿತರ ಪೂರ್ವಪಕ್ಷವನ್ನು ಸಪ್ರಮಾಣ ಖಂಡಿಸಿರುವರು. ರಾಷ್ಟ್ರೀಯ ಭಾವನೆಯಿಂದ, ದೃಢನಿಶ್ಚಯದ ಬಲದಿಂದ ಯುದ್ಧಕಾಲದೊಳಗೆ ಎಷ್ಟೋ ಅಶಕ್ಯವೆಂದು ಕಾಣುವ ಸಂಗತಿಗಳನ್ನು ಬ್ರಿಟಿಷರು, ಫ್ರೆಂಚರು, ಶಕ್ಯಮಾಡಿ ತೋರಿಸಿಲ್ಲೇನು ? ರಾಷ್ಟ್ರದ ನಿರ್ಧಾರವು ಅಷ್ಟು ಬಲವತ್ತರವಾಗಿದ್ದರೆ, ನೆಪೋಲಿಯನನು ಹೇಳಿದಂತೆ "ಅಶಕ್ಯ" ವೆಂಬ ಪದವೇ ನಮ್ಮ ಶಬ್ದಕೋಶದಲ್ಲಿ ಕಾಣದು. ಮ. ಗಾಂಧಿಯಂಥ ಶಾಂತ ಸ್ವಭಾವದ ಪುರುಷರಿಗೆ ಪರದೇಶಿ ವಸ್ತ್ರದ ಹೋಮವನ್ನು ಮಾಡುವದು ಅವಶ್ಯಕವೆಂದು ಯಾಕೆ ಕಂಡಿತು, ಎಂಬುವದನ್ನು ಸಮರ್ಥಿಸುವಾಗ, ಶ್ರೀ। ರಾಮರಾಯರು ಅಂದದ್ದೇನಂದರೆ— ಪರದೇಶಿ ಎಂಬುದು ವಾರಾಂಗನೆಯಂತೆ ಮೋಹಕವಾಗಿರುವದು. ಅದರ ಬಹಿರಂಗದ ಸೊಬಗಿನಿಂದ ಅನೇಕರು ಮೋಹಿತರಾಗುತ್ತಾರೆ. ಈ ಮೋಹಮಾಲೆಯನ್ನು ನಾಶವಡಿಸುವದು ಪರದೇಶಿ ಬಟ್ಟೆಗಳ ಹೋಳಿಯಿಂದಲೇ ಸಾಧ್ಯವೆಂದು ಮಹಾತ್ಮರ ಸಾತ್ವಿಕ ಭಾವನೆಯು. ಇನ್ನು ಕೈರಾಟೆಯಿಂದ ನಾವು ದಿನನಿತ್ಯ ವ್ಯರ್ಥ ಕಳೆಯುವ ವೇಳೆಯನ್ನು ಧನೋತ್ಪಾದಕವಾಗಿ ಉಪಯೋಗಿಸಲಿಕ್ಕಾಗುತ್ತದೆಂದು ಅರ್ಥಶಾಸ್ತ್ರಜ್ಞರು ಒಪ್ಪಲೇ ಬೇಕೆಂದು ಅವರು ಪ್ರತಿಪಾದಿಸಿದರು. ಅವರ ಉಪನ್ಯಾಸವು ಬಹಳೇ ಮನನೀಯವಾಗಿದೆ. ಸ್ವದೇಶಿಯ ಸಾಧಕ-ಬಾಧಕ ವಿಚಾರಗಳನ್ನು ಸ್ವತಂತ್ರದೃಷ್ಟಿಯಿಂದ ಚರ್ಚಿಸುವ ಇಂಥ ಉಪನ್ಯಾಸಗಳು ಸ್ವದೇಶಿಯ ಮಹತ್ವದ ಲೇಖಗಳಾಗಿರುವವು. ವಿಚಾರಜಾಗ್ರತೆಯನ್ನು ಮಾಡುವ ಇಂಥ ಬಹಳೇ ಬೋಧಪ್ರದ ವ್ಯಾಖ್ಯಾನವನ್ನು ಕೊಟ್ಟಬಗ್ಗೆ ದೇ। ಭ। ಪಡಬಿದ್ರಿ ಮಹಾನುಭಾವರನ್ನು ನಾವು ಆದರಪೂರ್ವಕ ಅಭಿನಂದಿಸುವೆವು. ಮತ್ತು ಸ್ವದೇಶಿಯ ಭಕ್ತರು ಅವರ ವಿಚಾರಗಳನ್ನು ಮನನ ಮಾಡುವರೆಂದು ಕೋರುವೆವು.

---

೩. ಈ ವಾರದಲ್ಲಿ ಕರ್ನಾಟಕದ ಇಬ್ಬರು ಪ್ರಸಿದ್ಧ ವಕೀಲರೂ, ಈಗಿನ ಸಾರ್ವಜನಿಕ ಕೆಲಸಗಳಲ್ಲಿ ಮನಮುಟ್ಟಿ ದುಡಿಯುವ ಮುಂದಾಳುಗಳು — ಬೆಳಗಾಂವ ಜಿಲ್ಹಾ ಚಿಕ್ಕೋಡಿಯ ಸಖಾರಾಮಪಂತ ಕುಲಕರ್ಣಿಯವರು ಮತ್ತು ಧಾರವಾಡದ ನಾರಾಯಣರಾವ ಗುರುನಾಥರಾವ ಕರಗುದರಿಯವರು— ಒಮ್ಮಿಂದೊಮ್ಮೆ ವೈಕುಂಠವಾಸಿಗಳಾದರೆಂದು ಕೇಳಿ ವಿಷಾದಪಡುವೆವು. ಇಬ್ಬರೂ ಬಡಸ್ಥಿತಿಯಿಂದ ವಕೀಲಿಯಂದಿಗೆ ಸರಿ ನಾಮಾಂಕಿತರಾಗಿದ್ದರು. ಸಖಾರಾಮಪಂತ ಕುಲಕರ್ಣಿಯವರು ಇತ್ತಿತ್ತ ರಾಷ್ಟ್ರೀಯ ಸಭೆಯ ಆಜ್ಞಾನುಸಾರವಾಗಿ ವಕೀಲಿಯನ್ನು ಬಿಟ್ಟುಕೊಟ್ಟು, ಅಸಹಕಾರಿತೆಯ ಚಲವಲದ ಇತರ ಕರ್ನಾಟಕದ ಮುಖಂಡರ ಸಂಗಡ ಪುರಸ್ಕರ್ತರಾಗಿ ಲೋಕಮಾನ್ಯರ ಶಿಷ್ಯತ್ವವನ್ನು ಪೂರ್ಣ ಅಂಗೀಕರಿಸಿದ್ದರು. ಅವರು ಕರ್ನಾಟಕದವತಿಯಿಂದ ಅಖಿಲಭಾರತೀಯ ಕಾಂಗ್ರೆಸ ಕಮಿಟಿಯ ಸಭಾಸದರಾಗಿದ್ದರು. ನಾರಾಯಣರಾವ ಕರಗುದರಿಯವರು ಧಾರವಾಡ ಜಿಲ್ಹಾ ಕಾಂಗ್ರೆಸ ಸಭೆಯ ಕಾರ್ಯದರ್ಶಿಗಳೂ, ಎಷ್ಟೋದಿವಸ ಪ್ರೆಸಿಡೆಂಟರೂ ಆಗಿದ್ದರು. ಧಾರವಾಡ ಮುನಿಸಿಪಾಲಿಟಿಯ ಪ್ರೆಸಿಡೆಂಟ ನಾತೆಯಿಂದ ಅಲ್ಲಿಯ ಕಲೆಕ್ಟರ ಮಿ। ಆ ವ್ಹೆನ್ನ್ಯುಅರ್‌ರವರ ಕೂಡ ಅಭಿಮಾನದಿಂದಲೂ, ಸ್ಥಾನಿಕ ಲೋಕ ಸಂಸ್ಥೆಯ ಸ್ವಾಯತ್ತೆಯ ಸಮರ್ಥನೆಗಾಗಿಯೂ ಅವರು ಸ್ಫೂರ್ತಿಯಿಂದ ಕಾದಾಡಿದ್ದರು. ಇಂಥ ಮುಖಂಡರನ್ನು ಕರ್ನಾಟಕವು ಒಮ್ಮೇಲೆ ಕಳಕೊಂಡದ್ದು ಅದರ ದುರ್ದೈವವು. ಪರಮಾತ್ಮನಿಚ್ಛೆಗೆ ಯಾರ ಉಪಾಯ ! ಉಭಯ ಮೃತರ ಆತ್ಮಗಳಿಗೆ ಚಿರಶಾಂತಿ ದೊರೆಯಲೆಂದು ಬೇಡುವೆವು

---

೪. ಇದೇ ಕಳೆದ ಸೋಮವಾರ ಶ್ಯಾಮ ಘಂಟೆ ೪ಕ್ಕೆ ಲಾಹೋರದ ಮೌಲಾನಾ ಹಬಿಬುಲ್ಲಾ ಖಾನರವರ ಉಪನ್ಯಾಸವು ಬಹು ಸ್ಫೂರ್ತಿದಾಯಕವಾಗಿ ಕೊಡಲ್ಪಟ್ಟಿತು. ಆಗ ಜನಸ್ತೋಮವು ಎಲ್ಲ ಹಳ್ಳಿಪಳ್ಳಿಗಳಿಂದಲೂ, ನೆರೆಯ ತಾಲೂಕುಗಳಿಂದಲೂ ಕೂಡಿ ೩-೪ ಸಾವಿರವಾಗಿತ್ತೆಂತ ಹೇಳಿದರೆ, ತಪ್ಪಾಗದು. ಅವರು ಹಿಂದಿ-ಉರ್ದು ಮಿಶ್ರಭಾಷೆಯಿಂದ ಮಾತನಾಡಿದ್ದರಿಂದ, ಬಹಳೇ ಜನರಿಗೆ ಅದು ತಿಳಿಯದೆ ಜನರು ಹಿಂತಿರುಗಿ ಹೋದರು. ಅವರು ಪಂಜಾಬದ ಅತ್ಯಾಚಾರ, ಧಾರವಾಡದ ದುರಾಚಾರ, ಹಿಂಸಾವೃತ್ತಿಯ ಮೂಲಾಧಾರಗಳನ್ನೆಲ್ಲ ಚನ್ನಾಗಿ ವಿವೇಚಿಸಿ, ಸರಕಾರದ ಅಕ್ಷಮ್ಯ ದಬ್ಬಾಳಿಕೆಯನ್ನು ನಿಷೇಧಿಸಿದರು. ಅದಕ್ಕಾಗಿ ಮ। ಗಾಂಧಿಗಳ ಆಜ್ಞೆಯಂತೆ ಸ್ವದೇಶಿಯನ್ನು ಪುರಸ್ಕರಿಸಿ, ಪರದೇಶಿಯನ್ನು ಬಹಿಷ್ಕರಿಸಿದ ಹೊರತು ಗತ್ಯಂತರವಿಲ್ಲೆಂದು ಪ್ರತಿಪಾದಿಸಿದರು. ನೆರೆದ ಜನರಲ್ಲಿ ಸ್ವರಾಜ್ಯ ಪ್ರಾಪ್ತಿಯ ಮುಖ್ಯ ಸಾಧನವೆಂದರೆ— ತುರಂಗದ ಯಾ ಸರಕಾರಿ ಶಿಕ್ಷೆಯ ಭೀತಿಯು ಎಷ್ಟರವರೆಗೆ ಅಗಲಿದೆಂಬುದು ಪರೀಕ್ಷಿಸಿ, ಅಂಥ ಶಿಕ್ಷೆಯ ಭೀತಿಯನ್ನು ತೊಲಗಿಸಹೊರತು ಸ್ವರಾಜ್ಯಪ್ರಾಪ್ತಿಯು ಸಾಧ್ಯವಿಲ್ಲೆಂದು ಮನಗಾಣಿಸಿದರು. ಪರದೇಶಿ ಬಟ್ಟೆಗಳ ನಿಷೇಧಾರ್ಥವಾಗಿ ನೆರೆದ ಜನರಿಗೆ ಬೋಧಿಸಿದೊಡನೆ, ಜನರು ಆನಂದದಿಂದ ತಮ್ಮ ಮೈಮೇಲೆ ಧರಿಸಿದ ಪರದೇಶಿ ಬಟ್ಟೆಗಳನ್ನು ಒಗೆದು ಅವುಗಳ ಹೋಳಿ ಮಾಡಿ ತಮ್ಮ ತಿರಸ್ಕಾರವನ್ನು ವ್ಯಕ್ತ ಮಾಡಿದರು. ಇದರಿಂದ ಪರದೇಶಿ ಬಟ್ಟೆಗಳ ಬಹಿಷ್ಕಾರದ ಪರಿಣಾಮವು ಜನರಮೇಲೆ ಚನ್ನಾಗಿ ಆಗಿರಬೇಕು. ಒಟ್ಟಿಗೆ, ಮೌಲಾನಾರವರ ಭಾಷಣವು ಜನರಿಗೆ ಸುಮಾರ್ಗದರ್ಶಕವಾಗಿ ಕಂಡರೂ, ಅಧಿಕಾರಿಗಳಿಗೆ ಅದು ವಿಷವತ್ ಕಾಣಬಹುದು. ಅದರಿಂದಲೇ ನಮ್ಮ ಡೆ। ಪೋ। ಸುಪರಿಂಟೆಂಡೆಂಟ ಮಿ। ಹರಿಶ್ಚಂದ್ರನವರು ಕಾರವಾರಕ್ಕೆ ಓಡೋಡಿ ಹೋಗಿ, ಖಲಬಿತ್ ಮಾಡಿ, ನಿನ್ನೆಯೇ ಹೊನ್ನಾವರಕ್ಕೆ ಮುಟ್ಟಿ, ಮೌಲಾನಾರವರಿಗೆ ಭಾಷಣ ಬಂಧಿಯ ಹುಕುಮನ್ನು ಜ್ಯಾರಿಮಾಡಿ, ಅವರ ಭಾಷಣದಿಂದಾಗಬಹುದಾದ ಶಾಂತತಾಭಂಗ (!) ದ ಪ್ರಸಂಗವನ್ನು ಬಹು ಸಾಹಸದಿಂದ ಹೋಗಲಾಡಿಸಿದ್ದು ನೋಡಿ, ಅವರನ್ನು ಅಭಿನಂದಿಸದಿರಲಾರೆವು

ಸ್ಥಾನಿಕ ವೃತ್ತಾಂತ.

ಕುಮಟಾ— ಇಷ್ಟರಿಂದಿಗೆ ಮಳೆಯು ೧೦೯-೩೦ ಬಿತ್ತು. ಪೈರು ನೆಟ್ಟಗಿದೆ. ಜ್ವರ, ಕೆಮ್ಮು, ಮೈಲಿ ವಗೈರೆ ರೋಗಗಳು ಇದ್ದೇ ಇರುವವು.

ಕಳೆದ ರವಿವಾರ ತಾ. ೨೧ರಲ್ಲಿ ದುಲ್ಲಾಪುರ ಬಿಟ್ಟು ಇತರ ಎಲ್ಲ ತಾಲೂಕುಗಳಿಂದ ಕೂಡಿ ಒಟ್ಟು ೫೧ ಮೆಂಬರರು ತಾಲೂಕಾ ಕೊಂಗ್ರೆಸಿನ ಕಮೀಟಿಗಳ ವತಿಯಿಂದ ಶ್ರೀಯುತ ಶಾಸ್ತ್ರೀ (ಹೊನ್ನಾವರ) ಗಳ ಅಧ್ಯಕ್ಷತೆಯಲ್ಲಿ ಸಭೆಸೇರಿ, ಮೊದಲಿದ್ದ ಜಿಲ್ಲಾ ಕೊಂಗ್ರೆಸ ತಾತ್ಪೂರ್ತೀ ಕಾರ್ಯಕಾರೀ ಕಮೀಟಿಯ ಬದಲಾಗಿ, ಶ್ರೀಯುತ ಮಂಜುನಾಥ ಭಟ್ಟ ಕರ್ಕಿ, ಹೊನ್ನಾವರ — ಅಧ್ಯಕ್ಷ, ಶ್ರೀಯುತ ರಾಮರಾವ ಭಟ್ರಿ, ಹಳಿಯಾಳ — ಉಪಾಧ್ಯಕ್ಷ, ಶ್ರೀ। ಲಕ್ಷುಮಣ ಕೇಶವ ಶಾನಭಾಗ, ಹೊನ್ನಾವರ, ಖಜೀನದಾರ, ಶ್ರೀ। ಎಸ್ ಎಸ್ ಶಾಸ್ತ್ರೀ ಮತ್ತು ಎಮ್. ಪಿ. ನಾಡಕರ್ಣಿ, ಹೊನ್ನಾವರ,— ಕಾರ್ಯದರ್ಶಿಗಳು, ಮತ್ತು ಪ್ರತಿ ಒಂದು ತಾಲೂಕಿಗೆ ೩, ಪೇಟೆಗೆ ೨ರಂತೆ, (ಭಟ್ಕಳವು ತಾಲೂಕಿನಂತೆ ಎಣಿಸಿ,) ಒಟ್ಟು ೩೧ ಮೆಂಬರರದೊಂದು ಕಾರ್ಯಕಾರಿ ಮಂಡಳವು ಮುಂದಿನ ಆಕ್ಟೋಬರದ ವರೆಗೆ ನೇಮಕವಾಯಿತು.

ಜಿಲ್ಲಾ ಸಭೆಯ ಮುಖ್ಯ ಶಾಖೆಯು ಹೊನ್ನಾವರದಲ್ಲಿ ರಬೇಕೆಂದು ಬಹುಮತದಿಂದ ಪಾಸಾಗಿ, ಅದರ ನಡಾವಳಿಬಗ್ಗೆ ಮಾಡಿದ ನೇಮಗಳು ಮಂಜೂರ ಮಾಡಲ್ಪಟ್ಟವು.

ಜಿಯಾಮು ತಾಲೂಕಿನಲ್ಲಿ ಕೂಡಿದ ಸ್ವರಾಜ್ಯ ಫಂಡಿನ ಸೇಕಡಾ ೩೦ ರಂತೆ, ಅಖಿಲಭಾರತೀಯ ಮತ್ತು ಪ್ರಾಂತಿಕ ಕಮಿಟಿಗಳಿಗೂ ಕೊಡುವದಲ್ಲದೆ, ಜಿಲ್ಲಾ ಸಭೆಗೆ ಸೇಕಡಾ ೧೦ರಂತೆ ಹಣ ಆಗಿಂದಾಗ ಕಳುಹಿಸಬೇಕಾಗಿಯೂ ಗೊತ್ತು ಪಡಿಸಿತು.

ಸ್ವದೇಶಿ ವಸ್ತ್ರದ ಪುರಸ್ಕಾರಕ್ಕಾಗಿಯೂ ಪರದೇಶಿ ವಸ್ತ್ರ, ಸಕ್ಕರೆಯ ಬಹಿಷ್ಕಾರಕ್ಕಾಗಿಯೂ ತಕ್ಕ ಯೋಜನೆಗಳನ್ನು ಮಾಡಿ ಈ ಚಲವಲದ ರಥವನ್ನು ಮುಂದೊತ್ತಲು ಶ್ರೀ। ಶ್ಯಾಮರಾವ ಭಟ್ರಿ, (ಹಳಿಯಾಳ) ಗಣಪತರಾವ ಮಾಸೂರ, (ಕುಮಟಾ) ಕೃಷ್ಣರಾವ ಹಳದೀಪೂರ, (ಕಾರವಾರ) ರಾಘವೇಂದ್ರರಾವ ಹಿಸ್ಸೂರ (ಹೊನ್ನಾವರ) ಡಾ। ಶಾಸ್ತ್ರೀ (ಸಿರ್ಸಿ) ಈ ಐವರ ಕಮಿಟಿಯೊಂದು ನೇಮಕವಾಗಿದೆ.

ಸರಿ, ಜಿಲ್ಲಾ ಹೊಸ ಕಾರ್ಯಕಾರೀ ಕಮೀಟಿಯು ಕೂಡಿ ಎಲ್ಲ ತಾಲೂಕಾ ಮತ್ತು ಜಿಲ್ಲಾ ಕೊಂಗ್ರೆಸ ಟಿಕ್ಕಗಳನ್ನು ಪರ್ಷಕ್ಕೊಮ್ಮೆಯಾದರೂ, ತಪಾಸ ಮಾಡುವ ಉದ್ದಿಕ್ಕ ಶ್ರೀ| ರಾಮರಾ ಕೋಟೇಶ್ವರ ಹಗಡೆ ಮತ್ತು ಶ್ರೀ| ನೊಟೆನಸರ ತಿಮ್ಮಣ್ಣಾ ಮಂಜಪ್ಪ ಹಗಡೆರನ್ನು ನೇಮಿಸಿದರು

ಲಾಹೋರದಿಂದ ಸಿರ್ಸಿ ಮಾರ್ಗವಾಗಿ ಬಂದ ಮೌಲಾನಾ ಹಬೀಬುಲ್ಲಾಖಾನರವರ ವ್ಯಾಖ್ಯಾನವು ಚಿತ್ರಿಗಿ ಬೇಣದ ಮೈದಾನ ಸ್ಥಳದಲ್ಲಿ ಆಯಿತ ಜನಸ್ತೋಮವು ೩—೪ ಸಾವಿರಕ್ಕೂ ಮಿಕ್ಕಿತ್ತು ಪರದೇಶ ವಸ್ತ್ರ, ಟೊಪ್ಪಿ ಛತ್ರಿ, ಕೋಟುಗಳು ಕೂಡಿ ಅಜಮಾಸ ೫೦೦ ರೂಪಾಯ್ಯದ ಬಾಳುವಂಥ ಬಟ್ಟೆಗಳ ಪವಿತ್ರ ಹೋಳಿಯಾಯಿತು, ಇದರಿಂದ ಪರದೇಶಿಯ ಬಹಿಷ್ಕಾರದ ಪರಿಣಾಮ ವು ಚನ್ನಾಗಿ ಆಗಿಯುದನ್ನಬಹುದ ಇಲ್ಲಿಯ ಮುಸಲ್ಮಾನ ಬಂಧುಗಳು ಮಾತ್ರ ತಮ್ಮ ಪರದೇಶಿ ಬಟ್ಟೆಗಳನ್ನು ಒಟ್ಟುಗೂಡಿಸಿ ಇದೇ ಬರುವ ಸಪ್ಟಂಬರ ೧ಕ್ಕೆ ಸ್ಮರ್ನಾಕ್ಕೆ ಕಳುಹಿಸುವ ವಿಚಾರದಲ್ಲಿದ್ದಂತೆ ತಿಳಿಯುತ್ತದೆ

ಇಲ್ಲಿಯ ಕಟ್ಟಿಗೆ ಡಿಪೋದಲ್ಲಿ ಪುನಃ ಕಟ್ಟಿಗೆ ಇಲ್ಲ ಇಲ್ಲದೆ ಉಪವಾಸ ಬೀಳುವ ಪಾಳಿ ಬಂದದೆ ಒಂದು ಪ ಕಟ್ಟಿಗೆ ಕೊಂಡುಬಿಟ್ಟೇಕಾದರ ಕ ಷ್ಟ ೩ ತಾಸುವರೂ ಖರ್ಚು ಮಾಡಬೇಕಾಗ ತ್ತದೆ ಕ್ಕಿವವರಿಗೆ ಸಿಕ್ಕಿತು ಇಲ್ಲವಿದ್ದರೆ ತಲೆಯಮೇಲೆ ಕೈ. ಬಡ ಜನಗಳಾಗಲಿ, ವ ದ್ಧ ಮ ತರಗತಿಯುವರಿಗಾಗಲಿ •ಪ್ರತಿನಿತ್ಯ ಕಟ್ಟಿಗೆ ತರಲಿಕ್ಕೆ ಇಷ್ಟಿಷ್ಟು ಹೊತ್ತು ಕಳೆಯುವ ದ ರ್ಧರ ಪ್ರಸಂಗವು ? ರೇ ಜಂಗಲಖಾತೆಯವರ ಅವ್ಯವಸ್ಥಿತ ಡಿಪೋಪದ್ಧತಿಯಿಂದ ಯೋಗ್ಯ ದೇಖರೇಖಿ ಇಲ್ಲದೆ ಉಂಟಾಗಿದ ಜಂಗ್ಲಿಖಾತೆಯ ಸಣ ಮೊತ್ತ ಅಧಿಕಾರಿಗಳಿಗೆ ಕಟ್ಟಿಗೆಯ ಗ್ಯ ದ ಸೋಯಿ ಆಗಿದ್ದ ಮೂಲಕ, ರಯತ ಜನರ ಗೋಳು ವು ಅವರ ಲಕ್ಷಕ್ಕೆ ಬರ ಪದಿಲ್ಲೆಂಬಂತಾಗಿದೆ ರವೆನ್ಯೂ ಖಾತೆಯು ಮಾ ಬಾಪ ಅಧಿಕಾರಿಗಳಾದರೂ ಎಲ್ಲಿ ಕಣ್ಣು ತೆರೆಯುತ್ತಾರೆ ? ಈವತ್ತೇ ಪ್ರರವಟೆಯ ವ್ಯವಸ್ಥೆ ಆಗುತ್ತವಂತ ಆದಾದರೂ ಕೇಳಿದಷ್ಟು ಕಟ್ಟಿಗೆ ಸಿಕ್ಕೀತೊ ?

ಇಲ್ಲಿ ಬಹಳ ವರ್ಷಗಳಿಂದ ಆಗಬೇಕೆಂದಿದ್ದ 'ವ್ಯಾಪಾರಿ ಸಂಘವು' ಈವತ್ತು ಸುಸಂಘಟಿತವಾಗಿ ಪ್ರಸ್ಥಾಪಿತವಾಯಿತು. ಈ ಘಂ ಬವತ ಮತ್ತು ಅದರ ಪ್ರ ಕ್ಯವಾಧಿಗಳು ಕಾರ್ಯಕಾರಿ ಮಂಡಳಿಯಿಂದ ಬೇಗನೇ ಸಾಧ್ಯವಾಗಿ ವರ್ತಕರ ಮೇಲೆ ಸುಪರಿಣಾಮ ವಾಗಲಿ

ಇಲ್ಲಿಯ ಅಡಿಕೆ ದಲ್ಲಾಲರೂ, ಬೆಂಚ ಮೇಜಿಸ್ಟ್ರೇಟರೂ ಆಗಿದ್ದ ಶ್ರೀಯುತ ಶಂಭು ಕುಪ್ಪ ಹಗಡೆರ ಇತ್ತಿತ್ತ ಅಸ್ವಸ್ಥರಾಗಿರ ತ್ತಿದ್ದು ಅವರ ದಲೇ ನಿನ್ನೆ ರಾತ್ರೆ ೧ ದಿನಹೊಂದಿದರೆಂದು ತಿಳಿಸಲು ವ್ಯಸನವಾಗುತ್ತದೆ ಅವರು, ತಾಸಾಯಿತು ತನ್ನ ಕೆಲಸಮಾಯಿತೆಂಬ ದಾರಿಣದ ಗ್ರಹಸ್ಥರಾಗಿ, ತಮ್ಮ ಉದ್ಯೋಗದಲ್ಲಿ ನಿರತರಾಗಿದ್ದರು ಬೆಂಚ ಮೇಜಿಸ್ಟ್ರೇಟ ಮಾನವನ್ನಾದರೂ ಸರಕಾರದಿಂದ ಸಿಕ್ಕಿದ್ದರಿಂದ ಮಾತ್ರ ಕರ್ತವ್ಯವೆಂದು ಪುರಸತ್ತಿನ ವೇಳ್ಯ ಹೋಗಿಬರುತ್ತಿದ್ದರ ಅವರ ನಿಧನವು ಅಕಾಲಿಕವೆಂತಲೇ ಹೇಳಬಹುದು ಈ ಇಷ್ಟು ಖಾಡಯಿಲ್ಲ ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ

ಹೊನ್ನಾವರ— ಮೌಲಾನಾ ಹಬಿಬುಲ್ಲಾಖಾನರವರ ಹೊನ್ನಾವರಕ್ಕೆ ೭ ರಾತ್ರಿ ಹಳಿರಿಸ್ಪರಸರು. ಬಹಗಳಿಗೆ ಬಂದು ಅವರನ್ನು ಎದುರುಗೊಳಿಸಿ ಪಟ್ಟಣಕ್ಕೊಂಗಾರ ತೋರಣ ಬಾಜ್ಯಗಳಿಂದ ಸತ್ಕರಿಸಿ, ಶ್ರೀ| ವಿಷ್ಣು ಸಬಾಪತರ ಅಧ್ಯಕ್ಷತೆ ಕೆಳಗೆ ಸಭೆ ಕೂಡಿಸಿ. ಒಳ್ಳೇ ಹುರ ಪಿನಿಂದ ಮೌಲಾನಾ ರವರ ಬಾಷಣ ಕೇಳಿ ಮದ್ಯಪಾನ ನಿಷೇದದಲ್ಲಿ ಇತ ಕರತೆ ದ ಕೆಲಸ ನಡಿಸುತ್ತೇವಾಗಿ ವಚನ ಕೊಟ್ಟರು. ಅತಿವೋಷ್ಟ ಮಳೆ ಸುರಿದರೂ ಯಾರೂ ಹಿಳಲಿಲ್ಲ ಇಷ್ಟು ದಿನ ಕಾಂಗ್ರೆಸ ಕಮಿಟಿ ಪಗ್ಗೆ ನಿಸ್ವಾ ಸಿಕೊಳ್ಳದೆ ಇರ ಪ ಕಾರಣಗಳು ಇನ್ನು ಮುಂದೆ ನೀಗಿಹೋದವು ಈ ಚಾತ್ರದಿಂದ ಪ್ರಶ್ನಿ ಶಿತವಾಗ ತ್ತ ಒಳಿರಿ ವಿ

ನಿನ್ನೆ ಸಂಜೆ ಜಾ ಟಪ್ಪರ ಹೋಗಿನ ಅಂಗಳದಲ್ಲಿ

ಮೌಲಾನಾ ಹಬಿಬುಲ್ಲಾಖಾನರವರ ಭಾಷಣ.

ಬಹಳೇ ದೊಡ್ಡ ಜನಸ್ತೋಮವು!

ಅಪೂರ್ವ ಉತ್ಸಾಹ!!

ಪವಿತ್ರ ಹೋಳಿ!!!

ಮೌಲಾನಾ ಹಬಿಬುಲ್ಲಾ ಖಾನರವರು ಶಿರ್ಸಿಯಿಂದ ಶನಿವಾರ ಸಾಯಂಕಾಲಕ್ಕೆ ಬಂದನರಿಗೆ ಶಹರನಿವಾಸಿಗಳು ಹುಕ್ಕೆಂಯಲ್ಲಿ ಎದುರುಗೊಂಡು ಸನ್ಮಾನದಿಂದ ಪಿ ಟಿಸ್ತಿ ಅಲ್ಲಿ ಸಾಹೇಬರಲ್ಲಿ ಮುಟ್ಟಿಸಿದರು. ಸೋಮವಾರ ಮದ್ಯಹ್ನ ೩ ಘಂಟೆಗೆ ಪುನಃ ಜನರು ಅಲ್ಲಿ ಕೂಡಿ ತೋರಣ ಪತಾಕೆಗಳಿಂದ ಶೃಂಗರಿಸಿದ ಊರಲ್ಲಿ ಮೆರವಣಿಗೆಯಿಂದ (ಕೂಡಿದ ಜನಸಮು ೩ಹಕ್ಕೆ ಶ್ರೀ ಶಾಂತೇರಿಕಾಮಾಕ್ಷಿ ದೇವರ ಹೊರಗಿನ ಬಾಗಣದ್ದು, ಸಹ ಸಾಗಣೆಯು ಕಂಡದ್ದರಿಂದ) ಚಿತ್ರಿಗಿಗೆ ತಾಗಿಕೊಂಡ, ವಿಶಾಲವಾದ ಬೇಣದ ಮೈದಾನದಲ್ಲಿ ಪಿ ಟಿಸ್ತಿ ಅಲ್ಲಿ ಅವರು ಸಾಹೇಬರ ಅಧ್ಯಕ್ಷತೆ ಕಾಗ ಜ್ಯಾಹೀರ ಸಭೆಗೂಡಿತ ಸಭೆಗೆ ಜನಸ್ತೋಮವು ಅಜಮಾಸ ೩-೪ ಸಾವಿರದಷ್ಟು ಕೂಡಿದ್ದಿತ್ತು ಈ ತಾಲೂಕ ಮಾಮಲೇದಾರ, ಡೆಪ್ಯೂಟಿ ಸುಪರಿಂಟೆಂಡೆಂ ಹರಿಶ್ಚಂದ್ರ, ಪೋಲಿಸ ಇನಸ್ಪಕ್ಟರ ಗೋವಿಂದ ಮತ್ತು ಪೋ| ಸಬ ಇನಸ್ಪಕ್ಟರ ದ ವಾಸವರು ತಮ್ಮ ತಮ್ಮ ಹಸ್ತಕರೂ, ಉಪರ ಓ ಇ ನ ಸಾಸ್ತರರಿಗೂ ಪ ದ್ದಾ ಕರ ಕೊಂಡ ಬಂದಿದ್ದ ರ ಬಿಟ್ಟಿನ ರಿಪೋರ್ಟ ಕೊಡ ವವರ ಸಂಗಡೇ ಸಂಸಿ ಅಧ್ಯಕ್ಷರು ರೀತಿಯಂತೆ ಅಧ್ಯಕ್ಷಪದಾರೂಢರಾಗಿ ಸಮಯೋಚಿತ ಪ್ರಾಸ್ತಾವಿಕ ಭಾಷಣ ಮಾಡಿದಮೇಲೆ, ಮೌಲಾನಾರವರು ತಮ್ಮ ಭಾಷಣಕ್ಕೆ ಹಿಂದುಸ್ಥಾನಿಯಿಂದ ಪ್ರಾರಂಭ ಮಾಡಿದರು. ಅವರು ಎಲ್ಲರಿಗೂ ಕೇಳ ಪಂತೆ ತಮ್ಮ ಗಂಭೀರ ಮತ್ತು ಜೋರದಾರ ಸ್ವರದಿಂದ ಪಂಜಾಬದ ಅತ್ಯಾಚಾರ, ಖಿಲಾಫತಿಯ ಸುಲಾಧಾರ, ಧಾರವಾಡದ ಅತ್ಯಾಚಾರ ಮುಂತಾದ ವಿಷಯಗಳನ್ನು ಚನ್ನಾಗಿ ವಿವೇಚಿಸಿ, ಸರಕಾರದ ಪಚ್ಚಾಳಿಕೆಯನ್ನು ನಿಷೇಧಪಡಿಸಿದರು, ಸ್ವರಾಜ್ಯ ಸಾಧನೆಯ ವಿಷಯವು ಯಾಕೆ ಕೈಕೊಳ್ಳಲ್ಪಟ್ಟಿತೆಂಬ ದು ವಿಸ್ತಾರವಾಗಿ ತಿಳಿಸಿ ಹೇಳಿದ್ದಲ್ಲದೆ, ಅದಕ್ಕಾಗಿ ಪ್ರತಿಯೊಬ್ಬ ರಾಷ್ಟ್ರಾಭಿಮಾನಿಯು ರಾಷ್ಟ್ರೀಯ ಸಭೆಯ ನಿರ್ಣಯಾಂಶಗಳನ್ನು ಅನುಲಿಸಲ್ಲಿ ತರುವ ಸದುದ್ಯೋಗವನ್ನು ಅಹೋರಾತ್ರಿ ನಡಿಸುತ್ತಿರಬೇಕೆಂದು ಬೋಧಿಸಿದರು ಅದಕ್ಕಾಗಿ ಸಧ್ಯದ ಮ| ಗಾಂಧಿಗಳ ಆಜ್ಞಾನಸಾರ ಸ್ವದೇಶಿ ಖಾದಿಯನ್ನು ಕೈಕೊಂಡು, ಪರದೇಶಿ ಬಟ್ಟೆಗಳನ್ನು ಕಿತ್ತೊಗೆದ ಹೊರತು ಆತ್ಮಶುದ್ಧಿಯಾಗದೆಂದೂ, ಮೈಮೇಲಿನ ಪರದೇಶಿ ಬಟ್ಟೆಗಳನ್ನು ಈಗ ಧರಿಸುವದು ಬರೇ ಹುಚ್ಚೆಂದೂ, ಅನೇಕ ವಿಧದ ಉಪದೇಶ ಮಾಡಿದ್ದಕ್ಕೆ ಜನರಮೇಲೆ ಅದರ ಪರಿಣಾಮವಾಗಿ ಟೊಪ್ಪಿಗೆಗಳ, ಛತ್ರಿ-ಕೊಡೆಗಳ, ಕೋಟು-ವೈರಾಣಗಳ ರಾಶಿಯೇ ರಾಶಿ ಕೂಡಿತು. ಆಗ, ನೆರೆದ ಜನರಲ್ಲಿ ಸ್ವರಾಜ್ಯದ ಅಭಿಲಾಷೆ ಮತ್ತು ಅದನ್ನು ಗಳಿಸುವ ಮುಖ್ಯ ಸಾಧನವೆಂದರೆ— ಸುರಂಗದ ಮತ್ತು ಸರಕಾರಿ ಶಿಕ್ಷೆಯ ಭೀತಿ ಎಷ್ಟಿದೆ ಎಂದು ಪರೀಕ್ಷಿಸಲಿಕ್ಕೆ ಹಿಂದೆರಡು ಸಲ ಪ್ರಶ್ನೆಗಳನ್ನು ಕೇಳಿ, ಸಭಿಕರಿಂದ "ಸ್ವರಾಜ್ಯ ಬೇಕು, ಬೇಕು. ಈಗಿನ ಸರಕಾರವು-'ಬೇಡ ಬೇಡ' ಶಿಕ್ಷೆ ಹೊಂದಲಿಕ್ಕೆ ಸಿದ್ಧರಿದ್ದೇವೆ" ಎಂದು ಉತ್ತರಗಳನ್ನು ಕೊಂಡು, "ನಾವೆಲ್ಲರೂ ಅಷ್ಟು ಸಿದ್ಧರಾದರೆ, ಸ್ವರಾಜ್ಯವು ನಮ್ಮ ಬಾಗಿಲಕ್ಕೆ ತಾನಾಗಿ ಓಡಿ ಬರುವದೆ" ಎಂದ. ಮನಗಾಣಿಸಿದರು ಇಷ್ಟಾದಮೇಲೆ ಪರದೇಶಿ ಬಟ್ಟೆಗಳ ರಾಶಿಗೆ ಚಿಮಣಿ ಎಣ್ಣೆ ಸುರಿದು, ಪವಿತ್ರ ಹೋಳಿ ಮಾಡಿಬಿಟ್ಟರು. ಇದರಿಂದ ನೆರೆದ ಜನರಮೇಲೆ ಪರದೇಶಿ ಅರಿವೆಯು ಬಹಿಷ್ಕಾರದ ಪರಿಣಾಮವು ಚನ್ನಾಗಿ ಆಗಿರಬೇಕೆಂದು ಅವರ ಮುಖಚರ್ಯದಿಂದಲೂ, ಉದ್ಗಾರಗಳಿಂದಲೂ ಕಾಣುತ್ತಿತ್ತು. ಹಿಟ್ಟಿಗೆ ಸಭೆಯ ಕೆಲಸವು ಸಾಂಗ್ಯವಾಗಿ ನೆರವೇರಿತು ಕೂಡಿದ ಬಹುತೇಕ ಜನರು ಹಿಂದುಸ್ಥಾನಿ ಭಾಷೆಯು ಪೂರ್ಣ ಅರ್ಥವಾ ತಿಳಿಯದೆ ಹಿಂತಿರುಗಿ ಹೋದರೆಂಬುದೇ ಒಂದು ಕೊರತೆಯಾಗಿತ್ತು. ಇದರಿಂದ ಅಶಿಕ್ಷಿತ ಜನರ ಮೇಲೆ ಸಹ ರಾಷ್ಟ್ರಾಭಿಮಾನದ ನವಚೇತನೆಯು ಸಂಚರಿಸಹತ್ತುವದೆಂದು ಹೇಳಲು ಅಡ್ಡಿಯಿಲ್ಲ. ಮಹಾತ್ಮರ ಶುದ್ಧಾಂತಃಕರಣದ ಪರಿಣಾಮವಿದು!

ಜಂಗಿ ಸಭೆ ಕೂಡಿತು. ಮೊಟ್ಟಮೊದಲು ಭಾಷಣವು ಕುಮಟೆಯಲ್ಲಿ ಆದ ಪ್ರಕಾರವೇ ನಡೆದಿತ್ತು, ಮ| ರಾ| ಗಣೇಶ ರಾಮಚಂದ್ರ ಶಿರ್ಸಿಯವರು ಮಾಮಲೇದಾರರ ಹಿಂಬದಿಯಲ್ಲಿ ಕುಳಿತುಕೊಳ್ಳುತ್ತಿದ್ದರು ಮೌಲಾನಾ ಇವರು ನಮ್ಮ ಜನರು ಬಿ ಎ ಎಲ್‌ಎಲ್ ಬಿ ಪಗ್ಗರೆ ಪಾಸಾಗಿ, ಸರಕಾರದ ಗುಲಾಮರಾಗಿ ಹಳ್ಳಿಹಳ್ಳಿಗಳ ಸತ್ಯಾನಾಶ" ಮಾಡುತ್ತಾರೆ ಎಂತ ಹೇಳುವಾಗ, ಮ| ರಾ| ಗಣೇಶರಾವ ಶಿರ್ಸಿಕರ ವರು ಮಾಮಲೇದಾರರನ್ನು ಸಹ ಮುಂದೆ ಎಬ್ಬಿಸಿಕೊಂಡು ಬಂದು "ನಿಮ್ಮ ರಾಷ್ಟ್ರೀಯ ಕಾಲೇಜಿನಲ್ಲಿ ಏನು ಮಾಡಲಿಕ್ಕೆ ಕಲಿಸುತ್ತೀರಿ" ಎಂದು ಕೇಳಿದರು (ಅಧ್ಯಕ್ಷರ ಪರವಾನಗಿಯನ್ನುಕೊಂಡು ಪ್ರಾತವಾಡಿರಿ ಸಭೆಯಲ್ಲಿ ಹೀಗೆ ವರ್ತಮಾನಕ ಮಾಡಬೇಡಿರಿ' ಎಂತ ಜನರು ಸಾರಿದರು. ತದನಂತರ ಭಾಷಣಕ್ಕೆ ಸ್ಫುರಣ ಬಂತು ಮೌಲಾನಾರವರು "ನಾವು ನಮ್ಮ ಹುಡುಗರಿಗೆ ಕಷ್ಟ ಸಹಿಸಲಿಕ್ಕೆ ಕಲಿಸುವೆವು ಕಲ್ಲು ಒಡೆಯಲಿಕ್ಕೂ ಕಲಿಸುವೆವು. ದೇಶ ಸೇವೆ ಮಾಡಲಿಕ್ಕೆ ಕಲಿಸುವೆವು ನೀವು ಖುಶಾಲ ಸರಕಾರದ ಗುಲಾಮಗಿರಿ ಮಾಡಿರಿ ನೀವು ಸರಕಾರದ ಬಗಲಬಚ್ಚಾಗಿರಿ ಇದರ ಮೂರು ತಿಂಗಳ ನಂತರ ನಮ್ಮ ನಮ್ಮ ಸ್ವತಂತ್ರತೆ ಪತಾಕೆಯು ಹಾರಿಸಲ್ಪಡುವದು ಆವಾಗ ನಮ್ಮ ದೇಶವು ಪಾರತಂತ್ರ್ಯದಿಂದ ಮುಕ್ತವಾಗುವದು! ಇದು ನಿಶ್ಚಯ! ಆವಾಗ ನೀವು ಗುಲಾಮಗಿರಿ ಮಾಡಲಿಕ್ಕೆ ಯಾರ ಹೀಗೆ ಹೋಗುವಿರಿ? ಇದರ ವಿಚಾರ ಮಾಡಿರಿ" ಭಾಷಣ ಮುಗಿದಮೇಲೆ ಹೋಳಿಯಬಗ್ಗೆ ಜನರು ತಮ್ಮ ತಮ್ಮ ಟೊಪ್ಪಿಗೆಗಳನ್ನು ಛತ್ರಿಗಳನ್ನು ಕೋಟುಗಳನ್ನು ಕೊಡಲಿಕ್ಕೆ ಸುರು ಮಾಡಿದರು

(೬(B) ಮೇಲೆ ಮುಂದರಿಸಿದೆ)

ಜಿಲ್ಲಾ ಕಾಂಗ್ರೆಸ ಕಮಿಟಿಯ ಸಭೆ.

ಎಲ್ಲ ತಾಲೂಕುಗಳ ಅಪೂರ್ವ ಉತ್ಸಾಹ!

(ನಮ್ಮ ಖಾಸ ಪ್ರತಿನಿಧಿಯ ಕಡೆಯಿಂದ.)

ನಮ್ಮ ಜಿಲ್ಲೆಯ ‘ಜಿಲ್ಲಾ ಕಾಂಗ್ರೆಸ ಕಮಿಟಿ’ಯ ಸಾಧಾರಣ ಸಭೆಯು, ಹೊಸ ಸ್ಥಾಯಿಕ ವ್ಯವಸ್ಥಾಪಕ ಮಂಡಳವನ್ನು ನೇಮಿಸುವದು, ನಿಯಮಗಳನ್ನು ರಚಿಸುವದು, ಇವೇ ಮೊದಲಾದ ಸಂಗತಿಗಳ ಬಗ್ಗೆ ಕುಮಟೆಯಲ್ಲಿ ರವಿವಾರ ಅಗಸ್ಟ ೨೧ ನೇ ತಾರೀಖಿನ ದಿವಸ ಕೂಡುವದೆಂತ ಈ ಮೊದಲು ಜಾಹೀರವಾಗಿತ್ತಷ್ಟೇ. ಆದರೆ, ಮಳೆಗಾಲಿನ ಈ ದಿವಸಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಪ್ರವಾಸದ ಇಷ್ಟೆಲ್ಲ ಕೊರತೆಗಳು ಇರುವಾಗ್ಗೆ, ಕಾಂಗ್ರೆಸ ಕಮಿಟಿಯ ಇಂಥ ಸಭೆಗೆ ಎಲ್ಲ ತಾಲೂಕುಗಳಿಂದ ಪ್ರತಿನಿಧಿಗಳು ಇಷ್ಟು ಉತ್ಸಾಹದಿಂದ ಒಂದೊದಗುವರೆಂದು ಹಲವರು ಎಣಿಸದೆ ಇರಲಿಕ್ಕೆ ಸಾಕು. ಹೀಗಿನ ಪರಿಸ್ಥಿತಿ ಇದ್ದರೂ, ಬಹುತೇಕ ಎಲ್ಲ ತಾಲೂಕುಗಳಿಂದ ಪ್ರತಿನಿಧಿಗಳು ಅನಾನುಕೂಲತೆಗಳನ್ನು ಲೆಕ್ಕಿಸದೆ ಬಂದು, ಉತ್ಸಾಹದಿಂದ ಎಲ್ಲ ಕಾರ್ಯಕ್ರಮವನ್ನು ನೆರವೇರಿಸಿದರೆಂಬದು, ಜಿಲ್ಲೆಯಲ್ಲಿ ಉಂಟಾದ ಜಾಗೃತಿಯ ಹಾಗೂ ಕರ್ತವ್ಯತತ್ಪರತೆಯ ನಿದರ್ಶಕವೆಂಬದರಲ್ಲಿ ಸಂದೇಹವಿಲ್ಲ.

ಶನಿವಾರ ದಿವಸವೇ ಶಿರ್ಶಿ, ಹಳಿಯಾಳ, ಕಾರವಾರ ಮೊದಲಾದ ತಾಲೂಕುಗಳಿಂದ ಪ್ರತಿನಿಧಿಗಳು ಸ್ವಂತ ಮೋಟಾರುಗಳಿಂದ ಬಂದು ಮುಟ್ಟಲಾರಂಭವಾಯಿತು. ಘಟನೆಗನುಸರಿಸಿ ಜಿಲ್ಲಾ ಕಮಿಟಿಯ ಕಾರ್ಯದರ್ಶಿಗಳು ಜಾಹೀರ ವಿನಂತಿ ಮಾಡಿಕೊಂಡ ಮೇರೆಗೆ, ಪ್ರತಿ ತಾಲೂಕಿನಿಂದ ೧೩ ಪ್ರತಿನಿಧಿಗಳು ಜಿಲ್ಲಾ ಕಾಂಗ್ರೆಸ ಕಮಿಟಿಯ ಸಭಾಸದರಾಗಲಿಕ್ಕೆ ಆರಿಸಲ್ಪಟ್ಟಿರುವರಾಗಿ ವರ್ತಮಾನವು ಮೊದಲೇ ಕೈಸೇರಿತ್ತು. ರವಿವಾರ ಬೆಳಿಗ್ಗೆ ಸಭೆಯು ಕೂಡುವದಾಗಿ ಜಾಹೀರವಾದಂತೆ, ಆಯಾಯ ತಾಲೂಕಿನ ಪ್ರತಿನಿಧಿಗಳು ಬೆಳಿಗ್ಗಿನ ೭ ಘಂಟೆಯಿಂದ ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ನೆರೆಯಲಾರಂಬಿಸಿದರು. ಸಭೆಯು ಮುಂದಿಡತಕ್ಕ ವಿಷಯಗಳನ್ನು ಪೂರ್ವದಲ್ಲಿಯೇ ಚರ್ಚಿಸಿ ನಿಶ್ಚಯಿಸುವ ದೆಸೆಯಿಂದ, ವಿಷಯನಿಯಾಮಕ ಕಮಿಟಿಯ ರೂಪದಿಂದ ಪ್ರತಿನಿಧಿಗಳ ಪದ್ಧತಶೀರ ಕ್ರಮರಹಿತ (Informal) ಸಭೆಯು ಬೆಳಿಗ್ಗೆ ಆಗಬೇಕಾಗಿಯೂ, ಜಾಹೀರ ಆದ ಪದ್ಧತಶೀರ ಪ್ರಕಾರ (Formal) ಸಭೆಯು ಸಂಜೆಗೆ ಕೂಡಬೇಕಾಗಿಯೂ ವಿಚಾರವಾಗಿ, ಆ ಪ್ರಕಾರ ಬೆಳಿಗ್ಗೆ ೧೧ ಘಂಟೆ ವರೆಗೆ ೩||–೪ ತಾಸು ಚರ್ಚೆ ನಡೆದು, ಮುಂದಿನ ಕಾರ್ಯಕ್ರಮದ ರೂಪರೇಷೆಯೂ ಠರಾವುಗಳ ಮಸೂದೆಯೂ ನಿಶ್ಚಿತವಾದವು.

ಸಂಜೆಗೆ ೩ ಘಂಟೆಯ ಒಳಗಾಗಿ, ಸಭೆಯ ಸಲುವಾಗಿ ಬಂದಿರುವ ಎಲ್ಲ ಪ್ರತಿನಿಧಿಗಳು ಸಭಾಸ್ಥಾನವನ್ನು ಸೇರಿದರು. ಸ್ಥಾನಿಕ ಬಹಳೇ ಜನರು ಪ್ರೇಕ್ಷಕರಾಗಿ ಒಂದು ಕೂತಿದ್ದರು. ಅವರ ಉತ್ಸಾಹಭಂಗವಾಗಬಾರದೆಂಬದರಿಂದ ಸಭೆಯ ಕಾರ್ಯಕ್ರಮದಲ್ಲಿ ಪ್ರತ್ಯಕ್ಷ ಭಾಗ ತೆಗೆದುಕೊಳ್ಳದಂತೆ ವಿನಂತಿಸಿ, ಅವರಿಗೂ ಕೂಡ್ರುವ ವ್ಯವಸ್ಥೆ ಮಾಡಿಕೊಡಲಾಗಿತ್ತು. ಅಂಕೋಲಾ ತಾಲೂಕುಗಳಿಂದ ಕೂಡಿ ಸುಮಾರು ೫೧ ಪ್ರತಿನಿಧಿಗಳು ಹಾಜರಿದ್ದರು. ಕಾರವಾರ ತಾಲೂಕಿನಿಂದ ಶ್ರೀ| ಹರಿ ಬಾಬು ಕಾಮತ, ಕೃಷ್ಣರಾವ ಹಳದೀಪೂರಕರ, ಮಾಧವ ಮಂಜನಾಥ ಶ್ಯಾನಭಾಗ ಮೊದಲಾಗಿ ೬ ಪ್ರತಿನಿಧಿಗಳು, ಅಂಕೋಲೆಯಿಂದ ಶ್ರೀ| ಎಮ್. ಆರ್. ನಾಡಕರ್ಣಿ, ಮುಕುಂದ ಪ್ರಭು ವಗೈರೆ ೧೦–೧೧ ಪ್ರತಿನಿಧಿಗಳು, ಕುಮಟಾ ತಾಲೂಕಿನ ವತಿಯಿಂದ ಆರಿಸಲ್ಪಟ್ಟ ೧೩ ಪ್ರತಿನಿಧಿಗಳಲ್ಲಿ ಶ್ರೀ| ಮಾಧವ ರಾಮ ಶ್ಯಾನಭಾಗ, ಮಿ. ಅಲ್ಲಿಸಾಹೇಬ ಆದಮ ಸಾಹೇಬ, ಶ್ರೀ| ಶ್ರೀಪಾದರಾವ ಕಲ್ಯಾಣಪೂರಕರ, ಗಣಪತರಾವ ಮಾಸೂರ, ಕೃಷ್ಣರಾವ ಕೇಶವ ಶೇಣವಿ ಇವರೇ ಮೊದಲ್ಗೊಂಡು ೧೧ ಪ್ರತಿನಿಧಿಗಳು, ಹೊನ್ನಾವರ ತಾಲೂಕಿನ ತರ್ಫೆನಿಂದ ಶ್ರೀ| ಎಸ್ ಎಸ್ ಶಾಸ್ತ್ರಿ, ರಾಘವೇಂದ್ರರಾವ ಬಸರೂರ, ಬಳಕೂರ ಎಮ್ ಪಿ. ನಾಡಕರ್ಣಿ ವಗೈರೆ ೧೦ ೧೧ ಪ್ರತಿನಿಧಿಗಳು, ಭಟಕಳದಿಂದ ನಾರಾಯಣ ವಿಠ್ಠಲಪ್ಪ ಗೋವಿಂದರಾವ ಪ್ರಭು, ಸಿದ್ದಾಪೂರದಿಂದ ಆರಿಸಲ್ಪಟ್ಟವರಲ್ಲಿ ೬–೭ ಪ್ರತಿನಿಧಿಗಳು, ಶಿರ್ಶಿಯಿಂದ ಶ್ರೀ| ಕಾಶ್ಯಪೆ, ದತ್ತಾತ್ರಯರಾವ ಸೋಂದೆ, ಮಾಡಗೇರಿ ಹೀಗೆ ಮೂರು ಪ್ರತಿನಿಧಿಗಳು, ಹಳಿಯಾಳದಿಂದ ಶ್ರೀ| ಎಸ್. ಜೀ. ಭದ್ರಿ, ಕೇ. ವ್ಹಿ. ದೇಶಪಾಂಡೆ ಮೊದಲಾಗಿ ೭–೮ ಪ್ರತಿನಿಧಿಗಳು, ಈ ರೀತಿ ಪ್ರತಿನಿಧಿಗಳ ಬಂದೊದಗಿದ್ದರು. ಯಲ್ಲಾಪೂರಿನಿಂದ ಪ್ರವಾಸದ ಕೆಲವು ಅನಾನುಕೂಲತೆಗಳ ಮೂಲಕ, ಯಾರಿಗೂ ಬರಲಿಕ್ಕಾಗಲಿಲ್ಲ. ಶ್ರೀ| ಬಳಕೂರರು ಮುಂದ ತಮ್ಮದೊಂದು ಭಾಷಣದಲ್ಲಿ ಹೇಳಿದಂತೆ ಮುಂಡಗೋಡ ಮತ್ತು ಸೂಪಾ ಈ ಪೇಟೆಗಳು ಫಾರೆಸ್ಟ ಖಾತೆಯವರ ಕೈಯಲ್ಲಿ ಬಿದ್ದು ಅವುಗಳ ಕೈಕಾಲುಗಳು ‘ಹಳದೀ’ಯಾಗಿರುವದರಿಂದಲೋ ಏನೋ, ಅಲ್ಲಿಂದ ಯಾರೂ ಬಂದಿದ್ದಿಲ್ಲ. ಪ್ರತಿನಿಧಿಗಳಲ್ಲಿ ಹಲವರು ಖಾದೀ ಪೋಷಾಕನ್ನೇ ಧರಿಸಿದ್ದರು. ಬಹುತೇಕ ಎಲ್ಲವರು ತಲೆಗೆ ‘ಗಾಂಧೀ ಟೊಪ್ಪಿಗೆ’ಯನ್ನೇ ಹಾಕಿದ್ದರು. ಪ್ರತಿನಿಧಿಗಳಲ್ಲಿ ಎಲ್ಲ ಜಾತಿಗಳ ವ ಎಲ್ಲ ತರಗತಿಗಳ ಗೃಹಸ್ಥರು ಕಾಣುತ್ತಿದ್ದರು. ಕಾರವಾರದಿಂದ ಅಂಕೋಲೆಯಿಂದ ಮತ್ತು ಹಳಿಯಾಳದಿಂದ ಬಂದವರಲ್ಲಿ ೬–೭ ಮುಸಲಮಾನ ಪ್ರತಿನಿಧಿಗಳೂ ಇದ್ದರು.

ಪ್ರಾರಂಭದಲ್ಲಿ ಕೆಲವು ಸಣ್ಣ ಹುಡುಗರು ಕೂಡಿ, “वन्दे त्वां भूदेवीं आर्यमातरम्” ಈ ರಾಷ್ಟ್ರಗೀತವನ್ನು ಸುಸ್ವರವಾಗಿ ಹಾಡಿದ ಮೇಲೆ, ಸಭೆಯು ಕೆಲಸಕ್ಕೆ ಪ್ರಾರಂಭವಾಯಿತು. ಜಿಲ್ಲಾ ಕಮಿಟಿಯ ಈವರೆಗಿನ ತಾತ್ಕಾಲಿಕ ವ್ಯವಸ್ಥಾಪಕ ಮಂಡಳದ ಅಧ್ಯಕ್ಷರಾದ ವೇ| ಮ| ಎಸ್ ಎಸ್. ಶಾಸ್ತ್ರಿಯವರು ಅಧ್ಯಕ್ಷಸ್ಥಾನವನ್ನು ಮಂಡಿಸಿದ್ದರು. ಅವರು ತಮ್ಮ ಸ್ವಾಗತಪರ ಪ್ರಾಸ್ತಾವಿಕ ಭಾಷಣದಲ್ಲಿ ಸಭೆಯ ಉದ್ದಿಷ್ಟ ಕಾರ್ಯವನ್ನೂ ಜಿಲ್ಲಾ ಕಮೀಟಿಯ ಮುಂದಿನ ಜವಾಬದಾರಿಯ ಕಾರ್ಯಕ್ರಮವನ್ನೂ ವಿಶದವಾಗಿ ತಿಳಿಸಿ ಹೇಳಿ, ಸ್ಥಾಯಿಕ ವ್ಯವಸ್ಥಾಪಕ ಮಂಡಳದ ರಚನೆಯನ್ನು ಸಭೆಯವರು ಕೈಕೊಳ್ಳಬೇಕಾಗಿ ಸೂಚಿಸಿದರು. ಜಿಲ್ಲಾ ಕಮೀಟಿಯ ಕಚೇರಿಯ ಸ್ಥಾನವು ಎಲ್ಲಿರಬೇಕೆಂಬ ಚರ್ಚೆಯು ಪ್ರಾರಂಭಿಸಿತು. ಶ್ರೀ ಮಾಧವ ರಾಮ ಶ್ಯಾನಬಾಗ (ಕುಮಟಾ) ಇವರು ಈವರೆಗೆ ಉತ್ತಮವಾಗಿ ಕೆಲಸನಡೆದ ಹೊನ್ನಾವರದಲ್ಲಿಯೇ ಅದು ಮುಂದೆ ನಡೆಯುವದು ಯುಕ್ತವೆಂತ ಸೂಚಿಸಿದ ಠರಾವಿಗೆ, ಶ್ರೀ| ಹರಿ ಬಾಬು ಕಾಮತ (ಕಾರವಾರ) ಇವರು ಸ್ವಾರಸ್ಯ ಭಾಷಣಮಾಡಿ, ಅನುಮೋದನವನಿತ್ತರು. ಹೊನ್ನಾವರದವರು ಕುಮಟೆಯಲ್ಲಿ ಆಗಬೇಕಾಗಿ ಒಂದು ಉಪಸೂಚನೆಯನ್ನು ಮುಂದಿಟ್ಟರು. ಕಾರವಾರದಲ್ಲಿ ಆಗಬೇಕೆಂಬ ತಮ್ಮ ಉಪಸೂಚನೆಯನ್ನು ಶ್ರೀ| ಬಸರೂರರು ಹಿಂದೆ ತೆಗೆದುಕೊಂಡರು. ಎರಡೂ ಉಪಸೂಚನೆಗಳ ಮೇಲೆ ಮಾಡಿಕೆಯಂತೆ ಮತಗಳು ಎಣಿಸಲ್ಪಟ್ಟು, ಅವು ನಾಮಂಜೂರ ಆಗಿ,

ಹೊನ್ನಾವರದಲ್ಲಿ

ಆಗಬೇಕೆಂಬ ಮೂಲಠರಾವು ಕಟ್ಟಕಡೆಗೆ ಪಾಸಾಯಿತು. ಆಮೇಲೆ ಅಧ್ಯಕ್ಷರ ಚುನಾವಣೆ. ಅಧ್ಯಕ್ಷರು ಯಾರಾಗಬೇಕೆಂಬಬಗ್ಗೆ ಕೆಲವು ಕಾಲದ ವರೆಗೆ ಪ್ರತಿನಿಧಿಗಳು ತಮ್ಮತಮ್ಮೊಳಗೆ ಚರ್ಚಿಸುತ್ತಿದ್ದರು. ಈ ಚರ್ಚೆಯ ಅಂತ್ಯವು ಸುಲಭವಾಗಿ ಬೇಗ ಆಗುವಂತೆ ಕಾಣಲಿಲ್ಲ. ಯೋಗ್ಯ ಗೃಹಸ್ಥರ ಹೆಸರನ್ನು ಸೂಚಿಸಿ ಸಭೆಯವರು ಅವರಮೇಲೆ ಈ ಜವಾಬದಾರಿಯನ್ನು ಹಾಕುವದು ಇದು ಒಂದೇ ಮಾರ್ಗವೆಂತ ನೋಡಿ ಶ್ರೀ| ಕೃಷ್ಣರಾವ ಹಳದೀಪೂರಕರ ಇವರು ಹೊನ್ನಾವರದ ವೇ| ಮ|

ಮಂಜುನಾಥಭಟ್ಟ ಕರ್ಕಿ

ಯವರು ಅಧ್ಯಕ್ಷಪದವನ್ನು ಸ್ವೀಕರಿಸಬೇಕೆಂದು ಸೂಚನೆಯನ್ನು ಮುಂದಿಟ್ಟರು, ಹಾಗೂ ಪ್ರತಿವರ್ಷ ನವಂಬರ ತಿಂಗಳಲ್ಲಿ ನೂತನ ವ್ಯವಸ್ಥಾಪಕ ಮಂಡಲದ ರಚನೆಯಾಗುವದಿರುವದರಿಂದ, ಈಗ ನೇಮಿಸುವ ಮಂಡಳವು ೧೯೨೨ ನೇ ಆಕ್ಟೋಬರ ಆಖೇರವರೆಗೆ ಅಂದರೆ ಈಗಿನಿಂದ ೧೪ ತಿಂಗಳುಗಳವರೆಗೆ ಅಧಿಕಾರದಲ್ಲಿ ಇರಬೇಕಾಗಿಯೂ ಸೂಚಿಸಿದರು. ಅನುಮೋದಕ ಶ್ರೀ| ಮಾಧವ ಮಂಜನಾಥ ಶ್ಯಾನಭಾಗರು ತಮ್ಮ ಭಾಷಣದಲ್ಲಿ ಸೂಚಿಸಿದಮೇರೆಗೆ, ಶ್ರೀ|| ಕರ್ಕಿಯವರು ಏನೋ ಅನಾನುಕೂಲತೆಯ ಮೂಲಕ ಆವರೆಗೆ ಸಭೆಗೆ ಬಂದು ಮುಟ್ಟಿದ್ದಿಲ್ಲಾದುದರಿಂದ ಅವರ ಅನುಮತಿ ಪಡೆಯದೆ ಅವರನ್ನು ಆರಿಸುವದು ಹೇಗೆ ಎಂಬ ಪ್ರಶ್ನೆಯಿತ್ತು. ಆದರೆ ಹಳದೀಪೂರಕರರು ತಮ್ಮ ಸೂಚನೆಯನ್ನು ಮುಂದಿಟ್ಟುಕೊಡ್ರುವಷ್ಟರಲ್ಲಿಯೇ ಸುಯೋಗದಿಂದ ಶ್ರೀ|| ಕರ್ಕಿಯವರು ಸಭಾಸ್ಥಾನದಲ್ಲಿ ಬಂದು ಹಾಜರಾದರು. ಇದೇ ಅವರ ಅನುಮತಿಯೆಂದೆಣಿಸಿ ಆ ಠರಾವು ಚಪ್ಪಾಳೆಗಳ ಘೋಷದಿಂದ ಪಾಸಾಯಿತು. ಶ್ರೀ|| ಭದ್ರಿಯವರು ಉಪಾಧ್ಯಕ್ಷರಾಗಬೇಕಾಗಿ ಶ್ರೀ|| ಎಮ್ ಪಿ. ನಾಡಕರ್ಣಿಯವರು ತಂದ ಸೂಚನೆಯು ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಪಾಸಾಯಿತು. ಈವರೆಗೆ ತಾತ್ಕಾಲಿಕ ವ್ಯವಸ್ಥಾಪಕಮಂಡಳದ ಅಧ್ಯಕ್ಷರಾಗಿ ಯೋಗ್ಯತೆಯಿಂದ ಕಾರ್ಯಗಳನ್ನು ಸಾಗಿಸಿ ಶ್ರೇಯಸ್ಸುಪಡೆದ ಶ್ರೀ|| ಎಸ್ ಎಸ್ ಶಾಸ್ತ್ರಿಯವರು ಕಾರ್ಯದರ್ಶಿಗಳಾಗಬೇಕಾಗಿಯೂ ಈವರೆಗೆ ಕಾರ್ಯದರ್ಶಿಗಳಾಗಿ ಕೆಲಸಮಾಡಿದ ಶ್ರೀ ಎಮ್ ಪಿ ನಾಡಕರ್ಣಿಯವರು ಅವರ ಸಹಾಯಕರಾಗಿ ಜೊಂಟ ಸೆಕ್ರೆಟರಿಗಳಾಗಿರಬೇ

[illegible] ಎಂದು [illegible] ಯ ಪ್ರತಿನಿಧಿ [illegible] ವನ್ನು ಕೊಂಡಿರುವರು [illegible]

[illegible] ಪ್ರತಿನಿಧಿ [illegible] ಬಗ್ಗೆ ಇಲ್ಲಿ ಇದ್ದರೆ [illegible] ಶ್ರೀ [illegible] ಪೂರ್ವಕ ಇವರ [illegible]

[illegible] ಬೆಯಲ್ಲಿ ಗೊತ್ತುಪಡಿ [illegible] ನವನ್ನು ಶ್ರೀ [illegible] ಸ್ಥಳದಲ್ಲಿ [illegible] ವರ್ಷದ [illegible] ಪೂರಕರ [illegible] ಶ್ರೀ [illegible] ಪಾಲು [illegible] ಕಡೆಯಲ್ಲಿ ವಂದು [illegible] ಪ್ರಸ್ತಾವನೆ (Last [illegible]) [illegible]

[illegible] ಆರಿಸಿಯು ಮತ್ತು [illegible] ಕುರಿತ [illegible] ಮತ್ತು ಆ ಬಗ್ಗ [illegible] ಶ್ರೀ [illegible] ದರಾಪಿಸಿ ಶ್ರೀ [illegible] ಆ ಮೇಲ ಶ್ರೀ [illegible] ಕಾಂಗ್ರೆಸ [illegible] ವರು

[illegible] ಸ್ವರ [illegible]

ಹೊಸದಾಗಿ ಬೇವಿ ಸಲ್ಲಿ [illegible] ಸಭೆಯು [illegible] ಅಲ್ಲಿಂದ [illegible] ತರ್ಕವಸ್ತ [illegible] ಕೆಲವು ಸಂಗತಿಗಳ ನಿರ್ಣಯವು [illegible] ಮುಡ [illegible] ಮಾಡಲ್ಪಟ್ಟಿ [illegible] ಕಡೆ ತಿರುಗ [illegible] ಯೋಜನೆಯಂತೆ ಉತ್ಸಾಹಪೂರ್ವಕ ಎಲ್ಲ ಕೆಲಸಗಳ ನಡೆದು ಇಷ್ಟಸಿದ್ಧಿ [illegible] ಗಳಿಗೆ ಮನಸ್ಸಿನಲ್ಲಿ ದೇವರ ಕಡೆಗೆ ಬೇಡುತ್ತ ಎಲ್ಲ ವರೂ [illegible] ದರು ಎಂದು ಹೇಳುವದು ಯಥಾರ್ಥ ವಾಗಲಿಕ್ಕಿಲ್ಲವೇ? ತದಾಸ್ತು [illegible] ಮಾತರಂ

(೬ ನೇ ಪಾನಿನಮೇಲಿಂದ ಮುಂದರಿಸಿದ್ದು)

ಆಗ ಮಾಮಲೇದಾರರ ಒಬ್ಬ ಶಿಪಾಯಿಗೆ (ಆ ಶಿಪಾಯಿ ಯು ಯುನಿಫೋರ್ಮದಲ್ಲಿದ್ದಿಲ್ಲ) ಕೆರಿದು ಖಬ್ಬನ ಟೋಪಿಗೆಗೆ ಮತ್ತೊಬ್ಬನು ಕೈ ಹಾಕಿದರೆ, ಎಕದಂ ಪಕಡೊ ಎಂತ ಜೋಳ [illegible] ಹಾರೀ ಹಿಡಿದರು

ಆ ಮೇಲೆ ಡೆಪ್ಯೂಟೀ ಸುಪರಿಂಟೆಂಡೆಂಟ ಸರಿಕ್ಷಂದ್ರರು ಮೌಲಾನಾ ಮತ್ತು ಅಧ್ಯಕ್ಷರನ್ನು ಒಳಗೆ ಕರಕೊಂಡು ೧೪೪ನೇ ಕಲಮಿನ ಪ್ರಕಾರ ಈ ಜಿಲ್ಲೆಯಲ್ಲಿ ಎರಡು ತಿಂಗಳವರೆಗೆ ಭಾಷಣ ಮಾಡಬಾರದಾಗಿ ನೋಟಿಸು ಕೊಟ್ಟರು ಜನರು ಶಾಂತರೀತಿಯಿಂದ ನಡೆದ ಸಂಗತಿಗಳನ್ನು ತಿಳಿದು ಕೊಳ್ಳಲಿಕ್ಕೆ ಕುಳಿತು ಕೊಂಡರು ಆಗ ಅಧ್ಯ

ಕರು [illegible] ಭಾಷಣ ಒಂದು [illegible] ಅವರ [illegible] ಮಾಡಿದರೆಂಬ [illegible] ಏನೂ ತಪ್ಪು ಮಾಡಿಲ್ಲ [illegible] ನ್ಯಾಯ [illegible] ಕೂಗಿದರು. [illegible] ಸರಕಾರದವರು [illegible] ಎಂದು ಹೇಳಿದರು [illegible] ಹಕ್ಕಿನ [illegible] ವಚೆಂದರು ಶ್ರೀ [illegible] ನಿನ್ನ [illegible] ಇಲ್ಲ [illegible] ಇದು ಕೆ ಪ್ರತ್ಯಕ್ಷ [illegible] ಯ ಪ ರವಾನಿಯಿಂದ [illegible] ಇದರ [illegible] ರು ಸ ಪರಿಂಟೆಂಡೆಂಟ [illegible] ಪಸ್ತು [illegible] ಹೇಳೀ [illegible] ಆಗ [illegible] ಧಿಕಾರ ಧಿಕಾರ [illegible] ಜಲಿಯಾನವಾಲಾ ಬಾಗದಿಂದ [illegible] ಎಂದು ಕೂಗಿದರು.

ನನ್ನನ್ನು [illegible] ಕಾಶಪ್ರೆ [illegible] ಪ್ರಶ್ನೆಗಳು [illegible] ಇಂಗ್ಲಿಷ [illegible] ಜನರು [illegible] ಇಲ್ಲ ನಿಮಗೆ ಸ್ವಾತಂತ್ರ್ಯ [illegible] ವಾದಿಲ್ಲೇನ? ಎಂದರು [illegible] ಪವಿತ್ರ ಹೋ [illegible] ಜನರ [illegible] ಕೆಲಸ [illegible] ರಸ್ತೆಮೇಲಿ [illegible] ಜನರ [illegible] ಹೋದರು

ಇನ್ನೊಂದು [illegible] ಸಂಗತ ಏನೆಂದರೆ— ಪೊಲೀಸ ಸುಪರಿಂಟೆಂಡೆಂಟ [illegible] ೧೨ ಘಂಟೆಗೆ ಕೊಣ್ಣೂರಕ್ಕೆ ಬಂದ [illegible] ಭಾಷಣ ಮಾಡ [illegible] ಕಲಮಿಗಳ [illegible] ಲಾಗು ಮಾಡವೇ [illegible] ಕಲೆಕ್ಟರ ಸಾಹೇಬರ ಸ್ಪೆಶಲ್ ಮೋಟಾರು [illegible] ಬಂದಿದ್ದರು [illegible] ದೇವರ ಸಂಕೇತದ [illegible] ಅಲ್ಲಿಂದ ಮುಂದೆ [illegible] ಸೈಕಲ್ ಹತ್ತಿ [illegible] ೧೪೪ ನೇ ಕಲಂ [illegible] ಸಾಹೇಬರು ದಾರಿ ತಪ್ಪಿದ್ದರೆಂತಲೂ [illegible] ಹೀಗೂ [illegible] ಬಂದು ಮುಟ್ಟಿದರು [illegible] ಅವರ [illegible] ವಸ್ತ್ರಗಳ [illegible] ಮಾತ್ರ [illegible]

ಎಲ್ಲಿಯು [illegible] ಇನ್ಸ್ಪೆಕ್ಟರ [illegible] ಇವರು [illegible] ಹೊಳೆಯಲ್ಲಿ [illegible] ಬಗ್ಗೆ [illegible] ಹೋದಲ್ಲಿ ಅಲ್ಲಿ ಪಂಚರು [illegible] ಅವರ [illegible] ಹೋದ [illegible] ಮತ್ತು ಪಟ್ಟೇವಾಲ [illegible] ಪಂಚರಾದರಂತೆ

ಇಲ್ಲಿ ನಡೆದ [illegible] ಜನರಮೇಲಿನ [illegible] ಈಗ [illegible] ತಿಂಗಳಿಂದ ವಿಚಾರ ನಡೆಯು [illegible] ಜನ [illegible] ಕಾರಕ್ಕೆ ಇಟ್ಟರ [illegible]

ಹಳಿಯಾಳ— ತಾ [illegible] ಕಮಿಟಿ [illegible] ಹೊಸ ಕಾರ್ಯಕಾರಿ ಕಮಿಟಿ ನೇಮಿಸಲ್ಪಟ್ಟಿತು ಜಿಲ್ಹಾ ಸಭೆಗೆ ೧೩ ಮೆಂಬರರ [illegible] ಅಪದಾಬಾದ [illegible] ಯು ಸಭೆಗೆ [illegible] ಪ್ರಸಿದ್ಧ [illegible] ಅಧ್ಯಕ್ಷರಾಗಬೇಕಾಗಿ ಗೊತ್ತುಪ ಡಿಸಿತು [illegible] ಎಲ್ಲ [illegible] ನರು ಸ್ವದೇಶಿ ಬಟ್ಟೆಗಳನ್ನೇ ಧರಿಸಿದ್ದರು [illegible] ಮೇಲೆ [illegible] ಮಣಿಯಾರ, ಮತ್ತು [illegible] ವರ ವ್ಯಾಖ್ಯಾನಗಳಾದವು [illegible] ಗೆ ರೂಪ್ಯಾ ೧೦೦ ಕೂಡಿತು [illegible] ಅಬ್ದುಲ [illegible] ಸಾಹೇಬರ [illegible] ದವು [illegible] ಕಾರ್ಯಕಾರಿ ಕಮಿಟಿಯು ಸಭೆಗೂಡಿ [illegible] ಬೇಕಾಗಿ ನಿಶ್ಚಯವಾಯಿತು [illegible] ಸ್ವರಾಜ್ಯ ಫಂಡಿನ ಹಣವು [illegible] ವಸೂಲಾಗಿ ಅದರಲ್ಲಿ [illegible] ಎನಿಂದ ಕೊಟ್ಟ ಹಣ [illegible] ೧೦೦ [illegible] ರೂಪ್ಯಾ ಆದ

ವಿವಿಧ ವರ್ತಮಾನ.

ಐರ್ಲಂಡದಲ್ಲಿ ಶಾಂತತೆಯನ್ನು ಪ್ರಸ್ಥಾಪಿಸುವದ ಕ್ಕಾಗಿ ಇಂಗ್ಲಿಸ್ಕರ ಬ್ರಿಟಿಶ ಪ್ರಧಾನಮಂಡಳಕ್ಕೂ ಐರ್ಲಂಡ ಜನತೆಯ ಮುಂದಾಳುಗಳಾದ ಮಿ. ಡಿ. ವೆಲೆರಾರವರಿಗೂ ಈಗ ಕೆಲ ದಿನಗಳಿಂದ ಚರ್ಚೆ ನಡೆಯುತ್ತಿತ್ತು. ಬ್ರಿಟಿಶರ ಸವಲತ್ತನ್ನು ಕೊಡುವದಾಗಿ ಮಿ. ಡಿ. ವೆಲೆರಾರವರನ್ನು ಸಮಾಧಾನಮಾಡತೊಡಗಿದರೂ ಐರ್ಲಂಡ ಜನತೆಯ ಮುಂದಾಳುಗಳು ಬ್ರಿಟಿಶರ ಒತ್ತಾಯಕ್ಕೆ ಬಲಿಬೀಳಲಿಲ್ಲ. ಪೂರ್ಣ ಸ್ವಾತಂತ್ರ್ಯದ ಹೊರ್ತು ಐರ್ಲಂಡಕ್ಕೆ ಸಮಾಧಾನವಾಗಲಾರದೆಂದು ಬ್ರಿಟಿಶರಿಗೆ ತಿಳಿಸಿ ಉದಾರ ಸವಲತ್ತುಗಳನ್ನು ಧಿಕ್ಕರಿಸಿ ಅವರು ಐರ್ಲಂಡಕ್ಕೆ ನಡೆದರು. ಐರ್ಲಂಡದ ರಾಷ್ಟ್ರೀಯ ಸಭೆಗೆ ಕಾರಣವಾದ ಸರಕಾರವನ್ನು ಒಮ್ಮೆಲೇ ಸ್ಥಾಪಿಸಬೇಕು ಮತ್ತು ಅದಕ್ಕಾಗಿ ಎಲ್ಲರೂ ಸರ್ವಸ್ವದ ತ್ಯಾಗ ಮಾಡಲು ಸಿದ್ಧರಿರಬೇಕೆಂದು ಮಿ. ಡಿ. ವೆಲೆರಾರವರು ಡಬ್ಲಿನದಲ್ಲಿ ಒಂದು ಪ್ರಚಂಡ ಸಭೆಯಲ್ಲಿ ಜಾಹೀರು ಮಾಡಿದರು! ಒಟ್ಟಿಗೆ, ಇಡೀ ಜಗತ್ತಿನಲ್ಲಿ ಶಾಂತತೆಯ ಸಾಮ್ರಾಜ್ಯವನ್ನು ಪ್ರಸ್ಥಾಪಿಸಲು ಜರಗಿಸಿದ ಮಹಾಯುದ್ಧವು ಶಾಂತತೆಯ ಪುರಸ್ಕರ್ತರಿಗೆ ಅನುಕೂಲವಾಗಿ ಪರಿಣಮಿಸಿದರೂ ಅವರ ಸಾಮ್ರಾಜ್ಯದಲ್ಲಿಯೇ ಶಾಂತತೆಗೆ ಆಸ್ಪದವಿಲ್ಲ. ಪ್ರಜೆಗಳ ದುರ್ದೈವ ಮತ್ತೇನು!

ಅಖಿಲ ಭಾರತೀಯ ಕಾಂಗ್ರೆಸ-ಕಮಿಟಿಯ ಠರಾವಿನ ಅನುಸಾರವಾಗಿ ಲಾಹೋರ (ಪಂಜಾಬ) ದ ಮುನಿಸಿಪಾಲಿಟಿಯು ಸರಕಾರಿ ಅಧಿಕಾರಿಗಳ ಬಹಿಷ್ಕಾರವನ್ನು ಮಾಡುವ ಠರಾವನ್ನು ಬಹುಮತದಿಂದ ಮಂಜೂರುಮಾಡಿತು. ಲಾಹೋರ ಮುನಿಸಿಪಾಲಿಟಿಯು ರಾಷ್ಟ್ರಭಕ್ತಿಯ ಪ್ರಭಾವವನ್ನು ಸಮ್ಮ (ಸಿವಿಲ ಮಿಲಿಟರಿ ಗ್ಯಾಜೆಟ) ಹಿತಕಾರ್ಯವು ಸಹಿಸಲಾರದೆ "ಮುನಿಸಿಪಾಲಿಟಿಯನ್ನೇ ಮುರಿದು ಒಬ್ಬ ಕಮೀಶನರರನ್ನು ನೇಮಿಸಿ, ಅವರಿಗೆ ಮುನಿಸಿಪಾಲಿಟಿಯನ್ನು ವಹಿಸಿರಿ" ಎಂದು ತಮ್ಮ ಪತ್ರಿಕೆಯ ಭರದಲ್ಲಿ ಒರಳುತ್ತಿರುವರು.

ಸಹಕಾರಿತ್ವಮಾಡಿದವರ ಪಿಕೆಟಿಂಗ ನಡಿಸಿದರೂ, ಬಳ್ಳಾರಿಯ ಈ ದಿವಸ ಅಲ್ಲಿನ ಗಡದಲ್ಲಿ ಬರೇ ಎರಡೇ ಆಳುಗಳ ಆಹುತಿಯಾಯಿತಂತೆ! ಕಳೆದ ವರ್ಷ ಅಲ್ಲಿ ೧೫೦ ಆಳುಗಳ ಬಲಿಬಿದ್ದವು. ಇದು ದಿನೇದಿನೇ ವೃದ್ಧಿಹೊಂದುತ್ತಿರುವ ಹಿಂದೂ ಮುಸಲ್ಮಾನರ ಐಕ್ಯದ ದ್ಯೋತಕವಲ್ಲೇನು?

ಧಾರವಾಡದ ಗೋಳೀಬಾರಿನ ಪ್ರಕರಣದಲ್ಲಿ ಅಧಿಕಾರಿಗಳು ನಡಿಸಿದ ಅತ್ಯಾಚಾರಕ್ಕೆ ಹೇಸಿ, ಬಿಜಾಪುರದ ಪ್ರಮುಖ ವಾಕೀಲರಾದ ಶ್ರೀ ಆರ್ ವಿ ಪಟವರ್ಧನರವರು ಬೆಂಚ ಮೆಜಿಸ್ಟ್ರೇಟಿಯ ಬಹುಮಾನವನ್ನು ಸರಕಾರಕ್ಕೆ ಸಂಭಾರ ಅರ್ಪಿಸಿದರು.

ಮುಂಬಯಿಯಲ್ಲಿ ಸ್ವಯಂಸೇವಕರು ಮನೆಮನೆ ತಿರುಗಾಡಿ ಪರದೇಶೀ ಅರಿವೆಗಳನ್ನು ಒಟ್ಟುಗೂಡಿಸುತ್ತಿರುವರು.

ಮುಂಬಯಿಯ ಜವಳೀ ಮಾರ್ಕೇಟಿನಲ್ಲಿ ಪರದೇಶೀ ಅರಿವೆಗೆ ಗಿರಾಕಿಗಳೇ ಇಲ್ಲವಂತೆ. ಎಲ್ಲರೂ ಕೈಮಾಟ-ಕೈಮಗ್ಗಗಳಮೇಲೆ ತಯಾರಾದ ಖಾದಿಯನ್ನು ಕೇಳುವವರೇ! ಇಂಥ ಖಾದಿಯ ಪುರವಠೆಯಾಗದಿದ್ದರೆ, ಹಿಂದೀ ಗಿರಣಿಯ ಮಾಲು ಕೇಳುತ್ತಾರಂತೆ. ಒಟ್ಟಿಗೆ, ಪರದೇಶೀ ಅರಿವೆಯನ್ನು ಖರೀದಿಮಾಡಿ ಮುನಾಫೆ ಹೊಡೆಯಬೇಕೆನ್ನುವವರ ದೈನ್ಯ! ಮೊದಲೇ ಕುಂಡಣಾವಳಿಯಲ್ಲಿ ಹಾನಿ! ಅದು ಸಾಧಾರಣ ಸುಧಾರಿಸುವಷ್ಟರಲ್ಲಿ ಮಹಾತ್ಮರ ಬಹಿಷ್ಕಾರದ ಚಳವಳಿ. ಮೋಸಪ್ಪನ ಹುಡಿ, ನೋಡಿರಿ!!!

ಮುಂಬಯಿಯ ಸಕ್ಕರೆ ಮಾರ್ಕೇಟಿನಲ್ಲಿ ಸಕ್ಕರೆ ಕೇಳುವವರಿಲ್ಲವಂತೆ. ಜಾವಾ ಸಕ್ಕರೆಯು ಬಹಳೇ ಬಿಲ್ಕುಲ ಬಿದ್ದಿದೆ. ಕಳೆದ ಹತ್ತಿಗಿಂತ ಈ ಹಪ್ತೆಯಲ್ಲಿ ದರವು ಮಣಕ್ಕೆ ೮ ಆಣೆ ಕಡಿಮೆ ಆಗಿಹೋಯಿತು. ಕಲಕತ್ತಾ ಮಾರ್ಕೇಟಿನಲ್ಲಿ ಇದೇ ಹಾಗಾಗಿರುವದು.

ಕಾಂಗ್ರೆಸಿನ ಸ್ವಯಂಸೇವಕರು ವ್ಯವಸ್ಥಿತ ರೀತಿಯಿಂದ ನಡಿಸಿದ ಪಿಕೆಟಿಂಗದ ಪ್ರಭಾವದಿಂದ ಠಾಣಾ ಜಿಲ್ಲೆಯಲ್ಲಿ ಸರಾಯಿ ಅಂಗಡಿಗಳ ವ್ಯಾಪಾರವು ಬಿದ್ದು ಹೋಯಿತು. ಅದನ್ನು ತಡೆಯುವದಕ್ಕಾಗಿ ಅಲ್ಲಿಯ ಕಲೆಕ್ಟರರು ಕ್ರಿಮಿನಲ್ ಕೋಡ ೧೪೪ ಕಲಮಿನನ್ವಯ ಸಾರ್ವಜನಿಕ ಸುರಕ್ಷಿತತೆ ಹಾಗು ಶಾಂತತೆಯ ನೆವದಮೇಲೆ ಪಿಕೆಟಿಂಗಕ್ಕೆ ಪ್ರತಿಬಂಧಕಾರಕ ಹುಕುಮನ್ನು ಕಳೆದ ಜುಲೈ ೩೦ ನೇ ತಾರೀಖಿಗೆ ಅಮಲಿನಲ್ಲಿ ತಂದರು. ಠಾಣಾದ ನಾಗರಿಕರು ಶ್ರೀ ಜಮುನಾದಾಸ ಮೇಹ್ತಾ, ವಿಠ್ಠಲಭಾಯಿ ಪಟೇಲ ಇವರ ನೇತೃತ್ವದಲ್ಲಿ ಸಾರ್ವಜನಿಕ ಸಭೆಸೇರಿ ನಿಷೇಧ ಪ್ರವರ್ತಕ ಠರಾವುಗಳನ್ನು ಮಂಜೂರುಮಾಡಿದ್ದಲ್ಲದೆ ಬೇಕಾಯಿದೇಶೀರ ಹುಕುಮನ್ನು ಅವಮಾನ್ಯಮಾಡುವ ತಯಾರಿಯನ್ನು ಮಾಡಿದರು. ಜನರ ಸತ್ಯಾಗ್ರಹದ ಸಿದ್ಧತೆಯನ್ನು ನೋಡಿ ಕಲೆಕ್ಟರ ಸಾಹೇಬರು ಎಚ್ಚರಾಗಿ ಕಳೆದ ೧೯ ನೇ ತಾರೀಖಿಗೆ ತಮ್ಮ ಹುಕುಮನ್ನು ರದ್ದುಪಡಿಸಿದರು. ಜುಲುಮಿ ಕಾಯಿದೆಗಳಿಗೆ ಸ್ವಿನಯ ಸತ್ಯಾಗ್ರಹವೇ ಮದ್ದು.

ಕಳೆದ ೧೮ ನೇ ತಾರೀಖಿನಿಂದ ರಾಷ್ಟ್ರೀಯ ಸಭಾಮಂದಿರದಲ್ಲಿ ಧಾರವಾಡ ಗೋಳೀಬಾರ ಪ್ರಕರಣದ ಚೌಕಶಿಯು ರಾಷ್ಟ್ರೀಯ ಸಭೆಯ ಮುಖಾಂತರ ನಡೆಯುತ್ತಿದೆ. ಊರ ಮಾಹಿತ ಪ್ರಮುಖ ಮುಂದಾಳುಗಳ ಸಾಕ್ಷಿ ತೊಗೊಳ್ಳುವ ಕೆಲಸವು ಜೋರಿನಿಂದ ನಡೆದಿದೆ. ಕಾಂಗ್ರೆಸ ಕೋರ್ಟಿನಲ್ಲಿ ಜನಸ್ತೋಮವು ಪ್ರತಿದಿನ ನೆರೆಯುತ್ತಿದೆ.

ಸ್ವದೇಶೀ ಕಾರಖಾನೆಗೆ ಉತ್ತೇಜನ
ವಿದೇಶೀ ವಸ್ತುಗಳಿಗೆ ಬಹಿಷ್ಕಾರ

ದಿ, ಸ್ವದೇಶಿ ಇಂಕ ಸಪ್ಲೈರ್ಸ
ಕಾರ್ಲೆ ಕನರಾ

ಭಾರತೀಯ ಶಾಯಿ ಗುಳಿಗೆಗಳು
ವ್ಯಾಪಾರಸ್ಥರಿಂದಲೂ ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದವು

ನಂ ೧ ಉತ್ತಮ ನೀಲಿಕಪ್ಪು ೧೪೪ ಗುಳಿಗೆ ಗ್ರೋಸ ೧ ಕ್ಕೆ ರೂ ೧ ೪ ೦ ೬ ಗ್ರೋಸಿಗೆ ರೂ ೫ ೮ ೦ ೧೨ ಗ್ರೋಸಿಗೆ ರೂ ೧೦ ೦ ೦ ನಂ ೨ ಗ್ರೋಸ ೧ ಕ್ಕೆ ೦ ೧೫ ೦ ೬ ಗ್ರೋಸಿಗೆ ರೂ ೫ ೦ ೦ ೧೨ ಗ್ರೋಸಿಗೆ ರೂ ೮ ೦ ೦ ಕೆಂಪು, ಹಸರು ಗ್ರೋಸ ೧ ಕ್ಕೆ ರೂ ೧ ೮ ೦ ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನು ೧ ಗ್ರೋಸಿಗಿಂತ ಕಡಿಮೆ ಕಳಿಸುವದಿಲ್ಲ ಇನ್ನ ದೇಶೀ ಸಾಬೂನು ತಯಾರಾಗುವದು

ಮೈಸೂರ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ

ಸದಾಶಿವ ವಿಶ್ವನಾಥ ಶಾಸ್ತ್ರಿ ಸಿದ್ಧೇಶ್ವರ

ಇವರು ವ್ಯಾಕರಣದಲ್ಲಿ ಪೂರ್ವಭಾಗ ಪರೀಕ್ಷೆಕೊಟ್ಟು ಸರ್ಟಿಫಿಕೇಟು ಪಡೆದಿದ್ದಾರೆ. ಅವರನ್ನು ಯಾವ ಧಾಸರೊಂದು ಹಾಯಸ್ಕೂಲಿ ಕೊಳೆಬ, ಮ ಇತರ ಸಂಸ್ಕೃತ ಪಾಠಶಾಲೆಯಲ್ಲಿ ಇಟ್ಟುಕೊಳ್ಳಬಿಚ್ಛಿಸುವವರು ಈ ಕೆಳಗಿನ ಪತ್ತೆಗೆ ಪತ್ರ ಬರೆಯಬಹುದು. ಅವರಿಗೆ ಇಂಗ್ಲೀಷ ಬರುವದಿಲ್ಲ. ಕನ್ನಡದಲ್ಲೇ ಸಂಸ್ಕೃತ ಪರೀಕ್ಷೆ ಕೊಟ್ಟಿರುವರು.

ಸದಾಶಿವ ವಿಶ್ವನಾಥ ಶಾಸ್ತ್ರಿ,
ಸಿದ್ಧೇಶ್ವರ, ಪೋಸ್ಟ ಗೋಕರ್ಣ

ಖಾದಿಯನ್ನು ಕೊಳ್ಳುವವರಿಗೆ ಮುಂಜಾಗ್ರತೆಯ ಸೂಚನೆ.

ಮಾನ ಸೊಗಸು ಸೌಕರ್ಯಗಳ ಮಟ್ಟ ಕಲ್ಪನೆಗಳನ್ನು ಕಾಲುಗಳಿಂದ ತುಳಿದು ಬಿಡುವ ಹತ್ತು ಒಪ್ಪಲೆ ನಿರಾತಂಕ ಮನಸ್ಸಿನಿಂದ ಅಪ್ರಿಯವಾದ ಖಾದಿಯನ್ನು ಆರಿಸಿ ಕರಿಸುವ ಜನರಿಗೆ ಧೈರ್ಯವನ್ನು ತಂದುಕೊಟ್ಟ ಸ್ವದೇಶಭಕ್ತಿಯು ಅತಿಶಯವಾಗಿ ಸ್ತುತಿಪಾತ್ರವಾಗಿದ್ದೇ ಆದರೆ ಅವರ ಸದ್ಭಾವನೆ ಉತ್ಕಟ ಅನ್ಯಾಯಕ್ಕೆ ಅಂಜದ ದಿಟ್ಟೇ ದೊಡ್ಡವನೆಂದು ಅಡ್ಡಗಾಲಿಟ್ಟಿರುವ ಜನರ ತಂಬಿರುವರು ನಾವು ಅತ್ಯಂತ ಜಾಗರೂಕರಾಗಿರದೆ ಸಮಯದಲ್ಲಿ ಈ ಜನರು ನಮ್ಮ ಮನೋಭಾವನೆಯ ಲಾಭವನ್ನು ತಮ್ಮ ಸ್ವಾರ್ಥಕ್ಕಾಗಿ ಮಾಡಿಕೊಳ್ಳುವರು. ಇಷ್ಟೇ ಅಲ್ಲ ಮೇಲಾಗಿ ನಮ್ಮನ್ನು ವಂಚಿಸುವರು. ಇದಕ್ಕೆ ಉದಾಹರಣೆಯೆಂದರೆ ಕಳೆದ ೪ ವಾರಗಳಲ್ಲಿ ಬಳ್ಳಾರಿಯಲ್ಲಿ ಖಾದಿಯ ವಿಷಯವಾಗಿ ಬೇಡಿಕೆಯು ಅಸಾಧ್ಯವಾಗಿ ಬೆಳದಿದೆ. ಎರಡು ಮೂರು ಜನರು ಹಿಂದೀ ಜನರ ಹಣದಿಂದಲೂ ಹಿಂದೀ ಜನರ ಶ್ರಮದಿಂದಲೂ ಸಿದ್ಧವಾದ ನಿಜವಾದ ಕೈನೂಲು ಕೈಮಗ್ಗಗಳಿಂದಾದ ಅರಿವೆಯನ್ನು ದೊರಕಿಸಿ, ಯೋಗ್ಯ ಬೆಲೆಗೆ ಮಾರಾಟಮಾಡಿದರು. ಆದರೆ ಬೇಡಿಕೆಯು ಪ್ರಮಾಣಕ್ಕೆ ಸರಿಯಾಗಿ ಪೂರೈಸುವದು ಅವರಿಂದಾಗಿಲ್ಲ. ಅದಕ್ಕೆ ಅವರು ನೂರಕ್ಕೆ ನೂರು ಬೆಲೆಯನ್ನು ಏರಿಸಿಬಿಟ್ಟರು. ಆದಾಗ್ಯೂ ಕೂಡ ಬೇಡಿಕೆಯು ಕಡಿಮೆಯಾಗಲಿಲ್ಲ. ಇದ್ದರಿಂದ ಅವರೂ ಇನ್ನೂ ಕೆಲವರೂ ಸೊಲ್ಲಾಪುರ ಹುಬ್ಬಳ್ಳಿ ಮುಂತಾದಲ್ಲಿಯ ಗಿರಣಿಗಳಲ್ಲಾಗುವ ಮತ್ತು ಜಪಾನದಲ್ಲಾದ ಖಾದಿಯನ್ನು ಕೂಡ ತರಿಸಿ ಅದು ಕೈಯಿಂದ ಮಾಡಿದ ಶುದ್ಧ ದೇಶೀಯ ಖಾದಿಯೆಂದು ಹೇಳುತ್ತಿರುವರು. ಸಂತೆ ನಡೆಯುವ ದಿನ ಅಂದರೆ ಪ್ರತಿ ಶುಕ್ರವಾರ ಸಂಜೆ ಹಳ್ಳಿಯವರು ಗಿರಣಿಯ ನೂಲಿನಿಂದ ಕೈಮಗ್ಗದ ಮೇಲಾದ ಖಾದಿಯನ್ನು ತಂದು ೧೨ ಗಜಕ್ಕೆ ೪॥ ರೂಪಾಯಿಗಳಂತೆ ಮಾರುವರು. ಸ್ವದೇಶೀಯ ಹೆಸರಿನ ಅರಿವೆಗಳ ವ್ಯಾಪಾರಿಗರು ಅವುಗಳನ್ನು ಒಟ್ಟಿನಿಂದ ಒಮ್ಮೆಲೇ ಕೊಂಡು ಒಂದು ವಾರಕ್ಕೆ ೧೪ ರೂಪಾಯಂತೆ ವಿಕ್ರಯ ಮಾಡುತ್ತಿರುವರು. ಖಾದಿಯನ್ನೇ ಉಪಯೋಗಿಸಬೇಕೆಂದು ಉಪದೇಶ ಮಾಡಿ ಜನರಿಗೆ ಉಪನ್ಯಾಸ ಹೇಳುವವನ್ನು ಕೇಳಿರುವೆನು. ಆದರೆ ನ್ಯಾಯಾನ್ಯಾಯ ನೋಡದ ಮಾರಾಟಗಾರರು ಈ ರೀತಿಯಾಗಿ ಮೋಸ ಮಾಡುತ್ತಿರುವ ವಿಷಯವಾಗಿ ನನ್ನಿದಿರಿಗೆ ಜನರು ದೂರ ಹೇಳುತ್ತಿರುವರು. ಇಂಥವರ ವಿರುದ್ಧ ಕಟ್ಟಲೆ ಮಾಡಿ ಇವರಿಗೆ ಬುದ್ಧಿಗಲಿಸಬೇಕೆಂಬ ಕಾನೂನೂ ಕೂಡ ಅಸಹಕಾರಿಯ ಮನಸ್ಸಿನಲ್ಲಿ ರಸ್ತದವಿಲ್ಲ. ನಾವು ಮಾಡುವ ಪರಮಾವಧಿಯೆಂದರೆ ಈ ವಿಷಯದಲ್ಲಿ ಜನಾಭಿಪ್ರಾಯವನ್ನು ಪದ್ಧತಿಯ ಮೇರೆಗೆ ಬಲಿಸಿಕೊಂಡು ಇಂಥ ಪ್ರಸಂಗಗಳ ಮೇಲೆ ಚರಿಸುವುದಾಗಿ ಅಂದರೆ ಮಾಡುವದೇ ಸರಿ. ಹಾಗೆ ಆಗುವವರೆಗೆ ಜನರು ಮೋಸಹೋಗದಂತೆ ಎಚ್ಚರುಳ್ಳವರಾಗಿರಬೇಕು.

—ಹಿಂದೂ(?)

ಕಾನಡಾ ಜಿಲ್ಲೆಯೊಳಗಿನ ಪ್ರಯಾಣಸ್ಥರ

ಸಲುವಾಗಿ

ಹೊಸ ಸುಧಾರಣೆ,

ಅಂದರೆ—

ಗ್ಯಾತೊಂಡೇ ಬ್ರದರ್ಸ, ಕಾರವಾರ

ಇವರ ಮೋಟರ ಸರ್ವಿಸ್.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ ಸ [illegible] ನೇ ಇಸ್ವಿಯ [illegible] ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು [illegible]

ರೋಗದ ಹೆಸರುಗಳು

[illegible]

[illegible]

ಹೆಡ್ ಆಫೀಸು [illegible] ಬೆಳಗಾಂವ

[illegible]

ಔಷಧಗಳು,

1 [illegible] — [illegible] 1ಕ್ಕೆ 1-1-0 । ಡಝನಿಗೆ 4-12-0

2 [illegible] — ([illegible] ಗುಣ) — [illegible] ಬಾಟ್ಲಿ 1 ಕ್ಕೆ 0-8-0

3 [illegible] ಗುಟಿಕ — [illegible] ಬಾಟ್ಲಿ 1ಕ್ಕೆ 0 10 0

4 [illegible] ಗುಟಿಕೆ ಇದು [illegible] ಬಾಟ್ಲಿ 1 ಕ್ಕೆ 0 10 0

5 [illegible] ಬಾಟ್ಲಿ 1ಕ್ಕೆ 0 12 0

ಎಮ್. ಗಣಪಯ್ಯಾ ಎಂಡ ಸನ್ಸ್

ನೆಟಿವ್ ಡೊಕ್ಟರ್ಸ್ ರಥಬೀದಿ

ಮಂಗಳೂರ [illegible]

ಮೋಟಾರ.

[illegible] ಸಿರಸಿಗೆ ಮತ್ತು ಸಿರಸಿಯಿಂದ [illegible] ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡಿಸುವ ವ್ಯವಸ್ಥಾ ಇಟ್ಟಿದೆ [illegible] ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು [illegible] ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು.

ಟಿಕೀಟುಗಳು ಸಿರಸಿಯಲ್ಲಿ [illegible] ಅಂಗಡಿಯಲ್ಲಿ, ಮತ್ತು [illegible] ಸ್ಟೇಶನದ ಹತ್ತರ [illegible] ಯಲ್ಲಿ ಸಿಗುವವು.

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

[illegible]

ಸ್ವರುಪೋತ್ತಮ ಲಕ್ಷ್ಮಣಯ್ಯಾ [illegible]

ಜಿಗಜೀಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडातील अनेक वनस्पतींच्या रसात पौष्टिक औषधीफळांचा रसार्क मिश्र करून, खाली दिलेल्या रोगावर उपयुक्त अशी भस्मे घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहींसा करून, वीर्य वृद्धि व रक्तशुद्धि होते कितीहि जुनाट कडकी असो (एक समकाजच) नाश पावत आणि उपदंशा संबंधीं मुरलेले विकार नाहींसे होऊन हातपाय, डोळे याचा दाह व धातुविघातक सर्व विकार नष्ट होऊन, शरीर वज्रासमाणे बनतें. हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि सततीस अपायकारक असे गर्भाशयस्थ रोग याचा समूळ नाश होतो हे औषध स्त्रियानी सेवन केल्यास, त्यांचे जननेंद्रियाचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळा जेवले तरी, भूक चांगली लागत जाऊन शौचास साफ होते याचा अनुभव औषध घेतल्याच्या पहिल्या दिवशी येतो. तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूचे सेवन करून, यातील खरी मजा पहावी. फार दिवसाचा रोग असल्यास, पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असता, गुण येईल. एका बाटलींमध्यें १० तोळे औषध असते. त्या एका बाटलीची किंमत १। रुपया, तीन बाटल्याची किंमत ३। रुपये एक डझन (१२) बाटल्यांची किंमत १० रुपये याशिवाय टपाल, व प्याकिंग खर्च निराळा पडेल

म्यानेजर,

के एम. हनुमान मासादिक कंपनी

जिल्हा बेळगाव, मु. पा निपाणी

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತನಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

[illegible] ಕಾನಡಾವೃತ್ತ ಆಫೀಸ ಕುಮಟಾ

Printed and published by Kris[illegible] [illegible]kelkar Shenvi at the St[illegible] of Kanara Press, K[illegible]

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೮

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು ರೂಪಾಯಿ 2-0-0.

ಮನೆಯಾರ್ಡರಿಯಿಂದ ರೂ 2-13-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-15-0.

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ ಪ್ಯಾಕಾ ಟೈಪಿನ(೧೫ ಎವ್ಹ್ ಉದ್ದ) ೫ ಸಾಲುಗಳ ವರೆಗೆ ರೂ. 1 0 0

ಅನಂತರ ಪ್ರತಿ ಸಾಲಿಗೆ 0-2-0

ಹೆಚ್ಚಿಂಗಿದ ಸಾಲು ಎಷ್ಟು ಹೊತ್ತಿರುವದೋ ಆ ಮಾಪ ದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯಾರ ದಾ ಸಮಕ್ಷಿ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ, ಗುರುವಾರ, ತಾರೀಖು ೧ ನೂಹ್ ಸಪ್ಟಂಬರ ಸನ್ ೧೯೨೧ ನೇ ಇಸವಿ]—

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿ ಕಪ್ಪು, ಕೆಂಪು, ಜಾಂಬಳಿ ೧೦ಂಕ್ಕಗಳಲಿಗೆ ಕಪ್ಪು ಮಾತ್ರ ೧೨ಆಣೆ ಶಾಯಿ ಸೆಂಪಲಿಗೆ ಒಂದಾಣೆ ಕರೋಕ ತೆಗೆದುಕೊಂಡರೆ, ಭರಪೂರ ಕಮಿಶನ್.

ಪತ್ತೆ— ಎಸ್ ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ

ಭಡತೀ ಬ್ರಾತೃಸಂಘದ

ಅನುಭವಸಿದ್ಧ ವಾಸ

ಜ್ವರದ ಗುಳಿಗೆಗಳು ಕ್ರಯ— ೨೫ ಕ್ಕೆ ೦-೧೦-೦.

ಉತ್ತಮ ನೀಲಗಿರಿ ಎಣೆ, ಹಿತ್ತಾಳಿ ನಿಬ್ಬ, ಉಂಚೆ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಳೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಬಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

ಅತ್ಯಂತ ಬೋಧಪ್ರದ-ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ೧೨ಆ (೨) ಕಷ್ಟಪ್ರಕಾಶ ಬೆಲೆ ೬ ಆಣೆ. (೩) ವಿಚಿತ್ರಕಾರಸ್ಥಾನ ಬೆಲೆ ೧೨ ಆಣೆ

ಪತ್ತೆ— ಬಸವಾರ್ಯ ಬೂದೀಹಾಳಮಠ,
ಹೆಡ್ ಮಾಸ್ತರ, ಮುಕ್ಕಾಂ ಅಲೂರ
ಪೋಸ್ಟ— ಅಲೂರ—ಹಾನಗಲ್ಲ, ಜಿ. ಧಾರವಾಡ,

ಕಾರ್ಡ-ಸ್ಯಾಜ ಫೋಟೋ.

ಮಹಾತ್ಮಾ ಗಾಂಧೀ, ಲೋ॥ ಟಿಳಕ ಮೌಲಾನಾ ಶೌಕತ ಅಲ್ಲಿ, ದೇ॥ ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ.— ೧ಕ್ಕೆ ೬ಪೈ, ಡಜನಕ್ಕೆ ೪ಆಣೆ, ಶೇಕಡಾ ೧-೧೦-೦ ಟಪಾಲ ಹಾಸಲ ಬೇರೆ ಸಂಪಲಗಳು ಬೇಕಾದರೆ, ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ಟಾರ ಆಪ್ ಕೆನರಾ ಪ್ರೆಸ್ಸ,
ಕುಮಟಾ (ಎನ್. ಕೆನರಾ,)

ಖರೇ ಪ್ಯಾಲು! ತಾಜಾ ಕಲ್ಮ" ತ್ವರೆ ಗ್ಯಯಿರಿ!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯಸಂಜೀವನಿಮಾತ್ರೆ.

ಶುಕ್ಲಧಾತುವನ್ನು ಬೆಳೆಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷದ ಆಕರ್ಷಕಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರತನವನ್ನೂ ರೋಗವನ್ನೂ ದೂರಪಡಿಸಿ ಬಿಯೂರಾರೋಗ್ಯವನ್ನೂ, ರತಿಯಲ್ಲಿ ವಿಶೇಷವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ವ್ಯಾಕುಲತೆಯನ್ನೂ ಯೌವನದ ಕಳೆಯನ್ನೂ ಬೆಳೆಸಿ ಪರಿತನವನ್ನು ನೀಗಿ ಬಲವನ್ನು ಉಂಟುಮಾಡುವವು. ಪ್ರಮೇಹವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಧಮುಕಂಪ ಇವುಗಳನ್ನು ಬಿಡದೇ ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಮೈಥುನದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಢಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈ ಬಿಸುಪು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥. ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್,
ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ (ಕೆನರಾ.)

ಅಗ್ಗ] ಮಳೆಗಾಲ. [ಅಗ್ಗ

ಮಳೆಗಾಲ ಮತ್ತು ಬಿಸಲು ದೆಶೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು ಈ ಕರಗಿನ ಪಿಳಾಕಕ್ಕೆ ಅಗದೀ ಕಡಿಮೆ ದರದಿಂದ ಸಿಗುವವು. ವ್ಯಾಪಾರಸ್ಥರಿಗೆ ಯೋಗ್ಯ ಸವಲತಿಗಳು ಸಿಗುವವು.

ಎಸ್. ಎಲ್. ಧಾಕಪ್ಪನವರ, ಶಿರ್ಸಿ.

ಹೊಸ ಶೋಧ! "ಓಂ" ಹೊಸ ಶೋಧ"

ಗುಣ ಬಾರದಿದ್ದರೆ, ಹಣ ಮರಳು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ, ವೀರ್ಯವೃದ್ಧಿಯಾಗುವದು, ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿರವ್ವಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು ೧ ಆಣೆ೨ ೩ ಡಬ್ಬಿಗಳಿಗೆ ೪ ರು. ೮ ಆಣೆ ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಇನಾಮ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ— ವ್ಹಿ. ಆರ್ ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಶ್ರೀ। ಕಮಲಾಬಾಯಿಯ

ಅಬಲಾ ಸಂಜೀವನಿ ಗುಳಿಗೆ.

ಬರೇ ಸ್ತ್ರೀಯರಗೋಸ್ಕರ

ಪ್ರಾಯ ಒಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಆಪಾಯಕರ ಮತ್ತು ತೀಕ್ಷ್ಣ ವ ವೇದನೆ ರೋಗಗಳು ಈ ಗುಳಿಗೆಗಳಿಂದ ಗುಣವಾಗುತ್ತವೆ ೨೫ ವರ್ಷಗಳದಾರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ ತಪ್ಪಲ ಪತ್ರ ೩ಯ ಕಟಲಾಗ [illegible] ೦-೨-೬ ಸ್ಟಾಂಪು ಕಳಿಸಿದರೆ [illegible] ಬಾಟ್ಲಿ ೧ ರ ಕ್ರಯ ೧-೮-೦ [illegible] ವ್ಯಾಪಾರಿಗಳಿಗೆ ಸೋಯಿಯ ದರ

ಶ್ರೀ। ಕಮಲಾಬಾಯಿ ಜಿ ಎಮ್ ಸಿ ಫಾರ್ಮಸಿ, ಕಾಳಬಾದೇವಿ ಎದುರಿಗೆ ಮುಂಬಯಿ.

ಡಾ. ನವರತ್ನಕರ

ವಿಸ್ಮೃತಿಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ

ಇದರಿಂದ ಬಿಳಿ ಕೂದಲು ಹಾಗೆ ಕಪ್ಪಾಗುತ್ತವೆ ಈ ಕಲಾಪಿನಗುಣಗಳ — ಸುಲಭ ಹಚ್ಚೋಣ, ಸುವಾಸ ಪರಿಮಳ ಅಗ್ಗ ಕಯ ವೇ ಸರಿ. ಉಪಯೋಗಿಸಿದವರೆಲ್ಲರು ಸಮಾಧಾನಪಟ್ಟಿರುವರ.

ಕ್ರಯ ೧ [illegible] ೮—೦ ಅಂಚೆ ವೆಚ್ಚ ಬೇರೆ

೧೨ ಕ್ಕೆ ೧೫—೮ —

ನವರತ್ನ ಮತ್ತು ಸನ್

[illegible] ಕಾಳಬಾದೇವಿ ರೋಡ ಮುಂಬಯಿ.

ಅನುಭವಸಿದ್ಧವಾದ ಔಷಧಗಳು !!!

ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ.

ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು,

ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಆಶಕ್ತತೆ ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ ಉಪದಂಶವಿಕಾರ, ಮುಸ್ತಕಶೂಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ್ದು ಗುಳಿಗೆ ೩೦ ಕ್ಕೆ ರೂ. ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೪ ದಿವಸದ ಔಷಧಕ್ಕೆ ರೂ ೨-೦-೦ (೩) ಗಜಕರ್ಣ ನಾಶಕ ಮಲಮ — ಡಬ್ಬಿಗೆ ಆಣೆ ೦-೮-೦ (೪) ಮೂಲವ್ಯಾಧಿ ನಾಶಕಗುಳಿಗೆ — ಹಳೆ ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಮಾನಪತ್ರ, ಔಷಧಿ, ಸಂಗಡ. ಅಂಚೆ ವೆಚ್ಚ ಬೇರೆ

ವಿಳಾಸ— **ವೈದ್ಯ ವ್ಹಿ. ಎಸ್ ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ,**

ಜಿಲ್ಲಾ ಉತ್ತರಕಾನಡಾ

तापावर

पाटणकर

एग्यूमिक्श्चर

ಜ್ವರದ ಮೇಲೆ ಪಾಟಣಕರ ಎಗ್ಯುಮಿಕ್ಸ್ಚರ

ಮಲೇರಿಯಾ ಚಳಿಜ್ವರ ಕುದಿಯಾಂತ್ರಗೆ, ಜ್ವರ ಬಂದು ಜ್ವರವು ಬಿಡುತ್ತದೆ. ಕ್ರಯ ೦-೧೨-೦ ದೇಶೀಕ ವ್ಯಾಪಾರಸ್ಥರಿಗೆ ಅಗ್ಗ

ಪಾಟಣಕರ ಮಾಯದೇವ ಕಂಪನಿ

ಮುಂಬಯಿ ೪

ಲೋಕಮಾನ್ಯವಾದ

ಚಹಾ ಮತ್ತು ನೀಲಗಿರಿ ಎಣ್ಣೆ.

ನಿಜವಾಗಿ [illegible] ಅತ್ಯುತ್ತಮ, ಎಲ್ಲಾ ತರದ ಚಹಾ ಮತ್ತು ಉಪಯೋಗದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಆಯಿಲ್) [illegible] ವ ಕಿರಕೋಳ ಬೇರೆಯಲ್ಲಿಯೂ ಸಿಗದ ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ ಈಗಲೇ ಬಂದಿರುತ್ತದೆ. ಪತ್ರ ವ್ಯಾಪಾರ ದರದ [illegible] ತರಿಸಿಕೊಳ್ಳಿರಿ

ವಿ ಪಿ. ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ ಉತ್ತರ ಕಾನಡಾ

HONAWAR (N. Kanara)

FREE. FREE.

Purchasers of 36 tins of our well renowned Ringworm Ointment, price As. 4 per tin, or of 12 Phials of Otto Mushk-hina, Price As. 12 per tube will be sent

A WRIST WATCH FREE

King George Coronation Co., BOMBAY No. 4.

ಸತ್ಯಮೇವ ಜಯತೇ.

ಗುಣಕಾರಿದ್ದಲ್ಲದೆ ಹೇಳುವದಿಲ್ಲ

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಬೇಗ [illegible] ದಾತುಪೌಷ್ಟಿಕ [illegible] ಪಾಚಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗುಣ (ಟಾನಿಕ್) ಇದ್ದದ್ದರಿಂದ [illegible] ಎಲ್ಲತರದ [illegible] ಬದಿಗಳ ಕಾಟಕೊಟ್ಟ [illegible] ಬಹಳ ಅತಿಶ್ರಮ [illegible] ಶರೀರಕ್ಕೆ ನಿರೋಗತ್ವದ [illegible] ಕ್ಕೆ ಸಂಪೂರ್ಣ ಶಕ್ತಿಯೂ [illegible] ಗುಳಿಗೆಗಳು ಬೇಕಾ [illegible] ಗಳಿಗೆ ೪ ರೂಪಾಯಿ [illegible] ಅನುಮಾನಪತ್ರಿಕೆ ಔಷಧದ ಸಂಗಡ

ವಿಳಾಸ **ಜಿ. ಎಲ್ ಜೋಶಿ ಕಂಪನಿ**

ಪೋಸ್ಟ — ಸಿರಸಿ ಉತ್ತರ ಕಾನಡಾ.

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ಥೋಕ ದರ, ಸವಲತಿಯು ಇರುತ್ತದೆ

ಪತ್ತೆ:— ಬಿ ದಾಸ, ಕುಮಟಾ

ಸ್ಪೆಶಲ್ ಮೊಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಕೊಳ್ಳಬಹುದು ಸವಲತ್ತಿಯ ದರಗಳು ಇಟ್ಟಿರುವೆವು.

ನಮ್ಮ ಪತ್ತೆ —

ಗ್ವಾತೋಂಡೇ ಬ್ರದರ್ಸ,

ಮೊಟರ ಡೀಲರ್ಸ, ರಿಪೇರರ್ಸ,

ಕಾರವಾರ.

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ.

ನವೀನ ಭಾರತ.

(ವಾರ್ಷಿಕ ವರ್ಗಣೀ ಅಂಚೇ ವೆಚ್ಚ ಸೇರಿ ರೂ. ೩)

ಇದರಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ ವ ನಿರ್ಭೀಡ ಪ್ರಚಾರಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶೀ ಬಹಿಷ್ಕಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖನಗಳೂ ಪ್ರಕಟಿಸಲ್ಪಡುವವು. ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ, ಜಾಹೀರಾತುದಾರರಿಗೂ ಅತಿಶಯ ಅನುಕೂಲ

ವಿಳಾಸ— ನವೀನ ಭಾರತ ಕಾರ್ಯಾಲಯ,

ಬಾಗಲಕೋಟ (ಜಿ. ವಿಜಾಪೂರ)

श्रीभीमकुंडदर्शन.

श्री चित्रकल्याण पुस्तकाम प्रख्यात **बालहरिदास** यांनीं प्रस्तावना लिहिली आहे

श्री क्षेत्र गोकर्ण येथलें एक पुण्यस्थान श्री भीमकुंड याचा प्राचीन व आर्वाचीन वृत्तांत छापून प्रसिद्ध झाला आहे कि. ९ पै

पत्ता— मंडीकेरी मजनाथभट्ट, गोकर्ण

ವಿಚಾರತರಂಗ.

ಲೇಖಕ:— ನಿರೀಕ್ಷಕ.

ಬ್ರಿಟಿಶ ನ್ಯಾಯ, ಈ ಎರಡು ಶಬ್ದಗಳಲ್ಲಿ ಎಷ್ಟು ಅರ್ಥ ತುಂಬಿರುತ್ತದೆಂಬದು ಸದ್ಯದ ರಾಜಕೀಯ ಕಾದಾಟವನ್ನು ಸೂಕ್ಷ್ಮರೀತಿಯಿಂದ ಪರೀಕ್ಷಿಸುವವರಿಗೆ ಹೇಳಬೇಕೆಂದಿಲ್ಲ ಬ್ರಿಟಿಶನ್ಯಾಯದಲ್ಲಿ ತೋರಿಕೆಯ ನ್ಯಾಯವೆಷ್ಟು? ನಿಜವಾದ ನ್ಯಾಯವೆಷ್ಟು? ಇದೂ ಸಹ ಈಗ ತಿಳಿದು ಹೋಗಿದೆ. ಆದರೆ ಕಲಕತ್ತೆಯಲ್ಲಿ ನಡೆದ ಗುಂಡು ತಯಾರಿಸುವ ಕಾರಖಾನೆಯ ಪ್ರಕರಣದಲ್ಲಿ ಬ್ರಿಟಿಶನ್ಯಾಯವೆಂದರೆ, ಅಕ್ಕಿ, ರಾಗಿ ಮುಂತಾದ ಜೀವನಸಾಧನಗಳಂತೆ ವ್ಯಾಪಾರಕ್ಕೆ ಸಿಗುವ ಒಂದು ಜೀವನಸಾಧನ ತ್ರದೊ ಏನೋ ಎಂದು ಹಿಂದೀ ಜನತೆಗೆ ಒಂದು ರೀತಿಯಾಗಿ ಕಾಣುತ್ತದೆ. ಗುಂಡು ಕಾರಖಾನೆಯ ಮೊಕದ್ದಮೆಯಲ್ಲಿ ಕಲಕತ್ತೆಯ ಕೆಲ ಗೃಹಸ್ಥರು ಸರಕಾರಕ್ಕೆ ೧॥ ಲಕ್ಷ ರೂಪಾಯಿಗಳಿಗೆ ಮೋಸ ಮಾಡಿದರೆಂದು, ಸರಕಾರವು ಅವರಮೇಲೆ ಫಿರ್ಯಾದಿಯನ್ನು ದಾಖಲ ಮಾಡಿತು. ಈ ಪ್ರಕರಣವು ಮೊನ್ನೆ ವಿಚಾರಕ್ಕೆ ಬಂದಾಗ ಸರಕಾರವು ಡಾ॥ ಬಾನರ್ಜಿ ಹಾಗು ಡಾ॥ ಕರ್ನಾನಿ ಇವರಿಗೆ ಥಟ್ಟನೆ ಬಿಟ್ಟುಕೊಟ್ಟಿತು. ಬಿಟ್ಟುಕೊಡುವ ಕಾರಣಗಳಲ್ಲಿ ಒಂದು ಕಾರಣವು ಹೀಗಿರುತ್ತದಲ್ಲ.— ಆರೋಪಿಗಳು ಸರಕಾರದಮೇಲಿನ ೩ ಲಕ್ಷ ರೂಪಾಯಿಗಳ ದಾವಾ ರಕಮನ್ನು ಬಿಟ್ಟುಕೊಡುವ ವಚನವನ್ನು ಕೊಟ್ಟರು. ಆದಮೇಲೆಯೇ, ನಮ್ಮ ವ್ಯಾಪಾರೀ ಹಾಗು ಉದ್ಯೋಗ ಮಂದೆಗಳ ಪ್ರಧಾನರಾದ ಸರ ಥೋಮಸ ಹೊಲಂಡರವರು, ಆರೋಪಿಗಳಮೇಲಿಯ ಖಟ್ಲೆಯನ್ನು ಬಿಟ್ಟುಕೊಡುವ ವಿಚಾರವನ್ನು ಮಾಡಿದರು. ಮತ್ತು ಇದರಮೇಲಿಂದ ನಾವೇನು ತಿಳಿಯುವದು? ಆಪರಾಧಿಗಳು ಸರಕಾರಕ್ಕೆ ಸೂಕಷ್ಟು ಧನಸಹಾಯ ಮಾಡಿದರೆ ಅವರ ಅಪರಾಧವು ದಕ್ಕುತ್ತದೆಂದೇ ತಿಳಿಯುವದೋ? ರೀಡಿಂಗ ದೊರೆಗಳು ಬ್ರಿಟಿಶ ನ್ಯಾಯದೇವತೆಯ ವಿಡಂಬನೆಯನ್ನು ನಿವಾರಿಸುವದಕ್ಕಾಗಿ, ಅವಳ ಗೌರವವನ್ನು ಪುನಃ ಪ್ರಸ್ಥಾಪಿಸುವದಕ್ಕಾಗಿ ಹಿಂದುಸ್ಥಾನಕ್ಕೆ ಬಿಜಯಂಗೈದಿರುವರೆಂದು ಆಗಾಗ್ಗೆ ಹೇಳುತ್ತಿದ್ದರು ನಾನೂ ಭಾವಿಸಿದೆ. ಆದರೆ, ಈಗ ನೋಡಿದರೆ ಎಲ್ಲ ವಿಪರೀತ! ರೀಡಿಂಗ ದೊರೆಗಳ ಸನ್ನಿಧಿಯಲ್ಲೇ ನಡೆದ ನ್ಯಾಯ ವಿಕ್ರಯದ ಬಗ್ಗೆ ನ್ಯಾಯಸಭೆಯ ದೊರೆಗಳು ಏನು ಮಾಡುವವರಿದ್ದಾರೆಂದು ಇಡೀ ಹಿಂದೀಜನತೆಯು ಆತುರದಿಂದ ನೋಡುತ್ತಿರುವದು.

* * *

ರೀಡಿಂಗ ದೊರೆಗಳ ಇನ್ನೊಂದು ಕಾರ್ಯವು ಸಮತೆಯನ್ನು ಪ್ರಸ್ಥಾಪಿಸುವದು. ಬ್ರಿಟಿಶರಾಜ್ಯದಲ್ಲಿ ಎಲ್ಲರೂ ಸರಿಸಮಾನರು, ಬೇಕಾದರೆ ಅವರು ಗೌರಕಾಯದವರಿರಲಿ, ಕಪ್ಪುಕಾಯದವರಿರಲಿ. ಈ ತತ್ವದಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶವಿದೆಂದು ನಮಗೆ ಗೊತ್ತಿದ್ದ ಮಾತೇ, ಆದರೆ, ಕಲಕತ್ತೆಯ ಪ್ರಕರಣದಲ್ಲಿ ಈ ಸಮಾನತೆಗೆ ಸರಿ ವಿರುದ್ಧವಾದ ಇನ್ನೊಂದು ತತ್ವವು ಒಳಗೊಂಡಿರುವದು. ಸರಕಾರವು ಈ 'ಅಪರಾಧಿಗಳನ್ನು—ಸರಕಾರವು ಅನ್ನುವಂತೆ—ಬಿಟ್ಟುಕೊಡಲಿಕ್ಕೆ ಇನ್ನೊಂದು ಕಾರಣವನ್ನು ಹೇಳುವಾಗ "ಡಾ॥ ಕರ್ನಾನಿಯವರು ಕಲ್ಕತ್ತೆಯ ಒಬ್ಬ ದೊಡ್ಡ ಬೇಂಕರರಿದ್ದು ಆ ಬೇಂಕಿನಿಂದ ೧೨೦ ಸ್ವದೇಶಿ ಕಾರಖಾನೆಗಳಿಗೆ ಸಹಾಯವಾಗುತ್ತದೆ, ಅವರಿಗೆ ಶಿಕ್ಷೆಮಾಡಿದರೆ ಬಡ, ನಿರಪರಾಧಿ ಸ್ವದೇಶಿ ಸಾಹಸಿಗರು ವೃಥಾ ಸಂಕಟದಲ್ಲಿ ಬೀಳುವರು. ಕಾರಣ ಸರಕಾರವು ಅವರನ್ನು ಬಿಟ್ಟುಕೊಡುತ್ತದೆ" ಈ ಕಾರಣದಿಂದ ಬ್ರಿಟಿಶಕೋರ್ಟುಗಳಲ್ಲಿ ಶ್ರೀಮಂತರಿಗೆ ಒಂದು ನ್ಯಾಯ, ಬಡವರಿಗೆ ಒಂದು ನ್ಯಾಯ ಎಂದು ಸಿದ್ಧವಾಗುವದಿಲ್ಲವೇ? ಸ್ವದೇಶಿ ಉದ್ಯೋಗಗಳ ಹೆಸರಿನಿಂದ ಅಪರಾಧಿಗಳನ್ನು ಆಶ್ರಯಿಸುವಷ್ಟು ಸರಕಾರವು ಎಂದಿನಿಂದ ಸ್ವದೇಶೀ ಪ್ರೇಮಿಯಾಯಿತು? ಸ್ವದೇಶೀ ಧಂದೆಗಳ ಊರ್ಜಿತಾವಸ್ಥೆಯನ್ನು ಸಾಧಿಸುವ ಉತ್ಸಾಹದಲ್ಲಿ ಸಮತೆಯನ್ನು ಮೂರೆ ಸಾರುವಷ್ಟು ಎಂದಿನಿಂದ ಸರಕಾರವು ಸ್ವದೇಶಾಭಿಮಾನಿಯಾಯಿತು?" ಎಂದು ತಿಳಿಯದು. ಇದು ನವಯುಗದ ಪ್ರಭಾವವೋ? ಸ್ವದೇಶೀ ಸ್ಥಿತಿಯು ಸರ ಥೋಮಸ ಹೊಲಂಡರಂಥ ಪರಕೀಯ ಅಧಿಕಾರಿಗಳಲ್ಲಿ ಆಸ್ಥಾಭಾವಿಕವು ಇಷ್ಟೇ ಈಗ ಹೇಳಬಹುದು.

* * *

ಇದೇ ಪ್ರಕರಣದಲ್ಲಿ ಇನ್ನೊಂದು ತತ್ವವು ಆದವಾ ತತ್ವವಿರೋಧವು ಒಳಗೊಂಡಿರುವದು. ಸರಕಾರದ ಫಿರ್ಯಾದಿಪಕ್ಷದ ಪುರಾವೆಯು ಅತಿ ಬಲವಿದೆ. ಡಾ॥ ಕರ್ನಾನಿ, ಹಾಗು ಡಾ॥ ಬಾನರ್ಜಿ ಇವರು ಅಪರಾಧಿಗಳೆಂದು ಸರಕಾರವು ನಂಬಿದೆ. ಆದರೆ ಪ್ರಕರಣವು ಸರಿಯಾಗಿ ನಡೆದರೆ, ಜ್ಯೂರಿ ಮತವು ಬಂದಾವರ್ತಿ ಸರಕಾರಕ್ಕೆ ಪ್ರತಿಕೂಲವಾಗಿ ಬಿದ್ದು, ಆರೋಪಿಗಳು ದೋಷಮುಕ್ತರಾದರೆ ಸರಕಾರದಮೇಲೆ ಸ್ವದೇಶೀ ಬೇಂಕನ್ನು, ಅದರಿಂದ ಪೋಷಿಸಲ್ಪಟ್ಟ ಹಿಂದೀ ಉದ್ಯೋಗಧಂದೆಗಳನ್ನು ನಿರ್ಮೂಲಿಸಿದ ಲೋಕಾಪವಾದ ಬಂದೀತು. ಕಾರಣ ಸರಕಾರವು ಸ್ವದೇಶೀಯ ಹಿತಕ್ಕಾಗಿ ಡಾ॥ ಕರ್ನಾನಿ, ಡಾ॥ ಬಾನರ್ಜಿ ಇವರೀರ್ವರನ್ನು 'ಅಪರಾಧಿಗಳೆಂದು ಆಶ್ವಾಸ ಕೊಡದೇ ಬಿಟ್ಟುಕೊಡುತ್ತದೆ. ಇದರಮೇಲಿಂದ ಯಾವದೇ ಖಟ್ಲೆಯನ್ನು ಸರಕಾರವು ಅನ್ನು ಕೈಕೊಳ್ಳಬೇಕಾದರೆ ಜ್ಯೂರಿಯು ಆರೋಪಿಗಳನ್ನು ದಂಡಿಸುವರೆಂಬ ಭವಿಷ್ಯವು ಸರಕಾರಕ್ಕೆ ನಿಶ್ಚಯವಾಗಿ ತಿಳಿಯಬೇಕು, ಅಂದರೆ ಮಾತ್ರ, ಸರಕಾರವು ಈ ನಮೂನೆ ದೊಡ್ಡವರ ಖಟ್ಲೆಯನ್ನು ಮುಂದರಿಸುವದು. ಹೀಗೆ ಸರಕಾರೀ ಖಟ್ಲೆಗಳ ನಿವಡ ತೆಗೆಯುವದು ಹೇಗೆ? ಮತ್ತು ಯಾರು? ಸರಕಾರದ ಧೋರಣವು ಹೀಗಿರುವದೇನು? ಇಂಥ ಧೋರಣಕ್ಕನುಸರಿಸಿ, ಲೋಕಮಾನ್ಯ ಟಿಳಕರ ೧೯೦೮ ರ ಖಟ್ಲೆಯಲ್ಲಿ ಲೋಕಮಾನ್ಯರ ಆಡ್ಡಿಯನ್ನು ಲಕ್ಷಿಸದೆ, ಸ್ಪೆಶಲ ಜ್ಯೂರಿಯನ್ನು ನೇಮಿಸಿದರೇನು?

* * *

ಪಂಡಿತ ಮದನಮೋಹನ ಮಾಲವೀಯರು ಮುಂಬಯಿಯಲ್ಲಿ 'ನಮ್ಮ ಕರ್ತವ್ಯ'ವನ್ನು ನಿವೇದಿಸುವಾಗ, ಸರಕಾರದ ಉತ್ಕ್ರಾಂತಿಪರ ಕೆಲ ಸೂಚನೆಗಳನ್ನು ಮಾಡಿದರು. ಸರಕಾರವು ಅನ್ನುವಂತೆ, ಬ್ರಿಟಿಶ ಸಾಮ್ರಾಜ್ಯವು ಕೇವಲ ಕ್ಷಣಿಕವಿದ್ದರೆ, ನಮಗೆ ಸ್ವರಾಜ್ಯಪಾಠಗಳನ್ನು ಕಲಿಸುವದೊಂದೇ ಉದ್ದೇಶದಿಂದ ಅವರ ಇಡೀ ಧೋರಣವು ಪ್ರೇರಕವಾಗಿದ್ದರೆ ಅವರ ಕರ್ತವ್ಯವೇನು? ಎಂಬ ಪ್ರಶ್ನೆಗೆ, ಪಂಡಿತಜೀಯವರು ಕೆಲ ನಿದಾಯಕ ಸೂಚನೆಗಳನ್ನು ಮಾಡಿರುವರು. ಹಿಂದೀಯರಿಗೆ ಸ್ವರಾಜ್ಯದ ಪಾಠಗಳನ್ನು ಕಲಿಸಬೇಕೆಂದು ನೀವು ಅಂತಃಕರಣಪೂರ್ವಕ ಇಚ್ಛಿಸುತ್ತಿದ್ದರೆ ಸೈನ್ಯದಲ್ಲಿ ಹಿಂದೀ ಜನರಿಗೆ ಅಧಿಕಾರಕೊಡಿರಿ. ಹೆಚ್ಚೆಂದರೆ, ೫ ವರ್ಷಗಳಲ್ಲಿ ಇಡೀ ಹಿಂದೀ ಸೈನ್ಯದಲ್ಲಿ ಹಿಂದೀ ಜನರೇ ಹೊರತು ಇನ್ಯಾರೂ ಇರಕೂಡದು, ಇಂಥ ಯೋಜನೆಯನ್ನು ಜಾಹೀರುಮಾಡಿರಿ ಮತ್ತು ಅದಕ್ಕಾಗಿ ಒಬ್ಬ ಹಿಂದೀ ಸಭಾಸದನನ್ನು ಒಪ್ಪರ ಖಾತೆಯ ಪ್ರಧಾನದ ಜಾಗಗೆ ನೇಮಿಸಿರಿ. ಯಾಕಂದರೆ ಸ್ವಸಂರಕ್ಷಣವೇ ಸ್ವರಾಜ್ಯದ ಮುಖ್ಯಾಂಗವಿರುವದಲ್ಲವೇ? ಹಾಗೆಯೇ ನಮಗೆ ತೆರಿಗೆಗಳನ್ನು ಕೂಡಿಸುವ ಬಟ್ಟು ಮಾಡುವ, ಹಾಗು ಖರ್ಚುಮಾಡುವ ಅಧಿಕಾರವನ್ನು ಕೊಡಿರಿ ಸುಮ್ಮನೆ, 'ನೀವು ಹಣ ಕೊಡಿರಿ, ನಾವು ಖರ್ಚುಮಾಡುತ್ತೇವೆ,' ಈ ಧೋರಣವು ಇನ್ನು ಉಳಿಯಲಾಗದು. ಅದರಂತೆಯೇ ವ್ಯಾಪಾರ, ಉದ್ಯೋಗ ಖಾತೆಗಳನ್ನೂ ಸಹ ನಮಗೆ ಕೊಡಿರಿ. ನಮ್ಮ ವ್ಯಾಪಾರವನ್ನು, ನಮ್ಮ ಉದ್ಯೋಗಗಳನ್ನು ಪರಕೀಯರು ಹೇಗೆ ಪ್ರಗತಿಪರ ಮಾಡಬಲ್ಲರು? ಸರಕಾರದ ನಿಜವಾದ ಇಚ್ಛೆಯನ್ನು ಪ್ರದರ್ಶಿಸುವ ಉಪಾಯಗಳು ಇವೇ. ಪಂಡಿತ ಮಾಲವೀಯರು ಈಗ ಕೆಲವರ ಮತದಂತೆ ನಡಿಯುತ್ತಿರುವ ಕ್ರಾಂತಿಕಾರಕ ಸ್ವರಾಜ್ಯ ಚಳವಳಿಯಲ್ಲಿ, ಉತ್ಕ್ರಾಂತಿಕಾರಕ, ಪಂಚವಾರ್ಷಿಕ ಸ್ವರಾಜ್ಯ ಯೋಜನೆಯನ್ನು ಜನರ ಮುಂದಿಟ್ಟಿರುವರು ಇದನ್ನು ಜನರೂ, ಸರಕಾರವೂ ಎಷ್ಟರಮಟ್ಟಿಗೆ ಮನ್ನಿಸುತ್ತದೆಂದು ನೋಡಬೇಕು

* * *

ಅಸಹಕಾರಿತಾವಾದಿಗಳು ಮೊದಲಿನಿಂದ ಮೋಂಟೆಗ್ಯೂಸ್ವರಾಜ್ಯದ ವಿಫಲತೆಯನ್ನು ಜನರಿಗೆ ಬಿಂಬಿಸಿದ್ದರು. ಆದರೆ ಕೆಲ ನೇಮಸ್ತರು ಮೋಂಟೆಗ್ಯೂ ಸಾಹೇಬರ ವಿಶ್ವಾಸವನ್ನು ಮನ್ನಿಸಿ, ಅವರ ಸ್ವರಾಜ್ಯವನ್ನು ಯಶಸ್ವಿ ಮಾಡಬೇಕೆಂದು ಕಂಕಣಕಟ್ಟಿದ್ದರು. ಅವು ಈಗ ಎಷ್ಟರಮಟ್ಟಿಗೆ ಯಶಸ್ವೀಯಾದವು ಎಂಬುದಕ್ಕೆ ಸಾವಿರಗಟ್ಲೆ ರೂಪಾಯಿ ತಿನ್ನುವ ನಮ್ಮ ದಿವಾನ ನೇಮಸ್ತಬಾಂಧವರು ಸ್ವರಾಜ್ಯ ವ್ರತಧಾರಿಗಳಾಗಿದ್ದರೂ, ವಿಚಾರಿ, ನಿಷ್ಪಕ್ಷಪಾತಿ ದೇಶಭಕ್ತರು ಏನು ಅಭಿಪ್ರಾಯಪಡುತ್ತಾರೆಂದು ಈಗೀಗ ಸ್ಪಷ್ಟವಾಗುತ್ತಿದೆ. ಮೊನ್ನಿನ ಉಪನ್ಯಾಸದಲ್ಲಿ ಪಂಡಿತಜೀಯವರು 'ಸುಧಾರಣೆಗಳು ತೀರ ವಿಫಲವಾಗಿರುತ್ತವೆಂದು ತಮ್ಮ ಅಭಿಪ್ರಾಯವನ್ನು ಕೊಟ್ಟರು. ಎಲ್ಲಿ ನೋಡಿದಲ್ಲಿ ದಿವಾನರಿಗೆ ತಮ್ಮ ಖಾತೆಯ ಖರ್ಚಿಗಾಗಿ—ಸಂಬಳಕ್ಕಾಗಿ ಹಣವೇ ಇಲ್ಲ ದಿವಾನ ಪರಾಂಜಪೇಯವರ ಸ್ಥಿತಿಯನ್ನೇ ನೋಡಿರಿ ಅವರಿಗೆ ಮುಂಬಯಿ ಇಲಾಖೆಯ ಶಿಕ್ಷಣವನ್ನು ಊರ್ಜಿತಾವಸ್ಥೆಗೆ ತಂದು ಅದರೊಳಗೆ ಕಲ್ಪನಾತೀತ ಸುಧಾರಣೆ ಮಾಡುವದಿರುತ್ತದೆ. ಆದರೆ ಹಣವೆಲ್ಲಿದೆ? ದಾಮ ಕಟ್ಟಿಯ ಕೃಪೆ ಇಲ್ಲದೆ ವಿಚಾರ ಕೈಬಿಟ್ಟು ಹೋಗಿದೆ ಪ್ರಿನ್ಸಿಪಾಲ ಪರಾಂಜಪೆಯವರ ಸ್ಥಿತಿಯು ಪರಾಂಜಪೆಯವರಿಗಿಂತ ಹೆಚ್ಚು ಸಾಮರ್ಥ್ಯವಾನರಿದ್ದರು ಮೋಂಟೆಗ್ಯೂ ಸ್ವರಾಜ್ಯದ ವಿಫಲತೆಯಬಗ್ಗೆ, ಅದರ ಸ್ಥಿತಿಯಬಗ್ಗೆ ಇನ್ನು ಪುರಾವೆ ಬೇಕೇನು? ಅಥವಾ ತಮ್ಮ ಸ್ವರಾಜ್ಯಹಸ್ತವು ವಿಫಲವಾಗುವದೆಂದು ಅರಿತೋ ಏನೋ, ಖಾಸಾ ಮೋಂಟೆಗ್ಯೂಸಾಹೇಬರು, 'Save the Reforms Save the Reforms,' "ಸುಧಾರಣೆಗಳನ್ನು ರಕ್ಷಿಸಿರಿ, ಸುಧಾರಣೆಗಳನ್ನು ರಕ್ಷಿಸಿರಿ" ಎಂದು ಕೋಲಾಹಲವನ್ನು ಎಬ್ಬಿಸಿ, ದಯಾಸಾಗರ ನೇಮಸ್ತಬಾಂಧವರಿಗೆ ಬಲೆಯಲ್ಲಿ ಹಾಕಿದರು. ಹೊರಗಿನಿಂದ ಹೊಸತಬಿದ್ದು ಸುಧಾರಣೆಗಳು ನಿಜವಾದುವೆಂದು ಭಾವಿಸಿ, ನೇಮಸ್ತರು ಅವುಗಳನ್ನು ತಾವೇ ನಡಿಸಿ ಯಶಸ್ವಿ ಮಾಡುವ ನಿಶ್ಚಯಮಾಡಿದರು. ಸುಧಾರಣೆಗಳಿಗೆ ಆರಂಭಿಸಿ ವರ್ಷದಲ್ಲಿ ಜೀವನಿಷ್ಠೆಯಿಂದ ಇಷ್ಟೆಲ್ಲ ಕೇಷ ನಡೆದದೆಂದು ಈ ಒಡ ಬಡದೊರದೇ ಪ್ರಾಣಿಗಳಿಗೇನು ಗೊತ್ತು. ಈ ಹಣದ ಕೊರತೆಯಲ್ಲಿ ದಿವಾನರಿಗಾಗಲೀ ನಮ್ಮ ಸಿವಿಲಸರ್ವಂಟರಿಗಾಗಲೀ, ಠಿಕ್ಕಾಗಿ ಸಂಬಳ ಕೊಡಲಿಕ್ಕೆ ಅಡ್ಡಿಯಾಗಲಿಲ್ಲ. ಇದೊಂದು ಸುಧಾರಣೆಗಳ ಯಶಸ್ಸು.

* * *

ನವಯುಗದಲ್ಲಿ ಇನ್ನೊಂದು ಲಾಭವಿದೆ. ನಮಗೆ ಆರ್ಥಿಕ ಸ್ವರಾಜ್ಯವು ಸಿಕ್ಕಿರುತ್ತದೆ. ನಮಗೆ ಬೇಕಾದ ಜೀನಸುಗಳನ್ನು ಅಗ್ಗವಾಗಿ ಮಾಡಿಕೊಳ್ಳಬೇಕೆಂದು, ಸರಕಾರವು ಲಂಡನದಲ್ಲಿ—ಹಿಂದುಸ್ಥಾನದಲ್ಲಿಲ್ಲ—ಒಂದು ಖಾತೆಯನ್ನೇ ನಿರ್ಮಿಸಿ, ಎಲ್ಲ ಹಿಂದೀಸರಕಾರದ ವ್ಯಾಪಾರವನ್ನು ಆ ಖಾತೆಯ ಕೈಯಲ್ಲಿ ಕೊಟ್ಟು, ಆದರ ನೇತೃತ್ವವನ್ನು ಹಿಂದುಸ್ಥಾನದ ವಿಷಯ ಅಂತಃಕರಣಪೂರ್ವಕ ಸಮಾನುಭೂತಿ ಇರುವ ಸರ್ ವಿಲಿಯಮ್ ಮೇಯರರ ಕೈಯಲ್ಲಿ ಕೊಟ್ಟಿರು. ಇಂಥ ಜವಾಬದಾರಿಯನ್ನು ನಿಷ್ಪಕ್ಷಪಾತದಿಂದ, ಹಿಂದುಸ್ಥಾನಕ್ಕೆ ಹಿತವಾಗಬೇಕೆಂದು ಅವರಿಗೆ ಹಿಂದುಸ್ಥಾನದ ತ್ರಿಜೋರಿಯಿಂದ ದೊಡ್ಡಸಂಬಳವನ್ನು ಗೊತ್ತುಮಾಡಿದರು. ಈ ಪ್ರಸ್ಯಾತ್ಮರು ಹಿಂದುಸ್ಥಾನಕ್ಕಾಗಿ ಖರೇದಿ ನ್ಯಾಗೆಮಾಡುತ್ತಾರೆಂದು ಈಗೀಗ ತೋರುತ್ತಿದೆ. ಈ ವಾಯರು ತಬ್ಬಿನ ತೊಲೆ, ಯಂತ್ರಸಾಮಾನು ಮೊದಲಾದವುಗಳಿಗಾಗಿ ಜರ್ಮನಿ, ಅಮೇರಿಕಾ ಮುಂತಾದ ಪ್ರದೇಶಗಳಿಂದ ದರಗಳನ್ನು ತರಿಸಿದರು. ಬ್ರಿಟಿಶಕಾರಖಾನೆಯವರು ಆ ಪೌಂಡುಗಳೆಂದು ಹೇಳಿದರೆ, ಜರ್ಮನಿ, ಅಮೇರಿಕೆಯವರು ಅದೇಸಾಮಾನುಗಳನ್ನು ೪೦—೫೦ ಪೌಂಡುಗಳೊಳಗೆ ಪೂರೈಕೆಮಾಡಲು ತಯಾರಿದ್ದರು ಕಟ್ಟಕಡೆಗೆ, ಮೇಯರಸಾಹೇಬರು ಬ್ರಿಟಿಶಕಾರಖಾನೆಯವರಹತ್ತರ ಜಗ್ಗಾಡಿ, ಆ ಪೌಂಡುಗಳಿಗೆ ಅದೇ ಕೊಂಟ್ರಾಕ್ಟನ್ನು ಕೊಟ್ಟರೆಂದು ಮದ್ರಾಸದ ಹಿಂದೂಪತ್ರಿಕೆಯಿಂದ ತಿಳಿಯುತ್ತದೆ ಇದೇನು ಹಿಂದುಸ್ಥಾನದ ಹಿತರಕ್ಷಣವೋ ಬ್ರಿಟಿಶಕಾರಖಾನೆಯವರ ಹಿತರಕ್ಷಣವೋ? ಹಿಂದುಸ್ಥಾನದ ತ್ರಿಜೋರಿಯಿಂದ ಸಂಬಳ

(೭ ನೇ ಪಾನಿನಮೇಲೆ ಮುಂದರಿಸಿದೆ)

ಆಶ್ರಯದಾತರಿಗೆ ಆಗ್ರಹದ ವಿನಂತಿ.

ಇದು ೩ ನೇ ವರ್ಷದ ೪೫ ನೇ ಸಂಚಿಕೆಯು, ಇನ್ನು ೭ ಸಂಚಿಕೆಗಳಿಂದ ಈ ೫ ನೇ ವರ್ಷವು ಮುಗಿಯುತ್ತದೆ ಈ ಐದು ವರ್ಷಗಳ ಅವಧಿಯಲ್ಲಿ ನಮ್ಮಿಂದ ಜರುಗಿಸಲ್ಪಟ್ಟ ಕರ್ತವ್ಯಕ್ಕನುರೂಪವಾದ ಪ್ರೋತ್ಸಾಹನೆಯು ನಮಗೆ ದೊರೆತಿಲ್ಲ. ಸಿಕ್ಕಿದ ಪ್ರೋತ್ಸಾಹನೆಯಿಂದಲೂ ಕಾಗದ ಮುದ್ರಣದ ದುಬಾರಿ ಸಾಹಿತ್ಯದ ತುಟ್ಟಿ ಧಾರಣೆಯಿಂದಲೂ ಈ ಪತ್ರಿಕೆಯನ್ನು ನಡಿಸುವದು ಬಹಳ ಕಷ್ಟವಾಗಿದೆ. ಕಾರಣ, ಮುಂದಿನ ವರ್ಷಕ್ಕೆ ಈ ಪತ್ರದ ದರಗಳನ್ನು ಊರಲ್ಲಿ, ರೂಪಾಯಿ ೩-೪-೦, ಅಂಚೆ ವೆಚ್ಚ ಸೇರಿ, ರೂಪಾಯಿ ೩-೦-೦, ಸ್ಥಳಿಕರಿಗೆ ರೂಪಾಯಿ ೨-೮-೦ ಇರುತ್ತದೆ. ಇನ್ನು ಮುಂದೆ ವಿ. ಪಿ. ಪದ್ಧತಿಯಿಂದ ಹಣ ವಸೂಲ ಮಾಡುವದು ಉಭಯತರಿಗೂ ತೊಂದರೆಯಾಗುವದರಿಂದ ನಿಶ್ಚಯಿಸಲಾಗಿದೆ. ಉಳಿದಿರುವ ಆಶ್ರಯದಾತರು ತಮ್ಮ ತಮ್ಮ ವರ್ಗಣಿಯ ಹಣವನ್ನು ಆದಷ್ಟು ಬೇಗನೆ ಈ ಸಂಬಂಧವಾದ ವರ್ಷದ ಪ್ರಾರಂಭಕ್ಕೆ ತಪ್ಪದೆ ಕಳುಹಿಸಿ, ಪ್ರೋತ್ಸಾಹಿಸುವರೆಂದು ನಂಬಿದ್ದೇವೆ. ಹೊಸ ವರ್ಗಣಿದಾರರಾಗಬಯಸುವವರು ತಮ್ಮ ವರ್ಗಣಿಯ ಹಣವನ್ನು ಮನಿಆರ್ಡರಿನಿಂದ ಕಳುಹಿಸುವದುತ್ತಮ. ಪತ್ರವು ಯಾವ ಸಂಚಿಕೆಯಿಂದ ಚಾಲೂ ಮಾಡಬೇಕೆಂದು ಬರೆದು ತಿಳಿಸಬೇಕು. ಪತ್ರವನ್ನು ಕೊಳ್ಳುವವರು ಪುಣ್ಯವಾಗಿಯೇ ಸಹಾಯ ಮಾಡಿದಂತೆ. ಈ ಪತ್ರವು ಅವರ ಆಭಾರಿಯಾಗಲೆಂದು ಹೀಗೆ ತಿಳಿಸಿದ್ದು, ಇದರಿಂದ ನಾವು ಒಹಳ ಹಾನಿಗೊಳಗಾಗಿರುವೆವು ಎಂಬುದೇ ನಮ್ಮ ಪ್ರಾರ್ಥನೆ.

—ಮೆನೇಜರ ಕಾನಡಾವೃತ್ತ.

ಕಾನಡಾವೃತ್ತ.

ಗುರುವಾರ, ತಾರೀಖು ೧ ಮಾಹೆ ಸಪ್ಟಂಬರ ೧೯೨೧.

ಸ್ವದೇಶಿಯ ಸತ್ವಶಕ್ತಿಯು.

ನಾಗಪುರದ ೩೦ ನೇ ತಾರೀಖಿನೊಳಗೆ ದೇಶದಲ್ಲಿ ಬಹಿಷ್ಕಾರಯೋಗವಾಗಬೇಕೆಂದು ರಾಷ್ಟ್ರದ ಅಪ್ಪಣೆಯಾಗಿದೆ. ಸ್ವದೇಶಿಯು ಕಾರ್ಯಕ್ರಮವನ್ನು ಕೊನೆಗಾಣಿಸಲಿಕ್ಕೆ ಇನ್ನು ನಾಲ್ಕೇ ಹಪ್ತೆಗಳು ಉಳಿದವು. ಇಷ್ಟು ಅವಧಿಯೊಳಗೆ ಸ್ವರಾಜ್ಯದ ನಿಕ್ಷೇಪದಲ್ಲಿ ಖಾದಿ ಬಟ್ಟೆಗಳನ್ನು ಧರಿಸಿ, ಸ್ವದೇಶೀ ಸಾಮ್ರಾಜ್ಯವನ್ನು ಭರತಖಂಡದಲ್ಲಿ ಹುಟ್ಟಿಸಬೇಕೆಂದು ಎಲ್ಲರೂ ದುಡಿಯಬೇಕಾಗಿದೆ. ಇದರಿಂದ ಸಿದ್ಧವಾಗುವಂಥದು ಇನ್ನು ನಮಗೆ ಶಕ್ಯವಿಲ್ಲವೆಂದು ಸಾತ್ರಿನಾನಿಲ್ಲ. ಅದೊಂದು ಪೂರ್ಣ ಸ್ವದೇಶಿ ನೂಲಿನ ಬಟ್ಟೆಯಾಗಿದೆಂದು ತಿಳಿದು ತೀರಿಸು. ಆಗೊಂದು ಸ್ವರಾಜ್ಯವನ್ನು ಪ್ರತ್ಯಕ್ಷವಾಗಿ ಕೊಟ್ಟೇವು. ಅದರ ಸಮಾರಾಧನೆಯ ದೇವತೆಯು ಶಕ್ತಿಯು ಎಂಬ ಭಾವನೆಯನ್ನು ಜನತೆಯು ತಿಳಿಯತಕ್ಕದ್ದು. ಖಾದಿ ದೇವತೆಯು ಆಕಾರದಿಂದಿಯನ್ನು ಧೃಢ ಭಕ್ತಿಯಿಂದ ಸಾಗಿಸಿ ಜನ ...

...ನ್ನು ನಾವು ಪ್ರಸನ್ನಮಾಡಿಕೊಂಡರೆ, ಸ್ವರಾಜ್ಯವು ವಿಳಂಬವಾಗದೆ ಪ್ರಸನ್ನವಾಗುವದೆಂದು ನಿಶ್ಚಿತವಾಗಿ ನಾವು ತಿಳಿಯತಕ್ಕದ್ದು.

ಯುರೋಪಖಂಡದೊಳಗೆ ಮಹಾಯುದ್ಧವಾಯಿತು. ದೊಡ್ಡ ದೊಡ್ಡ ರಾಷ್ಟ್ರಗಳ ಜೀವಿತವೇ ಈ ಸಮಯ ಡೋಲಾಯಮಾನವಾಗುತ್ತಿತ್ತು. ಕೈಸರನ ಆಸುರಿ ಶಕ್ತಿಯಿಂದ ಜಗತ್ತಿನ ಸ್ವತಂತ್ರತಾದೇವಿಯು ಈ ರಣಕುಂಡದೊಳಗೆ ಸುಟ್ಟು ಬೂದಿಯಾಗಿ ಹೋಗುವದೆಂಬ ಭಯಂಕರ ಭೀತಿಯು ಉತ್ಪನ್ನವಾಯಿತು. ಇಂಥ ಸ್ವಾತಂತ್ರ್ಯದ ವೈರಿಯನ್ನು ಗೆದ್ದು ಆತ್ಮರಕ್ಷಣೆಯನ್ನೂ, ಜಗತ್ತಿನ ರಕ್ಷಣೆಯನ್ನೂ ಮಾಡಲು ಇಂಗ್ಲಂಡಕ್ಕಾಗಲಿ ಫ್ರಾನ್ಸಕ್ಕಾಗಲಿ, ಮಿತ್ರರಾಷ್ಟ್ರಗಳಿಗೆ ಇಷ್ಟು ಘೋರ ಪ್ರಯತ್ನಮಾಡಬೇಕಾಯಿತೆಂಬುದು ಇನ್ನು ಇತಿಹಾಸ ಪ್ರಸಿದ್ಧವಿರುವದು. ಈ ಸಪ್ತಕ್ಷತ್ರಿಗಳು ಈ ಗಂಡಾಂತರದಿಂದ ಪಾರಾಗುವಾಗ ಆಶಕ್ತ, ಅಶಕ್ಯವೆಂದು ಬೇಯುವುದಕಾಗಿ ಕನ್ನೆಯು ಸಹಿಸುತ್ತ ಕಾಲಕಳೆದರೇನು? ಇಲ್ಲ ಇಲ್ಲ. ಅವರಲ್ಲಿ ಒಂದು ವಿಧದ ಅತ್ಯದ್ಭುತವಾದ, ಅಜೇಯವಾದ ಕ್ಷಾತ್ರತೇಜದ ಸತ್ವಶಕ್ತಿಯು ಬೆಳಗುತ್ತಲಿದ್ದಿತು. ಈ ಸತ್ವಶಕ್ತಿಯಿಂದಲೇ ಮಹಾಯುದ್ಧವನ್ನು ಬ್ರಿಟಿಷರು ಗೆದ್ದರು. ಬುದ್ಧಿಯುಕ್ತ ಲೆಕ್ಕದ ಅಂಕೆಗಳನ್ನು ಹೊಂದಿಸಿ, ಮೆಸ್ತ್ರಿಗಳದ್ದ ಪುಸ್ತಕಗಳೊಳಗಿನ ಅವತರಣಗಳನ್ನು ತೆರೆದಿಟ್ಟ ನಿಜಾಯತಿ ಮುತ್ಸದ್ದಿಗಳೂ, ಅರ್ಥಶಾಸ್ತ್ರಪಂಡಿತರೂ. ಅಲ್ಲಿಯ ಜನತೆಯನ್ನು ಎಚ್ಚರಗೊಳಿಸಿದ್ದರೆ ಇಂದಿನ ಇತಿಹಾಸವೇ ಬೇರೆಯಾಗಿ ತೋರುತ್ತಿತ್ತು. ಅವರು ಹಾಗೇನು ಮಾಡಿಲ್ಲ. ತಮ್ಮ ಭಾಷಣಗಳಿಂದ, ಲೇಖನಗಳಿಂದ, ನಡತೆಯಿಂದ ಅವರು ಅತ್ಯುತ್ಕಟವ ದೇಶಭಕ್ತಿಯ ದೈವಿಕ ಶಕ್ತಿಯನ್ನೇ ತಮ್ಮ ಜನಾಂಗದಲ್ಲಿ ಹುಟ್ಟಿಸಿದ್ದರು. ಇದರಿಂದಲೇ ಅವರಿಗೆ ವಿಜಯಪ್ರಾಪ್ತಿಯಾಯಿತು. ತಮ್ಮ ದೇಶಮಾತೆಯು ಕರೆದ ಅಂಕೆಗಳಿಂದ, ತರ್ಕಶಾಸ್ತ್ರದಿಂದ ಅವರು ಉತ್ತರ ಕೊಟ್ಟಿಲ್ಲ. ತಮ್ಮ ಶ್ರದ್ಧೆಯಿಂದ, ನಿರ್ಧಾರದಿಂದ ಸತ್ಯಪಕ್ಷಗೊಳಗಿರುವ ಸತ್ವಶಕ್ತಿಯಿಂದ ರಾಷ್ಟ್ರದ ಕರೆದ ಕರೆಗೆ ಅವರು ಹಾಜರಾದರು. ಇಂಥ ಶಕ್ತಿಯೇ, ನಮ್ಮ ರಾಷ್ಟ್ರೀಯ ಇತಿಹಾಸದ ಈಗಿನ ಅಣಿಬಾಣಿಯ ಪ್ರಸಂಗದಲ್ಲಿ ನಮ್ಮೊಳಗ ಸಂಚರಿಸಬೇಕಾಗಿದೆ.

ರಾಷ್ಟ್ರೀಯ ಸಭೆಯು ಶಾಂತತಾಮಯವಾದ ನೈತಿಕ ಯುದ್ಧವನ್ನು ಹೂಗಿರುವದು. ಈ ಅನತ್ಯಾಚಾರಿ ಕಾದಾಟದೊಳಗೆ ಇದೇ ಸತ್ವಶಕ್ತಿಯ ಬಲದಿಂದ ವಿಜಯವನ್ನು ಪಡೆಯಬೇಕು. ಸ್ವದೇಶಿಯ ಕಾದಾಟದೊಳಗೆ ಈ ಸತ್ವಶಕ್ತಿಯ ಪರೀಕ್ಷೆಯಾಗುವದೆಂದು ಎಲ್ಲರೂ ತಿಳಿಯಲಿ. ಹಿಂದುಸ್ಥಾನದೊಳಗಿನ ಜನರಿಗೆ ಹೊದ್ದುಕೊಳ್ಳಲಿಕ್ಕೆ ಸಾಕಾಗುವಷ್ಟು ಬಟ್ಟೆಗಳನ್ನು

ನಮ್ಮ ಗಿರಣಿಗಳಿಗೆ ಪೂರೈಸಲಿಕ್ಕೆ ಸಾಧ್ಯವಾಗದೆಂಬುದು ನಿಜವಾಗಿದ್ದರೇನು? ಕೈಮಗ್ಗಗಳಿಂದ ಈ ಬಡ ದೇಶದ ಸಾಂಪತ್ತಿಕ ಏಳಿಗೆಯು ಏನೂ ಸಾಧಿಸದಿದ್ದರೇನು? ಇದೆಲ್ಲ ಪರಿಣಾಮವು ನಿಜವಾಗಿ ಸಂಭವಿಸುವದೆಂದು ಕಲ್ಪಿಸಿದರೂ, ಅಂಕೆಗಳನ್ನು ಕೂಡಿ ಅರ್ಥಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಎತ್ತಿಕೊಟ್ಟು ಸ್ವದೇಶಿಯ ವಿಜಯವು ಎಂದೂ ಆಗದೆಂದು ಯಾರಾದರೂ ಪ್ರತಿಪಾದಿಸಿದರೂ, ಸ್ವರಾಜ್ಯದಂಥ ದಿವ್ಯವಾದ ಧ್ಯೇಯಕ್ಕೆ ನಾವು ಎಷ್ಟು ತ್ಯಾಗವನ್ನು ಮಾಡಿದರೂ, ಎಷ್ಟು ಸೇವೆಯನ್ನು ಅರ್ಪಿಸಿದರೂ, ಅವು ಹೆಚ್ಚೆಂದು ಎಣಿಸಲಿಕ್ಕಾಗದು. ದಾಸ್ಯತ್ವದ ಸಂಗಡ ಎಷ್ಟು ಸುಖ-ಸಂಪತ್ತು ದೊರೆತರೂ, ಅದಕ್ಕಿಂತ ಸ್ವಾಯತ್ತತೆಯ ದಾರಿದ್ರ್ಯವೇ ಲೇಸು. ಬಡತನದಲ್ಲಿರುವದೊಂದು ಪವಿತ್ರವಾದ ಹಕ್ಕೆಂದು ಎಣಿಸಿದ ಹೊರತು, ಸ್ವಾತಂತ್ರ್ಯದ ಸುಖಕ್ಕೆ ನಾವು ಪಾತ್ರರಾಗೆವು. ಸ್ವದೇಶಿಯು ಆದಿಯಲ್ಲಿ ಕಷ್ಟಕರವೆಂಬುದು ನಿಜವು. ಆದರೆ ಸ್ವದೇಶಿಯಿಲ್ಲದಿದ್ದರೆ, ಸ್ವರಾಜ್ಯವಿಲ್ಲ ಎಂಬುದಾದರೂ, ಶಾಶ್ವತಿಕ ರಾಜಕೀಯ ಸಿದ್ಧಾಂತವು.

ಕೈಮಗ್ಗಗಳು ಹಣ ಗಳಿಸುವ ಬರೇ ಆರ್ಥಿಕ ಸಾಧನೆಗಳಲ್ಲ. ಅವುಗಳೊಳಗೆ ರಾಜಕೀಯ ಶಕ್ತಿಯೂ ಇದೆ. ಪೂರ್ಣ ಬಹಿಷ್ಕಾರವು ಸ್ವರಾಜ್ಯ ಸಾಧನೆಗೆ ಅಪರಿಹಾರ್ಯವಾಗಿರುವದು. ಪರದೇಶ ನೂಲಿನ ಬಟ್ಟೆಗಳ ಆಯಾತವನ್ನು ನಾವು ತಪ್ಪಿಸಿದರೆ, ವಿಲಾಯತಿಯೊಳಗಿನ ೬೬ ಲಕ್ಷ ಕೂಲಿಗಾರರನ್ನು ನಿರುದ್ಯೋಗಿಗಳನ್ನಾಗಿ ಮಾಡಿದಂತೆ, ಅಲ್ಲಿಯ ಎಷ್ಟೋ ಗಿರಣಿಗಳಿಗೆ ಕೀಲಿ ಹಾಕಿದಂತಾಗುವದು. ಇದರ ಪರಿಣಾಮವು ಎಷ್ಟಾಗುವದೆಂದು ನೋಡಿರಿ. ಗುಂಡಿಲ್ಲದೆ, ದಂಡಿಲ್ಲದೆ, ರಕ್ತಪಾತವಿಲ್ಲದೆ, ಈ ಆರ್ಥಿಕ ಯುದ್ಧದೊಳಗೆ ಪರಿಪೂರ್ಣವಾಗಿ ನಾವು ಗೆದ್ದಂತಾಗುವದಿಲ್ಲವೇ? ಇದರ ರಾಜಕೀಯ ಪರಿಣಾಮವೂ, ಅಷ್ಟೇ ಫಲಪ್ರದವಾಗುವದು. ಇಂಥ ಪ್ರಸಕ್ತಿಯು ಹಿಡಿಯತೊಡಗಿದೆ. ಜನರು ಮಾತ್ರ ತಮ್ಮ ನಿರ್ಧಾರವನ್ನು ಸಡಿಲುಮಾಡಗೊಡಬಾರದು. ಖಾದಿಯ ಸತ್ವಶಕ್ತಿಯನ್ನು ಪರಿಪೂರ್ಣವಾಗಿ ನಾವು ಕಾಯಬೇಕು. ಹಿಂದೆ ಖಾದಿ, ಮುಂದೆ ಖಾದಿ, ಮೇಲೆ ಖಾದಿ, ಕೆಳಗೆ ಖಾದಿ, ಸರ್ವತಃ ಖಾದಿ, ಎಂಬಂತೆ ನಮ್ಮ ವಾತಾವರಣವೆಲ್ಲ ಖಾದಿಮಯವಾಗಿ ಕಂಗೊಳಿಸಬೇಕು. ನಮ್ಮ ರಾಷ್ಟ್ರೀಯ ಜೀವಿತವೇ ಖಾದಿಯೊಳಗೆ ತನ್ಮಯವಾಗಬೇಕು. ಖಾದಿಯೊಳಗೆ ರಾಷ್ಟ್ರದ ಆತ್ಮವು ಇಷ್ಟರಮಟ್ಟಿಗಾದರೆ, ಅದರ ಸತ್ವಶಕ್ತಿಯ ಬಲದಿಂದ ಬ್ರಿಟಿಷರು ಮಹಾಯುದ್ಧವನ್ನು ಗೆದ್ದಂತೆ, ನಾವಾದರೂ ಸ್ವರಾಜ್ಯದ ಕಾದಾಟದಲ್ಲಿ ನಿಶ್ಚಿತವಾಗಿ ವಿಜಯವನ್ನು ಹೊಂದುವೆವು. ನಮ್ಮ ಧ್ಯೇಯವು ನ್ಯಾಯ್ಯವದೆ. ನಮ್ಮ ಆಕಾಂಕ್ಷೆಗಳು ಸ್ವಾತ್ಮನದೆ ಸ್ವಾಭಾವಿಕವದೆ. ನಮ್ಮ ಪಕ್ಷವು ಸತ್ಯ ಪಕ್ಷವು. "सत्यमेव जयते" ಎಂಬು

ಆತ್ಮವಿಶ್ವಾಸವು ನಮ್ಮಲ್ಲಿ ಉಂಟಾದರೆ, ನಮ್ಮ ವಿಜಯದ ದಾರಿಯನ್ನು ಅಡ್ಡಗಟ್ಟಲಿಕ್ಕೆ ಯಾರಿಂದಲೂ ಆಗದು.

ಆದಕಾರಣ, ಜನರಿಗೆ ನಾವು ಹೇಳುವದೇನಂದರೆ— ಅಂಕೆಗಳ ಲೆಕ್ಕದಿಂದ ಸಾಧ್ಯಾಸಾಧ್ಯ ವಿಚಾರಗಳನ್ನು ಮಾಡುವ ಕಾರ್ಯವು ಇದಲ್ಲ. ಸಣ್ಣ ಸಣ್ಣ ಸ್ವದೇಶೀ ಪಂಜಿಗಳನ್ನು ಬೇಕಾದರೆ ಉಟ್ಟುಕೊಂಡು, ಖಾದಿಯ ಒಂದೇ ಸಣ್ಣ ಅಂಗಿಯನ್ನು ಹೊದ್ದುಕೊಂಡು, ಖಾದಿಯ ಸಣ್ಣ ಟೊಪ್ಪಿಗೆಯನ್ನು ತಲೆಯಮೇಲೆ ಇಟ್ಟುಕೊಂಡು, ನಮ್ಮ ದಾರಿದ್ರ್ಯದ ಮೂರ್ತಿಮಂತ ಪುತ್ತಳಿಗಳಾಗಿ, ಸ್ವರಾಜ್ಯದ ಕಾದಾಟದ ಅನತ್ಯಾಚಾರಿ ಸೈನಿಕರಾಗಿ ನಾವು ಈಗ ದುಡಿಯಬೇಕು. ಪರದೇಶೀಯ ಸಂಸರ್ಗದಿಂದ, ಅದರ ಸೇವನದಿಂದ, ನಾವು ಪತಿತರಾಗಿದ್ದಾಗ, ಆತ್ಮಶುದ್ಧಿಗಾಗಿ ಇಂಥ ವ್ರತದ ಕಠಿಣ ಆಚರಣವನ್ನು ಮಾಡಿದ ಹೊರತು ಗತ್ಯಂತರವಿಲ್ಲ. ರಾಷ್ಟ್ರೀಯ ನಿರ್ಧಾರದ ಸ್ವದೇಶಿಯ ಸತ್ವಶಕ್ತಿಯಿಂದ ಇದೆಲ್ಲ ಸಾಧ್ಯವದೆ. ಇನ್ನು ನಾಲ್ಕೇ ಹಪ್ತೆಗಳಲ್ಲಿ ನಮ್ಮ ಸ್ವದೇಶಿ ವ್ರತವನ್ನು ನಾವು ಕೊನೆಗಾಣಿಸಿದರೆ, ನಮ್ಮ ಸ್ವರಾಜ್ಯದ ಧ್ಯೇಯವನ್ನು ನಾವು ಎಷ್ಟು ನಿಕಟವಾಗಿ ಸಮೀಪಿಸಿದ್ದೇವೆಂದು ನೀವೇ ಮನಗಾಣುವಿರಿ

ಸ್ಫುಟ ಸೂಚನೆಗಳು.

೧. ಕಳೆದ ವಾರದಲ್ಲಿ ಜನರು ಮಾತಾಡುವ ಸುದ್ದಿಯೆಂದರೆ, ಮಲಬಾರದ ದಂಗೆಯ ಹಾವಳಿಯು. ಅಲ್ಲಿಯ ಮಾಪ್ಲಾಪಳಿ ಜನರು ಭಯಂಕರ ಅತ್ಯಾಚಾರಗಳನ್ನು ನಡಿಸಿ, ಬಂಡಾಯವನ್ನೇ ಎಬ್ಬಿಸಿದ್ದಾರೆಂದು ಇಂದಿನತನಕ ಬಂದ ಸುದ್ದಿಯಿಂದ ಹೇಳಬೇಕಾಗಿದೆ. ರೈಲುದಾರಿಗಳನ್ನು ಮಧ್ಯಮಧ್ಯದಲ್ಲಿ ಮುರಿಯುವದೂ, ತಾರುತಂತಿಗಳನ್ನು ಹರಿಯುವದೂ, ತಿಜೋರಿಗಳನ್ನು ಲೂಟಿಮಾಡಿ-ಆಫೀಸುಗಳನ್ನು ಸುಡುವದೂ, ಸಾವಕಾರರನ್ನು ಸುಲಿಯುವದೂ ಇಂಥ ಭಯಂಕರ ಪಾಪಗಳನ್ನು ಅವರು ಮಾಡುತ್ತಿರುವರೆಂದು ದಿನೇ ದಿನೇ ಸುದ್ದಿ ಬರುತ್ತಿದೆ. ಈ ದಂಗೆಗೆ ಕಾರಣವೇನಾಯಿತೆಂಬದು ಮಾತ್ರ, ವಿಶ್ವಸನೀಯ ಆಧಾರದಿಂದ ತಿಳಿದಿಲ್ಲ. ಮಲಬಾರದ ಕಲೆಕ್ಟರರು, ಪಂಜಾಬದ ಅಡ್ವೀರ ಪಂಥದವರು. ಅವರ ದಬ್ಬಾಳಿಕೆಯ ಪರಿಣಾಮವು ಮಾಪ್ಲಾಪಳಿ ಜನರಂಥ ಶೀಘ್ರ ಕೋಪಿಗಳಮೇಲೆ ಇಷ್ಟು ಅನರ್ಥಕರವಾಯಿತೋ; ಇಲ್ಲವೆ, ತಲೆತಿರುಕ ಮಾಪ್ಲಾಪಳೆರೇ ಕೆಲವು ಕೆದರಿ ಜಗಳ ಎಬ್ಬಿಸಿದ್ದಾರೆಂದೂ ಯಾವದೂ ತಿಳಿಯದು. ಕಾರಣವೇನೂ ಆದಷ್ಟಿರಲಿ ಸಂಭವಿಸಿದ ಕ್ರೂರ ಅತ್ಯಾಚಾರಗಳನ್ನು ತೀವ್ರವಾಗಿ ನಿಷೇಧಿಸುವದು ಎಲ್ಲ ದೇಶಹಿತಚಿಂತಕರ ಕರ್ತವ್ಯವು. ದಂಗೆಗಾರರ ಅಮಾನುಷ ಕ್ರೂರ ಕೃತ್ಯಗಳನ್ನು ಜನತೆಯು ಒಮ್ಮನಸ್ಸಿನಿಂದ ನಿಂದಿಸದಿರದೆಂದು ನಂಬುವೆವು. ಒಣಗಿದ್ದ ಬೆಟ್ಟಕ್ಕೆ ಯಾರಾದರೂ, ನೀಚರು ಬೆಂಕಿಯ ಸಣ್ಣ ಕಿಡಿಯನ್ನು ಹಚ್ಚಿದರೂ ಇಡೀ ಬೆಟ್ಟವೆಲ್ಲ ಬೆಂಕಿಯೇ ಬೆಂಕಿಯಾಗಿ, ಅವಶೇಷವು ಬರೆ ಬೂದಿಯ ರಾಶಿಯೇ ಆಗುವದು; ಮತ್ತೇನು? ಇದರಿಂದ ಯಾರಿಗೂ ಲಾಭವಿಲ್ಲ; ಸರಕಾರಕ್ಕೂ ಇಲ್ಲ; ಜನರಿಗೂ ಇಲ್ಲ. ಉಭಯತರ ಪಾಲಿಗೂ ಬರುವದು ಹಾನಿಯೇ. ಅಪಹಾರಣ, ಹಿಂಸೆಗಳೂ, ನಮ್ಮ ಮಹಮ್ಮದೀ ಬಾಂಧವರೂ, ಮಾಪ್ಲಾಪಳಿಯರ ಅತ್ಯಾಚಾರಗಳನ್ನು ಮನಃಪೂರ್ವಕವಾಗಿ ನಿಷೇಧಿಸುವರು, ಪರಿಪೂರ್ಣವಾಗಿ ತಿರಸ್ಕರಿಸುವರು, ಮತ್ತು ರಾಷ್ಟ್ರದ ನಿಷ್ಕಳಂಕ ಹೆಸರನ್ನು ಕಾಯುವರೆಂದು ಹಾರೈಸುವೆವು.

೨. ನಮ್ಮ ಸ್ಥಾನಿಕ ವ್ಯವಸಾಯ ಬಂಧುಗಳಾದ ಧುರೀಣಕಾರರು ಮುನಿಸಿಪಾಲಿಟಿ ಲೋಕಲಬೋರ್ಡುಗಳೊಳಗಿನ ಶಿಪಾಯಿ ಪೇದೆಗಳಿಗೆ ಖಾದಿಯ ಬಟ್ಟೆಗಳನ್ನು ಪೂರೈಸುವ ಯೋಜನೆಯನ್ನು ಸ್ಥಾನಿಕ ಬೋರ್ಡುಗಳು ಮಾಡಬಹುದೆಂದು ಸೂಚಿಸಿರುವರು. ಮುಂಬಯಿಯ ಮುನಿಸಿಪಾಲಿಟಿಯ ಕಮಿಶನರರಾದ ಕ್ಲೇಟನ ಸಾಹೇಬರು ಖಾದಿಯ ಪೋಷಾಕನ್ನು ತಮ್ಮ ಮುನಿಸಿಪಾಲಿಟಿಯ ನವಕರರು ಧರಿಸಬಹುದೆಂದು ಒಪ್ಪಿಗೆ ಕೊಟ್ಟಿರುವರು. ಅವರು ಹಾಕಿಕೊಟ್ಟ ಕಿತ್ತೆಯನ್ನು ಎಲ್ಲ ಮುನಿಸಿಪಾಲಿಟಿಗಳು ಬೋರ್ಡುಗಳು, ತಿದ್ದಬಹುದೆಂಬದು ನಿಜವು. ಮುನಿಸಿಪಾಲಿಟಿಯ ಕಾಯದೆ ಕಲಮುಗಳು ಇಂಥ ಯೋಜನೆಗೇನು ಅಡಬರುವದಿಲ್ಲ. ಸ್ವದೇಶಿ ಪೋಷಾಕನ್ನು ಕೊಟ್ಟರೆ, ನವಕರರು ಹಾಕಿಕೊಳ್ಳಲಿಕ್ಕೂ ಒಂದು ಕಾಲಿನಮೇಲೆ ಸಿದ್ಧರಿದ್ದಾರೆ. ಲಾಹೋರ ಮುನಿಸಿಪಾಲಟಿಯಲ್ಲಿ ಈ ಯೋಜನೆಯು ಅಮಲಿನಲ್ಲಿ ಸಹ ಬಂತು. ಆದರೆ ನಮ್ಮ ಜಿಲ್ಲೆಯ ಬೋರ್ಡುಗಳಿಗೆ ಇಂಥ ಉಪಕ್ರಮವನ್ನು ಮಾಡಲಿಕ್ಕೆ ಒಂದೇ ಒಂದು ಕೊರತೆ ಇದೆ. ಅದ್ಯಾವದೆಂದರೆ, ಸಭಾಸದರ ಮನೋಧೈರ್ಯವು. ಅಷ್ಟೊಂದು ಕೊರತೆಯನ್ನು ದೂರ ಪಡಿಸಿದರೆ, ಅವರ ಕೈಯಿಂದಲೇ ಈ ಕಲಸವು ಕೈಗೂಡುವದೆಂಬ ಬಗ್ಗೆ ಸಂದೇಹವಿಲ್ಲ. ಆಗಬೋಟಿಯು ಮುಂಬಯಿಗೆ ಮುಟ್ಟಿದರೂ, ತಾವು ಕುಮಟೆಯಲ್ಲೇ ಇದ್ದೇವೆಂದು ತಿಳಿಯುವ ಮುಪಿಂಡರು ಬೋಟಿಯಲ್ಲಿ ಇದ್ದರೆ ಮಾತ್ರ ಉಪಾಯವಿಲ್ಲ. ಅವರ ಕೂಡ ಎಷ್ಟೋ ವಾಗ್ವಾದವಾಡಿದರೂ, ಅವರು ತಾನು ಹಿಡಿದ ಮೊಲಕ್ಕೆ ಮೂರೇ ಕಾಲೆಂದು ಪ್ರತಿಪಾದಿಸುವದನ್ನು ಬಿಡರು. ಅಂಥವರು ಕಣ್ಣು ತೆರೆದರೆ, ಮತ್ತೇನು ಬೇಕು? ಅವರಿಗಾಗಿ ಜನರಿಗೆ ಬುದ್ಧಿ ಕಲಿಸುವರು. ಅಂದಿಗೆ ಸ್ಥಾನಿಕ ಸ್ವರಾಜ್ಯದ ಭಾಗ್ಯವು ಉದಯವಾಯಿತೆಂದು ನಿಶ್ಚಿತವಾಗಿ ತಿಳಿಯಬಹುದು

೩. ಕಾರವಾರ ಫರ್ಸ್ಟಕ್ಲಾಸ ಸಬಜಜ್ಜ ಕೋರ್ಟಿನಲ್ಲಿ ನಡಿಯುವ ಅವ್ಯವಸ್ಥಿತ ಕಾರಭಾರದ ವಿಷಯವಾಗಿ ನಮ್ಮೆಡೆಗೆ ಮೇಲಿಂದಮೇಲೆ ಪತ್ರಗಳು ಬರುತ್ತಿರುವವು. ವ್ಯಕ್ತಿ ವಿಷಯಕ ತಕರಾರುಗಳು ಅವಾಗಿರಬಹುದೆಂದು ನಾವು ಅವನ್ನೆಲ್ಲ ಪ್ರಕಟಿಸಿಲ್ಲ. ಈಗ ಮತ್ತೆ ಫಿರ್ಯಾದಿಗಳು ಬರುತ್ತವೆ. ಈ ಕೋರ್ಟಿಗೆ ಕಾಯಮ ಕೋರ್ಟಿನ ಸ್ವರೂಪವಿಲ್ಲಾಗಿ, ಅದಕ್ಕೆ ಅವ್ಯವಸ್ಥಿತ ಪಂಚಕೋರ್ಟಿನ ರೂಪಾಂತರವು ಪ್ರಾಪ್ತವಾಗಿದೆ. ಕೋರ್ಟು ಒಂದೆಡೆಗೆ, ವಕೀಲರು ಮತ್ತೊಂದೆಡೆಗೆ, ಪಕ್ಷಗಾರರು ಬೇರೆ ಒಂದು ಕಡೆಗೆ, ಹೀಗಾಗಿ ಗೊಂದಲವೇ ಗೊಂದಲವು ಮೇಲಿಂದಮೇಲೆ ಸಂಭವಿಸುತ್ತಿದೆ. ಒಮ್ಮೊಮ್ಮೆ ನ್ಯಾಯಕೋರ್ಟಿನಲ್ಲಿ ನಾಟಕ ನಡೆದಂತೆ ಫಾರ್ಸುಗಳಾಗುತ್ತವೆ. ದೊಡ್ಡ ದೊಡ್ಡ ಮತ್ತು ಮಹತ್ವದ ಮೊಕದ್ದಮೆಗಳ ವಿಚಾರಣೆಯು ಎಷ್ಟು ಸಾರೆ ಮುಂದೆ ಹಾಕಬೇಕೆಂಬ ನಿಯಮವೇ ಇಲ್ಲ. ವಾಯಿದೆಗೆ ಸಣ್ಣ ಅರ್ಜಿಯನ್ನು ಬೀಸಾಡಿದರೆ, ವಿಚಾರಣೆಯು ಮುಂದೆ ಬಿತ್ತೆಂದು ತಿಳಿಯುವದೇ. ಪುನಃ ಪುನಃ ಅರ್ಜಿ ತುಂಬಿ, ಬರಹೋಗೋಣದರಲ್ಲಿ ಪಕ್ಷಗಾರರು ಬೇಸತ್ತರೂ, [illegible]ದಿಲ್ಲ. ಹೀಗಾಗಿ ಕೋರ್ಟಿನಿಂದ ನ್ಯಾಯ ಹೊಂದಲಿಚ್ಛಿಸುವವರು ನಿರಾಶೆಪಟ್ಟಿರುವರು — ಹೀಗೆಲ್ಲ ದೂರುಗಳು ನಮ್ಮ ಕಡೆಗೆ ಬಂದಿರುವವು. ವ್ಯಕ್ತಿವಿಷಯಕ ದೂರುಗಳೆಂದು ಇವುಗಳನ್ನು ತಿರಸ್ಕರಿಸಬಹುದೇನು, ಎಂಬುದೊಂದು ತೀರ ವಿಚಾರಾರ್ಹ ಸಂಗತಿಯಾಗಿದೆ. ಅಲ್ಲಿಯ ಮುನಸೀಫರಾದ ಮಿ॥ ಕಾಗಲೆರವರು ಹಳಬರಿದ್ದು, ದೀರ್ಘಕಾಲ ನ್ಯಾಯಾಧೀಶರ ದ್ವಾರೆ ಅವರ ದರ್ಜಾರು ಇಷ್ಟು ನಡಿಲು ಕಾರಭಾರಕ್ಕೆ ಕಾರಣವಾದದ್ದಿದ್ದರೆ ತೀರ ಆಶ್ಚರ್ಯಕರವು. ಪೆನಶನಿಗೆ ಹ್ಯಾಗೂ ಬೇಗ ಹೋಗುವದದೆ, ಇನ್ನು ಹ್ಯಾಗೂ ಕಾರಭಾರ ನಡಿಸಿದರೇನು, ಎಂಬ ಭಾವನೆಯಿಂದ ಅವರು ವರ್ತಿಸುತ್ತಾರೋ ಯಾ ಅವರ ಸ್ವಭಾವವೇ ಅಷ್ಟು ವಿನೋದಿಯೆಂದು ತಿಳಿಯದು. ಮಿ॥ ಪೆರಸ್ಸರಂಥ ಕರ್ತವ್ಯದಕ್ಷ ಮತ್ತು ನಿಯಮಿತ ಕೆಲಸ ಮಾಡುವ ಹಿರಿಸ್ಥ ನ್ಯಾಯಾಧೀಶರು ಕಣ್ಣೆದುರಿಗೆ ನ್ಯಾಯಕೋರ್ಟನ್ನು ನಡಿಸುತ್ತಿದ್ದಾಗ, ಅದರ ಹತ್ತೆಂಟು ಮಾರು ದೂರ ಈ ಅಕಬರ-ಬೀರಬಲ್ಲನ ಕಥೆಯೊಳಗಿನ ಸಂಗತಿಗಳು ಸಂಭವಿಸುತ್ತವೆಂದು ನಂಬುವದು ಕಠಿಣವು. ವರಿಷ್ಠರಾದರೂ ಈ ದೂರುಗಳೊಳಗಿನ ತಥ್ಯಾಂಶವನ್ನು ಶೋಧಿಸಿ, ತಕ್ಕ ನಿವಾರಣೆಯನ್ನು ಮಾಡದಿರರೆಂದು ನಂಬುವೆವು.

೪. ಠಾಣೆಯ ಕಲೆಕ್ಟರರು ಪಿಕೆಟಿಂಗವನ್ನು ಪ್ರತಿಬಂಧಿಸುವ ಹುಕುಮನ್ನು ಹೊರಡಿಸಿ, ತಮ್ಮ ಜಿಲ್ಲೆಯೊಳಗೆ ಮದ್ಯಪಾನ ನಿಷೇಧದ ಚಳವಳಿಯನ್ನು ಮುರಿಯಲಿಕ್ಕೆ ಯತ್ನಿಸಿದ್ದರು. ಅಲ್ಲಿಯ ಜಿಲ್ಲಾ ಕಾಂಗ್ರೆಸ ಕಮಿಟಿಯು ಬೆ. ಜಮ್ನಾದಾಸ, ಶ್ರೀ॥ ಪಟೇಲರಂಥ ನಾಯಕರ ಕೈಕೆಳಗೆ ಶಾಂತ ರೀತಿಯಿಂದ ಈ ಹುಕುಮನ್ನು ಮುರಿಯುವ ಯೋಜನೆಯನ್ನು ಮಾಡತೊಡಗಿತ್ತು. ಇಷ್ಟರೊಳಗೆ ಕಲೆಕ್ಟರರು ಹಿಮ್ಮೆಂದೊಮ್ಮೆ ತಮ್ಮ ಹುಕುಮನ್ನೇ ರದ್ದ ಪಡಿಸಿದರೆಂದು ಜಾಹೀರಾಯಿತು. [illegible] ಮುಖಂಡರು ಆಶ್ವಾಸನೆ ಕೊಟ್ಟ ಮೂಲಕ ಹುಕುಮು ರದ್ದು ಮಾಡಿದ್ದೇವೆಂದು ಕಲೆಕ್ಟರರು ತಿಳಿಸುತ್ತಾರೆ. ಹೊಸದಾದ ಆಶ್ವಾಸನೆಗಳನ್ನೇನು ತಾವು ಕೊಟ್ಟಿಲ್ಲೆಂದು ಬೆ. ಜಮ್ನಾದಾಸರವರು ತಮ್ಮದೊಂದು ಭಾಷಣದಲ್ಲಿ ಖುಲಾಸೆ ಮಾಡಿರುವರು. ಒಟ್ಟಿಗೆ ಇದರಿಂದ ಸ್ಪಷ್ಟವಾದ ಲೋಕಮತದ ವಿಜಯವಾಯಿತೆಂದು ಯಾರಿಗೂ ಕಾಣುವದು. ಲೋಕಮತವು ನ್ಯಾಯ ಪಕ್ಷಪಾತಿಯಾಗಿದೆ. ಅದರ ಬೆನ್ನೆಲುಬು ಗಟ್ಟಿಯಾಗಿದೆಯೆಂದು ಕಂಡುಬಂದರೆ, ಬರೆ ಸತ್ಯಾಗ್ರಹದ ನಿರ್ಧಾರದಿಂದ ದುರಾಗ್ರಹಿ ಹುಕುಮುಗಳು ಇದ್ದಲ್ಲೇ ತಮ್ಮಿಂದ ತಾನೇ ಮೆತ್ತಗಾಗುತ್ತವೆಂದು ಹೇಳಲಿಕ್ಕೆ ಇದೊಂದು ಉದಾಹರಣೆಯಾಗುವದು. ಕೌನ್ಸಿಲದ [illegible] ಸಭೆಯೊಳಗಿನ ಭಾಷಣಪಾಂಡಿತ್ಯದಿಂದ ಸಾಧ್ಯವಾಗದ ಸಂಗತಿಗಳು, ಅದರ ಹೊರಗೆ ಲೋಕಮತದ ಒಗ್ಗಟ್ಟಿನಿಂದ ಎಷ್ಟರಮಟ್ಟಿಗೆ ಸಾಧ್ಯವಾಗಲಿಕ್ಕಾಗುತ್ತವೆಂಬ ಅರಿತುಕೊಳ್ಳಲಿಕ್ಕೂ ಇದೊಂದು ದೃಷ್ಟಾಂತವು. ಠಾಣೆಯ ಕಲೆಕ್ಟರರು ಮಾಡಿದ ತಪ್ಪನ್ನು ಅವರಾಗಿ ಸುಧಾರಿಸುವ ಮನೋಧೈರ್ಯವನ್ನೂ ಔದಾರ್ಯವನ್ನೂ ತೋರಿಸಿದ್ದಕ್ಕಾಗಿ ಅವರಿಗೆ ಅಭಿನಂದಿಸುವಾಗ ಠಾಣೆಯ ಜಿಲ್ಲಾ ಕಾಂಗ್ರೆಸ ಕಮಿಟಿಗೂ, ಅದರ

ಮುಖಂಡರಿಗೂ ಸತ್ಯಾಗ್ರಹಿ ಸ್ವಯಂಸೇವಕರಿಗೂ ಹೊಗಳದಿರಲಿಕ್ಕಾಗದು. ರಾಣಿಯ ನಿರ್ಣಯವು ಬುದ್ಧಿ ಕಲಿತವರಿಗೂ, ಬುದ್ಧಿ ಕಲಿಸಿದವರಿಗೂ ಭೂಷಣಾಸ್ಪದವದೆ.

ಕಳೆದ ಸಂಚಿಕೆಯಲ್ಲಿ ಇಲ್ಲಿಯ ಕಟ್ಟಿಗೆ ಡಿಪೋ ಸಂಬಂಧ ಬರದ ವಿಷಯವಾಗಿ ಈ ತಾಲೂಕ ಮಾಮಲೇದಾರರು, ಈ ಶಹರದ ಕೆಲವು ಮುಖ್ಯ ಮುಖ್ಯ ಗ್ರಹಸ್ಥರಿಗೆ ಯಾದಾಸ್ತಗಳನ್ನು ಕಳುಹಿಸಿ ಅವರ ಅಭಿಪ್ರಾಯಗಳನ್ನು ಸಂಗ್ರಹಿಸುವ ಸಂಗತಿಯು ತಿಳಿಯುತ್ತದೆ. ಈ ಮೊದಲು ಸಹ ಇಂಥದ್ದೇ ಪ್ರಸಂಗದಲ್ಲಿ ಇದೇ ಅನುಕರಣವನ್ನು ಅವರು ಮಾಡಿದ್ದು ಅದರಲ್ಲಿ [illegible], ಆ ಗ್ರಹಸ್ಥರಿಂದ ಬಹುಮತದ ಅಭಿಪ್ರಾಯವೇನಿತ್ತು ಮತ್ತು ಅದಕ್ಕನುಸರಿಸಿ, ಜನರ ಹಿತದೃಷ್ಟಿಯಿಂದ ಯಾವ ಹುಕುಂ ಆಗಿತ್ತೆಂಬುದ ಮಾತ್ರ ಅದರಲ್ಲಿ ನಮೂದಾಗಿಲ್ಲ. ಇದಿಷ್ಟು ಆಶ್ಚರ್ಯ. ಆದರೂ [illegible] ಹಿತದೃಷ್ಟಿಯಿಂದೇನು ಆ ಹುಕುಮು ಆಗಿದ್ದಿಲ್ಲೆಂಬುದು ತರ್ಕ ಸಹಜವಾಗಿದೆ. ಅದು ಹಾಗೆ ಆದರೆ, ಪುನಃ ಈ ಪ್ರಸಂಗವು ಬರುತ್ತಿದ್ದಿಲ್ಲೆಂಬುದು ನಿಸ್ಸಂದೇಹವು. ಇಂಥ ಪ್ರಸಂಗಗಳಲ್ಲಿ ಊರೊಳಗಿನ ಸಭ್ಯಗ್ರಹಸ್ಥರ ಅಭಿಪ್ರಾಯಗಳನ್ನು ತರಿಸಿ, ಬಡಜನರ ಗೋಳಾಟವನ್ನು ನಿವಾರಿಸುವದಕ್ಕಿಂತ, ಆ ಅಧಿಕಾರಿಗಳು ಸ್ವತಃ ಡಿಪೋಕ್ಕೆ ಕೂಡಲೇ ಹೋಗಿ ಅಲ್ಲಿಯ ವಸ್ತುಸ್ಥಿತಿಯನ್ನು ಕಣ್ಣಾರೆ ನೋಡಿದರೆ, ನಮ್ಮ ನಿರವಣೆಗೆಯು ಅವರಿಗೆ ಮಾನ್ಯವಾಗುತ್ತೆಂದು ತಿಳಿಯುತ್ತೇವೆ. ಕಂಟ್ರಾಕ್ಟಿನ ಶರ್ತಗಳನ್ನೂ ಅಲ್ಲಿದ್ದ ಕಟ್ಟಿಗೆಯ ಪ್ರತವಜೆಯನ್ನೂ ಪ್ರತ್ಯಕ್ಷ ನೋಡಿ, ಅದರ ಪಸ್ತರೆ ಬರ ಹೋಗುವ ಗಿರಾಕಿಗಳ ಸಾಕ್ಷಿಪುರಾವೆಯನ್ನು ಕೊಂಡು ನಿಃಸ್ಪೃಹತೆಯಿಂದ ಚೌಕಶಿ ಮಾಡುವದು ಬಿಟ್ಟು ಈ ಕಾಗದ ಕುದುರೆಗಳನ್ನು ಓಡ್ಯಾಡಿಸಿ ಚೌಕಶಿ ಮಾಡುವ ಉಪಕ್ರಮವು ಬಹಳೇ ಅನುಮಾನಕರದ್ದಾಗಿದೆ. ನ್ಯಾಯ ದಾನ ಕೊಡಬೇಕೆಂತಿದ್ದವರಿಗೆ [illegible] ಇದರಿಂದ ಬಡಜನರಿಗೆ ಸುಖವು ಹಿತವು [illegible]. ಆದ್ದರಿಂದ ಹೀಗೆ ಬಡಜನರ ಗೋಳಾಟಕ್ಕೆ ನಿಜವಾಗಿ ಕಾರಣರಾದವರ್ಯಾರು. ಜಂಗಲ ಖಾತೆಯ ಅಧಿಕಾರಿಗಳೋ, ಯಾ ಬರೇ ಈ ಕಂಟ್ರಾಕ್ಟದಾರರೋ, ಎಂಬುದು ಇನ್ನಾದರೂ ನ್ಯಾಯ್ಯದ ಚೌಕಶಿಮಾಡಿ, ಬಡಜನರ ಗೋಳನ್ನು ನಿವಾರಿಸಬೇಕಾಗಿ ನಮ್ಮ ಸವಿನಯ ಸೂಚನೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆಯು ಹೆಚ್ಚಿನ [illegible] ಮೊದಲಿನಂತೆ ಮಳೆ ಬೀಳುತ್ತಿದೆ. ಒಟ್ಟಿಗೆ [illegible] ಇಂಚು ಮಳೆ ಬಿತ್ತು. ಜ್ವರ, ಕೆಮ್ಮು, ದಮ್ಮು, [illegible] ಮುಂತಾದ ಹಲವು ರೋಗಗಳು [illegible].

ಇಲ್ಲಿನ [illegible] ಸರ್ವಿಸು [illegible] ಮದರೊಂದ [illegible] ಅಸ್ತಿತ್ವಕ್ಕೆ ಬಂದಿದೆ ಬಂಡಿಗಳ [illegible] ನಡೆಸಿದೆ. ಬಹುಶಃ ಅಕ್ಟೋಬರ [illegible] ಆಗುವದೆಂದು [illegible] ಇಂಥ ಪ್ರಯಾಣದ ಸೌಕರ್ಯಗಳಾದ [illegible] ಇಂಜಿನಿಯರ [illegible] ತಕ್ಕ [illegible] ರಸ್ತೆ ಮಾಡಿದ್ದ ಹೊರತು [illegible] ಇಲ್ಲಿ [illegible] ಅವರ [illegible]

ರುಗಳನ್ನಾದರೂ ಉಪಯೋಗಿಸಲಿಕ್ಕೆ ಪರವಾನಗಿ ಕೊಟ್ಟರೇನೇ ಉತ್ತಮ.

ಇಲ್ಲಿ ಸ್ಥಾಪಿತವಾದ ವರ್ತಕರ ಸಂಘದ ಪ ಸೆಜಿಂಗ ಕಮಿಟಿ ಕೂಡಿ ನಿಯಮಗಳ ಮಸೂದೆ ಮಾಡಿ ಮಹಾಸಭೆಯ ಮುಂದೆ ಇಡುವ ತಯಾರಿ ನಡೆಸಿದೆ. ಇಷ್ಟರೊಂದಿಗೆ ೩೪ ವರ್ತಕರು ನೋಂದ ಮಾಡಲ್ಪಟ್ಟಿದ್ದಾರಂತೆ.

ಇಲ್ಲಿಯ I ನೇ ವರ್ಗದ ಮಾಜಿಸ್ಟ್ರೇಟ ಕೋರ್ಟಿನಲ್ಲಿ ಎಕ್ಸಾಯಿಜ ಇನಸ್ಪೆಕ್ಟರರು ಗೋಕರ್ಣದ ಗಾಂಜಾ ಲಾಯಿಸನ್‌ದಾರ ಶೇಷಗಿರಿ ಜ್ಞಾನಭಾಗ ಮತ್ತು ಬ್ಬಿ ಕೃಷ್ಣನ ಹಂಗಸರಮೇಲೆ ಮಾಡಿಕೊಟ್ಟ ಬೇಕಾಯಿದೇಶೀರ ಗಾಂಜಾ ವಿಕ್ರಿ ಮಾಡಿದ್ದೆಂಬ ಖಟ್ಲೆಯಲ್ಲಿ ಆರೋಪಿತರು ನಿರ್ದೋಷಿಗಳೆಂದ ಬಿಡಲ್ಪಟ್ಟರು.

ಇಲ್ಲಿನ ಕಟ್ಟಿಗೆ ಡಿಪೋ ಮಾಲೀಕರ [illegible] ರಾ। ಕೇಶವ ಪೈಯಿಂದ ಟನ್ನಿಗೆ ರೂಪಾಯಿ [illegible] ರೂ ೨ ಕೂಡಾ ೧೭ರಂತೆ ಕಟ್ಟಿಗೆ ಕೊಂಡು, ಡಿಪ್ಪೋದಲ್ಲಿ ಮಾರಿದರೆ ಟನ್ನಿಗೆ ರೂಪಾಯಿ [illegible] ಹಣ [illegible] ಉಸಂಬವ [illegible] ತಿಳಿಯುತ್ತದೆ. ಯಾವ [illegible] ಪ್ರಶ್ನೆ [illegible] ಬಿಬಿರುವದು ಎಷ್ಟು ಹೊತ್ತು ?

[illegible] ಇದೇ ಬರುವ [illegible] ನೇ ತಾರೀಖಿಗೆ [illegible] ಆಗಬೋಡಿಯು [illegible] ತ್ತದೆಂದು ತಿಳಿಯುತ್ತದೆ

ಈಗ ಪುನಃ ಹುಲಿಯ ಉಪಟಳ [illegible] ಭಾಗದಲ್ಲಿ [illegible] ದಿವಸಗಳ [illegible] ಕರುಗಳನ್ನು ತಿಂದ್ದಾಯಿತಂತೆ.

[illegible] ಗಳಲ್ಲಿ ನಡೆದಿರುವವು.

ಇಲ್ಲಿನ ವರ್ತಕರ [illegible] ವಾಚನಾಲಯ [illegible] ಯನ್ನು ತೆರೆದು [illegible] ವಾಚನೀಯ ವೃತ್ತಪತ್ರಗಳನ್ನು ತರಿಸುವ ವಿಚಾರದಲ್ಲಿರುವರು [illegible].

ಮನ್ನಾಪೂರ ನಿಸ ದಾರ್ ಪಿಕೆಟಿಂಗವು ವ್ಯವಸ್ಥಿತ ರೀತಿಯಿಂದ ಇನ್ನು ಪ್ರಾರಂಭವಾಗಿಲ್ಲೆಂದು [illegible] ಶಾಂತವಾಗಿದೆ.

ಸಿದ್ದಾಪೂರ— [illegible] ನೇ ಸೋಮವಾರದಿವಸ ಇಲ್ಲಿಯ ಜಾಹೀರ [illegible] ಸಭೆ [illegible] ರಳಗಿ ಇವರ ಅಧ್ಯಕ್ಷತೆಯ ಕೆಳಗೆ ಕೂಡಿ ಶ್ರೀ। ರಾಮ ಚಂದ್ರ ನಾರಾಯಣ [illegible] ಶ್ರೀ। [illegible] ರಳಗಿ ಮಗ್ಗೆರೆ ಜನರ [illegible] ಸಭೆಯಲ್ಲಿ ಕೂಡಿದ ಜನರು ಇನ್ನು ಮೇಲೆ ಪರದೇಶಿ ಅರವಿ ದರಿಸುವದಿಲ್ಲವೆಂತಲೂ, ಸ್ವದೇಶಿ ಅರವಿಯನ್ನೇ (ಖಾದಿ) ತೆಗೆದ ಕೊಳ್ಳುತ್ತೇವೆಯೆಂತಾ ಪ್ರತಿಜ್ಞೆ ಮಾಡಿ ಹೇಳಿದರು. ಪತ್ತ ಜವಳಿ ಅಂಗಡಿ ಸಾವಕಾರ ಶ್ರೀ। ಗೋವಿಂದ ತಿಮ್ಮಪ್ಪ ರಂಗ್ಯಯ್ಯನವರು ಶ್ರೀ। ಗಣಪತಿ ಶೇಷಗಿರಿಯಪ್ಪ ಇವರು, ಸಹಾ ಇನ್ನುಮೇಲೆ ತಾವು ಸ್ವದೇಶಿ ಅರವಿಗಳನ್ನೇ ತರಿಸುತ್ತೇವೆ ಪರದೇಶಿ ಮಾಲು (ಜವಳಿ) ತರಿಸುವದಿಲ್ಲವೆಂತಾ ಪ್ರತಿಜ್ಞೆ ಮಾಡಿ ಹೇಳಿದರು. ನಂತರ ಲೋಕಮಾನ್ಯ ಟಿಳಕರ ಪ್ರೋಟೋವನ್ನು ಭಜನೆಯಿಂದ ಊರು ತುಂಬಾ ಮೆರವಣಿಗೆಯಾಯಿತು. ದೇವಸ್ಥಾನದಲ್ಲಿ [illegible] ಲೋ॥ ಟಿಳಕರ ಆತ್ಮಕ್ಕೆ ಶಾಂತಿ [illegible] ಪ್ರಾರ್ಥಿಸಿದರು.

ಇಲ್ಲಿ ಪಿಕೆಟಿಂಗ ಕೆಲಸ [illegible] ತಡೆದಿದ್ದು [illegible] ಅಧಿಕಾರಿಗಳು ಮಧ್ಯೆ ಪ್ರವೇಶಿಸಿದ್ದರು. ಮಾತ್ರ [illegible] ಯನ್ನು ಬಿಟ್ಟಿದ್ದಾಗ್ಗೆ [illegible] ವದಿಲ್ಲ [illegible].

ನಮ್ಮ ತಾಲೂಕ ಕಾಂಗ್ರೆಸ್ ಕಮಿಟಿಯ [illegible] ಗಳು [illegible] ಟಿಳಕಸ್ವರಾಜ್ಯದಿಂದ [illegible] ಕೆಲಸಕ್ಕೆ [illegible] ಉದ್ಯೋಗದ ಕಾರ್ಯಕ್ಕೆ [illegible] ಮಂಡಳದ ಸ್ವರಾಜ್ಯದ [illegible] ಗ್ರಾಮ [illegible] ೧೦೦೦ರ [illegible]

ಬರರೂ ೧೦೦೦ ರೂಪಾಯಿ ಟಿಳಕಸ್ವರಾಜ್ಯಫಂಡು ಆಗಿದೆ [illegible] ಅಂಕದಿಂದ ಇದೇ ತಿಂಗಳ ಅಖೇರಿಗೆ ಜಾಹೀರವಾದಲಾದೀತ.

ಹೊನ್ನಾವರ— ಇಲ್ಲಿ ನಡೆಯುತ್ತಿದ್ದ ಫೋರೆಸ್ಟು ಖಟ್ಲೆಯು ೪-೫ ತಿಂಗಳತನಕ [illegible] ಸರ್ತಿ ಆರೋಪಿಗೆ [illegible] ಖ್ಯಾಡಿಸಿ ಅಖೈರ ನಿಖಾಲಿ ತಾ ೨೫ ನೇ ಸೋಮವಾರ ರಾತ್ರೆ ಅ॥ ಘಂಟೆಗೆ ೩ನೇ ವರ್ಗದ ಮೇಜಿಸ್ಟ್ರೇಟ ಮಿ॥ ಬಸ್ರೂರ ಇವರು "ಮಾಮಲೇದಾರಸಾಹೇಬರಾದರೆ ನಿಮಗೆ ಸಜಾನೇ ಕೊಡುತ್ತಿದ್ದರು, ನಾನು ನಿಮಗೆ ಬಹಳ ರಿಯಾಯತಿಯಿಂದ ದಂಡಮಾತ್ರ ಮಾಡಿದ್ದೇನೆಂತ ಹೇಳಿ, ೩೪ ಆರೋಪಿತರ ಪೈಕಿ ೫ ಜನರಿಗೆ ಒಬ್ಬೊಬ್ಬನಿಗೆ [illegible] ರೂಪಾಯಿಯಂತೆ, ಬಾಕಿಯವರಿಗೆ ಹತ್ತು ಹತ್ತು ರೂಪಾಯಿಯಂತೆ ೪೦೦ ಚಿಲ್ಲರೆ ರೂಪಾಯಿ ದಂಡ ರೊಖಾಯಿತು ಬಿಟ್ಟರಂತೆ.

"आई जेवूं घालित नाहिं, बाप भीक मागूं देत नाहिं." ಎಂಬ ಗಾದೆಯಂತೆ ಇವರಿಗೆ ಲೇಂಜಿಸ್ಲೆಟಿವನಲ್ಲಿ ಪರಮಿಶನದಿಂದ ತಾಳೆಮರ ಕಡಿದ್ದ ಮೇಲೆ, ಉಪವಾಸ ಸಾಯುವದಬದಲು, ಫೋರೆಸ್ಟ ಸಾಹೇಬರಿಗೆ ದಮ್ಮಯ್ಯ ಹಾಕಿ ಜಂಗಲದಲ್ಲಿ ಕಡಿದುಹಾಕಿದ ಮರಗಳನ್ನು ತೊಂಡಿಡು ಕಾಮಿಸಿಂದ ಲಿಲಾವಿನಲ್ಲಿ ತಕ್ಕೊಂಡದ್ದರಲ್ಲಿ ಈ ಬಡವರಿಗೆ ತೆರಬಾರದಷ್ಟು ದಂಡ ವಿಧಿಸಿದ್ದರ ಕಡೆಗೆ ಜಿಲ್ಲಾ ನಿಕಟ [illegible] ಹೇಗ ಸಾಹೇಬರು ನಜರು ಪೊರೈಸುವರೇನು.

ಮಾಮಲೇದಾರ ಕಚೇರಿಯಲ್ಲಿ ಗೇಣಿ ಬಾಕಿ ಮುಂತಾದ ದಾವೆಯ ಜಮೀನದಾರ ವಾರಿ ಮಾದಪ್ಪಾ ಕೃಷ್ಣ ಹೆಗಡೆ ಎಂಬವರು ಖಾದಿ ಡ್ರೇಸ ಮಾಡಿದ್ದು ನೋಡಿ ಮಾಮಲೇದಾರ ಸಾಹೇಬರು "ನೀವು ನೋನ್ ಕೋಅಪರೇಶನ್‌ದವರು ದಾವಾ ತಂದಿದ್ದೀರಿ" ಎಂತ ಹೇಳಿದ್ದಲ್ಲದೆ, ಸದರ ದಾವೆ ಪ್ರತಿವಾದಿರು ಹಾಜರಿಯಿಲ್ಲದ್ದರಿಂದ ಮುಂಜಾಗ್ರತೆಕೊಡಲಿಕ್ಕೆ ಬರುವದಿಲ್ಲವೆಂತ ಹೇಳಿದರಂತೆ. ಮುಂಬಯಿ ಹಾಯಕೋರ್ಟಿನಲ್ಲಿ ಸಹ ಖಾದಿ ಡ್ರೇಸ ಹಾಕಿಕೊಂಡ ಬರಬಹುದೆಂತ ಠರಾವಾದದ್ದು ಇನ್ನು ಇವರ ನಜರಿಗೆ ಹೋಗಲಿಲ್ಲವೇನ ?

ಭಟ್ಕಳ— ನಿನ್ನೆ ಇಲ್ಲಿಂದ ೫ ಮೈಲು ದೂರದಲ್ಲಿದ್ದ ಮದ್ರಾಸ ಸರಹದ್ದಿನಲ್ಲಿ ಬೈನಬೀಳು ಎಂಬ ಜಾಗೆಯ ಮೇಲೆ ಮೌಲಾನಾ ಹಬಿಬುಲ್ಲಾ ಖಾನರ ಆವೇಶದ, ಪರಿಣಾಮಕಾರಕ ಭಾಷಣವಾಗಿ ದೊಡ್ಡ ಹೋಳಿಯಾಯಿತು. ಇಲ್ಲಿ ಮುಸಲ್ಮಾನ ಬಂಧುಗಳು ೪೦-೫೦ ಛತ್ರಿಗಳನ್ನು, ನೂರಾರು ಟೋಪ್ಪಿಗೆಗಳನ್ನೂ, ಕೋಟುಗಳನ್ನೂ ಅಗ್ನಿನಾರಾಯಣನಿಗೆ ಅರ್ಪಣೆ ಮಾಡಿದರು. ಬಹಳೇ ಕೆಂಬಳಿಗಾರರು ಹಾಜರಿದ್ದರು. ಕಾರವಾರ ಶ್ರೀ। ಗುಲ್ಮಾಡಿಯವರು ಕನ್ನಡದಲ್ಲಿ ಅವರಿಗೆ ಬೋಧವಾಗವಂತೆ ಹೋಳಿಯ ಉದ್ದೇಶವನ್ನೂ, ಸರಕಾರದ ದುಷ್ಕೃತ್ಯಗಳನ್ನೂ, ಮದ್ಯಪಾನ ನಿಷೇಧದ ಜರೂರಿಯನ್ನೂ, ಪರಿಣಾಮಕಾರಿ ಭಾಷಣದಿಂದ ತಿಳಿಸಿ ಹೇಳಿದರು. ೧॥ ಸಾವಿರ ಜನರು ನೆರದಿದ್ದರು. ಮೆರವಣಿಗೆಯ [illegible] ಮೌಲಾನಾರವರಿಗೆ ಕಳುಹಿಸಿ ಕರ್ತಂದರು.

ಶಿರಸಿ— ಮಂಚಿಗೇರಿಯ ಗ್ರಾಮದ ಗಿಡ್ಡಮಾವಿನ ಕಟ್ಟೆಯಲ್ಲಿ ಒಬ್ಬ ಪರಮಹಂಸ ಸತ್ಯವ್ರತಾನಂದ ಸರಸ್ವತೀ ಸ್ವಾಮಿಗಳವರು ೮-೧೦ ವರ್ಷಗಳಿಂದ ಇರುವರು. ಅವರು ದೇಶಭಕ್ತಿಯನ್ನು ಮಾಡಿ, [illegible] ಭಿಕ್ಷಾ ನಿವಾರಣಾರ್ಥ ಪಂಚಾಗ್ನಿಯನ್ನು ಸ್ಥಾಪಿಸಿದ್ದಾರಂತೆ.

ಹಳಿಯಾಳ— ಜ್ವರ ಉಂಟು. ಮಳೆಯು ಕಡಿಮೆ. ಪೈರು ಸಾಧಾರಣ. ತಾ। [illegible] ಸ್ವಯಂಸೇವಕರು ಕಾರ್ಯ [illegible] ಅಬ್ದುಲಾ ಕರೀಮ ಸಾ। ಮಾಲೀಯೂರ— ಅಧ್ಯಕ್ಷ, [illegible] ಸೆಕ್ರೇಟರಿ, ಬಾಳಾಜಿ ಅನಂತ ಜೋಶಿ— ಖಜಾಂಚಿ. [illegible] ಕೂಡಿದ [illegible] ಗಣಪತಿ ಉತ್ಸವ ಮಾಡಬೇಕಾಗಿ ನಿಶ್ಚಯಿಸಿತು. [illegible] ತಾಲೂಕಿನಲ್ಲಿ [illegible] ಸ್ವದೇಶಿ [illegible] ಪರದೇಶಿ ಬಟ್ಟೆ ಮತ್ತು ಇತರ ಮಾಲಿನ [illegible] ಬಹಿಷ್ಕಾರಕ್ಕೆ ಪ್ರಾರಂಭ ಮಾಡಬೇಕಾಗಿದೆ. ಶ್ರೀ। [illegible] ಹೊಳೆಬಾಗಿಲ ಪೇಟೆಯ [illegible] ಸಹಿ [illegible] ಹಸ್ತಗಿರುವರು.

ಮಲಬಾರಿನಲ್ಲಿ ಮಾಪಳೇಯರ ದಂಗೆ!

ಭಯಂಕರ ಲೂಟಾಲೂಟ!!

ಸರಕಾರಿ ಕಚೇರಿಗಳನ್ನು ಸುಟ್ಟರು — ತ್ರಿಜೋರಿಗಳನ್ನು ಲೂಟಮಾಡಿದರು

ಇಬ್ಬರು ಬಿಳಿ ಅಧಿಕಾರಿಗಳೂ ನಾಲ್ಕಾರು ಪೋಲಿಸರೂ ಕೊಲ್ಲಲ್ಪಟ್ಟರು.

ಲಷ್ಕರಿ ಕಾಯಿದೆಯು ಅಮಲಿನಲ್ಲಿ ಬಂತು.

೧,೫೦೦ ಜನರು ಜಖಮು ಆದರು. ೫೦೦–೬೦೦ ಜನರು ಮೃತಪಟ್ಟರು.

ಕಳೆದ ಶನಿವಾರ ದಿವಸ ಸಾಯಂಕಾಲಕ್ಕೆ ಮಲಬಾರದ ಮಾಪಳೇಜನರು ಸರಕಾರದ ವಿರುದ್ಧ ದಂಗೆಮಾಡಲಿಕ್ಕೆ ಪ್ರಾರಂಭಿಸಿದರು. ಶನಿವಾರದಿಂದ ತಾರ ಆಫೀಸು, ಟಪಾಲಆಫೀಸು, ರೇಲ್ವೆಮಾರ್ಗಗಳನ್ನು ವಿನಾಶ, ಮಲ್ಲಪುರಮ, ಪರಪ್ಪಂಗಡಿ, ತಿರೂರ ಮುಂತಾದ ಸ್ಥಳಗಳಲ್ಲಿ ಉಧ್ವಸ್ತಮಾಡಿರುವರು. ಈ ದಂಗೆಖೋರರು ಸರಕಾರೀ ತ್ರಿಜೋರಿಗಳಿಂದ ಸುಮಾರು ಆರು ಲಕ್ಷ ರೂಪಾಯಿಗಳನ್ನು ಲೂಟಮಾಡಿದರೆಂದೂ, ಯುರೋಪಿಯನ ಸಾಹೇಬರ ಬಂಗ್ಲೆಗಳನ್ನೂ, ರಕ್ಷಿತ ವಸ್ತುಗಳನ್ನೂ ಉಧ್ವಸ್ತಮಾಡಿದರಂತೆ! ಹಿಂದೂ ದೇವಾಲಯಗಳನ್ನೂ ಲೂಟಮಾಡಿದ್ದಲ್ಲದೆ, ಕೆಲ ಹಿಂದೂ ಜನರನ್ನು ಮಹಮ್ಮದೀ ಧರ್ಮದಲ್ಲಿ ಧರ್ಮಾಂತರ ಮಾಡಿದರಂತೆ. ಈ ದಂಗೆಖೋರರಿಗೆ ಅವರ ಹೆಂಡರು ಹಾದಿಯಲ್ಲಿ ಅನ್ನಬೇಯಿಸಿ ಅಡಿಗೆಮಾಡಿ ಹಾಕುತ್ತಾರಂತೆ! ಹುಡುಗರು ಗುಪ್ತ ಪೋಲೀಸರಂತೆ ಅತ್ತಿತ್ತ ಹೋಗಿ ಸುದ್ದಿ ತರುತ್ತಾರಂತೆ! ಇವರಹತ್ತರ ಪಿರಾಘತ ಚೂರಿಗಳಿರುವವಂತೆ! ಇದಲ್ಲದೆ ಪೋಲಿಸ ಚೌಕಿಗಳಮೇಲಿನ ಪೋಲೀಸ ಶಿಪಾಯಿಗಳಿಂದ ತುಬಾಕಿ ಗುಂಡುಗಳನ್ನೂ ಸಂಪಾದಿಸಿರುವರು. ಇಂಥ ಶಸ್ತ್ರಾಸ್ತ್ರಗಳಿಂದ ಮಾಪಳೇಜನರು ಪೋಲಿಸ ಅಸಿ| ಸುಪರಿಂಟೆಂಡೆಂಟ ಮಿ| ರೌಲಿಸಾಹೇಬರೂ ಇಂಗ್ಲಿಷ ಸೈನಿಕರ ಲೆಫ್ಟನೆಂಟ ಜಾನಸನ್ ಸಾಹೇಬ ಮುಂತಾದ ಆರೇಳು ಯುರೋಪಿಯನರನ್ನು ಬಹು ಕ್ರೂರತನದಿಂದ ಕೊಂದಿರುವರಂತೆ! ಏರ್ನಾಡ, ಮಲ್ಲಪುರಮ ಮುಂತಾದ ಒಳಗಡೆಭಾಗದಲ್ಲಿ ದಂಗೆಖೋರರ ಹಾವಳಿಯು ವಿಶೇಷವಾಗಿರುವದು. ದಂಡೆಗುಂಟದ ಪ್ರದೇಶದಲ್ಲಿಯ ಮಾಪಳೇಜನರು ದಂಗೆಖೋರರಿಗೆ ಕೂಡಲಿಲ್ಲ. ದಂಗೆಯಲ್ಲಿ ಜಖಂಹೊಂದಿದವರ ಸಂಖ್ಯೆಯು ೧೫೦೦ ಆಗಿರಬಹುದು. ಈ ಹಾವಳಿಯನ್ನು ನಿರ್ಮೂಲಿಸಲಿಕ್ಕೆ ಮದ್ರಾಸ, ಮುಂಬಯಿ ಮುಂತಾದವುಗಳಿಂದ ಸೈನ್ಯವು, ಹಡಗುಪಡೆಯೂ ಹೋಗುತ್ತಿರುವವಂತೆ. ಮಲಬಾರದಲ್ಲಿ ಸರಕಾರವು ಲಷ್ಕರಕಾಯಿದೆಯು ಪುಕಾರುಮಾಡಿರುವದು. ಈ ಅಶಾಂತತೆಯನ್ನೂ ದಂಗೆಯನ್ನೂ ತಾನು ಕ್ಷಣಾರ್ಧದಲ್ಲಿ ನಿರ್ಮೂಲಿಸುತ್ತೇನೆಂದು, ಮದ್ರಾಸ ಖಿಲಾಫತ ಚಳವಳಿಯ ಅಗ್ರಣಿಗಳಾದ ಮಿ| ಯಾಕೂಬ ಹಸನ ಇವರು ಗವರ್ನರರಿಗೆ ತಿಳಿಸಿದರು. ಆದರೆ, ಮಿ| ಯಾಕೂಬ ಹಸನರು ಅಸಹಕಾರಿತೆಯ ಚಳವಳಿಯ ಉಪಾಸಕರೆಂದು ಗವರ್ನರರು ಅವರ ಬಿನ್ನಹವನ್ನು ನಿರಾಕರಿಸಿರುವರು. ಈಗ ಮಲಬಾರದಲ್ಲಿ ಪಂಜಾಬದ ಪುನರಾವೃತ್ತಿಯಾಗುತ್ತದೋ ಏನೋ ಎಂದು ಭೀತಿಯಾಗಿದೆ. ಮುಂಬಯಿಯ ಕ್ರಾನಿಕಲವು ಈಬಗ್ಗೆ ಬಹು ಮನನೀಯವಾದ ಲೇಖವನ್ನು ಬರೆದಿರುವದು. 'ಶಾಂತತೆಯನ್ನೂ ವ್ಯವಸ್ಥೆಯನ್ನೂ ಪುನಃ ಪ್ರಸ್ಥಾಪಿಸಿರಿ. ಇದಕ್ಕೆ ಲೋಕಮತವು ಪೂರ್ಣವಾಗಿ ಸರಕಾರದ ಬೆಂಬಲಕ್ಕೆ ಇದೆ. ಆದರೆ ಪಂಜಾಬದಲ್ಲಿ ಮಾಡಿದಂತೆ ಜನರಮೇಲೆ ಮುಯ್ಯತೀರಿಸುವಬುದ್ಧಿಯಿಂದ ಪ್ರೇರಿತರಾಗಬೇಡಿರಿ. ಅತಿ ವಿನಯದಿಂದ ಬಾಹುಬಲವನ್ನು ಉಪಯೋಗಿಸಿ, ದಂಗೆಯನ್ನು ಮುರಿಯಿರಿ. ದಂಗೆಮುರಿದಮೇಲೆ, ದಂಗೆಯ ಕಾರಣಗಳನ್ನು ಶೋಧಿಸಲು ಒಂದು ಚೌಕಶಿ ಕಮಿಟಿ ನೇಮಿಸಿರಿ ಮತ್ತು ಸರ್ವತ್ರ ಶಾಂತತಾ ಸಾಮ್ರಾಜ್ಯವಾದಕೂಡಲೆ, ಗವರ್ನರ ಜನರಲ ರೀಡಿಂಗ ದೊರೆಗಳು ಒಂದುಸರ್ತಿ ಮಲಬಾರಕ್ಕೆ ಭೆಟ್ಟಿಕೊಡಬೇಕು" ಈ ಸೂಚನೆಗಳು ಅನಿವಾರ್ಯವಾದವೆಂದು ಯಾರು ಹೇಳುವರು?

ಇಷ್ಟು ಪ್ರಚಂಡ ದಂಗೆಯಾಗುವ ಕಾರಣವೇನ? ಸರಕಾರವಂತೂ ಖಿಲಾಫತ ಹಾಗು ಅಸಹಕಾರಿತೆಚಳವಳಿಗೆ ಜೋಡಿಸಿ ಆರೋಪಿಸಿ ತನ್ನ ಸಂಶಯಿತ ಅಂತಃಕರಣದ ಸಮಾಧಾನ ಮಾಡಿಕೊಳ್ಳುವದಲ್ಲದೆ, ಮಹಾತ್ಮಾ ಗಾಂಧೀ, ಮೌಲಾನಾ ಮಹಮ್ಮದಅಲ್ಲಿ, ಶೌಕತಅಲ್ಲಿ ಇವರ ಅಹಿಂಸಾತ್ಮಕ ಚಳವಳಿಯನ್ನು ನಿರ್ಮೂಲಿಸಲು ಒಂದು ಒಳ್ಳೇ ನೆವಸಿಕ್ಕಿರುವದೆಂದು ಹಿಗ್ಗುತ್ತಿದೆ. ಆದರೆ, ಕಳೆದ ೨೩ ನೇ ತಾರೀಖಿಗೆ ಮದ್ರಾಸದ ಹಿಂದೂಪತ್ರಿಕೆಯ ಬಾತ್ಮೀದಾರರು ಈ ದಂಗೆ ಹುಟ್ಟುವಕಾರಣಗಳನ್ನು ಅನುಲಕ್ಷಿಸಿ, ಹೀಗೆ ಬರೆಯುತ್ತಾರಲ್ಲ — ಪೂಕೋಟೂರ ಎಂಬಲ್ಲಿ ನಿಲಂಬುರ ತಿರುಮಲಪಾಡ ಸಾವಕಾರರಿಗೂ, ಅವರ ಕೂಲಿಯಾಳುಗಳಿಗೂ ಮಜೂರಿಸಂಬಂಧ ತಕ್ರಾರುಗಳುಂಟಾಗಿ ದಂಗೆಯುಂಟಾಯಿತು. ಆದನ್ನು ಮಲ್ಲಪುರದ ವಿಖ್ಯಾತ ವಜನದಾರ ಅಲಿಯಾರ್ ಹಾಜಿ ಇವರ ಉಪದೇಶದಿಂದ ಮುರಿಯಲ್ಪಟ್ಟಿತ್ತು. ಮುಂದೆ ಈ ದಂಗೆಯ ಒಬ್ಬ ಮಸೂಲಿಯರ, ಹಾಗು ಇಬ್ಬ ಖಿಲಾಫತ ಅಗ್ರಣಿಗಳಮೇಲೆ ಕಲೆಕ್ಟರ ಮಿ| ಥೋಮಸ ಇವರಿಗೆ ಸಂಶಯುಂಟಾಗಿ, ಸೈನ್ಯವನ್ನು ತರಿಸಿ, ಮಸೀದಿಯನ್ನು ಸುತ್ತುಗಟ್ಟಿ ಅವರನ್ನು ಹಿಡಿದರು. ಮಾಪಳೇಜನರು ಒಟ್ಟೊಳೇ ನೆರೆದು ತಮಗೆ ಪರಮಪವಿತ್ರ ಹಾಗು ಪ್ರೀತಿಯ ನಿವಾಸಸ್ಥಾನವಾದ ಅಗ್ರಣಿಗಳ ಬಿಡುಗಡೆಮಾಡಿರೆಂದು ಅಧಿಕಾರಿಗಳಿಗೆ ಬಿನ್ನೈಸಿದರು. ಅಧಿಕಾರಿಗಳು ಹಾಗೆಮಾಡುತ್ತೇವೆಂದು ವಚನಕೊಟ್ಟು ಅವರನ್ನು ಕಚೇರಿಗೆ ಒಯ್ದರು. ಮಾಪಳೇಯರು ಸಮ್ಮತ್ತೆ ಕಚೇರಿಯ ಹೊರಗೆ ತಮ್ಮ ಅಗ್ರಣಿಗಳ ಭವಿತವ್ಯತೆಯನ್ನು ಕಾಯುತ್ತಿದ್ದರು. ಆಗ ಅತ್ಯಾಚಾರಗಳು ಸಂಭವಿಸಿ, ಅವುಗಳಿಂದಲೇ ಮಾಪಳೆ ಜನರು ಸಂತಪ್ತರಾಗಿ ಅನನ್ವಿತ ಪ್ರಕಾರಗಳನ್ನು ಆಚರಿಸಿದ್ದು ತಿಳಿಯುತ್ತದೆ. ಈ ಬಾತ್ಮಿಯು ಎಷ್ಟು ವಿಶ್ವಸನೀಯವೆಂಬುದು ಹೇಳಲಾಗದು. ಯಾವದೇ ಕಾರಣದಿಂದ ಈ ದಂಗೆಯು ಹುಟ್ಟಿದ್ದರೂ, ಅದನ್ನು ಬಹು ಜಾಗ್ರತೆಯಿಂದ ಶಾಂತ ಮಾಡುವದೇ ಲೇಸು. ಲಷ್ಕರಿ ಸಹಾಯದಿಂದ ಇಂಥ ದಂಗೆಗಳನ್ನು ಅಡಗಿಸಲಿಕ್ಕೆ ಸರಕಾರಕ್ಕೆ ಸಾಮರ್ಥ್ಯವಿದೆಂದು ಎಲ್ಲರೂ ಬಲ್ಲರು. ಆದರೆ ಸಾಮ-ದಾನ-ದಿಂದಾಗಿ, ಶಸ್ತ್ರ ಚಲಿಸದಂತೆ ಮಾಡುವದನ್ನು ಕೈಕೊಳ್ಳುವದು ಶ್ರೇಯಸ್ಕರವಲ್ಲವೇ? ಅದಕ್ಕಾಗಿ ಅಧಿಕಾರಿಗಳು ವಿಚಾರವಶರಾಗಬೇಕೆಂದು ಎಲ್ಲರೂ ಇಚ್ಛಿಸುವರು.

ಪಕ್ಷಿಸು ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪುಷ್ಟಿಯಾಗಿ ಶರೀರವು ಕಾಂತಿಗೊಳ್ಳುವದು. ಇದಲ್ಲದೆ ಕೆಮ್ಮು, ದಮ್ಮು, ಕಫ, ವಾತ, ಪಿತ್ತ, ನಿದ್ರೆ, ಇಲ್ಲಾಗೋಣ, ಮಲವಿಸರ್ಜನೆ ಸರಿಯಾಗಿ ಆಗದಿರೂದು, ಅಜೀರ್ಣ ಜ್ವರ, ಸ್ತ್ರೀಯರ ಗರ್ಭರೋಗ ಮುಂತಾದ ಎಲ್ಲಾ ಬೇನೆಗಳ ಬೇಗನೆ ಗುಣಹೊಂದುವವು. ಉಪಯೋಗಿಸಿ ನೋಡಿರಿ. ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧.

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ ಡಿಪೋ, ಕುಮಟಾ (ಕಾನಡಾ)

ವಿವಿಧ ವರ್ತಮಾನ.

ಯುವರಾಜರ ಸ್ವಾಗತಕ್ಕಾಗಿ ಪ್ರಾರ್ಥನೆಯೊಂದನ್ನು ಕೈಕೊಳ್ಳಬೇಕೆಂದು ಕಳೆದ ಬುಧವಾರದಿವಸ ಕಲಕತ್ತೆಯ ಶೆರಿಫ ಸಾಹೇಬರ ನಿಮಂತ್ರಣದಮೇರೆಗೆ ಟಾಉನಹಾಲಿನಲ್ಲಿ ಒಂದು ಸಾರ್ವಜನಿಕ ಸಭೆ ನೆರೆಯುವದಿತ್ತು. ಸಭೆಗೆ ಅಸಹಕಾರಿತಾವಾದಿಗಳ ಬಹುಮತವು ಕಂಡುಬಂದದ್ದರಿಂದ, ಕಲಕತ್ತೆಯ ಶೆರಿಫ ಸಾಹೇಬರು ತಮ್ಮ ಸಾರ್ವಜನಿಕ ಸಭೆಯ ಸ್ಥಳವನ್ನು ಅಲ್ಲಿಯೇ ಬದಲಿಸಿ, ಟೌನಹಾಲಿನ ಜಗಲಿಯಮೇಲೆ ಬಂಗಾಲ ಗವರ್ನರರ ಅಧ್ಯಕ್ಷತೆಯಲ್ಲಿ ಸಭೆ ನೆರವೇರಿಸಿದರು. ಈ 'ಸಾರ್ವಜನಿಕ' ಸಭೆಗೆ ಯುರೋಪಿಯನರಿಗೆ, ಯುವರಾಜರ ಆಗಮನವನ್ನು ಸ್ವಾಗತೀಕರಿಸಲಿಚ್ಛಿಸುವವರಿಗೆಮಾತ್ರ ಮುಕ್ತದ್ವಾರವಿತ್ತು. ಅನ್ಯರ‍್ಯಾರಾದರೂ ಒಳಹೋಗದಂತೆ ಸಶಸ್ತ್ರ ಪೋಲೀಸ ಪಹಾರೆ ಇಟ್ಟಿದ್ದರು. ಟಾಉನಹಾಲಿನಲ್ಲಿ ನೆರೆದ ಸಭೆಯು ಅಧ್ಯಕ್ಷಸ್ಥಾನವನ್ನು ಶ್ರೀ| ಚಿತ್ತರಂಜನದಾಸರವರು ಸ್ವೀಕರಿಸಿ ಬಹಿಷ್ಕಾರವನ್ನು ಸ್ವೀಕರಿಸುವ ಠರಾವನ್ನು ಮಂಜೂರ ಮಾಡಿದರು. ಗವರ್ನರರ 'ಸಾರ್ವಜನಿಕ' ಸಭೆಯ ಮತವು ಕಲಕತ್ತೆಯ ನಾಗರಿಕರ ಮತವೋ? ಚಿತ್ತರಂಜನದಾಸರವರ ಸಭೆಯ ಮತವು ಕಲಕತ್ತೆಯದೋ?

ಪಂಜಾಬದಲ್ಲಿ ಬರ ನಿವಾರಣಕಾಗಿ ಅಲ್ಲಿಯ ಪ್ರಾಂತಿಕ ಕಾಂಗ್ರೆಸಕಮೀಟಿಯು ರೂ ೩೫,೦೦೦ ಗಳನ್ನು ಮಂಜೂರಮಾಡಿರುವದು. ಈ ರಕಮನ್ನು ಮಹಾಳಗ್ರಸ್ತರಿಗೆ ಕೈಮಾಟಗಳನ್ನು ಪೂರೈಸಿ, ಅವರು ತಯಾರಿಸಿದ ನೂಲನ್ನು ಕ್ರಯಕ್ಕೆ ಪಡೆದು ಅವರಲ್ಲಿ ಉಪಯೋಗವಾಗುವವರಿದ್ದಾರಂತೆ!

ಕಲಕತ್ತೆಯ ಮಾರವಾಡೀ ಒಸ್ತೀ ಸಾವಕಾರರು ವಿದೇಶೀ ಅರಿವೆಯನ್ನು ಬಹಿಷ್ಕರಿಸುವ ಪ್ರತಿಜ್ಞೆ ಕೊಂಡಿರುವರು!

ಮಹಾತ್ಮಾಗಾಂಧಿ, ಮೌಲಾನಾ ಮಹಮ್ಮದಅಲ್ಲೀ ಮತ್ತು ಅವರ ಪತ್ನಿಯವರು, ಮಧ್ಯಪ್ರಾಂತದ ಶೇಟ ಜಮನಲಾಲ ಬಜಾಜ ಇವರು ಆಸಾಮಿನಲ್ಲಿ ರಾಷ್ಟ್ರೀಯ ಕೆಲಸದಮೇಲೆ ತಿರುಗಾಡುತ್ತಿರುವರು. ಮಹಾತ್ಮಾಗಾಂಧಿಯವರಿಗೆ ಪ್ರತಿ ಸ್ಟೇಶನಿನಲ್ಲಿ ಪ್ರಚಂಡ ಸ್ವಾಗತವಾಗುವ ಸುದ್ದಿಗಳು ಆಗಾಗ್ಗೆ ಬರುತ್ತಿವೆ. ಮಹಾತ್ಮರು ಕಲಕತ್ತೆಗೆ ಸಪ್ಟಂಬರ ೫ ನೇ ತಾರೀಖಿಗೆ ಬಂದು ಮುಟ್ಟುವರು.

ತ್ರಿವೇಂದ್ರಮದಲ್ಲಿಯ ಸ್ಕೂಲು, ಕಾಲೇಜುಗಳ ಸುಮಾರು ೫ ಸಾವಿರ ವಿದ್ಯಾರ್ಥಿಗಳು ಶಾಲೆಯ ಫೀ ಏರಿಸಿದರೆಂದು ಕಳೆದ ೨೫ ನೇ ತಾರೀಖಿಗೆ ಸಂಪುಮಾಡಿರುವರು. ಸಾಯಂಕಾಲಕ್ಕೆ ಅಲ್ಲಿ ಕಾಂಗ್ರೆಸ-ಕಮೀಟಿಯ ಅಧ್ಯಕ್ಷತೆಯಲ್ಲಿ ಸಭೆನೆರೆದು, ಈಬಗ್ಗೆ ಸರಕಾರಕ್ಕೆ ಮನವಿಮಾಡುವ ಠರಾವು ಪಾಸಾಯಿತು. ಸರಕಾರದ ನಿರ್ಣಯವಾಗುವವರೆಗೆ ಸಂಪು ಚಾಲೂಇಡಬೇಕಾಗಿಯೂ ಠರಾವು ಆಗಿರುವದು. ಇತರೇ ಭಾಗಗಳಲ್ಲಿ ಸಹ ವಿದ್ಯಾರ್ಥಿಗಳು ಸಂಪುಮಾಡಿರುವರೆಂದು ಸುದ್ದಿ ಇದೆ.

ಕಲಕತ್ತೆಯ ಮ್ಯುನಿಸಿಪಲ ಪ್ರಕರಣದಲ್ಲಿ ಸರ ಥೋಮಸ ಹಾಲಂಡ ಸಾಹೇಬರು ರಾಜಿನಾಮೆಕೊಟ್ಟಿರುವ ಸುದ್ದಿ ಇದೆಂದು ಮುಂಬಯಿಯ ಟೈಮ್ಸ ಆಫ ಇಂಡಿಯಾದಿಂದ ತಿಳಿಯುತ್ತಿದೆ.

ಮುಂಬಯಿಯಲ್ಲಿ ಈಗ ವ್ಯವಸ್ಥಿತರೀತಿಯಿಂದ ಪಿಕೆಟಿಂಗ ಚಳವಳಿಗೆ ಪ್ರಾರಂಭವಾಗಿದೆ ಪಿಕೆಟಿಂಗ ಚಳವಳಿಯಲ್ಲಿ ಸನ್ಮಾನ್ಯ ಸ್ತ್ರೀಯರೂ, ಗೃಹಸ್ಥರೂ, ವಕೀಲರೂ ಸ್ವಯಂಸೇವಕರಾಗಿರುವರು ಮಿ। ಉಮರ ಸೋಬಾನಿ ಮೌಲಾನಾ ಶೌಕತಅಲ್ಲಿ, ಸೌ। ಸರೋಜಿನಿನಾಯಡು ಮೊದಲಾದ ಅಗ್ರಣಿಗಳು ಈ ಚಳವಳಿಯ ನೇತೃತ್ವವನ್ನು ಕೈಕೊಂಡಿರುವರು

'ಗೋದಾವರೀ ಜಿಲ್ಲೆಯ ಕಲೆಕ್ಟರರು ಮಿತಿಮೀರಿದ ಜಾಮೀನ ಮುಚ್ಚಳಿಕೆ ಕೊಡಲಿಕ್ಕೆ ನಿರಾಕರಿಸಿದ ಮೂಲಕ ಕೋಕೋನಾಡದ ಮಿ। ಮಹಮದ ಸಮನೋ ಸಾಹೇಬ ಇವರಿಗೆ ದಂಡಕೊಡಬೇಕೆಂದು ಅಥವಾ ಕಾರಾಗೃಹ ಶಿಕ್ಷೆ ವಿಧಿಸಿರುವರಂತೆ ಸಾಹೇಬರು ಬೇಕಾಯಿದೇಶೀರ ತೆರಿಗೆಯನ್ನು ತೆತ್ತು ಸ್ವಾತಂತ್ರ್ಯ ಸಂಪಾದಿಸುವದಕ್ಕಿಂತ ಶಾಂತರೀತಿಯಿಂದ ಜೈಲಿಗೆ ಪಯಣಮಾಡಿದರಂತೆ'

ಸಿದ್ದಾಪುರದ ಪತ್ರ.

೨೦ ನೇ ಶತಮಾನದ ಈ ಸ್ವಾತಂತ್ರ್ಯದ ಯುಗದಲ್ಲಿ ಜಗತ್ತಿನೊಳಗಿನ ಪ್ರತಿಯೊಬ್ಬ ಮನುಷ್ಯನು ಸ್ವತಂತ್ರತೆ ಇದು ಸುಸದು ಮಾನವೀ ಜಾತಿಯ ನೈಸರ್ಗಿಕ ಹಕ್ಕಾಗಿರುವದು ಆದರಂತೆ ನಮ್ಮ ಬರಹವಿಂದದ ನಿವಾಸಿಗಳು ಪ್ರಯತ್ನಿಸುವದು ಜಗಪ್ರಸಿದ್ಧವಷ್ಟೇ' ಮಹಾತ್ಮಾ ಗಾಂಧಿಯವರ ಸಂದೇಶದಂತೆ, ಪಂಚಮಿಪಡದ ನಿವಾಸಿಗಳೆಲ್ಲರೂ ಆಚರಿಸುವಂತೆ, ನಮ್ಮ ಸಿದ್ದಾಪೂರ ತಾಲೂಕಿನ ಕೋಲಸಿ, ಚವಗಾರ, ಹಲೇಪೈಕ ಮುಸಲ್ಮಾನ, ಮಡಿವಾಳ, ಬ್ರಾಹ್ಮಣ ಮೊದಲಾದ ಎಲ್ಲಮತದವರು ಕಾಂಗ್ರೆಸ ಮೆಂಬರರಾಗಿ, ಕಾಂಗ್ರೆಸದ ಆಜ್ಞೆಯಂತೆ ನಡೆಯುತ್ತಿರುವರು ಆದರೆ ನಮ್ಮ ಸಹೋದರರಂತಿರುವ ಲಿಂಗಾಯತ ಬಾಂಧವರು ಮಾನವೀಜಾತಿಯ ನೈಸರ್ಗಿಕ ಹಕ್ಕಿಗೆ ಕಲಂಕವನ್ನುಂಟುಮಾಡುವಂಥ ಮತ್ತು ತಮ್ಮ ಮನುಷ್ಯತ್ವವನ್ನೇ ಅಲ್ಲಗಳೆಯುವಂಥ ನಡತೆ ಅಂದರೆ, ಸಹಕಾರಿಗಳಂಥ ಹುಚ್ಚುತನದ ಹುಚ್ಚಿಗೆ ಬಿದ್ದಿರುವದನ್ನು ನೋಡಿದರೆ, ಅತಿ ಖೇದವಾಗುತ್ತದೆ ಕೆಲಕರವ್ರು ಹುಟ್ಟುವದರಲ್ಲಿ ಸಂದೇಹವಿಲ್ಲ ಆದರಲ್ಲಿಯೂ ದೊಡ್ಡ ಮುನಿಸಿಪಾಲಿಟಿಯ ಸದಸ್ಯರಾದ ಚನ್ನಪ್ಪಗೌಡ ಹೆಗ್ಗೋಡಮನೆ, ದೊಡ್ಡಣ್ಣಯ್ಯಗೌಡ ಹೂಸೂರ ಇವರೀರ್ವರು ತಮ್ಮ ಸಮಾಜದ ಮುಂದಾಳುಗಳೆನಿಸಿಕೊಂಡು ಈ ಭ್ಯರಾಕ್ರಸಿಕ ಸರಕಾರಕ್ಕೆ ಸಹಾಯಮಾಡುವ ರೀತಿಯನ್ನು ನೋಡಿದರೆ, ಯಾರಿಗೆ ನಗೆಬರಲಿಕ್ಕಿಲ್ಲ? ಈ ಒಂದುದ್ಯಮದ ಕೆಲಸನೋಡಿರಿ' ಶಾನುಭೋಗರು ಸಂಪುಮಾಡಿ ಕೆಲಸಬಿಟ್ಟಾಗ, ಹೊಸ ಉಮೇದವಾರರನ್ನು ತಂದೊಟ್ಟಿದರು ಪಾಟೀಲರು ಕೆಲಸಬಿಡಬೇಕೆಂದು ಆಲೋಚಿಸಿದಾಗ ಹೊಸ ಪಟೇಲರನ್ನು ಸಿದ್ಧಮಾಡಿದರು ಹೊಲದಲ್ಲಿ ಪೈರುಬಾರದೆ ರೈತರು ಹತ್ತಿಕೊಡಬಾರದೆಂದು ಹೇಳಿದಾಗ, ಊರೊರು ತಿರುಗಿ, ಜುಲಮದಸ್ತಿಯಿಂದ ಹಣ ವಸೂಲಮಾಡುವ ಕೆಲಸದಲ್ಲಿ ಮುದ್ದಾಮ್ ಪಂಚರಾಗಲಿಕ್ಕೂ, ಜಪ್ತಿ ಮಾಲು ಹರಾಜಿನ ಸವಾಲುದಾರರಾಗಲಿಕ್ಕೂ ಸಿದ್ಧರಾದರು. ಸ್ಕೂಲಿನ ಫೀ ವಸೂಲ ಮಾಡುವ ಕೆಲಸದ ಗಾರ್ಡರ ಜಿಸ್ತು ಕಟ್ಟಿ ಹತ್ತೂ ಕೈ ತಿರುಗಾಡುವರು. ಅಸಹಕಾರಿತೆಯ ಪ್ರಚಾರಿಗಳ ಸಭೆ ಕೂಡಿದಾಗ, ಇಲ್ಲದ ಸಲ್ಲದ ಸುಳ್ಳು ಮಾತುಗಳ ಸೃಷ್ಟಿ, ಗದ್ದಲ ಎಬ್ಬಿಸುವರ ಅಯ್ಯೋ ಬಾಂಧವರೇ, ಇದರಿಂದ ನಿಮಗೆ ದೊರೆಯುವದೇನು ರೈತರ ಹೊಟ್ಟೆ ಹೊಡೆಯಬಾರದೆಂದು ಸಹಜ, ನಿಮ್ಮ ಬೇಡಿಕೆಯು ಒಹು ಮೌಲ್ಯವಾದುದಲ್ಲವೇ ಅದಕ್ಕೆ ಎಷ್ಟು ಭಾರವಿರುವದ? ಅದರ ತಿಳಿಯುತ್ತೀರಾ? ನಿಮ್ಮದು

ಬಿಳೇಕಾಗದದಮೇಲೆ, ೫-೬ ಅಕ್ಷರಗಳಲ್ಲವೇ ಬೇ' ಇದೆಲ್ಲ ಜಹಾಗೀರಿಯನ್ನು ಪಡೆಯಬೇಕೆನ್ನುತ್ತೀರೋ? ಎಲೈ ಬಾಂಧವರೇ, ಪರದೇಶದ ಈ ಬಿಳೇ ಜನಗಳ ಮಾತಿಗೆ, ಮರುಳುಮಾತಿಗೆ ಮರುಳಾಗಬೇಡಿರಿ ನಿಮಗೆ ಜಹಾಗೀರ ಸಿಗುವದಿಲ್ಲ ಇನಾಮು ಸಿಗುವದಿಲ್ಲ ನಿಮ್ಮಂಥ ಅಂಧರು ಅವರಿಗೆ ಸಿಕ್ಕಿರುವದರಿಂದಲೇ ಅವರ ಜುಲ್ಮಾಟ ಇನ್ನಾದರೂ ಎಚ್ಚರರಾಗಿರಿ ಮನುಷ್ಯರಾಗಿರಿ ನಿಮ್ಮ ಬಾಂಧವರು ಮಾಡುವ ರಾಷ್ಟ್ರೀಯಕಾರ್ಯಕ್ಕೆ ನೆರವಾಗಿರಿ. ಸಮಾಜದ ಪ್ರಚಾರಿಗಳೆಂದು ಸ್ವಾರ್ಥವನ್ನು ಬಯಸದೆ ನಿಮ್ಮ ಅಸ್ಪೃಶ್ಯರಾದ ಬಡಜನಗಳನ್ನು ಸಹ ರಾಷ್ಟ್ರಕಾರ್ಯಕ್ಕೆ ನೆರವಾಗುವಂತೆ ಮಾಡಿರಿ ಇದರಿಂದಲೇ ನಿಮ್ಮ ಕೀರ್ತಿ ನಿಮಗೆ ಸ್ವರ್ಗ ಬೇಸರಾಗಬೇಡಿರಿ

ಒಬ್ಬ ದೇಶಬಾಂಧವನು.

ಪುನಃ ಜಂಗಲಕಮಿಟಿ.

(ನಮ್ಮ ಮುಂಬಯಿಯ ಪತ್ರಕಾರರಿಂದ

ಇಲ್ಲಿ ಪುನಃ ಜಂಗಲ ಕಮಿಟಿಯ ಪ್ರಸ್ತಾವವು ಪ್ರಾರಂಭವಾಗಿದೆ ಕಳೆದ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿ ಜಂಗಲ ಕಮಿಟಿಯ ಒಪ್ಪಿಗೆರಾದ ಸಾವಕಾರ ಕೆಪ್ಪನ ಪರ್ಯಂತಿಕರವರು 'ಕಮಿಟಿಯನ್ನು ಯಾವಾಗ ನೇಮಿಸಿರಿ' ಎಂಬರ್ಥದ ಸವಾಲು ಮಾಡಲು, ಅದಕ್ಕೆ ಸರಕಾರವು 'ನಾಳೆ ಗಾಲ ಮುಗಿದಮೇಲೆ ಸಮಯೋಚಿತವಾಗುವದೆಂದು ಉತ್ತರ ಕೊಟ್ಟರು. ಬಿಟ್ಟಿ ಚಾತುರ್ಮಾಸವಾದ ಮೇಲೆ ಕಮಿಟಿಯ ನೇಮಣೂಕಿಯಾಗುವದೆಂದು ಪ್ರಕಟಿಸಿದ ಭವಿಷ್ಯವು ನಿಜವಾಯಿತು ಇರಲಿ

ಮಳೆಗಾಲವಂತೂ ತೀರುತ್ತ ಬಂತು ಕಳೆದ ಮಾರ್ಚ-ಎಪ್ರಿಲ ತಿಂಗಳಲ್ಲಿ ನಡೆದ ಆ ಕಮಿಶನರೀ ಭಾಗಗಳಿಗೆ ಯಾರಿಗೆ ನೇಮಿಸುವದು ಎಂಬ ಚರ್ಚೆ ಪುನಃ ಕೌನ್ಸಿಲ್ಲಿನಲ್ಲಿ ಇಲ್ಲಿಂದಿಲ್ಲೇ ನಡೆಯುತ್ತಿದೆ. ಫಲಪ್ರಾಪ್ತಿಗಿಂತ ಒಟ್ಟು ಕಮಿಟಿಯ ಯಶಸ್ವಿತೆಯನ್ನು ಹ್ಯಾಗ ಸಾಧಿಸುವದು, ಎಂಬ ಒಂದು ಚಿಂತೆಯೇ ಕಮಿಟಿ ಪುರಸ್ಕರ್ತರಿಗೆ ಬಾಧಿಸುತ್ತಿದೆ. ಕಮಿಟಿ ನೇಮಿಸಿ, ಜಂಗಲ ಉಪದ್ರವಗಳನ್ನು ದೂರ ಮಾಡುವ ವಚನಕೊಟ್ಟ ದಿವಾಣ ಮೇಘಾಣವರಿಗೆ ಅಷ್ಟೇನು ಕಾಳಜಿ ಇಲ್ಲ. "ಸ್ವತಂತ್ರ, ವಿಚಾರಿ," ಗೃಹಸ್ಥರೆಂದು ತೋರಿಸುವ ಕ್ಲಾಸದಿಗರೊಬ್ಬರ ಆಗಮನವು ಇಲ್ಲಿಗಾದಂದಿನಿಂದ, ಕಮಿಟಿಯ ನೇಮಣೂಕಿಯ ಬಗ್ಗೆ ವಿಶೇಷ ಕಾರಸ್ಥಾನಗಳು ನಡೆಯುತ್ತಿವೆ ಜಂಗಲ ಉಪದ್ರವಗಳ ನಿವಾರಣೆಯು ಬೇಕಾದಾಗ ಆಗಲಿ, 'ಕಮಿಟಿಯ ನಿರ್ಣಯಗಳು ಅನುಕೂಲವಾಗಲಿ, ಪ್ರತಿಕೂಲವಾಗಲಿ, "ಕಮಿಟಿ ನೇಮಿಸಿರಿ," 'ಕಮಿಟಿ ನೇಮಿಸಿರಿ" ಎಂದು ಇವರು ಮುದ್ದಣ್ಣನ ಹಟ ಹಿಡಿದು, ಕೂತುಕೊಂಡಿರುವರಂತೆ! 'ಇವರು ಕಮಿಶನರೀ ಜಾಗೆಗೆ ಬೇಡೆನ್ನುತ್ತೀರೋ? 'ಅವರನ್ನು ನೇಮಿಸಿರಿ," ಈ ಕಮಿಶನರೀ ಹುದ್ದೆಗಳನ್ನು ಹೇಳುವವರಲ್ಲಿ ಕೊನ್ನಾಪುರದ ಶ್ರೀ ಶಾಸ್ತ್ರಿಗಳ ಹೆಸರು ಬಿದ್ದ ಹೋಗಿರುವದಂತೆ! ಸರಕಾರವೇ ಅವರ ನೇಮಣೂಕಿಗೆ ಅಡ್ಡಿ ಮಾಡಿತೆಂದು ಸುದ್ದಿಯಿದೆ 'ಇವರು ಒಹಿಷ್ಕಾರ ಹಾಕುವರು, ಅಸಹಕಾರಿತೆಗೆ ಹೊಸ ಚಾಳಿಸೆ ಕಿಕ್ಕೀತು,' ಎಂದು ಹೇಳಿದರೆ 'ಯಾರೂ ಬಂದು ಸಾಕ್ಷಿ ಕೊಡುವರು,' ಎಂದು ಇವರು ಉತ್ತರಿಸುತ್ತಾರಂತೆ! ಇಂಥ ದುರಾಗ್ರಹೀ ವಿಚಾರಿಗಳ ಮನಸ್ಥಿತಿಯೇ ತಿಳಿಯಲೊಲ್ಲದು. !

ಆದರೆ, ಒಂದು ಸಂಗತಿಯು ಅಸಹಕಾರಿತಾವಾದಿಗಳಿಗೆ ಅನುಕೂಲವಾಗಿರುವದು ಕಳೆದ ಎಪ್ರಿಲ ತಿಂಗಳಲ್ಲಿ ಕಮಿಟಿಯ ನೇಮಣೂಕಿಯನ್ನು ಆದರಿಸಿದವರಲ್ಲಿ ಸಹ ಎರಡು ಪಕ್ಷಗಳಾಗಿರುವವಂತೆ! ಕಳೆದ ವಾರ ನೆರೆದ ಇಲ್ಲಿಯ ಕೆನರಾ ಪ್ರೋಗ್ರೆಸ್ಸ ಕಮಿಟಿಯಲ್ಲಿ ಎರಡೂ ಪಕ್ಷಗಳು ತಮ್ಮ ತಮ್ಮ ವಿಚಾರಗಳನ್ನು ಸಪ್ರಮಾಣ ಸಯುಕ್ತಿಕ ರೀತಿಯಿಂದ ಪ್ರತಿಪಾದಿಸಿದರಂತೆ' ತತ್ವಬೋಧವು — ಸ್ಪಷ್ಟ ನಿರ್ಣಯವಾಗದಿದ್ದರೂ — ಕಮಿಟಿ ಬೇಡೆನ್ನುವವರಿಗೆ ಬಿತ್ತೆಂದು ತಿಳಿಯುತ್ತದೆ ಕಮಿಟಿಯು ಬೇಕೆನ್ನುವವರಲ್ಲಿ, 'ಕಮಿಟಿಯ ಸ್ವಾಗತದ ಬಗ್ಗೆ ನಾನು ಜವಾಬದಾರನಿರುತ್ತೇನೆಂದು' ಜಂಬ ಒಡಿಯುವ ಗೃಹಸ್ಥರೂ ಸಹ ಇದ್ದರಂತೆ! ಕೆಲವರು ಕಮಿಟಿಯ ನೇಮಣೂಕಿಯಾದರೆ, ಅಸಹಕಾರಿತೆಯ ಹಾವಳಿಯು ಮುಗಿಲಾಗುವದೆಂದು ಅಭಿಪ್ರಾಯ ಪಟ್ಟರೆ, ಇನ್ನು ಕೆಲವರು, ಕಮಿಟಿಯ ಚೌಕಶಿಯಾಗಿ ಅದರ ಶಿಫಾರಸುಗಳಾಗಿ, ಅವುಗಳಮೇಲೆ ದಿವಾಣರ ಮುಖಲಾತಿ ಆಗಿ, ಸವಲತುಗಳು ಜನರ ಕೈಸೇರುವವರೆಗೆ ಕಾನಡಾ ಜಿಲ್ಲೆಯಲ್ಲಿ ಜನ ವಸ್ತಿಯು ನಾಮಶೇಷವಾಗಿ, ಹುಲಿ-ಹಂದಿಗಳ ಸಾಮ್ರಾಜ್ಯವು ನೆಲೆಗೊಳ್ಳುವದೆಂದು ಭೀತಿಪಡುತ್ತಾರೆ, ಇನ್ನು ಕೆಲವರು ಕಮಿಟಿಯೆಂದರೆ, ಅದೊಂದು ದೇಸಾಯಿ—ಜಂಗಲ ಖಾತೆಗಳ ರಾಜಿಯು. ಅದರೊಳಗೆ 'ನೀವಿಷ್ಟು ಬಿಡಿರಿ, ನಾವಿಷ್ಟು ಬಿಡುತ್ತೇವೆ,' ಎಂದು ಒಂದು ಕರಾರು ಮಾಡಿಕೊಂಡು, ಜನರ ಪೂರ್ವಾಪರ ಹಕ್ಕುಗಳನ್ನು ಕುಗ್ಗಿಸುವ ಉಪಾಯವೊಂದಿದು, ಅದನ್ನು ನಾವು ಸ್ವಾಗತೀಕರಿಸಿದರೆ, ಕಡೆಗೆ ನಮಗೇ ಇನ್ನೇನಾದರೂ ಸನದಶೀರ ಚಳವಳಿ ಮಾಡಲಿಕ್ಕೆ ಅಡ್ಡಿಯಾಗುವದೆಂದು, ಸನದಶೀರ ಚಳವಳಿಯ ಧಂದೆಯವರು ಉದ್ಗರಿಸಿದರಂತೆ! 'ನಾವಿರ ಸುತ್ತು ಒಂದು ಗಂಟು' ಕಮಿಟಿಯು ಬೇಡವೆಂಬ ಅಸಹಕಾರಿತಾವಾದಿಗಳ ಮತವೇ ನಿಜವಾದ ಧೋರಣವೆಂದು ಈಗ ಅನುಭವದಿಂದ ಕಂಡುಬಂದದೆ ಸರಕಾರವು ಏನೂ ಮಾಡಲಿ; ನಮಗೆ ಅದರ ಗೊಡವೆ ಏನಿಲ್ಲ ಆದರೆ ಕಮಿಟಿಯ ನೇಮಣೂಕಿಯ ಠರಾವು ಪಾಸಾದ ಕೂಡಲೆ, ಜಂಗಲಚಳವಳಿಯು ಯಶಸ್ವಿಯಾಯಿತೆಂದು ಕುಣಿಯುವವರಲ್ಲಿಯೇ ಈಗ ನಿಜವಾದ ರಹಸ್ಯವು ಹೊಳೆಯಹತ್ತಿದೆಂಬ ಮಾತು ಅಭಿನಂದನೀಯವು.

ಕಾಂಗ್ರೆಸ್ ಪಕ್ಷದವರಂತೂ ಕಮಿಟಿ ಬಹಿಷ್ಕಾರದ ಧೋರಣವನ್ನು ಅನುಸರಿಸುವರು ಅವರ ಬರುವಿಕೆಯಲ್ಲೇ ಧೋರಣವಾಯಿತು ಜಂಗಲ ಸುರಾಜ್ಯವನ್ನು ನಿಷೇಧಿಸಿ, ಇನ್ನು ನಾಲಸು. ನಾವೀಗ ನಮ್ಮ ಹಕ್ಕುಗಳ್ಯಾವವು? ಎಂಬುದನ್ನು ಪರಿಶೋಧಿಸಿ, ಅವನ್ನು ಎಲ್ಲ ಜನರ ತಿಳುವಳಿಕೆಗೋಸ್ಕರ ಪ್ರಕಟಿಸಬೇಕು ಈಗ ಎಲ್ಲ ತಾಲೂಕುಗಳಲ್ಲಿ ಕಾಂಗ್ರೆಸ್ಸು-ಕಮಿಟಿಗಳು ಸ್ಥಾಪನೆಯಾಗಿವೆ, ಅವುಗಳಿಂದ ಪ್ರತಿನಿಧಿಗಳ ಚುನಾವಣೆಯಾಗಿ ಡಿಸ್ಟ್ರಿಕ್ಟ ಕಮಿಟಿಯು ಸಹ ನಿರ್ಮಾಣಿಸಲ್ಪಟ್ಟಿದೆ ಈ ಕಮಿಟಿಯಲ್ಲಿ ಜಿಲ್ಲೆಯ ಎಲ್ಲ ಮುಖಂಡರು ಏಕತ್ರಿತರಾಗಿರುವರು ಇವರು ಒಂದು ಜಾಹಾ ಸಭೆ ನೇರಿ, ಜಂಗಲ ಸ್ವರಾಜ್ಯದ ಒಂದು ಸ್ಕೀಮು ಯೋಜನೆಯನ್ನು ಪ್ರಕಟಿಸಬೇಕು ಅದರ ಮೇಲೆ ಯೋಗ್ಯ ಟೀಕೆಯಾದ ಮೇಲೆ, ಅದರೊಳಗೆ ಯೋಗ್ಯ ಕೇಡ

ಶಿಸ್ತುಪಾಠಗಳನ್ನು ಮಾಡಿ ' ನಮ್ಮ ಹಕ್ಕುಗಳಿವು ' 'ಇವು ನಮಗೆ ಬೇಕು.' ಧರ್ಮಕ್ಕೆ ಕೊಟ್ಟ ಸವಲತ್ತುಗಳಿಂದ ನಮ್ಮ ಸಮಾಧಾನವಾಗದು ಎಂದು ಸ್ಪಷ್ಟವಾಗಿ ಜಾಹೀರು ಪಡಿಸಬೇಕು. ಒಂಗಲು ಕಮಿಟಿಯು ಬರಲಿ, ಹೋಗಲಿ, ಅದರ ಗೊಡವೆ ನಮಗೇಕೆ? ನಮಗೇನು ಬೇಕು ? ' ಎಂಬವನ್ನು ನಾವು ಜಾಹೀರು ಪಡಿಸಿದರಾಯಿತು.

ವಿಚಾರತರಂಗ.

ಲೇಖಕ:— ನಿರೀಕ್ಷಕ.

(೩ ನೇ ಪಾನಿನಮೇಲಿಂದ ಮುಂದರಿಸಿದ್ದು.)

ವ ನೌಕರರಿಗೆ ಹಿಂದುಸ್ಥಾನವನ್ನು ಬಹು ಜಾಣತನದಿಂದ, ಬಲು ಕುಶಲತೆಯಿಂದ ಆಳುತ್ತಾರೆಂದು ಸರ್ಟಿಫಿಕೇಟಿನಮೇಲೆ ಸರ್ಟಿಫಿಕೇಟುಗಳು ' ಯಜಮಾನರಿಗೆ ಕುಳಿಯುವ ನೌಕರರಿಗೆ ಮನೆಯಲ್ಲಿ ಇಟ್ಟುಕೊಂಡರೆ, ಮನೆಯ ಸ್ಥಿತಿಯು ಎಷ್ಟು ಕರುಣಾಸ್ಪದವಾದೀತೆಂದು ಹೇಳಬೇಕೇನು '

*   *   *   *

ಲಾಹೋರದ ಮುನಸಿಪಾಲಟಿಯು ಯುವರಾಜರ ಆಗಮನವನ್ನು ಬಹಿಷ್ಕರಿಸುವ ಠರಾವುಮಾಡಿ, ಸ್ಥಾನಿಕ ಸ್ವರಾಜ್ಯದ ಸಂಸ್ಥೆಗಳಿಗೆ ಮಾದರಿಯನ್ನು ಹಾಕಿಕೊಟ್ಟಿರುವದು ಇದೇ ಮುನಸಿಪಾಲಟಿಯು ಲೋಕಪಕ್ಷಕ್ಕೆ ವಿರುದ್ಧವಾಗಿ ವರ್ತಿಸಿ, ಹಿಂದೀಜನತೆಗೆ ಆಗಾಗ್ಗೆ ಅಪಮಾನಮಾಡುವ ಸಿವಿಲ—ಮಿಲಿಟರಿ— ನೇಟಿ ಮುಂತಾದ ವೃತ್ತಪತ್ರಗಳಿಗೆ ಮುನಸಿಪಾಲಟಿಯ ಜಾಹೀರಾತುಗಳನ್ನು ಕೊಡಬಾರದೆಂದು ಇನ್ನೊಂದು ನಿರ್ಣಯವನ್ನು ಮಾಡಿರುವದು. ಪಂಜಾಬದ ಯುರೋಪಿಯನ ವ್ಯಾಪಾರಿಗಳ ಪಂಜಾಬ ವ್ಯಾಪಾರಿ ಸಂಘವು ಮುನಸಿಪಾಲಟಿಯ ಠರಾವನ್ನು ನಿಷೇಧಿಸಿ, ಈ ಬಗ್ಗೆ ಯೋಗ್ಯ ಇಲಾಜು ಕೈಕೊಳ್ಳಬೇಕಾಗಿ ಸರಕಾರಕ್ಕೆ ಬಿನ್ನೈಸಿರುವರು. ಪಂಜಾಬ ಸರಕಾರವು ಮುನಸಿಪಾಲಟಿ ಠರಾವನ್ನು ರದ್ದುಪಡಿಸಿ, ಸ್ಥಾನಿಕ-ಸ್ವರಾಜ್ಯದ ವಿಡಂಬನೆಯನ್ನು ಮಾಡುತ್ತದೋ ಏನೋ ನೋಡಬೇಕು ಪ್ರತಿಕೂಲ ರಾಜಕೀಯ ಧೋರಣದ ವೃತ್ತಪತ್ರಗಳನ್ನು ಸರಕಾರಿ ಜಾಹೀರಾತುಗಳ ಲಿಸ್ಟಿನಿಂದ ತೆಗೆದುಹಾಕಿ, ತಮ್ಮ ಕೋಪವನ್ನು ಪ್ರದರ್ಶಿಸುವದು ಸರಕಾರದ ಹಾಗು ಅವರ ದೋಸ್ತ ಧಕ್ಕಿರ ಒಂದು ನಿತ್ಯದ ಉಪಾಯವು. ಅದೇ ಅಸ್ತ್ರವನ್ನು ತಿರುಗಿ ಅವರಮೇಲೆಯೇ ಪ್ರತ್ಯಸ್ತ್ರವಾಗಿ ಬಿಟ್ಟುಕೊಟ್ಟರೆ, ಅವರಿಗೆ ಎಷ್ಟು ಸಿಟ್ಟುಬರುತ್ತದೆ ನೋಡಿರಿ ' ವೃತ್ತಪತ್ರಗಳ ಜಾಹೀರಾತಿಯ ಮನ್ನಾಯಿಯನ್ನು ರದ್ದುಪಡಿಸಲು ಇವರು ಸರಕಾರಕ್ಕೆ ಬಿನ್ನೈಸುತ್ತಾರೆ. ರಾಜಕೀಯ ಮತಗಳ ಭಿನ್ನತೆಯಮೂಲಕ, ಸರಕಾರಿ ಜಾಹಿರಾತುಗಳನ್ನು ಲೋಕಪ್ರಿಯ ಪತ್ರಿಕೆಗಳಲ್ಲಿ ಮನ್ನಾಯಿಸುವ ಸರಕಾರವು ಲಾಹೋರ ಮುನಸಿಪಾಲಟಿಯ ಠರಾವನ್ನು ಹ್ಯಾಗೆ ರದ್ದುಪಡಿಸುತ್ತದೆಂದು ನೋಡಬೇಕು !

*   *   *   *

ಲಾಹೋರ ಮುನಸಿಪಾಲಟಿಯಲ್ಲಿ ಇನ್ನೊಂದು ಠರಾವು ಪಾಸಾಗಿರುವದು. ಅವರ ಕೈಕೆಳಗಿನ ಎಲ್ಲ ಸೇವಕರು ಖಾದಿಯ ಯುನಿಫೋರ್ಮನ್ನು ಧರಿಸಬೇಕೆಂದು ಮುನಸಿಪಾಲಿಟಿಯು ನಿರ್ಣಯಮಾಡಿತು ಆದೇಶಾನುಸಾರ, ಈ ಖಾದೀ ಯುನಿಫೋರ್ಮ ಧರಿಸುವ ಪ್ರಸಂಗವು ಅಲ್ಲಿಯ ಫಾಯರ ಬ್ರಿಗೇಡಿನ (ಬೆಂಕಿ ನಂದಿಸುವ ಪಲಟನಿನ) ಸುಪರಿಂಟೆಂಡೆಂಟ ಮಿ। ನ್ಯೂಲೆಂಡರಮೇಲೆ ಬಂತು ಇದನ್ನು ಕೇಳಿ, ಮಿ। ನ್ಯೂಲೆಂಡರು ಖಾದಿಯ ಪೋಷಾಕನ್ನು ಧರಿಸುವದು ತನ್ನ ಸದಸದ್ವಿವೇಕಬುದ್ಧಿಗೆ ಸರಿ ವಿರುದ್ಧವಾಗಿರುತ್ತದೆಂದು ಹೇಳಿ, ರಾಜೀನಾಮೆಯನ್ನು ಕೊಟ್ಟು ಮುಕ್ತರಾಗಿರುವರಂತೆ ! ಈ ಸಾಹೇಬರು ತನಗೆ ಸಿದ್ಧವಿದ್ದ ಯುನಿಫೋರ್ಮನ್ನೇ ಧರಿಸುವ ಮೋಕಳೀಕು ಸಿಗಬೇಕು; ಇಷ್ಟೇ ಅಲ್ಲ, ಯುವರಾಜರ ಬಹಿಷ್ಕಾರವನ್ನು ಲಾಹೋರ ಮುನಸಿಪಾಲಟಿಯು ರದ್ದುಪಡಿಸಬೇಕು. ಅಂದರೆ ಮಾತ್ರ ತಾನು ರಾಜೀನಾಮೆಯನ್ನು ಮರಳಿ ತೆಗೆದುಕೊಳ್ಳುವೆನೆಂದು ಮುನಸಿಪಾಲಟಿಗೆ ತಿಳಿಸಿದರು ' ಇವರ ಗರ್ವನೋಡಿರಿ ' ಬಹ್ಳ ಯುರೋಪಿಯನ ಫಾಯರ ಬ್ರಿಗೇಡ ಸುಪರಿಂಟೆಂಡೆಂಟರ ಜಾಗವನ್ನು ತುಂಬಿಕೊಳ್ಳಲಾರದಷ್ಟು ಪಂಜಾಬವು ನಿವೀರ್ಯವಾಗಿರುವದೆಂದು ಮಿ। ನ್ಯೂಲೆಂಡರವರು ತಿಳಿದಿರುವರೇನು ? ಅದರೆ, ಇದರಮೇಲಿಂದ ಭಾರತಪುತ್ರರು ಒಂದು ಪಾಠಪಡೆಯಬೇಕು ಕೇವಲ ಖಾದಿಯ ಪೋಷಾಕನ್ನು ಧರಿಸುವದು ತನ್ನ ಸದಸದ್ವಿವೇಕಬುದ್ಧಿಗೆ ವಿರುದ್ಧವಾಗಿರುತ್ತದೆಂದು, ತನ್ನ ಜವಾಬದಾರ ಹುದ್ದೆಗೆ ತಿಲಾಂಜಲಿ ಕೊಡುವ ಮಿ। ನ್ಯೂಲೆಂಡರವರ ತ್ಯಾಗಬುದ್ಧಿಯನ್ನು ನಿಜವಾಗಿ ನಮ್ಮ ಸದ್ಯದ ಸ್ವರಾಜ್ಯ ಚಳವಳಿಯಲ್ಲಿ ನಾವು ತೋರಿಸಬೇಕು. ಸ್ವದೇಶಪ್ರೀತಿ ಎಂದರೆ, ಅದೊಂದು ಅಜಬ ಜೀನಸು. ಅದಕ್ಕಾಗಿ ನಮ್ಮ ವೈಯಕ್ತಿಕ ಅನುಕೂಲತೆ-ಅನಾನುಕೂಲತೆಗಳನ್ನು ವಿಚಾರಿಸಬಾರದು ಪ್ರಸಂಗಬಂದರೆ, ನಮ್ಮ ತತ್ವಗಳನ್ನು ಪುರಸ್ಕರಿಸುವದರಲ್ಲಿ ಸಂಸಾರದಮೇಲೆ ತುಳಸೀ ಪತ್ರವಿಡಲಿಕ್ಕೆ ಸಹ ತಯಾರಿರಬೇಕು. ಇಂಥ ಜಾಜ್ವಲ್ಯ ದೇಶಪ್ರೀತಿಯಿಂದಲೇ ಯಾವದೊಂದು ರಾಷ್ಟ್ರವು ಉದಯಕ್ಕೆ ಬರುತ್ತದೆ, ಬೆಳೆ ಹೊಂದುತ್ತದೆ ಮಿ। ನ್ಯೂಲೆಂಡರವರು ನಮ್ಮ ರಾಷ್ಟ್ರೋದಯಕ್ಕೆ ಬೇಕಾಗಿರುವ ವರ್ತನವನ್ನು ಸ್ವಾರ್ಥತ್ಯಾಗಪೂರ್ವಕ ಹಿಂದೀ ಜನರಿಗೆ ಇಟ್ಟಬಗ್ಗೆ ನಾನು ಕೃತಜ್ಞನಾಗಿರುವೆನು ಖಾದೀ ಪೋಷಾಕನ್ನು ಧರಿಸಲಾರೆವೆಂದು ಅವರ ತೋರಿಸಿದ ವರ್ತನವನ್ನು, ನಮ್ಮ ಹಿಂದೀ ಭಾಂಧವರು ಖಾದೀ ಧರಿಸುವದರಲ್ಲಿ, ಸ್ವದೇಶೀ ವ್ರತವನ್ನು ಆಚರಿಸುವದರಲ್ಲಿ ತೋರಿಸಿ, ದೇಶೋದ್ಧಾರಮಾಡ ಬಲ್ಲರೇನು ?

Notice to Investors.

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD, SILVER etc Usual commission is charged. *Please apply to Messrs*

Gunshekhar & Co.
IRANI BUILDINGS,
Tardeo Road,
BOMBAY. 7.
Telegrams- Vaijayanti.

ಸ್ವದೇಶೀ ಕಾರಖಾನೆಗೆ ಉತ್ತೇಜನ
ವಿದೇಶೀ ಪ್ಯಾಲಿಗೆ ಬಹಿಷ್ಕಾರ

ದಿ, ಸ್ವದೇಶಿ ಇಂಕ ಸ್ಟೋರ್ಸ.
ಕರ್ಕಿ ಕೆನರಾ.

ಭಾರತೀಯ ಶಾಯಿ ಗುಳಿಗೆಗಳು.
ವ್ಯಾಪಾರಸ್ಥರಿಂದಲೂ, ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದದ್ದು.

ನಂ ೧ ಉತ್ತಮ ನೀಲಿಕಪ್ಪು ೧೪೪ ಗುಳಿಗೆ ಗ್ರೋಸ ೧ ಕ್ಕೆ ರೂ. ೧-೪-೦. ೬ ಗ್ರೋಸಿಗೆ ರೂ ೫ ೮ ೦. ೧೨ ಗ್ರೋಸಿಗೆ ರೂ. ೧೦-೦-೦. ನಂ ೨. ಗ್ರೋಸ ೧ ಕ್ಕೆ ೦-೧೫-೦. ೬ ಗ್ರೋಸಿಗೆ ರೂ. ೫-೧-೦ ೧೨ ಗ್ರೋಸಿಗೆ ರೂ. ೮-೦.೦. ಕೆಂಪು,-ಹಸರು ಗ್ರೋಸ ೧ ಕ್ಕೆ-ರೂ. ೧-೦-೦ ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನು ೧ ಗ್ರೋಸಿಗಿಂತ ಕಡಿಮೆ ಕಳಿಸುವದಿಲ್ಲ ಇಲ್ಲಿ ದೇಶೀ ಸಾಬೂನು ತಯಾರಾಗುವದು

ಮೈಸೂರ ವಿದ್ವತ್ ಪರೀಕ್ಷೆಯಲ್ಲಿ . ತೇರ್ಗಡೆ ಹೊಂದಿದ

ಸದಾಶಿವ ವಿಶ್ವನಾಥ ಶಾಸ್ತ್ರಿ, ಸಿದ್ಧೇಶ್ವರ.

ಇವರು ವ್ಯಾಕರಣದಲ್ಲಿ ಪೂರ್ವಭಾಗ ಪರೀಕ್ಷೆಕೊಟ್ಟು ಸರ್ಟಿಫಿಕೇಟು ಪಡೆದಿದ್ದಾರೆ. ಅವರನ್ನು ಯಾವದಾದರೊಂದು ಹಾಯಸ್ಕೂಲಿ, ಕೊಲೇಜ ವ ಇತರ ಸಂಸ್ಕೃತ ಪಾಠಶಾಲೆಯಲ್ಲಿ ಇಟ್ಟುಕೊಳ್ಳಬಿಚ್ಛಿಸುವವರು, ಈ ಕೆಳಗಿನ ಪತ್ತೆಗೆ ಪತ್ರ ಬರೆಯಬಹುದು ಅವರಿಗೆ ಇಂಗ್ಲೀಷ ಬರುವದಿಲ್ಲ ಕನ್ನಡದಲ್ಲೇ ಸಂಸ್ಕೃತ ಪರೀಕ್ಷೆ ಕೊಟ್ಟಿರುವರು

ಸದಾಶಿವ ವಿಶ್ವನಾಥ ಶಾಸ್ತ್ರಿ,
ಸಿದ್ಧೇಶ್ವರ, ಪೋಸ್ಟ ಗೋಕರ್ಣ.

ಕಾನಡಾ ಜಿಲ್ಲೆಯೊಳಗಿನ ಪ್ರಯಾಣಸ್ಥರ ಸಲುವಾಗಿ ಹೊಸ ಸುಧಾರಣೆ,

ಅಂದರೆ—

ಗ್ಯಾತೋಂಡೇ ಬ್ರದರ್ಸ, ಕಾರವಾರ ಇವರ ಮೋಟರ ಸರ್ವಿಸ್.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕುಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೮-೧೯೦೮ನೇ ಇಸ್ವಿಯಿಂದ ತಾ॥ ೧೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಅಮೌಲ್ಯವಾದ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ, ಅನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರಯುಲಿಕ್ಕೆ ಕಾಗದವು ಸಾಲದು ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದ ಇನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾಮುಗಳು

ಕ್ಷಯರೋಗ ಹತವರೋಗ, ಪಾಂಡುರೋಗ ಗುಲ್ಮರೋಗ ಮೂಲರೋಗ ಮಹಾಮಾರಿ(ಕಾಲರಾ), ಪ್ಲೇಗು, ಚಳಿಜ್ವರ,ವಿಷಮಜ್ವರ ಇನ್‌ಫ್ಲುಯೆಂಜಾಜ್ವರ,ಅನೇಕಪ್ರಕಾರದಜ್ವರ ಗಂಡಮಾಲೆ, ಶಿವಿಶೂಲೆ, ಮೂಗಿನೊಳಗಿನ ಪೀನಸಿ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯಣ, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ ಅಡಗ್ಗ ಇದ್ದಲಿ ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ ಅರಕಲೆ ನೋವು ನಡಶೂಲಿ, ವಾತಶೂಲಿ, ರೇತ್ಮಜಡ್ಡು, ಗುದ ಪ್ರನವೇನೆ ಸುರಸುಕಜ್ಜಿ, ಗಜಕರ್ಣ, ಇಸಬು ಕಡ್ಡು, ಘಾಯಪೃರ್ಣ ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ ಹತದನಂಬು ಸಣ್ಣ ಕೂಸುಗಳ ಬಾಲಗ್ರಹ, ಅರವಿ, ವ ಟ್ಟದೋಷ ಹೊಟ್ಟೆ ದೊಡ್ಡ ಬಾಗೋಣ, ಮೈ ಹೊರಬೀಳೋಣ ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಒಂದಲ್ಲಿ ಬಡವರಿಗೂ ದನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ನಮೂನೆ ಉರಿಕ್ಕ ಐದು ಆಣೆ ತುಕ್ಕ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ ಪಿ ಖರ್ಚು ಬೇರೆ ಒಂದ ಡಜನ್ ಬಾಟ್ಲಿಗಳು ತಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇದಕ್ಕೆ ಒಂದು ರೂಪಾಯಿ ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದವು ಬಾಟ್ಲಿಯವರಿಗೆ ಕಮಿಶನ್ ಇಲ್ಲ ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ ಅನುಪಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್. ಎಂ ಮುಲ್ಲಾ, ಸಂಪಾದಕ ಅರ್ಕುಶಫಾ,
ಹೆಡ್ ಆಫೀಸು ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ ಶರೀರಗಳ ಪಳಿತದಿಂದ ಅಶಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮೆದುಳಿಗೆ ಶಾಂತಿಗೊಳಿಸುವದು 41 ಸಲ ಸೇವಿಸುವ ಲೇಹ ಡಬ್ಬಿ 1ಕ್ಕೆ 1-12-0 ಡಬ್ಬಿಗಳಿಗೆ 4 12-0

2 ಮಹಾಜ್ವರಾಂಕುಶ — (ಮ ತ್ರಿ ಗುಣ) - ಇನ್‌ಫ್ಲುಯೆಂಜಾ, ನಿಮೋನಿಯಾ, ದಿವಸಕ್ಕೊಮ್ಮೆ ದ್ವಿತೀಯ ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1 ಕ್ಕೆ 0-8-0

3 ಬಾಲಗ್ರಹ ಗುಟಿಕೆ — ಕೂಸುಗಳ ಮೂರ್ಛೆ ಅಪಸ್ಮಾರಕ್ಕೆ ರಾಮಬಾಣ ಬಾಟ್ಲಿ 1 ರಕ್ಕೆ 0 10 0

4 ಖಾಸಕೋಟರ ಗುಟಿಕೆ ಇದು ಖಾಸಕ್ಕೆ ಸಿದ್ಧ ಔಷಧಿ ಒಂದೇ ಗುಟಿಕೆಯಿಂದ ಕಫ, ಉಬ್ಬಸ ಕೆಮ್ಮು ಇವು ಗುಣ ಬಾಟ್ಲಿ 1 ರಕ್ಕೆ 0 10 0

5 ಇಂದ್ರಾಬೇದಿ — ಮಲಬದ್ಧತೆಯನ್ನು ಕಳೆಯುವದಕ್ಕೆ ಸುವಿರೇಚಕ ಬಾಟ್ಲಿ 1ಕ್ಕೆ 0 12 0

ಎಮ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡ್ರೋಗ್ಗಿಸ್ಟ್ ರಥಬೀದಿ.
ಮಂಗಳೂರ ದ ಕ.

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ ಗುರುವಾರ** ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ೮ರಹಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೇಟುಗಳು ಸಿರಸಿಯಲ್ಲಿ ಶೇಷಗಿರಿರಾವ ಥಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಥಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಪಿಕ್ಕಿ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ,
ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडांतील अनेक वनस्पतींच्या रसांत पौष्टिक औषधीफळांचा रसार्क मिश्र करून, खाली दिलेल्या रोगांवर उपयुक्त अशी भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्यानें नपुंसकत्व, स्वप्नजन्य धातुपात, लग्नाच्यापूर्वी अगर नंतर स्रवणारा धातुपात नाहींसा करून, वीर्य वृद्धि व रक्तशुद्धि होते कितीहि जुनाट कडकी असो (एक सप्तकातच) नाश पावत आणि उपदंशा संबंधी मुरलेले विकार नाहींसे होऊन हातपाय, डोळे यांचा दाह व धातुविघातक सर्व विकार नष्ट होऊन,शरीर वज्राप्रमाणे बनतें, हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोग यांचा समूळ नाश होतो हे औषध स्त्रियांनी सेवन केल्यास, त्यांचे जननेंद्रियाचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळां जेवले तरी, भूक चांगली लागत जाऊन शौचास साफ होते याचा अनुभव औषध घेतल्याच्या पहिल्या दिवशीं येतो, तरी वरील रोगग्रस्त तरुण आणि वृद्ध, स्त्रिया व पुरुष यांनीं या वज्रांग बिंदूचे सेवन करून, यांतील खरी मजा पहावी. फार दिवसाचा रोग असल्यास, पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असता, गुण येईल. एका बाटलीमध्यें १० तोळे औषध असतें त्या एका बाटलीची किंमत १। रुपया. तीन बाटल्याची किंमत ३। रुपये. एक डझन (१२) बाटल्यांची किंमत १० रुपये. याशिवाय टपाल. व प्याकिंग खर्च निराळा पडेल

म्यानेजर.

के, एम, हनुमान मासाडिक कंपनी
जिल्हा बेळगाव. मु. पो. निपाणी.

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

ರೂ ೨ ೧೪ ರ ಮನಿಯಾರ್ಡರ ಮಾತ್ರ ಅಂಪರೆ, ೧ ವರ್ಷದವರೆಗೆ ನಿಮ್ಮಲ್ಲಿಗೆ ಬರುವದು

ಪತ್ತೆ— ಕಾನಡಾವೃತ್ತ ಆಫೀಸ ಕುಮಟಾ

Printed and published by Krishnarao Keshav Shenvi at his Star of Kenara Press Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೨೭.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು ರೂಪಾಯಿ 2-0-0.

ಮನೆಯಾರ್ಡರಯಿಂದ ರೂ 2-13-0.

ವ್ಹಿ. ಪಿ. ಅಂಚೆಪಟ್ಟ ಸೇರಿ ರೂಪಾಯಿ 2-15-0

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ.-

ಕನ್ನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೨೫ ಎಮ್ ಅಕ್ಷರ) ೫ ಸಾಲುಗಳ ವರೆಗೆ ರೂ 1 0 0

ಅನಂತ್ರ ಪ್ರತಿ ಸಾಲಿಗೆ 0-2-0

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಸಮಕ್ಷ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೮ ನೇ ಸಪ್ಟಂಬರ ಸನ್ ೧೯೨೧ ನೇ ಇಸವಿ]—

ಖರೇ ವಸ್ತುಲು! ತಾಜಾ ಕಲ್ಪು!! ತ್ವರೆ ಗ್ರಾಹಿಯಿರಿ!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜರತನವನ್ನೂ ರೋಗವನ್ನೂ ದೂರಪಡಿಸಿ, ಆರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯು ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವ್ವನದ ಕಳೆಯನ್ನೂ ಹೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಮೊದಲಾದ ಇವುಗಳನ್ನು ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಸ್ಪರ್ಶನದಿಂದಲೂ ಅತಿವಿಷಯೋಪಭೋಗದಿಂದಲೂ, ಇಂದ್ರಿಯ ದಿಲಿವು, ತಿಳುವು, ನಿಸ್ತೇಜವು ಆಗಿ ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಮುರಿವು, ನಿದ್ರೆಯಲ್ಲಿ ಬೀಕರವಾದ ಸ್ವಪ್ನ, ಅರಿವು, ಧಾತುವು ಮತ್ತು ಶರೀರದ ಹಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ಸಂ ೧ ಸಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಐವತ್ತು ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,

ಕಕ್ಕೀ (ಕೆನರಾ)

ಅತ್ಯಂತ ಬೋಧಪ್ರದ—ಮನೋರಂಜಕ

ಕಾದಂಬರಿಗಳು.

(೧) ದಿವ್ಯಸುಂದರಿ ಅಥವಾ ದೀರ್ಘ ಪ್ರಯತ್ನ ಬೆಲೆ ೧ರೂ **(೨) ಸತ್ಯಪ್ರಕಾಶ.** ಬೆಲೆ ೬ ಆಣೆ. **(೩) ವಿಚಿತ್ರಕಾರಸ್ಥಾನ** ಬೆಲೆ ೧೨ ಆಣೆ.

ಪತ್ತೆ— ಬಸವಾರ್ಯ ಖೊದೀಹಾಳಮಠ, ಹೆಡ್ ಮಾಸ್ತರ, ಮುಕ್ಕಾಂ ಅಲೂರ ಪೋಸ್ಟ— ಅಲೂರ ತಾ-ಹಾನಗಲ್ಲ, ಜಿ. ಧಾರವಾಡ

ಕಾರ್ಡಸ್ಸಾಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಸಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ — ೧ಕ್ಕೆ ೬ಪೈ, ಡಜನಕ್ಕೆ ೪ಆಣೆ, ಶೇಕಡಾ ೧-೧೦-೦ ಟಪಾಲ ಹಾಸಲ ಬೇರೆ ಸಂಪಲಗಳು ಬೇಕಾದರೆ, ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ್, ಕುಮಟಾ (ಎನ್. ಕೆನರಾ,)

ಭಡತೀ ಭ್ರಾತೃಸಂಘದ

ಅನುಭವಸಿದ್ಧ ವಾದ

ಜ್ವರದ ಗುಳಿಗೆಗಳು ಕ್ರಯ — ೨೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಬ್ಬ, ಉಂಚಿ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಕಾಲೋಪಯೋಗಿ ಪುಸ್ತಕಗಳೂ, ಸ್ವದೇಶಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,

ಗೋಕರ್ಣ.

ಪ್ರಸಿದ್ಧ ಚಾಯಿ ಪುಡಿಗಳು.

ನೀಲಗಿರಿ, ಕೆಂಪು, ಜಾಂಬಳಿ ೧೦೦ಕ್ಕೆ ೧೪ಆಣೆ ಕಪ್ಪು ಮಾತ್ರ ೧೨ಆಣೆ ಚಾಯಿ ಸೆಂಪಲಿಗೆ ಒಂದಾಣೆ. ಹೋಲ ತೆಗೆದುಕೊಂಡರೆ, ದರಪೂರ ಕಮಿಶನ್

ಪತ್ತೆ— ಎಸ್. ವ್ಹಿ. ಭಾಗ್ವತ.

ಪೋಸ್ಟ— ಹೆಗಡೆ, ಉತ್ತರ ಕಾನಡಾ.

ಹೊಸ ಶೋಧ! *ಓಂ* ಹೊಸ ಶೋಧ!!

ಗುಣ ಬಾರದಿದ್ದರೆ, ಹಣಮರಳು

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕವನ್ನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಪೋಷಕ ಮೇರೆಗೆ ರೋಗಿಗಳಿಗೆ ಉಪಯುಕ್ತ ವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವ, ಮೂತ್ರದ ಸೋವಲು ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ, ವೀರ್ಯ ವೃದ್ಧಿಯಾಗುವದು, ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿರವ್ವಾಗಿ ಹೊಟ್ಟೆ ಹಸಿಯುವದು ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವತ್ತಿನ ಅಪ್ರತಿಮ ಗುಣವುಂಟಾಗಬೇಕೊ, ಅವೆಲ್ಲವು ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತದ ಗುಣಗಳೂ ಒದುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ದೇಶೀ ಇದ್ದರೆ, ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

* ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು ೧ ಆಣೆ ೮ ೩ ಡಬ್ಬಿಗಳಿಗೆ ೪ ರು ೮ ಆಣೆ. ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ. ಪೋಸ್ಟ ನಿಪ್ಪಾಣಿ, ಜಿ ಬೆಳಗಾಂವ

ಶ್ರೀ। ಕಮಲಾಬಾಯಿಯ

ಅಬಲಾ ಸಂಜೀವನಿ ಗುಳಿಗೆ

ಬರೇ ಸ್ತ್ರೀಯರಿಗೋಸ್ಕರ

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಆಪಾಯಕರ ಮತ್ತು ತೀಕ್ಷ್ಣ ಮನೋವೇದಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ. ೨೫ ವರ್ಷಗಳದಾರಭ್ಯ ಇವುಗಳ ಸೇವನಯಿಂದ ಯಾರಿಗೂ ಅಸಮಾಧಾನವಾಗಿಲ್ಲ. ತಪಸೀಲ ಮಾಹಿತಿಯು ಕೆಟಲಾಗು ಬರೇ ೦-೨-೬ ಸ್ಟಾಂಪು ಕಳುಹಿಸಿದರೆ ಉಚಿತ ಸಿಗುವದು

ಬಾಟ್ಲಿ ೧ ರ ಕ್ರಯ ೧-೮-೦ ಟಪಾಲ ಖರ್ಚು ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ

ಶ್ರೀ। ಕಮಲಾಬಾಯಿ ಜಿ ಎಮ್ ಸಿ ಫಾರ್ಮಸಿ, ಕಾಳಬಾದೇವಿಯ ಎದರಿಗೆ, ಮುಂಬಯಿ

ಡಾ. ನವರತ್ನಕರ

ವಿದ್ಯುತ್‌ಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ

ಇದರಿಂದ ಬೂದಿ ಬಣ್ಣದ ಕೂದಲು ಕಪ್ಪಾಗುತ್ತವೆ. ಈ ಕಲಾಪಿನಗುಣಗಳ — ಸುವಾಸಿತ ಇಂಪಾದ ಪರಿಮಳ ಅಗ್ಗ ಕ್ರಯ ವೇಸ ಉಪಯೋಗಿಸಿದವರೆಲ್ಲರು ಸಮಾಧಾನಪಟ್ಟಿರುವರ

ಕ್ರಯ ೧—೮—೦ ಅಂಚೆ ವೆಚ್ಚ ಬೇರೆ
೧೨ ಕ್ಕೆ ೧೫ ೮

ನವರತ್ನ ಮತ್ತು ಸನ್

109, ಕಾಳಬಾದೇವಿ ರೋಡ ಮುಂಬಯಿ

ಅನುಭವಸಿದ್ಧವಾದ ಔಷದಗಳು!!!

ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ ಧಾತುವೃದ್ಧಿಯಮೇಲೆ ಅತಿ ಉತ್ತಮ

ಪ್ರವಾಳ ಕೇಶರ ಅಮರಸತ್ವ, ಲಾಜಿತು, ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ ಸ್ವಪ್ನಾವಸ್ಥೆ ರಕ್ತದೂಷಿತರೋಗ ಮೇಹದ ವಿಕಾರ, ನರಗಳ ಅಶಕ್ತತೆ ಅಂಗನಿಸ್ತೇಜತ್ವ, ಧಾತುಹೋಗುವದು ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ ಉಪದಂಶವಿಕಾರ ಮುತ್ರಕಶೂಲಿ ಮುಂತಾದ, ಅನೇಕ ವಿಕಾರಗಳ ಶೀಘ್ರದಿಂದ ಗುಣವಾಗಿ ಶರೀರಕ್ಕೆ ದೃಢತ್ವವು ಕಾಂತಿಯೂ ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತವೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ ಗುಳಿಗೆ ೩೦ ಕ್ಕೆ ರೂ ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೫ ದಿವಸದ ಔಷದಕ್ಕೆ ರೂ ೨-೦-೦ (೩) ಗಜಕರ್ಣನಾಶಕ ಮಲಮ — ಡಬ್ಬಿಗೆ ಆಣೆ ೨-೮-೦ (೪) ವಾತಲವ್ಯಾಧಿನಾಶಕಗುಳಿಗೆ — ಎಲು ಒಗೆಯು ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಮಾನಪತ್ರ ಔಷಧಿಗಳ ಸಂಗಡ ಅಂಚೆ ವೆಚ್ಚ ಬೇರೆ

ಸ್ಥಳ **ವೈದ್ಯ ವ್ಹಿ. ಎಸ್ ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ,**

ಜಿಲ್ಲಾ ಉತ್ತರಕಾನಡಾ

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಸ್ಚರ

ಮಲಶುದ್ಧಿಯಾಗುತ್ತದೆ, ಚಳಿಜ್ವರು ಬಂದು ಜ್ವರವು ಬಿಡುತ್ತದೆ ಕ್ರಯ ೦-೧೨-೦ ಲೋಕ ವ್ಯಾಪಾರಸ್ಥರಿಗೆ ಅಗ್ಗ

ಪಾಟಣಕರ ಮಾಯಾದೇವ ಕಂಪನಿ ಮುಂಬಯಿ ೪

ಲೋಕಮಾನ್ಯವಾದ
ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗ್ಲೆಂಡೆಲ ಇಸ್ಟೇಟಿನ, ಎಲ್ಲಾ ತರದ ಚಹ. ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್) ಲೋಕ ವ್ಯಾಪಾರಸ್ಥರಿಗೆ ಬೇರೆಯಲ್ಲಿಯೂ ಸಿಗದೆ ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ಈಗಲೇ ಬಂದಿರುತ್ತದೆ ಪತ್ರದ್ವಾರ ದರದ ವಿಚಾರಿಸಿ ಪಡಕೊಳ್ಳಿರಿ

ವಿ ಪಿ ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ ಉತ್ತರ ಕಾನಡಾ

HONAWAR (N Kanara)

FREE. FREE.

Purchasers of 36 tins of our well renowned Ringworm Ointment price As 4 per tin or of 12 Phials of Otto Mushk hina Price As 12 per tube will be sent

A WRIST WATCH FREE

King George
Coronation Co.,
BOMBAY No. 4

ನವೀನ ಭಾರತ.

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ

ನವೀನ ಭಾರತ.

(ವಾರ್ಷೀಕ ವರ್ಗಣೀ ಅಂಚೆ ವೆಚ್ಚ ಸೇರಿ ರೂ ೪)

ಇದರಲ್ಲಿ ಸಾಮಾಜಿಕ ರಾಜಕೀಯ ವಿಷಯಗಳ ನಿಷ್ಪಕ್ಷಪಾತದಿಂದಲೂ, ಮನೋವೇಧಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶೀ, ಬಹಿಷ್ಕಾರ ಮದ್ಯಪಾನ ನಿಷೇಧ ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖಗಳೂ ಪ್ರಕಟಿಸಲ್ಪಡುವವು ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ ಜಾಹೀರಾತುಗಾರರಿಗೂ ಅತಿಶಯ ಅನುಕೂಲ

ವಿಳಾಸ— ನವೀನ ಭಾರತ ಕಾರ್ಯಾಲಯ

ಬಾಗಲಕೋಟ (ಜಿ ವಿಜಾಪೂರ)

ಸತ್ಯಮೇವ ಜಯತೇ

(ಗುಣಬಾರದಿದ್ದರೆ ಹಣಪರತು.)

ನಾಶಕ ಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ದೌರ್ಬಲ್ಯತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣ ಕವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ ಕಾಮೋತ್ತೇಜಕ ಮನೋತ್ಸಾಹದಕ ಇಂದ್ರಿಯಸ್ತಂಭಕ ಗರ್ಮಿ, (ಟಾಕಿ) ಗಪ್ಪವದೆ ಕವಮೇಲೆ ಹುಟ್ಟಿರುವ ಎಲ್ಲತರದ ಒಕ್ಕೆಗಳು ... ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಅತಿಶೀಘ್ರ ಗುಣವಾಗಿ ಶರೀರಕ್ಕೆ ನಿರೋಗತ್ವ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೭೦ ಗುಳಿಗೆಗಳ ಬೇಕಾಗುತ್ತವೆ ... ಗುಳಿಗೆಗಳಿಗೆ ೪ ರೂಪಾಯಿ ... ಅನುಮಾನಪತ್ರ ಔಷದದ ಸಂಗಡ

ವಿಳಾಸ— **ಜಿ. ಎಲ್ ಜೋಶಿ ಕಂಪನಿ**

ಪೋಸ್ಟ— ಸಿರಸಿ ಉತ್ತರ ಕಾನಡಾ

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ ಲೋಕ ದರ, ಸವಲತಿದು ಇರುತ್ತದೆ

ಪತ್ತೆ:— ಬಿ ದಾಸ, ಕುಮಟಾ

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರಕೊಳ್ಳಬಹುದು ಸವಲತ್ತಿಯ ದರಗಳು ಇಟ್ಟಿರುವೆವು ನಮ್ಮ ಪತ್ತೆ —

ಗ್ಯಾತೊಂಡೇ ಬ್ರದರ್ಸ,

ಮೋಟರ ಡೀಲರ್ಸ, ಒಪೇರರ್ಸ,

ಕಾರವಾರ.

ಮೈಸೂರ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ

ಸದಾಶಿವ ವಿಶ್ವನಾಥ ಶಾಸ್ತ್ರಿ, ಸಿದ್ಧೇಶ್ವರ

ಇವರು ವ್ಯಾಕರಣದಲ್ಲಿ ಪೂರ್ವಭಾಗ ಪರೀಕ್ಷೆಕೊಟ್ಟು ಸರ್ಟಿಫಿಕೇಟು ಪಡೆದಿದ್ದಾರೆ ಅವರನ್ನು ಯಾವುದಾದರೊಂದು ಹಾಯಸ್ಕೂಲು, ಕೊಲೇಜ, ವಾ ಇತರ ಸಂಸ್ಕೃತ ಪಾಠಶಾಲೆಯಲ್ಲಿ ಇಟ್ಟುಕೊಳ್ಳಬೇಕೆನ್ನುವವರು ಈ ಕೆಳಗಿನ ಪತ್ತೆಗೆ ಪತ್ರ ಬರೆಯಬಹುದು ಅವರಿಗೆ ಇಂಗ್ಲೀಷ ಬರುವದಿಲ್ಲ ಕನ್ನಡದಲ್ಲಿ ಸಂಸ್ಕೃತ ಪರೀಕ್ಷೆ ಕೊಟ್ಟಿರುವರು

ಸದಾಶಿವ ವಿಶ್ವನಾಥ ಶಾಸ್ತ್ರಿ,

ಸಿದ್ಧೇಶ್ವರ, ಪೋಸ್ಟ ಗೋಕರ್ಣ

AN INCIDENT.

To The Editor, 'Kanara News

Sir,

At the annual general meeting of the Karwar General Library held recently under the presidentship of the Collector, a proposal for taking in Young India for the Library was moved by one of the members of the younger generation, who are naturally anxious to have adequate representation of all the shades of political opinion to satisfy the varied interests of the different classes of members However, Mr Koimattur our Dist Dy Collector who probably wanted to demonstrate before the President, Mr Haigh, that men of his class were not prepared to countenance such 'outrageous' proposals, at once stood upon his legs to oppose the motion, with all the strength at his command The President who probably did not sufficiently appreciate his zeal, had to ask him to wait, till the original proposal was formally seconded After the motion had been duly seconded in adequately commendatory terms, Mr Koimattur again took his turn and emphatically opposed the motion in the following words - "It is no paper It contains all impracticable views I don't want our people here to be misled by its **fiery** (!) views **I don't want** the paper in this Library" (By the bye, who are **You** Sir?) Mr Koimattur could have avoided the sorry spectacle that he presented, by thinking twice before thoughtlessly and irresponsibly stigmatizing the serene and pure 'young India' as 'fiery' *He was evidently carried away by the editor's – Mahatma Gandhi's – name which he probably hates and made these ill informed remarks without knowing much about the paper, or the real character of Mahatma Gandhi's movement and his views* Mr Koimattur ought to have known that the Karwar General Library is a registered library, and according to the system of the registered libraries, which is current in this Presidency only, "the Director of Public Instruction (who is the officer entrusted with the task) does exercise his control in selecting papers to be allowed in registered libraries If our D D C knows any facts he could have also known that the ban which formerly existed against 'Young India' has been removed after the paper was taken up by Mahatma Gandhi, and thus it is now allowed by Government to be taken in registered libraries Even the security deposited under the Press act by the former publishers of the paper, was returned after the control of the paper was taken over by Mahatma Gandhi Are these facts, in the enlightened opinion of Mr Koimattur, the testimonies of the paper promulgating 'fiery' views? Mr Koimattur could have safely and wisely refrained from excercising this 'wise' check of his over the 'undesirable' paper, as the function is already being discharged by the D P I and does not require the vigilant superintendence of the enthusiasist D D C, of Kanara Whether the paper was to be subscribed to or not, it is rather strange that in a well informed assembly of well educated and responsible gentlemen, it was thought fit to leave unchallenged these irresponsible and baseless remarks of Mr Koimattur, regardieg a paper which he has probably never seen— not to speak of perusal or reading Probably the supporters of the motion and other members of the Library thought these ill informed and random remarks af his to be below their consideration With stalwarts like Mr Koimattur, Dewan Bahadur Yennemedi, Mr Coelho and company to oppose, the motion narrowly failed by 12 votes against 15 All glory to the light shunners !!

KARWAR
August 31st /21

Yours truly,
'One disgusted

Bamboos in Kanara Jungles.

In March 1919, it was announced that Messrs Turner Morrison & Co Ltd, of Bombay had applied to Government for the grant of certain concessions for the organisation of a bamboo paper pulp industry in the forests of the Kanara District. It was proposed that a syndicate under the management of the Company should conduct certain experiments and if the results were satisfactory, a public company would be formed in India to manufacture the pulp The late indigenous industries committee were of opinion that there were good prospects of establishing a profitable bamboo pulp industry in the Kanara forests, but that a considerable amount of preliminary investigation and experiment must be carried out before it would be possible to place before the public a satisfactory scheme for the investment of public money

These preliminary enquiries, it was pointed out would cost a considerable sum of money while their results would be of assistance to other companies operating in other parts of this Presidency or of India Government therefore considered it necessary to grant a measure of assistance to Messrs Turner Morrison and Company in the initial stage of their scheme as well as in their subsequent operations. The Kanara District will accordingly be reserved for the scope of the Syndicate's experimental operations for a period of two years, and during a period of seven years from the date of the formation of the public company no supplies of bamboos will be available from Government forests in Kanara for the purpsse of making bamboo pulp for any one else than the proposed concessionaires ' No formal agreement was signed and several material modifications of the original terms of the concession were made, in particular the condition whereby Government agreed to pay, up to a certain limit, half the expenditure if the experiments of the Syndicate were unsuccessful Messrs Turner, Morrison & Campany have now intimated to Government that they have decided to give up the scheme and intend to dissolve the Syndicate that had been formed to work the concession

The whole question of pulp manufacture and encouragement of paper making is under the consideration of Government and persons interested in this matter should communicate with the Director of Industries It may be added that Government has not incurred any financial loss or liability in respect of the concession

— *Times of India 22-8 21*

ಭಕ್ಷೀಸು ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುವೃದ್ಧಿಯಾಗಿ ಶರೀರವು ಕಾಂತಿಗೊಳಿಸುವದು ಅಲ್ಲದೆ ಕೆಮ್ಮು ದಮ್ಮು ಕಫ, ವಾತ, ಪಿತ್ತ, ಸಿವೆ, ಅಬ್ಬಾಗೋಣ, ಮಲ ವಿಸರ್ಜನೆ ಸರಿಯಾಗಿ ಆಗದಿರುವಿಕೆ, ಅಜೀರ್ಣ ಸ್ತ್ರೀಯರ ಗರ್ಭದೋಷ ಹುಡುಗರ ಹೊಟ್ಟೆಯ ಎಲ್ಲಾ ಬೇನೆಗಳು ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ ಡಿಪೋ, ಕುಮಟಾ (ಕಾನಡಾ)

ಆಶ್ರಯದಾತರಿಗೆ ಆಗ್ರಹದ ವಿನಂತಿ.

ಇದು ೫ನೇ ವರ್ಷದ ೪೬ನೇ ಸಂಚಿಕೆಯು. ಇನ್ನು ಎರಡು ಸಂಚಿಕೆಗಳಿಂದ ಈ ವರ್ಷವು ಮುಗಿಯುತ್ತದೆ. ಈ ಮೊದಲು ವಿನಂತಿಮಾಡಿಕೊಂಡಮೇರೆಗೆ ಮುಂದಿನ ವರ್ಷದ ವರ್ಗಣಿಹಣವನ್ನು ಮನಿಯಾರ್ಡರಿನಿಂದಲೇ ಮುಂದಾಗಿ ಕಳುಹಿಸಿ ವ್ಹಿ. ಪಿ. ಖರ್ಚು ಉಳಿಸಿಕೊಳ್ಳಬಹುದು. ಹಾಗೆ ಮಾಡಲಾರದವರಿಗೆ ನಮ್ಮ ಹೊಸವರ್ಷದ ಮೊದಲನೇ ಸಂಚಿಕೆಯಿಂದೊ ವಿಗನೇ ಒಮ್ಮೆಲೇ ವ್ಹಿ. ಪಿ. ಗಳನ್ನು ಕಳುಹಿಸುವ ವಿಚಾರವಾಗಿದೆ. ಅಷ್ಟರಿಂದ ಮೊದಲನೇ ಸಂಚಿಕೆ ಹೊರಡುವದರೊಳಗಾಗಿ ಈ ಸವಲತ್ತಿನ ಲಾಭವನ್ನು ಎಲ್ಲರೂ ತೆಗೆದುಕೊಳ್ಳುವರಾಗಿ ಪೂರ್ಣಸಹಾಯವನ್ನು [illegible] ಳನ್ನು ವರ್ಷಾನುವರ್ಷ [illegible] ಈ ೫ ವರ್ಷಗಳ ಅವಧಿಯಲ್ಲಿ ನಮಗೆ [illegible] ವಿಚಾರ. [illegible] ವ್ಯಾಗಳ [illegible] ಎಲ್ಲ [illegible] ಇದೆ. ಇನ್ನು ಪತ್ರ ಕೊಳ್ಳಲಾರದವರು ಸಹ ನಮಗೆ [illegible] ಮೊದಲೇ ಸೂಚಿಸಿ ನಮ್ಮ [illegible] ಹಾನಿಯನ್ನು ತಪ್ಪಿಸಬೇಕೆಂದು ವಿನಯಪೂರ್ವಕ ವಿನಂತಿ.

ಮ್ಯಾನೇಜರ ಕಾ. ವೃ.

ಕಾನಡಾವೃತ್ತ.

ಗುರುವಾರ ತಾರೀಖು ೮ ಮಾಹೆ ಸಪ್ಟಂಬರ ೧೯೨೧

ಆಯರ್ಲಂಡದ ಸ್ವರಾಜ್ಯದ ಕಥೆ.

ಬ್ರಿಟಿಶ ಸಾಮ್ರಾಜ್ಯದೊಳಗೆ ಸ್ವರಾಜ್ಯವನ್ನು [illegible] ಗುತ್ತಿರುವ ಮೂರು ಕೋಟಿ [illegible] ಹಿಂದುಸ್ಥಾನಕ್ಕಿಂತ ಇಜಿಪ್ತದ ಆಕಾಂಕ್ಷೆಗಳು ಉದಯೋನ್ಮುಖವಾಗಿ ಕಂಡರೂ, ಆಯರ್ಲಂಡದ ಹೆಜ್ಜೆಯು [illegible] ಸಮುದ್ರ [illegible] ಬಂದವರಿಗಿಂತ [illegible] ದೃಷ್ಟಿಯಿಂದ ಮುಂದೆ ಬಿದ್ದದೆಂದು [illegible] ಆಯರ್ಲಂಡದ ಸ್ವರಾಜ್ಯದ ಚಳವಳಿಯು ಎಲ್ಲ ಸ್ವರಾಜ್ಯಾಕಾಂಕ್ಷಿ ಜನಾಂಗಗಳಿಗೆ ಅತೀವ ಬೋಧಪ್ರದವಿರುವಂತೆ ಅದರ [illegible] ವರ್ತಮಾನಕಾಲದ ಪ್ರಕರಣವು ಮನೋರಂಜಕವಾಗಿದೆ. ಬ್ರಿಟಿಷ್ [illegible] ೧೨೦ ವರ್ಷಗಳ ಹಿಂದೆ, ತಮ್ಮ [illegible] ತ್ವದ್ಧತನದ ಶಕ್ತಿಯಿಂದ ಸ್ವರಾಜ್ಯದ [illegible] ಆಯರೀಶರ ಮುಂದಿಟ್ಟು [illegible] ತಂತ್ರ್ಯದ [illegible] ಅವರ ಕೊ [illegible] ಇಂದಿನತನಕ ಆಯರೀಶ ಜನರು [illegible] ತಮ್ಮ ಸ್ವರಾಜ್ಯವನ್ನು ಪುನಃ ಸಂಪಾದಿಸಲಿಕ್ಕೆ ಎಷ್ಟು ಸಾಹಸದಿಂದ, ನಿರ್ಧಾರದಿಂದ [illegible] ದರುತ್ತಿದ್ದಾರೆ, ಅದರ ಪರಿಣಾಮವು [illegible] ಕಾಲಕೀರ್ದಿಯಿಂದ ಈ [illegible] ಬ್ರಿಟಿಷ ಪಾರ್ಲಮೆಂಟಿನ ಮೇಲೆ ಎಷ್ಟು ರವಾಯ್ತಗಾಗಿದೆ ಎಂಬುದೆಲ್ಲ ಇನ್ನು ಐತಿಹಾಸಿಕ ಸಂಗತಿಯು ಗಿರುವದು. ಆಯರ್ಲಂಡದ ಚಳವಳಿಯನ್ನು [illegible] ತಪಡಿಸಲಿಕ್ಕೆ ಎಲ್ಲ ವಿಧದ ಉಪಾಯಗಳನ್ನು ಇಂಗ್ರೇಜೀ ಮುತ್ಸದ್ದಿಗಳು ಮಾಡಿನೋಡಿದರು. ಸಾಮ, ದಾಮ, ದಂಡ, ಭೇದ ಇವೆಲ್ಲವುಗಳ ಪ್ರಯೋಗವು ನಿಷ್ಫಲವಾಯಿತೆಂದು, ಲಂಡನ್ನಿಗೆ [illegible] ಮುತ್ಸದ್ದಿತನವು ಸೋತುಹೋಯಿತೆಂದು ಕೇಳಬೇಕಾಗುವಷ್ಟು ಆಯರಿಶ ರಾಜಕಾರಣದ ಸ್ಥಿತಿಯು ನಿರಾಶಾಜನಕವಾಯಿತು. ದೀರ್ಘಕಾಲದ ನಿರಾಶೆಯಿಂದ ಉಂಟಾಗುವ ಸಂತಾಪವು ಆಯರ್ಲಂಡದ ಜನತೆಯೊಳಗ ದಿನದಿನದಿಂದ ದೃಗ್ಗೋಚರವಾಯಿತು. ಅವರ ಕಾದಾಟವು ಅನತ್ಯಾಚಾರಿತನದಿಂದ ಯಶಸ್ವಿಯಾಗದೆ ಅತ್ಯಾಚಾರಿ ದಾರಿಯನ್ನು ಹಿಡಿಯಿತು. [illegible] ದಾಮ ಉಪಾಯಗಳು ನಿರರ್ಥಕವಾದವೆಂದು ಪ್ರಖರವಾದ ದಂಡೋಪಾಯಗಳನ್ನು ಬ್ರಿಟಿಷ ಸರಕಾರವು ಅತ್ಯಾಚಾರಗಳನ್ನು [illegible] ಮಾಡಲಿಕ್ಕೆ ಅಂಗೀಕರಿಸಬೇಕಾಯಿತು. [illegible] ದಂಡೋಪಾಯವನ್ನಾದರೂ [illegible] ಅದಕ್ಕಾದರೂ ವಿ [illegible] ದಿನಪ್ರತಿ ವರ್ಷಂಪ್ರತಿ ಜನರಿಗೆ [illegible] ಕಾರಬಾರವನ್ನು ಸಾಗಿಸುವದು [illegible] ಕಾರಕ್ಕೂ ಸಾಧ್ಯವಿಲ್ಲ. [illegible] ಅಲ್ಲೇ ಅಲ್ಲ [illegible] ಗಾಗಿ ಯುದ್ಧವನ್ನು [illegible] ವ ಹಾ ಮುತ್ಸದ್ದಿಗಳು ಭೇದೋಪಾಯವನ್ನು ಅವಲಂಬಿಸಿ ಆಯರ್ಲಂಡದ [illegible] ಜನಾಂಗವನ್ನು ಮಾಡುವ ಉತ್ತರ ದಕ್ಷಿಣ ಆಯರ್ಲಂಡದೊಳಗೆ ಭೇದವನ್ನು ಉಂಟುಮಾಡುವ ಒಂದು ವಿನದ [illegible] ಸ್ವರಾಜ್ಯದ [illegible] ಪಾರ್ಲಮೆಂಟಿನಲ್ಲಿ ಪಾಸುಮಾಡಿಸಿ, ಅದನ್ನು ಆಯರ್ಲಂಡದಮೇಲೆ ಹೊರಿಸಿದರು. ಈ ಕಾಯಿದೆಯು ಅರ್ಧಾರ್ಧ ಯಶಸಿನಲ್ಲಿ ಸಹ ಬಂತು. ಉತ್ತರ [illegible] ಸ್ವರಾಜ್ಯದ ಪಾರ್ಲಮೆಂಟು ನಮ್ಮಲ್ಲಿಯ ಕೌನ್ಸಿಲುಗಳಂತೆ ಸ್ಥಾಪಿತವಾಯಿತು. ಅದರ ಮಂತ್ರಿಗಳೂ, ಉಪಮಂತ್ರಿಗಳೂ ಸ್ಥಾಪನ್ನರಾದರು. ಈ ಚಿಕ್ಕಪಾರ್ಲಮೆಂಟನ್ನು ತೆರೆಯುವ ಸಮಯ, ಅದಕ್ಕೆ ಆಶೀರ್ವಾದಗಳನ್ನು ಗೆಯ್ಯಲಿಕ್ಕೆ ಚಕ್ರವರ್ತಿ ಜಾರ್ಜ ಬಾದಶಹರು ಆಯರ್ಲಂಡದ ರಾಜಧಾನಿಗೆ ಹೋಗಿಬಂದರು. ಭೇದನೀತಿಯು ಇಷ್ಟರತನಕ ಸಾಗಿದಾಗ ಬಾದಶಹರ ಭೆಟ್ಟಿಯು ಆಯರ್ಲಂಡಕ್ಕಾಗದ್ದರ ಒಂದು ಸುಪರಿಣಾಮವು ಸುದೈವದಿಂದ ಸಂಭವಿಸಿತು. ಆಯರ್ಲಂಡದ ಲೋಕಮತದ ವಸ್ತುಸ್ಥಿತಿಯು ಬಾದಶಹರ ಕಣ್ಣಿಗೆ ಬಂತು. ಅದರ ಪರಿಣಾಮವು ಸದ್ಯಕ್ಕಾದರೂ ಇಷ್ಟು ಸುಖಕರವಾಗಿದೆ. ಬ್ರಿಟಿಷ ಮುತ್ಸದ್ದಿಗಳಿಗೆ ಮುಖ್ಯ ಪ್ರಧಾನರ ಮುಖಾಂತರ ಆಯರಿಶ ಮುಖಂಡರ ಕೂಡ ಸಾಮೋಪಚಾರವನ್ನು ನಡಿಸಬೇಕಾಯಿತು. ಅಂದಿನಿಂದ ಮುಖ್ಯ ಪ್ರಧಾನರು ಆಯರಿಶ ರಾಷ್ಟ್ರೀಯಪಕ್ಷದ ನಾಯಕರಾದ ಡಿ| ವೆಲೇರಾರವರ ಕೂಡ ಸಂಧಿಪ್ರಸ್ತಾಪವನ್ನು ನಡಿಸಿರುವರು. ತಾವಾಗಿ ಅವರಿಗೆ ಲಂಡನ್ನಿಗೆ ಆಮಂತ್ರಣ ಕೊಟ್ಟು, ಕರತರಿಸಿದರು. ಈ ಮಧ್ಯಸ್ಥಿಯೊಳಗೆ ದಕ್ಷಿಣ ಆಫ್ರಿಕೆಯ ಪ್ರಧಾನರಾದ ಸ್ಮಟಸಸಾಹೇಬರ ಪ್ರಮಾಣಿಕ ಸಹಕಾರಿತೆಯ ಪ್ರಯತ್ನಗಳು ಉಭಯ ಪಕ್ಷದವರಿಗೂ ಮೆಚ್ಚಿದ್ದವು. ಆಯರ್ಲಂಡದೊಳಗೆ ಹೊಗಿ, ಅಲ್ಲಿಯ ರಾಷ್ಟ್ರೀಯ ಮುಖಂಡರ ಕೂಡ ಖಲಬತ ನಡಿಸಿ, ಎಲ್ಲ ಪರಿಸ್ಥಿತಿಯನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿ ಸ್ವಾನುಭವದ ವಸಾಹತಿಯ ಸ್ವರಾಜ್ಯದ ಯೋಜನೆಯಿಂದ ಆಯರ್ಲಂಡದ ಪ್ರಶ್ನೆಯನ್ನು ಬಿಡಿಸುವದು ಶಕ್ಯವಾದ ಒಂದು ಉಪಾಯವೆಂದು ಮನಗಂಡು, ಅದನ್ನು ಮುಖ್ಯ ಪ್ರಧಾನರಿಗೆ, ಅವರಾಗಿ ಸೂಚಿಸಿದ್ದರೆಂದು ಕೆಲವರ ತರ್ಕವದೆ. ಆಮಂತ್ರಿತ ಡಿ| ವೆಲೆರಾರವರು ಲಂಡನ್ನಿಗೆ ಬಂದು, ಸಂಧಾನದ ಶಿಷ್ಟಾಯಿಯು ನಡೆಯಿತು. ಮುಖ್ಯ ಪ್ರಧಾನರು ವಸಾಹತಿಯ ಸ್ವರಾಜ್ಯವನ್ನು ಆಯರ್ಲಂಡಕ್ಕೆ ಅರ್ಪಿಸುವ ಯೋಜನೆಯನ್ನು ಡಿ| ವೆಲೆರಾಸಾಹೇಬರಿಗೆ ತಿಳಿಸಲು, ಅದರ ಅಲ್ಪಸ್ವಲ್ಪ ಚರ್ಚೆಯಾಗಿ ತಮ್ಮ ದೇಶಬಾಂಧವರ ಮತವನ್ನು ತಕ್ಕೊಂಡು, ಅದರ ಬಗ್ಗೆ ಆಯರ್ಲಂಡದ ಅಭಿಪ್ರಾಯವನ್ನು ತಿಳಿಸುತ್ತೇನೆಂದು ಹೇಳಿ ಡಿ| ವೆಲೇರಾ ಸಾಹೇಬರು ಸ್ವದೇಶಕ್ಕೆ ಮರಳಿದರು. ಅಲ್ಲಿ ಹೋಗಿ ರಾಷ್ಟ್ರೀಯಪಕ್ಷದ ಸಭೆಯನ್ನು ಕರೆದು, ಅದರ ನಿರ್ಣಯವನ್ನು ಒಂದು ಪತ್ರದ ಮುಖಾಂತರ ಮುಖ್ಯ ಪ್ರಧಾನರಿಗೆ ಅವರು ತಿಳಿಸಿದರು. ಅದರ ಆಶಯವಿಷ್ಟೇ—ಆಯರ್ಲಂಡಕ್ಕೆ ಸ್ವಯಂನಿರ್ಣಯದ ಹಕ್ಕಿದೆ. ಅದೊಂದು ಸ್ವತಂತ್ರ ರಾಷ್ಟ್ರವೆಂದು ತಿಳಿದು, ಅದರ ಕೂಡ ಇಂಗ್ಲಂಡವು ಒಪ್ಪಂದದ ಕರಾರು ಮಾಡಲಿಚ್ಛಿಸಿದರೆ, ಆಯರ್ಲಂಡವು ಒಪ್ಪುವದು. ಬೆಲ್ಜಿಯಮ, ಹಾಲಂಡದಂಥ ರಾಷ್ಟ್ರಗಳು ಜರ್ಮನಿಯಂಥ ದೊಡ್ಡ ರಾಷ್ಟ್ರಗಳ ನೆರೆಹೊರೆಯಲ್ಲಿ ಸ್ವತಂತ್ರವಾಗಿ ಇರಬೇಕೆಂಬ ತತ್ವವು ಇಂಗ್ಲಂಡಕ್ಕೂ ಮಾನ್ಯವಿದ್ದು ಇಂಗ್ಲಂಡದ ನೆರೆಯಲ್ಲಿದ್ದ ಆಯರ್ಲಂಡಕ್ಕೆ ಮಾತ್ರ ಇರಿದ ಸ್ವಾತಂತ್ರ್ಯದ ಹಕ್ಕು ಇಲ್ಲೆಂದು ಹೇಳುವದು ವಿಸಂಗತವದೆ. ವಸಾಹತಿಯ ಸ್ವರಾಜ್ಯದ ನಿಯಂತ್ರಣವನ್ನು ಸಹ ನಾವು ಮಾನ್ಯಮಾಡುವದಿಲ್ಲ. ನಮಗೆ ಎಷ್ಟು ಸ್ವಾತಂತ್ರ್ಯ ಬೇಕೆಂಬದನ್ನು ನಾವೇ ನಿರ್ಣಯಿಸಿಕೊಳ್ಳಬೇಕೆಂಬ ತತ್ವವು ಮಾನ್ಯವಿದ್ದರೆ, ಇಂಗ್ಲಂಡದ ಕೂಡ ಬೇಕಾದ ಒಪ್ಪಂದವನ್ನು ಮಾಡಿ, ಮಿತ್ರಭಾವದಿಂದ ಇರಲಿಕ್ಕೆ ತಮ್ಮದೇನು ಅಡ್ಡಿ ಇಲ್ಲೆಂದು ಡಿ| ವೆಲೆರಾರವರ ಹೇಳಿಕೆಯು ಇತ್ಯರ್ಥವು. ಮುಖ್ಯ ಪ್ರಧಾನರು ಪ್ರತ್ಯುತ್ತರವಾಗಿ ತಮ್ಮ ವಸಾಹತಿಯ ಸ್ವರಾಜ್ಯದ ಯೋಜನೆಯು ಎಲ್ಲ ಜಹಾಲಮತವಾದಿಗಳಿಗೂ ಅಮೇರಿಕೆಗೂ ಸಹ ಪೂರ್ಣವಾಗಿ ಮಾನ್ಯವಾಗಿದ್ದಾಗ, ಆಯರ್ಲಂಡವು ಅದನ್ನು ಧಿಕ್ಕರಿಸಿದ್ದು ಎಷ್ಟು ಅನುಚಿತವದೆ,

ವಿಘಾತಕರವದೆ, ಎಂಬುದನ್ನು ಜಾಹೀರಪಡಿಸಿರುವರು. ಒಟ್ಟಿಗೆ ವಸಾಹತಿನ ಸ್ವರಾಜ್ಯದಿಂದ ಸಹ ಆಯರ್ಲಂಡದ ಆಕಾಂಕ್ಷೆಗಳ ತೃಪ್ತಿಯಾಗದೆಂದು ಇಂದಿಗೆ ಹೇಳಬೇಕಾಗಿದೆ. ಇದಕ್ಕಿಂತ ಕಡಿಮೆತರದ ಸ್ವರಾಜ್ಯವನ್ನು ಕೊಟ್ಟರೂ, ಇಂಗ್ಲಂಡದ ಉಪಕಾರವನ್ನು ಮನ್ನಿಸಿ, ಅದನ್ನು ತಲೆಯಮೇಲೆ ಎತ್ತಿಕೊಂಡು ಕುಣಿದಾಡಲಿಕ್ಕೆ ಒಂದು ಹೊತ್ತು ಸಿದ್ಧವಾಗಿದ್ದ, ಆಯರ್ಲಂಡವು ಮೇಲಿಂದಮೇಲಾದ ವಿಶ್ವಾಸಭಂಗದಿಂದ ನಿರಾಶೆಯಿಂದ ಸ್ವರಾಜ್ಯಕ್ಕಿಂತ ಮುಂದೆ ನಡೆದು ಸ್ವತಂತ್ರತೆಯನ್ನೇ ಪಡೆಯುವ ಹಟ ಹಿಡಿದದ್ದಲ್ಲವೇ? "ವಸಾಹತಿನ ಸ್ವರಾಜ್ಯ"ದ ಹೊಟ್ಟೆಯೊಳಗೆ ಯಾವ್ಯಾವ ಹಕ್ಕುಗಳು ತುಂಬಿದ್ದಾವೆಂದು ಇನ್ನೂ ಸ್ಪಷ್ಟವಾಗಿ ನಿರ್ಣಿತವಾಗಿಲ್ಲ. ವಸಾಹತಿಯ ದರ್ಜೆಯ ಲಕ್ಷಣಗಳು ಇನ್ನು ತನಕ ಬ್ರಿಟನ್ನಿಗಳಿಂದ ಯಾರಿಂದಲೂ ಹೇಳಲ್ಪಡಲಿಲ್ಲ. ಹೀಗಿದ್ದರೂ, ಈಗ ಆಯರ್ಲಂಡಕ್ಕೆ ಕೊಡಮಾಡಿದ ವಸಾಹತಿಯ ಸ್ವರಾಜ್ಯದೊಳಗಿರುವ ಅಲ್ಪ ಪಾರತಂತ್ರ್ಯವನ್ನು ಸಹ ಒಪ್ಪಲಿಕ್ಕೆ, ಸ್ವೀಕರಿಸಲಿಕ್ಕೆ ಆಯರ್ಲಂಡವು ಸಿದ್ಧವಾಗಿಲ್ಲ. ಅದರ ಜನತೆಯು ದೈವವಿಲಸಿತವು ಮತ್ತೂ ಸಿನ್‌ಫೇನರೆಂದು ತಿಳಿಯದು. ಆದರ ಈಗಿನ ನಿರ್ಣಯವನ್ನು ಧೀರೋದಾತ್ತವದೆಂದು ಹೇಳಬೇಕು. ಆಯರ್ಲಂಡದ ರಾಜಕಾರಣದಿಂದ ಇತರರು ಬೋಧವನ್ನೆಷ್ಟು ಪಡೆಯುವರು?

ಸ್ಫುಟ ಸೂಚನೆಗಳು.

೧. ಹಳೆ ಕೌನ್ಸಿಲದೊಳಗೆ ರಾ। ಉಪಾಸನಿಯವರ ಸೂಚನೆಯಂತೆ, ಮರಾಠಿ ಕಲಿಯಲಿಚ್ಛಿಸುವ ಹುಡುಗರಿಗೆ ಅವಶ್ಯಕವಿದ್ದಲ್ಲಿ ಅನುಕೂಲತೆಯನ್ನು ಮಾಡಿಕೊಡಲು ಹೆಚ್ಚು ಮರಾಠಿ ಶಾಲೆಗಳನ್ನು ನಮ್ಮ ಜಿಲ್ಹೆಯಲ್ಲಿ ಸ್ಥಾಪಿಸುವ ಯೋಜನೆಯಾಗುವದೆಂದು, ಸರಕಾರವು ಆಶ್ವಾಸನೆಯನ್ನು ಕೊಟ್ಟಿತ್ತು. ಅದರಂತೆ ಈಗ ಯಾವ್ಯಾವ ತಾಲೂಕ-ಗಳಲ್ಲಿ ಇಂಥ ಮರಾಠಿ ಶಾಲೆಗಳ ಅವಶ್ಯಕತೆಯಿದೆಂದು ತಿಳಿಸಲಿಕ್ಕೆ ತಾಲೂಕಾ ಲೋಕಲ್‌ಬೋರ್ಡುಗಳಿಗೆ ಸೂಚನೆಯಾಗಿದೆಂದು ಕೇಳುತ್ತೇವೆ. ಬೋರ್ಡುಗಳು ತಮ್ಮ ಶಿಫಾರಸುಗಳನ್ನು ಪೂರ್ಣ ಜವಾಬ್ದಾರಿಯಿಂದ ಮಾಡುವವೆಂದು ನಂಬುವೆವು. ನಾವಂತೂ ಈಗ ಕರ್ನಾಟಕ ಪ್ರಾಂತವನ್ನು ಸೇರಿರುವೆವು. ಕರ್ನಾಟಕದ ಪ್ರಾಂತಿಕ ಭಾಷೆಯು ಕನ್ನಡವೆಂದು ಆದರ ನುಡಿಯೇ ಸಾರುವದು. ಅದೇ ನಮ್ಮ ಪ್ರಾಂತದ ರಾಷ್ಟ್ರೀಯ ಭಾಷೆಯೆಂದು ಸತ್ಯಕ್ಕಾದರೂ ಬಹುಸಮ್ಮತವದೆ. ಹೀಗಿದ್ದರೂ ಕರ್ನಾಟಕದೊಳಗೆ ಸ್ಥಾಯಿಕವಾಗಿರುವ ಮಹಾರಾಷ್ಟ್ರೀಯ ಮತ್ತು ಗುರ್ಜರ ಇಲ್ಲವೆ ಮಹಮ್ಮದೀಯ ಬಾಂಧವರಿಗೆ ಬಲತ್ಕಾರದಿಂದ ಕನ್ನಡವನ್ನು ಕಲಿಸಬೇಕೆಂಬ ಮತವನ್ನು ನಮ್ಮಿಂದ ಆದರಿಸಲಿಕ್ಕಾಗದು. ಆದಕಾರಣ, ಅಪವಾದಕ ಕಾರಣದಿಂದ ಬೇಕಾದಲ್ಲಿ ಮರಾಠಿ ಗುಜರಾಥಿ ಶಾಲೆಗಳನ್ನು ತಕ್ಕ ಪ್ರಮಾಣದಿಂದ ಹುಡುಗರ ಸಂಖ್ಯೆಯು ಕೂಡುವ ಸ್ಥಳಗಳಲ್ಲಿ ಸ್ಥಾಪಿಸತಕ್ಕದ್ದೆಂದು ನಮ್ಮ ಮತವು. ರಾಷ್ಟ್ರೀಯತನವು ಲೋಕಶಾಹಿಗೆ ಮತ್ತು ಅದರೊಳಗಿನ ಅಲ್ಪಸಂಖ್ಯೆಯ ಜನತೆಗೆ ಎಂದೂ ಬಾಧಕವಾಗಬಾರದು. ವ್ಯವಹಾರ್ಯವಾಗುವಷ್ಟು ಸ್ವಯಂನಿರ್ಣಯಕ್ಕೆ ಈ ವಿಷಯದಲ್ಲಿ ಇಂಬುಗೊಡಲೇಬೇಕು. ಇಂಥ ಶಾಲೆಗಳು ತೀರ ಅಲ್ಪ ಪ್ರಮಾಣದಿಂದಲೇ ಸ್ಥಾಪಿಸಬೇಕಾಗುವದೆಂದು ವಸ್ತುಸ್ಥಿತಿಯಮೇಲಿಂದ ಕಂಡುಬರುವದು. ತಾಲೂಕಾ ಠಾಣೆಗಳಲ್ಲಿ ಒಂದೊಂದು ಸಣ್ಣ ಮರಾಠಿ ಶಾಲೆಯನ್ನಿಟ್ಟರೆ, ನಾಮದಾರ ಉಪಾಸನಿಯವರ ಉದ್ದೇಶವು ಸಫಲವಾಗುವದೆಂದು ನಮಗೆ ಕಾಣುತ್ತದೆ. ಒಟ್ಟಿಗೆ ಮರಾಠಿ ಜನರ ವಸತಿ ಇದ್ದಲ್ಲಿ ಮರಾಠಿಯ ಶಿಕ್ಷಣಕ್ಕೆ ಅನುಕೂಲತೆಯನ್ನು ಮಾಡಿಕೊಡಲೇಬೇಕು. ಪರರ ಭಾಷೆಯನ್ನು ಬಲುಮೆಯಿಂದ ಯಾರಮೇಲೆಯೂ ಹೇರಿಸಬಾರದು. ಕನ್ನಡಿಗರಿಗೂ ಇದೇ ವಿಧದ ಸವಲತ್ತು ಮಹಾರಾಷ್ಟ್ರಾದಿ ಪ್ರಾಂತಗಳಲ್ಲಿ ಇದೇ ಕಾರಣಗಳ ಮೂಲಕ ದೊರೆಯದಿರದೆಂದು ನಂಬುವೆವು. ಆಂಧ್ರ, ಕೇರಲ ಪ್ರಾಂತಗಳಲ್ಲಿಯೂ ಕನ್ನಡಿಗರಿಗೆ ತಕ್ಕ ಅನುಕೂಲತೆಗಳು ಇನ್ನೂ ಇದ್ದಾವೆಂದು ನಮ್ಮ ತಿಳುವಳಿಕೆ ಇದೆ.

---

೨. ಮಾಪಳೆಯರ ದಂಗೆಯು ಅಸ್ತೇ ಅಸ್ತೇ ಶಾಂತವಾಗುತ್ತಿದೆಂಬ ಆನಂದಕರ ಸುದ್ದಿಯು ಬರುತ್ತಿದೆ. ದೀಪದಮೇಲೆ ಪತಂಗಗಳು ಹಾರಿ ಬಿದ್ದಂತೆ ಈ ದಂಗೆಗಾರರು ಸರಕಾರಿ ಶಸ್ತ್ರಯಮೇಲೆ ಹಾರಿ ಬಿದ್ದದ್ದನ್ನು ನೋಡಿ, ಅವರ ದೇಶಬಾಂಧವರಿಗೆಲ್ಲರಿಗೂ ವ್ಯಸನವಾಗದಿರದು. ಅಹಿಂಸಾ ಧರ್ಮವನ್ನು ಹುಚ್ಚರಂತೆ ಅವರು ಮುರಿದಬಗ್ಗೆ ಮಹಾತ್ಮಾಗಾಂಧಿಗಳಿಗೂ, ಎಲ್ಲ ಅಸಹಕಾರಿತಾವಾದಿಗಳಿಗೂ, ಅತ್ಯಂತ ಖೇದವಾಗಿದೆ. ಮದ್ರಾಸ ಪ್ರಾಂತಿಕ ಸಭೆಯಲ್ಲಿ ಕೆಲ ಮುಖಂಡರನ್ನು ಅಲ್ಲಿ ಕಳುಹಿಸಿ ಶಾಂತತೆಯನ್ನು ಮತ್ತೆ ಪ್ರಸ್ಥಾಪಿಸಲಿಕ್ಕೆ ಲೋಕಪಕ್ಷದಿಂದ ಸಹ ಪ್ರಯತ್ನ ನಡಿಸಬೇಕೆಂಬ ಠರಾವಾಗಿರುವದು. ಠರಾವಿನಂತೆ ಮುಖಂಡರಿಗೆ ದಂಗೆಯ ಭೂಮಿಯನ್ನು ಪ್ರವೇಶಿಸಲಿಕ್ಕೆ ಮದ್ರಾಸ ಸರಕಾರವು ಆತಂಕಮಾಡಿದರೆ, ಅದರ ಜವಾಬದಾರಿಯು ಸರಕಾರದಮೇಲಿದೆ. ಆದಷ್ಟು ಕಡಿಮೆ ಪ್ರಾಣಹಾನಿಯಾಗಬೇಕೆಂದು ಯತ್ನಿಸಬೇಕೇ ಈಗಿನ ಕೆಲಸವು. ಅಲ್ಲಿಯ ಸರಕಾರವಾದರೂ ಇದೇ ಕರ್ತವ್ಯವನ್ನು ತಾವು ಜರಗಿಸುವದದೆಂದು ಮರೆಯಕೂಡದು. ಲಷ್ಕರಿ ಕಾಯಿದೆಯ ಅಧಿಕಾರಗಳಿಂದ ಸಜ್ಜಾದ ಅಲ್ಲಿಯ ಅಧಿಕಾರಿಗಳು ಮುಯ್ಯಿಗೆ ಮುಯ್ಯಿ ತೀರಿಸುವ ಭಾವನೆಯಿಂದ ವರ್ತಿಸದಂತೆ ಜವಾಬದಾರಿಯನ್ನು ತಕ್ಕೊಳ್ಳುವದು ಲಾರ್ಡ ರೀಡಿಂಗ ಸಾಹೇಬರ ಕೆಲಸವಾಗಿದೆ. ಪಂಜಾಬಿನ ಇತಿಹಾಸದ ಪುನರಾವೃತ್ತಿಯಾಗುವದೆಂದು ಸಂಶಯವನ್ನು ಸಹ ಹುಟ್ಟಿಸಗೊಡುವದು ಜನರಿಗಿಂತ ಸರಕಾರಕ್ಕೂ ಸುಖಾವಹವಾಗದು. ಮಲೆಬಾರದ ಕಲೆಕ್ಟರ ಮಿ। ಥೋಮಸರವರು ಹುಲಿಯ ಸ್ವಭಾವದವರೆಂದು ಲೋಕಮತವಿದ್ದಾಗ, ಅವರ ಕಾರಭಾರವೇ ಈ ದಂಗೆಯ ಬೆಂಕಿಗೆ ಕಿಡಿಯನ್ನು ಹಚ್ಚಿರಬಹುದೆಂದು ಬಲವತ್ತರ ಸಂಶಯವಿದ್ದಾಗ, ಅವರನ್ನು ಅಲ್ಲಿಂದ ಇನ್ನೂ ಸ್ಥಾನಾಂತರ ಮಾಡದಿದ್ದದ್ದು ವಿಷಾದಕರವು. ಮದ್ರಾಸ ಕೌನ್ಸಿಲದೊಳಗೆ ಅಲ್ಲಿಯ ಗವ್ಹರ್ನರರು ಮಾಡಿದ ಭಾಷಣದಿಂದ ರೋಗವು ಬಂದಿದ್ದರೆ, ಅದರ ನಿದಾನವು ಮತ್ತೊಂದಾಗಿ, ದಬ್ಬಾಳಿಕೆಯ ಜಾಲಿಮ ಮದ್ದಿನ ಪ್ರಯೋಗವೇ ಹೆಚ್ಚಾಗಿ ನಡಿಸಲ್ಪಡುವದೆಂದು ಭೀತಿಯಾಗಿದೆ. ಹೀಗಿದ್ದರೆ, ಅದರ ಪರಿಣಾಮವು "ಯದ್ವಾತದ್ವಾ ಭವಿಷ್ಯತಿ" ಎಂಬದಾಗುವದೆಂದು ಚಿಂತನಾಸ್ಪದ ಸಂಗತಿಯಾಗಿರುವದು. ಇಂಥ ಪರೀಕ್ಷೆಯ ಸಂದರ್ಭದಲ್ಲಿ ಲಾರ್ಡ ರೀಡಿಂಗಧೊರೆಗಳ ಕೈಕೆಳಗಿನ ಹೊಸ ಹಿಂದುಸ್ಥಾನ ಸರಕಾರವು ತಮ್ಮ ಸಮತೋಲಬುದ್ಧಿಯನ್ನು ವಿಚಲವಾಗಗೊಡದೆ ತಾಳ್ಮೆಯಿಂದ ಹ್ಯಾಗೆ ವರ್ತಿಸುವದೆಂದು ಜನತೆಯು ನಿರೀಕ್ಷಿಸುತ್ತಿರುವದು.

---

೩. ಕಲಕತ್ತೆಯ ಮದ್ದುಗುಂಡಿನ ಖಟ್ಲೆಯೊಳಗೆ ಉದ್ಯೋಗಧಂದೆಯ ಮಂತ್ರಿಗಳಾದ ಹೊಲಂಡ ಸಾಹೇಬರು ನಡಿಸಿದ ಕಾರಭಾರವನ್ನು ಹಿಂದುಸ್ಥಾನ ಸರಕಾರವು ಸ್ಪಷ್ಟವಾಗಿ ನಿಷೇಧಿಸಿ ಲಾರ್ಡ ರೀಡಿಂಗರವರ ನ್ಯಾಯಪ್ರಿಯತೆಯನ್ನು ಪ್ರಕಟಿಸಿದಕ್ಕಾಗಿ ಸರಕಾರದವರನ್ನು ಅಭಿನಂದಿಸುವೆವು. ತಮ್ಮ ಕೈಕೆಳಗಿನ ಮಂತ್ರಿಗಳ ಹೆಸರನ್ನು ಕಾಯಬೇಕೆಂಬ ಸುಳ್ಳು ಭಾವನೆಯಿಂದ ಹೊಲಂಡಸಾಹೇಬರ ಕಾರಸ್ಥಾನಗಳಿಗೆ ಕೆಂಬಣ್ಣವನ್ನು ಸಾರಿಸದೆ ಸತ್ಯಸ್ಥಿತಿಯನ್ನು ಮನ್ನಿಸಿ, ನ್ಯಾಯವರ್ತನವನ್ನು ತೋರಿಸಿದ ಇಂಥ ಉದಾಹರಣೆಗಳಿಂದ ಸರಕಾರದ ಬೆಲೆಯು ಏರುವದಲ್ಲದೆ, ಎಂದೂ ಕಡಿಮೆಯಾಗದು. ನೀವು ಕಳ್ಳರಿದ್ದೀರೆಂದು ನಾವು ಮನಗಂಡಿರುವೆವು. ಆದರೂ ನಿಮ್ಮ ನೂರಾರು ಕುಟುಂಬಗಳ ಘಾತವಾಗುವದೆಂದು ನಿಮ್ಮ ಮೇಲಿನ ಖಟ್ಲೆಯನ್ನು ಮುಂದರಿಸುವದಿಲ್ಲವೆಂದು ಆರೋಪಿತರಿಗೆ ಹೇಳುವದೆಂದರೆ, ಇದೊಂದು ನ್ಯಾಯಪದ್ಧತಿಯೊಳಗಿನ ನಾಟಕವೆಂದು ಜನರೊಳಗೆ ನಗೆಯಾದರೆ, ಸೋಜಿಗವೇನಿಲ್ಲ. ಇಂಥ ಕಾರಭಾರಿಗಳು ಪದವಿಗೆ ಅಪಾತ್ರರೆಂಬಬಗ್ಗೆ ಸಂದೇಹವಿಲ್ಲ. ಹೊಲಂಡಸಾಹೇಬರು ಮಂತ್ರಿಪದಕ್ಕೆ ರಾಜಿನಾಮೆಯನ್ನು ಕೊಟ್ಟು ಲಾಟಸಾಹೇಬರು ಸಹ ಅದನ್ನು ಮಂಜೂರುಮಾಡಿದರೆಂದು ಈಗ ಸುದ್ದಿಬಂದಿದೆ. ಅವರು ಪದಚ್ಯುತರಾದದ್ದು ನ್ಯಾಯ್ಯವದೆ. ಆದರೆ ಯುದ್ಧಕಾಲದಲ್ಲಿ ಮದ್ದುಗುಂಡನ್ನು ತಯಾರಿಸುವ ಇಲಾಖೆಯ ಕಾರಭಾರದಲ್ಲಿ ಏನೇನು ಅವ್ಯವಸ್ಥೆಯಾಗಿದೆ, ಲಡ್ಡುಗುಳಿಗೆಗಳನ್ನು ಯಾರಾದರೂ ತಿಂದಿದ್ದರೆ ಯಾರ್ಯಾರು ಎಷ್ಟೆಷ್ಟು ತಿಂದಿದ್ದಾರೆ, ಇಲ್ಲವೆ ಈ ಸಂಶಯವೇ ಪೂರ್ಣವಾಗಿ ನಿರಾಧಾರವಿದೆ ಎಂಬುದನ್ನು ಹೊರಗೆಡಹಲಿಕ್ಕೆ ಒಂದು ನ್ಯಾಯಾಧೀಶರ ಕಮೀಶನ ನೇಮಿಸಿ ಚೌಕಶಿಮಾಡುವದು ಅಗತ್ಯವಾಗಿದೆಂದು ನಮ್ಮ ಮತವು. ಸೀಜರನ ಹೆಂಡತಿಯಮೇಲೆ ಸಂಶಯವನ್ನು ಹಿಡಿಯಲಾಗದೆಂಬುದು ನಿಜವಿದ್ದರೂ, ಸೀತಾದೇವಿಗೆ ಬೆಂಕಿಯ ದಿವ್ಯದೊಳಗಿಂದ ಬೆದರದೆ ಪಾರಾಗಿ ಸೀತಾಶುದ್ಧಿಯನ್ನು ಪ್ರಕಟಿಸಬೇಕಾಯಿತಲ್ಲವೇ? ಇದರೊಳಗೆ ಅಡಗಿದ್ದದ್ದು ಸೀತೆಯೋ, ವಸಂತಸೇನೆಯೋ ಎಂಬ ಸಂಶಯದ ಪರಿಹಾರವಿನ್ನಾಗಲೇಬೇಕು.

---

೪. ಈ ಜಿಲ್ಲೆಯ ಜಂಗಲಗಳಲ್ಲಿರುವ ಬಿದುರುಗಳ ತಿರುಳಿನಿಂದ ಕಾಗದ ತಯಾರಿಸುವ ಏರ್ಪಾಡುಮಾಡುವ ಉದ್ದಿಶ್ಯ ಮುಂಬಯಿಯ "ಟರ್ನರ, ಮೊರಿಸನ ಮತ್ತು ಕಂಪನಿ"ಯು ಕೆಲವು ಸವಲತ್ತುಗಳನ್ನು ಕೇಳಿದ್ದರು. ಅದಕ್ಕೆ ಆ ಕಂಪನಿಯ ಕೈಕೆಳಗೆ ಕೆಲವು ತಜ್ಞರ ಮಂಡಳವು ಸ್ಥಾಪಿಸಿ, ಅವರ ಮುಖಾಂತರ ಕೆಲವು ಪ್ರಯೋಗಗಳನ್ನು ನಡಿಸಿ, ಪರಿಣಾಮವು ಸಮಾಧಾನಕರವಾದರೆ, ಹಿಂದು ಸಾರ್ವಜನಿಕ ಕಂಪನಿಯನ್ನು ತೆರೆದು ಆ ಕಾರಖಾನೆಯನ್ನು ನಡಿಸಬಹುದೆಂದು ಸೂಚಿಸೋಣಾಗಿತ್ತು. ಆದರೆ, ಸದ್ಯದ ಉದ್ಯೋಗಧಂದೆಯ ಕಮಿಟಿಯು ಈ ಧಂದೆಯು ಬಹುಲಾಭಕರವಾಗಿದ್ದರೂ, ಪ್ರಾರಂಭದ ಪರಿಶೋಧನೆಗಾಗಿ

ವಿಹಳೇ ಹಣ ವೆಚ್ಚಮಾಡಿದಹೊರತು ಆ ಕಾರಖಾನೆಯನ್ನು ನಡಿಸುವಬಗ್ಗೆ ಕಂಪನಿಯನ್ನು ತೆರಿಯುವ ವಿಚಾರವು ತಹಕೂಬ ಇಡಬೇಕಾಗಿ ಅಭಿಪ್ರಾಯಪಟ್ಟರು ಟಿಟ್ಟಿಗೆ ಆ ಕಂಪನಿಗೆಕೊಟ್ಟ ಸವಲತ್ತಿಯ ಹಕ್ಕನ್ನು ಆ ಕಂಪನಿಯು ಈಗ ಬಿಟ್ಟುಕೊಟ್ಟದ್ದರಿಂದ, ಅಂಥ ಹಕ್ಕನ್ನು ಪಡೆಯಲಿಚ್ಛಿಸುವವರು ಉದ್ಯೋಗಧಂದೆಯ ಡಾಯರೆಕ್ಟರರಬಳಿಗೆ ಬರಕೊಳ್ಳಬಹುದಾಗಿ ಜಾಹೀರಾಗಿದೆ ಅವರೆ ಇಡೀ ಜಗತ್ತಿನಲ್ಲಿ ಕಾಗದದ ಬರಗಾಲವಿದೆ ಇಂಥ ಪ್ರಸಂಗದಲ್ಲಿ ಕಾನಡಾಜಿಲ್ಲೆಯಲ್ಲಿ ಕಾಗದದ ಕಾರಖಾನೆಯು ಬಹು ಲಾಭಕರವಾಗುತ್ತಿತ್ತು ಈ ಜಿಲ್ಲೆಯ ಜಂಗಲುಗಳಲ್ಲಿ ಬೆಳೆಯುವ ಬಿದರುಗಳಿಂದ ಕಾಗದವನ್ನು ತಯಾರಿಸುವ ಧಂದೆಯನ್ನು ಯಾರೂ ಕೈಕೊಳ್ಳದಿದ್ದದ್ದು ಅತಿ ದುರ್ದೈವವು ಜಪಾನವಲ್ಲಾಗಲಿ, ಅಮೇರಿಕೆಯಲ್ಲಾಗಲಿ ಆ ಆ ಸರಕಾರವು ಉದ್ಯೋಗಧಂದೆಗಳಿಂದ ಲಕ್ಷ್ಮಿಯು ಧನಸಂಪತ್ತು ಬೆಳಿಸಲಿಕ್ಕೆ ಬೇಕಾದಷ್ಟು ಸರಕಾರಿ ಧನಸಹಾಯಮಾಡುತ್ತದೆ ಆದರೆ ನಮ್ಮ ಸರಕಾರವು ತನ್ನ ಭಾರಿಖರ್ಚಿನ ಕಾರಭಾರದಿಂದ ಇಂಥ ಹೊಸ ಧಂದೆಗೆ ಧನಸಹಾಯ ಮಾಡಲಾರದು, ಇದರ ಪರಿಣಾಮವು ಹೀಗಾಗಿದೆಯಲ್ಲ — ನಮ್ಮಲ್ಲಿ ಕಚ್ಚಾಮಾಲು ವಿಪುಲವಾಗಿದ್ದರೂ ಅದನ್ನು ಉಪಯೋಗದಲ್ಲಿ ತರುವ ಯೋಗ್ಯ ಕಾರಖಾನೆಗಳ ಕೊರತೆಯಾಗಿದೆ ತನ್ನ ಸ್ವಂತ ಧಂದೆಗಳನ್ನು ಬೆಳೆಸಲಾರದ ಸ್ಥಿತಿಯು ನಮ್ಮ ದೇಶಕ್ಕೆ ಒಂದೊದಗಿದೆ ಯಾಕೆಂದರೆ ರಾಷ್ಟ್ರೀಯ ಸರಕಾರವು ಪ್ರಜೆಗಳಿಗೆ ಜವಾಬದಾರ ಆಗಿ ಅವರ ಹಿತವನ್ನು ಬಯಸುವಂಥ ನಮ್ಮ ಸರಕಾರವು ಜವಾಬದಾರಿಯಿಲ್ಲವೆಂಬುದೆ ಇದರ ಕಾರಣವಲ್ಲವೇ?

ಈ ಶಹರದ ವರ್ತಕರ ಸಂಘವು ಒಂದು ಸುಸಂಘಟಿತವಾಗಿ ಸ್ಥಾಪಿಸಲ್ಪಟ್ಟದ್ದರ ವಾರ್ತೆ ಕಳೆದ ಸಲವೇ ಜಾಹೀರಮಾಡಿದ್ದೆವು ಅದರ ಉದ್ದೇಶವೇನೆಂದರೆ— ಈ ಶಹರದ ವರ್ತಕರ ವ್ಯಾಪಾರ ಉದ್ಯೋಗವನ್ನು ಬೆಳಿಸಿ ಅದ ಎಲ್ಲರಿಗೂ ಹಿತಕರವೂ ಸುಖಕರವೂ ಆಗಿ, ಸಂಪದಭಿವೃದ್ಧಿ ಮಾಡುವದೇ ಆಗಿರುವದು ಬೇರೆ ನಾವು ಹೇಳಬೇಕಾಗಿಲ್ಲ ಈಗಿನ ದಿನಮಾನದ ಸ್ಥಿತಿಯಲ್ಲಿ ಸಾಮಾನ್ಯಜನರೆಲ್ಲರ ಪ್ರವೃತ್ತಿಯು ತಮ್ಮ ತಮ್ಮ ಸ್ವಾರ್ಥ ಸಾಧನೆಯಲ್ಲಿ ಮಗ್ನವಾಗಿ ಹೋಗಿದ್ದೆಂಬುದು ಎಲ್ಲರೂ ಬಲ್ಲರು ಹಾಗೆ ಮಾಡುವದು ಧರ್ಮವೋ, ಅಧರ್ಮವೋ, ನೀತಿಯೋ ಅನೀತಿಯೋ ಎಂಬುದು ಅವರ ವಿಚಾರವಾದದ್ದಿಲ್ಲ ಹೀಗಾಗಿ ವ್ಯಾಪಾರಕ್ಕೆ ಅವಶ್ಯಕವಿದ್ದ ಕ್ರಮ ನೇಮಗಳಿಲ್ಲದೆ, ವ್ಯಾಪಾರಿವರ್ಗದಲ್ಲಿ ಒಕ್ಕಟ್ಟು ಇಲ್ಲದೆ ಸಾಧ್ಯಸಾಧನಗಳ ಅನುಕೂಲತೆಯಿಲ್ಲದೆ, ಈ ವರ್ಗವು ದಿನೇ ದಿನೇ ಕುಗ್ಗುತ್ತ ಬಹಳೇ ಹಾನಿಗೆ ಗುರಿಯಾಗಿದ ಬಹು ವಿಚಾರವಂತರ ಲಕ್ಷಕ್ಕೆ ಬಾರದಿರದು ನಮ್ಮಂಥ ಇತರ ಶಹರಗಳಲ್ಲಿ ಇಂಥ ಸಂಘಗಳನ್ನು ಸ್ಥಾಪಿಸಿ ಹೇರಳ ಸ್ಥಿರಲಾಭಗಳನ್ನು ಪಡೆಯುತ್ತಿರುವ ಸಂಗತಿ ವ್ಯಾಪಾರಿಗಳಿಗೆಲ್ಲ ಗೊತ್ತಿದ್ದ ಮಾತೇ ಸರಿ ಆದ್ದರಿಂದಲೇ ಈ ಶಹರದ ಪರಿಸ್ಥಿತಿಯ ಪರಿಣಾಮದಿಂದ ಇಂಥ ಸಂಘದ ಅತ್ಯಾವಶ್ಯಕತೆಯನ್ನು ಕಂಡು ಹಿಡಿದು ಈ ಸಂಘವನ್ನು ವರ್ತಕರು ಸುಸಂಘಟಿತವಾಗಿ ಅದನ್ನು ಸ್ಥಾಪಿಸಿದ್ದೆ ಬಹುವರಲ್ಲಿ ಸಂದೇಹವಿಲ್ಲ ಇಷ್ಟರಿಂದ ಅದಕ್ಕೆ ಎಲ್ಲ ವರ್ತಕರು ಒಮ್ಮನಸ್ಸಿನಿಂದ ಸಹಾಯ್ಯರಾಗಿ ಸರಿ ಅದನ್ನು ಯಶಸ್ವಿಯಾಗಿ ಮಾಡುವದು ಅವರ ಪೂರ್ವ ಆದರೆ ದದೈವದಿಂದ ಇಷ್ಟರಲ್ಲಿಯೇ ಕೆಲವು ವರ್ತಕರು ಅದಕ್ಕೆ ವಿರೋಧಿಯಾಗಿ ಅವರ ಒಡಕಿನ ಧ್ವನಿಯು ನಮ್ಮ ಕಿವಿಗೆ ಬಿದ್ದು ಮುಟ್ಟಿದೆ ಇದು ಬಹು ವಿಷಾದಕರವು ಇದರಲ್ಲಿ ಅವರ ನಿಜವಾದ ಉದ್ದೇಶವೇನಿದೆಂಬುದು ನಮಗೇನು ತಿಳಿಯದು ಈಗಿನ ಪರಿಸ್ಥಿತಿಯು ವ್ಯಾಪಾರದಿಂದ ಎಲ್ಲ ವ್ಯವಹಾರಗಳ ಯಥಾಕ್ರಮ ಯಥಾನ್ಯಾಯ, ಯಥಾಧರ್ಮದಿಂದ ನಡೆದಿವೆಂದು ಯಾರು ಹೇಳ್ಯಾರು? ಆ ವ್ಯವಹಾರಗಳಲ್ಲಿ ಏನೂ ನ್ಯೂನತೆಗಳೂ ಸ್ವಾರ್ಥಮೂಲ ಅನ್ಯಾಯಗಳೂ ಯಾರಿಗೆ ತೋರುವದಿಲ್ಲ? ಇಂಥ ನ್ಯೂನ್ಯತೆಗಳಿಂದ ಅನ್ಯಾಯಗಳಿಂದ ಇಡೀ ವರ್ಗಕ್ಕೆ ವರ್ಷಾನುವರ್ಷ ಎಷ್ಟು ಹಾನಿ ಬಂದಿದೆ ಇನ್ನು ಬರುತ್ತಿದೆ ಈ ಶಹರದ ವ್ಯಾಪಾರವು ಎಷ್ಟು ಕುಗ್ಗಿದೆ ಎಂಬುದು ವಿಚಾರಮಾಡಿದರೆ ಯಾರ ಲಕ್ಷಕ್ಕೆ ಬಾರದು? ಇಂಥ ಭಾರಿ ಹಾನಿಯನ್ನು ಇಂಥ ಕ್ರೂರ ಅನ್ಯಾಯಗಳನ್ನು ಸಂಘಶಕ್ತಿಯಿಂದಲ್ಲದೆ ವ್ಯಾಪಾರಿವ್ಯಕ್ತಿಗಳಿಂದ ತಡಿಸುವದು ನಿವಾರಿಸುವದು ಸಾಧ್ಯವೇ? ತಿಳಿಯುವದಶಕ್ಯವು ಕಲಿಯುಗ ಸಂಘೇ ಶಕ್ತಿಃ" ಎಂದು ಹೇಳಿರುವದರಿಂದ ಸಂಘಶಕ್ತಿಯಿಂದಲೇ ಆ ವ್ಯವಹಾರಗಳನ್ನೆಲ್ಲ ಸುಧಾರಿಸುವದೂ ಪ್ರಸಂಗ ಬಂದರೂ ಸಾಧ್ಯವೆಂಬ ತತ್ವವು ಈಗಿನ ಸರ್ವಮಾನ್ಯವಾಗಿದೆ ಆಗ ಜಾಗೃತರಿಗೆ ಸಂಘ ಈ ಸಂಘ ಸ್ಥಾಪನೆಯಿಂದ ಆಗುವ ಸಾವಿರ ಕೆಲಸಗಳನ್ನು ಎಂದೂ ಲಕ್ಷ್ಯಕೊಡದವರಿಂದ ಸಂಘದ ಅವಶ್ಯಕತೆಯು ಸಿದ್ಧವಾದಂತಾಗುತ್ತದೆ ಅವಶ್ಯಕತೆ ಸಿದ್ಧವಾದನಂತರ ಸುಶಿಕ್ಷಿತರೂ, ಅಶಿಕ್ಷಿತರೂ ಶ್ರೀಮಂತರೂ ಬಡವರೂ ದಲಾಳಿಗಳೂ ಅಡತೆಗಳೂ — ಅನ್ಯೋನ್ಯ ಎಲ್ಲ ವರ್ತಕರು ಭೇದ ವರ್ಣಭೇದಗಳನ್ನೆಲ್ಲ ಬಿಟ್ಟು ಗೊತ್ತಿ ಒಮ್ಮನಸ್ಸಿನಿಂದ ಆ ಸಂಘದ ಯಶಸ್ವಿತೆಯನ್ನು ಸಾಧಿಸುವದು ಅವರ ಕರ್ತವ್ಯವಲ್ಲವೆ? ಇದ್ದರೆ ಸ್ವಾರ್ಥದ ಯಾವದೇ ಸಂಬಂಧ ಕುಹಕವಿದ್ದರೆ ಆ ಸಂಬಂಧ ಜಾಹೀರ ಸಭೆಯಲ್ಲಿ ಆಯಾಯ ಚರ್ಚೆಗೆ ಆಸ್ಪದ ಕೊಡದೆ ಮೌನ ಹಿಡಿದು ದುರಾಗ್ರಹಕ್ಕೆ ಎಡೆ ಕೊಡುವದು ಯಾರಿಗೂ ಒಪ್ಪತಕ್ಕ ಸಲ್ಲದು, ಇಂಥ ಮತಭೇದದ ಪ್ರಸಂಗದಲ್ಲಿ ವಿಶೇಷವಾಗಿ ಸುಶಿಕ್ಷಿತರಾದಂಥ ವೃತ್ತಪತ್ರಗಳನ್ನು ಓದಿ ಇಂಥ ಸಂಘಗಳ ಕಾರ್ಯಕಾರಣಭಾವವನ್ನು ತಿಳಕೊಂಡಂಥ ವರ್ತಕರು ಇತರ ಅಶಿಕ್ಷಿತ ವರ್ತಕರಿಗೆ ಮಾರ್ಗದರ್ಶಕರಾಗಿ ಅವರಿಗೆ ಯೋಗ್ಯ ಸಮಜೂತಿ ಕೊಟ್ಟು ಸಾರ್ವಜನಿಕ ಕಲ್ಯಾಣಕ್ಕೆ ನೆರವಾಗುವದೇ ಅವರ ಕರ್ತವ್ಯವು ಅವರ ಧರ್ಮವು ಇಷ್ಟೇ ಅಲ್ಲ ಈ ಶಹರದ ಚಲೋ ನಾಗರಿಕರೆಂದೆನಿಸಿಕೊಳ್ಳುವ ಮಂದಿಗಳು ಸಹ ನಿಬ್ಬೇಡರಾಗಿ, ಅಭಿಮಾನದಿಂದ ಮುಂದರಿದು, ಈ ಸತ್ಕಾರ್ಯಕ್ಕೆ ಬರಹುದಾದ ತೊಂದರೆಗಳ ನಿವಾರಣೆಯ ಉಪಾಯಗಳನ್ನು ಕೈಕೊಂಡು ತಮ್ಮ ಶಹರದ ಸುಸ್ಥಿತಿಗೆ ನೆರವಾಗುವರೆಂದೇ ಕೋರುವವು ಇರಲಿ ಯಾರಿಗಾದರೂ ಈ ಸಂಘದ ಪ್ರತೀಕಾರ ಮಾಡುವದೆ ಯೋಗ್ಯವೆಂತ ಕಂಡರೆ, ಅಂಥ ಪ್ರತೀಕಾರ ಖಂಡನದ ಲೇಖಗಳನ್ನು ಪ್ರಸಿದ್ಧಿಗೆ ಆನಂದದಿಂದ ಆಹ್ವಾನ ಮಾಡುವೆವು

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಯು ಇಷ್ಟರವರೆಗೆ ೧೧೦ ೩೧ ಇಂಚು ಬಿತ್ತು ಬೆಳೆಯ ಸ್ಥಿತಿ ನೆಟ್ಟಗಿನ್ನೆ ದವಸ ಧಾನ್ಯಗಳ ಧಾರಣೆ ಇದ್ದಹಾಗೆಯೇ ರೋಗರಾಯಿ ಏನೂ ಕಡಿಮೆ ಇಲ್ಲ

ಈ ಮ್ಯುನಿಸಿಪಾಲಿಟಿಯ ಭಂಗಿ ಝಾಡಮಾಲಿಯರು ಪಗಾರಬಡ್ತಿ ಮಾಡಿದಹೊರತ ಕೆಲಸಕ್ಕೆ ಬರುವದಿಲ್ಲೆಂದು ಸಂಪು ಮಾಡಿರುವರು ರಸ್ತೆ ಗಲ್ಲಿಗಳಲ್ಲಿ ಹಾ ಸಿನೇಯಿಂದ ಕಚರಾ ಹಾಗೆ ಉಂಟು ಇದರ ಪರಿಣಾಮವು ಮಾತ್ರ ಎಲ್ಲಿಗೆ ಮುಟ್ಟುತ್ತದೋ ತಿಳಿಯದು ಶಹರ ಪಿತೃಗಳು ಸಭೆ ಸೇರಿ ಏನಾದರೂ ತಿದ್ದುಪಡಿಮಾಡಿದ ಹೊರತು ಗತ್ಯಂತರವಿಲ್ಲೆಂಬಂತಾಗಿದೆ ಶುಭಸ್ಯ ಶೀಘ್ರಂ

ಕಲ್ಯಟಗೆ ಡಿ ಫೋರ್‍ಕ್ಕೆ ಮಾಮಲೇದಾರ ಸಾಹೇಬರು ಈ ಹೊತ್ತು ವೆಳಗ್ಗೆ ಬಹು ಪರಿಶ್ರಮದಿಂದ ಕಲ್ಯಟಕಡೆಗೆ ಭೆಟ್ಟಿ ಲಾಭ ಕೊಟ್ಟರಂತೆ ! ಕೆಲವು ಗಿರಾಕಿ ಜನರು ಈ ಸಂದರ್ಶನದಿಂದ ತಕ್ಕಷ್ಟು ಕಲ್ಯಟಗೆ ಕೊಡಲ್ಪಟ್ಟರಂತೆ ! ಡೀ ಫೋ ಮಾಲೀಕರಿಗೆ ತಕ್ಕ ಉಪದೇಶವು ದೊರೆತಂತೆ ! ಇಂಥ ದರ್ಶನವು ಮೇಲಿಂದಮೇಲೆ ಆಗುತ್ತ ಹೋದರೆ ಬಡಜನರ ಹಿತವು ಸಾಧಿಸಿಕೊಟ್ಟ ಶ್ರೇಯವು ಅವರಿಗೆ ಸಿಗದಿರದು

ಇದೇ ಬರುವ ಶನಿವಾರ ದಿವಸ ೧೧ ಘಂಟೆಯ ಸುಮುಹೂರ್ತದಲ್ಲಿ ಗಾಂಧಿ ವಾಚನ ಮಂದಿರ ತೆರೆಯಲ್ಪಡುವ ಸಮಾರಂಭಕ್ಕೆ ನಾಗರಿಕರೆಲ್ಲರೂ ಆಮಂತ್ರಿಸಲ್ಪಟ್ಟಿರುವರು

ಇಲ್ಲಿಯ ಕಸಬಾ ಪಟೇಲರಾಗಿದ್ದ ಶ್ರೀ ರಾಮಾ ವಾಸುದೇವ ಭಟ್ಟರಕಡಿಂದ ಪಟೇಲಕಿ ಚ್ಯಾರ್ಜು ತೆಗೆದು ಈ ಮೊದಲಿನ ಪಟೇಲರಾಗಿದ್ದ ಶ್ರೀ ಪಾಂಡುರಂಗರಾಯ ದಿವಗಿಕರವರಿಗೆ ಕೊಡಲ್ಪಟ್ಟಿತಂತೆ ಇದರ ಕಾರಣವೇನೂ ತಿಳಿಯಲಿಲ್ಲ ಅಧಿಕಾರಿಗಳ ಸತ್ತೆಯ ಲೀಲೆ ಮತ್ತೇನು ಇದಕ್ಕಾದರೂ ಎಷ್ಟು ದಾಯಿದೆ ನೋಡಬೇಕು

ಅಂಕೋಲಾ— ಹವಾಮಾನ ರೋಗರಾಯಿ ಇದ್ದಂತೆ ಇದೆ ಮಳೆಯು ಸ್ವಸ್ಥತನದಿಂದ ಚಲೋದಾಗಿ ಆದೆ ಊರೊಳಗೆ ಗಣೇಶಚತುರ್ಥಿ ಹಬ್ಬವು ವಾಡಿಕೆಯಂತೆ ನೆರವೇರಿತು

ಇಲ್ಲಿ ಜವಳಿ ದುಕಾನದಾರ ಶ್ಯಾಮರಾಯರ ಅಂಗಡಿಯಲ್ಲಿ ಮೊದ್ದು ಕಳವಿನ ಪತ್ತೆಯು ಇಷ್ಟುದಿವಸ ಕಾಣದೇ ಇದ್ದದ್ದು ಈಗ ಸಿಕ್ಕಿತು ಮುದ್ದೇಮಾಲು ಸಹಿತ ಕಳ್ಳನಿಗೆ ಹಿಡಿದಿದ್ದಾರೆ ಖಟ್ಲೆಯು ವಿಚಾರನಡೆದದೆ ಪೋಲೀಸ ಇನಸ್ಪೇಕ್ಟರ ಖಾನ ಸಾಹೇಬ ಗ್ರಾಡ್ರೋಸ ಸಾಹೇಬರು ಇಲ್ಲಬಂದು ಮೂರ ದಿವಸ ತಪಾಸ ಮಾಡುವಷ್ಟರೊಳಗಾಗಿ ಅವರಿಗೆ ಪತ್ತೆ ಸಿಕ್ಕಿತು ಇದು ಇನಸ್ಪೇಕ್ಟರ ಸಾಹೇಬರ ಚಾತುರ್ಯವು ಅವರಲ್ಲಿರದಿದ್ದರೆ ಕಳವಿನ ಪತ್ತೆ ಎಂದಾದರೂ ಸಿಗುವದು ಸಂಶಯವೇ ಇತ್ತು ಇನಸ್ಪೇಕ್ಟರ ಸಾಹೇಬರಿಗೆ ಎಲ್ಲರ ಹೊಗಳುತ್ತಾರ ಹೊಸ ಕೀಲಿಕೈಗಳನ್ನು ಮಾಡಿ ಅಂಗಡಿಗಳಲ್ಲಿ ದೊಡ್ಡ ದೊಡ್ಡ ಕಳವು ಮಾಡುವ ಕಳ್ಳರದೊಂದ ಕೂಟವೇ ಇದೆ ಎಂದು ಊರಲ್ಲಿ ಬಾತಮಿ ಇದೆ ಇದರ ಶೋಧ ಆಗಬೇಕು

ಗೋಕರ್ಣ— ಊರಲ್ಲಿ ಕಲಾವ ಕಲ್ಯಾಣಿ ದರ ಗಾಲವಾಗಿದೆ ಡಿಪೋದಲ್ಲಿ ೩೦ ೫೦ ಮಣ ಸವದಿ ಸಹಾ ಕಾಣುವದಿಲ್ಲ ಕಂಟ್ರ್ಯಾಕ್ಟರರು ಬಂಗೆಲಿಖಾತೆಯ ಆಳಿದ ನಾಗಿದ್ದಂತೆ "ಬೇಝಾಮು ಇದ್ದಾರೆ ಗಂಗಾವಳಿಯಲ್ಲಿ ಸಹಾ ವಾಡಿಕೆಯಂತೆ ಕಟ್ಟಿಗೆ ದಾಸ್ತಾನವಿಲ್ಲಾ ಇಲ್ಲಿಯ ಜಂಗಲಿ ಖಾತೆಯ ವರಿಷ್ಠರು ಇದನ್ನು ಕಣ್ಣಿನಿಂದ ನೋಡಿಲ್ಲವೋ? ಕಟ್ಟಿಗೆ ಎಲ್ಲಾ ಬೆಟ್ಟದಲ್ಲಿ ಬಿದ್ದಿರುವದಂತೆ ಹೋದ ವರ್ಷದಂತೆ ಆದು ಮುಂಬಯಿಗೆ ಮೊದಲು ರವಾನಾಗಿ ಕಡೆಗೆ ಇಲ್ಲಿಗೆ ಬರುವದೇನ? ಇಲ್ಲಿಯ ಕವಳೇ ಮಠದ ಶ್ರೀ ಸ್ವಾಮಿಗಳಿಗೆ ಗಣೇಶ ಉತ್ಸವದ ಸಮಾರಾಧನೆಗೆ ಕಲ್ಯಟಗೆ ಇಲ್ಲದೆ ಬಹಳ ತೊಂದರೆಯಾಗಿದೆ ಕಂಟ್ರ್ಯಾಕ್ಟರರಿಂದ ಕೆಲಸವಾಗುವದಿಲ್ಲಾದರೆ ಕಂಟ್ರ್ಯಾಕ್ಟ್ ಯಾಕೆ ಮಾಡಬೇಕು? ವರಿಷ್ಠರಾದವರೂ ಅವರ ಹೇಳಿದಂತೆ ಕೇಳುವ ಹ್ಯಾಗೆ ಸುಮ್ಮನೇ ಇದ್ದಾರ? ಈ ತೊಂದರೆ ಹ್ಯಾಗಾಗಿದೆಂದು ತಿಳಿಯದ ಡಿಪ್ಪೂಟಿ ಸಾಹೇಬರಾದರೂ ದಯಮಾಡಿ ವಿಚಾರಿಸಬೇಕು!

ಹೊನ್ನಾವರ— ಮಳೆಯು ಚನ್ನಾಗಿ ಬೀಳುತ್ತಿದೆ. ಡಿಸೆಂಬರ ಉಪದ್ರವ ಕೆಲಕೆಲವು ಕಡೆಯಲ್ಲಿ ಇದ್ದು ಕೆಲವು ಜಯಿಂದ ಮುಂದಿನ ತಿಂಗಳ ತಾರೀಖು ವರೆಗೆ ಇರುವ ಬೋಟುಗಳು ಇಲ್ಲಿ ಬಂದರದಲ್ಲಿ ಇರುವದು ಇಲ್ಲಿಯ ದೊಡ್ಡ ದುಕಾನದಾರರು ಅಕ್ಟೋಬರ ೧ ನೇ ತಾರೀಖಿನಿಂದ ತಾವು ವಿಲಾಯತಿ ಸಕ್ಕರೆ ಬದಲಾಗಿ ದೇಶೀ ಸಕ್ಕರೆ ಅರವಾ ಬೆಲ್ಲದ ಉಪಯೋಗ ಮಾಡುವರೆಂದು ಸಾರ್ವಜನಿಕ ರೀತಿಯಾಗಿ ಜಾಹೀರ ಮಾಡಿರುತ್ತಾರೆ ಇದು ಸ್ತುತ್ಯವಿದೆ.

ಇಲ್ಲಿಯ ಕೊಂಗ್ರೆಸ ಕಮಿಟಿಯಲ್ಲಿ ಕೈಮಗ್ಗಗಳು ತಯ್ಯಾರಾಗುತ್ತವೆ. ಹತ್ತಿಯ ಹರುಳನ್ನು ಬೇರೆಯಿಂದ ತರುವದುಂಟು. ಪ್ರತಿಯೊಂದು ಮನೆಯಲ್ಲಿ ಒಂದು ರಾಟಿಯನ್ನಾದರೂ ಇಡುವದು ಅವಶ್ಯವಿದೆ. ದಿವಸಕ್ಕೆ ಕ್ತ ೨-೩ ಇಟ್ಟಿರುತ್ತದೆ.

ಇತ್ತಲಾಗಿ ೧-೨ ವರ್ಷಗಳಿಂದ ಬಾಜಾರದಲ್ಲಿ ರಸ್ತೆಯ ಅಂಗಡಿ ಗಟಾರದ ಮೇಲೆ ಪೆಟ್ಟಿಗೆಯಿಟ್ಟು ಅದರಲ್ಲಿ ಕೋಳಿಗಳನ್ನು ಸಾಕುತ್ತಾರೆ. ಇತ್ತಲಾಗಿ ಕೋಳಿಗಳ ಧಾರಣೆ ಏರಿರುವದರಿಂದ ಒಂದು ಗೂಡಿಗೆ ೩-೪ ನೂರು ಗಳಾಗಿ ಬಾಜಾರಿನಲ್ಲಿ ಕೋಳಿಗಳ ಹಿಂಡುಗಳಿದ್ದದರಿಂದ ಬೆಳಿಗ್ಗೆ ಪೋಸ್ಟ ಆಫೀಸಿಗೆ ಹೋಗುವಾಗ ಗೋವುಗಳ ಬದಲಾಗಿ ಕೋಳಿಯ ಹೇಸಿಗೆ ಮೆಟ್ಟಿಕೊಂಡು ಹೋಗಬೇಕಾಗುತ್ತದೆ. ಗಟಾರಸ್ವಚ್ಛ ಮಾಡುವ ಕಚರಾ ಇನಸ್ಪೆಕ್ಟರರು ಅಂಗಡಿಯಮೇಲೆ ಹತ್ತಲಿಕ್ಕೆ ಇಟ್ಟ ಪೆಟ್ಟಿಗೆ ತೆಗೆದುಹಾಕಿ ಗಟಾರಸ್ವಚ್ಛ ಮಾಡಿಸುತ್ತಾರೆ. ಕೋಳಿಗೂಡುಮಾತ್ರ ತೆಗೆಸಲಿಲ್ಲಾ ಇದರಕಡೆಗೆ ಮ್ಯುನ್ಸಿಪಲ ಅಧಿಕಾರಸ್ಥರು ಲಕ್ಷ ಪೂರೈಸಿ ಆವರವರ ಕೋಳಿ ಗೂಡುಗಳನ್ನು ಅವರವರ ಮನೆಗೆ ರವಾನಿಸುವರೇನು? ಅಲ್ಲದೆ ಪ್ರತಿಯೊಂದು ಬೀಡಿದುಕಾನದಾರರು ಪೆಟ್ಟಿಗೆಯಲ್ಲಿ ಕೋಳಿಯ ಹೇಸಿಗೆಯು ರಾಶಿ ತುಂಬಿರುವದರಿಂದ ಅಲ್ಲೇ ಕೊಳೆತುಬಿದ್ದು ಕ್ರಿಮಿಗಳಾಗಿ ಉಗತ ಇದ್ದು ಯಾವತ್ತೂ ದುಕಾನದಾರರಿಗೆ ಬಹಳ ತ್ರಾಸು ಮತ್ತು ಆರೋಗ್ಯಕ್ಕೆ ಹಾನಿಯಾಗುತ್ತದೆ. ಕಾರಣ ಇದರಕಡೆಗೆ ಮುನಸಿಪಲ ಅಧಿಕಾರಿಗಳು ಅವಶ್ಯ ಲಕ್ಷ ಪೂರೈಸಬೇಕಾಗಿ ವಿನಂತಿ ಅದೆ.

ಕುಮಟೆಯಲ್ಲಿ ಕಣ್ಣಾನೂರಿನಿಂದ ಬಂದಿದ್ದ ಪಿ ಆನಂದ ಪಂಡಿತ ಡಿ ಎಮ್ ಪಿ ರವರು ನಮ್ಮಲ್ಲಿಯ ವೆಂಕಟರಾಯ ಮಾಹಲೇ ಎಂಬ ತರುಣ ಹುಡುಗನಿಗೆ ಬಂದ ಕ್ಷಯರೋಗದ ನಿವಾರಣೆ ಆಯುರ್ವೇದ ಚಿಕಿತ್ಸೋಪಚಾರದಿಂದ ಮಾಡಿದ್ದರ ನೆಸಿಯಿಂದ, ಅವರಿಗೆ ಇಲ್ಲಿಯ ಹಲವು ನಾಗರಿಕರು ಕೂಡಿ ಸ್ವರ್ಣಪದಕವನ್ನು ಇನಾಮಾಗಿ ಕೊಟ್ಟದ್ದು ತಿಳಿಯುತ್ತದೆ. ಅನೇಕ ಜನರು ಸಹ ವಿವಿಧರೋಗ ಚಿಕಿತ್ಸೆಯನ್ನು ಹೊಂದಿ ಗುಣ ಪಡುತ್ತಿರುತ್ತಾರೆ. ಆದ್ದರಿಂದ ಜನರು ತಮ್ಮ ತಮ್ಮ ದೇಹಸ್ಥಿತಿಯನ್ನು ತೋರಿಸಿ ಗುಣಾಂಶ ಪಡಿಯಬಹುದೆಂದೂ ಈ ಸುಸಂಧಿಯನ್ನು ಹೋಗಲಾಡಿಸಬಾರದೆಂದೂ ಸೂಚಿಸುವೆವು.

ಸಿದ್ದಾಪೂರ— ಇಲ್ಲಿ ಈಗ ನಾಲ್ಕೈದು ದಿನಗಳಿಂದ ಮಳೆ ಬೀಳುತ್ತದೆ. ಹವಾಮಾನ ಚಲೋದಿದೆ. ರೋಗರಾಯಿಗಳೇನು ವಿಶೇಷ ಇಲ್ಲ. ಇಲ್ಲಿಯ ಕಾರ್ಯಕಾರಿ ಮಂಡಳಿಯವರು ಈ ಮೊದಲು ಸೂಚಿಸಿದಂತೆ ತಾ ೨೯ ನೇ ದಿವಸ ರಾಷ್ಟ್ರೀಯ ಶಾಳೆ ಸ್ಥಾಪನೆ ಮಾಡಿದರು. ಈ ರಾಷ್ಟ್ರೀಯ ಶಾಳೆ ಮಾಸ್ತರರು ಈ ಮೊದಲು ಸರಕಾರಿ ಶಾಲೆಯಲ್ಲಿ ಕೆಲಸಮಾಡಿದ ಶ್ರೀ ಚಿದಾಂಬರ ಗೇಷಪ್ಪಾ ಇವರನ್ನು ನೇಮಿಸಿರುವರು. ಮತ್ತು ಮುಸ್ಕಿಗಂಡು ತಾ ೨೯ ೩೧ ನೇ ಶನಿವಾರದಿವಸ ಸಬಟ್ಟುಗೊಡಿಸಿದರು. ಗಂಡಿಗೆ ಅಕ್ಕಿ ೧೫ ಸಿದ್ಧಿ ೩ ಪದ್ದು ೬-೧೦-೦ ವಸೂಲ ಕೊಟ್ಟರು. ಸದರ ಸವಾಲಿಗೆ ಇಷ್ಟುಬಂದ ಕಿಮ್ಮತ್ತು ೯-೬-೦ ಅಂತು ೧೦-೦-೦ ರೂಪಾಯಿ ರಾಷ್ಟ್ರೀಯ ಸ್ವಾತಂತ್ರ್ಯ ಫಂಡ ಪ್ರೆಸಿಡೆಂಟರಹತ್ತರ ಕೊಡಲ್ಪಟ್ಟಿತು. ಧಾರವಾಡದಲ್ಲಿ ಗೋಳೀಬಾರದಿಂದ ದುಃಖಾವಶ ಹೊಂದಿದವರ ಆಶ್ರಿತರಬಗ್ಗೆ ಇಲ್ಲಿಯ ಕಾಂಗ್ರೆಸ ಕಮೀಟಿಯವರು ಕುರ್ತ ಜಮಾಯಿಸಿದ ೩೦-೦-೦ ನ್ನು ಸದ್ಯಕ್ಕೆ ಕಳಿಸುವರಾಗಿ ತಿಳಿಯುತ್ತದೆ. ಟಿಳಕ ಗಂಡ ಪ್ರಸೂಲಿ ಕೆಲಸ ನಡೆದ ರಾಷ್ಟ್ರೀಯ ಶಾಳೆಗೆ ವಿದ್ಯಾರ್ಥಿಗಳು ಮೊದಲನೆ ದಿನ ೩೫ ಹಿಗೆ ದಿನದಿನ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತ ಈಗ ಶಾಲೆ ಶಾಲೆಗೆ ೪೦ ವಿದ್ಯಾರ್ಥಿಗಳು ಬರುತ್ತಾರೆ.

ಯಲ್ಲಾಪೂರ— ಹವಾಮಾನವು ಚಲೋದಿದೆ. ರೋಗರಾಯಿ ವಿಶೇಷ ಇಲ್ಲ.

ರಾತ್ರಿಯಲ್ಲಿ ಪೋಲೀಸರ ಪಹರಾ ಮೊದಲಿಗಿಂತ ಹೆಚ್ಚು ದಂಡಗಳ ಬಂದೋಬಸ್ತು ಕಳ್ಳರ ತರ್ಜನೆಯೂ ವಿಶೇಷವಾಗಿದೆ. ಇಲ್ಲಿಯ ಪೋಲಿಸರು ಊರ ಜನರ ಸಹಾಯ ಇಲ್ಲದೆ ಏಕಟಾಕಿ (ಅಂದರೆ ಕೊಟ್ಟು ಊರ ಜನರ ಮೇಲೆ ಏಯರ್ಡಿ ವಗೈರೆ) ನಡಿಸಿದ್ದಾರೆ.

ಊರಲ್ಲಿ ಇಲಿಗಳು ಬೀಳಲಿಕ್ಕೆ ಶುರುವಾಗಿವೆ ಎಂತಾ ವಟ್ಟವದಂತಿಯುಂಟು.

ಇಲಿಯು ಸುನ್ಯಸಿದ್ದ ನೂಹ ಕಾರವಾರ ಫೋರೆಸ್ಟ ಕಂಟ್ರಾಕ್ಟರರಾದ ರಾಯದ ಸ್ವಾಮಿ ಮತ್ತು ಬಾಳಕೃಷ್ಣ ರಾಮನಾಯ್ಕ ಇವರಿಬ್ಬರೂ ಕೂಡಿ ಹುಬ್ಬಳ್ಳಿಯಿಂದ ಕಾರವಾರಕ್ಕೆ ಮೋಟಾರ ಸರ್ವಿಸ ಇಡತ್ತಾರಂತೆ. ದಾ ಬಾಳಕೃಷ್ಣನಾಯಕರು ಮೋಟಾರ ಎಂದಿ ತರವದ ಮುಂಬಯಿಗೆ ಹೋಗಿದ್ದಾರೆ. ಪ್ರಯಾಣಿಕರ ಸ್ವಯವು ಕಂಪನಿಯ ಹೆಸರು ಮತ್ತು ಸಂಪ್ರದಾಯ ತಕ್ಕೊ ಎಂತಾ ಇದ ವಾಗಿ ತಿಳಿಯುತ್ತದೆ.

ಇಲ್ಲಿಯ ತಾಲೂಕಾ ಕಾಂಗ್ರೆಸ ಕಮೀಟಿಯವರು ತಮ್ಮ ಕಾರ್ಯದರ್ಶಿಗೆ ಏನೂ ಭಿಕ್ಷೆಕೊಡ ವರಿಸ್ಲ ಜಿಲ್ಲಾ ಕಮಿಟಿಯವರು ಇದರಕಡೆಗೆ ಲಕ್ಷಕೊಡ ವರೇನು? ಊರ ಜನರೆಲ್ಲರೂ ಕೂಡಿ ಜನ ಸಪ್ತಾಹ ಮಾಡುವ ವಿಚಾರದಲ್ಲಿದ್ದಾರೆ.

— ಡಿಸ್ಟ್ರಿಕ್ಟ ಲೋಕಲಬೋರ್ಡಿನವರು ಅತಿ ತ್ವರಿಯಿಂದ ನಡೆಸಿದ ಇಲ್ಲಿಯ ರಸ್ತೆಯ ಕೆಲಸವು ಕಂಟ್ರಾಕ್ಟರರ ಕೇಟಿಂಗದ ಕೆಲಸವೆಂದು ನಡೆದಿದೆ.

ಅಂಕೋಲೆಯ ಕೆನರಾ ಮೋಟಾರ ಸರ್ವಿಸ ಕಂಪನಿಯವರ ಮೋಟಾರವು ಪ್ರತಿ ಸೋಮವಾರ ಕಾರವಾರದಿಂದ ಹುಬ್ಬಳ್ಳಿಗೆ ತಪ್ಪದೆ ಹೋಗುತ್ತದೆ. ಪ್ರಯಾಣಿಕರಿಗೆ ಸುಖವದೇ ಸರಿ.

ಹಳಿಯಾಳ— ಹವಾಮಾನವು ಮಧ್ಯಮ ವಿಷಮ ಜ್ವರವು ಇದ್ದು ನೆಡಕು (ಮಲೇರಿಯಾ) ಜ್ವರ ಬರುವ ಪೂರ್ವ ಲಕ್ಷಣಗಳಿವೆ. ಡಾ ಕೊಯಿಲೋ ರವರ ಅಭಿಪ್ರಾಯದ ಪ್ರಕಾರ ಆಗೆಸ್ಟ ತಿಂಗಳಲ್ಲಿ ಜನರು ಕೂಂಡರು. ಆಗೆಸ್ಟ ತಿಂಗಳಲ್ಲಿ ಮಳೆ ಬಿತ್ತು. ಕೀರ್ತನ ಕೆಲಸಗಳು ಭರದಿಂದ ಸಾಗುತ್ತಿದ್ದವು. ಆದರ ಜಂಗಲ ಖಾತೆಯ ಕಾಮಗಾರಿಯಿಂದ ಸ್ವಲ್ಪ ಮಂದವಾಗಿದೆ. ಸಾರ್ವಜನಿಕ ಗಣಪತಿ ಉತ್ಸವ ಮಾಡುವದು ನಿಶ್ಚಿತವಾಗಿದೆ. ವ್ಯಾಖ್ಯಾತರು ಮತ್ತು ಕೀರ್ತನಕಾರರು ಬರುವರು. ತಾಲೂಕಾ ಕಮಿಟಿ ವಿದ್ಯಮಾನ ಮದ್ಯಪಾನ ನಿಷೇದ ಮತ್ತು ಸ್ವದೇಶೀ ಪ್ರಚಾರವು ನಡೆದಿದೆ. ಮೊಹರಮುದ ಪ್ರೀತ್ಯರ್ಥ ಎಲ್ಲ ಮುಸಲ್ಮಾನರು ಸ್ವದೇಶೀ ಬಟ್ಟೆಗಳನ್ನು ಧರಿಸುವರು, ಮತ್ತು ವ್ಯಸನಗಳನ್ನು ಬಂದುಮಾಡುವರು. ಖಿಲಾಪತ ಕಮೀಟಿಯು ನಡಿಸುತ್ತಿದೆ. ಹಿಂದುಗಳು ಗಣೇಶ ಚತುರ್ಥಿಯ ವೇಳೆಗೆ ಹಾಗೆ ಮಾಡುವದು ಯೋಗ್ಯ. ವ್ಯಾಪಾರಿ ಜನರಿನ್ನೂ ಸ್ವದೇಶೀಯ ಪ್ರಸಾರವನ್ನು ಕೈಕೊಂಡದ್ದು ಕಾಣುವದಿಲ್ಲ. ಅವರು ಯಾವಾಗ ಜಾಗೃತರಾಗುವರು? ಫೋರೆಸ್ಟ ಬಂಜರರ ಸಭೆಯು ತಾ ೧೨ ೯ ೨೧ ಕ್ಕೆ ಆಗುವದರ ಹವ ಡಿಸ್ಟ್ರಿಕ್ಟರರವರು ಬಂದಿದ್ದು ಅವರ ಭಕ್ತಿರಸದ ಭಜನೆ ಚಾಲೂ ಆದೆ. ಮುನ್ಸಿಪಾಲಿಟಿಯ ಹೊಸ ಅಂಸೋಳದ ಬಗ್ಗೆ ನಾಲ್ಕು ವಾಡಗಳು ಮಾಡಿರುತ್ತಾವೆ. ಎರಡು ಯಾ ಮೂರು ವಾಡಗಳನ್ನು ಮಾಡಿದರೆ ಆಗುತ್ತಿದ್ದಿಲ್ಲವೋ? ಹನ್ನೆರಡು ಜನ ಲಯತರ ತರ್ಫನಿಂದ ಮತ್ತು ಮೂರು ಜನರು ಸರಕಾರದ ತರ್ಫನಿಂದ ಬರುವರು.

ದೇಶಾಭಿಮಾನೀ ಮುನಿಸಿಪಾಲಟಿ.

ಮಧ್ಯಪ್ರಾಂತದೊಳಗಿನ ರಾಯಪುರ ಮುನಿಸಿಪಾಲಿಟಿಯು ಕೆಳಗಿನ ಠರಾವನ್ನು ಬಹುಮತದಿಂದ ಮಂಜೂರ ಮಾಡಿರುವದೆ

(೧) ಆಗಸ್ಟ ಮೊದಲನೇ ತಾರೀಖಿನಿಂದ ಮುನಿಸಿಪಾಲಿಟಿಯ ಶಾಲೆಯೊಳಗಿನ ಕಲಿಯುವ ಎಲ್ಲ ವಿದ್ಯಾರ್ಥಿಗಳು ಖಾದೀ ಅಂಗಿ ಖಾದೀ ಟೊಪ್ಪಿಗೆ ಮುಂತಾದ ರಾಷ್ಟ್ರೀಯ ಪೋಷಾಕನ್ನು ಧರಿಸಬೇಕು.

(೨) ಲೋಕಮಾನ್ಯ ಬಾಳ ಗಂಗಾಧರ ಟಿಳಕರವರ ಸ್ಮರಣಾರ್ಥವಾಗಿ ಆಗಸ್ಟ ಮೊದಲನೇ ತಾರೀಖಿನ ದಿವಸ ಮುನಿಸಿಪಾಲಿಟಿಯು ಶಾಲೆಗಳಿಗೂ ಆಫೀಸುಗಳಿಗೂ ರಜಕೊಡಬೇಕು.

(೩) ಮುನಿಸಿಪಾಲಿಟಿಯ ನೌಕರರು ಸ್ವದೇಶೀ ಅರಿವೆಯನ್ನೇ ಧರಿಸಬೇಕು.

(೪) ಮುನಿಸಿಪಾಲಿಟಿಯ ಶಿಪಾಯಿ ನೌಕರರಿಗೆ ಖಾದೀ ಪೋಷಾಕು ಕೊಡಬೇಕು.

ಇತರೇ ಮುನಿಸಿಪಾಲಿಟಿಗಳು ಇದೇ ಮಾರ್ಗವನ್ನು ಅನುಸರಿಸಿದರೆ, ಸ್ವರಾಜ್ಯ ಸ್ಥಾಪನೆಗೆ ಹೆಚ್ಚು ಸಹಾಯಕವಾದೀತು.

ಫೋರೆಸ್ಟಖಾತೆಯ ಅಂಧಾದುಂದಿ.

ಹೊಸ ದಿವಾಣರ ಕಾರಭಾರ.

ಬಡಜನರ ಗೋಳು.

ಸಭಾರಾಸು ಕಾಯಿದೆಯು ಫೋರೆಸ್ಟಖಾತೆಯ ದಿವಾಣರ ಕೈಗೆಯಲ್ಲಿ ಹೋಗಿರುವದರಿಂದ ಬಡಜನರ ಸಾಯುವ ಪ್ರಸಂಗವು ಬಂದೊದಗಿದೆ.

ಅದರ ಕಾರಣಯಾವದು ?

ದಾವ್ಯಗಳ ಪೂರವಟೆ ಇಲ್ಲಾ ವ್ಯಾಸೂರದ ಬಿಗಿಮಾಡಿ ಕಂಟ್ರೋಲ ಫೋರೆಸ್ಟಖಾತೆಯವರ ಜುಲುಮಿ ಕಾಯಿದೆಯಿಂದ ಸಾವಿರಗಟ್ಟಲೆ ಎಕರೆ ಜಮೀನು ಬಂಜರ ಕಾನಡಾ ಜಿಲ್ಲೆಯಲ್ಲಿ ಎಳೆಯುತ್ತಿರುವ ಬಡ ಜನರ ಸಂಖ್ಯೆ—

ಇವೆಲ್ಲ ಕಾರಣಗಳಿಂದ ಜನರ ಬಡತನವು ಹೆಚ್ಚಾಗಿದೆ. ತಾಳಿಕಕ್ಕೆ ತಿಂದು ಬದುಕಬಹುದಿತ್ತು. ಆದರೆ ಜನರ ಪ್ರಾಣಗಳಕಿಂತಲೂ ಆಳಿಚಕ್ಕೆಗೆ ಹೆಚ್ಚು ಕಿಮ್ಮತ್ತು ಅನ್ನುವ ಈಗಿನ ಫೋರೆಸ್ಟ ಖಾತೆಯ ಧೋರಣವೇ ಮುಖ್ಯವಾಗಿದೆ.

ಸನ್ ೧೯೧೯-೧೯೨೦ ನೇ ಸಾಲಿನಲ್ಲಿ ಆಜಮಾಸ ೧೬೦೦ ಖಾಯಮರಗಳಿಗೆ ಪರಮಿಟು ಸಿಕ್ಕಿದ್ದ ೧೯೨೦-೧೯೨೧ ನೇ ಇಸವಿಯಲ್ಲಿ ೧೦೦೦ ಮರಗಳ ಪರಮೀಟು ಸಿಕ್ಕಿರುತ್ತದೆ. ಇಷ್ಟು ಕಡಿಮೆ ಸಿಗಲಿಕ್ಕೆ ಕಾರಣವೇನು?

ದಿವಾಣರ ಆಳಿಕೆಯಲ್ಲಿ ಈರೀತಿ ಬಡಜನರಿಗೆ ತ್ರಾಸ ಆಗಬೇಕೇ ?

ಸಾವಿರಗಟ್ಟಲೆ ಜನರು ಉಪವಾಸ ತೆಗೆಯುತ್ತಿದ್ದಾರೆ. ೩-೪ ದಿವಸಕ್ಕೊಮ್ಮೆ ಊಟ ಸಿಗುವದು ದುರ್ಲಭವಾಗಿ ಅದೆ. ಬಡಜನರು ತೀರ ಕಂಗಾಲ ಸ್ಥಿತಿಗೆ ಬಂದಿರುತ್ತಾರೆ.

ಇಂತಾ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರಕಾರದ ಕರ್ತವ್ಯವೇನು ? ಈಬಗ್ಗೆ ಕಲೆಕ್ಟರರು ಯಾಕೆ ಲಕ್ಷಪೂರೈಸುವದಿಲ್ಲ ? ಅದೆಷ್ಟು ಬೇಗ ತಾಳಿಮಾರಗಗೊಡ ಮಾಡುವ ಅವರ ಕರ್ತವ್ಯವದೆ ಇದು ಅವರು ನೆನೆದಿರಲಿ.

ತಾ 31 8 /21 | **M. P. Nadkarni.**

ದುರುಸ್ತಿ.

ಕಳೆದ ಸಂಚಿಕೆಯಲ್ಲಿ ಪುನಃ ಜಂಗ್ ಕಮೀಟಿ ಈ ... ಚರಣದಲ್ಲಿ ಕಮೀಟಿ ಬೇಕೆನ್ನುವವರಲ್ಲಿ—— ಜಂಬ ... ಡಿಯುವವರ ಇದ್ದಾರಂತೆ ಈ ವಾಕ್ಯದ ಬದಲಾ ... ಕಮೀಟಿ ಬೇಡೆನ್ನುವವರಲ್ಲಿ—— ಜಂಬ ಬಡಿ ... ವವರೂ ಇದ್ದಾರಂತೆ ಹೀಗೆ ಓದಬೇಕು

ವಿವಿಧ ವರ್ತಮಾನ

—ಐಯರ್ಲಂಡದಲ್ಲಿ ಪುನಃ ಒಂದಾವೇಳೆ ಪ್ರಾರಂಭವಾಗಿ ... ಬೆಲಫಾಸ್ಟ ಶಹರದಲ್ಲಿ ಜನರಿಗೂ ಸರಕಾರಿ ಸೈನಿಕರಿ ... ಹದನಗಳಾದವು ಈಗ ಬೆಲಫಾಸ್ಟ ಪಟ್ಟಣವು ಲಷ್ಕ ... ಅಮಲದಾರರ ವಶಕ್ಕೆ ಕೊಡಲ್ಪಟ್ಟಿದೆ

ವಿತಾಪತಿನ ಕಾದಾಟವನ್ನು ಬಹ ಶೌರ್ಯದಿಂದ ಹೋ ... ಡುವ ಅಂಗೋರಾ ಸರಕಾರಕ್ಕೆ ಗೋರಖಪುರದ ಮೌಲಾ ... ಸ ಖಾನಸಲ್ಲಾ ಸಾಹೇಬರು ೫೦ ... ರೂಪಾಯಿಗಳ ಸಹಾಯ ಮಾಡಿದರು

ಪಂಜಾಬದೇ ... ಗಿನ ಅಸಹಕಾರಿತೆಯ ಠರಾವನು ... ಸ್ಥಾನಿಕ ಕಾಯಿದೆ ... ಪಸ್ತೂಟಿ ... ಪ್ರೀಸಿಡೆಂಟರು ತಮ್ಮ ಪಸ್ತೂಟಿ ಪ್ರೆಸಿಡೆಂಟ ... ರಾಜೀನಾಮೆಯನ್ನು ಕೊಟ್ಟಿರುವರು

... ಆಮೇರಿಕಾಖಂಡದಲ್ಲಿ ... ವ್ಯಸಾನವ ... ಲ ... ಪ್ರೊ. ಪ್ರೆಂಕ್ಲಿನ್ ಜೋನ್ಸನರವರು ಕಳೆದ ... ರೀತಿಯ ಮಂಡಳಿಯಲ್ಲಿ ... ವರ ಅಮೇರಿಕೆಯ ... ವ್ಯಸನದ ಉಚ್ಚಾಟನವನ್ನು ... ಸಿದ ... ವಿಷಯದಮೇಲೆ ಅವರು ಕಳೆದ ... ಅಗೋ ... ಸ್ಟ ... ನೇ ತಾರೀಖಿನಲ್ಲಿ ... ಉಪನ್ಯಾಸಗಳ ... ನ ... ಕೊಟ್ಟರು

ವ್ಯಾಪಾರ ... ದೆ ... ವಳೆ ... ಕಳೆದ ... ೩೧ರ ವರೆಗೆ ... ಹಿಂದೂಸ್ಥಾನ ಸರಕಾರಕ್ಕೆ ... ಲಕ್ಷ ರೂಪಾಯಿ ... ಬಂದಿರುವದು

... ಖಾಯಿ ... ಗಳನ್ನು ಮಾರಿದರೂ ... ಏತನ್ಮಧ್ಯ ... ವಸರ ... ನೆ ತ್ರೈಮಾಸಿಕ ... ದಲ್ಲಿ (ಎಪ್ರಿಲ ಜೂನದವರೆಗೆ) ... ಕೋಟಿಯ ... ಖಾ ... ತೆ ತಪ್ಪಿಬಂದಿರುವದು

—ಸ್ವ ... ದ ವನವಿ ... ಅಖಿಲ ಭಾರತೀಯ ಹಿಂದೂ ... ವದ ಪರಿಷದೆಯು ಸರಕಾರವು ತಮ್ಮ ಗೋವಧಾ ... ರಕ್ಷಣೆಯ ... ವ ಠರಾವಿಗೆ ... ಗೊಡಲಿಲ್ಲೆಂದ ಅಸಹ ... ಕಾರಿತೆಯ ಠರಾವನ್ನು ಪಾಸಮಾಡಿರುವದು ... ವ ... ಕಾರಣಕ್ಕೆ ಹಿಂದೂ ... ಇನ್ನೊಂ ... ದ ಕಾರಣವು ಅಸಹಕಾರಿತೆಗ ಗಂಟುಬಿತ್ತು

—ವ್ಯ ... ನ ಪ್ರ ... ದಲ್ಲಿ ಗೊಂದಲ ಎಬ್ಬಿಸಿದ ಸರ ... ದಾರ ... ಜಾಲಂಧರವರ ... ಈಗ ತಮ್ಮ ಕಾರಸ್ಥಾನಗಳನ್ನೆಲ್ಲ ... ವೇರಿಸುವವರಿದ್ದಾರಂತೆ ನೋಡುವ ... ಹೊರ ... ಬೀಳ ... ದೆ

—... ದಿವಸ ... ಪಕ್ಷಿಯಂತೆ ನಿರೀಕ್ಷಿಸುತ್ತಿರು ... ಪ್ರೈಸರಾಯರ ... ಕಳೆದ ಶನಿವಾರ ... ಕಟವಾಗಿರ ... ವರಲ್ಲಿ ಒನರಿ ... ಸಮಾಧಾನ ... ಗ ... ಜೂಲವೇ ... ದಿಂದ ... ಒಂದದ

... ಮೋಪ್ಲಾ ದಂಗೆಯ ... ಮುದ್ರಾ ... ಸ್ಯಾಂಕರ ... ಕೊಟ್ಟು ಮಾಡಿದ ಸಂದಿಯ ... ವದ್ರ್ಯಾನ ಸಂಪಾದಕರ ... ಗೆ ಮಾಡಿದ ... ಅಧಿಕಾರಿಗಳು ಗೋಚರಿಸಿದರು ... ತದೆ ... ಪ್ರಸ್ತಾ ... ವರು ಈ ಪ್ರಕರಣದ ... ದಾರರ ಪರ್ತನೆ ಅತಿ ಆಕ್ಷೇಪಾರ್ಹವಾಯಿ ... ಲೇಖವ ... ಗಿದೆ ಸವ್ಯಕ್ಕೆ ನಡೆದಿರ ... ಕ್ಯಾದ ... ನ ಬ್ಯಂಕಿ ... ರಾ ... ನಿವಾಸ ಅಯ್ಯಂಗಾರರೆಂಬ ... ಈ ಪ್ರಕರಣವನ್ನು ಚರ್ಚಿಸಲಿಚ್ಛಿಸಿ ... ಬಂದ (...) ... ಠರಾವಿನ ನೋಟೀಸ ಕೊಟ್ಟ ... ರ ಈ ಚರ್ಚೆ ... ನಡೆಸದೆ ... ಬುದ್ಧಿ ... ಗವರ್ನರರಾದ ... ವಿಲ್ಲಿಂಗ್ಡನರವರು ... ಸಿಕ ... ದ ... ವರಿಂದ ಶ್ರೀನಿವಾಸ ಅಯ್ಯಂಗಾರರವರ ಠರಾವ ... ನ್ನು ವಜಾ ಮಾಡಿದರು ಗವ್ಹರ್ನರರ ಈ ಧೋರಣದ ನಿಷೇ ... ಧವೆಂದೋ ... ಸಾಯಂಕಾಲದ ಬೈಠಕಿಗೆ ... ಸ ... ಭಾಸದರ ಗೈರಹಜರಾದ್ದರಿಂದ ಕೌನ್ಸಿಲುಗಳು ಅಧಿ ... ಕಾರಿಗಳ ಕೈಯೊಳಗಿನ ಗೊಂಬೆಗಳೆಂಬುದಕ್ಕೆ ಇನ್ನೂ ಪ್ರ ... ಮಾಣ ಬೇಕೇನ

—ಮದ್ರಾಸಿನ ಸರಕಾರೀ ಬ್ಯಾಂ ... ಫ್ರೆಂಕ್ಲಿನ್ ವ ... ಪಬ್ಲಿಸಿ ... ಟಿ ಬ್ಯೂರೋ ... ವ ... ದ್ರಾಸ ಇಲಾಖೆದ ಅ ... ಧಿ ... ಸ ... ಧಾರಿಸ ... ವ ... ಉಪಾಯಗಳು ... ಬ ... ಚಲೋ ವ್ಯವಹಾರಿಕ ... ಸಿ ... ವವರಿಗೆ ೫೦ ರೂಪಾಯಿ ಬಕ್ಷೀಸು ಇಟ್ಟಿರುವರು ಈ ... ತೆದ ಉದಾಹರಣೆಯನ್ನು ಅನ ... ಕರಿಸಿ ಹಿಂದೂಸ್ಥಾನ ಸರಕಾರವು ಆರ್ಥಿಕ ... ನ ... ಕರ ... ಕವಿ ... ನ ಮೊದಲಾದ ಅತಿ ... ತುಟ್ಟಿ ... ಗಳನ್ನು ನೇಮಿಸುವದಕ್ಕಿಂತ ... ನ ... ರಗಳನ್ನು ... ದರೆ ಈಗ ಒಹಳೇ ಲಾಭ ... ವಾಗಬಹುದು ... ಗೆ ಮದ್ರಾಸ ಪಬ್ಲಿಸಿಟಿ ಖಾತೆಗೆ ಕೆಲ ... ಅದನ್ನು ... ಅವರ ... ಅಷ್ಟರವರೆಗೆ ಮದ್ರಾಸ ಇಲಾಖೆಯ ... ಸುಧಾರಿಸ ... ತ್ತಿತ್ತು

—... ಮರದಿವಸ ... ಘಂಟೆಗೆ ... ವ ... ಫಾ ... ರಾ ... ವಿದ್ಯಮಾನ ಪಿತಾಪ ... ದ ಬಾ ... ಬಾ ... ಸ್ಥಳವು ಎಕ್ಕ ... ಲ ... ಯಿಂದ ಜರು ... ಗಿ ... ಕಸ್ಥಾನವನ್ನು ... ಮುಕುಂದರಾವ ... ಕ ... ರರವರ ... ಗೀಸಿದ್ದರು ಸಭೆಯಲ್ಲಿ ಗಾವ ... ವ್ರ ಮೊ ... ಕ ... ಕತ ... ವೇದಾಸ ... ಸರೋ ... ಮೊದಲಾದ ದೇಶಭಕ್ತರ ಉಪನ್ಯಾಸಗ ... ದವು ... ಗೆ ... ೩ ... ಸಾವಿರ ರೂಪಾಯಿ ... ಪ್ರ ... ಮತ್ತು ... ಬ್ಯಾಂಕರಗಾ ... ನವಾರ ... ಗಿ ...

ಪತ್ರಿಕೆಗಳ ಅಂಬೋಣ.

... ಸುರೇಂದ್ರನಾಥರ ... ವಿಷ ... ವಿಷಣ್ಣ ... ವನ್ನು ಪ್ರಕಟಿಸುತ್ತಿದ್ದಾಗ ಒಂದು ವಿನೋದ ವೃ ... ತ್ತಾಂತವು ನಡೆಯಿತೆಂದು ಅಮೃತ ಬಜಾರ ಪತ್ರಿಕೆ ... ಹೇಳುತ್ತದೆ ಸುರೇಂದ್ರರ ಆಗಮನಕ್ಕಾಗಿ ಅಲ್ಲಿನ ಬಂ ... ದ ... ಯನ್ನು ತಳಿರುತೋರಣಗಳಿಂದ ಅಲಂಕರಿ ... ಸಿದ್ದರಲ್ಲದೆ ಡಿ|| ಮೆಜಿಸ್ಟ್ರೇಟ ಶ್ರೀ ಬಿ ... ಗವರ್ನಮೆಂಟ ... ನ್ಯಾಸಮೊದಲಾದ ಅನೇಕ ಪ್ರಮುಖ ... ರಿಗಳೂ ಆಗ್ಗೆಯೆಮೇರಿಗೆ, ಸುರೇಂದ್ರರನ್ನು ಕಾದು ... ಕೊಂಡಿದ್ದರು ಕಾಲಕ್ಕೆ ಸರಿಯಾಗಿ ಸುರೇಂದ್ರರೂ ... ಬಂದರು ಅವರಿವರ ಕುಶಲ ಪ್ರಶ್ನೆಗಳು ಮುಗಿದು ... ಸುರೇಂದ್ರರು ರಥವನ್ನೇರುವಷ್ಟರಲ್ಲಿ ಕೆಲವು ಪೋರ ... ರು ಕೈಯಲ್ಲಿ ನಿಶಾನಿಗಳನ್ನು ಹಿಡಿದ ... ದು ದಿನ ... ಮಧ್ಯದಿಂದ ... ಬಂದರು ಸುರೇಂದ್ರರ ... ಮ ... ರ್ಯಾದೆ ಮಾಡಲ ಬಂದರೆಂದು ಹಿಗ್ಗಿ ಟೋಪಿ ... ಯನ್ನು ... ವಾಗ, ಹಠಾತ್ತಾಗಿ ಆ ಬಾ ... ವುಟಿಗಳಲ್ಲಿದ್ದ ವಾಕ್ಯಾವಳಿಗಳು ಕಣ್ಣಿಗೆ ಬಿತ್ತು ಆ ... ವಾಕ್ಯಗಳು ಹೀಗಿದ್ದವು — "ಸ್ವದೇಶೀ ಕಾಲದ ಸು ... ರೇಂದ್ರನಾಥರೆಂದರೆ ತಾವೇನೋ? ... ಸ್ವಾಮಿ ... ರ ... ಗಿ ತಾವು ಹಿಂದು ಸಾಮ್ರಾಜ್ಯವನ್ನೇ ಕಳೆದು ... ಕೊಂಡಿರಾ ?" ಎಂತಹ ಉಚ್ಚಸ್ಥಾನದಿಂದ ಎ ... ದಂತಹ ... ಕ್ಕೆ ಬಿದ್ದಿರಿ " ನಮ್ಮ ... ನಾಯಕ ... ದುರಾದೃಷ್ಟಕ್ಕೆ ತಾವೇ ಮೂಲಕಾರಣ ... ರು " ಸ ... ಯ ... ಅದಾಗಿಂದ್ದ ದೊ ... ಡ್ಡ ನಕಲಿಯು ಆಟ " ನೋಡಿ ಸುರೇಂದ್ರರು ಬೆವ ... ರಾಡರು ನಾಚಿಕೆಯಿಂದ ತಲೆಕೆಳಗ ಹಾಕಿದರು. ಅವರ ಪ್ರಕಾಶ ... ಗಿದ್ದ ಆ ಮುಖ ... ಗೇ ರಕ್ತ ಆರಿ ಬೆಳ್ಳಗಾಗಿ ಹೋಯಿತು. ಈ ಮ ... ಧ್ಯೆ ಆ ಪೋರರೂ, ಇಷ್ಟಕ್ಕೂ ಸುಮ್ಮನಿರದೆ "ಹಿಂ ... ದೊಮ್ಮೆ ತಮ್ಮನ್ನು ಸ್ತೈದು ಮಾಡಿದ ಡಿ|| ಮ್ಯಾ ... ಜಿಸ್ಟ್ರೇಟರೇ ಇಂದು ತಮಗೆ ಸುಖಾಗಮನವನ್ನು ... ಬಯಸಲು ಬಂದ ಡಿ|| ಮ್ಯಾಜಿಸ್ಟ್ರೇಟರೂ ಇವರೇ ಅ ... ಲ್ಲವೆ ?" ಎಂದೂ ಕೇಳಲು, ಸುರೇಂದ್ರರಿಗೆ ಇದ್ದ ಜೀ ... ವವೂ ಹಾರಿಹೋದಂತಾಗಿರಬೇಕು ಹಾಜರಿದ್ದ ಡಿ|| ಮ್ಯಾ ... ಜಿಸ್ಟ್ರೇಟರಾದರೂ ಈ ಪೋರರ ಹಾವಳಿಯಿಂದ ಸು ... ರೇಂದ್ರರನ್ನು ರಕ್ಷಿಸದಿದ್ದುದು ಆಶ್ಚರ್ಯಕರ ! ... ಅಂದಿನ ಆ ಸ್ವದೇಶೀ ಕಾಲದ ಸುರೇಂದ್ರರ ಆಗಮ ... ನ ಸಂಭ್ರಮ ಕ್ಕೂ, ಇಂದಿನ ಈ ಮಂತ್ರಿಪದವಿಯ ... ಸತ್ಕಾರ ಸಮಾರಂಭದ ವೈಭವಕ್ಕೂ ಎಲ್ಲಿಂದೆಲ್ಲಿಗೆ !

— ಕಂಠೀರವ

ಮ. ಗಾಂಧಿಯವರ ಅಪ್ಪಣೆ.
ವಿಲಾಯತಿ ಮ್ಹಾಲಿಗೆ ಬಹಿಷ್ಕಾರ.

ನಮ್ಮಲ್ಲಿ ನೂಲುತೆಗೆಯುವ ರಾಹಾಟಿ ಚರಕ, ಶು ... ದ್ಧ ಖಾದಿ ರಾಷ್ಟ್ರಗೀತೆ ಮಹಾತ್ಮಾ ಗಾಂಧಿಯವ ... ರ ಫೋಟೋಗಳು ಬೇರೆ ತರದ ಸ್ವದೇಶೀ ಮ್ಹಾಲು ... ಯೋಗ್ಯ ದರದಿಂದ ಸಿಗುವದು.

ಕೈಯಿಂದ ನೂಲುತೆಗೆದು ತಯಾರಮಾಡಿದ ಬೇ ... ರೆಬೇರೆ ನಮೂನೆಯ ಖಾದಿಯು ಸದ್ಯದಲ್ಲಿ ಒದುವ ... ದರಿಂದ ವ್ಯಾಪಾರಸ್ಥರಿಗೆ ಭರಪೂರ ಕಮಿಶನ್ನ ... ಕೊಡುವೆವು

ಕಾಡ್ಲ ವಾಸುದೇವ ಪಾಂಡುರಂಗ ಶ್ಯಾನಭಾಗ

ಮತ್ತು ಬ್ರದರ್ಸ

ಹೊನ್ನಾವರ ಜಿ ಕಾರವಾರ.

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ಬಿಸಿಯಿಂದ ಬೇಕಾಗುವ ... ಎಲ್ಲ ತರದ ಹೊಸ ಛತ್ರಿಗಳು, ಜ್ವರ ... ಕೆಮ್ಮು, ಜಂತು, ... ಹೆಂಗಸರ ಗರ್ಭಾಶಯದ ವಿಕಾರ, ಪರಮಾ ಅಶಕ್ತತೆ ... ವಗೈರೆ ವಿಕಾರದ ಮೇಲೆ ಖಾತ್ರಿಯಾಯಕ ಪೇಟಂಟ ... ಔಷಧಗಳೂ ಸ್ಟೇಶನರಿ ಪರಫ್ಯೂಮರಿ ವಗೈರೆ ಸಾಮಾ ... ನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ... ಟೊಪ್ಪಿಗೆಗಳೂ ಕಾಬಳೀ ಟೊಪ್ಪಿಗೆಗಳೂ ಅಗದೀ ಕಡಿ ... ಮೆ ದರಕ್ಕೆ ಕೊಡಲಾದೀತು

ಎಸ್ ಎಲ್ ಧಾಕಪ್ಪ ಮತ್ತು ಬಂಧು

ಶಿರ್ಶಿ.

ದೇಶಾಭಿಮಾನಿಗಳೂ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಿರಿ

ನವಯುಗ.

ಹೊಸ (ಕನ್ನಡ) ವಾರಪತ್ರಿಕೆ ಸಪ್ಟಂಬರ ತಾ ೭ ಕ್ಕೆ ... ಹೊರಡುವದು ಅನಂತರ ಪ್ರತಿ ಗುರುವಾರ ದಿವಸ ಪ್ರಕ ... ಟವಾಗುವದು.

ಪತ್ರಿಕೆಯು ನವ ದೇಶ ಲೇಖಕರ ಸಹಾಯದಿಂದ ನಡೆ ... ಯಿಸ್ಪಡುವದು ಮತ್ತು ಇದರಲ್ಲಿ ಸಾರ್ವಜನಿಕ ವಿಷ ... ಯಗಳೂ ಸ್ವದೇಶ ಹಿತವಿಚಾರಗಳೂ ನಿರ್ದಾಕ್ಷಿಣ್ಯವಾಗಿ ... ಯೂ ನಿಷ್ಪಕ್ಷಪಾತವಾಗಿಯೂ ಚರ್ಚಿಸಲ್ಪಡುವವು

ವಾರ್ಷಿಕ ಚಂದಾ ದರ	ರೂ ೩ ೮ ೦
" ಪರಸ್ಥಳಕ್ಕೆ ಟಪಾಲ ಸಹಿತ	೪ ೦ ೦

ಜಿಲ್ಲೆಯ ಪ್ರಮುಖ ... ಸ್ಥಳಗಳಲ್ಲಿ ಬಾತಮಿದಾರ ... ಮತ್ತು ಚಂದಾದಾರರನ್ನು ಒದಗಿಸಿಕೊಡಲಿಕ್ಕೆ ಏಜಂಟ ... ರು ಬೇಕು ಪ್ರಕಟಣೆ ದರಗಳ ಮತ್ತು ಏಜಂಟರ ಕ ... ಮಿಶನ್ ಕುರಿತು ಕೆಳಗಿನ ವಿಳಾಸಕ್ಕೆ ಬರುಕೊಳ್ಳಬೇಕು

ಮೆನೇಜರ್, 'ನವಯುಗ'

ಬಾಸೆಲ ಮಿಶನ ... ಮಂಗಳೂರ

ಮುದ್ದೈನವ್ವೋ ?
ದುರಾಗ್ರಹವ್ವೋ ?

ಸಧ್ಯದ ಸಮಯುಗದಲ್ಲಿ ಶಿಕ್ಷಣ ಸುಧಾರಣೆಯ ಬಗ್ಗೆ ಸರಕಾರದಿಂದ ಹೆಚ್ಚು ಲಕ್ಷ್ಯವು ಪೂರೈಸಲ್ಪಡುತ್ತಿದ್ದು ತಕ್ಕ ಅನುಕೂಲತೆಗಳೂ ದೊರೆಯುತ್ತಿರುತ್ತವೆಯೆಂಬುವೇ ನೋಡಿದರೆ ಅವರ ಸತ್ಕಾರ್ಯಕ್ಕೆ ಅನೇಕ ವಿಧದಿಂದ ವಿಘ್ನಗಳೊದಗುವದು ಸ್ವಾಭಾವಿಕವಿರುವದರಿಂದ ಈ ವಿಷಯದಲ್ಲಿಯೂ ಕೂಡ ಸತ್ತಾಧಾರಿಗಳು ಪ್ರತೀಕಾರೋಪಾಯಗಳನ್ನು ಚಿಂತಿಸುವದು ಕರ್ತವ್ಯವಿರುತ್ತದೆ ನಮ್ಮ ಜಿಲ್ಲೆಯು ಸುಧಾರಣೆಯಲ್ಲಿ ಹಿಂದುಳಿದ ಜಿಲ್ಲೆಗಳ ಮಾಲಿಕೆಯಲ್ಲಿ ಎಣಿಸಲ್ಪಡುವ ಕಾರಣವು ವಿದ್ಯಾಭಿವೃದ್ಧಿಯಾಗದಿರುವದೇ. ವಿದ್ಯಾಭಿವೃದ್ಧಿಗೆ ಪ್ರಾಥಮಿಕ ಶಿಕ್ಷಣವು ಮೂಲಧನವಾಗಿದ್ದು, ನಮ್ಮಲ್ಲಿ ಅದರ ಪ್ರಗತಿಯು ಕುಂಠಿತವಾಗಲಿಕ್ಕೆ ಬಹ್ವಂಶದಿಂದ ಮಾಸ್ತರ ಜನರ ಔದಾಸೀನ್ಯವೇ ಮೂಲಕಾರಣವಾಗಿರುವದು ಎಲ್ಲಿಯೋ ಅಗಲಿ ಮೂರು ನಾಲ್ಕು ವರ್ಷ ಮಾಸ್ತರಜನರು ಬಿಟ್ಟುಗೊಡಿದರೆ ತೀರಿತ ಪಗಾರಿ ಸ್ಕೇಲಿನಬಗ್ಗೆ ವಿಶೇಷ ವರ್ತಮಾನಗಳೇನು ಈ ವರ್ಷದ ವರ್ಗಾವರ್ಗಿಯು ಎಂದು ಆಗಬಹುದು ? ಮತ್ತು ಯಾರು ಯಾರಿಗೆ ಆಗಬಹುದು ? ನಾನಂತೂ ೩-೪ ವರ್ಷ ಘಟ್ಟದಮೇಲೆ ಸತತವಾಗಿ ಕೆಲಸ ಮಾಡಿ ಮಲೇರಿಯದ ಮೂಲಕ ಪ್ರಕೃತಿ ಕೆಟ್ಟಿರುವದರಿಂದ ನನಗೆ ಘಟ್ಟದಕೆಳಗೆ ವರ್ಗವಾಗುವವರೆಗೆ ಸೀಕ್ ರಜೆ ಇಲ್ಲವೆ ಜಿನ್‌ಪಗಾರಿ ರಜೆಯನ್ನಾದರೂ ತಕ್ಕೊಂಡು ಕಾಲಹರಣಮಾಡುವೆನೇ ಹೊರತು ತಿರುಗಿ ಆ ಕಡೆಗೆ ಹೋಗಲಾರೆ" ಇವೇ ಮೊದಲಾದ ಪುರಾಣಗಳೇ ಹೊರತು ಬೇರೊಂದಿಲ್ಲ ಇಂದೆ ಉದಾಸೀನರಿಂದ ಶಾಲೆಯ ಸುಧಾರಣೆಯಾಗುವ ಬಗೆ ಹೇಗೆ

ಶಿಕ್ಷಕರ ಶಾರೀರಿಕ ಮಾನಸಿಕ ಶಕ್ತಿಗಳು ಸುಸ್ಥಿತಿಯಲ್ಲಿದ್ದ ಹೊರತು, ಅವರ ಉದ್ಯೋಗವು ಫಲಪ್ರದವಾಗಲಾರದು ಅವರು ಆಸ್ಥೆಯಿಂದ ಕೆಲಸಮಾಡಬೇಕಾದರೆ ನ್ಯಾಯವು ಸಿಗುತ್ತಿರಬೇಕ ವರ್ಗಾವರ್ಗಿಯಂಥ ಮಹತ್ವದ ವಿಷಯದಲ್ಲಿಯಂತೂ, ನ್ಯಾಯಪೂರ್ವಕ ವಿಚಾರಿಸಲ್ಪಡಬೇಕು ಇಲ್ಲದಿದ್ದರೆ ಅವರ ಔದಾಸೀನ್ಯವು ಹೆಚ್ಚುವದು ಬಂದೀವಾಸದವರಿಗೂ ಮಾಸ್ತರಜನರಿಗೂ ಸರಿಸ್ಯಾಡಿದರೆ ಎಂದೂ ನಡೆಯಲಾರದು ಉದಾಸೀನರಾದ ಬಂದೀವಾಸಿಗಳು ದಂಡನೆಯ ಭಯದಿಂದ ಶಾರೀರಿಕ ಶ್ರಮಪಡುತ್ತ ಬಾಳಲು ಶಕ್ತರಾಗುತ್ತಾರೆ ಆದರೆ ಯಾವ ಭಯದಿಂದಲೂ ಉದಾಸೀನರಾದ ಶಿಕ್ಷಕರು ಮಾತ್ರ ಮಾನಸಿಕಶ್ರಮವನ್ನು ಮಾಡಲು ಶಕ್ತರಾಗಲಾರರೆಂಬುದು ಆನುಭವಸಿದ್ಧವಾದ ಮಾತಾಗಿದೆ ಅಂದಮೇಲೆ, ಘಟ್ಟದಮೇಲಿನ ಮಲೇರಿಯಾ ಪ್ರದೇಶದಲ್ಲಿ ಮೂರ ನಾಲ್ಕು ವರ್ಷ ಸತತವಾಗಿ ಕೆಲಸ ಮಾಡಿ ಶಾರೀರಿಕಬಲವನ್ನು ಕೆಡಿಸಿಕೊಂಡು, ಅಲ್ಲಿ ಕೆಲಸ ಮಾಡಲು ಮನಸ್ಸಿಲ್ಲದೆ ತನಗೆ ಅನುಕೂಲವಾದ ಯಾವದೊಂದು ಘಟ್ಟದ ಕೆಳಗಿನ ಶಾಲೆಯನ್ನ ಕೊಟ್ಟಲ್ಲಿ ಉತ್ತಮರೀತಿಯಿಂದ ಕೆಲಸಮಾಡತಕ್ಕೇನಾಗಿ ವಿನಂತಿಮಾಡಿಕೊಳ್ಳುವ ಶಿಕ್ಷಕನಿಗೆ ತುರ್ತ ಖಾತೆಯ ಅನುಕೂಲತೆಯಿಲ್ಲ ನೀವು ಅರ್ಜಿಮಾಡುವದರಲ್ಲಿ ಹೊತ್ತುಗಳೆಯದೆ ಕರ್ತವ್ಯದಲ್ಲಿ ಜಾಗರೂಕರಾಗಿರಿ ಇವೇ ಮೊದಲಾದ ಆಶ್ವಾಸನಗಳು ದೊರೆಯುತ್ತಿದ್ದರೆ ಪರಿಣಾಮವೇನಾಗಬಹುದು ? ೧೦-೧೫ ವರ್ಷಗಳವರೆಗೆ ಬಂದೇ ಸವನೆ, ಮಿತ್ರರ ಬಯಿಗೆ ಪಾತ್ರರಾದ ಮಾಸ್ತರಜನರನೇಕರಿಗೆ ಘಟ್ಟದಕೆಳಗೆ ಸ್ಥಳಾನುಕೂಲತೆಯಿದ್ದು, ಬಹುಕಾಲ ವರಿಷ್ಠರ ಅಪರಿಚಿತರಾದ ಹೊಸಬರಿಗೂ, ನಿಷ್ಠುರಕ್ಕೆ ಪಾತ್ರರಾದ ಇತರರಿಗೂ ಮಾತ್ರ ಸಕಾಲದಲ್ಲಿ ಘಟ್ಟದಕೆಳಗೆ ವರ್ಗಮಾಡಲಿಕ್ಕೆ ಖಾತೆಯ ಅನುಕೂಲತೆಯಿರುವದಿಲ್ಲವೋ ?

ಘಟ್ಟದ ಕೆಳಗಿನವರು ಘಟ್ಟದಮೇಲಿನ ಮಲೇರಿಯಾ ಪ್ರದೇಶದಲ್ಲಿ ಬಂದೇಸವನೆ ಉತ್ಸಾಹದಿಂದ ೩-೩॥ ವರ್ಷಗಳಿಗಿಂತ ಹೆಚ್ಚು ಕಾಲ ಕೆಲಸಮಾಡಲಾರರೆಂಬುದು ವರಿಷ್ಠರ ಅನುಭವಕ್ಕೆ ಬಂದಿರಬಹುದು ಯಾಕಂದರೆ, ಘಟ್ಟದಮೇಲಿಂದು ಬಂದಿರತು ವರ್ಷಗಳವರೆಗೆ ಅವರು ತಾವು ಉತ್ತಮರೀತಿಯಿಂದ ಕೆಲಸಮಾಡಿ ವರಿಷ್ಠರ ಅನುಗ್ರಹವನ್ನು ಪಡೆದು ನಿಯಮಿತಕಾಲಕ್ಕೆ ಇಚ್ಛಿತಜಾಗೆಯನ್ನು ಪಡೆಯಬಹುದೆಂಬ ಸದಾಶಯದಿಂದ ದುಡಿದು ಸಿರ ಕಿಮ ತೋರಹತ್ತಿದ ಕೂಡಲೆ ಶಾಲೆಯ ಸ್ಥಿತಿಯನ್ನು ಕೆಡಿಸಹತ್ತಿದ ಉದಾಹರಣೆಗಳು ಅನೇಕ ಉಂಟು ಕಾರಣ ನಿಷ್ಪಕ್ಷಪಾತದಿಂದ ನಿಯಮಿತ ಅವಧಿಯವರೆಗೆ ಎಲ್ಲ ಮಾಸ್ತರಜನರಿಗೂ ಘಟ್ಟದಮೇಲೆಯನ್ನು ನಿಯಮಿಸುವದರಿಂದ ಈ ಅರಿಷ್ಟವು ನಿಶ್ಚಯವಾಗಿ ದೂರಾಗಬಹುದು

ಸಧ್ಯಕ್ಕೆ ಘಟ್ಟದಮೇಲೆ ಸತತವಾಗಿ ೩॥ ವರ್ಷಗಳಿಗಿಂತ ಹೆಚ್ಚು ಕಾಲ ಕೆಲಸಮಾಡಿದ ಮಾಸ್ತರಜನರು ಕೆಲವರಿರುವರು ೨॥-೩ ವರ್ಷ ಕೆಲಸಮಾಡಿದವರಂತೂ ಅನೇಕರಿರುವರು. ಇವರೆಲ್ಲ ಬಹುಕಾಲ ಘಟ್ಟದಕೆಳಗಿನ ಹಾದಿಯು ಎಂದು ತೆರವಾದೀತೆಂದು ನಿರೀಕ್ಷಿಸುತ್ತ ಕೂತವರೇ ಆಗಿರುವರು ಇವರನ್ನ ಘಟ್ಟದಕೆಳಗೆ ಶಕ್ಯವಿದ್ದಷ್ಟು ತೀವ್ರವಾಗಿ ಆದಷ್ಟು ಅನುಕೂಲವಾದ ಜಾಗೆಗಳಿಗೆ ವರ್ಗಪಡಿಸಿ ಘಟ್ಟದ ಮೇಲೆ ಹೋಗದ ಇತರರನ್ನು ಆ ಜಾಗೆಗಳಿಗೆ ನೇಮಿಸಿದರೇನೇ ನಮ್ಮ ಘಟ್ಟದಮೇಲಿನ ಶಾಲೆಗಳು ಸುಧಾರಿಸಬಹುದೇ ಹೊರತು, ಉದಾಸೀನರಾದ ಇವರನ್ನು ಇಲ್ಲೇ ಇಡುವದರಿಂದ ಎಂದೂ ಸುಧಾರಣವಾಗಲಾರದು ಪ್ರಜೆಗಳ ಹಿತಕ್ಕಾಗಿ ಸರಕಾರದವರು ಶಾಲೆಗಳನ್ನಿಟ್ಟದ್ದು ಆಕಾರ್ಯಕ್ಕೆ ಸುಸಂಸ್ಕೃತವಾಗಿ ನಡೆದ ಸ್ವೀಕಾರದೆ, ಕಾರ್ಯಭಾಗವನ್ನು ವಹಿಸಿರುವ ಶಿಕ್ಷಕರ ಹಿತಸಂಬಂಧದಲ್ಲ ಆ ಖಾತೆಯ ವರಿಷ್ಠರ ನ್ಯಾಯ-ನಿಯಮಿತತನಗಳುಂಟಾಗುವಂತೆ ಮಾಡ ವದು ಮಹತ್ವದ ಸಂಗತಿಯಾಗಿದೆ

ಟ್ರೇನಿಂಗ ಕಾಲೇಜದಿಂದ ಬದ ವ ತರುಣ ಶಿಕ್ಷಕರಲ್ಲಿ ಕಲಿಯುವ ಲವಲವಿಕೆಯು ಬಹಳವಿರುತ್ತದೆ ಒದರಿಂದ ಎಷ್ಟೋ ಶಿಕ್ಷಕರು ತಮ್ಮ ನಿತ್ಯದ ಶಾಲೆಯ ಕೆಲಸವನ್ನು ಯೋಗ್ಯರೀತಿಯಿಂದ ಮಾಡಿ ಬಿಡುವಿನಹೊತ್ತಿನಲ್ಲಿ ಇಂಗ್ಲಿಷವನ್ನು ಕಲಿಯಹತ್ತುವರು ಆದರೆ ಇದು ಸುಧ್ಯದಿಂದ ಶಿಕ್ಷಣದ ಇಲ್ಲವೆ ಶಹರಕ್ಕೆ ಸಮೀಪದ ಶಾಲೆಗಳು ದೊರೆತವರಿಗೆ ಮಾತ್ರ ಬಹುಕಾಲ ಸಾಧ್ಯವಾಗುವದು ಅಂದವರ ವಿಷಯದಲ್ಲಿ ಸರಕಾರದ ಸಹಾನುಭೂತಿಯಿರುವದು ನ್ಯಾಯವು ಆದರೆ ಇದು ಅಧಿಕಾರಿಗಳಲ್ಲ ಇದ್ದಂತೆ ತೋರುವದಿಲ್ಲ ಯಾಕಂದರೆ ಮಿ ರಿ. ಪ ಎಷ್ಟೋ ಇವರು ಕಾಲೇಜದಿಂದ ಬಂದವರೇ ಕ ಮಟಾ ತಾಲೂಕ ಹೆಗಡೆ ಶಾಲೆಗೆ ನೇಮಿಸಲ್ಪಟ್ಟು ಅಲ್ಲಿ ದೀರ್ಘಪ್ರಯತ್ನದಿಂದ ೨ ವರ್ಷಗಳಲ್ಲಿಯೇ ೫ ಪುಸ್ತಕ ಇಂಗ್ಲೀಷ ಕಲಿತಿರಲು ಅದಕ್ಕೆ ತೊಂದರೆ ಬರುವಂಥ ಯಲ್ಲಾಪುರತಾಲೂಕಿಗೆ ಅಕಸ್ಮಿಕವಾಗಿ ವರ್ಗಪಟ್ಟರು ಇವರು ತಮ್ಮ ಶಾಲೆಯ ಕೀರ್ತಿಯನ್ನೇನೂ ಕೆಡಿಸಿರಲಿಲ್ಲವಾಗಿ ತಿಳಿಯುತ್ತದೆ ಆದರೂ ಇಂಥ ಗಂಡಾಂತರವು ಅವರಮೇಲೆ ಒಂದವ್ವಕ್ಕಾಗಿ ಸಂಪ್ರಾಪ್ತವಾಗುತ್ತದೆ ಇದು ಅವರ ದೈವ್ಯವವ್ವೋ ? ಅಧಿಕಾರಿಗಳ ದುರಾಗ್ರಹವ್ವೋ ?

ಒಬ್ಬ ಶಿಕ್ಷಣಾಭಿಮಾನಿ

ಸ್ವದೇಶೀ ಕಾರಖಾನೆಗೆ ಉತ್ತೇಜನ
ವಿದೇಶೀ ಮಾಲಿನ ಬಹಿಷ್ಕಾರ

ದಿ, ಸ್ವದೇಶಿ ಇಂಕ ಸ್ಟೋರ್ಸ
ಕರ್ಕಿ ಕೆನರಾ

ಭಾರತೀಯ ಶಾಯಿ ಗುಳಿಗೆಗಳು.

ವ್ಯಾಪಾರಸ್ಥರಿಂದಲೂ ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದದ್ದು

ನಂ ೧ ಉತ್ತಮ ನೀಲಿಕಪ್ಪು ೧೪೪ ಗುಳಿಗೆ ಗ್ರೋಸ ೧ಕ್ಕೆ ರೂ ೧ ೪ ೦ ೬ ಗ್ರೋಸಿಗೆ ರೂ ೫ ೮ ೦ ೧೨ ಗ್ರೋಸಿಗೆ ರೂ ೧೦-೦-೦ ನಂ ೨ ಗ್ರೋಸ ೧ಕ್ಕೆ ೦ ೧೫ ೦ ೬ ಗ್ರೋಸಿಗೆ ರೂ ೫-೦-೦ ೧೨ ಗ್ರೋಸಿಗೆ ರೂ ೮ ೮ ೦ ಕೆಂಪು ಹಸರು ಗ್ರೋಸ ೧ಕ್ಕೆ ರೂ ೧ ೦ ೦ ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನು ೧ ಗ್ರೋಸಿಗಿಂತ ಕಡಿಮೆ ಕಳಿಸುವದಿಲ್ಲ ಇಲ್ಲಿ ದೇಶೀ ಸೋಪೂ ತಯಾರಾಗುವದು.



Notice to Investors

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD SILVER etc Usual commission is charged *Please apply to Messrs*

Gunshekhar & Co.
IRANI BUILDINGS,
Jandeo Road,
BOMBAY. 7.
Telegrams— *Jayayandi*

ಕಾನಡಾ ಜಿಲ್ಲೆಯೊಳಗಿನ ಪ್ರಯಾಣಸ್ಥರ
ಸಲುವಾಗಿ
ಹೊಸ ಸುಧಾರಣೆ,
ಅಂದರೆ—
ಗ್ಯಾತೋಂಡೇ ಬ್ರದರ್ಸ, ಕಾರವಾರ
ಇವರ ಮೋಟರ ಸರ್ವಿಸ್.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦ ೮ ೧೯೦೮ನೇ ಇಸ್ವಿಯಿಂದ ತಾ ೧೯ ೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಗಳು ಕೂಡಿ ಮೂವತ್ತೊಂಬತು ಸಾವಿರ ಬಾಟ್ಲಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡ ತಿರವೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶದಲ್ಲಾ ಹೊ ೧ ರೋಗಿಗಳ ಈ ಅರ್ಕಶಫಾದಿಂದಲೆ ಗುಣಹೊಂದಿದ ಒಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ ಇನಾಮು ಸರ್ಟಿಫಿಕೇಟುಗಳು ಸಹ ದೊರದಿರುತ್ತವೆ ಅವು ಬರದ ವಿಸ್ತರಗಾದವು ಸಾಲದು ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾವುಗಳು

ಕ್ಷಯರೋಗ ಹಡದರೋಗ ಪಾಂಡುರೋಗ ಗುಲ್ಮರೋಗ ಪ [illegible] ಮಹಾಮಾರಿ(ಕಾಲರಾ) ಪ್ಲೇಗು ಚಳಿಜ್ವರ ವಿಷಮಜ್ವರ ಇನ್‌ಫ ಮುಂಜಾಜ್ವರ ಅನೇಕಪ್ರಕಾರದ ಜ್ವರ ಗಂಡಮಾಲೆ [illegible] ಸಾಗಿಸೊಳಗಿನ [illegible] ಮೊದಲಾದ ರೋಗವು ಕಣ್ಣಿನೊಳಗೆ ಹೂವು [illegible] ಕೆಮ್ಮು ದಮ್ಮು [illegible] ಅಜಗ್ಗೆ [illegible] ಹೊಟ್ಟೆಶೂಲಿ ಮೈಶೂಲಿ, ಅರತಲೆಶೂಲಿ ಸಹಶೂಲಿ ಮುತಶೂಲಿ ರೇಕ್ಕಿ [illegible] ಗುದ [illegible] ಸುರ ಕುಕಜ್ಜಿ [illegible] ಘಾಯ ವ್ರಣ, ನಾರಹುಣ್ಣು ಸ್ತ್ರೀಯರ ಮ [illegible] ಶೂಲಿ ಕಡದನಂಜು [illegible] ಕೂಸುಗಳ ಬಾಲಗ್ರಹ [illegible] ಹೊಟ್ಟೆ ನೊಷ್ಟರೋಗ [illegible] ಕೂಸುಗಳಿಗೆ ವೈದ್ಯರಿಗೂ [illegible] ರೋಗಗಳು ಮಿತ್ರಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಡ [illegible] ಧನವಂತರಿಗೂ ಸರಿಯಾಗಿ ಬಹಳ ಕಡಿಮ [illegible] ಇಟ್ಟಿರತ್ತದೆ ಒಂದು [illegible] ತೊಲೆ ಬಾಟ್ಲ ಒಂದಕ್ಕೆ ರಡ ರೂಪಾಯಿ ನವೂ
೨ ಸ ಉದ್ಭಿಕ್ಕೆ ಐದು ಆಣೆ ತೂಕದ ಬಾಟ್ಲ ಒಂದಕ್ಕೆ ಎಂಟು ಆಣೆ [illegible] ಬೇರೆ [illegible] ಬಾಟ್ಲಗಳು ತಕ್ಕೊಂಡರೆ [illegible] ಬಾಟ್ಲಗಳು [illegible] ಕೊಡುತ್ತೇವೆ ಇದಕ್ಕೆ [illegible] ನದು ಒಂದರಿಂದ ಹನ್ನೊಂದವ [illegible]

ಕನ್ ಇಲ್ಲ ಇದಕ್ಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೂಲೆ ಬಾಟ್ಲ ಮೂರ ತೆಗೆದುಕೊಂಡರೆ ಒಂದು ಬಾಟ್ಲ ಕಮಿಶನ್ ಕೊಡುತ್ತೇವೆ ಇವಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಪತ್ರ ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟು ಲಗತ ಇಡದ ಜೊರ್ತು ದೊರೆಯಲಿಕ್ಕಿಲ್ಲ ಅನುಪಾನಪತ್ರಿಕೆಯು ಕನ್ನಡ ಮರಾಠಿ, ಮುಸಲ್ಮಾನಿ ಬಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯ ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್ ಎಂ ಮುಲ್ಲಾ, ಸಂಪಾದಕ ಅರ್ಕಶಫಾ
ಹೆಡ್ ಆಫೀಸು ಶಾಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಪ ಚಾಮುದನ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ ಮುಖ್ಯ ಇಂದ್ರಿಯ ದೌರ್ಬಲ್ಯ ಅಜೀರ್ಣ [illegible] ವ ಲಬದ್ಧತೆ ಶರೀರಗಳ ಮಳಿತದಿಂದ ಅಶಕ್ತಿ [illegible] ಲಾದ ಪ್ರಕೃತಿಯ [illegible] ಇದನ್ನು [illegible] ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ [illegible] ಗೊಳಿಸುವದ 40 [illegible] ಡಬ್ಬಿ 1ಕ್ಕೆ 12 0 3 ಡಬ್ಬಿಗಳಿಗೆ 4 12 0

2 ಮಹಾರಾಜ ರಾಜಕ ತ — ([illegible]) ಇನ್‌ಫ್ಲುಯಂಜಾ ನಿಮೋನಿಯಾ, ದಿವಸತ್ಯಾ [illegible] ದ್ವಿತೀಯ ತೃತೀಯ ಚಾತ [illegible] ಜ್ವರಗಳ [illegible] ರಾವ ಬಾಣ ಬಾಟ್ಲಿ 1 ಕ್ಕೆ 0 8 0

3 ಚಂದ್ರಗ್ರಹ ಗುಳಿಕ — ಕೂಸು ವ ಮಕ್ಕಳ ಅಪಸ್ಮಾರಕ್ಕೆ ರಾಮಬಾಣ ಬಾಟ್ಲಿ 1 ರ ಕ್ರಯ 0 10 0

4 ಬಾಲಕಾಮೃತ ಗ [illegible] ಇದು ಮಕ್ಕಳ [illegible] ಔಷಧಿ ಒಂದೇಗ [illegible] ಕಫ ಉಬ್ಬಸ [illegible] ಕಮ್ಮು ಇವು ಗುಣ ಬಾಟ್ಲಿ 1 ರ ಕ್ರಯ 0 10 0

5 ಇಚ್ಛಾಬೇದಿ — ಅಜೀರ್ಣವನ್ನು [illegible] ದದ ಸುಖಸಿರೇಚಕ ಬಾಟ್ಲಿ 1ಕ್ಕೆ 0 12 0

ಎಮ್. ಗಣಪಯ್ಯಾ ಎ ತ ಸನ್ಸ್
ನೇಟಿವ್ ಡೊಕ್ಟರ್ಸ್ ರಥಬೀದಿ
ಮಂಗಳೂರ ದ ಕ

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡಿಸುವ ವ್ಯವಸ್ಥೆ ಇಟ್ಟದೆ ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾನ್ಹ ೨ ಘಂಟೆಗೆ ಹೊರಡುವದು ಹಾವೇರಿಯಲ್ಲಿ ಆದನಾ ಸಿರಸಿಯಲ್ಲಿ ಅಧಿಕೃತ ಹೆಚ್ಚು ಜನರು ಸಿಕ್ಕಿರೆ ಬೇರೆ ದಿನಗಳಲ್ಲಿ ಸಹ ನಡಿಸುವೆವು

ತಿಕೇಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯ ಲ್ಲಿ ಸ್ಟೇಶನದ ಹತ್ತಿರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕಿ ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷುಮಯ್ಯ ಶ್ಯಾನಭಾಗ್
ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडांतील अनेक वनस्पतींच्या रसांत पौष्टिक औषधीफळाचा रसार्क मिश्र करून, खाली दिलेल्या रोगावर उपयुक्त अशीं भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने नपुंसकत्व स्वप्नजन्य धातुपात, लघवीच्यापूर्वी अगर नंतर स्रवणारा धातुपात नाहींसा करून वीर्य वृद्धि व रक्तशुद्धि होते किंवाहि जुनाट कडकी असो (एक सप्तकांतच) नाश पावते आणि उपदंश संबंधी मुरलेले विकार नाहींसे होऊन हातपाय, डोळे यांचा दाह व धातुविघातक सर्व विकार नष्ट होऊन, शरीर वज्राप्रमाण बनते हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढते आणि संततीस अपायकारक असे गर्भाशयस्थ रोग यांचा समूळ नाश होतो हे औषध स्त्रियांनी सेवन केल्यास त्यांचे जननेंद्रियाचे कोणत्याहि प्रकारचे विकार न राहतां, त्या गर्भधारणास योग्य होतात ह्याच्या सेवनाने दिवसातून तीन वेळा जवळे तरी भूक चांगली लागते व शौचास साफ होते याचा अनुभव औषध घेतल्याच्या पहिल्या दिवशीं येतो तरी ज्यास रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूचे सेवन करून यांतील खरा मजा पहावी फार दिवसाचा रोग असल्यास पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असतां, गुण येईल. एका बाटलीमध्ये १० तोळे औषध [illegible] त्या एका बाटलीची किंमत १। रुपया. तीन बाटल्यांची किंमत ३। रुपये एक डझन (१२) बाटल्यांची किंमत १० रुपये याशिवाय टपाल व प्याकिंग खर्च निराळा पडेल

मॅनेजर,
के एम, हनुमान प्रासादिक कंपनी
जिल्हा बेळगाव, मु पो निपाणी

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ.

ರೂ ೩ ರ [illegible] ಮನಿಯಾ ರ್ಡರ ಮಾತ್ರ ಅಂತರ, ೧ ವರ್ಷದ ವರೆಗೆ ನಿಮ್ಮಲ್ಲಿಗೆ ಬರುವದ ಪತ್ರ— ಕಾನಡಾವೃತ್ತ ಆಫೀಸ ಕುಮಟಾ

Printed and published by Krishnarao Keshav Shenvi at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೭.

ಪತ್ರದ ವರ್ಗಣಿ -
ಕುಮಟೆಯಲ್ಲಿ ಅಗಾವು ರೂಪಾಯಿ 2-0-0
ಮನೆಯೊಾರ್ಡರಿಯಿಂದ ರೂ 2-13-0
ವ್ಹಿ ಪಿ ಅಂಚೆವೆಚ್ಚ ಸೇರಿ ರೂಪಾಯಿ 2-15-0
ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು

ಜಾಹಿರಾತುಗಳ ದರ -
ಕನ್ನಡ, ಇಂಗ್ಲಿಷ ಮ್ಯಾಳ ಟೈಪಿನ(೧೫ ಎಮ್‌ಬ್ಬ) ೪ ಸಾಲುಗಳ ವರೆಗೆ ರೂ 1-0-0
ಅನಂತ್ರ ಪ್ರತಿ ಸಾಲಿಗೆ 0-2-0
ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.
ಖಾಸ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರವಾರ, ತಾರೀಖು ೧೫ ಮಾಹೆ ಸಪ್ಟಂಬರ ಸನ್ ೧೯೨೧ ನೇ ಇಸವಿ.]—

ಖರೇ ಮ್ಹಾಲು! ತಾಜಾ ಕಲ್ಪ್ಯ ತ್ವರ ಗ್ಯಯಿರಿ !

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಸಿ ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಡತನವನ್ನೂ ರೋಗ ... ದೂಡಿಸಿ ಆರೋಗ್ಯವನ್ನೂ, ರತಿಯಲ್ಲಿ ನೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ದೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನುನೀಗಿ ಬಲವನ್ನು ಉಂಟುಮಾಡುವದು ಮೃತ್ಯುವನ್ನು ನಿರಾಕರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು ಜೀರ್ಣಜ್ವರ ಮಂದಾಗ್ನಿ, ಶುಕ್ಲಸ್ರಾವ ಪ್ರಮೇಹ ಮೊದಲಾದವುಗಳನ್ನು ನಾಶಮಾಡುವದು ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಸ್ಪರ್ಶದಿಂದಲೂ ಅತಿ ವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತಿಳುವೂ, ನಿಸ್ತೇಜವೂ ... ಯತ್ನವಿಲ್ಲದೆ ಸ್ಖಲನವಾಗುವದು ಒಂದೊಂದು ಸಾರಿ ಮೂತ್ರದಲ್ಲಿಯೂ ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ ಶರೀರ ಕ್ಷೀಣತೆ, ಅಶಕ್ತಿ ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು ವ್ಯಾಪಿಸುವದು ನಿದ್ರೆಯಲ್ಲಿ ಭಯಂಕರವಾದ ಸ್ವಪ್ನ, ಆಲಸ್ಯ, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು ಇವೆಲ್ಲವುಗಳಮೇಲೆ ರಾಮಬಾಣದಂತಿರುವದು ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ)

ಹೊಸ ಶೋಧ! "ಓಂ" ಹೊಸ ಶೋಧ!!
ಗುಣ ಬಾರದಿದ್ದರೆ, ಹಣವಾಪಸು
(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕರವಾದ ಪಾಕನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಅರ್ಕನು ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಮೊದಲು ಅಥವಾ ಆದಮೇಲೆ ಧಾತು ಬೀಳುವದು ನಿಲ್ಲುತ್ತದೆ ಸ್ವಪ್ನಾವಸ್ಥೆಯು ಆಗುವದಿಲ್ಲ ರಕ್ತ ಶುದ್ಧಿಯಾಗಿ ವೀರ್ಯವೃದ್ಧಿಯಾಗುವದು. ಬಹುದಿವಸದಿಂದ ಮನೆಮಾಡಿದ್ದ ಮೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು ಮಲಶುದ್ಧಿಯಾಗಿ ಸರಿಯಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೊ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು ಹೊಸ ಬೇನೆ ಇದ್ದರೆ, ಒಂದು ಡಬ್ಬಿ ಪಾಕಿನಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕಿನಿಂದಲೂ ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು ೧ ಆಣೆ ೨ ಡಬ್ಬಿಗಳಿಗೆ ೪ ರು ೮ ಆಣೆ ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್ ಬ್ರದರ್ಸ ಮತ್ತು ಕಂಪನಿ.
ಪೋಸ್ಟ ಸಿವಾಪೂರ, ಜಿ ಬೆಳಗಾಂವ

ಅಗ್ಗ] **[ಅಗ್ಗ**

ಮಳೆಗಾಲ ಮತ್ತು ಬಿಸಿಲು ವೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಬ್ಯಾಗ, ಕೆಮ್ಮು ಜಂತು, ಹಂಗಸರ ಗರ್ಭಾಶಯದ ವಿಕಾರ, ಪರಮಾ, ಆಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟ ಔಷಧಗಳೂ ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗೆಗಳೂ ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುತ್ತದೆ

ಎಸ್. ಎಲ್ ಫಾಕಪ್ಪ ಮತ್ತು ಬಂಧು
ಶಿರ್ಸಿ

ಭಡತೀ ಬ್ರಾತೃಸಂಘದ

ಅನುಭವಸಿದ್ಧ ಪಾಡ

ಜರದ ಗುಳಿಗೆಗಳು ಕ್ರಯ — ೩೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಬ್ಬ, ಉಂಚೆ ಕಾಬೂಲೀ ಹಿಂಗು ಇದಲ್ಲದೆ ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ ಶ್ರೀ ಮಂದಿರದ ಫೋಟೋಗಳೂ, ಕಾಲೋಪಯೋಗಿ ಪುಸ್ತಕಗಳೂ ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ

ಕಾರ್ಡಸ್ಸಾಯಿಜ ಫೋಟೋ.

ಮಹಾತ್ಮಾ ಗಾಂಧೀ, ಕೈ ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡಸ್ಸಾಯಿಜಿನ ಫೋಟೋಗಳು ನಮ್ಮಲ್ಲಿ ಸಿಗುವವು

ಕ್ರಯ — ೧ಕ್ಕೆ ೬ ಪೈ, ಡಜನಕ್ಕೆ ೪ ಆಣೆ, ಶೇಕಡಾ ೧ ೧೦-೦ ಟಪಾಲ ಹಾಸಲ ಬೇರೆ ಸಂಪಲಗಳು ಬೇಕಾದರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ,
ಕುಮಟಾ (ಎನ್. ಕೆನರಾ,)

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು, ಜಾಂಬಳಿ ೧೦೦ಕ್ಕೆ ೧೪ ಆಣೆ ಕಪ್ಪು ಮಾತ್ರ ೧೨ ಆಣೆ ಶಾಯಿ ಸಂಪಲಿಗೆ ಒಂದಾಣೆ ಸ್ಟೋಕ ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್ ವ್ಹಿ. ಭಾಗ್ವತ
ಪೋಸ್ಟ— ಹೆಗಡೆ, ಉತ್ತರ ಕಾನಡಾ

ಶ್ರೀ ಕಮಲಾಬಾಯಿಯ

ಅಬಲಾ ಸಂಜೀವನಿ ಗುಳಿಗೆ

ಬರೇ ಸ್ತ್ರೀಯರಿಗೋಸ್ಕರ

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಅಪಾಯಕರ ಮತ್ತು ತೀಕ್ಷ್ಣ ಮನೋವೇಧಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ. ೨೫ ವರ್ಷಗಳದಾರಭ್ಯ ಅವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ. ತಮಗ ಮಾಹಿತಿಯ ಕಟಲಾಗು ಬರೇ ೦-೨-೬ ಸ್ಟಾಂಪು ಕಳುಹಿಸಿದರೆ ಉಚಿತ ಸಿಗುವದು ಬಾಟ್ಲಿ ೧ ರ ಕ್ರಯ ೧-೮-೦ ಟಪಾಲ ಖರ್ಚು ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ

ಶ್ರೀ ಕಮಲಾಬಾಯಿ ಜಿ ಎಮ್ ಸಿ ಫಾರ್ಮಸಿ, ಕಾಳಬಾದೇವಿಯ ಎದುರಿಗೆ ಮುಂಬಯಿ.

ಡಾ. ನವರತ್ನಕರ

ವಿದ್ಯುತ್‌ಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ

ಇದರಿಂದ ಬೂದಿ ಬಣ್ಣದ ಕೂದಲು ಕಾಗೆ ಕಪ್ಪಾಗುತ್ತವೆ. ಈ ಕಲಾಪಿನಗುಣಗಳು — ಸುಲಭ ಹಚ್ಚೋಣ ಇಂಪಾದ ಪರಿಮಳ ಆಗ ಕ್ರಯವೇ ಸರಿ ಬಳಸಿದವರೆಲ್ಲರು ಸಮಾಧಾನಪಟ್ಟಿರುವರು

ಕ್ರಯ ೧—೮—೦ ಅಂಚೆ ವೆಚ್ಚ ಬೇರೆ

೧೨ ಕ್ಕೆ ೧೫—೮—೦

ನವರತ್ನ ಮತ್ತು ಸನ್

199, ಕಾಳಬಾದೇವಿ ರೋಡ ಮುಂಬಯಿ

ಅನುಭವಸಿದ್ಧವಾದ ಔಷಧಗಳು !!!

ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ.

ಪ್ರವಾಳ ಕೇಶರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ ರಕ್ತದೂಷಿತರೋಗ, ಮೇಹಮವಿಕಾರ, ನರಗಳ ಅಶಕ್ತತೆ ಅಂಗನಿಸ್ತೇಜತ್ವ, ಧಾತುಹೋಗುವದು ತಲೆತಿರುಗುವದು ಜೀರ್ಣಜ್ವರ ಅಗ್ನಿಮಾಂದ್ಯ, ಉಬದಂಶವಿಕಾರ ಮಸ್ತಕಶೂಲಿ ಮುಂತಾದ, ಅನೇಕ ವಿಕಾರಗಳು ಸ್ವಲ್ಪದಿಂದ ಗುಣವಾಗಿ, ಶರೀರಕ್ಕೆ ಪ್ರಥಮ ಪೂ ಕಾಂತಿಯೂ ಸ್ಮರಣಶಕ್ತಿಯೂ ಕೂಡ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ. ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪ ೦ ೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳವಳಿ ಅತಿ ಉತ್ತಮವಾದ್ದು ಗುಳಿಗೆ ೩೦ ಕ್ಕೆ ರೂ ೧ ೦ ೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೪ ದಿವಸದ ಔಷದಕ್ಕೆ ರೂ ೨-೦-೦ (೩) ಗಜಕರ್ಣ ನಾಶಕ ಮಲಮ — ಡಬ್ಬಿಗೆ ಆಣೆ ೦-೮-೦ (೪) ಮೂಲವ್ಯಾಧಿ ನಾಶಕಗುಳಿಗೆ — ಎಳು ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨ ೦ ೦

ಅನುಪಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ

ವಿಳಾಸ— **ವೈದ್ಯ ವ್ಹಿ. ಎಸ್ ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ,** ಜಿಲ್ಲಾ ಉತ್ತರಕಾನಡಾ

ಜ್ವರದ ಮೋಲಿ ಪಾಟಣಕರ ಎಗ್ಯು ಮಿಕ್ಚರ

ಮಲಶುದ್ಧಿಯಾಗುತ್ತದೆ, ಜೆವರು ಬಂದು ಜ್ವರವು ಬಿಡುತ್ತದೆ ಕ್ರಯ ೦_೧೨_೦ ರೋಕ ವ್ಯಾಪಾರಸ್ಥರಿಗೆ ಅಗ್ಗ

ಪಾಟಣಕರ ಮಾಯದೇವ ಕಂಪನಿ ಮುಂಬಯಿ ೪

ಲೋಕಮಾನ್ಯವಾದ

ಚಹಾ ಮತ್ತು ನೀಲಗಿರಿ ಎಣ್ಣೆ,

ನೀಲಗಿರಿ ಗ್ಲಂಡೆಲ ಇಷ್ಟೆಟದ, ಎಲ್ಲಾ ತರದ ಚಹಾ ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್ಲ) ರೋಕ ವ ಕಿರಕೋಳ ಬೇರೆಯಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗವ ಇದೊಂದೇ ಸ್ಥಳವು ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟೊಕ್ ಈಗಲೇ ಬಂದಿರುತ್ತದೆ ಪತ್ರದ್ವಾರ ದರದ ಖುಲಾಸೆ ಮಾಡಿಕೊಳ್ಳಿರಿ

ವಿ ಪಿ ಶಾನಭಾಗ ಮತ್ತು ಬ್ರದರ್ಸ

ಹೊನ್ನಾವರ ಉತ್ತರ ಕಾನಡಾ

HONAWAR (N Kanara)

FREE. FREE.

Purchasers of 36 tins of our well renowned Ringworm Ointment price As 4 per tin or of 12 Phials of Otto Mushk hina, Price As 12 per tube will be sent

A WRIST WATCH FREE

King George Coronation Co., BOMBAY No. 4.

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ

ನವೀನ ಭಾರತ.

(ವಾರ್ಷಿಕ ವರ್ಗಣೀ ಅಂಚೆ ವೆಚ್ಚ ಸೇರಿ ರೂ ೩)

ಇದರಲ್ಲಿ ಸಾಮಾಜಿಕ ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ, ಮನೋವೇಧಕವಾಗಿಯೂ ಚರ್ಚಿಸಲ್ಪಡ ಪವೆ

ಸ್ವದೇಶೀ, ಬಹಿಷ್ಕಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖಗಳೂ ಪ್ರಕಟಿಸಲ್ಪಡುವವು ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರ ಪದರಿಂದ, ಜಾಹೀರಾತುಗಾರರಿಗೂ ಅತಿಶಯ ಅನುಕೂಲ

ವಿಳಾಸ— ನವೀನ ಭಾರತ ಕಾರ್ಯಾಲಯ, ಬಾಗಲಕೋಟ (ಜಿ ವಿಜಾಪೂರ)

ಸತ್ಯಮೇವ ಜಯತೇ

(ಗುಣಬಾರದಿದ್ದರೆ ಹಣಮರಳು)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪುಷ್ಟಿಕ ವೀರ್ಯವರ್ಧಕ ರಕ್ತಶೋಧಕ ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗರ್ಮಿ, (ಚಾಸಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳ ಪಿತ್ತದ ಬಾಧೆಗಳು ಕಟಕೂಲಿ ವಾತರೋಗ ಮುಂತಾದವು ಅತ್ಯಂತ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟಪಾಲ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ

ವಿಳಾಸ **ಜಿ. ಎಲ್ ಜೋಶಿ ಕಂಪನಿ**

ಪೋಸ್ಟ— ಸಿರಸಿ, ಉತ್ತರ ಕಾನಡಾ

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಕೊಳ್ಳಬಹುದು ಸವಲತ್ತಿಯ ದರಗಳು ಇಟ್ಟಿರುವೆವು.

ನಮ್ಮ ಪತ್ತೆ —

ಗ್ಯಾತೋಂಡೇ ಬ್ರದರ್ಸ,

ಮೋಟರ್ಡೀಲರ್ಸ, ರಿಪೇರರ್ಸ,

ಕಾರವಾರ.

ಭಕ್ಷೀಸು ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪುಷ್ಟಿಯಾಗಿ ಶರೀರವು ಕಾಂತಿಗೊಳಿಸುವದು ಇದಲ್ಲದೆ ಕೆಮ್ಮು ದಮ್ಮು, ಕಫ, ವಾತ ಪಿತ್ತ, ನಿದೆ, ಆಲ್ಲುರೋಗ, ಮಲವಿಸರ್ಜನೆ ಸರಿಯಾಗಿ ಆಗದಿರೋಣ, ಅಜೀರ್ಣ ಜ್ವರ ಸ್ತ್ರೀಯರ ಗರ್ಭದೋಷ ಈ ಮುಂತಾದ ಹೊಟ್ಟೆಯ ಎಲ್ಲಾ ಬೇನೆಗಳ ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ ೩೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ ಡಿಪೋ, ಕುಮುಟಾ (ಕಾನಡಾ)

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ರೋಕ ದರ ಸವಲತಿದು ಇರುತ್ತದೆ

ಪತ್ತೆ:— ಪಿ. ದಾಸ, ಕುಮುಟಾ

ಆಸಾಮುದಲ್ಲಿ ಮಹಾತ್ಮರು.

ಕೆಲ ಅನುಭವಗಳು

ಆಸಾಮವೆಂಬ ಹೆಸರಿನ ಒಂದು ಪ್ರಾಂತವಿದೆಂದು ನಾನು ಕೇಳಿಬಲ್ಲೆನು ವಿಲಾಯತಿಯಲ್ಲಿದ್ದಾಗ ಮಣಿಪೂರ ದಂಗೆಯ ವೃತ್ತಾಂತವನ್ನು ಓದಿ ಆಸಾಮೀಯರು ಕಾಡು ಜನರೆಂದ ನನ್ನ ತಿಳುವಳಿಕೆಯಾಗಿತ್ತು, ಇದೇ ಕಾರಣದಿಂದ ನನ್ನ 'ಹಿಂದಸ್ವರಾಜ್ಯ' ವೆಂಬ ಪುಸ್ತಕದಲ್ಲಿ ಅವರಿಗೆ ಕಾಡು ಎಂಬ ವಿಶೇಷಣದಿಂದ ಸಂಬೋಧಿಸಿದ್ದೆನು ನನ್ನ ಆಸಾಮೀ ಬಾಂಧವರಿಗೆ ಇದರಿಂದ ತೀರ ವ್ಯಸನವೆನಿಸಿತು ನನ್ನ ಆ ವಾಕ್ಯದ ದುರುಪಯೋಗವನ್ನು ಅಧಿಕಾರಿಗಳು ಶಕ್ಯವಿದ್ದಷ್ಟು ಮಾಡಿಕೊಂಡಿದ್ದರು. ತಮಗೆ 'ಕಾಡು' ಎಂದು ಸಂಬೋಧಿಸುವವನ ಬಗ್ಗೆ ಆಸಾಮೀಯರಿಗೆ ಪ್ಯಾಗೆ ಪ್ರೇಮವಿರಬೇಕು? ಆದರೆ ಜನತೆಗೆ ಈಗ ಮಾನವೀ ಅಂತಃಕರಣವು ಪ್ರಾಪ್ತವಾಗಿದೆ ನಿರ್ದೋಷ ಅಜ್ಞಾನದಿಂದ ಈಗ ಆದಕ್ಕೆ ಉಪದ್ರವವಾಗದು ಮೊದಲನೇ ಜಾಹೀರು ಸಭೆಯಲ್ಲಿಯೇ ನಾನು ಆವರ ವರ್ಣನೆಯಲ್ಲಿ ಮಾಡಿದ ತಪ್ಪಿಗಾಗಿ ಮಾಫಿ ಬೇಡಿಕೊಂಡನು. ನಾನು ನನ್ನ ತಪ್ಪುತಿಳುವಳಿಕೆಯನ್ನು ವಣಿಸಿದೆನು ಆಗ ಎಲ್ಲರೂ ಖೊಳ್ಳನೆ ನಕ್ಕರು ಆವರಿಗೆ ನನ್ನ ಮಾಫಿಯ ಆವಶ್ಯಕತೆಯೇ ಇದ್ದಿಲ್ಲ

* * * *

ಆಸಾಮಿಯರಿಗೆ ಕಾಡುಜನರ ದುಯ್ಯಾರ ಹೇಳ್ಯಾರು ಹಾಗೆ ಉದ್ಗರಿಸುವ ನನ್ನಂಥವರೇ ಕಾಡುಜನರಿರಬೇಕು ಆಸಾಮಿಯರ ಕುಲಸ್ತ್ರೀಯರು ಅತ್ಯಂತ ಮನೋಹರವಾದ ಸೀರೆಗಳನ್ನು ನೇಯ್ದು, ಸ್ವತಃ ತಯಾರು ಮಾಡಿದ ಸೀರೆಗಳನ್ನೇ ಧರಿಸುತ್ತಾರೆ ಇವರಿಗೆ ಜಂಗಲೀಯಾರು ಹೇಳುವರು

* * * *

ಗುಜರಾಥವು ಹಿಂದುಸ್ಥಾನದ ಪಶ್ಚಿಮಕ್ಕೆ ವಿಂಧ್ಯಾದ್ರಿಗಳ ದಕ್ಷಿಣಕ್ಕೆ ಇರುತ್ತದೆ ಅದರಂತೆ ಆಸಾಮವು ಪೂರ್ವ ಉತ್ತರದಿಕ್ಕುಗಳಲ್ಲಿರುತ್ತದೆ ಆಸಾಮವು ಹಿಂದುಸ್ಥಾನದ ಈ ಶಾನ್ಯಮೂಲೆಯು ಈ ಪ್ರಾಂತದಲ್ಲಿ ಬ್ರಹ್ಮಪುತ್ರಾನದಿಯು ಧಂಡೆಗುಂಟ ತಿಬೇಟಕ್ಕೆ ಹೋಗುವ ದಾರಿಯಿದೆ, ಹಾಗೆಯೇ ಅಡವಿಯೊಳಗಿಂದ ಬ್ರಹ್ಮದೇಶಕ್ಕೂ ಹೋಗಬಹುದು ಎಲ್ಲಿ ನೋಡಿದಲ್ಲಿ ಆಸಾಮುಪ್ರಾಂತದಲ್ಲಿ ಕೆರೆ-ಸರೋವರಗಳು ತುಂಬಿ ತುಳುಕುತ್ತಿವೆ ಚಿರಾಪುಂಜ ಎಂಬ ಪ್ರದೇಶದಲ್ಲಿ ಪರಮಾವಧಿಯ ಮಳೆ ಬೀಳುತ್ತಿದೆ ಪ್ರತಿ ವರ್ಷಕ್ಕೆ ಅಲ್ಲಿ ೩೬೮ ಇಂಚು ಮಳೆ ಬೀಳುತ್ತದೆ ಒದರೆ ೧೮೬೧ ರಲ್ಲಿ ೮೦೫ ಇಂಚು ಮಳೆ ಬಿತ್ತು ಅದೇ ವರ್ಷ ಬರೇ ಜುಲೈ ತಿಂಗಳಲ್ಲಿ ೩೬೬ ಇಂಚು ಮಳೆ ಸುರಿಗಿತು ಮೇಘರಾಜನ ಕೃಪೆಯೂ, ಬ್ರಹ್ಮಪುತ್ರದಂಥ ಪ್ರಚಂಡ ನದವು ಏಕತ್ರಿತವಾಗಲು, ಈ ಪ್ರಾಂತವು ಜಲಮಯವಾದರೆ ಆಶ್ಚರ್ಯವೇನು?

* * * *

ಆಸಾಮುದಲ್ಲಿ ಅನೇಕ ಪ್ರಕಾರದ ವನಸ್ಪತಿಗಳೂ, ಫಲಗಳೂ ಹುಟ್ಟುತ್ತವೆ ಚಹವಂತೂ ಮುಖ್ಯ ಬೆಳೆಯಾಗಿದೆ ಈ ಪೈರಿನಿಂದ ಎಷ್ಟು ಲಾಭವಾಗಿದೆಂದು ನಾನರಿಯೆ. ಆದರಿಂದ ಹಾನಿ ಎಷ್ಟಾಗಿದೆಂದು ನಾವು ಅರಿತಿರುವೆ ಆಸಾಮುದಲ್ಲಿ ಬಾಳೆ ಅನನಸು, ಕಿತ್ತಳೇ ಹಣ್ಣು, ಸೀತಾಫಲ ಮುಂತಾದ ಅನೇಕ ಹಣ್ಣುಹಂಪಲಗಳು ಹೇರಳವಾಗಿ ಸಿಗುತ್ತವೆ ಕಾಳುಕಡಿಗಳ ಪೈರುಗಳಲ್ಲಿ ಅಕ್ಕಿಯ ಬೆಳೆಯೇ ಪ್ರಾಮುಖ್ಯವಾಗಿರುತ್ತದೆ

* * * *

ಅಲ್ಲಿಯ ಜನರು ತೀರ ಸಾದಾ ಸ್ವಭಾವದವರು ಹಿಂದೂ ಇರಲಿ, ಮುಸಲ್ಮಾನರಿರಲಿ, ಎಲ್ಲರೂ ಆಸಾಮೀ ಭಾಷೆಯನ್ನೇ ಆಡುತ್ತಾರೆ ಆಸಾಮೀ ಭಾಷೆಯು ಬಂಗಾಲಿಯ ತಂಗಿಯೆಂದರೂ ಎನ್ನಬಹುದು ಲಿಪಿಯು ಮಾತ್ರ ಒಂದೇ ನನ್ನ ಪ್ರವಾಸವು ಹೆಚ್ಚಳು ವಿಸ್ತಾರವಾಗಿ ಹಿಂದುಸ್ಥಾನದ ಭಾಷೆಗಳು ದೇವನಾಗರಿಯಲ್ಲಿ ಬರೆಯುವ ವ್ಯವಸ್ಥೆ ಮಾಡಿದರೆ ಪ್ರಜೆಗಳಿಗೆ ಬಹಳೇ ಅನುಕೂಲತೆಯಾದೀತೆಂದು ನನಗೆ ತೋರುತ್ತದೆ ಲಿಪಿಗಳು ಎರಡೇ ಇರಬೇಕು ಒಂದು ಉರ್ದು ಮತ್ತೊಂದು ದೇವನಾಗರಿಯು ಪಂಜಾಬೀ, ಸಿಂಧೀ ಭಾಷೆಗಳನ್ನು ದೇವನಾಗರೀ ಲಿಪಿಯಲ್ಲಿ ಬರೆಯಲ್ಪಟ್ಟರೆ ಅವುಗಳನ್ನು ತಿಳಿದುಕೊಳ್ಳಲಿಕ್ಕೆ ಅಷ್ಟು ಕಠಿಣವಾಗಲಿಕ್ಕಿಲ್ಲ ನಾವು ಎಲ್ಲ ಭಾಷೆಗಳನ್ನು ಕಲಿಯಲಿಚ್ಛಿಸ ವವರ ಹೊತ್ತು ಉಳಿಯುವದಲ್ಲದೆ ಆ ಜ್ಞಾನವ ಮಾಡಿಕೊಳ್ಳಲಿಕ್ಕೆ ಬಹಳೇ ಅನುಕೂಲವಾದೀತು

* * * *

ಆದರ ನಾನು ಇದೊಂದು ಹೊಸವಿಷಯವನ್ನೇ ಆರಂಭಿಸಹತ್ತಿದೆನು ಆಸಾಮಿಯರು ಇತರೇ ಪ್ರಾಂತದವರಿಗಿಂತ ಸುಖಿಜನರೆಂದು ಹೇಳಬಹುದು ಅವರಿಗೆ ವಿಶೇಷವಾಗಿ ಹೆಚ್ಚು ಪರಿಶ್ರಮ ಮಾಡಬೇಕಾಗಿರುವದಿಲ್ಲ ನದಿಯೊಳಗಿಂದ ಬೆಳೆದುಬಂದ ರಾಡಿಯಿಂದ ಪೈರು ಸಹಜವಾಗುತ್ತದೆ ಇದರಿಂದ ಅಲ್ಪ ಪರಿಶ್ರಮದಿಂದ ಜೀವಿಗೆ ಹೊಟ್ಟೆಹೊರೆಯಲಿಕ್ಕಾಗುತ್ತದೆ ಈ ಪ್ರಾಂತವು ಬಹಳೇ ತಡವಾಗಿ ಬ್ರಿಟಿಶರ ಕೈಸೇರಿದ್ದರಿಂದ ಅಲ್ಲಿ ಸುಧಾರಣಾ ದೇವತೆಯು ಅಷ್ಟು ಬಿಡಾದ ರಿಂದ ಪ್ರಸನ್ನಳಾಗಿಲ್ಲ ಆದ್ದರಿಂದ ಅಲ್ಲಿಯವರು ಸಂಪನ್ನರೂ ಶ್ರೀಮಂತರೂ ಇರುವರು ಇವರು ಕೂಲಿಕೆಲಸವನ್ನು ಎಂದೂ ಮಾಡುವದಿಲ್ಲ ಚಹದ ತೋಟಗಳಲ್ಲಿ ಬೇಕಾಗುವ ಕೂಲಿಗಳ ಪೂರೈಕೆಯು ಬೇರೆ ಪ್ರಾಂತದಿಂದ ಆಗುತ್ತದೆ ಇದರಿಂದಲೇ ಕೂಲಿಕಾರರ ಮೇಲಿನ ಅತ್ಯಾಚಾರಗಳು ಆಗಾಗ್ಗೆ ಕೇಳಬರುತ್ತವೆ ಚಾಂದಪೂರದೊಳಗಿನ ಸಂಪ್ರದಾಯದ ವಾರ್ತೆ ಎಲ್ಲರಿಗೂ ಗೊತ್ತಿದ್ದೇ

* *

೫೦ ವರ್ಷಗಳ ಮೊದಲು ತನಗೆ ಬೇಕಾಗುವ ಎಲ್ಲ ಸಾಮಾನುಗಳನ್ನು ಆಸಾಮುಪ್ರಾಂತವೇ ಪೂರೈಸಿಕೊಳ್ಳುತ್ತಿತ್ತು ಅಷ್ಟು ಆಸಾಮವು ಸಂಪನ್ನವಿತ್ತು ಈಗಿನ ಪರಿಸ್ಥಿತಿಯಲ್ಲಿ ಸಹ ನೆಯ್ಯುವ ಕಲೆಯು ಪ್ರತಿಯೊಬ್ಬ ಆಸಾಮೀ ಸ್ತ್ರೀಗೆ ತಿಳಿಯುತ್ತಿದೆ ತನಗೆ ಬೇಕಾಗುವ ಅರಿವೆಯನ್ನು ಅವರು ಸ್ವತ ತಯಾರ ಮಾಡುತ್ತಾರೆ ನೆಯ್ಗೆಯೊಳಗಿನ ಹೆಂಗಸರು ಹುಡುಗಿಯರು ಈ ಕಲೆಯಲ್ಲಿ ನಿಷ್ಣಾತರಿರುವರು ಆಸಾಮೀ ಸ್ತ್ರೀಯರು ಹಣಸಂಪಾದಿಸುವದಕ್ಕಾಗಿ ನೇಯುವದಿಲ್ಲ ಮನೆಯ ಕೆಲಸಗಳನ್ನು ಮುಗಿಸಿ ಉಳಿದ ಹೊತ್ತನ್ನು ಈ ರೀತಿ ಸದುಪಯೋಗ ಮಾಡುತ್ತಾರೆ

* * *

ಆಸಾಮುದಲ್ಲಿ ನೇಯ್ಗೆಗೆ ಬಾರದ ಹುಡುಗಿಗೆ ವಿವಾಹವಾಗುವದು ಅಸಂಭವನೀಯವು ನಾನು ಉಳಕೊಂಡ ಮನೆಯವರು ದೊಡ್ಡ ಜಮೀನದಾರರು, ಅವರಿಗೆ ಹಣದ ಅಡಚಣೆಯು ಇಲ್ಲೇ ಇಲ್ಲ ಹೀಗಿದ್ದರೂ ಅವರ ೭೦ ವರ್ಷದ ಮುದಿ ತಾಯಿಯೂ ಅವರ ಸೌಭಾಗ್ಯವತಿಯೂ ಅಕ್ಕತಂಗಿಯರೂ ಮೊದಲಾದ ಎಲ್ಲ ಹೆಂಗಸರು ಪುರಸತ್ತು ಇದ್ದಾಗ ನೇಯ್ದ ಸ್ತ್ರೀರ ಸರು ೧೧ ವರ್ಷದ ಹುಡುಗಿಯಂತೂ ಯಾವಾಗಲೂ ನೇಯುತ್ತಿರುವಳು

* * * *

ಆಸಾಮುದಲ್ಲಿ ರೇಶಿಮೆಯು ಬಹಳ ಬೆಳೆಯುತ್ತಿದೆ ಆದರಿಂದ ಅಲ್ಲಿಯ ಹೆಂಗಸರು ಹತ್ತಿಯ ನೂಲು ನೇಯುವದರಲ್ಲಿ ನಿಷ್ಣಾತರಿರುವಂತೆ, ರೇಶಿಮೆಯನ್ನು ಸಹ ಬಹು ಕುಶಲತೆಯಿಂದ ನೇಯುತ್ತಾರೆ ಅರಿವೆಯ ಮೇಲೆ ಆಶ್ಚರ್ಯಕಾರಕ ಕಲಾಕೌಶಲ್ಯವನ್ನು ತೋರಿಸುವದರಲ್ಲಿ ಅವರು ತಜ್ಞರಿರುವರು. ೫೦ ವರ್ಷಗಳ ಮೊದಲು ನೂಲುತೆಗೆಯುವದೂ ತನ್ನ ಕರ್ತವ್ಯವಿರುವದೆಂದು ಪ್ರತಿಯೊಬ್ಬ ಸ್ತ್ರೀಯು ತಿಳಿಯುತ್ತಿದ್ದಳು ಮತ್ತು ಅದರಂತೆ ಅವಳು ವರ್ತಿಸುತ್ತಿದ್ದಳು

* * * *

ಆದರೆ ಈಗೇನು? ಇಂಗ್ಲಿಷ ರಾಜ್ಯಪದ್ಧತಿಯು ಪ್ರಾರಂಭವಾದಕೂಡಲೆ ಪರದೆ ಶಿ ನೂಲಿನ ಪ್ರವೇಶವಾಯಿತು ಈ ನೂಲಿನಿಂದ ಆಸಾಮಿಯರ ಸ್ವಾವಲಂಬನೆಯ ಕೊರಳು ಕೊಯ್ದಂತಾಯಿತು. ಪರದೇಶೀ ನೂಲಿನ ಸ್ತ್ರೀಯರು ಮೋಹಿತರಾಗಿ ನೂಲುತೆಗೆಯುವದನ್ನು ಬಿಟ್ಟುಕೊಟ್ಟರು ಸ ದೈವದಿಂದ ನೇಯಲಿಕ್ಕೆ ತಿಳಿಯುವ ಹುಡುಗಿಗೆ ವಿವಾಹವಾಗಬಾರದೆಂದು ಇನ್ನೂ ಕಾಯಿದೆಯಿರುವದರಿಂದ ನೆಯ್ಯುವ ಕಲೆಯೊಂದು ಬದುಕಿಕೊಂಡಿತು

* * *

ನೂಲುತೆಗೆಯುವದು ಪರಂಪರೆಯಿಂದ ತಿಳಿದವರಿಗೆ ಆದೇ ಕಲೆಯು ಸಹಜ ನೆನಪಾಗುವದು ಸ್ವಾಭಾವಿಕವು ಈಗಿನ ಜಾಗೃತಿಯ ಕಾಲದಲ್ಲಿ ಸ್ತ್ರೀಯರು ಪುನಃ ಕೈರಾಟಿಗೆ ಕೈಕೊಂಡು ನೂಲುತೆಗೆಯುವ ಪ್ರಾರಂಭ ಮಾಡಿರುವರು ಆಸಾಮದಲ್ಲಿ ಪರದೇಶೀ ನೂಲ ಹಾವಳಿ ದಿಂದ ಆಗುವ ಪರಿಸ್ಥಿತಿಯನ್ನು ಅವಲೋಕಿಸಿ ಒಬ್ಬ ಇಂಗ್ಲಿಷ ಗೃಹಸ್ಥರು ಈ ಕೆಳಗಿನಂತೆ ವರ್ಣಿಸಿರುವರು — ಪರದೇಶೀ ನೂಲನ್ನು ಆಶ್ರಯಿಸಿ ಆಸಾಮೀ ಸ್ತ್ರೀಯರು ಯಾವದೇ ರೀತಿಯಿಂದ ಶ್ರೀಯನ್ನು ಪಡೆಯಲಿಲ್ಲ, ಯಾಕೆಂದರೆ, ನೂಲುತೆಗೆಯುವ ಬದಲಾಗಿ ಅವರು ಅನ್ಯ ಉದ್ಯೋಗವನ್ನು ಸ್ವೀಕರಿಸಲಿಲ್ಲ

—ಮಹಾತ್ಮಾ ಗಾಂಧಿ.

ರಾ। ರಾ। ವಾಜೆ—ಸಬ್‌ಜಡ್ಜ ಕಾರವಾರ.

ಅಯ್ಯ ಕಾನಡಾವೃತ್ತ ಕರ್ತರೆ —

ನಿಮ್ಮ ಹೋದ ೧ನೇ ತಾರೀಖಿನ ಸಂಚಿಕೆಯಲ್ಲಿ ನಮ್ಮಲ್ಲಿಯ ಫರ್ಸ್ಟ್‌ಕ್ಲಾಸ ಸಬ್‌ಜಡ್ಜರ ಬಗ್ಗೆ ನಿಮ್ಮ ಕಡೆಗೆ ಬಂದ ತಕ್ರಾರಗಳಲ್ಲಿ ಕೆಲವನ್ನು ಪ್ರಕಟಿಸಿದ್ದೀರೆಂತ ನೋಡಿ ಹರ್ಷಿಸಿದ್ದೀರಿ ಆದರ ಅವೆಲ್ಲ ವ್ಯಕ್ತಿವಿಷಯಕವಿರುವದರಿಂದ ಅವರಲ್ಲಿ ತಥ್ಯಾಂಶವೆಷ್ಟಿರುವದ ಬಗ್ಗೆ ನಿಮಗೆ ಖಾತ್ರಿ ಇಲ್ಲೆಂತ ನೀವು ಸೂಚಿಸುತ್ತೀರಿ ಇದರ ಮೇಲಿಂದ ನಿಮ್ಮ ಮನಸಿನಲ್ಲಿ ಈ ತಕರಾರುಗಳ ಬಗ್ಗೆ ಸಂಶಯವಿರುತ್ತದಾಗಿ ತೋರುತ್ತದೆ ಮಿ। ವಾಜೆ ಇವರು ಇಲ್ಲಿ ಬಂದಂದಿನಿಂದ ಅವರ ಕೆಲಸವನ್ನು ನಾನು ಪ್ರತ್ಯಕ್ಷ ನೋಡಿರುವದರಿಂದ ನೀವು ನಮೂದಿಸಿದ ಎಲ್ಲಾ ತಕ್ರಾರುಗಳು ಕೇವಲ ಕಾಲ್ಪನಿಕವಿರುತವೆ ತ ಹೇಳಬೇಕಾಗಿದೆ ಆದದರಿಂದ ಅವುಗಳಲ್ಲಿ ಮುಖ್ಯ ತಕ್ರಾರುಗಳ ನಿರಸನ ಮಾಡಿ ನಿಜ ಸ್ಥಿತಿಯನ್ನು ತಮ್ಮ ಮುಂದೆ ಇಡುವೆನು

(೧) ಈ ಕೋರ್ಟಿಗೆ ಕಾಯಿದೆ ಕೋರ್ಟಿನ ಸ್ವರೂಪ ಹೋಗಿ ಅವ್ಯವಸ್ಥಿತ ಪಂಚಕೋರ್ಟಿನ ರೂಪಾಂತರವು ಪ್ರಾಪ್ತವಾಗಿದೆಂಬ ಪದವು ತೀರ ಕಾಲ್ಪನಿಕವು ಕೆಲವು ಪಕ್ಷಗಾರರು ತಮ್ಮೊಳಗೆ ರಾಜಿ ಮಾಡಿಕೊಳ್ಳಲಿಕ್ಕೆ ಕಬೂಲಿ ತೋರಿಸಿದರೆ ಮತ್ತು ಅದಕ್ಕೆ ಮಿ। ವಾಜೆ ಇವರು ಸಮ್ಮತಿ ಕೊಟ್ಟರೆ ಆದರಿಂದ ಈ ಕೋರ್ಟಿಗೆ ಪ್ಯಾಗೆ ರೂಪಾಂತರವಾಗುವದೆಂತ ತಿಳಿಯುವದಿಲ್ಲ

(೨) ದೊಡ್ಡ ದೊಡ್ಡ ಮತ್ತು ಮಹತ್ವದ ಮೊಕದ್ದಮೆಗಳ ವಿಚಾರಣೆಯು ಎಷ್ಟು ಸಾರೆ ಮುಂದೆ ಹಾಕಲ್ಪಡುವದೆಂಬ ನಿಯಮವೇ ಇಲ್ಲ ಹೀಗಾಗಿ ಕೋರ್ಟಿನಿಂದ ನ್ಯಾಯ ಹೊಂದಲಿಚ್ಛಿಸುವವರು ನಿರಾಶರಾಗಿರುವರು.

ಈ ರೀತಿ ತಕ್ರಾರು ಮಾಡುವವರು ಎಷ್ಟು ಜನರಿರುವರು? ಆವರಿಗೆ ಹಾಗೆ ತಕ್ರಾರು ತಮ್ಮ ಹತ್ತಿರ ಮಾಡುವ ಪ್ರಸಂಗವು ಯಾಕೆ ಬಂದಿತೆಂತ ತಿಳಿಯುವದು ಕಠಿಣವಿರುವದು ಯಾಕೆಂದರೆ ಮುಂದೆ ಹಾಕುವ ಬಗ್ಗೆ ಅರ್ಜಿಯು ಬಂದ ಕೂಡಲೆ ವಿರುದ್ಧ ಪಕ್ಷದ ವಕೀಲರ ಯಾ ಪಕ್ಷಗಾರರ ಸಮ್ಮತಿ ಶಿವಾಯ, ಅದನ್ನು ಮಿ। ವಾಜೆ ಇವರು ಮಂಜೂರ ಮಾಡುವದೇ ಇಲ್ಲ ಇದು ಆವರ ಪ್ರಘಾತವಿದ್ದು ಸಣ್ಣ ಅರ್ಜಿಯನ್ನು ಬಿಸಾಡಿದರೆ ವಿಚಾರಣೆಯು ಮುಂದೆ ಬೀಳುತ್ತದೆ" ಎಂಬುವದು ತೀರ ನಿರಾಧಾರವಿರುವದೆಂತ ಹೇಳಬೇಕಾಗಿದೆ

(ಪುರವಣಿಯಮೇಲೆ ಮುಂದರಿಸಿದೆ)

ಆಶ್ರಯದಾತರಿಗೆ ಆಗ್ರಹದ ವಿನಂತಿ

ಇದು ೫ ನೇ ವರ್ಷದ ೪೭ ನೇ ಸಂಚಿಕೆಯು ಇನ್ನು ವರ್ಷಾಂತ್ಯಕ್ಕೆ ಒಂದೇ ಸಂಚಿಕೆ ಉಳಿಯಿತು ಹೊಸ ವರ್ಷಾದಿಯಿಂದ ಪತ್ರದ ವರ್ಗಣಿ ಅಂಚೆವೆಚ್ಚ ಸೇರಿ ರೂಪಾಯಿ ೩-೦-೦ ಮಾಡಿಯದೆ, ಅದನ್ನು ದಯಮಾಡಿ ಮನಿಯಾರ್ಡರಿಯಿಂದಲೇ ಕಳುಹಿಸುವ ವ್ಯವಸ್ಥೆ ಮಾಡಬೇಕಾಗಿ ಬೇಡುವೆವು. ವ್ಹಿ ಪಿ.ಯಿಂದ ವಸೂಲ ಮಾಡುವದೆಂದರೆ, ಆಶ್ರಯದಾತರಿಗೆ ಅದೊಂದು ವೃಥಾ ದಂಡವಾಗುತ್ತದೆ. ವ್ಹಿ ಪಿ ಕಳುಹಿಸುವ ಪ್ರಸಂಗಬಂದರೆ, ಹೊಸ ವರ್ಷದಿಂದ ಮುಂದಾಗಿ ಹೋಗುವ ಸೂಚನೆ ಕಾರ್ಡು ಕಳುಹಿಸಲಾರೆವು. ಕಾಲಕಾಲಕ್ಕೆ ಇದರಲ್ಲಿಯೇ ನೋಟೀಸು ಕೊಡುವದರಲ್ಲಿ ಬಂದೀತು. ಮೊದಲನೇ ಸಂಚಿಕೆ ಹೊರಡುವದರೊಳಗಾಗಿ ಹಣ ಕಳುಹಿಸದಿದ್ದ, ಮೊದಲನೇ ಸಂಚಿಕೆಯಿಂದ ಪ್ರಾರಂಭವಾದ ಆಶ್ರಯದಾತರಿಗೆ ಸ್ವ ಹಿಮ್ಮೇಲೀ ನಿರುಪಾಯವಾಗಿ ವ್ಹಿ ಪಿ ಗಳನ್ನು ಕಳುಹಿಸುವ ವಿಚಾರಮಾಡಿರುವೆವು ಪತ್ರ ಕೊಳ್ಳಲಾರದ ಆಶ್ರಯದಾತರು ತಮ್ಮ ಮನೋಗತವನ್ನು ಮುಂದಾಗಿಯೇ ತಿಳಿಸಬೇಕಾಗಿ ನಮ್ಮ ವಿನಯ ಸೂಚನೆಯು.

ಮನೇಜರ ಕಾ ವೃ

ಕಾನಡಾವೃತ್ತ.

ಗುರುವಾರ ತಾರೀಖು ೧೫ ಮಾಹೆ ಸಪ್ಟಂಬರ ೧೯೨೧

ಬೆಕ್ಕಡಿ ಜೊನಸನ ಸಾಹೇಬರು.

ಮದ್ಯಪಾನನಿಷೇಧವು ನಮ್ಮ ದೇಶದಲ್ಲಿ ಮೊದಲಿನಿಂದ ಬಹು ಸಮ್ಮತವಾಗಿದ್ದರೂ, ಅದರ ಚಳವಳಿಯು ಸುವ್ಯವಸ್ಥಿತವಾಗಿ ಧೃಢನಿಶ್ಚಯದಿಂದ ಈಗೀಗ್ಗೆ ನಾಗದೆ ಸರೆ ಕುಡುಕುತನವನ್ನು ನಿರ್ಮೂಲಿಸತಕ್ಕದ್ದೆಂದು ಕಾಂಗ್ರೆಸಿನ ಠರಾವ ಪಾಸಾದಂದಿನಿಂದ, ಈ ಚಳವಳಿಯು ದೇಶದಲ್ಲಿ ಭರದಿಂದ ನಡೆದದೆ. ಇದೇ ಸಮಯಕ್ಕೆ ಮದ್ಯಪಾನ ನಿಷೇಧಪಂಥದ ಜಗದ್ವಿಖ್ಯಾತ ಮುಖಂಡರಾದ ಬೆಕ್ಕಡಿ ಜೊನಸನ್ ಸಾಹೇಬರ ಆಗಮನವು ನಮ್ಮ ದೇಶದಲ್ಲಾಗಿದ್ದು ಶುಭಸೂಚಕ ಯೋಗಾಯೋಗವು. ಇವರ್ಯಾರು, ಸರೆಕುಡಕತನವನ್ನು ಮುರಿಬಡಿಯುವ ರಾಷ್ಟ್ರೀಯ ಚಳವಳಿಯ ಅನುಭವವು ಇವರಿಗೆಷ್ಟಿದೆ, ಈ ಬಡ ದೇಶಕ್ಕೆ ಅವರು ಯಾವ ಉದ್ದೇಶದಿಂದ ಚಿತ್ತೈಸಿದ್ದಾರೆ, ಎಂಬ ಬಗ್ಗೆ ಎರಡು ಮಾತುಗಳನ್ನು ಇಂದಿಗೆ ಬರೆಯುವೆವು.

ಚರಿತ್ರನಾಯಕರು ಅಮೇರಿಕನರಾಗಿರುವರು ಅವರ ಪ್ರಾಯವು ೬೦ ವರುಷ ಮೀರಿ ಇಳಿತದಲ್ಲಿದೆ ಮದ್ಯಪಾನ ನಿಷೇಧದ ಸಾರ್ವಜನಿಕ ಕಾರ್ಯದಲ್ಲಿ ಅವ್ಯಾಹತವಾಗಿ ನಾಲ್ವತ್ತು ವರ್ಷ ದುಡಿದು ಅವರು ಹಣ್ಣಾಗಿದ್ದಾರೆ ದುಷ್ಟರು ಅವರ ಒಂದು ಕಣ್ಣನ್ನು ಒಡೆದು ಬಿಟ್ಟಿರುವರು ಇಂಥ ಪುಣ್ಯಪುರುಷರು ನಮ್ಮ ದೇಶದಲ್ಲಿ ಮದ್ಯಪಾನವನ್ನು, ಸರಕಾರವೂ ಜನರೂ ಎಷ್ಟು ನಿಷೇಧಿಸುತ್ತಾರೆಂದು ಕಣ್ಣಾರೆ ನೋಡಲಿಕ್ಕೆ ಬಂದಿರುವಾಗ, ಅತ್ಯಾದರದಿಂದ ಅಕ್ಕರತೆಯಿಂದ ಅವರಿಗೆ ಸ್ವಾಗತ ಮಾಡುವದು ನಮ್ಮ ಕೃತಜ್ಞತೆಯ ಕರ್ತವ್ಯವು. ಅಮೇರಿಕೆಯೊಳಗೆ ಅಲ್ಲಿಯ ಜನರ ಸಾಂಪತ್ತಿಕ ಏಳಿಗೆಯಿಂದ ಹೆಂಡಕುಡುಕತನವು ಮಿತಿಮೀರಿ ಹಬ್ಬಿತ್ತು. ಇಂಥ ಮದಿರಾ ಸಾಮ್ರಾಜ್ಯದೊಳಗೆ ಅವರ ವೈರಿಗಳ ಸೇನಾನಾಯಕರಾಗಿ, ನಾಲ್ವತ್ತು ವರುಷ ಚಿಕಾಟಿಯಿಂದ ದುಡಿಯುವದು ಎಷ್ಟು ಸಾಹಸದ ಮತ್ತು ಗಂಡಾಂತರದ ಕೆಲಸವೆಂದು ಊಹಿಸಿದರೆ ತಿಳಿಯದು ಈ ಕಾರ್ಯದಲ್ಲಿ ಅಸಹ್ಯವಾದ ಶಾರೀರಿಕ ಯಾತನೆಗಳನ್ನು, ಅನಂತ ಕಷ್ಟಸಂಕಷ್ಟಗಳನ್ನು ಆನಂದದಿಂದ ಸಹಿಸಿ, ತಮ್ಮ ನೈತಿಕ ಯುದ್ಧದಲ್ಲಿ ಪರಿಪೂರ್ಣ ವಿಜಯವನ್ನು ಹೊಂದಿರುವದರಿಂದ, ಅವರು ಇಂದಿಗೆ ಜಗದ್ವಂದ್ಯ ನಾಯಕರಾಗಿರುವರು. ಪುಸಿಫೂಟ ಅಂದರೆ ಬೆಕ್ಕಡಿ ಸಾಹೇಬರೆಂದು ಅಡ್ಡಹೆಸರು ಇವರು ಹ್ಯಾಗೆ ಹೊಂದಿದರೆಂಬ ವೃತ್ತಾಂತವು ಮನೋರಂಜಕವದೆ ಬೆಕ್ಕಿನ ಹೆಜ್ಜೆಗಳಂತೆ ಸಪ್ಪಳವಾಗಗೊಡದೆ, ಹೆಜ್ಜೆಯನ್ನಿಡುವವರಿಗೆ (Pussy foot) ಬೆಕ್ಕಡಿಗಳೆನ್ನುತ್ತಾರೆ ಅಮೇರಿಕೆಯ ಒಂದು ಸಂಸ್ಥಾನದಲ್ಲಿ ಸರಕಾರೀ ಕಾಯಿದೆಯಿಂದ ಮದ್ಯದ ವ್ಯಾಪಾರವು ಬಂದಿಸಲ್ಪಟ್ಟರೂ, ಕೆಲವು ವ್ಯಾಪಾರಿಗಳು ಒಳಗಿಂದೊಳಗ ಕಳ್ಳತನದಿಂದ ಮದ್ಯದ ಮಾರಾಟವನ್ನು ನಡಿಸುತ್ತಿದ್ದರು. ಇಂಥ ಕಳ್ಳವರ್ತಕರನ್ನು ಹಿಡಿದು, ಅವರ ಗುನ್ಹೆಯನ್ನು ಬೈಲಿಗೆ ತರುವದರೊಳಗೆ ಜಾನಸನ ಸಾಹೇಬರದಷ್ಟು ಚಾತುರ್ಯವು ಗುಪ್ತ ಪೋಲೀಸರಲ್ಲಿ ಸಹ ಇದ್ದಿಲ್ಲ ಇಂಥ ಒಬ್ಬ ವ್ಯಾಪಾರಿಯು ಇವರ ಮುಂದೆ ನಿಮ್ಮ ಕಾಟ ನಡೆಯುವದಿಲ್ಲೆಂದು ಸಿಟ್ಟಿಗೆದ್ದು ಜಾನಸನ್ ಸಾಹೇಬರು ದೃಷ್ಟಿಗೆ ಬಿದ್ದಕೂಡಲೇ ಗುಂಡುಹಾಕಿ ಅವರನ್ನು ಕೊಂದೇ ಬಿಡುತ್ತೇನೆಂದು ಆಣೆಯನ್ನಿಟ್ಟಿದ್ದನು ಜಾನಸನ್ ಸಾಹೇಬರ ಕಿವಿಗೆ ಈ ಸುದ್ದಿಯು ಬಂತು. ನೋಡುವ, ನೀವೇನು ಮಾಡುತ್ತೀರೆಂದು, ಬೆಕ್ಕಡಿ ಸಾಹೇಬರು, ಅಕ್ಷರಕ್ಷಸ ವ್ಯಾಪಾರಿಗೆ ತಾವಾಗಿ ಹೇಳಿಕಳುಹಿಸಿದರು. ಒಂದು ದಿನ ಸರಾಯಿಕುಡಿದು ಧುಂದವಾದ ಮನುಷ್ಯನ ಢೊಂಗುಮಾಡಿ, ಆ ವ್ಯಾಪಾರಿಯ ಅಂಗಡಿಯೊಳಗೆ ವೇಷಧಾರಿ ಜಾನಸನ್ ಸಾಹೇಬರ ಸ್ವಾರಿಯು ಕೈಕಾಲು ಪಸರಿಸಿ ಕೂತಿತು. ಮತ್ತು "ಅಬ್ಬಾಕ ರಾಬ ಲಾವ' ಎಂದು ಹೇಳುವ ಒಂದೇ ಹಟ ಹಿಡಿಯಿತು. ಅಂಗಡಿಕಾರನು "ಮದ್ಯವೇನು. ತನ್ನಲ್ಲಿಲ್ಲ. ಈ ಕಣಾಯವನ್ನು ಬೇಕಾದರೆ ತಕ್ಕೊಳ್ಳಿರಿ" ಎಂದು ಹೇಳಿ, ಸಾರಸಾಪರೇಲಾ ಮದ್ದಿನ ಗ್ಲಾಸನ್ನು ಅವರ ಮುಂದಿಟ್ಟನು. ಸಾಹೇಬರು ಸಿಟ್ಟಿಗೆದ್ದು ರುದ್ರಾವತಾರದ ವೇಷದೊಳಗೆ ಸೇಲೆಯನ್ನು ಬಿಸಾಟಿ, ಸರೆ ತಲೆಗೆ ಹತ್ತಿದ ಹೆಂಡಕುಡುಕರ ಕರ್ಕಶ ಸ್ವರದಿಂದ ಕೂಗಿ ಹೇಳಿದ್ದೇನೆಂದರೆ—"ಇಂಥ ಢೊಂಗು ನಡಿಯದು; ಬೇಕಾದಷ್ಟು ದುಡ್ಡು ತಕ್ಕೊಳ್ಳಿರಿ, ಮಾತ್ರ ಚಲೋ ಬಿರುಸು ಸರಾಯಿ ಕೊಡಿರಿ." ದ್ರವ್ಯಲೋಭದಿಂದ ಮರುಳಾದ ವ್ಯಾಪಾರಿಯು ಒಳಮನೆಯೊಳಗಿಂದ ಸರಾಯಿಬಾಟ್ಲಿಯನ್ನು ತಂದು ಇವರ ಮುಂದಿಟ್ಟು ಕುಡಿಯುವ ಪಾತ್ರೆಯನ್ನು ತರಲಿಕ್ಕೆ ಬೆನ್ನು ತಿರುಗಿಸುವಷ್ಟರೊಳಗೆ ಜಾನ್ಸನ್ ಸಾಹೇಬರು ನಿಜರೂಪವನ್ನು ಧರಿಸಿ, ಅಂಗಿಯಲ್ಲಿ ಅಡಗಿಸಿಕೊಂಡ ಸಣ್ಣ ತುಬಾಕಿಯನ್ನು ಕೈಯಲ್ಲಿ ತಕ್ಕೊಂಡು ಗುರಿಹಿಡಿದು ನಿಂತರು. ಕೂಡಲೇ ಪೋಲೀಸರು ಬಂದು ಅಂಗಡಿಕಾರನಿಗೆ ಕೈದುಮಾಡಿದರು. ಕಳ್ಳತನದಿಂದ ಸರಾಯಿ ಮಾರುತ್ತಿದ್ದಕ್ಕಾಗಿ ಅವನಿಗೆ ಶಿಕ್ಷೆಯು ಪ್ರಾಯಶ್ಚಿತ್ತವು ದೊರೆಯಿತು. ಇಂಥ ಚಿತ್ರಗುಪ್ತನ ಕೆಲಸವನ್ನು ಅವರು ಮೇಲಿಂದ ಮೇಲೆ ಮಾಡುತ್ತಿದ್ದದರಿಂದ, ಅವರಿಗೆ ಬೆಕ್ಕಡಿಗಳೆಂಬ ಉಪನಾಮವು ಪ್ರಾಪ್ತವಾಯಿತು. ಬೆಕ್ಕು ಇಲಿಗಳನ್ನು ಹಿಡಿಯುವಾಗ ಮೆಲ್ಲಮೆಲ್ಲನೆ ಅಡಿಗಳನ್ನಿಟ್ಟು ತನ್ನ ಭಕ್ಷವನ್ನು ಹ್ಯಾಗೆ ನುಂಗುತ್ತದೊ, ಅದೇ ವಿಧದಿಂದ ಜಾನಸನ್ ಸಾಹೇಬರು ಯಾರಿಗೂ ಸುಳಿವಿಲ್ಲದೆ, ಸರಾಯಿಯ ಕಳ್ಳ ವ್ಯಾಪಾರವನ್ನು ಹಿಡಿದು, ಅಪರಾಧಿಗಳನ್ನು ಕಾಯಿದೆಯ ಪಾಶಗಳಲ್ಲಿ ದೂಡಿಬಿಡುತ್ತಾರೆ. ಅಮೇರಿಕೆಯೊಳಗಿನ ಮದ್ಯಪಾನದ ಕಳವನ್ನು ಬುಡಬೇರುಸಹಿತ ಕಿತ್ತೊಗೆಯಲಿಕ್ಕೆ ಅವರ ಪರಿಶ್ರಮಗಳೇ ಹೆಚ್ಚು ಕಾರಣವಾಗಿರುವವು. ಬೆಕ್ಕಡಿಸಾಹೇಬರು ಚಾಣಾಕ್ಷರಿದ್ದಷ್ಟು ಸಾಹಸಿಗಳಿದ್ದಾರೆ. ಅಮೇರಿಕೆಯ ಸರಕಾರವು ಮದ್ಯದ ವ್ಯಾಪಾರವನ್ನು ಪೂರ್ಣವಾಗಿ ಪ್ರತಿಬಂಧಿಸುವ ಕಾಯಿದೆಯನ್ನು ನಿರ್ಮಿಸುವಾಗ, ಅಲ್ಲಿ ನಡೆದ ಸಾರ್ವತ್ರಿಕ ಚಳವಳಿಯಲ್ಲಿ ಜೊನಸನ್ ಸಾಹೇಬರು ತಮ್ಮ ಬುದ್ಧಿಚಾತುರ್ಯದ ಚಮತ್ಕಾರಗಳನ್ನು ತೋರಿಸಿದ್ದಾರೆ ಲಕ್ಷಾಧೀಶರಾದ ದೊಡ್ಡದೊಡ್ಡ ವ್ಯಾಪಾರಿಗಳು ಮೆಂಬರರಿಗೆ ಲಂಚಕೊಟ್ಟು, ಅಲ್ಲಿಯ ಪಾರ್ಲಿಮೆಂಟಿನಲ್ಲಿ ಕಾಯಿದೆಯು ಪಾಸಾಗಬಾರದೆಂದು ನಿಂದ್ಯ ಉಪಾಯಗಳನ್ನು ನಡಿಸಿದ್ದನ್ನು ತಿಳಿದು, ಅವರ ಕೃಷ್ಣಕಾರಸ್ಥಾನವನ್ನು ಹೊರಗೆಡಹಲಿಕ್ಕೆ ಅವರೊಂದು ಯುಕ್ತಿಯನ್ನು ಮಾಡಿದರು. ತಾನು ಸ್ವತಃ ಮದ್ಯದ ವ್ಯಾಪಾರಿಯಾಗಿದ್ದೇನೆಂದು ನಾವಿ ನೂರಾರು ಅಂಗಡಿಕಾರರ ಕೂಡ ಒಂದು ಗುಪ್ತ ಪತ್ರ ವ್ಯವಹಾರವನ್ನು ಅವರು ನಡಿಸಿದರು. ಹಲವರು ಅವರ ಪತ್ರಗಳಿಂದ ಮೋಸಹೋಗಿ, ತಮ್ಮ ಸ್ವಾರ್ಥದ ಗುಪ್ತ ಉದ್ದೇಶಗಳನ್ನೂ ಲಂಚಕೊಡುವ ಕಾರಸ್ಥಾನವನ್ನೂ ಪ್ರತ್ಯುತ್ತರವಾಗಿ ಅವರಿಗೆ ಬರೆದರು. ಅವರು ಅಂಥ ಪತ್ರಗಳ ಫೋಟೋ ತೆಗೆದು ವ

ರ್ತಮಾನ ಪತ್ರಗಳಲ್ಲಿ ಯಥಾಕ್ಷರ ಸಮಗ್ರವಾಗಿ ಈ ಪತ್ರಗಳನ್ನೆಲ್ಲ ಪ್ರಸಿದ್ಧಪಡಿಸಿದರು. ಅದನ್ನು ನೋಡಿ ಕಳ್ಳ ವ್ಯಾಪಾರಿಗಳ ಮೋರೆಯು ಬೆಳ್ಳಗಾಗದಿರುವದೇ? ವರ್ತಮಾನ ಪತ್ರಗಳ ಧೋರಣವನ್ನು ಪರೀಕ್ಷಿಸಲಿಕ್ಕೂ, ಅವುಗಳ ಸಂಪಾದಕರಿಗೆ ಇದೇ ವಿಧದ ತಕ್ಕುತನದಿಂದ ಮೋಸಗೊಳಿಸಿ, ಅವರ ಪಾಪವನ್ನೂ ಅವರು ಬೈಲಿಗೆ ತಂದಿದ್ದರು. ಈ ಬಗೆಯಾಗಿ, ಒಂದಲ್ಲ, ಎರಡಲ್ಲ, ಅನಂತ ಯುಕ್ತಿ ಪ್ರಯುಕ್ತಿಗಳಿಂದ ಈ ಮಹಾನುಭಾವರು ತಮ್ಮ ಇಡೀ ಜನ್ಮವನ್ನು ಮದ್ಯಪಾನದ ವ್ಯಸನವನ್ನು ತಮ್ಮ ದೇಶದಿಂದ ಕೊಳೆದು ಬಿಡಲಿಕ್ಕೆ ವೆಚ್ಚ ಮಾಡಿದ್ದಾರೆ ನಿಷ್ಫಲ ಕಾಯಿದೆಯಿಂದ, ಯಾವದೇ ವಿಧದ ಸವಲತುಗಳನ್ನು ಕೊಡದೇ, ಈ ಭಯಂಕರ ದುರ್ವ್ಯಸನವನ್ನು ನಿರ್ಮೂಲಿಸುವದು ಸಾಧ್ಯವದೆಂದು ಅವರು ತಮ್ಮ ಚರಿತ್ರ ಕಾರ್ಯದಿಂದ ಸಿದ್ಧಪಡಿಸಿದ್ದಾರೆಂದು ಹೇಳಬಹುದು; ಒಟ್ಟಿಗೆ ಸರಕಾರವು ಟೊಂಕಕಟ್ಟಿ, ಸಿದ್ಧರಾಗಿ ಈ ದೇಶಕಾರ್ಯದಲ್ಲಿ ನೆರವಾದರೆ, ಮದ್ಯಪಾನದ ನಾಶವು ಪೂರ್ಣವಾಗಿ ಆಗುವದೆಂಬ ಬಗ್ಗೆ ಸಂದೇಹವಿಲ್ಲ

ಜಾನಸನ್ ಸಾಹೇಬರು ಅಮೇರಿಕೆಯೊಳಗಿನ ಮದ್ಯಪಾನ ನಿಷೇಧದ ಕಾರ್ಯವನ್ನು ಬಹುತರವಾಗಿ ಕೊನೆಗಾಣಿಸಿ, ಬೇರೆದೇಶಗಳಲ್ಲೇನು ನಡೆದದೆಂದು ಕಣ್ಣಾರೆನೋಡಿ, ಈ ಪರೋಪಕಾರದ ಕಾರ್ಯದಲ್ಲಿ ಕೈಲಾದಷ್ಟು ಸಹಾಯಮಾಡಿ ಮತ್ತೂ ದುಡಿಯಬೇಕೆಂದು, ಜಗತ್ತಿನ ಮಹಾಯಾತ್ರೆಗೆ ಹೊರಟಿರುವರು. ಅಮೇರಿಕೆಯಿಂದ ಇಂಗ್ಲಂಡಿಗೆ ಬಂದು, ಕಳೆದ ಮೂರು ವರುಷ ಅವರು ಅಲ್ಲಿ ದುಡಿದರು. ವಿಲಾಯತಿಯೊಳಗೆ ಚಳವಳಿಯನ್ನು ನಡಿಸುವಾಗ, ಅಲ್ಲಿಯ ಹೆಂಡಕುಡುಕರಿಂದ ಅವರಿಗೆ ಬಹಳೇ ಉಪದ್ರವವಾಯಿತು. ಅಲ್ಲಿ ಅವರಿಗೆ ನಿರ್ದಯ ಕುಡುಕರು ಅತ್ಯಾಚಾರಗಳನ್ನು ನಡಿಸಿ, ಪರಿಪರಿಯಿಂದ ಪೀಡಿಸಿದರೆಂದು ಕೇಳುತ್ತದೆ ಒಮ್ಮೆ ಒಬ್ಬ ಉಡಾಳ ಹುಡುಗನು ಕಲ್ಲುಹೊಡೆದು ಅತ್ಯಾಚಾರಿತನದಿಂದ ಅವರ ಎಡಗಣ್ಣನ್ನೇ ಒಡೆದು ಬಿಟ್ಟನು. ಆದರೂ ಬಹಳೇ ಕಾಳ್ಜಿಯಿಂದ ಇಂಥ ಅತ್ಯಾಚಾರವನ್ನು ಸಹಿಸಿ, ಅವರು ತಮ್ಮ ಕಾರ್ಯವನ್ನು ಸಾಗಿಸಿದರು. ಇಂಗ್ರಜಿ ಜನರು ಈ ಸರಾಯಿಯ ಚಟವನ್ನು ಬೇಗ ಬಿಡರೆಂದು ಅವರ ಮತವಾಗಿದೆ. ಮದ್ಯಪಾನದ ಪ್ರತಿಬಂಧವು ಜಗತ್ತಿನ ಎಲ್ಲ ದೇಶಗಳಲ್ಲಾದನಂತರ, ಕಟ್ಟ ಕಡೆಗೆ ಇಂಗ್ಲಂಡದಲ್ಲಾಗುವದೆಂದು ಅವರು ಅಭಿಪ್ರಾಯ ಪಟ್ಟಿರುವರು. ಮುಂಬಯಿ, ಪುಣೆ, ಶಹರುಗಳಲ್ಲಿ ವ್ಯಾಖ್ಯಾನಗಳನ್ನು ಕೊಟ್ಟು ಅವರು ಲೋಕ ಜಾಗೃತಿಯನ್ನು ಮಾಡಲಾರಂಭಿಸಿರುವರು. ನಮ್ಮ ದೇಶಕ್ಕೆ ಅವರ ಸ್ವಾನುಭವದ ಉಪದೇಶಗಳಿಂದಾಗುವ ಲಾಭಗಳಿಗಾಗಿ ನಾವು ಅವರಿಗೆ ಸದ್ಯವ ಋಣಿಯಾಗಿರುವೆವು ಬಡವರ ಮನೆಗೆ ಭಾಗೀರಥಿ ಬಂದಂತೆ ನಮ್ಮಲ್ಲಿ ಅವರ ಆಗಮನವಾಗಿದಲ್ಲವೆ ?

ಸ್ಫುಟಸೂಚನೆಗಳು.

೧. ಪುಸಿಫೂಟ ಜೊನಸನ್ ಸಾಹೇಬರು ಮದ್ಯಪಾನವನ್ನು ತಮ್ಮ ಮುಂಬಯಿ ಪುಣೆಯ ವ್ಯಾಖ್ಯಾನಗಳಲ್ಲಿ ನಿಷೇಧಿಸುವಾಗ, ತಮ್ಮ ಸ್ವಾನುಭವದ ಸಂಗತಿಗಳನ್ನು ಹೇಳಿದರು. ಮದ್ಯಪಾನವನ್ನು ಪೂರ್ಣವಾಗಿ ಪ್ರತಿಬಂಧಿಸುವ ಇಲಾಜು ಸರಕಾರಿ ಕಾಯಿದೆಯಿಂದಲೇ ಮಾಡಲ್ಪಡಬೇಕು ಅಬಕಾರಿ ಉತ್ಪನ್ನವು ಕುಂದಿಗಿ ಸರಕಾರದ ಆದಾಯಕ್ಕೆ ಹಾನಿತಟ್ಟುತ್ತದೆಂಬ ಕಲ್ಪನೆಯು ಭ್ರಾಮಕವಾಗಿರುವದು ಹೆಂಡಕುಡುಕರಿಂದ ಆಗುವ ಗುನ್ಹೆಗಳನ್ನು ತಡೆಯಲಿಕ್ಕೂ, ಅವರಿಗೆ ದಂಡಿಸಲಿಕ್ಕೂ ಸರಕಾರಕ್ಕೆ ಎಷ್ಟು ವೆಚ್ಚಬೀಳುತ್ತದೆಂದು ಲೆಕ್ಕವನ್ನು ಯಾರು ಹೂಡಿರುವರು? ಮೇಲಾಗಿ ಸುರಾಪಕ್ತರ ದುಂದುಗಾರಿಕೆಯಿಂದ ಅವರ ನೀತಿಭ್ರಷ್ಟತೆಯಿಂದ, ಅವರ ಮೇಲೆ ಅವಲಂಬಿಸಿರುವ ಅನಂತ ಕುಟುಂಬಗಳಿಗೆ ಎಷ್ಟು ಹಾನಿಯಾಗುತ್ತದೆಂದು ಯಾರು ಲೆಕ್ಕ ಮಾಡಿರುವರು? ಈ ವ್ಯಸನದಿಂದ ಉಂಟಾಗುವ ಸಾಮಾಜಿಕ ಅವನತಿಯೂ, ಅದರಿಂದ ಸಂಭವಿಸುವ ದೇಶದ ಆರ್ಥಿಕ ಹಾನಿಯೂ ಸರಕಾರದ ಅಬಕಾರಿ ಉತ್ಪನ್ನಕ್ಕಿಂತ ಅಪರಿಮಿತವಾಗಿ ಹೆಚ್ಚಾಗಿರುವದು ಅಮೇರಿಕೆಯೊಳಗೆ ಇದೇ ಅನುಭವವು ಅಲ್ಲಿಯ ಸರಕಾರಕ್ಕೆ ಬಂದಿದೆ. ಇಡೀ ಹಿಂದುಸ್ಥಾನದೊಳಗೆ ಸರಕಾರಕ್ಕೆ ಅಬಕಾರಿ ಉತ್ಪನ್ನವು ೧೭ಕೋಟಿಯದಾಗಿದ್ದರೆ, ನಮ್ಮ ಮುಂಬಯಿ ಸರಕಾರಕ್ಕೆ ೪ ಕೋಟಿಯದಾಗಿರುವದು ಈ ಅಂಕೆಗಳು ಕಾಣಲಿಕ್ಕೆ ದೊಡ್ಡವಿದ್ದಾವೆ. ಆದರೆ ಸೆರೆಕುಡುಕರು ಮಾಡುವ ಕಳವು, ದಂಗಾಮಸ್ತಿ, ಮಾರಾಮಾರಿ, ಸಾಲಿಗೀಲ ಇವೆಲ್ಲವುಗಳ ಬಂದೋಬಸ್ತಿಗಾಗಿ ಪೋಲೀಸರೂ ನ್ಯಾಯಾಧೀಶರೂ, ಖಟ್ಲೆಗಳಲ್ಲಿ ಸಾಕ್ಷಿ ಪುರಾವೆ ವಕೀಲ ಮುಂತಾದವುಗಳ ಬಗ್ಗೆ ಎಷ್ಟು ಹಣದ ಆವಶ್ಯಕವಾಗುತ್ತದೆ, ಅದನ್ನು ಈ ೪ ಕೋಟಿ ರೂಪಾಯಿಗಳೊಳಗೇನು ವಜಾಕಳೆಯಲಿಲ್ಲ. ಇದಲ್ಲದೆ ಈ ವ್ಯಸನಿಗಳ ಕುಟುಂಬಗಳು ದರಿದ್ರಗಳಾಗಿ, ರಾಷ್ಟ್ರದ ಸಂಪತ್ತು ಬೆಳೆಸುವದರ ಬದಲು ಇದ್ದ ಸಂಪತ್ತಿನ ಮೇಲೆ ಭಾರವಾಗಿ ಬೀಳುತ್ತವೆ. ಮದ್ಯಪಾನವನ್ನು ಪ್ರತಿಬಂಧಿಸಿ, ಸೆರೆಕುಡುಕರನ್ನು ಉದ್ಯೋಗ ಧಂದೆಗೆ ಹಚ್ಚಿದರೆ, ಅವರು ದೇಶದ ಸಂಪತ್ತು ಏರಿಸಿ ಸರಕಾರಕ್ಕೂ ಅಪ್ರತ್ಯಕ್ಷವಾಗಿ ತೆರಿಗೆಗಳನ್ನು ತುಂಬಿ, ಎಲ್ಲ ದೃಷ್ಟಿಯಿಂದ ಅರ್ಥೋತ್ಪಾದಕರಾಗುತ್ತಾರೆ. ವ್ಯಸನಿಗಳಿಗಿಂತ ನಿರ್ವ್ಯಸನಿಗಳಿಂದ ಹೆಚ್ಚು ಕೆಲಸವಾಗುತ್ತದೆಂದು ಯುದ್ಧಕಾಲದಲ್ಲಿ ಲಾರ್ಡ ಕಿಚನೇರ ಸಾಹೇಬರಿಗೆ ಸಹ ಕಂಡುಬಂದಿತ್ತು. ಅಮೇರಿಕೆಯ ಅನುಭವವಾದರೂ ಇದೇ ಆದರೆ ಈ ಸಿದ್ಧಾಂತಗಳು ನಮ್ಮ ಅಬಕಾರಿ ದಿವಾಣರಿಗೆ ಎಷ್ಟು ಮಾನ್ಯವಿದ್ದಾವೆಂಬುದೇ ಪ್ರಶ್ನೆಯು! ಇಲ್ಲೇ ಲಗಾಮು ಸಿಲುಕಿಬಿದ್ದದೆ

---

೨. ಬಹಿಷ್ಕಾರವೆಂದರೇನು? ಅದನ್ನು ಆಚರಿಸುವದು ಹೇಗೆ! ಎಂದು ಕೆಲವರಿಗೆ ಎಷ್ಟು ಕಲಿಸಿದರೂ ತಲೆಯೊಳಗೆ ಸೇರುವದಿಲ್ಲ. ದೃಷ್ಟಾಂತದಿಂದಾದರೂ ಇಂಥವರಿಗೆ ತಿಳಿವಾಗಲೆಂದೋ ಏನೋ ಕಾರವಾರದಲ್ಲಿ ಒಂದು ಸಂಗತಿಯು ಸಾರ್ವಜನಿಕವಾಗಿ ಸಂಭವಿಸಿದೆ. ಅಲ್ಲಿಯ ಸಾರ್ವಜನಿಕ ಲಾಯಬ್ರರಿಯಲ್ಲಿ ಮಹಾತ್ಮಾ ಗಾಂಧಿಗಳು ನಡಿಸುವ, ಯಂಗ ಇಂಡಿಯಾ ಪತ್ರಕ್ಕೆ ಬಹಿಷ್ಕಾರ ಹಾಕಬೇಕೆಂಬ ಠರಾವು ಬಹುಮತದಿಂದ ಪಾಸಾಗಿದೆ. ನಮ್ಮ ಜಿಲ್ಹೆಯ ಡೆಪ್ಯುಟಿ ಕಲೆಕ್ಟರರಾದ ಮಿ. ಕೊಯಮತ್ತೂರ ಸಾಹೇಬರು ಟೊಂಕಕಟ್ಟಿ ಈ ಬಹಿಷ್ಕಾರಕ್ಕೆ ಬಹುಮತದ ಮಾನ್ಯತೆಯನ್ನು ಪಡೆಯುವಾಗ ತೋರಿಸಿದ ನಿರ್ಧಾರವು ಎಲ್ಲ ಬಹಿಷ್ಕಾರವಾದಿಗಳಿಗೆ ಅನುಕರಣೀಯವಾಗಿರುವದು. ಇಷ್ಟೇ ನಿರ್ಧಾರದಿಂದ ಬಹಿಷ್ಕಾರವನ್ನು ಆಚರಿಸಿರಿ ಎಂದು ಹೇಳಲಿಕ್ಕೆ ಇದೊಂದು ಢಳಢಳ ಉದಾಹರಣೆಯಾಗಿರುವದು. ಇನ್ನು ಬಹಿಷ್ಕಾರದ ಬುಡಕ್ಕಿರುವ ಕಾರಣಗಳು ವ್ಯಕ್ತಿದ್ವೇಷಮೂಲಕವಾಗಿರಬಾರದು. ಅಥವಾ ಬೇರೆ ವ್ಯಕ್ತಿಗಳ ಅಪ್ರತ್ಯಕ್ಷ ಹಾನಿ ಸ್ವಾರ್ಥದಿಂದ ಪ್ರೇರಿತವಾಗಿರಬಾರದು. ಎಂಬ ತತ್ತ್ವಗಳನ್ನಂತೂ ಅಸಹಯೋಗಿಗಳು ಬಲ್ಲೇಬಲ್ಲರು ಈ ದೃಷ್ಟಿಯಿಂದ ಈ ಉದಾಹರಣೆಯು ಪೂರ್ಣವಾಗಿ ಅನುಕರಣೀಯವದೆಂದು ನಮ್ಮಿಂದ ಹೇಳಲಿಕ್ಕಾಗದು. ಇನ್ನು 'ಯಂಗ ಇಂಡಿಯಾ' ಪತ್ರದ ವಿಷಯವಾಗಿ, ಖಾವಿಂದರವರು ಪ್ರಕಟಿಸಿದ ಅಭಿಪ್ರಾಯಗಳು ಬೆಳಕಿಗೆ ಕತ್ತಲೆಯೆಂದು ಹೇಳುವಷ್ಟು ವಿಪರ್ಯಸ್ತವಿದ್ದಾವೆಂದು ಅವರ ವಾಚಕವರ್ಗವು ಅರಿತಿರುವದು. "Fiery" ಬೆಂಕಿಯನ್ನು ಕಾರುವ ಲೇಖಗಳು, ಅವರೊಳಗೆ, ಮಹಾತ್ಮಾ ಗಾಂಧಿಗಳು ಸಂಪಾದಕರಾದಂದಿನಿಂದ ಒಂದು ಸಂಚಿಕೆಯಲ್ಲಿ ಸಹ ಯಾರಿಗೂ ಕಂಡುಬಂದಿಲ್ಲ. "ಜ್ವಲತ್"ವೆಂಬ ವಿಶೇಷಣವು ಒಂದೇ ವ್ಯಾಜಸ್ತುತಿಗಾಗಿ ಅವರು ಉಪಯೋಗಿಸಿರಬೇಕು. ಯಾ ಅಜ್ಞಾನ ಮೂಲಕವಿರಬೇಕು "ನಮಗೆ ಬೇಡ" ಎಂದು ಹೇಳುವ ಅವರ ಹಮ್ಮಿಕೆಯು ಅಧಿಕಾರಿತನದ ಸ್ವಭಾವಧರ್ಮವು. ಖರಿಷ್ಟರಲ್ಲಿ ಒಮ್ಮೊಮ್ಮೆ ಈ ಅಹಂಭಾವವು ನಿತ್ಯದ ಅಭ್ಯಾಸದಿಂದ ಸ್ವಭಾವವೇ ಆಗಿರುತ್ತದೆ. ಅದಕ್ಕೇನೂ ಉಪಾಯವಿಲ್ಲ. ಇಂಥ ಪ್ರಥಮ ಪುರುಷದ ಅಘಾತವು ಒಂದು ಬಗೆಯಾದ ಕ್ಷಮ್ಯವೆಂತಲೇ ತಿಳಿಯತಕ್ಕದ್ದು. ಅದನ್ನು ಸಾರ್ಥವಿಲ್ಲ. ಇದೇನೂ ಇರಲಿ, ಖಾವಿಂದರವರ ಬಹಿಷ್ಕಾರದ ನಿರ್ಧಾರವನ್ನಷ್ಟು ಅಭಿನಂದಿಸುವದು ನ್ಯಾಯ್ಯವಾಗುವದು.

---

೩ ನಮ್ಮ ಕಾರವಾರದ ಬಾಂಧವರಾದ ವಿಚಾರಿಕಾರರು ಅಲ್ಲಿಯ ಮುನಸಿಫ ಮಿ. ಕಾಣೆಯವರ ಬಗ್ಗೆ ತಮ್ಮ ವಿಚಾರಲಹರಿಗಳನ್ನು ಪ್ರಕಟಿಸಿರುವರು ಅವರ ವಿಚಾರದೊಳಗೆ ಕಾರವಾರ ಸಬಜಡ್ಜ ಕೋರ್ಟಿನ ವಸ್ತುಸ್ಥಿತಿಯ ಸ್ಪಷ್ಟವಾದ ಚಿತ್ರವು ಪ್ರತಿಬಿಂಬಿಸಲ್ಪಡದೆ ನಮಗೆ ಮತ್ತಿಷ್ಟು ಗೊಂದಲವಾಗಿದೆ ನಮ್ಮ ಕಡೆಗೆ ಬಂದ ಈ ವಿಷಯದ ದೂರುಗಳು ಪೂರ್ಣವಾಗಿ ನಿರಾಧಾರವಿದ್ದಾವೆಂದು ಸ್ಪಷ್ಟವಾಗಿ ವಿಚಾರಿಯು ಆಶ್ವಾಸಿಸಿದ್ದರೆ, ನಮಗೆ ಆನಂದವಾಗುತ್ತಿತ್ತಷ್ಟೇ ಅಲ್ಲ, ನಾವು ಬಹಳೇ ಆಭಾರಿಯಾಗುತ್ತಿದ್ದೆವು. ಮಿ. ಕಾಣೆಯವರು ನಿರ್ಮಲ ವೃತ್ತಿಯ ನ್ಯಾಯಾಧೀಶರಿದ್ದಾರೆ, ಎರಡೂ ಪಕ್ಷದ ಹೇಳಿಕೆಯನ್ನು ಪೂರಾ ಕೇಳಿಕೊಂಡು ನ್ಯಾಯ್ಯವಾದ ತೀರ್ಪನ್ನು ಕೊಡುತ್ತಾರೆ, ಎಂಬ ಬಗ್ಗೆ ನಿರ್ಮಲ ದೃಷ್ಟಿಯ ಪತ್ರಗಾರರಲ್ಲಿ ಸಹ ಏಕಮತವದೆ. ಆದರೆ, ಅವರಾಶಿಸಲ್ಲಿ

ನಾದಿ ಪ್ರತಿವಾದಿಗಳು ಮಾಡಿಕೊಳ್ಳಬಹುದೆಂಬ ತಡಜೋಡು, ಪಕ್ಷಗಾರರ ಅಪೂರ್ಣ ತಯಾರಿಯ ಮೂಲಕವೆಂದು ಕೇಳಲ್ಪಡುವ ವಿಚಾರಣೆಯ ದಿರಂಗಾಯಿ, ಇವುಗಳ ವಿಷಯವಾಗಿ ವಿಚಾರಿಕಾರರು ಮಾಡುವ ಸಮರ್ಥನೆಯನ್ನು ನೋಡಿ, ವೃಥಾ ಸಂಶಯಕ್ಕೆ ಮಹತ್ತು ಕಾರಣವಾಗಬಹುದಲ್ಲವೇ? ಇನ್ನು ಇವುಗಳ ವಿಷಯವಾಗಿ ಸ್ವಾನುಭವವು ನಮಗೇನಿಲ್ಲ ಇದ್ದರೆ, ವಿಚಾರಿಕಾರರಿಗೆ ಅದು ಇರಬಹುದು ಒಟ್ಟಿಗೆ ನಮ್ಮ ಕಡೆಗೆ ಬಂದ ದೂರುಗಳಲ್ಲಿ ಅತಿಶಯೋಕ್ತಿಗಳಿರಬಹುದಾದರೂ, ಏನಾದರೂ ತಥ್ಯವದೆಯೋ ಇಲ್ಲವೋ ಎಂಬುದನ್ನು ಮತ್ತಿಷ್ಟು ಸ್ಪಷ್ಟೀಕರಿಸಲಿಕ್ಕೆ ವಿಚಾರಿಕರ್ತರಿಗೆ ಶಕ್ಯವಿತ್ತು ರಾ। ಕಾಣೆರವರ ನ್ಯಾಯದಬಗ್ಗೆ ದೂರಿಲ್ಲ; ಅವರ ನ್ಯಾಯದಾನ ಪದ್ಧತಿಯೇ ವಿವಾದಾತ್ಮಕ ವಿಷಯವಾಗಿದೆ ಇನ್ನು ಪಂಚಕೋರ್ಟಿನ ತತ್ವವು ನಮಗೆ ಮಾನ್ಯವಿದೆಂದು, ಅದು ಮಾನ್ಯವಿಲ್ಲಾದವರಮೇಲೆ ಅದನ್ನು ಹೊರಿಸಬೇಕೆಂದು ಲಂಥರಾಗಿ ನಾವು ಹಟ ಹಿಡಿಯಲಾರೆವು ಭಿನ್ನ ಮತದವರ ದೂರುಗಳನ್ನು ಪಕ್ಷಾಂಧತೆಯಿಂದ ನಮಗೆ ತಿರಸ್ಕರಿಸಲಿಕ್ಕಾಗದು ನ್ಯಾಯಕೋರ್ಟಿನೊಳಗಿನ ಪಂಚಾಯತ ಫೈಸಲು ಬೇರೆ, ಸ್ವತಂತ್ರ ಪಂಚಕೋರ್ಟಿನ ನಿಕಾಲೆಯು ಬೇರೆ ಎಂದು ತಿಳಿಯದಿರುವಷ್ಟು "ವಿಚಾರಿ"ಯು ವಿಚಾರಮೂಢವಾದದ್ದು ಆಶ್ಚರ್ಯಕಾರವು

೪, ಅದರೆ ಈ ವಿಷಯ ನಮ್ಮ ಕಡೆಗೆ ಬಂದ ದೂರುಗಳೂ, ಅದರಿಂದುಂಟಾದ "ಶಂಕೆ"ಗಳೂ ಪೂರ್ಣವಾಗಿ ನಿರಾಧಾರವಿದ್ದಾವೆಂದು ಶ್ರೀ। ಹಳದಿಪೂರ ಶ್ರೀ। ಕಬಾಡ ವಕೀಲದ್ವಯರ ಸ್ಪಷ್ಟವಾದ ನಿರಾಕರಣೆಯಿಂದ ಎಲ್ಲರೂ ಮನಗಾಣುವರು, ವಿಚಾರಿಯ ಮಿಳಿಮಿಳಿತ ವಿಧಾನಗಳಿಂದುಂಟಾದ ಅರೆ ಸಂಶಯವು ವಕೀಲರ ಪತ್ರದಿಂದ ದೂರವಾಗುವದು, ರಾ। ಕಾಣೆರವರು ಕೊಡುವ ನ್ಯಾಯವು ನಿರ್ದೋಷಿಯಾಗಿದ್ದಾಗ, ಪೂರ್ಣವಾಗಿ ಚೊಕ್ಕವಿದ್ದಾಗ, ಅವರ ನ್ಯಾಯದಾನ ಪದ್ಧತಿಯ ಬಗ್ಗೆ ಮಾತ್ರ ಭಿನ್ನ ಭಿನ್ನ ಮತಗಳಾಗಿ ಪಕ್ಷಗಾರರ ಕೂಜ ತಕ್ರಾರುಗಳಿಗೆ ಇಂಬು ದೊರೆಯಿರಬಹುದೆಂದು ನಾವು ಭಾವಿಸುವೆವು. ಅವರ ವಿಚಾರಣೆಯ ಪದ್ಧತಿಗೆ ವಿಶಿಷ್ಟ ಸ್ವರೂಪವಿದ್ದರೂ, ಅವು ಸಹ ಅವರ ತೀರ್ಪುಗಳಂತೆ, ಸರಲವದೆ, ನ್ಯಾಯ್ಯವದೆಂದು, ವಕೀಲರ ಪತ್ರವು ನಮಗೆ ಆಶ್ವಾಸಿಸುತ್ತದೆ. ಪಾಯಿದೆ ಕೊಡುವವರಾದರೂ, ನ್ಯಾಯ್ಯನಿರ್ಣಯಗಳ ಹಿತಕ್ಕಾಗಿ, ವಾದಿ-ಪ್ರತಿವಾದಿಗಳ ಒಪ್ಪಿಗೆಯಿಂದ ಅವರು ಕೊಡುತ್ತಾರೆಂದೂ, ಅದರ ವಿಷಯು ಬಂದ ಸ್ಥಾನಗಳು ವ್ಯಕ್ತಿವಿಷಯಕ ವಿರುದ್ಧ ನಿಕಾಲಿ ಹೊಂದಿದವರ ನಿಷ್ಕಾರಣ ತಕ್ರಾರುಗಳೆಂದೂ, ಅವರು ಪತ್ರದಲ್ಲಿ ಬರೆದಿರುವರು. ಈ ದೂರುಗಳು ವ್ಯಕ್ತಿವಿಷಯಕವಾಗಿದ್ದಾವೆಂಬ ನಮ್ಮ ಸಂಶಯವು, ನಿಜವಾಯಿತೆಂದು ತಿಳಿದು ನಾವು ಆನಂದಪಡುವೆವು ಮತ್ತು ವಕೀಲ ಗಳೆರಡು ಸತ್ಯಸ್ಥಿತಿಯನ್ನು ಪ್ರಕಟಿಸಿದ್ದಕ್ಕಾಗಿ, ಅವರ ಆಭಾರಗಳನ್ನೆಣಿಸುವೆವು. ರಾ। ಕಾಣೆರವರ ಕೋರ್ಟಿನ ಬಗ್ಗೆ ನಾವು ನಡಿಸಿದ ಚರ್ಚೆಯಿಂದ ಚಿನ್ನದ ಘುಟಗಳು ಪರಿದಂತಾದರೂ, ಅವರ ಮನೋವ್ಯಥೆಗೆ ಅದು ಕಾರಣವಾಗಬಹುದಾದಪರಿಂದ, ಅವರ ಬಗ್ಗೆ ನಮ್ಮ ವಿಷಾದವನ್ನು ಪ್ರಕಟಿಸುವೆವು. ಎಷ್ಟೋ ಅಪ್ರಿಯ ಕರ್ತವ್ಯಗಳನ್ನು ನ್ಯಾಯಾರ್ಥೀತರಾಗಿ ,ವೃತ್ತಪತ್ರಗಳಿಗೆ ಮಾಡಬೇಕಾಗುತ್ತದೆಂದ ಅವರಂಥ ಸೂಜ್ಞರು, ವಿಜ್ಞರೇ ಇದ್ದಾರೆ. ಸತ್ಯವು ತೊಳೆದಷ್ಟು ಹೆಚ್ಚು ಹೆಚ್ಚು ಹೊಳೆಯುತ್ತದೆಂಬ ಅನುಭವವೇ ಈ ಚರ್ಚೆಯಿಂದ ಹೊರಟಿದೆಂದು ಅವರು ತಿಳಿಯದಿರರೆಂದು ನಂಬುವೆವು.

---

೫ ಮುಲಿಬಾರದ ದಂಗೆಯನ್ನು ಅಣಗಿಸಲಿಕ್ಕೆ ಸರಕಾರದಿಂದ ಆಯಾಯ ಕೇಂದ್ರಗಳಲ್ಲಿ ದಂಡು ತಂದು ದಂಗೆಯವರನ್ನು ಸೆರೆ ಹಿಡಿದು, ಅವರ ವಿಚಾರವು ಮಾರ್ಶಲ ಕಾಯಿದೆಗನುಸರಿಸಿ ಸ್ಥಾಪಿಸಲ್ಪಟ್ಟ ಕೋರ್ಟುಗಳಲ್ಲಿ ನಡಿಯುತ್ತಿದೆ ದಂಗೆಗಾರರು ಒಂದೇ ಸವನೆ ಹಳ್ಳಿಪಳ್ಳಿಗಳಲ್ಲಿ ಹೊಕ್ಕಿ ತಮ್ಮ ಕಾರಭಾರವನ್ನು ನಡಿಸುತ್ತಿರುವರು ಅಲ್ಲಲ್ಲಿ ಸಣ್ಣ ಸಣ್ಣ ಕದನಗಳಾಗಿ ಉಭಯತರಲ್ಲಿಯೂ ಭಯಂಕರ ಕೊಲೆ ನಡೆದದೆ ಪೆನಶನರ ಪ್ರೋ। ಇ। ಖಾನಬಹಾದ್ದೂರ ಚೆಕ್ಕುಟಿ ಮತ್ತು ಹೆಡ್ ಕೊನಸ್ಟೆಬಲ ಪಿದ್ರೋಸರವರು ದಂಗೆಗಾರರ ಹಾವಳಿಗೆ ಬಲಿಬಿದ್ದರು ಸಭ್ಯ ಗ್ರಹಸ್ಥರ ಸೊತ್ತು, ಸರಕಾರಿ ಟ್ರೆಜರಿ, ತಪೆ ಮುಂತಾದವುಗಳ ಲೂಟಿ ನಡೆದಿದೆ ಸರಕಾರಿ ಕೋರ್ಟು ಕಚೇರಿಗಳು ಈಗಲೂ ಸುಡಲ್ಪಡುತ್ತವೆ ದಂಗೆಗಾರರನ್ನು ಹಿಡಿದು ಸ್ಪಶಲ್ ಕೋರ್ಟಿನಲ್ಲಿ ವಿಚಾರ ಮಾಡಿ, ಎರಡೆರಡು ವರ್ಷಗಳ ಕಠಿಣ ಶಿಕ್ಷೆಯಾಗುತ್ತಿರುವದು ಅವರು ಸ್ಥಲ ಸಂಕೋಚದ ಮೂಲಕ ದಿಗರ ಜಿಲ್ಲೆಗಳ ಸಂಟ್ರಲ ಜೈಲುಗಳಿಗೆ ಕಳುಹಿಸ್ಪಡುತ್ತಿರುವರು. ಪ್ರೊವಿನ್ಸಿಯಲ್ ಕೊನ್ಸರನ್ಸಿನ ಪ್ರತಿನಿಧಿಗಳಾದ ಶ್ರೀ। ಪ್ರಕಾಶಂ ಮೊದಲಾದವರು ದಂಗೆಯನ್ನು ಶಾಂತಗೊಳಿಸಲು ಪಾಲಘಾಟಿನಲ್ಲಿ ಏರ್ಪಡಿಸಲ್ಪಟ್ಟ ಸಭೆಯು ಮಲಬಾರದ ಡಿ। ಮೆಜಿಸ್ಟ್ರೇಟರಿಂದ ಮನ್ನಾ ಮಾಡಲ್ಪಟ್ಟಿತು ಹೀಗಾಗಿ ಅವರು ಹಿಂತಿರುಗಿ ಮದರಾಸಿಗೆ ಹೋದರು. ಈ ಅಪಾಂತರವು ಇನ್ನು ಎಷ್ಟು ಕಾಲ ನಡೆಯುತ್ತದೋ ತಿಳಿಯದು. ತಮ್ಮ ಸತ್ತೆಯ ದಬ್ಬಾಳಿಕೆಯಿಂದ ಇಂಥ ದಂಗೆಯನ್ನು ನಿವಾರಿಸುವದಕ್ಕಿಂತ ಅದಕ್ಕೆ ಕಾರಣವಾದ ಮೂಲ ಕಾರಣಗಳನ್ನು ಪರಿಶೋಧಿಸಿ, ಅವುಗಳನ್ನೇ ತಿದ್ದಿದರೆ, ಶಾಂತತೆಯು ಇಷ್ಟರಲ್ಲೇ ನೆಲೆಗೊಳ್ಳುತ್ತಿತ್ತು ಇಷ್ಟೇ ಅಲ್ಲ ನೂರುಗಟ್ಟಲೆ,— ಸಾವಿರಗಟ್ಟಲೆ ಜನರ— ವೃಥಾ ಸಂಹಾರ ತಪ್ಪಿಸಿದಂತಾಗುತ್ತಿತ್ತು. ಇವೆಲ್ಲ ಪರಿಣಾಮವು ನಮ್ಮ ಆಳರಸರ ದುರಾಗ್ರಹದಿಂದಲೇ ಉಂಟಾಗಿದೆಂಬದು ಈಗೀಗ ಜಾಹೀರಾಗುತ್ತ ಬಂದಿದೆ ಅಸಹಕಾರ, ಸ್ವದೇಶಿ, ಪರದೇಶಿ ಬಹಿಷ್ಕಾರ ಮುಂತಾದ ಶಬ್ದಗಳಿಂದಲೇ ಅವರ ತಲೆಯು ತಿರುಗಿ ಹೋದರೆ, ಅವರಾದರೂ ಏನು ಮಾಡ್ಯಾರು? ಪಾಪ! ಸತ್ತೆಯ ಪ್ರಭಾವದಿಂದ ಜನಸಂಹಾರವನ್ನು ಆದೀಶೇಹೊತ್ತು, ಭರತಖಂಡದಲ್ಲಿ ಬೇರೂರಿ ಸ್ಥಿರವಾದ ಈ ಚಳವಳವನ್ನು ಅವರು ನಿರ್ಮೂಲಿಸಲಾರರೆಂಬುದು ಶಾಂತಚಿತ್ತದಿಂದ ಅವರು ವಿಚಾರ ಮಾಡಿದರೆ, ಅವರಿಗೆ ತಿಳಿಯದಿರದು. ನೋಡುವ, ಮುಂದೆ ಏನೇನು ಸಂಭವಿಸುತ್ತದೆಂದು!

---

೬ ನಮ್ಮ ಜಿಲ್ಲೆಯಲ್ಲಿ ಈಗ ಸಾಕಷ್ಟು ಮೋಟಾರ ಕಂಪನಿಗಳು ಸ್ಥಾಪಿತವಾಗಿರುವವೆಂಬುದು ಸಂತೋಷಕರವು. ಈ ಧಂದೆಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಬಂಡವಾಲು ಬಿದ್ದಿರಬೇಕು. ಇನ್ನೂ ಬೆಳೆವ ಲಕ್ಷಣಗಳು ಕಾಣುತ್ತಿವೆ. ಮೋಟಾರ ಸರ್ವಿಸ್ಸಿನಿಂದ ಹುಬ್ಬಳ್ಳಿ— ಕಾರವಾರ, ಕಾರವಾರ— ಅಂಕೋಲಾ, ಅಂಕೋಲಾ— ಕುಮಟಾ, ಕುಮಟಾ— ಶಿರ್ಸಿ, ಶಿರ್ಸಿ— ಹಾನಗಲ್— ಹಾವೇರಿಗೆ ರಹದಾರಿಯೊದಂತಾಯಿತು, ಇದು ಜಿಲ್ಲೆಯ ಹಿತದಿಂದಾದ ಒಂದು ಏಳಿಗೆ ಎಂದು ಎನ್ನಬಹುದು, ಇದರಿಂದ ನಮ್ಮ ಜಿಲ್ಲೆಯಲ್ಲಿ ಯೋಗ್ಯ ರಹದಾರಿಯ ಕೊರತೆ ಎಂಬ ಕಲಂಕವು ಬಲು ಬೇಗ ತೊಳೆದು ಹೋಗುವದು, ಆದರೆ ಮೋಟಾರ ರಹದಾರಿಯು ಈಗೆ ಬಂಡಿಗಳಿಗಿಂತ ಮೂರು ನಾಲ್ಕು ಪಟ್ಟು ತುಟ್ಟಿಯಾಗಿರುವದು, ಅದ್ದರಿಂದ ಬಡ ಜನರು ಪ್ರವಾಸದ ಅಗ್ಗ ಸಾಧನಗಳ ಬಗ್ಗೆ ಇನ್ನು ಎಷ್ಟು ಕಾಲ ಪ್ರತೀಕ್ಷೆ ಮಾಡಬೇಕೋ ತಿಳಿಯದು. ಆದರೂ ಪ್ರವಾಸದ ಏನೂ ಸಾಧನವಿಲ್ಲದ್ದರಕಿಂತಲೂ ತುಟ್ಟಿಯಾಗಿ ತಕ್ಕಮಟ್ಟಿಗಾದರೂ ಇದ್ದದ್ದು ಶ್ರೇಯಸ್ಕರವಲ್ಲವೇ? ಅದ್ದರಿಂದ ಈ ಸಾಹಸದ ಎಲ್ಲ ಮೋಟಾರ ಕಂಪನಿಗಳಿಗೆ ಯಶಪ್ರಾಪ್ತಿಯಾಗಲೆಂದು ತುಂಬಾ ಬಯಸಿ, ಅವುಗಳಿಂದ ಪ್ರಯಾಣಿಕರಿಗೆ ಸಾಕಷ್ಟು ಸುಖಸೋಯಿಗಳುಂಟಾಗಲೆಂದು ಆಶಿಸುವೆವು

ಪೇಂಟರರು ಗುಜರಾಥಕ್ಕೆ ಬಂದರೆ?

ಧಾರವಾಡದಲ್ಲಿ ಅತ್ಯಾಚಾರಗಳನ್ನು ಆಚರಿಸಿದ ಪೇಂಟರ ಕಲೆಕ್ಟರರಿಗೆ ಗುಜರಾಥ ಪ್ರಾಂಥದಮೇಲೆ ಕಮೀಶನರಾಗಿ ಸರಕಾರವು ನೇಮಿಸುವವರಿದ್ದಾರೆಂಬ ಸುದ್ದಿ ಬಿದ್ದದೆ. ಈ ಸುದ್ದಿಯು ನಿಜವಾಗಿ, ಪೇಂಟರರು ಕಮೀಷನರಾಗಿ ಬಂದರೆ, ಅಸಹಕಾರಿತಾವಾದಿ ಗುರ್ಜರ ಭಾಂದವರು ಹ್ಯಾಗೆ ವರ್ತಿಸಬೇಕು, ಎಂಬಬಗ್ಗೆ ಮಹಾತ್ಮಾ ಗಾಂಧಿಯವರು ಒಂದು ಸ್ಫುಟಸೂಚನೆಯನ್ನು ಬರೆದಿರುವರು.

ಅದರ ಸಾರಾಂಶವೇನಂದರೆ,—

"ಲೋಕನಿಂದೆಗೆ ಪಾತ್ರರಾದ ಅಧಿಕಾರಿಗಳನ್ನು ಸರಕಾರವು ಶಿಫಾರಸು ಕೊಟ್ಟು ಆದರಿಸುತ್ತದೆ. ಧಾರವಾಡದಲ್ಲಿ ಜನರನ್ನು (ಅತ್ಯಾಚಾರಕ್ಕೆ) ಪ್ರವೃತ್ತಮಾಡಿದ ಪೇಂಟರ ಕಲೆಕ್ಟರರು, ಗುಜರಾಥ ಪ್ರಾಂತದ ಕಮೀಶನರರಾಗಿ ಬಂದರೆ, ನಿಜವಾದ ಅಸಹಕಾರೀ ಧೋರಣದಂತೆ, ಗುರ್ಜರ ಪ್ರಾಂತಸ್ಥರು ವರ್ತಿಸಬೇಕು ಮಾನವೀ ಜೀವನಕ್ಕೆ ಅತ್ಯವಶ್ಯವಿರುವ ಎಲ್ಲ ಸಾಮಗ್ರಿಗಳನ್ನು ಅವರಿಗೆ ಪೂರೈಸಬೇಕು. ಆದರೆ, ಕಮೀಶನರರ ಹುದ್ದೆಗೆ ಪೋಷಕವಾಗುವ ಯಾವದೇ ವರ್ತನವನ್ನು ನಾವು ಆಚರಿಸಕೂಡದು ಕಮೀಶನರೀ ಹುದ್ದೆಯ ಗೌರವಕ್ಕಾಗಿ ಒಂದು ಹುಲ್ಲುಕಡ್ಡಿ ಸಹ ಅವರಿಗೆ ಯಾರೂ ಕೊಡಲಾಗದು ಕಮೀಶನರ ಸಾಹೇಬರೆರದು ಅವರಿಗೆ ಯಾರೊಬ್ಬರು ಸಲಾಮು ಹೊಡೆಯಬಾರದೆಂದು ಜನರಿಗೆ ನಾವು ಕಲಿಸಬೇಕು; ಅವರಕಡೆಗೆ ಯಾರೂ ಅರ್ಜಿಗಳನ್ನು ಕಳಿಸಬಾರದು, ಸರ್ಕೀಟಿನಮೇಲೆ ಅವರಿಗೆ ಏನೇನು ಸಹಾಯಮಾತಲಾಗದು, ಅಸಹಕಾರಿತಾವಾದಿ ಮುನಿಸಿಪಾಲಿಟಿಗಳು ಕಮಿಶನರೀ ನಾತೆಯಿಂದ ಅವರನ್ನು ಸ್ವಾಗತೀಕರಿಸಬಾರದು; ಒಟ್ಟಿಗೆ, ಗುಜರಾಥದಲ್ಲಿ ಇವರು ಕಮಿಶನರು ಬೇಡವೆಂದು ನಾವು ಶಾಂತ ರೀತಿಯಿಂದಲೂ, ಸ್ವಾಭಿಮಾನದಿಂದಲೂ ಅವರಿಗೆ ತಿಳಿಸ, ತಕ್ಕದ್ದು. ಸ್ವರಾಜ್ಯ ಗಳಿಸಬೇಕಾದರೆ, ನಾವು ರಾಷ್ಟ್ರೀಯ ಅವಮಾನವನ್ನು ಕ್ಷಮಿಸಲಾರೆವೆಂದು ತೋರಿಸಬೇಕು, ಕಮಿಶನರ ಆಫೀಸಿನೊಳಗಿನ ಎಲ್ಲ ನೌಕರರು, ಪೇಂಟರರು ಆಫೀಸಿನಲ್ಲಿ ಕಾಲಿಟ್ಟ ಕೂಡಲೆ ರಾಜಿನಾಮೆ ಕೊಟ್ಟು ಮುಕ್ತರಾಗಬೇಕೆಂದು ನನ್ನ ಇಚ್ಛೆ ಇದೆ; ಆದರೆ, ಅವರು ಹೊಟ್ಟೆಗಾಗಿ, ಅಷ್ಟು

ತ್ಯಾಗವನ್ನು ಮಾಡಲಿಕ್ಕಿಲ್ಲ. ಆದರೆ ಇತರೇ ಸಾಗರಿಕರು ನನ್ನ ಸೂಚನೆಗಳನ್ನು ಮನ್ನಿಸಿದರೂ ಸಾಕು, ಶಿಸ್ತಿನಿಂದ ಕಾದಾಡುವದೇ ನಮ್ಮ ಮುಖ್ಯ ಕೆಲಸವು. ಪೆಂಟರರು ಗುಜರಾಥದಲ್ಲಿ ಕಾಲಿಡುವ ವಿಷಯ ಸಂಪೂರ್ಣ ಹರತಾಳ ಆಚರಿಸಬೇಕು. ಆದರೆ, ಈ ಬಗ್ಗೆ ಯಾರಿಗೂ ಹಿಂಸ್ರೆಯುಮಾಡಬಾರದು "

ಸ್ಥಾನಿಕ ವೃತ್ತಾಂತ.

ಕುಮಟಾ— ಇಷ್ಟರವರೆಗೆ ಮಳೆ ೧೦೪-೩೫ ಇಂಚು ಬಿತ್ತು. ಈ ವಾರದಲ್ಲಿ ಮೊದಮೊದಲು ಮಳೆ ಬೀಳದಿದ್ದರೂ, ನಿನ್ನೆಯಿಂದ ಮಳೆ ಬೀಳಹತ್ತಿದೆ, ದವಸು ಧಾನ್ಯಗಳ ಪಾರಸ ಇದ್ದಹಾಗೆಯೇ. ರೋಗರಾಯಿಯೂ ಇದ್ದಹಾಗೆ ಮೈಲಿಯೂ ಅಲ್ಲಲ್ಲಿ ಉಂಟು.

ಈ ಮುನಸಿಪಾಲಟಿಯ ಝಾಡಮಾಲಿ ಮತ್ತು ಭಂಗೀ ಜನರು ಪಗಾರ ಬಡತಿಯ ಬೇಡಿಕೆಯಿಂದ ಮಾಡಿದ ಸಂಪಿನ ವಿಷಯವಾಗಿ ತಾ ೯ ನೇ ದಿವಸ ಮೆನೆಜಿಂಗ ಕಮಿಟಿ ಕೂಡಿ ಎಲ್ಲರಿಗೆ ತುರ್ತ ಒಂದೊಂದು ರೂಪಾಯಿ ಬಡ್ತಿಯು ಠರಾವು ಆಗಿ, ತಾ ೧೦ ನೇಯಿಂದ ಮೊದಲಿನಂತೆ ಅವರು ಕೆಲಸಕ್ಕೆ ಬಂದು ಸಂಪು ಮುರಿಯಿತು. ಇದಿಷ್ಟು ಅಭಿನಂದನೀಯವು

ಕಳೆದವರುಷದಂತೆ, ಈ ವರುಷದ ಮೊಹರಮು ಮೆರವಣಿಗೆಯು ಹಿಂದು ಮುಸಲ್ಮಾನರಿಂದೊಡಗೂಡಿ ಬಲು ಉತ್ಸಾಹದಿಂದ, ವಿಜೃಂಭಣೆಯಿಂದ ಕೊನೆಗಂಡಿತು. ಆದರೆ, ಅವರ ಪ್ರೀತ್ಯರ್ಥ ಡಿ| ಪೋ| ಸುಪರಿಂಟೆಂಡೆಂಟರ ಮೇಹರ್ಬಾನಗಿಯಿಂದ ಬಂದ ಶಸ್ತ್ರ ಹತ್ಯಾರಬಂದ ಪೋಲೀಸರ ಬಂದೋಬಸ್ತಿಯು ಮಾತ್ರ ಈ ವರ್ಷ ನೂತನವೆಂದು ಹೇಳಬಹುದು ' ಇಂಥ ಹತ್ಯಾರ ಬಂದ ಪೋಲಿಸರು ಈ ಜಿಲ್ಲೆಯ ಎಲ್ಲ ತಾಲೂಕು ಮತ್ತು ಮಹಾಲುಗಳಿಗೂ ಹೋಗಿದ್ದಾರಂತೆ !!

ಇಂಗ್ಲಿಷ ಮತ್ತು ಕನ್ನಡ ಶಾಲೆಯ ೫೦ ವಿದ್ಯಾರ್ಥಿಗಳು ಸ್ವರಾಜ್ಯಫಂಡಿನ ವಸೂಲಿಬಗ್ಗೆ ಸ್ವಯಂಸೇವಕರಾಗಿರುವರಂತೆ ! ಇವರು ತಿಂಗಳಿಗೆ ಒಂದು ಬಿಲ್ಲೆಯಂತೆ ವರ್ಗಣಿ ಕೊಡುತ್ತಾರಂತೆ !!

ಮೌಲಾನಾ ಹಬಿಬುಲ್ಲಾಖಾನರವರ ವ್ಯಾಖ್ಯಾನದ ದಿವಸ ಬಡ ಹುಡುಗ ಮೊದಲಾದವರ ಅಂಗಿ, ಟೊಪ್ಪಿಗಳನ್ನು ಸುಟ್ಟುಹೋಪದ್ದರ ಸಲುವಾಗಿ, ಅದೇ ದಿವಸ ಪಟ್ಟಿಗೆ ಬಂದ ರೂಪಾಯಿ ೩೩-೬-೩ ರಿಂದ ಟೊಪ್ಪಿ ೬೪ ಮತ್ತು ಅಂಗಿ ಖಾದಿಯವು ೪ ಕೊಟ್ಟು ನಿಖಾಲೆ ಮಾಡಿಯದೆಂದು ಶ್ರೀ| ಕಾಗಾಲ ಗೋವಿಂದಪ್ಪನವರು ತಿಳಿಸುತ್ತಾರೆ.

ಅಂಕೋಲಾ-ಕುಮಟಾದವರೇಗಿನ ಮೋಟಾರ ಸರ್ವಿಸ್ಸಿನ ವೇಳ್ಯವು ನಿನ್ನೆಯಿಂದ ಬದಲಿಸಲ್ಪಟ್ಟಿದೆ. ಬೆಳಿಗ್ಗೆ ಕುಮಟಾದಿಂದ ಹೊರಟ ಪ್ರವಾಸಿಗರು ಅಂಕೋಲೆಗೆ ಬಂದು ಅಲ್ಲಿಂದ ೧೧ ಘಂಟೆಗೆ ಇಲ್ಲಿ ಬರುವರು ಪುನಃ ಇಲ್ಲಿಂದ ಎರಡು ಘಂಟೆಗೆ ಹೊರಟವರಿಗೆ ಸೀದಾ ಕಾರವಾರಕ್ಕೆ ಸಾಯಂಕಾಲ ೫|| ಘಂಟೆಗೆ ಮುಟ್ಟಿಸುತ್ತಾರೆ. ಇದು ಬಹು ಸ್ತುತ್ಯವು

ಇಲ್ಲಿಯ ಗೌಡಸಾರಸ್ವತ ಹತ್ತು ಸಮಸ್ತರ ಸಭೆಯು ೩-೪ ಸರ್ತಿ ಕೂಡಿ, ೩೧ ಮೆಂಬರರ ಪೋಟಕಮೀಟಿಯು ಮಾಡಿದ ಸೂಚನೆಗಳಿಗನುಸಾರವಾಗಿ, ೬ ಮಾರ್ಗಗಳನ್ನು ಮಾಡಿ ಶ್ರೀಸನ್ನಿಧಿಯಲ್ಲಿ ನಡೆಯುವ ಉತ್ಸವ-ಪರ್ವಣಿಗಳ ಸಾಂಗ್ಯತೆಯ ಬಗ್ಗೆ ಯೋಗ್ಯ ವಿಭಾಗಣಿ ಮಾಡಿದ್ದಲ್ಲದೆ, ದೇವತಾ-ಕಾರಭಾರದ ವಹಿವಾಟಿನ ಲೆಕ್ಕತಪಾಸಿನ ಬಗ್ಗೆ, ಜಮೀನು-ಉತ್ಪನ್ನದ ತಪಾಸಣಿ ಮಾಡುವ ಬಗ್ಗೆ ದೇವರಭಂಡಾರಕ್ಕೆ ಜಮೀನು ಕ್ರಯಕ್ಕೆ ಕೊಳ್ಳುವ ವಿಚಾರ ಮಾಡುವ ಬಗ್ಗೆ, ಮೆಂಬರರ ನೇಮಣೂಕಿಗಳಾದವು. ಮುಂದೆ ಮತ್ತು ಏನೇನು ಸುಧಾರಣೆಯಾಗುತ್ತದೆಂದು ನೋಡುವ !

ಇಲ್ಲಿನ ಕಟ್ಟಿಗೆಯ ಮಖ್ಖಾಳದಲ್ಲಿ ಕಳ ಸವಡಿ ಹೊರೆಗಳು ಬಹಳೇ ಬರಗೊಡಲ್ಪಡುತ್ತಾವಾದ್ದರಿಂದ, ಬಡ ಮುಕ್ತಿ ಹೆಂಗಸರಿಗೆ ಹೊಟ್ಟೆಯ ಅನುಕೂಲ ಸಾಧನ ಮಾಡಿಕೊಟ್ಟಂತಾಗಿದೆ ಈ ಕಳ ಹೊರೆಗಳಿಂದಲೇ ಜನರ ಪ್ರ್ಯಾಗುದರೂ ತಮ್ಮ ಅಡಚಣೆಯನ್ನು ಸುಧಾರಿಸಿಕೊಂಡರು. ಇದಕ್ಕಾಗಿ ಜಂಗಲ ಅಧಿಕಾರಿಗಳನ್ನು ಅಂತಃಕರಣಪೂರ್ವಕ ಅಭಿನಂದಿಸುವೆವು,

ಹೊನ್ನಾವರ— ಮಳೆ ಸ್ವಲ್ಪ ಸ್ವಲ್ಪ ಬೀಳುತ್ತದೆ. ಗದ್ದೆಯಲ್ಲಿ ಬಂದು ಕರಡ ಹುಳಗಳು ಬಿದ್ದು ಕೆಲಕೆಲವು ಕಡೆಯಲ್ಲಿ ಪೈರು ಕೆಟ್ಟುಹೋಗಿರುವದು. ರೋಗರಾಯಿ ವಿಶೇಷವಿಲ್ಲ

ಇಲ್ಲಿಯ ಶರಾಬ ದುಕಾನಗಳ ಹತ್ತರ ಪಿಕೆಟಿಂಗ ನಡೆಯುತ್ತಿದ್ದದ್ದು ಮಧ್ಯದಲ್ಲಿ ಮುಂಬೈಯಲ್ಲಿ ಪಿಕೆಟಿಂಗ ಬಂದ ಆದದ್ದರಿಂದ ಇಲ್ಲಿ ಸಹ ಬಂದ ಇಟ್ಟಿತ್ತು. ಈಗ ಅಕ್ಟೋಬರ ೧ ನೇದಿಂದ 'ಪಿಕೆಟಿಂಗ' ಜೋರಿನಿಂದ ಶುರು ಮಾಡುವದು ಇಲ್ಲಿಯ ಪ್ರಧಾರಿಗಳ ಮತ್ತು ವಕೀಲ ಜನರ ಸಹ ತಯಾರಿ ನಡೆದದೆ ಚರಕದಿಂದ ನೂಲು ತೆಗೆಯುವ ಕೆಲಸವು ಭರದಿಂದ ನಡೆದದೆ.

ತಾಳೆಚಕ್ಕೆ ಸಮ್ಮಂದದ ಫೋರೆಸ್ಟ ಖಟ್ಲೆಯಲ್ಲಿ ೩೪ ಜನ ರೈತರಿಗೆ ವಾಡಿದ ೪೧೫ ರೂಪಾಯಿಯು ದಂಡ ರಕಮನ್ನು ತೆರಲಾರದೆ, ಇವರು ೧೦-೧೪ ದಿವಸಗಳತನಕ ಜೈಲನ್ನೇ ಅನುಭವಿಸಿರುತ್ತಾರಂತೆ ಪಾಪ! ಹೊಟ್ಟೆಗಿಲ್ಲಾದ ಮೇಲೆ ಮತ್ತೇನು ಮಾಡುವರು ? ಸದರ ಗುಂಡಬಾಳಾ ಫೋರೆಸ್ಟರನೇ ಗಂಡಹೆಂಡತಿ ಹೀಗೆ ೨ ಜನರಮೇಲೆ ಮಾಡಿಕೊಟ್ಟ ಇನ್ನೊಂದು ಖಟ್ಲೆಯು ೨-೩ ಸಾಕ್ಷಿ ತಿರುಗಾಡಿಸಿ ಸಧ್ಯದಲ್ಲೇ ನಿಖಾಲೆಗೆ ಇಟ್ಟಿರುತ್ತಾರಂತೆ! ಇವರ ಸಹಾ ಮೇಲಿನ ಆರೋಪಿಯರಂತೆ ಬಡವರಿದ್ದಲ್ಲಿ, ಇವರಿಗೆ ೨೦-೨೫ ರೂಪಾಯಿ ದಂಡದ ಬದಲು ಕೆಲವು ದಿವಸ ಸಜೆಯನ್ನೇ ವಿಧಿಸಿದ್ದಲ್ಲಿ ತಾಳೆಹಿಟ್ಟಿನ ಗಂಜಿ ಉಣ್ಣುವ ಬದಲು ಮಾವನ ಮನೆಯಂತೆ ವಿಶ್ರಾಂತ ಉಣ್ಣುತ್ತಿದ್ದರು. ಮೇಜಿಸ್ಟ್ರೇಟರ ಮರ್ಜಿ '

“ತೋಳ ಬಂತಲೇ ತೋಳ ಬಂತು ”ಎಂಬ ಕುರುಬನ ಕಥೆಯಂತೆ, ಗುಂಡಬಾಳಾ ಫೋರೆಸ್ಟರನು ತನ್ನ ಮುಂದಿನ ಸಾಧನೆ ಬಗ್ಗೆಯೋ ಏನೋ, ವಿನಾಕಾರಣ ತಾ. ೧೧-೯-೩೧ ನೇ ದಿವಸ ಗುಂಡಬಾಳಾ ಪಟೇಲ ಮತ್ತು ಶಿವಪ್ಪ ಶ್ಯಾನಭಾಗ ಇವರ ಉತ್ತೇಜನದಿಂದ ಸುಮಾರು ೨೫೦-೩೦೦ ಜನರು ತಾಳೇಮರಗಳನ್ನು ಕಡಿಯೊಯ್ಯಲಿಕ್ಕೆ ಬರುತ್ತಾರೆ. ಕಾರಣ ಅಲ್ಲಿ ದಂಗೆಯಾದೀತು ಅದ್ದರಿಂದ ತನಗೆ ಪೋಲಿಸ ಸಹಾಯವನ್ನು ಕೂಡಲೆ ರವಾನಿಸಬೇಕೆಂಬ ಮಗ್ಗಿರ ಸುಳ್ಳು ಮಜಕೂರಿನ ರಿಪೋರ್ಟುಗಳನ್ನು ಹೀಗೆ ಬಂದರ ಹಿಂದೊಂದು ಮಾಡಿದನಂತೆ ! ಅದಕ್ಕೆ ಸ್ವತಃ ಮೇಜಿಸ್ಟ್ರೇಟ ಸಾಹೇಬರು, ಪೋಲೀಸ ಅಧಿಕಾರಿಗಳು ಹತ್ಯಾರಬಂದ ಪೋಲೀಸರನ್ನು ತೆಗೆದುಕೊಂಡು ಗುಂಡಬಾಳೆಗೆ ಹೋಗಿ, ಅಲ್ಲಿ ಏನೊಂದು ಇಲ್ಲದೆ ಕೈಯಾಡಿಸುತ್ತ ಹಿಂದಿರುಗಿ ಬಂದರಂತೆ” ಈ ಪ್ರಕಾರ ಸುಳ್ಳುಸುಳ್ಳೇ ಗೊಂದಲ ಎಬ್ಬಿಸುವದರಿಂದ, ಈ ಅಡವಿಯ ಬಡ ರೈತರಿಗೆ ಎಬ್ಬಿಸಿಕೊಟ್ಟಂತಾಯಿತಲ್ಲವೇ ? ಈ ಸುಳ್ಳುರಿಪೋರ್ಟುಮಾಡಿದ ಫೋರೆಸ್ಟರನಿಗೆ ಏನು ಇನಾಮು ಸಿಗುತ್ತದೆ ನೋಡಬೇಕು.

ಇಲ್ಲಿಯ ಮೊಹರಮು ಹಬ್ಬವು ತಾ. ೧೩-೮-೩೧ ನೇಗೆ ಮುಸಲ್ಮಾನ ಬಾಂಧವರೂ ತಾಬೂತ ಎಬ್ಬಿಸಿಕೊಂಡು ಉತ್ಸಹದಿಂದ ಹುಲಿವೇಷ, ಸಿದ್ಧಿ, ಮೊಗಲ ಮೊದಲಾದ ಸೋಗುಗಳು ಹಾಕಿ ಬಾಝಾರ ಮಾರ್ಗವಾಗಿ ಉತ್ಸಹದಿಂದ ರಾಮತೀರ್ಥಕ್ಕೆ ಹೋಗಿ ನಂತರ ಅಲ್ಲಿ ಸ್ನಾನಮೊದಲಾದ ಶಾಸ್ತ್ರಕೆಲಸಗಳನ್ನು ತೀರಿಸಿಕೊಂಡು ಹಿಂದಿರುಗಿ ಅವರ ಸ್ಥಾನಕ್ಕೆ ಬಂದು ವಿಸರ್ಜನೆಮಾಡಿದರು. ಮಧ್ಯ ಬಾಜಾರದಲ್ಲಿ ಹುಲಿಗಳ ಶಿಕಾರಿ ವಗ್ಯೆರೆ ತಮಾಸೆಗಳು ನಡದವು. ಉತ್ಸಹಕ್ಕೆ ಹಿಂದೂ ಮುಸಲ್ಮಾನ ಇತರ ಜನರೂ ಕೂಡಿ ೨೦೦೦ ಮಂದಿ ಕೂಡಿದ್ದರು. ಇಲ್ಲಿ ಮೊಹರಮು ಹಬ್ಬಕ್ಕೆ ದಂಗೆ ಆದೀತಾಗಿ ಕಾರವಾರದಿಂದ ಸ್ಪೆಶಲ್ ೧೦ ಮಂದಿ ಹತ್ಯಾರಬಂದ ಪೋಲೀಸ ಸಿಪಾಯರಿಗೆ ಕಳಿಸಿದ್ದಾರಂತೆ

ಸಿದ್ಧಾಪೂರ— ಇಲ್ಲಿ ಮಳೆ ಕಡಿಮೆ ಆದ ಹವಾಮಾನ ನೆಟ್ಟಗಿದೆ ರೋಗರಾಯಿ ವಿಶೇಷವಿಲ್ಲ ಅಡಿಕೆ ತೋಟಗಳಿಗೆ ಕೆಲವುಕಡೆ ಕೊಳೆಉಪದ್ರ ಬಹಳವಾಗಿದ್ದಾಗಿ ತಿಳಿಯುತ್ತದೆ ಇಲ್ಲಿಯ ಕೊಂಗ್ರೆಸಕಮೀಟಿಯ ಆಫೀಸಿನಲ್ಲಿ ಕಳೆದ ಬುಧವಾರ ಜನರಲ್ ಸಭೆ ಶ್ರೀ ನಿಗಳೀಯವರ ಅಧ್ಯಕ್ಷತೆಕೆಳಗೆ ಕೂಡಿತ್ತು. ದೇ| ಮೌಲಾನಾ ಹಬಿಬುಲ್ಲಾಖಾನ ಇವರಿಗೆ ಹೊನ್ನಾವರದಲ್ಲಿ ಮುಖಬಂದಿ ಕಲಂ ಲಾಗುಮಾಡಿದ್ದರಿಂದ ಉಜ್ವಲ ದೇಶಭಕ್ತರಿಗೆ ಈ ಪ್ರಕಾರ ತಮ್ಮ ಅಮಲ ಬಜಾಯಿಸಿದ್ದು, ಈ ಸಭೆಗೆ ಅತಿಶಯ ವ್ಯಸನವಾಗಿದೆ. ನಂತರ ಪರದೇಶಿ ಬಟ್ಟೆಗಳಿಗೆ ಈ ತಿಂಗಳೊಳಗಾಗಿ ಪೂರ್ಣ ಬಹಿಷ್ಕಾರ ಹಾಕಬೇಕೆಂದು ಭಾಷಣಗಳಾಗಿ ಸಭೆ ವಿಸರ್ಜನೆ ಆಯಿತು. ನಿನ್ನೆ ಶುಕ್ರವಾರ ಶ್ರೀ| ವೆಂಕಟ್ರಮಣ ದೇವಸ್ಥಾನದವಾಳಿಗೆಯಮೇಲೆ ಇಲ್ಲಿಯ ಹೆಂಗಸರ ಜಾಹೀರಸಭೆಯು ಸೌ| ಬಾ| ಸರಸ್ವತಿಬಾಯಿ ಗುಜ್ಜಾಡಿಕರ ಇವರ ಅಧ್ಯಕ್ಷತೆಕೆಳಗೆ ನೆರೆದಿತ್ತು ಸಭೆಗೆ ಅಜಮಾಸ ೧೫೦ ಜನ ಸ್ತ್ರೀಯರು ನೆರೆದಿದ್ದರು. ಸೌ| ಭಾ| ಮಹಾದೇವಿಬಾಯಿ ಹುಲೇಕಲ್ಲ ವ ಶ್ರೀಮತಿ ಶಿವಬಾಯಿ ದೇಶಸೈ ವಗ್ಯೆರೆ ಸ್ತ್ರೀಯರು ಪರದೇಶೀವಸ್ತ್ರದ ಬಹಿಷ್ಕಾರ, ದೇಶಿ ಪುರಸ್ಕಾರಬಗ್ಗೆ ಉಪದೇಶಪರ ಭಾಷಣಗಳಾದವು. ಮತ್ತು ಸ್ವಾಗತಕಮೀಟಿಯ ವಿನಂತಿ ಪ್ರಕಾರ ವೇದಮೂರ್ತಿ ಪುತ್ತಭಟ (ಹರಿದಾಸರು) ಸಧ್ಯದ ಸ್ಥಿತಿಯಲ್ಲಿ ಸ್ತ್ರೀಯರ ಕರ್ತವ್ಯದಬಗ್ಗೆ ಭಾಷಣ ಮಾಡಿ ಪ್ರತಿಯೊಬ್ಬ ಸ್ತ್ರೀಯರು ಕೈರಾಟಿಯಿಂದ ನೂಲುತೆಗೆಯುವಬಗ್ಗೆ ಉಪದೇಶಮಾಡಿದರು. ನಂತರ ಈ ಕೆಳಗಿನ ಠರಾವು ಸರ್ವಾನುಮತದಿಂದ ಪಾಸಾಯಿತು ವ ಸಭೆಯಲ್ಲಿ ಎಷ್ಟೋ ಜನ ಸ್ತ್ರೀಯರು ಕೊಂಗ್ರೆಸ ಮೆಂಬರರಾದರು. ಮತ್ತು ಆ ಬಗ್ಗೆ ೧೨ ಜನ ಸ್ತ್ರೀಯರ ಸ್ವಯಂಸೇವಕರ ಮಂಡಲವು ಸ್ಥಾಪಿಸಲ್ಪಟ್ಟಿತು

ಠರಾವು.

ಇವತ್ತಿನಿಂದ ಪರದೇಶಿ ವಸ್ತ್ರ, ಪರದೇಶಿ ಬಳೆ ಪರದೇಶ ಸಕ್ಕರೆ, ಇವುಗಳನ್ನು ಪೂರ್ಣವಾಗಿ ಬಹಿಷ್ಕಾರಮಾಡಬೇಕಾಗಿ ಠರಾಯಿಸಿತು. ನಂತರ ಸಭೆ ವಿಸರ್ಜನೆಯಾಯಿತು

ಇಲ್ಲಿಯ ಪಿಕೆಟಿಂಗಮಾಡುವ ಸ್ವಯಂಸೇವಕರು ಈ ಕೆಲಸದ ವ್ಯವಸ್ಥೆ ಕಡಿಮೆಮಾಡಿದ್ದರಿಂದ, ಹೆಂಡಕುಡುಕರಿಗೆ ಮತ್ತಿಷ್ಟು ಅಸ್ಪದವಾಗಿದೆ ಇದು ಸ್ವಯಂಸೇವಕರ ಆರಂಭಶೂರತ್ವದ ಫಲವು

ಈ ತಾಲೂಕಪೈಕಿ ವಗೋಡ ಎಂಬಲ್ಲಿ ಶರಾಬ ಗುತ್ತೆದಾರ ಅನಂತ ನಾರಾಯಣ ಜಾತಿ ನಾಮದೇವ (ಶಿಂಪಿ) ಇವರು ಮಾಡಿರುತ್ತಾರೆ ಇವರು ಸುಶಿಕ್ಷಿತರಿದ್ದು ಪುಢಾರಿಗಳಿದ್ದು ಮತ್ತು ಜನಿವಾರ ಹಾಕಿಕೊಂಡ ಮೇಲಜಾತಿಯವರಾಗಿದ್ದು ಶರಾಬಿಯ ಸಂಪರ್ಕ ಮಾಡುವದು ಎಷ್ಟು ಹೀನವಾದದ್ದೆಂದು ಬೇರೆ ಹೇಳುವ ಕಾರಣವಿಲ್ಲ ಇದರ ವಿಚಾರವು ಸದರ ಮತದ ಮುಖಂಡರು ಜಾತಿ ಅಭಿಮಾನದಮೇಲಿಂದಾದರೂ ವಿಚಾರಿಸುವದು ಯೋಗ್ಯವಾಗಿರುತ್ತದೆ.

ಹಳಿಯಾಳ— ವಿಷಮಜ್ವರವು ಚಾಲು ಆಗಿದೆ ಮಳೆಯು ಮಂದ ಉಂಟು ಬೆಳೆಗೆ ಕಳೆಹುಲ್ಲು ಬಹಳೇಯಾಗಿ ಮಜೂರಿಯ ಮಾನವು ತುಟ್ಟಿಯಾಗಿದೆ ಗೋಗ್ರಾಸ ಭಿಕ್ಷಾಮಂಡಳದ ಜಮಾಬಿರ್ಚ — ಗುದಸ್ತ ಸಾಲ್ಕು ರೂಪಾಯಿ ೮೯೪-೧೦-೧೧|| ಈ ವರ್ಷದ ಜಮಾ ೩೫೪-೩-೧೧|| ಕೂಡಾ ೧೨೪೮-೧೪-೧೧ ಆಗಿದೆ ಇದರಲ್ಲಿ ಈ ವರ್ಷದ ಖರ್ಚ ೨೫೧ ೪-೬, ಕೋಆಪರೇಟಿವ್ಹ ಸೊಸೈಟಿಯಲ್ಲಿ ೯೦೦, ರೂ. ೩೩-೦-೦ ಬಾಕಿ ಕುಳವಾರ ಮತ್ತು ೬೪-೧೦-೫ ಶಿಲ್ಕು ಕೂಡಿ ೧೨೪೮-೧೪-೧೧ ಆಗಿದೆ ಇದರ ತಪಶೀಲು ಕಾರ್ಯದರ್ಶಿಗಳ ಕಡಿಗೆ ಉಂಟು. ಆಕಳು ೨೦, ಕರುಗಳು ೧೮ ಕೂಡಾ ೩೮ ದಾಗಿನೆ ಸಿಲಕು ಅವೆ. ಆದರೆ ಸ್ಥಳದ ಅಡಚಣೆಯಾಗಿದೆ. ಅವರ ಕಡೆಗೆ ಧನಾಢ್ಯರು ಲಕ್ಷ್ಯ ಪೂರೈಸುವದಿಲ್ಲ ಸ್ವಯಂಸೇವಕ ಕಾರ್ಯದರ್ಶಿಗಳ ಕೆಲಸ ಚಲೋ ನಡೆದದೆ

ಸಾರ್ವಜನಿಕ ಗಣೇಶ ಉತ್ಸವವು ನಡೆದದ ಭಜನೆ ಮೇಳ ವಗೈರೆಗಳು ಇದ್ದು ಹಾ|| ಷ. ಪಾ| ಡಿಗ್ರಜಕರ ವರ ಭಕ್ತಿರಸದ ವಿವೇಚನೆಯುಳ್ಳ ಬೆಳಗಾಂವಿಯ ದೇ|| ಭ|| ಮುಜಲಿ ವಕೀಲ ಕರಗುಪ್ಪಿಯವರ ವ್ಯಾಖ್ಯಾನಗಳು ಕನ್ನಡ ಮತ್ತು ಮರಾಟಿಯಲ್ಲಾದವು. ಅವರ ಸ್ವರದ ಪರಿಸ್ಥಿತಿ ಮತ್ತು ನಮ್ಮ ಕರ್ತವ್ಯ ಇದರಮೇಲೆ ಆವೇಶಪೂರ್ಣ ಬೋಧವಮಾಡಿದರು. ಪರದೇಶಿ ಬಟ್ಟೆಗಳ ಬಹಿಷ್ಕಾರ ಕೋಲೆ ಮಾಡಲ್ಪಟ್ಟಿತು. ವಂದೇ ಮಾತರಂದ ಗರ್ಜನೆಯಲ್ಲಿ ವ್ಯಾಖ್ಯಾನ ಸಮಾಪ್ತ. ಸ್ವದೇಶಿ ಮಾಲು ವ ಶ್ರೀ ವ್ಯಸನ ತ್ಯಾಗದ ಉಪದೇಶವು ತಕ್ಕಷ್ಟು ಆಗಿ ಅದೆ. ಮುಂಬಯಿಯಿಂದ ಸಾವರಕರರಿಗೆ ಬರಲಿಕ್ಕೆ ಆಮಂತ್ರಣ ಕೊಡಲ್ಪಟ್ಟಿದೆ.

ಕಾ| ಎ| ನೊಸಾಯಟಿಯ ಕಾರ್ಯದರ್ಶಿ

ಈ ಕಾರ್ಯದರ್ಶಿಗಳು ಕಳೆದ ತಾ|| ೧೫ ನೇ ಕಾನಡಾ ಧುರೀಣದಲ್ಲಿ ಒಂದು ಮರಾಟಿ ಪತ್ರವ್ಯವಹಾರವನ್ನು ಕೊಟ್ಟು, "ರಾಜಾ ಕಲಂ" ಎಂಬ ಇಂಗ್ರಜಿ ಶಿರಾಪಲ್ಲಿ, ಮರಾಟಿಯದ ಪ್ರಸಿದ್ಧಿಸುವದು ಕಠಿಣವೆಂದು ಹೇಳಿ, ಅದನ್ನು ಕಾನಡಾವೃತ್ತಕಾರರು ತಿರಸ್ಕರಿಸಿದರೆಂದು ಉಸರಿಸಿರುವರು. ಪ್ರಥಮತಃ ಅವರು ನಮ್ಮಲ್ಲಿ ಬರಾಗ ಮರಾಟಿಯಲ್ಲಿನ ತುತೇ ಪ್ರಸಿದ್ಧಿಸುವ ನಮ್ಮ ಅಶಕ್ಯತೆಯನ್ನು ನಿವೇದಿಸಿದ್ದು ಅವರ ಪತ್ರ ಕನ್ನಡದಲ್ಲೇ ಭಾಷಾಂತರಿಸಿ ಕೊಟ್ಟರೆ ಪ್ರಸಿದ್ಧಿಸಬಹುದೆಂಬ ನಮ್ಮ ತಿಳಿಕೆಯು ಅವರು ಮಾನ್ಯಮಾಡಿ, ಹಾಗೆ ಭಾಷಾಂತರಿಸಿ ಮರುದಿನ ಸಂಜೆಗೆ ಕೊಡುತ್ತೇವೆಂದು ಹೋಗಿ ಭಾಷಾಂತರದ ವ್ಯವಸ್ಥೆ ಸಹ ಮಾಡಿಸಿ ಆಮೇಲೆ ಕನ್ನಡ ತಿಳಿಯದ ಈ ಕಾರ್ಯದರ್ಶಿಗಳಿಗೆ ಮರಾಟಿಯಲ್ಲೇ ಪ್ರಸಿದ್ಧಿಸುವ ಅಭಿಮಾನಪುರಃಸರ ಈ ವಿಚಾರವು ತಲೆದೋರಿರಬೇಕು. ಆದರೆ, ಇವರಂಥ ಸಭ್ಯರು ಸತ್ಯಹತೆಯನ್ನು ಬಿಡದೆ ವರ್ತಿಸಬೇಕೆಂದು ಸಿಪಿಸಯ ಸೂಚಿಸುವೆವು. ಸಂ|| ಕಾ|| ವೃತ್ತ

ಪತ್ರಸ್ವೀಕಾರ.

ಶ್ರೀ|| ಜ. ಪಿ. ಗಾಂವಸ್ಕರ— ನಿಮ್ಮ ಪತ್ರವು ಮೂಲ ತತ್ವಕ್ಕೆ ವಿರೋಧವಾದ ಸಿದ್ಧಾಂತದಮೇಲೆ ಅವಲಂಬಿಸಿರುವದರಿಂದ ಅದಕ್ಕೆ ಒತ್ತೆ ಕೊಡಲಾರೆವು. ಅದರಲ್ಲೊಳಗೊಂಡ ಒಂದೇ ಒಂದು ವಿಸಂಗತವಾಗಿದ್ದು, ಅನಾವಶ್ಯಕವೂ ಉಂಟು. ಸಂಪ್ರದಾಯ ಜನ್ಮದಿವಸ ಆಗಿತ್ತೆ ಎಂಬರ ಬದಲು, ೧ ನೇ ನೇಕೆ ಆಗಿತ್ತೆಂಬ ತಪ್ಪು ಒಪ್ಪುವೆವು. ವೆಂಕಟೇಶ ಕಪಿಲೇಟಿಯರ ಮಾತಲ್ಲಿಟ್ಟ ಅಭಿಪ್ರಾಯದ ಸಧಾರಣೆಯು ಮುಂದಿನ ಸಂಚಿಕೆಯಲ್ಲಿ ಬರದೇ ಒದಗುತ್ತದಾದ್ದರಿಂದ ಪುರವಣಿ ತೆಗೆಯುವದು ಯುಕ್ತವಿದ್ದಲ್ಲಿ ಪರೀಕ್ಷಣದಿಂದ ಮಾಡಿದ ನಮ್ಮ ಕರ್ತವ್ಯವು ಇತರ ಪಕ್ಷಗಳಿಗೆ ದೂಷಣಾಸ್ಪದವೆಂದು ಸಂಬೋಧಿಸ ಸದು ಸದ್ದೀಶ ವಿನಿಂದೇನಲ್ಲ. ಅದು ಶುದ್ಧ ಉಗಾದ್ಧ್ಯಾಸಿ ಮಾತ್ರ ಪೇಕ್ಷವು.

ರಾ| ರಾ| ಕಾಣೆ–ಸಬ್‌ಜಜ್ಜರವರ.

(೩ ನೆ ಪಾನಿನಮೇಲಿಂದ ಮುಂದರಿಸಿದ್ದು)

ಈ ಮುಖ್ಯ ತಕ್ರಾರುಗಳ ಈ ರೀತಿ ನಿರಾಧಾರವ ಕಾಲ್ಪನಿಕವೆಂತ ಮೇಲೆ ಕೊಟ್ಟ ಕಾರಣಗಳಿಂದ ತೋರಿಸಿದ ಮೇಲೆ ಬಾಕಿ ತಕ್ರಾರಗಳ ಇವುಗಳಂತೆ ಇರುತ್ತವೆಂತ ಬೇರೆ ಹೇಳುವದು ಗರಜಿಲ್ಲ.

ತಮ್ಮ ಕಡೆಗೆ ಬಂದ ತಕ್ರಾರಗಳಮೇಲಿಂದ ಮಿ|| ಕಾಣೆ ಇವರು ಮೈಗಳ್ಳರೂ ಕೆಲಸ ಮಾಡದೆ ಹಾಕಿ ವೇಳೆ ಕಳೆಯುವವರೂ ಎಂತ ನೀವು ತಿಳುಕೊಂಡಂತೆ ತೋರುತ್ತದೆ. ಆದರೆ, ನಿಜ ಸ್ಥಿತಿಯ ಇದಕ್ಕೆ ತೀರ ವಿರುದ್ಧವಿರುತ್ತದೆ. ... ಕಾಣೆಯವರ ಕರ್ತವ್ಯದಕ್ಷ ನ್ಯಾಯನಿಷ್ಠೀತ ರಿದ್ದು ತಾವು ಮಾಡಿದಂತ ಕೆಲಸ ಮಾಡುವದರಲ್ಲಿ ಇವರ ಅನುಭವವೂ ಪ್ರವೀಣತೆಯೂ ಕಂಡ ಬರುತ್ತದೆ. ವಾದಿ ಪ್ರತಿವಾದಿಗಳ ತಂಟೆಯ ಪರಿಸ್ಥಿತಿ ನವನ್ನು ವಿಶದವ ಹುಡುಕಿ ತೆಗೆದು ಅವರವರೊಳಿತಿಯ ಕಾಳಜಿ ತಕ್ಕೊಂಡು ನ್ಯಾಯವನ್ನು ಕೊಡುವ ಕೈಲಿಯ ಇವರಿಗೆ ಬಳಕೆ ಮಾಡಿದೆ. ಇವರ ಕೋರ್ಟು ೧೧–೩೦ ರಿಂದ ೫ ರ ವರೆಗೆ ಪ್ರಸಂಗವಿದ್ದರೆ ೬ ರ ತನಕ ನಡೆಯುತ್ತದೆ. ಇವರಷ್ಟು ಕೆಲಸ ಮಾಡುವವರು ಸಿಗುವದು ಬಹಳ ದುರ್ಲಭ. ಇದರಿಂದ ವಕೀಲರಿಗಾಗಿ ಈ ಕೋರ್ಟಿನಲ್ಲಿ ಕೆಲಸವು ಕಡಿಮೆ. ಈ ವರ್ಷ ಬೀಳುವಿಲ್ಲ. ಪಕ್ಷಗಾರರಿಗೆ ತಮ್ಮ ಕಡೆಯಿಂದ ಯೋಗ್ಯ ನ್ಯಾಯ ಸಿಗಬೇಕೆಂಬುವದೇ ಇವರ ತಮ್ಮ ಮುಖ್ಯ ಕರ್ತವ್ಯವೆಂತ ತಿಳಿಯುತಾರೆ. ಇವರು ನ್ಯಾಯ ಪಿಸುರೂ ಶಾಂತವೃತ್ತಿಯವರೂ ಇರುವದರಿಂದ ಇವರು ಇಲ್ಲಿ ಎಲ್ಲರಿಗೂ ಬೇಕಾಗಿದ್ದಾರೆ. ತಮ್ಮ ಬೆಟ್ಟದಲ್ಲಿ ಈ ಅಧಿಕಾರದ ಕಲ್ಪಸ್ಥಾನ ಗರ್ವವು ಇವರಲ್ಲಿ ಇಲ್ಲ. ಇದಲ್ಲದೇ ಇವರು ಪೆನ್‌ಶನಿಗೆ ಹತ್ತರ ಬಂದಿರುತ್ತಾರೆಂಬುದು ನಿಜವಲ್ಲ. ಪೆನಶನ್ನು ಪಡೆಯ ಬೇಕಾದರೆ ಇನ್ನೂ ೪–೫ ವರ್ಷ ಇವರ ಕೆಲಸ ಮಾಡಬೇಕು.

ನಿಜಸ್ಥಿತಿಯು ಹೀಗಿರುವದರಿಂದ ತಮ್ಮ ಕಡೆಗೆ ಬಂದ ತಕ್ರಾರಗಳಲ್ಲಿ ಏನೂ ತಥ್ಯಾಂಶವಿಲ್ಲೆಂತ ಇದರವೇಲಿಂದ ತಮ್ಮ ವಾಚಕರ ಖಾತ್ರಿಯಾಗಬಹುದು.

ಕಾರವಾರ ೧೬–೯–೨೧	ಒಬ್ಬ ನಿಷ್ಪಕ್ಷಪಾತಿ

ವಿವಿಧ ವರ್ತಮಾನ.

ಖಿಲಾಫತ ಸಂರಕ್ಷಣೆಕ್ಕಾಗಿ ಒಂದು ಕೌಂಟ ಕಡಿಂದ ಗ್ರೀಕರಹತ್ತರ ಹೋರಾಡುವ ಅಂಗೋರಾ ಸೈನ್ಯವು ಬತ್ತಿಂತಲೂ, ಗ್ರೀಕರು ಇನ್ನು ಸ್ವಲ್ಪದಿವಸಗಳಲ್ಲಿಯೇ ಕಾನ್ಸ್ಟಾಂಟಿನೋಪಲವನ್ನು ಸ್ವೈರ ಮಾಡಿಕೊಂಡು ತುರ್ಕಸ್ಥಾನವನ್ನು ಯುರೋಪಖಂಡದೊಳಗಿಂದ ಹೊರಗೆ ಹಾಕುವರೆಂದು ಕೆಲ ದಿನಗಳಿಂದ ಸುದ್ದಿ ಬರುತ್ತಿದೆ. ಆದರೆ ಈ ಸುದ್ದಿಯು ಈಗ ತೀರ ನಿರಾಧಾರವಿರುತ್ತದೆಂದು ತಿಳಿದುಬಂದಿದೆ. ಅಂಗೋರಾ ಪಟ್ಟಣದ ಈಶಾನ್ಯಕ್ಕೆ ಸುಮಾರು ೪೦ ಮೈಲು ದೂರ ಗ್ರೀಕರೂ ಅಂಗೋರಾ ಸರಕಾರದ ತುರ್ಕರೂ ಹೋರಾಡುತ್ತಿರುವರು. ಸಾಕಾರಿಯಾ ನದಿಯ ಪೂರ್ವಕ್ಕೆ ಗ್ರೀಕರ ಹಲ್ಲೆಯು ತತ್ರಸ್ಥವಾಗಿದೆ. ಗ್ರೀಕರು ತುರ್ಕೀ ಸೈನ್ಯದಿಂದ ಬರುವ ಕೌಂಟರದಿಂದ ಓಡಿಹೋಗುವ ಆಲೋಚನೆಯಲ್ಲಿದ್ದಾರಂತ ಹೇಳುತ್ತಿದ್ದರೆ, ಈ ನಿರಾಧಾರ ಸುದ್ದಿಯನ್ನು ಪಸರಿಸುವ ಕಾರಣವೇನು?

—ಮುಂಬಯಿಯ ಸೆಂಟ್ರಲ ಖಿಲಾಫತ ಆಪೀಸಿನಲ್ಲಿ ಕಳೆದವಾರದಲ್ಲಿ ಝಡತಿಯಾಗಿ ಪೋಲೀಸರು ಜಮ್ಮೈತುಲ–ಉಲೆಮಾ ಈ ಹಿಂದದ ಕಟ್ಟುವನ್ನು ಜಪ್ತಿಮಾಡಿ ಒಯ್ದರು. ಪೋಲೀಸರಸಂಗಡ ಇಬ್ಬ ಮಹಮ್ಮದೀ ಬಾಂಧವರು ಬಂದಿದ್ದರಂತೆ! ಈ ಬಗ್ಗೆ ಕಳೆದ ಶುಕ್ರವಾರ ಸಭೆಯಾಗಿ, ಸರಕಾರಿ, ಕೃತ್ಯಗಳ ನಿಷೇಧಮಾಡಲಾಯಿತು.

—ಕಲಕತ್ತೆಯಲ್ಲಿ ಮಹಾತ್ಮಾ ಗಾಂಧಿಯವರ ಆಗಮನಮಾದಂದಿನಿಂದ, ವಿದೇಶೀ ಅರಿವೆಗಳ ಬಹಿಷ್ಕಾರವು ಜೋರಿನಿಂದ ನಡೆದದೆ. ಜವಳೀ ಅಂಗಡೀಕಾರರು ಬಂದುವಾರದಲ್ಲಿ ಎಲ್ಲ ವಿದೇಶೀ ಅರಿವೆಯ ನಿಕಾಲೆ ಮಾಡದಿದ್ದರೆ, ಅವರ ಅಂಗಡಿಗಳಹತ್ತರ ಪಿಕೆಟಿಂಗ ನಡೆಯುವದೆಂದು ಸ್ವಯಂಸೇವಕರು ಅಂಗಡೀಕಾರರಿಗೆ ತಿಳಿಸಿರುವರು. ೩೦೦೦ ಉರಿಯಾ ಜಾತಿಯ ಆಳುಗಳು ಪರದೇಶೀ ಅರಿವೆಯನ್ನು ಹೊರಬಾರದೆಂದು ಕಟ್ಟುಮಾಡಿರುವರು. ಕಳೆದ ೯ ನೇ ತಾರೀಖಿಗಂತೂ ಬಹಿಷ್ಕಾರದ ಚಳವಳಿಯು ಶಿಖರಕ್ಕೆ ಮುಟ್ಟಿತು. ಆ ದಿವಸ ಇಡೀ ಕಲಕತ್ತಾ ಶಹರದಲ್ಲಿ ೫ ಸಾರ್ವಜನಿಕ ಸಭೆಗಳು ನೆರೆದವು. ಪ್ರತಿಯೊಂದು ಸಭೆಯಲ್ಲಿ ಮಹಾತ್ಮರು ತಮ್ಮ ಸ್ವಾಧಿವಾಣಿಯಿಂದ ಜನತೆಗೆ ಉತ್ಸಾಹವನ್ನಿತ್ತರ, ಜನಸ್ತೋಮವು ಲೆಕ್ಕವಿಲ್ಲದೆ ನೆರದಿತ್ತು. ಪವಿತ್ರ ಹೋಳಿಯು ಜರಗಿತ್ತೆಂದು ಹೇಳಬೇಕೇನು?

—ಉತ್ತರಹಿಂದುಸ್ಥಾನದಲ್ಲಿ ಗೋದಿಯ ಬರಗಾಲ ಬಿದ್ದದೆ ದರವು ಮಿತಿಮೀರಿ ಏರಿದೆ. ಮಿರತ ಪಟ್ಟಣದ ಹತ್ತರ ಇರುವ ಮಂಡಿ ಎಂಬಲ್ಲಿ ಒಬ್ಬ ಅಂಗಡಿಕಾರನು ಗೋದಿಯನ್ನು ಅಳೆದು ಕೊಡುವಾಗ, ಕಡಿಮೆ ಮಾಪ್ಪೆ ಕೊಟ್ಟನೆಂದು ಜನರು ಥಕ್ಕನೆ ಲೂಟಮಾಡಲಾರಂಭಿಸಿದರು. ಪೇಟೆಯಲ್ಲಿ ಮೇಜಿಸ್ಟ್ರೇಟರೂ ಪೋಲೀಸರೂ ಹಾಜರಿದ್ದರೂ ತಮ್ಮ ಕಣ್ಣೆದುರೆ ಅಂಗಡಿಗಳೊಳಗಿಂದ ಕಾಳ ಕಡಿಗಳನ್ನು ಲೂಟಮಾಡಿ ಹೋಗುವಾಗ, ಲೂಟಗಾರರಿಗೆ ತಡೆಯಲಿಕ್ಕೆ ಅಸಮರ್ಥರಾದರಂತೆ! ಈಗ ಸರಕಾರವು ಅಗ್ಗ ಕಾಳುಕಡಿ ಡಿಪೋಗಳನ್ನು ಸ್ಥಾಪಿಸಿ, ಜನರ ಹೊಟ್ಟೆಯ ಬೆಂಕಿಯನ್ನು ಸಮಾಧಾನ ಮಾಡತೊಡಗಿರುವದು. ಅಗ್ಗ ಅಂಗಡಿಗಳ ನಿರ್ವಾಹಕ್ಕೆ ಅವಶ್ಯವಿರುವ ಫಂಡು ಕೂಡಿಸಲಿಕ್ಕೆ ಕೊಂಗ್ರೆಸ್ಸು–ಖಿಲಾಫತ ಕಮಿಟಿಗಳ ಅಧಿಕಾರಿಗಳ ಸಹಕಾರಿತೆಯನ್ನು, ಸರಕಾರೀ ಅಧಿಕಾರಿಗಳು ಬೇಡಿರುವರು. ಪ್ರಜೆಗಳ ಸಹಕಾರಿತೆಯನ್ನು ರಾಜಕಾರಣದಲ್ಲಿ ತಿರಸ್ಕರಿಸುವ ಅಧಿಕಾರಿಗಳಿಗೆ ಫಂಡು ಕೂಡಿಸುವಾಗ ಮಾತ್ರ ಕೊಂಗ್ರೆಸ–ಖಿಲಾಫತು ಕಮಿಟಿಗಳ ನೆನಪಾಯಿತು.

ಮ. ಗಾಂಧಿಯವರ ಅಪ್ಪಣೆ. ವಿಲಾಯತಿ ವಸ್ತ್ರಗಳಿಗೆ ಬಹಿಷ್ಕಾರ.

ನಮ್ಮಲ್ಲಿ ನೂಲುತೆಗೆಯುವ ರಾಹಾಟೆ(ಚರಕ), ಶುದ್ಧ ಖಾದಿ. ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿಯವರ ಫೋಟೋಗಳು ಬೇರೆ ತರದ ಸ್ವದೇಶೀ ವಸ್ತ್ರಗಳು ಮನಃಪೂರ್ವಕ ದರದಿಂದ ಸಿಗುವದು.

ಕೈಯಿಂದ ನೂಲುತೆಗೆದು ತಯಾರಮಾಡಿದ ಬೇರೆಬೇರೆ ನಮೂನೆಯ ಖಾದಿಯು ಸಧ್ಯದಲ್ಲಿ ಬರುವದುಂಟು. ವ್ಯಾಪಾರಸ್ಥರಿಗೆ ಭರಪೂರ ಕಮಿಶನ ಕೊಡುವೆವು.

ಕುಡ್ಲ ವಾಸುದೇವ ಪಾಂಡುರಂಗ ಶ್ಯಾನಭಾಗ, ಮತ್ತು ಬ್ರದರ್ಸ.

ಹೊನ್ನಾವರ, ಜಿ|| ಕಾರವಾರ

ಸವಲತು.

ಬಗ್ಗೋಣ ದಾ|| ಮಾ|| ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕ್ರಯ ರೂ ೧೨–೮–೦ ಇಟ್ಟಿದೆ. ಆದರೆ, ಇದೇ ಸಪ್ಟಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧–೦–೦ ರ ಮತ್ತು ಇದೇ ಬರುವ ಅಕ್ಟೋಬರ ತಾ|| ೧೫ ರೊಳಗೆ ಮುಂಗಡ ಕೊಡುವವರಿಗೆ ೧೧–೮–೦ ರ ಸವಲತಿ ದರ ಇಟ್ಟಿದೆ. ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು.

ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ

A CORRECTING REPLY.

To,

The Editor, 'Kanara News'

Sir,

We are not a little surprised at the criticism that has appeared in your issue of Sept 1st regarding the F. C Sub Judge's Court here Though we do not hold a brief for Mr Kane, it would be rather unbecoming that the said unfair and uncharitable criticism should be allowed to remain unanswered, when we people in the local station, personally know some of the facts to be actually reverse of what they have been represented to you to be The correspondents who sent you the said complaints may be some persons who were dissatisfied with the orders or decisions of Mr Kane in their own cases Mr Kane can never claim, as no Judge can, to have always satisfied both the parties in the cases before him He, like any other Sub Judge, may have his own individual characteristics and he may also have some of his own methods that he follows, to arrive at a decision in the cases or disputes before him But here, one need concern one's self only to see whether he does not conscientiously endeavour to deal out justice to the parties as best as he can, and whether there is anything done detrimental to the interests of the parties or calculated to cause inconvenience to the parties as complained of by the correspondents, who have written to you In reply to these questions, none can dispute the fact that there is only one answer that Mr. Kane without being too hard or too lenient, conscientiously and dutifully tries in his own way to do justice to the parties before him, and that also as speedily as possible as he is specially anxious to cause the least inconvenience to the parties or witnesses.

In the criticism in your paper, there are mainly two allegations — firstly, that there is a good deal of chaos and disorder caused by the parties being in one place, the pleaders in another, and the court in a third, while the cases are being heard, and secondly, that adjournments are frequently granted without discretion, resulting in untold and serious inconvenience to the parties concerned. Both these allegations, we must say, are baseless and unfounded. It is absolutely misrepresenting the facts to suggest that the cases are usually heard without the pleaders being present In fairness to Mr Kane, it must be unreservedly stated here that he is always reluctant to proceed with a case in the absence of the parties or the pleaders concerned and whenever the pleaders are unavoidably absent at the hearing of their cases, being engaged elsewhere, Mr Kane at the request of the parties takes up other cases, and in his goodness is always prepared to wait for the arrival of the pleaders, so far as that could be done without disturbing the work of the day Regarding the question of adjournments, we can emphatically and unhesitatingly say that Mr Kane's procedure in regard to this, has been most reasonable and almost unexceptionable We can assert without the fear of contradiction that in his court the adjournments are never too frequently granted, that they are granted mostly when prayed for by both the parties, and when they are definitely necessary for the ends of justice In face of these facts, the criticism in your paper which mainly turns on these points will be seen to be absolutely unfair and unwarranted and hence we hope you will publish this letter to do justice to Mr Kane and also to the reputation of your paper which has been that of a paper uncompromisingly fair and just in its criticisms

yours truly,

KARWAR 7th Sept /21

A N Kabad
V R Haldipur
Pleaders

ಶಿಗ್ಗಾವಿ— ಇಲ್ಲಿಯ ಸಾರ್ವಜನಿಕ ಶ್ರೀ ಗಜಾನನೋತ್ಸವವು ಬಹು ಸಂಭ್ರಮದಿಂದ ನೆರವೇರಿ ಚತುರ್ಥಿಯಿಂದ ಅಷ್ಟಮಿ ವರೆಗೆ ವೇ ಮೂ ಕೃಷ್ಣಜೋಶಿ ಇವರ ಸದ್ವ್ಯಕ್ತಿಗನುಸರಿಸಿ ಪುರಾಣ ವ ವ್ಯಾಖ್ಯಾನ ವ ಶಿಷ್ಟ ಜನವೀರಕ್ಷನ ವ ಶ್ರೀ ತ್ರಿಮಲರಾವ ದೇಶಪಾಂಡೆ ವ ನೀಲಕಂಠರಾವ ಹಳಿಪೇಟೆ ಇವರ ವ್ಯಾಖ್ಯಾನಗಳಾಗಿ ಶ್ರೀ ಗಜಾನನ ವಿಸರ್ಜನೆಯಾಯಿತು

Notice to Investors

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD, SILVER etc Usual commission is charged *Please apply to Messrs*

Gunshekhar & Co.
IRANI BUILDINGS,
Tardeo Road,
BOMBAY. 7.
Telegrams– Vaijayanti

ಸ್ವದೇಶಿ ಕಾರಖಾನೆಗೆ ಉತ್ತೇಜನ
ವಿದೇಶಿ ಮಾಲಿಗೆ ಬಹಿಷ್ಕಾರ

ದಿ, ಸ್ವದೇಶಿ ಇಂಕ ಸ್ಟೋರ್ಸ
ಕರ್ಕ್ಕಿಕೆನರಾ

ಭಾರತೀಯ ಶಾಯಿ ಗುಳಿಗೆಗಳು

ವ್ಯಾಪಾರಸ್ಥರಿಂದಲೂ, ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದದ್ದು

ನಂ ೧ ಉತ್ತಮ ನೀಲಿಕಪ್ಪು ೧೪೪ ಗುಳಿಗೆ ಗ್ರೋಸ ೧ ಕ್ಕೆ ರೂ ೧–೪–೦. ೬ ಗ್ರೋಸಿಗೆ ರೂ ೫–೮–೦. ೧೨ ಗ್ರೋಸಿಗೆ ರೂ ೧೦ ೦–೦ ನಂ ೨ ಗ್ರೋಸ ೧ ಕ್ಕೆ ೦ ೧೫–೦ ೬ ಗ್ರೋಸಿಗೆ ರೂ ೫–೦–೦ ೧೨ ಗ್ರೋಸಿಗೆ ರೂ ೮ ೦–೦ ಕೆಂಪು, ಹಸರ ಗ್ರೋಸ ೧ ಕ್ಕೆ ರೂ ೧ ೦–೦ ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನು ೧ ಗ್ರೋಸಕ್ಕಿಂತ ಕಡಿಮೆ ಕಳಿಸುವದಿಲ್ಲ ಇಲ್ಲಿ ವೇಣಿ ಸಾಬೂನು ತಯಾರಾಗುವದು.

ಕಾನಡಾ ಜಿಲ್ಲೆಯೊಳಗಿನ ಪ್ರಯಾಣಸ್ಥರ
ಸಲುವಾಗಿ
ಹೊಸ ಸುಧಾರಣೆ,
ಅಂದರೆ—
ಗ್ಯಾತೋಂಡೇ ಬ್ರದರ್ಸ, ಕಾರವಾರ
ಇವರ ಮೋಟರ ಸರ್ವಿಸ್.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕುಶ್ಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕುಶ್ಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಪರಿಹಾರಿಕೆಯಾಗಿ ತಾ ೧೦-೮-೧೯೦೮ನೇ ಇಸ್ವಿಯಿಂದ ತಾ॥ ೧೯ ೧೯೦೮ ನೇ ಇಸ್ವಿಯ ವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೦೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲುಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಬತ್ತು ಸಾವಿರ ಬಾಟ್ಲಿಗಳ ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟುಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡತಕ್ಕದ್ದು. ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕುಶ್ಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ, ಇನಾಮು ಸರಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯಲಿಕ್ಕೆ ಜಾಗದವೆ ಸಾಲದು ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಮುಲಾಕ್ಷ ಮಾಡದೆ ಕೆಳಗೆ ಬರದ ರೋಗಗಳ ಮೇಲೆ ಉಪಯೋಗವಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು

ಕ್ಷಯರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ, ಮೂಲರೋಗ, ಮಹಾಮಾರಿ (ಕಾಲರಾ), ಪ್ಲೇಗ, ಚಳಿಜ್ವರ ವಿಷಮ ಜ್ವರ, ಇನ್‌ಫ್ಲುಯೆಂಜಾಜ್ವರ ಅಸೋಯಿಪ್ರಕಾರದಜ್ವರ, ಗಂಡಮಾಲೆ ಪಿತ್ತಶೂಲೆ, ಮೂಗಿನೊಳಗಿನ ಪಿತ್ತ ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೆಳೆಯೋದು, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ ಅಜೀರ್ಣ, ಇದ್ದಲಿಸಿ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಅರತಲೆಶೂಲಿ, ನಡಶೂಲಿ, ವಾತಶೂಲಿ, ರೇಚಜಡ್ಡು, ಗರ್ಭಸ್ತನಮೇನೆ, ಹುರುಕು ಕಜ್ಜಿ ಗಜಕರ್ಣ, ಬಸಬು ತದ್ದು, ಹೊಸ ವ್ರಣ, ನಾರಹುಣ್ಣು, ಸ್ತ್ರೀಯರ ಮುಟ್ಟಿನ ಶೂಲಿ ಕಡದನಂಬು, ಸಣ್ಣ ಕೂಸುಗಳ ಬಾಲಗ್ರಹ, ಅರವಿ ಮುಟ್ಟದೋಷ, ಹೊಟ್ಟೆ ದೊಡ್ಡದಾಗೋದು, ಮೈ ತೊರಬೀಳೋದು ಸಣ್ಣ ಕೂಸುಗಳಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ. ಅಮೌಲ್ಯ ಕಂಡು ಒಂದಲ್ಲಿ ಬಡವರಿಗೂ ದನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ ಒಂದು ಕಾಲುತೊಲೆ ಬಾಟ್ಲ ಒಂದಕ್ಕೆ ಎರಡುರೂಪಾಯಿ ಸವಾ ನೆ ಉದ್ದಕ್ಕೆ ಐದು ಆಣೆ ಕಾಕದ ಬಾಟ್ಲ ಒಂದಕ್ಕೆ ಎಂಟು ಆಣೆ. ವಿ ಪಿ ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇದಕ್ಕೆ ಬುಕಿಸ್ಟ ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದವು ಬಾಟ್ಲಿಯರಿಗೆ ಕಮಿಶನ್ ಇಲ್ಲ ಇದಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ ಮೂರು ತಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಷ್ಟ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ ಅನುಮಾನಪತ್ರಿಕೆಯು ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿನ ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ಆಫೀಸ ಸ್ಪಷ್ಟವಾಗಿ ಬರೆಯುತ್ತಿರಬೇಕು.

ಎಚ್. ಎ. ಗೋಂದ್ಳಿ, ಸಂಪಾದಕ ಅರ್ಕುಶ್ಶಫಾ, ಹೆಡ್ ಆಫೀಸು ಮಹಾದ್ವಾರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮದನಮಂದಿರ ಕಾಮೇಶ್ವರಿ ಲೇಹ — ಬಹಳ ಶ್ರಮಪಟ್ಟು ಕಂಡ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು ಮಲಬದ್ಧತೆ, ರೋಗಗಳ ಫಲದಿಂದ ಅಶಕ್ತಿ ಹೊಂದಿದ ಪ್ರಕೃತಿಯವರೂ ಇದನ್ನು ಸೇವಿಸಿದ್ದಲ್ಲಿ ರಕ್ತಪುಷ್ಟಿ, ದೇಹಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಹೊಳೆಯುವದು 40 ಕಲ ಸೇವಿಸುವ ಲೇಹ ಡಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-12-0

2. ಮಹಾಜ್ವರಾಂಕುಶ — (ಸತ್ತ್ವ ಗುಣ) - ಇನ್‌ಫ್ಲುಯೆಂಜಾ, ನಿಮೋನಿಯಾ, ದಿನಕ್ಕೊಮ್ಮೆ ದ್ವಿತೀಯ ತೃತೀಯ., ಶೀತ ದೀರ್ಘ ಜ್ವರಗಳ ನಿವಾರಣ ರಾಮಬಾಣ. ಬಾಟ್ಲಿ 1 ಕ್ಕೆ 0-8-0

3. ಬಾಲಗ್ರಹ ಗುಳಿಗೆ — ಕೂಸು ಎಲ್ಲಕ್ಕೆ ಅಪಸ್ಮಾರಕ್ಕೆ ರಾಮಬಾಣ ಬಾಟ್ಲಿ 1ಕ್ಕೆ 0 10 0

4. ಮಂಗಳಾ ಕಸ್ತೂರಿ ಗುಳಿಗೆ ಇದು ಮಾಸಕ್ಕೆ ಸಿದ್ಧ ಔಷಧಿ. ಒಂದೇ ಗುಳಿಗೆಯಿಂದ ಅಪ, ಗುಬ್ಬಿಗೆ ಕೆಮ್ಮು ಇವು ಗುಣ ಬಾಟ್ಲಿ 1 ಕ್ಕೆ 0 10-0

5 ಇಚ್ಛಾಬೇದಿ - ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1ಕ್ಕೆ 0 12 0

ಎಮ್. ಗಣಪಯ್ಯಾ ಎಂಡ ಸನ್ಸ್

ನೇಟಿವ್ ಡಾಕ್ಟರ್ಸ್ ರಥಬೀದಿ.

ಮಂಗಳೂರ ದ. ಕ.

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡೆಸುವ ವ್ಯವಸ್ಥೆ ಇಟ್ಟಿದೆ ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಆರಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡೆಸುವೆವು.

ಟಿಕೀಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಿಲ್ಡಿಂಗ್ಗಳಲ್ಲಿ ಸಿಗುವವು.

ಎಸ್. ಎಲ್. ಧಾಕಪ್ಪಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಬರೆದು ತಿಳಕೊಳ್ಳಬಹುದು

ಪುರುಷೋತ್ತಮ ಲಕ್ಷ್ಮಣಯ್ಯ ಶ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हें औषध दुर्गम अशा पहाडांतील अनेक वनस्पतींच्या रसांत पौष्टिक औषधीफळांचा रसार्क मिश्र करून, खाली दिलेल्या रोगावरं उपयुक्त अशीं भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे. हा बिंदु सेवन केल्यानें नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहीसा करून, वीर्य वृद्धि व रक्तशुद्धि होते. कितीहि जुनाट कडकी असो (एक सप्तकांतच) नाश पावत आणि उपदंशा संबंधी मुरलेले विकार नाहींसे होऊन हातपाय, डोळे यांचा दाह व धातुविघातक सर्व विकार नष्ट होऊन, शरीर वज्राप्रमाणें बनते. हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोगांचा समूळ नाश होतो. हे औषध स्त्रियांनीं सेवन केल्यास, त्यांचे जननेंद्रियाचे कोणत्याहि प्रकारचे विकार न राहता त्या गर्भधारणास योग्य होतात. ह्याच्या सेवनाने दिवसांतून तीन वेळां जेवले तरी, भूक चांगली लागत जाऊन शौचास साफ होते याचा अनुभव औषध घेतल्याच्या पहिल्या दिवशीं येतो. तरी वरील रोगग्रस्त तरुण आणि वृद्ध, स्त्रिया व पुरुष यांनीं या वज्रांग बिंदूचें सेवन करून, यांतील खरी मजा पहावी. फार दिवसांचा रोग असल्यास, पूर्ण गुणास तीन बाटल्या औषध घेतले पाहिजे. नवीन रोगास एक बाटली औषध सेवन केलें असतां, गुण येईल. एका बाटलींमध्ये १० तोळे औषध असते. त्या एका बाटलीची किंमत १। रुपया. तीन बाटल्याची किंमत ३। रुपये एक डझन (१२) बाटल्याची किंमत १० रुपये. याशिवाय टपाल, व प्याकिंगखर्च निराळा पडेल

म्यानेजर,

के, एम, हनुमान प्रासादिक कंपनी.

जिल्हा बेळगांव. मु. पो. निपाणी.

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

ರೂ ೨-೧೪ರ ಮನಿಯಾರ್ಡರ ಮಾತ್ರ ಅಂದರೆ, ೧ ವರ್ಷದತನಕ ನಿಮ್ಮಲ್ಲಿಗೆ ಬರುವದು.

ಪತ್ತೆ— ಕಾನಡಾವೃತ್ತ ಆಫೀಸ, ಕುಮಟಾ

Printed and published by Krishnarao Keshav Shenvi at his Star of Kanara Press, Kumta

Reg No B. 1270.

ವರ್ಷ ೫.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪೮.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು ರೂಪಾಯಿ 2-0-0.

ಮನೆಯಾರ್ತೆರಿಯಿಂದ ರೂ. 2-13-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 2-15-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ.-

ಕನ್ನಡ, ಇಂಗ್ಲಿಷ ವ್ಯಾಕಾಪ್ಸಿನ(೧೫ ಎಮ್‌ಉದ್ದ) ೫ ಸಾಲುಗಳ ವರೆಗೆ ರೂ. 1 0 0 ಆನಂತ್ರ ಪ್ರತಿ ಸಾಲಿಗೆ 0-2-0.

ಚಿತ್ರಂಗದ ಸಾಲು ಎಷ್ಟು ದೊಡ್ಡದಿರುವವೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರವಾರ, ತಾರೀಖು ೨೨ ನೂಹ್ ಸಪ್ಟಂಬರ ಸನ್ ೧೯೨೧ ನೇ ಇಸವಿ.]—

ಖರೇ ವ್ಹಾಲು! ಹುಜಾ ಕಲ್ಮು!! ತ್ವರ ಗ್ಯಯಿ!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಡತನವನ್ನೂ ರೋಗ ... ಹೊರಡಿಸಿ, ಆರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನೂ ತೋರಿಸುವ ಪ್ರೀತಿ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಪ್ರಸನ್ನತೆಯನ್ನೂ ಯೌವನದ ಕಳೆಯನ್ನೂ ತೋರಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ಷಂಡತ್ವವನ್ನು ನಿರಾಕರಿಸಿ, ಒಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ ಮುಂದಾಗಿ, ಶುಕ್ಲಸ್ರಾವ, ಪ್ರಮೇಹ ಮೊದಲಾದ ಉಪದ್ರವಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ಬಹುಕಾಲಗಳಿಂದಲೂ, ಅತ್ಯಾಚಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡೆಯುವ ಬಲಾತ್ಕಾರದ ಹಸ್ತಸ್ಪರ್ಶದಿಂದಲೂ, ಅತಿ ವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತಿಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ; ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು ಹುಟ್ಟಿಸುವವು, ನಿದ್ರೆಯಲ್ಲಿ ಬೀಕರವಾದ ಸ್ವಪ್ನ, ಆಲಸ್ಯ, ಮರುವು ಮತ್ತು ಶರೀರದ ಹಾಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧||. ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩. ಪೋಸ್ಟೇಜ ಬೇರೆ.

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,

ಶಿರ್ಸಿ (ಕೆನರಾ.)

ಹೊಸ ಶೋಧ! "೬೦" ಹೊಸ ಶೋಧ!!

ಗುಣ ಬಾರದಿದ್ದರೆ, ಹಣವಾಪಸು.

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ.)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರಕವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಆಶ್ರಯದಿಂದ ಮಿಶ್ರಮಾಡಿ ಅನುಭವಿಕ ದೇಶೀವೈದ್ಯರ ಯೋಜನೆಯ ಮೇರೆಗೆ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಜೊತೆಯಲ್ಲಿ ಅಥವಾ ಅದರಮೇಲೆ ಧಾತು ಬೀಳುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ರಕ್ತ ಶುದ್ಧಿಯಾಗಿ, ವೀರ್ಯ ವೃದ್ಧಿಯಾಗುವದು, ಬಹುದಿವಸದಿಂದ ಮನೆಮಾಡಿದ್ದ ದೇಹ ಉಷ್ಣ ಸಂಬಂಧಿಯ ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿರುವ್ಯಾಗಿ ಹೊಟ್ಟೆ ಹಸಿಯುವದು. ಉಷ್ಣದಿಂದ ದೂಷಿತವಾದ ಶರೀರಕ್ಕೆ ಯಾವ್ಯಾವ ಅಪ್ರತಿಮ ಗುಣವುಂಟಾಗಬೇಕೋ ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ, ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ, ಒಂದು ಡಬ್ಬಿ ಪಾಕದಿಂದಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ, ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧೪ ತೊಲೆಯ ಡಬ್ಬಿಗೆ ರು. ೧ ಆಣೆ೨. ೩ ಡಬ್ಬಿಗಳಿಗೆ ೪ ರು ೮ ಆಣೆ. ೧೨ ಡಬ್ಬಿಗಳಿಗೆ ೧೫ ರು. ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು.

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು.

ಪತ್ತೆ— ವ್ಹಿ. ಆರ್. ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ

ಅಗ್ಗ] [ಅಗ್ಗ

ಮಳಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಹೆಂಗಸರ ಗರ್ಭಕೋಶದ ವಿಕಾರ, ಪಡಸೂ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟ ಔಷಧಗಳೂ, ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳಿ ಖಾದಿ ಟೊಪ್ಪಿಗೆಗಳೂ, ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು.

ಎಸ್. ಎಲ್. ಧಾಕಪ್ಪ ಮತ್ತು ಬಂಧು
ಶಿರ್ಸಿ.

ಕ್ಯಾಬಿನೆಟ್ ಸೈಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸೈಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ:— ೧ಕ್ಕೆ ೩ಪೈ, ಡಜನಕ್ಕೆ ೪ಆಣೆ, ಶೇಕಡಾ ೧-೧೦-೦ ಟಪಾಲ ಹಾಸಲ ಬೇರೆ. ಸಂಪಲಗಳು ಬೇಕಾದರೆ, ೨|| ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ,
ಕುಮಟಾ (ಎನ್. ಕೆನರಾ,)

ಭಡತೀ ಭ್ರಾತೃಸಂಘದ

ಅನುಭವಸಿದ್ಧ ಪಾಕ

ಜರದ ಗುಳಿಗೆಗಳು. ಕ್ರಯ — ೨೫ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಶಿಕ್ತಾಳಿ ನಿಜ್ಜ, ಉಂಚ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಉಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು, ಜಾಂಬಳಿ ೧೦೦ಕ್ಕೆ ೧೪ಆಣೆ ಕಪ್ಪು ಮಾತ್ರ ೧೨ಆಣೆ. ಶಾಯಿ ಪೆಂಪಲಿಗೆ ಒಂದಾಣೆ. ಹೋಲ ತೆಗೆದುಕೊಂಡರೆ, ಭರಪೂರ ಕಮಿಶನ್.

ಪತ್ತೆ— ಎಸ್. ವ್ಹಿ. ಭಾಗ್ವತ.
ಪೋಸ್ಟ— ಹೆಗಡೆ, ಉತ್ತರ ಕಾನಡಾ.

ಶ್ರೀ। ಕಮಲಾಬಾಯಿಯ
ಅಬಲಾ ಸಂಜೀವನಿ ಗುಳಿಗೆ

ಬರೇ ಸ್ತ್ರೀಯರಿಗೋಸ್ಕರ

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಆಪಾಯಕರ ಮತ್ತು ತೀಕ್ಷ್ಣ ಮನೋವೇಧಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ ೨೫ ವರ್ಷಗಳದಾರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ ತಪಶೀಲ ಮಾಹಿತಿಯ ಕೆಟಲಾಗು ಬರೇ ೦-೨-೦ ಸ್ಟಾಂಪ್ಸ ಕಳುಹಿಸಿದರೆ ಉಚಿತ ಸಿಗುವದು

ಬಾಟ್ಲಿ ೧ ರ ಕ್ರಯ ೧ ೮ ೦ ಟಪಾಲ ಖರ್ಚ ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ

ಶ್ರೀ। ಕಮಲಾಬಾಯಿ ಜಿ ಎಮ್ ಸಿ ಫಾರ್ಮಸಿ

ಕಾಳಬಾದೇವಿಯ ಎದುರಿಗೆ ಮುಂಬಯಿ

ಡಾ. ನವರತ್ನಕರ

ವಿದ್ಯುತ್‌ಶಕ್ತಿಯ ಸಿಂದಿ ಕೂದಲಿನ ಬಣ್ಣ

ಸಕಾ್ರ ಕಲಾಪ.

ಇದರಿಂದ ಬೂದಿ ಬಣ್ಣದ ಕೂದಲು ಕಾಗೆ ಕಪ್ಪಾಗುತ್ತವೆ ಈ ಕಲಾಪಿನಗುಣಗಳು — ಸುಲಭ ಹಚ್ಚೋಣ, ಇಂಪಾದ ಪರಿಮಳ, ಅಗ್ಗ ಕ್ರಯವೇ ಸರಿ ಬಳಸಿದವರೆಲ್ಲರ ಸಮಾಧಾನಪಟ್ಟಿರುವರು

ಕ್ರಯ. ೧ ೮—೦ ಅಂಚೆ ವೆಚ್ಚ ಬೇರೆ

೧೨ ಕ್ಕೆ ೧೫—೮—೦

ನವರತ್ನ ಮತ್ತು ಸನ್

೧೧೨ ಕಾಳಬಾದೇವಿ ರೋಡ ಮುಂಬಯಿ

ಅನುಭವಸಿದ್ಧವಾದ ಔಷಧಗಳು !!!

ವಿಶ್ವಾಸಕ್ಕೆ ಕೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ

ಪ್ರವಾಳ ಕೇಶರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉಪದಂಶವಿಕಾರ, ಮಸ್ತಕಶೂಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದದ್ದು ಗುಳಿಗೆ ೩೦ ಕ್ಕೆ ರೂ ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೪ ದಿವಸದ ಔಷಧಕ್ಕೆ ರೂ ೨-೦-೦ (೩) ಗಜಕರ್ಣ ನಾಶಕ ಮಲಮು — ಡಬ್ಬಿಗೆ ಆಣೆ ೦-೮-೦ (೪) ಮೂಲವ್ಯಾಧಿ ನಾಶಕಗುಳಿಗೆ — ಎಲ್ಲ ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨-೦-೦

ಅನುಪಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ!

ವಿಳಾಸ — **ವೈದ್ಯ ವ್ಹಿ. ಎಸ್ ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ,**

ಜಿಲ್ಲಾ ಉತ್ತರಕಾನಡಾ.

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಷ್ಚರ

ಮಲಶುದ್ಧಿಯಾಗುತ್ತದೆ ಬೆವರು ಬಂದು ಜ್ವರವು ಬಿಡುತ್ತದೆ ಕ್ರಯ ೦-೧೨-೦

ರೋಕ ವ್ಯಾಪಾರಸ್ಥರಿಗ ಅಗ್ಗ

ಪಾಟಣಕರ ಮಹಾದೇವ ಕಂಪನಿ

ಮುಂಬಯಿ ೪

ಲೋಕಮಾನ್ಯವಾದ
ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗುಂಡಿನ ಇಷ್ಟೆಟೆಡ ಎಲ್ಲಾ ತರದ ಚಹಾ ಮತ್ತು ಊಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯೂಕಲಿಪ್ಟಸ ಆಯಿಲ್) ರೋಕ ವ ಕಿರಕೋಳ ಜೇರಿಯ ಲ್ಲಿಯೂ ಸಿಗದೆ, ಕಡಿಮೆ ದರದಿಂದ ಸಿಗುವ ಇದೊಂದೇ ಸ್ಥಳವು ಚಹಾ ಮತ್ತು ನೀಲಗಿರಿ ಎಣ್ಣೆಯ ಹೊಸ ಸ್ಟಾಕ ಈಗಲೇ ಬಂದಿರುತ್ತದೆ ಪತ್ರದ್ವಾರ ದರದ ಖಾತ್ರಿ ಮಾಡಿಕೊಳ್ಳಿರಿ

ವಿ ಪಿ ಶಾನಬಾಗ ಮತ್ತು ಬ್ರದರ್ಸ

ಹೊನ್ನಾವರ ಉತ್ತರ ಕಾನಡಾ

HONAWAR (N. Kanara)

FREE. FREE.

Purchasers of 36 tins of our well renowned Ringworm Ointment price As 4 per tin, or of 12 Phials of Otto Mushk hina Price As 12 per tube, will be sent

A WRIST WATCH FREE

King George Coronation Co., BOMBAY No. 4.

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ
ನವೀನ ಭಾರತ.

(ವಾರ್ಷಿಕ ವರ್ಗಣಿ ಅಂಚೇ ವೆಚ್ಚ ಸೇರಿ ರೂ ೩)

ಇದರಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ, ಮನೋವೇಧಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶೀ, ಬಹಿಷ್ಕಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖಗಳು ಪ್ರಕಟಿಸಲ್ಪಡುವವು. ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ, ಜಾಹೀರಾತುಗಾರರಿಗೂ ಅತಿಶಯ ಅನುಕೂಲ

ವಿಳಾಸ— ನವೀನ ಭಾರತ ಕಾರ್ಯಾಲಯ,

ಬಾಗಲಕೋಟ (ಜಿ ವಿಜಾಪೂರ)

ಸತ್ಯಮೇವ ಜಯತೇ

(ಗುಣಬಾರದಿದ್ದರೆ ಹಣವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ ನಿರ್ಬಲತೆ ನಪುಂಸಕತ್ವ, ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ ಕಾಮೋತ್ತೇಜಕ ವ ಸ್ತಂಭಕ ಇಂದ್ರಿಯಸ್ತಂಭಕ ಗರ್ಮಿ, (ಟಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಅತಿಶೀಘ್ರದಲ್ಲಿ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೩ ರೂಪಾಯಿ ಟಪಾಲ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ

ವಿಳಾಸ – **ಜಿ. ಎಲ್ ಜೋಶಿ ಕಂಪನಿ**

ಪೋಸ್ಟ— ಸಿರಸಿ ಉತ್ತರ ಕಾನಡಾ

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಕೊಳ್ಳಬಹುದು. ಸವಲತ್ತಿಯ ದರಗಳು ಇಟ್ಟಿರುವೆವು

ನಮ್ಮ ಪತ್ತೆ —

ಗ್ಯಾತೋಂಡೇ ಬ್ರದರ್ಸ,

ಮೋಟರ ಡೀಲರ್ಸ, ರಿಪೇರರ್ಸ,

ಕಾರವಾರ.

ಅತ್ಯುತ್ತಮವಾದ ಮಂಗಳೂರ ನಶೀಪುಡಿ, ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ ರೋಕ ದರ, ಸವಲತಿಯು ಇರುತ್ತದೆ

ಪತ್ತೆ:— ಬಿ ದಾಸ, ಕುಮಟಾ

ಭಕ್ಷಿಸು ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪೌಷ್ಟಿಯಾಗಿ ಶರೀರವು ಕಾಂತಿಗೊಳಿಸುವದು. ಇದಲ್ಲದೆ ಕೆಮ್ಮು, ದಮ್ಮು, ಕಫ, ವಾತ, ಪಿತ್ತ, ನಿದ್ರೆ, ಇಲ್ಲಾಗೋಣ, ಮಲವಿಸರ್ಜನೆ ಸರಿಯಾಗಿ ಆಗದಿರೋಣ, ಅಜೀರ್ಣ ಜ್ವರ, ಸ್ತ್ರೀಯರ ಗರ್ಭದೋಷ, ಹುಡುಗರ ಹೊಟ್ಟೆಯ ಎಲ್ಲಾ ಬೇನೆಗಳು. ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧

ಕರದೇಶಕರ ಬ್ರದರ್ಸ, ಶಕ್ತಿವರ್ಧಕ ಹಲವಾ

ಡಿಪೋ, ಕುಮಟಾ (ಕಾನಡಾ)

ಪಿಕೆಟಿಂಗು.

ಸ್ವಯಂಸೇವಕರು ಪಾಲಿಸಬೇಕಾದ ನಿಯಮಗಳು

[ಮುಂಬಯಿಯ ಪ್ರಾಂತಿಕ ಕಾಂಗ್ರೆಸ ಕಮಿಟಿಯು ವಿದ್ಯಪಾನ ನಡೆದ ಪಿಕೆಟಿಂಗ ಚಳವಳಿಯಲ್ಲಿ ಸ್ವಯಂಸೇವಕರ ವರ್ತನದ ವಿಷಯ ಪಾಲಿಸಬೇಕಾದ ನಿಯಮಗಳನ್ನು ನಮ್ಮಲ್ಲಿ ಮದ್ಯಪಾನ ನಿಷೇಧಕ ಚಳವಳಿಗೆ ಉಪಯೋಗವಾಗಬಹುದೆಂದು ಯೋಚಿಸಿ ಅವುಗಳನ್ನು ನಾವು ಭಾಷಾಂತರಿಸಿ ಕೊಟ್ಟಿರುವೆವು

ಸಂಪಾದಕ ಕಾ ವೃ]

(೧) ಸ್ವಯಂಸೇವಕರು ನೇಮಿಸಿದ ಸ್ಥಳದಲ್ಲಿ ನಿಯಮಿತ ಹೊತ್ತಿಗೆ ಹಾಜರಾಗಿ, ಕವಾಯಿತ ಪದ್ಧತಿಯಿಂದ ಅಂತಃಕರಣಪೂರ್ವಕ ಕೆಲಸ ಮಾಡಬೇಕ ಅಲ್ಲಿ ಕೆಲಸ ಮಾಡುವಾಗ ತಮ್ಮ ದರ್ಜೆ, ವಿದ್ವತ್ತ್ರ, ಮಾನಾಪಮಾನ, ಹಿರಿಯ ಕಿರಿಯ ಮುಂತಾದ ಸಂಗತಿಗಳಕಡೆಗೆ ಪೂರ್ಣವಾಗಿ ದುರ್ಲಕ್ಷಿಸಿ, ಬಹು ನಮ್ರವಾಗಿ ವರ್ತಿಸಬೇಕು ನಮ್ರತೆಯು ಹೆಚ್ಚಾದಹಾಗೆ ಸ್ವಯಂಸೇವಕರು ಮಾಡುವ ಕಾರ್ಯವು ಚಿತ್ತವೇಧಕವಾಗಿ, ಪರಿಣಾಮವು ಸಹ ಭವ್ಯವಾಯಕವಾಗುವದು ನೇಮಿಸಿದ ವರ್ತನದಂತೆ ವ್ಯಕ್ತಿಭೇದವನ್ನು ಮನ್ನಿಸದೆ, ದೇಶಕಾರ್ಯವನ್ನು ಲಕ್ಷಿಸಿ, ವಿಧೇಯತನದಿಂದ ನಡೆಸುಬೇಕ ಪಿಕೆಟಿಂಗ ಮಾಡುವಾಗ, ತಮ್ಮತಮ್ಮೊಳಗೆ ಮಾತಾಡಬಾರದ ವೀಳ್ಯ ಹಾಕಬಾರದು ಬೀಡಿ ಸೇದಬಾರದು, ದಾವದೇ ತರದ ಇನಾಮನ್ನಾಗಲೀ, ಹಣವನ್ನಾಗಲೀ ಸ್ವೀಕರಿಸಬಾರದು ಅತಿ ಪವಿತ್ರ ಹಾಗು ನಮ್ರವಾಗಿ ನಡೆಯಬೇಕು

(೨) ಅಹಿಂಸೆಯು ಸ್ವಯಂಸೇವಕರ ಮುಖ್ಯ ಧರ್ಮವು ಹೆರವರ ಮನಸ್ಸನ್ನು ಮಾತುಗಳಿಂದ ಸಹ ನೋಯಿಸಬಾರದ

(೩) ಯಾವದಾದರೂ ವಿವಕ್ಷಿತ ಸಂಗತಿಯ ಮೇಲೆ ಎಂದೂ ಟೀಕೆಯನ್ನು ಮಾಡಬಾರದು ಯಾರಿಗೂ ಕೇಳಿಸಬಾರದು

(೪) ಹೆಂಡಕುಡಿದವರ ಸಂಗಡ ಎಂದೂ ಮಾತಾಡಬಾರದು.

(೫) ಮಾರ್ಗದಮೇಲೆ ಎಂದೂ ಜನರಿಗೆ ನೆರೆಯ ಗೊಡಬಾರದು, ಜನಸ್ತೋಮವಾದರೆ ಅದನ್ನು ಮುರಿಯಲು ಯತ್ನಿಸಬೇಕು, ಮತ್ತು ಅದು ಕೈಗೂಡದಿದ್ದರೆ, ಗುತ್ತೆಯ ನೆರೆಹೊರೆಯಲ್ಲಿದ್ದ ನಾಗರಿಕರ ಸಹಾನುಭೂತಿಯನ್ನು ಸಂಪಾದಿಸಿ ಬಾಜಿಗೆ ಸ್ಥಳದಲ್ಲಿ ನಿಂತು ಪ್ರಾರ್ಥನೆ ಮಾಡಬೇಕು

(೬) ಸ್ವಯಂಸೇವಕರು ಯಾರಗೊಡವೆಗೆ ಹೋಗದಿದ್ದರೂ, ಅನ್ಯರು ಹೊಡೆದರೆ, ಅವರು ಶಾಂತತೆಯಿಂದ ಅದನ್ನು ಸಹಿಸಬೇಕು, ಸ್ವಯಂಸೇವಕರು ಎಂದೂ ಸಿಟ್ಟಾಗಬಾರದು

(೭) ಪೋಲಿಸರ ಹತ್ತಿರ ಎಂದೂ ದೂರ ಬಾರದು ಅಥವಾ ಚರ್ಚೆ ಮಾಡಬಾರದು, ಪೋಲಿಸರು ಹೆಸರು ಕೇಳಿದರೆ, ಅದನ್ನು ಸಂತೋಷದಿಂದ ಕೊಡಬೇಕು ಹಿಡಿಯಲಿಚ್ಛಿಸಿದರೆ, ಸುಮ್ಮಗೆ ಅವರ ಸ್ವಾಧೀನ ಆಗಬೇಕು

ಪಿಕೆಟಿಂಗ

ಸರಾಯಿ ಅಂಗಡಿಕಾರರು ಕೆಳಗಿನ ಸಂಗತಿಗಳನ್ನು ಎಂದೂ ಮಾಡಬಾರದು ಅವುಗಳಲ್ಲಿ ಯಾವದಾದರೊಂದು ನೇಮವನ್ನು ಅವರು ಮುರಿದರೆ, ಸ್ವಯಂಸೇವಕರು ಅದನ್ನು ತಕ್ರಾರು ಅರ್ಜಿನಲ್ಲಿ ನೋಂದಾಯಿಸಿ ಕಳಿಸಿದರೆ, ಅದರ ಮೇಲೆ ಎರಡು ಸಾಕ್ಷಿಗಳನ್ನು ಕೊಳ್ಳಬೇಕು

[೧] ಅಂಗಡಿಯ ಪಾಟಿಮೇಲೆ ಬರೆದ ಹೊತ್ತಿಗಿಂತ ಹೆಚ್ಚು ಹೊತ್ತು ಅಂಗಡಿಯನ್ನು ತೆರೆದಿಡಬಾರದು

[೨] ೧೪ ವರ್ಷಕ್ಕಿಂತ ಕಡಿಮೆ ಪ್ರಾಯದ ಹುಡುಗರಿಗೆ ಸರಾಯಿ ಮಾರಬಾರದು

[೩] ಹೆಂಡದ ಅಮಲು ತಲೆಗೆ ಏರಿದವರಿಗೆ ಪುನಃ ಹೆಂಡ ಕೊಡಿಸಬಾರದು

[೪] ಗುತ್ತೆಯ ಹೆಬ್ಬಾಗಿಲ ಬಿಟ್ಟು ಅನ್ಯಬಾಗಿಲುಗಳಿಂದ ಜನರನ್ನು ಪ್ರವೇಶಗೊಡಬಾರದು. ಅಥವಾ ಸರಾಯಿ ಮಾರಬಾರದು

[೫] ಇಸವಿ ಗೆ. ಬಾಟ್ಲಿಗಳಿಗೆ ಬಿಕ್ಕಿ ಹೆಂಡ ಕೊಡಬಾರದು.

ಸ್ವಯಂಸೇವಕರ ಪ್ರತಿಜ್ಞಾ ಪತ್ರ

ಶ್ರೀ ಪ್ರೆಸಿಡೆಂಟ ಉಪಿಸರ ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿ ಇವರಿಗೆ—

ವಿ ವಿ ತಾವು ಪ್ರಾರಂಭಿಸಿದ ಮದ್ಯಪಾನ ಪ್ರತಿಬಂಧದ ಚಳವಳಿಯಲ್ಲಿ ಪ್ರವೇಶಗೊಂಡು, ಪಿಕೆಟಿಂಗ ಮಾಡುವದಕ್ಕಾಗಿ ನಾನು ಸ್ವಯಂಸೇವಕನಾಗಲಿಚ್ಛಿಸುತ್ತೇನೆ ಶ್ರೀಪರಮೇಶ್ವರನನ್ನು ಸ್ಮರಿಸಿ, ನಾನು ಎಂದೂ ಸರಾಯಿ ಕುಡಿಯಲಿಕ್ಕಿಲ್ಲೆಂದು ಆಣೆ ಮಾಡುತ್ತೇನೆ, ಹಾಗೂ ನನ್ನ ಬಾಂಧವರಿಗೆ ಮದ್ಯಪಾನದಿಂದ ಪರಾವೃತ್ತ ಮಾಡುವ ಈ ಪುಣ್ಯಕರ್ಮ ಮತ್ತು ಧರ್ಮ ಕರ್ತವ್ಯವನ್ನು ತಾವು ಹೇಳಿಕೊಟ್ಟಂತೆ ಸಂಪೂರ್ಣವಾಗಿ ಶಾಂತತೆಯಿಂದಲೂ, ಅತ್ಯಾಚಾರರಹಿತ ಉಪಾಯಗಳಿಂದಲೂ, ಶಿಸ್ತಿಯಿಂದಲೂ ಇದು ಪರಮೇಶ್ವರನ ಆಜ್ಞೆಯು, ಮಾತೃಭೂಮಿಯ ಸೇವೆಯು ಎಂದು ತಿಳಿದು ಸಮಾಧಾನವನ್ನು ಲೆಕ್ಕಿಸದೆ, ಜರುಗಿಸುವೆನು ಪಿಕೆಟಿಂಗ ಮಾಡುವಾಗ ನಾನು ಯಾರಿಗೂ ಸ್ಪರ್ಶ ಮಾಡಲಿಕ್ಕಿಲ್ಲ, ಬೈಯ್ಯಲಿಕ್ಕಿಲ್ಲ ಸುಳ್ಳು ಹಾಕಲಿಕ್ಕಿಲ್ಲ, ಧಾರ್ಮಿಕ ಮನೋವೃತ್ತಿಯನ್ನು ನೋಯಿಸಲಿಕ್ಕಿಲ್ಲ ಉಪದೇಶ ಮಾಡಲಿಕ್ಕೆ ಅಂಗಡಿಯೊಳಗೆ ಕಾಲಿಡಲಿಕ್ಕಿಲ್ಲ ಆದರೆ, ಅತಿ ನಮ್ರಭಾವದಿಂದ ಹೆಂಡಕುಡಿಯುವವರ ಮನಸ್ಸು ಒಲಿಸಿಕೊಳ್ಳುವ ಪ್ರಯತ್ನ ಮಾಡುವೆನು ಮೇಲೆ ತೋರಿಸಿದ ನಿಯಮಗಳೆಲ್ಲ ಅಕ್ಷರಶಃ ಪಾಲಿಸುವೆನು ನನಗೆ ಸ್ವಯಂಸೇವಕನೆಂದು ಮನ್ನಿಸಿ ನನ್ನ ಹೆಸರನ್ನು ನೋಂದಿಸಿ, ನನಗೆ ಕೆಲಸ ಕೊಡಬೇಕೆಂದ ನನ್ನ ಬಿನ್ನಹವಿದೆ

ಸಹಿ ______

ಪರದೇಶೀ ವಸ್ತ್ರದ ಬಹಿಷ್ಕಾರವನ್ನು ಯಶಸ್ವಿ ಮಾಡಲಿಕ್ಕೆ ಪರದೇಶೀ ವಸ್ತ್ರಗಳನ್ನು ಧರಿಸುವವರಿಗೆ ಬಹಿಷ್ಕರಿಸಬೇಕು !

(ಲೇಖಕ — ವ್ಯಾಶೆ)

ಸಪ್ಟೆಂಬರ ೩೦ನೇ ತಾರೀಖಿನ ಒಳಗೆ ಪರದೇಶೀ ವಸ್ತ್ರದ ಬಹಿಷ್ಕಾರವು ಪೂರ್ಣವಾಗಿ ಆಗಬೇಕೆಂತ ಕಾಂಗ್ರೆಸದ ಅಪ್ಪಣೆಯಾಗಿರುವದು ಮುದ್ದತ್ತು ಸಮೀಪಿಸುತ್ತ ಬಂತು ಇಷ್ಟು ಅವಧಿಯಲ್ಲಿ ಹೋದ ಹೋದ ಕಡೆಗೆ ಖಾದೀ ಪೋಷಾಕು ಮಾಡಿದವರೇ ಕಾಣಬೇಕಾಗಿತ್ತು ಮತ್ತು ಹೀಗೆ ಕಂಡಲ್ಲಿ ಮಾತ್ರ ಕಾಂಗ್ರೆಸದ ಪ್ರತಿಜ್ಞೆಯು ಪೂರ್ಣವಾಗುವದೆಂತ ತಿಳಿಯಬೇಕು ಆದರೆ ಹೀಗೆ ಬಹುಶಃ ಎಲ್ಲಿಯೂ ಕಂಡುಬರುವದಿಲ್ಲ ಈ ಸುಚಿನ್ಹವು ಎಲ್ಲಿಯೂ ದೃಷ್ಟಿಗೆ ಬೀಳುವದಿಲ್ಲ ಇದು ನೋಡಿ ಯಾವ ಅಸಹಕಾರಿತೆಯವನಿಗೂ, ಸ್ವದೇಶ ಭಕ್ತನಿಗೂ, ಖೇದವಾಗದೆ ಇರದು ಈಗ ಬಾಕಿ ಕೆಲವು ಮುದ್ದತ್ತಿನಲ್ಲಿ ಪರದೇಶೀ ವಸ್ತ್ರದ ಬಹಿಷ್ಕಾರವು ಪೂರ್ಣವಾಗಿ ಯಶಸ್ವಿಯಾಗದೆ ಇದ್ದಲ್ಲಿ ಅದನ್ನು ಮುದ್ದತ್ತಿನ ಹೊರಗೆ ಅತಿಶಯ ಸ್ವಲ್ಪ ದಿವಸಗಳಲ್ಲಿ ಯಶಸ್ವಿ ಮಾಡಲಿಕ್ಕೆ ಪರದೇಶೀ ವಸ್ತ್ರಗಳನ್ನು ಧರಿಸುವವರಿಗೆ ಬಹಿಷ್ಕರಿಸುವದೊಂದೇ ಉಪಾಯವಿರುವದ

ಈಗ ಅನೇಕ — ಯಾಕೆ' ಎಲ್ಲ — ವ್ಯಾಪಾರಸ್ಥರು ತಮ್ಮ ಲಾಭದಕಡೆಗೆ ನೋಡದೆ ಪರದೇಶೀ ವಸ್ತ್ರವನ್ನು ತಂದು ಮಾರುವದು ಪೂರ್ಣವಾಗಿ ತಡೆಕೊಟ್ಟು ಮಾಡಿ, ಸ್ವದೇಶೀ ವಸ್ತ್ರದ ವ್ಯಾಪಾರವನ್ನೇ ಮಾಡುತ್ತಿರುತ್ತಾರೆ ಅವರ ಹತ್ತಿರ ಉಳಿದು ಇದ್ದ ಕೋಟ್ಯಾವಧಿ ರೂಪಾಯಿ ಬೆಲೆಬಾಳುವ ಪರದೇಶೀ ವಸ್ತ್ರದ ಮೇಲೆ ತಿಲಾಂಜಲಿಯನ್ನು ಬಿಟ್ಟಿದ್ದಾರೆ ಇವರು ಇಷ್ಟು ಹಾನಿಯನ್ನು ಸಹಿಸಿದರೂ ಸ್ವದೇಶದ್ರೋಹಿಗಳ ಕಣ್ಣುಗಳು ಇನ್ನೂ ತೆರೆಯಲಿಲ್ಲ ಪರದೇಶೀ ವಸ್ತ್ರದ ಮೋಹವನ್ನು ಅವರು ಇನ್ನೂ ಬಿಡಲಿಲ್ಲ ಕೆಲವರಂತೂ ನಾವು ಹೊಸದಾಗಿ ಈಗ ವಸ್ತ್ರ ತಕ್ಕೊಳ್ಳುವದಿಲ್ಲ ಮೊದಲಿದ್ದದ್ದನ್ನೇ ಉಪಯೋಗಿಸುತ್ತೇವೆ ಇವು ಹರಿದು ಹೋದಕೂಡಲೆ ಹೊಸದಾಗಿ ಸ್ವದೇಶೀ ಅರಿವೆಯ ವಸ್ತ್ರಗಳನ್ನು ಹೊಲಿಸಿಕೊಳ್ಳುವೆವು, ಎಂತ ಅನ್ನುತ್ತಾರೆ ಆದರೆ ಮಹಾತ್ಮಾಜಿಯವರು ಪರದೇಶೀ ವಸ್ತ್ರದ ಮೋಹವನ್ನು ಹೋಗಲಾಡಿಸಲಿಕ್ಕೆ ಅದನ್ನು ಸುಟ್ಟುಬಿಡುವದೇ ಉತ್ತಮವೆಂತ ಹೇಳಿದ್ದು ಇವರು ಮರೆತಿರುತ್ತಾರೆ

ಇದು ಹ್ಯಾಗೂ ಇರಲಿ ಈಗ ಅಕ್ಟೋಬರ ೧ನೇ ತಾರೀಖಿನ ದಿವಸ ಮತ್ತು ಆದರ ಮುಂದೆ ಯಾವನು ಪರದೇಶೀ ವಸ್ತ್ರಗಳನ್ನು ಧರಿಸುತ್ತಾನೋ, ಅವನಿಗೆ ಯಾವ ಅಂಗಡಿಕಾರನೂ, ಯಾವ ವಸ್ತುವನ್ನೂ ಕೊಡಬಾರದು ಮಡಿವಾಳನು ವಸ್ತ್ರಗಳನ್ನು ಒಗೆಯಬಾರದು, ನ್ಹಾವಿಯು ಕ್ಷೌರವನ್ನು ಮಾಡಬಾರದು — ಸಿಂಪಿಗನು ಅವನ ವಸ್ತ್ರಗಳನ್ನು ಹೊಲಿಯಬಾರದು ಅವನ ಹತ್ತಿರ ಯಾರೂ— ಅವನ ಮಿತ್ರರು, ಆಪ್ತರು ಸಹ — ಮಾತಾಡಬಾರದು ವೈದ್ಯನು ಅವನಿಗೆ ಔಷಧ ಕೊಡಬಾರದು ಹೀಗೆ ಮಾಡಿ, ಪರದೇಶೀ ವಸ್ತ್ರಗಳನ್ನು ಬಹಿಷ್ಕರಿಸದವನಿಗೆ ಒಟ್ಟಿನ ಮೇಲೆ ಜನರೆಲ್ಲರು ಬಹಿಷ್ಕರಿಸಬೇಕು ಅಂದರೆ ಮಾತ್ರ, ಪರದೇಶೀ ವಸ್ತ್ರದ ಬಹಿಷ್ಕಾರವು ಪೂರ್ಣವಾಗಿ ಸ್ವರಾಜ್ಯವು ಬೇಗನೆ ಆಗುವದು

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕೀಮತ್ತು ರೂ ೧೨-೮-೦ ಇಟ್ಟಿದೆ ಆದರೆ, ಇದೇ ಸಪ್ಟೆಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧-೦-೦ ರ ಮತ್ತು ಇದೇ ಬರುವ ಅಕ್ಟೋಬರ ತಾ ೧೫ ರೊಳಗೆ ಮುಂಗಡ ಕೊಡುವವರಿಗೆ ೧೧-೮-೦ ರ ಸವಲತಿ ದರ ಇಟ್ಟಿದೆ ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು

ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,

ಕುಮಟಾ

ಗಾಂಧಿ ಮಹಾರಾಜಕೀ ಜಯ್!

[ಮಹಾತ್ಮಾ ಗಾಂಧಿಯವರ ಪವಿತ್ರ ಹೆಸರಿನಲ್ಲಿ ನಿರಾಶೆಯಾದವರಿಗೆ ಸಹ ಹ್ಯಾಗೆ ಚೈತನ್ಯವು ಹುಟ್ಟುತ್ತದೆ ಎಂಬ ಬಗ್ಗೆ ಮಿ। ಸಿ ಎಫ್ ಎಂಡ್ರೂಸರವರು ಒಂದು ಹೃದಯದ್ರಾವಕ ವೃತ್ತಾಂತವನ್ನು ಅಗಸ್ಟ ತಿಂಗಳಿನ ಮೊಡರ್ನ ರಿವ್ಯೂದಲ್ಲಿ ನಿವೇದಿಸಿರುವರು. ಅವನ್ನೇ ಇಲ್ಲಿ ಭಾಷಾಂತರಿಸಿ ಕೊಟ್ಟಿರುವೆವು. ಆಸಾಮದೊಳಗಿನ ಚಹಾ ತೋಟಗಳೊಳಗಿನ ಕೂಲಿಕಾರರು ಸಂಪು ಮಾಡಿ, ಚಾಂದಪುರದಲ್ಲಿ ಬಂದಿಳಿದಿದ್ದರು ಆಗ ಅಲ್ಲಿ ಕೊಲೆರಾ ಉಪಹತಿಯಾಗಿ, ಅಪರಿಮಿತ ಹಾನಿಯಾಯಿತು ಮಿ। ಆಂಡ್ರೂಸರವರು ಉಳಿದ ಎಲ್ಲ ಕೂಲಿಕಾರರನ್ನು ಕರಕೊಂಡು ಬ್ರಹ್ಮಪುತ್ರಾ ನದಿಯೊಳಗೆ ಬೋಟೀಮೇಲೆ ಪ್ರವಾಸಮಾಡುತ್ತಿದ್ದರು.

ಸಂಪಾದಕ ಕಾ ವೃ]

ಚಾಂದಪುರದಿಂದ ಗೋಅಲೊಂಡೋಕ್ಕೆ ಉಳಿದ ನಿರಾಶ್ರಿತ ಕೂಲಿಕಾರರನ್ನೆಲ್ಲ ಕರಕೊಂಡು ಪ್ರವಾಸಮಾಡುತ್ತಿದ್ದೆನು, ಬೋಟಿಯ ಅಂತಸ್ತುಗಳೆಲ್ಲ ಜನಸಂದಣಿಯಿಂದ ತುಂಬಿಹೋಗಿದ್ದವು ನಾನು ಅತ್ತಿತ್ತ ಅಡ್ಡಾಡುತ್ತಿದ್ದೆನು, ಕೊಲೆರಾ ರೋಗವನ್ನೂ, ಅಲ್ಲಿಯ ಸಂಕಟಪರಂಪರೆಯನ್ನೂ ನಾವು ದೇವರ ಉಪಕಾರ ನೆನಿಸುತ್ತ ಹಿಂದೆ ಬಿಟ್ಟು ಬಂದಿದ್ದೆವು ಅನಾಥ ಕೂಲಿಕಾರರೆಲ್ಲ ಅತಿ ಆತುರರಾಗಿದ್ದರು ಏನೋ ನಿರೀಕ್ಷಿಸುತ್ತ ಸ್ತಬ್ಧರಾಗಿದ್ದರು ಅಡ್ಡಾಡುವಾಗ ಮೇಲಿನ ಅಂತಸ್ತಿನಲ್ಲಿ ಒಂದು ಅಶಕ್ತ ವ್ಯಕ್ತಿಯನ್ನು ನೋಡಿ, ಕನಿಕರಪಟ್ಟು ಅವನ ಹತ್ತರ ಆಗಾಗ್ಗೆ ಸ್ವಲ್ಪ ಹೊತ್ತು ನಿರೀಕ್ಷಿಸುತ್ತ ನಿಲ್ಲುತ್ತಿದ್ದೆನು. ಅವನು ಹದಿನೆರಡು ವರ್ಷ ಪ್ರಾಯದ ಎಳೆ ಹುಡುಗನಿದ್ದನು, ಕೊಲೆರಾ ಕಾಯಿಲೆಯಿಂದ ಅಸ್ವಸ್ಥನಾಗಿದ್ದರೂ, ತೀರ ಸೊರಗಿ ಹೋಗಿ, ಅಶಕ್ತನಾಗಿದ್ದವರಿಂದ ಬೋಟಿಯಮೇಲೆ ಅವನಿಗೆ ಎತ್ತಿ ಹಾಕಬೇಕಾಯಿತು, ಇಡೀ ಪ್ರವಾಸದಲ್ಲಿ ಅವನು ಬಿದ್ದುಕೊಂಡಿದ್ದನು. ನಾನು ಅವನ ಹತ್ತರ ನಿಂತುಕೊಂಡಾಗ, ಬೋಟಿಯು ಮಹಾನದಿಯ ಪ್ರವಾಹ ಮಧ್ಯದೊಳಗಿಂದ ಹಾದು ಹೋಗುತ್ತಿತ್ತು ನಾವು ಮರಕೆಯೊಳಗಿಂದ ದಾಟುವಾಗ, ತೀರ ಸಮೀಪದಲ್ಲಿದ್ದ ದಂಡೆಯ ಮೇಲೆ ಸಶಕ್ತ ತೇಜಸ್ವಿ ಹುಡುಗರು, 'ಗಾಂಧೀ ಮಹಾರಾಜಕೀ ಜಯ್,' 'ಗಾಂಧೀ ಮಹಾರಾಜಕೀ ಜಯ್,' ಎಂದು ಘೋಷಿಸುತ್ತ ಅತ್ತಿತ್ತ ಓಡ್ಯಾಡುತ್ತ ಬಂದರು

ನಾನು ಅಂತಸ್ತಿನಮೇಲಿದ್ದ ಸೊರಗಿದ ಹುಡುಗನ ಕಡೆಗೆ ದೃಷ್ಟಿ ತಿರುಗಿಸಿದೆನು. ಅವನ ಮೋರೆಯು ಒಂದು ಭಾವನೆಯಿಂದ ಹೊಳೆಯಿತು. ಬಲು ಆಯಾಸದಿಂದ ತಲೆಯನ್ನೆತ್ತಿ, ದಂಡೆಯಮೇಲೆ ಓಡ್ಯಾಡುವ ಹುಡುಗರ ಕಡೆಗೆ ಕೈ ಎತ್ತಿ ಬೀಸಿದನು ಅವನ ಧ್ವನಿಯು ಅಶಕ್ತತೆಯ ಮೂಲಕ ತೀರ ಬಿದ್ದು ಹೋಗಿದ್ದರೂ, 'ಗಾಂಧೀ ಮಹಾರಾಜಕೀ ಜಯ್' ಎಂದು ಘೋಷಿಸಿದನು. ಈ ನೋಟವನ್ನು ನೋಡಿ, ನನ್ನ ಹೃದಯವು ಕರಗಿ ನೀರಾಯಿತು

ಆಶ್ರಯದಾತರಿಗೆ ಆಗ್ರಹದ ವಿನಂತಿ

ಇದು ೫ ನೇ ವರ್ಷದ ೪೮ ನೇ ಸಂಚಿಕೆಯು. ಇನ್ನು ವರ್ಷಾಂತ್ಯಕ್ಕೆ ಒಂದೇ ಸಂಚಿಕೆ ಉಳಿಯಿತು ಹೊಸ ವರ್ಷಾರಂಭದಿಂದ ಪತ್ರದ ವರ್ಗಣಿ ಅಂಚೆ ವೆಚ್ಚ ಸೇರಿ ರೂಪಾಯಿ ೩ ೦ ೦ ಮಾಡಿಯದೆ ಅದನ್ನು ದಯಮಾಡಿ ಮನಿಯಾರ್ಡರಿಯಿಂದಲೇ ಕಳುಹಿಸುವ ವ್ಯವಸ್ಥೆ ಮಾಡಬೇಕಾಗಿ ಬೇಡುತ್ತೇವೆ ವ್ಹಿ ಪಿಯಿಂದ ವಸೂಲ ಮಾಡುವದೆಂದರೆ, ಆಶ್ರಯದಾತರಿಗೆ ಅದೊಂದು ವೃಥಾ ದಂಡವಾಗುತ್ತದೆ ವ್ಹಿ ಪಿ ಕಳುಹಿಸುವ ಪ್ರಸಂಗ ಬಂದರೆ ಹೊಸ ವರ್ಷದಿಂದ ಮುಂದಾಗಿ ಹೋಗುವ ಸೂಚನೆ ಕಾರ್ಡು ಕಳುಹಿಸಲಾರೆವು ಕಾಲಕಾಲಕ್ಕೆ ಇದರಲ್ಲಿಯೇ ನೋಟೀಸು ಕೊಡುವವರಲ್ಲಿ ಎಂದೀತು ಮೊದಲನೇ ಸಂಚಿಕೆ ಹೊರಡುವದರೊಳಗಾಗಿ ಹಣ ಕಳುಹಿಸದಿದ್ದ, ಮೊದಲನೇ ಸಂಚಿಕೆಯಿಂದ ಪ್ರಾರಂಭವಾದ ಆಶ್ರಯದಾತರಿಗೆಲ್ಲ ಒಮ್ಮೆಲೇ ನಿರುಪಾಯವಾಗಿ ವ್ಹಿ ಪಿ ಗಳನ್ನು ಕಳುಹಿಸುವ ವಿಚಾರ ಮಾಡಿರುವೆವು ನಮ್ಮ ಪರಿಚಯದವರಲ್ಲದ ಸಂಶಯಾಸ್ಪದ ಆಶ್ರಯದಾತರಿಗೆ ವ್ಹಿ. ಪಿ ಕಳುಹಿಸದೆ, ಅವರವರ ಸಂಚಿಕೆಗಳು ಮುಗಿದೊಡನೆ ಪತ್ರವೇ ಬಂದ ಮಾಡಲ್ಪಡುವದು. ಪತ್ರ ಕೊಳ್ಳಲಾರದ ಆಶ್ರಯದಾತರು ತಮ್ಮ ಮನೋಗತವನ್ನು ಮುಂದಾಗಿಯೇ ತಿಳಿಸಬೇಕಾಗಿ ನಮ್ಮ ಸವಿನಯ ಸೂಚನೆಯು

ಮ್ಯಾನೇಜರ ಕಾ ವೃ]

ಕಾನಡಾವೃತ್ತ.

ಗುರುವಾರ ತಾರೀಖು ೨೨ ಮಾಹೆ ಸಪ್ಟಂಬರ ೧೯೨೧

ಕೌನ್ಸಿಲದೊಳಗೆ

ವ್ಹಾಯಿಸರಾಯರು.

ವರ್ಷಾನುವರ್ಷ ಬ್ರಿಟಿಶ ಪಾರ್ಲಿಮೆಂಟನ್ನು ತೆರೆಯುವಾಗ, ಬಾದಶಹರು ಸಮಾರಂಭದಿಂದ ಸಭಾಗೃಹಕ್ಕೆ ಬಂದು ಉಚ್ಚ ಸಿಂಹಾಸನದ ಮೇಲೆ ಕುಳಿತು, ಮಂತ್ರಿಮಂಡಳದ ಆಳಿಕೆಯ ಸ್ಥೂಲ ಮಾನದ ಧೋರಣವನ್ನು ಜಾಹೀರಪಡಿಸಲಿಕ್ಕೆಂದು ಪ್ರಸ್ತಾವಿಕ ಭಾಷಣ ಮಾಡುವದೊಂದು ಐತಿಹಾಸಿಕ ರೂಢಿಯಾಗಿದೆ. ಈ ಅರಸರ ಭಾಷಣವು ಪ್ರಧಾನ ಮಂಡಲವೇ ಬರೆದು ಬಾದಶಹರ ಅಪ್ಪಣೆಯಂತೆ ಅದರೊಳಗ ತಿದ್ದುಪಾಟುಗಳನ್ನು ಮಾಡಿ, ಅರಸರ ಕಡೆಯಿಂದ ಅದನ್ನು ಓದಿಸುತ್ತಾರೆಂದು ತಿಳುವಳಿಕೆಯಿದೆ ನಮ್ಮಲ್ಲಿ ವಿಲಾಯತಿಯ ಪ್ರಾತಿನಿಧಿಕ ಸಂಸ್ಥೆಗಳ ಬಾಹ್ಯ ಸ್ವರೂಪವನ್ನಾದರೂ ನಮ್ಮ ಸುಧಾರಣಾ ಕೌನ್ಸಿಲುಗಳು ಅನುಕರಿಸಬೇಕೆಂದು ಅದರ ಉಮೇದವಾರ ಸಭಾಸದರು ಉತ್ಕಂಠಿತರಿದ್ದಾರೆಂದು ಕಂಡುಬಂದಿದೆ. ನಮ್ಮ ಕೌನ್ಸಿಲುಗಳು, ಪಾರ್ಲಿಮೆಂಟುಗಳು, ಮತ್ತು ನಾವು ಪಾರ್ಲಿಮೆಂಟಿನ ನೇಕನಾಮದಾರ ಮೆಂಬರರು ಎಂದು ಹೇಳಿಕೊಳ್ಳುವ ಲವಲವಿಕೆಯು ಕೆಲವರಿಗೆ ಉಂಟಾಗಿದೆ. ಇಂಥವರ ಆಕಾಂಕ್ಷೆಗಳನ್ನು ಹೊಸ ಹೊಸ ರೀತಿಗಳಿಂದ ಪೂರೈಸಲಿಕ್ಕೆಂದು ಈ ನಾಮಧಾರಿ ಚಿಕ್ಕ ಪಾರ್ಲಿಮೆಂಟುಗಳ ಅಧ್ಯಕ್ಷರಾದರೂ, ಔದಾರ್ಯದಿಂದ ಯತ್ನಿಸುತ್ತಿರುವರು ಒಟ್ಟಿಗೆ ಅನುಕರಣದ ಬಾಜಾರವು ಇತರ ವ್ಯವಹಾರದಲ್ಲಿ ಬೆಳೆಯುತ್ತಿದ್ದಂತೆ, ರಾಜಕಾರಣದಲ್ಲಿಯೂ ಅದು ಹಬ್ಬುತ್ತಿದೆಂದು ಹೇಳುವದೇ ತಾತ್ಪರ್ಯವು ಈ ವಿಧದ ರಾಜಕಾರಣದೊಳಗೆ ಬಹಿರಂಗದ ಅನುಕರಣವನ್ನಷ್ಟು ಮಾಡುವ ಕಾರಭಾರದೊಳಗೆ ಅಂತರಂಗದ ಭೂಮಿಯನ್ನು ಗೆದ್ದುಕೊಂಡರೆ, ಸ್ವರಾಜ್ಯದ ಸಜೀವತೆಯು ನಮ್ಮ ರಾಜಕಾರಣಕ್ಕೆ ಪ್ರಾಪ್ತವಾಗುವದು. ಅಂದಿಗೆ ಮಾತ್ರ ನಮ್ಮ ಕೌನ್ಸಿಲುಗಳಿಗೆ ಚಿಕ್ಕ ಪಾರ್ಲಿಮೆಂಟುಗಳೆಂಬ ಹೆಸರು ಯಥಾರ್ಥವಾಗುವದು.

ಕೌನ್ಸಿಲದೊಳಗೆ ವ್ಹಾಯಿಸರಾಯರು ಮಾಡುವ ಭಾಷಣವು ಪಾರ್ಲಿಮೆಂಟಿನೊಳಗಿನ ಅರಸರ ಭಾಷಣದ ರೂಢಿಯ ಅನುಕರಣವೇ ಸರಿ ಸರ್ವಾಧಿಕಾರಿಗಳು ಈಗ ೮-೧೦ ವರುಷಗಳಿಂದ ಈ ಪ್ರಘಾತವನ್ನು ಜಾಗ್ರತೆಯಿಂದ ಪಾಲಿಸುತ್ತಿದ್ದಾರೆ ಇದಕ್ಕಾಗಿ ಕೌನ್ಸಿಲದ ಅಧಿವೇಶನಗಳನ್ನು ತೆರೆಯುವಾಗ, ಇಲ್ಲವೆ ಮುಗಿಸುವಾಗ, ಬಾದಶಹರ ಪ್ರತಿನಿಧಿಗಳು ಏನೆನ್ನುತ್ತಾರೆಂಬದನ್ನು ಕೇಳಿಕೊಳ್ಳಲು ಮವಾಳರಾದ ಪದಾವಲಂಬಿ ಆಶಾವಾದಿಗಳಾದವರು ಉತ್ಕಂಠಿತರಾಗಿರುತ್ತಾರೆ ಪ್ರಚಲಿತ ರಾಜಕಾರಣದ ವಿಷಯವಾಗಿ ಸರಕಾರಿ ಧೋರಣವೇನಾಗಿರುತ್ತದೆಂದು ನೋಡಲಿಕ್ಕೆ ವ್ಹಾಯಿಸರಾಯರ ಉಪನ್ಯಾಸವು ಒಂದು ಸಣ್ಣ ಅಳತೆಯ ಸಾಧನವಾಗಿದೆಂದು ಇತರೇ ಜನರ ಸರ್ವಸಾಧಾರಣ ತಿಳುವಳಿಕೆಯಾಗಿದೆಂದೂ ಹೇಳಬಹುದು ಇದೇ ತಿಳುವಳಿಕೆಯಿಂದ ವ್ಹಾಯಿಸರಾಯ ಲಾರ್ಡ ರೀಡಿಂಗ್ ಧೊರೆಗಳು ಎರಡೂ ವರಿಷ್ಠ ನ್ಯಾಯ ವಿಧಾಯಕ ಸಭೆಗಳ ವಿಶಿಷ್ಟವಾದ ಸಂಯುಕ್ತ ಅಧಿವೇಶನದಲ್ಲಿ ಮಾತಾಡಿದರು ಇದೇ ದೃಷ್ಟಿಯಿಂದ ಅವರ ಭಾಷಣವು ಜನತೆಯಿಂದ ಪರೀಕ್ಷಿಸಲ್ಪಡುವದು. ಈ ಭಾಷಣದೊಳಗೆ ಧೊರೆಗಳು ಸಭೆಯೊಳಗಿನ ನೂರು ಇನ್ನೂರು ಸಭಾಸದರಿಗೆ ಉದ್ದೇಶಿಸಿ ಮಾತಾಡಿದರೂ, ನಿಜವಾಗಿ ಮೂವತ್ತು ಕೋಟಿ ಪ್ರಜೆಗಳಿಗೆ ಉದ್ದೇಶಿಸಿ ಅವರು ನುಡಿದಿದ್ದಾರೆಂದು ತಿಳಿಯುವದೇ ಸರಿ. ತಮ್ಮ ಭಾಷಣದೊಳಗೆ ಅವರು, ಯುವರಾಜರ ಆಗಮನ, ಅಫಗಾಣಿಸ್ಥಾನದ ತಹನಾಮೆ, ಅಸಹಕಾರಿತೆ, ಮಾಪಿಳೆಯರ ದಂಗೆ, ಅದಕ್ಕೆ ಸಂಬಂಧಿಸಿದ ಲಷ್ಕರೀ ಕಾಯಿದೆ, ಸುಧಾರಣೆಗಳ ಪ್ರಯೋಗಾವಸ್ಥೆ, ಜಾತಿಸಮಾನತೆ, ಇಂಥ ದೊಡ್ಡ ದೊಡ್ಡ ವಿಷಯದ ಬಗ್ಗೆ ತಮ್ಮ ವಿಚಾರಗಳನ್ನು ಪ್ರಕಟಿಸಿರುವರು ರಾಜ್ಯಕಾರಭಾರದೊಳಗೆ ಇಂಥ ವಿಷಯಗಳಿಗೆ

ತಾತ್ಕಾಲಿಕ ಮಹತ್ವವಿದ್ದರೂ, ಜನತೆಗೆ ಅವು ಗೌಣವಾಗಿರುವವು. ಅದಕ್ಕೆ ಸ್ವರಾಜ್ಯವೇ ಪ್ರಧಾನ ವಿಷಯವಾಗಿದೆ. ಅದಷ್ಟು ಬೇಗ ಅದನ್ನು ಪ್ರಾಪ್ತಪಡಿಸಿಕೊಳ್ಳಬೇಕೆಂಬ ತಳಮಳವು ರಾಷ್ಟ್ರಕ್ಕೆ ಉಂಟಾದಾಗ, ಗೌಣ ವಿಷಯಗಳ ಉಪನ್ಯಾಸದಿಂದ ಅದರ ತೃಪ್ತಿಯು ಎಷ್ಟಾಗುವದು? ಸ್ವರಾಜ್ಯದ ಪ್ರಧಾನ ವಿಷಯವಾಗಿ, ಅದರ ಸವಿಸ್ತಾರದ ಭವಿತವ್ಯತೆಯನ್ನು ಲಕ್ಷಿಸಿ, ಜನರಿಗೆ ಸ್ಫೂರ್ತಿದಾಯಕವಾಗುವಂಥ, ಅವರ ಆಕಾಂಕ್ಷೆಗಳು ಉದಯೋನ್ಮುಖವಾಗಿದ್ದವೆಂದು ಅಲ್ಪ ಆಶ್ವಾಸನೆಯನ್ನಾದರೂ ಹುಟ್ಟಿಸುವ, ಒಂದಾದರೂ ವಿಚಾರವು ಈ ಸಮಗ್ರ ಭಾಷಣದೊಳಗೆ ಹುಡುಕಿದರೂ, ದೊರೆಯದೆಂದು ಲೋಕಮತವು ನಿರಾಶೆಪಡಬೇಕಾಗಿದೆಂಬುದು ವಿಷಾದಕರವಾದ ಮಾತು. ಬಾದಶಹರ ಪ್ರಿಯ ತನುಜರಾದ ಯುವರಾಜರು ನಮ್ಮ ದೇಶಕ್ಕೆ ಚಿತ್ತೈಸುವಾಗ, ಸ್ವರಾಜ್ಯದ ಜಪವಾದ ಹಕ್ಕುಗಳನ್ನು ಗಂಟು ಕಟ್ಟಿ ತಂದು ಉದಾರತನದಿಂದ ನಮಗೆ ಅರ್ಪಿಸುವರೆಂದು ಚಾತಕ ಪಕ್ಷಿಗಳಂತೆ ಬಾಯಿ ತೆರೆದು ಕೂತುಕೊಂಡ ಆಶಾವಾದಿಗಳಿಗೂ, ನಿರಾಶೆಯು ಭೀತಿಯು ಪರಿಹಾರವಾಗುವ ಒಂದೂ ಆಶ್ವಾಸನೆಯು ಅದರೊಳಗಿಲ್ಲ. ಯುವರಾಜರು ಬಾದಶಹರಂತೆ ವಿಲಾಯತಿಯಲ್ಲಿ ರಾಜಕಾರಣದೊಳಗೆ ಕೈಹಾಕಲಾರರು. ಅದರಂತೆ ಹಿಂದೀ ರಾಜಕಾರಣದಿಂದಾದರೂ ಅವರು ಅಲಿಪ್ತರಾಗಿಯೇ ಇರುವರೆಂದು ಕೌನ್ಸಿಲದ ಚರ್ಚೆಯೊಳಗೆ ಹೊರಬಿದ್ದ ಸಿದ್ಧಾಂತಗಳ ಧ್ವನ್ಯರ್ಥವು ಹೇಳುತ್ತಿದ್ದಲ್ಲವೇ? ಯುಕ್ಟೆಯಾವತ್ ವಿಲಾಯತಿಯ ರಾಜಕಾರಣದ ಅನುಕರಣವಷ್ಟು ಸುಸಂಗತವಾದದ್ದಾಯಿತು. ಒಟ್ಟಿಗೆ ಯುವರಾಜರು ಬಹುತರವಾಗಿ ಬರೆ ಕೈಗಳಿಂದಲೇ ಬರುವರೆಂದು ಲೋಕಮತವು ಇಂದಿಗಾದರೂ ಕಂಡುಹಿಡಿದದೆ. ಇಂಥ ನಿರಾಶೆಯೊಳಗೆ ಮತ್ತು ಹಿಂದೀ ಪ್ರಜೆಗಳ ಸಹವಾಸಿಯಾಗಿದ್ದ ದಾರಿದ್ರ್ಯದೊಳಗೆ, ಜನತೆಯೊಳಗೆ ಹಬ್ಬಿದ ತೀವ್ರ ರಾಜಕೀಯ ಅಸಂತೋಷದೊಳಗೆ, ನಮ್ಮ ಪೂಜ್ಯರಾದ ಭಾವೀ ಅರಸರ ಆಗಮನಕ್ಕಾಗಿ ಸತ್ಕಾರ ಸಮಾರಂಭಗಳನ್ನು ಮಾಡಬೇಕು, ಗುಡಿ ತೋರಣಗಳನ್ನೇರಿಸಬೇಕು; ಆಸಂದೀ ಆನಂದವನ್ನು ವ್ಯಕ್ತಪಡಿಸಬೇಕು, ಎಂದು ಹಟ ಹಿಡಿಯುವದೆಂದರೆ, ಕೃತ್ರಿಮ ರೀತಿಯಿಂದ ನಗೆ ಬರುವದಿಲ್ಲಾದರೂ, ನಗ್ಯಾಡಬೇಕೆಂದು ಹೇಳಿದಂತಾಗುವದಲ್ಲವೇ? ಯುವರಾಜರ ಆಗಮನಕ್ಕೆ ನಮ್ಮ ದೇಶದೊಳಗೆ ವರ್ತಮಾನಕಾಲವು ತೀರ ಅನುಚಿತವದೆಂದು ತಿಳಿಯದಿರುವಷ್ಟು ವಸ್ತುಸ್ಥಿತಿಯ ಅಜ್ಞಾನವು ಜವಾಬದಾರರಾದ ಅಧಿಕಾರಿಗಳಲ್ಲಿ, ಇಲ್ಲವೆ ಸರ್ವಾಧಿಕಾರಿಗಳಲ್ಲಿ ಇನ್ನೂ ಇದೆಂದು ನಂಬುವದು ಆಶ್ಚರ್ಯಕರವಿದ್ದಷ್ಟು ವಿಷಾದಕರವು.

ಅಸಹಕಾರಿತೆಯ ಚಳವಳಿಯ ನಾಯಕರಾದ ಮಹಾತ್ಮಾ ಗಾಂಧಿಗಳಿಗೆ ಪ್ರಮಾಣಿಕತೆಯ ಮತ್ತು ಸದಾಚಾರಿತನದ ಶಿಫಾರಸು ಪತ್ರವನ್ನು ಕೊಡುವಾಗ, ದೊರೆಗಳು ಅದರ ದುಷ್ಪರಿಣಾಮಗಳ ಭವಿಷ್ಯವನ್ನು ಮುಂದಿಟ್ಟಿರುವರು. ಇದರೊಳಗೆ ಹೊಸ ವಿಚಾರಗಳೇನಿಲ್ಲ. ಮಹಾತ್ಮರ ಅಹಿಂಸಾ ಧರ್ಮವನ್ನು ಅವರ ಅನುಯಾಯಿಗಳಿಂದ ಆಚರಿಸಲಿಕ್ಕಾಗದೆ ದೇಶದಲ್ಲಿ ಅನರ್ಥವು ಸಂಭವಿಸುವದೆಂದು ಅವರ ಭವಿಷ್ಯವು. ಎಲ್ಲ ಅಸಹಕಾರಿ ಪಕ್ಷದವರು ಇಂಥ ಭವಿಷ್ಯವಾದಿಗಳ ಮಾತುಗಳನ್ನು ಹಗರಿರುಳು ಮುಂದಿಟ್ಟು, ಅಹಿಂಸೆಯ ವ್ರತವನ್ನು ಧೃಢನಿಶ್ಚಯದಿಂದ ಪಾಲಿಸಿ, ಮುತ್ಸದ್ದಿಗಳ ಭವಿಷ್ಯಗಳು ಎಷ್ಟು ಪೊಳ್ಳಾಗುತ್ತವೆಂದು ಕೃತಿಯಿಂದ ತೋರಿಸಲಿಕ್ಕೆ ಯಾವಾಗಲೂ ತತ್ಪರರಾಗಿರುವರೆಂದು ನಾವು ಧೃಢವಾಗಿ ನಂಬಿರುವೆವು. ಮಾಪಿಳ್ಳೇರ ದಂಗೆಯ ವಿಷಯವಾಗಿ ಪ್ರಕಟಿಸಿದ ದೊರೆಗಳ ವಿಚಾರಗಳಲ್ಲಿ ಅದರ ನಿಜವಾದ ಕಾರಣಗಳ ಮಾಹಿತಿಯು ಬೆಳಕೇನು ಕಾಣದು. ಮಲೆಬಾರದ ಕಾರಭಾರವು ಮುಸುಕಿನಲ್ಲಿಡಗೊಡುವದು ಹಿತಕರವಾಗಿಲ್ಲೆಂದು ‘ಬಂಗಾಲಿ’ ಯಂಥ ಮವಾಳ ಪತ್ರಿಕೆಗಳು ಒದರುತ್ತಿರುವವು. ಅಲ್ಲಿಯ ಲಷ್ಕರೀ ಕಾಯಿದೆಯ ಅಮಲು ಬೇಬಂದಶಾಹಿಗೆ ಕಾರಣವಾಗದಂತೆ, ತಾನು ಕಟ್ಟಳೆಗಳನ್ನು ಮಾಡಿದ್ದೇನೆಂದು ಧೊರೆಗಳು ಆಶ್ವಾಸಿಸಿದ್ಧಾರೆ. ಮಲೆಬಾರವು ಇನ್ನೊಂದು ಪಂಜಾಬವಾಗಬಾರದೆಂದು ಜನರಾದರೂ ಮನಃಪೂರ್ವಕವಾಗಿ ಇಚ್ಛಿಸುತ್ತಾರೆ. ಶಾಂತತೆಯು ಪೂರ್ಣವಾಗಿ ಸ್ಥಾಪಿಸಲ್ಪಟ್ಟ ನಂತರ, ಲೋಕಮತವು ನ್ಯಾಯ್ಯವಾದ ತೀರ್ಪನ್ನು ಕೊಡುವದೆಂದು ಸರ್ವಾಧಿಕಾರಿಗಳು ನಂಬಿರಲಿ. ಯುರೋಪಿಯರಿಗೂ, ಹಿಂದಿಯರಿಗೂ ದರ್ಜೆಯ ಮತ್ತು ಹಕ್ಕು-ನ್ಯಾಯಗಳ ಸಮಾನತೆಯನ್ನು ಹುಟ್ಟಿಸುವ ಯೋಜನೆಯು ಇನ್ನೂ ವಿಚಾರಣೆಯಲ್ಲಿದೆ. ಅಫಗಾಣಿಸ್ತಾನದೊಡನೆ ತಹನಾಮೆಯು ಬೇಗನೆ ನಿರ್ಣಯಿಸಲ್ಪಟ್ಟು ಪರಸ್ಪರ ಗೆಳೆತನವು ವೃದ್ಧಿ ಹೊಂದುವದೆಂದು ಧೊರೆಗಳು ಆಶಿಸುತ್ತಾರೆ. ಹೊಸ ಸುಧಾರಣೆಗಳ ಯಂತ್ರಗಳು ಹಳೆ ಕಾರಭಾರದ ಯಂತ್ರಗಳಿಗೆ ಎಷ್ಟರಮಟ್ಟಿಗೆ ಕೂಡಿದ್ಧವೆಂದು ಇಷ್ಟು ಬೇಗ ನಿರ್ಣಯಿಸುವದು ಸಾಧ್ಯವಿಲ್ಲೆಂದು ಅವರ ಮತವು. ಸುಧಾರಣೆಗಳು ಯಶಸ್ವಿಯಾಗಿದ್ಧವೆಂದು ಬೆನ್ನು ಬಡಕೊಳ್ಳುವ ಅಮಗಾರ-ನಾಮದಾರರಿಗೆ ಈ ನುಡಿಯು ಅಲ್ಪಕಹಿಯಾಗುವದು. ಏಕಂದರೆ ವ್ಹಾಯಿಸರಾಯರ ಉಪನ್ಯಾಸವು ನಾಮಮಾತ್ರ ಮಾತುಕಥೆಯಾಗಿದೆ. ಪ್ರಚಲಿತ ರಾಜಕೀಯ ಅಸಂತೋಷವನ್ನು ಅಲ್ಪವಾದರೂ ನಿವಾರಿಸುವ ಮಹತ್ವದ ಆಶ್ವಾಸನೆಗಳು ಅದರೊಳಗಿಲ್ಲ. ಲಾರ್ಡ ರೀಡಿಂಗ ಸಾಹೇಬರ ಸರಳ ಸ್ವಭಾವದ ಪ್ರತಿಬಿಂಬವು ಅವರ ನುಡಿಗಳಲ್ಲಿದ್ದರೂ, ಅವರ ಭಾಷಣವು ಹೆಚ್ಚಾಗಿ ನಿರಾಶೆಪಡಿಸಿದೆಂತಲ್ಲೇ ಶೋಕವುತವಾಗುವದು.

—○✻✻✻○—

ಸ್ಫುಟ ಸೂಚನೆಗಳು.

ಹೊಟ್ಟೆಗೆ ಅಕ್ಕಿಯ ಗಂಜಿಯನ್ನಾಗಲಿ, ರಾಗಿಯ ಅಂಬಲಿಯನ್ನಾಗಲಿ ಹಾಕುವ ಗತಿಯಿಲ್ಲದವರೇನು ತಾಳೀ ಚಕ್ಕೆಯ ಹಿಟ್ಟಿಗೆ ಮುಟ್ಟರು. ತೀರ ಲಾಚಾರಿಗಳೇ ತಾಳೀ ಚಕ್ಕೆಯಿಂದ ಹೊಟ್ಟೆ ಹೊರಕೊಳ್ಳಲಿಕ್ಕೆ ಬಳಲುತ್ತಾರೆ. ದಿನಗೂಲಿಯಿಂದ ನಾಲ್ಕಾರು ಆಣೆ ಗಳಿಸಿದರೆ, ಪೇಟೆಗೆ ಹೋಗಿ ಅಕ್ಕಿಯನ್ನು ಯಾ ರಾಗಿಯನ್ನು ಅವರು ಕೊಂಡುಕೊಂಡರೆಂದು ತಿಳಿಯುವದೇ. ಇಂಥ ದರಿದ್ರಿಗಳು ಮಾಡುವದು ದಿನಕ್ಕೊಂದು ಊಟ, ಹೆಚ್ಚೆಂದರೆ, ಎರಡು ಊಟಗಳು. ಇಂಥವರ ಮನೆಯೊಳಗಿನ ಸಂಸಾರ ಸಾಮಗ್ರಿಯನ್ನು ನೋಡಿದರೆ, ಸುಖವಸ್ತು ಜನರು, ವಿಶೇಷತಃ ಪರಕೀಯರು ವಿಸ್ಮಿತರಾಗದಿರರು. ಇವರು ಹ್ಯಾಗೆ ಬದುಕಿದ್ದಾರೆಂದು ಗೂಢವೇ ಅವರಿಗೆ ತಿಳಿಯದು. ಇಷ್ಟು ಸಾದಾ ಸಂಸಾರವು ಅವರದಾಗಿದೆ. ತಾಳೀ ಚಕ್ಕೆಯ ಹಿಟ್ಟಿನಿಂದ ಹೊಟ್ಟೆಯ ಹೊಂಡವನ್ನು ತುಂಬಿಕೊಳ್ಳುವ ದರಿದ್ರಿಗಳ ಹಾದು ಯಾವಾಗಲೂ ತೀರ ಕರುಣಾಸ್ಪದವು. ಇಂಥ ಲಾಚಾರಿಗಳಿಗೆ ತಾಳೀ ಚಕ್ಕೆಯನ್ನು ಎಲ್ಲಿಂದಾದರೂ ತಂದರೆಂದು ಶಿಕ್ಷೆ ವಿಧಿಸುವದೆಂದರೆ, ಹೊಟ್ಟೆ ತುಂಬಿಕೊಳ್ಳುವದು ಒಂದು ಅಪರಾಧವೆಂದು ವಿಧಿಸಿದಂತೆ ಆಗುವದು. ಅವರಿಗೆ ಮಾಡುವ ಶಿಕ್ಷೆಯು ಕಾಯಿದೆಗೆ ಸಂಮತವಾಗಿದೆಂದು ಕಲ್ಪಿಸಿದರೂ, ನೀತಿಗೆ ಅದು ಎಂದೂ ಸಮ್ಮತವಾಗದು. ಹೊಟ್ಟೆ ತುಂಬಿಕೊಳ್ಳುವ ನೈಸರ್ಗಿಕ ಹಕ್ಕು ಯಾವದೇ ಕಟ್ಟಳೆ ಕಾನೂನುಗಳಿಂದ ಪ್ರತಿಬಂಧಿಸುವದು ಒಂದು ವಿಧದ ಮಹದನ್ಯಾಯವು. ಸರಕಾರವು, ಅದರ ಕಾಯಿದೆಗಳೂ, ಕಾನೂನುಗಳೂ ಪ್ರಜೆಗಳ ಸುಖ-ಶಾಂತಿಗಾಗಿ ನಿರ್ಮಿಸಲ್ಪಡುತ್ತವೆ. ಅವುಗಳ ಅಂತಿಮ ಧ್ಯೇಯವು ಇದೇ ಸುಖಶಾಂತಿಯು. ಹೊಟ್ಟೆಗೆ ಬೇಕಾದಷ್ಟು ಸಾದಾ ಅನ್ನದ ಸುಖವೂ ಅದರ ಹಸಿವೆಯ ಶಾಂತಿಯೂ — ಇತರ ಸುಖ ಶಾಂತಿಗಳ ಮಾತಿರಲಿ, — ದೊರೆಯದಿದ್ದಮೇಲೆ, ಕಾಯಿದೆ ಕಾನೂನುಗಳೇ ತಪ್ಪಿದ್ಧಾವೆಂದು ತಂದುಹಿಡಿಯಬೇಕಲ್ಲವೇ! ಈ ದೃಷ್ಟಿಯಿಂದ ತಾಳೀ ಚಕ್ಕೆಯ ಕಾನೂನುಗಳು ಅನ್ಯಾಯಕರವಾಗಿವ್ಹಾವೆಂದು ಹೇಳಿದ ಹೊರ್ತು ಗತ್ಯಂತರವಿಲ್ಲ. ಇವನ್ನು ಒಪ್ಪವಿದ್ದರೆ ಬಡ ಜನರ ಪ್ರಾಣಗಳಿಗಿಂತ ತಾಳೀ ಚಕ್ಕೆಯ ಬೆಲೆಯು ಹೆಚ್ಚೆದೆಂದು ಎಣಿಸಿದಂತಾಗುವದು. ಇರಲಿ.

೨. ಹೊಸ್ನಾಪುರದೊಳಗೆ ತಾಳೀ ಚಕ್ಕೆಗಳನ್ನು ದೆಟ್ಟದಿಂದ ತಂದರೆಂದು ೬೪ ಜನರಮೇಲೆ ಖಟ್ಲೆಯಾಗಿ, ಎಲ್ಲರಿಗೆ ಕೂಡಿ ೪೧೫ ರೂಪಾಯಿಯಷ್ಟು ದಂಡವನ್ನು ನ್ಯಾಯಾಧೀಶರು ವಿಧಿಸಿದರು. ಹಣಕೊಡಲಿಕ್ಕೆ ಆಗದೆ ಈ ಬಡ ಜನರು ಬಂದೀವಾಸವನ್ನು ಅಂಗೀಕರಿಸಿದರು. ಹೊಟ್ಟೆಗಿಲ್ಲದವರು ಮತ್ತೇನು ಮಾಡುವರು? ಈ ಆರೋಪಿತರು ತಾಳೀಚಕ್ಕೆಯನ್ನು ತರುವ ಹಕ್ಕು ಪ್ರಸ್ಥಾಪಿತ ಮಾಡಿಕೊಳ್ಳುವದಕ್ಕೆ ಇಂಥ ಗುನ್ಹೆ ಮಾಡುತ್ತಾರೆ. ಅವರಷ್ಟು ಬಡವರೇನಲ್ಲ, ಎಂಬ ಭಾವನೆಯಿಂದ ಅವರಿಗೆ ಶಿಕ್ಷೆ ವಿಧಿಸಲ್ಪಟ್ಟಿದ್ದರೆ, ಇದರೊಳಗೆ ಮಹದನ್ಯಾಯವಾಗಿದೆಂ

ದು ಹೇಳಬೇಕಾಗುವದು ತೀರ್ವೆ ಕೊಡುವವರು ಒಬ್ಬಿಬ್ಬರಿದ್ದರೆ, ಅವರಮೇಲೆ ಅವಲಂಬಿಸಿರುವವರು ಎಷ್ಟು ಮಂದಿ ಇದ್ದಾರೆಂದು ನ್ಯಾಯಾಧೀಶರಿಗೆಲ್ಲಿಂದ ತಿಳಿಯುವದು? ಅಕ್ಕಿ ಇದ್ದು ತಾಳೀಚಕ್ಕೆ ಹಿಟ್ಟು ತಿನ್ನುವಷ್ಟು ಕೃಪಣ ಮನುಷ್ಯ ಸ್ವಭಾವವು ಅಪರೂಪವು. ಆರೋಪಿತರೊಳಗೆ ಒಬ್ಬಿಬ್ಬರು ೩೦-೩೫ ರೂಪಾಯಿ ತೀರ್ವೆಯನ್ನು ಕೊಡುವವರಿದ್ದರೆ, ಉಳಿದವರೆಲ್ಲರೂ ಒಂದೇ ಮಾಲೆಯ ಮಣಿಗಳೇನು? ಐವತದಾರರು ಅವರಾಗಿದ್ದರೆ, ಅವರು ತುರಂಗವನ್ನು ಯಾಕೆ ಸ್ವೀಕರಿಸುತ್ತಿದ್ದರು? ದಾರಿದ್ರ್ಯದೊಳಗೆ ಕಾದಾಡಿ ಸೆರೆಮನೆಯೇ ವಿಶ್ರಾಂತಿಯ ಮನೆಯೆಂದು ತಿಳಿದು ಅವರು ಬಂದಿವಾಸವನ್ನು ಅಂಗೀಕರಿಸಿರಬೇಕೆಂದು ಸಮಗಂತೂ ಕಾಣುತ್ತದೆ. ಸುಖದ ಒಂದು ತುತ್ತು ಸೆರೆಮನೆಯಲ್ಲೇ ತಮ್ಮ ಬಾಯಿಯಲ್ಲಿ ಬೀಳುವದೆಂದು ಅವರ ಭಾವನೆಯೂ ಆಗಿರಬೇಕು. ಕಾಯಿದೆಯಿಂದ ಅಪರಾಧಿಗಳೆಂದು ನಿರ್ಣಯಿಸಲ್ಪಟ್ಟರೂ, ನೈತಿಕ ಅಪರಾಧವನ್ನೇನು ಅವರು ಮಾಡಿಲ್ಲ. ಆದಕಾರಣ ಅವರು ಸಹಿಸುವ ಕಷ್ಟಗಳಿಗಾಗಿ ಅವರ ನೀತಿಧೈರ್ಯಕ್ಕಾಗಿ ಅವರನ್ನು ಅಭಿನಂದಿಸುವದು ಅವಶ್ಯಕವು. ಅವರ ಸಹನಶೀಲತೆಯನ್ನೂ ಶಾಂತವರ್ತನವನ್ನೂ ಅವರ ಬಾಂಧವರು ನಿರಂತರ ಹೊಗಳುವರು ಮತ್ತು ಅವರಿಗೆ ಮನಃಪೂರ್ವಕವಾಗಿ ಸಹಾನುಭೂತಿಯಿಂದ ನೆರವಾಗುವರೆಂದು ನಂಬುವೆವು.

---

೨ ದೇಶಭಕ್ತ ಅಲ್ಲೀಬಂಧುಗಳಿಗೆ ಕೈದು ಮಾಡಿದರೆಂಬ ಸುದ್ದಿಯನ್ನು ಜನರು ಕೇಳಿರಬಹುದು. ಮೌಲಾನಾ ಶೌಕತ ಅಲ್ಲಿಯವರಿಗೆ ಮುಂಬಯಿಯಲ್ಲಿ ಮತ್ತು ಮೌಲಾನಾ ಮಹಮ್ಮದ ಅಲ್ಲಿಯವರಿಗೆ ಮದ್ರಾಸಿಗೆ ಹೋಗುವಾಗ ದಾರಿಯಮೇಲೆ ವಾಲ್ಟೇರ ಸ್ಟೇಶನದಮೇಲೆ ದಸ್ತಗೀರ ಮಾಡಿ, ಅವರಿಬ್ಬರನ್ನೂ ಕರಾಚಿಗೆ ಒಯ್ದರೆಂತಲೂ ವಾರ್ತೆ ಇದೆ. ಲಷ್ಕರದೊಳಗೆ ಫಿತೂರಿ ಮಾಡುವ ಪ್ರಯತ್ನ, ರಾಜದ್ರೋಹ ಮುಂತಾದ ದೊಡ್ಡ ಗುನ್ಹೆ ಮಾಡಿದರೆಂದು ಅವರಮೇಲೆ ಆರೋಪವಿದೆ. ಕರಾಚಿಯಲ್ಲಿ ಮಾಡಿದ ಭಾಷಣದೊಳಗೆ ಗುನ್ಹೆಗೆ ಕಾರಣವಾದದ್ದರಿಂದ ಕರಾಚಿಯಲ್ಲಿ ತನಖಿ ನಡೆಯುವದೆಂದು ತಿಳಿಯುತ್ತದೆ. ಇಬ್ಬರೂ ದೇಶಭಕ್ತರು ಆರ್ಯಮಾತೆಯ ವೀರಪುತ್ರರಂತೆ ಆನಂದದಿಂದ ಶಾಂತತೆಯಿಂದ ಪೋಲೀಸರ ಕೈವಶರಾಗಿದ್ದಾರೆ. ತಮಗೆ ಕೈದು ಮಾಡಿದರೆಂದು ಜನರು ಗಾಬರಿಯಾಗದೆ ಗೊಂದಲಮಾಡದೆ ಶಾಂತ ರೀತಿಯಿಂದ ಅಸಹಕಾರಿಯಾಗಿ ವರ್ತಿಸಬೇಕೆಂದು ತಮ್ಮ ದೇಶಬಾಂಧವರಿಗೆ ತಮ್ಮ ಸಂದೇಶವನ್ನು ಅವರು ಕಳುಹಿಸಿರುವರು. ಇದು ದುಃಖಪಡುವ ಪ್ರಸಂಗವಲ್ಲ, ಹರುಷಪಡುವ ಸಮಯವೆಂದು ಮಹಾತ್ಮಾ ಗಾಂಧಿಗಳು ತಿಳಿಸಿರುವರು. ಇದೆಲ್ಲ ಲೋಕಪಕ್ಷದ ಮಾತಿರಲಿ. ಅಲ್ಲೀಬಂಧುಗಳನ್ನೂ, ಡಾ। ಕಿಚ್ಲೂರಂಥ ಪಂಜಾಬದ ಮುಖಂಡರನ್ನೂ ಕೈದು ಮಾಡುವದು ಕಾಯಿದೆಯ ದೃಷ್ಟಿಯಿಂದ ಎಷ್ಟು ಸಮರ್ಥನೀಯವಿದೆಂಬ ಮಾತು ಕಾಯಿದೆ ಕೋರ್ಟಿನಿಂದ ವಿಚಾರವಾಗುವದು. ಆದರೆ ಹಿಂದುಸ್ಥಾನದೊಳಗಿನ ಮಹಮ್ಮದೀಯ ಪ್ರಜೆಗಳಿಗೆ ಅತಿ ವಂದ್ಯರಾದ ಮತ್ತು ಎಲ್ಲ ಹಿಂದೂ ಬಾಂಧವರಿಗೆ ಅತಿ ಪ್ರಿಯರಾದ ವಿಖ್ಯಾತ ಮಹಮ್ಮದೀ ಲೋಕನಾಯಕರಮೇಲೆ ಕಾಯಿದೆ ಇಲಾಜು ನಡಿಸುವ ರಾಜಕೀಯ ಧೋರಣವು ಈಗಿನ ಕಾಲಮಾನದಲ್ಲಿ ಪ್ರಶಸ್ತವಾಗಿದೆಯೋ, ಜಾಗ್ರತನದ್ದಾದರೂ ಆಗಿದೆಯೋ, ಎಂಬುದೊಂದು ಮಹತ್ವದ ಪ್ರಶ್ನೆಯಾಗಿದೆ. ಅಲಹಾಬಾದದ "ಲೀಡರ" ಪತ್ರಿಕೆಯಂಥ ನೇಮಸ್ಥ ಪಕ್ಷದ ವೃತ್ತಪತ್ರಗಳಿಗೆ ಸಹ ಈ ಧೋರಣವು ಜಾಣತನದ್ದಾಗಿಲ್ಲೆಂದು ಕಾಣುತ್ತದೆ. ಅಲ್ಲಿಬಂಧುಗಳ ಭಾಷಣಗಳಿಗಿಂತ ಇಂಥ ತಪ್ಪು ಧೋರಣದಿಂದ ಜನತೆಯ ಮನಸ್ಸಿನಲ್ಲಾದರೂ ಅಸಂತೋಷವು ಹೆಚ್ಚಾದರೆ ರೋಗಕ್ಕಿಂತ ಜಾಲಿಮ ಔಷಧದ ಪ್ರಯೋಗದಿಂದ ಪ್ರಕೃತಿಯು ಬಹಳೇ ಕೆಟ್ಟಿತೆಂದು ವ್ಯಸನಪಡಬೇಕಾಗುವದಲ್ಲವೇ? ಲಾರ್ಡ ಚೆಮ್ಸಫರ್ಡ ಸಾಹೇಬರ ದಬ್ಬಾಳಿಕೆಯ ಧೋರಣವು ಅವರ ಕಾರಕೀರ್ದಿಯ ಸಂಗತಲೇ ಮುಗಿಯಿತೆಂದು ನಂಬಲಿಕ್ಕೆ ಆಸ್ಪ

* ಮೌಲಾನಾ ಶೌಕತ ಅಲ್ಲಿಗಳು *

ಅಲ್ಲಿ ಬಂಧುಗಳು ಕೈದುಮಾಡಲ್ಪಟ್ಟರು!

ಮೌಲಾನಾ ಮಹಮ್ಮದ ಅಲ್ಲಿಯವರ ಸಂದೇಶ.
ಸ್ವತಂತ್ರ ಹಿಂದುಸ್ಥಾನವೇ ನನಗೆ ಬಿಡುಗಡೆ ಮಾಡಬೇಕು.
ಶಾಂತ ವರ್ತನದಿಂದ ನಡೆಯಿರಿ.
ಹಿಂದು ಮುಸಲ್ಮಾನರ ಒಕ್ಕಟ್ಟು ಭದ್ರಪಡಿಸಿರಿ.
ನಿರ್ದಿಷ್ಟ ಕಾರ್ಯಕ್ರಮದಿಂದ ಸ್ವರಾಜ್ಯವನ್ನು ಗಳಿಸಿರಿ.
ಅದಕ್ಕಾಗಿ ಸ್ವದೇಶೀ ಕಾರ್ಯಕ್ರಮವನ್ನು ಪ್ರಚಾರಿಸಿರಿ.
ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸಿರಿ.

ಮಹಾತ್ಮಾ ಗಾಂಧಿಗಳ ಆಜ್ಞೆ!

ಹರತಾಳವನ್ನು ಆಚರಿಸಬಾರದು.
ಸ್ವದೇಶಿ ವ್ರತದಿಂದಲೇ ಸ್ವರಾಜ್ಯದ ಲಾಭವು.
ಕಾರಾಗ್ರಹದ ಶಿಕ್ಷೆಗಾಗಿ ಹೆದರಬೇಡಿರಿ.
ನಿರಪರಾಧಿ ಕಾರಾಗ್ರಹವಾಸದಿಂದಲೇ
ನಮ್ಮ ಕಾರ್ಯಸಿದ್ಧಿಯಾಗುವದು.

ರವಾಗಿದ್ದ ಹಿಂದೀ ಲೋಕಮತವು ಈಗಿನ ರಾಜಕೀಯ ಖಟ್ಲೆಗಳ ಮಹಾ ಸತ್ರದಿಂದ ಪೂರ್ಣವಾಗಿ ನಿರಾಶೆಪಡಬೇಕಾದದ್ದು ದುರ್ದೈವದ ಸಂಗತಿಯು

---

೪. ಅಲ್ಲೀ ಬಂಧುಗಳಂಥ ವಿಖ್ಯಾತ ಮತ್ತು ವಂದ್ಯ ಲೋಕ ನಾಯಕರಿಗೆ ಸೆರೆ ಹಿಡಿದರೆ, ಜನರೊಳಗೆ ಕ್ಷೋಭವಾಗಿ ವಾತಾವರಣದೊಳಗೆ ತುಮುಲಗಳುಂಟಾಗಿ ಜನರು ಅತ್ಯಾಚಾರವನ್ನು ಮಾಡುವರೆಂಬ ಭೀತಿಯು ಕೆಲವರಿಗುಂಟಾದದ್ದು ಆಶ್ಚರ್ಯಕರವು ಆದರೆ ಅಸಹಕಾರಿತೆಯ ಚಳವಳವು ಅನತ್ಯಾಚಾರಿ ಧರ್ಮವನ್ನು ಬರೇ ನುಡಿಯಲಿಕ್ಕಲ್ಲ, ಆಚರಿಸಲಿಕ್ಕೆ ಕಲಿಸಿರುವದರಿಂದ, ಮ|| ಗಾಂಧಿಗಳ ಪೂರ್ವ ಸೂಚನೆಯಿಂದ ಇಂಥ ಆಪತ್ತಿಗೆ ಎದುರಾಗಲಿಕ್ಕೆ ಜನರು ಸಿದ್ಧರಿದ್ದರಿಂದ ಈ ಭೀತಿಯು ನಿರಾಧಾರವಾಯಿತೆಂಬುದು ಎಲ್ಲ ಕಡೆಯಲ್ಲಿ ಪ್ರತ್ಯಕ್ಷವಾಗಿ ಕಂಡು ಬಂದಿದೆಂಬುದು ಕೊಂಗ್ರೆಸ-ಖಿಲಾಫತ ಪಕ್ಷದವರಿಗೆ ಅಭಿನಂದನೀಯವಾದ ಸಂಗತಿಯಾಗಿದೆ. ಮೌಲಾನಾ ಶೌಕತಲಿಯವರಿಗೆ ಮುಂಬಯಿಯಲ್ಲೇ ಹಿಡಿದದ್ದರಿಂದ, ಶ್ರೀ|| ಸರೋಜಿನಿನಾಯುಡು ಅಮ್ಮನವರು ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮೀಟಿಯ ಅಧ್ಯಕ್ಷನಾತೆಯಿಂದ ಕೊಂಗ್ರೆಸ, ಮತ್ತು ಖಿಲಾಫತ ಸ್ವಯಂಸೇವಕರ ಸಹಾಯದಿಂದ, ಎರಡು ದಿವಸ ಪರಿಶ್ರಮಪೂರ್ವಕ ದುಡಿದು, ಎಲ್ಲಿಯೂ ಶಾಂತತಾಭಂಗವಾಗದಂತೆ ಜಾಗ್ರತೆಯನ್ನು ಇಟ್ಟರು. ಆದಕಾರಣ ಮುಂಬಯಿಯಲ್ಲಿ ಇಂಥ ಅಣಿವಾಣಿಯ ಪ್ರಸಂಗದಲ್ಲಿ ಒಂದು ಹುಲ್ಲುಕಡ್ಡಿಯು ಸಹ ಅಸ್ತಿತ್ತ ಹಾರಿತೆಂದು ದೂರಲಿಕ್ಕೆ ಆಸ್ಪದವಿಲ್ಲಾಗಿತ್ತು. ಇಂಥ ಜನರ ಶಾಂತತೆಯ ವರ್ತನವು ಅತ್ಯಂತ ಭೂಷಣಾವಹವದೆ. ೧೯೦೮ ನೇ ಇಸ್ವಿಯಲ್ಲಿ ಲೋಕಮಾನ್ಯ ಟಿಳಕರಿಗೆ ಶಿಕ್ಷೆಯಾದಾಗ, ಹತ್ತು ಹದಿನೆರಡು ದಿವಸ ಮುಂಬಯಿಯೊಳಗೆ ಎಲ್ಲಿ ಹೋದಲ್ಲಿ ದಾಂಗೆಯೇ ದಂಗೆಗಳಾದದ್ದನ್ನು ನೋಡಿದವರಿಗೆ, ಈಗಿನ ಶಾಂತ ವಾತಾವರಣವನ್ನು ನೋಡಿ, ಮಹಾತ್ಮಾ ಗಾಂಧಿಗಳ ತತ್ವಗಳು ಎಷ್ಟು ಧೃತ್ಯಂತರವನ್ನುಂಟುಮಾಡಿದ್ದಾವೆಂದು ಸ್ಪಷ್ಟವಾಗಿ ಕಂಡು ಬರುವದು. ಇದಕ್ಕಾಗಿ ಅಸಹಕಾರಿತೆಯನ್ನು ಅಧಿಕಾರಿಗಳು ಸಹ ನ್ಯಾಯ್ಯವಾಗಿ ಹೊಗಳಬಹುದು. ಆಗಿನ ದಂಗಾಟವನ್ನು ಶಾಂತಗೊಳಿಸಲು ಲಾರ್ಡ ಸಿಡನಹೆಮ ಗವ್ಹರ್ನರರಿಗೆ ಪುಣೆಯಿಂದ ಮುಂಬಯಿಗೆ ಮುದ್ದಾಮು ಬಂದು, ಎಷ್ಟು ಅವಿಶ್ರಾಂತವಾಗಿ ಹೆಣಗಬೇಕಾಯಿತೆಂದು ಅಲ್ಲಿಯ ಜನರು ಬಲ್ಲರು. ದಂಗೆಗಾರರ ಅತ್ಯಾಚಾರಗಳಿಂದ ಮೊದಲು ಪ್ರಾಣಹಾನಿಯಾಗಿ, ದಂಗೆಯನ್ನು ಹತಿಸಬೇಕೆಂದು ಮತ್ತೆ ಪ್ರಾಣಹಾನಿಯನ್ನು ಮಾಡಬೇಕಾಯಿತು. ಒಟ್ಟಿಗೆ ಅತ್ಯಾಚಾರವು ಪ್ರಬಲವಾಗಿ ಅನರ್ಥವಾಗಿತ್ತು. ಆಗಿನ ಸ್ಥಿತಿಗೂ ಈಗಿನ ಸ್ಥಿತಿಗೂ ಅಜಗಜಾಂತರವಾಗಿದೆಂದು ಹೇಳಿದರೆ, ಅತಿಶಯೋಕ್ತಿಯಾಗದು. ಇಂಥ ಬಹಳೇ ಭೂಷಣಾವಹವಾದ ಶಾಂತಿ ವರ್ತನವನ್ನು, ಪೂರ್ಣವಾದ ಅನತ್ಯಾಚಾರಿತನವನ್ನು ದೇಶದೊಳಗಿನ ಎಲ್ಲ ಮಹಮ್ಮದೀಯ ಬಾಂಧವರೂ ಹಿಂದೂ ಜನರೂ ಈ ಕಠಿಣ ಪ್ರಸಂಗದಲ್ಲಿ ತೋರಿಸುವರು, ಮತ್ತು ಅಸಹಕಾರಿತೆಯ ನಿಷ್ಕಲಂಕ ಹೆಸರನ್ನು ಕಾಯುವರೆಂದು ನಾವು ನಂಬಿರುವೆವು.

---

೫. ಶಿರ್ಶಿಯಲ್ಲಿ ಸ್ಥಾಪಿತವಾದ ಲವಾದ ಕೋರ್ಟಿನ ವರವಾಗಿ, ನಮ್ಮ ಜಿಲ್ಲಾಧಿಪರು ಹಿಂದು ಜಾಹೀರನಾಮೆಯನ್ನು ತೆಗೆದಿರುವರು. ಅದರ ಆಶಯವೇನಂದರೆ—ಶಿರ್ಶಿಯ ಲವಾದ ಕೋರ್ಟು ಸರಕಾರದಿಂದ ಸ್ಥಾಪನವಾದದ್ದಿಲ್ಲ. ಅದರ ಮುಂದೆ ವಾದಿ-ಪ್ರತಿವಾದಿ ಪಕ್ಷದವರಿಗಾಗಲಿ, ಸಾಕ್ಷಿದಾರರಿಗಾಗಲಿ, ಎಳೆದೊಯ್ಯುವ ಮತ್ತು ಎರಡೂ ಪಕ್ಷಗಳ ಸಮ್ಮತಿ ಇಲ್ಲದೆ ಯಾವದೇ ಖಟ್ಲೆಯ ತೀರ್ಪು ಕೊಡುವ ಅಧಿಕಾರವು ಈ ಲವಾದ ಕೋರ್ಟಿಗಿಲ್ಲ. ಇದಲ್ಲದೆ ಈ ಲವಾದ ಕೋರ್ಟಿನ ಸಮನ್ಸು ಯಾರೂ ಮಾನ್ಯ ಮಾಡಬೇಕೆಂತಿಲ್ಲ. ಲವಾದ ಸಮನ್ಸುಗಳನ್ನು ಮಾಮಲೇದಾರರ ಕಡೆಗೆ ತಂದುಕೊಡಬೇಕು. ಲವಾದ ಕೋರ್ಟಿನ ನಿವಾಡೆಯನ್ನು ಯಾರೂ ಪಾಲನ ಮಾಡಬೇಕೆಂದಿಲ್ಲ. ಇಂಥ ಜಾಹೀರನಾಮೆಯನ್ನು ತೆಗೆಯುವ ಅವಶ್ಯಕತೆಯು ಕಲೆಕ್ಟರರಿಗೆ ಯಾಕೆ ತೋಚಿತೆಂದು ತಿಳಿಯದು. ಕೊಂಗ್ರೆಸ ಠರಾವಿನಂತೆ ಈ ಲವಾದ ಕೋರ್ಟ ಸ್ಥಾಪಿತವಾಗಿದೆಂಬ ಕಾರಣದಿಂದಲೇ ಈ ಹುಕುಮು ಹೊರಟಿದ್ದರೆ, ಅದು ತೀರ ಅನ್ಯಾಯಕರವೆಂದು ಹೇಳಬೇಕಾಗಿದೆ. ಶಿರ್ಶಿ ಲವಾದ ಕೋರ್ಟಿನಲ್ಲಿ ಪಕ್ಷಗಾರರ ಸಮ್ಮತಿ ಇಲ್ಲದೆ ಕೇವಲ ಬಲಾತ್ಕಾರದ ಕಾರಭಾರವು ನಡೆವದೆಂದು ನಂಬಲಿಕ್ಕೆ ನಮ್ಮ ಕಡೆಗೆ ಏನೂ ಆಧಾರವಿಲ್ಲ. ಲವಾದ ಕೋರ್ಟಿನೊಳಗೆ ಇಂಥ ಸುಲ್ತಾನಿ ಸ್ವಭಾವದ ವಂಚಕರು ನ್ಯಾಯದರ್ಶರು ಇದ್ದರೆ ಅಲ್ಲಿಯ ಕೊಂಗ್ರೆಸ ಕಮೀಟಿಯೂ ಇತರ ಪಂಚರೂ ಅಂಥವರನ್ನು ತಾವಾಗಿ ಧಿಕ್ಕರಿಸದಿರರು. ಬಲಾತ್ಕಾರದಿಂದ ನ್ಯಾಯದಾನವನ್ನು ಮಾಡಲಿಕ್ಕೆ ಲವಾದ ಕೋರ್ಟುಗಳನ್ನು ಸ್ಥಾಪಿಸಬೇಕೆಂದು ಕೊಂಗ್ರೆಸಿನ ಅಪ್ಪಣೆಯೂ ಇದೆಂದು ತಿಳಿಯುವಷ್ಟು ತಿಳಿಗೇಡಿ ಚಾಲಕರು ಎಲ್ಲಿಯೂ ಇದ್ದಾರೆಂದು ನಂಬುವದು ಅಶಕ್ಯ್ಯ. ಆದಕಾರಣ, ಆ ದಿಕ್ಕು ಹೇತುವಿನ ನೊಸವನ್ನಿ ಕಲ್ಲೇ ಕಲ್ಲು ಎಂಬಂತೆ ಸ್ಥಾನಿಕ ಅಧಿಕಾರಿಗಳ ವ್ಯರ್ಥ ಸಂಶಯದಿಂದ, ನಿಷ್ಕಾರಣವಾಗಿ ಈ ಜಾಹೀರನಾಮೆಯು ಅಂತಹದನ್ನು ಪರಿಸ್ಥರು ತಕ್ಕೊಂಡಿರಬಹುದೆಂದು ನಾವು ಭಾವಿಸುವೆವು. ಲವಾದ ಕೋರ್ಟಿನ ನಿರ್ಣಯವು ಸಮ್ಮತಿಪಟ್ಟ ಪಕ್ಷಗಾರರಿಗೆ ಮಾತ್ರ ಹುಕುಮಿನ ಪ್ರತಿಬಂಧವು ಸಹ ಅಸ್ತಬದ್ಧವಿಲ್ಲ. ವಾದಿ-ಪ್ರತಿವಾದಿ ಎರಡೂ ಪಕ್ಷಗಳಿಗೆ ಮೆಚ್ಚುವಂಥ ತೀರ್ಪು ಹೇಳುವದು ಮಾನ್ಯವಿದ್ದ ವಿಚಾರಣೆಗಳಲ್ಲಿ ಸಾಕ್ಷಿದಾರರು ಪಕ್ಷಗಾರರ ಸ್ವಾತಂತ್ರ್ಯ ಉದ್ದೇಶವನ್ನು ಮನ್ನಿಸಿ ಆಸರಿಗೆ ಸನ್ನದ್ಧತು ವಿರಿಂದ ನೆರವಾಗುವರೆಂದು ತೋರುವದು.

---

೬. ಕಳೆದ ಸಂಚಿಕೆಯಲ್ಲಿ ಪ್ರಸಿದ್ಧವಾದ ಶ್ರೀ|| ಜಗನ್ನಾಥ ಪಂತರವರು ನಮಗೆ ಕೊಟ್ಟ ಸ್ಥಾನಿಕ ಮುನಿಸಿಪಲ್ ಭಂಗಿ ಜನರ ಸಂಪಿನ ವಿಷಯದ ಲೇಖವು ಪ್ರಸಿದ್ಧಿಸುವಷ್ಟು ಅವಶ್ಯಕ ಕಾರಣಗಳೇನಿಲ್ಲೆಂಬ ನಮ್ಮ ಮತವನ್ನು ಮನ್ನಿಸದೆ, ದುರಾಗ್ರಹದಿಂದ ತಾ ೨೦ ನೇ ಸಪ್ಟಂಬರದ "ಕಾನಡಾ ಧುರೀಣ"ದಲ್ಲಿ ಪ್ರಸಿದ್ಧಿಸಲ್ಪಟ್ಟಿರುವದು. ಲೇಖಕರು ಕೊಟ್ಟ ಕೊಟ್ಟ ಲೇಖಗಳನ್ನೆಲ್ಲ ಪ್ರಸಿದ್ಧಿಸುವದೂ, ಬಿಡುವದೂ ಕಾರಣಗಳನ್ನು ಕೊಟ್ಟು ತಿಳಿಸುವದೂ ಪತ್ರಕರ್ತರ ಮರ್ಜಿಯ ಮಾತೆಂಬುದು ಇವರಿಗಿನ್ನೂ ತಿಳಿಯದಿದ್ದದ್ದು ಆಶ್ಚರ್ಯಕರವು. ಹಾಗೆಯೇ ಆನೇ ತಾರೀಖಿನ ಪತ್ರದಲ್ಲಿ ೧೦ ನೇ ತಾರೀಖಿಗೆ ಸಂಪು ಮುರಿದು ಆದ ಸುಧಾರಣೆಯ ಸಂಗತಿಯು, ಓದೇ ಆ ಪತ್ರವು ೧೬ ನೇ ತಾರೀಖಿಗೆ ತಡವಾಗಿ ಪ್ರಸಿದ್ಧವಾಗಲ್ಪಟ್ಟಿತೆಂಬ ಕಾರಣದಿಂದ ಅದರಲ್ಲಿ ಸೇರಿಸಬೇಕೆಂದೂ, ಯಾವ ಆ ಕರಿತು ಸ್ಪಷ್ಟ ಪುರವಣಿಯನ್ನಾದರೂ ಹೊರಡಿಸಬೇಕಾಗಿ ಇವರ ಹಠವು. ಒಂದಕ್ಕೊಂದು ವಿಸಂಗತವಾಗಿರುವದೆಂಬುದು ಈ ಮಹಾಶಯರಿಗೆ ಯಾಕೆ ತಿಳಿಯಲಿಲ್ಲೆಂಬುದು ಮತ್ತಿಷ್ಟು ಆಶ್ಚರ್ಯಕರವು. ಸಂಪಿನ ಪರಿಣಾಮವನ್ನು ಶಹರದೊಳಗಿನ ರಹಿವಾಸಿ ಖತರಮೇತಿ ಆಗಿತ್ತೆಂಬುದು ಎಲ್ಲರೂ ಅರಿತಿರುವರು. ಸಂಪು ಮುರಿದ ಸುಧಾರಣೆಯಾದದ್ದು ಅದೇ ದಿವಸ ಅವರಿಗೆ ತಿಳಿದದೆ. ಯಾವ ವಾರಕ್ಕೆ ಪತ್ರವು ಹೊರಡಿಸಬೇಕೆಂದಿರುವದೋ ಆ ದಿವಸದವರೆಗೆ ನಡೆದ ಸಂಗತಿಗಳು ಅದರಲ್ಲಿ ನಮೂದ ಮಾಡುವ ನಮ್ಮದೊಂದು ತತ್ವವು. ಎಂದೇ ನಮ್ಮ ಅಡಚಣೆಯ ಮೂಲಕ ನಿರುಪಾಯದಿಂದ ಆ ದಿವಸ ಪ್ರಸಿದ್ಧಿಸಲಿಕ್ಕಾಗದಿದ್ದರೆ, ನಮ್ಮ ಉಪಾಯವೇನಿಲ್ಲ. ಆದರೂ ನಮ್ಮ ತತ್ವವನ್ನು ಬಿಟ್ಟು ವಿಸಂಗತರಾಗಬೇಕಾಗಿ ಹೇಳುವ ಈ ಉಪದೇಶಕರಿಗೆ ಅಭಿನಂದಿಸಿದಷ್ಟು ಕಡಿಮೆ. ನಮ್ಮ ಈ ಪರಿಸ್ಥಿತಿಯಲ್ಲಿ ಅವರೇ ಪತ್ರಕರ್ತರಿದ್ದರೆ, ಹೀಗೇ ವರ್ತಿಸುತ್ತಿದ್ದರೋ ದೇನು ಸ್ವಲ್ಪ ತಿಳಿಯುವದಿಲ್ಲ. ಹತ್ತನೇ ತಾರೀಖಿನ ಸುಧಾರಣೆಯ ಸಂಗತಿಯು ಮುಂದಿನ ಸಂಚಿಕೆಯಲ್ಲಿ ಬಂದೇ ಬರತಕ್ಕದ್ದೆಂದು ಅವರು ತಿಳಿದರೂ, ಪತ್ರದ ಪೂರ್ಣ ತಯಾರಿಯಾದ ಕಡೆ ದಿನ ಅಂದರೆ— ತಾ ೧೫ ನೇ ೧೮ ಪ ಟಿಸ— ವ ಪತ್ರದ ಆ ಲೇಖವನ್ನು ಕಳುಹಿಸಿದ್ದರ ಉದ್ದೇಶವೇನೋ ವಾಚಕರು ತರ್ಕ ಮಾಡದೆ ಬಿಡುವದಿಲ್ಲ. ಯಾವನಿದ್ದರೆ, ಅಪರಾಧರೂ ಶತಶಃ ಕೃತ್ಯಗಳಲ್ಲೊಬ್ಬರಾಗಿರುವದು ಎಲ್ಲರೂ ಅರಿತಿರುವರು. ಇದ್ದರಿಂದ ಆ ಲೇಖವು ಪ್ರಸಿದ್ಧಿಸಲ್ಪಡುವದು ಸ್ಪಷ್ಟತ್ರವೂ ಈ ಕಾರ್ಯಕಾರಿ ಮಂಡಳ (office bearers) ರು ಜರಗಿಸಿದ ಸುಧಾರಣೆಗಳ ಸಂಗತಿ ಬಿಟ್ಟು ಒಡನೆ ಅಭಿನಂದಿಸಿದರೆ ಇದರಲ್ಲಿಯೇ ವಿಶೇಷ ಶ್ರೇಯವಿತ್ತೆಂದು. ಇವರ ಲಕ್ಷ್ಯಕ್ಕೆ ಬಾರದಿದ್ದದ್ದು ಆಶ್ಚರ್ಯ! ಇದೀಗ "ಅಹೋ ರೂಪಂ ಅಹೋ ಧ್ವನಿಃ" ಎಂಬಂತಾಗಿದೆಯಲ್ಲವೇ? ಜಾಡಮಾಲಿ ಭಂಗಿ ಜನರು ಎಷ್ಟು ಕಾಲದಿಂದ ತಮ್ಮ ಪಗಾರ ಏರಿಕೆಯ ಬಗ್ಗೆ ಗದ್ದಲ ಮಾಡುತ್ತಿದ್ದರೆಂದು ಇವರು ಮುನಿಸಿಪಾಲಿಟಿಯ ಹೆಸರನ್ನು ಕೆಡಿಸಲು ತತ್ಪರರಾಗಿದ್ದ ಈ ಲೇಖಕರು ಚೌಕಶಿ ಮಾಡಿರುವರೇನು? ಐದನೇ ತಾರೀಖಿಗೆ ಸಂಪು ಪ್ರಾರಂಭವಾಗಿ ೧೦ ನೇ ತಾರೀಖಿಗೆ ಅದಕ್ಕೆ ಕಾರಣ ಸಾಕ್ಷಿಯಾದ ಭಂಗಿಯರೂ ಸಹ ಕೂಡಿದ್ದತೆಂದು, ಅವರಿಗೆ ಹಾಕಿದ ಬಂದೋಬಸ್ತಿನ ಸಮಾಜೋಪಾಯ ವ್ಯರ್ಥವಾಯಿತೆಂದು ಒಳಿದೊಡನೆ ಕಮಿಟಿ ಕೂಡಿಸಿ, ೩ ನೇ ತಾರೀಖಿನ ಈಗಿನ ಒಪ್ಪಿಗೆ ಕಾಯ್ದೆಯ ಅನುಸಾರದಿಂದ ಸಂಪು ಮುರಿದರೆ, ಎಲ್ಲ ಕಮಿಟಿ ಮೆಂಬರರೂ ಇವರಂಥ ಕರ್ತವ್ಯದಕ್ಷರಾದರೂ ಸಹ ೩ ವರ್ಷ ಈ ಗಲಾಟೆ ದಿವಸಗಳಾದರೂ ರೋಗ ಕಿಡಿ ಮುಸಿದ ಅಸಹ್ಯ ಯಾತನೆಗಳನ್ನು ಹೋಗಲಾಡಿಸಿದ್ದಕ್ಕೆ ಯಾರು ಮತ್ತಿಷ್ಟು ಅಭಿನಂದನಗಳು, ಎಲ್ಲ ಶ್ರೇಯಸ್ಸಿಗೂ ಪಾತ್ರರಾಗುತ್ತಿದ್ದರೆಂಬುದು ಇವರ ಲಕ್ಷ್ಯಕ್ಕೆ ಬರಲಿಲ್ಲವೇ? ಈ ಒಂದು ಲೇಖದ ಗಂಟಿನಿಂದ ತಮ್ಮ ಜಾಡ್ಯ ದೇವತೆಗಳನ್ನು ಎತ್ತಿ ಹಿಡಿಯುವದೆಂದು ಉದ್ದೇಶವು ಇವರ ಎಲ್ಲ ಆರೋಪಿಗಳನ್ನು ಬಗ್ಗಿಸಿಯುಲು ಪ್ರಯತ್ನಿಸುವ ಉದ್ದೇಶವು ಸಿದ್ಧವಿಲ್ಲೆಂದು ನಾವು ತಿಳಿಯಬಹುದಾದರೂ, ಅದರಿಂದ "वस्त्राचे तेल वाण्याचे" ಎಂಬಂತೆ, ಅವರ ಮನಸ್ಸಿನ ಉದ್ದೇಶ ಸಹ ಇರುವದೆಂದ ಅನುಮಾನಿಸಿದರೆ ಅತಿಶಯೋಕ್ತಿಯಾಗದು. ಅಂತಃಪರಿಸ್ಥಿತಿ ಬಲ್ಲವರು ತಿಳಿಯುವರು.

— ✦ —

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆಯು ಸಾಧಾರಣ ಇಪ್ಪೊಂದಿಗೆ [illegible] ಇಂಚು ಆಯಿತು. ರೋಗರಾಯಿಗೇನು ಕಡಿಮೆ ಇಲ್ಲ. ಮೈಲಿಯೂ ಸಹ ಅಲ್ಲಲ್ಲಿ ಹಬ್ಬಿದೆ.

ಮುಂಬಯಿ ಬೋಟಿಯಿಂದ ೫೦೦ ಚೀಲ ಸಕ್ಕರೆ ಬಂದಿದ್ದು ಮಾತ್ರ. ಅದರಲ್ಲಿ ೩೪ ಚೀಲ ಸಕ್ಕರೆ ಬಂದದ್ದು ಮಾತ್ರ ಆಶ್ಚರ್ಯ. ಇದು ವ್ಯಾಪಾರಿಗಳೊಳಗಿನ ದೌರಬಲ್ಯವೆಂದು ಹೇಳ್ವಡುತ್ತಿರುವರು.

ಈ ತಿಂಗಳ ೩ಾ ೫ಲ ಸೇಗೆ ಇಲ್ಲಿಯ ಸೇತಕಿ ಫಾರ್ಮಿನಲ್ಲಿ ಹೋದವರ್ಷದಂತೆ ಪ್ರಾತ್ಯಕ್ಷಿಕೆಗಳು ಮಾಡುವವರಿದ್ದಾರಂತೆ!

[illegible] ಜನ ಮಿ. ವಿ. ಕೊಯಿಮುತ್ತೂರ ಸಾಹೇಬರು ಮಾಹಿರವಕ್ಕೆ ಸರಿಯಾಗಿ ಛಟ್ಟಳಕ್ಕೆ ಅಫೀಸ ವಗೈರೆ ಇಲ್ಲದೆ ಬಂಟಿಗರಾಗಿ ಹೋದವರು ಈಹೊತ್ತು ಆ ಕಡೆಯಿಂದ ಇಲ್ಲಿ ತಿರುಗಿ ಬಂದಿರುವರೆ. ಅವರ ಆಗಮನದ ಉದ್ದೇಶವೇನು ತಿಳಿಯದು.

ಈ ತಾಲೂಕ ಕಾಂಗ್ರೆಸ ಕಮೀಟಿಯವರು [illegible] ನೂರ ಕೈರಾಟಿಗಳನ್ನು ಮಾಡಿಸುವ ಕಂಟ್ರಾಕ್ಟು ಕೊಡಲ್ಪಟ್ಟಿದೆ.

ಇಲ್ಲಿಯ ಶ್ರೀ [illegible] ರಾವ ಸೊಯಿರೋಬಾ [illegible] ಸರಕಾರದಲ್ಲಿ ಎರಡು ಕೈರಾಟಿಗಳಿಂದ ನೂಲು ತೆಗೆವ ಸಪ್ತಾಹ (ಹಗಲಿರುಳು) ನಡೆದಿದೆ.

ಕುಮಟಾ-ಹೊನ್ನಾವರ [illegible] ಕಂಪನಿಗೆ ಸಾದರುಪಡಿಸಿದ [illegible] ದರಗಳೂ ಸರ್ಕಾರದ ವರಿಷ್ಟ ಅಧಿಕಾರಿಗಳಿಂದ ಮಂಜೂರ ಆದ ಹೊರ್ತು [illegible] ನಿಶ್ಚಯವಾಗಿ ನಕ್ಕ ಹುಕುಮ ಕೊಟ್ಟರೂ, ಅಷ್ಟು ದಿವಸವೂ [illegible] ಬೋಲಿಸ ಸಬ [illegible] ಇವರ ಕಡೆಗೆ ಲಕ್ಷಕೊಡುವರೇನು?

[illegible] ದಿವಸಗಳಿಂದ ಹೊಸ ಅಡಕೆ ಬರಹತ್ತಿದೆ. ದಾರಣೆ [illegible] ತೇಜಿಯಾಗಿ ಇಳಿಯುಹತ್ತಿದೆ. ಇದಕ್ಕೆ ಮಾತ್ರ ಇನ್ನೂ ವ್ಯಾಪಾರಿಗಳಲ್ಲಿಯೇ ಆಗುತ್ತಿದೆ. [illegible] ಸ್ವಾರ್ಥಕ್ಕೆ ಕಣ್ಣು ಇಲ್ಲವೆಂಬಂತಾಗಿದೆ [illegible]

ಹೊನ್ನಾವರ— ತಾ ೧೯ ನೇ ದಿವಸ ಕೋರ್ಟಿನ ಕಾರ್ಯಾಲಯದಲ್ಲಿ ಕರೆದಿದ್ದ ಸಾಧಾರಣ ಸಭೆಯಲ್ಲಿ ಇಲ್ಲಿಯ ಎಲ್ಲಾ ವ್ಯಾಪಾರಿಗಳೂ ಮತ್ತು ದುಕಾನದಾರರೂ, ಚಹಾ ದುಕಾನದಾರರೂ ಸಹಾ ತಾವು ಬರುವ ಅಕ್ಟೋಬರ ೧ ನೇ ತಾರೀಖಿನಿಂದ ಪರದೇಶೀ ಮಾಲಿಗೆ ಹೆಚ್ಚಾಗಿ ಸಕ್ಕರೆ ಅರುವೆ ಇದನ್ನು ಪೂರ್ಣ ಬಹಿಷ್ಕಾರ ಹಾಕುತ್ತೇವೆಂತ ಪ್ರತಿಜ್ಞಾ ಲೇಖದಮೇಲೆ ಸಹಿ ಮಾಡಿರತ್ತಾರೆ. ಇದು ಅಲ್ಲೀ [illegible] ಕೈದುಮಾಡಿದ್ದರ ಪರಿಣಾಮವು.

ತಾ ೨೧ ನೇ ದಿವಸ ಇಲ್ಲಿಯ ಹತ್ತುಜನರ ಮುದ್ದೆ ಕೊಡಲ್ಪಟ್ಟಿರುವ ಸ್ವಾಮಿ ಶಾಂತಾನಂದರ ಹರಿಕೀರ್ತನವಾಯಿತು. ಕೀರ್ತನದ ನಿರೂಪಣವು ಪಕ್ಷಪಾತ ಹರಣದ ಕಥಾನಕದಿಂದ ಕೂಡಿದ ಜನಸಮುದಾಯದ ಮನಸ್ಸಿಗೆ ಒಳ್ಳೇ ಪರಿಣಾಮವಾಯಿತು. ಮೇಜಿಸ್ಟ್ರೇಟರ [illegible] ಹುಕುಮದ ಮೊದಲಿನ ದಿವಸ ಆಗಿರುತ್ತ ಈ ರೀತಿ ಕೀರ್ತನೆ ಮತ್ತು ಭಾಷಣಗಳು ಮಾಡಿದ್ದು, ಅವರಿಗೆ ವಾರ್ಷದವು ಕೀರ್ತನೆ ಮುಗಿದಮೇಲೆ ಶ್ರೀ [illegible] ದಾನ ಬೈ ಮತ್ತು ಅನಂತಯ್ಯನವರ ವರ್ತಮಾನದಮೇಲೆ ವ[illegible] ಪರಿಣಾಮಕಾರಕ ಭಾಷಣಗಳಾದವು.

ಹಳದೀಪುರದ [illegible] ಸಭಾಬಂದೀ ಲಾಗುಮಾಡಿರತ್ತದಾಗಿ [illegible] ಈ ರೀತಿ ಬೇಕಾಯಿದೇಶೀರ [illegible] ಮಾಡಿದ್ದ [illegible] ಅಸಹಕಾರಿತೆಯ ಚಳವಳಿಯು ನಿಲ್ಲುವದೆಂಬುದ[illegible] ತಿಳಿಯಬೇಕು.

ಇಲ್ಲಿಯ ಮೇಜಿಸ್ಟ್ರೇಟರ ಸಭಾಬಂದೀ ಹುಕುಮು ಬೇಕಾಯಿದೇಶೀರ ಇರುವದರಿಂದ ಹೊನ್ನಾವರದ ನಾಗರೀಕರು ಈ ಹೊತ್ತು ತಾ ೨೧ ನೇ ದಿವಸ ಟಪ್ಪರಹೋಳಿಯಲ್ಲಿ ಮಧ್ಯಾಹ್ನ ೫ ಘಂಟೆಗೆ ಸಾರ್ವಜನಿಕ ಸಭೆಯಲ್ಲಿ ಶ್ರೀಯುತ ಬಸ್ರೂರ, ಒಳಕೂರ, ಕುವಟೆಯಿಂದ ಬಂದ ಶ್ರೀ ಕಲ್ಯಾಣಪುರಕರ ಮಾಸೂರಕರ ಇವರ ಭಾಷಣಗಳಾಗತಕ್ಕದಿರುತ್ತವಂತೆ.

ಎಮ್. ಪಿ. [illegible] ಇವರ ಕೊಳಗದೆಯ ಸಭೆಯ ಭಾಷಣದಲ್ಲಿ [illegible] ಹೋಗಿ ತಾಳಿಕಕ್ಕ ತಕ್ಕೊಂಡು [illegible] ಉತ್ತೇಜನ ಕೊಟ್ಟಿರಂಬಹುಗೆ ಅವರಮೇಲೆ ಫಿರ್ಯಾದು ಉಂಟುಮಾಡುವ ಬಗ್ಗೆ ಇಲ್ಲಿಯ ಪೋಲೀಸ ಅಧಿಕಾರಿಯು ಒತ್ತಾಯದಿಂದ ರುಜುವಾತ ಜಾರಿಮಾಡುತ್ತ ನಡೆದದಂತೆ.

ತಾಳೀಚಕ್ಕಯ ವರದಿ [illegible] ರಿದ್ದವ ಬಾಲಕ ಬಾಲೆಯರು ಬಹಳೇ ಪೇಚಿನಲ್ಲಿ ಬಿದ್ದಿರುತ್ತಾರೆ.

ಸಿದ್ದಾಪುರ— ಕಾಂಗ್ರೆಸ ಆಫೀಸಿನಲ್ಲಿ ಶ್ರೀ ನಾಡಿಗ ಇವರ ಅಧ್ಯಕ್ಷತೆ ಕೆಳಗೆ ಸಭೆಗೂಡಿತ್ತು. ಶ್ರೀ ಬಟಕಳಕರವರ ಇಲ್ಲಿದೆ [illegible] ವ ಸಲ್ಮಾನರಲ್ಲಿ ಸಲ್ಲಾಮೂಂದು ವ್ಯಾಜ್ಯ [illegible] ಸಲ್ಲದಕ್ಕೆ ಮುಯ್ಯಾದಿ ಮುಸಲ್ಮಾನ [illegible] ಜವರ ಎಲ್ಲಾ ಕಡೆಗೆ ಹಿಂದೂ-ಮುಸಲ್ಮಾನರ ಐಕ್ಯತ್ಯ [illegible] ಇಲ್ಲಿ ಮಾತ್ರ [illegible] ಆಗತಕ್ಕದ್ದು [illegible] ಅಲ್ಲ [illegible] ಕಾರ್ಯಗಳನ್ನು ಕೊಡತಕ್ತ [illegible] ವಲಯಕ್ಕೆ [illegible] ಮುಸಲ್ಮಾನರಲ್ಲಿಯ ವೈರಕ್ಷವ [illegible] ಆಗತಕ್ಕದ್ದು [illegible] ಕೈಕಟ್ಟಲ್ಲಿ [illegible] ಸದರವ [illegible]

[illegible] ಹಿಂದು ಜನರ [illegible] ಇನ್ನುವೆ [illegible] ಹಿಂದು ಜನರಿಗೆ [illegible] ಗೋವಧ ವಗ್ಗೆರೆ ಯಾವ ದನ್ನು ಕೆಲಸ ಮಾಡ [illegible] ಕಾಂಗ್ರೆಸ ಕಮಿಟಿಯನ್ನು [illegible] ಕಾಂಗ್ರೆಸ ಕಮೀಟಿಗೆ [illegible] ಸಭಾ ಭಾಷಣ ಮಾಡಿದ ನಂತರ [illegible] ಅಲ್ಲಿಂದ ಮಾರನೇ ದಿವಸ [illegible] ಹಿಂದೂ ಮುಸಲ್ಮಾನರ ವಿನತಿ [illegible] ಶ್ರೀ ನಾಗೇಶ ಸುಬ್ರಾವ ಹಾಸ್ಯಗಾರ ಶ್ರೀ ಬಟಕಳಕರ ವಗೈರೆ ಎಲ್ಲರು ಹೋಗಿ ಅಲ್ಲಿಯ ಹಿಂದೂ ಮುಸಲ್ಮಾನರ [illegible] ಹಿಂದೂ ಮುಸಲ್ಮಾನರು ಪ್ರೇಮದಿಂದ ನಡೆಸಲಿಕ್ಕೆ [illegible] ಮಾಡಿದ್ದಕ್ಕೆ ಅಲ್ಲಿಯ ಹಿಂದೂ-ಮುಸಲ್ಮಾನರ [illegible] ೧೯ ನೇ ಸೋಮವಾರ ದಿವಸ ಇಲ್ಲಿ ಜಾಹೀರ [illegible] ಕಾಂಗ್ರೆಸ ಕಮೀಟಿ ಸ್ಥಾಪಿಸುತ್ತೇವಾಗಿ ಇಲ್ಲಿಯ ಮುಖಂಡರು ವಚನಕೊಟ್ಟದ್ದಾಗಿ ತಿಳಿಯುತ್ತದೆ. ಮತ್ತು ಇಲ್ಲಿಯ ಕಾಂಗ್ರೆಸ ಕಮೀಟಿಯವರೂ ಗ್ರಾಮಸಂಸ್ಥೆಗಳನ್ನು ಸ್ಥಾಪಿಸುವರೇ ಅಲ್ಲಲ್ಲಿ ತಿರುಗಾಡಹತ್ತಿದ್ದಾರೆ.

ಹೊನ್ನಾವರದಿಂದ ತಾಜಾ ಬಾತ್ಮಿ

ತಾ ೧೯ ನೇ ದಿವಸ ಬೆಳಿಗ್ಗೆ ಮುಸಲ್ಮಾನ ಶೌಕತ ಅಲ್ಲಿಯವರಿಗೆ ದಸ್ತಗಿರಿ ಮಾಡಿದ ವರ್ತಮಾನ ಊರಲ್ಲೆಲ್ಲ ಹಬ್ಬಿತು. ಇದನ್ನು ಕೇಳಿಕೊಳ್ಳಲಿಕ್ಕೆ ಜನರ ಗುಂಪು ಕಾಂಗ್ರೆಸ ಆಫೀಸಿಗೆ ಬರಹತ್ತಿತು. ಶೌಕತ ಅಲ್ಲಿಯವರಿಗೆ ದಸ್ತಗಿರಿ ಮಾಡಿದ ಸಂಗತಿಯನ್ನೂ ಶಾಂತತೆಯಿಂದ ನಡೆಯುವರೆ ಮಹಾತ್ಮರ ಸಂದೇಶವನ್ನೂ ಜನರಿಗೆ ಹೇಳಿ, ಹರತಾಳ, ಪ್ರದರ್ಶನ ಜಾಹೀರ ಸಭೆ ಕೂಡಾ ಮಾಡಬಾರದಾಗಿ ತಿಳಿಸಲಾಯಿತು. ಅದರಂತೆ ಎಲ್ಲ ಜನರು ಶಾಂತತೆಯಿಂದ ಪ್ರತಿನಿತ್ಯದಂತೆ ವ್ಯವಹಾರಮಾಡಿಕೊಡಗಿದರು.

ತಾ ೨೦ ನೇ ದಿವಸ ಮಹಮ್ಮದಲ್ಲಿಯವರಿಗೂ, ಡಾ. ಕಿಚಲುಯವರಿಗೂ ದಸ್ತಗಿರಿ ಆದ ವರ್ತಮಾನ ತಿಳಿಯಿತು. ಇದನ್ನು ಕೇಳಿ ಬಹಳ ಜನರು [illegible] ಟ್ಟರು. ಮುಂಚಿತವಾಗಿಯೇ ಕಾಂಗ್ರೆಸ ಕಮಿಟಿಯವರು [illegible] ಪ್ರದರ್ಶಕ ಸಭೆಯಾಗಲಿ, ಹರತಾಳವಾಗಲಿ, ಮಾಡಕೂಡದೆಂತ ಜಾಹೀರಮಾಡಿದ್ದರಿಂದ, ಹರತಾಳ ವಗೈರೆ ಆಗಿಲ್ಲ.

ಮಧ್ಯಾಹ್ನದ ನಂತರ ರಹಾಟಿ ಪ್ರಚಾರವಾಡುವ ಬಗ್ಗೆ ಹಾಗೂ ಸ್ವದೇಶಿ ಪ್ರಚಾರಮಾಡುವಬಗ್ಗೆ ಒಂದು ಸಭೆಯನ್ನು ಟಪ್ಪರ ಹೋಳಿನಲ್ಲಿ ಕರೆಯಬೇಕೆಂತ ನಿಶ್ಚಯಿಸಿತು. ಊರಲ್ಲೆಲ್ಲ ಈ ಹೊತ್ತು [illegible] ಜನರಿಗೆ ಕೈದುಮಾಡುವವರಿದ್ದಾರಾಗಿ ವದಂತಿ ಹಬ್ಬಿರುವದರಿಂದ, ಸಭೆಮಾಡುವದು ಯೋಗ್ಯವಲ್ಲಾ ಎಂತ ಕೆಲ ಹಿತಚಿಂತಕರು ಸೂಚನೆಮಾಡಿದರು ಆದರೆ, ಈ ಸಭೆ ಮಾತ್ರ ಬಂದಮಾಡಿದರೆ, ಕರ್ತವ್ಯ ಪರಾಙ್ಮುಖರಾದ ದೋಷಕ್ಕೆ ಪಾತ್ರರಾಗಬೇಕಾದೀತೆಂತ ತಿಳಿದು ಈ ಸೂಚನೆ ಮಾನ್ಯಮಾಡಲಿಲ್ಲ. ಸಭೆಯಲ್ಲಿ ಬಹಳ ಶಾಂತತೆಯಿಂದ ನಡಕೊಳ್ಳುವಂತೆ ಎಲ್ಲಾ ತರದ ವ್ಯವಸ್ಥೆಯಾಗಿ ಕಾರ್ಯಕ್ರಮ ಸಹ ರಚಿಸಲ್ಪಟ್ಟಿತು. ಸಭೆಯಲ್ಲಿ ಚರಕಾ ಪ್ರಸಾರದ ಮತ್ತು ಸ್ವದೇಶಿ ಪ್ರಸಾರದ ಈ ವಿಷಯದಲ್ಲಿ ದೇ. ಬಸ್ರೂರ, ಒಳಕೂರ, ಶಾಸ್ತ್ರಿ, ಈ ಮೂವರು ಮಾತ್ರ ಮಾತಾಡಬೇಕೆಂತ ರಚಿಸಲ್ಪಟ್ಟಿತು. ಅದರಂತೆ ಮಧ್ಯಾಹ್ನ ೬ ಘಂಟೆಗೆ ಟಪ್ಪರಹೋಳಿನಲ್ಲಿ ಜನರ ಸಮೂಹವು ನೆರೆಯಿತು. ಶ್ರೀ ಶಾಸ್ತ್ರಿಯವರು ಟಪ್ಪರಹೋಳಿಗೆ ಬರುವಾಗ ದಾರಿಯಮೇಲೆಯೇ ಹೊನ್ನಾವರ ಮೆಜಿಸ್ಟ್ರೇಟರ ಭಾಷಣಬಂದಿಯ ಹುಕುಮು "ಪರದೇಶ ಬಹಿಷ್ಕಾರ" ಪೋಲೀಸ ಅಧಿಕಾರಿಯು ಒಂದು ಹುಕುಂ ತೋರಿಸಿದರು. ಅದನ್ನು ನೋಡಿ, ಈ ಹುಕುಮು ಬೇಕಾಯಿದೇಶೀರ ಇರುವದರಿಂದ ತಾನು ಕೊಳ್ಳುವದಿಲ್ಲವಾಗಿ ಹೇಳಿ ಟಪ್ಪರಹೋಳಿಗೆ ನಡೆದರು. ಅಲ್ಲಿ ಸಭೆಕೂಡುವ ತಯಾರಿಯಾಗುವಷ್ಟರಲ್ಲಿ ೬॥ ಘಂಟೆಸುಮಾರಕ್ಕೆ ೮ ಪೂ. ಅ[illegible] ಸೇದರ ಅಧ್ಯಕ್ಷ ಭಾಷಣ ಮಾಡಬಾರದೆಂತ ಶ್ರೀ. ಶಾಸ್ತ್ರಿ ಎಮ್. ಪಿ. ನಾಡಕರ್ಣಿ, ದೇವಣ್ಣಾ ಕೊಪ್ಪಿಕರ ಇವರಮೇಲ ಹುಕುಮು ಜಾರಿಮಾಡಿದರು. ಹಾಗೂ ಇಲ್ಲಿಯ ತಾಲೂಕ ಕಚೇರಿಯ ಆಪವಾರ ೫ ಮೈಲಿನ ಒಳಗೆ ಸಭೆ ವಗೈರೆ ಕೂಡಬಾರದಾಗಿ (ನೋಟೀಸಿನ ಕುತಾರು ಜೀರಕಡೆಗೆ ಕೊಟ್ಟರುತ್ತದೆ) ಬೆಮಕಿನಿಂಬಿಂ ಜಾಹೀರಮಾಡಿದ್ದಲ್ಲದ, ಮಾರ್ಗಗಳ ಮಧ್ಯ ಸ್ಥಳಗಳಲ್ಲಿ ಗೋಷಣ ನೋಟೀಸುಗಳ ಸಹಾ ಅಂಟಿಸಲಾದವು. ಇಂಥ ಬೇಕಾಯಿದೇಶೀರ ಹುಕುಮು ಅನಾದರಣೀಯವಾದ ಬೇಕೋ ಹ್ಯಾಗೆ ಎಂಬ ಬಗ್ಗೆ ಬಹಳೇ ಚರ್ಚೆಗಳಾಗಿ [illegible] ತ್ತೆಯಾದೀತೆಂತ ಸಭೆಯ ಕಾರ್ಯವು ಮುಂದರಿಸಲ್ಪಟ್ಟಿತು.

ಮಾರನೇದಿವಸ ಇಂಥಾ ಬೇಕಾಯಿದೇಶೀರ ಹುಕುಮು ಮನ್ನಿಸಬಾರದೆಂತ ಬಹಿರಂಗವಾಗಿ, ಆ ಹುಕುಮು ಅನಾದರಣೀಯದಲ್ಲಿ ಭಾಗ ಹಾಕುವ ದಾದರೆ ಜೈಲಿಗೆ ಹೋಗುವದೆ [illegible] ತಯಾರ ಇದ್ದವೆಂತ ೪೩ ಜನರು ಹೆಸರುಕೊಟ್ಟಿರುತ್ತಾರೆ.

ಈ ರೀತಿಯ ದಡಪಶಾಹಿ ಸರಕಾರದ ಜನರಿಗೆ ಇವರು ಜೈಲಿನ ಭೀತಿಯ[illegible] ಇವರೇ ಮುದ್ದಕಮಾಡಿದಂತೆ ಆಯಿತು.

[**ತಾಜಾ ಬಾತ್ಮಿ**— ಕಟ್ಟಕಡೆಗೆ [illegible] ಕುಮುಕ್ಕು ಆಪವಾಸ್ಯ ಮಾಡಿ, ಶ್ರೀ ಒಳಕೂರರವರ ಅಧ್ಯಕ್ಷತೆಯಲ್ಲಿ ಜನರು ನೆರೆದು, ಅಲ್ಲೀ ಬಂದ[illegible] ಗಳ ನಿರಪರಾಧಿಯೆಂದೂ ಶಾಂತತಾಭಂಗವಾಗಬಾರದೆಂದೂ ಮತ್ತು ಮಹಾತ್ಮರ ಸಂದೇಶಗಳನ್ನು ಓದಿ ಹೇಳಲಾಯಿತೆಂದೂ ವಗೈರೆ ತಿಳಿಯುತ್ತದೆ.

ಅಲ್ಲಿ ಬಂಧುಗಳ ಗಿರಫದಾರಿ !

ಮೌಲಾನಾ ಮಹಮ್ಮದ ಅಲ್ಲಿಯವರ

ಸಂದೇಶ

ಸ್ವತಂತ್ರ ಹಿಂದುಸ್ಥಾನವು ನನಗೆ

ಬಿಡುಗಡೆ ಮಾಡಬೇಕು.

ಕರಾಚಿ ಖಿಲಾಫತ ಪರಿಷತ್ತಿನಲ್ಲಿ ಕಳೆದ ೮-೧೦ ಜುಲೈ ದಿವಸ ಪಾಸು ಮಾಡುವ ಠರಾವುಗಳ ವಿಷಯವಾಗಿ, ರಾಮಪುರದ ಮೌಸರ್ ಶೌಕತ ಅಲ್ಲಿ ಮುಹಮ್ಮದ ಅಲ್ಲಿ ಮೊದಲಾದವರನ್ನು ಪೀನಲ ಕೋಡಿನ ೧೨೦ ಬಿ ೧೩೧ ಮತ್ತು ೫೦೫ ಕಲಮುಗಳನ್ವಯ, ಮುಂಬಯಿ ಸರಕಾರವು ಖಟ್ಲೆ ಮಾಡುವ ನಿರ್ಣಯವನ್ನು ಪ್ರಸನೋಟ್ ದ್ವಾರಾ ಕಳೆದ ಗುರುವಾರ ಸಾಯಂಕಾಲಕ್ಕೆ ಪ್ರಕಟಿಸಿತು. ಈ ಪ್ರಸನೋಟಿನಲ್ಲಿ ಇತರ ಆರೋಪಗಳ ಸಂಗಡ 'ಈ ಪರಿಸ್ಥಿತಿಯಲ್ಲಿ ಯಾವನೊಬ್ಬ ಮುಸಲ್ಮಾನನು ಬ್ರಿಟಿಶ ಸೈನ್ಯದಲ್ಲಿ ಸೇವೆ ಮಾಡುವದು, ಅಥವಾ ಅಲ್ಲಿ ಸೇವೆ ಮಾಡುವದಕ್ಕಾಗಿ, ಅನ್ಯ ಮುಹಮ್ಮದೀಯರ ಮನಸ್ಸನ್ನು ಒಲಿಸುವದು, ಧಾರ್ಮಿಕ ಅಪರಾಧವೆಂದು ಮುಸಲ್ಮಾನರಿಗೆಲ್ಲ ತಿಳಿಸಿ ಹೇಳುವದು ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವಿರುವದು. ಹಿಂದೀ ಸೈನ್ಯದ ರಾಜನಿಷ್ಠೆಯ ಮೇಲೆ, ಹಿಂದುಸ್ಥಾನದ ಶಾಂತತೆಯೂ ಸುರಕ್ಷಿತತೆಯೂ ಅವಲಂಬಿಸಿರುತ್ತದೆ. ಈ ಸಂಗತಿಯನ್ನು ಲಕ್ಷಿಸಿದರೆ, ರಾಜನಿಷ್ಠೆಯನ್ನು ಕಲುಷಿತ ಮಾಡುವದು ಯತ್ನಿಸುವವರಿಗೆ ಎಲ್ಲರೂ ತಿರಸ್ಕಾರ ಮಾಡುವರು, ಮತ್ತು ಅವರಿಗೆ ವಿರೋಧಿಸಲಿಕ್ಕೆ ಸಿದ್ಧರಾಗುವವರೆಂದು ಸರಕಾರಕ್ಕೆ ನಂಬಿಗೆಯಿದೆ.

ಈ ಪ್ರಸನೋಟಿನಂತೆ, ಗುರುವಾರ ರಾತ್ರಿ ೨ ಘಂಟೆಗೆ ಮುಂಬಯಿಯ ಮಧ್ಯವರ್ತಿ ಖಿಲಾಫತ ಕಮಿಟಿಯ ಕಚೇರಿಯಲ್ಲಿ ಖಾನ ಬಹಾದೂರ. ಪಟಗಾರ ಇವರು ವಾರಂಟು ಜ್ಯಾರಿ ಮಾಡಿದರು. ಮೌಲಾನಾ ಶೌಕತ ಅಲ್ಲಿಯವರು ಅದನ್ನು ಅತಿ ಸಂತೋಷದಿಂದ ಸ್ವೀಕರಿಸಿ, ಪೋಲೀಸರ ಸ್ವಾಧೀನರಾದರು. ಶುಕ್ರವಾರ ಮಧ್ಯಾಹ್ನ ೧ ಘಂಟೆಗೆ ಬಿ. ಎಸ್. ಎನ್. ಕಂಪನಿಯ ಬ್ಯಾಸಾರೋಟಿಯ ಮೇಲೆ ಹಾಕಿ, ಮೌಲಾನಾರವರನ್ನು ಕರಾಚಿಗೆ ಒಯ್ದರು. ಮುಂಬಯಿಯಲ್ಲಿ ಮಿ। ಉಮರ ಸೋಬಾನಿ, ಸೌ। ಸರೋಜಿನೀ ನಾಯಡೂ ಇವರು ಮುಹಮ್ಮದೀ ಬಾಂಧವರಿಗೆಲ್ಲ ಶಾಂತತೆಯಿಂದ ವರ್ತಿಸಬೇಕೆಂದು ಉಪದೇಶಿಸಿದ್ದರಿಂದ, ಮುಂಬಯಿಯು ಆ ದಿವಸ ಅತಿ ಶಾಂತವಿತ್ತು. ಮೌ॥ ಶೌಕತ ಅಲ್ಲಿಯವರ ಇಚ್ಛೆಯಂತೆ, ಶುಕ್ರವಾರದಿವಸ ಹರತಾಳ ವಗೈರೆ ಏನೂ ಆಗಲಿಲ್ಲ.

ಮೌಲಾನಾ ಮುಹಮ್ಮದ ಅಲ್ಲಿಯವರಿಗೆ ವೊಲ್ಟೇರ ಸ್ಟೇಶನದಲ್ಲಿ ಹಿಡಿದರು. ಮೌಲಾನಾರವರು ಮೊದಲಿನ ಕಾರ್ಯಕ್ರಮದಂತೆ, ಮಹಾತ್ಮಾ ಗಾಂಧೀ, ಬೇಗಮ ಮಹಮ್ಮದ ಅಲ್ಲಿ ಮೊದಲಾದವರಸಹಿತ ಕಲಕತ್ತೆಯ ಮದ್ರಾಸ ಮಾರ್ಗವಾಗಿ ಪ್ರಯಾಣ ಮಾಡುತ್ತಿದ್ದರು. ಹಾದಿಯಲ್ಲಿ ವೊಲ್ಟೇರ ಸ್ಟೇಶನದಲ್ಲಿ ಕಳೆದ ಬುಧವಾರ ಸಾಯಂಕಾಲಕ್ಕೆ ವಿಜಗಪಟ್ಟಣದ ಡಿ। ಮೆಜಿಸ್ಟ್ರೇಟರ ಹುಕುಮಿನಂತೆ ವಾರಂಟನ್ನು ತೋರಿಸಿ ಹಿಡಿದರು. « ಶಾಂತತೆಯನ್ನು ರಕ್ಷಿಸುವದಕ್ಕಾಗಿ, ಚಲೋ ವರ್ತನಕ್ಕಾಗಿ ಮುಹಮ್ಮದ ಅಲ್ಲಿಯವರಿಂದ ೧೦೭, ೧೦೮ ಕಲಮುಗಳನ್ವಯ ಯಾಕೆ ಜಾಮೀನಕೀ ಬೇಡಬಾರದು ?' ಎಂಬ ಮಜಕೂರು ಇತ್ತಂತೆ. ಮುಹಮ್ಮದ ಅಲ್ಲಿಯವರು ಮಹಾತ್ಮಾ ಗಾಂಧಿಯವರಿಗೆ ವಾರಂಟು ತೋರಿಸಿ, ಪೋಲೀಸರ ಸ್ವಾಧೀನರಾದರು. ಆಮೇಲೆ ಅವರ ಪತ್ನೀ ಬೇಗಮ ಮಹಮ್ಮದ ಅಲ್ಲಿ, ಮತ್ತು ಅವರ ಖಾಸಗಿ ಸೆಕ್ರೆಟರಿ ಮಿ। ಹಯಾತ ಇವರು ಬೆಟ್ಟಿಗೆ ಹೋದಾಗ, 'ನಮ್ಮ ಕಾರ್ಯವು ಮಹಾತ್ಮಾ ಗಾಂಧಿಯವರ ಕೈಯಲ್ಲಿದ್ದದರಿಂದ ನಾನು ನಿಶ್ಚಿಂತನಿರುತ್ತೇನೆ. ಸ್ವತಂತ್ರ ಹಿಂದುಸ್ಥಾನವು ನನಗೆ ಬಿಡುಗಡೆ ಮಾಡಬೇಕು ಇಷ್ಟೇ ನನ್ನ ಇಚ್ಛೆಯು" ಮಹಾತ್ಮಾ ಗಾಂಧಿಯವರು ಸ್ಟೇಶನಿನ ಹೊರಗೆ, ಮೌ॥ ಮುಹಮ್ಮದ ಅಲ್ಲಿಯವರ ಸಂಬಂಧ ಮಾತಾಡುವಾಗ, 'ಮೌಲಾನಾರವರ ಬಂದಿವಾಸವು ನಮ್ಮ ಉದ್ದಿಷ್ಟದ ಸ್ಪಷ್ಟ ಚಿನ್ಹವು. ಆದ್ದರಿಂದ ಈಗ ಶೋಕಾಕುಲರಾಗಿ ಮರುಗಬೇಡಿರಿ. ಮೌಲಾನಾರವರ ಅಟಕೆಯಿಂದ ನಿಮಗೆ ನಿಜವಾದ ಉದ್ವೇಗವಾಗುತ್ತಿದ್ದರೆ, ಸ್ವದೇಶಿಯ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅಮಲಬಜಾವಣೆ ಮಾಡಿರಿ, ಎಂದು ಭಾಷಣ ಮಾಡಿದರು. ಮೌಲಾನಾರವರಿಗೆ ಬೆಟ್ಟಿಯಾಗಲು ಮಹಾತ್ಮರ ಇಚ್ಛೆ ಇತ್ತು. ಆದರೆ ಪೋ। ಸುಪರಿಂಟೆಂಡೆಂಟರು ಹುಕುಮು ಕೊಡಲಿಲ್ಲ.

ಮ॥ ಗಾಂಧಿಗಳ ಸಂದೇಶ:—

ಮುಂಬಾಪುರವಾಸಿಗಳನ್ನುದ್ದೇಶಿಸಿ, ಮಹಾತ್ಮಾ ಗಾಂಧಿಯವರು ಕಳಿಸಿದ ಸಂದೇಶದಲ್ಲಿ ಅವರು ಹೇಳುವದೇನೆಂದರೆ — ಹರತಾಳವನ್ನು ಆಚರಿಸಬಾರದು. ಪೂರ್ಣ ಶಾಂತರೀತಿಯಿಂದ ವರ್ತಿಸಬೇಕು. ನಾವು ಶಾಂತತೆಯಿಂದ ವರ್ತಿಸಿ, ಕೆಲ ಮಾವಳೇಗಳ ಮೂರ್ಖತನವನ್ನು ಅಲಕ್ಷಿಸಿ, ಹಿಂದೂ-ಮುಹಮ್ಮದೀಯರು ಐಕ್ಯತ್ವವನ್ನು, ಐಮತ್ಯವನ್ನು ಕಾಯಂ ನಡಿಸಿದರೆ, ಹಾಗೂ ಸ್ವದೇಶೀ ವ್ರತವನ್ನು ಆಚರಿಸಿದರೆ, ಈ [illegible] ದಾರಿಯು ಸ್ವರಾಜ್ಯದ ಹಾಗು ಪಂಜಾಬ ಮತ್ತು ಖಿಲಾಫತು ಸಂಕಟಗಳ ನಿವಾರಣೆಯ ಪ್ರಸ್ತಾವನೆಯಾದೀತೆಂದು ನನ್ನ ದೃಢ ನಂಬಿಗೆಯಿದೆ. ಈ ಮುಂದೆ ಹಿಂದುಸ್ಥಾನದೊಳಗಿನ ಸ್ತ್ರೀಪುರುಷರೆಲ್ಲ ಪರದೇಶೀ ಅರಿವೆಯನ್ನು ಬಹಿಷ್ಕರಿಸುವದರಲ್ಲಿಯೂ, ಚರಕದ ಪ್ರತ್ಯೇಕ ಕ್ಷಣವನ್ನು ನೂಲುತೆಗೆಯುವದರಲ್ಲಿಯೂ, ನೇಯುವದರಲ್ಲಿಯೂ ಉಪಯೋಗಿಸಬೇಕು. ಮೌಲಾನಾ ಮಹಮ್ಮದ ಅಲ್ಲಿಯವರಂತೆ, ಪ್ರಯತ್ನದಿಂದ ಧಾರ್ಮಿಕ ಹಾಗು ರಾಷ್ಟ್ರೀಯ ಹಕ್ಕುಗಳನ್ನು ಪ್ರಾಪ್ತಮಾಡಿಕೊಳ್ಳುವ ಚಟ ಹಿಡಿದರೆ ಕಾರಾಗೃಹ ಶಿಕ್ಷೆಗಾಗಿ ನಾವು ಖಟಪಟ ಮಾಡಬೇಕು. ಮೌ॥ ಮುಹಮ್ಮದ ಅಲ್ಲಿಯವರು ಪೂರ್ಣ ನಿರ್ದೋಷಿ ಇದ್ದಾರೆಂದು ನನಗೆ ಗೊತ್ತದೆ. ನಿರಪರಾಧಿಯವರ ಕಾರಾಗೃಹವಾಸದಿಂದ ನಮ್ಮ ಕಾರ್ಯವು ಬೇಗನೆ ಸಿದ್ಧಿಗೈಯುವದೆಂದು ನಾನು ನಂಬಿರುವೆನು.

ಹೊನ್ನಾವರದಲ್ಲಿ ಸಭಾಬಂದಿ ಹುಕುಮು

ನೋಟಿಫಿಕೇಶನ.

ಈಗಿನ ಪರಿಸ್ಥಿತಿಯಲ್ಲಿ ಜನ ಸಮೂಹದಲ್ಲಿ ಭಾಷಣ ಮಾಡುವದು ಮತ್ತು ಕೆಲವು ಚಿತ್ರಗಳ ಪ್ರದರ್ಶನ ಮಾಡುವದು ಬಹುಶಃ ಸಾರ್ವಜನಿಕ ಶಾಂತತೆಯ ಭಂಗ ಆದೀತು. ಹಾಗೂ ಕಾಯಿದೆಗೆ ಆತಂಕ ಅಥವಾ ಅದರ ತಿರಸ್ಕಾರವಾದೀತು ಮತ್ತು ಕಾಯದೆಯಂತೆ ನಡೆಯುವ ಅಧಿಕಾರ ಆತಂಕ ಅಥವಾ ಅವರ ತಿರಸ್ಕಾರವಾದೀತು ಎಂದು ಹೊನ್ನಾವರದ ೧ನೇ ವರ್ಗದ ಮೇಜಿಸ್ಟ್ರೇಟರಾದ ನನ್ನ ಅಭಿಪ್ರಾಯ ಆಗಿರುತ್ತದೆ.

ಆದ್ದರಿಂದ ಈ ನೋಟಿಫಿಕೇಶನದ ಮೂಲಕ ಯಾವತ್ತೂ ಜನರಿಗೆ ನಾನು ಜಾಹೀರ ಮಾಡುವದೇನಂದರೆ—

ಹೊನ್ನಾವರ ಮಾಮ್ಲೇದಾರ ತಾಲೂಕ ಕಚೇರಿಯಿಂದ ೫ (ಐದು) ಮೈಲುಗಳೊಳಗೆ ಯಾವದೇ ತರದ ಜನ ಸಮೂಹದಲ್ಲಿ ಭಾಷಣ ಮಾಡುವದು ಅಥವಾ ಮುಹಮ್ಮದಅಲ್ಲಿ, ಶೌಕತಅಲ್ಲಿ ಯಾ ಮೋಹನಲಾಲ ಕರಮಚಂದ ಗಾಂಧೀ ಇವರ ಫೋಟೋಗ್ರಾಫಗಳು ಅಥವಾ ಚಿತ್ರಗಳು ವಗೈರೆಗಳ ಮೆರವಣಿಗೆಯು ಸಾರ್ವಜನಿಕ ಬೀದಿ ಓಣಿ ಯಾ ರಸ್ತೆಗಳಲ್ಲಿ ಮಾಡುವದು ಮನಾಯಿ ಮಾಡುತ್ತೇನೆ.

ಈ ಮನಾಯಿ ಹುಕುಮು ಈವತ್ತಿನಿಂದ ಒಂದು ತಿಂಗಳವರೆಗೆ ಅಮಲಿನಲ್ಲಿ ಇರುವದು.

ತಾ ೨೦-೯-೧೯೨೧.

ಮೇಜಿಸ್ಟ್ರೇಟ ೧ನೇ ವರ್ಗ,
ಹೊನ್ನಾವರ ಇವರ ಸಹಿ ಅದೆ

ಜಾಹೀರ ವಿನಂತಿ.

ನಾವು ಈ ಕೆಳಗೆ ಸಹಿ ಮಾಡಿದ ಜನರು ಕರ್ವಾರ ಪ್ರಾಂತಕ್ಕೆ ನಾಡಗೇರಿ ಎಂಬ ಹಳ್ಳಿ ನಿವಾಸಿಕರು. ಹೊಟ್ಟೆಗಿಲ್ಲದೆ ಸಾಯುವ ಪ್ರಸಂಗ ಬಂದದ್ದರಿಂದ ಜಂಗಲದಿಂದ ಕಾಯಿಪಕ್ಕ ತಂದು ಅದನ್ನಾದರೂ ತಿಂದು ಜೀವಿಸುವಾ ಎಂತಾ ಫಾರೆಸ್ಟರ ಕಡೆಗೆ ಹೋಗಿ ದುಡ್ಡು ಕೊಟ್ಟು ಕಡಿಮಾಡಿದ ಮರದ ಚಕ್ಕೆಗಳನ್ನು ಅವರ ಹೇಳಿಕೆಯಿಂದ ತಂದಿದ್ದ ಬಗ್ಗೆ ನಮ್ಮೆಲ್ಲರ ಮೇಲೆ ಖಟ್ಲೆಯಾಗಿ ೨೯ ಜನರಿಗೆ ೧೦ ರೂ ದಂಡವೂ ಯಾ ೧೦ ದಿವಸಗಳ ಸಜೆ, ಬಾಕಿ ೫ ಜನರಿಗೆ ೨೫-೦-೦ ದಂಡ ಯಾ ೧೪ ದಿವಸದ ಸಜೆ ಈ ಪ್ರಕಾರ ೪೧೫-೦-೦ ದಂಡ ವಿಧಿಸಿದರು. ನಾವು ನಿರಪರಾಧಿಗಳಿದ್ದು ಭಕ್ತ ಉದಮ ಸಹಿಸಲಾರದೆ, ಈ ಪ್ರಕಾರ ಮಾಡಬೇಕಾಯಿತು ಮತ್ತು ದಂಡ ಕೊಡುವದಕ್ಕೆ ಏನೂ ಗತಿಯಿಲ್ಲದ್ದರಿಂದ ಕೋಣೆಯೊಳಗೆ ಕೂಡ್ರಬೇಕಾಯಿತು. ನಾವು ಕಳವು, ದರೋಡೆ, ಖೂನಿ ವಗೈರೆ ನೀಚತ್ವಪೂರ್ವಕದಿಂದ ಹೀನ ಕೆಲಸ ಮಾಡಿ ಶಿಕ್ಷೆಪಟ್ಟವರಲ್ಲ. ಎಂಬುದು ತಮಗೆಲ್ಲರಿಗೂ ಖಾತ್ರಿಯಾಗಬಹುದು.

ಈ ಹೊತ್ತು ನಮ್ಮನ್ನು ಕೋಣೆಯಿಂದ ಬಿಡುಗಡೆ ಮಾಡಿದ್ದಾರೆ. ನಾವು ಖಟ್ಲೆ ನಡಿಯುವಾಗ ಸುಮಾರು ೧೫-೨೦ ದಿವಸ ಊರ ಕಡೆ ನಮ್ಮ ಉದ್ಯೋಗ ಬಿಟ್ಟು, ಕಚೇರಿಗೂ, ಮನೆಗೂ, ತಿರುಗಾಡಬೇಕಾಯಿತು. ಅದರ ನಂತರ ಕೋಣೆಯಲ್ಲಿ ಕೂತೆವು. ಹೀಗೆ ೧-೧॥ ತಿಂಗಳು ನಮ್ಮ ಬೇಸಾಯ ಧಂದೆವಗೈರೆ ಬಿಟ್ಟುಕೊಟ್ಟದ್ದರಿಂದ, ಹೆಂಡರು ಮಕ್ಕಳ ಅವಸ್ಥೆ ಏನಾಗಿರಬಹುದೆಂದು ತಾವು ಊಹಿಸಬಹುದು. ನಮಗೆ ಹೊಟ್ಟೆಗಿಲ್ಲದ ಸಮಯದಲ್ಲಿ ಈ ಆಪತ್ತಿನಿಂದ ಮತ್ತಿಷ್ಟು ಕಂಗಾಲ ಆಗಿರುತ್ತೇವೆ.

ನಮ್ಮ ದೀನಾವಸ್ಥೆ ನೋಡಿ, ತಮ್ಮಿಂದ ಆಗುವಷ್ಟು ಹಣವಿನಿಂದಾಗಲಿ, ಅಕ್ಕಿ, ರಾಗಿ ಧಾನ್ಯಗಳಿಂದಾಗಲಿ, ನಮ್ಮನ್ನು ಈಗಿನ ಸಂಕಟದೊಳಗಿಂದ ಪಾರುಮಾಡುವ ಬುದ್ಧಿಯನ್ನು ತಮಗೆ ದೀನ ರಕ್ಷಕನಾದ ಜಗದೀಶ್ವರನು ಕೊಡಲೆಂದು ಪ್ರಾರ್ಥಿಸುತ್ತೇವೆ.

ವೆಂಕಟಾ ಬಿನ್ನ ದೇವಾ ಮೊದಲಾದ ೩೦ ಜನರ ಹೆಬ್ಬೊಟ್ಟಿನ ಗುರ್ತು ಇರುತ್ತದೆ.

ಹಣ ರವಾನಿಸಿಕೊಡುವದಾದರೆ, ಈ ಕೆಳಗೆ ಬರೆದ ಎಡ್ರೆಸಿನಲ್ಲಿ ಮನಿಯಾರ್ಡರ ದ್ವಾರ ರವಾನಿಸಬೇಕು.

ಕುಡ್ಲ ವಾಸುದೇವ ಪಾಂಡುರಂಗ ಶ್ಯಾನಭಾಗ.

ಹೊನ್ನಾವರ, ಜಿ ಕಾರವಾರ.

ಧಾರವಾಡದ ಗೋಳಿಬಾರು.

ಧಾರವಾಡದ ಗೋಳಿಬಾರದ ಖಟಲೆಯ ವಿಚಾರವು ಕೈದು ಆಗಿ, ನಿರ್ಣಯಕ್ಕೆ ಸಿದ್ಧವಾಗಿದೆ ಆರೋಪಿತರು ಹಿಂದಿನ ವಹಿವಾಟಿಯಂತೆ ಬಚಾವಿ ಪುರಾವೆ ಏನೊಂದು ಕೊಡದೆ, ಈಗಿನ ಕೋರ್ಟುಗಳಿಂದ ನ್ಯಾಯ ಸಿಗುವದೇ ದುರ್ಲಭವೆಂದು ಸಾರಿ, ತಮ್ಮ ತಮ್ಮ ಜವಾಬಗಳನ್ನಷ್ಟು ಓದಿಹೇಳಿರುವರು ಆ ಜವಾಬುಗಳಿಂದ, ಆ ಖಟ್ಲೆಯ ನಿಜಸ್ಥಿತಿ, ಮತ್ತು ನಮ್ಮ ಆಳರಸರ ದಬ್ಬಾಳಿಕೆಯ ಮಾದರಿಗಳೆಲ್ಲ ಬೈಲಿಗೆ ಬಂದಿರುವವು ಅವುಗಳನ್ನು ಓದಿ, ಮನನಮಾಡಿ, ನಮ್ಮ ವಾಚಕರು ಅದರ ಬೋಧ ಕೊಳ್ಳಬೇಕೆಂದು, ಅವುಗಳಲ್ಲಿ ಮುಖ್ಯವಾದವುಗಳನ್ನೇ ಎತ್ತಿಕೊಟ್ಟಿರುವೆವು ಸಂಪಾದಕ ಕ. ವೃ.

೧ ನೇ ಆರೋಪಿ ಅನಂತ ಶ್ರೀನಿವಾಸ ಪಾಬಡೆ ಇವರ ಜವಾಬು.

ಧಾರವಾಡ ಜಿ ಕಾ ಕಮಿಟಿಯಿಂದ ರೋಣ ತಾಲೂಕಿನಲ್ಲಿ ಪ್ರಸಂಗದಾಕ್ಕೆ ನೇಮಿಸಲ್ಪಟ್ಟಮೇರೆಗೆ, ಪದ್ಮರಾವ ಕಮಲಾಪೂರರೊಡನೆ ಅಲ್ಲಿ ಕೆಲಸಮಾಡಿ, ೧ ನೇ ಜುಲೈದೊಳಗೆ ಟಿಳಕಸ್ವರಾಜ್ಯ ಫಂಡಿನ ಲೆಕ್ಕಕ್ಕಾಗಿ, ೨೮ ನೇ ಜೂನಕ್ಕೆ ಧಾರವಾಡಕ್ಕೆ ಬಂದೆವು. ಅತ್ತ ಹೋಗುವದಕ್ಕೆ ಮೊದಲು ಪಿಕೆಟಿಂಗ ಮಾಡುತ್ತಿದ್ದೆ ಪಿಕೇಟಿಂಗ ಮಾಡುವಾಗ ಫಾರ್ಮ ಕಂಟ್ರಾಕ್ಟರರು ಬಹಳ ತ್ರಾಸಕೊಟ್ಟರು

ಈ ಗುನ್ಹೆಯಲ್ಲಿ ನಾನು ಪೂರ್ಣ ನಿರ್ದೋಷಿಯಿದ್ದೇನೆ ನನ್ನಮೇಲೆ ಸುಮ್ಮನೆ ಖಟ್ಲೆ ಹಾಕಿರುತ್ತಾರೆ

ಬುದ್ಧ್ಯಾ ಖೂನಮಾಡಿದಂಥ, ಮಾಡಿಸಿದಂಥ, ಇಂಥ ಭಯಂಕರ ಅಪರಾಧಗಳನ್ನು ಮುಚ್ಚಿಕೊಳ್ಳುವದಕ್ಕಾಗಿ ಸುಳ್ಳು ಪುರಾವೆಯನ್ನು ಹುಟ್ಟಿಸಿದಂಥ, ಪೋ. ಅಮಲದಾರರು ಮತ್ತು ಮ್ಯಾ. ಅಧಿಕಾರಬಲದಿಂದ ಆದ ದೂಷಿತ ತಪಾಸಣೆಯು, ಅರ್ಥಾತ್ ಅಂದರೆ ಕೆಳಕೋರ್ಟಿನಲ್ಲಿ ಮತ್ತು ಈ ಕೋರ್ಟಿನಲ್ಲಿ ವಿಚಾರಣೆಯು ನಡೆದಿರುತ್ತದೆ. ನಿಷ್ಪಕ್ಷಪಾತ ತಪಾಸಣೆಯಾಗಲು ಮೇಲೆ ನಿರ್ದಿಷ್ಟ ದುಷ್ಟ ಅಧಿಕಾರಿಗಳನ್ನ ಬೇರೆಕಡೆಗೆ ವರ್ಗಮಾಡಬೇಕೆಂದು ಪ್ರಯತ್ನಿಸಿದ ನಮ್ಮ ಪ್ರಯತ್ನಗಳು ನಿಷ್ಫಲವಾದವು ಆದ್ದರಿಂದ ನಾನು ಈ ವಿಚಾರಣೆಯಲ್ಲಿ ಏನೂ ಭಾಗತೆಗೆದುಕೊಳ್ಳಲಿಲ್ಲ. ಇಂಥ ವಿಚಾರಣಾಕ್ರಮದಲ್ಲಿ ನನಗೆ ನ್ಯಾಯಸಿಗುವ ಆಶೆಯು ಎಳ್ಳಷ್ಟೂ ಇಲ್ಲ

ಪೇಂಟರ ಸಾಹೇಬರು ಧಾರವಾಡಕ್ಕೆ ಬಂದಂದಿನಿಂದ ಅಸಹಕಾರ, ಖಿಲಾಫತ ಹಾಗೂ ಮದ್ಯಪಾನ ಪ್ರತಿಬಂಧಕ ಚಳವಳಿಯನ್ನ ನಿರ್ಮೂಲವಮಾಡಬೇಕೆಂದು ಅನೇಕ ಬೇಕಾಯಿದೇಶೀರ ಪ್ರಯತ್ನಗಳನ್ನು ಮಾಡಹತ್ತಿದ್ದರು ಧಾರವಾಡದಲ್ಲಿ ಪೋಲೀಸರು ಗುಂಡುಹಾಕಿದ ಮುನ್ನಾದಿವಸ ಕಲೆಕ್ಟರರು ಆರೋಪಿಗಳಲ್ಲೊಬ್ಬರಾದ ದಿವಾಕರ, ಮತ್ತು ಕಟ್ಟೀರಿಗೆ ಅಂದದ್ದೇನಂದರೆ—"ನಿಮ್ಮ ರಕ್ತವನ್ನು ಹೀರಬೇಕೆಂದು ನನಗೆ ಉತ್ಕಟ ಇಚ್ಛೆಯುಂಟು; ನಿಮಗೆ ಒಂದು ವರ್ಷಮಟ್ಟಿಗಾದರೂ ಶಿಕ್ಷೆಮಾಡಿಸದಿದ್ದರೆ ನನಗೆ ಸಮಾಧಾನವಾಗಲಾರದು."

ಮೇಲೆ ನಿರ್ದಿಷ್ಟವಾದ ಚಳವಳಿಯನ್ನು ಮಾಡುವಂಥ ಜನರನ್ನು ಹೇಗಾದರೂ ಮಾಡಿ, ಆ ಚಳವಳಿಯಿಂದ ಪರಾವರ್ತಮಾಡಲು ಸಂಧಿಯನ್ನು ಹುಡುಕುತ್ತಿದ್ದನು. ಈ ಕಾರ್ಯವನ್ನು ಸಾಧಿಸುವದಕ್ಕೆ ಮಿ. ಮಾರ್ಸಡನ್ನರನ್ನು ಈ ಜಿಲ್ಲೆಗೆ ವರ್ಗಮಾಡಿಸಿ ಬರಮಾಡಿಕೊಂಡನು. ಮಾರ್ಸಡನ್ನನಂಥ ಸಹಕಾರಿಯನ್ನು, ಶಿವಲಿಂಗಪ್ಪ ಯಾವದಕ್ಕೂ ಹೇಸದಂಥ ಕಾಕರ್ಯನ್ನು, ಸಹಾಯಕರನ್ನಾಗಿ ಮಾಡಿಕೊಂಡು ಖಿಲಾಫತ್ ವ್ಹಾಲಂಟಿಯರರಮೇಲೆ ಸುಳ್ಳು ಖಟ್ಲೆಯನ್ನು ಮಾಡಿಸಿ, ಶಿಕ್ಷೆಯನ್ನು ಮಾಡಿಸಿದರು ಆ ಶಿಕ್ಷೆಯಾದ ದಿವಸವೇ ಗುಂಡುಹಾಕಬೇಕೆಂದು ಇವರು ಮೊದಲೇ ಗೊತ್ತುಮಾಡಿಕೊಂಡಿದ್ದರು. ಶಿಂದಿ ಶರೆ ಅಂಗಡಿಯ ಮುಂದೆ ಜನರು ನೆರೆಯಲಿಕ್ಕೆ ಪೋಲೀಸರೇ ಕಾರಣರು ಅಂಗಡಿಯ ಮುಂದೆ ನಿಂತ ನೋಡಲಿಕ್ಕೆ ಬಂದ ಜನರನ್ನು ಕಳಿಸಲು ಪೋಲೀಸರು ಯಾವ ಪ್ರಯತ್ನವನ್ನೂ ಏನ್ಕಲ ಮಾಡಲಿಲ್ಲ.

ಕತ್ತಲೆಯಾದಕೂಡಲೆ ಗಡಂಗದ ಭಾಗಗಳಲ್ಲದ ಹತ್ತರವೆ ಇದ್ದ ತಟ್ಟಿಗೆ ೩ ಸಾರೆ ಬೆಂಕೀ ಹಚ್ಚಿದ ಹಾಗೂ ಆರಿಸಿದ ಫಾರ್ಸ ಮಾಡಿದರು. ಇದು ಪೋಲೀಸರ ಕಾರ್ಯಕ್ರಮವಾದ್ದರಿಂದ, ಆ ಕಾಲಕ್ಕೆ ಅವರು ಸರಿದಾಡಲಿಲ್ಲ ಯೋಗ್ಯಕಾಲವು ಬಂತೆಂದು ವರ್ದಿಯು ಬರುವವರೆಗೆ ಶಿವಲಿಂಗಪ್ಪನು ಹೊರಗೆ ಬರುವದಿಲ್ಲ ಆ ಕಾಲವು ಬಂತೆಂದು ತಿಳಿದಕೂಡಲೆ, ಒಮ್ಮಿಂದೊಮ್ಮೆ ರಂಗಸ್ಥಳದಮೇಲೆ ಬರುತ್ತಾನೆ.

ಅಧಿಕಾರಿಗಳು ಖಟ್ಲೆಯ ಚೌಕಸಿಯ ಪೂರ್ವ ತಪಾಸಣೆಯನ್ನು ಮಾಡಿ ಕೆಲವು ಜನರನ್ನು ಹಿಡಿದು ಸತ್ಯವನ್ನು ಶೋಧಿಸುವದಕ್ಕಾಗಿ ಮಾಡಿದ್ದಲ್ಲ ಖೊಟ್ಟಿಸಾಕ್ಷಿಗಳನ್ನು ಮಾಡಿಸಲು ತಮಗೆ ಸುಸಂಧಿಯು ದೊರೆಯಬೇಕೆಂದು. ಯಾಕಂದರೆ—

೧ ಶಾಂತಿಮಯ ಅಸಹಕಾರ ಹಾಗೂ ಖಿಲಾಫತ ಚಳವಳಿಯ ಪ್ರಚಾರಕರನ್ನು, ಚಳವಳಿಗಳನ್ನು ಮುರಿಯಬೇಕಾಗಿತ್ತು

೨ ತಮ್ಮಮೇಲೆ ಬರುವ ಬುದ್ಧ್ಯಾಪೂರ್ವಕ ಖೂನಮಾಡಿದ ಆರೋಪವನ್ನು ಮುಚ್ಚಿಕೊಳ್ಳುವದಕ್ಕಾಗಿ ವಿರುದ್ಧವಾದ ಮಹತ್ವದ ಸಾಕ್ಷಿದಾರರಾಗಬಹುದಾದ ಎಲ್ಲ ಸದ್ಗೃಹಸ್ಥರನ್ನೂ ಹಿಡಿದುಹಾಕಿ, ತಮ್ಮ ಬಚಾವು ಮಾಡಿಕೊಳ್ಳಬೇಕಾಗಿತ್ತು.

೩ ಆರೋಪಿಗಳ ವೈರಿಗಳು ತಮ್ಮ ವತಿಯಿಂದ ಸಾಕ್ಷಿಕೊಡಬೇಕೆಂದು ಕೆಲವರನ್ನು ಹಿಡಿಯಬೇಕಾಯಿತು

ಮುಖ್ಯ ಗುನ್ಹೆಗಾರರು ದೊಡ್ಡ ಅಧಿಕಾರಿಗಳಿದ್ದು ಅಧಿಕಾರದ ದುರುಪಯೋಗದಿಂದ ಬೇಕಾದಂತೆ ಖೊಟ್ಟಿ ಪುರಾವೆಯನ್ನು ಮಾಡಿಸಿರುವರು. ಬ್ರಾಹ್ಮಣ ಬ್ರಾಹ್ಮಣೇತರರ ದ್ವೇಷವು, ವಿಶೇಷತಃ ಲಿಂಗಾಯತ ದ್ವೇಷವು, ಮುನಸಿಪಾಲಿಟಿಯಲ್ಲಿ ಪಂಗಡಗಳ ವಿರೋಧವು ಈ ಅಧಿಕಾರಿಗಳಿಗೆ ತಮ್ಮ ಕಾರ್ಯ ಸಾಧಿಸಲು ಒಳ್ಳೇ ಸಹಾಯಕವಾಗಿರುವವು. ಅವುಗಳ ಉಪಯೋಗವನ್ನು ಇವರು ಮಾಡಿಕೊಂಡಿರುವರು. ಸರಕಾರದ ವತಿಯಿಂದ ಕೆಲಸನಡಿಸಲು ಬಾರಿಸ್ಟರರು ಶಿವರಾಯರಂಥ ವಕೀಲರಿದ್ದರೂ ಕೂಡಾ, ಖೊಟ್ಟಿ ಸಾಕ್ಷಿದಾರರು ತಮ್ಮ ಕೈಬಿಡಬಾರದು ಎಂದು ಈ ಅಧಿಕಾರಿಗಳು ಬ್ರಹ್ಮದ್ವೇಷಿಯೂ, ರಾಷ್ಟ್ರೀಯ ಚಳವಳಿಯ ವೈರಿಯಾದ ಬಂದು ಪಂಗಡದ ಮುಖಂಡನೂ ಆದ ರಾ. ಹುಲಕೋಟಿಯವರನ್ನು ಮುದ್ದಾಂ ವಕೀಲರನ್ನಾಗಿ ನೇಮಿಸಿಕೊಂಡಿರುವರು.

ರಾಷ್ಟ್ರೀಯಪಕ್ಷದ ಪತ್ರದ ಸಂಪಾದಕ ಹಾಗೂ ಅಸಹಕಾರದ ಪ್ರಚಾರಕರಾದ ಕೃಷ್ಣರಾವ ಮುದವೇಡಕರರನ್ನು ದಂಗೆಖೋರರಲ್ಲೊಬ್ಬರೆಂದು ಆರೋಪಿತರನ್ನಾಗಿ ಮಾಡಿ. ಅವರಮೇಲೆ ೧೯ ಪುರಾವೆಗಳನ್ನು ಮಾಡಿಸಿದ್ದರು. ಆದರೆ ಮುದವೇಡಕರರು ಆ ಕಾಲಕ್ಕೆ ಧಾರವಾಡದಿಂದ ೨೧ ಮೈಲಿನ ಮೇಲಿರುವ ಹಳ್ಯಾಳದಲ್ಲಿ ರಾಜಕೀಯ ಕೀರ್ತನವನ್ನು ಮಾಡಿದ ಸಂಗತಿಯು ಹಿಂದಿನಿಂದ ಸರಕಾರೀ ಕಾಗದಪತ್ರಗಳಲ್ಲಿಯೇ ಹೊರಬಿದ್ದದ್ದರಿಂದ, ಇಲ್ಲಿಯ ಅಧಿಕಾರಿಗಳಿಗೆ ಅದು ತಿಳಿದಕೂಡಲೆ ಖಟ್ಲೆಯನ್ನು ತಿರುಗಿ ತೆಗೆದುಕೊಂಡು ಅವರನ್ನು ಬಿಟ್ಟುಬಿಟ್ಟರು. ಮುದವೇಡಕರರ ವಿರುದ್ಧ ಹೇಳಿದ ೧೯ ಸಾಕ್ಷಿದಾರರು ಉಳಿದ ಆರೋಪಿಗಳ ವಿರುದ್ಧ ಬಂದದ್ದು ಆಶ್ಚರ್ಯವಲ್ಲವೇ?

ಫಿರ್ಯಾದಿ ಕಡೆಯ ಸಾಕ್ಷಿದಾರರಲ್ಲಿ ರುದ್ರಯ್ಯಾ ಹಿರೇಮಠ, ಸಂಗಪ್ಪಾ ಮಹಾರುದ್ರಪ್ಪ ಇವರಿಬ್ಬರೂ ಗುನ್ಹೆಯ ದಿವಸ ಗುನ್ಹೆ ಆಗಿರುವದೆಂಬ ಕಾಲಕ್ಕೆ ಧಾರವಾಡದಲ್ಲಿಯೇ ಇದ್ದಿಲ್ಲವೆಂದು, ರಾ|| ಆರ್.ಜಿ. ಸಬನಿಸ, ವಕೀಲ ಧಾರವಾಡ, ಮತ್ತು ಉಳಿದವರು ಕಾಂಗ್ರೇಸ ಕಮೀಶನದಮುಂದೆ ಸಾಕ್ಷಿಯನ್ನು ಕೊಟ್ಟಿದ್ದಾರೆ.

ಕಾ. ಕ. ದವರು ಈ ಕೋರ್ಟಿನಲ್ಲಿ ಖಟ್ಲೆ ಪ್ರಾರಂಭವಾಗುವ ಮೊದಲು ಮತ್ತು ಖಟ್ಲೆ ನಡೆದಾಗಲೂ ಸಾಕ್ಷಿ ಪುರಾವೆಗಳನ್ನು ತೆಗೆದುಕೊಳ್ಳುತ್ತಿದ್ದು ಸದರೀ ಕೆಲಸವು ೩೦–೮–೨೧ಕ್ಕೆ ಪೂರ್ಣವಾಯಿತು.

ಒಬ್ಬ ಪೋ. ಅಮಲದಾರನು ಆ ಪುರಾವೆಗಳ ನೊಟ್ಸ ಮಾಡಿಕೊಂಡು ಅಧಿಕಾರಿಗಳಿಗೆ ತಿಳಿಸುತ್ತಿದ್ದನು. ಹೀಗಿದ್ದೂ, ಆರೋಪಿಗಳು ನಿರಪರಾಧಿಗಳಿರುವರು ಎಂಬಬಗ್ಗೆ ಇದ್ದ ಪುರಾವೆಗಳು ನಮಗೆ ಗೊತ್ತಿಲ್ಲೆಂದು ಅನ್ನಲು ತಪಾಸಣೆಯ ಅಧಿಕಾರಿಗಳಿಗೆ ಮಾರ್ಗವೇ ಇಲ್ಲ ನ್ಯಾಯ ವಿಚಾರಣೆಯಾಗಬೇಕೆಂದು, ಈ ಅಧಿಕಾರಿಗಳ ಮನಸಿನಲ್ಲಿದ್ದರೆ, ಸದರೀ ಪುರಾವೆಗಳ ಕಡೆಗೆ ಲಕ್ಷಗೊಡದೆ, ತಮ್ಮ ಫಿರ್ಯಾದಿಯನ್ನು ಜೋರಿನಿಂದ ಹೀಗೆ ಮುಂದೊತ್ತುತ್ತಿದ್ದಿಲ್ಲ. ಅಂದಮೇಲೆ ಆರೋಪಿಗಳಿಗೆ ಹೇಗಾದರೂ ಮಾಡಿ ಶಿಕ್ಷೆಮಾಡಿಸಬೇಕೆಂಬದೇ ಅವರ ಉದ್ದೇಶವದೆ ಎಂಬು ಮೇಲಿಯೇ ಕಾಣಿಸುತ್ತದೆ.

ಫಿ. ಕಡೆ ಸಾಕ್ಷಿದಾರ ಸ್ಪಾ. ಇ. ಚನ್ನನಗೌಡಾ ಉರ್ಫ ಲಿಂಗನಗೌಡಾ ಪಾಟೀಲ, ಮ್ಯಾ. ಕ್ಲಾರ್ಕ ಗಿಲಗಂಚಿ ಎಂಬ ಇಬ್ಬರು ಲಿಂಗಾಯತರು ಖಟ್ಲೆಯಾಗುವದೆಂಬ ಸ್ವಪ್ನವು ಕೂಡಾ ಇಲ್ಲದಾಗ್ಗೆ ತಮಗೆ ಗಾಯವಾದಕೂಡಲೆ ಭೆಟ್ಟಿಯಾದ ಕೆಲ ಗೃಹಸ್ಥರಿಗೆ ಗ್ಯಾಸಬತ್ತಿಯಕೂಡ ಗಾಯವಾಗಿ ಬಿದ್ದಂಥ ಜನರಿಗೆ ತಮ್ಮಿಂದ ಏನಾದರೂ ಸಹಾಯವಾಗುವಂತಿದ್ದರೆ ಮಾಡಬೇಕೆಂದು ಹೋದಾಗ, ಅಂಪರೆ ಪೋಲೀಸರು ೩ ನೇ ಸಾರೆ ನಿಷ್ಕಾರಣ ಗುಂಡು ಹಾಕಿದಾಗ, ಗುಂಡು ತಾಕಿ ಗಾಯವಾಗಿರುವದು ಎಂದು ಹೇಳಿದ್ದಾರೆ ಈಗ ಮೊದಲಿನ ಗೋಳೀಬಾರಿನ ಕಾಲಕ್ಕೆ ಮತ್ತು ಅದರ ಪೂರ್ವದ, ನಂತರದ ಕಾಲ್ಪನಿಕ ಕಥೆಯ ರಗಳೆಯನ್ನು ಹೇಳಬೇಕೆಂದೂ, ತಮಗೆ ಯೋಗ್ಯಸಂಧಿಯು ಸಿಗಬೇಕೆಂದೂ, ಎಲ್ಲವನ್ನು ವಿಪರ್ಯಾಸಮಾಡಿದ್ದಾರೆ. ಇವರು ಕೊನೆಗೆ ಬರೆದ ಕೆಲ ಸದ್ಗೃಹಸ್ಥರ ಎದುರಿಗೆ ನಿಜವಾದ ಸಂಗತಿಯನ್ನು ಹೇಳಿರುವರು. ಅವರ ಹೆಸರುಗಳು ಡಾ|| ಹುಯಿಲಗೋಳ ಎಂ. ಬಿ. ಬಿ. ಎಸ್, ಡಾ|| ಶಿರಹಟ್ಟಿ ಎಲ್ ಎಂ, ಎಂಡ, ಎಸ. ಶ್ರೀ. ಬಿ. ಆರ. ಪಟವರ್ಧನ ಎಂ. ಎ. ಎಲಎಲ್, ಬಿ ಶ್ರೀ—ಗುರಾಚಾರ್ಯ ಡಾ. ಶಿರಹಟ್ಟಿಯವರ ಕಂಪೌಂಡರ. ಶ್ರೀ. ವಾಯು. ಬಿ. ಜಠಾರ ಬಿ. ಎ. ಎಲಎಲ್, ಬಿ ಇವರಲ್ಲದೆ ಗುಂಡುಬಿದ್ದ ಇನ್ನೂ ಕೆಲ ಜನರು ಇಲ್ಲಿಯ ಅಧಿಕಾರಿಗಳ ಮಾಹಿತಿಯಮೇಲಿಂದಲೇ ಹೊರಟ ೨ ಮತ್ತು ೮ನೇ ಜುಲೈಗಳ ಸರಕಾರೀ ಪ್ರಕಟನೆಗಳ ಮೇಲಿಂದ

ಸಹ ಸದ್ಯದ ಖಟ್ಲೆಯು ಸುಳ್ಳೆಂಬುದು ಕೂಡಲೇ ಕಂಡುಬರುವಂತಿದೆ.

ಆರೋಪಿತರಲ್ಲಿ ಇಬ್ಬರೇ ಗುಂಡು ಬಿಡಿದವರಿರುವರೆಂಬುದು ವಿಶೇಷ ಲಕ್ಷದಲ್ಲಿಡತಕ್ಕ ಸಂಗತಿಯಾಗಿದೆ. ಪೋಲೀಸರು ದಂಗೆಖೋರರನ್ನು ಬಿಟ್ಟು ಉಳಿದ ಜನರಮೇಲೆ ಮುದ್ದಾಂ ಗುಂಡು ಹಾಕಿದರೆಂದು ಹೇಳಿದ ಹೊರತು ಇದರ ಖುಲಾಸೆಯಾಗುವದಾಗಿಲ್ಲ. ಗುಂಡು ಹಾಕಿದ ಜನರ ಸಾಕ್ಷಿಯೇ ಆವತ್ತಿನ ದಿವಸ ಆಯಾ ಕಾಲಕ್ಕೆ ಆದ ಸಂಗತಿಗಳಬಗ್ಗೆ ವಿಶೇಷ ಮಹತ್ವದ್ದಾಗಿದ್ದು ಪೋಲೀಸರ ಗುಂಡು ಬಿಡಿದ ೪೧ ಜನರಲ್ಲಿ ೪-೫ ಜನರ ಜಬಾನಿಯನ್ನು ಮಾಡಿಸಿದ್ದಾರೆ. ಅವರಲ್ಲಿ ಒಬ್ಬನು ಪೋಲೀಸನು. ಮೂವರು ಲಿಂಗಾಯತರು; ಆ ಲಿಂಗಾಯತರಲ್ಲಿಯೂ ಒಬ್ಬನು ಸ್ಯಾ|| ಇನ್ಸಪೇಕ್ಟರನು; ಮತ್ತೊಬ್ಬನು ಮ್ಯು. ಕಾರಕೂನನು; ಆದರೆ ಕಾಂಗ್ರೆಸಕ ಮುಂತಾದ ೧೮-೨೦ ಜನ ಗಾಯಮಾದವರು ಹೇಳಿದ ಸಂಗತಿಯು ಪೋಲೀಸರು ಮಾಡಿದ ಪುರಾವೆಗಳಿಗೆ ತೀರ ವಿರುದ್ಧವಾಗಿರುವದು.

ಗುನ್ಹೆಯಾಗಿರುವದೆಂಬ ಕಾಲಕ್ಕೆ ಆ ದಿವಸ ನಡೆದ ಸಾರ್ವಜನಿಕ ಸಭೆಯಲ್ಲಿ ನಾನಿದ್ದೆ. ಆ ಸಭೆಯಲ್ಲಿ ಟಿಳಕ ಫಂಡಿಗಾಗಿ ಜನರಿತ್ತ ದಾಗೀನೆಗಳನ್ನು ಪ್ರೆಸಿಡೆಂಟರ ಹೇಳಿಕೆಯಂತೆ ಜಾಹೀರ ಲಿಲಾವು ಮಾಡಿದ್ದೇನೆ ಫಂಡು ಕೂಡಿಸಿದ್ದೇನೆ. ಗುಂಡಿನಿಂದ ಘಾಯವಾಗಿ ಜನರು ಸಭೆಯು ಸಳೆದಮೇಲಿಂದ ದವಾಖಾನೆಗೆ ಹಾದುಹೋಗುವಾಗ ಸಭೆಯು ಮುರಿಯಿತು. ಸಭೆ ಮುರಿದಿಂದ ಕಿರಹಟ್ಟಿ ದವಾಖಾನೆಗೆ ಹೋದ ಗಾಯಮಾದವರ ಶುಶ್ರೂಷೆಮಾಡಿದೆ ನಾನು ಖಿಲಾಫತ್, ಕಾಂಗ್ರೆಸ.ಪಿಕೆಟಿಂಗ ಕಾರ್ಯ ಮಾಡುತ್ತಿದ್ದದರಿಂದ, ಅಧಿಕಾರಿಗಳು ನನ್ನಮೇಲೆ ಖಟ್ಲೆಯನ್ನು ಮಾಡಿದ್ದಾರೆ

ಮೇಲೆ ಹೇಳಿದಂತ ನಾನು ಸಭೆಯಲ್ಲಿದ್ದೆನೆಂದು ಕಾ. ಕ. ಯ.ಮುಂದೆ ಅನೇಕರು ಹೇಳಿದ್ದಾರೆ. ಅವರಲ್ಲಿ ಕೆಲವರ ಹೆಸರುಗಳು ವಿ. ಬಾ ಜೋಶಿ ಪೆನ-ಎಜ್ಯು ಇನ ಧಾರವಾಡ, ಯಾತಗಿರಿ ವಕೀಲ ಬಿ. ಎ. ಎಲ್ ಎಲ್. ಬಿ., ಧಾರವಾಡ, ಭೀಮಪ್ಪ ಚಿತ್ರಗಾರ ಧಾರವಾಡ, ಖಂಡೋಪಂತ ಜೋಶಿ ವಕೀಲ ಧಾರವಾಡ, ನರಗುಂದಕರ ವಕೀಲ ಬಿ. ಎ ಎಲ್. ಎಲ್. ಬಿ., ಆರ್ ಆರ್ ಪೀರಜಾದಾರ, ಸರಾಫ್ ಗೋಕಾಲೋಲಿ ಟ್ರೇಡರ, ಕಿರ್ಲೋಸ್ಕರ, ಕಂಟ್ರ್ಯಾಕ್ಟರ ಸರಪಳಿ ಮಾಸ್ತರ, ಹುಕ್ಕೇರೀಕರ, ಎಮ್. ಎ, ಶ್ರೀ. ರಾ. ದೇಶಪಾಂಡೆ, ದತ್ತೋಪಂತ ದೇಶಪಾಂಡೆ, ಇವರಲ್ಲದೆ, ಇನ್ನೂ ಅನೇಕರು.

ಸಾಭಾರ ಸ್ವೀಕಾರ.

ತಿಲಕಕಾವ್ಯಾಂಜಲಿ—ಇದೊಂದು ಪ್ರತಿಭಾಸಂಪನ್ನವಾದ ಕ್ಷಪಿಡಿ ಕನ್ನಡ ಪದ್ಯಗ್ರಂಥವು ಶ್ರೀಪಾಂಡುರಂಗ ಲಕ್ಷ್ಮೀನಾರಾಯಣ ಪುಣೇಂಚತ್ತಾಯ ಕವಿಗಳಿಂದ ರಚಿಸಲ್ಪಟ್ಟು ಮಂಗಳೂರು ಶಾರದಾ ಮುದ್ರಣಾಲಯದಲ್ಲಿ ಅಚ್ಚು ಹಾಕಲ್ಪಟ್ಟಿದೆ. ಲೋಕಮಾನ್ಯ ತಿಲಕರ ಚರಿತ್ರವು ಮೊದಲೇ ಒಂದು ವಿಧದ ವೀರರಸಾತ್ಮಕ ಕಾವ್ಯವು ಆದರಿಂದ ಕವಿಗಳಿಗೆ ಇದೇ ಆರ್ಯಾವರ್ತದಲ್ಲಿ ಕಾವ್ಯಸ್ಫೂರ್ತಿಯಾಗಿದೆ. ಕನ್ನಡಿಗರಿಗೂ ಅದೇ ಮಹಿಮೆಯ ಪ್ರಸಾದವು ಸ್ಫೂರ್ತಿಯನ್ನುಂಟುಮಾಡಿ, ತಿಲಕ ಕಾವ್ಯಾಂಜಲಿಗಳಂಥ ಸರಸವಾದ ಪದ್ಯ ಗ್ರಂಥಗಳನ್ನು ನಿರ್ಮಿಸಿರುವರು. ಈ ಕಾವ್ಯಾಂಜಲಿಗೆ ವಿದ್ಯಾವಾಚಸ್ಪತಿ ಆತ್ಮಾರಾಮ ಶಾಸ್ತ್ರಿಗಳು ಮುನ್ನುಡಿಯನ್ನು ಬರೆದಿರುವದಲ್ಲದೆ, "ಸ್ವರಾಜ್ಯಾತ್ಮತರ್ಪಣ" ಕ್ಕಾಗಿ ಐದು ಅಂದವಾದ ಸಂಸ್ಕೃತ ಪದ್ಯಗಳನ್ನು ಬರೆದಿರುವರು ಶ್ರೀ ಪುಣೇಂಚತ್ತಾಯ ಕವಿಗಳೊಂದಿಗೆ ಶ್ರೀ ಶಾಸ್ತ್ರಿ, ಶ್ರೀ ಭಟ್ಟ, ಶ್ರೀ ಕಾಮತ, ಶ್ರೀ ಕೃಷ್ಣಯ್ಯ, ಶ್ರೀ ತಿಮ್ಮಪ್ಪಯ್ಯ, ಶ್ರೀ ಶ್ರೀನಿವಾಸಾಚಾರ್ಯ, ಶ್ರೀ ಕೃಷ್ಣಾಚಾರ್ಯ, ಮೊದಲಾದ ಕವಿಗಳೂ ತಮ್ಮ ತಮ್ಮ ಕುಸುಮಗಳನ್ನು ಅಂಜಲಿಯೊಳಗೆ ಹಾಕಿರುವರು. ಕವಿತೆಗಳಲ್ಲ, ವಿದ್ಯಾ ವಾಚಸ್ಪತಿಗಳು ಹೇಳುವಂತೆ ಸ್ವಾಭಾವಿಕವಾಗಿಯೇ ತಮ್ಮ ಪರಿಮಳವನ್ನು ರಸಿಕರೊಳಗೆ ಹಬ್ಬಿಸುವಾಗ, ನಾವೆಂತು ಅವರ ಸುಗಂಧವನ್ನು ಬಣ್ಣಿಸುವದು! ಶ್ರೀಯುತ ಕ್ಷೀರಕ್ಕಾಗಿ ಹುಡುಗರಿಗೆ ಕಾವ್ಯವನ್ನು ಕಲಿಸುವದಿದ್ದರೆ, ಇಂಥ ಕಾವ್ಯಾಂಜಲಿಗಳು ಬಹಳೇ ಉಪಯುಕ್ತವಾಗುವವು. ಇಂಥ ಸರಸವಾದ ಪದ್ಯಗಳನ್ನು ಕನ್ನಡಿಗರಿಗೆ ಅರ್ಪಿಸಿದ್ದಕ್ಕಾಗಿ ಶ್ರೀ ಪುಣೇಂಚತ್ತಾಯರಿಗೂ ಅವರ ಸಹಕಾರಿ ಮಿತ್ರರಿಗೂ ಹೃತ್ಪೂರ್ವಕವಾಗಿ ಅಭಿನಂದಿಸುವೆವು. ಮತ್ತು ಅವರ ಕಾವ್ಯ ಕುಸುಮಗಳ ಸುಗಂಧವನ್ನು ರಸಿಕರೆಲ್ಲರೂ ಆದರದಿಂದ ಸೇವಿಸುವರೆಂದು ಬಯಸುವೆವು

ಪತ್ರವ್ಯವಹಾರ.

ಅಯ್ಯಾ, ಮಹಾಸ್ವಾಮಿಯವರೇ,

ಸಿರ್ಸಿ ತಾಲೂಕ ಬನವಾಸಿ ಕನ್ನಡ ಶಾಲೆಯ ಹೆಡ ಮಾಸ್ತರರಾಗಿದ್ದ ವಿಠ್ಠಲ ಬಾಜಣ್ಣ ಭಟಕಳ ಇವರು ಆಕಸ್ಮಿಕವಾಗಿ ಒದಗಿದ ಅಮಶಂಕೆಯ ಬೇನೆಯಿಂದ ಕಳೆದ ತಾರೀಖು ೧೧—೯—೧೯೨೧ ನೇ ರವಿವಾರ ದಿವಸ ಪರಲೋಕ ವಾಸಿಗಳಾದರೆಂಬ ಸಂಗತಿಯನ್ನು ತಿಳಿಸಲಿಕ್ಕೆ ಬಹಳೇ ಖೇದವಾಗುತ್ತದೆ. ಇವರ ಜನ್ಮಸ್ಥಾನವು ಭಟಕಳವಾಗಿದ್ದು ಬಡತನದ ಮೂಲಕ ಚಿಕ್ಕಂದಿನಿಂದಲೇ ಬಹಳ ಕಷ್ಟಗಳನ್ನು ಅನುಭವಿಸಿದವರಾಗಿದ್ದರು. ಇವರು ಮಹತ್ವವಾದ ಈ ಶಿಕ್ಷಕ ಕೆಲಸವನ್ನು ಕೈಕೊಂಡು ೨೫ ವರ್ಷಗಳವರೆಗೆ ಘಟ್ಟದ ಮೇಲಿನ ೩ ಕೆಳಗೂ ಅನೇಕ ಶಾಲೆಗಳಲ್ಲಿ ಅವಿಶ್ರಾಂತ ಶ್ರಮದಿಂದ ದುಡಿದಿದ್ದರೂ, ಮಿ॥ ಧನಾರ್ಜನೀಸ ಸಾಹೇಬರ ಅತ್ಯವ್ಯವಾದ ಪ್ರೋತ್ಸಾಹದಿಂದ ಇಷ್ಟರ ವರ್ಗವಾಗಿ ಒಂದು ಹದಿನೈದೇ ತಿಂಗಳು ಮಾತ್ರ ಆಗಿದ್ದವು. ಇವರು ಬಹಳ ಅನುಭವಿಕರಾಗಿದ್ದು ಶಾಂತವೃತ್ತಿ, ಸ್ತ್ರೀಮೋಹಕತನ, ನಿಷ್ಪಕ್ಷಪಾತ, ಕುಶಲಿ—ಸುಶೀಲತೆ ಮೊದಲಾದ ಗುಣಗಳಿಂದ ಪರಿಪೂರ್ಣರಾಗಿದ್ದರಿಂದ ಇಂಥ ಶಿಕ್ಷಕರತ್ನವು ನಮ್ಮ ಜಿಲ್ಲೆಯೊಳಗಿಂದ ಕಳೆದು ಹೋದದ್ದಕ್ಕಾಗಿ ಇವರ ಪರಿಚಯವುಳ್ಳವರಿಗೂ, ಇವರಿಂದ ವಿದ್ಯಾದಾನವನ್ನು ಪಡೆದವರಿಗೂ, ಖೇದವಾಗದೆ ಇರದು.

ಇವರ ಸಾಂಪತ್ತಿಕ ಸ್ಥಿತಿಯು ನೆಟ್ಟಗಿಲ್ಲದ್ದರಿಂದಲೂ. ಅದರಲ್ಲಿಯೇ ದೇವರು ಇವರಿಗೆ ಮಕ್ಕಳು ಮರಿಗಳ ದೊಡ್ಡ ಕುಟುಂಬವನ್ನು ದಯಪಾಲಿಸಿದ್ದರಿಂದಲೂ, ಇತ್ತಲಾಗ ಸ್ವಲ್ಪ ಅವಧಿಯಿಂದಲೇ ದೊರೆಯುತ್ತಿದ್ದ ತಿಂಗಳೊಂದರ ಒಂದೇ ನೂರು ರೂಪಾಯಿಗಳ ಸಂಬಳದಿಂದಲೇ ತಮ್ಮ ದೊಡ್ಡ ಕುಟುಂಬವನ್ನು ರಕ್ಷಿಸುತ್ತ ತಮ್ಮ ಅಧಿಕಾರಿಗಳ ಕ್ಷೋಭಕ್ಕೆ ಗುರಿಯಾಗದೆ ವರ್ಗವಾದಂಥ ಎಲ್ಲ ಸ್ಥಳಗಳಿಗೂ ಹೋಗಿ, ಎಷ್ಟು ಕಷ್ಟಗಳನ್ನಾದರೂ ಅನುಭವಿಸುತ್ತ ಜೀವನ ಮಾಡುತ್ತಿದ್ದರು ಇಂಥ ಸ್ಥಿತಿಯಲ್ಲಿ ಇವರ ೪೮ನೇ ವರ್ಷದ ಪ್ರಾಯದಲ್ಲಿಯೇ ದೇವರು ನಿರ್ದಯನಾಗಿ ಬನ್ನಿಂದೊಮ್ಮೆ ೧೦೦ ರೂ, ಗಳ ದೇಣಿಗೆಯನ್ನು ಕಸುಕೊಂಡು ಬಿಟ್ಟದ್ದರಿಂದ, ನಿರಾಶ್ರಿತರಾದ ಅವರ ಕುಟುಂಬದವರ ದುಃಖಕ್ಕೆ ಪಾರವೇ ಇಲ್ಲದಂತಾಗಿದೆ. ಈ ವಿಷಯದಲ್ಲಿ ವಿದ್ಯಾಖಾತೆಯ ಅಧಿಕಾರಿಗಳು ಕೆಲವು ಟ್ಟಿಗಾದರೂ ಸಹಾನುಭೂತಿಯನ್ನು ತೋರಿಸುವರಾಗಿ ಆಶಿಯುದೆ. ಹಾಗೂ ಬನವಾಸಿಯಂಥ ಪುಣ್ಯ ಭೂಮಿಯಲ್ಲಿ ನಿಧನಹೊಂದಿದ ಅವರ ಆತ್ಮಕ್ಕೆ ಚಿರಶಾಂತಿಯು ದೊರೆಯಲೆಂದೂ ದಯಾಳುವಾದ ಪರಮಾತ್ಮನು ಅವರ ಮಕ್ಕಳ ಉತ್ತರೋತ್ತರ ಅಭಿವೃದ್ಧಿಯಾಗುವಂತೆ ಅನುಗ್ರಹಿಸಲೆಂದೂ ಪ್ರಾರ್ಥಿಸುತ್ತೇನೆ.



ಮ. ಗಾಂಧಿಯವರ ಅಪ್ಪಣೆ.

ವಿಲಾಯತಿ ವಸ್ತ್ರಾಲಿಗೆ ಬಹಿಷ್ಕಾರ.

ನಮ್ಮಲ್ಲಿ ನೂಲುತೆಗೆಯುವ ರಾಟಾಳ (ಚರಕ), ಶುದ್ಧ ಖಾದಿ. ರಾಷ್ಟ್ರಗೀತೆ ಮಹಾತ್ಮಾ ಗಾಂಧಿಯವರ ಫೋಟೋಗಳು ಬೇರೆ ತರದ ಸ್ವದೇಶೀ ವಸ್ತ್ರಾಲು ವಾಜವಿ ದರದಿಂದ ಸಿಗುವದು.

ಕೈಯಿಂದ ನೂಲುತೆಗೆದು ತಯಾರಮಾಡಿದ ದೇಶಿ ಡೇರೆ ನಮೂನೆಯು ಖಾದಿಯು ಸದ್ಯದಲ್ಲಿ ಬರುವದು. ಟು ವ್ಯಾಪಾರಸ್ಥರಿಗೆ ಭರಪೂರ ಕಮೀಶನ ಕೊಡುವೆವು.

ಕುಡ್ಲ ವಾಸುದೇವ ಪಾಂಡುರಂಗ ಶ್ಯಾನಭಾಗ, ಮತ್ತು ಬ್ರದರ್ಸ.

ಹೊನ್ನಾವರ, ಜಿ ಕಾರವಾರ.

ಸ್ವದೇಶೀ ಕಾರಖಾನೆಗೆ ಉತ್ತೇಜನ.

ವಿದೇಶಿ ವಸ್ತ್ರಲಿಗೆ ಬಹಿಷ್ಕಾರ

ದಿ, ಸ್ವದೇಶಿ ಇಂಕ ಸ್ಟೋರ್ಸ.

ಕಾರ್ಕಳ ಕೆನರಾ.

ಭಾರತೀಯ ಶಾಯಿ ಗುಳಿಗೆಗಳು.

ವ್ಯಾಪಾರಸ್ಥರಿಂದಲೂ, ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದದ್ದು

ನಂ. ೧ ಉತ್ತಮ ನೀಲಿಕಪ್ಪು ೧೪೪ ಗುಳಿಗೆ ಗ್ರೋಸ ೧ ಕ್ಕೆ ರೂ ೧-೪-೦. ೬ ಗ್ರೋಸಿಗೆ ರೂ. ೫-೮-೦ ೧೨ ಗ್ರೋಸಿಗೆ ರೂ ೧೦-೬-೦. ನಂ. ೨. ಗ್ರೋಸ ೧ ಕ್ಕೆ ೦-೧೫-೦ ೬ ಗ್ರೋಸಿಗೆ ರೂ ೫-೦-೦. ೧೨ ಗ್ರೋಸಿಗೆ ರೂ ೮-೬-೦. ಕೆಂಪು, ಹಸರು ಗ್ರೋಸ ೧ ಕ್ಕೆ ರೂ. ೧-೦-೦. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನು ೧ ಗ್ರೋಸಿಗಿಂತ ಕಡಿಮೆ ಕಳಿಸುವದಿಲ್ಲ. ಇಲ್ಲಿ ದೇಶೀ ಸಾಬೂನು ತಯಾರಾಗುವದು.

Notice to Investors.

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD, SILVER etc. Usual commission is charged *Please apply to Messrs.*

Gunshekhar & Co.
IRANI BUILDINGS,
Tardeo Road,
BOMBAY. 7.
Telegrams— Vaijayanti.

ಕಾಂಗ್ರೆಸ್ ಡೈರಿ.

ಈ ವರುಷ 'ಕಾಂಗ್ರೆಸ್ ಡಾಯರಿ" ಯನ್ನು ತಯಾರಿಸಿದಂತೆ ಮುಂದಿನವರ್ಷದ ಕಾಂಗ್ರೆಸ್ ಡೈರಿಯನ್ನು ವಿಶೇಷ ಪ್ರಾವೃತ್ತಿಯೊಂದಿಗೆ ತಯಾರಿಸುವದಲ್ಲದೆ, ಅದರಲ್ಲಿ ಇಡೀ ಕರ್ನಾಟಕದಲ್ಲಿರುವ ವಾರಪತ್ರಿಕೆ, ಮಾಸಪತ್ರಿಕೆ, ತ್ರೈಮಾಸಿಕಪತ್ರಿಕೆ, ಇತ್ಯಾದಿ ಕನ್ನಡಿಗರಿಗುಪಯುಕ್ತವಾದ ಸಾಹಿತ್ಯ ವಿಚಾರಕ ವಿಷಯಗಳನ್ನು ಸೇರಿಸಬೇಕೆಂದು ಶ್ರೀಯುತ ದ. ಕೃ ಭಾರದ್ವಾಜ ವಿವಾಭೂಷಣ, ಸಂಪಾದಕ, ತಿಲಕಸಂದೇಶ, ಮಂಗಳೂರು ಇವರು ನಿಶ್ಚಯಿಸಿರುವದರಿಂದ, ಕರ್ನಾಟಕದ ಎಲ್ಲಾ ಪತ್ರಕರ್ತರೂ ಅವರವರ ಪತ್ರಿಕೆಗಳ ಮಾದರೀ ಪ್ರತಿಯೊಂದನ್ನೂ ವರ್ಗಣೀ ವಿಶಾಸಾದಿಗಳನ್ನೂ ಈ ತಿಂಗಳೊಳಗಾಗಿಯೇ ಕಳುಹಿಸಬೇಕೆಂದು ಶ್ರೀ॥ ಭಾರದ್ವಾಜರು ವಿನಂತಿ ಪತ್ರ ಒಂದನ್ನು ಕಳಿಸಿರುವರು ಈ ವಿಧವಾದ ಕರ್ನಾಟಕ ಸಾಹಿತ್ಯ ಸೇವೆಗೆ ಪತ್ರಕರ್ತರೆಲ್ಲರೂ ಪ್ರೋತ್ಸಾಹವನ್ನು

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕೇಶವಾ ಅಥವಾ ಆರೋಗ್ಯಬಿಂದು.

ಈ ಅರ್ಕಕೇಶವಾ ಎಂಬ ಔಷಧವು ಮುಖ್ಯತ ರೋಗ [illegible] ವನವರಿಕೆಯುಗಿತ ೧೦ ಲ ೧೯ [illegible] ಇಸಿಯಿಂ ದ [illegible] ನೇ ಇಸ್ವಿಯವರೆಗೆ ವರಾಸ [illegible] ಬಾಟ್ಲಿಗಳ [illegible] ವೃತ್ತ ಮತ್ತು ಸನ ೧೯೧೮ ನೇ ಇಸ್ವಿಯ ಆಕ್ಟೋಬರ [illegible] ತಿಂಗಳಲ್ಲಿ [illegible] ಬೇ [illegible] ಗಳಲ್ಲಿ [illegible] ಗಳ [illegible] ಬಾಟ್ಲಿಗಳ [illegible] ಬಾಟ್ಲಿಗಳ [illegible] ವ್ಯಾಖ್ಯಾನ [illegible] ತಂದು [illegible]

[illegible]

ರೋಗದ ನಾಮಗಳು

[illegible] ಜ್ವರ [illegible] ಅಜೀರ್ಣ [illegible] ಸುರುಕ್ [illegible] ಬಾಟ್ಲಿ [illegible] ವೈದ್ಯರಿಗೂ [illegible] ಗುಣವಾಗುತ್ತವೆ. ಈ ಆರೋಗ್ಯಬಿಂದ ವಿನ [illegible] ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ [illegible] ಬಾಟ್ಲಿ ಒಂದಕ್ಕೆ ಎಂಟು ಆಣೆ [illegible] ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಷನ್ ಕೊಡುತ್ತೇವೆ. ಅದಕ್ಕೆ ಒಂಬತ್ತು ಆಣೆ [illegible] ಬರುವದು ಒಂದರಿಂದ [illegible] ಬಾಟ್ಲಿ [illegible] ಕಮಿಷನ್ ಇಲ್ಲ ಅದಕ್ಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಷನ್ ಕೊಡುತ್ತೇವೆ ಅದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಬಗತ ಅದರ ಉತ್ತರ ದೊರೆಯಲಿಕ್ಕಿಲ್ಲ ಅನುಪಾನವ ತ್ರಿಕದ ಕನ್ನಡ ಮರಾಠಿ ಮ ಸಲ್ಯಾನಿ ಬಾಷೆಗಳಲ್ಲಿ [illegible] ರುತ್ತವೆ ಪಸಂದಿ ಪ್ರಕಾರ ಬಾಟ್ಲಿಯು ಸೋಬತ [illegible] ಕನ್ನಡದಲ್ಲಿ ನಾವ [illegible] ಸ್ಪಷ್ಟವಾಗಿ ಬರೆಯುತ್ತಿರಬೇಕು

[illegible] ಸಂಪಾದಕ ಅರ್ಕೇಶವಾ, [illegible] ಆಫೀಸು [illegible] ಶಹಾಪೂರ, ಬೆಳಗಾಂವ

ಶಕ್ತಿಯಿಂದ ಗುಣಪಡಿಸುವ

ಔಷಧಗಳು.

1 [illegible] ವಸಂತ ಕುಸುಮಾಕರ ಲೋಹ [illegible] — [illegible] ಇಂದ್ರಿಯ [illegible] ಪುಷ್ಟಿ [illegible] ಧಾತುಪುಷ್ಟಿ ಮತ್ತು [illegible] 10 ಸಲ ಸೇವಿಸುವ ಲೋಹ ಪಪ್ಪಿ 1 ಕ್ಕೆ 1 12 0 [illegible] 4 1—0

2 [illegible] ಲೇಹ್ಯ — (ಖಾತ್ರಿ ಗುಣ) - [illegible] ದಿವಸಕ್ಕೊಮ್ಮೆ [illegible] ಪ್ಪಿ 1 ಕ್ಕೆ 0 8—0

3 [illegible] ಪ್ಪಿ 1 ಕ್ಕೆ ರು 0 10 0

4 [illegible] ಗುಟಿ [illegible] ಸಿದ್ಧ ಔಷಧಿ [illegible] 1 ಕ್ಕೆ ರು 0 10 0

5 [illegible] ಬಾಟ್ಲಿ 1 ಕ್ಕೆ 1 12 0

ಎಮ್. ಗಣಪಯ್ಯ ಎಂಡ ಸನ್ಸ್
ನವಾ ಕೊಬ್ಬರ್ಸ ರಥಬೀದಿ [illegible]

ಮೋಟಾರ.



ಕಾರವಾರ [illegible] ಸಿರಸಿಗೆ [illegible] ಕಾರ್ ಪ್ರತಿ ಆದಿತ್ಯವಾರ-ಗುರುವಾರ ಮೋಟಾರ ನಡಿಸುವ [illegible] ಇಟ್ಟದೆ ಕಾರ್ [illegible] ಘಂಟೆಗೆ ಮತ್ತು ಸಿರಸಿಯಿಂದ [illegible] ೨ ಘಂಟೆಗೆ ಹೊರಡುವವು [illegible] ಯಲ್ಲಿ [illegible] ಸಿರಸಿಯಲ್ಲಿ [illegible] ಹೆಚ್ಚು ಜನರು [illegible] ವಸಗಳಲ್ಲಿ ಸಹ ನಡಿಸುವವು

ಟಿಕೇಟುಗಳು ಸಿರಸಿಯಲ್ಲಿ ಲೋಕಗಿರಿರಾವ ಘಾತಕಪ್ಪ [illegible] ಮತ್ತು ಕಾರವಾರದಲ್ಲಿ [illegible] ಸಿಗುವವು

ಎಸ್. ಎಲ್. ಘಾತಕಪ್ಪ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು

ಪ್ರಭು ಲಕ್ಷ್ಮಣಯ್ಯ ಜ್ಞಾನಭಾಗ.
ಮೊಗವೀರಕೇರಿ, ದುಕಾನ, ಕುಮುಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हे औषध दुर्गम अशा पहाडातील अनेक वनस्पतींच्या रसात पौष्टिक औषधीफळांचा रसार्क मिश्र करून, खाली दिलेल्या रोगावर उपयुक्त अशी भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीने तयार केला आहे हा बिंदु सेवन केल्याने नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहीसा करून, वीर्य वृद्धि व रक्तशुद्धि होते कितीहि जुनाट कडकी असो (एक सनकातच) नाश पावत आणि उपदंश सबंधी सुरलेले विकार नाहीसे होऊन हातपाय, डोळे यांचा दाह व प्रातुविघातक सर्व विकार नष्ट होऊन,शरीर वज्राप्रमाणे बनते, हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि सततीस अपायकारक असे गर्भाशयस्थ रोग याचा समूळ नाश होतो हे औषध स्त्रियानी सेवन केल्यास त्यांचे जननेंद्रियाचे कोणत्याहि प्रकारचे विकार न राहता, त्या गर्भधारणास योग्य होतात ह्याच्या सेवनाने दिवसातून तीन वेळा जरले तरी भूक चांगली लागत जाऊन शौचास साफ होते याचा अनुभव औषध घेतल्याच्या पहिल्या दिवशी येतो. तरी वरील रोगग्रस्त तरुण आणि वृद्ध, स्त्रिया व पुरुष यानी या वज्रांग बिंदूचे सेवन करून, यातील खरी मजा पहावी फार दिवसाचा रोग असल्यास, पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असता, गुण येईल. एका बाटलीमध्ये १० तोळे औषध असते त्या एका बाटलीची किंमत १। रुपया तीन बाटल्याची किंमत ३। रुपये एक डझन (१२) बाटल्याची किंमत १० रुपये याशिवाय टपाल, व प्याकिंग खर्च निराळा पडेल

म्यानेजर,
के. एम हनुमान मागादिक कंपनी
जिल्हा बेळगांव, मु. पो निपाणी

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ,

ರೂ ೩.೦೦ರ ವ ಮನಿಯಾರ್ಡರ ಮಾತ್ರ ಅಂದರೆ ೧ ವರ್ಷದವರೆಗೆ ನಿಮ್ಮಲ್ಲಿಗೆ ಬರುವದು ಪತ್ತೆ — ಕಾನಡಾವೃತ್ತ ಆಫೀಸ, ಕುಮುಟಾ

Printed and published by Krishnarao Keshav Shenvi at his Star of Kanara Press, Kumta

Reg. No B. 1270.

ವರ್ಷ ೫.

ಸಂಚಿಕೆ ೪೯.

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ -

ಕುಮಟೆಯಲ್ಲಿ ಅಗಾವು ರೂಪಾಯಿ 2-0-0

ಪರಸ್ಥಳದಿಂದ ರೂ 2-13-0

ವ್ಹಿ. ಪಿ. ಖರ್ಚಿನ ಸಹಿತ ರೂಪಾಯಿ 2-15-0

ಬಿಡಿ ಸಂಚಿಕೆಗೆ 0-1-0

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ ಸ್ಮಾಲ ಪೈಕಿನ (೧೫ ಎಮ್‌ಉದ್ದ) ೧ ಸಾಲುಗಳ ವರೆಗೆ ರೂ 1-0-0

ಅನಂತ ಪ್ರತಿ ಸಾಲಿಗೆ 0-2-0.

ಹೆಡ್ಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ನಮೂದಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾ॥ ೨೯ ನೇ ಮಾಹೆ ಸಪ್ಟಂಬರ ಸನ್ ೧೯೨೧ ನೇ ಇಸವಿ.]—

ಓದಿ ನೋಡಿರಿ ! ಖಾತ್ರಿ ಕಳೆಯಿರಿ ! ತ್ವರೆ ಮಾಡಿರಿ !

ಒಮ್ಮೆಗೆಲ್ಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಡತನವನ್ನೂ ರೋಗಗಳನ್ನೂ ದೂರಮಾಡಿ ಆರೋಗ್ಯವನ್ನೂ, ರತಿಯಲ್ಲಿ ಹೆಚ್ಚಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ ಸೌಖ್ಯವನ್ನೂ ಕೊಟ್ಟು, ಮನುಷ್ಯನ ವೃದ್ಧತೆಯನ್ನೂ ಯೌವನದ ಕಳೆಯನ್ನೂ ಹೆಚ್ಚಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ವೃದ್ಧತ್ವವನ್ನು ನಿವಾರಿಸಿ ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶ್ವಾಸ, ಕಾಸ, ಮೂತ್ರಕೃಚ್ಛ್ರ ಮುಂತಾದ ರೋಗಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿದೆ. ದೇಶಕಾಲಾದಿಗಳಿಂದಲೂ, ಅತ್ಯಾಹಾರದಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ ಚಿಕ್ಕವಯಸ್ಸಿನಲ್ಲಿ ಒದಗುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿ ವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವಾಗುವದು, ನಿಸ್ತೇಜವಾಗುವದು, ಶೀಘ್ರಸ್ಖಲನವಾಗುವದು, ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸಿ, ನಿದ್ರೆಯಲ್ಲಿ ಭಯಂಕರವಾದ ಸ್ವಪ್ನ ಬೀಳುವದು, ಮರವು ಮತ್ತು ಶರೀರದ ಸಾಂಗಳು ಕುಸಿದು ಚೇತನ ಕುಂದಿ ಹೋಗುವದು ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆಗೆ ರೂ ೧॥ ನಂ ೧ ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅಂತು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ.

ಎಮ್. ಜಿ. ಭಾಗ್ವತ್, ಆಯುರ್ವೇದಿಕ ಕೆಮಿಸ್ಟ್,
ಶಿರ್ಶಿ (ಕೆನರಾ)

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ಧಗೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು ಹೆಂಗಸರ ಗರ್ಭಕೋಶದ ವಿಕಾರ, ಪರಮಾ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟೆಂಟು ಔಷಧಗಳೂ, ಸ್ಟೇಶನರಿ, ಪರಿಮಳವರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗೆಗಳೂ, ಕಂಬಳಿ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು

ಎಸ್ ಎಲ್ ಧಾಕಪ್ಪ ಮತ್ತು ಬಂಧು
ಶಿರ್ಶಿ.

ಕಾರ್ಡಸೈಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸೈಜಿನ ಫೋಟೋಗಳು ನಮ್ಮಲ್ಲಿ ಸಿಗುವವು

ಕ್ರಯ — ೧ಕ್ಕೆ ೨ಆ, ಡಜನಕ್ಕೆ ೧ರೂ, ಶೇಕಡಾ ೧-೧೦-೦ ಟಪಾಲ ಹಾಸಲ ಬೇರೆ. ಸಂಪಲಗಳು ಬೇಕಾದರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು

ಪತ್ತೆ— ಸ್ವಾರ್ ಆಫ್ ಕೆನರಾ ಪ್ರೆಸ್,
ಕುಮಟಾ (ಎನ್. ಕೆನರಾ,)

ಭಡತೀ ಭ್ರಾತೃಸಂಘದ

ಅನುಭವಸಿದ್ಧ ವಾದ

ಜ್ವರದ ಗುಳಿಗೆಗಳು ಕ್ರಯ — ೨೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಬ್ಬ, ಇಂಚ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಶಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

ಪ್ರಸಿದ್ಧ ಶಾಯಿ ಪುಡಿಗಳು.

ನೀಲಿಕಪ್ಪು, ಕೆಂಪು, ಜಾಂಬಳಿ ೧೦೦ಕ್ಕೆ ೧ರೂ ಕಪ್ಪು ಮಾತ್ರ ೧॥ರೂ ಶಾಯಿ ಸಂಪಲಿಗೆ ೬ಆಣೆ. ಸೋಲ ತೆಗೆದುಕೊಂಡರೆ, ಭರಪೂರ ಕಮಿಶನ್

ಪತ್ತೆ— ಎಸ್. ವ್ಹಿ. ಭಾಗ್ವತ.
ಪೋಸ್ಟ— ಹೆಗಡೆ, ಉತ್ತರ ಕಾನಡಾ

ಹೊಸ ಶೋಧ ! "ಓಂ" ಹೊಸ ಶೋಧ !!

ಗುಣ ಬಾರದಿದ್ದರೆ ಹಣ ವಾಪಸ

(ಅತ್ಯಂತ ಪೌಷ್ಟಿಕ ಹಾಗು ಶಕ್ತಿವರ್ಧಕ,)

ಅಮೃತ ಜೀವನ ಪಾಕು.

ಈ ಆಶ್ಚರ್ಯಕಾರಕವಾದ ಪಾಕವನ್ನು ಅನೇಕ ವನಸ್ಪತಿಗಳ ರಸದಲ್ಲಿ ಅಮೃತವಲ್ಲಿಯ ರಸದ ಆರ್ಕ ಮಿಶ್ರಮಾಡಿ ಅನುಭವಿಕ ಆಯುರ್ವೇದೀಯ ಯೋಗದ ಮೂಲಕ ರೋಗಿಗಳಿಗೆ ಉಪಯುಕ್ತವಾಗುವಂತೆ ಬಹಳ ಪ್ರಯಾಸದಿಂದ, ತಯಾರಿಸಿರುತ್ತೇವೆ. ಈ ಪಾಕಸೇವನೆಯಿಂದ ನಪುಂಸಕತ್ವವು, ಮೂತ್ರದ ಜೊತೆಯಲು ಅಥವಾ ಅದರ ಮೇಲೆ ಧಾತು ಬೀಳುವದು ವಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗದಿರುವದು ರಕ್ತ ಶುದ್ಧಿಯಾಗಿ ವೀರ್ಯ ವೃದ್ಧಿಯಾಗುವದು ಒಂದು ದಿವಸದಿಂದ ಮನೆಮಾಡಿದ್ದ ರೋಗ ಉಷ್ಣ ಸಂಬಂಧಿಯು ಎಲ್ಲ ವಿಕಾರಗಳು ಗುಣವಾಗುವವು. ಮಲಶುದ್ಧಿಯಾಗಿ ಚನ್ನಾಗಿ ಹೊಟ್ಟೆ ಹಸಿಯುವದು. ಇತ್ಯಾದಿಂದ ದೂಷಿತವಾದ ಶರೀರಕ್ಕೆ ಯಾವ ಪ್ರಕಾರದ ಪ್ರತಿಯೊಂದು ಗುಣವುಂಟಾಗಬೇಕೋ, ಅವೆಲ್ಲವೂ ಈ ಪಾಕಸೇವನೆಯಿಂದ ಉಂಟಾಗುವವಲ್ಲದೆ ಇನ್ನೂ ಅನೇಕ ಮಹತ್ವದ ಗುಣಗಳೂ ಬರುವವು. ಇದರ ಅನುಭವವು ಸೇವನೆಯ ಮೊದಲನೇ ದಿವಸವೇ ನಿದರ್ಶನಕ್ಕೆ ಬರುವದು. ಸ್ತ್ರೀಯರು ಸೇವಿಸಿದಲ್ಲಿ ಬಿಳಿಸೆರಗು ಮೊದಲಾದ, ಸ್ತ್ರೀಯರ ರೋಗಗಳು ನಿರ್ಮೂಲವಾಗುವವಲ್ಲದೆ ಮುಟ್ಟು ನಿರ್ದೋಷವಾಗಿ ನಿಯಮಿತವಾಗುವದರಿಂದ ಸ್ತ್ರೀಯರು ಸಶಕ್ತರಾಗಿ ಗರ್ಭಧಾರಣೆಗೆ ಯೋಗ್ಯರಾಗುವರು. ಹೊಸ ಬೇನೆ ಇದ್ದರೆ, ಒಂದು ಡಬ್ಬಿ ಪಾಕಸೇವನದಲ್ಲೂ, ಬಹು ದಿವಸದ್ದಿದ್ದರೆ ಮೂರು ಡಬ್ಬಿ ಪಾಕದಿಂದಲೂ ಗುಣ ಬರುವದು. ನಿದಾನ ಒಂದು ಸಾರಿಯಾದರೂ ಅನುಭವ ತೆಗೆದುಕೊಂಡು ನೋಡಿರಿ.

ಬೆಲೆ, ಅಂಚೆ ಹಾಸಲು ಸಹ, ೧ಲ ತೊಲೆಯ ಡಬ್ಬಿಗೆ ರು ೧ ಆಣೆ ೩ ಡಬ್ಬಿಗಳಿಗೆ ೪ ರು ೮ ಆಣೆ ೬ ಡಬ್ಬಿಗಳಿಗೆ ೧೫ ರು ಮೇಲೆ ೧ ಡಬ್ಬಿ ಉಚಿತ ಕೊಡಲ್ಪಡುವದು

ಸೂಚನೆ— ಪತ್ರವ್ಯವಹಾರ ಇಂಗ್ಲಿಷ ಅಥವಾ ಕನ್ನಡದಿಂದ ಸ್ಪಷ್ಟ ಮತ್ತು ಶುದ್ಧ ಬರೆಯಬೇಕು

ಪತ್ತೆ— ವ್ಹಿ. ಆರ್ ಬ್ರದರ್ಸ ಮತ್ತು ಕಂಪನಿ.
ಪೋಸ್ಟ ನಿಪ್ಪಾಣಿ, ಜಿ. ಬೆಳಗಾಂವ

ಶ್ರೀ। ಕಮಲಾಬಾಯಿಯ ಅಬಲಾ ಸಂಜೀವನಿ ಗುಳಿಗೆ.

ಬರೇ ಸ್ತ್ರೀಯರಿಗೋಸ್ಕರ.

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಅಪಾಯಕರ ಮತ್ತು ತೀಕ್ಷ್ಣ ಮನೋವೇಧಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ. ೨೫ ವರ್ಷಗಳದಾರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ ತಪಶೀಲ ಮಾಹಿತಿಯ ಕೆಟಲಾಗು ಬರೇ ೦—೨—೬ ಸ್ಟಾಂಪ ಕಳುಹಿಸಿದರೆ ಉಚಿತ ಸಿಗುವದು ಬಾಟ್ಲಿ ೧ ರ ಕ್ರಯ ೧—೮—೦ ಟಪಾಲ ಖರ್ಚ ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ.

ಶ್ರೀ। ಕಮಲಾಬಾಯಿ ಜಿ.ಎಮ್ ಸಿ ಫಾರ್ಮಸಿ, ಕಾಳಬಾದೇವಿಯ ಎದುರಿಗೆ, ಮುಂಬಯಿ.

ಡಾ. ನವರತ್ನಕರ.

ವಿದ್ಯುತ್‌ಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ

ಇದರಿಂದ ಬಿಳಿ ಬಣ್ಣದ ಕೂದಲು ಕಾಗೆ ಕಪ್ಪಾಗುತ್ತವೆ. ಈ ಕಲಾಪಿನಗುಣಗಳ — ಸ್ವಚ್ಛ ಕಪ್ಪು ಬಣ್ಣ, ಇಂಪಾದ ಪರಿಮಳ, ಆಗ ಕ್ರಿಯೆ... ಬಳಸಿದವರೆಲ್ಲರು ಸಮಾಧಾನಪಟ್ಟಿರುವರು.

ಕ್ರಯ ೧—೮—೦ ಅಂಚೆ ವೆಚ್ಚ ಬೇರೆ
೧೨ ಕ್ಕೆ ೧೫— ೮ —

ನವರತ್ನ ಮತ್ತು ಸನ್
109, ಕಾಳಬಾದೇವಿ ರೋಡ ಮುಂಬಯಿ.

ಅನುಭವಸಿದ್ಧವಾದ ಔಷಧಗಳು!!!

ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ.

ಧಾತುಪೌಷ್ಟಿಕ ಗುಳಿಗೆ

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ. ರಕ್ತದೂಷಿತರೋಗ, ಮೇಂದುವಿಕಾರಗಳ ಅಶಕ್ತತೆ ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ ಉಪದಂಶವಿಕಾರ, ಮುಸ್ತಕಶೂಲಿ, ಮುಂಜಾವ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವ, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ವೃಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು. ಗುಳಿಗೆ ೮೪ ಕ್ಕೆ ರೂ ೪—೦—೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳ ಮೇಲೆ ಅತಿ ಉತ್ತಮವಾದದು. ಗುಳಿಗೆ ೩೦ ಕ್ಕೆ ರೂ ೧—೦ ೦. (೨) ಸ್ವಪ್ನಾವಸ್ಥೆ ಮೇಲೆ ಚೂರ್ಣ.— ೧೪ ದಿವಸದ ಔಷದಕ್ಕೆ ರೂ ೨—೦—೦ (೩) ಗಜ್ಜಕರ್ಣನಾಶಕ ಮಲಮ — ಡಬ್ಬಿಗೆ ಆಣೆ ೦—೮—೦ (೪) ಮಲವ್ಯಾಧಿ ನಾಶಕ್ಕ ಗುಳಿಗೆ.— ಮೊಳೆ ಒಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨—೦—೦.

ಅನುಮಾನಪತ್ರ ಔಷಧ ಸಂಗಡ. ಅಂಚೆ ವೆಚ್ಚ ಬೇರೆ

ಶಿಳಾಸ — ವೈದ್ಯ ವ್ಹಿ. ಎಸ್ ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ, ಜಿಲ್ಲಾ ಉತ್ತರಕಾನಡಾ.

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಸ್ಚರ.

ಮಲಶುದ್ಧಿಯಾಗುತ್ತದೆ, ಪದರು ಬಂದು ಜ್ವರವು ಬಿಡುತ್ತದೆ, ಕ್ರಯ ೦—೧೨—೦ ರೋಕ ವ್ಯಾಪಾರಸ್ಥರಿಗೆ ಅಗ್ಗ

ಪಾಟಣಕರ ಮಾಧುದೇವ ಕಂಪನಿ
ಮುಂಬಯಿ ೪.

ಲೋಕಮಾನ್ಯವಾದ ಚಹಾ ಮತ್ತು ನೀಲಗಿರಿ ಎಣ್ಣೆ.

ನೀಲಗಿರಿ ಗುಡ್ಡದ ಅಷ್ಟೆಕಡ, ಎಲ್ಲಾ ತರದ ಚಹಾ ಮತ್ತು ಉಟಕಮಂಡದ ಪ್ರಸಿದ್ಧ ನೀಲಗಿರಿ ಎಣ್ಣೆ (ಯುಕಲಿಪ್ಟಸ ಓಯಿಲ್) ... ಬೇರೆಯಲ್ಲಿಯೂ ಸಿಗದೆ, ... ಇದೊಂದೇ ಸ್ಥಳವು ಚಹಾ ... ನೀಲಗಿರಿ ಎಣ್ಣೆಯ ಹೊಸ ಸ್ಟಾಕ್ ... ವ್ಯಾಪಾರಸ್ಥರ ...

ವಿ. ಪಿ ಶೇಣಭಾಗ ಮತ್ತು ಬ್ರದರ್ಸ
ಹೊನ್ನಾವರ ಉತ್ತರ ಕಾನಡಾ
HONAWAR (N. Kanara)

FREE. FREE.

Purchasers of 36 tins of our well renowned Ringworm Ointment, price As. 4 per tin or of 12 Phials of Otto Mushk hina, Price As. 12 per tube, will be sent.

A WRIST WATCH FREE

King George Coronation Co., BOMBAY No. 4.

ಸತ್ಯಮೇವ ಜಯತೇ

(ಗುಣಬಾರದಿದ್ದರೆ ಹಣಪರತು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗರ್ಮಿ, (ಚಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತವೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟಪಾಲ ಬೇರೆ ಅನುಪಾನಪತ್ರಿಕೆ ಔಷದದ ಸಂಗಡ

ಶಿಳಾಸ— ಜಿ. ಎಲ್. ಜೋಶಿ ಕಂಪನಿ
ಪೋಸ್ಟ— ಸಿರಸಿ ಉತ್ತರ ಕಾನಡಾ.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕಳಗಿನ ವಿಳಾಸಕ್ಕೆ ಬರಕೊಳ್ಳಬಹುದು. ಸವಲತ್ತಿಯ ದರಗಳು ಇಟ್ಟಿರುವೆವು. ನಮ್ಮ ಪತ್ತೆ:—

ಗ್ವಾತೋಂಡೇ ಬ್ರದರ್ಸ,
ಮೋಟರ ಡೀಲರ್ಸ, ರಿಪೇರರ್ಸ,
ಕಾರವಾರ.

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ

ನವೀನ ಭಾರತ.

(ವಾರ್ಷಿಕ ವರ್ಗಣೀ ಅಂಚೇ ವೆಚ್ಚಸಹಿತ ರೂ. ೩)

ಇದರಲ್ಲಿ ಸಾಮಾಜಿಕ. ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ, ಮನೋವೇಧಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶೀ, ಬಹಿಷ್ಕಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖಗಳೂ ಪ್ರಕಟಿಸಲ್ಪಡುವವು. ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು. ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ, ಜಾಹೀರಾತಗಾರರಿಗೂ ಅತಿಶಯ ಅನುಕೂಲ.

ವಿಳಾಸ— ನವೀನ ಭಾರತ ಕಾರ್ಯಾಲಯ,
ಬಾಗಲಕೋಟ (ಜಿ ವಿಜಾಪೂರ)

ಘನ್ನತೆ ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪೌಷ್ಟಿಯಾಗಿ ಶರೀರವು ಕಾಂತಿಗೊಳಿಸುವದು ಇದಲ್ಲದೆ ಕಮ್ಮು ದಮ್ಮು ಕಫ, ವಾತ, ಪಿತ್ತ, ನಿದೆ, ಇಲ್ಲಗಳೂ, ಮಲ ವಿಸರ್ಜನೆ ಸರಿಯಾಗಿ ಆಗದಿರೋಣ, ಜೀರ್ಣ ಜ್ವರ, ಸ್ತ್ರೀಯರ ಗರ್ಭದೋಷ, ಹುಡುಗರ ಹೊಟ್ಟೆಯ ಎಲ್ಲಾ ಬೇನೆಗಳು ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ. ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧.

ಕೆರೇಕಾರ ಬ್ರದರ್ಸ, ಶಕ್ತಿವರ್ಧಕ ಹಲವಾ
ಡಿಪೋ, ಕುಮಟಾ ಕಾನಡಾ)

ಅತ್ಯುತ್ತಮವಾದ ಮಂಗಳೂರ ನಶೀಪುಡಿ,

ಮತ್ತು ಸೇದುವ ಬೀಡಿಗಳು ನಮ್ಮಲ್ಲಿ ಸಿಗುತ್ತವೆ. ರೋಕ ದರ, ಸವಲತಿಯ ಇರುತ್ತದೆ

ಪತ್ತೆ:— ಬಿ. ದಾಸ, ಕುಮಟಾ

ಜಾಹೀರನಾಮೆ.

ಕಾನಡಾವೃತ್ತದ ತಾ ೨೫-೮-೨೧ ನೇ ಸಂಚಿಕೆಯಲ್ಲಿ ಕುಮಟಾ ಕಟ್ಟಿಗೆ ಡಿಪೋದಲ್ಲಿ ನಾಟಕಟ್ಟ ಕಟ್ಟಿಗೆ ಪುರವಠಿ ಇಲ್ಲಿಂತ ನಗ್ಯರ ಮುಜ್ಕೂರು ಇತ್ತಷ್ಟೇ. ಈಗ ಸದರಿ ಡಿಪೋದಲ್ಲಿ ನಾಟಕಟ್ಟ ಪುರವಠಿ ಇಟ್ಟಿರುತ್ತದಾಗಿಯೂ, ಬಡಜನರು ಜಂಗಲ ಕೂಪಿನೊಳಗಿನ ಕೋಲುಕವಳಿ (ಹೆಗ್ಗಗಳು) ತೆಗೊಂಡು ಬರಬಹುದಾಗಿಯೂ ಮೆ॥ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸರ ದಕ್ಷಿಣಭಾಗದವರ ಕಡೆಯಿಂದ ಬರೆದು ಬಂದದೆ ಇದರ ಉಪಯೋಗ ಜನರು ಮಾಡಿಕೊಂಡಾರೆಂದು ಕೋರುವೆವು

(ತಾ ೨೦-೯-೨೧) ಆರ್. ಎನ್. ದೇಶಪಾಂಡೆ

ಮಾಮಲೆದಾರ, ತಾಲೂಕ ಕುಮಟಾ

North Kanara Motor Service Ankola.

ನೋರ್ಥ ಕೆನರಾ ಮೋಟಾರ ಸರ್ವಿಸು, ಅಂಕೋಲಾ.

ಈ ಕಂಪನಿಯ ಅಂದವಾದ ಮೋಟಾರ ಬಂಡಿಗಳು ಆಕ್ಟೋಬರ ೫ ನೇ ತಾರೀಖಿನಿಂದ ಪ್ರತಿ ಬುಧವಾರ ಮತ್ತು ಶನಿವಾರ ಬೆಳಿಗ್ಗೆ ಕಾರವಾರದಿಂದ ಹೊರಟು, ಸಾಯಂಕಾಲ ಹುಬ್ಬಳ್ಳಿಗೆ ತಲ್ಪುವವು, ಮತ್ತು ಪ್ರತಿ ಗುರುವಾರ, ಮತ್ತು ಆದಿತ್ಯವಾರ ಬೆಳಿಗ್ಗೆ ಹುಬ್ಬಳ್ಳಿಯಿಂದ ಹೊರಟು, ಸಾಯಂಕಾಲ ಕಾರವಾರಕ್ಕೆ ತಿರುಗಿ ಬರುವವು ಮಧ್ಯದ ಸ್ಟೇಶನ, ಟಿಕೇಟಿನ ದರ, ವೇಳಾಪತ್ರಿಕೆ, ಇವೆಲ್ಲವುಗಳ ವಿಶೇಷ ಮಾಹಿತಿ ಕಂಪನಿಯ ಮೆನೇಜರರ ಕಡೆಗೆ, ಇಲ್ಲವೆ ಕೆಳಗಿನ ಏಜಂಟರ ಕಡೆಗೆ ದೊರೆಯುವದು.

ಏಜಂಟರು:
- ಕಾರವಾರ— ಅಮ್ಮದಖಾನ ಉಮ್ಮರಖಾನ ಪಠಾಣ, ಕೆಪ್ಲಿಕ ಮರ್ಚಂಟ ಕಾರವಾರ
- ಹುಬ್ಬಳ್ಳಿ— ದೇಸ್ಯಾಪಾಂಡೆ ಕಂಪನಿ ಸವಾಯಿಕಟ್ಟಾ, ಹುಬ್ಬಳ್ಳಿ

ಹೆಡ್ ಆಫೀಸ– ನೋರ್ಥ ಕೆನರಾ ಮೋಟಾರ ಸರ್ವಿಸ ಅಂಕೋಲಾ,

ಮೆನೇಜರ,

ನೋರ್ಥ ಕೆನರಾ ಮೋಟಾರ ಸರ್ವಿಸ ಅಂಕೋಲಾ.

ಧಾರವಾಡ ಗೋಳಿಬಾರು.

ಶ್ರೀಯುತ ರಂಗನಾಥ ರಾಮಚಂದ್ರ ದಿವಾಕರ ಎಮ್ ಎ ಎಲ್ ಎಲ್ ಬಿ (ಆರೋಪಿ ನಂ ೬) ರ ಜಬಾಬು.

ನಾನು ರಂಗನಾಥ ರಾಮಚಂದ್ರ ದಿವಾಕರ ಕೆಳಕೋರ್ಟಿನಲ್ಲಿ ಹೇಳಿದ ಜವಾಬಿನ ಹೊರತಾಗಿ ಕೆಳಗೆ ಬರೆದಂತೆ ಹೆಚ್ಚಿನ ಸಂಗತಿಗಳನ್ನು ಹೇಳಬಿಚ್ಛಿಸುತ್ತೇನೆ.

ನಾನು ಮುಂಬೈ ವಿಶ್ವ ವಿದ್ಯಾಲಯದ ಒಬ್ಬ ಎಮ್. ಎ, ಇರುತ್ತೇನೆ. ಅದೇ ವಿಶ್ವವಿದ್ಯಾಲಯದ ಎಲ್. ಎಲ್. ಬಿ ಯಾದರೂ ಇದ್ದೇನೆ; ಡಿಗ್ರಿ ಇನ್ನು ತೆಗೆದುಕೊಂಡಿಯುವದಿಲ್ಲ. ಸಧ್ಯಕ್ಕೆ ನಾನು ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ಶಿಕ್ಷಕನಿರುತ್ತೇನೆ. ರಾಜಾರಾಮ ಕಾಲೇಜಿನಲ್ಲಿ ನಾನು ಇಂಗ್ಲೀಷ ಭಾಷೆಯ ಪ್ರೊಫೇಸರನಿದ್ದೆನು. ಅದರಂತೆಯೇ ಧಾರವಾಡದ ಕೆ ಪಿ. ಸೊಸಾಯಿಟಿಯ ಕಾಲೇಜದಲ್ಲಿ ಸಹ ನಾನು ಇಂಗ್ಲೀಷ ಪ್ರೊಫೆಸರನಿದ್ದೆನು. ಧಾರವಾಡದಲ್ಲಿ ಪ್ರಕಟವಾಗುತ್ತಿರುವ "ಕರ್ಮವೀರ" ಎಂಬ ಸಪ್ತಾಹಿಕ ರಾಷ್ಟ್ರೀಯ ವರ್ತಮಾನ ಪತ್ರದ ಪ್ರಕಾಶಕನೂ ಮುದ್ರಕನೂ ಇರುತ್ತೇನೆ ಆದುದರಿಂದ ನಾನು ವರ್ತಮಾನ ಪತ್ರಕಾರನೂ ಇದ್ದೇನೆ ಹಿಂದುಸ್ಥಾನದ ರಾಜಕೀಯ ಮೋಕ್ಷವು ಅಹಿಂಸಾತ್ಮಕ ಅಸಹಕಾರಿತೆಯಿಂದಲೇ ತಿಗುವದೆಂದು ನನ್ನ ದೃಢ ನಂಬಿಕೆಯಿರುವದರಿಂದ, ನನ್ನ ವರ್ತಮಾನ ಪತ್ರದ ಧೋರಣವು ಅದರಂತೆಯೇ ಇರುತ್ತದೆ.

ಫಿರ್ಯಾದಿ ಪಕ್ಷವು ನನ್ನ ಮೇಲೆ ಹೊರಿಸಿದ ನಿಂದ್ಯ ಆರೋಪಗಳ ಬಗ್ಗೆ ನಾನು ಪೂರ್ಣ ನಿರ್ದೋಷಿಯಿರುತ್ತೇನೆಂದು ಪುನಃ ಸಾರಿ ಹೇಳುತ್ತೇನೆ ನಾನು ಅಹಿಂಸಾತ್ಮಕ ಅಸಹಕಾರಿತಾವಾದಿಯಿರುವದರಿಂದ, ಯಾವ ಯಾವ ಕಾರ್ಯಗಳಲ್ಲಿ ನಾನು ಯಥಾಶಕ್ತಿ ಪ್ರಸಕ್ತನಾಗಿರುವೆನೋ ಆ ಕಾರ್ಯಗಳಲ್ಲಿ ನಾನು ಆಚಾರದಿಂದಲೂ ಉಚ್ಚಾರದಿಂದಲೂ ಹಿಂಸೆಯನ್ನು ಮಾಡಿಲ್ಲ, ಅಥವಾ ಮಾಡಲಿಕ್ಕೆ ಉತ್ತೇಜನವನ್ನು ಕೊಟ್ಟಿಲ್ಲ. ನನ್ನಮೇಲೆ ಹೊರಿಸಿದ ಆರೋಪಗಳು ಕೀಳ ಒದವಾಶ ಜನರು ಮಾಡುವಂಥವು. ಇಂಥ ಆರೋಪಗಳನ್ನು ನಾನು ಮಾಡಬೇಕೆಂಬುವ ಮನಸ್ಸಿಯ ಕಲ್ಪನೆಯನ್ನು ಸಹ ನಾನು ಮಾಡಲಾರೆನು. ಸಾಮಾನ್ಯ ಪರಿಸ್ಥಿತಿ ಕಾಲದಲ್ಲಿ ಇಂಥ ಆರೋಪಗಳನ್ನು ನನ್ನ ಮೇಲೆ ಹೊರಿಸುವ ಎದೆಗಾರನು ತಿಗುವದೂ ಕಷ್ಟ. ಆದರೆ ಇಲ್ಲಿಯ ಕಾಂಗ್ರೆಸ ಮತ್ತು ಖಿಲಾಫತ ಚಳವಳಿಗಾರರನ್ನು ಮುರಿಬಡಿಯಲಿಕ್ಕೆ ಕಂಕಣಬದ್ಧರಾದ ಈ ಜಿಲ್ಲೆಯೊಳಗಿನ ಎಲ್ಲ ಅಧಿಕಾರಿಗಳ ಬೆಂಬಲವು ಈ ಕಟ್ಲೆಯಲ್ಲಿಯ ಫಿರ್ಯಾದಿ ಪಕ್ಷಕ್ಕೆ ಸಿಕ್ಕಿರುತ್ತದೆ ಫಿರ್ಯಾದಿ ಪಕ್ಷವು ಅನ್ಯಾಯ ದಂಗೆಯ ವಿಲಕ್ಷಣ ಪರಿಸ್ಥಿತಿಮೇಲಿಂದಲೂ, ವಿಲಕ್ಷಣ ಪ್ರಕಾರದ ಮೇಲಿಂದಲೂ, ಇಲ್ಲಿಯ ಸ್ಥಾನಿಕ ಕಾಂಗ್ರೆಸ ಖಿಲಾಫತ ಮದ್ಯಪಾನನಿಷೇಧಕ ಚಳವಳಿಯಲ್ಲಿ ತೊಡಗಿದವರ ವಿರುದ್ಧ ವಿಘ್ನಗಳನ್ನು ಉಪಸ್ಥಿತ ಮಾಡಿದುದರಿಂದಲೂ, ಮೇಲ್ಕಂಡ ಸಂಗತಿಯು ಒಡೆದು ಕಾಣುತ್ತದೆ. ದೇಶದ ಸದ್ಯಸ್ಥಿತಿಯನ್ನು ಪರ್ಯಾಲೋಚಿಸಿದಲ್ಲಿ ಇಲ್ಲಿಯ ಕೆಲಸಮಾಡುವವರ ವಿರುದ್ಧ ಅಧಿಕಾರಿಗಳ ದೀರ್ಘದ್ವೇಷವಿರುವದೆಂಬುದರ ಬೋಧವಾಗುತ್ತದೆ

ಇಡೀ ದೇಶಕ್ಕೆ ಈಗ ಒಳ್ಳೇ ಇಕ್ಕಟ್ಟಿನ ಪ್ರಸಂಗವು ಒದಗಿರುತ್ತದೆ. ಈಗಿನ ರಾಜ್ಯಾಡಳಿತದ ಆ ಮೂಲಾಗ್ರ ಪರಿವರ್ತನವನ್ನು ಬಯಸುವ ಅಸಹಕಾರಿವಾದಿಗಳ ಕೂಡ ಪರಕೀಯ ಆಳರಸರು ಯುದ್ಧವನ್ನು ಸಾರಿರುತ್ತಾರೆ. ದಬ್ಬಾಳಿಕೆಯೇ ಅಧಿಕಾರಿಗಳ ಸುಲಭೋಪಾಯವು. ಇಂಡಿಯನ್ ಪಿನಲ್ ಕೋಡಿನ ೧೨೪ ನೇ ಅ ಪ್ರಕಾರ ಕಲ್ಮಿನ ಅನ್ವಯ, ಖಟ್ಲೆಮಾಡುವದು ಅಧಿಕಾರಿಗಳಿಗೆ ಇಷ್ಟು ಸುಸ್ಥಿರ ಮಾರ್ಗವೆಂದು ಅನಿಸಿದ್ದರಿಂದ, ಅವರು ಪಿನಲ್ ಕೋಡಿನ ದೇಶಾದ ಕಲ್ಮುಗಳ ಆಧಾರದಿಂದ ಚಳವಳಿಕಾರರನ್ನು ಸೆರೆಗಕ್ಕೆ ಕಳಿಸುವರು. ಅಮಲ್‌ಬಜಾವಣಿ ಅಧಿಕಾರವೂ ಮತ್ತು ಮಾಜಿಸ್ಟ್ರೇಟ ಅಧಿಕಾರವೂ ಒಂದೇ ಸ್ಥಳದಲ್ಲಿ ಕೂಡಿದ ಪಕ್ಷದಲ್ಲಿ ಕಡೆಯ ತೀರ್ಪು ಏನಾಗುವದೆಂಬ ಮಾತು ಎಲ್ಲರಿಗೂ ಗೊತ್ತೇ ಇರುತ್ತದೆ. ಇಷ್ಟೇ ಅಲ್ಲ ನ್ಯಾಯಖಾತೆಯು ಎಷ್ಟೋ ಪ್ರಸಂಗಗಳಲ್ಲಿ ಅಮಲಬಜಾವಣಿ ಖಾತೆಯಬಗ್ಗೆ ದಾಸೀವೃತ್ತಿಯನ್ನು ತಾಳಿ, ಅದರ ಕಾಮನೆಗಳನ್ನು ತೃಪ್ತಿಪಡಿಸುತ್ತದೆ ಮತ್ತು ಅನೇಕ ಪ್ರಸಂಗಗಳಲ್ಲಿ ವರ್ಣದ್ವೇಷ ಮತ್ತು ಅಧಿಕಾರಿಗಳ ಒತ್ತಾಯವೂ ನ್ಯಾಯನೀತಿಗಳನ್ನು ಬದಿಗೆ ಒತ್ತುತ್ತವೆ. ನ್ಯಾಯದೇವತೆಗೆ ಇದ್ದ ಅಲ್ಪಸ್ವಾತಂತ್ರ್ಯವನ್ನು ರಾಜನೀತಿಯು ನುಂಗಿ ನೀರುಕುಡಿಯುತ್ತಿದೆ. ಇಂಥ ಪ್ರಸಂಗಗಳಲ್ಲಿ ನ್ಯಾಯದ ಕ್ರಮವು ಅಮಲಬಜಾವಣಿಯ ಖಾತೆಯ ಕಗ್ಗತ್ತಲೆಯಿಂದ ಮುಸುಕಿಹೋಗುವದು.

ಹೆಚ್ಚಿನ ಸಂಗತಿಯೇನಂದರೆ, ಮದ್ಯಪಾನ ನಿಷೇಧಕ ಚಳವಳಿಯೊಂದು ಅಧಿಕಾರಿಗಳಿಗೆ ಪಿಶಾಚಿಯಂತೆ ಭಾಸವಾಗಹತ್ತಿದೆ. ಈ ಚಳವಳಿಯನ್ನು ಎಷ್ಟು ಶಾಂತರೀತಿಯಿಂದ ನಡಿಸಿದರೂ, ಅದು ಎಷ್ಟು ಲೋಕಪ್ರಿಯವಿದ್ದರೂ, ಅಧಿಕಾರಿಗಳಿಗೆ ಅದೆಂದು ಬೆದರು ಇರುತ್ತದೆ. ಕರೆ ತಿಂದಿ ಗುತ್ತೇದಾರರು ಗಲ್ಲೆದ ಮೇಲೆಯೇ ದೃಷ್ಟಿ ಇಟ್ಟು, ಈ ಚಳವಳಿಯನ್ನು ಮುರಿಗೊತ್ತುವಕ್ಕೆ ನಿಂದ್ಯ ಅಧಿಕಾರಿಗಳ ಕೂಡ ಉಚ್ಚನೀಚ ಉಪಾಯಗಳ ಒಳಸಂಚು ನಡಿಸುವರು. ಎಷ್ಟೋ ಸ್ಥಳಗಳಲ್ಲಿ ಕಾಯಿದೆಯ ಅತಿಕ್ರಮಣ, ಕಳವು-ಮುಂತಾದ ಖಟ್ಲೆಗಳನ್ನು ಉಪಸ್ಥಿತ ಮಾಡಿ, ಅನೇಕ ಪ್ರಾಮಾಣಿಕ ಅಹಿಂಸಾಪರ ಸ್ವಯಂ ಸೇವಕರನ್ನು ಸೆರೆಮನೆಯಲ್ಲಿ ದಬ್ಬಿರುವರು. ಅಮಲ್‌ಬಜಾವಣಿ ಅಧಿಕಾರಿಗಳಿಗೆ ಅನಿಯಂತ್ರಿತ ಅಧಿಕಾರವಿರುವದರಿಂದಲೂ, ಲೋಕಮತದ ಹೆದರಿಕೆ ಇಲ್ಲದ್ದರಿಂದಲೂ, ಅವರು ತಮಗೆ ಬೇಕಾದ ಹಾಗೆ ಕಾಯಿದೇದ ಅರ್ಥವನ್ನು ಮಾಡಿ, ತಮ್ಮ ಇಚ್ಛೆಯನ್ನು ಕೊನೆಗಾಣಿಸುವರು ಯಾತಕ್ಕೂ ಹೇಸದ ಪೋಲೀಸರ ಸಹಾಯದಿಂದ ಸುಳ್ಳು ಫಿರ್ಯಾದೆಯನ್ನು ಹುಟ್ಟಿಸುವದು ಸುಲಭವಾಗಿದೆ ಪ್ರಜೆಗಳು ದಾಸ್ಯದಲ್ಲಿ ಮುಳುಗಿದವರೂ, ನಿರ್ವೀರ್ಯರೂ, ಭೀತಿಗ್ರಸ್ತರು ಪಂಗಡಗಳಿಂದ ಛಿನ್ನ ವಿಚ್ಛಿನ್ನವಾಗಿದ್ದವರೂ, ಇರುವದರಿಂದ ಒಳಿಕ ಕೇಳುವದೇನು?

ಇಂತು ಹಿಂದುಸ್ಥಾನದ ಅಧಿಕಾರಿಗಳ ಸಾಮಾನ್ಯ ಮನಸ್ಥಿತಿಯು ಇದು ಇಂದಬಳಿಕ, ಈ ಜಿಲ್ಹೆಯ ಕಲೆಕ್ಟರ ಮತ್ತು ಅನ್ಯ ಅಧಿಕಾರಿಗಳು ಈ ತಾಳಕ್ಕೆ ಕುಣಿಯಲಪೇಕ್ಷಿಸುವದರಲ್ಲಿ ಆಶ್ಚರ್ಯವೇನು? ಇಲ್ಲಿ ಸ್ಥಾಪಿಸಿದ ಆಳಿಕೆಯ ಸುರಕ್ಷಿತೆಗಾಗಿ, ಅವರು ಪ್ರಮಾಣಿಕತನದಿಂದ ಹೀಗೆ ಮಾಡುತ್ತಿರಬಹುದು. ಆದರೆ ಅವರ ಕೃತ್ಯಗಳು ಹಿಂದೀ ಜನರ ದೃಷ್ಟಿಯಿಂದ ಅತಿ ನಿಂದ್ಯವಾದವುಗಳೂ, ಬಲುಮೆಯವೂ ಇರುತ್ತವೆ.

ನನಗೆ ನೆನಪಿದ್ದಷ್ಟರಮಟ್ಟಿಗೆ ಕಳೆದ ಎಪ್ರಲ ತಿಂಗಳಲ್ಲಿ ಇಲ್ಲಿ ಪಿಕೆಟಿಂಗ ಚಳವಳಿಯು ಒಳ್ಳೇ ಜೋರಿನಿಂದ ಆರಂಭವಾಯಿತು. ಮತ್ತು ಅದನ್ನು ನಿಲ್ಲಿಸುವದಕ್ಕೋಸ್ಕರ ಇಲ್ಲಿ ಅಧಿಕಾರಿಗಳು ಹಲವುಉಪಾಯ ಉಪಕ್ರಮಿಸಿದರು. ಈ ಪಿಕೆಟಿಂಗ ಚಳವಳಿಯು ಸ್ವಯಂಸ್ಫೂರ್ತಿಯಿಂದಲೇ ಹುಟ್ಟಿದ್ದು, ಧಾರವಾಡದ ಖಿಲಾಫತ ಕಮೀಟಿಯು ಅದನ್ನು ಕೈಕೊಂಡಬಳಿಕ, ಅದು ವ್ಯವಸ್ಥಿತ ರೂಪವನ್ನು ಹೊಂದಿತು. ಕಾಂಗ್ರೆಸ ಕಮಿಟಿಯ ಬೆಂಬಲವೂ ಅದಕ್ಕೆ ದೊರೆಯಿತು. ಆರಂಭದಿಂದ ಈ ಚಳವಳಿಯನ್ನು ನಾನು ಲಕ್ಷಿಸುತ್ತಿದ್ದು ಅನೇಕ ಸಾರೆ ನಾನು ಪಿಕೆಟಿಂಗ ಕಾರ್ಯವನ್ನೂ ಮಾಡಿದ್ದೇನೆ. ಮೊದಲು ಕೆಲ ಕಾಲ ಗುತ್ತೇದಾರರಾಗಲಿ, ಪೋಲೀಸರಾಗಲೀ ನಮ್ಮ ಕಡೆಗೆ ಲಕ್ಷ ಕೊಡಲಿಲ್ಲ. ಆದರೆ ನಮ್ಮ ಚಳವಳಿಯು ಪರಿಣಾಮಕಾರಿಯಾಗಿ ನಡಿಯಹತ್ತಿದ ಕೂಡಲೆ

(ಮುಂದರಿಯುವದು)

ಆಶ್ರಯದಾತರಿಗೆ ಸೂಚನೆ.

ಈ ಸಂಚಿಕೆಯೊಂದಿಗೆ ನಮ್ಮ ೪ ನೇ ವರ್ಷವು ಮುಗಿಯಿತು. ಹಳೆ ವರುಷದ ವ್ಯವಹಾರವು ಮುಗಿಸಿಕೊಳ್ಳಲಿಕ್ಕೂ, ಹೊಸ ವರ್ಷದ ಕಾರ್ಯಕ್ರಮವನ್ನು ಏರ್ಪಡಿಸಿಕೊಳ್ಳಲಿಕ್ಕೂ ವಾಡಿಕೆಯಂತೆ ನಮಗೆ ಒಂದು ಹಪ್ತೆಯ ರಜೆ ಕೊಡಬೇಕಾಗಿದೆ. ಹಳೆ ಚಂದಾದಾರರು ಬಾಕಿ ಇದ್ದ ವರ್ಗಣಿಯನ್ನು ನಮಗೆ ತ್ವರೆಯಾಗಿ ಕಳುಹಿಸುವ ಅನುಗ್ರಹ ಮಾಡುವದಲ್ಲದೆ ಅಲ್ಲ ಹೊಸ ವರ್ಗಣಿದಾರರನ್ನು ಕೂಡಿಸಿಕೊಟ್ಟು ಈ ದೇಶಸೇವೆಗೆ ಪ್ರೋತ್ಸಾಹಿಸುವದಾದರೂ ಅವರಿಂದಲೇ ಆಗಬೇಕು. ಮುಂದಿನ ವರ್ಷದ ವರ್ಗಣಿಯು ಅಂಚೆ ವೆಚ್ಚ ಸಹಿತ ರೂಪಾಯಿ ೩ಕ್ಕೆ ಇಳಿಸಲ್ಪಟ್ಟಿದೆ. ... ಯಿಂದ ... ರಿಕ ಲ್ಪಟ್ಟರೂ, ಮನಿಯಾರ್ಡರ ಕಳುಹಿಸದ ಹಿತೈಷಿ ವಾಚಕರು ರೂಪಾಯಿ ೩-೦ ... ಕೊಡತಕ್ಕದ್ದು. ಅದ್ದರಿಂದ ಅವರು ಮನಿಯಾರ್ಡರಿನ ಮೂಲಕ ಕಳುಹಿಸುವದುತ್ತಮ. ಮುಂದಿನ ಹೊಸ ವರ್ಷದ ಸಂಚಿಕೆಯು ಅಕ್ಟೋಬರ ತಾ (13-10-1921) ನೇ ಗುರುವಾರ ಹೊರಡಿಸಲ್ಪಡತಕ್ಕದ್ದು.

ಮ್ಯಾನೇಜರ ಕಾ. ವೃ.]

ಕಾನಡಾವೃತ್ತ.

ಗುರುವಾರ, ತಾರೀಖು ೨೯ ಮಾಹೆ ಸಪ್ಟಂಬರ ೧೯೨೧

ದಬ್ಬಾಳಿಕೆಯು ಉಕ್ಕೇರಿತು.

ರಾಜ್ಯಶಾಸನ ಕಾರ್ಯದಲ್ಲಿ ಆಳರಸರು ತಮ್ಮ ಕಾರಭಾರವನ್ನು ನಡಿಸುವಾಗ, ಸಾಮ ದಾನ ದಂಡ ಭೇದ ಈ ನಾಲ್ಕು ಉಪಾಯಗಳನ್ನು ಹೆಚ್ಚು ಕಡಿಮೆ ಪ್ರಮಾಣದಿಂದ ಉಪಯೋಗಿಸುತ್ತಿದ್ದರೂ, ಯಾವದೇ ಒಂದು ಉಪಾಯವನ್ನು ಹೆಚ್ಚು ಪ್ರಮಾಣದಿಂದ ಅವರು ಪ್ರಯೋಗಿಸುತ್ತಿರುವಾಗ ಅವರ ಆಳಿಕೆಯು ರಾಜ್ಯಕಾರಭಾರವು ಎಷ್ಟು ಯಶಸ್ವಿಯಾಗಿದೆ, ಅದರಿಂದ ಅವರು ಎಂಥ ರಾಜಕೀಯ ಪರಿಸ್ಥಿತಿಯನ್ನು ಉಂಟುಮಾಡಿರುವರು ಎಂದು ಕಂಡುಹಿಡಿಯಲಿಕ್ಕಾಗುತ್ತದೆ. ಸಾಮೋಪಾಯವು ನಿಸ್ಪೃಹ ರಾಜಕವಾಗುವದೂ, ದಾನೋಪಾಯವು ಅಷ್ಟೇ ನಿರರ್ಥಕವಾಗುವದೂ ರಾಜ್ಯಕರ್ತರ ಆಳಿಕೆಯ ಅಪಯಶದ ಲಕ್ಷಣಗಳೇ ಸರಿ. ಭೇದ-ದಂಡೋಪಾಯಗಳನ್ನು ಇಂಥ ಪ್ರಸಕ್ತಿಯಲ್ಲಿ ಅಂಗೀಕರಿಸುವ ಮೋಹವು ಸಿವಿಲ್ಲಿಯನ್ನರಿಗೆ ಸಾಹಜಿಕವಾಗಿ ಉಂಟಾಗುತ್ತದೆ. ಅದರಿಂದ ಪರಿಸ್ಥಿತಿಯು ಸುಧಾರಿಸಿದ ಉದಾಹರಣೆಗಳು ರಾಷ್ಟ್ರಗಳ ಇತಿಹಾಸದಲ್ಲಿ ಇಲ್ಲೇ ಇಲ್ಲೆಂದು ಹೇಳುವಷ್ಟು ಅಪರೂಪವಾಗಿರುವವು. ಸದ್ಯಕ್ಕೆ ಇಡೀ ದೇಶದಲ್ಲಿ ಪ್ರಚಲಿತವಾದ ದಬ್ಬಾಳಿಕೆಯ ಧೋರಣವನ್ನು ನೋಡಿ, ಸರಕಾರವು ದಂಡೋಪಾಯವನ್ನು ಬೇರೆ ಕಾಣುವಂತೆ ಆಶ್ರಯಿಸಿದೆಂದು ಹೇಳಿದ ಹೊರತು ಗತ್ಯಂತರವಿಲ್ಲ. ಬ್ರಾಹ್ಮಣೇತರ ಪಕ್ಷವನ್ನು ಎತ್ತಿ ಹಿಡಿದು, ಕೆಲವೆಡೆಯಲ್ಲಿ ಅಧಿಕಾರಿಗಳು ಭೇದ ನೀತಿಯನ್ನು ಸ್ವೀಕರಿಸುವ ಧೋರಣವನ್ನು ತೋರಿಸಿದರೂ, ರಾಷ್ಟ್ರಕ್ಕೆ ಇಂಥ ಕುಂಟ ಉಪಾಯಗಳಿಂದ ಚಿಂತೆಯುಂಟಾಗಿಲ್ಲ. ಆದರೆ ದಂಡೋಪಾಯವನ್ನು ಅವಲಂಬಿಸಿ, ದಬ್ಬಾಳಿಕೆಯ ಮಹಾಸತ್ರವನ್ನು ಸರಕಾರವು ಪ್ರಾರಂಭಿಸಿದ್ದನ್ನು ನೋಡಿ ರಾಷ್ಟ್ರದ ಹಿತಚಿಂತಕರಿಗೆ ಚಿಂತೆಯೂ, ಬಹಳೇ ವ್ಯಸನವೂ ಆಗಿರುವದು.

ಕೊಂಗ್ರೆಸಿನ ವಿಧಾಯಕ ಕಾರ್ಯಕ್ರಮದಿಂದ ರಾಷ್ಟ್ರದೊಳಗೆ ನವಚೇತನವು ಉಂಟಾಗಿ ಪ್ರತಿಯೊಬ್ಬ ಸ್ವಾಭಿಮಾನಿ ಅಕಾಂಕ್ಷೆಗಳನ್ನು ಇಟ್ಟು ... ತೃಪ್ತಿಪಡಿಸಿಕೊಳ್ಳಲು ಜನರೆಲ್ಲರು ... ವರುಷ ... ಎಂದು ಅವರು ಕಾಂಗ್ರೆಸ ... ದಬ್ಬಾಳಿಕೆಯು ಸಣ್ಣ ಸಣ್ಣ ಪ್ರಯೋಗ ... ತಿಂಗಳುಗಳ ... ಅದರ ಈ ಸಣ್ಣ ಪ್ರಯೋಗಗಳು ... ದಡಪ ... ನ್ಯಾಯಾಂಗವು ಆರಂಭಿಸಿದ ... ನಮ್ಮ ... ಸ್ಥಿತಿಯನ್ನೇ ನೋಡಿದರೆ ... ರಾಜಾಜ್ಞೆಯಿಂದ ಹೊಸ್ಸ ... ದಬ್ಬಾಳಿಕೆಯು ಪಡೆದಿರುವದು ... ಅಪರಾಧ ... ಅನ್ಯಾಯ ... ತಕ್ಕ ಕಾರಣ ... ಹೇಳುವ ... ಸತ್ಯವು ಇದಾಗಿದೆಂಬ ಸಂಗತಿಯನ್ನು ಅಲ್ಲಗಳೆಯಲಿಕ್ಕಾಗದು. ಈ ಪತ್ರದೊಳಗೆ ಯಾರು ಆಹುತಿಯಾಗಿರುವರು, ಯಾರು ಆಗದಿರುವರು, ಎಂದೇನು ಹೇಳಲಿಕ್ಕಾಗದು. ಅಸಹಕಾರಿತೆಯ ಧರ್ಮದಂತೆ, ತನ್ನ ಕೈಯಿಂದ ಏನೂ ಪಾಪವಾಗಗೊಡದೆ ಆತ್ಮಯಜ್ಞವನ್ನು ಮಾಡಲಿಕ್ಕೆ ಸಿದ್ಧವಿರುವವನಿಗೆ, ಇದರಿಂದ ಭೀತಿಯುಂಟಾಗದು. ತಮ್ಮ ತಪೋಬಲದ ಸತ್ವಪರೀಕ್ಷೆಯ ಕಾಲವು ಇನ್ನು ಸಮೀಪಿಸಿದೆಂದು ಬಂದು ವಿಧದ ಸಾತ್ವಿಕ ಆನಂದವು ರಾಷ್ಟ್ರೀಯರಿಗೆ ಉಂಟಾಗದಿರದು. ಇದು ಶೋಕಪಡುವ ಸಮಯವಲ್ಲ. ಅಭಿನಂದನದ ಸುಪ್ರಸಂಗವು” ಎಂದು ಮಹಾತ್ಮಾ ಗಾಂಧಿಗಳು ಹೇಳುವದರ ಮರ್ಮವು ಇದೇ. ಆದಕಾರಣ ಅಸಹಕಾರಿಯಾಗಿ ರಾಷ್ಟ್ರೀಯರು ತಮ್ಮ ಮನಸ್ಸಿನ ಸ್ಥಿರತೆಯನ್ನು ಶಿಥಿಲವಾಗಗೊಡದೆ, ನಾಯಕವೃತ್ತಿಯಿಂದ ಮುಂದೆ ಬರುವ ಎಡರುಗಳಿಗೆ ಎದುರಾಗಿ, ಸಹನಶೀಲತೆಯಿಂದಲೂ, ಧೈರ್ಯದಿಂದಲೂ ತನ್ನ ಸತ್ವ ಸಾತತ್ಯ ವಿಜಯವನ್ನು ಸಂಪಾದಿಸುವರೆಂದು ನಾವು ನಂಬಿದ್ದೇವೆ.

ಇನ್ನು ಎರಡನೇ ಪ್ರಸಂಗವು ರಾಜಕೀಯ ದೃಷ್ಟಿಯಿಂದ ಅಪೂರ್ವವಾಗುವಷ್ಟು ಅತೀವ ಚಿರಂತನಾಗಿದೆಂದು ಅಲ್ಲಗಳೆದು ನಾಲದು. ಅಲ್ಲೀ ಬಂಧುಗಳ ಮತ್ತು ಬೇರೆ ವಿಖ್ಯಾತ ಮಹಮ್ಮದೀ ಮುಖಂಡರ ಹಾಗೂ ಕಾರವಾ ಪೀಠದ ಜಗದ್ಗುರುಗಳಾದ ಶ್ರೀಶಂಕರಾಚಾರ್ಯರ ಗಿರಫದಾರಿಯು ಆಸೇತುಹಿಮಾಚಲ ಖಳಬಳವನ್ನು ಎಬ್ಬಿಸದೆ ಇದ್ದೀತೆ? ಪಂಜಾಬದ ಕೊಲೆಗಳಾದ ನಂತರ ಜನತೆಯು ಕ್ಷೋಭವನ್ನುಂಟುಮಾಡುವ ರಾಷ್ಟ್ರೀಯ ಆಪತ್ತಿಯು ಇಂದ ಸಂಗತಿಯು ಮತ್ತೊಂದು. ಸಂಭವಿಸಿದ್ದಿಲ್ಲ. ಈ ಖಟ್ಲೆಯು ರಾಜಕಾರಣದೊಳಗೆ ಧಾರ್ಮಿಕ ವಿಚಾರಗಳ ಸಮಾವೇಶವಾದದ್ದು. ಮತ್ತೂ ದುರ್ದೈವಕರ ಸಂಗತಿಯು ಇಂಥ ರಾಜಕೀಯ ಖಟ್ಲೆಗಳನ್ನು ಮಾಡಲಿಕ್ಕೆ ಈಗಿನ ವಾತಾವರಣವು ಅತ್ಯಲ್ಪ ಸಹ ಅನುಕೂಲವಾಗಿದೆಂದು ಎಷ್ಟು ವಿವೇಕದ ಬುದ್ಧಿಯಿಂದ ನಮ್ಮಷ್ಟಕ್ಕೆ ನಾವು ವಿಚಾರಿಸಿದರೂ, ನಮ್ಮಿಂದ ಒಪ್ಪಲಗದು. ಖಿಲಾಫತ ಪ್ರಕರಣದಿಂದ ಮಹಮ್ಮದೀಯರ ಧಾರ್ಮಿಕ ಭಾವನೆಗಳಿಗೆ ಮೊದಲಿಂದಲೂ ಬೇಳದಷ್ಟು ಹೊಡೆತ ಬಿದ್ದಿರುವಾಗ, ಅದರ ಸಮಾಧಾನಕಾರಕ ನಿರ್ಣಯವು ಬೇಗನೆ ಆಗುವದೆಂಬ ವಿಶ್ವಾಸವು ನಮ್ಮ ಮಹಮ್ಮದೀ ಬಾಂಧವರಲ್ಲಿ ಸ್ವಲ್ಪ ಉಂಟಾಗಿಲ್ಲವಾಗ ಮಾಪಿಳೆ ಜನರು ದುರ್ಬುದ್ಧಿಯ ಕ್ಷೋಭದಿಂದ ದಂಗೆ ಎಬ್ಬಿಸುವ ಪಲ್ಲಿಗೆ ಮುಟ್ಟದೆಂದು, ಸರ ವಿನ್ಸೆಂಟ ಸಾಹೇಬರಂಥ ಹಿಂದುಸ್ಥಾನ ಸರಕಾರದ ಮಂತ್ರಿಗಳಿಗೆ ಬಲವತ್ತರ ಸಂಶಯವಿದ್ದಾಗ ಮಹಮ್ಮದೀ ಮುಖಂಡರಮೇಲೆ ಅವರ ಧಾರ್ಮಿಕ ತಿಳುವಳಿಕೆಗಳಿಗೆ ಸಮ್ಮಂಧಿಸಿರುವ ಆರೋಪಗಳನ್ನಿಟ್ಟು ಖಟ್ಲೆ ನಡಿಸುವದೂ, ಅವರ ಸ್ವಾತಂತ್ರ್ಯವನ್ನು ಪ್ರತಿಬಂಧಿಸುವದೂ ಮುತ್ಸದ್ದಿತನದ ಸಾಹಸವೆಂದು ತಿಳಿಯಬೇಕೋ ಯಾ ಉದ್ದಾಮತನವೆಂದು ಮರುಗಬೇಕೋ, ನಮಗೆ ತಿಳಿಯದು. ಈ ಖಟ್ಲೆಗಳಿಗೆ ಪ್ರಾರಂಭ ಕೂಡುವಾಗ, ಮುಂಬಯಿ ಸರಕಾರದ ಮಂತ್ರಿಮಂಡಳದೊಳಗೆ ಮತಭೇದ ಉಂಟಾಗಿ, ಇಬ್ಬರು ಹಿಂದೀ ಮಂತ್ರಿಗಳು ವಿರುದ್ಧ ಅಭಿಪ್ರಾಯವನ್ನು ಕೊಟ್ಟರೂ, ಬಹುಮತದ ಸಮ್ಮತಿಯಿಂದ ಮುಂಬಯಿ ಸರಕಾರವು ಈ ಕಾರಸ್ಥಾನವನ್ನು ಮುಂದುವರಿಸಲಿಕ್ಕೆ ಪ್ರವೃತ್ತವಾಗಿದೆಂದು ಸುದ್ದಿಯು ಕೇಳುತ್ತದೆ. ಇದು ನಿಜವಿರಲಿ, ನಿಜವಿರದಿರಲಿ, ಮುಂಬಯಿ ಸರಕಾರವು ಈ ಕೆಲಸದೊಳಗೆ ಮುತ್ಸದ್ದಿತನದ ಮತ್ತು ದೂರದೃಷ್ಟಿಯ ಧೋರಣವನ್ನು ಸ್ವೀಕರಿಸಿಲ್ಲ. ಪ್ರಜೆಗಳ ಅಸಂತೋಷವನ್ನು ಹೆಚ್ಚಿಸುವ ಬಗ್ಗೆ ಇವನ್ನು ಬೆಳೆದ ಅಪಯಶಕ್ಕೆ ಈ ಧೋರಣವು ಕಾರಣವಾಗುವದೆಂದು ನಮಗಂತೂ ಸ್ಪಷ್ಟವಾಗಿ ಹೇಳಬೇಕಾಗಿದೆ.

ಸರಕಾರದ ದಬ್ಬಾಳಿಕೆಯ ಘೋರಣದಿಂದ, ಜನರ ಮನಸ್ಸಿನೊಳಗೆ ತೀವ್ರ ಅಸಂತೋಷವು ಉಂಟಾದರೂ ಬಹಳೇ ತಾಳ್ಮೆಯಿಂದ, ಸುವಿಚಾರದಿಂದ, ಧೃಡನಿಶ್ಚಯದಿಂದ ಜನರು ಅಸಹಕಾರಿತನವನ್ನು ಆಚರಿಸಬೇಕೆಂಬ ಮಾತು ಎಲ್ಲ ಅಸಹಕಾರಿಗಳಿಗೆ ಮಾನ್ಯವಾದ ಸಂಗತಿಯು. ಅದರಂತೆ ಇನ್ನುರತನಕ ತಪ್ರೋಭ್ರಷ್ಟರಾಗದೆ, ಅವರು ತಮ್ಮ ಆಚರಣೆಯನ್ನಿಟ್ಟಿದ್ದಾರೆಂದು ತಿಳಿದು, ಎಲ್ಲರಿಗೂ ಆನಂದವೆನಿಸುವದು. ಈ ಇಕ್ಕಟ್ಟಿನ ಪ್ರಸಂಗದೊಳಗೆ ತಮ್ಮನ್ನು ತಾವೇ ಅಂಕೆಯಲ್ಲಿಟ್ಟುಕೊಳ್ಳುವನು, ಆತ್ಮಸಂಯಮನ ಮಾಡುವದು, ಮತ್ತು ತಮ್ಮ ಕ್ಷೋಭದ ಮನೋಭಾವನೆಗಳನ್ನು ನಿರ್ಧಾರದಿಂದ ತಗ್ಗಿಸುವದು, ರಾಷ್ಟ್ರಕ್ಕೆ ಲಯಾಚಿತವಾಗಿ ಪ್ರಾಪ್ತವಾದ ಯೋಗಸಾಧನದ ಮುಹೂರ್ತವೆಂದೇ ತಿಳಿಯತಕ್ಕದ್ದು. ಸ್ವರಾಜ್ಯವೆಂಬುದಾದರೂ ಮತ್ತೇನಿದೆ? ಜನರು ತಮ್ಮ ನಿಜವಾದ ಮನೋಭಾವನೆಗಳನ್ನು ಹರತಾಳಗಳಿಂದ, ಮೆರವಣಿಗೆಗಳಿಂದ, ಭಾಷಣಗಳಿಂದ ಪ್ರಕಟಿಸುವದರ ಬದಲು, ಒಂದೇ ಸುಲಭ ಸಾಧನದಿಂದ ಅವುಗಳನ್ನು ತೋರಿಸಿ, ಸ್ವದೇಶೀ ಬಹಿಷ್ಕಾರದ ವ್ರತವನ್ನು ಪ್ರತಿ ಒಬ್ಬರು ಪೂರ್ಣವಾಗಿ ಪಾಲಿಸಿ, ದಬ್ಬಾಳಿಕೆಯ ನಿಷೇಧವನ್ನು ಪ್ರಕಟಿಸುವದೇ ಈ ಉಪಾಯವು. ಪ್ರತಿ ಒಬ್ಬರು ಖಾದಿಯ ಬಿಳೇ ಬಟ್ಟೆಗಳನ್ನು ಧರಿಸಿ, ಜನರು ಖಾದಿಮಯವಾಗಿದ್ದಾರೆಂದು ಮನಗಾಣಿಸಿ ಬಿಳೇ ಬಣ್ಣದ ಪ್ರದರ್ಶನದಿಂದ ನಿಮ್ಮ ನಿಷೇಧವನ್ನೂ, ಸಾತ್ವಿಕ ಸಂತಾಪವನ್ನೂ ವ್ಯಕ್ತಪಡಿಸಿರಿ. ನಿಮಗೆ ಅತ್ಯಾಚಾರಕ್ಕೆ ಎಳೆದೊಯ್ಯುವ, ಮೋಹವನ್ನುಂಟುಮಾಡುವ ಗಾರುಡಿಗಳು ಛೆಷ್ಟೆಯಾದರೂ, ಅವರ ಮೋಹದ ಜಾಳಿಗೆಯಲ್ಲಿ ಬೀಳದಂತೆ ಎಚ್ಚರಾಗಿರಿರಿ. ದಬ್ಬಾಳಿಕೆಗೆ ಸ್ವದೇಶಿಯಿಂದಲೇ ಉತ್ತರ ಕೊಡುವದು ಪರಿಣಾಮದಲ್ಲಿ ರಾಷ್ಟ್ರಕ್ಕೆ ಲಾಭಕರವಾಗುವದು. ಸ್ವದೇಶಿ ವ್ರತದಲ್ಲಿ ನಾವು ಬೇಕಾದಷ್ಟು ಕರ್ತವ್ಯದಕ್ಷರಾಗಿಲ್ಲೆಂದೋ ಏನೋ, ನಮ್ಮ ಅಪರಾಧಕ್ಕೆ ನಮ್ಮನ್ನು ದಂಡಿಸಬೇಕೆಂದು, ಇಂಥ ಪ್ರಖರ ಇಷ್ಟಾಪತ್ತಿಯು ರಾಷ್ಟ್ರಕ್ಕೆ ಒದಗಬೇಕೆಂದು, ದೇವರ ಸಂಕೇತವೂ ಇದ್ದರೆ, ಇರಬಹುದು.

ಸ್ಫುಟ ಸೂಚನೆಗಳು.

೧. ನಮ್ಮೊಳಗೆ ಶಿಮಗೆ ಹಬ್ಬದಲ್ಲಿ ಆಟ ತಮಾಷೆಯ ಮೌಜು ಗೀಜು ಥಟ್ಟಾ ಮಸ್ಕರಿ ಮಾಡುವಂತೆ, ಇಂಗ್ಲೀಷ ಜನರೊಳಗಾದರೂ ಪ್ರಘಾತಗಳಿದ್ದಾವೆ. ಎಪ್ರೀಲ ತಿಂಗಳ ೧ನೇ ತಾರೀಖಿನ ದಿವಸ ಯಾರಿಗಾದರೂ ಸುಳ್ಳೇ ಸಂಗತಿಯನ್ನು ಹೇಳಿ, ಠಕ್ಕಿಸಿ ಬರೇ ಮೌಜಿಗೋಸ್ಕರ ಮೋಸ ಹಾಕುವ ರೂಢಿಯು ಕ್ರಿಶ್ಚನ್ನರಲ್ಲಿದೆ. ವಾಸ್ತವಿಕ ವ್ಯವಹಾರದಲ್ಲಿ ಇಂಥ ಠಕ್ಕುತನವನ್ನು ಬೇರೆ ಯಾವದೇ ದಿವಸ ಮಾಡಿದರೆ, ದೊಡ್ಡ ಗಲ್ಲೆಯಾಗಿ ಖಟ್ಲೆಯು ಸಹ ಆಗಬಹುದು.. ಕೆಲವು ದಿವಸಗಳ ಹಿಂದೆ ಹೊನ್ನಾವರ ತಾಲೂಕಿನೊಳಗಿನ ಗುಂಡಬಾಳಾ ಪ್ರೊಫೆಸರನು ಬಹಳೇ ದೊಡ್ಡ ದೊಡ್ಡ ಅಧಿಕಾರಿಗಳಿಗೆ ಎಪ್ರಿಲ ಫೂಲ "April fool" ಮಾಡುವ ಮೌಜು ಮಾಡಿದನೆಂದು ಜನರಿಗೆ ಇನ್ನುರತನಕ ತಿಳಿದು ಬಂದದರ ಮೇಲಿಂದ, ಅವರು ನಗ್ಗಾಡುತ್ತಿರುವರು. ಈ ಪ್ರೊಫೆಸರನು ತಾಳೀ ಚಕ್ಕೆಯನ್ನು ಕವೆದ್ದಿಯು, ಕಾಯಿ ಸುರಿದು ಒಂದಾಳಿ ಮಾಡುವ ಕೂಟವನ್ನು ಜನರು ಮಾಡಿದ್ದಾರೆಂದು ವರಿಷ್ಠರಿಗೆ ತಿಳಿಸಿದ್ದು ನಿಜವೋ? ಇಂಥ ಸುದ್ದಿಯ ಮೇಲೆ ವಿಶ್ವಾಸವಿಟ್ಟು ಮಾಮಲೇದಾರ ಮುಂತಾದ ಸ್ಥಾನಿಕ ವರಿಷ್ಠರು ಗಾಬರಿಯಾಗಿ ಮೇಲಾಧಿಕಾರಿಗಳಿಗೆ ತಂತಿ ಮಾಡಿ ಸಶಸ್ತ್ರ ಪೋಲೀಸರನ್ನು ಮುದ್ದಾಂ ಕರತರಿಸಬೇಕಾಯಿತೆಂಬುದು ನಿಜವೋ? ಅದರಂತೆ ಪೋಲೀಸರನ್ನು ತಕ್ಷಣಂತು ಸ್ಥಳಕ್ಕೆ ಹೋಗಿ, ಹಾದಿ ಕಾಯುತ್ತ ಕೂತು ಬಂಡವೂ ಇಲ್ಲ ಬಿಂಡವೂ ಇಲ್ಲೆಂದು ತಿರಿಗಿ ಬಂದರೆಂಬ ಸುದ್ದಿಯು ನಿಜವೋ? ಇವೆಲ್ಲ ಸಂಗತಿಗಳು ನಿಜವಿದ್ದರೆ, ಗುಂಡಬಾಳೆಯ ಪ್ರೊಫೆಸರನು ಎಲ್ಲರಿಗೆ ಎಪ್ರಿಲ ಫೂಲ ಮಾಡಿದ್ದೆಂಬುದು ಅಕ್ಷರಶಃ ನಿಜವಾಗಬಹುದು. ಇದರ ಬಗ್ಗೆ ಅವನ ಜವಾಬು ಕೇಳಿ, ಅವನ ಮೇಲೆ ಏನೂ ಇಲಾಜು ನಡಿಸಿದ್ದು ಇನ್ನುವರೆಗೆ ಕಂಡು ಬರುವದಿಲ್ಲವಾದ್ದರಿಂದ, ಎಪ್ರಿಲ ಮೌಜಿಗಾದರೆ ಗುನ್ಹೆ ಮಾಫಿಯಾಗುವಂತೆ ಇವನಿಗೂ ಮಾಫಿಯಾಗಿದೆಂದು ತಿಳಿಯಬೇಕಾಗುವದಲ್ಲವೇ? ಜವಾಬುದಾರಿಯ ಅಧಿಕಾರವನ್ನು ನಡಿಸುವದು ಆಟವೆಂದು ಈ ಪ್ರೊಫೆಸರನು ತಿಳಿಯುತ್ತಾನೇನು? ಅಸಹಕಾರಿತೆಯ ಚಳವಳಿಯ ನೆವದಿಂದ ಅಧಿಕಾರಿಗಳಿಗೆ ಹುಕೂಖುನಿ ಮಾಫ ಆಗುತ್ತದೆಂಬ ತಪ್ಪು ಭಾವನೆಯು ಇವನದಾಗಿದೆಯೋ ಹ್ಯಾಗೆ? ಇದರ ಚೌಕಶಿಯನ್ನು ಕಲೆಕ್ಟರ ಸಾಹೇಬರಾದರೂ ನಡಿಸಿ, ಈ ಪ್ರಕರಣದಿಂದ ಜನರ ಮನಸ್ಸಿನಲ್ಲಿ ಉಂಟಾದ ಅಸಂತೋಷವನ್ನು ಹೋಗಲಾಡಿಸುವರೆಂದು ನಂಬುವೆವು.

---

೨ ಇಂಥ ಪ್ರಷ್ಟ ಅಧಿಕಾರಿಗಳು ಹೊನ್ನಾವರದ ಅಧಿಕಾರಿಗಳಲ್ಲಿ ಉಂಟುಮಾಡಿದ ವೃಥಾಭೀತಿ ಮಾತ್ರ ಇನ್ನೂ ದೂರವಾಗಿಲ್ಲೆಂದು ಹೇಳಬೇಕಾಗಿದೆ. ಹೊನ್ನಾವರ ಶಹರದಲ್ಲಿ ಲೋಕಪಕ್ಷದ ಎಲ್ಲ ಸಾರ್ವಜನಿಕ ಕೆಲಸಗಳು ಇಷ್ಟು ದಿವಸ ಸುಸೂತ್ರವಾಗಿ ವ್ಯವಸ್ಥಿತವಾಗಿ ಬಲು ಜಾಗ್ರತೆಯಿಂದ ನಡೆಯುತ್ತಿರುವಾಗ, ಶಾಂತತಾ ಭಂಗವಾಗಿ ಅತ್ಯಾಚಾರಗಳಾದ ಒಂದೂ ಉದಾಹರಣೆಯೂ ಕಂಡುಬಂದಿಲ್ಲ. ಇದು ಅಲ್ಲಿಯ ಚಾಲಕರಿಗೂ ಅಧಿಕಾರಿಗಳಿಗೂ ಭೂಷಣಾವಹವಾಗಿದೆ. ಅದರೆ ಅಕಸ್ಮಾತ್ತಾಗಿ ಇಂಥ ಸ್ವತಂತ್ರ ಧೋರಣವನ್ನು ತಿರುಗಿಸಿ, ಅಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರಿಗೆ ಪೋಲೀಸ ಆಕ್ಟಿನಂತೆ ಸಭಾಬಂದಿಯ ಜಾಹೀರ ಹುಕುಮು ಹೊರಡಿಸಲಿಕ್ಕೆ ವಿಶೇಷ ಕಾರಣಗಳೇನಾದವು, ಎಂದು ತಿಳಿಯುವದಿಲ್ಲ. ಹೊನ್ನಾವರವು ಜಿಲ್ಹಾ ಕಾಂಗ್ರೆಸ ಕಮಿಟಿಯ ಕೇಂದ್ರವಾಗಿದೆ. ಕಾಂಗ್ರೆಸ ಚಳವಳವು ಬಳೇ ಕಾಂಗ್ರೆಸ ಚಳವಳವೆಂದು ಎಷ್ಟೂ ಶಾಂತತೆಯಿಂದ ನಡಿಸಿದರೂ, ಅದನ್ನು ಮುರಿ ಬಡಿಯಬೇಕು, ಎಂಬ ಬೇಂದರಶಾಯೀ ಧೋರಣದಿಂದ ಮೆಜಿಸ್ಟ್ರೇಟರು ದಡಪಶಾಹಿಯ ಜಾಹೀರ ನಾಮೆಯನ್ನು ತೆಗೆದಿದ್ದರೆ, ನಾಯಿಗೆ ಕೆಟ್ಟ ಹೆಸರನ್ನಿಟ್ಟು, ಅದಕ್ಕೆ ಗಲ್ಲಿಗೆ ಹಾಕುವದೆಂಬ ಇಂಗ್ರೇಜಿ ಗಾದೆ ಮಾತಿನಂತೆ, ಈ ನ್ಯಾಯವಾಗುವದಲ್ಲವೇ? ಪೋಲೀಸ ಆಕ್ಟಿನಂತೆ ಇದ್ದ, ಪ್ರತಿಬಂಧದ ಅಧಿಕಾರಗಳನ್ನು ೧ನೇ ಮೆಜಿಸ್ಟ್ರೇಟರು ಇಮ್ಮಿಗೇಲೇ ನಡಿಸುವಾಗ, ಅಂಥ ಪ್ರತಿಬಂಧಗಳನ್ನು ಜನರ ಭಾಷಣ ಸ್ವಾತಂತ್ರ್ಯದ ಮೇಲೆ ಹೊರಿಸುವಾಗ, ಅಂಥ ಅಧಿಕಾರಿಗಳ ಬಜಾವಣೆಯ ಅವಶ್ಯಕತೆಯು ಉಂಟಾಗಿತ್ತೆಂದು ಸರಕಾರಕ್ಕೂ ಜನರಿಗೂ ಮನಗಾಣಿಸುವ ಜವಾಬುದಾರಿಯು ಮೆಜಿಸ್ಟ್ರೇಟರದಾಗಿರುತ್ತದೆ.

---

೩ ಸಭಾಬಂದಿಯನ್ನು ಮಾಡುವ ಜಾಲಿಮ ಉಪಾಯಗಳನ್ನು ಉಪಯೋಗಿಸುವ ಪರಿಸ್ಥಿತಿಯು ಹೊನ್ನಾವರದಲ್ಲಿ ಉಂಟಾಗಿದೆಂದು ನಮ್ಮಿಂದೇನೂ ಹೇಳಲಿಕ್ಕಾಗದು. ನಮಗೆ ತಿಳಿದಷ್ಟರ ಮಟ್ಟಿಗೆ ಅಲ್ಲಿ ಶಾಂತತಾಭಂಗ ಇಲ್ಲವೇ ದಂಗೆಯಾಗುವದೆಂಬ ಭೀತಿಯು ತೀರ ಭ್ರಾಮಕವದೆ. ಗುಂಡಬಾಳೆಯ ಪ್ರೊಫೆಸರನ ತಾಳೀ ಚಕ್ಕೆಯ ಬಂದಾಯದ್ಧತೆಯೇ, ಇದಾದರೂ ಮನಸ್ಸಿನೊಳಗಿನ ಭೀತಿಯ ಪಿಶಾಚವು ಎಂದು ನಮಗೆ ಕಾಣುತ್ತದೆ. ಶಾಂತತಾಭಂಗದ ಬಾವಾಜಿಗಳನ್ನು ಕಲ್ಪಿಸಿ, ಬೇಕಾದಂತೆ ಕಾಯಿಯಲಿಕ್ಕೆ ಈಗಿನ ವಾತಾವರಣವು ಅನುಕೂಲವಾಗಿದೆಂಬ ತಪ್ಪು ಭಾವನೆಯಿಂದ, ಇಲ್ಲವೆ ವರಿಷ್ಠರ ಶಿಫಾರಸು ಪಡೆಯಬೇಕೆಂಬ ಸ್ವಾರ್ಥದ ಮೋಹದಿಂದ, ಸ್ಥಾನಿಕ ಅಧಿಕಾರಿಗಳು ಇಂಥ ಅಧಿಕಾರಗಳನ್ನು ಬಡಾಯಿಸಲಿಕ್ಕೆ ಪ್ರವೃತ್ತರಾಗಿದ್ದರೆ, ಅವರಿಂದ ಲಕ್ಷವು ಅಥರಾದನಾಗುವದೆಂದು ಹೇಳಬೇಕು. ಅದ ಕಾರಣ ಹೊನ್ನಾವರದ ಸಭಾಬಂದಿಯ ಜಾಹೀರ ನಾಮೆಯ ಯುಕ್ತಾಯುಕ್ತತೆಯನ್ನೂ ಅವಶ್ಯಕತೆಯನ್ನೂ ಲಕ್ಷಿಸಿ, ಮುಂಬಯಿ ಸರಕಾರವು ಏನೂ ವಿಲಂಬ ಮಾಡದೆ, ಮೆಜಿಸ್ಟ್ರೇಟರ ವರ್ತನದ ಚವಕಶಿ ಮಾಡಬೇಕು ಮತ್ತು ಲೋಕಮತವನ್ನು ಮನಗಾಣಿಸಬೇಕೆಂದು ಅತ್ಯಾಗ್ರಹದಿಂದ ನಾವು ಅರಿಕೆ ಮಾಡುವೆವು. ನಮ್ಮ ಜಿಲ್ಹೆಯಲ್ಲಿ ಇನ್ನೊಂದು ಪಂಜಾಬವಾಗುವದೂ, ಇಲ್ಲವೆ ಧಾರವಾಡವಾದರೂ, ಉಂಟಾಗುವದು ನಮಗೆ ಎಂದೆಂದೂ ಬೇಡ, ತ್ರಿವಾರ ಬೇಡೆಂದು ಹೇಳುತ್ತೇವೆ. ಅದಕ್ಕಾಗಿಯೇ ಮುಂಬಯಿ ಸರಕಾರಕ್ಕೆ ಬೇಗ ಚವಕಶಿ ಮಾಡಿರೆಂದು ನಮ್ಮ ಅತ್ಯಾಗ್ರಹದ ಅರಿಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆಯು ಹೆಚ್ಚಿಲ್ಲ. ಇಷ್ಟ್ಯಂದಿಗೆ ೧೦೩ ೨೪ ಇಂಚು ಬಿದ್ದು; ಬೆಳೆಯ ಸ್ಥಿತಿ ನೆಟ್ಟಗಿದೆ. ಕಗ್ಗದ ಪೈರು ಹಣ್ಣಾಗುತ್ತ ಬಂತು. ರೋಗವು ಇದ್ದಹಾಗೆಯೇ.

ದಕ್ಷಿಣಭಾಗ ಡಿವ್ಹಿಜನಲ ಫೊರೆಸ್ಟ ಸಾಹೇಬರು ಮಾಮಲೇದಾರ ಸಾಹೇಬರ ಮುಖಾಂತರ ತಿಳಿಸುವಂತೆ ಕಟ್ಟಿಗೆ ಡಿಪೋದಲ್ಲಿ ಕಟ್ಟಿಗೆ ಪುರವಟೆಯಂತೂ ಕಾಣುವದಿಲ್ಲ. ಚಂದಾವರ ಬೆಟ್ಟಗಳಿಂದ ತಲೆಹೊರೆಗಳು ಮಾತ್ರ ಬರುತ್ತಿರುತ್ತಾವೆ. ಜಂಗಲ ಕಾಪಿನೊಳಗಿಂದ ತಲೆಹೊರೆ ಮಾಫ ಬಿಟ್ಟಿರುತ್ತಾರಂತೆ! ದಿವಗಿ ಬೆಟ್ಟದಿಂದ ಸಿಬರ್ಂಧನ್ಯಾಕೆ?

ಗೌ। ಸೌ। ಹತ್ತು ಸಮುಸ್ತರಿಂದ ಶ್ರೀ ಭಂಡಾರದ ಮಾಲ್ಕಿಯ ಅಂಗಡಿಗಳು ಎರಡು ವರ್ಷಗಳ ಕರಾರದಮೇಲೆ ನೂತನವಾಗಿ ಈ ವರ್ಷ ಭಾಡಿಗೆ ಬಗ್ಗೆ ಪೋಟಾಪೋಟಿ ಸವಾಲಿಗೆ ಇಡಲ್ಪಟ್ಟದ್ದವು; ಭಾಡಿಗೆಯ ಮಾನವು ವಿಶೇಷ, ಒಂದು ಅಂಗಡಿಗಂತೂ ೧೧೫ ರೂಪಾಯಿ, ಅಂದರೆ ಸಾಧಾರಣ ಬಜಾರ ಭಾಡಿಗೆಗೆ ಮೂರು ಪಟ್ಟು ಬಂತು!! ಅದರೆ ಮೂಲಪಟ್ಟಾರಿಕ ಮುಖ್ಯ ಉದ್ದೇಶವು ಮಾತ್ರ ಎಷ್ಟು ಬಡ್ಡಿ ಕೊಟ್ಟರೂ, ಕೊನೆಗಾಣಲಿಲ್ಲವಂತೆ!!! ಶ್ರೀ ಇಡ್ಡೆ ಇನ್ನು ಶ್ರೀ ಭಂಡಾರದ ಹಣಗಳು ಹೊರಗೆ ಬಡ್ಡಿಗೆ ಕೊಡುವ ಬಗ್ಗೆ ೩೦-೩೫ ವರ್ಷಗಳ ಹಿಂದೆ ನೇಮಕ ಆದ—

ಒಬ್ಬ ವಹಿವಾಟ ಮೆಂಬರ, ಮೂವ ಸರಕಾರಿ ಮುಕ್ತೆಸರರು— ಹೀಗೆ ನಾಲ್ವರ ಕಮಿಟಿಯೇ ಸ್ಥಿರವಾಯಿತಂತೆ ಆವರ ಈಗಿನ ಪರಸ್ಪರ ಸಮ್ಬಂಧ ನೋಡಿದರೂ—ಅಪ್ಪ-ಮಗ-ಭಾವ (ಮಗನ ಮಾಂವ) ಮತ್ತು ಒಬ್ಬ 'ಜೋಡು ಕಾಂ' ಮುಕ್ತೆಸರರಾಗಿರುವರಂತೆ!' ಅದರಲ್ಲಿ ನಿಃಸ್ಪೃಹತೆಯೂ ಕಡಿಮೆಇಲ್ಲ!!' ಸಂತಕಜ್ಜಿಗೂ ಕೊರತೆ ಇಲ್ಲವಂತೆ

ಕೇತಕಿ ಫಾರ್ಮಿನಲ್ಲಿ ವಾಡಿಕೆಯಂತೆ ಪಾತ್ಯಕ್ಷಿಕೆಗಳ ಕೆಲಸ ಜ್ಯಾರಿಯಿಂದ ನಡೆದದೆ ಜಿಲ್ಲಾಧಿಪರು ಮುದ್ದಾಂ ಬಂದಿರುವರು ಡೆ। ಪ್ಯಾರೆಕ್ಟರ ಸಾಹೇಬರು ನಿನ್ನೆ ಬೋಟಿಯಿಂದ ತಡವಾಗಿ ಮುಟ್ಟಿದರು ವೆಟರ್ನರಿ ವೈದ್ಯ ಮಿ। ಗರುಡಾಚಾರ್ಯ ಮತ್ತು ಗದಗಕರರ ದನಗಳ ರೋಗದ ಮೇಲೆ ಉಪನ್ಯಾಸವಾಯಿತು ಮೆಜಿಕಲೆಂಟರ್ನರಿಂದ ತೆಂಗಿನಕಾಯಿ ಮತ್ತು ಭತ್ತದ ಪೈರಿನ ರೋಗಗಳು ತೋರಿಸಲ್ಪಟ್ಟವಂತೆ! ಒವ್ವರ್ಸಿಯರ ಮಿ। ಗೋಕರ್ಣಕರರವರ ವಿವೇಚನಪರ ವ್ಯಾಖ್ಯಾನವೂ ಆಯಿತಂತೆ! ಜನರೇನು ಹೋದವರ್ಷದಷ್ಟು ನೆರೆದಿರಲಿಲ್ಲ ಅಧ್ಯಕ್ಷರಾಗಿದ್ದ ಮೆ। ಜಿಲ್ಲಾಧಿಪ ಹೀಗೆ ಬೆಳೆಗಳ ಸಮಾಲೋಚನ ಭಾಷಣದಿಂದ ಪ್ರಾತ್ಯಕ್ಷಿಕೆಗಳು ಮುಗಿದವು

ಪೋಲಿಸ ಸುಪರಿಂಟೆಂಡೆಂಟ ಸಾಹೇಬರು ಬಂದು ಹೊನ್ನಾವರ ಟಾಂಗೆ ಕಂಪನಿಗೆ ಗಾಡಿ ಮತ್ತು ಕಾಗದಗಳನ್ನು ತಪಾಸಿಗೆ ತರಬೇಕಾಗಿ ತಂತಿ ಕೊಟ್ಟರಂತೆ ಅವರೇನು ಬರಲೂ ಇಲ್ಲ, ತಪಾಸಣೆ ಮಾಡಗೊಡಲೂ ಇಲ್ಲವಂತೆ ಪಾಪ! ಅದರ ಅರ್ಥ ಏನು ಮಾಡಿ ಅವರು ತಿರುಗಿ ಕಾರವಾರಕ್ಕೆ ತೆರಳಿದರೋ ತಿಳಿಯದು ಇಲ್ಲಿಯಂತೂ ಟಾಂಗೆ ಚಲಾವಣೆ ಸರಿಯಾಗಿ ನಡೆದದೆಂದು ಸುದ್ದಿ

ಒಬ್ಬ ಚಹಾ ಅಂಗಡಿಕಾರ— ಪಟ್ಟಣಶೆಟ್ಟಿ ಮರ್ತು ಎಂಬವನು ಹೃದ್ರೋಗದಿಂದ ಈವತ್ತು ಅಕಸ್ಮಾತ ಮರಣಪಟ್ಟನು. ಪಾಪ!

ಇಲ್ಲಿಯ ವ್ಯಾಪಾರಿಗಳೆಲ್ಲರೂ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ನೆರದು ಕಲಕು ಇದ್ದ ವರದೇಶ ಸಕ್ಕರೆ ಮತ್ತು ಈಗ ಬಂದ ಹೊಸ ಸಕ್ಕರೆ ಸ್ಯಾಗಾದರೂ ಸಿಕಾಲಿ ಮಾಡಿ, ಇನ್ನು ಸಕ್ಕರೆ ತರಿಸಬಾರದಾಗಿ ನಿರ್ಧಾರದ ಠರಾವು ಮಾಡಿರುವರಂತೆ!

ಕುಮಟಾ ಸದ್ವೈಷ್ಣವ ಸಮಾಜಕ್ಕೆ— ಇದೇ ಅಕ್ಟೋಬರ ತಾ। ೧೦। ದಿವಸ ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನೆರವೇರುವ ಶ್ರೀಮನ್ಮಧ್ವಾಚಾರ್ಯರ ಜಯಂತಿ ಉತ್ಸವದ ಸಮಾರಂಭದಲ್ಲಿ ಶ್ರೀ ಆಚಾರ್ಯರ ಚರಿತ್ರದ ಹೊರತ ಅನ್ಯ ಯಾವದೇ ವಿಷಯ ತೆಗೆದುಕೊಳ್ಳಲಾರದೆಂದು ಕಾರ್ಯಕಾರಿ ಮಂಡಳವು ತಿಳಿಸುತ್ತದೆ

ಗೋಕರ್ಣ—

ಶ್ರೀ ಮಹಾಬಲೇಶ್ವರ ದೇವಸ್ಥಾನದ ಮೊಕ್ತೆಸರರೊಳಗೂ ಮತ್ತು ದೇವಸ್ಥಾನದ ಅರ್ಚಕ ಉಪಾಧಿವಂತರೊಳಗೂ ಹಕ್ಕಿನ ಕುರಿತು ತಂಟೆ-ತಕರಾರು ನಡೆದು, ಕೋರ್ಟು ಇಲಾಜು ವಗೈರೆಬಗ್ಗೆ ಇತ್ತಂಡದವರಿಗೂ ಈ ವರೇಗೆ ೫-೬ ಸಾವಿರದ ವರೇಗೆ ಖರ್ಚು ಆಗಿ, ಇಷ್ಟರಮಟ್ಟಿಗೆ ಬೆಳೆದ ತಕರಾರು ಅಸಹಕಾರ ತತ್ತ್ವಕ್ಕನುಸರಿಸಿ ಇತ್ತಂಡದವರು ತಮ್ಮ ತಮ್ಮ ಅಪೀಲು ವಗೈರೆ ಅಪೀಲುಗಳನ್ನು ಪರತ ತಕ್ಕೊಂಡು, ಸತ್ಯಾಗ್ರಹ ತತ್ತ್ವಕ್ಕೆ ಅನುಸರಿಸಿ, ಪರಸ್ಪರರಲ್ಲಿ ಐಕ್ಯಮತವನ್ನು ಬೆಳೆಸಿಕೊಳ್ಳಲಿಕ್ಕೆ ಸಮಾಧಾನವಾಗಿದ್ದಾರಂತೆ! ಸ್ತುತ್ಯ

ಹೊನ್ನಾವರ—

ನೂಲು ತೆಗೆಯುವ ರಹಾಟೆಗಳ ಪ್ರಸಾರವು ಜೋರಿನಿಂದ ನಡದದೆ ಈ ತಿಂಗಳಿಂದ ಶ್ರೀ ಹತ್ತು ಜನರ ಮಂಡದಲ್ಲಿ ರಹಾಟೆಯಿಂದ ನೂಲು ತೆಗೆಯುವ ಸಪ್ತಾಹವು ಶುರು ಮಾಡಿರುತ್ತದೆ. ಬರುವ ಅಕ್ಟೋಬರ ತಿಂಗಳ ೨ನೇ ತಾರೀಕ ರವಿವಾರ ದಿವಸವು ಮಹಾತ್ಮಾ ಗಾಂಧೀಜೀಯವರ ಜನ್ಮ ದಿವಸವಿದ್ದು ಆ ದಿವಸ ಮಧ್ಯಾಹ್ನ ೩ ಘಂಟೆಗೆ ಹೊನ್ನಾವರ ಶಹರದಲ್ಲಿರುವ ಎಲ್ಲಾ ಕೈ ರಾಟಿಗಳ ಮೆರವಣಿಗೆಯು ತೆಗೆಯುವದು. ಜಾಹೀರ ಮಾಡಿರುತ್ತದೆ ಈ ಉತ್ಸವಕ್ಕೆ ಬರುವವರು ಪೂರ್ಣ ಸ್ವದೇಶೀ ಪೋಷಾಕ ಹಾಕಿಕೊಂಡು ಬರಬೇಕಾಗಿ ವಿನಂತಿ ಮಾಡಿರುತ್ತಾರೆ

ಕಳೆದ ತಾ ೨೦-೯-೩೧ನೇ ದಿವಸ ಹೊನ್ನಾವರ ೧ನೇ ವರ್ಗದ ಮೆಜಿಸ್ಟ್ರೇಟರು ಯಾವದೇ ಒಂದು ಜನ ಸಮೂಹದಲ್ಲಿ ಭಾಷಣ ಮಾಡುವದು, ದೇಶಭಕ್ತರ ಫೋಟೋಗಳ ಮೆರವಣಿಗೆ ಮಾಡುವದು ವಗೈರೆ ಬಗ್ಗೆ ಮಾಡಿದ ಮನ್ನಾಯಿ ಹುಕುಮು ೧ ತಿಂಗಳ ವರೇಗೆ ಇಟ್ಟದ್ದು ೪ ದಿವಸವೇ ಇಟ್ಟು ರದ್ದು ಪಡಿಸಿರುತ್ತಾರೆಂತ ಜಾಹೀರ ಮಾಡಿರುತ್ತಾರೆ ಮುಖಬಂದಿಯು ಶ್ರೀಯುತ ಶಾಸ್ತ್ರಿ ಮತ್ತು ಕೊಪ್ಪೀಕರ ಇವರೀರ್ವರದು ರದ್ದು ಪಡಿಸಿರುತ್ತಾರೆ ಶ್ರೀಯುತ ನಾಡಕರ್ಣಿಯವರ ಪದಗ ಮಾತ್ರ ಹಾಗೇ ಉಳಿಯಿತು.

ಹೊನ್ನಾವರ ತಾಲೂಕ ಕರ್ಕಿ ಗ್ರಾಮದ ಪೈಕಿ ನಾತಗೇರಿ ಎಂಬ ಹಳ್ಳಿಯ ನಿವಾಸಿಕರಾದವರಿಗೆ ತಾಳಿಚಕ್ಕೆ ಸಮ್ಬಂಧ ದಂಡ ಆದ ಸಂಗತಿ ಕುರಿತು ಕಳದ ತಾರೀಖು ೨೩-೯-೩೧ ನೇ ಕಾನಡಾವೃತ್ತದಲ್ಲಿ "ಜಾಹೀರ ವಿನಂತಿ" ಈ ಮಥಳೆಯ ಕೆಳಗೆ ಜಾಹೀರಪಡಿಸಿದಂತೆ ಅವರ ಉದರನಿರ್ವಾಹದ ಬಗ್ಗೆ ಉದಾರತ್ವಯದಿಂದ ಹಣ ರವಾನಿಸಿ ಕೊಟ್ಟ ಡಾಗ್ಲವಾಡಿ ಸಾಹೇಬ ವಲ್ಕಿ, ವಗೈರೆ ೧೩ ಜನರಿಂದ ಈವರೆಗೆ ರೂಪಾಯಿ ೩೦ ೮೦ ಬಂದಿರುತ್ತವೆಂತ ಶ್ರೀಯುತ ಕೂಜಳ್ಳಿ ವಾಸುದೇವ ಪಾಂಡುರಂಗ ಶಾನಭಾಗರು ತಿಳಿಸುತ್ತಾರೆ

ಯಲ್ಲಾಪುರ—

ಹವಾಮಾನವು ನೆಟ್ಟಗಿದೆ, ರೋಗರಾಯಿ ವಿಶೇಷವಿಲ್ಲಾ ಇಲ್ಲಿಯ ನಾಗರಿಕರೆಲ್ಲರೂ ಕೂಡಿ, ಭಜನಾ ಸಪ್ತಾಹದ ಸಮಾಪ್ತಿಯು ತಾ ೧೬-೯-೩೧ನೇ ದಿವಸ ಆಯಿತು

ಮುಸಲ್ಮಾನ ಬಂಧುಗಳ ಈ ವರ್ಷದ ಮೊಹರಮ್ಮು ವಿಶೇಷ ಉತ್ಸಾಹದಿಂದ ನಡೆಯಿತು. ಹಿಂದು ಮುಸಲ್ಮಾನ ಬಂಧು ಗಳೆಲ್ಲರೂ ಕೂಡಿ ತಾಬೂತುಗಳು ಊರತುಂಬಾ ಮೆರೆಸಲಾದವು ಆಗ ಹಿಂದು ಮುಸಲ್ಮಾನಕೀ ಜಯ' 'ಮಹಾತ್ಮಾ ಗಾಂಧೀ ಮಹಾರಾಜಕೀ ಜಯ' ವಂದೇ ಮಾತರಂ ಇತ್ಯಾದಿ ಜಯಘೋಷಗಳಿಂದ ಆಕಾಶವೆಲ್ಲಾ ದುಮದುಮಿಸಿತು

ಶಿರಸಿ—

ಮಳೆಯು ೩ ದಿವಸದ ಲಾಗಾಯತು ಬೀಳುವದಿಲ್ಲಾ ಸಿಕೆಟಂಗರ ಕೆಲಸವು ಸರಿಯಾಗಿ ನಡದದೆ

ಇಲ್ಲಿ ಬಂದ ಮಗದ ಕೆಲಸ ಕಲಿಸುವ ಕ್ಲಾಸ ಸದ್ಯದಲ್ಲಿ ಶುರು ವಾಗತಕ್ಕದ್ದದೆ

ರಾ ರಂಗನಾಥ ಪಟವರ್ಧನ ಇವರು ಬಂದೇ ಸರ್ತಿ ೬-೮ ಈ ಪ್ರಕಾರ ಎಳೆ ಹೊರಡುವ ಒಂದು ಯಂತ್ರವನ್ನು ತಯಾರಿಸಿದ್ದಾರೆ ಎಳೆಯು ಉತ್ತಮ ರೀತಿಯಿಂದ ಹೊರಡುತ್ತದೆ ಮತ್ತು ಸುತ್ತುವ ಕೆಲಸವನ್ನು ಸಹ ಮಾಡುತ್ತದೆ ಒಮ್ಮೊಮ್ಮೆ ನೂಲು ಹರಿಯುತ್ತದೆ ಅದ ಹಾಗಾಗದಂತೆ ಸುಧಾರಣೆಯನ್ನು ಮಾಡುತ್ತಿದ್ದಾರೆ ಯಂತ್ರವು ಕಾಲಿನಿಂದ ನಡಿಸತಕ್ಕದ್ದು. ಎರಡೂ ಕೈಗಳು ಮೋಕಳಾ ಇರುತ್ತವೆ ಕಾರಣ ಅಗತ್ಯ ಬಿದ್ದ ಬಹಳ ಸಂಗಳನ್ನು ದೂರ ಪಡಿಸಲಿಕ್ಕೆ ಅನುಕೂಲವಾಗಿರುತ್ತದೆ. ಇದು ಪೂರ್ಣಾವಸ್ಥೆಗೆ ಬಂದರೆ, ನೂಲು ತೆಗೆಯುವದರಲ್ಲಿ ಬಂದು ದೊಡ್ಡ ಕ್ರಾಂತಿಯಾದಂತೆ ಆದೀತು

ಇಲ್ಲಿ ಈವತ್ತಿನ ದಿವಸ ಬಂದು ವ್ಯಾಪಾರಿ ಸಂಘವು ಸ್ಥಾಪಿಸಲ್ಪಟ್ಟು, ಮೆಂಬರನಾಗತಕ್ಕವನು ೮ ಆಣೆ ಫೀ ಕೊಡಬೇಕೆಂತಲೂ, ಈ ಸಂಘದ ನೇಮದ ಪ್ರಕಾರ ಬೀವಸುಗಳನ್ನು ತರಿಸಬೇಕೆಂತಲೂ, ಈಗ ತುರ್ತ ಪರದೇಶೀ ಸಕ್ಕರೆ ಮತ್ತು ಪರದೇಶೀ ಅರಿವೆಗಳನ್ನು ಪೂರ್ಣ ಬಂದಮಾಡಬೇಕೆಂತಲೂ, ಠರಾಯಿಸಿದರು ಇದಕ್ಕೆ ವಿರುದ್ಧವಾಗಿ ನಡೆದವರ ಸಂಘದವರು ಠರಾಯಿಸಿದ ದಂಡವನ್ನು ಕೊಡಬೇಕೆಂತಲೂ, ಇಲ್ಲದಿದ್ದರೆ ಅವರ ಕೂಡ ಎಲ್ಲಾ ವ್ಯಾಪಾರಿಗಳು ಅಸಹಕಾರ ಮಾಡಬೇಕೆಂತಲೂ, ಠರಾಯಿಸಿವರು.

ಇಲ್ಲಿ ಕೆರೆಯ ಅಂಗಡಿಯ ಮೇಲೆ ಪಿಕೆಟಿಂಗ ನಡದಿತ್ತು ಆದರೆ ಕೆಲವು ಕಳ ಇದ್ದು ಅದು ಮಾರಾಟವಾಗುತ್ತದೆಂಬ ಬಾತ್ಮಿಯು ಇತ್ತು ಆದರೆ ಅದು ಎಲ್ಲಿ ಎಂಬದು ಜನರಿಗೆ ತಿಳಿದಿದ್ದಿಲ್ಲಾ. ಈ ಸಮ್ಮ ಕಾಳಜಿಯು ಮಹಾತ್ಮಾ ಗಾಂಧಿಯವರ ಮನಸ್ಸಿನಲ್ಲಿ ಬಂದು, ಆ ಗೂಢವು ಹೊರಬಿತ್ತು ಇಲ್ಲಿ ಒಬ್ಬ ಅಂಗಡಿಕಾರನಾದ ನಾಗಪ್ಪ ವೈದ್ಯ ಅನ್ನುವವರು ಹೆಸಬಲ ಎಣ್ಣೆ, ಜಮುಗ ಎಣ್ಣೆ ಎಂಬ ಬೇರೆ ಬೇರೆ ವ್ಯಾಪಾರಗಳಿಂದ ಕುಮಟೆಯಿಂದ ಇಲ್ಲಿ ತರಿಸುತ್ತಿದ್ದರೆಂತಲೂ ಅದು ಕತ್ತಗಾಲದಲ್ಲಿ ಕಲಕು ಇಟ್ಟದ್ದು ಗಾಡಿಕಾರನು ಕರಿಮಬಗ್ಗೆ ಗಾಡಿಯಮೇಲೆ ಹಾಕುವಾಗ್ಗೆ ಬಂದು ಡಬ್ಬಿ ಬಿದ್ದು ಒಡದ್ದರಿಂದ ಅದರ ವಾಸನೆಯಿಂದ ಗೊತ್ತಾಗಿ ಪೋಲೀಸರು ಹಿಡಿದು ಪಂಚನಾಮೆ ಮಾಡಿ, ಬಂದು ಸಾಬೀತ ಡಬ್ಬಿ, ೧ ಒಡದ ಡಬ್ಬಿ, ಎತ್ತು-ಗಾಡಿ ಕೂಡಾ ಜಪ್ತಮಾಡಿ ಗಾಡಿಕಾರನಿಗೂ ಕೈದುಮಾಡಿ, ಕುಮಟೆಗೆ ಕಳಿಸಿದರೆಂತಲೂ ಗಾಡಿಯ ಮಾಲೀಕ ಮರ್ತಪ್ಪ ಎನ್ನುವವನು ಸುದ್ದಿ ತಂದಿದ್ದಾನೆ ವೈದ್ಯ ನಾಗಪ್ಪಾ ಅನ್ನುವವರು ಅಸಹಕಾರ ತೆಡಲ್ಲಿ ಸೇರಿದವರೆಂದು ತೋರಿಸುತ್ತಿದ್ದರು ಒಳಗೊಳಗೆ ಈ ತರದ ಕಾರಸ್ಥಾನಗಳು ಈ ಮೊದಲು ಎಂದೆರಡು ಸರ್ತಿ ತನ್ನ ಗಾಡಿಯಮೇಲೆ ಡಬ್ಬಿಗಳು ಬಂದಿದ್ದವೆಂತ ಗಾಡಿಕಾರ ಮರ್ತಪ್ಪನು ಹೇಳುತ್ತಿದ್ದಾನೆ ದುಡ್ಡಿನಾಶೆಯ ಪರಿಣಾಮವು, ಮನುಷ್ಯನು ದುಡ್ಡಿನ ದೆಶೆಯಿಂದ ಬೇಕಾದ್ದು ಮಾಡುವನೆಂಬ ಬಗ್ಗೆ ಇದೇ ಉದಾಹರಣೆಯು. ಇದು ಮಹಾತ್ಮಾ ಗಾಂಧೀಯವರಿಗೆ ವಂಚಿಸಿದಂತಾದ್ದರಿಂದಲೇ ಅವರ ಮಹಿಮೆಯಿಂದ ಹೊರಬಿತ್ತು ಈ ಸಂಗ್ತಿ ಹೊರಬಿದ್ದದರಿಂದ ವೈದ್ಯ ನಾಗಪ್ಪ ಅನ್ನುವವರಿಗೆ ಈ ಮೊದಲು ಇದ್ದ ಕಿಮ್ಮತ್ತು ಇಲ್ಲದಹಾಂಗಿದೆ ಇನ್ನು ಮುಂದೆ ಕದ್ದು ಕುಡಿಯುವವರಿಗೆ ಮಾತ್ರ ಬಹಳ ಅನಾನಕೂಲತೆಯಾಗಿರಬಹುದು.

ಸಿದ್ದಾಪುರ—

ಇಲ್ಲಿ ಈಗ ನಾಲ್ಕೈದು ದಿನಗಳಿಂದ ಮಳೆ ಇಲ್ಲ. ಹವೆಮಾನ ಚಲೋದದೆ. ರೋಗರಾಯಿ ವಿಶೇಷ ಇಲ್ಲಾ. ಇಲ್ಲಿಯ ಕಾಂಗ್ರೆಸ ಕಮಿಟಿಯವರು ತಾರೀಖು ೧೯-೯-೩೧ ಕ್ಕೆ ಬೇಡಕಣಿಯಲ್ಲಿ ಜಾಹೀರ ಸಭೆಯು ಶ್ರೀ ಪುಟ್ಟಪ್ಪಾ ದಾಸಪ್ಪಾ ಬೇಡಕಣಿ ಇವರ ಅಧ್ಯಕ್ಷತೆಕಳಗೆ ಕೂಡಿಸಿ, ಗ್ರಾಮಕಮಿಟಿ ಸ್ಥಾಪಿಸಲ್ಪಟ್ಟಿತು ಸಭೆಗೆ ಸುಮಾರು ೧೫೦ ಜನರು ಕೂಡಿದ್ದರು ಪರದೇಶಿ ಬಹಿಷ್ಕಾರ, ಸ್ವದೇಶಿ ಪುರಸ್ಕಾರ ಮದ್ಯಪಾನ ನಿಷೇಧ ವಗೈರೆ ಠರಾವು ಪಾಸಾದವು ಇಲ್ಲಿಯ ರಾಷ್ಟ್ರೀಯ ಶಾಲೆಯಲ್ಲಿ ಇಂಗ್ಲಿಷ ಶಿಕ್ಷಕರು ಇಲ್ಲದೆ, ರಾಷ್ಟ್ರೀಯ ಶಾಲೆಗೆ ಬರುವ ಹುಡುಗರು ನಿರುತ್ಸಾಹಿಗಳಾಗಿದ್ದಾರೆ. ಕಾರಣ ಮೆಟ್ರಿಕ ಆಗಲೀ ಯಾ ಸ್ಕೂಲ ಫೈನಲ್ಲ ಪಾಸಾದವರು ಯಾ ಕಾಲೇಜಬಿಟ್ಟ ವಿದ್ಯಾರ್ಥಿಗಳು ರಾಷ್ಟ್ರೀಯಭಾವನೆಯಿಂದ ಕೆಲಸಮಾಡುವವರು ಒಬ್ಬರು ಇಲ್ಲಿಯ ರಾಷ್ಟ್ರೀಯ ಶಾಲೆಗೆ ಅಗತ್ಯವಿದ್ದ ಕಾರಣ, ಯಾರಾದರೂ ಇಲ್ಲಿ ಶಾಲೆಗೆ ಮಾಸ್ತರ ಆಗಲಿಕ್ಕೆ ಇಚ್ಛಿಸುವವರಿಗೆ ತಿಂಗಳ ಒಂದರ ೨೫ ೦ ೦ ಇಪ್ಪತ್ತೈದು ರೂಪಾಯಿ ಕೊಡ ಪದಲ್ಲವೆ, ಮುಂದ ಹಿತ್ತಿ ಸಹ ಮಾಡಲಾದೀತು. ತಾಲೂಕ

(ಮುಂದೆ ೬ನೇ ಪಾನಿನಮೇಲೆ ಮುಂದರಿಸಿದ)

ಪತ್ರಸ್ವೀಕಾರ.

ಒಡ ವ್ಯಾಪಾರಿ— ಮುಂದಿನ ಸಂಚಿಕೆಯಲ್ಲಿ

ಜಾಹೀರಾತ.

ಇದರ ಮೂಲಕ ಯಾವತ್ತಾ ಜನರಿಗೆ ಜಾಹೀರಮಾಡುವದೇನಂದರೆ—

ಹೊನ್ನಾವರ ೧ ನೇ ವರ್ಗದ ಮೇಜಿಸ್ಟ್ರೇಟ ಆದ ನಾನು ತಾ ೨೦-೯-೩೧ ನೇ ದಿವಸ ಕ್ರಿ। ಪ್ರೋ। ಕೋ। ಕಲಂ ೧೪೪ ನೇ ಪ್ರಕಾರ ಜನಸಮೂಹದಲ್ಲಿ ಭಾಷಣ ಮಾಡುವವರ ಬಗ್ಗೆ ಮತ್ತು ಕೆಲವು ಚಿತ್ರಗಳ ಮೆರವಣಿಗೆ ಮಾಡುವವರ ಬಗ್ಗೆ ಮಾಡಿದ ಮನಾಯಿ ಹುಕುಮಿಗೆ ತಾರೀಖು ೨೦-೯-೩೧ ನೇ ಯಿಂದ ಒಂದು ತಿಂಗಳ ಮುದತ್ತು ಇಟ್ಟು ಸಾರ್ವಜನಿಕ ರೀತಿಯಿಂದ ಮನಾಯಿ ಹುಕುಂ ಪ್ರಕಟಿಸಲಾಗಿತ್ತಷ್ಟೇ"

ಅದರ ಸದ್ರಿ ಮನಾಯಿ ಹುಕುಮು ಅಷ್ಟು ಮುದತ್ತಿನವರೇಗೆ ಅಮಲಿನಲ್ಲಿ ಉಳಿಯುವದರ ಅವಶ್ಯಕತೆ ಡಿ। ಮೆಜಿಸ್ಟ್ರೇಟ ಸಾಹೇಬ ಬಾ। ಜಿಲ್ಲಾ ಕಾನಡಾ ಇವರಿಗೆ ತೋರಲಿಲ್ಲಾದ್ದರಿಂದ ಅದರ ಈ ಮುದ್ದತ್ತ ಕಡಿಮೆ ಮಾಡಿ, ಸದ್ರಿ ಮನಾಯಿ ಹುಕುಂ ತಾ ೨೪-೯-೩೧ನೇ ವರೇಗೆ ಅಮಲಿನಲ್ಲಿ ಇರಬೇಕೆಂದು ಹುಕುಮು ಮಾಡಿದ್ದಾರೆ ತಿಳಿಯುವದು

೨೪-೯-೩೧, ಮೇಜಿಸ್ಟ್ರೇಟ ೧ನೇವರ್ಗ ಹೊನ್ನಾವರ.

ಕಾಂಗ್ರೆಸ ಕಮಿಟಿ ಸೆಕ್ರೆಟರಿ ಶಿದ್ದಾಪೂರ ಇವರಹತ್ತರ ಪತ್ರವ್ಯವಹಾರಮಾಡಬಹುದು. ಯಾ ಕೂಡಲೇ ಹೊರಟು ಬರಬಹುದು. ಮತ್ತು ಇಲ್ಲಿಯ ಮುಷ್ಟಿಫಂಡು ನಾಲ್ಕು ವಾರದ್ದು ಕೂಡಿ ೪೬—೪—೬ ರೂ ಸ್ಕೂಲ ಬೋರ್ಡ ಪ್ರೆಸಿಡೆಂಟರ ಹತ್ತರ ಜಮಾ ಆಗಿದೆ. ಇಲ್ಲಿ ಈ ಹೊತ್ತು ರಾಷ್ಟ್ರೀಯ ಟಿಳಕ ವಾಚನಾಲಯವು ತೆರೆಯಲ್ಪಟ್ಟಿತು.

ಸಂಕೇರಿ— ಇಲ್ಲಿ ನಿನ್ನೆ ತಾ ೨೪ ಸಾಯಂಕಾಲ ಅಲ್ಲಿಬಂಧು ಕಿಚಲೋ ವಗೈರೆ ದೇಶಭಕ್ತರನ್ನು ಸರಕಾರವು ಹಿಡಿದಬಗ್ಗೆ ಇಲ್ಲಿಯ ಗ್ರಾ ಕಾ ಕ ಮತ್ತು ಖಿಲಾಫತ ಕಮಿಟಿಗಳ ವತಿಯಿಂದ ಒಂದು ಪ್ರಚಂಡ ಸಭೆಯು ವೇ। ಅನಂತಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಭೆಗೆ ಹಿಂದು ಮುಸಲ್ಮಾನರು ಕೂಡಿ ಸುಮಾರು ೩೦೦ ಜನರು ನೆರೆದಿದ್ದರು ಸಭೆಗೆ, ದಂಗೆಯಾಗುವ ಸಂಭವವು ಇತ್ತೇತಲೋ ಏನೋ, ಮಾಮಲೇದಾರರು ದಯಮಾಡಿಸಿದ್ದರು. ಸಭೆಯು ಶುರುವಾದಕೂಡಲೇ, ಮಾಮಲೇದಾರರು ಅಧಿಕಾರವಾಣಿಯಿಂದ ಹೇಳಿದ್ದೇನಂದರೆ —"ಈ ನೋಟೀಸನ್ನು ನೀವು ೨—೩ ದಿವಸ ಮೊದಲೇ ಜಾಹೀರ ಮಾಡಿದ್ದರೆ, ಈಗ ಬಂದ ಜನರಲ್ಲಿ ಅನೇಕರು ಬರುತ್ತಿದ್ದಿಲ್ಲವಷ್ಟೆ ಈಗ ಯಾರಾದರೂ ತಮ್ಮ ಭಾಷಣಗಳಲ್ಲಿ ಏನಾದರೂ ಆಕ್ಷೇಪಾರ್ಹ ಮಜಕೂರನ್ನು ಉಪಯೋಗಿಸಿದರೆ, ಅವರನ್ನು ಶಿಕ್ಷಿಸುವ, ಹಾಗು ಸಭೆ ಬಂದಮಾಡುವ ಅಧಿಕಾರವು ನನಗಿದೆ ಇದನ್ನು ತಿಳುಕೊಂಡೇ ನೀವು ನೀವು ಮಾತಾಡಬೇಕು' ಇದನ್ನು ಸದಾಶಿವಗಡದ ರಾ। ಗಣಪತ ಮಾಸ್ತರರು ಕೂಡಲೇ ತೀವ್ರವಾಗಿ ನಿಷೇಧಿಸಿದರು. ನಂತರ ಭಾಷಣಮಾಡಿದ ಪ್ರತಿ ಒಬ್ಬನು ಅದೇ ರೀತಿಯಲ್ಲಿ ನಿಷೇಧಿಸಿದ್ದನ್ನು ಕಂಡು, ರಾವಸಾಹೇಬರಿಗೆ ಸ್ವಲ್ಪ ನಡುಗುಬಂದು ಕಟ್ಟಕಡೆಗೆ "ನನ್ನ ಅಂಬೋಣವು ನಿಮಗೆ ಪೂರ್ಣ ತಿಳಿಯಲಿಲ್ಲ," ವಗೈರೆ ಮೃದು ಶಬ್ದಗಳನ್ನಾಡಬೇಕಾಯಿತು!

ಈ ಸಭೆಯಲ್ಲಿ ರಾ। ಶಾಂತಾರಾಮ ಹಳದೀಪೂರಕರರ ವಕ್ತೃತ್ವಪೂರ್ಣ ಮನೋರಂಜಕ ಹೃದಯದ್ರಾವಕ ಭಾಷಣವಾಯಿತು. ಅವರು ನಮ್ಮ ಸಧ್ಯದ ಸ್ಥಿತಿ, ಮದ್ಯಪಾನನಿಷೇಧ, ಸ್ವದೇಶಿ ವಗೈರೆ ವಿಷಯಗಳಮೇಲೆ ಎಲ್ಲರಿಗೂ ಬೋಧವಾಗುವಂತೆ ಭಾಷಣಮಾಡಿದರು ಅಲ್ಲಿಬಂಧು ಮಹಾತ್ಮಾ ವಗೈರೆ ದೇಶಭಕ್ತರ ಗುಣಗಳನ್ನೂ ಅವರ ದೇಶಭಕ್ತಿಯನ್ನೂ ಸಾಂಗವಾಗಿ ವರ್ಣಿಸಿದರು ಇನ್ನು ಕೆಲವರು ಸ್ವದೇಶಿಮೇಲೆ ಉಪದೇಶಮಾಡಿದಕೂಡಲೇ, ಸಭಿಕರು ಗಾಂಧೀ ಟೊಪ್ಪಿಗೆಗಳನ್ನು ನಮಗೆ ಕೊಡಿರಿ,' ಎಂತ ಹೇಳಿದರು. ಕೂಡಲೇ ಟೊಪ್ಪಿಗೆಗಳು ಕೊಡಲ್ಪಟ್ಟವು ಬಹುಶಃ ಯಾವತ್ತೂ ಜನರು ಅವುಗಳನ್ನು ಧರಿಸಿದರು. ಮಾಮಲೇದಾರರಿಗೂ ಒಂದು ಟೊಪ್ಪಿಗೆಯು ಕೊಡಲ್ಪಟ್ಟಿತು. ಅವರು ಅದನ್ನು "I cannot take it" (ನಾನು ಅದನ್ನು ತಕ್ಕೊಳ್ಳಲಾರೆನು) ಎಂತ ಹೇಳಿದ್ದಲ್ಲದೆ, ತಿರಸ್ಕಾರದಿಂದ ಅದನ್ನು ದೂರ ಬೀಸಾಡಿಬಿಟ್ಟರು. ಯಾಕೆ? ಅದು ಧರಿಸಲಾರದಷ್ಟು ಭಾರವಾಗಿತ್ತೋ? ಏನು ಪಂಡಿತರ ಪ್ರಭೃತಿ ನಮ್ಮ ಸದಾ ಹಿತತತ್ಪರರಾದ ಯುರೋಪಿಯನರಿಗೆ ಅಸಹ್ಯವಾದಂತೆ ಇವರಿಗೂ ಅಸಹ್ಯ ಎನಿಸಿತೋ? ಏನು, ಹೀಗೆ ಮಾಡದಿದ್ದರೆ ತಾವು ಬೇಗನೇ ಪೆನಶನ ತೆಗೆದುಕೊಂಡವರೆ ಪೆನಶನಕ್ಕೆ ದಕ್ಕೆ ಬಂದೀತೆಂತ ನಟಿಸಿದರೋ" ಬಲ್ಲನಮೇಶು. ಗಾಂಧಿಯವರ ಅಹಿಂಸಾಪರ ಅಸಹಕಾರಿತೆಯು ನಮ್ಮ ಅಧಿಕಾರಿಗಳಿಗೆ ಚಲೋ ಭಾದಿಸಹತ್ತಿದೆ ಎಂತ ಹೇಳಲಿಕ್ಕೆ ಏನೇನೂ ಅಡ್ಡಿಯಿಲ್ಲ. ಇರಲಿ. ಸರಕಾರದ ಕೃತ್ಯದ ನಿಷೇಧದ ಹಾಗು ಅಲ್ಲಿಬಂಧುಗಳನ್ನು ವಗೈರೆ ಸರಕಾರದಿಂದ ಹಿಡಿಯಲ್ಪಟ್ಟ ದೇಶಭಕ್ತರನ್ನು ಅಭಿನಂದಿಸುವ ಠರಾವು ಮತ್ತೈಕ್ಯದಿಂದಲೂ ಚಪ್ಪಾಳೆಗಳ ಗಜ್ಜರದಿಂದಲೂ ಪಾಸಾಯಿತು. ಕಟ್ಟಕಡೆಗೆ ಮ. ಗಾಂಧೀ ಕೀ ಜಯ, ಮೌಲಾನಾ ಮಹಮ್ಮದ ಅಲ್ಲಿ ಶೌಕತ ಅಲ್ಲೀ ಜಯ ವಂದೇಮಾತರಂ ವಗೈರೆ ಜಯ ಘೋಷಗಳಾಗಿ ಈ ಪ್ರಚಂಡ ಸಭೆಯು ವಿಸರ್ಜನವಾಯಿತು.

ಸ್ವದೇಶಿಯೋ ಸ್ವರಾಜ್ಯವು.

(ಮಹಾತ್ಮರ ನವಜೀವನದಿಂದ)

'ನೀವು ಕೊಟ್ಟದ್ದೇನು ಹೇರಳವಲ್ಲ, ಆದರೆ ಅದರಿಂದಲೇ ಹಿಂದುಸ್ಥಾನದಲ್ಲಿ ಹೊಸ ಚೈತನ್ಯವು ಉಂಟಾಗುವದು ಲಂಕಾಶಾಯರದ ವ್ಯಾಪಾರಿಗಳು ಹಿಂದುಸ್ಥಾನದ ರಾಜಕೀಯ ಆಕಾಂಕ್ಷೆಗಳನ್ನು ಸಹಾನುಭೂತಿಪೂರ್ವಕ ದೃಷ್ಟಿಯಿಂದ ವಿಚಾರಿಸಿದರೆ, ಅದರಲ್ಲಿ ಲಂಕಾಶಾಯರ ವ್ಯಾಪಾರಿಗಳ ಹಿತವಿದೆ ಸ್ವರಾಜ್ಯವನ್ನು ಅನುಭವಿಸುವ ಹಿಂದುಸ್ಥಾನವು ಲಂಕಾಶಾಯರದ ಬಲು ದೊಡ್ಡ ಗಿರಾಕಿಯಾಗುವದು.

ಈ ತರದ ಹರಟೆಗಳು ಈಗ ವಿಲಾಯತಿಯಲ್ಲಿ ವಿಸ್ತಾರವಾಗಿವೆ ಇಂಥ ಹರಟೆಗಳಿಗೂ ನಮಗೂ ಏನೂ ಸಂಬಂಧವಿರುವದಿಲ್ಲ, ನಾವು ಲಂಕಾಶಾಯರದ ಗಿರಾಕಿಯಾಗುವೆವೆಂದು ಶರ್ತು ಬರೆದು ಕೊಡಲಿಕ್ಕೆ ನಾವೀಗ ತಯಾರಿಲ್ಲ. ಸ್ವರಾಜ್ಯವು ಸಮೀಪಿಸಿದ ಹಾಗೆ, ಒಂದು ಬದಿಯಿಂದ ಜುಲುಮು, ಇನ್ನೊಂದು ಬದಿಯಿಂದ ಬುದ್ಧಿಭೇದ ಮಾಡುವ ಪ್ರಯತ್ನ ಪ್ರಾರಂಭವಾಗುವದೆಂದು ನಮಗೆ ಗೊತ್ತದೆ. ಸ್ವರಾಜ್ಯದ ಕಾದಾಟವೂ, ಮಾರನ ಸಂಗಡ ನಡಿಸಿದ ಬುದ್ಧ ಭಗವಂತನ ಕಾದಾಟವೂ ಒಂದೇ. ಮಾರನು ನಮಗೆ ಬೆದರಿಸುವನು ಮೋಹ ಹುಟ್ಟಿಸುವ ಪದಾರ್ಥಗಳನ್ನು ನಮ್ಮ ಸುತ್ತು ಮುತ್ತಲೂ ಪಸರಿಸುವನು, ಬುದ್ಧಿಭ್ರಂಶವಾಗುವ ಕೃತ್ಯ ಮಾಡುವನು, ಅಚಲ ದೇಶಭಕ್ತಿಯ ಉಪಾಸಕರೆನ್ನುವವರಿಗೆ ತನ್ನ ಪಕ್ಷದಲ್ಲಿ ಎಳಕೊಂಡಂತೆ ತೋರಿಸುವನು, ಕುಟಿಲ ನೀತಿಯ ಎಲ್ಲ ಪ್ರಯೋಗಗಳನ್ನು ಮಾಡುವನು. ನಾವು ಇವನ್ನೆಲ್ಲ ಅರಿತು, ನಮ್ಮ ಕಾರ್ಯ ನಿಷ್ಠೆಯನ್ನು ಎಳ್ಳಷ್ಟೂ ವಿಚಲಮಾಗಗೊಡದೆ ಮುಂದರಿದರೆ, ಸ್ವರಾಜ್ಯ ರೂಪದಿಂದ ಅಮೃತವು ನಮಗೆ ಅನಾಯಾಸದಿಂದ ಕೈವಶವಾದೀತು.

ನಾವು ಸ್ವರಾಜ್ಯವನ್ನು ಯಾಕೆ ಬೇಡುತ್ತೇವೆ? ಮೆಂಚೆಸ್ಟರ ಗಿರಾಕಿಯಾಗುವದಕ್ಕೇನು' ಈ ವಂಗ ನೀವು ಮೆಂಚೆಸ್ಟರದ ಮಹತ್ವದ ಗಿರಾಕಿ ಇದ್ದಿರ್ಲೇನು' ಮೆಂಚೆಸ್ಟರದವರು ತಮ್ಮ ಹಿತವೆಲ್ಲಿದೆಂದು ಸಂಪೂರ್ಣವಾಗಿ ಅರಿತಿರುವರು ಹಿಂದುಸ್ಥಾನದ ಹತ್ತರ ನಡೆಯುವ ಮೆಂಚೆಸ್ಟರದ ವ್ಯಾಪಾರವು ಸ್ವಾಭಾವಿಕವಲ್ಲ, ಕೃತ್ರಿಮವು ಸ್ವರಾಜ್ಯ ಯುಗದಲ್ಲಿ ಅದೆಂದೂ ಬಾಳಲಾರದು. ಇದನ್ನರಿತು ಇಂಗ್ಲಂಡ ದೇಶವು ಹಿಂದುಸ್ಥಾನದಮೇಲಿನ ತನ್ನ ವರ್ಚಸ್ಸನ್ನು ಹೆಚ್ಚೆಚ್ಚು ದೃಢೀಕರಿಸಲು ಯತ್ನಿಸುತ್ತದೆ ಸ್ವದೇಶಿಯೆಂದರೆ, ಸ್ವರಾಜ್ಯವು ಸ್ವರಾಜ್ಯವೆಂದರೆ ಸ್ವದೇಶಿ. ಲಂಕಾಶಾಯರದ ಕಾಯಂ ಗಿರಾಕಿಗಳಾಗಿ ಸ್ವರಾಜ್ಯ ಸಂಪಾದಿಸುವದೂ ರಾವಣನ ಸಂಗಡ ಮದುವೆ ಮಾಡಿಕೊಂಡು ಸೀತಾದೇವಿಯು ತನ್ನ ಶೀಲ ರಕ್ಷಣೆ ಮಾಡಿಕೊಳ್ಳುವದೂ ಒಂದೇ ಪಂಕ್ತಿಯೊಳಗಿನದು, ಎಂದು ಹಿಂದುಸ್ಥಾನಕ್ಕೆ ಈಗ ಖಾತ್ರಿಯಾಗಿದೆ ಲಂಕಾಶಾಯರದ ಗಿರಾಕಿಯಾಗುವದೆಂದರೆ, ಹಿಂದುಸ್ಥಾನದಲ್ಲಿ ಕಾಯಂ ಬರಗಾಲವು. ನಮ್ಮ ಗಿರಣಿಗಳ ನಾಶವು ಲಂಕಾಶಾಯರದ ಗಿರಾಕಿಯಾದದ್ದರಿಂದಲೇ, ನಮ್ಮಮೇಲೆ ನೌಕರಶಾಹಿಯ ಪಾಪೀ ದೃಷ್ಟಿಯು ಲಂಕಾಶಾಯರದ ಗಿರಾಕಿಯಿಂದರೆ, ಭಾರತಮಾತೆಯ ಪಾರತಂತ್ರ್ಯವು ಮೃಗೇಂದ್ರನ ಹಲ್ಲು ಮುರಿದು ನಖ ಪಂಜರ ತೆಗೆದು, ಅವನಿಗೆ ಸ್ವತಂತ್ರ ಮಾಡಲಿಕ್ಕಾಗುತ್ತದೆ. ಯಾರಾದರೂ ಸಿದ್ಧಮಾಡಿ ತೋರಿಸಿದರೆ, ಲಂಕಾಶಾಯರದ ವ್ಯಾಪಾರವನ್ನು ಅವ್ಯಾಹತ ನಡಿಸಿ, ಹಿಂದುಸ್ಥಾನವು ಸ್ವರಾಜ್ಯ ಗಳಿಸಬಲ್ಲದು ಹಿಂದುಸ್ಥಾನದ ಪುಢಾರಿ ಮಂಡಳಿಯಲ್ಲಿ ಸ್ವದೇಶಿಯ ವಿಷಯವಾಗಿಯಾದರೂ ಮತಭೇದವಿರಲಿಕ್ಕಿಲ್ಲೆಂದು ನಮ್ಮ ತಿಳುವಳಿಕೆ ಇತ್ತು. ಎಲ್ಲರೂ ಏಕಸ್ವರದಿಂದ ಸ್ವದೇಶಿಯ ಗುಣಗಾನ ಮಾಡುತ್ತಿದ್ದರು ಅವರೆ ಸ್ವರಾಜ್ಯ ಸಂಪಾದನೆಯ ಕಾರ್ಯವನ್ನು ಗಂಭೀರತೆಯಿಂದ ನಡಿಸಹತ್ತಿದ ಕೂಡಲೆ, ಸ್ವದೇಶಿಯನ್ನು ಎದಿಗೊಟ್ಟಿ, ಸ್ವರಾಜ್ಯದ ಹರಟೆ ಹೊಡೆಯುವವರೂ, ಹಿಂದುಸ್ಥಾನದ ಕಲ್ಯಾಣವೇ ನಮ್ಮ ಅಂತಃಕರಣದಲ್ಲಿರುತ್ತದೆಂದು ಅಂಬು ಬಡಿಯುವವರೂ ತಯಾರಾದ ಪರನ್ನು ನೋಡಿ ಸಖೇದಾಶ್ಚರ್ಯವಾಗುತ್ತಿದೆ ಇಂಥ ಮಾಯೆಗಳಿಗೆ ನಮ್ಮ ಪ್ರಜೆಗಳು ಎಂದೂ ಮೋಸಹೋಗಲಿಕ್ಕಿಲ್ಲೆಂದು ನಾವು ನೆರೆ ನಂಬುತ್ತೇವೆ.

ಮಾಪಿಳೇಯರ ದಂಗೆ.

ಈ ದಂಗೆಯ ಸಂಬಂಧ ಈಗ ವಿಶೇಷ ಸುದ್ದಿ ಬರುವದಿಲ್ಲ. ಎಂಗ್ಲೋ ಇಂಡಿಯನ ವೃತ್ತಪತ್ರಕಾರರು ಹೇರಳ ಹಿಂದೂ ಬಾಂಧವರಿಗೆ ಧರ್ಮಾಂತರ ಮಾಡಿದ ಸುದ್ದಿಗಳನ್ನು ಪ್ರಕಟಿಸುತ್ತಿರುವರು. ಹೆಂಗಸರಮೇಲೆ ಅತ್ಯಾಚಾರ ಮಾಡಿದ ಸುದ್ದಿಗಳೂ ಬರುತ್ತಿವೆ ಪ್ರಕಟವಾದೊಳಗಿನ ಘನಘೋರ ಸಂಗ್ರಾಮದ ನಂತರ, ವಿಶೇಷ ಕಾಳಗವಾದದ್ದೇನಿಲ್ಲ ಲಷ್ಕರೀ ಕಾಯಿದೆಯಿಂದ ಮಲಬಾರದಲ್ಲಿ ಬಹು ದೊಡ್ಡ ಭಾಗದಲ್ಲಿ ಶಾಂತತೆ ಇದೆಯಂತೆ' ಆದರೆ ಏರ್ನಾಡ ಪ್ರಾಂತದಲ್ಲಿ, ಇನ್ನೂ ಶಾಂತತೆಯು ಪ್ರಸ್ಥಾಪಿತವಾಗಲಿಲ್ಲ ಇಷ್ಟೊಬ್ಬ ಮಾಪಳೇ ದಂಗೆಖೋರನು ಸುಮಾರು ಸಾವಿರ ಅನುಯಾಯಿಗಳನ್ನು ಕೂಡಿಕೊಂಡು, ನೀಲಾಂಬೂರದ ಅರಸನೊಡನೆ "ಹೇಳಿಕೊಳ್ಳುತ್ತಿರುವನಂತೆ' ಅವನಿಗೆ ಇನ್ನೂ ಹಿಡಿಯಲಿಲ್ಲ ಸರಕಾರಿ ಸೈನ್ಯವು ಹೋದಕೂಡಲೆ, ಇವರು ಅರಣ್ಯದ ಜಂಗಲಗಳಲ್ಲಿ ಸೇರಿ ಕಾಯುವರು. ಹೀಗೆಲ್ಲ ಬಾತ್ಮಿಗಳು ಬರುತ್ತಿವೆ ಇದರ ಮಧ್ಯದಲ್ಲಿ ಕಳೆದ ತಾ ೬-೭-೮-೯-೧೦ರಲ್ಲಿ ನೆರೆದ ಕಾಂಗ್ರೆಸ ವರ್ಕಿಂಗ ಕಮಿಟಿಯು ಕಾಂಗ್ರೆಸ—ಖಿಲಾಫತ ಕಮಿಟಿ ಮುಖ್ಯ ಶಾಂತತೆಯ ತತ್ವವನ್ನು ಮಾಪಳೇಯರ ಮನಸ್ಸಿನಲ್ಲಿ ಬಿಂಬಿಸಬೇಕೆಂದು ವಿನಂತಿಮಾಡಿ, ಮಾಪಳೇಯರ ದಂಗೆಯ ವಿಷಯ ಕೆಳಗಿನಂತೆ ಠರಾವು ಪಾಸು ಮಾಡಿತು 'ಕಮಿಟಿಯು ಹತ್ತರವಿದ್ದ ಪ್ರಮಾಣವಿಲ್ಲದಿಂದ ಮಾಪಳೇಯರಿಗೆ ಅತ್ಯಾಚಾರಕ್ಕೆ ಪ್ರವೃತ್ತಮಾಡಿದವರು ಅಧಿಕಾರಿಗಳೇ ಸರಕಾರದ ಹಕೀಕತು ಪಕ್ಷಪಾತದ್ದು ಹಾಗು ಅತಿಶಯೋಕ್ತಿಯದು. ಶಾಂತತೆ ಹಾಗು ಸುವ್ಯವಸ್ಥೆಯ ಹೆಸರಿನಲ್ಲಿ ಅಧಿಕಾರಿಗಳು ಮಾಡಿದ ಪ್ರಾಣನಾಶವು ಕಡಿಮೆಯೆಂದು ತೋರಿಸಲ್ಪಟ್ಟಿದೆ ಮಾಪಳೇಯರ ಧರ್ಮಾಂತರದ ಅತ್ಯಾಚಾರವು ಕಮಿಟಿಗೆ ಖೇದಕರವಾಗುತ್ತದೆ ಆದರೆ ಪರಪ್ರೇರಣೆಯಿಂದ ಪ್ರಸಿದ್ಧವಾದ ಹಕೀಕತುಗಳಮೇಲೆ ಜನರು ಎಂದೂ ವಿಶ್ವಾಸವಿಡಬಾರದು ಕಮಿಟಿಯ ಹತ್ತರ ಬಂದ ರಿಪೋರ್ಟನಲ್ಲಿ ಬರೇ ಮೂರೇ ಧರ್ಮಾಂತರದ ಸಂಗತಿಗಳು ಕಂಡು ಬರುತ್ತಿವೆ. ಖಿಲಾಫತ ಹಾಗು ಕಾಂಗ್ರೆಸ ಚಳವಳಿಗಳು ಪ್ರವೇಶವಾಗದ ಪ್ರದೇಶದಲ್ಲಿ ದಂಗೆಯಾಗಿದೆ ಮಾಪಳೇಯರ ಬೇಘಾಮ ವೃತ್ತಿಯನ್ನು ಅಂಕೆಯಲ್ಲಿಡಲು ಕಾಂಗ್ರೆಸ ಖಿಲಾಫತ ಚಳವಳಿಯ ಪುರಸ್ಕರ್ತರು ಪರಮಾವಧಿ ಯತ್ನಮಾಡಿರುವರು''

ಮದ್ರಾಸಿನ ವಿಖ್ಯಾತ ಮಿ। ಯಾಕೂಬ ಹಸನ ಸಾಹೇಬರು ಹಿಂದೂ ಜನರಿಗೆ ಧರ್ಮಾಂತರ ಮಾಡಿದಬಗ್ಗೆ ಪಶ್ಚಾತ್ತಾಪವನ್ನು ಪ್ರಕಟಿಸಿ, ಜುಲಮಿನಿಂದ ಧರ್ಮಾಂತರ ಮಾಡಿದರೆ, ಕುರಾನಿನೊಳಗಿನ ಆಜ್ಞೆಯಂತೆ, ಅವರು ಎಂದೂ ಇಸ್ಲಾಮಧರ್ಮೀಯರು ಆಗಲಾರರೆಂದು ಪ್ರಕಟಿಸಿರುವರು. ಮಾಪಳೇಯರ ದಂಗೆಯ ಸುದ್ದಿಗಳು ಪಕ್ಷಪಾತದವು ಎನ್ನಲಿಕ್ಕೆ ಇನ್ನೊಂದು ಪ್ರಮಾಣವಿದೆ ಮೊನ್ನೆ ಲೆಜಿಸ್ಲೇಟಿವ ಕೌನ್ಸಿಲಿನಲ್ಲಿ ಭಾಷಣಮಾಡುವಾಗ ಸರ ವಿಲಿಯಮ ವಿನ್ಸೆಂಟರವರು ಎಸೋಸಿಯೆಟೆಡ ಪ್ರೆಸ (ಬಾತ್ಮಿ ಪುರೈಸುವ ಕಂಪನಿ) ದವರಿಗೆ ಎಲ್ಲ ಬಾತ್ಮಿಗಳನ್ನು ಪುರೈಸುವಾಗ ಸರಕಾರಿ ಅಧಿಕಾರಿಗಳ ಹತ್ತರ ಸಹಾನುಭೂತಿಮಾಡಿದಬಗ್ಗೆ ಅಭಿಮಾನ ಎನಿಸಿದರು ಆದ್ದರಿಂದ ಮಾಪಳೇಯರ ದಂಗೆಯ ವಿಶ್ವಾಸ ಯ ಸುದ್ದಿಯು ಪ್ರಜೆಗಳ ಪ್ರಮಾಣಗಳು ಹೋಗಿ ಪ್ರಕಾಶಿಸಮಾಡಿದ ಹೊರತು ಬೇರೆ ಮಾರ್ಗವಿಲ್ಲ ಮಹಾತ್ಮಾ ಗಾಂಧಿಯವರು ಮಲಬಾರಕ್ಕೆ ಹೋಗುವವರಿದ್ದರು. ಅವರೆ ಅಲ್ಲಿ ಹೋಗಬಾರದೆಂದ ಮದ್ರಾಸ ಸರಕಾರದವರು ಮಹಾತ್ಮರಿಗೆ ತಿಳಿಸಿರುವರ ಸತ್ಯವು ಬೈಲಿಗೆಬರುವದೆಂದು ಮದ್ರಾಸ ಸರಕಾರವು ಬೆದರಿದರೇನು?

ಪಡವೆಯೊಳಗಿನ ಸಭೆ.

ಅಸಹಕಾರಿತೆಯ ತತ್ವವನ್ನು ಸ್ವೀಕರಿಸಿದ ಪಾಂಡಸ್ಥನ ಪ್ರಯಾಣಗಳು.

(ಲೇಖಾಂಕ ೧)

ನಾನು ನನ್ನ ಸಂಚರಣೆಯಲ್ಲಿ ಪೂರ್ವ ಕಾನಡಾ ಜಿಲ್ಲೆಯ ಹೇರೂರ ತಾಲೂಕಿಗೆ ಮುಕ್ಕಾಂ ಮಾಡಿದೆನು. ಅಲ್ಲಿ ಪಡವೆಯೊಳಗೆ ಒಂದು ಸಭೆ ನೆರದಿದ್ದಿತು. ಆ ಸಭೆಯಲ್ಲಿ ಕೇವಲ ಪುಡಾರಿಗಳೆಂದು ಹೇಳಿಕೊಳ್ಳುವ ಗೃಹಸ್ಥರು ಇದ್ದರು. ಅವರು ಯಾರೆಂದರೆ— (೧) ದಿ ಬಾ ಪರ್ವತ ರಾವ, (೨) ರಾ ಬಾ ಕೆ [illegible] (೩) ಖಾ ಖಾ [illegible] (೪) [illegible] (೫) [illegible] (೬) ವಕೀಲ ಸಾಹೇಬ [illegible] ಸ ಅಧಿಕ್ಷಾರಿಗಳು [illegible] ಸುವ [illegible] ಎಷ್ಟೋ ಜನರು ಹಾಜರಿದ್ದರು. [illegible] ಹೋಗಲಿಕ್ಕೆ [illegible] ಕಾರಣವಿಲ್ಲ. [illegible] ಸಭೆಯಲ್ಲಿ ನನಗೆ ಪ್ರವೇಶ ಸಿಕ್ಕಿದ್ದು ನನ್ನ ಸ್ನೇಹಿತರು. (ಸಭಿಕರ ದುರ್ದೈವ) [illegible] ದಿ ಬಾ ಕನ್ನಡಕರಾದ ಇವರ [illegible] ರವರಿಗೆ ಹಸ್ತಾಂದೋಲನವನ್ನು [illegible] ನಡೆದ ಸಂಭಾಷಣವು ಕೆಳಗಿನಂತೆ ಜರಗಿ [illegible]

ದಿ. ಬಾ — ಖಾ ಬಾ ರಾವು [illegible] ನನಗೆ ಬಹಳೇ ಆನಂದವಾಗುತ್ತದೆ

ಖಾ. ಸಾ — ನಾನು ಖಾ ಸಾ ಮಾತ್ರ [illegible] ಖಾ ಬಾ ಇಲ್ಲ. ಆಂದ ಸ ದೈವವು ಇನ್ನು ನನಗೆ [illegible] ವಾಗಲಿಲ್ಲ

ದಿ ಬಾ — ಖಾ ಸಾ ಪಡಕೊಂಡವರು [illegible] ಆಗಲಿಕ್ಕೆ ಯಾಕೆ ತಡ ?

ಖಾ ಸಾ — [illegible] ಇಲ್ಲದೆ ಇದ್ದರೆ ನಾನ [illegible] ಆಗುತ್ತಿದ್ದಿಲ್ಲ

ಕಲಹಕಾರಿ — [illegible] ನ ಸಭೆಗೆ ಹಾಜರಿದ್ದವರ ಮನೋರಥಗಳು [illegible] ಸ್ಪರ್ಶ [illegible] ದೋರಣ ಕಾಣುತ್ತದೆ

ಇಷ್ಟಾದ ನಂತರ ವಕೀಲ ಸಾಹೇಬರು ಅಧ್ಯಕ್ಷರ [illegible] ಪ್ರಸ್ತಾವನೆಯ ಭಾಷಣವನ್ನು ಮಾಡಿದರು. ಇವತ್ತಿನ ದಿವಸವು ನಮ್ಮ ಶುಭೋದಯ, ನಮ್ಮ [illegible] ವಿವ. ಇವತ್ತಿನ ಸಭೆಗೆ ಎಲ್ಲರಲ್ಲಿ [illegible] ನಡೆದ ದಿ ಬಾ ಪರ್ವತರಾವ ಇವರು ಅಧ್ಯಕ್ಷ ಸ್ಥಾನವನ್ನು ಮಂಡಿಸಬೇಕೆಂದು ನಾನು ಸೂಚಿಸುವೆನು. ಖಾ ಸಾ ರು ಇದಕ್ಕೆ ಅನುಮೋದನವನ್ನು ಕೊಟ್ಟರು.

ದಿ ಬಾ ರವರು ಅಗ್ರಾಸನವನ್ನು ಸ್ವೀಕರಿಸಿ, ಕಿಸೆಯಲ್ಲಿ ಕೈಹಾಕಿ, ಈಗ ೧೧॥ ಘಂಟೆ ರಾತ್ರಿ [illegible] ಹೆಚ್ಚು ಕಳೆಯುವದೇನು ಕಾರಣವಿಲ್ಲ. ಮುಖ್ಯ ಠರಾವುಗಳ [illegible] ತಂದಿರಲಿಕ್ಕೆ, ಇಷ್ಟಾದಕೂಡಲೇ, ಕಲಹಕಾರಿಗಳು ಠರಾವಿನ ಮಸೂದೆಯನ್ನು ತೆಗೆದು. ದಿ ಬಾ ರವರ ಕಡೆಗೆ ಕೊಟ್ಟರು. ದಿ ಬಾ ರವರು [illegible] ಹಚ್ಚಿಕೊಂಡವರಾದಾಗ್ಯೂ, ಓದಲಿಕ್ಕೆ ಬರಲಿಲ್ಲಾದ್ದರಿಂದ ಏದರ ಠರಾವುಗಳ ಮಸೂದೆಯನ್ನು ಓದಲಿಕ್ಕೆ ಕೋಶಾಂಬರ [illegible] ರವರ ಕಡೆಗೆ ಕೊಟ್ಟರು. ಕೋಶಾಂಬರ [illegible] ಠರಾವಿನ ಮಸೂದೆಯ ಕಾಗದವನ್ನು ಎರಡು ಸಲ ನೋಡಿ, ವಕೀಲರ ಕಡೆಗೆ ಕೊಟ್ಟರು. ಸದರಿ ವಕೀಲರು ಠರಾವುಗಳನ್ನು ಓದಿದರು.

ಸಭೆಯ ಠರಾವುಗಳು

(೧) ಈ ಸಭೆಯ ಉದ್ದೇಶವು ಸರಕಾರದವರು ಸಭೆ ಕೂಡಿಸಬೇಕೆಂದು ಸೂಚಿಸಿದಾಗ್ಗೆ ಅಥವಾ ಧೋರಣ ತೋರಿಸಿದಾಗ್ಗೆ ಅಥವಾ ಸರಕಾರದ ಧೋರಣದಂತೆ ಆ ರೀತಿ ಒಂದೊಂದು ಸರಕಾರದ ವಿಶ್ವಾಸಕ್ಕೆ ಪಾತ್ರರಾಗಿರುವ ಪದವೀಧರರ ತಿಳುವಳಿಕೆಯಲ್ಲಿ ಈ ಸಭೆಯ ಕೂಡತಕ್ಕದ್ದು. (ಬೇರೆ ಯಾವದೊಂದು ಕಾರಣದಿಂದ ಕೂಡತಕ್ಕದ್ದಿಲ್ಲ.)

(೨) ಸಭೆಯಲ್ಲಿ ಮಾಲಿಕಾಸಿದ ಧೋರಣಕ್ಕೆ ವಿರೋಧ ಬರದೆ ಇದ್ದಂಥ ವಿಷಯಗಳು ಮಾತ್ರ, ಸರಕಾರದ ಧೋರಣಕ್ಕೆ ಅನುಕೂಲವಾಗಿ ಚರ್ಚಿಸಲ್ಪಡತಕ್ಕದ್ದು. (ವಿರುದ್ಧ ಧೋರಣವನ್ನು ಸ್ವೀಕರಿಸಿದವರಿಗೆ ಸಭೆಯಿಂದ ಹೊರಗೆ ಹಾಕಲಾದೀತು)

(೩) ಸಭೆಯಲ್ಲಿ ಸರಕಾರ, ವ್ಯಕ್ತಿಶಃ ಸರಕಾರಿ ಅಧಿಕಾರಿಗಳು, ಇವರಿಂದ ಆಗುವ ಆಗ ಬಹುದಾದ ತಪ್ಪುಗಳ ಬಗ್ಗೆ [illegible] ಚರ್ಚೆ ನಡೆಯಕೂಡದು. (ಅಂತ ತಪ್ಪುಗಳ ಬಗ್ಗೆ ಬೇರೆ ಕಡೆಯಲ್ಲಿ ಬಹಿರಂಗ ರೂಪವಾಗಿ ಚರ್ಚೆ ನಡೆದರೆ ಅವು ತಪ್ಪಲ್ಲೆಂತಾ ಮತ್ತು ವೇಳೆ [illegible] ಕಾಲನಾದದ ಮೇಲಿಂದ ಅವಶ್ಯವುಳ್ಳವುಗಳ ತಾ ಠರಾವು ಮಾಡಲಿಕ್ಕೆ ಈ ಸಭೆಗೆ ಅಧಿಕಾರವಿರುತ್ತದೆ. ಉದಾಹರಣೆ— ಧಾರವಾಡ ಗೋಳಿಬಾರ ವಗೈರೆ ವಗೈರೆ.)

(೪) ಈ ಸಭೆಗೆ ಸೆಕ್ರೆಟರಿಯಾಗತಕ್ಕವರು ಪದವೀಧರರು ಇರಲಿಕ್ಕೇ ಬೇಕು.

(೫) [illegible] ರಾಗತಕ್ಕವರ ಕಾಂಗ್ರೆಸದ ಬಗ್ಗೆ [illegible]

[illegible]

(೬) [illegible] ಸಭೆಯ [illegible] ಈ ಸಭೆಯು [illegible]

[illegible]

ಠರಾವು

([illegible]) ಈ ಸಭೆಯವರ ನಿಯಮಕೂಡದು.

(೭) ಗಾಂಧೀ ಟೊಪ್ಪಿಗೆ ಖಾದಿಯ ಅರಿವೆಗಳನ್ನು [illegible] ಸಭಿಕರಲ್ಲಿ ಯಾರೂ ಉಪಯೋಗಿಸ ಕೂಡದು. [illegible] ಮಾಂಚೆಸ್ಟರ ನಿರ್ಮಿತ [illegible] ಅರಿವೆಗಳನ್ನು ಉಪಯೋಗ ಮಾಡತಕ್ಕದ್ದು. ಯಾಕಂದರೆ ಅರಿವೆಗಳ ನಾಜೂಕ ಇದ್ದು ನೋಡಿ [illegible] ಇರುತ್ತವೆ

(೮) ಕಳೆದ [illegible] ನೇ [illegible] ತಿಂಗಳಲ್ಲಾದ ಕಾಂಗ್ರೆಸದ ಠರಾವುಗಳು ಕೇವಲ ಅಯೋಗ್ಯವಿದ್ದದರಿಂದ ಅವುಗಳನ್ನು ಯಾರೂ ಮನ್ನಿಸಕೂಡದು (ಈ ಕಡೆ [illegible] ಠರಾವನ್ನು ಖಾ ಸಾ ರು ಬಹಳ ವಿಜೃಂಭಣೆಯಿಂದ ಮುಂದೆ ತಂದರು. ಇಷ್ಟರಲ್ಲಿ ಅವರ ಕೈಗೆ ಒಂದು ತಂತಿ ಬಂತು. ತಂತಿಯನ್ನು ನೋಡಿದವರೇ [illegible] ಹತ್ತಿದರು. ತಂತಿಯಲ್ಲಿ " ಖಾ ಬಾ ಇತ್ತು "

(೯) ಸರಕಾರದವರು ಎಂದೂ ತಪ್ಪು ಮಾಡುವದಿಲ್ಲ ತಪ್ಪುಗಳು ಪ್ರಜೆಗಳಿಂದಲೇ ಆಗುತ್ತವೆ ಅದ್ದರಿಂದ ಯಾವದೊಂದು ಕೆಲಸಕ್ಕೆ ಸರಕಾರದ ಮೇಲೆ ಅಥವಾ ವ್ಯಕ್ತಿಶಃ ಅಧಿಕಾರಿಗಳ ಮೇಲೆ ವ್ಯಕ್ತಿಶಃ ಆರೋಪ ಹೊರಿಸುವದು ಕೇವಲ ಮೂರ್ಖತನದ ಮಾತಾಗಿರುತ್ತದೆ. (ಈ ಠರಾವು ಓದಿದ ಕೂಡಲೆ, ಕೆಲವು ಸದಸ್ಯರು " [illegible] " ನೂರು ಸಾರೆ ಹೇಳಿದ್ದು ಈ ಮಾತು, [illegible] ಉದ್ಗಾರವನ್ನು ತೆಗೆದರು.)

(೧೦) ಕಾಂಗ್ರೆಸ ಪಕ್ಷದವರು ಟಿಳಕ ಸ್ವರಾಜ್ಯ ಫಂಡಿಂತ ಒಂದು ಕೋಟಿ ರೂಪಾಯಿಗಳನ್ನು ಕೂಡಿಸಿದ್ದಾರೆ. ಮತ್ತು ರಾಷ್ಟ್ರೀಯ ಚಳವಳಿ ಬಗ್ಗೆ ಉಪಯೋಗಿಸುತ್ತಾರೆ. ಅದ್ದರಿಂದ ನಾವು ರಾಜನಿಷ್ಠ ಫಂಡು ಎಂತ ನಾಲ್ಕು ಕೋಟಿ ರೂಪಾಯಿಗಳನ್ನು ಕೂಡಿಸಿ, ರಾಷ್ಟ್ರೀಯ ಚಳವಳಿಯನ್ನು ಮುರಿಯುವ ಬಗ್ಗೆ ಸದರಿ ಫಂಡು ಉಪಯೋಗಿಸತಕ್ಕದ್ದು.

ಈ ಠರಾವುಗಳೆಲ್ಲ ಸರ್ವಾನುಮತದಿಂದ ಮಂಜೂರಾದವು. (ನಮ್ಮೊಬ್ಬನ ವಿರುದ್ಧ ಮತವನ್ನು ಕೇಳುವವರ್ಯಾರು ?)

ಎಲ್ಲ ಠರಾವುಗಳು ಮುಗಿದವೆಂತಾ ತಿಳಿದ ಕೂಡಲೆ, ಖಾ ಸಾ ರು ಅಲ್ಲಾ, ೫ ಮಿನೀಟಿನ ನಂತರದ ಖಾ ಬಾ ರವರು, ಪಿಕೆಟಿಂಗ ಪಿಕೆಟಿಂಗ ಎಂತಾ ಎರಡು ಸಾರೆ ಒದರಿದರು, ಅದನ್ನು ಕೇಳಿ, ಕಲಹಕಾರಿಯವರು ಒಂದು ಠರಾವನ್ನು ಮುಂದೆ ತಂದರು.

(೧೧) ಸರಕಾರದವರಾಗಲೀ ನಾವಾಗಲೀ ಯಾರೊಬ್ಬರಿಗೆ ದುರ್ವ್ಯಸನದಲ್ಲಿ ಬೀಳೆಂದು ಆಗ್ರಹ ಮಾಡುವದಿಲ್ಲ. ದುರ್ವ್ಯಸನದಲ್ಲಿದ್ದವರಿಗೆ ಅವರವರ ವ್ಯಸನದ ಪ್ರಕಾರ ಬೇಕಾಗುವ ಜಿನಸುಗಳನ್ನು ಒದಗಿಸಿಕೊಡುವ ಕರ್ತವ್ಯವು ಸರಕಾರದ ಮೇಲೆ ಇರುತ್ತದೆ. ಅದ್ದರಿಂದ ಈಗ ಪ್ರಚಲಿತವಿದ್ದ ಪಿಕೆಟಿಂಗ ಕೆಲಸವು ಕೇವಲ ಅನ್ಯಾಯದ್ದು [ಈ ಠರಾವ ಓದಿದ ಕೂಡಲೆ ಕಲಹಕಾರಿಯವರ ಕಿಸೆಯಲ್ಲಿ ೫೦ ರೂಪಾಯಿಯ ನೋಟು ಬಿತ್ತು.]

ಇಷ್ಟರಲ್ಲಿ ಕೆಲವು ಸದಸ್ಯರು ಬ್ರಾಹ್ಮಣೇತರ ಬ್ರಾಹ್ಮಣೇತರ ಎಂತ ಒದರಿದರು. ಆದರೆ, ಈ ಸಭೆಯಲ್ಲಿ [illegible] ಗಳ ಕಡೆ ಲಕ್ಷ ಕೊಡಲಿಕ್ಕೆ ಅವಕಾಶವಿದ್ದಿಲ್ಲ. ಸಧ್ಯದಾ [illegible] ಯ ಮೇಲೆ ಸಿಟ್ಟಿನ ಲಕ್ಷಣ [illegible] ಇಷ್ಟರಲ್ಲಿ ಒಂದು ಘಂಟೆ ರಾತ್ರಿಯಾದ್ದರಿಂದ ಸಭೆಯು ಬರಖಾಸ್ತ ಆಯಿತು.

ಠರಾವುಗಳನ್ನು ತಂತಿಯಿಂದ ತಿಳಿಸುವದಕ್ಕೆ ೧೦ ರೂಪಾಯಿ ನೋಟನ್ನು ದಿ ಬಾ ರವರು ಸೆಕ್ರೆಟರಿಯವರ ಕಡೆಗೆ ಕೊಟ್ಟರು. ರಾ ಸಾ ಕಿಂಡಿಯವರ ಸುದೈವ !

(ಇದೇ ತಿಂಗಳ ೪ನೇ ತಾರೀಖಿಗೆ ಆ ಶಹರಗಳಲ್ಲಿ ಗೊಲಾಸುರ ಸಭೆ ಕೂಡ ಪರಂತೆ ! ಅದರ ಹಕೀಕತು ಸಾದ್ಯಂತ ಕೊಡುವೆನು ನನಗೇನು ಪ್ರವೇಶ ಇಲ್ಲಾ. ಪ್ರವೇಶದ ಹದರಿಕೆಯೂ ಇಲ್ಲಾ.)

ತಮ್ಮ ಪರಿಚಯದ [illegible] ಗಾಥವೆ

ಸೆಕ್ರೆಟರಿ,

ಮುಖಬಂದಿ ಹುಕುಮು.

ನನ್ನ ಮೇಲೆ ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲಂ ೪೭ ನೇ ೧ ನೆ ಹೊನ್ನಾವರ ಅಸ [illegible] ಭಾಷಣ ಮಾಡಬಾರದಾಗಿ ಹೊನ್ನಾವರ [illegible] ಮೆಜಿಸ್ಟ್ರೇಟರು ಹುಕುಂ ಮಾಡಿದ್ದಾರೆ. ಈ ಹುಕುಂ ಕೇವಲ ಅನ್ಯಾಯದ್ದು ಇದ್ದು, ನನ್ನ ನಾಗರಿಕ ಹಕ್ಕಿಗೆ ಧಕ್ಕೆ ತರುವಂಥಾದ್ದಿರುತ್ತದ. ಮತ್ತು ಹೊನ್ನಾವರದಲ್ಲಿ ಯಾವದೇ ತರದ ಶಾಂತತಾಭಂಗ ಆಗುವ ಪರಿಸ್ಥಿತಿ ಸದ್ಯಕ್ಕಿಲ್ಲ. ಇಂಥ ಸ್ಥಿತಿಯಲ್ಲಿ ನಾನು ನನ್ನ ಮೇಲಾದ ಅನ್ಯಾಯದ ಮುಖಬಂದಿ ಹುಕುಂ [illegible] ಲಕ್ಷ [illegible] ನನಗೆ [illegible] ಮುಖಬಂದಿ ಹುಕುಂ ಮುರಿಯುವದನ್ನು [illegible]

[illegible] | **M. P. Nadkarni.**

ಧೂಳ್ಯಾಪ್ರದರ ಖಾತ್ರಿಯು

ದುರುಸ್ತಿ

[illegible] ಕಾನಡಾವೃತ್ತ ತಾ [illegible] ಪ್ರಕಟವಾದ [illegible] ಪೋಲೀಸ [illegible] ಹಿಯಾಳದ ಸಡಿಸ [illegible] ಸಹಾನುಭೂತಿಯ [illegible] ಪ್ರಕಟಿಸಿದ್ದು [illegible] ಈಗ ಈ ವಿಷಯ [illegible] ವ್ಯಕ್ತಿಗಳು [illegible] ಎಂತಾ [illegible] ರೀತಿಯಿಂದ [illegible] ನನಗೆ [illegible] ನಿವಾರಣೆ [illegible]

[illegible] ಬ್ಯಾರಿಸ್ಟರ, [illegible]]

ವಿವಿಧ ವರ್ತಮಾನ.

—ಮುಂಬಯಿಯ ಸರಾಯಿ (ಶೇಂದಿ) ಅಂಗಡಿಕಾರರು ಸಪ್ಟಂಬರ ತಿಂಗಳಾಖೇರಿನ ವರೆಗಿನ ಲೈಸನ್ಸ ಹೊಂದಿರುವವರೆಂತೆ, ಆಗಸ್ಟ ತಿಂಗಳಿನಿಂದ ಲೈಸನ್ಸು ಪುನಃ ತೆಗೆದುಕೊಳ್ಳಲಿಲ್ಲ. ಮುಂದಾ ದೇವರೇ ಭಕ್ತರ ಗೋಳಾಟ!

—ಕಟ್ಟಕಡೆಗೆ ಗ್ರೀಕರಿಗೆ ಜಯವೇ ಪ್ರಾಪ್ತವಾಯಿತೆಂದು ವಿಶ್ವಸನೀಯ ಸುದ್ದಿ ಬಂದದೆ. ಅದೇ ಸುದ್ದಿಯು ಸಂಗತ, ತುರ್ಕರು ಕಾನ್ಸ್ಟಂಟಿನೋಪಲದಲ್ಲಿ ಮಿತ್ರಸಂಘದ ಸ್ವತ್ವದ ವಿರುದ್ಧ ಬಂಡಾಯಮಾಡಿದರೆಂದೂ ಪ್ರಕಟಿಸು ಗುತ್ತದೆ. ಮಿತ್ರರಾಷ್ಟ್ರಗಳ ಸಹಾಯದಿಂದ ತುರ್ಕರನ್ನು ಬಡಿಸಬೇಕೆಂದು ಗ್ರೀಕರ ಯುಕ್ತಿಯೇನಿರು?

—ಕಳೆದ ತಾ ೩ ನೇ ದಿವಸ ಸಿಲ್ಹೆಟದ ಖಿಲಾಫತ ಕಮಿಟಿಯ ಪ್ರೆಸಿಡೆಂಟ ಹಾಜಿ ಮಾಜಿಯಿಕ ಅಲ್ಲಿ ಬೌಧರಿ, ಉಪಾಧ್ಯಕ್ಷ, ಮಹಮ್ಮದ ಅಲ್ಲಿ, ಸೆಕ್ರೆಟರಿ, ಮುರ್ತುಜಾಲ ಅಲ್ಲಿ ಅಸಿ ಸೆಕ್ರೆಟರಿ ಕಾಂಗ್ರೆಸ ಕಮಿಟಿ ಮತ್ತು ಇತರ ೭ ಖಿಲಾಫತ ಚಳವಳಿಯವರು ಅಧಿಕಾರಿಗಳ ಸ್ಪೆಶಲ ಕಾನ್ಸ್ಟೇಬಲ ಆಗುವ ಹುಕುಮನ್ನು ಪಾಲಿಸದ್ದರಿಂದ, ಅವರಿಗೆ ೫೦ ರೂಪಾಯಿ ದಂಡ ಅಥವಾ ೧॥ ತಿಂಗಳ ಸಾಧಾರಣ ಶಿಕ್ಷೆ ವಿಧಿಸಲ್ಪಟ್ಟಿತು. ಅವರು ದಂಡತೆರದೆ ಸಂತೋಷದಿಂದ ಜೈಲಿಗೆ ತೆರಳಿದರು.

—ಕಳೆದ ತಾ ೧೧ ಕ್ಕೆ ಶಾರದಾ ಪೀಠದ ಸ್ವಾಮೀ ಭಾರ್ಕರ ತೀರ್ಥ ಇವರನ್ನು ರಿಗ್ಯಾದಲ್ಲಿ ಹಿಡಿದು, ಅವರ ಸಾಮಾನುಗಳನ್ನು, ಕಾಗದಪತ್ರಗಳು ತಯಾರಿಲ್ಲದ್ದರಿಂದ, ೧೮ ಕ್ಕೆ ಇಟ್ಟರು. ಸ್ವಾಮಿಗಳು ಅಧಿಕಾರಿಗಳಿಗೆ “ಬಿಟ್ಟರೆ ಕುಸಾಪಣೆ” ನಡಸಿರಿ. ಇಲ್ಲದಿದ್ದರೆ, ನನಗೆ ಬಿಡುಗಡೆ ಮಾಡಿರಿ. ಕಾಗದ ಪತ್ರಗಳು, ತಯಾರಿಲ್ಲದಿದ್ದರೆ, ನನಗೆ ಯಾಕೆ ಹಿಡಿದಿರಿ” ಎಂದು ಕೇಳಿದರಂತೆ. ಪದವಿ ಅಧಿಕಾರಿಗಳು ತಮ್ಮ ಹಟವನ್ನೇ ನಡಿಸಿದ್ದರಿಂದ, ಸ್ವಾಮಿಗಳು ಆಹಾರವನ್ನು ಬಿಟ್ಟುಬಿಟ್ಟಿರುವರು. ಕಳೆದ ತಾ ೧೩ ನೇ ಸಾಯಂಕಾಲದಿಂದಂತು, ಸ್ವಾಮಿಗಳು ನೀರನ್ನು ಸಹ ತೊರೆದಿರುವರು. ಸ್ವಾಮಿಗಳು ಭಕ್ತ ಪುಸ್ತಕಗಳನ್ನು ಓದುತ್ತಿರುವರು.

—ಸಾಗರದಲ್ಲಿ ರಂಗರೆಜ ಜಾತಿಯ ಮುಸಲ್ಮಾನರು ತ. ಬಿಡುವನ್ನು ಖಾದಿಯಿಂದ ಅಲಂಕರಿಸಿದ್ದರು.

—ವಿದ್ಯಾಪುರದಲ್ಲಿ ಮಹಾತ್ಮಾ ಗಾಂಧಿಯವರ ಆಗಮನವಾದಾಗ, ಜನರ ತರ್ಫೆನಿಂದ ಒಂದು, ಮುನಸಿಪಾಲಟಿಯ ತರ್ಫೆನಿಂದ ಒಂದು ಹೀಗೆ ಎರಡು ಮಾನಪತ್ರಗಳು ಕೊಟ್ಟರು! ವಕೀಲರು ಸಹ ಇನ್ನೊಂದು ಮಾನಪತ್ರವನ್ನು ಕೊಟ್ಟರು!

—ಬಾರಿಸಾಲದಲ್ಲಿ ಸುಮಾರು ೧೦೦ ವಕೀಲರು ಕೋರ್ಟಿಗೆ ಹಾಜರಾಗಲಿಲ್ಲ. ಅವರ ಗೈರಹಾಜರಿಯಿಂದ ಕೋರ್ಟು ಕೆಲಸಕ್ಕೆ ತೊಂದರೆಯಾದ್ದರಿಂದ, ಇಂಥ ವರ್ತನವನ್ನು ಹ್ಯಾಕೋರ್ಟಿಗೆ ಯಾಕೆ ತಿಳಿಸಬಾರದೆಂದು ವಕೀಲರಮೇಲೆ ನೋಟೀಸು ಜಾರೀ ಮಾಡಿರುವರು! ಸಾಹಕಾರಿಮಾನಿಗಳಿಗೆ ಅವರ ಹೀನ ಸ್ಥಿತಿಯು ಅರಿವು ಹುಟ್ಟಿಸುವ ಉಪಾಯವಿದು!

—ಮಂಗಳೂರದ ಕಾಂಗ್ರೆಸ ಕಮಿಟಿಯ ಸೆಕ್ರೆಟರಿಗಳಾದ ಶ್ರೀ ಡಿ. ಕೆ. ಭಾರದ್ವಾಜ ಇವರಮೇಲೆ ಕ್ರಿ. ಪ್ರೋ. ಕೋಡ ೧೪೪ ಕಲಮಿನನ್ವಯ ಮಂಗಳೂರ ತಾಲೂಕಿನಲ್ಲಿ ಎರಡುತಿಂಗಳ ವರೆಗೆ ಸಾರ್ವಜನಿಕ ಸಭೆಗೆ ಹಾಜರಿರಬಾರದು, ಹಾಗು ಭಾಷಣ ಮಾಡಬಾರದು ಎಂದು ಹುಕುಮು ಆಗಿರುವದು.

—ಗಾಜಿಪೂರದ ಒಬ್ಬರ ಮೇಜಿಸ್ಟ್ರೇಟರಾದ ಪ್ರಸಿದ್ಧ ಶ್ರೀಯುತ ವಾಮುಕೃಷ್ಣರು ಟಿಳಕ ಸ್ವರಾಜ್ಯಫಂಡಿಗೆ ೧೫೦೦ ರೂಪಾಯಿ ಕೊಟ್ಟಿರುವಾಗ, ಸರಕಾರದ ಹತ್ತಿರ ಸಹಕಾರಿತೆಮಾಡುವ ಗುಲಾಮಸಭೆಯ (ಅಮನಸಭೆಯ) ಫಂಡಿಗೆ ಬರೇ ರೂಪಾಯಿ ೧೭೦ ಕೊಟ್ಟರು. ಈ ಸಂಕ್ತಿ ಕ್ರಿ ಚಂಡವಾಡಿ, ಸರಕಾರೀ ವಿರೋಧಕರಿಗೆ ಸಹಾಯಮಾಡಿದ ಅಪರಾಧಕ್ಕಾಗಿ ಅಲ್ಲಿಯ ಅಧಿಕಾರಿಗಳು ಶ್ರೀ ವಾ ಮುಕೃಷ್ಣನ ಬಂದೂಕ ಲೈಸನ್ಸನ್ನು ರದ್ದುಪಡಿಸಿರುವರು. ಶ್ರೀಯುತರು ತಮ್ಮ ಒಸರು ಮೇಜಿಸ್ಟ್ರೇಟ ಹುದ್ದೆಯ ರಾಜಿನಾಮೆ ಕೊಡುವವರಿದ್ದಾರಂತೆ! ಶಾಬಾಸ!

—ಟಿಳಕ ಸ್ವರಾಜ್ಯಫಂಡಿಗೆ ೩ ಲಕ್ಷ ರೂಪಾಯಿ ಕೊಟ್ಟ ವಿಖ್ಯಾತ ಮಿ॥ ವಿ. ಬಿ ಗೋಪ್ರೇಜರವರ ಕ್ರಿಯೋರಿಗಳನ್ನು ಅಧಿಕಾರಿಗಳು ಖರೀದಿ ಮಾಡಬಾರದೆಂದು ಸರಕಾರೀ ಗುಪ್ತ ಸರಕ್ಯೂಲರ ಹೊರಟಿದೆಯಂತೆ! ಇದಕ್ಕೆ ಉತ್ತರದಾದರೋ ಏನೋ, ಮಿ॥ ಗೋಪ್ರೇಜರವರು ಮುಂಬಯಿಯ ಬಜಾರದಲ್ಲಿ ಮಗ್ಗ ಕೈಮಾಟಗಳನ್ನು ಕಲಿಸುವ ಪ್ರಯತ್ನ ಮಾಡುವದಕ್ಕಾಗಿ ಜಾಗವನ್ನು ಬಾಡಿಗೆಯಿಲ್ಲದೆ ಕೊಟ್ಟಿರುವರು!

—ಪಂಜಾಬದ ಸುಪ್ರಸಿದ್ಧ ದೇಶಭಕ್ತ ಸ್ವಮ್ಮಿದ್ದೀನ ಕಿಚಲೂರವರಿಗೆ ಹಿಡಿದರು ಎಂಬ ಸುದ್ದಿ ಬಂದು. ದೊಡ್ಡ ಸಭೆಸೇರಿಯಿಸಿ, ಪುಢಾರಿಗಳು ಜನರಿಗೆ ಅತ್ಯಾಚಾರಗಳಿಗೆ ಪ್ರತ್ಯುತ್ತರವಾಗದೆ, ಅಸಹಕಾರಿತೆಯ ಕಾರ್ಯಕ್ರಮವನ್ನು ಸಮಾಧಾನದಿಂದ ಆಚರಿಸಬೇಕೆಂದು ಉಪದೇಶಿಸಿದರು

—ಪರದೇಶೀ ಅರಿವೆಯ ಬಹಿಷ್ಕಾರದಿಂದ ಮುಂಬಯಿಯ ಬಹಳ ಅಂಗಡಿಕಾರರು ಸೋತ ಝುಡಿಸುತ್ತಿರುವರು. ಪ್ಯಾಗಾದರೂ ಮಾಡಿ, ಇದ್ದ ಅರಿವೆಯನ್ನು ಗಿರಾಕಿಗಳ ಕೊರಳಿಗೆ ಕಟ್ಟುವದರ ಸಾಕಾಗಿದೆ. ವ್ಯಾಪಾರಿಗಳು ದೇಶಾಭಿಮಾನದ ಕೃಪೆಯಿಂದ ಪ್ರೈರು ಚಲೋ ಬೆಳೆಯುವ ಸಂಭವವಿದ್ದದರಿಂದ, ತನ್ನ ಅರಿವೆಯು ನಿಖಾಲೆಯಾಗಿ, ಕಾಪ್ತ ಮುಕ್ತರಾಗುವವರದು ಬಾವಿಸ ದಿವಗಳೆಯುತ್ತಾರೆ.

—ಮುಂಬಯಿ ಕ್ರಾನಿಕಲಿನ ಸಂಪಾದಕರಾದ ಮಿ॥ ಮಾರ್ಮಾಡ್ಯೂಕ ಪಿಕ್ಥಾಲ ಸಾಹೇಬರು ರಜೆಕೊಂಡು ಪ್ರಸಃ ವಿಲಾಯತಿಗೆ ಪ್ರಯಾಣಮಾಡ ಹತ್ತಿರ ಬಹಳಮಾಡಿ, ಪುನಃ ಹಿಂದುಸ್ಥಾನಕ್ಕೆ ಬರಲಿಕ್ಕಿಲ್ಲೆಂದು ಹೇಳುತ್ತಾರೆ. ಮಿ। ಪಿಕ್ಥಾಲ ಸಾಹೇಬರು ಖಿಲಾಫತಿನಬಗ್ಗೆ ವಿಶ್ವಸನೀಯ ಮಾಹಿತಿಯನ್ನು ಪ್ರಕಟಿಸಿ. ಸರ್ವರ ಇಂಗ್ಲೀ ಇಂಡಿಯನ ವೃತ್ತಪತ್ರಕಾರರ ಮುಂದಿನ ಜುಲುಮಿನ ಕೋಲಾಹಲವನ್ನು ತೀರ ಸುಳ್ಳೆಂದು ಸಾಧಾರ ತೋರಿಸಿರುವರು. ಖಿಲಾಫತು ಚಳವಳಿಗೆ ಅವರು ಮಾಡಿದ ಸೇವೆಯನ್ನು ಯಾರೂ ಮರೆಯಲಿಕ್ಕಿಲ್ಲ. ಇವರಿಗೆ ಜಬ್ಬರ ಸಭಾರವು ಹೊಡೆಯಲು ಕಾಕ್ಸ್ಟನ ಸಾಯಂಕಾಲಕ್ಕೆ ಬಾಂಬೆ ಜಂಗೀ ಸಭೆ ನೆರೆಯುವದಿತ್ತು. ಆದರೆ, ಮೊಗಲಾಸಾ ಶಿಕ್ಷಿತ ಅಲ್ಲಿಯವರಿಗೆ ಮೊದಲನೇ ದಿವಸ ಅಟಕ ಮಾಡಿದ್ದರಿಂದ, ಸಭೆ ನೆರೆಯಲಿಲ್ಲ

—ಆಂದ್ರಪ್ರಾಂತದಲ್ಲಿ ನೇಯುವ ಫೀ (ಗ್ರೇಝಿಂಗ ಟೆಕ್ಸ) ಸಂಬಂಧದ ಸತ್ಯಾಗ್ರಹವನ್ನು ಕೈಕೊಳ್ಳಬೇಕೆಂಬ ಹ್ಯಾಗ ಎಂಬ ಸಂಗತಿಯನ್ನು ಮಹಾತ್ಮಾ ಗಾಂಧಿಯವರು ಅಲ್ಲಿ ಚರ್ಚಿಸಿದಾಗ, ಕರಬ್ಬತಿಯನ್ನು ಲಕ್ಷಿಸಬೇಕೆಂದ ವಾಕ್ಯಾದೇಶಗಳ ಕಾಂಗ್ರೆಸ ಕಮಿಟಿಯು ನಿರ್ಣಯಿಸಿರುವದು. ಒಟ್ಟಿಗೆ ಸತ್ಯಾಗ್ರಹದ ಜಾಲಿಮಹಾತ್ಮೆಯು ಆಮಲಿನಲ್ಲಿ ಬರುತ್ತದೆಂಬಂತೆ ಕಾಣುತ್ತದೆ

Notice to Investors.

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD, SILVER etc. Usual commission is charged. *Please apply to Messrs:*

Gunshekhar & Co.
IRANI BUILDINGS,
Tardeo Road.
BOMBAY. 7.

Telegrams- Vaijayanti.

ಸವಲತು.

ಬಗ್ಲೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕೇಕಡಾ ರೂ. ೧೨-೮-೦ ಇಟ್ಟಿದೆ. ಆದರೆ, ಇದೇ ಸಪ್ಟಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧-೦-೦ ರ ಮತ್ತು ಇದೇ ಬರುವ ಅಕ್ಟೋಬರ ತಾ. ೧೫ ರೊಳಗೆ ಮುಂಗಡ ಕೊಡುವವರಿಗೆ ೧೧-೮-೦ ರ ಸವಲತಿ ದರ ಇಟ್ಟಿದೆ ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು.

ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ.

ಸ್ವದೇಶೀ ಕಾರಖಾನೆಗೆ ಉತ್ತೇಜನ
ವಿದೇಶೀ ಮಾಲಿಗೆ ಬಹಿಷ್ಕಾರ.

ದಿ, ಸ್ವದೇಶಿ ಇಂಕ ಸ್ಟೋರ್ಸ.

ಕಾರವಾರ ಕೆನರಾ.

ಭಾರತೀಯ ಶಾಯಿ ಗುಳಿಗೆಗಳು.

ವ್ಯಾಪಾರಸ್ಥರಿಂದಲೂ, ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದದ್ದು

ನಂ. ೧. ಉತ್ತಮ ನೀಲಿಕಪ್ಪು ೧೪೪ ಗುಳಿಗೆ ಗ್ರೋಸ ೧ ಕ್ಕೆ ರೂ. ೧-೪-೦. ೬ ಗ್ರೋಸಿಗೆ ರೂ. ೫-೮-೦. ೧೨ ಗ್ರೋಸಿಗೆ ರೂ. ೧೦-೦-೦. ನಂ. ೨. ಗ್ರೋಸ ೧ ಕ್ಕೆ ೦-೧೫-೦. ೬ ಗ್ರೋಸಿಗೆ ರೂ. ೫-೦-೦. ೧೨ ಗ್ರೋಸಿಗೆ ರೂ. ೮-೦-೦ ಕೆಂಪು, ಹಸರು ಗ್ರೋಸ ೧ ಕ್ಕೆ ರೂ. ೧-೦-೦. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನು. ೧ ಗ್ರೋಸಿಗಿಂತ ಕಡಿಮೆ ಕಳಿಸುವದಿಲ್ಲ. ಇಲ್ಲಿ ದೇಶೀ ಸಾಬೂನು ತಯಾರಾಗುವದು.

ಮ. ಗಾಂಧಿಯವರ ಅಪ್ಪಣೆ.
ವಿಲಾಯತಿ ಮಾಲಿಗೆ ಬಹಿಷ್ಕಾರ.

ನಮ್ಮಲ್ಲಿ ನೂಲುತೆಗೆಯುವ ರಾಹಾಟೆ(ಚರಕ), ಶುದ್ಧ ಖಾದಿ ರಾಷ್ಟ್ರಗೀತೆ, ಮಹಾತ್ಮಾ ಗಾಂಧಿಯವರ ಫೋಟೋಗಳು, ಬೇರೆ ತರದ ಸ್ವದೇಶೀ ವಸ್ತುಗಳು ವಾಜವಿ ದರದಿಂದ ಸಿಗುವದು.

ಕೈಯಿಂದ ನೂಲುತೆಗೆದು ತಯಾರಮಾಡಿದ ಬೇರೆದೇತರೆ ನಮೂನೆಯ ಖಾದಿಯು ಸದ್ಯದಲ್ಲಿ ಬರುವದುಂಟು ವ್ಯಾಪಾರಸ್ಥರಿಗೆ ಭರಪೂರ ಕಮೀಶನ ಕೊಡುವೆವು.

ಕುಡ್ಲ ವಾಸುದೇವ ಪಾಂಡುರಂಗ
ಶ್ಯಾನಭಾಗ, ಮತ್ತು ಬ್ರದರ್ಸ.

ಹೊನ್ನಾವರ, ಜಿ. ಕಾರವಾರ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ. ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೮-೧೯೧೮ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಮತ್ತು ಸನ್ ೧೯೧೮ ನೇ ಇಸ್ವಿಯ ಆಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಮನೆಯಲ್ಲಿ ಒಂದು ಬಾಟ್ಲಿ ಇಟ್ಟು ಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರ ಮಾಡುತ್ತಿರಬೇಕು. ಈ ಆರೋಗ್ಯಬಿಂದು ಇದೇ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ ಪ್ರಯುಕ್ತ ಎಷ್ಟೋ, ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ ರೋಗದ ಪರೀಕ್ಷೆಯ ಸಲುವಾಗಿ ಬೇರೆ ಶಾಸ್ತ್ರರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ದುರ್ಲಕ್ಷ ಮಾಡದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗ ಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು

ಕ್ಷಯರೋಗ, ಹಳದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಹಿರಾಮಾರಿ (ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕಪ್ರಕಾರದಜ್ವರ, ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಪೀನಸಿ, ಮೊದಲಾದ ರೋಗವು, ಕಣ್ಣಿನೊಳಗೆ ಹೂವು ಬೀಳೋದು, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ, ಅಶಕ್ತಿ, ಇದ್ದ ಲಿಸ, ಅಜೀರ್ಣ, ಹೊಟ್ಟೆಶೂಲಿ, ಮೈಶೂಲಿ, ಜಠರಶೂಲಿ, ನಡಶೂಲಿ, ಪಾರ್ಶ್ವಶೂಲಿ, ರೇಕ್ಮಜಡ್ಡು, ಗುದ್ದದ್ವಾರದ ಬೇನೆ, ಹುರ ಹುಕಜ್ಜಿ, ಗಜಕರ್ಣ, ಇಸಬು, ತದ್ದು, ಶಾಯವ್ಯರ್ಣ, ನಾರಹುಣ್ಣು, ಸ್ತ್ರೀಯರ ಮುಟ್ಟಿಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಹುಟ್ಟಿದೋಷ, ಹೊಟ್ಟೆ ದೊಡ್ಡದಾಗೋದು, ಮೈ ಹೊರಬೀಳೋದು, ಸಣ್ಣ ಕೂಸುಗಳಿಗೆ ವೈದ್ಯರಿಗೂ ಇಹ ತಿಳಿಯದೆ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ ಒಂದು ಕಾಲುತ್ತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ ನಮೂನ ಅರ್ಧಕ್ಕೆ ಐದು ಆಣೆ ಹೂಕವ ಬಾಟ್ಲಿ ಒಂದಕ್ಕೆ ಎಂಟು ಆಣೆ. ವಿ. ಪಿ. ಖರ್ಚು ಬೇರೆ. ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದರು ಬಾಟ್ಲಿಯವರಿಗೆ ಕಮಿಶನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರ ಒಂದು ಬಾಟ್ಲಿ ಕವಿ ಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಮಾನಪತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು. ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್. ಎಂ. ಶಾ[illegible], ಸಂಪಾದಕ ಅರ್ಕಶಫಾ,
ಹೆಡ್ ಆಫೀಸು ಶಹಾಪೂರ, ಬೆಳಗಾಂವ.

ಖಾತ್ರಿಯಿಂದ ಗುಣಪಡಿಸುವ
ಔಷಧಗಳು.

1 [illegible] ಲೇಪ.— [illegible] ಲೇಪದಿಂದ [illegible] ... 40 ಸಲ ಸೇವಿಸುವ ಲೇಪ ಡಬ್ಬಿ 1ಕ್ಕೆ 1-12-0 3 ಡಬ್ಬಿಗಳಿಗೆ 4-12-0

2 [illegible] — ([illegible] — ಇನ್‌ಫ್ಲೂಯಂಜಾ, ನಿಮೋನಿಯಾ, ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ [illegible] ಬಾಟ್ಲಿ 1ಕ್ಕೆ 0-8-0

3 [illegible] ಗುಟಿಕ — [illegible] ಬಾಟ್ಲಿ 1ಕ್ಕೆ 0-10-0

4. [illegible] ಗುಟಿಕ . ಇದು [illegible] ಔಷಧಿ. [illegible] ಬಾಟ್ಲಿ 1ಕ್ಕೆ 0-10-0

5 [illegible] — [illegible] ಬಾಟ್ಲಿ 1ಕ್ಕೆ 0-12-0

ಎಮ್. ಗೋಪಾಲಯ್ಯಾ ಎಂಡ ಸನ್ಸ್
ನೇಟಿವ್ ಡ್ರಗ್ಗಿಸ್ಟ್ ರಬಕವಿ.
ಮಂಗಳೂರ [illegible]

ಮೋಟಾರ.

ಹಾವೇರಿಯಿಂದ— ಸಿರಸಿಗೆ ಮತ್ತು ಸಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡಸುವ ವ್ಯವಸ್ಥೆ ಇಟ್ಟಿದೆ ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಸಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. ಹಾವೇರಿಯಲ್ಲಿ ಅಥವಾ ಸಿರಸಿಯಲ್ಲಿ ಆರಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೇಟುಗಳು ಸಿರಸಿಯಲ್ಲಿ ಶೇಷಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಧಾಕಪ್ಪಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ಮಾಹಿತಿ ಕೆಳಗಿನ ಪತ್ತೆಗೆ ಮುಕ್ತಾ ಶಿಕ್ಕೆ ತಿಳಕೊಳ್ಳಬಹುದು.

ಪುರುಷೋತ್ತಮ ಲಕ್ಷ್ಮಣಯ್ಯ ಕ್ಯಾನೆಭಾಗ.

ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक

वज्रांग बिंदु.

हें औषध दुर्गम अशा पहाडांतील अनेक वनस्पतींच्या रसांत पौष्टिक औषधीफळांचा रसार्क मिश्र करून, खालीं दिलेल्या रोगांवर उपयुक्त अशीं भस्में घालून, हा वज्रांग बिंदु फार प्राचीनकाळच्या वैदिक शास्त्रपद्धतीनें तयार केला आहे. हा बिंदु सेवन केल्यानें नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहींसा करून, वीर्य वृद्धि व रक्तशुद्धि होते. कितीहि जुनाट कटकी असो (एक सप्तकांतच) नाश पावत आणि उपदंशा संबंधीं मुरलेले विकार नाहींसे होऊन हातपाय, डोळे यांचा दाह व धातुविघातक सर्व विकार नष्ट होऊन, शरीर वज्राप्रमाणें बनतें. हा बिंदु खाल्ल्यानें उतारवयाच्या मनुष्याचा कामविकार सुद्धां प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोगांचा समूळ नाश होतो. हें औषध स्त्रियांनी सेवन केल्यास, त्यांचे जननेंद्रियांत कोणत्याहि प्रकारचे विकार न राहतां, त्या गर्भधारणास योग्य होतात. ह्याच्या सेवनानें दिवसांतून तीन वेळा जवळें तरी, भूक चांगली लागत जाऊन शौचास साफ होतें याचा अनुभव औषध घेतल्याच्या पहिल्या दिवशीं येतो. तरी वरील रोगग्रस्त तरुण आणि वृद्ध, स्त्रिया व पुरुष यांनीं या वज्रांग बिंदूचें सेवन करून, यांतील खरी मजा पहावी. फार दिवसांचा रोग असल्यास, पूर्ण गुणास तीन बाटल्या औषध घेतलें पाहिजे नवीन रोगास एक बाटली औषध सेवन केलें असतां, गुण येईल. एका बाटलींमध्यें १० तोळे औषध असतें. त्या एका बाटलीची किंमत १। रुपया. तीन बाटल्यांची किंमत ३। रुपये एक डझन (१२) बाटल्यांची किंमत १० रुपये. याशिवाय टपाल, व प्याकिंग खर्च निराळा पडेल

म्यानेजर,
कें. एम. हनुमान प्रासादिक कंपनी.
जिल्हा बेळगांव, मु. पो. निपाणी

ಕಾನಡಾವೃತ್ತವು

ಪ್ರತಿ ಎಂಟು ದಿವಸಕ್ಕೊಮ್ಮೆ

ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ, ರೂ ೩-೦-೦ರ ಮನಿಯಾರ್ಡರ ಮಾತ್ರ. ಅಂದರೆ, ೧ ವರ್ಷದತನಕ ನಿಮ್ಮಲ್ಲಿಗೆ ಬರುವದು

ಪತ್ತೆ— ಕಾನಡಾವೃತ್ತ ಆಫೀಸ, ಕುಮಟಾ

Printed and published by Krishnarao Keshav Shenvi at his Star of Kanara Press, Kumta.

ನನ್ನ ಕಚ್ಚೆ

ಮಹಾತ್ಮರ ಸ್ವದೇಶಿಯ ತೀವ್ರತೆ.

ನನ್ನ ಜೀವನ ಕ್ರಮದಲ್ಲಿ ಏರ್ಪಡಿಸಿದ್ದ ಬದಲುಗಳೆಲ್ಲ ಮಹತ್ವದ ಪ್ರಸಂಗಗಳನ್ನು ಅನುಲಕ್ಷಿಸಿ, ನಾನು ಕೈಕೊಂಡಿದ್ದೇನೆ; ಮತ್ತು ಅವೆಲ್ಲ ವಿಚಾರಪೂರ್ವಕ ಕೈಕೊಳ್ಳಲ್ಪಟ್ಟದ್ದರಿಂದ, ನನಗೆ ಮುಂದೆ ಆಬಗ್ಗೆ ಪಶ್ಚಾತ್ತಾಪ ಮಾಡುವ ಪ್ರಸಂಗವು ಬಂದಿಲ್ಲ; ನಾನು ಆ ಫೇರುಫಾರುಗಳನ್ನು ಮಾಡಿದ ಹೊರ್ತು ಗತ್ಯಂತರವಿಲ್ಲೆಂದು ತೋರಿದ ಮೇಲೆ, ಅವುಗಳನ್ನು ಏರ್ಪಡಿಸುವೆನು. ಇಂಥ ಫೇರಫಾರನ್ನು ನಾನು ನನ್ನ ಪೋಷಾಖಿನಲ್ಲಿ ಮಧುರೆಯಲ್ಲಿ ಮಾಡಿರುವೆನು.

ಈ ಬಗ್ಗೆ ನನಗೆ ಮೊದಲು ಬಾರಿಸಾಲದಲ್ಲಿ ವಿಚಾರ ಬಂತು. ಖುಲನಾ ಪ್ರಾಂತದಲ್ಲಿ ಬರಗಾಲ ಪೀಡಿತರು ಉಪವಾಸ ಬಿದ್ದು, ಬೆತ್ತಲೆ ಸಾಯುವಾಗ, ನಾನು ಅಂವೆಗಳ ಹೋಳಿ ಮಾಡುತ್ತೇನೆಂದು ಕೆಲವರು ನನಗೆ ಬಹಳವಾಗಿ ಹೀಯಾಳಿಸಿದರು. ಆಗ ‹ ನಾನು ಬರೇ ಕಚ್ಚೆಯನ್ನುಟ್ಟು (ಬೈರಾಗಿಗಳು ಮಾಡುವಂತೆ) ನನ್ನ ಕೈರುಮಾಲನ್ನು ದೋತರವನ್ನೂ ಡಾ|ರಾಯರ ಹತ್ತರ ಕಳಿಸಬೇಕೆಂದು’ ನನಗೆ ಬಹಳವಾಗಿ ತೋರಿತು. ಆದರೆ ಈ ವಿಚಾರವನ್ನು ಮನಸ್ಸಿನಲ್ಲೇ ಇಟ್ಟು ಕೊಂಡೆನು. ಅದರಲ್ಲಿ ನನ್ನ ಆಕಾಂಕ್ಷೆಯು ಸಹ ಇತ್ತು. ಈ ಹೀಯಾಳಿಕೆಯಲ್ಲಿ ಅಧ್ಯಾಂತವೇನಿಲ್ಲೆಂಬದು ನನಗೆ ಗೊತ್ತಿತ್ತು. ಖುಲ್ನಾ ಪ್ರಾಂತಕ್ಕೆ ಸಹಾಯವು ಹೋಗುತ್ತಿತ್ತು; ಇದಲ್ಲದೆ, ಬಹು ಬಂಗಾಲೀ ಜವಾನದಾರರನು ಬರಗಾಲ ನಿವಾರಣ ಮಾಡಲಿಕ್ಕೆ ಸಮರ್ಥನಿದ್ದನು. ಆದ್ದರಿಂದ ನಾನು ಏನೂ ಮಾಡುವ ಆವಶ್ಯಕತೆ ಇದ್ದಿಲ್ಲ.

ಎರಡನೇ ಪ್ರಸಂಗವು, ನನ್ನ ಕಣ್ಮುಂದೆ ಮಹಮ್ಮದ ಅಲ್ಲಿಯವರಿಗೆ ಹಿಡಿದಾಗ ಬಂತು. ಅವರಿಗೆ ಹಿಡಿದ ಮೇಲೆ ನಾನು ಕೋಕನಾಡ ಸಭೆಗೆ ಹೋದೆನು. ಆಗಲೇ, ಕೈರುಮಾಲವನ್ನೂ, ಟೊಪ್ಪಿಗೆಯನ್ನೂ ತಗೆದುಹಾಕುವ ಇರಾದೆ ಇತ್ತು. ಆದರೆ ಅದೊಂದು ಪ್ರದರ್ಶನವಾಗುವದೆಂದು ಯೋಚಿಸಿ, ನಾನು ಆ ವೇಶವನ್ನು ಜಗ್ಗಿ ಹಿಡಿದೆನು.

ಮೂರನೇ ಪ್ರಸಂಗವು ಮದ್ರಾಸಿನ ಪ್ರವಾಸದೊಳಗೆ ಬಂತು. ತಮ್ಮ ಹತ್ತರ ಸಾಕಷ್ಟು ಖಾದಿಯೇ ಇಲ್ಲವೆಂದು ಜನರು ನನಗೆ ಹೇಳಹತ್ತಿದರು. ಖಾದಿ ಕೊಳ್ಳುವದಕ್ಕೆ ಹಣ ವಿಲ್ಲ. ‹ ಕೂಲಿಕಷ್ಟ ಮಾಡಿ ಹೊಟ್ಟೆಹೊರೆದುಕೊಳ್ಳುವವರು ಪರದೇಶೀ ಅರಿವೆಯನ್ನು ಸುಟ್ಟು ಹಾಕಿದರೆ, ಖಾದಿಯನ್ನು ಎಲ್ಲಿಂದ ತರಬೇಕು ? ಎಂಬ ವಿಚಾರದಿಂದ ನನ್ನ ಹೃದಯವು ವಿದೀರ್ಣವಾಯಿತು. ಈ ವಿಚಾರವು ಯೋಗ್ಯವೆಂಬದು ನನಗೆ ತೋರಿತು. ‹ ಬಡವರು ಏನು ಮಾಡುವರು?’ ಎಂಬ ವಿಚಾರದಿಂದ ನಾನು ತಲ್ಲಣಿಸಿದೆನು. ನನ್ನ ದುಃಖವನ್ನು ನಾನು ಮೌಲಾನಾ ಅಝಾದ ಸೋಭಾನಿ, ಶ್ರೀ| ರಾಜಗೋಪಾಲಾಚಾರಿ, ಡಾ| ರಾಜನ ಮೊದಲಾದವರಿಗೆ ನಿವೇದಿಸಿ, ನಾನು ಕಚ್ಚೆಯನ್ನುಡಬೇಕೆಂದು ಸೂಚಿಸಿದೆನು. ಮೌಲಾನಾ ಸಾಹೇಬರಿಗೆ ನನ್ನ ದುಃಖದ ಅರಿವಾಯಿತು. ನನ್ನ ವಿಚಾರಕ್ಕೆ ಅವರು ಸಂತೋಷದಿಂದ ಅನುಮತಿಯನ್ನಿತ್ತರು. ಇತರೇ ಗೆಳೆಯರು ಗಾಬರಿಯಾದರು. ಇಷ್ಟು ಕ್ರಾಂತಿಕಾರಕ ಬದಲಾವಣೆಗಳನ್ನು ಕೈಕೊಂಡರೆ, ಜನರು ಗೊಂದಲದಲ್ಲಿ ಬೀಳುವರು. ಕೆಲವರಿಗೆ ಇದು ತಿಳಿಯಲಿಕ್ಕಿಲ್ಲ; ಕೆಲವರು ನನಗೆ ಹುಚ್ಚನೆಂದು ಎಣಿಸುವರು, ಮತ್ತು ಎಲ್ಲರಿಗೆ ಇದನ್ನು ಅನುಕರಿಸುವದು ಶಕ್ಯವಲ್ಲದಿದ್ದರೂ, ಬಲು ಕಠಿಣವಾಗುವದು.

ನಾಲ್ಕು ದಿನಗಳವರೆಗೆ ನಾನು ಆಲೋಚಿಸಿದೆನು; ಶಂಕೆಗಳನ್ನೆಲ್ಲ ವಿಚಾರಿಸಿದೆನು. ‹ ನಿಮಗೆ ಖಾದಿ ಸಿಗದಿದ್ದರೆ, ಕಚ್ಚೆಯನ್ನುಡಿರಿ; ಹ್ಯಾಗೂ ಮಾಡಿ ಪರದೇಶೀ ಅರಿವೆಯನ್ನು ತೊರೆಯಲೇ ಬೇಕು ’ ಎಂದು ನನಗೆ ಭಾಷಣ ಮಾಡುವಾಗ ಹೇಳಬೇಕಾಗುತ್ತದೆ. ಆದರೆ, ಹೀಗೆ ಹೇಳುವಾಗ, ನಾನು ಸಂಕೋಚಪಡುತ್ತಿದ್ದೆನು. ನಾನು ಕೈರುಮಾಲು–ಧೋತರ ಧರಿಸುವವರೆಗೆ, ನನ್ನ ಮಾತುಗಳಿಗೆ ತೀವ್ರತೆಯೇ ಇದ್ದಿಲ್ಲ.

ಇದಲ್ಲದೆ, ಮದ್ರಾಸಿನಲ್ಲಿ ಸ್ವದೇಶಿಯ ಅಭಾವವನ್ನು ನೋಡಿ, ನಾನು ಗಾಬರಿಯಾದೆನು. ಜನರೊಳಗೆ ಬಹಳ ಪ್ರೇಮವಿತ್ತು; ಆದರೆ ಅದರೊಳಗೆ ಜೋರಿಲ್ಲವೆಂದು ನನಗೆ ತೋರಿತು.

ಪುನಃ ಮನಸ್ಸಿನಲ್ಲಿ ಕಲ್ಲೋಲವಾಯಿತು; ನನ್ನ ಗೆಳೆಯರ ಸಂಗಡ ಚರ್ಚೆ ಮಾಡಿದೆನು. ಅವರೇನು ಹೊಸ ಕಾರಣಗಳನ್ನೇನು ಮುಂದೊಡ್ಡಲಿಲ್ಲ. ಅಷ್ಟರಲ್ಲಿ ಸಪ್ಟಂಬರ ತಿಂಗಳು ಮುಗಿಯುತ್ತ ಬಂತೆಂಬದು ನನಗೆ ಗೋಚರವಾಗಹತ್ತಿತು. ಸಪ್ಟಂಬರ ಅಂತ್ಯಕ್ಕೆ ಬಹಿಷ್ಕಾರವು ಪೂರ್ಣವಾಗಲೇ ಬೇಕು. ಇದು ಹ್ಯಾಗಾಗುವದು ? ಅಥವಾ ಅದಕ್ಕಾಗಿ ನಾನೇನು ಮಾಡಲಿ ?

ಹೀಗೆ ವಿಚಾರಮಾಡುತ್ತ ಸಪ್ಟಂಬರ ೨೨ ನೇ ರಾತ್ರಿಗೆ ನಾವು ಮದುರೆಗೆ ಮುಟ್ಟಿದೆವು. ಅಕ್ಟೋಬರ ಅಖೇರವರೆಗಾದರೂ ನಾನು ಕಚ್ಚೆಯನ್ನುಟ್ಟು ತಿರುಗಾಡಬೇಕೆಂದು ನಿಶ್ಚಯಮಾಡಿದೆನು. ಮುಂಜಾವಿಗೆ ಮದುರೆಯೊಳಗಿನ ನೇಕಾರರ ಸಭೆ ಇತ್ತು. ಅಲ್ಲಿ ನಾನು ಕಚ್ಚೆಯನ್ನುಟ್ಟು ಹೋದೆನು. ಇಂದಿಗೆ ಮೂರು ದಿವಸಗಳಾದವು.

ಈ ವಿಚಾರವು ಮೌಲಾನಾ ಸಾಹೇಬರಿಗೆ ತೀರ ಸಮ್ಮತವಾಯಿತು; ಅವರು ಸಹ ತಮ್ಮ ಖಾದಿಯ ಕುಗಳ ಅಜ್ಞೆಯಂತೆ, ಶಕ್ಯವಿದ್ದ ಫೇರುಫಾರುಗಳನ್ನೆಲ್ಲ ಮಾಡಿರುವರು. ಇಜಾರಿನ ಬದಲು ಸಣ್ಣ ಛತ್ರಿಯನ್ನು ಧರಿಸುತ್ತಾರೆ; ಹಾಗು ಮೊಳಕಾಲು ಮುಟ್ಟುವಷ್ಟು ಕುಡುತನ್ನು (ಅಂಗಿ) ಹಾಕಿಕೊಳ್ಳುತ್ತಾರೆ. ನಿಮಾಜ ಮಾಡುವಾಗ ತಲೆಮೇಲೆ ಏನಾದರೂ ಧರಿಸಲೇ ಬೇಕಾಗುತ್ತದೆಂದು, ಅಷ್ಟರ ಹೊತ್ತಿಗೆ ಮಾತ್ರ ಟೊಪ್ಪಿಗೆಯನ್ನು ಹಾಕಿಕೊಳ್ಳುತ್ತಾರೆ.

ನನ್ನ ಇತರ ಅನುಯಾಯಿಗಳು ನನ್ನನ್ನು ನೋಡಿದ್ದಾರೆ. ಮದ್ರಾಸಿನ ಬಹು ಜನ ಸಮಾಜವು ಹೀಗೆ ಅನುಸರಿಸುವರು.

ಆದರೆ ಹಿಂದುಸ್ತಾನವು ನನ್ನ ಅನುಕರಣೆ ಮಾಡಬೇಕೆಂದರೆ ನನಗೆ ಆದರ ಗೊಡವೆ ಯಾಕೆ ? ಅಥವಾ ಅನುಯಾಯಿಗಳು ನನ್ನ ಅನುಕರಣ ಮಾಡಬೇಕೆನ್ನುವದಿಲ್ಲ. ’ ಇದನ್ನು ಅನುಯಾಯಿಗಳು ಅನುಕರಿಸಬೇಕೆಂದು ನಾನು ಮಾಡಿಲ್ಲ.

ಈ ಏರ್ಪಾಟವು ಜನರಿಗೆ ಧೈರ್ಯ ಕೊಟ್ಟು, ಮಾರ್ಗ ತೋರಿಸಲಿಕ್ಕೂ, ನನ್ನ ಕಾರ್ಯದ ಮಾರ್ಗವನ್ನು ಸುಕರ ಮಾಡಿಕೊಳ್ಳಲಿಕ್ಕೂ ಕೈಕೊಂಡಿರುತ್ತದೆ. ನಾನು ಕಚ್ಚೆಯನ್ನುಡದವನಾಗಿ, ಅನ್ಯರಿಗೆ ಕಚ್ಚೆಯುಡಲಿಕ್ಕೆ ನಾನು ಹ್ಯಾಗೆ ಹೇಳುವದು ? ಹಿಂದುಸ್ತಾನದಲ್ಲಿ ಲಕ್ಷಗಟ್ಟಲೆ ಜನರು ಬೆತ್ತಲೆಯನ್ನು ತಿರುಗಾಡುತ್ತಾರೆ. ಅವರ ಸಂಬಂಧ ನನ್ನ ಕರ್ತವ್ಯವೇನು ? ಅವರಿಗೆ ಒಂದೂ ಕೆಲವು ತಿಂಗಳ ಕಚ್ಚೆಯನ್ನುಟ್ಟು, ಅನುಭವವನ್ನಾದರೂ ಸಂಪಾದಿಸುವಾ. ‹ ನಾನು ಮಾಡತಕ್ಕದ್ದೇನು ಉಳಿಯಲಿಲ್ಲ, ’ ಇಷ್ಟು ಸಮಾಧಾನವನ್ನಾದರೂ ಪಡೆಯುವಾ.

ಈ ವಿಚಾರದಿಂದ ನಾನು ಹೀಗೆ ಮಾಡಲಿಕ್ಕೆ ಪ್ರವೃತ್ತನಾಗಿದ್ದೇನೆ. ಈಗ ನನ್ನ ಜವಾಬದಾರಿ ಕಡಿಮೆಯಾಗಿರುವದಿಲ್ಲ. ಈ ಹವಾಮಾನದಲ್ಲಿ ಎಂಟು ತಿಂಗಳು ಪೂರ್ಣ ವಸ್ತ್ರಗಳ ಆವಶ್ಯಕತೆಯಿರುವದಿಲ್ಲ. ಇದರೊಳಗೆ ಮದ್ರಾಸದಲ್ಲಿ ೧೨ ತಿಂಗಳೂ ಚಳಿ ಇರುವದಿಲ್ಲೆಂದು ಹೇಳಿದರೂ ಹೇಳಬಹುದು. ಮತ್ತು ಚಳಿಯೇ ಗೃಹಸ್ಥರೆಂದು ತಿಳಿಯಲ್ಪಡುವವರ್‍ಯಾಸಹ ಧೋತರದ ಹೊರ್ತು ಇತರ ಪೋಷಾಕನ್ನು ಧರಿಸುವದು ಅಪರೂಪವಿದ್ದಿತು.

ಹಿಂದುಸ್ಥಾನದೊಳಗಿನ ಕೋಟಿಗಟ್ಟಲೆ ಹಳ್ಳಿಯವರ ಪೋಷಾಕು ಒಂದು ಕಚ್ಚೆಯೇ. ಅವರು ಇದಕ್ಕಿಂತ ಹೆಚ್ಚೇನು ಹಾಕಿಕೊಳ್ಳುವದಿಲ್ಲೆಂದು ನಾನು ಎಲ್ಲ ಪ್ರಾಂತಗಳಲ್ಲಿ ನೋಡಿದ್ದೇನೆ.

ಇಷ್ಟೆಲ್ಲ ಬರವಣಿಗೆಯ ಹೇತುವು ಒಂದೇ.— ವಾಚಕರು ನನ್ನ ಹೃದಯದೊಳಗಿರುವ ತೀವ್ರತೆಯನ್ನು ತಿಳಿಯಬೇಕು. ನನ್ನ ಅನುಯಾಯಿಗಳಾಗಲೀ, ವಾಚಕರಾಗಲೀ ಸ್ವತಃ ಕಚ್ಚೆಯನ್ನುಡಬೇಕೆಂದು ನನ್ನ ಇಚ್ಛೆಯಿಲ್ಲ. ಆದರೆ, ಅವರು ವಿದೇಶೀ ಅರಿವೆಯ ಬಹಿಷ್ಕಾರದ ಅರ್ಥವನ್ನು ಪೂರ್ಣವಾಗಿ ತಿಳಕೊಳ್ಳಬೇಕು, ಮತ್ತು ಬಹಿಷ್ಕಾರ ಮಾಡಲಿಕ್ಕೂ, ಖಾದಿ ಪೈದಾಸು ಮಾಡಲಿಕ್ಕೂ ಶಕ್ತಿ ಮೀರಿ ಪ್ರಯತ್ನ ಮಾಡ[illegible] ಮತ್ತು ಸ್ವದೇಶಿಯಲ್ಲಿ ಸರ್ವಸ್ವವಿದೆಂದು ತಿಳಿ[illegible] ಇದೇ ಕಾಂಕ್ಷೆಯಿಂದ ಪ್ರೇರಿತನಾಗಿರುತ್ತೇನೆ.

ಧಾರವಾಡದ ಗೋಳಿಬಾರು.

ಕಾಂಗ್ರೆಸ ಕಮಿಟಿ ರಿಪೋರ್ಟು.

ಧಾರವಾಡದೊಳಗೆ ಕಳೆದ ಜುಲೈ ೧ ನೇ ತಾರೀಖಿಗೆ ಪೋಲೀಸರಿಂದ ಸಂಭವಿಸಿದ ಗೋಳಿಬಾರಿನ ಪರವಾಗಿ ಪೂರ್ಣ ಚವಕಸಿ ನಡಿಸಿ, ರಿಪೋರ್ಟು ಮಾಡಬೇಕೆಂದು ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಯ ಕಾರ್ಯಕಾರಿ ಕಮಿಟಿಯು ಅಪ್ಪಣೆ ಮಾಡಿಸಿದಂತೆ, ಕಾಂಗ್ರೆಸ ಕಮಿಟಿಯಿಂದ ನೇಮಿಸಲ್ಪಟ್ಟ ನ್ಯಾಯಮೂರ್ತಿಗಳಾದ ಶ್ರೀ. ಅಬ್ಬಾಸ ತೈಯಬಜೀ. ಶ್ರೀ. ಭವಾನಿ ಶಂಕರ ನಿಯೋಗಿ, ಸೆಟ್ಲೂರ ಈ ಮೂರು ನ್ಯಾಯಾಧೀಶರು ತಮ್ಮ ಸವಿಸ್ತರ ಮತ್ತು ಸಾಧಾರ ವರದಿಯನ್ನು ಪ್ರಕಟಿಸಿರುವರು. ಆ ಸಾರಾಂಶವನ್ನು ಕೆಳಗೆ ಕೊಟ್ಟಿರುತ್ತೇವೆ. ನ್ಯಾಯಮೂರ್ತಿಗಳು ಧಾರವಾಡ ಜಿಲ್ಹೆಯ ಅಧಿಕಾರಿಗಳಿಗೂ ಮುಂಬಯಿಯ ಗವರ್ನರರಿಗೂ ಆದರಂತೆ ಎಲ್ಲ ಜನರಿಗೂ ತಮ್ಮ ಪಂಚ ಕೋರ್ಟಿನ ಮುಂದೆ ಆವಶ್ಯಕ ಪುರಾವೆಯನ್ನು ಹಾಜರಪಡಿಸಲಿಕ್ಕೆ ಜಾಹೀರ ರೀತಿಯಿಂದ ತಿಳಿಸಿದ್ದರೂ. ಈ ಪಂಚಾಯತಿಯ ಮುಂದೆ ಸರಕಾರದ ಕಡೆಯಿಂದ ಮತ್ತು ಪೋಲೀಸರ ಕಡೆಯಿಂದ ಪುರಾವ ಕೊಡಲಿಕ್ಕೆ ಯಾರೂ ಹಾಜರಾಗಲಿಲ್ಲ. ಆದರೆ, ತನಖಿ ನಡಿಸಿದ ಮ್ಯಾಜಿಸ್ಟ್ರೇಟರ ಮತ್ತು ಸೇಶನ ಜಡ್ಜರ ಮುಂದೆ ನಡೆದ ದಂಗೆ ಖಟ್ಲೆಯೊಳಗಿನ ಲಭ್ಯವಾದ ಕಾಗದ ಪತ್ರಗಳನ್ನು ದೊರಕಿಸಿ, ಪೂರ್ಣ ಜಾಗೃತಿಯಿಂದ ಅವರ ಉಪಯೋಗಮಾಡಿ, ನ್ಯಾಯನಿಷ್ಠೆಯುಳ್ಳ ಕಮಿಟಿಯು [illegible] ತಮ್ಮ ವಿಚಾರದೊಳು ಏಕಾಂಗಿತನದ ಕುಂದನ್ನು ದೂರಪಡಿಸಿಕೊಳ್ಳ[illegible] ಯಶಸ್ವಿಯಾಗಿ ಯತ್ನಿಸಿವೆ. ಈ ಪಂಚ ಕಮಿಟಿಗೆ ಸರಕಾರಿ ಕೋರ್ಟಿನೊಳಗಿನ ಖಟ್ಲೆಯು ತನಖಿಗಿಂತ [illegible] ವ್ಯಾಪಕವಾದ ವಿಚಾರಣೆ ನಡಿಸುವದು ಅಗತ್ಯವಿದ್ದದ್ದರಿಂದ ಸೆಶನ ಕೋರ್ಟಿನಲ್ಲಿ ಅಗ್ರಾಹ್ಯವಾಗುವ ಬಹಳೇ ಹೆಚ್ಚು ಪುರಾವೆಯನ್ನು ಸ್ವೀಕರಿಸಬೇಕಾಯಿತು. ಮತ್ತು ಧಾರವಾಡದ ಪೋಲಿಸರು ಒಂದು ಬದಿಗೆ, ಧಾರವಾಡದ ಬಹುಜನಸಮಾಜವು ಮತ್ತೊಂದು ಬದಿಗೆ, ಈ ರೀತಿ ಎರಡೂ ಪಕ್ಷಗಳೊಳಗಿನ ಕಾಯದೇಶೀರ ಸಾಕ್ಷ್ಯವೆಂತ ಎಣಿಸಿ, ಈ ಕಮಿಟಿಯು ತನಖಿ ನಡಿಸಿದ ತಮ್ಮ ಮುಂದೆ ಬಂದ ಪುರಾವೆಯನ್ನು ನಿಷ್ಪಕ್ಷಪಾತ ನಿರ್ಣಯವನ್ನು ಕೊಡುವದಕ್ಕೆ ಸಾಕಾಗುವಷ್ಟು ದೊರಕಿದೆಯೆಂದು ಹೇಳಿ, ಎರಡು ಪಕ್ಷಗಳ ಕಡೆಗೂ ಹೋಗಿ ಕಣ್ಣಾರೆ ನೋಡಿ ಪುರಾವೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸಿ ನೋಡಿರುವರು. ಧಾರವಾಡದೊಳಗಿನ ಒಂದು ಪಹಿಲೆದ ಸಾರ್ವಜನಿಕ ಚಳವಳಿಯ ಸಿಂಹಾವಲೋಕನವನ್ನು ಮಾಡಿ, ಬ್ರಾಹ್ಮಣೇತರ ಜನರ ಒಂದು ಪತ್ರವು ಅಲ್ಲಿ ಹ್ಯಾಗೆ ಉಂಟಾಯಿತೆಂಬ ಕಾರ್ಯಕಾರಣಗಳನ್ನು ಚರ್ಚಿಸಿ ಅದಕ್ಕೆ ಅಧಿಕಾರಿಗಳ ಪುಷ್ಟಿಯು ಇರಬಹುದೆಂಬ ಸಂಶಯವನ್ನು ಸಾಧಾರ ಪ್ರಕಟಿಸಿ, ಅಸಹಕಾರಿತೆಯ ಪರವಾಗಿ ಕಲೇಕ್ಟರ ಮಿ| ಪೇಂಟರರವರ ಧೋರಣವನ್ನು ಈ ಕಮಿಟಿಯು ಟೀಕಿಸಿದೆ. ಸದರಿ ಕಲೆಕ್ಟರರ ೩೧ ಮೇ ತಾರೀಖಿಗೆ ಹೊರಡಿಸಿದ ಗುಪ್ತ ಸರ್ಕ್ಯುಲರವನ್ನೂ, ಮುನಿಸಿಪಾಲಿಟಿಯ ಮೆಂಬರರಾಗಿದ್ದ ಇಬ್ಬರು ಜಮೀನದಾರರಾದ ಶ್ರೀ. ಯಲ್ಲಪ್ಪಾರವರ ಜವಾನಿ ಮತ್ತು ಅವರಿಗೆ ಪೇಂಟರ ಸಾಹೇಬರು ಅಸಹಕಾರಿತೆಯ ವಿರುದ್ಧ ವರ್ತಮಾನ ಪತ್ರಗಳಲ್ಲಿ ಪ್ರಕಟಿಸಲಿಕ್ಕೆಂದು ಬರೆದು ಕೊಟ್ಟ ಪತ್ರದ ಮಸೂದೆ, ಇವುಗಳನ್ನೂ, ಇದಲ್ಲದೆ ಸದರಿ ಕಲೇಕ್ಟರರು, ಅಸಹಕಾರಿಗಳಿದ್ದರೆಂಬ ಕಾರಣದಿಂದ ಒಂದೊಂದು ಲಾಯಸನ್ಸ್‌ಗಳನ್ನು ಪುನಃ ಕೊಡಲಿಕ್ಕಾಗದೆಂದು ಕೊಟ್ಟ ಹುಕುಮುಗಳನ್ನೂ, ಸದರಿ ಕಲೇಕ್ಟರರ ಸ್ವದೇಶಿ–ಬಹಿಷ್ಕಾರ ಪರವಾದ ಆಗಸ್ಟ ೫ ನೇ ತಾರೀಖಿನ ಮತ್ತೊಂದು ಸರ್ಕ್ಯುಲರವನ್ನೂ, ನಿರ್ದೇಶಿಸಿ ಅಸಹಕಾರಿ

ತೆಯ, ಚಳವಳಿಯ ವಿ [illegible] ವಾಗಿ ವೇಂಟರಸಾಹೇಬರ ದೋರಣವನ್ನು ಈ [illegible] ಮು ಹೊರಗೆಡಹಿಸಿರುವ ದ್ ವೇಂಟರ ಸಾಹೇಬ [illegible] ಟಿಂಗರ್‌ನ್ನು ಮೂಡಿ ದ ಲಿಸ್ಟ್ ಎಷ್ಟು ದಿವಾ, [illegible] ನ್ನು ಮಾಡು ತ್ತಿದ್ದರು ಮತ್ತು [illegible] ಹಗೆತನವನ್ನು ಎಷ್ಟು ಬಹಿರಂಗವಾಗಿ ಮಾ [illegible] ದ್ದರೆಂದು ಸಿದ್ಧಪಡಿಸಲಿಕ್ಕೆ ಶ್ರೀಯುತ ವಿನಾಯ ಕರಾವ ಜೋಶಿಯವರ [illegible] ರೆಯನೂ ಕರ್ನಾಟಕ್ಕರರ ಪ ಸಲ್ಯಾನ ಮಾಡಿಗೆ ಧಿ [illegible] ದೇಶ ಕ ಡಿಸುವ ಅತ್ಯಾಗ್ರಹದ ಪ್ರವೇಶ ಮಾಡಿದ್ದನ್ನು ಕವೀ ಟಿಯು ಸ್ಪಷ್ಟೀಕರಿಸಿದೆ ದವಾಡದೊಳಗಿನ ಅಸಹಕಾ ರಿತೆಯ ಚಳವಳಿ ಅಲ್ಲಿಯ [illegible] ಕೆಟಿಂಗು ಅದಕ್ಕೆ ಸ [illegible] ಸಿ ಬಂಜಾರ ಸ್ಪದ [illegible] ವಿ ಲಿನ ಒಟ್ಟೆ ಆದರೂ ಳಗೆ ಮೆಜಿಸ್ಟ್ರೇಟ ವಿ [illegible] ಧರ್ನಾದಿಸಿರುವ [illegible] ಟ್ಟಿ ತೀ ರ್ಪ ಇವೆಲ್ಲವುಗಳನ್ನು ಮಾಡಿ ಲೋಕಲ ಧಿಕಾರದ ಜಿಲ್ಲಾಧಿಕಾರಿಗಳಲ್ಲಿಯ [illegible] ಜನರ [illegible] ಸ್ಥರ ಸ [illegible] ವನ್ನು [illegible] ವಾಗಿ [illegible] [illegible]

[illegible] ಜನರಾಳಗಿನ [illegible] ಈ [illegible] ಯಲ್ಲಿ ಇಲ್ಲದ [illegible] ಸರಕಾರ [illegible] ಸಾಕ್ಷಿ ಕೊಟ್ಟಿರುವರ [illegible] ದವೇದಾರರವರ [illegible] ಆವರು ದಂಗೆಯ [illegible] ಯ ಸರಕಾರಿ [illegible] [illegible]

[illegible] ದೂರದಿರ [illegible] ಸಿಕ್ಕ [illegible] ಪೋಲೀಸ ರಿಕಾ [illegible] ಗಿನ ಪುರಾವೆಯಿಂದಲೇ ಕಂಡುಬ [illegible] ದೋ [illegible] ಪಿ ಒಡು ಬಿಟ್ಟಿದ [illegible] ಜಾತಿ [illegible] ಕ್ಕೆ ಆರೋಪಿಸಾತಿ [illegible] ಆದರ [illegible] ಆರ್ಜಿದಾರ [illegible] ಅವರಿಗೆ [illegible] ಈ ಮುಂದಿ ಸಾಕ್ಷೀದಾರ [illegible] ಕಾರಣದಿಂದ ಅ [illegible] ಸಹ ಬಿಡಲ್ಲ [illegible] ಪ್ರಿಲಿ ಕರ ಸಾಕ್ಷಿದಾರರನ್ನು ಕಳಿಸಿ ತರಿಸಿದ [illegible] ನ ಮಾಡ [illegible] ತ್ತದೆ ದಂಗೆಯ ಸ್ಥಳದ [illegible] ವಾಗ [illegible] ದರಿಂದ ಸರಕಾರಿ ಖಟ್ಟೆಯೊಳಗಿನ ಇಕ್ಕಿ [illegible] ತೋಡಿಯರಿಗೆ ಮಾತ್ರ [illegible] ಆವೇಳೆಗೆ ಬೇರೆಕಡೆಗೆ ಇದ್ದರ ಎದಕ್ಕೆ ಪುರಾವೆ [illegible] ಈ ಮುಂದಿ ಆರೋಪಿತರ [illegible] ಯು ಹೊಂದಿರ ನಲ್ಲಿ ಪೋಲೀಸರ [illegible] ಗಳ ವೇಳೆ ಗುಂಡ ಹಾರಿಸಲಿಕ್ಕೆ ಕ್ಷಿಸುವದು ಸಾಹಜಿಕವಿರ ವಾಗ ಅವರು ಅಲ್ಲಿ ಹಾಜರಿದ್ದ ಅವರಿಗೆ ಛಿ [illegible] ಎಂದೂ ಇರ ಶ್ತಿದ್ದಿಲ್ಲ ಆಕಸ್ಮಿಕವಾಗಿ ಅವರು ಘಾಯ ಹೊಂದದೆ ಕ್ಷ ಉಳಿದವರಿಂದ ಹೇಳಲಿಕ್ಕಾ [illegible] ಇವೆಲ್ಲ ಸಂಗತಿಗಳನ್ನು ನೋಡಿ ನಮಗೆ ಕಾಣ ವರಿಷ್ಟೇ — ಆ ದಿವಸ ಪಿಕೆಟಿಂಗಕ್ಕಿಂತ ವಿಶೇಷ ಹೆಚ್ಚಿನದೇನು ಅಲ್ಲಿ ನಡೆಯ ತ್ತಿದ್ದಿಲ್ಲವಾದರೂ ಒಬ್ಬ ಪೋಲೀಸ ಹವಾಲದಾರ ನು ಕೆಲ ಕ ಡದ ತುಂಟತನವಾಡಿದ್ದರಿಂದ ಜನರೊಳಗೆ ಸ್ವಲ್ಪ ಚಿತ್ತಕ್ಷೋಭವನ್ನುಂಟುಮಾಡಿದ್ದಲ್ಲದೆ ಇದಕ್ಕಿಂತ ಹೆಚ್ಚಿನ ಭಯಂಕರ ಪ್ರಕಾರವು ಅಲ್ಲಿ ಏನೂ ಸಂಭವಿ ಸಿದ್ದಿಲ್ಲ

ಗೋಳೀಬಾರ್ ಲ್ಲಿದ್ ಜನರ ಸಂಮರ್ದವನ್ನು [illegible] ದೆ ಲಿಕ್ಕಾಗುತಿತ್ತೋ ಇಲ್ಲವೋ [illegible] ಇದನೇ ಮುದ್ದೆ ಯ ವೇಳೆ ನಾವು ಅಭಿಪ್ರಾಯ ಪಡ ಬೇನಂದರೆ— ಮ ಡಿಸ್‌ಯ ಸೌಧ್ಯ [illegible] ಗಳಿಂದ ಪಟ್ಟಣಿಯ [illegible] ಯಲುಸಂಭ್ಯವೆಂದು ಚಾಲಿಸಲು ಪೋ ಲೀಸರಿಗೆ ಏನೂ ಸಹ

ಲ ಕಾರಣವಿದ್ದಿಲ್ಲ ಗೋಳೀಬಾರದ ಸಮಯ ಸುಮಾರು ೧೦೦ ಸಶಸ್ತ್ರ ಪೋಲೀಸರೂ ಬೇರೆ ಬಹಳೇ ಸಾದಾ ಪೋಲೀ ಸರೂ ಅಲ್ಲಿ ಇದ್ದದ್ದರಿಂದ ಅವರಿಗೆ ೩೦೦—೪೦೦ ನಿಃಶಸ್ತ್ರ ಜನರ ಸಮ್ಮರ್ದವನ್ನು ಮುರಿಯುವದು ಅತಿಶ ಲಘವಾ ದ ಮಾತಾಗಿತ್ತು ಸರಕಾರಿ ಒಟಲೆಯಲ್ಲಿ ರಿಪೋರ್ಟಿ ಸ ಪ್ಪದವರು ಪ್ರತಿಪಾದಿಸಿದಂತೆ ಪೋಲೀಸರ ಮೇಲೆ ಮಾರೂ ಹಲ್ಲೆ ಮಾಡಿದ್ದರೆಂದು ಇಲ್ಲವ ಅವರ ಜೀವಕ್ಕೆ ಅಂಜಿಕೆ [illegible] ವಂತ ಏನಾದರೂ ಪ್ರಕಾರವು ಸಂಭವಿಸಿತ್ತಂ [illegible] ಇದ್ದಲ್ಲಿ ತಕ್ಕಗಳಿಗೆ ಜನರೇನು [illegible] ಸಿದ್ದು ಪ್ರರಾವೆಯಿಂದ ಸಿದ್ಧವಾಗುವದಿಲ್ಲ ಆವ [illegible] ಸ್ಪಷ್ಟವಾಗಿ ಗೋಳೀಬಾರ ಮಾಡಿದರೆಂ [illegible]

[illegible] ದೇ ಖಡಿದ ಕಲಂ [illegible] ದ ಪೋಲೀಸ [illegible] ಗೋಳೀಬಾ [illegible] ಪೋಲೀಸರು ಕೊಟ್ಟ [illegible] ಎದ [illegible] ಕೊಟ್ಟಿದ [illegible] ಇದರ ದೇ [illegible]

[illegible] ಆಯ [illegible] ಡಿಯು [illegible]

[illegible] ಸದ್ [illegible] ಖಿಸಿ [illegible] ಪ್ರಮಾ [illegible] ದೆ [illegible] ದಲ್ಲಿ ದಿಕ್ಕುಗಳಲ್ಲಿ [illegible] ದಿನ ಜನರ ಸಂಮರ್ದವನ್ನು [illegible] ರವಾಗಿದ್ದರೆ ಬಂಡಾಯದಂಥ ಹೊತ [illegible] ಗೋಳೀಬಾರವಾದದ್ದಕ್ಕೆ ಕಾರಣವೇನ ಒಬ್ಬ ಸಾಕ್ಷೀಗಾರ ನು ಹಾಗೆ ಹು ಹಾಡದ್ದ ಕೇಳಿದರೆ [illegible] ಹೇಳಿರುವನು ಒಟ್ಟಿಗೆ ನೋಡಿದರೆ ಗೋಳೀಬಾರವು ಅತಿಶಯವಾ ಗಿ ಮಾಡಿದರೆಂಬುದರಿಂದ ಅದರ [illegible] ಸಾರ್ವಜನಿಕ [illegible] ರಕ್ಷಣೆ ಇರಲಾರದೆ ಜನರಿಗೆ [illegible] ಬಂಬ ಉದ್ದೇಶವೇ ಮೂಲಭೂತವಾಗಿ [illegible] ಕ್ಕೆ ಕಾರಣವಾಗಿದೆ

ಆಜೇರಿಯ ಎಂಟನೇ ಮುದ್ದೆಯ ಸಂಬಂಧದಿಂದ ಪ ರ್ಯಾಲೋಚಿಸಿ ನವ್ಮ ಮತವಾಗ ವದೇನಂದರೆ — ಘಾಯ ಹೊಂದಿದ ಜನರಿಗೆ ಸಹಾಯ ಮಾಡಬ ಕಿಲ ಜ ನರ ಕಿಟಿಸನ ದೀಪವನ್ನು ತೆಗೆದುಕೊಂಡು ಹೋಗಿದ್ದ ರು ಗೋಳೀಬಾರಕ್ಕೆ ಜನರ ನೆರೆದಲು ಒಲಿದ್ದಿದ್ದರು ವಾ ಗ, ಶಿವಲಿಂಗಪ್ಪನು ಪ್ರತಿಪಾದಿಸುವಂತೆ ಇನಾ ಜಾರ ಮತ್ತೊಮ್ಮೆ ದಟ್ಟನೆಮಾಡಬು ವ ಆದೆ ಎಂದರೆಂದು ತಿ ಳುಕೊಳ್ಳ ವದ ಅಸಾಧ್ಯತ್ತ

ಒಂದೇ ವಾಕ್ಯದಲ್ಲಿ ನವ್ಮ ಅಭಿಪ್ರಾಯವನ್ನು ಗ್ರಾ

ಮಾಡುವದಾದರೆ ನಾವು ಇಷ್ಟೇ ಹೇಳುವೆವು — ತಾರೀ ಖು ೧ನೇ ಜುಲೈ ದಿವಸ ಕೆರೆ ಅಂಗಡಿಯ ನೆರೆಹೊರೆಯ ಲ್ಲಿ ಕೂಡಿದ ಜನಸಮೂಹದಮೇಲೆ ಶಿವಲಿಂಗಪ್ಪ ಫೌಜ ದಾರನು ಹುಕುಂ ಕೊಟ್ಟು ನಡಿಸಿದ ಗೋಳೀಬಾರವು ಅ ಸಮರ್ಥನೀಯವೂ, ಅನಾವಶ್ಯಕವಾಗಿ ಪ್ರಖರವೂ ಆಗಿ ದ್ದಾಗಿ ಕಂಡು ಬರುವದು, ಮತ್ತು ಘಾಯವಾಗಿ ಬಿದ್ದ ಜನರಿಗೆ ಮದ್ದತು ಮಾಡಬೇಕೆಂದು ಕಿಟಸನ ದೀಪವನ್ನು ತಕ್ಕೊಂಡು ಬಂದ ಜನರ ಮೇಲೆ ಗುಂಡು ಹಾರಿಸಿದ್ದಂ ತೂ ಕೇವಲ ಪಶುತುಲ್ಯವೂ ತೀರ ನಿಷ್ಕಾರಣವೂ ಆಗಿ ರುತ್ತದೆ

ಅಂಕೋಲಾ ತಾಲೂಕಿನೊಳಗಿನ ಯಾವತ್ತೂ ಜನರಿಗೆ ಜಾಹೀರ ನೋಟೀಸು.

ಇಲ್ಲಿಯ ಎಡ್‌ವರ್ಡ ಇಂಗ್ಲೀಷಶಾಲೆಯು ಸಾ ರ್ವಜನಿಕ ವರ್ಗಣಿಯಿಂದ ಸ್ಥಾಪಿತವಾಗಿದ್ದು ಸಾ ರ್ವಜನಿಕ ಶಿಕ್ಷಣಕೊಡುವ ಸರಕಾರಿ ಮಾನ್ಯತೆಯು ಸಂಸ್ಥೆಯಾಗಿರುತ್ತದಷ್ಟೇ ಸದ್ಯಕ್ಕೆ ಸಾರ್ವಜನಿಕ ಸಂ ಸ್ಥೆಯ ಕಾರಭಾರವನ್ನು ಕಲವು ಜನರು ತಮ್ಮಷ್ಟಕ್ಕೆ, ನಡಿಸಿ ಒಸರ ರಿಪೋರ್ಟಗಳನ್ನು ಸಹ ಪ್ರಕಟಿಸದೆ ಇದರ ಸ್ಥಿತಿಯು ಈಗ ಹ್ಯಾಗೆ ಇದೆ? ಮುಂದೆ ಏನಾ ಗುವದು ಎಂಬುವದು ತಿಳಿಯುವದು ಸಾಧ್ಯವಿಲ್ಲಾ ಗಿದೆ ತಮ್ಮ ಕಮಿಟಿಯ ಸಭೆಗಳಿಗೆ ಜನರು ಬರಬಾ ರದಾಗಿ ಬೇಕಾಯ ದೇಶೀರ ರೂಲಿಂಗ ಕೊಟ್ಟು ಅ ದರಂತೆ ಎರಡು ಗುಪ್ತ ಕಮಿಟಿಕವಿತ'ದರೆಂದು ಸಾ ವ್ರ [illegible] ಸಂಗತಿಗಳ ವಿಚಾರ ಮಾಡಿ ಸರಕಾರಿ [illegible] ಹುಕುಮುಗಳಿಗೆ ಪಾಳ [illegible] ಸದರಿ [illegible] ವ [illegible] ಸ ಹ್ಯಾಗೆ ನಡಿಸಬೇಕೆಂದು ಠರಾವಮಾಡುವದ ಇದೇ ತಿಂಗಳು [illegible] ಬರುವ [illegible] ದೊಳಗೆ, ತಾ ರೀಕ ೨೪—೧೦— ೧೯೩೧ ರವಿವಾರ ಸಾಯಂಕಾಲ ೪ ಘಂಟೆಗೆ ಸಭೆಕೂಡಿಸ ಬೇಕು ಸ್ಥಿರಗೊಳಿಸಿರುತ್ತದೆ ಸಾರ್ವಜನಿಕ ಶಿಕ್ಷಣದ ಹಿತವನ್ನು ಮಾಡಲಿಚ್ಛಿಸುವ ಅಂಕೋಲೆಯ [illegible] ಗರಿಕರು ಈ ಸಭೆಗೆ ದಯಮಾಡಿ ಹಾಜರಾಗಬೇಕಾಗಿ [illegible] ಪ್ರವಿನಂತಿ ಮಾಡುತ್ತೇವೆ ತಾ ೧೨—೧೦ ೧೯೩೧

(೧) ಪದ್ಮನಾಭ ಗೋವಿಂದ ಪ್ರಭು (೨) ವೆಂಕಟೇಶ ವಾಮನ ಶೇಣ್ವಿ (೩) ಮುಕುಂದ ನಾರಾಯಣ ಪ್ರಭು (೪) ಸೂಪಿಯರು ಸುಬ್ರಾಯ ಪೈ (೫) ಗಣ ಪತಿ ಗೋಪಾಳ ವಾಲ (೬) ಶಾವ ರಾವ ಕೃಷ್ಣ ಶೇಣ್ವಿ (೭) ವೆಂಕಟೇಶ ಲಕ್ಷ್ಮಣ ಕಾಮತ (೮) ಪಾಂಡುರಂಗ ಗೋಪಾಳ ಪೈ (೯) ಸ್ವದ ಆಬಿದ ಮಾ ಸ್ವದ ಬಾಬಿರ್ ಸಾಬ (೧೦) ಶ್ರೀಧರ ಮಾಧವ ನಾಯ್ಕ (೧೧) [illegible] ಸ್ ಎಂಜಾಯ ಶಾಸ್ತ್ರಿ (೧೨) ಎಸ್ ಜಿ ಕಾಕರಮಟ (೧೩) [illegible] ಪ್ರಭು (೧೪) ಜಿ ಟಿ ನಾಡಕರ (೧೫) ದಕಗು ಕೇಶವ ನಾಯ್ಕ (೧೬) ಹೊನ್ನಪ್ಪ ನಾರಾಯಣ ನಾಯ್ಕ (೧೭) ಶಿವರಾವ ರಾಮಚಂದ್ರ ಹುಕ್ಕೇರ, (೧೮) ವಂಜನಾಥ ಗಣೇಶ ಕಾಮತ (೧೯) ಮೋ [illegible] ಕೃಷ್ಣ ನಾಯ್ಕ (೨೦) ಸ್ವದ ಫತ್ರೋದ್ದಿನ ವಲ್ಲದ ಸ್ವದ ಸಾದೂ ದ್ದೀನ ಪಿರಜ್ಯಾದೆ (೨೧) ವ [illegible] ವೆಂಕಪ್ಪ ವೆಂಕ [illegible]

ಆಶ್ರಯದಾತರಿಗೆ ವಿಜ್ಞಾಪನೆ.

ಈ ಸಂಚಿಕೆಯು ೬ ನೇ ವರ್ಷದ ಕೊನೆಯ ಸಂಚಿಕೆಯು. ಈ ವರ್ಷದಾದಿಯಿಂದ ಪತ್ರದ ವರ್ಗಣಿ ಬಂಬಯಿಯ ಸೇರಿ ರೂಪಾಯಿ ೨ ೦-೦ ಮಾತ್ರ ಇದ್ದು ವ್ಹಿ. ಪಿ. ಯಿಂದ ರೂಪಾಯಿ ೨-೩-೦ ನಮಗೆ ಬರುತ್ತಿದ್ದರೂ, ಆಶ್ರಯದಾತರು ಮನಿಯಾರ್ಡರ ಕಮಿಶನ ಹಿಡಿದು, ಒಟ್ಟಿಗೆ ರೂಪಾಯಿ ೩-೪-೦ ತೆರಬೇಕಾಗುತ್ತದೆ. ಆದ್ದರಿಂದ ಮನಿಯಾರ್ಡರಿಯಿಂದಲೇ ರೂಪಾಯಿ ೨-೦-೦ ಕಳುಹಿಸಿದರೆ, ಎರಡಾಣೆಯ ಪೂರ್ವಾಂಡಪಾದರೂ ಉಳಿಸಿಕೊಳ್ಳಬಹುದಾಗಿ ಹಿಂದಿನ ೪ ಸಂಚಿಕೆಗಳಿಂದ ಸೂಚನೆ ಕೊಡುತ್ತಿದ್ದರೂ, ಅದರ ಪ್ರಯೋಜನ ಪಡೆದುಕೊಂಡವರು ಬರೇ ೧೫-೨೦ ಜನರೇ ಆಗಿರುವರೆಂದು ವ್ಯಕ್ತಪಡಿಸುವೆವು. ಈಗ ಮೊದಲನೇ ಸಂಚಿಕೆಯಿಂದ ಪತ್ರ ಪ್ರಾರಂಭವಾದವರಿಗೆ ನಿರುಪಾಯವಾಗಿ ವ್ಹಿ. ಪಿ. ಗಳನ್ನು ಇನ್ನು ಮೇಲೆ ಕಳುಹಿಸಬೇಕಾಗಿವೆ. ವ್ಹಿ. ಪಿ. ಕಳುಹಿಸುವ ಮುಂದಾಗ್ರತೆ ಸೂಚನೆ ಕಾರ್ಡ ಕಳಿಸುವ ಪರಿಪಾಠ ಈ ವರ್ಷದಿಂದ ಇಟ್ಟಿದೆ. ಕಾಲಕಾಲಕ್ಕೆ ಈ ವಿಷಯ ಪತ್ರದಲ್ಲಿಯೇ ಸೂಚನೆ ಕೊಡಲ್ಪಡುವದು. ಅದಕ್ಕೆ ಮೊದಲನೇ ಸಂಚಿಕೆಯಿಂದ ಪತ್ರ ಬಾಕಿ ಇದ್ದವರು ದಯಮಾಡಿ ವ್ಹಿ. ಪಿ. ಗಳನ್ನು ಸ್ವೀಕರಿಸಿ ನಮಗೆ ಪೂರ್ಣ ಪ್ರೋತ್ಸಾಹಿಸುವರೆಂದು ನಂಬುವೆವು.

ಸಂಪಾದಕ ಕಾ. ವೃ.

ಆತ್ಮನಿವೇದನೆ.

ಐದು ವರ್ಷಗಳು ಮುಗಿದವು 'ಕಾನಡಾವೃತ್ತ' ವನ್ನು ನಾವು ನಡೆಸಲಾರಂಭಿಸಿದಂದಿನಿಂದ ಐದು ವರ್ಷಗಳು ಮುಗಿದು ಜಗದೀಶನ ಕೃಪೆಯಿಂದ ಇಂದಿಗೆ ಆರನೇ ವರ್ಷವು ಪ್ರಾರಂಭಿಸಿದೆ. ಶ್ರೀ ಹರಿಯ ದಯೆಯು ಅನುಗ್ರಹವು ನಿರಂತರವಾಗಿ ನಮಗೆ ದೊರೆಯಬೇಕೆಂದು ಎದೆಗಾರಿಕೆಯು ಸಹ ಹುರುಪಕ್ಕೆ ಯ ದಾಮುಕಿ ಯದಾಶಕ್ತಿ ಲೋಕಸೇವೆಯನ್ನು ಮಾಡಬೇಕೆಂದು ಈ ಸಂಸ್ಥೆಯನ್ನು ನಾವು ಸ್ಥಾಪಿಸಿದೆವು. ನಾವು ಲೋಕಹಿತದ ಏಳಿಗೆಗಾಗಿ ನಮ್ಮ ಸೇವೆಯ ಕರ್ತವ್ಯವನ್ನು ಎಷ್ಟು ನಿಃಸ್ವಾರ್ಥ ಬುದ್ಧಿಯಿಂದ, ಎಷ್ಟು ಸಾಹಸದಿಂದ, ಎಷ್ಟು ಮನವಿಟ್ಟು ನಡೆಸುತ್ತಿದ್ದೇವೆಂದು ನಮ್ಮ ಆಶ್ರಯದಾತರೂ ವಾಚಕರೂ ಹೇಳಬೇಕಲ್ಲದೆ, ನಾವಾಗಿ ಅದನ್ನು ಎಷ್ಟೂ ವಿನಯದಿಂದ ಬಿನ್ನೈಸುವದು ಸಲ್ಲದು. ಆತ್ಮಸ್ತುತಿಯು ದೊಡ್ಡ ದೋಷವು ಎಂದು ಯಾವದಾದರೂ ನ್ಯಾಯಸಭೆಯಲ್ಲಿ ನಿರ್ಣಯವಾಗುವದಕ್ಕೆ, ಆತ್ಮನಿವೇದನೆಯನ್ನು ಮಾಡುವಾಗ, ಐದು ವರ್ಷಗಳ ತನಕ, ನೀವು ಏನೇನು ಮಾಡಿದಿರಿ, ಎಂದು ನಮಗೆ ಯಾರಾದರೂ ಕೇಳಿದರೆ,— ಇಕೋ! ನಮ್ಮ ಐದೂ ವರ್ಷಗಳ ಸಂಚಿಕೆಗಳ ಫೈಲುಗಳನ್ನು ತೆರೆಯಿರಿ, ಮತ್ತು ನಾವೇನು ಮಾಡಿದ್ದೇವೆಂದು ನೋಡಿಕೊಳ್ಳಿರಿ ಇಷ್ಟೇ ನಮಗೆ ಹೇಳಬೇಕಾಗುವದು. ನಮ್ಮ ಧ್ಯೇಯವನ್ನು ನಾವು ಪುನರ್ಜನ್ಮವನ್ನು ಪಡೆದಾಗ, ಸ್ಪಷ್ಟವಾಗಿ ಪ್ರಾಕಟ್ಯಕರಪಡಿಸಿದ್ದೇವೆ. ರಾಜಕೀಯ ಪ್ರಗತಿ ನಡೆದಂತೆ, ಧ್ಯೇಯದ ಪ್ರಗತಿಯು ಎಷ್ಟಾಗಬೇಕೋ, ಅಷ್ಟೇ ಪ್ರಮಾಣದಿಂದ ನಮ್ಮ ಹೆಜ್ಜೆಯನ್ನು ನಾವು ಮುಂದಿಡಲು ಯತ್ನಿಸಿದ್ದೇವಲ್ಲದೆ, ನಮ್ಮ ಧೋರಣವನ್ನು ಪ್ರಾರಂಭದಿಂದ ಇಂದಿನ ತನಕ ಸುಸಂಗತವಾಗಿ ಕಾಪಾಡಲಿಕ್ಕೆ ಯತ್ನಿಸಿದ್ದೇವೆ. ಇನ್ನು ನಾವು ಅರ್ಪಿಸಿದ ಸೇವೆಯೊಳಗೆ ಅನೇಕ ತಪ್ಪುಗಳು ನಡೆದಿದ್ದರೆ, ದೋಷಗಳಿದ್ದರೆ ಅವು ಮಾತ್ರ ನಮ್ಮದೇ ಉಳಿದವೆಲ್ಲ ದೇಶಮಾತೆಯ ಪ್ರಸಾದವು. ಒಟ್ಟಿಗೆ ವಿಖ್ಯಾತ ಆಂಗ್ಲ ಗ್ರಂಥಕಾರರಾದ ಗೋಲ್ಡಸ್ಮಿಥ ಪಂಡಿತರು ಹೇಳಿದಂತೆ, "What we have done, we have done" ನಾವು ಮಾಡಿದ್ದೆಂಬುದು, ನಾವು ಮಾಡಿದ್ದಾಗಿದೆ. ಅದರೊಳಗೇನಿದೆ, ಅದೆಷ್ಟು ಫಲಪ್ರದವಾಗಿದೆಂದು ನೀವೇ ನೋಡಿಕೊಳ್ಳಿರಿ.

ಸರಕಾರವು ತನ್ನ ಕಾರಭಾರದ ವಾರ್ಷಿಕ ರಿಪೋರ್ಟುಗಳನ್ನು ಪ್ರಕಟಿಸಿದರೂ, ಐದು ವರ್ಷಕ್ಕೊಮ್ಮೆ ಪಂಚವಾರ್ಷಿಕ ಅಹವಾಲೆಯನ್ನು ಪ್ರಸಿದ್ಧಪಡಿಸುವ ರೂಢಿಯನ್ನು ಇಟ್ಟಿರುವದು. ಅದರಲ್ಲಿ ನಾವಾದರೂ ರಾಜಕೀಯ, ಸಾಮಾಜಿಕ, ಆರ್ಥಿಕ, ಶಿಕ್ಷಣ ವಿಷಯ ಗಂಭೀರ ಲೇಖಗಳನ್ನು ಎಷ್ಟು ಬರೆದು, ಸ್ಫುಟವಿಚಾರಗಳನ್ನು ಎಷ್ಟು ಪ್ರಸಿದ್ಧಪಡಿಸಿದೆವು, ಅವೆಲ್ಲವುಗಳ ಸಾಮುದಾಯಿಕ ಪರಿಣಾಮವು ನಮ್ಮ ಜಿಲ್ಲೆಯ ಲೋಕಮತದ ಮೇಲೆ ಎಷ್ಟರ ಮಟ್ಟಿಗಾಗಿದೆ. ಲೋಕಪಕ್ಷದ ಸಾಮರ್ಥ್ಯವನ್ನು ಬೆಳೆಸಲಿಕ್ಕೆ ಅವುಗಳಿಂದ ಎಷ್ಟು ಸಹಾಯವಾಗಿದೆ, ಎಂಬುದನ್ನೆಲ್ಲ ಸ್ಥೂಲಮಾನದಿಂದಾದರೂ ಕಂಡು ಬರುವಂತೆ, ಸಣ್ಣ ಸಂಖ್ಯೆಯನ್ನು ತೆಗೆದು ವಾಚಕರ ಮುಂದೆ ಇಡಬೇಕಾಗಿತ್ತು. ಆದರೆ, ನಮ್ಮ ದೇಶದೊಳಗೆ ರಾಜ್ಯಪ್ರವಾಹವು ಎಷ್ಟು ವೇಗದಿಂದ ತೀವ್ರ ವರ್ತಮಾನಕಾಲದಲ್ಲಿ ಹರಿಯುತ್ತಿರುವದು— ಎಲ್ಲರಾದರೂ ಹಿಂದೆ ಮುಂದೆ ನೋಡಿ, ಸಣ್ಣ ರಿಪೋರ್ಟನ್ನು ಬರೆಯುವ ಅಂತರ ನಮಗೆಲ್ಲಿ ದೊರೆಯಲಿಕ್ಕೆ ಅವಕಾಶವಿದೆ? ಸಾರ್ವಜನಿಕ ಚಳವಳಿಯ ಲೋಕನಾಯಕರು ಸ್ವರಾಜ್ಯದ ಪಲ್ಲಕ್ಕಿಗೆ ಹೆಗಲುಕೊಟ್ಟು ಆಗಲೇ ಕಡೆ ಮುಟ್ಟಿದ್ದಾಗ ನಾವು ಅದನ್ನು ತಡಿಸಿ, ಸ್ವಲ್ಪ ಹೊತ್ತು ನಿಂತುಕೊಂಡು, ನಮ್ಮ ಪಂಚವಾರ್ಷಿಕ ಅಹವಾಲೆಯನ್ನು ಬರೆದು ದಾರಿಯ ಮೇಲೆ ಇಟ್ಟು ಹೋಗುವ ಎಂದರೆ, ದಬ್ಬಾಳಿಕೆಯ ಡಾಕ್ಟರರೇನು ನಮಗೆ ಪರವಾನಗಿ ಕೊಡುವದಿಲ್ಲ. ಹೀಗಾಗಿ, ಅವಕಾಶವಿಲ್ಲದೆ, ನೀವೇ ನೋಡಿರೆಂದು ನಮಗೆ ಹೇಳಬೇಕಾಗಿದೆ. ತೀರ ಸಮ್ಮತ್ಕಂಠದ ಈ ಪ್ರೀಮ್ಯವನು ಭರದಿಂದ ಬಂದಿ ಹೊಡೆಯಹತ್ತಿರವನು. ಈಗ ಧಾರವಾಡದಲ್ಲಿದ್ದರೆ, ಮತ್ತೊಂದು ನಿಮಿಷದಲ್ಲಿ ಕರಾಚಿಯ ಕಣ್ಣಿಗೆ ಬೀಳುತ್ತದೆ. ಸಕ್ಕಸೆ ಹೊನ್ನಾವರವು ದಾಟಿ ಹೋಗುತ್ತದೆ. ಹೀಗಾಗಿ ಬಂಡಿಯಲ್ಲಿ ಪ್ರವಾಸಿಕರಾದ ನಮಗೆ ಎಲ್ಲಿಯೂ ತಡೆಯಲು ಅವಕಾಶವೇ ಇಲ್ಲಾಗಿದೆ. ಇನ್ನು ನಮ್ಮ ಚಾಕರಿಯ ಬಡತಿಯನ್ನು ಕೊಡುವದು ವರ್ಷಗಳು ಮುಟ್ಟಿದ ನಂತರವೇ. ನಿರಂತರವಾಗಿ ಚಾಕರಿಯನ್ನು ನಡಿಸುವಷ್ಟು ಧೈರ್ಯವನ್ನೂ, ಅನುಕೂಲತೆಯನ್ನೂ, ಸಹಾಯವನ್ನೂ ದಯಪಾಲಿಸುವದು ದೇವರ ಕೃಪೆಯು. ಅದು ಮತ್ತು ಅದರೊಂದಿಗೆ ಆಶ್ರಯದಾತರ ಉದಾರ ಆಶ್ರಯವು ನಮಗೆ ಪರಿಪೂರ್ಣವಾಗಿ ದೊರೆಯಲೆಂದು ಜಗದೊಡೆಯನಕೂಡ ಬೇಡುವೆವು.

ಇನ್ನು ನಮ್ಮ ಪ್ರಿಯ ಆಶ್ರಯದಾತರಿಗೆ ನಾವು ಅರಿಕೆಮಾಡುವದೇನಂದರೆ— ವೃತ್ತವು ನಿಮ್ಮದು, ಇಂದಿನತನಕ ಉತ್ತಿಗೆ ತೊಡಿಗೆಗಳನ್ನು, ಅನ್ನೋದಕವನ್ನು ಪ್ರೀತಿಯಿಂದ, ಉದಾರತನದಿಂದ ಅರ್ಪಿಸಿ, ನೀವು ಅದನ್ನು ಪೋಷಿಸಿದ್ದೀರಿ. ಅದರ ಸಂಗೋಪನವನ್ನು ಮಾಡಿ, ನೀವು ಅದನ್ನು ಸಂಪತ್ತು-ವಿಪತ್ತುಗಳ ಕಾಲದಲ್ಲಿ ಕಾಪಾಡಿದ್ದೀರಿ. ಇನ್ನು ಅದನ್ನು ಬೆಳೆಸುವದು, ಪಯೋವೃದ್ಧ [illegible] ದ ಹೆಚ್ಚುಗುತ್ತಿದ್ದ ಅದರ ನಿರ್ವಾಹ ಸಾಧನ [illegible] ಹಳೇ ಉದಾರತನದಿಂದ ಪೋಷಣೆಗೆ [illegible] ಗಳಿಂದಲೇ ಸಾಧ್ಯವಾದ ಮಾತು. [illegible] ಈಗಿನ ಸಂಸಾರದಲ್ಲಿ ಎಷ್ಟು ಬಡತನದಿಂದ [illegible] ದ ಚರಿತಾರ್ಥವನ್ನು ಸಾಗಿಸಿದರೂ, ಬಾಳಿಕೆಗೆ ಬೇಕಾಗ ಎಷ್ಟಾದರೂ ಆಧಾರವನ್ನು ಅವಶ್ಯ ಕೊಡಬೇಕಲ್ಲವೇ? ನಿರ್ಧಾರದಿಂದ ನಾವು "ಕಾನಡಾವೃತ್ತ" ವನ್ನು ಜನಸಮೂಹದ (Peoples' Organ) [illegible] ಪ್ರತೀಕವಾಗಿರುವಂತೆ, ಕಾಪಾಡಿಕೊಂಡಿದ್ದೇವೆ. ಸರಕಾರ, ನಿಮ ಸರಕಾರಿ, ಬಿನ್‌ಸರಕಾರಿ, ಅಧಿಕಾರಕೂಡ ಜನರು ಸತ್ಯಪಕ್ಷದ ಕಾದಾಟವನ್ನು ನಡಿಸಲಿಕ್ಕೆ ಬೇಕಾಗುವಷ್ಟು, ನೈತಿಕ ಮತ್ತು ಆರ್ಥಿಕ ಶಕ್ತಿಯು ನಮಗೆ ದೊರಕಿಸಿ ಕೊಡುವದು ಜನತೆಯ ಸಕ್ರಿಯ ಸಹಾನುಭೂತಿಯಿಂದ, ದಯೆಯಿಂದ ಹೆಚ್ಚು ಚಂದಾದಾರರ ಉದಾರ ಆಶ್ರಯದಿಂದಲೇ ಸಾಧ್ಯವದೆ. ಹಸ್ತೆ ಪರಹಸ್ತೆ ಅವರು ಆ ಔದಾರ್ಯವನ್ನು ನಮಗೆ ತೋರಿಸುವರೆಂದು ಪೂರ್ವಾನುಭವದ ಆಶ್ವಾಸನಗಳಿಂದ ನಂಬಿ ಕೊಂಡಿರುವೆವು.

—※—

ಕಾನಡಾವೃತ್ತ.

ಗುರುವಾರ ತಾರೀಖು ೧೮ ಮಾಹೆ ಅಕ್ಟೋಬರ ೧೯೩೧

ಅನ್ಯಾಯವಾಯಿತು!

ಧಾರವಾಡದ ಗೋಕಾಕ ಬಾಂಬ ಖಟ್ಲೆಯು ಮುಗಿಯಿತು. ನ್ಯಾಯಾಧೀಶರಾದ ಪ್ರೆಟರಘೀಲ್ಡ ಸಾಹೇಬರು, ಇಬ್ಬರು ಬ್ರಾಹ್ಮಣೇತರ ಪಂಚರು ಆರೋಪಿಗಳೆಲ್ಲ ಪೂರ್ಣವಾಗಿ ನಿರ್ದೋಷಿಗಳಿದ್ದಾರೆಂದು ಕೊಟ್ಟ ಅಭಿಪ್ರಾಯವನ್ನು ಮನ್ನಿಸದೆ, ಶ್ರೀ। ದಿವಾಕರ, ಶ್ರೀ। ದೇಸಾಯಿ, ಶ್ರೀ। ದೇಶಪಾಂಡೆ ಶ್ರೀ। ಮನ್ನಾಪುರ ಈ ನಾಲ್ಕು ಮಂದಿ ಆರೋಪಿತರನ್ನು ಮಾತ್ರ ದೋಷಮುಕ್ತಮಾಡಿ, ಉಳಿದ ೨೩ ಜನರನ್ನು ಅಪರಾಧಿಗಳೆಂದು ನಿರ್ಣಯಿಸಿ, ೧-೩-೩ ವರ್ಷಗಳ ಸಕ್ರಮ ಕಾರಾಗೃಹದ ಶಿಕ್ಷೆಯನ್ನು ವಿಧಿಸಿರುವರು. ಈ ನಿರ್ಣಯದಿಂದ ೨೩ ನಿರಪರಾಧಿ ದೇಶಭಕ್ತರಿಗೆ ಅನ್ಯಾಯವಾಯಿತೆಂದು ಹೇಳಲು ನಮಗೆ ಅತ್ಯಂತ ವ್ಯಸನವಾಗುತ್ತದೆ.

ಕರ್ನಾಟಕವು ಮುಂಬಯಿ ಇಲಾಖೆಯೊಳಗೆ ತೀರ ಹಿಂದುಳಿದ ಪ್ರಾಂತವೆಂದು ಹೆಸರುಗೊಂಡಿತ್ತು. ಅದರೊಳಗೆ ಹೊಸ ರಾಜಕೀಯ ಚೇತನೆಯು ಸಂಚರಿಸಹತ್ತಿದೆಂದು ಕಂಡುಹಿಡಿಯಲಿಕ್ಕೆ ಅಳರಸರ ದಬ್ಬಾಳಿಕೆಯ ಪ್ರಮಾಣವೇ ಸಾಧನವೆಂದು ಮಾರ್ಮಿಕ ಇತಿಹಾಸಕಾರರು ತಿಳಿಯುವರು. ಈ ದೃಷ್ಟಿಯಿಂದ ನೋಡಿದರೆ, ಈಗಾದ ಅನರ್ಥಕರ ಪರಿಣಾಮ

ವೆಲ್ಲ ಸಾಹಜಿಕವೇ [illegible] ಸಿದ್ಧಾಂತ (ಪ್ರಾಂತ ದ ರಾಜಕೀಯ ಅ[illegible] [illegible] ಶಿಳೆಕೆಯ ದಿವ್ಯದಿಂದ ಯಶಸ್ವಿ [illegible] ಹೊರ್ತು ಪೂರ್ಣವಾಗಿ ಕೊನೆಗೊಂಡಿದ್ದಾಗ, ಕರ್ನಾಟಕವಾದರೂ ಈ ಸಿದ್ಧಾಂತಕ್ಕೆ ಅಪವಾದಕವ್ವ ಹ್ಯಾಗಾಗುವದು? ಈ ದಿವ್ಯದೊಳಗಿಂದ, ಶಾಂತತೆಯಿಂದ ಪಾರಾಗುತ್ತ ಇಕ್ಕಟ್ಟಿನ ಮತ್ತು ಕಂಟಕಮಯ ಸಂದರ್ಭದೊಳಗೆ ನಾವಿಗ ಇದ್ದೇವೆಂಬ ಸಂಗತಿಯುಷ್ಟು ನಿಜವು ಬಂದ ಎಡರುಗಳಿಗೆ ಎದುರಾಗಿ, ಚಿತ್ತವೃತ್ತಿಯನ್ನು ವಿಚಲವಾಗಗೊಡದೆ ಅತ್ಯಾಚಾರಿತನದಿಂದ ಈ ಕಠಿಣ ಕಾಲವನ್ನು ನಾವ್ವ ಕಳೆದರೆ ಗದ್ದ[illegible] ತ್ತ ಆದಕಾರಣ ಕರ್ನಾಟಕದೊಳಗಿನ ಜನತೆಯು ಕೂಡ ಇಂಥ ಮನಸ್ಸಂತಾಪವನ್ನುಂಟುಮಾಡುವ ಎಷ್ಟೇ ಅನತ್ತಿ[illegible] ಸಂಭವಿಸಿದರೂ ಸತ್ವವೃತ್ತಿಯನ್ನು ಬಿಡಬೇಡಿರಿ, ಅಹಿಂಸ ಧರ್ಮವನ್ನು ಪರಿಪೂರ್ಣವಾಗಿ ನಿರ್ಧರದಿಂದ ಪಾಲಿಸಿರಿ ಎಂದು ಕರಗೂತ್ತಿ ಬೇಡುವೆವ

ಇನ್ನು ನ್ಯಾಯಾಧೀಶ ಪ್ರಾಟಿನವರು [illegible] ಬರು ತಮ್ಮ ಮುಂದಿ ಬಂದ ಪುರಾವೆಯನ್ನು ಆಧರಿಸಿ ಯುಕ್ತ ಕಂಡ ನ್ಯಾಯವನ್ನು ಕ[illegible]ಟ್ಟಿದ್ದಾರೆಂದು ನಾವ್ವ ಬಲ್ಲೆವ ಅರೋಪಿತರು ತಮ್ಮ ಜವಾಬಿನೊಳಗೆ [illegible] ಬೇರೆ [illegible] ಂದ ತಮ್ಮ ನಿರಪರಾಧಿತನವನ್ನು ಕೋರ್ಟಿನ [illegible] ಮನಗಾಣಿಸಲಿಕ್ಕೆ ಸಕಾರಣವ ೧ ಇದ್ದಿಸ ಬಿದ್ದ ವ [illegible] ಕ, [illegible] ಗೆ ಇದ್ದ [illegible] ನ್ಯಾಯ ಕೇಳಲಿಕ್ಕ [illegible] ಪಿತರಿಂದ [illegible], ನಾವ್ವ ಬಲ್ಲೆವೆವ [illegible] ಗಿ ಈ ಮಹತ್ವದ ಕಸಲೆಯಲ್ಲಿ ಅರೋಪಿತರ [illegible] ನಿರ್ಣಯವಾ[illegible] ವದಕ್ಕಿಂತ ನ್ಯಾಯಾಧೀಶರ ಪರೀಕ್ಷೆಯು [illegible] ರಣೆಯೇ ಇದ್ದೀತೆಂದು ಜನರು [illegible] ಯುತ್ತಿದ್ದರು ದುರ್ದೈವದಿಂದ ನಿರಪರಾಧಿಗಳಿಗೆ ಕಾಯಿದೆಯಂತೆ ಶಿಕ್ಷೆ ವಿಧಿಸುವ ತೀರ್ಪನ್ನು ಕೊಡುವ ಪ್ರಸಂಗವು ಅನಿವಾರ್ಯವಾಗಿ ಅವರಮೇಲೆ ಬಂದದ್ದಕ್ಕಾಗಿ [illegible] ಬಂದು ದೃಷ್ಟಿಯಿಂದ ನ್ಯಾಯಾಧೀಶರಿಗೆ ಸಹಾನುಭೂತಿಯನ್ನು [illegible] ಕೋರ್ಟಿನ ತನಿಖೆ ಸಿಡ ಸಾಕ್ಷಿದಾರರನ್ನು ಕಂಡರೆ, ಅವರಿಗೆ ವಸ್ತುಸ್ಥಿತಿಯುಮೇಲೆ ಮತ್ತೂ ಪೆಟ್ಟಿನ ಪ್ರಕಾಶವು ಬಿದ್ದದ್ದು ಕಣ್ಣಿಗೆ ಬೀಳುವ ಸಂಭವವಿತ್ತು. ಸರಕಾರೀ ತ[illegible] ನ ಪುರಾವೆಗಳೊಳಗಿನ ದೊಡ್ಡ ದೊಡ್ಡ ಕಲ್ಲುಗಳನ್ನು ಒಡೆದು ನೋಡಿದ್ದರೆ, ಗಡಿಯೊಳಗಿದ ಮಣ್ಣುಗಳನ್ನು ಮತ್ತೂ ಸೂಕ್ಷ್ಮವಾಗಿ ನೋಡಿದ್ದರೆ, ಪೋಲೀಸರ ಕುಶಲತೆಯ [illegible] ಕರಿಯಿಂದ ಅರೋಪಿಗಳ ನಿರಪರಾಧಿತನದ ಸುತ್ತುಮುತ್ತಲು ಕಟ್ಟಿದ ತಟ್ಟಿಗಳನ್ನು ಮತ್ತಿಷ್ಟು ಬಿಚ್ಚಿ ನೋಡಿದ್ದರೆ, ಅರೋಪಿತರಿಗೆ ಸಂಶಯದ ಫಾಯದೆಯನ್ನಾದರೂ ಕೊಟ್ಟು ಬಿಡುಗಡೆ ಮಾಡಲಿಕ್ಕೆ ನ್ಯಾಯಾಧೀಶರಿಗೆ ಸ್ವಭಾವಿಕವೆಂಬ ಮಾತು ನಿಜವು. [illegible] ಗಿದ್ದರೆ ಇಂಥ ಉಪಾಯಗಳ ಅವಶ್ಯಕತೆಯು ಅವರ ನ್ಯಾಯಬುದ್ಧಿಗೆ ತೋಚದಿದ್ದರೆ, ಅದಕ್ಕಾಗಿ ಅವರಿಗೆ ದೂಷಣೆ ಕೊಡುವದು ನ್ಯಾಯ್ಯವಾಗದೆಂದು ನಮ್ಮಿಂದ ಹೇಳಲಿಕ್ಕಾಗದು ಪ್ರಪಂಚ ಈ ಮಹತ್ವದ ಮೊಕದ್ದಮೆಯಲ್ಲಿ ನ್ಯಾಯವಾಗಿದೆ, ಅನ್ಯಾಯವಾಗಿದೆ ಎಂದು ಅಲಂಕಾರಿಕ ರೂಪದಿಂದ ಹೇಳಬೇಕಾಗಿದೆ ನ್ಯಾಯವಾದದ್ದೆಂಬುದು ನ್ಯಾಯಾಧೀಶರ ಕಾಯಿದೆಯ ದೃಷ್ಟಿಯಿಂದ ಮತ್ತು ಅನ್ಯಾಯವಾದದ್ದೆಂಬುದು ಸತ್ಯವನ್ನರಿತ ಲೋಕಮತದ ದೃಷ್ಟಿಯಿಂದ ನಮಗೆ ಬೇಕಾದದ್ದು ಸ್ಥಿತಿಯ ನಿರ್ಣಯವು ಅದೇ ದೃಷ್ಟಿಯಿಂದ ಮಾತ್ರ [illegible] ಯವ [illegible] ಮಹದನ್ಯಾಯವಾಯಿತು ಎಂದು ಹೇಳುವೆವ

ಸತ್ಯಸ್ಥಿತಿಯನ್ನರಿತುಕೊಳ್ಳ[illegible] ಇನ್ನು ಜಸ[illegible] ಸರಕಾರಿ [illegible] ಮುಕೋರ್ಟಿನಲ್ಲಿ ನಡೆದ ಕಸಲೆ [illegible] ತೀರ್ಪು ಇವುಗಳ ಸ್ವ[illegible] ವಲಂಬಿಸಿ ಕಡೆಯವದು ಅವಶ್ಯಕವಾಗಿಲ್ಲ [illegible] ಕಾರ್ಯಕಾರಿ ಮಂಡಳಿಯ ನೇಮಿಸಿದ ಶ್ರೀ ಅಬ್ಬಾಸ ತ್ಯಾಬಜೀ, ಶ್ರೀ ನೆಟಲಡ[illegible] ಶ್ರೀ [illegible] ಈ ಮೂರು ಕಾ[illegible] ಕಮಿಟಿಯಿಂದ [illegible] [illegible] ಈ [illegible] ಕಮಿಟಿಯು [illegible] [illegible] ಕಶಿಯು [illegible] ತೀರ [illegible] ತೀರ್ಪಿನಿಂದ ತಮ್ಮ [illegible] ರುವ [illegible] [illegible] ಬಾತ್ಮೀದಾರದಯಲ್ಲಿ [illegible] ತ್ತಿ[illegible] ರುವೆವು ಇಕ್ಕಣ್ಣಿನ ನ್ಯಾಯವನ್ನು ಕೂಡಲಿಕ್ಕೆ ಈ ಕಮಿಟಿಯು ಎಷ್ಟು ಮನಃಪೂರ್ವಕವಾಗಿ ಯತ್ನಿಸಿದೆಂದ ಅವರ ಸೂಕ್ಷ್ಮ [illegible] ವಿಚಾರದಿಂದ ಹೊರಡಿಸಿದ ತೀರ್ಪುಗಳೇ [illegible] ತ್ತಿರುವವು ಇವುಗಳ ಇತ್ಯರ್ಥವಿಷ್ಟೇ — ೨೭ ಜನ ಅರೋಪಿತರೊಳಗೆ, ೨೫ ಮಂದಿಯಂತೂ ದಂಗೆಯಲ್ಲಿ ಎಂದೂ ಸೇರಿರಲಿಲ್ಲ ಎರಡು ಮಂದಿ ಸ್ವಯಂಸೇವಕರು ಮಾತ್ರ ಪಿಕಟಿಂಗದ ದೆಸೆಯಿಂದ ಅಲ್ಲಿ ಹಾಜರಿದ್ದರೂ, ಅವರು ಸಹ ಯಾವ ತರದ ಅತ್ಯಾಚಾರದಲ್ಲಿಯೂ ತೊಡಗಿದ್ದರೆಂದು ಹೇಳಲು ಪುರಾವೆಯಿಲ್ಲ ಕರ ಅಂಗಡಿ ಮುಂದೆ ದಂಗೆ ನಡೆಸಬೇಕೆಂಬ ಪೂರ್ವ ಯೋಜನೆಯಿಂದ, ಇಲ್ಲವೆ ತಾತ್ಕಾಲಿಕ ಉದ್ದೇಶದಿಂದ ಜನರು ನೆರೆದಿದ್ದರೆಂಬ ಸಂಗತಿಯು ಮಾಡಲಿ ನಿರಾಧಾರವಾಗಿದೆ ಕೋರ್ಟಿನ ಮುಂದೆ ಬಂದ ಪುರಾವೆಯು ಪೋಲೀಸರು ಮಾಡಿದ ಗೋಳೀಬಾರದ ಸಮರ್ಥನೆಗಾಗಿ ನಿರ್ಮಿಸಲ್ಪಟ್ಟಿದೆಂದು, ಬಲವತ್ತರ ಸಂಶಯವಿದೆ ಶಿವಲಿಂಗಪ್ಪ ಫೌಜದಾರನು ಗುಂಡು ಹಾರಿಸಲಿಕ್ಕೆ ಕೊಟ್ಟ ಹುಕುಮಿಗೆ ನಿಜವಾಗಿ ಅವಶ್ಯಕತೆಯು ಅಪಾರವಿತ್ತೆಂದು ಸಿದ್ಧವಾಗಿ ತೋರುವದಿಲ್ಲ ಗೋಳೀಬಾರವನ್ನು ಅತಿಶಯವಾಗಿ ಮಾಡಿದ್ದು ಬರೇ ಶಾಂತತೆಯ ರಕ್ಷಣೆಗಾಗಿ ಆಗಿತ್ತೆಂದು ತಿಳಿಯಲಾಗದು. ಜನರಿಗೆ ಬುದ್ಧಿ ಕಲಿಸಬೇಕೆಂಬ ಉದ್ದೇಶದಿಂದ ಅದಷ್ಟು ಪ್ರಖರವಾಗಿತ್ತೆಂದು ಅನುಮಾನಿಸಬೇಕಾಗಿದೆ ಒಟ್ಟಿಗೆ ಊರೊಳಗಿನ ದೊಡ್ಡ ದೊಡ್ಡ ಸುಶಿಕ್ಷಿತ ಸದ್ಗೃಹಸ್ಥರ ಪ್ರತ್ಯಕ್ಷಾಪ್ರತ್ಯಕ್ಷ ಪುರಾವೆಯಿಂದ ಎಲ್ಲ ಅರೋಪಿತರು ನಿರ್ದೋಷಿಗಳಾಗಿದ್ದು, ಫೌಜದಾರನ ಹುಕುಮಿನಿಂದಾದ ಗೋಳೀಬಾರವು ಅಸಮರ್ಥನೀಯವೂ, ಅನಾವಶ್ಯಕವಾಗಿ ಪ್ರಖರವೂ ಆಗಿರುತ್ತದೆ ಮತ್ತು ಘಾಯವಾಗಿ ಬಿದ್ದ ಜನರಿಗೆ ಮದ್ದತು ಮಾಡಬೇಕೆಂದು ಕಿಟಸನ ದೀಪವನ್ನು ತಕ್ಕೊಂಡು ಬಂದ ಜನರಮೇಲೆ ಗುಂಡು ಹಾರಿಸಿದ್ದಂತೂ ತೀರ ಪಶುತುಲ್ಯವೂ, ಕೇವಲ ನಿಷ್ಕಾರಣವೂ ಆಗಿದ ಈ ರೀತಿಯಲ್ಲಿ ಕಮಿಟಿಯವರು ಅಭಿಪ್ರಾಯಪಟ್ಟಿರುವರು. ಈ ನಿರ್ಣಯವನ್ನು ಓದಿ ನಿರಪರಾಧಿಗಳಿಗೆ ಸಕ್ತ ಮಜೂರಿಯ ತುರಂಗವಂಥ ಅಸಹ್ಯವಾದ ಶಿಕ್ಷೆಯಾದದ್ದನ್ನು ನೋಡಿ, ಯಾವ ಸಹೃದಯ ವಾಚಕರು ಮರುಗವರರು? 'ಯಾವನೇ ಸುಳ್ಳು ಬಟ್ಟೆಯು ನಾಬೀತಿಗಾಗಿ ಯಾವ ಸಮಾಜದಲ್ಲಿ ನೂರಾರು ಸಾಕ್ಷಿದಾರರು ಸಿಗುವರೋ, ಆ ಸಮಾಜದಲ್ಲಿ ಇರುವದಕ್ಕಿಂತಲೂ ದೂರದಲ್ಲಿರುವ ಒಂದು ಕಾರಾಗೃಹದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ [illegible] ಅಪರಾಧಿಗಳ ಸಹವಾಸವು ಹೆಚ್ಚು ಒಳ್ಳೆಯದು.' ಎಂದು ಸರಕಾರೀ ಕೋರ್ಟಿನೊಳಗಿನ ವಿಚಾರಣೆಯನ್ನು ಅವಲೋಕಿಸಿ ನಿರಾಶೆಯಿಂದ, ಈಗ ನಿರ್ದೋಷಿಯಾಗಿ ಬಿಡುಗಡೆ ಹೊಂದಿದ ಶ್ರೀ ದಿವಾಕರರವರು ಉದ್ಗರಿಸಿದ್ದು ಎಷ್ಟು ಯಥಾರ್ಥವದೆಂದು ಸಹಜವಾಗಿ ಕಂಡುಬರುತ್ತದೆ

ಸೆಶನ ಜಡ್ಜರ ನಿರ್ಣಯವೂ ಕಾಂಗ್ರೆಸ ಕಮಿಟಿಯ ನಿರ್ಣಯವೂ ಅಜಗಜಾಂತರವಾಗುವಷ್ಟು ತೀರ ಭಿನ್ನವಾಗಿದ್ದಾಗ, ನ್ಯಾಯಾಧೀಶರ ತೀರ್ಪಿನಿಂದ ಸತ್ಯದ ನಿರ್ಣಯವಾಯಿತೆಂದು ಲೋಕಮತವು ಮನಗಾಣದು. ಸದ್ಯಕ್ಕಂತೂ, ಈ ಖಟ್ಲೆಯಲ್ಲಿ ಮಹದನ್ಯಾಯವಾಗಿದೆಂದು ನಂಬಿ, ಜನರ ಸಾತ್ವಿಕ ಮನೋಭಾವನೆಗಳಿಗೆ ಸಹ ಅಸಹ್ಯವಾದ ವೇದನೆಗಳಾಗುತ್ತವೆಂದು ಲೋಕಮತದ ಸತ್ಯಸ್ಥಿತಿಯನ್ನು ತಿಳಿಸದೆ ಬಿಟ್ಟಿಷ್ಟು ಸರಕಾರದವರಿಗೆ ವಂಚಿಸುವದು ನಮ್ಮ ಧರ್ಮವಲ್ಲ ಫೌಜದಾರನ ಗೋಳೀಬಾರದ ಅನಶ್ಯಕತೆಯನ್ನೂ ಬಂಗೆಯ ಸತ್ಯಾಸತ್ಯತೆಯನ್ನೂ ಅರೋಪಿಗಳ ಅಪರಾಧತೆಯನ್ನೂ ಲೋಕಮತಕ್ಕೆ ಮನಗಾಣಿಸುವಂತೆ, ಇನ್ನೂ ಸಿದ್ಧಪಡಿಸುವದಿದ್ದರೆ, ಈ

ಉಪಕ್ರಮವು ಮುಂಬಯಿ ಸರಕಾರಕ್ಕೆ ಹೊಂದಿಯದೆ ವಿನ್ ಸರಕಾರಿ ಬಹುಮತದ ಸರಕಾರಿ ಕಮಿಶನನ್ನು ನೇಮಿಸಿ, ಧಾರವಾಡದ ಗೋಳಿಬಾರದ ವ್ಯಾಪಕ ಚವಕಶಿಯನ್ನು ವಿಲಂಬ ಮಾಡದೆ ನಡಿಸಲೇ ಬೇಕು. ಅಂದರೆ ಸತ್ಯವು ಮಾತ್ರ ಬೈಲಿಗೆ ಬರುವ ಹಾಗಿದೆ. ಇಂಥ ಸ್ವತ್ಯ ಮತ್ತು ನ್ಯಾಯ್ಯ ಉಪಕ್ರಮವನ್ನು ಸರಕಾರವು ಆದರಿಸುವದೇನು ?

ಸ್ಫುಟ ಸೂಚನೆಗಳು.

೧ ಹೊನ್ನಾವರದ ಕೆಲವು ಮುಖಂಡರಮೇಲೆ ಜಾರಿ ಮಾಡಿದ ಮುಖಬಂದಿ ಹುಕುಮನ್ನು, ಶ್ರೀ। ಮಹಾಬಲೇಶ್ವರ ಪಾಂಡುರಂಗ ನಾತಕರ್ಣಿಯವರ ಹೊರತು, ನಾಲ್ಕು ದಿವಸಗಳಲ್ಲಿಯೇ ತಿರುಗಿ ತೆಗೆದುಕೊಳ್ಳುವದೇ ಶ್ರೇಯಸ್ಕರವೆಂತ ತಿಳಿದ ನಮ್ಮ ಡಿ। ಮಾ। ಮಿ। ಹೇಗ ದೊರೆಗಳಿಗೆ ನಾವು ಆಭಾರಿಯಾಗಿರುವೆವು. ಅಲ್ಲಿಯ ಪರಿಸ್ಥಿತಿಯು ನಾಲ್ಕು ದಿವಸಗಳಲ್ಲಿಯೇ ರೂಪಾಂತರ ಪಡೆಯಿತೇನು ? ಅದರಿಂದಲೇ ಹೊನ್ನಾವರದ ಮೊದಲನೇ ಕ್ಲಾಸಿನ ಮಾಜಿಸ್ಟ್ರೇಟ ಸಾಹೇಬರು ಆ ಹುಕುಮನ್ನು ಹೊರಡಿಸುವದರಲ್ಲಿ ದೊಡ್ಡ ತಪ್ಪು ಮಾಡಿರುವರೆಂದು ಸ್ಪಷ್ಟವಾಗುವದಿಲ್ಲೇನು ? ಸ್ಥಾನಿಕ ಒಮಾಲಿದಾರ ಅಧಿಕಾರಿಗಳ ಇಂಥ ವರ್ತನವು ಸುಖ ಶಾಂತತೆಗೆ ವಿಧಾಯಕವೋ, ವಿಘಾತಕವೋ ? ಇನ್ನು ಇಂಥ ಮಹತ್ವದ ಪ್ರಸಂಗದಲ್ಲಿ ನ್ಯಾಯಾಧೀಶರು ತಮ್ಮ ಅಧಿಕಾರದ ದುರುಪಯೋಗ ಮಾಡಿದರೆ, ಅವರು ಅಪರಾಧಿಗಳಲ್ಲವೇನು? ಮತ್ತು ಈ ಜಿಲ್ಲೆಯೊಳಗಿನ ನ್ಯಾಯದ ಮತ್ತು ಶಾಂತತೆಯ ಸಲುವಾಗಿ ಅವರು ಶಿಕ್ಷೆಗೆ ಪಾತ್ರರಿಲ್ಲವೇನು ? ಅವರು ತಗೆದ ಜಾಹೀರನಾಮೆಯಲ್ಲಿ ಯಾವ ಕಾಯಿದೆ ಕಲಮಿನನ್ವಯ ಹುಕುಮು ಮಾಡಿದ್ದೆಂದೇನು ನಮೂದ ಮಾಡಿಲ್ಲ. ಅದರ ಭಂಗವಾದರೆ ಯಾವ ಶಿಕ್ಷೆಗೆ ಗುರಿಯಾದಾರೆಂಬುದು ಸಹ ಅವರು ಜಾಹೀರಮಾಡಿಲ್ಲ ಕಾಯಿದೆಗೆ ಇದು ಮಾನ್ಯವೋ ? ಈ ವಿಷಯಗಳು ಮು। ಡಿ। ಮಾ। ಸಾಹೇಬರಿಗೆ ಅನ ಮಾನಕರವೆಂತ ಕಂಡರೆ, ಸಾರ್ವಜನಿಕ ಲೋಕಮತದ ವಿಶ್ವಾಸವನ್ನು ಕಾಪಾಡುವದಕ್ಕಾಗಿಯೂ, ನ್ಯಾಯಾಧೀಶರ ವರ್ತನದ ಬಗ್ಗೆ ಸಕ್ತ ಚೌಕಶಿ ಮಾಡುವ ಬಗ್ಗೆ ಮುಂಬಯಿ ಸರಕಾರಕ್ಕೆ ಅವರು ಬರೆಯಬೇಕಾಗಿ ಸವಿನಯ ಸೂಚಿಸುವೆವು

೨. ಈ ವರೆಗೆ ಈ ಜಿಲ್ಲೆಯಲ್ಲಿ ರಾಜದ್ರೋಹದ ಮೊಕದಮೆಗಳ ವಿಚಾರವೇನು ಆಗಿದ್ದಿಲ್ಲ ಮಿ॥ ಹಾಂಟಿಂಗ್ಟ ಸಾಹೇಬರ ಕಾರಕಿರ್ದಿಯಲ್ಲಿ ಅಂಥದೊಂದು ಮೊಕದಮೆಯು ಅವರ ಮುಂದೆ ಬಂದಿತ್ತು. ಆದರೆ, ಅವರು ತಮ್ಮ ಧೀರೋದಾತ್ ನ್ಯಾಯಪ್ರಿಯತೆಯಿಂದ ಆರೋಪಿಯನ್ನು ಬಿಡುಗಡೆಮಾಡಿ, ಈ ಜಿಲ್ಲೆಯು ರಾಜದ್ರೋಹದಿಂದ ಅಲಿಪ್ತವದೆಂದು ಶರಾ ಕೊಟ್ಟಿದ್ದರು. ಆದ್ದರಿಂದ ಮೌಲಾನಾ ಹಬಿಬುಲ್ಲಾ ಖಾನರ ವಿರುದ್ಧ ಈಗ ನಡೆಯುವ ಕಲಂ ೧೨೪ (ಅ) ದರ ಮೊಕದಮೆಯು ನಮ್ಮ ಕಾನಡಾ ಜಿಲ್ಲೆಯಲ್ಲಿ ಮೊದಲನೇ ರಾಜಕೀಯ ಖಟ್ಲೆಯಾಗಿರುವದು ಈ ಜಿಲ್ಲೆಯಲ್ಲಿ ಅವರು ಮಾಡಿದ ಭಾಷಣಗಳ ಸಂಬಂಧ ಅವರು ಅಪರಾಧಿಗಳಾಗಿ ಮಾಡಲ್ಪಟ್ಟಿರುವರಂತೆ ! ಅವರು ಅಸಹಕಾರಿಗಳಿದ್ದದರಿಂದ, ಅವರಮೇಲಣ ಈ ವಿಚಾರಣೆಯಲ್ಲಿ ಅವರು ಏನೂ ಭಾಗ ತಕ್ಕೊಳ್ಳಬಾರದೆಂದು ಸಂಕಲ್ಪ ಮಾಡಿರುವರಂತೆ ! ಅವರು ಸ್ವಲ್ಪ ಬೇನೆಯಿಂದ ಪೀಡಿತರಾಗಿದ್ದವರು ಈಗ ಸ್ವಲ್ಪ ಗುಣಹೊಂದಿರುತ್ತಾರೆ. ನೂತನವಾಗಿ ೧೨೪ (ಅ) ದಂತೆ ವಿಚಾರಮಾಡುವ ಅಧಿಕಾರ ಪಡೆದ ಶ್ರೀ। ಕೊಯಿಮುತ್ತೂರಸಾಹೇಬರು ಈ ಖಟ್ಲೆಯ ವಿಚಾರ ಮಾಡುವರ . ಈ ಮಹತ್ವದ ಮೊಕದಮೆಯಲ್ಲಿ ಆರೋಪಿಗೆ ಅವರು ನ್ಯಾಯ ಕೊಡುವರಾಗಿ ನಂಬುವೆವು ಅಸಹಕಾರಿಗಳಮೇಲೆ ಖಟ್ಲೆಮಾಡಿ ಕೊಡುವ ಸರಕಾರದ ಜವಾಬದಾರಿಯು ಇಮ್ಮಮ್ಮಿ ದ್ವಿಗುಣಿತವಾಗುತ್ತದೆ. ಯಾಕಂದರೆ ಆರೋಪಿತರು ತಮ್ಮನ್ನು ಕಾಪಾಡಿಕೊಳ್ಳಲಿಕ್ಕೆ ಯತ್ನಿಸದ್ದ, ನ್ಯಾಯಿದೆಗೆ ಸರಿಯಾಗಿ ನ್ಯಾಯ ಕೊಡಲಿಕ್ಕೆ ಬಲು ತೊಂದರೆ ಮಾಡುತ್ತಾರೆ. ಆದ್ದರಿಂದ ಇಂಥ ಖಟ್ಲೆಗಳಲ್ಲಿ ನ್ಯಾಯಾಧೀಶರ ಜವಾಬದಾರಿಯು ಶೀರ ದೊಡ್ಡದು. ಯಾಕ ಪರೆ, ಆರೋಪಿಯು ನಿಃಸಂಶಯವಾಗಿ ಅಪರಾಧಿಯೆಂದು ನ್ಯಾಯಾಧೀಶರು ಲೋಕಮತಕ್ಕೆ ಮನಗಾಣಿಸಬೇಕಾಗುತ್ತದೆ

೩ ಸಪ್ಟಂಬರ ತಿಂಗಳಂತೂ ಮುಗಿಯಿತು. ಅಖಿಲ ಭಾರತೀಯ ಕಾಂಗ್ರೆಸು ಕಮಿಟಿಯ ಆಜ್ಞೆಯಂತೆ, ಭಾರತಪುತ್ರರು ಸ್ವದೇಶಿಯ ಪ್ರಚಾರವನ್ನು ಪ್ರಚಂಡವಾಗಿ ಸಾಗಿಸಿರುವರು ಪ್ರಗತಿಯು ಸಮಾಧಾನಕರವಿದೆಂದು ಮಹಾತ್ಮರು ಅಭಿಪ್ರಾಯ ಪಟ್ಟಿರುವರು ಆದರೆ ಅದು ಪ್ರಚಲಿತ ರಾಜ್ಯಪದ್ಧತಿಯನ್ನು ನಿರ್ಮೂಲಿಸಿ ಸ್ವರಾಜ್ಯ ಸ್ಥಾಪನೆಗೆ ಬೇಕಾಗುವನ್ನು ಪಸರಿಸಿಲ್ಲೆಂದು ಮಹಾತ್ಮರು ಹೇಳುತ್ತಾರೆ ಇದು ಅಯಥಾರ್ಥವೆಂದು ಯಾರು ಹೇಳುವರು? ಕಳೆದ ೩೦ ನೇ ತಾರೀಖಿಗೆ ಬಹಿಷ್ಕಾರವು ಸಂಪೂರ್ಣವಾಗಬೇಕು, ಎಲ್ಲರೂ ವಿದೇಶಿ ಅರಿವೆಯ ಮಾಯೆಯಿಂದ ಮುಕ್ತರಾಗಬೇಕೆಂದು ಮಹಾತ್ಮರ ಆಜ್ಞೆಯಿತ್ತು. ಅದನ್ನು ಯಾರ್ಯಾರು ಎಷ್ಟೆಷ್ಟು ಮನ್ನಿಸಿರುವರೆಂದು ತಮ್ಮಷ್ಟಕ್ಕೆ ವಿಚಾರಿಸಿ, ಆತ್ಮನಿರೀಕ್ಷಣೆ ಮಾಡಿದರೆ, ಮಹಾತ್ಮರ ಆಜ್ಞೆಯಿಂದ, ಭಾರತಮಾತೆಯ ಹೆಸರಿನಲ್ಲಿ ಕೊಟ್ಟ ಅಖಿಲ ಭಾರತೀಯ ಕಾಂಗ್ರೆಸ-ಕಮಿಟಿಯ ಹುಕುಮಿನಿಂದ, ವೃ ಎಷ್ಟರ ಮಟ್ಟಿಗೆ ಮುಕ್ತರಾಗಿರುವೆವೆಂದು ತಿಳಿಯುವದಾಗಿದೆ. ಸ್ವದೇಶೀ ಕಾರ್ಯದಲ್ಲಿ ಮಹಾತ್ಮರಂತೂ ಪರಮಾವಧಿಯ ತ್ಯಾಗವನ್ನು ಮಾಡಲುದ್ಯುಕ್ತರಾಗಿರುವರು ಕಳೆದ ತಾ। ೨೨ ನೇಯಿಂದ ಅವರು ಕಚ್ಚೆಯನ್ನುಟ್ಟು, ಮೇಲೆ ಸಣ್ಣ ಪಂಜಿಯನ್ನು ಸುತ್ತಿಕೊಂಡು, ತಾನು ದಿನಗಳೆಯುವೆನೆಂದು ಅವರು ಪ್ರತಿಜ್ಞೆ ಮಾಡಿ, ಅದನ್ನು ಅಮಲಿನಲ್ಲಿ ತಂದಿರುವರು. ಈ ಬಗ್ಗೆ ಅವರ ವಿಚಾರಗಳೇನಿರುತ್ತವೆ ? ಅವರು ಪೋಷಾಖಿನಲ್ಲಿ ಕ್ರಾಂತಿಕಾರಕ ಫೇರಫಾರುಗಳನ್ನು ಮಾಡುವ ಕಾರಣವೇನ ? ಎಂಬ ಸಂಗತಿಗಳು ವಾಚಕರಿಗೆ ಸರಿಯಾಗಿ ತಿಳಿಯಬೇಕೆಂದು, 'ನನ್ನ ಕಚ್ಚೆ' ಎಂಬ ನವಜೀವನದೊಳಗಿನ ಅವರ ಲೇಖವನ್ನು ಭಾಷಾಂತರಿಸಿ ಕೊಟ್ಟಿರುವೆವು ಅದನ್ನು ಮನನಮಾಡಿ, ವಾಚಕರು ಖಾದಿಯನ್ನು ಪೈದಾಸು ಮಾಡುವದರಲ್ಲಿಯೂ, ಧರಿಸುವದರಲ್ಲಿಯೂ ತನುಮನಧನದಿಂದ ಸಹಾಯಮಾಡುವರೆಂದು ಹಂಬಲ ಕೋರಿಕೆಯಿದೆ. ಕಳೆದ ತಾರೀಖು ೪ ನೇ ಬುಧವಾರಕ್ಕೆ ನೆರೆದ ರಾಷ್ಟ್ರೀಯ ಸಭೆಯ ಕಾರ್ಯಕಾರೀ ಮಂಡಳವು ಸಹ ಸ್ವದೇಶೀ-ಬಹಿಷ್ಕಾರದ ಸಂಬಂಧ ಎಲ್ಲ ಕಾಂಗ್ರೆಸು ಕಮಿಟಿಗಳಿಗೆ ಜಾಹಿರ ಅಪ್ಪಣೆಯನ್ನು ಕೊಟ್ಟಿರುವದು ಈ ಅಪ್ಪಣೆಗನುಸರಿಸಿ ಜನರೂ, ಕಮಿಟಿಗಳೂ ... ಪ್ರಯತ್ನದಿಂದ ಕೆಲಸಮಾಡಿ, ವಿದೇಶೀ ಅರಿವೆಯ ಬಹಿಷ್ಕಾರವನ್ನು ಈ ತಿಂಗಳ ಅಖೈರೊಳಗೆ ಪೂರ್ಣವಾಗಿ ನೆರವೇರಿಸಿ, ಮಹಾತ್ಮರ ಇಚ್ಛೆಯನ್ನು ... ಪೂರೈಸಿದ ಶ್ರೇಯಸ್ಸನ್ನೂ, ದೇಶೋದ್ಧಾರದ ದಾರಿಯನ್ನು ಸುಕರ ಮಾಡಿದ ಪುಣ್ಯವನ್ನೂ, ಸ್ವರಾಜ್ಯ ಸಂಸ್ಥಾಪನೆಗೆ ಅವಶ್ಯವಾಗಿರುವ ಪ್ರಧಾನ ಅಂಗವನ್ನು ಸಾಧಿಸಿದ ಶ್ರೇಯಸ್ಸನ್ನೂ ಸಂಪಾದಿಸಬೇಕೆಂದು ನಮ್ಮ ಆಗ್ರಹದ ವಿನಂತಿಯದೆ.

೪ ಮುಂಬಯಿ ಸರಕಾರದ ತಾ ೧೫ ಸಪ್ಟಂಬರದ ಪ್ರಸಿದ್ಧ ಪತ್ರಿಕೆಯಲ್ಲೊಳಗೊಂಡ, ಅಲ್ಲಿ ಬಂಧುಗಳನ್ನು ಹಿಡಿದು ಅವರಮೇಲೆ ನಡಿಸಿದ ಖಟ್ಲೆಯ ಕಾರಣಗಳನ್ನು ಲಕ್ಷಿಸಿ, ಅಖಿಲ ಭಾರತೀಯ ಕಾಂಗ್ರೆಸ ಕಾರ್ಯಕಾರಿ ಕಮಿಟಿಯು ಕೂಡಿ ಗೊತ್ತುಪಡಿಸಿರುತ್ತಾರಲ್ಲ—"ಸರಕಾರದ ಲಷ್ಕರಿ ಯಾ ಮುಲ್ಕಿ ಖಾತೆಯಲ್ಲಿ ನೌಕರಿ ಮಾಡುವದು ಯೋಗ್ಯವೋ ಅಯೋಗ್ಯವೋ ಎಂಬುದರ ಸಲುವಾಗಿ ತಮ್ಮ ತಮ್ಮ ಅಭಿಪ್ರಾಯ ತಿಳಿಸುವದು ಪ್ರತಿಯೊಬ್ಬ ನಾಗರಿಕನಿಗ ಜನ್ಮಸಿದ್ಧ ಹಕ್ಕಿದೆ ಯಾವ ಸರಕಾರದ ರಾಜ್ಯಪದ್ಧತಿಯು ಹಿಂದುಸ್ಥಾನದ ಆರ್ಥಿಕ, ನೈತಿಕ ಮತ್ತು ರಾಜಕೀಯ ಅವನತಿಗೆ ಕಾರಣವಾಗಿದೆಯೋ, ಮತ್ತು ರೌಲೆಟ ಆಕ್ಟಿನ ಅಮಲಬಜಾವಣಿ ವೇಳ್ಯಾ ಜನಿಸಿದ ಉದ್ವೇಗವರ ಚಳವಳಿಯನ್ನು ಮುರಿಬಡಿಯಲಿಕ್ಕೆ ಪ್ರಯತ್ನಿಸಿದಂತೆ, ರಾಷ್ಟ್ರೀಯ ಆಕಾಂಕ್ಷೆಗಳನ್ನು ಮುರಿಬಡಿಯುವ ಉದ್ದಿಶ್ಯ, ಹಾಗೂ ಅರಬ, ಇಜಿಪ್ಶಿಯನ್ ಮತ್ತು ತುರ್ಕ ವಗೈರೆ ಜನರು ಹಿಂದುಸ್ಥಾನದ ವಿರುದ್ಧ ಏನೂ ಕಲಸ ಮಾಡದಿದ್ದರೂ ಅವರ ಸ್ವಾತಂತ್ರ್ಯ ಅಪಹರಿಸುವ ಉದ್ದಿಶ್ಯ, ಭಾರತೀಯ ದಂಡಾಳುಗಳ ಉಪಯೋಗ ಮಾಡುತ್ತದೋ, ಆ ಸರಕಾರದ ಕೈಕೆಳಗಿನ ಮುಲಕಿ ಖಾತೆಯಲ್ಲಿ— ವಿಶೇಷವಾಗಿ ಲಷ್ಕರಿ ಖಾತೆಯಲ್ಲಿ ನೌಕರಿ ಮಾಡುವದು ರಾಷ್ಟ್ರೀಯ ಸ್ವಾಭಿಮಾನಕ್ಕೆ ವಿರೋಧಕವು ಆದ್ದರಿಂದ ಪ್ರತಿ ಹಿಂದಿ ಲಷ್ಕರಿ ವ ಮುಲ್ಕಿ ನೌಕರನು ಸರಕಾರದ ಕಡಿಗಿರುವ ತನ್ನ ಸಮ್ಮಂಧವನ್ನು ತೊರೆದು ಇತರ ಸಾಧನಗಳಿಂದ ತನ್ನ ಉದರಾರ್ಥವನ್ನು ಸಾಗಿಸಬೇಕು " ಇದರಂತೆ ವಿಖ್ಯಾತ ಮುಖಂಡರು ತಮ್ಮ ಸಹಿನಿಸಿ ಜಾಹೀರನಾಮೆಯನ್ನು ಪ್ರಕಟಿಸಿರುವರು ಹಿರಿಯ ರಾಜಕಾರಣವು ಲಾರ್ಡ ರೀಡಿಂಗ ಸಾಹೇಬರ ಆಳಿಕೆಯೊಳಗೆ ಇಷ್ಟು ಇಕ್ಕಟ್ಟಿನ ಪಲ್ಲಿಗೆ ಮುಟ್ಟಿದ್ದು ಶೀರ ವಿಷಾದಕರವು ಇನ್ನಾದರೂ ವಾತಾವರಣವು ಶಾಂತವಾಗುವದೋ ಎಂದು ದೇಶದ ನಿಜವಾದ ಹಿತಚಿಂತಕರಿಗೆ ವಿವಂಚನೆಯಾಗಿದೆ ಸರಕಾರಕ್ಕೆ ತಮ್ಮ ಆಳಿಕೆಯ ಕರ್ತವ್ಯಗಳನ್ನು ನಡಿಸಲೇ ಬೇಕು. ಜನರಿಗೂ ತಮ್ಮ ಜನ್ಮಸಿದ್ಧ ಹಕ್ಕುಗಳಿಗಾಗಿ, ಎಷ್ಟೂ ಸಂಕಟಗಳನ್ನು ಶಾಂತವಾಗಿ ಸಹಿಸಿ, ತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕು ಪರಸ್ಪರ ಕರ್ತವ್ಯಗಳೊಳಗೆ ಈ ದ್ವಂದ್ವ ಯುದ್ಧವು ಎಷ್ಟು ದಿವಸ ಸಾಗುವದೋ ದೇವರೇ ಬಲ್ಲ' ರಾಜಕೀಯ ಕಾದಾಟವಿದ್ದು, ಅದರೊಳಗೆ ನಮ್ಮ ಸತ್ವಶಕ್ತಿಯನ್ನೂ, ಅನತ್ಯಾಚಾರಿತನವನ್ನೂ ಕಾಪಾಡಿಕೊಳ್ಳುವದು ಜನರ ಕೈಯಲ್ಲಿದೆ. ಉಳಿದದ್ದೆಲ್ಲ ಸತ್ತಾಧಿಕಾರಿಗಳ ಕೈಯಲ್ಲಿ.

ನಾನಾ ವೃತ್ತಾಂತ.

ಕುಮಟಾ— [illegible] ಇಂಚು ಬಿತ್ತ [illegible] ಅವಶ್ಯಕತೆ ಎನಿಲ್ಲಾಗಿತ್ತು ಈಗ ಬಿದ್ದ [illegible] ಪೈರು ಅಷ್ಟಬಿದ್ದ ಸ್ವಲ್ಪ ಹಾನಿ ತಪ್ಪಿದೆಂದರೂ ಹೇಳಬಹುದು ರೋಗರಾಯಿ ಇದ್ದಹಾಗೆ ದವಸಧಾನ್ಯಗಳ ಧರಣೆ ತೇಜಿಯಲ್ಲೇ ಇವೆ ಅಕ್ಕಿ ರಾಗಿ—ಭತ್ತ ಪೇಟೆಯಿಂದೀಚೆ ಹೊರ್ತು ಧಾರಣೆ ಕಡಿಮೆಯಾಗುವ ರ [illegible] ತೋರುವದಿಲ್ಲ

ನವರಾತ್ರಿಯ ಸಂಭ್ರಮದ ವಾರ್ಷಿಕವು [illegible] ಭಜನೆ ಕೀರ್ತನೆ ನರ್ತನಗಳಿಂದ ಬಹ ವಿಜೃಂಭಣೆಯಿಂದ ಜರುಗಿದವು

ವಿಜಯಾ ದಶಮಿಯ ದಿವಸ ಶ್ರೀಮತ [illegible] ಯೊಳಗ ಉತ್ಸವವು ಬಾನವಟದ ಮೆರವಣಿಗೆಯಿಂದಲೂ ಸಾಯಂಕಾಲ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸಭೆ ಕೂಡಿ ಶ್ರೀಮದಾಚಾರ್ಯರ [illegible] ವ್ಯಾಖ್ಯಾನದ [illegible]

ಶ್ರೀ ನಾರಾಯಣ [illegible] ಕಾಮತರವರ ಅಧ್ಯಕ್ಷತೆಯ [illegible]

[illegible]

ಕಳೆದ [illegible] ತಾರೀಖಿಗೆ ಮಹಾತ್ಮಾ ಗಾಂಧಿ [illegible] ಜನ್ಮದಿವಸದ [illegible] ಆವರ [illegible]

[illegible]

ಈಗ ಗಣೇಶ [illegible] ಮಕ್ಕಳ [illegible]

ಇಲ್ಲಿನ [illegible] ವಿದ್ಯಾರ್ಥಿಗಳ ವಾರ್ಷಿಕ [illegible]

ಶ್ರೀ [illegible] ವೆಂಕಟ್ರಮಣ [illegible] ಹೊನ್ನಾವರದ [illegible] ಶ್ರೀ ರಾಮಕೃಷ್ಣ ಹರಿ [illegible]

[illegible]

ಹೊನ್ನಾವರ— [illegible] ವಾರ ದಸರೆಯು [illegible] ದೇವಸ್ಥಾನದಲ್ಲಿ [illegible]

[illegible]

ಲೆ ಉಪಯುಕ್ತ ಭಾಷಣವಾದನಂತರ ಅವರ ಕೈಯಿಂದ ಮಗ್ಗ ಚಾಲು ಮಾಡುವ ವಿಧಿಯಾಗಿ ರಾಷ್ಟ್ರಗೀತ ಹೇಳಿ ಸಮಾರಂಭದ ಕೆಲಸವು ಮುಗಿಯಿತು

ಹೊನ್ನಾವರ ಚಹಾದ ಕಾನದಾರರು ಈ ಮೊದಲು ತಮ್ಮತಮ್ಮೊಳಗೆ ಠರಾವು ಮಾಡಿಕೊಂಡ ಪ್ರಕಾರ [illegible] ಯಾರೂ ಚಹಾ [illegible] ಪರದೇಶೀ ಸಕ್ಕರೆ [illegible] ಸಕ್ಕರೆ ಮತ್ತು ಚಹಾ ಉದ್ಯೋಗ ಮಾಡಬಾರದು [illegible] ಠರಾವು ಮಾಡಿದರು [illegible] ತಮ್ಮ ಹತ್ತರ [illegible] ಸಕ್ಕರೆ [illegible]

[illegible]

ಕೀರ್ತನಕೇಸರೀ [illegible] ಕರಿಸಿದ [illegible] ಹೊನ್ನಾವರದ [illegible]

ದೇವೀಕಾನ ದ [illegible] ದೇವರಲ್ಲಿ ನವರಾತ್ರಿಯ [illegible] ರಾಮಕೃಷ್ಣ [illegible] ಭಟ್ಟ [illegible] ಸ್ವದೇಶೀ [illegible] ಯಾಕೆ ಮಾಡಬೇಕೆಂ [illegible]

[illegible]

ಹೊನ್ನಾವರ [illegible] ಮಗ್ಗ [illegible]

ಇಲ್ಲಿಯ 11 ನೇ ವರ್ಗದ ಮ್ಯಾಜಿಸ್ಟ್ರೇಟರಲ್ಲಿ ನಡೆಯುತ್ತಿದ್ದ ಖಟ್ಲೆಯಲ್ಲಿಯ ಸಾಕ್ಷಿಗಾರರು ಮೊದಲಿನ [illegible] ಸಾಕ್ಷಿಗಾರರೇ [illegible] ಈ ಸಾಕ್ಷಿಗಾರನ [illegible] ಸದರ ಖಟ್ಲೆ ಬಿಟ್ಟುಕೊಟ್ಟ [illegible] ಯಾವಗ [illegible] ನಿಜ್ಜ ಬಿದ್ದ [illegible] ಗೊತ್ತು

ಹೆರಾವಲೆ ಎಂಬ ಜಂಗಲದಿಂದ ಬರುವಾಗ [illegible] ದಿವಸದ ಹಿಂದೆ [illegible] ಫೋರೆಸ್ಟರ ಮತ್ತು ಗ್ಯಾರ್ಡ [illegible] ಪಟೇಲ [illegible] ಜನರು ಕೂಡಿ ಬರುವಾಗ ಅಲ್ಲಿ [illegible] ವರ್ಷದ [illegible]

[illegible]

ಇದು [illegible] ಫೋರೆಸ್ಟ ಅಧಿಕಾರ್ಯರು ಸದರ [illegible]

[illegible]

ಮಾನಸಮ್ಮೇಲನ— [illegible]

[illegible]

ಸಿದ್ದಾಪುರ— [illegible] ದಿವಸಗಳಿಂದ [illegible]

[illegible] ಮಹಾತ್ಮಾ [illegible] ಜನ್ಮದಿನದ [illegible] ಕಾಂಗ್ರೆಸ ಕಮಿಟಿ ಕಚೇರಿಯಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲಿ ಕೂಡಿದ ಸಾರ್ವಜನಿಕ ಸಭೆಗೆ ೩೦೦ ಜನರು ನೆರೆದಿದ್ದರು ಅಧ್ಯಕ್ಷರ ಮಹಾತ್ಮಾ [illegible] ದರ ಶ್ರೀ ಚಂದ್ರಶೇಖರ [illegible] ಅಹಿಂಸೆ [illegible] ಕಾರ್' ಎಂಬ ತತ್ವವನ್ನು [illegible] ಮಾಡಿದ ಉಪದೇಶಗಳನ್ನು ವಿವರಿಸಿದರು [illegible] ತರ ರಾಷ್ಟ್ರಗೀತದೊಡನೆ ಮಹಾತ್ಮರ ಭಾವಚಿತ್ರದ ಮೆರವಣಿಗೆಯನ್ನು [illegible]

[illegible] ಕೋಡ್ಲ [illegible] ಮಂಜಪ್ಪ [illegible] ಜ್ಯೋತಿ [illegible] (ನಾವ ದೀಪ) ಎಂಬವನು [illegible] ವರ್ಷದ [illegible] ದಿವಸ [illegible] ಕಂಡಿದ್ದರು

ಕಾರವಾರ— ಮೌಲಾನಾ ಅಲ್ಲೀಬಂಧು ಪ್ರಭೃತಿ ಮುಂದಾಳುಗಳನ್ನು ಸೆರೆಯ ಮಾಡಿದ ಮೂಲಕ ಉಂಟಾದ ಪರಿಸ್ಥಿತಿಯಲ್ಲಿ ನಮ್ಮ ಮುಂದಿನ ಕರ್ತವ್ಯವೇನೆಂದು ವಿಚಾರಮಾಡುವ ಬಗ್ಗೆ, ಇಲ್ಲಿಯ ತಾಲೂಕಾ ಕಾಂಗ್ರೆಸ ಕಮಿಟಿ ಮತ್ತು ಖಿಲಾಫತ ಕಮಿಟಿ ಈ ಕಮಿಟಿಗಳ ತರ್ಫೆಯಿಂದ ಇಲ್ಲಿಯ ಸಮಸ್ತ ಜನರ ಜಾಹೀರಸಭೆಯೊಂದು ಕಳೆದ ಬುಧವಾರ ತಾ ೫ ನೇ ಅಕ್ಟೋಬರ ದಿವಸ ಇಲ್ಲಿಯ ಶ್ರೀಕೃಷ್ಣದೇವಸ್ಥಾನ ಮಂದಿರದಲ್ಲಿ ನೆರೆದಿತ್ತು. ಸಭೆಗೆ ಸುಮಾರು ೪೦೦–೫೦೦ ಜನಸಮೂಹವು ಕೂಡಿತ್ತು. ಕಾರವಾರದಲ್ಲಿ ಈ ವರೆಗೆ ಕೂಡಿದ ಯಾವದೇ ಸಭೆಗಿಂತ ಲೂ, ಹೆಚ್ಚಿನ ಉತ್ಸಾಹವು ಜನರಲ್ಲಿ ಕಾಣಬರುತ್ತಿತ್ತು. ಸುಂಕೇರಿ ಪಗ್ಗೆ ಊರುಗಳಿಂದ ಹಿಂದು–ಮುಸಲಮಾನ ಬಾಂಧವರು ಪತಾಕೆಗಳನ್ನು ಕಟ್ಟಿಕೊಂಡು ಪದಗಳನ್ನು ಹಾಡುತ್ತ ‘ ಮಹಾತ್ಮಾ ಗಾಂಧೀಕೀ ಜಯ ’ ‘ ಅಲ್ಲಾ ಹೋ ಅಕಬರ ” ‘ ಮೌಲಾನಾ ಅಲ್ಲೀಬಂಧೂ ಕೀ ಜಯ ” ‘ ಹಿಂದು ಮುಸಲಮಾನಕೀ ಜಯ ” ಮುಂತಾದ ಜಯಘೋಷಗಳನ್ನು ಮಾಡುತ್ತ ಬಂದ ದೃಶ್ಯವು ಅಭಿನಂದನೀಯವಾಗಿತ್ತು. ವಿಶೇಷವಾಗಿ ಮುಸಲಮಾನ ಬಾಂಧವರಲ್ಲಿ ಕಂಡುಬಂದ ನವಜೀವನ ಸಂಚಾರವು ಉತ್ಸಾಹಕಾರಕವಾಗಿತ್ತು. ಈ ಪೂರ್ವದಲ್ಲಿ ಸುಂಕೇರಿಯಲ್ಲಿ ಕೂಡಿದ ಸಭೆಯಂತೆಯೇ ಇಲ್ಲಿಯಾದರೂ ಕಾರವಾರ ತಾಲೂಕಿನ ಅಸ್ತಂಗತಪ್ರಾಯರಾದ ಮಾಮಲೇದಾರ ಎ. ಕಿಣಿಯವರು (ಇವರು ಅವೇಳೆ ರಜೆಯನ್ನು ಪಡೆಯುವ ಸಿದ್ಧತೆಯ ವೇಳೆ ಹೋಗಿಬಂದರು) ಪೋಲಿಸ ಇನ್ಸಪೆಕ್ಟರ, ಸಬ ಇನ್ಸಪೆಕ್ಟರ, ಒಮ್ಮಾದಾರ ಮಗ್ಗೆ ಪರಿವಾರದೊಡನೆ ಹಾಜರಿದ್ದರು. ಸಭೆಯ ಅಧ್ಯಕ್ಷಸ್ಥಾನಕ್ಕೆ ಖಿಲಾಫತ ಕಮಿಟಿಯ ಉಪಾಧ್ಯಕ್ಷರಾದ ಜನಾಬ ಸದ್ದುದ ಬದಮುಸಾಹೇಬರು ನಿಯೋಜಿಸಲ್ಪಟ್ಟರು.

ಸದ್ಯಃಸ್ಥಿತಿಗೆ ಳಗಾಗಿರುವ ಮೌ॥ ಅಲ್ಲೀಬಂಧು ಪ್ರಭೃತಿ ಮುಂದಾಳುಗಳು ಅಸಹಕಾರಿ ತತ್ವಗಳಂತೆ ಕಾನಿಗ್ರಹವಾಸಕ್ಕೆ ಆತ್ಮಾನಂದದಿಂದ ಸಿದ್ಧರಾದ ಬಗ್ಗೆ ಮತ್ತು ಅವರಿಗೆ ಇಷ್ಟವಾದ ಸಂಗತಿಯೇ ಪ್ರಾಪ್ತವಾದ ಬಗ್ಗೆ ಅವರನ್ನು ಅಭಿನಂದಿಸ ಮತ್ತು ಈ ಖಟಲೆ ಮಾಡುವದರಲ್ಲಿ ಬಳಗೊಂಡಿರುವ ಸರಕಾರೀ ಧೋರಣವನ್ನು ನಿಷೇಧಿಸುವ ಹಾಗೂ ಈ ಪರಿಸ್ಥಿತಿಯಲ್ಲಿ ಮಹಾತ್ಮಾ ಗಾಂಧಿಗಳ ಮತ್ತು ಮೌ॥ ಅಲ್ಲೀಬಂಧುಗಳ ಸಂದೇಶಗಳಂತೆ ಪರದೇಶೀಯ ಬಹಿಷ್ಕಾರ ಪೂರ್ವಕ ಸ್ವದೇಶೀಯ ಪ್ರಚಾರ, ಹಿಂದು ಮುಸಲಮಾನರ ಐಕ್ಯದವೃದ್ಧಿ ಮತ್ತು ಪೂರ್ಣ ಅನತ್ಯಾಚಾರಿತ್ವ ಈ ಮೂರು ಸಂಗತಿಗಳನ್ನು ನಾವು ವಿಶೇಷ ಜೋರಿನಿಂದ ಆಚರಿಸಬೇಕಾಗಿ ವಿಧಿಸುವ ಮೊದಲನೇ ಠರಾವನ್ನು ಶ್ರೀ ಕೃಷ್ಣರಾವ ಹಳದೀಪೂರಕರ ಇವರು ಸಭೆಯ ಮುಂದಿಟ್ಟರು. ಇವರು ಸಯುಕ್ತಿಕ ಮತ್ತು ವಿಚಾರ ಪರಿಪ್ಲುತ ಭಾಷಣಮಾಡಿ ಸದರಿ ಮುಂದಾಳುಗಳನ್ನು ನಾವು ಯಾಕೆ ಅಭಿನಂದಿಸಬೇಕೆಂದೂ, ಈ ಖಟಲೆಯ ಸರಕಾರೀ ಧೋರಣವು ಹ್ಯಾಗೆ ನಿಷೇಧಾರ್ಹವಿರುವದೆಂದೂ ಮತ್ತು ಯಾವ ಮುಂದಾಳ ಗಳನ್ನು ಸೆರೆ ಮಾಡಿದರೂ ನಮಗೆ ತೋರಿಸಿಕೊಟ್ಟ ಕರ್ತವ್ಯವನ್ನು ಹೆಚ್ಚು ಉತ್ಸಾಹದಿಂದ ನಾವು ಪ್ರತಿಬಿಂಬಿಸು ಜರಗಿಸ ಪಡು ಎಷ್ಟು ಆವಶ್ಯಕವಿದೆಂದೂ ವಿಶದವಾಗಿ ತಿಳಿಸಿ ಹೇಳಿ ತಮ್ಮ ಠರಾವಿನ ಸಮರ್ಥನೆಯನ್ನು ಉತ್ಕೃಷ್ಟರೀತಿಯಿಂದ ಮಾಡಿದರು. ಠರಾವಿಗೆ ಅನುಮೋದನವನ್ನೀಯುವಾಗ, ಜನಾಬ ಸಯ್ಯದ ಹೈದರಸಾಹೇಬರು ಸ್ವದೇಶೀ ಬಟ್ಟೆಯನ್ನೇ ಉಪಯೋಗಿಸಿರೆಂದೂ ಭೂತಲದಮೇಲಿನ ಮುಸಲಮಾನರೆಲ್ಲರು ನಿಃಶೇಷರಾಗುವವರೆಗೆ ಖಿಲಾಫತಿನ ಅನ್ಯಾಯವನ್ನು ಅವರು ಇದ್ದ ತೆಂದೂ ಇರಗೊಡಲಾರರೆಂದೂ ಅಂತಃಕರಣ ಪೂರ್ವಕ ಸಾರಿ ಹೇಳಿದರು. ಶ್ರೀ॥ ಶ್ರೀನಿವಾಸ ವಸ್ತಾಲೆಯವರು ಭಾಷಣಮಾಡಿ, ಪೂರ್ಣ ಅನತ್ಯಾಚಾರಿತ್ವ ಮತ್ತು ಶಾಂತತೆಯನ್ನು ತಾಳಿದದೊಂದಲೇ ಇಷ್ಟಸಿದ್ಧಿಯು ಹ್ಯಾಗೆ ಸುಲಭಸಾಧ್ಯವಾಗುವದೆಂದು ತಿಳಿಸಿ ಹೇಳಿದರು. ಠರಾವಿಗೆ ಪುಷ್ಟೀಕರಣವನ್ನೀಯುವಾಗ ಶ್ರೀ॥ ಸುಬರಾವ ಹಳದೀಪೂರ ಇವರು ಉತ್ಸಾಹಪೂರ್ಣ ಮತ್ತು ಉತ್ಸಾಹಕಾರಕ ಭಾಷಣಮಾಡಿ ಸರಕಾರದವರು ತಮ್ಮ ವರ್ತನವು ಸುಸಂಗತವಾಗುವಂತೆ ಈಗ ಕರಾಚಿಯ ಠರಾವನ್ನು ಆಲ್ಲಲ್ಲಿ ಮಾಸವಾಡ ತ್ರಿರುವ ಸಾವಿರಗಟ್ಟಲೆ ಜನರಿಗೆ ಹುರಂಗದ ಹಾದಿ ತೋರಿಸಬೇಕಾಗಿರುವಂತೆ ತೋರಿಸಿದರೆ, ನಮ್ಮ ಹುರಂಗಗೃಹಗಳೇ ಅನತ್ಯಾಚಾರಿ ಸ್ವರಾಜ್ಯ–ಸೇನೆಯ ರಿಕ್ರೂಟಿಂಗ ಆಫೀಸುಗಳಾಗುವವೆಂದೂ, ಬಂದೆ ಕಾಂಗರಿಗಳಿಂದ ನಿರಾಕರಿಸದೆ ಕೈರಾಟೆಯ ಸ್ವರೂಪದಿಂದ ಭಗವಂತನ ಸುದರ್ಶನಚಕ್ರದ ಸೇವೆಯನ್ನು ನಿರಂತರ ಮಾಡಿದರೆ, ಪರಮಾತ್ಮನ ಪ್ರಸಾದವಾಗಿ ಇಷ್ಟಸಿದ್ಧಿಯು ಆಗದೇ ಇರಲಾರದೆಂದೂ ಪರಿಣಾಮವಾಗುವಂತೆ ಪ್ರತಿಪಾದಿಸಿದರು. ಸರ್ವಾನುಮತದಿಂದ ಈ ಠರಾವು ಪಾಸಾದ ಮೇಲೆ, ಇಲ್ಲಿಯ ವ್ಯಾಪಾರೀ ಬಾಂಧವರೆಲ್ಲರೂ ಸ್ವದೇಶೀ ವ್ಯಾಪಾರನ್ನೇ ವಿಶೇಷವಾಗಿ ಸ್ವದೇಶೀ ಅರಿವೆಯನ್ನು ತರಿಸುವಂತೆ ಅವರಿಗೆ ಹೇಳಿಕೊಂಡು ಪ್ರಯತ್ನ ಮಾಡುವ ಬಗ್ಗೆ ಆಗ ೧೦ ಕಿಷ್ಟರವ ಹಲವನ್ನು ನೇಮಿಸಬೇಕಾಗಿ ಶ್ರೀ॥ ಮಾಧವ ಮಂಜುನಾಥ ಕೈನಭಾಗ ಇವರು ಠರಾವು ತಂದರು. ಶ್ರೀ॥ ಮಹಾಬಲೇಶ್ವರರಾವ ನಾಡಕರ್ಣಿಯವರು ಅದಕ್ಕೆ ಅನುಮೋದನ ಕೊಟ್ಟು ಅದು ಪಾಸಾದ ಮೇಲೆ ಅಧ್ಯಕ್ಷರ ಸಮಾರೋಪದ ಭಾಷಣವಾಗಿ ಸಭೆಯ ಕೆಲಸವು ಉತ್ಸಾಹಪೂರ್ಣರೀತಿಯಿಂದ ಮುಗಿಯಿತು. ಸಭಿಕರಿಗೆ ಖಾದಿಯ ಮಹತ್ವವು ತಿಳಿದಿರ ವದೆಂಬುದು ಬಹ ತೇಕ ಎಲ್ಲವರು ಧರಿಸಿದ ಗಾಂಧೀ ಟೊಪ್ಪಿಗೆಗಳಿಂದ ವ್ಯಗ್ಗೋಚರವಾಗುತ್ತಿತ್ತು.

ಕೆಲವು ದಿವಸಗಳ ಹಿಂದೆ ನಮ್ಮ ಜಿಲ್ಲೆಯನ್ನು ಸಂದರ್ಶಿಸಿದ್ದ, ಕುಮಟಾ ಹೊನ್ನಾವರ ಈ ಊರುಗಳಲ್ಲಿ ವ್ಯಾಖ್ಯಾನಗಳನ್ನು ಕೊಟ್ಟ ಮೇಲೆ ಭಾಷಣಬಂದಿಯ ಹುಕುಮನ್ನು ಪಡೆದ ಮೌಲವೀ ಹಬೀಬ ಲ್ಲಾಖಾನರವರಿಗೆ ಇಂ. ಪಿ. ಕೋ. ೧೨೪ ಅ ಕಲಮಿನಂತೆ ವಾರಂಟನವೇ ಆಹತ್ಯೆಯಲ್ಲಿ ಕಳೆದ ಶುಕ್ರವಾರ ತಾ ೭ ನೇ ದಿವಸ ಹಿಡಿದು ಇಲ್ಲಿ ರವಿವಾರ ವಿವಸ ಆದಿರ ವರು. ಆ ಮೂರು ವ್ಯಾಖ್ಯಾನಗಳಲ್ಲಿ ಯಾವದಾದರೂ ವ್ಯಾಖ್ಯಾನಿನ ವಿಷಯದಲ್ಲಿ ರಾಜದ್ರೋಹದ ಬಗ್ಗೆ ಖಟ್ಲೆಯು ನಡೆಯುವದಿರಬೇಕು. ಖಟ್ಲೆಯು ಇಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕೋರ್ಟಿನ ಪ್ರಾರಂಭ ಮುಂದೆ ನಡೆಯುವದಾಗಿದೆ, ಖಟ್ಲೆಗೆ ಪ್ರಾರಂಭವು ತಾ ೧೩ ನೇ ದಿವಸ ಆಗುವದಾಗಿಯೂ ಕೇಳಿಬರುತ್ತದೆ. ಅಸಹಕಾರಿ ತತ್ವಗಳನ್ನನುಸರಿಸಿ, ಮೌಲವೀ ಹಬೀಬುಲ್ಲಾರವರು ಖಟ್ಲೆಯಲ್ಲಿ ತಮ್ಮ ಬಚಾವು ಮಾಡಿಕೊಳ್ಳಲಿಚ್ಛಿಸುವದಿಲ್ಲವಂತೆ. ಹೋದ ಸರಕಾರೀ ಗ್ಯಾಝೇಟಿನಲ್ಲಿ ೧೨೪ ಅ ಕಲಮಿನಂತೆ ಖಟ್ಲೆಗಳನ್ನು ವಿಚಾರಿಸುವ ಅಧಿಕಾರವು ನಿ॥ ಕೊಲಿಮಿ ವತ್ತೂರಿಯವರಿಗೆ ಕೊಟ್ಟಿರ ತ್ತದಾಗಿ ಪ್ರಸಿದ್ಧವಾದಾಗ್ಗೆನೇ, ಈ ಕಲಮಿನ ಪ್ರಯೋಗವು ಯಾರ ಮೇಲಾದರೂ ಆಗುವದಕ್ಕೆ ಪೂರ್ವಾತಯಾರಿಯೇ ನಡೆದಿರುತ್ತದೆಂತ ಜನರು ಊಹಿಸಿದ್ದರು. ಅದೇ ಅನುಮಾನವು ಖರೆಯಾಯಿತು !

ಶಿರಾಲಿ— ವಿಜಯಾದಶಮಿಯ ಸುಮುಹೂರ್ತಕ್ಕೆ ಸಾರ್ವಜನಿಕ ವಾಚನಮಂದಿರದ ಸ್ಥಾಪನೆಯಾಯಿತು. ಆಧುನಿಕ ಪರಿಸ್ಥಿತಿಯಲ್ಲಿ ವಾಚನಮಂದಿರದ ಆವಶ್ಯಕತೆಯ ಬಗ್ಗೆ ವ್ಯಾಖ್ಯಾನಗಳಾಗಿ ಸ್ಥಾಪನೆ ಸಮಾರಂಭವು ಕೊನೆಗಂಡಿತ.

ಇಲ್ಲಿಯ ಸುಬ್ರಾಯ ಬಾಯಿಣ್ಣ ಕಾಶನಭಾಗರೆಂಬವರು ಸ್ವರ್ಗಸ್ಥರಾದರು. ಇವರು ಬತ್ತಿರಾಗಿದ್ದರೂ ಚಲೋ ಚಟುವಟಿಕೆಯವರಾಗಿದ್ದರು. ಇವರಿಗೆ ವಿಶೇಷವೇನೂ ಬೇನೆ ಇಲ್ಲದೆ, ೪–೮ ದಿವಸಗಳಿಂದ ಅಗ್ನಿಮಾಂದ್ಯವಾಗಿತ್ತು. ಸಾಯುವ ಮುಂಚಿನ ದಿವಸ ಇವರಿಗೆ ವಾಂತಿಯಾದಾಗ, ಚಹಾದ ಕಿಟ್ಟವು ಕಗದಿನಂತೆ ಕಿತ್ತಿ ಕಿತ್ತಿ ಬೀಳುತ್ತಿತ್ತು. ಇದನ್ನು ಕೇಳಿ ಚಹಾದ ಭಕ್ತರು ಜಾಗ್ರತರಾಗಲಿ.

A gross neglect of the appointing authorities.

To

The Editor, of the 'Kanara News'

Sir

Will you kindly publish the following in your esteemed paper ?

Rule 10 of the [illegible]overnment Servants' Conduct [illegible] lays down that those of the [illegible]ncial and Subordinate civil [illegible]e shall **be debarred** fr[illegible]ment **in the district** [illegible] **they have immove[illegible]ble property** I believe that it is an imperative rule of conduct which should be observed strictly But if we look to some of the appointments made in this district, both present and past I am sorry to see that the appointing authorities have not attended to this rule sufficiently up to now as they should have done

As to appointments in the past, this rule is not observed in the case of Messrs V V Wagh Palekar, R A Nadkarni, Rao Bahadur Borker, Devan Bahadur Yennemadi, Mr Nadig and others, each one of whom, possesses immoveable property in this district Similar non observance of this rule is to be seen in the case of Messrs (1) Upponi Sub Judge of Sirsi (2) Kalyanpurkar, Sub Judge of Kumta, (3) Divekar Mamlatdar of Sirsi, (4) Kamat, that of Honavar, (5) Kommuttur Sub Divisional Magistrate, (6) Harischandra Deputy Superintendent of Police

Surely, Government has not enacted this rule in vain Its significance lies in the fact that land creates various interests which come to have influences of their own on the man possessing it Besides in the district in which a man is born and bred up, he has friends and relations

It is not all officers who can exercise their authority impartially free of those influences But, I believe that these officers are not here by their own choice Hence the necessity of drawing the attention of the appointing authorities to this rule, so that in future at least there may be no room for complaint on this ground

Recently, one of the parties to a suit has applied I understand, for its transfer from this court to another, on the ground that the other party happens to be a near relation of the Sub Judge Whatever may be the fate of the application, the position of the Judge is indeed unenviable I have not heard of such an application on such a ground for so many years He would have been spared all this, if he were in a different district This shows the wisdom of the rule and also the wisdom of its non observance in practice

Kumta
12th Oct 21

A Citizen.

ಧಾರವಾಡ ಗೋಳಿಬಾರು.

ಶ್ರೀಯುತ ರಂಗರಾವ ಮಾಹೇಂದ್ರ ದಿವಾಕರ ಎಮ್. ಎ ಎಲ್. ([illegible] ಆರೋಪಿ ನಂ ೩,

(ಕಳೆದ ಸಂಚಿಕೆಯಿಂದ ಮುಂದರಿದದ್ದು)

ನನಗೆ ನೆನಪಿದ್ದಷ್ಟರ ಮಟ್ಟಿಗೆ ಕಳೆದ ಎಪ್ರಿಲ ತಿಂಗಳಲ್ಲಿ ಇಲ್ಲಿ ಪಿಕೆಟಿಂಗ ಚಳವಳಿಯು ಒಳ್ಳೇ ಜೋರಿನಿಂದ ಆರಂಭವಾಯಿತು ಮತ್ತು ಅದನ್ನು ನಿಲ್ಲಿಸುವದಕ್ಕೋಸ್ಕರ ಇಲ್ಲಿ ಅಧಿಕಾರಿಗಳು ಬಲುಮೆಯನ್ನು ಉಪಕ್ರಮಿಸಿದರು. ಈ ಪಿಕೆಟಿಂಗ ಚಳವಳಿಯು ಸ್ವಯಂಸ್ಫೂರ್ತಿಯಿಂದಲೇ ಹುಟ್ಟಿದ್ದು. ಧಾರವಾಡದ ಖಿಲಾಪತ ಕಮೀಟಿಯು ಅದನ್ನು ಕೈಕೊಂಡ ಬಳಿಕ, ಅದು ವ್ಯವಸ್ಥಿತ ರೂಪವನ್ನು ಹೊಂದಿತು. ಕಾಂಗ್ರೆಸ ಕಮಿಟಿಯ ಬೆಂಬಲವೂ ಅದಕ್ಕೆ ದೊರೆಯಿತು. ಪ್ರಾರಂಭದಿಂದ ಈ ಚಳವಳಿಯನ್ನು ನಾನು ಬೆಂಬಲಿಸುತ್ತಿದ್ದು ಅನೇಕ ಸಾರೆ ನಾನು ಪಿಕೆಟಿಂಗ ಕಾರ್ಯವನ್ನು ಮಾಡಿದ್ದೇನೆ. ಮೊದಲು ಕೆಲ ಕಾಲ ಗುತ್ತೇದಾರರಾಗಲಿ, ಪೋಲೀಸರಾಗಲಿ ನಮ್ಮ ಕಡೆಗೆ ಲಕ್ಷ ಕೊಡಲಿಲ್ಲ. ಆದರೆ ನಮ್ಮ ಚಳವಳಿಯು ಪರಿಣಾಮಕಾರಿಯಾಗಿ ಮಾರಾಟವು ಕಡಿಮೆಯಾದ ಹಾಗೆ, ಪಿಕೆಟಿಂಗ ಮಾಡುವವನಿಗೆ ಬಹಳೇ ಉಪದ್ರವಾಗಹತ್ತಿತು. ಬಯ್ಯುವದೂ, ಕಲ್ಲು ಒಗೆಯುವದೂ ಹೊಡೆಯುವದೂ, ನಿತ್ಯ ಕ್ರಮವಾಗಿ ಕೊನೆಗೆ ಮಿ. ಗುತ್ತಲ ವಕೀಲರಿಗೆ ನಿಂದ್ಯ ರೀತಿಯಿಂದ ಹೊಡೆದರು. ಇಂಥ ಅಪಮಾನಗಳನ್ನು ಪಿಕೆಟಿಂಗದ ಜನರು ಶಾಂತ ರೀತಿಯಿಂದ ಸಹನ ಮಾಡಿದರು. ಕೆಲವು ವೇಳೆ ಇಂಥ ಅಪಮಾನಗಳನ್ನು ಪಿಕೇಟಿಂಗ ಜನರು ಪೋಲೀಸರ ಸಮಕ್ಷಮ ಹೊಂದಿದರೂ ಅಂಥಾ ಪಿಕೆಟಿಂಗ ಮಾಡುವವರು ಒಂದೂ ಯಾರನ್ನೂ ಹಿಂದೆ ಪಡಿಸಲಿಲ್ಲ. ಆದರೆ ಪರಿಗ ಮಾತ್ರ ಹಿಂಸೆಯನ್ನು ಅನುಭೋಗಿಸಬೇಕಾಯಿತು.

ಪೆಂಟರ ಸಾಹೇಬರು ಈ ಚಳವಳಿಯನ್ನು ಮನಃಪೂರ್ವಕವಾಗಿ ದ್ವೇಷಿಸುತ್ತಿದ್ದರೆಂದು ನಾನು ಭಾವಿಸುತ್ತೇನೆ. ಪೆಂಟರ ಸಾಹೇಬರು ಒಮ್ಮೆ ಮಾರ್ಕೆಟಿನ ಗಡಂಗಕ್ಕೆ ಪಿಕೇಟಿಂಗದ ಕೆಲಸವು ಹೇಗೆ ನಡೆದದೆಂಬದನ್ನು ನೋಡಲಿಕ್ಕೆ ಬಂದಿದ್ದರು. ಇದು ವಿಖ್ಯಾತವಾಗಿದೆ. ಆ ಕಾಲಕ್ಕೆ ನಾನು ಹಾಜರ ಇದ್ದೆನು. ಆ ಕಾಲದಲ್ಲಿ ಅವರ ಮತ್ತು ಅಬ್ದುಲ್‌ರಹಿಮಾನ (ಆರೋಪಿ ನಂ ೯) ಪ್ಯಾಲಂಕಿಯವರ ನಡುವೆ ಆದ ಸಂಭಾಷಣವು ಮುಂಬೈ ಕ್ರಾನಿಕಲ್ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರತಕ್ಕದ್ದು. ಆ ದಿವಸವಂತೂ ಅವರ ಕೋಪ [illegible] ಹೇಳ ಗುಡಿಯುವದನ್ನು ಶಾಂತರೀತಿಯಿಂದ ಒಪ್ಪದೆ ಇದ್ದುದರಿಂದಲೂ, ಅಬ್ದುಲ್‌ರಹಿಮಾನನೆಂಬ ಸ್ವಯಂಸೇವಕನು ತಾನು ಹೇಗೆ ಕೆಲಸ ಮಾಡುತ್ತೇನೆಂಬುದನ್ನು ಶಾಂತಪಣದಿಂದ ಹೇಳಿದುದರಿಂದಲೂ, ಪೆಂಟರ ಸಾಹೇಬರ ಕೋಪವೇ ಇಳಿಯಿತು. ಕದಾಚಿತ್ ಪೋಲೀಸ ಸುಪರಿಂಟೆಂಡೆಂಟ ಮಾರ್ಸಡನ ಸಾಹೇಬರು ಈ ಜಿಲ್ಹೆಗೆ ಬರುವವರೆಗೆ ತಮ್ಮ ದಬ್ಬಾಳಿಕೆಯ ಸತ್ರವನ್ನು ಆರಂಭಿಸಲಿಕ್ಕೆ ಪೆಂಟರ ಸಾಹೇಬರಿಗೆ ಅನುಕೂಲವಾಗಿರಲಿಕ್ಕಿಲ್ಲ.

ಒಳಕ ಸ್ವಯಂಸೇವಕರ ಪಟ್ಟಿಗಳು ಹಾದ್ರಪಿಸಿದ್ದು ಇದು ಇಲ್ಲಿಯ ಮುಖ್ಯಾಧಿಕಾರಿಗಳ ಮನಸ್ಥಿತಿಯು ಆತುರತೆಯು ದ್ಯೋತಕವಾಗಿರುತ್ತದೆ. ಈ ಪಟ್ಟಿಯ ಪ್ರಸ್ತಾಪ ದಿವಸವೇ ಕಲೆಕ್ಟರ ಸಾಹೇಬರು ಕರ್ಮವೀರದ ಆಗಿನ ಪ್ರಕಾಶಕರಾದ ಮಿ. ಕಬ್ಬೂರರನ್ನೂ ಮುದ್ರಕನಾದ ನನ್ನನ್ನೂ ಮುಂಜಾನೆ ಸರಕಾರದ ಸಂದೇಶವನ್ನು ತಿಳಿಸುವದಕ್ಕಾಗಿ ಕರೆಯಿಸಿದ್ದರು. ಮಧ್ಯಾಹ್ನದಲ್ಲಿ ೨ ಬಾರಿಸಲಿಕ್ಕೆ ೫ ಮಿನಿಟಗಳಿರುವಾಗ ನಾವು ಅವರ ಆಫೀಸಿಗೆ ಹೋದೆವು. ನಮ್ಮ ಪತ್ರದಲ್ಲಿ ಬಂದ ಕೆಲವು ಲೇಖಗಳ ವಿಷಯಕ್ಕೆ ನಮಗೆ ಸಮಜೂತು ಕೊಟ್ಟರು. ನಮ್ಮ ಪತ್ರದಲ್ಲಿ ಬಂದ ಲೇಖಗಳ ವಿಷಯಕ್ಕೆ ಸಕ್ತ ತಾಕೀದಿಯನ್ನು ಕೊಡಲಿಕ್ಕೆ ಸರಕಾರದಿಂದ ಒದಿದು ಬಂದಿರುವದೆಂದು ಅವರು ನಮಗೆ ತಿಳಿಸಿದರು. ಅದೆ ಕಾಲಕ್ಕೆ ಅವರು ನನಗೆ ಅಂದದ್ದೇನಂದರೆ— "ಇನ್ನೇನಾದರೂ ಲೇಖಗಳ ಮೇಲೆ ಪಟ್ಟಿಯನ್ನು ಮಾಡಲಿಕ್ಕೆ ನನ್ನ ಕಿಸಬೇಕೆಂದು ಸರಕಾರಕ್ಕೆ ಬರಿಯುತ್ತೇನೆ. ಹಾಗೂ ನಿಮ್ಮ ನೇತ್ರದ ನೀರಡಿಕೆಯು ನನಗೆ ಆಗಿದ್ದು, ನಿಮ್ಮನ್ನು ಕನಿಷ್ಟ ಒಂದು ವರುಷವರೆಗಾದರೂ ಕಾರಾಗೃಹದಲ್ಲಿ ಕಳಿಸಿದ ಹೊರತು ನನಗೆ ಯಾತರಿಂದಲೂ ಸಮಾಧಾನವಾಗಲಿಕ್ಕಿಲ್ಲ." ಕಲೆಕ್ಟರ ಸಾಹೇಬರು ಇಂತು ತಾಕೀದಿಯನ್ನು ಕೊಟ್ಟುದರ ಸಲುವಾಗಿಯೂ, ಅವರ [illegible] ಉಪಕಾರಗಳನ್ನು ಮನ್ನಿಸಿದವನಾದರೂ ನಾನು ಎಂದಿಗಾದರೂ [illegible] ಈ ಅಭಿಪ್ರಾಯಗಳನ್ನು ಸ್ವೀಕರಿಸಿದರು.

ಆರೋಪಿತ [illegible] ಜಿಲ್ಹೆಯ ಅಧಿಕಾರಿಗಳ [illegible] ಕಲೆಕ್ಟರರ [illegible] ಶಿಕ್ಷೆಯನ್ನು [illegible] ಅಲ್ಲಿ [illegible] ಶಿಕ್ಷೆಯು ಕೊಡಲ್ಪಟ್ಟಿತು. ಈ [illegible] ನಡತೆ [illegible] ಆದ [illegible] ದ ಪುರಾವೆ [illegible] ಸಂಗತಿಯು ಅತ್ಯಂತ ವಿಸಂಗತವಾಗಿರುತ್ತದೆ, ಮತ್ತು ಆ ಪುರಾವೆಯಿಂದ ಗೋಳಿಬಾರಿನ ಸಮರ್ಥನವು ಎಳ್ಳಷ್ಟಾದರೂ ಆಗುವದಿಲ್ಲ. ಆದಾಗ್ಯೂ [illegible] ಕಲ್ಲಿನ ಗಾಯಗಳನ್ನೂ ವಿಚಾರಿಸಲು ಒಮ್ಮೆ ಕ್ರಮಬದ್ಧ ಸ್ಥಿತಿಯಲ್ಲಿದ್ದೇನೆಂದು ಬರುವದಿಲ್ಲ. ಆದರೂ ದಬ್ಬಾಳಿಕೆಯನ್ನು ಆರಂಭಿಸಲಿಕ್ಕೆ ನಿಮಿತ್ತವಾಗಬೇಕೆಂದು ಇದು ವಿಲಕ್ಷಣವಾಗಿ ಬೆಳೆಸಿ ಹೇಳಲ್ಪಟ್ಟಿದೆ. ಯಾಕಂದರೆ ಹೇಸದ ಪೋಲಿಸರೂ, ನಮ್ಮ ಜಿಲ್ಹೆಯಲ್ಲಿರುವ ಅಧಿಕಾರಿಗಳಂಥ ಅಧಿಕಾರಸ್ಥರೂ ಇದ್ದ ಬಳಿಕ, ದಂಗೆಯ ಸ್ವರೂಪದಂಥ ಗುಲ್ಲೆಯ ನಿಮಿತ್ತದಿಂದ ಊರಲ್ಲಿದ್ದ ಬೇಕಾದವನನ್ನು ಅದರಲ್ಲಿ ಸೊಡಕಿಸುವದು ಬಹು ಸುಲಭವು. ಅಸಹಕಾರ ಚಳವಳಿಯಲ್ಲಿ ನಮ್ರತನದಿಂದ ಕೆಲಸ ಮಾಡುತ್ತಿರುವ ಸ್ವಯಂಸೇವಕರನ್ನು ಕಾರಾಗೃಹಕ್ಕೆ ಕಳಿಸುವದಕ್ಕೆ ಕಾತರೆಯುತ್ತಿರುವ ಅಧಿಕಾರಸ್ಥರಿಗೆ ಈ ಸಂಧಿಯನ್ನು ಸಾಧಿಸುವ ಮೋಹವು ಬಿಡಲಿಲ್ಲ. ಧಾರವಾಡದ ಸಾರ್ವಜನಿಕ ಚಟವಟಿಕೆಗಳನ್ನು ಬಗ್ಗುಬಡಿಯುವದಕ್ಕಾಗಿ ಈ ಪಟ್ಟಿಯು ರಚಿಸಲ್ಪಟ್ಟಿರುವದೆಂದು ಆರೋಪಿಗಳ ಯಾದಿಯನ್ನು ನೋಡಿದ ಮಾತ್ರದಿಂದಲೇ ಮನವರಿಕೆಯಾಗುವದು. ಈಗ ಆರೋಪಿತರಲ್ಲಿ ಸಮಾವಿಷ್ಟರಾದವರೆಂದರೆ— ರಾಷ್ಟ್ರೀಯ ಪಕ್ಷದ ವೃತ್ತಪತ್ರಿಕೆಗಳ ನಾಲ್ವರು ಸಂಪಾದಕರೂ, (ಇದರ ಹೊರತು ಐದನೆಯವರಾದ ಮುದವೇಡಕರರು ಕೆಳಗಿನ ಕೋರ್ಟಿನಲ್ಲಿ ಬಿಡಲ್ಪಟ್ಟಿರುವರು,) ಖಿಲಾಪತ ಕಮಿಟಿಯ ಅಧ್ಯಕ್ಷರೂ, ಕಾರ್ಯದರ್ಶಿಗಳೂ, ಮುನಸಿಯವರೂ, ಕಾರ್ಯಕಾರಿ ಮಂಡಲದ ಎಲ್ಲ ಸಭಾಸದರೂ, ಮೂವರು ಮದ್ಯಪಾನ ನಿಷೇಧದ ಸ್ವಯಂಸೇವಕರು, ರಾಷ್ಟ್ರಕಾರ್ಯದಲ್ಲಿ ಸಹಾನುಭೂತಿಯುಳ್ಳ ಕೆಲಸ ಮಾಡುವ ವಕೀಲರೂ, ಹೊರಗೆ ಇದ್ದಲ್ಲಿ ನಿಜವಾದ ಅಪರಾಧಿಗಳ ಬಗ್ಗೆ ಮಹತ್ವದ ಪುರಾವೆಯನ್ನು ಕೊಡಬಹುದಾದ ಊರೊಳಗಿನ ವರ್ಚಸ್ಸುಳ್ಳ ಸದ್ಗೃಹಸ್ಥರೂ, ಕೋಲೆಗಡಕರ ಗುಂಡಿನ ಭೀತಿಯೊಂದಿಗೆ ಅಧಿಕಾರಿಗಳ ದೊಣ್ಣೆಯ ಆಳಿಕೆಯಿಂದಲೂ ಕಾರಾಗೃಹದ ಬೆದರಿಕೆಯಿಂದಲೂ ಜನರಲ್ಲಿ ನಡುಗು ಹುಟ್ಟಿಸುವ ಪ್ರಯತ್ನವು ನಡೆದಿರುವದು.

ಒಂದು ವೇಳೆ ಈ ಆರೋಪಿತ ದಂಗೆಯಾದರೂ ಮುಂಚಿತವಾಗಿಯೇ ಯೋಜಿಸಿದ ಒಂದು ಕೃತ್ರಿಮ ನಾಟಕವಿರಬಹುದು. ಆದುದರಿಂದಲೇ ಅಂದು ಮುದ್ದಾಂ ಗಡಂಗದ ಮುಂದೆ ಸಶಸ್ತ್ರ ಪೋಲಿಸರ ಕಾವಲನ್ನು ಇಟ್ಟಿದ್ದರು. ಸಿವಿಲ್ ಆಸ್ಪತ್ರಿಯೊಳಗಿನ ಡಾಕ್ಟರರಿಗೆ ಆಸ್ಪತ್ರಿಯಿಂದ ಬೇರೆಕಡೆಗೆ ಹೋಗಬಾರದೆಂದು ಸೂಚನೆ ಸಿಕ್ಕಿತ್ತು. ಗಡಂಗದ ಮುಂದೆ ನೆರೆದ ಜನಸಮೂಹವನ್ನು ಹಿಂದಿರುಗಲಿಕ್ಕೆ ಯೋಗ್ಯ ಉಪಾಯಗಳನ್ನು ಕೈಕೊಳ್ಳಲಿಲ್ಲ. ಆಗಿಂದಾಗಲೇ ಯಾರನ್ನೂ ಹಿಡಿಯಲಿಲ್ಲ. ಹಾಗೂ ಶಿವಲಿಂಗಪ್ಪನು ಹೇಳಿಕೊಳಿಸಿದಂತೆ ಐದು ವೇಳೆಗೆ ಮಾತ್ರ ಒಂದು ನಿಂತನು, ಪ್ಲೇನ್ ಡ್ರೆಸ್ಸಿನ ಪೋಲೀಸರು ಜನರಲ್ಲಿ ಕೂಡಿಕೊಂಡರು. ಶಿವಲಿಂಗಪ್ಪನಂತೂ ಗುಂಡು ಹಾರಿಸಿಬಿಟ್ಟನು. ಹಾಗೂ ಅಧಿಕಾರಿಗಳು ಅವ ದಾರಿ [illegible] ಇದನ್ನೇ ಸಾಧಿಸಬೇಕೆಂದು ನಿರ್ಧರಿಸಿದವರು [illegible] ಪೂರ್ಣದೆಯನ್ನು ವಿಸ್ತರಿಸಿದ, ಆಟವಂತೂ ಹೂಡಿತು, ಪ್ರಸಂಗದ ಪೂರ್ಣ ಲಾಭವನ್ನು ಪಡೆಯಲಿಕ್ಕೆ ಕೆಳಗಿನ ಕೆಲವು ಪ್ರಯತ್ನಗಳು ನಡೆದಿವೆ. ಈ ದುಃಖಪರ್ಯವಸಾಯಿ ನಾಟಕದ ಸೂತ್ರಧಾರನು ಶಿವಲಿಂಗಪ್ಪನೇ ಇದ್ದು, ಜವಾಬದಾರ ಅಧಿಕಾರಿಗಳು ಆತನನ್ನು ಬೆನ್ನಿಗೆ ಹಾಕಿಕೊಂಡಿದ್ದಾರೆ, ರಾಷ್ಟ್ರೀಯ ಚಟುವಟಿಕೆಗಳನ್ನು ಹೇಳಹೆಸರಿಲ್ಲದಂತೆ ಮಾಡಲು ಉತ್ಸುಕರಾದ ಈ ಅಧಿಕಾರಸ್ಥರು ಈ ಸಂಧಿಯ ನಿಂದ್ಯವಾದ ದುರುಪಯೋಗವನ್ನು ಮಾಡಿಕೊಳ್ಳಲಿಕ್ಕೆ ಉದ್ಯುಕ್ತರಾಗಿರುವರು. ಅಂದಿನಿಂದ ಧಾರವಾಡದಲ್ಲಿ ಪೋಲಿಸರ ಆಳಿಕೆಯೋ ಆಳಿಕೆ! ಇವರ ಮೇಲಿಂದ ಅಧಿಕಾರಿಗಳ ಮನಸ್ಸಿನ ಬಲವು ಸ್ಪಷ್ಟವಾಗಿ ಕಾಣುತ್ತದೆ, ಮತ್ತು ಶಿವಲಿಂಗಪ್ಪನೇ ಈ ನಾಟಕದ ಕಲಿಪುರುಷನು.

ಸದ್ಯದ ತಪಾಸಣೆಯನ್ನು ಶಿವಲಿಂಗಪ್ಪನು ಮಾಡುತ್ತಿಲ್ಲದೇ ಬೇರೆ ಜನರೇ ಮಾಡುತ್ತಿರುವರೆಂದು ಎಷ್ಟು ನಟನೆ ಮಾಡಿದ್ದರೂ, ಅವನೇ ಸ್ವತಃ ಈ ತಪಾಸಣೆಯನ್ನು ಮಾಡುತ್ತಿರುವನೆಂದು ಅನ್ನಲಿಕ್ಕೆ ಸಾಕಷ್ಟು ಪ್ರಮಾಣಗಳು ನನ್ನ ಬಳಿಗಿರುವವು. ಆದ ಕಾರಣ ಈ ತಪಾಸಣೆಯು ಪೂರ್ಣವಾಗಿ ದೂಷಿತವಾಗಿದ್ದಿರುವದು. ಅಂತೇ ಈ ಕೋರ್ಟಿನ ಮುಂದೆ ತರಲ್ಪಟ್ಟ ಪುರಾವೆಯು ಅಟಕತ್ತು ಸುಳ್ಳಿರುವದು. ಇದಲ್ಲದೇ, ರಾ। ಶ್ರೀ ಮುದವೇಡಕರ ಕೃಷ್ಣರಾಯರು ಧಾರವಾಡದಿಂದ ಎಷ್ಟು ದೂರದಲ್ಲಿದ್ದಾಗ್ಯೂ ಈ ಪಟ್ಟಿಯಲ್ಲಿ ಅವರ ಹೆಸರು ಸೇರಿಸಲ್ಪಟ್ಟಿತ್ತೆಂಬದನ್ನು ಎಲ್ಲರೂ

ಬಳ್ಳರು ಪೋಲಿಸರ ಮುಖ್ಯಕರ್ತನಷ್ಟೇ ಪೋಲೀಸರಿಗೆ ಕಂಡ ಒಂದು ಮೇಲೆ ಫಿರ್ಯಾದಿ ಸಲ್ಲಿಸಿದವರು ಅವರ ಮೇಲಿದ್ದ ಪಟ್ಟಿಯನ್ನು ತೆಗೆದುಕೊಂಡಿರುವರು. ಕೃಷ್ಣರಾಯರು ಇಲ್ಲಿಯ ದಂಗೆಯಲ್ಲಿದ್ದರೆಂದು ಪೋಲೀಸರ ಮುಂದೆ ೧೯ ಜನರು ಸಾಕ್ಷಿ ಕೊಟ್ಟಿರುವರು ಈ ಮಾತು ಕೋರ್ಟಿಗೆ ವಿದಿತವಿದೆ. ಈ ೧೯ ಜನರೂ ಈ ಕೋರ್ಟಿನಲ್ಲಿಯ ಸಾಕ್ಷಿದಾರರಲ್ಲಿ ಬೆರತು ಹೋಗಿರುವರು, ಮತ್ತು ಈ ಸಾಕ್ಷಿದಾರರು ಹೇಳಿ ಕೇಳಿ ಸುಳ್ಳು ಜನರೆಂಬುದು ಇನ್ನು ಮೇಲೆ ಹೇಳಲಿಕ್ಕೆ ಬೇಕೆ ?

ಆರೋಪಿತ ಗುನ್ಹೇ ಆದ ದಿವಸ ರುದ್ರಪ್ಪ ಅಡಿವೆಪ್ಪ ಮತ್ತು ಸಂಗಪ್ಪ ಮಾಯೂರಪ್ಪ ಈ ಸಾಕ್ಷಿದಾರರಂತೂ ಆರೋಪಿತ ಗುನ್ಹೇ ಆದ ಕಾಲಕ್ಕೆ ಮತ್ತು ಆರೋಪಿತ ಗುನ್ಹೇ ಆದ ಸ್ಥಳದಲ್ಲಿ ಇದ್ದಿದ್ದೇ ಇಲ್ಲ ಯಾಕೆಂದರೆ ಅಂದು ಅವರು ಧಾರವಾಡದಲ್ಲಿಯೇ ಇದ್ದಿದ್ದಿಲ್ಲ ನ್ಯಾಯವಾಗಬೇಕೆಂಬ ಮನಸ್ಸು ಯತ್ಕಿಂಚಿತ್ತಾದರೂ ಇದ್ದರೆ, ಕಾಂಗ್ರೆಸ ಕಮೀಶನದ ಮುಂದಾದ ಪುರಾವೆಯನ್ನು ಕೋರ್ಟು ನೋಡಿಕೊಂಡರೆ ಸತ್ಯವೇನೆಂಬುದು ಅದಕ್ಕೆ ತಾನೇ ತಿಳಿದು ಬಂದೀತು. ನಾನು ಅಸಹಕಾರವಾದಿಯು, ಮೊದಲೇ ಬ್ರಿಟಿಶ ನ್ಯಾಯದ ಬಗ್ಗೆ ನನ್ನ ವಿಶ್ವಾಸವು ಹೊರಟು ಹೋಗಿತ್ತು ಇಲ್ಲಿಯ ನ್ಯಾಯನಿರ್ಣಯ ಪಟ್ಟಿಯಾದಂದಿನಿಂದ ಆ ವಿಶ್ವಾಸವು ತೀರ ಅಳಿದು ಹೋಯಿತು ನಮ್ಮ ಪರಿಷದಿನವರು ಮುಂಬಯಿ ಸರಕಾರಕ್ಕೆ ಬೇಡಿಕೊಂಡರೂ, ಅವರು ಇಂಥ ಕಲಂಕಿತ ಅಧಿಕಾರಿಗಳೇ ಇದರ ತಪಾಸಣೆಯನ್ನು ಮಾಡಬೇಕೆಂದು ಹಟದಿಂದ ನಿಯಮಿಸಿದರು ಇದರಿಂದಂತೂ ಈ ಕೋರ್ಟಿನಲ್ಲಿ ನ್ಯಾಯವಾದೀತೆಂಬ ಆಶೆಯನ್ನೇ ನಾನು ಬಿಟ್ಟುಕೊಟ್ಟೆನು. ಡಿಫೆನ್ಸ ಮಾಡಿಕೊಳ್ಳುವದೇತಕ್ಕೆ ? ನ್ಯಾಯ ಸಿಗಬೇಕೆಂದು! ಎಲ್ಲಿ ನ್ಯಾಯ ಸಿಗುವ ಆಶೆಯೇ ಇಲ್ಲವೋ ಅಂಥಲ್ಲಿ ನ್ಯಾಯಕ್ಕಾಗಿ ತಿಕ್ಕಾಡುವದು ತೀರ ವ್ಯರ್ಥ! ಅಂತೆಯೇ ಈ ಚೌಕಸಿಯಲ್ಲಿ ನಾನು ಸಂರಕ್ಷಣೆಯ ಉದ್ಯೋಗವನ್ನು ಬಿಟ್ಟು, ಇದರ ಸಂಗಡ ಇದ್ದ ನನ್ನ ಸಂಬಂಧವನ್ನೇ ಕಡಕೊಂಡೆನು

ನಾನು ನಿರ್ದೋಷಿಯಿದ್ದ ಬಗ್ಗೆ ಪ್ರಮಾಣಗಳೇ ಬೇಕಾಗಿದ್ದರೆ, ಸಾಕಾಗಿ ಉಳಿಯುವಷ್ಟು ಪುರಾವೆಯು ನನ್ನಲ್ಲಿರುವವು. ಆರೋಪಿತ ಗುನ್ಹೆಯಾದ ಇಡೀ ದಿವಸ ಕೆರೆಯ ಅಂಗಡಿಯ ಕಡೆಗೆ ನಾನು ಹಣಕಿ ಹಾಕಿದ್ದಿಲ್ಲ, ಹತ್ತರ ಹಾಯ್ದಿದ್ದಿಲ್ಲ ಇದೇ ಶುದ್ಧ ಸತ್ಯವು. ಸಂಜೆಯ ಕಡೆಗೆ ಸುಮಾರು ೫ ರಿಂದ ೮|| ಘಂಟೆಯ ವರೆಗೆ ನಾನು ಕಾಂಗ್ರೆಸ ಕಮೀಟಿಯಲ್ಲಿಯೂ, ಬೆಜವಾಡ ಪ್ರೋಗ್ರಾಮದ ಕೆಲಸವು ಧಾರವಾಡ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಯಿತೆಂಬದರ ವರದಿಯನ್ನು ಕೊಡಲಿಕ್ಕೆಂದು ನೆರೆದ ಸಭೆಯಲ್ಲಿಯೂ ಇದ್ದೆನು ಆ ಸಭೆಯಲ್ಲಿ ಅಂದು ಶಿಕ್ಷೆ ಹೊಂದಿದ ಸ್ವಯಂಸೇವಕರ ಬಗ್ಗೆ ಸಹಾನುಭೂತಿಯ ಠರಾವನ್ನು ನಾನೇ ತಂದೆನು ಗೋಳೀಬಾರ ಆಗುವ ಕ್ಷಣದವರೆಗೂ ನಾನು ಆ ಸಭೆಯಲ್ಲಿ ಸಾಕ್ಷಾತ್ ಇದ್ದೆನು ಈ ಪಟ್ಟಿಯೊಳಗಿನ ಎಲ್ಲ ಸಾಕ್ಷೀದಾರರು ಸುಳ್ಳು ಹೇಳಿರುವರು ಕೆಲವರು ಎಲ್ಲ ಸುಳ್ಳು ಹೇಳಿರುವರು. ಎಲ್ಲರೂ ಕೆಲವು ಸುಳ್ಳು ಹೇಳಿರುವರು. ಅಂತೂ ಈ ಪಟ್ಟಿಯೊಳಗೆ ಸುಳ್ಳು ಹೇಳದ ಸಾಕ್ಷಿದಾರನೇ ಇಲ್ಲ ಅಂತೆಯೇ ನಾನು ಸಂಪೂರ್ಣ ನಿರ್ದೋಷಿ ಇರುವೆನೆಂದು ಸಾರಿ ಸಾರಿ ಹೇಳುತ್ತೇನೆ.

ಕಾಂಗ್ರೆಸ ಕಮೀಶನದ ಚೌಕಸಿಯಲ್ಲಿ ಎಷ್ಟೋ ಪ್ರಾಮಾಣಿಕ ಸದ್ಗೃಹಸ್ಥರು ಆರೋಪಿತ ಗುನ್ಹೆಯ ಕಾಲಕ್ಕೆ ನಾನು ಸಭೆಯಲ್ಲಿದ್ದೆನೆಂಬದಾಗಿ, ಸಾಕ್ಷಿ ಹೇಳಿರುವರು. ಬೇಕಾದ ವೇಳೆ ಅವರನ್ನು ಕರೆಸಿ, ಈ ಕೋರ್ಟು ಇಲ್ಲಿಯ ಚೌಕಸಿಗೆ ನಿಃಪಕ್ಷಪಾತತನದ ಒಪ್ಪವನ್ನು ಕೊಡಬಹುದೆಂದು, ಆ ಸಾಕ್ಷೀದಾರರ ಹೆಸರುಗಳನ್ನು ನಾನು ಇಲ್ಲಿ ಹೇಳಲಿಚ್ಛಿಸುವದಿಲ್ಲ.

ಈ ಖಟ್ಲೆಯ ಕಡೆಗೆ ನಾನು ಉದಾಸೀನ ದೃಷ್ಟಿಯಿಂದ ನೋಡುತ್ತೇನೆ ಆದುದರಿಂದ ಇದರಲ್ಲಿ ನಾನು ನಿರ್ದೋಷಿಯೆಂದಾಗಲೀ ಅಥವಾ ದೋಷಿಯೆಂದಾಗಲೀ ನಿರ್ಣಯವಾದರೂ ನನಗೆ ಅದರ ಪರಿವೆಯೇ ಇಲ್ಲ ದೇಶದಲ್ಲಿ ಈಗ ನಡೆದ ಈ ಅನ್ಯಾಯವು ಒಂದು ಕ್ಷಣಿಕ ಕ್ರಿಯೆಯಾಗಿದ್ದು ಚಿರಕಾಲ ಬಾಳಲಾರದೆಂದು ನಾನು ತಿಳಿಯುತ್ತೇನೆ ಇದಲ್ಲದೆ ಈ ಖಟ್ಲೆಯಲ್ಲಿ ನನಗೆ ಶಿಕ್ಷೆಯಾದರೇನೇ ಒಳ್ಳೇ ಗುಣವಾಗುವದೆಂದು ನಾನು ಧೈರ್ಯದಿಂದ ಸಾರಿ ಹೇಳುತ್ತೇನೆ. ಯಾಕೆಂದರೆ ನಿರಪರಾಧಿಗಳು ತಾಳ್ಮೆಯಿಂದ ಯಾರಿಗೂ ತಿಳಿಯದೆ ಅನುಭವಿಸುವ ಕಷ್ಟಗಳಿಂದಲೇ ದೇಶದ ಉದ್ಧಾರವಾಗುವದೆಂದು ನನ್ನ ದೃಢ ಭಾವನೆಯಿದೆ ನನಗೆ ಶಿಕ್ಷೆ ವಿಧಿಸುವದು ನ್ಯಾಯವಾಗಲಿಕ್ಕಿಲ್ಲ ಆದರೆ ಅದು ಅನಿವಾರ್ಯವಾಗಿರುವದರಿಂದ ಅದು ನನಗೆ ಹಿತಕರವೆಂದೇ ನಾನು ಭಾವಿಸುತ್ತೇನೆ ಯಾಕೆಂದರೆ ಅದು ನನ್ನ ಪ್ರಿಯವಾದ ಧ್ಯೇಯಕ್ಕೆ ಪೋಷಕವಾಗಿರುತ್ತದೆ ನನಗೆ ಶಿಕ್ಷೆ ವಿಧಿಸುವದು ಅನ್ಯಾಯವಾಗಬಹುದು ಆದರೆ ನನ್ನ ಸಂಗಡಿಗರಿಗೆ ಅದೇ ಕಾಯಿದೆಯಿಂದ ಅದೇ ಪರಿಸ್ಥಿತಿಯಲ್ಲಿ ಶಿಕ್ಷೆಯಾಗುತ್ತಿದ್ದರೆ ನಾನು ನಿರ್ದೋಷಿಯೆಂದು ನಿರ್ಣಯಿಸುವದು ಹೆಚ್ಚು ಅನ್ಯಾಯವು ನಾವು ಕಷ್ಟಗಳನ್ನು ಅನುಭವಿಸುವದರಿಂದಲೇ ಈ ರುಧಿರಪ್ರಿಯ ಅಧಿಕಾರಿಗಳ ಅವಿವೇಕ ನೆತ್ತರ ನೀರಡಿಕೆಯು ಶಾಂತವಾದೀತೆಂದು ನಾನು ನಂಬುತ್ತೇನೆ ಅಲ್ಲದೆ ಈ ಖಟ್ಲೆಯಲ್ಲಿ ಸುಳ್ಳು ಸಾಕ್ಷೀ ನುಡಿದು ಅಧಃಪತನವನ್ನು ಹೊಂದಿದಂಥ ಪಾಪಿ! ಈ ಸಾಕ್ಷೀದಾರರಿಗೆ ತಮ್ಮ ದುಷ್ಕರ್ತನದ ಅರಿವು, ನನ್ನ ಕಷ್ಟದಿಂದಲೇ ಆದೀತಿವೆ ಬೇರೆ ಯಾತರಿಂದಲೂ ಆಗಲಾರದೆಂದು ನನ್ನ ನಂಬಿಗೆಯು ಇರುತ್ತದೆ ಯಾವದೇ ಸುಳ್ಳು ಖಟ್ಲೆಯ ಸಾಜೀಶಿಗಾಗಿ ಯಾವ ಸಮಾಜದಲ್ಲಿ ನೂರಾರು ಸಾಕ್ಷೀದಾರರು ಸಿಗುವರೋ ಆ ಸಮಾಜದಲ್ಲಿ ಇರುವದಕ್ಕಿಂತಲೂ ಸೂಂದಲ್ಲಿರುವ ಒಂದು ಕಾರಾಗೃಹದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಪಶ್ಚಾತ್ತಾಪಪಟ್ಟ ಅಪರಾಧಿಗಳ ಸಹವಾಸವು ಹೆಚ್ಚು ಒಳ್ಳೇಯದು. ಆತ್ಮಯಜ್ಞವೇ ಮುಕ್ತಿಯ ಮಾರ್ಗವು ಕೊನೆಗೆ ನನಗೂ ನನ್ನ ನಿರಪರಾಧಿ ಬಂಧುಗಳಿಗೂ ಆಗತಕ್ಕ ಶಿಕ್ಷೆಯು ಮುನ್ನಾ ದಿವಸದಿಂದಲೇ ಮಿ| ಪೆಂಟರ ಪ್ರಭೃತಿ ಅಧಿಕಾರಿಗಳ ಉಪಕಾರವನ್ನು ಸ್ಮರಿಸುತ್ತೇನೆ

ತ್ವರೆ ಮಾಡಿರಿ' ಮಾರಾಟಕ್ಕೆ ತಯಾರ" ತ್ವರೆ ಮಾಡಿರಿ"

ಧಾರವಾಡ
ಗೋಳೀಬಾರಿನ ಪ್ರಕರಣ

ದ ವಿಷಯವಾಗಿ

ಕಾಂಗ್ರೆಸ ಕಮೀಶನ್ನದವರು ಮಾಡಿದ

ರಿಪೋರ್ಟ

ಇಂಗ್ಲೀಷ— ಬೆಲೆ ೩ ಆಣೆ. ಕನ್ನಡ— ಬೆಲೆ ೪ ಆಣೆ

ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್ನಕೊಡಲಾದೀತು

ಸೋಲ ಏಜಂಟ— ಸ್ಟೂಡಂಟ್ಸ ಓನ ಬುಕ್ಕಡೀಪೋ, ಧಾರವಾಡ.

ನೌಕರ [illegible] ಬೇಕು.

ಇಬ್ಬರು ಅಡಗಿ ಕಲಿತ [illegible]ವರೂ, ಒಬ್ಬನು ಚಹಾ ದುಕಾನಿನಲ್ಲಿ ಎಲ್ಲಾತರದ ಫರಾಳ ಮಾಡಲಿಕ್ಕೆ ತಿಳಿದಂಥವನೂ, ಇಬ್ಬರು ಗಿರಾಕಿಗಳಿಗೆ ಪ್ಯಾಲು ಕೊಡುವವರೂ ಹೀಗೆ ಐವರು ಬೇಕು. ಈ ವಿನಹಾ ಇತರ ಕೆಲಸದ್ದಿಗೆ ಇಬ್ಬರು ಬೇಕು ಪಗಾರ ಸಂಬಂಧ ವ ಇತರ ಶರ್ತುಗಳ ಸಂಬಂಧ ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಬೇಕು ಕುಮಟೆಯಲ್ಲಿ ಸಮಕ್ಷ— ಕೃಷ್ಣಾ ಅಣ್ಣಪ್ಪ ಶಾನಭಾಗ, ಆಸ್ಪತ್ರಿ ಹತ್ತರ

ಪತ್ತೆ— ದಾಮೋಧರ ಅಣ್ಣಪ್ಪ
ಶಾನಭಾಗ, ಸ್ಪೆಶಲ್ ಚಹಾದುಕಾನ

ಕರಿಮಭಾಯಿ ಇಬ್ರಾಹಿಮ ಬಿಲ್ಡಿಂಗ್ಸ್.

ಕಾಮಗಾರ ಸಮಾಜ, ಲೋವರ ಪರೇಲ.

Post No. 13. BOMBAY.

ಸ್ವದೇಶಿ ಕಾರಖಾನೆಗೆ ಉತ್ತೇಜನ
ವಿದೇಶಿ ಮಾಲಿಗೆ ಬಹಿಷ್ಕಾರ

ದಿ, ಸ್ವದೇಶಿ ಇಂಕ ವರ್ಕ್ಸ

ಕರ್ಕಿ ಕೆನರಾ

ಭಾರತೀಯ ಶಾಯಿ ಗುಳಿಗೆಗಳು.

ವ್ಯಾಪಾರಸ್ಥರಿಂದಲೂ, ಶಾಲಾ ಮಾಸ್ತರರಿಂದಲೂ ಶಿಫಾರಸು ಪಡೆದದ್ದು

ನಂ ೧. ಉತ್ತಮ ನೀಲಿ ಕಪ್ಪು ೧೪೪ ಗುಳಿಗೆ ಗ್ರೋಸ ೧ ಕ್ಕೆ ರೂ ೧-೪-೦. ೬ ಗ್ರೋಸಿಗೆ ರೂ ೫-೮-೦. ೧೨ ಗ್ರೋಸಿಗೆ ರೂ ೧೦-೦-೦ ನಂ ೨ ಗ್ರೋಸ ೧ ಕ್ಕೆ ೦-೧೫-೦. ೬ ಗ್ರೋಸಿಗೆ ರೂ ೫-೦-೦ ೧೨ ಗ್ರೋಸಿಗೆ ರೂ ೮-೦-೦ ಕೆಂಪು, ಹಸರು ಗ್ರೋಸ ೧ ಕ್ಕೆ ರೂ ೧-೦-೦ ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನು ೧ ಗ್ರೋಸಿಗಿಂತ ಕಡಿಮೆ ಕಳಿಸುವದಿಲ್ಲ ಇಲ್ಲಿ [illegible] ತಯಾರಾಗುವದು.

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣ ಪರತ)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ

ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಹಾದಕ ಇಂದ್ರಿಯಸ್ತಂಭಕ ಗರ್ಮಿ (ಬಾ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಿಶೂಲೆ ವಾತರೋಗ ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ ಖ ಬೇರೆ ಅನುಮಾನಪತ್ರಿಕೆ ಔಷಧದ ಸಂಗಡ

ವಿಳಾಸ— ಜಿ. ಎಲ್. ಜೋಶಿ ಕಂಪನಿ.

ಪೋಸ್ಟ— ಸಿರಸಿ. ಉತ್ತರ ಕಾನಡಾ.

ಜಗಪ್ರ[illegible]ಂದ ಅನೇಕ
ರೋಗಗಳಿ[illegible]ವೇ ಔಷಧವು

ಇಂಡಿಯಾ ಸರ[illegible] ೧೬೭೩ ನೇ ಇಸ್ವಿಯು
೨೫ ನೇ ಆಕ್ಟ[illegible]ಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ [illegible] ಪ್ರ[illegible] ಬಾಟ್ಲಿಗಳ [illegible] ಆಕ್ಟೋಬರ [illegible] ಬಾಟ್ಲಿಗಳ [illegible] ಬಾಟ್ಲಿಗಳು [illegible] ಔಷಧದ [illegible] ಆರೋಗ್ಯಬಿಂದು [illegible] ಈ ಅರ್ಕಶಫಾ [illegible] ರೋಗ [illegible] ಈ ಔಷಧವನ್ನು ಎಲ್ಲರೂ [illegible] ಆರೋಗ್ಯಬಿಂದುವಿನ ಮೇಲೆ [illegible] ರೋಗನಿವಾರಣ ಮಾಡಿಕೊಳ್ಳಬೇಕು

ರೋಗದ ನಾವಗಳು

ಕ್ಷಯ ರೋಗ, ಹಡದರೋಗ, ಪಾಂಡುರೋಗ, ಗುಲ್ಮರೋಗ [illegible] ಜ್ವರ [illegible] ಮಂಜಾಜ್ವರ ಆದೇಯವಿಧ್ಯ [illegible] ಕಣ್ಣಿನೊಳಗೆ ಹೂವು [illegible] ಹೊಟ್ಟೆಶೂಲಿ ಮೈಶೂ[illegible] ಸೂಳೆ ಜ್ವರ [illegible] ಸ್ತ್ರೀಯರ ಮುಟ್ಟಿ[illegible] ಗಳ ಬಾಲಗ್ರಹ [illegible] ಹೊಟ್ಟೆ ದೊಡ್ಡದಾಗೋಣ [illegible] ವೈದ್ಯರಿಗೂ [illegible] ಯಿಂದ [illegible] ಆರೋಗ್ಯಬಿಂದುವಿನ ಕ್ರಯ [illegible] ಧನವಂತರಿಗೂ [illegible] ಇಟ್ಟಿರುತ್ತದೆ ಒಂದು [illegible] ಬಾಟ್ಲಿ ಒಂದಕ್ಕೆ ಎರಡುರೂಪಾಯಿ ನಮೂನೆ ಉದ್ದಿಕ್ಕೆ ಐದು ಆಣೆ ಅರ್ಧ ಬಾಟ್ಲಿ ಒಂದಕ್ಕೆ ಎಂಟು ಆಣೆ [illegible] ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು ಒಂದರಿಂದ ಹನ್ನೊಂದವು ಬಾಟ್ಲಿಯ ಮೇಲೆ ಕಮಿಶನ್ ಇಲ್ಲ ಇದಕೆ [illegible] ಆಣೆ ಖರ್ಚು ಬರುವದು ಒಂದು ಕಾಲು ತೊಲೆ ಬಾಟ[illegible] ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ಸವ[illegible] ಔಷಧವು ಬೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ [illegible] ಕ್ಯಾಟಲಾಗು ಬೇಕಾದಲ್ಲಿ ಪೋಷ್ಟ ತಿಕೀಟ [illegible] ದೊರೆಯಲಿಕ್ಕಿಲ್ಲ ಅನುಪಾನದ [illegible] ಕನ್ನಡ [illegible] ಭಾಷೆಗಳಲ್ಲಿ ಛಾಪಿಸಿರುತ್ತವೆ [illegible] ಪ್ರಕಾರ ಬಾಟ್ಲಿಯು [illegible] ಕನ್ನಡದಲ್ಲಿ ನಾಮ [illegible] ಪೋಸ್ಟ [illegible] ಸ್ಪಷ್ಟವಾಗಿ ಬರೆಯುತ್ತಿರಬೇಕು

[illegible] ಅರ್ಕಶಫಾ
[illegible] ಫ್ಯಾರ್ [illegible]

[illegible]
ಔಷಧಗಳು.

1 [illegible]
2 [illegible]
3 [illegible]
4 [illegible]
5 [illegible]

[illegible]

ಮೋಟಾರ.

ಈ ನೇಮಿಯ [illegible]— ಶಿರಸಿಗೆ ಮತ್ತು ಶಿರಸಿಯಿಂದ ಈ ಪರ್ಯ, ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ [illegible] ವ್ಯವಸ್ಥೆ [illegible] ರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಶಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು ಹಾವೇರಿಯಲ್ಲಿ [illegible] ಶಿರಸಿಯಲ್ಲಿ [illegible] ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

[illegible] ಗಳು ಶಿರಸಿಯಲ್ಲಿ [illegible] ದಾಕಪ್ಪನವರ ಇವರ ಅಂಗಡಿಯಲ್ಲಿ ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ [illegible] ಬಂಗ್ಲೆಯಲ್ಲಿ ಸಿಗುವವು

ಎಸ್. ಎಲ್. ಥಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಜೇಕಾಡದವರ ಭಾಡಿಗೆಯು ದರವಾರ ವಗ್ಗೆರೆ ಮಾಹಿತಿ [illegible] ಬಹುದು

ಪುರುಷೋತ್ತಮ ಲಕ್ಷ್ಮಯ್ಯ [illegible]
ಹೆಗಡೇಕರ, ದುಕಾನ, ಕುಮಟಾ.

ॐ

। श्रीगुरुभ्यो नमः ।

रक्तशुद्धि व वीर्यवृद्धिकारक
वज्रांग बिंदु.

हे औषध दुर्गम अशा पहाडातील अनेक वनस्पतीच्या रसात पौष्टिक औषधीफळाचा रसार्क मिश्र करून, खाली दिलेल्या रोगावर उपयुक्त अशी भस्में घालून, हा वज्रांग बिंदु फार प्राचीनकाळच्या वैदिक शास्त्राद्वतीने तयार केला आहे हा बिंदु सेवन केल्याने नपुंसकत्व, स्वप्नजन्य धातुपात, लघवीच्यापूर्वी अगर नंतर स्रवणारा धातुपात नाहीसा करून वीर्य वृद्धि व रक्तशुद्धि होते कितीहि जुनाट कडकी असो (एक सप्तकातच) नाश पावत आणि उपदंश संबंधी उरलेले विकार नाहींसे होऊन हातपाय, डोळे यांचा दाह व धातुविघातक सर्व विकार नष्ट होऊन, शरीर वज्राप्रमाण बनते. हा बिंदु खाल्ल्याने उतारवयाच्या मनुष्याचा कामविकार सुद्धा प्रज्वलित होऊन, क्षुधाग्नि व शक्ति भरपूर वाढत आणि संततीस अपायकारक असे गर्भाशयस्थ रोग याचा समूळ नाश होतो हे औषध स्त्रियांना सेवन केल्यास त्यांच जनन इंद्रियाच कार्यात्‌हि प्रकारच विकार न राहता त्या गर्भधारणास योग्य होतात ह्याच्या सेवनाने दिवसातून तीन वेळा जवळ नरी भूक चांगली लागत जाऊन शौचास साफ होत याचा अनुभव औषध घेतल्याच्या पहिल्या दिवशी येतो। तरी वरील रोगग्रस्त तरुण आणि वृद्ध, स्त्रिया व पुरुष यांनी या वज्रांग बिंदूच सेवन करून, यातील खरी मजा पहावी फार दिवसाचा रोग असल्यास पूर्ण गुणास तीन बाटल्या औषध घेतले पाहिजे नवीन रोगास एक बाटली औषध सेवन केले असता, गुण येईल. एका बाटलीमध्ये १० तोळे औषध असते त्या एका बाटलीची किंमत १। रुपया तीन बाटल्यांची किंमत ३। रुपये एक डझन (१२) बाटल्यांची किंमत १० रुपये याशिवाय टपाल, व प्याकिंग खर्च निराळा पडेल

म्यानेजर,
के. एम. हनुमान प्रासादिक कंपनी
जिल्हा [illegible], मु. पो. निपाणी

ಕಾನಡಾವೃತ್ತ

ಪ್ರತಿ ಎಂಟು ದಿವಸಕ್ಕೊಮ್ಮೆ ತಮಗೆ ಸಿಗಬೇಕೆಂಬ ಇಚ್ಛೆ ಇದ್ದರೆ ರೂ ೩೦೦ರ ಮನಿಯಾರ್ಡರ ಮಾತ್ರ ದರೆ, ೧ ವರ್ಷದವರೆಗೆ ನಿಮ್ಮ ಬಳಿಗೆ ಬರುವ[illegible] ಪತ್ತೆ— ಕಾನಡಾವೃತ್ತ ಆಫೀಸ ಕುಮಟಾ

P[illegible] and published by Krishnarao K[illegible] hav Shenvi at hi[illegible] Star of Kanara Press, Kumta

Reg No B. 1270.

ವರ್ಷ ೬.

ಕಾನಡಾವೃತ್ತ

THE KANARA NEWS.

ಸಂಚಿಕೆ ೬.

ಪತ್ರದ ವರ್ಗಣಿ -

ಕುಮಟೆಯಲ್ಲಿ ಆಗಾವು ರೂಪಾಯಿ 2-4-0.

ಮನಿಯಾರ್ಡರಿಯಿಂದ ರೂ 3 0 0

ವ್ಹಿ ಪಿ ಅಂಚಿವೆಚ್ಚ ಸೇರಿ ರೂಪಾಯಿ 3-2-0

ಬಿಡಿ ಸಂಚಿಕೆಗೆ 0-1-0

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ -

ಕನ್ನಡ ಇಂಗ್ಲಿಷ ಪ್ಯಾಕಾ ಪಿನ(೧೫ ಎಮ್‌ಗಳು) ೫ ಸಾಲುಗಳ ವರೆಗೆ ರೂ 1 0 0

ಅನಂತ ಪ್ರತಿ ಸಾಲಿಗೆ ೦-೨-೦.

ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತೀರಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೦ ನೇ ಅಕ್ಟೋಬರ ಸನ್ ೧೯೨೧ ನೇ ಇಸವಿ]—

ಖರೇ ಮಾತು! ಹಿತ ಕಲ್ಪ ಖರೆ ಗ್ಯಾರಿ!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಸಿ ಪುರುಷರಿಗೆ ಸ್ತ್ರೀವಿಷಯವಾಗಿಯೂ ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ [illegible] ಯುಕ್ತ ಶಕ್ತಿಯನ್ನು ಉಂಟು ಮಾಡಿ ದಿನೇ ದಿನೇ ಶರೀರದ [illegible] ರೋಗ್ಯವನ್ನು, ರತಿಯಲ್ಲಿ ಬಗೆಬಗೆಯ [illegible] ಭೋಗದಲ್ಲಿ ತೃಪ್ತಿಯನ್ನು [illegible] ಮನಸ್ಸಿನ [illegible] ಮುದಿತನವನ್ನು [illegible] ನಾಶಮಾಡುವದು [illegible] ಶುಕ್ಲಸ್ರಾವ [illegible] ವದು ಇದು [illegible] ಅತ್ಯುತ್ತಮವಾದ ಔಷಧವಾಗಿಯೂ [illegible] ಉತ್ಸಾಹಗಳಿಂದ [illegible] ದಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ [illegible] ಹಸ್ತಮೈಥುನದಿಂದ [illegible] ಅತಿವಿಷಯೋಪಭೋಗದಿಂದಲೂ ಇಂದ್ರಿಯ ಶಿಥಿಲವೂ [illegible] ನಿಸ್ತೇಜವೂ ಆಗಿ [illegible] ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ [illegible] ಶರೀರ ಕ್ಷೀಣತೆ, ಅಶಕ್ತಿ, [illegible] ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, [illegible] ಸೊಂಟ, [illegible] ರವಾದ ಸ್ವಪ್ನ [illegible] ಶರೀರದ [illegible] ಮನಸ್ಸಿನ ಚೇತನ ಕುಂದಿ ಹೋಗುವದು ಇವೆಲ್ಲವು [illegible] ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೩ [illegible] ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ [illegible] ರೂ ೬ ಪೋಸ್ಟೇಜ ಬೇರೆ

ಎಸ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ, ಕರ್ಕಿ (ಕೆನರಾ)

ಸತ್ಯಮೇವ ಜಯತೇ

(ಗುಣಬಾರದಿದ್ದರೆ ಹಣ ವಾಪಸ)

ಧಾತುಪೌಷ್ಟಿಕ ಕಾಮೋತ್ತೇಜಕ [illegible]

ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ ಕ್ಷೀಣತೆ ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾದಕ ಇಂದ್ರಿಯಸ್ತಂಭಕ ಗರ್ಮಿ, (ಚಾಂಕಿ) ಗುಪ್ತಸ್ಥಳದ ಶರೀರದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹು[illegible]ಗಳ ಪಿತ್ತದ ಬಾಧೆಗಳ ಕಟಬೋಲ ವಾತರೋಗ ಮುಂತಾದವು ಆತಿತ್ವರಿಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತವೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ ಬ [illegible] ಮಾನಪತ್ರಿಕೆ ಔಷಧದ ಸಂಗಡ

ವಿಳಾಸ— **ಜಿ. ಎಲ್ ಜೋಶಿ ಕಂಪನಿ**

ಪೋಸ್ಟ— ಸಿರಸಿ ಉತ್ತರ ಕಾನಡಾ

ಅಗ್ಗ] [ಅಗ್ಗ

ಮಳಗಾಲ ಮತ್ತು ಬಿಸಿಲು ದಿನದಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು ಜ್ವರ, ಕೆಮ್ಮು ಜಂತು, ಹೆಂಗಸರ ಗರ್ಭಕೋಶದ ವಿಕಾರ ಪರಮಾ ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟ ಔಷಧಗಳೂ ಸ್ಟೇಶನರಿ ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪಿಗೆಗಳೂ ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು

ಎಸ್ ಎಲ್ ಧಾಕಪ್ಪ ಮತ್ತು ಬಂಧು ಶಿರ್ಸಿ

ಕಾರ್ಡಸ್ಯಾಜ ಫೋಟೋ.

ಮಹಾತ್ಮಾ ಗಾಂಧಿ, ಕೈ। ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು

ಕ್ರಯ — ೧ಕ್ಕೆ ೬ಪೈ. ೧ ಡಜನ ಬೇಕಾದವರು ೫ ಆಣೆ ಸ್ಟಾಂಪುಗಳೂ ಮತ್ತು ೧೦೦ ಬೇಕಾದವರು ೧-೧೨-೦ ಮನಿಯಾರ್ಡರದ್ವಾರಾ ಹಣವು ಕಳುಹಿಸಬೇಕು ಸಂಪಲಗಳು ಬೇಕಾದರೆ ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ್, ಕುಮಟಾ (ಎನ್ ಕೆನರಾ,)

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

ಜ್ವರದ ಗುಳಿಗೆಗಳ ಕ್ರಯ — ೨೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳೆ ನಿಬ್ಬ, ಉಂಚೆ ಕಾಬೂಲೀ ಹಿಂಗು, ಇದಲ್ಲದೆ ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ ಶ್ರೀ ಮಂದಿರದ ಫೋಟೋಗಳೂ, ಶಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ

ಪತ್ತೆ— ಭಡತೀ ಭ್ರಾತೃಸಂಘ, ಗೋಕರ್ಣ

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ ಲೋ। ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬ್ಯಾಜುಗಳು ದೊರೆಯುತ್ತವೆ ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು ಡಜನ ೧ಕ್ಕೆ ೩-೦-೦ ಟಪಾಲ ಖರ್ಚು ಬೇರೆ

ಪತ್ತೆ— ಬಿ. ಎ ಶ್ಯೆ ಹೊನ್ನಾವರ (ಉತ್ತರ ಕಾನಡಾ)

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ

ಈ ವರ್ಷ ಕೇಕಡಾ ರು. ೧೨-೮-೦ ಇಟ್ಟಿದೆ ಆದರೆ, ಇದೇ ನವಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧-೮-೦ ರ ಸವಲತಿ ದರ ಇಟ್ಟಿದೆ ಆವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು

ಮಾಲಿಕ, ಸ್ಟಾರ ಆಫ್ ಕೆನರಾ ಪ್ರೆಸ್.

ಕುಮಟಾ

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಔಷಧವು

ಇಂಡಿಯಾ ಸರಕಾರದಲ್ಲಿ ... ನೇ ಇಸವಿಯ ... ನೇ ಅಕ್ಟಿನಂತೆ ... ಪಟ್ಟ

ಅರ್ಕೀಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕೀಶಫಾ ಎಂಬ ಔಷಧವು [illegible] ... ಬಾಟ್ಲಿಗಳು ... [illegible]

ರೋಗಗಳ ಹೆಸರುಗಳು

ಕ್ಷಯ ರೋಗ ... [illegible] ... ಹಲವು ... ಅನೇಕ ರೋಗಗಳು ... ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ... ಬಾಟ್ಲಿ ... ಕಮಿಶನ್ ಕೊಡುತ್ತೇವೆ. ಇದಕ್ಕೆ ಮಜೂರ ಖರುಚು ಬಿದ್ದರಿಂದ ... [illegible]

ಕನ್ ಇಲ್ಲ ಇದಕ್ಕೆ, ಆರು ಆಣೆ ಮಜೂರ ಖರುಚು ಬರುವದು. ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಮಜೂರ ... ಆಣೆ ಖರುಚು ... ನಮ್ಮ ಔಷಧವು ... ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ... ಬೇಕಾದಲ್ಲಿ ... ದೊರೆಯಲಿಕ್ಕಿಲ್ಲ ... ಕನ್ನಡ ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ... ಪ್ರಕಾರ ಬಾಟ್ಲಿಯ ಸೋಬತ ಸಿಗುವವು ... ಅಥವಾ ಕನ್ನಡದಲ್ಲಿ ನಾವು ಮತ್ತು ... ಬರೆಯುತ್ತಿರಬೇಕು.

... ಸಂವಾದಕ ಅರ್ಕೀಶಫಾ, ಹೆಡ್ ಆಫೀಸು ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ... ಲೇಹ — ಬಹ ... ಕೆಲಸ ಮಾಡುವ ... ದೌರ್ಬಲ್ಯ ... ಆದಿತ್ಯ ... ಅಶಕ್ತಿ ... ಇದನ್ನು ಸೇವಿಸಿದ್ದಲ್ಲಿ ರಕ್ತಪುಷ್ಟಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ... 40 ದಿನ ಸೇವಿಸುವ ಲೇಹ ಡಬ್ಬಿ 1ಕ್ಕೆ 1 1-0 3 ಡಬ್ಬಿಗಳಿಗೆ 4-12-0

2 ... — (ಖಾತ್ರಿ ಗುಣ) — ... ನಿಮೋನಿಯಾ, ದಿವಸಕ್ಕೊಮ್ಮೆ ... ಜ್ವರಗಳ ಮೇಲೆ ... ಬಾಟ್ಲಿ 1 ಕ್ಕೆ 0-8-0

3 ... ಗುಳಿಗೆ — ಕೂಸು ... ಮಕ್ಕಳ ... ಬಾಟ್ಲಿ 1ಕ್ಕಯ 0 10 0

4 ... ಗುಳಿಗೆ ಇದು ... ಬಾಟ್ಲಿ 1 ದಕ್ಕಯ 0 10 0

5 ... — ... ಬಾ... 1 ಕ್ಕೆ 1 12 0

ಎಮ್. ಗಣಪಯ್ಯಾ ... ಸನ್ಸ್

... ಡ್ರಗ್ಗಿಸ್ಟ್ಸ್ ... ರಬೀದಿ.

ಮೋಟಾರ.

... ಸಿರಸಿಗೆ ಮತ್ತು ಸಿರಸಿಯಿಂದ ... ಪ್ರತಿ ಆದಿತ್ಯವಾರ–ಗುರುವಾರ ... ವ್ಯವಸ್ಥೆ ಇಟ್ಟಿದೆ. ಹಾವೇರಿಯಿಂದ ... ಬೆಳಿಗ್ಗೆ ... ಘಂಟೆಗೆ ಮತ್ತು ಸಿರಸಿಯಿಂದ ... ಘಂಟೆಗೆ ಹೊರಡುವದು. ಹಾವೇರಿಯಲ್ಲಿ ... ಸಿರಸಿಯಲ್ಲಿ ... ಹೆಚ್ಚು ಜನರು ... ಬೇರೆ ದಿವಸಗಳಲ್ಲಿ ... ಸಿರಸಿಯಲ್ಲಿ ... ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ... ಸಿಗುವವು.

ಎಸ್. ಎಲ್. ಧಾಕಪ್ಪಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ... ಕೇಳಿ ... ಬಹುದು

ಪುರುಷೋತ್ತಮ ಅಕ್ಷಮಯ್ಯ ಕ್ಯಾನಭಾಗ.

ಹೆಗಡೇಕರ, ದುಕಾನ, ಕುಮಟಾ.

Wanted.

A clerk knowing English and Kanarese and trained in book keeping Typing, and correspondence work, for the North Kanara Moter Service Ankola (North Kanara) Pay Rs 25 to 40 according to qualifications. Those who had previous experience of Govt or private service, need apply with testimonials if any.

Manager

Ankola- North Kanara — **North Kanara Moter Service, ANKOLA**

17th October, 1921

ಹಲ್ಲಿನ ಡಾಕ್ಟರ ಕೃಷ್ಣರಾವ ಅನಂತ.



ಚಿನ್ನದ ... ಹಲ್ಲುಗಳು ... ಹಲ್ಲಿನ ... ಔಷಧ ... [illegible]

Javeri Mansion

near Marwadi Vidyalaya,

Sandhurst Road

BOMBAY No. 4

ಸ್ವದೇಶಿ ಕಾರಖಾನೆಗೆ ಉತ್ತೇಜನ

ವಿಶೇಷ ವಸ್ತುಗಳಿಗೆ ...

ದಿ. ಸ್ವದೇಶಿ ಇಂಕ್ ಸ್ಟೋರ್ಸ

ಕಾರ್ವಾರ

ಭಾರತೀಯ ಶಾಯಿ ಗುಳಿಗೆಗಳು

... [illegible]

ಧಾರವಾಡದ ಗೋಳಿಬಾರು.

(ಕಾ ಕ ರಿಪೋರ್ಟರ— ಮುಂದುವರಿದದ್ದು)

[ಕಾ ಕ ರಿಪೋರ್ಟರನ ವೃತ್ತದ ಸಾರಾಂಶವು ಕಳೆದ ಸಂಚಿಕೆಯೊಳಗೆ, ಮುದ್ರಣದೊಳಗಿನ ವಿಕ್ಷಿಪ್ತ ಭಾಷ ಬಾಧೆಯಿಂದ ಅಚ್ಚು ಹಾಕಲ್ಪಡದೆ ಉಳಿದುಹೋಯಿತು ಅದನ್ನು ಇಂದಿಗೆ ಪ್ರಕಟಿಸಿರುವೆವು ಸಂ ಕಾ]

ಇವೆಲ್ಲ ಸಂಗತಿಗಳನ್ನು ಗಮನಿಸಲಿಕ್ಕಿಲ್ಲ, ನಾವು ಈಗ ನಿರ್ಣಯಿಸಬೇಕಾದದ್ದೇನಂದರೆ, ಕಳೆದ ಜುಲೈ ಗನೇ ತಾರೀಖಿನ ರಾತ್ರಿ ಸಮಯ ಧಾರವಾಡದ ಮಾರ್ಕೆಟ ಸಮೀಪದ ಸರಾಯಿ ದುಕಾನುಗಳ ಎದುರಿಗೆ ಪೋಲೀಸರು ಮೂರು ಜನರ ಪ್ರಾಣಹಾನಿಯಾಗುವ ಮತ್ತು ೩೯ ಜನರಿಗೆ ಘಾಯವಾಗುವ ಪರಿಣಾಮಕ್ಕೆ ಕಾರಣವಾದ ಗೋಳಿಬಾರು ಮಾಡಿದ್ದು ಎಷ್ಟರ ಮಟ್ಟಿಗೆ ಯೋಗ್ಯವದೆ ಮತ್ತು ಸಮರ್ಥನೀಯವದೆ, ಈ ವಿಷಯದ ಮೇಲೆ ನಮ್ಮ ಅಭಿಪ್ರಾಯವನ್ನು ನಾವು ಕೊಡಬೇಕಾದರೆ, ಕೆಳಗಿನ ಮುದ್ದೆಗಳ ಮೇಲೆ ನಾವು ನಿರ್ಣಯವನ್ನು ಕೊಡಬೇಕಾಗಿದೆ, ಎಂದು ಹೇಳಿ ಕಮೀಟಿಯು ನ್ಯಾಯಾಧೀಶರು ಮಹತ್ವದ ಮುದ್ದೆಗಳನ್ನು ಚರ್ಚಿಸಿರುವರು ೧ ಸರಾಯಿ ಅಂಗಡಿಗಳ ಮುಂದೆ ಮತ್ತು ಅದರ ನೆರೆಹೊರೆಯಲ್ಲಿ ಯಾವ ಪರಿಸ್ಥಿತಿಯಲ್ಲಿ ಜನರು ಗುಂಪಾಗಿ ನೆರೆದಿದ್ದರು? ೨ ಪಿಕೇಟಿಂಗದವರಲ್ಲದೆ ಒಂದೇ ಹೇತುವಿನಿಂದ ಪ್ರವೃತ್ತರಾದ ಜನರ ಆಜಮಾಸ ಸಂಖ್ಯೆಯು ಪೋಲೀಸರು ಗುಂಡು ಹಾರಿಸುವ ವೇಳೆಯಲ್ಲಿ ಎಷ್ಟಿತ್ತು? ೩ ಒಂದೇ ಹೇತುವಿನಿಂದ ಪ್ರವೃತ್ತರಾದವರ ಉದ್ದೇಶವೇನಿತ್ತು? ೪ ಪೋಲೀಸರ ಗುಂಡು ಹಾರಿಸುವ ಮೊದಲು ಇಂಥ ಜನರ ಕೈಯಿಂದ ಯಾವ ಕೃತ್ಯಗಳು ಸಂಭವಿಸಿದ್ದವು? ೫ ಗುಂಡು ಹಾಕುವ ಸಾಧನದಿಂದಲ್ಲದೆ ಮತ್ಯಾವ ಉಪಾಯದಿಂದ ಜನರ ಗುಂಪನ್ನು ಪಸರಿಸುವ ಪ್ರಯತ್ನವನ್ನು ಪೋಲೀಸರು ಮಾಡಿದ್ದರೋ ಏನು ೬ ನಿರ್ದಿಷ್ಟ ವೇಳೆಯೊಳಗೆ ಜನರು ತಮ್ಮ ದಾರಿ ಹಿಡಿದು ನಡೆಯದಿದ್ದರೆ, ಎಚ್ಚರಿಕೆ ಗುಂಡುಗಳಿಂದ ಗೋಳಿಬಾರು ಮಾಡಲ್ಪಡುವದೆಂದು ಇಶಾರ ಕೊಡಲ್ಪಟ್ಟಿತ್ತೋ ಹ್ಯಾಗೆ? ೭ ಯಾವ ಬಗೆಯ ಜನರಿಂದ ದಂಗೆಯು ಪ್ರಾರಂಭವಾಗುವದೆಂದು ಭೀತಿಯುಂಟಾಗಿತ್ತೆಂದು ಕಲ್ಪಿಸಿದ್ದರೋ, ಅದೇ ಬರಿ ಗುಂಡು ಹಾರಿಸಿದ್ದರೇನು? ಇಲ್ಲದಿದ್ದರೆ, ಬೇರೆ ದಿಕ್ಕಿನಲ್ಲಿ ಗುಂಡು ಹಾರಿಸುವ ಕಾರಣವೇನಿತ್ತು? ಗುಂಡು ಹಾರಿಸುವ ಆವಶ್ಯಕತೆಯು ತೀರಿದಾಕ್ಷಣ, ಅದನ್ನು ತಡಿಸಿದರೋ ಹ್ಯಾಗೆ? ಇಲ್ಲದಿದ್ದರೆ, ಮತ್ತೆ ಗೋಳಿಬಾರು ಸಾಗಲಿಕ್ಕೆ ಕಾರಣವೇನಾಯಿತು? ೮ ಶಿಟಸನ್ ದೀಪವನ್ನು ಸರಾಯಿ ಅಂಗಡಿಯ ಮುಂದೆ ನಿಂದ ಜನರ ಮೇಲೆ ಗುಂಡು ಹಾರಿಸಿದ್ದು ನಿಷ್ಕಾರಣವದೆಯೋ ಸಕಾರಣವದೆ? ಈ ಎಂಟೂ ಮುದ್ದೆಗಳನ್ನು ಕಮೀಟಿಯು ತಮ್ಮ ಮುಂದೆ ಬಂದ ಸಾಧಕ ಬಾಧಕ ಪುರಾವೆಯ ಅನುರೋಧದಿಂದ ವಿಸ್ತರಶಃ ಚರ್ಚಿಸಿ, ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು ಮೊದಲನೇ ಎರಡನೇ ಮುದ್ದೆಗಳ ವಿಷಯವಾಗಿ ೧೬ ಸಬನೀಸ ವಕೀಲರಂಥ ಶ್ರೇಯಸ್ಕರ ಪ್ರತ್ಯಕ್ಷ ಪುರಾವೆಯಿಂದ ಕಮೀಟಿಯು ನಿರ್ಣಯಿಸಿದ್ದೇನಂದರೆ ಪಾಪಿಕೇಟಿಂಗ ಸರಾಯಿ ಅಂಗಡಿ ಮುಂದೆ ಪಿಕೇಟಿಂಗು ನಡೆಸ ಹಾಗ, ಜನರು ಸಾಹಜಿಕವಾಗಿಯೇ ನೆರೆದಿದ್ದರು ಆ ದಿವಸ ಸಶಸ್ತ್ರ ಪೋಲೀಸರು ಸರೆ ಅಂಗಡಿಯ ಮುಂದೆ ಮುದ್ದಾಂ ಕಾವಲಿಗೆ ಇದ್ದುದರಿಂದ ಇಲ್ಲಿ ಏನು ನಡೆವದೆಂದು ನೋಡಲಿಕ್ಕೆ ಕುತೂಹಲದ ಜನರ ಸಂಖ್ಯೆಯು ಹೆಚ್ಚಾಗಿತ್ತು. ಸರಾಯಿ ಅಂಗಡಿಯನ್ನಾಗಲಿ, ಅದೆಯನ್ನಾಗಲಿ ಸುಡಲಿಕ್ಕೆ ಪೋಲೀಸ ಇನ್ಸಪೆಕ್ಟರನನ್ನು ಕೊಲ್ಲಲಿಕ್ಕೆ ಯಾ ಬೇರೆ ದಂಗಾ ಮಸ್ತಿ ಮಾಡಲಿಕ್ಕೆ ಜನರು ನೆರೆದದ್ದಿಲ್ಲ ಸಶಸ್ತ್ರ ಪೋಲೀಸರು ಬಂದನಂತರ, ಅವರು ಶಿಸ್ತಾಗಿ, ಗಂಟೆ ಬಾರಿಸಿ, ಸರೆ ಅಂಗಡಿಯೊಳಗಿನ ದೀಪದ ಪ್ರಕಾಶವು ಕಣ್ಣಿಗೆ ಬಿದ್ದನಂತರ, ತಮಾಷೆ ನೋಡಬೇಕೆಂದು ಹೆಚ್ಚೆಚ್ಚು ಜನರ ಗುಂಪು ಅಲ್ಲಿಗೆ ಕೂಡಿತ್ತು ಒಬ್ಬ ಪೋಲೀಸ ಹವಾಲದಾರನು ಬಂದು ಕುಡಿದು ಧುಂದಿಯಾಗಿ ಜನರ ಮೈಮೇಲೆ ಸರಾಯಿ ಸೇಕು ಒಗೆದು ಮತ್ತು ಸರೆಯ ಪಾತ್ರೆಯ ತುಂಡು ಮತ್ತು ಕಲ್ಲುಗಳನ್ನು ಅಂಗಡಿಯ ಹಿಂಬದಿಯಿಂದ ಬಿಸೂಡಿ, ತುಂಟತನ ಮಾಡಿದ್ದರಿಂದ ಜನರಿಗೆ ಸಿಟ್ಟು ಬರಲಿಕ್ಕೆ ಕಾರಣವಾಗಿತ್ತು ಈ ಸಂಗತಿಯು ಗೊತ್ತಿದ್ದರೆ ಒಕುದಾದದರಿಂದಲೇ, ಪೋಲೀಸರು ಜನರು ಹ್ಯಾಗೆ ವರ್ತಿಸುತ್ತಾರೆಂದು ಲಕ್ಷ್ಯದಲ್ಲಿ ತಕ್ಕೊಳ್ಳಲಿಲ್ಲ ಪೋಲೀಸರು ಹೇಳುವಂತೆ, ಜನರು ತಾವಾಗಿ ಅವರ ಮೇಲೆ ಕಲ್ಲು ಒಗೆಯುತ್ತಿದ್ದರೆಂಬ ಸಂಗತಿಯು ನಿಜವಿದ್ದರೆ, ಪೋಲೀಸರು ಗೋಳಿಬಾರು ಆಗುವ ಪೂರ್ವದ ಈ ಎರಡು ತಾಸು ಅವಧಿಯೊಳಗೆ ಇಂಥ ಅಪರಾಧಿಗಳನ್ನು ಕೈದು ಮಾಡಲಿಕ್ಕೆ ಯತ್ನಿಸದೆ ಇರುತ್ತಿದ್ದಿಲ್ಲ ಒಟ್ಟಿಗೆ ಒಂದೇ ಹೇತುವಿನಿಂದ ಪ್ರವೃತ್ತರಾದ ಜನರ ಸಂಖ್ಯೆಯು ೩೦೦-೪೦೦ಕ್ಕೆ ಮೀರಿದ್ದಿಲ್ಲ ಉಳಿದ ಆಜಮಾಸ ೧೦೦೦ ಜನರು ಖರೇ ನೋಟಗಾರರಾದ್ದರಿಂದ ಕಮೀಟಿಯು ಅಭಿಪ್ರಾಯ ಪಟ್ಟಿದೆ ಇನ್ನು ಪೋಲೀಸರು ಹೇಳುವಂತೆ ಸಾಯಂಕಾಲ ೬॥ ಘಂಟೆಯಿಂದ ೮ ಘಂಟೆ ತನಕ, ಜನರು ಅವರಮೇಲೆ ಕಲ್ಲು ಒಗೆಯುತ್ತಿದ್ದರೆ ನೇಟಿವ ಕೋರ್ಟಿನಲ್ಲಿ ತಂದ ಕಲ್ಲುಗಳ ಆಕಾರವನ್ನು ನೋಡಿದರೆ, ಒಬ್ಬ ಪೋಲೀಸ ಶಿಪಾಯಿಗೆ ಸಹ ಭಯಂಕರ ಅಪಘಾತವಾಗದೆ, ಹ್ಯಾಗೆ ಉಳಿಯಿತೆಂದು ಕಲ್ಪಿಸುವದು ಅಶಕ್ಯವು ಇದರಂತೆ ಪೋಲೀಸರು ಮಾಡಿದ ಪಂಚನಾಮೆಗಳಲ್ಲಿ ಕೀಂದ್ರ ದುಕಾನದ ನಿಜಸ್ಥಿತಿಯು ಬಗ್ಗೆ ಬರೆದ ಮಜಕೂರು ಓದಲು ಮೆಂಕಾಜಿ ಅಸ್ಸಾಜಿ ಕುಲಕರ್ಣಿ ಎಂಬ ಒಬ್ಬ ಪಂಚರು ತಕರಾರು ಮಾಡಿ ಅಂಗಡಿ ಸುಟ್ಟಿವೆ ಎಂಬ ಸಂಗತಿ ಸುಳ್ಳಾಗಿದೆ ಕಟ್ಟೆಗಳಿಗೆ ಬೆಂಕಿ ತಾಗಿದ್ದು ಎಂಬ ಸಂಗತಿಯು ನಿರಾಧಾರವದೆ ಆ ಗೋದಾಮಿನ ಬಿದ್ದ ಕಲ್ಲುಗಳು ಜನರು ಹೊಡೆದ ಕಲ್ಲುಗಳಲ್ಲ ದಿನನಿತ್ಯ ಅಲ್ಲೇ ಇದ್ದ ಕಲ್ಲುಗಳಿವೆ ದುಕಾನಿನ ಬಾಗಿಲು ಕಲ್ಲುಗಳಿಂದ ಒಡೆದ ತರೆದಿದ್ದರೆ ಎರಡೂ ಕದಗಳು ಇದ್ದ ಹಾಗೆಯೇ ಇದ್ದುವೆ ವೈರೆಂಬಾ ದಿಕ್ಕಿ ಒಂದು ಕಲ್ಲು ಸಹ ಬಿದ್ದಿದ್ದಿಲ್ಲ ದುಕಾನಿನೊಳಗಿನ ಫಸ್ಟಾಳವು ಕಲ್ಲು ತಾಗಿ ಒಡೆದದ್ದಿಲ್ಲ ಅದು ಬರಾಬರಿಯಾಗಿ ಚಲೂ ಇದೆ ಅದರ ಕಾಚು ಸಹ ಒಡೆದಿಲ್ಲ ಎಂಬ ಅನೇಕ ಸತ್ಯ ಸಂಗತಿಗಳನ್ನು ರಾ॥ ಕುಲಕರ್ಣಿಯವರು ಹೇಳಲು, ಇವರ ಈ ಸಾಕ್ಷಿಯನ್ನು ಒಂದೇ ಪಂಚನಾಮೆಯ ಮೇಲೆ ತಕ್ಕೊಂಡದ್ದು ಸಾಕು ಎಂತ ಹಾಜರಿದ್ದ ಕಲೇಕ್ಟರ, ಪೋಲೀಸ ಸುಪರಿಂಟೆಂಡೆಂಟರವರು ಹೇಳಿದಂತೆ, ಈ ಸಾಕ್ಷಿ ಕೊಟ್ಟಿರುವರು ಅವನ ಹೇಳಿಕೆಯಂತೆ ಫೌಜದಾರ ಶಿವಲಿಂಗಪ್ಪನಿಗೆ ಕಲ್ಲು ತಾಗಿ, ರಕ್ತ ಸುರಿದು ಅವರ ವಸ್ತ್ರಗಳಿಗೆ ರಕ್ತ ಹತ್ತಿತ್ತು ಎಂದು ಪೋಲೀಸರು ಹೇಳುವದು ನಿರಾಧಾರವದೆ ಅವನು ಪಂಚನಾಮೆಯ ಕಾಲಕ್ಕೆ ತಾನು ಶಿವಲಿಂಗಪ್ಪನ ಹಣೆಯಿಂದ ರಕ್ತ ಹರಿಯುವದನ್ನೂ ಇಲ್ಲವೆ ಅವರ ವಸ್ತ್ರಕ್ಕೆ ರಕ್ತ ತಾಗಿದ್ದನ್ನೂ ನೋಡಿಲ್ಲೆಂದು ಹೇಳಿದ್ದಾನೆ ಇದಲ್ಲದೆ ಎರಡು ತಾಸು ಜನರು ಕಲ್ಲು ಹೊಡೆಯುತ್ತಿರುವಾಗ ಇದು ನಿಜವಿದ್ದರೆ ಗಡಿಯೊಳವು ೮ ಘಂಟೆಯಿಂದ ೧೧ ಗಂಟೆಯ ತನಕ ಏನೂ ಹೆಚ್ಚು ಕಡಿಮೆಯಾಗದೆ ಹ್ಯಾಗೆ ನಡೆಯಿತು? ಇವರ ಖುಲಾಸೆ ಇನ್ನೂ ಯಾರೂ ಮಾಡಿಲ್ಲ ದುಕಾನಿನಲ್ಲಿ ಲೂಟಿ ಆಗಿದೆಂಬ ಸಂಗತಿಯೂ ವಿಚಾರ ಮಾಡಿದರೆ, ಹತ್ತು ರೂಪಾಯಿ ಚಿಲ್ಲರೆ ಹಣ ಪೆಟ್ಟಿಗೆಯೊಳಗೆ ಇದ್ದಲ್ಲೇ ಇತ್ತು ಅಲ್ಲಿದ್ದ ಅಂಗಿಯ ಕಿಸೆಯೊಳಗಿನ ಘಡಿಯಾಳವು ಯಾರೂ ಮುಟ್ಟಿದ್ದಿಲ್ಲ ಹೀಗಿದ್ದಾಗ, ಸರೆ ಅಂಗಡಿಯೊಳಗೆ ಲೂಟಿ ಆಗಿತ್ತೆಂದು ಹ್ಯಾಗೆ ಹೇಳಲಿಕ್ಕಾಗುತ್ತದೆ? ಸಾರಾಂಶ ಪಂಚನಾಮೆಗಳಿಂದ ಮತ್ತು ಇತರ ಪುರಾವೆಯಿಂದ ಕಾಣುವದೇನಂದರೆ, ಗೋಳಿಬಾರು ಮಾಡಿದ್ದನ್ನು ಸಮರ್ಥಿಸಲಿಕ್ಕೆ ಬೇರೆ ಪುರಾವೆಯನ್ನು ಉಂಟುಮಾಡಿದ್ದಾರೆ ಎರಡು ತಾಸು ಭಯಂಕರ ದಂಗೆ ನಡೆದಿದ್ದರೆ, ಊರಲ್ಲೇ ಇದ್ದ ಪೋಲೀಸ ಸುಪರಿಂಟೆಂಡೆಂಟರಿಗಾಗಲಿ, ಡಿ॥ ಮೆಜಿಸ್ಟ್ರೇಟರಿಗಾಗಲಿ ಗೋಳಿಬಾರು ಮಾಡುವತನಕ ಸುದ್ದಿಯನ್ನು ಪೋಲೀಸರು ತಿಳಿಸದಿರುವದು ಒಂದೇ ಮುದ್ದಾಮು ಕೆಟ್ಟ ಉದ್ದೇಶದಿಂದ ಅದನ್ನು ಬಚ್ಚಿಡಬೇಕೆಂದಿರಬೇಕು ಇಲ್ಲವೆ ದಂಗೆಯಾದದ್ದೇ ಸುಳ್ಳಾಗಿರಬೇಕು ಇದೆಲ್ಲ ಪುರಾವೆಯನ್ನು ನೋಡಿದರೆ, ಜನರು ಅತ್ಯಾಚಾರ ಮಾಡಿದರು, ಲೂಟಿ ಮಾಡಿದರು, ಎಂದು ಪೋಲೀಸರು ಮಾಡುವ ಆರೋಪವು ಸಿದ್ಧವಾಗುವದಿಲ್ಲ ಇದರಮೇಲೆ ಗುಂಡು ಹಾರಿಸಿದ ಶಿವಲಿಂಗಪ್ಪನವರನ್ನು [illegible] ಇಂಥ ಪ್ರಯತ್ನವೂ ಉಂಟು ಮಾಡಲ್ಪಟ್ಟದೆಂದು [illegible] ಮನಸ್ಸಿನಲ್ಲಿ ಭಯವಾದ ಸಂಶಯ ಉಂಟಾಗುತ್ತ[illegible]

೩-೪ ನೇ ಮುದ್ದೆ[illegible]ಮೇಲೆ ನಮ್ಮ ಅಭಿಪ್ರಾಯವೇನಂದರೆ— ಗುಂಪಿ[illegible]ವರೊಳಗಿನ ಕೆಲವರು ಪಿಕೇಟಿಂಗದ ದೆಸೆಯಿಂದ ಬಂದಿದ್ದರು. ಮತ್ತು ಹಲವರು ನೋಟ ನೋಡಲಿಕ್ಕೆ ಬಂದಿದ್ದರು. ಗೋಳಿಬಾರು ಮಾಡುವ ಪೂರ್ವದಲ್ಲಿ ಪಿಕೇಟಿಂಗ ಮಾಡುವ ಜನರ ಮನಸ್ಸಿನಲ್ಲಿ ದಂಗೆ ಧೋಪ ಮಾಡುವ ಉದ್ದೇಶವೇನೂ ಇದ್ದಿಲ್ಲ ಎಂದು ನಮ್ಮ ಮುಂದೆ ಬಂದ ಪುರಾವೆಯಮೇಲಿಂದ ಸಿದ್ಧವಾಗುತ್ತದೆ ಜನಸಮೂಹದೊಳಗೆ ಕೊಂಗ್ರೆಸ ಮತ್ತು ಖಿಲಾಫತ ಪಕ್ಷದವರಿಷ್ಟೇ ಇದ್ದಿಲ್ಲ ಸರಕಾರಿ ನೌಕರರೂ, ಶಾಲಾ ಮಾಸ್ತರರೂ, ಹಿಂದೂ-ಮುಸಲಮಾನ ಮತ್ತು ಬೇರೆ ಜಾತಿಯವರೂ, ವರ್ತಕರೂ ಬಹಳೇ ಮಂದಿ ಅವರೊಳಗಿದ್ದರು ಅದೇ ದಿವಸ ಊರೊಳಗೆ ಜಲ್ಲಾ ಕೊಂಗ್ರೆಸ ಕಮೀಟಿಯ ಸಭೆಯು ೬॥ ಘಂಟೆಗೆ ನೆರೆದಿತ್ತು ಸಭೆಯೊಳಗೆ ಊರೊಳಗಿನ ಎಲ್ಲ ಪ್ರಮುಖ ಜನರೂ, ಮುಂದಾಳುಗಳೂ ಹಾಜರಿದ್ದರೆಂದು ಚಲೋ ಸದ್ಗೃಹಸ್ಥರು ಮತ್ತು ವಕೀಲರಂಥ ಮಹನೀಯರ ಪುರಾವೆಯಿಂದ ಸಿದ್ಧವಾಗಿದೆ.

× × × ×

ಸರಕಾರಿ ಖಟ್ಲೆಯಲ್ಲಿ ಆರೋಪಿಗಳಾಗಿರುವ ಮುಂದಾಳುಗಳು ಮೊದಲಾದ ೨೩ ಜನರೊಳಗಿನ ಎರಡು ಸ್ವಯಂಸೇವಕರನ್ನು ಬಿಟ್ಟು, ಉಳಿದ ೨೧ ಜನರು, ದಂಗೆ ನಡೆದ ಸಮಯ ಈ ಸಭೆಯಲ್ಲಿ ಇಲ್ಲವೆ ಬೇರೆ ಕಡೆಯಲ್ಲಿ ಹಾಜರಿದ್ದರೆಂದು ಐದು ಶಾಸ್ತ್ರರರೂ, ಮೂರು ಸರಕಾರಿ ನೌಕರರೂ, ೧೭ ವಕೀಲರೂ, ೧೦ ವ್ಯಾಪಾರಿಗಳೂ ೩ ಸಾಪಕಾರರೂ, ೪ ಕೊಲೇಜ ವಿದ್ಯಾರ್ಥಿಗಳೂ, ೧೫ ಹುಡುಗರೂ, ಮತ್ತು ಬಹಳೇ ಮಂದಿ ಜಮೀನದಾರರೂ, ಒಕ್ಕಲಿಗರೂ, ನಮ್ಮ ಮುಂದೆ ಸಾಕ್ಷಿಕೊಟ್ಟಿರುವರು

ಕುಮಟೆ ಗೌ॥ ಸಾ॥ ಹತ್ತುಸಮಸ್ತರು.

ಸತ್ಯಮೇವಜಯತೆ!

(ಲೇಖಾಂಕ ೧)

ಕುಮಟೆಯ ಗೌ॥ ಸಾ॥ ಹತ್ತುಸಮಸ್ತರ ಸಭೆಯ... ಆಗೀಗ ಮೇಲಿಂದಮೇಲೆ ಕಾಣುತ್ತಿತ್ತು ೧-೨ ವರ್ಷಗಳಿಂದ ಉಂಟು ಬಿದ್ದ ಪ್ರಕರಣಗಳ ನಿರ್ಣಯ, ಉತ್ಸಹ-ಪರ್ವಣಿಗಳಲ್ಲಿ ಭಕ್ತವೃಂದಕ್ಕೆ ಉಲ್ಲಾಸ-ನಿರುತ್ಸಾಹಗಳಂಥ ತೊಡರುಗಳ ಪರಿಹಾರ ಶ್ರೀ ಭಂಡಾರದ ಲೆಕ್ಕ-ಪತ್ರಗಳ ವ್ಯವಸ್ಥ, ಜಮೀನು ಇಸ್ಟೇಟುಗಳ ಮೇಲುತಪಾಸ ವಗೈರೆ ವಿಷಯಗಳ ಬಗ್ಗಾಗಿ ವಿಚಾರವಾಗಿದೆಯಷ್ಟೇ ಶ್ರೀ ಭಂಡಾರದ ಹಣಗಳು ವರ್ಷಂಪ್ರತಿ ಹೊರಗೆ ಬಡ್ಡಿಗೆ ಕೊಡುವ ಕಮಿಟಿ ನೇಮಣೂಕಿ ವಿಷಯ ಬಂದು ಬಾಕಿಯಿತ್ತು ಅದು ಈಗ ಶ್ರೀ ಕಾಗಾಲ ಗೋವಿಂದಪ್ಪರ ಅರ್ಜಿಯಮೇಲೆ ಮುಂದೆ ಬಂದು ಸದ್ಯಕ್ಕೆ ನಿಕಾಲವಾಯಿತು ಇಪ್ಪತ್ತು-ಇಪ್ಪತ್ತೈದು ವರ್ಷಗಳ ಮೊದಲಿನ ಠರಾವಿನಂತೆ ಮೂವರ ಸರಕಾರಿ ಮೆಂಬರರ ಮತ್ತು ಒಬ್ಬ ವಹಿವಾಟ ಮೆಂಬರರ ಕಮಿಟಿಯಿಂದಲೇ ಅವರ ನಿಗೇವಾಣಿಯಾಗಬೇಕೆಂತ ಬಹುಮತದ ಠರಾವು ಆಯಿತು ಆ ಸೂಚನೆಗೆ ವಿರೋಧವಾಗಿ ಸ ಧಾರಣೆಯಾಗಬೇಕೆಂದೂ ಶ್ರೀ ಭಂಡಾರವೆ ಹಣಗಳು ಎಲ್ಲ ಸಮಾಜಕ್ಕೆ ಸಹಕಾರಿ ಪತಪೇಢಿಯಂಥ ವ್ಯವಸ್ಥೆಯಿಂದ ಸಿಗಗೊಡುವದೇ ಯೋಗ್ಯವೆಂದೂ, ಅದಕ್ಕಾಗಿ ಆ ಕಮಿಟಿಯಲ್ಲಿ ಕ— ಮತಸ್ತರಿಬ್ಬ ಹೊಸ ಸಭಾಸದರನ್ನಾದರೂ ಸೇರಿಸಬೇಕೆಂದ ಸೂಚನೆಯು ಬಿದ್ದುಹೋಯಿತು ಇದರಿಂದ "ವಿಠ ಮಾರ್ಯ್ಯಾ ಮಾಗಲ್ಯಾ" ಎಂಬ ಹೇಳಿಕೆಯಂತಾಗಿ, ಸಮಾಜದ ದೊಡ್ಡ ಹಾನಿಯಾಗಿದೆ, ಅದರ ಉತ್ಕರ್ಷಕ್ಕೆ ಎಗರು ಬಂದಿದೆ, ನೀತಿ-ನ್ಯಾಯಗಳು ತುಳಿಯಲ್ಪಟ್ಟಿವೆ, ಪಕ್ಷಾಂಧತೆಯೇ ತುಂಬಿ ತುಳುಕುತ್ತಿದೆ, ಸ್ವತಂತ್ರ, ನಿಷ್ಪಕ್ಷ, ಸದಸದ್ವಿವೇಕ ಬುದ್ಧಿಯ ಮಹಾಧಿಕಾರವೇ

(೩ ನೇ ಪಾನಿನಮೇಲೆ ಮುಂದರಿಸಿದೆ.)

ಕಾನಡಾ ವೃತ್ತ.

ಗುರುವಾರ, ತಾರೀಖು ೨೦ ಮಾಹೆ ಅಕ್ಟೋಬರ ೧೯೨೧

ಕರಾಚಿ ನಿರ್ಣಯಗಳು.

ಕಳೆದ ಜುಲೈ ತಿಂಗಳಲ್ಲಿ ಕರಾಚಿ ಪಟ್ಟಣದೊಳಗೆ ಮಹಮ್ಮದೀಯ ಮುಂದಾಳುಗಳು ಕೂಡಿ, ಖಿಲಾಫತ ಪರಿಷತ್ತನ್ನು ನೆರವೇರಿಸಿದ್ದರು. ಈ ಪರಿಷತ್ತಿನೊಳಗೆ ಮುಸಲಮಾನರು ಸದ್ಯದ ಖಿಲಾಫತಿನ ಪರಿಸ್ಥಿತಿಯಲ್ಲಿ ಲಷ್ಕರಗೂ [illegible]ಗೆ ನೌಕರಿಯನ್ನು ಸ್ವೀಕರಿಸಬೇಕೋ ಬಾರದೋ ಎಂಬ ಬಗ್ಗೆ ಚರ್ಚೆಮಾಡಿ ನೌಕರಿಯನ್ನು ಸ್ವೀಕರಿಸಬಾರದು ಎಂಬರ್ಥದ ಧಾರ್ಮಿಕ ಸ್ವರೂಪದ ನಿರ್ಣಯವು ಪಾಸಲ್ಪಟ್ಟಿತ್ತು. ಕರಾಚಿ ನಿರ್ಣಯಗಳೆಂದು ಇವು ಈಗ ವಿಖ್ಯಾತವಾಗಿರುವವು. ಈ ನಿರ್ಣಯಗಳನ್ನು ಅಲ್ಲೀ ಬಂದವರೆಲ್ಲರಿಗೂ [illegible]. 'ಶಂಕರಾಚಾರ್ಯರಿಗೂ, ಡಾ|| ಕಿಚ್ಲೂ ಮೊದಲಾದ ಬೇರೆ ನಾಲ್ಕು ಮಹಮ್ಮದೀ ಮುಖಂಡರಿಗೆ ಗಿರಫ್ತಾರ ಮಾಡಿ, ಪೀನಲಕೋಡಿನ ಕಲಮು ೧೨೦ ಬ, ಗುನ್ಹೆಯಾಗಿದೆಂಬ ಕಾರಣದಿಂದ ಅಭಿಯೋಗ [illegible] ತರವೋಲೆ ರಾಜಕೀಯ ಸ್ವರೂಪದ ಖಟ್ಲೆ ನಡೆದಿರುವದು. ಈ ಖಟ್ಲೆಯೊಳಗಿನ ಸರಕಾರಿ ಧೋರಣದ ನೀತಿಗಳು ವಿಲಾಯತಿಯಿಂದ ಉಗಮವಾಗಿ ಹೊರಬಿದ್ದಿರುವವೋ ಸಿಮ್ಲಾದಿಂದ ಅಲ್ಲವೆ ಮುಂಬಯಿಯಿಂದಲೇ ಉಗಮವಾಗಿ ಹೊರಬೀಳುತ್ತಿರುವವೋ ಎಂಬುದನ್ನು ಚಾಣಾಕ್ಷರಾದ ರಾಜನೀತಿಜ್ಞರು ತರ್ಕವಿತರ್ಕ ಮಾಡುತ್ತಿರಲಿ. ಈ ಖಟ್ಲೆಗೆ ನಿಮಿತ್ತ ಕಾರಣವಾದ ಕರಾಚಿಯ ನಿರ್ಣಯದೊಳಗೆ ಒಳಗೊಂಡ ತತ್ವಗಳು ರಾಷ್ಟ್ರೀಯತನದ ಧಾರ್ಮಿಕ ಭಾವನೆಗಳ ಮತ್ತು ರಾಜಕೀಯ ಸ್ವಾಭಾವಿಕ ಹಕ್ಕುಗಳ ವ್ಯಾಪಕ ಸ್ವರೂಪದಿಂದ ಸಮ್ಮಂಧಿಸಿರುವ ಮೂಲಿಕ ತತ್ವಗಳು. ಅಖಿಲ ಭಾರತೀಯ ರಾಷ್ಟ್ರೀಯ ಮಹತ್ವವು ಸಕಾರಣವಾಗಿ ಪ್ರಾಪ್ತವಾಗಿದೆಂದು ಯಾರಿಂದಲೂ ಅಲ್ಲಗಳೆಯಲಿಕ್ಕಾಗದು. ಆದಕಾರಣ, ಕರಾಚಿಯ ನಿರ್ಣಯಗಳ ಉಪದೇಶದ ಪುನರುಚ್ಚಾರವನ್ನು ರಾಷ್ಟ್ರೀಯ ಸಭೆಯ ೩೭ ಮುಖಂಡರು ಜಾಹೀರ ಪತ್ರಕದ ಮುಖಾಂತರ ಸಹಿಸಿ ಪ್ರಕಟಿಸಿದ್ದರು. ಕಾಂಗ್ರೆಸ ಕಾರ್ಯಕಾರಿ ಕಮಿಟಿಯು ಕರಾಚಿಯ ನಿರ್ಣಯಗಳನ್ನು ಸ್ಪಷ್ಟೀಕರಿಸುವ ಮತ್ತು ಸ್ಪಷ್ಟೀಕರಿಸುವ ಠರಾವುಗಳನ್ನು ಪಾಸಮಾಡಿದ್ದು ಸುಸಂಗತವಾಗಿದೆ. ಪ್ರಾಂತಿಕ ಹಿಂದೀ ರಾಜಕಾರಣದ ಸ್ಪಷ್ಟವಕ್ತೃತನಕ್ಕೂ ಅದು ಶೋಭಿಸುವಂತಿದೆ. ನೌಕರಿಯನ್ನು ಬಿಡುವವರಿಗೆ ಉದರ ಪೋಷಣದ ಸೋಯಿಯನ್ನು ಮಾಡಿಕೊಡುವದು ರಾಷ್ಟ್ರೀಯ ಸಭೆಗೆ ಸದ್ಯಕ್ಕೆ ಸಾಧ್ಯವಿಲ್ಲದ್ದರಿಂದ, ಅಂದ ಜವಾಬದಾರಿಯನ್ನು ಈಗಲೇ ಹೊತ್ತುಕೊಳ್ಳಲಿಕ್ಕೆ ರಾಷ್ಟ್ರೀಯ ಸಭೆಯ ಚಾಲಕರು ಇಚ್ಛಿಸದಿದ್ದರೂ, ನೂಲು ತೆಗೆಯುವದೂ, ಬಟ್ಟೆ ನೇಯುವದೂ, ಸ್ವದೇಶಿ ಬಟ್ಟೆಗಳ ವ್ಯಾಪಾರದ ವಿಸ್ತಾರವನ್ನು ಮಾಡುವದೂ ಇವೇ ಮೊದಲಾದ ಧಂದೆಗಳು ರಾಷ್ಟ್ರಭಕ್ತಿಯಿಂದ ಪ್ರೇರಿತರಾದ ದೇಶಸೇವಕರಿಗೆ ಸುಖದಿಂದ ಉದರನಿರ್ವಾಹವನ್ನು ಸಾಗಿಸಲಿಕ್ಕಾಗುವಷ್ಟು ಬಹಳೇ ದೊಡ್ಡದಾಗಿರುವವು, ಎಂದು ಕಾಂಗ್ರೆಸ ಕಾರ್ಯಕಾರಿ ಕಮಿಟಿಯು ಅಭಿಪ್ರಾಯಪಟ್ಟಿರುವದು. ಈ ಉಪದೇಶವನ್ನು ಮನ್ನಿಸಿ, ತಮ್ಮ ಉದರನಿರ್ವಹಣದ ಸಾಧನವಾದ ಸರಕಾರಿ ನೌಕರಿಯನ್ನು ತಿಲಾಂಜಲಿಯನ್ನು ಬಿಡುವವರು ಎಷ್ಟು ಮಂದಿ ಮುಂದೆ ಬರುವರೆಂಬುದು ವ್ಯವಹಾರಿಕ ರಾಜಕಾರಣದ ಪ್ರಶ್ನೆಯಾಗಿರುವದು. ಅದೇನಿದ್ದರೂ ಇರಲಿ. ಈ ತತ್ವದ ಉಪದೇಶವು ಈಗ ಹಿಂದುಸ್ಥಾನದೊಳಗೆಲ್ಲ ಭರದಿಂದ ಪ್ರಸರಿಸಹತ್ತಿದೆಂದು ಸರಕಾರಕ್ಕೂ ಕಂಡುಬರದಿರದು. ಇದರೊಳಗಿನ [illegible] ಧರ್ಮದ ತತ್ವಗಳಷ್ಟು [illegible] ನಂಬುವ [illegible] ಸಿಜವು [illegible] ಕರಾಚಿಯ ನಿರ್ಣಯಗಳನ್ನು [illegible]ರಿಂದ ' [illegible] ' ಎಂಬಂತೆ ಈ ತತ್ವಗಳು ಪ್ರಸಿದ್ಧವಾಗಲಿಕ್ಕೆ ಕಾರಣರಾಗುವರು [illegible] ಇರಲಿ.

[illegible] ಸರಕಾರದ [illegible] ಸರಕಾರಿ ನೌಕರಿಯನ್ನು [illegible] ಮಾಡುವವರು ಇಲ್ಲವೆ ಕಾಂಗ್ರೆಸ ಕಮಿಟಿಯ ಈ ಠರಾವನ್ನು ಮನ್ನಿಸುವವರು ಎಷ್ಟು ಮಂದಿ [illegible]ರುವರು ಎಂಬ ಬಗ್ಗೆ ಮವಾಳ ಪಂಡಿತರೊಳಗೆ ಕುಸ್ತಾವಾದವಿವಾದವು ನಡೆದದೆ. ಪಂಡಿತರ ಕಡೆಯಿಂದ ಎರಡು ಆಕ್ಷೇಪಗಳು ಮುಂದೆ ಬಂದಿರುವವು. ಮತ್ತು ಅವುಗಳನ್ನು ಅವಲಂಬಿಸಿ, ಅವರು ತಮ್ಮ ಸಿದ್ಧಾಂತಗಳನ್ನು ಪ್ರತಿಪಾದಿಸಿರುವರು. ಕಾಂಗ್ರೆಸ ಕಾರ್ಯಕಾರಿ ಕಮಿಟಿಯ ಠರಾವುಗಳು ಅವ್ಯವಹಾರ್ಯವಿದ್ದ ಮೂಲಕ, ಅವುಗಳನ್ನು ಸರಕಾರವು ಕಟ್ಟಕಡೆಯ ಬುಟ್ಟಿಯೊಳಗೆ ಬಿಸಾಡಬಹುದು. ಅಲ್ಲೀ ಬಂಧುಗಳಮೇಲೆ ಖಟ್ಲೆ ಮಾಡಿ, ಧೋರಣದ ದೃಷ್ಟಿಯಿಂದ ಸರಕಾರವು ಮಾಡಿದ ದೊಡ್ಡ ತಪ್ಪನ್ನು ಮೊದಲೇ ಮಾಡಿದ್ದಾಗ, ದೇಶದಲ್ಲೆಲ್ಲ ಕಾಂಗ್ರೆಸ ಕಮಿಟಿಯ ಠರಾವುಗಳನ್ನು ಸ್ವೀಕರಿಸುವ ಮುಖಂಡರಮೇಲೆ ಖಟ್ಲೆ ಮಾಡುವ ಸತ್ರವನ್ನು ಕರೆದರೆ, "भवति विनिपात शतमुख·" ಎಂಬಂತಾಗುವದು. ಇಂಥ ಸಿದ್ಧಾಂತಗಳನ್ನು ಮವಾಳಪಕ್ಷದವರ ತಮ್ಮ ವೃತ್ತಪತ್ರಗಳ ಮುಖಾಂತರ 'ಲೀಡರ' ಮುಂತಾದ ದಸ್ತ ಪತ್ರಿಕೆಯ ಬಾಯಿಯಿಂದ ನುಡಿಯುತ್ತಿರುವರು. ಲೀಡರವು ಪ್ರತಿಪಾದಿಸುವದೇನಂದರೆ— ಸರಕಾರಿ ನೌಕರರ ಒಂದು ಜಾಗೆಯು ಖಾಲಿ ಬಿದ್ದಕೂಡಲೇ, ನೂರಾರು ಉಮೇದವಾರರು ಒಳಹೊಕ್ಕಲಿಕ್ಕೆ ಬಡದಾಡುತ್ತಿರುವಾಗ, ಇಂಥ ಉಪದೇಶದಿಂದ ಪರಿಣಾಮವೆಷ್ಟಾಗುವದು? ಲೀಡರದ ಸಲ್ಲೆಯು ಪ್ರಾಮಾಣಿಕವದೆ, ಗ್ರಾಹ್ಯವದೆಂದು ನಮ್ಮದೂ ಮತವದೆ. ಇಷ್ಟೇ ಅಲ್ಲ. ಸರಕಾರವು ಈ ಸಲ್ಲೆಯನ್ನು ಮನ್ನಿಸಿ, ಕರಾಚಿ ಖಟ್ಲೆಗಳನ್ನು ಹಿಂದಕ್ಕೆ ತಕ್ಕೊಂಡು, ತಮ್ಮ ಧೋರಣದ ವಿಷಯವಾಗಿ ಉಂಟಾದ ನಗೆಯನ್ನು ತಡಿಸಬಹುದೆಂದು ನಾವೂ ಹೇಳುವೆವು. ಆದರೆ, ಒಂದು ಸಂಗತಿಯ ಬಗ್ಗೆ ಮಾತ್ರ, ಪ್ರಾಮಾಣಿಕತನದಿಂದ ನಮ್ಮ ಮತಭೇದವನ್ನು ಪ್ರಕಟಿಸಿದ ಹೊರ್ತು ನಮ್ಮಿಂದ ಇರಲಾಗದು. ಸರಕಾರಿ ನೌಕರಿಯಂದರೆ, ಅದೊಂದು ದೊಡ್ಡ ಭಾಗ್ಯಪ್ರಾಪ್ತಿಯು, ಅಮಲದಾರನೆಂದರೆ, ದೇವದೂತನು ಎಂಬ ಭಾವನೆಗಳು, ಕಳೆದ ೩೦-೪೦ ವರುಷಗಳಿಂದ ಹೆಚ್ಚೆಚ್ಚು ಲುಪ್ತವಾಗಹತ್ತಿರುವವು. ಸರಕಾರಿ ನೌಕರಿ ಹೊಂದುವವರ ಸಂಖ್ಯೆಯು ಶತಪ್ರಮಾಣದಿಂದ, ಸಹಸ್ರ ಪ್ರಮಾಣದಿಂದ ಇಂದಿಗೆ ಎಣಿಸಲಿಕ್ಕಾಗುತ್ತದೆಂದು ಭಾವಿಸಿದರೂ ಈ ನೌಕರಿಯು ಬಂಗಾರದ ಬೇಡಿಯನ್ನು ಹಾಕಿಕೊಳ್ಳ ಬಾರದೆಂಬ ಮತವು ಅಷ್ಟೇ ಅಷ್ಟೇ ನಿಶ್ಚಿತವಾಗಿ ಪಸರಿಸುತ್ತಿದೆಂದು ಕಂಡುಹಿಡಿಯಲಿಕ್ಕಾಗ ಮದಿಲ್ಲವೇ? ಪ್ರತಿ ಒಂದು ಜಿಲ್ಲೆಯಲ್ಲಿ ಸರಕಾರಿ ಖಾತೆಯೊಳಗಿನ ನೌಕರರಾಗಿದ್ದವರಿಗಿಂತ, ಹೆಚ್ಚು ಬುದ್ಧಿವಂತರ, ಕುಶಲರೂ ಜಾಣರೂ, ಕರ್ತಬಗಾರರು ಸರಕಾರಿ ನೌಕರಿಯ ಹೊರಗೆ ಹೆಚ್ಚು ಪ್ರಮಾಣದಿಂದ ಸಂಗೀತವಾಗಿ ಸಿಗುವರು. ಎಂದಮೇಲೆ ಉತ್ತಮ ಮಾಡ ಹುಕಾರ, ರಾಯ ಬ ಜನರು ಸರಕಾರಿ ನೌಕರಿಗಾಗಿ ಎಲ್ಲ ಕಡೆಯಲ್ಲಿ ಬಾಯಿ ತೆರೆದು ಕೂತಿರುವರೆಂಬುದು ಅಬಾಧಿತ ಸಿದ್ಧಾಂತವಲ್ಲ. ನಮ್ಮ ದೇಶದ ನಾಂಪತ್ತಿಕ ಬಡತನದಿಂದ ಬಹಳೇ ಜನರು ಕಂಗಾಲರಾಗಿದ್ದರಿಂದ, ಸರಕಾರ ಇಲ್ಲವೆ ಬಿನ ಸರಕಾರಿ ನೌಕರಿಗೆ ಸಾಕಷ್ಟು ಮಂದಿ ಹಾತೊರೆಯುತ್ತಿದ್ದರೂ, ದಾರಿದ್ರ್ಯವೇ ಈ ಪ್ರವೃತ್ತಿಗೆ ಬೋಧನೆಯಾಗಿದೆಂದು ಹೇಳುವದೇ ಸತ್ಯವು. ಈಗಿನ ರಾಷ್ಟ್ರೀಯ ನಿರ್ಣಯಗಳಿಂದ ಸರಕಾರಿ ಕಚೇರಿಗಳೆಲ್ಲ ಒಮ್ಮೆಗೇ ಬರಿದಾಗುವವೆಂದು ತಿಳಿಯುವದೂ, ಅಲ್ಲೀ ಬಂಧುಗಳ ಖಟ್ಲೆಯಿಂದ ಖಿಲಾಫತ ಚಳವಳಿಯು ಅಳಿಯುವದೆಂದು ತಿಳಿಯುವದೂ, ಒಂದೇ ಬಿರದ ಮಾತು. ಆತನವು ಸರಕಾರಿ ನೌಕರಿಯ ನೈತಿಕ ಬೆಲೆಯನ್ನು ಏರಿಸುವದೂ, ಅವುಗಳ ಸಂಬಳವನ್ನು ಏರಿಸಿ ಸಾಧ್ಯವಾಗುವದೂ, ಇಲ್ಲವೇ, ದೊಡ್ಡ ಪಗಾರದ ಅಧಿಕಾರಿಗಳಿಂದ ನೌಕರರ ಬೆಕ್ಕಾಣಿ

ವು ಕಸುಬನ್ನು ಬೆಳಿಸುವದರಿಂದ, ಸಾಧ್ಯವಾಗುವದೂ ಇನ್ನೂ ಶಕ್ಯವಿಲ್ಲ. ಈ ಉಪಾಯಗಳಿಂದ ಬೆಳೆ ಸಿರುವದಕ್ಕಿಂತ, ಇಳಿಸುವ ಬಂಧವನೇ ಹೆಚ್ಚಿದೆ. ಈಗಿನ ಪರಿಸ್ಥಿತಿಯಲ್ಲಿ ಸರಕಾರಿ ನೌಕರಿಯು ಮೇಲಾಟವು ವಾಸ್ತವಿಕವಾಗಿಸೆಂದು ಕಂಡುಬಂದರೂ, ಇನ್ನು ಮುಂದೆ ಅನೇಕ ಕಾರಣಗಳ ಮೂಲಕ, ಸರಕಾರಿ ನೌಕರಿಗೆ ಅರ್ಜಿ ಉಮೇದವಾರರು ಮುಂದೆ ಬರುವದಕ್ಕಿಂತ, ಅಂಥಂವವರು ನಾಳಾಯಿಬಿಡುವರದಕತೆಯಲ್ಲಿ ಹೆಚ್ಚು ಪ್ರಮಾಣದಿಂದ ಮುಂದೆ ಬರುವರೆಂದು ನಮಗಂತೂ ಕಾಣುತ್ತದೆ. ದಿನೇ ದಿನೇ ಕಾರ್ಯಕ್ಷಮ ಉಮೇದವಾರರು ಈ ನೌಕರಿಗೆ ಸಿಗಾಡುವದಕ್ಕಿಂತ ತಳಗಿನ ಗೊಂಬೆಗಳೇ ಸಿಗಾಡುತ್ತವೆಂದು ಸರಕಾರಕ್ಕೆ ಕಂಡು ಬರುವದು ಸೀಗಾಗಿ ಸರಕಾರಿ ನೌಕರಿಯ ವೃತ್ತಿಯು ಮಾನ್ಯತೆಯ ದೃಷ್ಟಿಯಿಂದ ಮೆಟ್ಟಿ ಇಳಿಯುತ್ತಿರುವಾಗ, ಕರಾಚಿಯ ನಿರ್ಣಯಗಳು ಈ ಇಳತದ ಪ್ರವಾಹದ ಗತಿಯನ್ನು ಹೆಚ್ಚಿಸದೆ ಎಂದೂ ಇರಲಾರವೆಂಬುದು ಲೀಲಾ ಬಂದ ಸರಕಾರಿ ಸಲ್ಲಾಗಾರರು ಮರೆಯ ಕೂಡದು. ಈ ಗತಿಯನ್ನು ತಡಿಸಿ ಅದನ್ನು ಪೂರ್ಣವಾಗಿ ತಿರುಗಿಸಬೇಕಾದರೆ, ಸರಕಾರಿ ನೌಕರಿಯ ಮಾನ್ಯತೆಯನ್ನೂ, ನೈತಿಕ ಬೆಲೆಯನ್ನೂ ಏರಿಸಬೇಕಾದರೆ, ಸ್ವರಾಜ್ಯದ ದಾನದಿಂದಲೇ ಸಾಧ್ಯವದೆ ಸ್ವರಾಜ್ಯದ ಸ್ವಾಭಿಮಾನವು ಜನರಲ್ಲಿಯೂ ಸರಕಾರದಲ್ಲಿಯೂ ಉಂಟಾಗಲು, ಕರಾಚಿ ನಿರ್ಣಯಗಳಂಥ ಠರಾವುಗಳು ನಿಸ್ಸಂಶಯವಾಗಿ ನಿರರ್ಥಕವಾಗುವವು, ನಿಷ್ಫಲವಾಗುವವು. ಅಂದಿನತನಕ ಅವು ನಿಷ್ಪ್ರಯೋಜಕವೂ, ನಿಷ್ಫಲವೂ ಎಂದು ನಮ್ಮಿಂದ ಯಾರಿಗೂ ವಂಚಿಸಲಿಕ್ಕಾಗದು.

ಸ್ಫುಟ ಸೂಚನೆಗಳು.

ಧಾರವಾಡದ ಗೋಳೀಬಾರದ ಖಟ್ಲೆಯಲ್ಲಿ ನ್ಯಾಯಾಧೀಶರಾದ ಫೋಟರಫೀಲ್ಡ ಸಾಹೇಬರು ಕೋರ್ಟು ತೀರ್ಪಿನ ವಿಷಯದಲ್ಲಿ ಬರೆಯುವಾಗ, ಸತ್ಯವನ್ನರಿತ ಲೋಕಮತದ ದೃಷ್ಟಿಯಿಂದ ಅನ್ಯಾಯವಾಯಿತು" ಎಂಬ ಅಭಿಪ್ರಾಯವನ್ನು ನಾವು ನಮ್ಮ ಕಳೆದ ಸಂಚಿಕೆಯಲ್ಲಿ ವ್ಯಕ್ತಗೊಳಿಸಿರುತ್ತೇವಷ್ಟೇ. ಆದರೆ, ಆ ಖಟ್ಲೆಯಲ್ಲಿ ಆರೋಪಿಗಳು ತಮ್ಮ ಬಚಾವು ಮಾಡಿಕೊಳ್ಳಲಿಚ್ಛಿಸದೆ ಇದ್ದ ಮೂಲಕ, ನ್ಯಾಯಾಧೀಶರಿಗೆ ಇಕ್ಕಡೆಯ ನ್ಯಾಯಕೊಡಲಿಕ್ಕೆ ಆಸ್ಪದವಾಗದೆ ಇದ್ದರೂ, ಅವರು "ತಮ್ಮ ಮುಂದೆ ಬಂದ ಪುರಾವೆಯನ್ನು ಅವಲಂಬಿಸಿ, ಯುಕ್ತ ಕಂಡ ನ್ಯಾಯವನ್ನು ಕೊಟ್ಟಿರಬೇಕೆಂದು" ಗ್ರಹಿಸಿ, ಆ ರೀತಿಯಲ್ಲಿಯೂ ಅವರಿಗೆ ಸಹಾನುಭೂತಿಪರರಾಗಿ ನಾವು ನಮ್ಮ ಮತವನ್ನು ಪ್ರಕಟಿಸಿದ್ದೆವು. ಆ ಸಮಯ ಜಜಮೆಂಟಿನ ನಕ್ಕಲು ನಮ್ಮ ಕೈಸೇರಿರಲಿಲ್ಲ. ಆದರೆ, ಈ ಮರುವಾಯ ಹಿಂದಿನಿಂದ ಅವರ ಜಜಮೆಂಟಿನ ಕೆಲ ಭಾಗಗಳು ಪ್ರಕಟವಾದಂಥವು ನೋಡಲಾಗಿ, ಫೋಟರಫೀಲ್ಡ ಸಾಹೇಬರು ಸಾಧ್ಯವಿರುವಷ್ಟು ಇಕ್ಕಡೆಯ ನ್ಯಾಯವನ್ನು ಕೊಡಲು ಪ್ರಯತ್ನಿಸುವ ಮಾತಂತೂ ಒತ್ತಟ್ಟಿಗಿರಲಿ, ಪೂರ್ಣವಾಗಿ ಒಕ್ಕಡೆಯ ನ್ಯಾಯವನ್ನು ಕೊಡಲುದ್ಯುಕ್ತರಾದಂತೆಯೇ ನಿಷ್ಕಾರಣವಾಗಿ ಫಿರ್ಯಾದಿ ತರ್ಫಿನ ಸಮರ್ಥನೆ ಮಾಡುವದರಲ್ಲಿ ಪ್ರವೇಶಿಸಿದ್ದು ಕಂಡುಬರುವದು. ಆರೋಪಿಗಳಮೇಲೆ ಹೊರಿಸಿದ ಅತ್ಯಾಚಾರದ ಕೃತ್ಯಗಳನ್ನು ಅವರು ಮಾಡಿದ್ದರೋ ಏನೆಂಬ ಸಂಗತಿಯನ್ನು ತಮ್ಮ ಮುಂದೆ ಬಂದ ಪುರಾವೆಯಿಂದ ನಿರ್ಣಯಿಸುವಾಗ, ಶಿವಲಿಂಗಪ್ಪ ಪೌಜದಾರನು ಮಾಡಿದ ಗೋಳೀಬಾರವು ಸಕಾರಣವಾಗಿತ್ತೋ ಅಥವಾ ಅಸಮರ್ಥನೀಯವಾಗಿತ್ತೆಂಬ ಮುದ್ದೆಯ ಮೇಲೆ ತಮ್ಮ ಅಯಾಚಿತ ಅಭಿಪ್ರಾಯವನ್ನು ತೋರಿಸಿದುವ ಆತಿ ಪ್ರಸಂಗವ್ಯಾಕೆ? ನ್ಯಾಯಾಧೀಶರು ಈ ವಿಷಯದಲ್ಲಿ ಅಭಿಪ್ರಾಯವನ್ನು ಕೊಡಬಾರದಾಗಿ ಆರೋಪಿತರಲ್ಲೊಬ್ಬನು ಹೇಳಿಕೊಂಡಿರುವನಾದರೂ ಶಿವಲಿಂಗಪ್ಪನಮೇಲೆ ಆರೋಪಿತರು ಎಷ್ಟೋ ಅಯಥಾರ್ಥ ಆರೋಪಗಳನ್ನು ಮಾಡಿರುವದರಿಂದ ಈ ಮುದ್ದೆಯನ್ನು ಪರ್ಯಾಲೋಚಿಸಿ ತಮ್ಮ ನಿರ್ಣಯವನ್ನು ಜಜಮೆಂಟಿನಲ್ಲಿ ಹಾಕಿಡಿಸುವದು ಅವಶ್ಯವಾಯಿತೆಂದು ಫೋಟರಫೀಲ್ಡ ಸಾಹೇಬರು ಹೇಳಿದ್ದಾರೆ. ಆರೋಪಿತರ ತರ್ಫಿನಿಂದ ಸಾಕ್ಷಿ ಕೊಡಲಿಚ್ಛಿಸುವ ಪ್ರಿನ್ಸಿಪಾಲ ಕರಿಸಿ, ಆರೋಪಿಗಳ ಬಚಾವಿನ ಸಾಧನೆ ಸಾಗಿರುವದು. ತನ್ನ ಕಾಲದ ವ್ಯಾಪ್ತಿಯ ನಾರಿ ಹೇಳಿದ ಸಿದ್ಧ ಕ್ಷಮಾತಿ ನ್ಯಾಯಾಧೀಶರವನು, ಶಿವಲಿಂಗಪ್ಪನಮೇಲೆ ಹೊರಿಸಲ್ಪಟ್ಟ ಆರೋಪದ ನಿರಾಕರಣೆಗಾಗಿ, ಪೂರ್ಣ ಸಾಧಕಬಾಧಕ ಪುರಾವೆಯು ತಮ್ಮ ಮುಂದೆ ಬಾರದಿದ್ದ ಮುದ್ದೆಯ ಮೇಲೆ ನಿರ್ಣಯವನ್ನು ಕೊಡಲು ಹವಣಿಸುವದು ತೀರ ಅಯೋಗ್ಯವಲ್ಲವೋ?

---

೨ "ಸರಕಾರೀ ಅಧಿಕಾರಿಗಳು ಹೇತುಪುರಸ್ಸರ ಈ ಗೋಳೀಬಾರ ಮಾಡಿಸಿ, ಈ ಖಟ್ಲೆಯನ್ನು ನಿರ್ಮಿಸಿರುವರು" ಎಂದು ಆರೋಪಿತರು ಪ್ರತಿಪಾದಿಸಿದ ಸಂಗತಿಯು ಅವಿಶ್ವಸನೀಯವೂ, ಅಸಾಧ್ಯವೂ ಎಂದು ಇವರು ನಿರ್ಣಯಿಸಿದಮೇಲೆ, ಶಿವಲಿಂಗಪ್ಪನ ವಿರುದ್ಧ ಮಾಡಿದ ತಕ್ರಾರುಗಳ ನಿರಾಕರಣೆಯು ಇವರ ದೃಷ್ಟಿಯಿಂದ ಸಹಜವಾಗಿ ಆದಂತೆಯೇ ಆಯಿತು. ಹೀಗಿರುವಾಗ, ತೀರ ಸ್ವತಂತ್ರ ವಿಚಾರಾರ್ಹವಾದ ಅಪ್ರಸ್ತುತ ಸಂಗತಿಯು ಗೂಢವೆಂಬುದು ಇವರಿಗ್ಯಾಕೆ? ಗೋಳೀಬಾರಿನ ಯೋಗ್ಯಾಯೋಗ್ಯತೆಯು ನಿರ್ಣಯವು ಈ ನ್ಯಾಯಾಸನದಮುಂದೆ ನಡೆದ ಈ ಕಟಿನದಲ್ಲಿ ವಿಚಾರದ ಮುದ್ದೆಯಾಗಿತ್ತೋ? ಆ ವಿಷಯದ ಎಲ್ಲ ಸಾಧಕಬಾಧಕ ಪುರಾವೆಯು ಈ ಮೊಕದ್ದಮೆಯಲ್ಲಿ ಸ್ವತಂತ್ರವಾಗಿ ಹಾಜರಾಗಿತ್ತೆಂದು ಯಾರಾದರೂ ಹೇಳಬಹುದೇ? ಇರಲಿ ಗೋಳೀಬಾರದ ಪ್ರಮಾಣವಾಗಲಿ, ಪ್ರಖರತೆಯಾಗಲಿ, ಪ್ರಸಂಗದ ಅವಶ್ಯಕತೆಯನ್ನು ಮೀರಿ ಆಗಲಿಲ್ಲವೆಂಬದಾಗಿಯೂ, ಜಟ್ಟಿನ ಮೇಲೆ ಫೋಲೀಸರ ವರ್ತನೆಯು ಪ್ರಶಂಸಾರ್ಹವಾಗಿ ಸಹನಶೀಲತೆಯದಾಗಿತ್ತೆಂದೂ ಸಹ ಇವರು ಬರೆದಿಟ್ಟಿರುವರು. ಇದು ಅನಾವಶ್ಯಕವಾದ ಅತಿಪ್ರಸಂಗದ ಪರಮಾವಧಿಯು. ಈ ಸಂದರ್ಭದಲ್ಲಿ, ಈ ವಿಷಯದ ಪುರಾವೆಯನ್ನೆಲ್ಲ ಪರಾಮರ್ಶಿಸಿ, ತೀರ್ಪುಕೊಟ್ಟ ಕಾಂಗ್ರೆಸ ಕಮಿಟಿಯವರು, ಗೋಳೀಬಾರವು ನಿರರ್ಥಕ ಅತಿಶಯವಾಗಿ ಮಾಡಿದರೆಂದೂ, ಮೂರನೇ ಸಲ ಗೋಳೀಬಾರ ಮಾಡಿದ್ದಂತೂ, ತೀರ ಅಮಾನುಷವಾಗಿತ್ತೆಂದೂ ಅಭಿಪ್ರಾಯಪಟ್ಟಿರುವರೆಂಬ ಸಂಗತಿಯನ್ನು ವಾಚಕರು ಲಕ್ಷದಲ್ಲಿಡಬೇಕು. ಆರೋಪಿಗಳಮೇಲೆ ಹೊರಿಸಿದ ಅತ್ಯಾಚಾರಗಳ ವಿಷಯದಲ್ಲಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಧಾರವಾಡದಿಂದ ಹೊರಪಡುವಂತೆ ಪರೀಕ್ಷೆ ಮಾಡದಿಲ್ಲೆಂದು ತೀರ ಅಪ್ರಸ್ತುತ ಸಂಗತಿಯ ನಿರ್ಣಯವನ್ನು ಸ್ವತಂತ್ರವಾಗಿ ಕೊಡಲುದ್ಯುಕ್ತರಾದ ನ್ಯಾಯಾಧೀಶರಿಗೆ ಯಾವ ಅತಿಪ್ರಸಂಗವೂ ಹೆಚ್ಚಿನದ್ದಾಗಿ ಕಾಣಿಸುವದಿಲ್ಲೆಂಬುದು ಸಹಜವೇ ಸರಿ!

---

೩. ಫೋಟರಫೀಲ್ಡ ಸಾಹೇಬರು ಅಪ್ರಸ್ತುತವಾದ ಈ ಸಂಗತಿಗಳನ್ನೆಲ್ಲ ತಮ್ಮ ತೀರ್ಪಿನಲ್ಲಿ ಸೇರಿಸಿ, ಅಧಿಕಾರಿಗಳ ಬಾಜುವನ್ನು ಸಮರ್ಥಿಸಿ ತಿಡಿದದ್ದು ನೋಡಿದರೆ, ಸರಕಾರದಿಂದ ಸ್ವತಂತ್ರ ಕಮಿಶನು ನೇಮಿಸಲ್ಪಟ್ಟು ಈ ಗೋಳೀಬಾರಕ್ಕೆ ಸಂಬಂಧಿಸಿದ ಮಹತ್ವದ ಎಲ್ಲ ಮುದ್ದೆಗಳ ನಿರ್ಣಯವಾಗಿ ವಸ್ತುಸ್ಥಿತಿಯ ಮೇಲೆ ಸತ್ಯದ ಬೆಳಕು ಹೆಚ್ಚಿನದು ಬೀಳುವದು ಅಧಿಕಾರಿಗಳಿಗೆ ಇಷ್ಟವಾಗಿಲ್ಲೆಂದು ಯಾರಾದರೂ ಅನುಮಾನಿಸಲಿಕ್ಕೆ ಪ್ರವರ್ತಿಸುವದು ಸಹಜವೆಂದು ತೋರುವದು. ಸಿಂಧಪ್ರಾಂತದಲ್ಲಿ, ಮುಲಿಯಾರಿಯಲ್ಲಿ ಆದ ಗೋಳೀಬಾರದ ಚೌಕಸಿ ಮಾಡಲಿಕ್ಕೆ ನೇಮಿಸಿದ ಕಮಿಶನಿನ ರಿಪೋರ್ಟಿನಲ್ಲಿ ಫೋಲೀಸರ ವರ್ತನದ ಬಗ್ಗೆ ಯೋಗ್ಯ ಟೀಕೆಯಾಗಿರುವದಾಗಿ ಕೇಳಿಬರುತ್ತದೆ. ಹೀಗೇನಾದರೂ ಇಲ್ಲಿಯೂ ಆಗಬಹುದೆಂದು ಅಂಜುವರೇನು? ನಿರಪರಾಧಿಗಳಿಗೂ, ನಿದೋಷಿಗಳಿಗೂ ಸತ್ಯದ ಬೆಳಕಿನ ಭಯವ್ಯಾಕೆ? ಈಗ ಯಾರಾದರೂ ಸ್ವತಂತ್ರ ಕಮಿಶನು ನೇಮಿಸಬೇಕಾಗಿ ಹೇಳಿದರೆ, ಎಲ್ಲ ಮುದ್ದೆಗಳಮೇಲೆ ಪೂರ್ಣ ಪುರಾವೆಯನ್ನು ನಿರೀಕ್ಷಿಸಿ, ಸೆಶನ್ಸ ಜಜರು ತೀರ್ಪು ಕೊಟ್ಟಿರುವಾಗ, ಪುನಃ ಕಮಿಶನು ನೇಮಿಸಿ, ವಿಚಾರ ಮಾಡುವ ಅವಶ್ಯಕತೆಯಿಲ್ಲೆಂದು ಸರಕಾರದವರು ಹೇಳಲಿಕ್ಕಾಗುವಂತೆ, ಜಜ ಸಾಹೇಬರು ಅವರ ಮಾರ್ಗವನ್ನು ಸುಲಭವಾಗಿ ಕೊಟ್ಟಂತಾಗಿದೆಂಬ ಸಂಗತಿಯು ಸಿದ್ಧ. ಆದರೆ, ನಾವು ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ, ಕಾಂಗ್ರೆಸ ಕಮಿಶನಿನ ಅಭಿಪ್ರಾಯಕ್ಕೂ, ಕೋರ್ಟಿನ ತೀರ್ಪಿಗೂ ಅಜಗಜಾಂತರ ಬಿದ್ದಿರುವದರಿಂದ, ಲೋಕಮತಕ್ಕೆ ಸಮಾಧಾನಪಡಿಸಲಿಕ್ಕೆ ಬಿನಸರಕಾರಿ ಬಹುಮತದ ಸ್ವತಂತ್ರ ಕಮಿಶನು ನೇಮಿಸಿ, ವಿಚಾರ ಮಾಡಿಸುವದೊಂದೇ ಉಪಾಯ ಉಳಿದದೆ. ಇದ್ದ ಸ್ಥಿತಿಯು ಹೀಗೇ ಉಳಿದರೆ ಜನರ ಮನಸ್ಸಮಾಧಾನವಾಗುವ ಬಗೆ ಹೇಗೆ? ಯುವರಾಜರು ನವಂಬರ ತಿಂಗಳಲ್ಲಿ ಬರುವರಂತೆ, ಮೌಲಾನಾ ಅಲ್ಲೀಬಂಧು ಪ್ರಭೃತಿ ಮುಂದಾಳುಗಳಮೇಲಿನ ಖಟ್ಲೆಯು ಇದೇ ತಿಂಗಳ ೨೪ ನೇ ತಾರೀಖಿಗೆ ಮುಂದೆ ನಡೆಯುವದೆಂದು ಸುದ್ದಿ. ಧಾರವಾಡದ ಖಟ್ಲೆಯ ತೀರ್ಪಂತೂ ಹೀಗಾಯಿತು. ಕರ್ನಾಟಕದ ಜನತೆಯ ಅಂತಃಕರಣಕ್ಕೆ ಉಂಟಾಗಿರುವ ದುಃಸಹ ತಾಪವನ್ನು ಸ್ವಲ್ಪವಾದರೂ ದೂರಪಡಿಸುವದು ಸರಕಾರಕ್ಕೆ ಇಷ್ಟವಾಗಿರುವದಾದರೆ ಧಾರವಾಡದ ಖಟ್ಲೆಯೊಳಗಿನ ನಿರಪರಾಧಿಯಾಗಿರುವ ಆರೋಪಿತರು ಯೇರವಡಾ ತುರಂಗದಿಂದ ಬಿಡುಗಡೆ ಹೊಂದುವಂತೆಯೂ, ಜನರ ಅವಿಶ್ವಾಸಕ್ಕೆ ಪಾತ್ರರಾದ ಸ್ಥಾನಿಕ ಅಧಿಕಾರಿಗಳಿಗೆ ಧಾರವಾಡದಿಂದ ಬಿಡುಗಡೆ ಮಾಡಿಸುವಂತೆಯೂ ಏರ್ಪಡಿಸ ಬೇಕು. ಸರಕಾರದವರ ಅತ್ಯಾವಶ್ಯಕ ಕರ್ತವ್ಯವು ಇಲ್ಲಿ ಅವರು ಲಕ್ಷ ಪೂರೈಸುವರೇನು?

---

೪ ಯುವರಾಜರ ಆಗಮನವಾದಾಗ, ಭಾರತಪುತ್ರರ ವರ್ತನವು ಹೇಗಿರಬೇಕು? ಎಂಬ ಪ್ರಶ್ನೆಗೆ

ಕಾಂಗ್ರೆಸ ಕಾರ್ಯಕಾರೀ [illegible] ಹಿಂದೀ ರಾಷ್ಟ್ರೀಯ ವರ್ಕಿಂಗ್ ಉತ್ತರವನ್ನಿತ್ತಿರುವದು. ಯುವರಾಜರ ಆಗಮನದ ಬಹಿಷ್ಕಾರವನ್ನು ನಾವೇಕೆ ಮಾಡಬೇಕು ಎಂಬ ಬಗ್ಗೆ ಯುವರಾಜರೇ ಒಂದು ಕಾರಣವನ್ನು ತೋರಿಸಿರುವರು. ಇಂಗ್ಲಂಡದಲ್ಲಿ ಕಾರಖಾನೆಗಳಿಗೆ ಕೆಲಸವಿಲ್ಲದೆ ಕೂಲಿಕಾರರು ಉಪವಾಸ ಬೀಳುತ್ತಿರುವರು. ಇವರ ಹೊಟ್ಟೆ ಉರಿಯುವದನ್ನು ಹೇಗೆ ನಂದಿಸುವದು, ಇವರಿಗೆ ಮೊದಲಿನಂತೆ ಹ್ಯಾಗೆ ಕೆಲಸ ಹಚ್ಚಿಕೊಡುವದು ಎಂಬ ವಿವಂಚನೆಯಲ್ಲಿ ವಿಲಾಯತಿಯೊಳಗಿನ ಮುತ್ಸದ್ದಿಗಳು [illegible] ಹೋಗಿರುವರು. ತನ್ನ ಪೌರ್ವಾತ್ಯ ಪ್ರವಾಸದಲ್ಲಿ ಕಚ್ಚಾ ಮಾಲು ಎಲ್ಲೆಲ್ಲಿ ಎಷ್ಟೆಷ್ಟು ಸಿಗುತ್ತದೆ, ಅಲ್ಲಿ ಪಕ್ಕಾ ಮಾಲು ಎಷ್ಟೆಷ್ಟು [illegible] ಎಂಬ [illegible] ತಾನು ಮಾಡುವನೆಂದು [illegible] ಯುವರಾಜರು ತಮ್ಮ [illegible] ಭಾಷಣದಲ್ಲಿ [illegible] ರಿಸಿದರು. [illegible]

[illegible]

—:○:—

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಯೂ ಅಲ್ಲದ್ದು [illegible]

[illegible] ಧಾನ್ಯಗಳ ಧಾರಣೆ ತೇಜಿಯಲ್ಲಿದೆ. [illegible] ಮಾಲು [illegible] ಆಡಿಕೆಯ [illegible]

ಕಳೆದ [illegible] ಎಲ್ಲ [illegible] ಅಂಗಡಿಕಾರರು ಪರದೇಶೀ ಸಕ್ಕರೆ [illegible] ಉಪಯೋಗಿಸುವದಿಲ್ಲೆಂದು ಪ್ರತಿಜ್ಞೆ ಮಾಡಿದ ಪ್ರಕಾರ ಸ್ವದೇಶೀ ವ್ರತವನ್ನೇ [illegible]

ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿಯ ದೇವಳದಲ್ಲಿ ಶ್ರೀ ಗೆರಸಪ್ಪೆ [illegible] ಹರಿಸಂಕೀರ್ತನೆಯಿಂದಲೂ [illegible] ಸ್ವದೇಶೀ ವ್ರತದ ಬೋಧನೆಯಿಂದಲೂ [illegible] ಪರದೇಶಿಯ ಬಹಿಷ್ಕಾರಕ್ಕಾಗಿ ಮತ್ತು ಸ್ವದೇಶಿಯ ಪುರಸ್ಕಾರಕ್ಕಾಗಿ [illegible] ಹರಿದಾಸರಿಗೆ [illegible]

ರುವದು. ಅದನ್ನು ಬರೇ ಹಿಂದೂ ಸಮಾಜಕ್ಕೆ ಕೈರಾಟಿಗಳೂ, ಖಾದೀ ಟೊಪ್ಪಿಗೆಗಳೂ, ಅಂಗಿಗಳೂ ಪೂರೈಕೆ ಮಾಡುವದರಲ್ಲಿ ಬರುವದೆಂದು ತಿಳಿಯುತ್ತದೆ.

[illegible] ವಿದ್ಯಾಭಿವೃದ್ಧಿ ಫಂಡಿನ ಕಮಿಟಿಯು ಬಹಳ ವರ್ಷಗಳಿಂದ ಕೂಡಿ [illegible] ಒಬ್ಬರಿಗೆ ಫಂಡಿನ ಮುಂದಿನ ವ್ಯವಸ್ಥೆ [illegible] ಕೊಟ್ಟು [illegible] ಕೂಡಿದ [illegible] ಫಂಡಿನ ಲೆಕ್ಕಪತ್ರ ನೋಡುವವರು [illegible] ಕಮಿಟಿಯ ಉಪಾಧ್ಯಕ್ಷರ [illegible] ಉಪಾಧ್ಯಕ್ಷರಿಗೆ [illegible] (Honor) ಕಾರ್ಯದರ್ಶಿ ನೇಮಿಸಿಕೊಳ್ಳಬಹುದು [illegible] ಗೊತ್ತು ಪಡಿಸಿರುವರಂತೆ!

[illegible] ಬೋರ್ಡಿ [illegible], ರಜೆ [illegible] ನಿತ್ಯನೈಮಿತ್ತಿಕ ಕೆಲಸಗಳನ್ನು ನಿರ್ವಹಿಸಿ [illegible] ಪ್ರತ್ಯುತ್ತರವಾಗಿ [illegible] ಉತ್ತರ ಕೊಡುವದಾಗಿ [illegible] ಕೊಡಹತ್ತಿದರಂತೆ.

ಸ್ವದೇಶಿಯೋ? ಪರದೇಶಿಯೋ?

ದೀಪಾವಳಿ ಹಬ್ಬ.

ಸ್ವದೇಶಿಯೇ ಸ್ವರಾಜ್ಯವು.

[illegible]

ಅಂದರೆ—

ದೀಪಾವಳೀ ಹಬ್ಬದಲ್ಲಿ ಖಾದಿಯನ್ನೇ ಕೊಳ್ಳಿರಿ; ಖಾದಿಯನ್ನೇ ಧರಿಸಿರಿ; ಪರದೇಶೀ ಅರಿವೆಯನ್ನು ಸ್ಪರ್ಶಿಸಿ, ದೇಶದ್ರೋಹ ಮಾಡಿದ ಪಾಪಕ್ಕೆ ಗುರಿಯಾಗಬೇಡಿರಿ.

ವಾಡಿಕೆಯಂತೆ ಇಲ್ಲಿಯ ಗಿಬ್ಬ ಹ್ಯಾಸ್ಕೂಲ ಸಮ್ಮೇಲನದ ಕಾರ್ಯವು ಎಲ್ಲ ಸಮಾರಂಭಗಳಿಂದ ನೆರವೇರಿತು. [illegible] ಸಮಾರಂಭವು ನೆ. ಜಿಲ್ಲಾ [illegible] ಅಧ್ಯಕ್ಷತೆಯಿಂದಾಗಿ [illegible] ಎಲ್ಲರೂ ಎದ್ದು ನಿಂತು ಸಭ್ಯದ ‘ವಂದೇ ಮಾತರಂ’ [illegible] ರಾಷ್ಟ್ರಗೀತವನ್ನು ಹಾಡಿ, ಸಮಾರಂಭವು ವಿಸರ್ಜನ [illegible] ಇತರ ಎಲ್ಲ ಸಮ್ಮೇಲನದ ಕಾರ್ಯಗಳು ಶ್ರೀ [illegible] ಹಸ್ತದಿಂದಲೇ ಸಾಗಿದೆಂಬುದು [illegible] ನೇ ದಿವಸ ರಾತ್ರಿ ಬಗ್ಗೋಣ ಕನ್ನಡ [illegible] ಮಾಸ್ತರ ಮಿ। ಗೋಪಾಳ [illegible] ಯ್ಯರು ಕಲಿಸಿ ತಯಾರಿಸಿದ ಕನ್ನಡ [illegible] ನಾಟಕವು, ಮತ್ತು [illegible] ನೇ ದಿವಸ ರಾತ್ರಿ ಹಾಯಸ್ಕೂಲ [illegible] ಮಾಸ್ತರರಾದ ಮಿ। ಎನ್. [illegible] ಇವರ ಕಲಿಸಿ ತಯಾರಿಸಿದ [illegible] ನಾಟಕ (ದೇಶಾಭಿಮಾನ ವೈರಾಗ್ಯ) ಎಂಬ ನಾಟಕವೂ ಮಾಡಲ್ಪಟ್ಟಿತಂತೆ! ಈ ನಾಟಕವು (ಅದರೊಳಗಿನ ಬಹಳೇ ಭಾಗ ತೆಗೆದು ಹಾಕಲ್ಪಟ್ಟರೂ) ಈಗಿನ ಪರಿಸ್ಥಿತಿಗೆ ತಕ್ಕದ್ದಾಗಿತ್ತೆಂದು ಹೇಳಲ್ಪಡುತ್ತದೆ. ಸ್ತುತ್ಯವು.

ಈ ತಾಲೂಕ ಹಂದಿಗೋಣ ಗ್ರಾಮದ ರಯತರು ಪ್ರಾಥಮಿಕ ಶಾಲೆಯಿಲ್ಲದೆ ಬಹಳ ವರ್ಷಗಳಿಂದ ಒಂದು ಶಾಲೆಯ ವ್ಯವಸ್ಥೆ ಮಾಡಿಕೊಡಬೇಕಾಗಿ ಮಾಡಿದ ಬಿನ್ನಹಗಳನ್ನು ಅಧಿಕಾರಿಗಳು ಮೂಲೆಗೊತ್ತಿದ್ದರಿಂದ, ಈಗಿನ ಸ್ಥಿತಿಯಲ್ಲಿ ಅವರು ತಮ್ಮ ಕಾಲಿನಮೇಲೆಯೇ ನಿಲ್ಲಲಿಕ್ಕೆ ನಿಶ್ಚಯಿಸಿ ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಿಬಿಟ್ಟರಂತೆ!

ಗೆರಸಪ್ಪಾ— ಈ [illegible] ಸಿದ್ಧಾಪುರದಿಂದ ಶ್ರೀ ಕೀರ್ತನಕೇಸರಿ [illegible] ಬರುತ್ತಾರೆಂತ ತಿಳಿದೊಡನೆ, ಪೇಟೆ ಶೃಂಗಾರ ಮಾಡಿ ಬಾದ್ಯಘೋಷದಿಂದ ಅವರನ್ನು ಸ್ವಾಗತಮಾಡಿ, ಅದೇ ದಿವಸ [illegible] ಅವರ ಪ್ರಖ್ಯಾತ ಕೀರ್ತನೆಯು. ಬೋಧಾಮೃತವು ಈ ಪುಟ್ಟ ಹಳ್ಳಿಯವರಿಗಾಯಿತು. ಜನಸಮುದಾಯವು ೫೦೦ ರ ಮೇಲೆ ಕೂಡಿತ್ತು. ಸದರಿ [illegible] ಹ್ಯಾಸ್ಕೂಲು ಮಂತಿಗೆ ಬಗ್ಗೆ ರೂಪಾಯಿ [illegible] ಜಮಿತ.

ಸಧ್ಯಕ್ಕೆ ಇಲ್ಲಿ ದೀಪಾವಳಿ ಹಬ್ಬದ ಸಂಬಂಧ ಬರತಕ್ಕ ವ್ಯಾಪಾರ [illegible] ಗಾಡಿಗಳು [illegible] ವಗೈರೆ ಎಲ್ಲ ಮಾಲು ಬರಲಿಕ್ಕೆ ಹತ್ತಿದೆ.

ಹಳಿಯಾಳ— [illegible] ಸುಧಾರಣೆ ಆದ [illegible] ಸ್ಥಿತಿಯು ಸುಧಾರಣೆ ಆದೆ. [illegible] ನಡೆಯುತ್ತ ಆದೆ. ಖಿಲಾಫತ ಕಮೀಟಿಯವರ [illegible] ಫಂಡಿಗೆ ೫೦ ರೂಪಾಯಿಗಳು [illegible] ಕಳಿಸಿ ಕೊಟ್ಟಿರುತ್ತಾರೆ. ವಿಜಯದಶಮಿ ದಿವಸ ಲೋಕಮಾನ್ಯ, ಮಹಾತ್ಮಾ ಮತ್ತು ದೇಶಭಕ್ತರ ಫೋಟೋಗಳ ಮೆರವಣಿಗೆ [illegible] ತೆಗೆದಿತ್ತು. [illegible] ಶೃಂಗಾರಿಸಿದ್ದರು. [illegible] ಸ್ವದೇಶೀ ಅರಿವೆಯನ್ನು ಧರಿಸಿಕೊಂಡು ‘ವಂದೇ ಮಾತರಂ’ ಮತ್ತು ದೇಶಭಕ್ತರ ಜಯಜಯ ಕಾರಗಳಿಂದ ನೆ ಸಮಾರಂಭವಾಯಿತು. [illegible] ಸ್ವದೇಶೀ ಮಾಲಿನ ಪ್ರಸಾರದ ಬಗ್ಗೆ ವಿಚಾರ ಮಾಡುವ ಕಮೀಟಿ [illegible] ಬೇಸಿ ಇಲ್ಲಿ [illegible] ಆದೆ.

ಟೀಪ್ಪು: ಕುಮಟೆಯ [illegible] ಎಂಬುವರು [illegible] ಬಹು ವ್ಯಾಪಾರಿ [illegible]

ದಿವಾಳಿಯ ದಿವಸಗಳು.

([illegible])

ದಿವಾಳಿಯ ದಿವಸಗಳಲ್ಲಿ [illegible] ವಿಜಯದ [illegible] ಆದನ್ನು [illegible] ಈ ದಿವಸವನ್ನು ಯಾರು ನೆರವೇರಿಸಬೇಕು? [illegible] ಪ್ರಜೆಗಳೇ ಅದನ್ನು ನೆರವೇರಿಸಬೇಕು. ಯಾವವರೆಗೆ ನಮಗೆ ಸ್ವರಾಜ್ಯ ಸಿಗಲಿಲ್ಲವೋ ಆ ವರೆಗೆ ನಾವು ತರತರದ [illegible] ಭಾಗವಹಿಸಿಕೊಳ್ಳದೆ ಇರುವದೇ [illegible] ನೂರಾರು ನಿರ್ದೋಷಿ ಜನರು ತಮ್ಮ [illegible] ಜೈಲದಲ್ಲಿ [illegible] ಅಲ್ಲಿ ನೂರಾರು [illegible] ನಿರತರಾಗುವದರ ಅರ್ಥವೇನು? [illegible] ಯಾರ [illegible] ದಿವಸ [illegible] ಯಬೇಕಾಗಿದೆಯೋ, ಅಂಥವನು [illegible] ಪಕ್ವಾನ್ನಗಳನ್ನು ತಿನ್ನುತ್ತಿರುವದು ಉಚಿತವೋ? ಯಾರ [illegible] ಅಂಥವರಿಗೆ [illegible] ಸೂಚಿಸಬೇಕು.

ದಿವಾಳಿಯ ದಿವಸಗಳಲ್ಲಿ [illegible] ವಸ್ತ್ರಗಳನ್ನು [illegible] ಸ್ವದೇಶೀ [illegible] ನು.

—[illegible]

[illegible] ಗಿದಂದು ಹೇಳುವ ಕೂಡ [illegible] ತವಿಲ್ಲ [illegible] ನಪ್ಪದ ಅನ ಏನಿಕ ವ [illegible] ರಿಗೆ [illegible] ವ್ಯಾಪಾರಿಗಳು ಓರಿಲ್ಲವೆಂದೇನು ಕೇಳಬೇಕಾದು [illegible] ಮೊದ ತಾತ್ವಿಕದೃಷ್ಟಿಯಿಂದ [illegible] ಮಾಡಲಿನ [illegible] ಸ್ಥಿರಪಡಿಸಿ ಒಬ್ಬನೊ [illegible] ಹೊಸ [illegible] ನವ ಅವರಲ್ಲಿ ಸೇರಿಸಲಿಕ್ಕೆ ನವ ತಿಸದೆ, ಯಾವ [illegible] ಒಂದ ಅದೃಶ್ಯ ಎಲ್ಲಿ ಭಾಗಕಂಪ ಜಗು [illegible] ತಪಿಸಿದರೆಂಬುದು ಅವರಿಗೇ ಗೊತ್ತು' ಇರಲಿ [illegible] ಎಂಬಾರದ ಹಣಗಳು ಇದೇ ವ್ಯಾಪಾರಿ ವರ್ಗದಿಂ [illegible] ಪ್ರತಿ ವರ್ಷ ನವರ್ಷಾದ್ರಿ ರೂಪವಾಗಿ ಪಡಾ ಆದ ಹ [illegible] ಅವರಲ್ಲಿಯೇ ದೇವರ ಭಜನೆ ಮುಖ್ಯ [illegible] ಗಳು ವ್ಯಾಪಾರಿಗಳಿಗೆ ಆಯಾಯ ಹಂಗಾಮಿನಲ್ಲಿ [illegible] ಇಷ್ಟು ಸಾಲದು ಭಂಡವಾಲಿನವರೇ [illegible] ಅವಲಂಬಿಸಿದೆ ಶ್ರೀ ಭಜಕ ಸಮಾಜದ [illegible] ಬಾಲು ಬರೇ ವ್ಯಾಪಾರದಿಂದಲೇ ಜೀವಿಸುವ [illegible] ಅವರ ಸ್ಥಿತಿಯು ಭಂಡವಾಲಿನ ಕೊರತೆಯ [illegible] ತಂಗಿಟ್ಟಿದೆ ಇಂಥ ಸ್ಥಿತಿಯಲ್ಲಿ ಸತ್ತುಸನ್ನಸ್ತರು [illegible] ಸಮಾಜದ ಏಳಿಗೆಗಾಗಿ ಅದರ [illegible] ಗಾಗಿ, ಅದರ ಉದ್ಧಾರಕ್ಕಾಗಿ, ಅನರವರ ಐದತ್ತಿ [illegible] ಗಿ ಪತಸೀಡಿಯ ಂಥ ವ್ಯವಸ್ಥೆಯಿಂದ [illegible] ಪ್ರತಿಯ ವ್ಯವಸ್ಥೆ ಮಾಡಿದರೆ, ಅವರು ಸಮಾಜದ [illegible] ಲಭಿಸುವಂತಹಗೆ ಪಾತ್ರರಾಗ ಬಹುದು [illegible] ಈ ೨೦-೨೫ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ [illegible] ಯಿಂದ [illegible] ಬಂಡಾರದ ಹಣಗಳು "ಹಲಕ" [illegible] ಅಧಿಕಾರಿಗಳನ್ನು [illegible] ನಿಂದಿಸ [illegible] ಕಮಿಟಿಯು ಹಣ ವ್ಯಕ್ತಿಕ [illegible] ಅಮ್ನನ್ನು [illegible] ಕಮಿಟಿಗೆ ಬಲ ಸಮಾ [illegible] ಇಲ್ಲ [illegible] ಕಮಿಟಿಯ ಮೆಂಬರರು [illegible] ಮತ್ತೊಬ್ಬ [illegible] ಇವರ ಪರಸ್ಪರ ಸಮ್ಮಂದ ನೋಡಿದರಂತೂ ಮೊದಲು [illegible] ಈಗ ಅಪ್ಪ-ಮಗದಾ [illegible] ಮಗನ ಮಾವ, [illegible] ಎಂದು ತಲೆ [illegible] ಸರಕಾರಿ (!) ಮೆಂಬರನು ಇವರೇ [illegible] ಈ ಇಪ್ಪತ್ತೈದು ವರ್ಷಗಳಲ್ಲಿ [illegible] ಯಾದದ್ದಂತೂ ನೋಡಿದರೆ [illegible] ಗಳ ಬತ್ತಿಯಿಂದ ಕೊಟ್ಟ ಜುಜಬಿ [illegible] ಬಾಕಿ ಎಲ್ಲ ಹಣಗಳು [illegible] ಹಂಚಿಕೊಂಡದ್ದು ಸ್ಪಷ್ಟ ವಾಗಿ ಕಾಣುವುದು. ಆದದರಿಂದ ಭಂಡಾರಕ್ಕೆ [illegible] ಎಲ್ಲವಂತ [illegible] ಇದೇ [illegible] ಹಕ್ಕಿನ ಹಣಗಳು ಒಬ್ಬಿಬ್ಬ ಮಹಾನುಭಾವರೇ ಅವ [illegible] ಹೊಡೆಯುವದು [illegible] ವಿಚಾರಾರ್ಹ ಸಂಗತಿಯು ಅವರು [illegible] ಕೊಡುತ್ತಾರೆ ಇವರಾದರೂ [illegible] ಕೊಡಲು [illegible] ಶ್ರೀಮಂತ ವ್ಯಾಪಾರಿಗಳು ತಮ್ಮ [illegible] ಸ್ಥಿತಿಯ [illegible] ಎಲ್ಲೆಂದಲೂ ಹಣ [illegible] ಮಾಡಿಕೊಳ್ಳಬಹುದು ಬಡವರಿಗೆ ಅಷ್ಟೇನು ಸಾಧನವಿ [illegible] ಭಂಡವಾಲು [illegible] ಬಡವರಾದವರೂ ತಮ್ಮ [illegible] ಸಾರ್ಥದಿಂದ ತಮ್ಮ ಸಂಸಾರವನ್ನಾದರೂ ಚನ್ನಾಗಿ [illegible] ಕೊಳ್ಳಬಹುದ ಇಲ್ಲದಿದ್ದರೆ, ಅವರ ದುಃಸ್ಥಿತಿ [illegible] ಸಾಧ್ಯವು ಇದುವರೆಗೆ ಈ ಸಮಾಜದ [illegible] ಜನರೆಷ್ಟು ಹೊಟ್ಟವನ್ನೇರಿದರು ಯಾವ ಯಾವ [illegible] ಸ್ಥಿತಿಯನ್ನು [illegible] ಇದ್ದದರು ಹ್ಯಾಗೆ ಪ್ರ [illegible] ಸಮಾರ [illegible] ೮-೧೦

[illegible] ದಾಳ ಬಡವು ಹಸ್ಸಂದು ತಾಸಿಗೆ ತಮ್ಮ ಹೊಟ್ಟೆಯಾಕ್ಕಳ ಸಂಸಾರ [illegible] ಸಾಗಿಸ ಬ್ಬತೆ, ಕೆಲವರಿಗೆ ನಾರಕ್ಕೆ [illegible] ಬಾಟ ಸಿಗುತ್ತದೆ, ಇದೇ ಸಮಾಜದಲ್ಲಿ ೧೦-೧೧ ಘಂಟೆಗೆ ಉಣ್ಣುವ ಲಾಡುಪಿ ಜನರೆಷ್ಟು ೧-೨ ಘಂಟೆಗೆ ಉಣ್ಣುವವರೆಷ್ಟು, ನಾಲ್ಕು ಘಂಟೆಗೆ ಉಣ್ಣುವವರಷ್ಟು ಎಂದು ಸೂಕ್ಷ್ಮ ವಿಚಾರ ಮಾಡಿದರೆ, ಬಡತನದ ಪ್ರಮಾಣವು ತಿಳಿಯುವದಾಗಿದೆ ಆದರೆ ವಿಚಾರಮಾಡುವವರ್ಯಾರಿದ್ದಾರೆ?

ಕರ್ನಾಟಕಕ್ಕೆ ದೇ. ಭ. ಗಂಗಾಧರರಾವ ದೇಶಪಾಂಡೆ ಇವರ ಸಂದೇಶ.

ನನ್ನ ತುರಂಗ ವಾಸದಿಂದ ನಮ್ಮ ಚಳವಳಿಗೆ ಚಲನವು ಸಿಗುವದೆಂತಲೂ, ನನ್ನ ಸಹಚಾರಿಗಳಿಗೆ ಹೊಸ ಸ್ಫೂರ್ತಿ ಯುಂಟಾಗುವದೆಂದೂ ನಾನು ನಂಬಿದ್ದೇನೆ ಸ್ವಾರ್ಥವಿಲ್ಲದ ಪರಹಿತಕಾರಕ್ಕಾಗಿ [illegible] ವನ್ನು ಮಾಡುವವರ ಕಷ್ಟಗಳಿಂದಲೇ ಈ ನಮ್ಮ ಚಳವಳಿಗೆ ಜಯಪ್ರಾಪ್ತಿ ಯುಂಟಾಗದೆ ಸ್ವಾಭಾವಿಕ ಯಶಸ್ಸನ್ನು ಸಂಪಾದಿಸಲಿಕ್ಕೆ ಬೇಕಾಗುವ ನಾವ ಧೈರ್ಯವೂ ವಿಶ್ವಾಸವೂ ಕರ್ನಾಟಕಸ್ಥರಲ್ಲಿ ಉಂಟೆಂದು ನನಗೆ ವಿಶ್ವಾಸವದ ಈ ವೊದಲೇ ನಮ್ಮ [illegible] ಹೋರಿಬಂಧ [illegible] ಸ್ವಾರ್ಥತ್ಯಾಗ ಮತ್ತು [illegible] ಉದಾಹರಣೆಯನ್ನು [illegible] ದಯೆಯಿಂದ [illegible] ಕೊಡುವಂತ [illegible] ನನ್ನ ಪ್ರಾರ್ಥನೆಯ [illegible] ಭಗವಂತನ [illegible] ನನಗೆ ದಯಪಾಲಿಸಿದ್ದಕ್ಕಾಗಿಯೂ, ಆ ಪರಮೇಶ್ವರನಿಗೆ ನಾನು ಆಭಾರಿ ಇದ್ದೇನೆ.

ನಾನು ತುರುಂಗದಿಂದ ಹೊರಗೆ ಬರುವಾಗ್ಯೆ ಮಾತೃಭೂಮಿಯ ಸೇವೆಯನ್ನು ಮಾಡಲಿಕ್ಕೆ ಹೆಚ್ಚು [illegible] ನಾಗಿಯೂ, ಬಲವುಳ್ಳವನಾಗಿಯೂ, ಹೆಚ್ಚು ವಿಶ್ವಾಸವುಳ್ಳವನಾಗಿಯೂ ಬರುವೆನೆಂದು ಆಶಿಸುವೆನು. ನಮ್ಮ ದೇಶದ ಪಾರತಂತ್ರ್ಯವನ್ನು ಶೀಘ್ರವಾಗಿ ದೂರ ಮಾಡಲಿಕ್ಕೆ ನೀವೆಲ್ಲರೂ [illegible] ಪ್ರಯತ್ನವನ್ನು ಮಾಡುವಿರೆಂದೂ ಮತ್ತು ಈ ಪ್ರಕಾರ ಸ್ವತಂತ್ರವಾದ ಭಾರತಮಾತೆಯ [illegible] ಅಲ್ಪಾವಧಿಯಲ್ಲಿಯೇ ನನ್ನನ್ನು [illegible] ನೋಡುವಳೆಂದೂ ನನ್ನ ಪೂರ್ಣ ವಿಶ್ವಾಸವದೆ

ಈ ಸ್ವಾತಂತ್ರ್ಯ ಯುದ್ಧದಲ್ಲಿ ನಮ್ಮ ಕರ್ನಾಟಕಕ್ಕೆ ಭಾವೀ [illegible] ನನ್ನ ಕಣ್ಣುಮುಂದೆ ಕಟ್ಟಿರುತ್ತದೆ ಕರ್ನಾಟಕವು ಲೋಕಮಾನ್ಯರ ಸಂಪೂರ್ಣ ಶಿಕ್ಷಣದಲ್ಲಿ ಬೆಳೆದ, ಈಗ ಮಹಾತ್ಮಾ ಗಾಂಧಿಯವರ ತೇಜವನ್ನು ಹೊಂದಿ, ಸ್ವಾವಲಂಬಿಯಾಗಿ ನಿಲ್ಲಲಿಕ್ಕೆ ಕಲಿತಿದೆ ಈ ವಿಚಾರದಿಂದಲೇ ನಾನಾದರೂ ಒಬ್ಬ ಕರ್ನಾಟಕಸ್ಥನೆಂದು ನನಗೆ ಗೌರವವೆನಿಸುತ್ತದೆ ಮತ್ತು ನಾನು [illegible] ಕರ್ನಾಟಕಸ್ಥನೆಂಬದನ್ನು ಎಂದೂ ಮರೆತಿಲ್ಲ ಆದ್ದರಿಂದಲೇ ನನ್ನ ಎಲ್ಲ ಕರ್ನಾಟಕ ಬಂಧುಗಳಿಗೆ ಈ ದಿವ್ಯವಾದ ಚಳವಳಿಯಲ್ಲಿ ತಮ್ಮ ಸರ್ವಸ್ವವನ್ನು ಅರ್ಪಿಸಬೇಕೆಂದು ಅತ್ಯಂತ ನಮ್ರತೆಯಿಂದ ಬೇಡಿಕೊಳ್ಳುತ್ತೇನೆ

ಯಾವ ಭಾಷಣದ ಸಲುವಾಗಿ ನನಗೆ ಕಾರಾಗೃಹವನ್ನು ಅನುಭವಿಸಬೇಕಾಗಿದೆಯೋ, ಆಭಾಷಣದಲ್ಲಿ ನಾನು ನನ್ನ ಒಸ್ಮದ ಅಪ [illegible] ಭಾಗವನ್ನೆಲ್ಲ ವಿ [illegible] ವಾಗಿ ಕರ್ನಾಟಕ ಸೇವ [illegible] ಕಳೆಯುವೆನೆಂದು ಹೃದ್ದಯಿಂದ ಹೇಳಿದ್ದೇನೆ ಮೇಲಿನ ಕಾರ್ಯವನ್ನು ಸಾಧಿಸಲಿಕ್ಕೆ ಬೇಕಾಗ [illegible] ವನ್ನು ನೋಡಲಿಕ್ಕೆ ಅವಕ್ಯವಿರುವ ಏಕಾಂತವನ್ನೂ [illegible] ತಂತ್ರ ವಾತಾವರಣವನ್ನೂ ಮತ್ತು ಪವಿತ್ರ ಪರಿಸ್ಥಿತಿಯನ್ನೂ ದೇವರು ನನಗೆ ದಯಪಾಲಿಸಿದ್ದಕ್ಕೆ [illegible] ಆನಂದವಾಗುತ್ತದೆ

ಕರ್ನಾಟಕ ಬಾಂಧವರೇ' ಈ ಕೃತ ನಿಶ್ಚಯವು ಎಳ್ಳಷ್ಟಾದರೂ ಕುಗ್ಗದೆ, ನಾನು ತುರುಂಗದಿಂದ ಹೊರಗೆ ಬರುವೆನೆಂಬದನ್ನು ಎಂದೂ ಮರೆಯಬೇಡಿರಿ

ತಮ್ಮ
ಗಂಗಾಧರರಾವ ದೇಶಪಾಂಡೆ

ವಿವಿಧ ವರ್ತಮಾನ.

—ಗ್ರೀಕರು ಈಗ [illegible] ಹಲ್ಲೆಮಾಡಲು, [illegible] ಟರ್ಕಸ್ತಾನದ [illegible] ಸಂಕಟಗಳನ್ನು ದುರುಸ್ತಿಮಾಡುವ ಪ್ರಯತ್ನ ಮಾಡುತ್ತಿರುವರು ಇದರ ತುರ್ಕರು [illegible] ಗಳನ್ನು [illegible] ತ್ತಿರುವರು ಅಫಘಾನ ಸೈನಿಕರು ತುರ್ಕರ ಸಹಾಯಕ್ಕೆ ಹೋಗಿರುವರು

—[illegible] ಪ್ರಶ್ನೆಯು [illegible] ಪ್ರತಿನಿಧಿಗಳು ಇಂಗ್ಲಂಡಕ್ಕೆ ಹೋಗಿರುವರು ಮಂತ್ರಿಮಂಡಳ [illegible] ಪರಿಣಾಮವೇನಾದೀತೆಂದು ಎಲ್ಲರೂ ನಿರೀಕ್ಷಿಸುತ್ತಿರುವರು.

—ಅಲ್ಲೀಬಂಧು, ಸ್ವಾಮಿ ಶಂಕರಾಚಾರ್ಯ ಇವರ [illegible] ಮೇಲಿನ ಖಟ್ಲೆಯು ಇದೇ ೨೪ ನೇ ತಾರೀಖಿಗೆ ಇಟ್ಟಿರುತ್ತ [illegible] ವಿಚಾರಕ್ಕಾಗಿ ಅಲಹಾಬಾದಿನ ಮಿ| [illegible] ಇವರಿಗೆ ನೇಮಿಸಿರುವರು. ಇಸ್ಲಾಮುವರ್ಣ [illegible] ತಜ್ಞರೊಬ್ಬರು ಇವರಿಗೆ ಸಹಾಯ್ಯಕರಾಗ ನೇಮಿಸಿರುವರಂತೆ

—ಅಲ್ಲೀಬಂಧುಗಳ ಮೇಲಿನ ಖಟ್ಲೆಯನ್ನು ಸರಕಾರವು ಮರಳಿ ತೆಗೆದು ಕೊಳ್ಳುವ ವಿಚಾರದಲ್ಲಿದೆಂಬ ದಟ್ಟವದಂತಿಯಿರುವದೆಂದು ಕರಾಚಿಯ ನ್ಯೂ [illegible] ಪತ್ರಿಕೆಯು ಪ್ರಕಟಿಸಿರುವರು. ಇಂಥ ಸುಬುದ್ಧಿಯು [illegible] ಹುಟ್ಟಿದ್ದು ನಿಜವಿದ್ದರೆ ಸರಕಾರದ ಸುದೈವ

—ಮಲಬಾರದಲ್ಲಿ ಲಷ್ಕರೀ ಕಾಯಿದೆಯನ್ನು [illegible] ವು ಎರಡಿಂದ ನಡೆದದೆ ಸುಮಾರ ೨-೩ ಸಾವಿರ ಮಾಪಳೆಯರಿಗೆ ೨-೩-೫-೮-೧೦ ವರ್ಷ ಸಕ್ತ ಮಜೂರಿ [illegible] ವಿಧಿಸಿರುವರು ವಂಗಡೋರದ ಲುಟಿಯೂ ನಡದಿರುವದು ಮಲಬಾರದೊಳಗಿನ ಸೈನಿಕರ ಸಹಾಯಕ್ಕಾಗಿ [illegible] ಸೈನಿಕದಂಡುಗಳು ಹೋಗುತ್ತಿರುವವು ಜನರ ಸಂಕಷ್ಟಗಳೇನು ಒಣ್ಣ ಸಲಕ್ಕೆ [illegible]

—ಪ್ರಶಸಿದ್ಧ [illegible] ಪಟವರ್ಧನ [illegible] ಮುಂದಾಳುಗಳು ಸಂಸ್ಥಾನ ಸುಧಾರಣಾ ಸಂಬಂಧ ವ್ಯಾಖ್ಯಾನ ಉಪನ್ಯಾಸ ಕೊಡಲು [illegible] ಗೆ ಹೋಗಿದ್ದರು ಅಲ್ಲಿಯ ಮೆಜಿಸ್ಟ್ರೇಟರು ಸಭಾಬಂದಿ ಹುಕುಮು ಜಾರಿ ಮಾಡಿದರು [illegible] ಕೇಳಕರ ಪಟವರ್ಧನ [illegible] ಯವರೆಲ್ಲರ ವಿಚಾರಮಾಡಿ ಸತ್ಯಾಗ್ರಹ ಮಾಡುವ ನಿರ್ಣಯ ಮಾಡಿ, ಅಲ್ಲಿ ಸಭೆಸೇರಿ ಉಪನ್ಯಾಸ ಮಾಡಿದರು ಈಗ ಅವರ ಮೇಲೆ [illegible] ಸಂಸ್ಥಾನಿಕರು ಖಟ್ಲೆ ಮಾಡಿರುವರು

—ಯುವರಾಜರಿಗೆ ಮಾನಪತ್ರ ಕೊಡಬಾರದೆಂದು ಪ್ರಯ [illegible] ಮುನಿಸಿಪಾಲಿಟಿಯು ನಿರ್ಣಯಿಸಿತು

—ಅಲಹಾಬಾದದ ಇಂಡಿಪೆಂಡೆಂಟ ಪತ್ರಿಕೆಯ ಮಾಜೀ ಸಂಪಾದಕರಾದ ಮಿ| ಸಯ್ಯದ ಹುಸೇನ ಇವರು ಅಮೇರಿಕೆಯ ಧರ್ಮಪರಿಷತ್ತಿನಲ್ಲಿ 'ಇಸ್ಲಾಮು'ದ ಮೇಲೆ ವ್ಯಾಖ್ಯಾನ ಕೊಡಲು ಹೋಗುವವರಿದ್ದಾರೆ

Printed and published by Krishnarao Keshav Shenvi at his Star of Kanara Press, Kumta

ಶ್ರೀ! ಕಮಲಾಬಾಯಿಯ ಅಬಲಾ ಸಂಜೀವನಿ ಗುಳಿಗೆ.

ಬರೇ ಸ್ತ್ರೀಯರಿಗೋಸ್ಕರ.

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಅಪಾಯಕರ ಮತ್ತು ತೀಕ್ಷ್ಣ ಮನೋವೇಧಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ. ೨೫ ವರ್ಷಗಳದಾರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ. ತಪಶೀಲ ಮಾಹಿತಿಯು ಕಟಲಾಗು. ಒರೇ ೦-೨-೬ ಸ್ಟಾಂಪು ಕಳಿಸಿದರೆ ಉಚಿತ ಸಿಗುವದು ಬಾಟ್ಲಿ ೧ ರ ಕ್ರಯ ೧-೮-೦ ಟಪಾಲ ಖರ್ಚ ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ.

ಶ್ರೀ! ಕಮಲಾಬಾಯಿ ಜಿ ಎಸ್ ಸಿ ಫಾರ್ಮಸಿ

ಕಾಳಬಾದೇವಿಯ ಎದುರಿಗೆ, ಮುಂಬಯಿ.

ಡಾ. ನವರತ್ನಕರ.

ವಿದ್ಯುಚ್ಛಕ್ತಿಯ ಸಿಂದಿ ಕೂದಲಿನ ಬಣ್ಣ.

ಪಕ್ಕಾ ಕಲಾಪ.

ಇದರಿಂದ ಬಿಳಿ ಬಣ್ಣದ ಕೂದಲು ಶಾಗೆ ಕಪ್ಪಾಗುತ್ತವೆ ಈ ಕಲಾಪಿನಗುಣಗಳು — ಸುಲಭ ಉಪಯೋಗ, ಇಂಪಾದ ಪರಿಮಳ, ಅಗ್ಗ ಕ್ರಯ ಮತ್ತು ಒಳ್ಳೆದವ ರೆಲ್ಲರು ಸಮಾಧಾನಪಟ್ಟಿರುವರು.

ಕ್ರಯ ೧ ಬ -೦ ಆ ಚೆ ಪೆಟ್ಟಿಗೆ

೧೨ ಕ್ರಯ ೫ ರೂ.

ನವರತ್ನ ಮತ್ತು ಸನ್

100 ಕಾಳಬಾದೇವಿ ರೋಡ ಮುಂಬಯಿ.

ಅನುಭವಸಿದ್ಧವಾದ ಔಷಧಗಳು!!!

ನಿಸ್ಪೃಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು, ಮುತ್ತು ವನಸ್ಪತಿ ಮಿಶ್ರಿತ.

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಹಾದಿವಿಕಾರ. ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುರೋಗ, ಮದ. ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉದರದೊಳವಿಕಾರ, ಮುಕ್ತಕಪೂಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಶರೀರ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ರ ರೂ ೪-೦-೦.

( ) ಬಾಲಾಮೃತಗುಟಿಕಾ— ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದು ಗುಳಿಗೆ ೩೦ ಕ್ರ ರೂ ೧-೦-೦ (೩) ಸ್ವಪ್ನಾವಸ್ಥೆಮೇಲೆ ಚೂರ್ಣ — ೪೪ ದಿವಸದ ಔಷಧಕ್ಕೆ ರೂ. ೨-೦-೦. (೪) ಗಜಕರ್ಣ ನಾಶಕ ಮಲಮು — ಡಬ್ಬಿಗೆ ಆಣೆ ೦-೮-೦ (೫) ಮಲೇರಿಯಾದಿ ನಾಶಕಗುಳಿಗೆ — ವಿಷಮ ಚಳಿಜ್ವರ ಮಲೇರಿಯಾದಿಗೆ ಗುಳಿಗೆ ೩೦ ಕ್ರ ರೂ. ೨-೦-೦

ಅನುಮಾನವಿದ್ದ ಔಷಧಿಯ ಕ್ರಯ. ಅಂಚೆ ವೆಚ್ಚ ಬೇರೆ

ವಿಳಾಸ — ವೈದ್ಯ ವ್ಹಿ. ಎಸ್. ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ,

ಜಿಲ್ಲಾ ಉತ್ತರಕಾನಡಾ

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಶ್ಚರ

ಮಲಶುದ್ಧಿಯಾಗುತ್ತದೆ, ಬೆವರು ಬಂದು ಜ್ವರವು ಬಿಡುತ್ತದೆ ಕ್ರಯ ೦-೧೨-೦ ಲೋಕಲ ವ್ಯಾಪಾರಸ್ಥರಿಂದ ಅಥವಾ

ಪಾಟಣಕರ ಮಾಯದೇವ ಕಂಪನಿ

ಮುಂಬಯಿ ೪.

ಮ. ಗಾಂಧಿಯವರ ಅಪ್ಪಣೆ.

ವಿಲಾಯತಿ ಮಾಲಿಗೆ ಬಹಿಷ್ಕಾರ.

ನಮ್ಮಲ್ಲಿ ಸೂಟಕೇಸು (ಕಿಟ್ ಬ್ಯಾಗ್) ... ಮ. ಗಾಂಧಿಯವರ ... ಬೇರೆ ತರದ ಸ್ವದೇಶೀ ವಸ್ತುಗಳು ... ಸಿಗುವವು.

... ಕೊಡುವೆವು

ಕುಡ್ವ ವಾಸುದೇವ ಪಾಂಡುರಂಗ

ರ್ಬಾನಭಾಗ, ಮತ್ತು ಬ್ರದರ್ಸ

ಕೋಣ್ಣಾಪುರ, ೯ ...

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ.

ನವೀನ ಭಾರತ.

(ವಾರ್ಷಿಕ ವರ್ಗಣಿ, ಅಂಚೆ ವೆಚ್ಚ ಸೇರಿ ರೂ. ೬.)

ಇದರಲ್ಲಿ ಸಮಾಜಿಕ, ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ ಮನೋವೇಧಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶೀ, ಖಾದಿಪ್ರಚಾರ, ಮದ್ಯಪಾನ ನಿಷೇಧ ಮೊದಲಾದ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಕುರಿತು ಉತ್ತಮ ಲೇಖನಗಳೂ ಪ್ರಕಟಿಸಲ್ಪಡುವವು. ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಓದಲೇಬೇಕು. ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ. ಜಾಹೀರಾತುಗಾರರಿಗೂ ಅತಿಶಯ ಅನುಕೂಲ

ವಿಳಾಸ— ನವೀನ ಭಾರತ ಕಾರ್ಯಾಲಯ,

ಬಾಗಲಕೋಟೆ (ಜಿ. ವಿಜಾಪೂರ)

Notice to Investors.

We undertake to negotiate business for our constituents in the following Securities on the Bombay Market for ready delivery as well as of a speculative nature. The Securities are STOCK & SHARES, GOLD SILVER etc. Usual commission is charged. *Please apply to Messrs*

Gunshekhar & Co.

IRANI BUILDINGS,

Tardeo Road,

BOMBAY. 7.

Telegram – Vayayanti.

FREE. FREE.

Purchasers of ... of our well-renowned Ringworm Ointment price As. 4 per tin, or of 12 Phials of Otto Mushk-hina, Price As. 12 per tube, will be sent.

A WRIST WATCH FREE

King George

Coronation Co.,

BOMBAY No. 4.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಯಬೇಕು. ಸವಲತ್ತಿನ ದರಗಳು ಇಟ್ಟಿರುವೆವು. ನಮ್ಮ ಪತ್ತೆ —

ಗ್ಯಾತೊಂಡೇ ಬ್ರದರ್ಸ,

ಮೋಟರ ಡೀಲರ್ಸ, ಐಜಂಟ್ಸ

ಕಾರವಾರ.



ಭಕ್ಷಿಸು ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪೌಷ್ಟಿಕವಾಗಿ ಶರೀರವು ಕಾಂತಿಗೊಳ್ಳುವದು. ಇದಲ್ಲದೆ ಕೆಮ್ಮು, ದಮ್ಮು, ಕಫ, ವಾತ, ಪಿತ್ತ, ಸಿವೆ, ಇತ್ಯಾದಿರೋಗ. ಮೂತ್ರವಿಕಾರದ ಸರಿಯಾಗಿ ಆಗದಿರೋದು ಅಜೀರ್ಣ ಜ್ವರ ಸ್ತ್ರೀಯರ ಗರ್ಭದೋಷ, ಹುಡುಗರ ಹೊಟ್ಟೆಯ ಎಲ್ಲ ಬೇನೆಗಳು ನೀಗಿಸಿ ಗುಣಕೊಂಡುದಿದ್ದು ಉಪಯೋಗಿಸಿ ನೋಡಿರಿ ... ೨೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ

ಡಿಪೋ, ಕುಮಟಾ ಕಾನಡಾ)

Reg No B. 1270.

ವರ್ಷ ೬.

ಕಾನಡಾವೃತ್ತ.

THE KANARA NEWS.

ಸಂಚಿಕೆ ೩.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು ರೂಪಾಯಿ 2-4-0.

ಮನಿಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0.

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ -

ಕನ್ನಡ, ಇಂಗ್ಲಿಷ ವ್ಯಾಕ್ಯಾಪಿನ(೧೫ ಏಮ್‌ಅಗಲ) ೮ ಸಾಲುಗಳ ವರೆಗೆ ರೂ. 1-0 0

ಅನಂತ್ರ ಪ್ರತಿ ಸಾಲಿಗೆ 0-2-0.

ಹಚ್ಚಿಂಗದ ಸಾಲು ಎಷ್ಟು ಹೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಸಮಕ್ಷ ತಿಳಿಸಲ್ಪಡುವದು

-[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೨೭ ಮಾಹೆ ಅಕ್ಟೋಬರ ಸನ್ ೧೯೨೧ ನೇ ಇಸವಿ.]-

ಖರೇ ಮಾತು ! ಸುಳ್ಳು ಸುಳ್ಳು !! ತ್ವರೆ ಗ್ರಾಹಕರೇ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜಡತನವನ್ನೂ ರೋಗಗಳನ್ನೂ ದೂರದಿಸಿ, ಆಯ ಆರೋಗ್ಯವನ್ನೂ, ರತಿಯಲ್ಲಿ ಹೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಸ್ಥಿರತೆಯನ್ನೂ ಯೌವನದ ಕಳೆಯನ್ನೂ ದೇಹದ ಶೀತಲವನ್ನು ನೀಗಿ ಬಲವನ್ನು ಉಂಟುಮಾಡುವದು. ಮೃತ್ಯುವನ್ನು ನಿವಾರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ, ಮಂದಾಗ್ನಿ, ಶುಕ್ಲಸ್ರಾವ, ಪ್ರಮೇಹ ಬಿಡದೇ ಇವುಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೇಶಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸೀಚಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲವೂ, ತೆಳುವೂ, ನಿಸ್ತೇಜವೂ ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಆಲಿಷ್ಟೆ, ಮರುವು ಮತ್ತು ಶರೀರದ ಕಾಂಗೂ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ. ೧||. ನಂ ೧. ನಂ ೨. ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂತು ೬೦ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ.

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ.)

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣ ಮರಳು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾದಕ ಇಂದ್ರಿಯಸ್ತಂಭಕ ಗರ್ಮಿ, (ಚಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಸಿಕ್ಕದ ಬಾಧೆಗಳು ಕಟಕೂಲೆ ವಾತರೋಗ ಮುಂತಾದವು ಆತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟ ಖ. ಬೇರೆ. ಅನುಪಾನಪತ್ರಿಕೆ ಔಷಧದ ಸಂಗಡ.

ವಿಳಾಸ.— **ಜಿ. ಎಲ್. ಜೋಶಿ ಕಂಪನಿ.**

ಪ್ರೋಪ್ರೈ— ಸಿರಸಿ. ಉತ್ತರ ಕಾನಡಾ.

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ಬೆಸಿಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಸಂಗ್ರಹರ ಗರ್ಭಾಶಯದ ವಿಕಾರ, ಪರಮಾ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟ ಔಷಧಗಳೂ, ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗೆಗಳೂ, ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾದೀತು.

ಎಸ್. ಎಲ್. ಧಾಕಪ್ಪ ಮತ್ತು ಬಂಧು
ಶಿರ್ಶಿ.

ಕಾರ್ಡಸ್ಸಾಯಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸೈಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ.— ೧ಕ್ಕೆ ೬ಪೈ, ೧ ಡಜನ ಬೇಕಾದವರು ೫ ಆಣೆ ಸ್ಟಾಂಪುಗಳೂ ಮತ್ತು ೧೦೦ ಬೇಕಾದವರು ೧-೧೨-೦ ಮನಿಯಾರ್ಡರದ್ವಾರಾ ಹಣವು ಕಳುಹಿಸಬೇಕು. ಸ್ಯಾಂಪಲುಗಳು ಬೇಕಾದರೆ, ೨|| ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಓಪ್ ಕೆನರಾ ಪ್ರೆಸ್ಸ್,
ಕುಮಟಾ (ಎನ್. ಕೆನರಾ,)

ಭಡತೀ ಭ್ರಾತೃಸಂಘದ

ಅನುಭವಸಿದ್ಧ ಪಾಕ

ಜ್ವರದ ಗುಳಿಗೆಗಳು. ಕ್ರಯ — ೨೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಶ್ಯ, ಉಂಚೆ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಉಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋ. ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬ್ಯಾಜುಗಳು ದೊರೆಯುತ್ತವೆ. ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು. ಡಜನ ೧ಕ್ಕೆ ೩-೦-೦. ಟಪಾಲ ಖರ್ಚು ಬೇರೆ.

ಪತ್ತೆ:— **ಬಿ. ಎ. ಪೈ. ಹೊನ್ನಾವರ.**
(ಉತ್ತರ ಕಾನಡಾ)

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಶೇಕಡಾ ರೂ. ೧೨-೮-೦ ಇಟ್ಟದೆ. ಆದರೆ, ಇದೇ ನವಂಬರ ತಿಂಗಳ ೮ ನೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾ ೧೧-೮-೦ ರ ಸವಲತಿ ದರ ಇಟ್ಟದೆ ಅಪೇಕ್ಷಿದ್ದವರು ಇದರ ಪ್ರಯೋಜನ ಪಡೆಯಬಹುದು.

ಮಾಲಕ, ಸ್ಟಾರ ಓಫ್ ಕೆನರಾ ಪ್ರೆಸ್,
ಕುಮಟಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ. ೧೮೬೭ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟ

ಅರ್ಕಶಷಾ ಅಥವಾ ಆರೋಗ್ಯಬಿಂದು.

ಈ ಅರ್ಕಶಷಾ ಎಂಬ ಔಷಧವು [illegible]

ರೋಗದ ನಾಮಗಳು

[illegible]

ಕನ್ ಇಲ್ಲ. ಇದಕ್ಕೆ ಆರು ಆಣೆ ಖರ್ಚು ಬರುವದು. ಒಂದು ಕಾಲು ತೊಲೆ ಬಾಟ್ಲಿ [illegible] ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚು ಎಂಟು ಆಣೆ ಬರುವದು ನಮ್ಮ ಔಷಧವು [illegible] ವರತ ತಕ್ಕೊಳ್ಳುತ್ತೇವೆ ಮತ್ತು [illegible] ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ [illegible] ಅನುಪಾನವ [illegible] ಭಾಷೆಗಳಲ್ಲಿ [illegible] ಪ್ರಕಾರ ಬಾಟ್ಲಿಯ [illegible] ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು.

[illegible], ಸಂಪಾದಕ ಅರ್ಕಶಷಾ,
ಹೆಡ್ ಆಫೀಸು [illegible], ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 [illegible] ಕರೂ, ಮತ್ತು [illegible] ಅಜೀರ್ಣ [illegible] ಬಾಟ್ಲಿ 1 ಕ್ಕೆ 1-0-0 [illegible] 4 12-0.

2 [illegible] ಬಾಟ್ಲಿ 1 ಕ್ಕೆ 0-5-0

3 [illegible]

4 [illegible] ಗುಳಿಗೆ [illegible]

5 [illegible]

ಎಸ್. [illegible] ಸನ್ಸ್
ನೆಟಿವ್ ಡೊಕ್ಟರ್ಸ್ [illegible]

[illegible]

[illegible] ಗುರುವಾರ [illegible] ಮತ್ತು [illegible] ಬೇರೆ ದಿವಸಗಳಲ್ಲಿ [illegible] ಆಂಗಡಿಯಲ್ಲಿ, ಮತ್ತು ಕಾವೇರಿಯಲ್ಲಿ [illegible] ಸಿಗುವವು.

ಎಸ್. ಎಲ್. ಧಾಕಪ್ಪಾ.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

[illegible] ಬಹುದು.

ಪುರುಷೋತ್ತಮ [illegible]

ಹೆಗಡೇಕರ, ದುಕಾನ, ಕುಮಟಾ.

Wanted.

A clerk knowing English and Kanarese and trained in book keeping Typing, and correspondence work, for the North Kanara Moter Service Ankola (North Kanara) Pay Rs 25 to 40 according to qualifications. Those who had previous experience of Govt. or private service, need apply with testimonials [illegible]

Ankola-North Kanara

Manager,
North Kanara Moter Service,
ANKOLA

17th October 1921.

ಹಲ್ಲಿನ ಡಾಕ್ಟರ ಕೃಷ್ಣರಾವ ಹನುಮಂತ.



[illegible]

Javeri Mansion
near Marwadi Vidyalaya,
Sandhurst Road
BOMBAY No 4

ಸ್ವದೇಶಿ [illegible]

ದಿ, ಸ್ವದೇಶಿ ಇಂಕ್ ಸ್ಟೋರ್ಸ

[illegible]

ಭಾರತೀಯ ಶಾಯಿ ಗುಳಿಗೆಗಳು.

[illegible]

ವಿಚಾರತರಂಗ.

ಲೇಖಕ:— ನಿರೀಕ್ಷಕ.

—✱=✱—

“ ನಮ್ಮ ಆಳರಸರ ಭಾಗ್ಯ ನೋಡಿರಿ! ಮಹಾತ್ಮ ಗಾಂಧಿಯವರ ಅಸಹಕಾರಿತೆಯ ವ್ರತದಿಂದ ನಮ್ಮ ಆಳರಸರ ದಬ್ಬಾಳಿಕೆಗೆ ದೇಶಭಕ್ತರು ಡಿಫೆನ್ಸ ಕೊಡದೆ ಸುಸೂತ್ರವಾಗಿ ಜೈಲಿನಲ್ಲಿ ನ್ಯಾಯ ಕೋರ್ಟುಗಳ ಇನ್ಸಾಫು ಪಡೆದು ಹೋಗುತ್ತಿರುವರು! ಎಷ್ಟೋ ನಿರಪರಾಧಿ ದೇಶಭಕ್ತರು ಡಿಫೆನ್ಸ ಕೊಟ್ಟರೆ, ಈಗ ರಾಷ್ಟ್ರೀಯ ಚಳವಳಿಯ ಪ್ರಸಾರವನ್ನು ಅಖಂಡ ನಡಿಸುತ್ತಿದ್ದರು. ಮೊದಲು, ಅಮಲಬಜಾವಣಿ ಅಧಿಕಾರಿಗಳ ಏಕತಂತ್ರೀ ಹುಕುಮುಗಳಿಗೆ ಬಲಿಬಿದ್ದರೆ, ನಿಷೇಧ ಮಾಡಲಿಕ್ಕಾದರೂ ಆಸ್ಪದವಿತ್ತು ಈಗ ನೋಡಿರಿ, ನ್ಯಾಯಕೋರ್ಟುಗಳಲ್ಲಿ ನೋಟೀಸು ವಾರಂಟು, ಸಾಕ್ಷಿದಾರ, ಮೊದಲಾದ ಎಲ್ಲ ಸರಂಜಾಮಿನಿಂದ ಈಗ ಶಿಕ್ಷೆ ವಿಧಿಸಲ್ಪಡುತ್ತದೆ. ಈಗ ಅನ್ಯಾಯವೆಂದು ನಿಷೇಧಿಸಲಿಕ್ಕೆ ವಿಚಾರಿ—ಧುರೀಣರು ಬರುವದು ದುರ್ಲಭ”ನೀವು ನಿರಪರಾಧಿಗಳಿದ್ದರೆ, ನ್ಯಾಯ ಕೋರ್ಟುಗಳ ಮುಂದೆ ಹಾಗೆ ಯಾಕೆ ಡಿಫೆನ್ಸ ಕೊಡಲಿಲ್ಲ? ಗಾಂಧಿಯವರ ಮರುಳು ಮಾತಿಗೆ ಬಲಿಬಿದ್ದರೆ, ಆಗುವದೇ ಹೀಗೆ. ಅವರೊಬ್ಬ ಸಾಧು ಪುರುಷರು; ನಮ್ಮಂಥ ಸಂಸಾರಿಕರಿಗೆ ಈ ಸನ್ಯಾಸರ ನಡೆನುಡಿಗಳಿಂದ ಲಾಭವಾಗುವದಕ್ಕಿಂತ ಹಾನಿಯೇ ಹೆಚ್ಚಾಗುವದು. ದಬ್ಬಾಳಿಕೆಯ ಉತ್ತಮ ನೌಕರ ಶಾಯಿಯು ಗಳಿಯರು ಗಾಂಧಿಮಹಾತ್ಮರು. ಇಲ್ಲದಿದ್ದರೆ, ದಬ್ಬಾಳಿಕೆಯ ಕಾಯಿದೆಗಳೆಲ್ಲ ರದ್ದಾಗಿ, ನಾಲ್ಕೂ ಬದಿಯಿಂದ ನವಯುಗದ ಗಾಳಿಯು ಸಂಚರಿಸಿದಾಗ, ನಮ್ಮ ದೇಶಭಕ್ತರು ಸುಮ್ಮನೆ ಜೈಲರರ ಬಾಯಿಯಲ್ಲಿ ಹಾಗಿ ಬೀಳುವದು ಮೂರ್ಖತನದ ಪರಮಾವಧಿಯಲ್ಲೇನು? ಆಳರಸರಿಗೇನು ನಮ್ಮ ಸ್ವಾತಂತ್ರ್ಯದ ಚಳವಳಿಯು ಅವ್ಯಾಹತವಾಗಿ ನಡಿಯಬೇಕೆಂದಿದೇನು?” ಇಂಥ ಉಪನ್ಯಾಸಗಳನ್ನು ಕೆಲ ವಿಚಾರವಂತ, ಸುಶಿಕ್ಷಿತ, ಸನದೀರ ಚಳವಳಿ ಮಾಡುವವರು ಉದ್ಗರಿಸುವದನ್ನು ಸಹ ಕೇಳಬಹುದು.

* * * *

ಇಷ್ಟೆಲ್ಲ ಉಪನ್ಯಾಸ ಕೇಳುವ ದೇಶಹಿತಚಿಂತಕರು ಮಹಾತ್ಮರಿಗೆ ದೋಷ ಕೊಡುವದರಲ್ಲಿ ತಮ್ಮ ಜಾಣತನವನ್ನು ಪ್ರದರ್ಶಿಸಲು ಪ್ರೇರಿತರಾಗಿರುವದಿಲ್ಲ. ದೇಶಭಕ್ತರು ಸುಮ್ಮನೆ ಜೈಲು ಯಾತನೆಗಳನ್ನು ಅನುಭವಿಸುವದನ್ನು ನೋಡಿ, ಅವರ ಅಂತಃಕರಣ ಕಳವಳಗೊಳ್ಳುತ್ತದೆ. ಆದರೆ, ಈ ಉಪನ್ಯಾಸಕ್ಕೆ ಒಂದು ಗುರುಕಿಲ್ಲಿಯಿರುವದು. ಜೈಲು, ಕೈದುಖಾನೆಯೆಂದರೆ, ಅದೊಂದು ಮಾನವರ ಮೇಲಿನ ದೊಡ್ಡ ಸಂಕಟವು, ಅದನ್ನು ತ್ಯಾಗ ಮಾಡಿ ತೋರಿಯಲೇ ಬೇಕು. ‘ಕೈದುಖಾನೆ’ ಎಂದ ಕೂಡಲೆ, ಈ ದೇಶಹಿತ ಚಿಂತಕರು ಸ್ವಭಾವತಃ ಹೆದರುತ್ತಾರೆ. ಈ ಭೀತಿಯೇ ಹಿಂದುಸ್ಥಾನದ ದಾಸ್ಯತ್ವದ ಮೂಲಾಧಾರವೆಂದು ಇವರಿಗೆ ಎಂದೂ ತಿಳಿಯುವದಿಲ್ಲ. ಈ ಭೀತಿಯಿಲ್ಲದಿದ್ದರೆ, ೩೨ ಕೋಟಿ ಭಾರತ ಪುತ್ರರನ್ನು ೧-೨ ಲಕ್ಷ ಆಳರಸರು ದಾಸ್ಯತ್ವದಲ್ಲಿಟ್ಟು, ತಾವು ಮಾಡಿದ್ದೇ ಹುಣ್ಣಿಮೆ—ಅಮಾವಾಸೆಯನ್ನು ಹ್ಯಾಗೆ ಮಾಡುತ್ತಿದ್ದರು? “ಡರ ತೋ ವಿಭೀರಹ”ಎಂಬ ಸಂದೇಶವನ್ನು ಸ್ವೋದಾಹರಣದಿಂದ ರಾಷ್ಟ್ರಕ್ಕೆ ಕೊಡಿರಿ, ಎಂಬ ಮಂತ್ರವನ್ನು ಕೊಡುವ ಮಹಾತ್ಮರು ಭಾರತ ಮಾತೆಯ ಮುಕ್ತಿಯ ಕೀಲಿಯನ್ನೇ ನಮಗೆ ಕೊಟ್ಟಿರುವರಲ್ಲವೋ? ೩೨ ಕೋಟಿ ಜನತೆಯು ಸಿಂಹವು ಜಾಗೃತವಾಗಿ, ಸ್ವಬಲವನ್ನು ಅರಿತ ಕೂಡಲೆ, ಲಕ್ಷ ಎರಡು ಲಕ್ಷ ಕುರಿಮರಿಗಳ ಏಕತಂತ್ರೀ ರಾಜ್ಯಪದ್ಧತಿಯು, ಬೆಂಕಿಯ ಸಮೀಪದ ಇಟ್ಟ ಬೆಣ್ಣೆಯಂತೆ, ಕರಗಿ ನೀರಾಗಲಿಕ್ಕಿಲ್ಲವೋ? ಕಾಯಿಕ ಯಾತನೆಗಳ ಭೀತಿಯು ನಮ್ಮ ದಾಸ್ಯತ್ವದ ಕಾರಣವು, ಅದನ್ನು ತ್ಯಜಿಸಿರಿ, ಎಂಬುವೇ ಮಹಾತ್ಮರ ಸಂದೇಶವು. ಇದರ ಮೇಲಿಂದ ದೇಶಭಕ್ತರು ಜೈಲಿನಲ್ಲಿ ಪ್ರವೇಶಗೊಂಡಂತೆ, ನಮ್ಮ ಚಿರ ವಾಂಛಿತ ಸ್ವರಾಜ್ಯವು ಬೇಗನೆ ಕೈಸೇರುವದೆಂದು ಇನ್ನು ಹೇಳಬೇಕೇನು?

* * * *

ಯುವರಾಜರು ಈ ತಿಂಗಳಲ್ಲಿ ಬೋಟೀ ಹತ್ತಿ ನವಂಬರ ತಿಂಗಳಲ್ಲಿ ಮುಂಬಯಿಗರಿಗೆ ದರ್ಶನವನ್ನೀಯುವರು. ಅವರ ಬಾದಶಾಹೀ ಆಗಮನವನ್ನು ಶಕ್ಯವಿದ್ದಷ್ಟು ರಂಗೀತ ಮಾಡಬೇಕೆಂದು, ನಮ್ಮ ಆಳರಸರೂ, ಅವರ ಸ್ತುತಿಪಾಠಕರೂ ಹಗಲಿರುಳು ಎಡಬಿಡದೆ, ದುಡಿಯುತ್ತಿರುವರು. ಮಲಬಾರದಂಥ ದಂಗೆಗಳಿದ್ದರೂ, ಅಸಹಕಾರಿತೆಯ ಚಳವಳಿಯಿದ್ದರೂ, ತಮ್ಮ ರಾಜ್ಯಪದ್ಧತಿಯು ಬಹುಜನ ಸಮಾಜಕ್ಕೆ ಬೇಕಾದಂತೇ ಇರುವದು, ಮೊಂಟೆಗ್ಯೂ ಸಾಹೇಬರ ಸ್ವರಾಜ್ಯ ಗುಳಿಗೆಯಿಂದಂತೂ, ಹಿಂದುಸ್ಥಾನದ ಬ್ರಿಟಿಶ ನ್ಯಾಯಬುದ್ಧಿಯು, ಹಿಂದೀ ಜನತೆಯು ಮಹಾಯುದ್ಧ ಪ್ರಸಂಗದಲ್ಲಿ ಸಂತೋಷದಿಂದ ಮಾಡಿದ ದ್ರವ್ಯ ಹಾಗು ಮನುಷ್ಯ ಬಲಗಳಿಗೆ ಅನುರೂಪವಾಗಿ, ನಮ್ಮ ಒಡೆಯರು ‘ದೇಣಗಿಯನ್ನು’ ಕೊಟ್ಟ ಬಗ್ಗೆ ಕೃತಜ್ಞತೆಯಿಂದ ತುಂಬಿ ತುಳುಕುತ್ತಿರುವರು. ಯುವರಾಜರಿಗೆ ಎಷ್ಟತಲಿ? ಹ್ಯಾಗೆ ಸತ್ಕರಿಸಲಿ? ಎಂದು ಭಾರತಮಾತೆಯು ವಿವಂಚನೆಯಲ್ಲಿ ಬಿದ್ದಿರುವದೆಂದು, ಯುವರಾಜರಿಗೆ ತೋರಿಸಿ, ತಮ್ಮ ಕುಶಲ ರಾಜ್ಯಕಾರಭಾರದ ಶ್ಲಾಘನ ಪಡೆಕೊಳ್ಳಲಿಕ್ಕೆ ಉತ್ಸುಕರಾಗಿ, ಎಲ್ಲ ಕಾರ್ಯಗಳನ್ನು ಬದಿಗೊತ್ತಿ ಸ್ವಾಗತ ತಯಾರಿಯನ್ನು ನಮ್ಮ ಆಳರಸರು ಮಾಡಿಯುತ್ತಿರುವರು.

* * *

ಹೀಗೆ ಅವರು ಮಾಡುವದು ಸಹಜವು, ತಮ್ಮ ಕಾರಭಾರವು ಪ್ರಜೆಗಳಿಗೆ ಸಮ್ಮತವಿದೆ, ಅವರ ಹಿತಕ್ಕಾಗಿಯೇ ನಾವಿಲ್ಲಿದ್ದೇವೆ, ಇದನ್ನು ಪ್ರಜೆಗಳು ಕೇವಲ ಸ್ವಯಂಸ್ಫೂರ್ತಿಯಿಂದ ಮಾಡಿದ ಸ್ವಾಗತದ ಮೇಲಿಂದ ಅರಿತು ಕೊಳ್ಳಿರಿ, ಎಂದು ಆಳರಸರು ಯುವರಾಜರಿಗೆ ಭಾಸಿಸುವದರಲ್ಲಿ ಅವರೇನು ಮನುಷ್ಯ ಸ್ವಭಾವಕ್ಕೆ ವಿರುದ್ಧವಾಗಿ ವರ್ತಿಸುವದಿಲ್ಲ. ಯುವರಾಜರಿಗೆ ಸತ್ಯಸ್ಥಿತಿಯನ್ನು ತಿಳಿಯಗೊಡದ ನಾವಕ್ಕೆ ಗುರಿಮಾದರೂ, ಈ ವೃತ್ತಿಯು ಸ್ವಾಭಾವಿಕವೆಂದು ಯಾರೂ ಒಪ್ಪುವರು. ಆದರೆ, ಈ ಆಳರಸರು ಪ್ರಚಂಡ ಸ್ವಾಗತ ಮಾಡುವದರಲ್ಲಿ ಪ್ರಜೆಗಳ ಕಲ್ಯಾಣವಿದೆಂದು ಸತ್ಯಾಪಲಾಪವನ್ನು ಮಾಡುವದನ್ನು ನೋಡಿದರೆ, ಇವರು ಹಿಂದುಸ್ಥಾನದ ಪ್ರಜೆಗಳೆಂದರೆ ಕೇವಲ ಮೂರ್ಖರೆಂದು ತಿಳಿಯುತ್ತಾರೋ ಏನೆಂದು ತಿಳಿಯುವದಿಲ್ಲ. ಕಳೆದ ಶಾಯದೆ ಕೌನ್ಸಿಲಿನಲ್ಲಿ ನಾಮದಾರ ಲೊರೆನ್ಸ ಸಾಹೇಬರು ಯುವರಾಜರ ಸ್ವಾಗತಕ್ಕಾಗಿ ೮ ಲಕ್ಷ ೭೭ ಸಾವಿರ ರೂಪಾಯಿ ಮಂಜೂರ ಮಾಡಿರೆಂದು ಹೇಳುವಾಗ, ಹೀಗೆ ಅಪರಿಮಿತ ಖರ್ಚ ಮಾಡುವದರಿಂದ, ಹಿಂದುಸ್ಥಾನಕ್ಕೆ ಆರ್ಥಿಕ ಕಲ್ಯಾಣವಿದೆಂದು ನುಡಿದರು.

* * - * *

ಅದು ಹೇಗೆ! ಯುವರಾಜರ ಸ್ವಾಗತ ಮಾಡುವದರಲ್ಲಿ ಹೆಚ್ಚು ಖರ್ಚ ಮಾಡಿದರೆ, ನಮಗೆ ನಿಜವಾಗಿ ನೋಡಿದರೆ ಹಾನಿಯಾಗಬೇಕಿತ್ತು. ಲಕ್ಷಗಟ್ಟಲೆ ರೂಪಾಯಿ ಸುಟ್ಟು ಬೂದಿಯಾಗುತ್ತದೆ ಲಕ್ಷಗಟ್ಟಲೆ ರೂಪಾಯಿ ಮಂಟಪ ಕೋಚಿ ಮಾಡುವದರಲ್ಲಿ ಖರ್ಚಾಗುವದು. ಹೀಗಿದ್ದು ನಮಗೆ ಲಾಭ ಹ್ಯಾಗೆ? ಮಲಬಾರ ದಂಗೆ, ಅಸಹಕಾರಿತೆ ಮುಂತಾದ ಚಳವಳಿಗಳಿಂದ ಹಿಂದುಸ್ಥಾನದ ಸಂಬಂಧ ಪರರಾಷ್ಟ್ರಗಳಲ್ಲಿ ಅಲ್ಲಬಸಲ್ಲದ ಸುದ್ದಿಗಳು ಹಬ್ಬಿವೆ ಅದರಿಂದ ಹಿಂದುಸ್ಥಾನದ ಅಭಿವೃದ್ಧಿಗೆ ಸಾಲಬೇಕಾದರೆ, ಕೊಡಲಿಕ್ಕೆ ಯಾರೂ ಕಬೂಲ ಮಾಡುವದಿಲ್ಲ ಹೀಗಾಗಿ ನಮಗೆ ದರ ಸಾಲ ದರ ಶೇಕಡಾ ೭ ಬಡ್ಡಿ ದರದಿಂದ ವಿಲಾಯತಿಯಲ್ಲಿ ಸಾಲ ತೆಗೆಯಬೇಕಾಯಿತು, ಎಂದು ಮೋಹಿನಿಯನ್ನು ಕಾಯದೆ ಕೌನ್ಸಿಲುದೊಳಗಿನ ಸಭಾಸದರ ಮೇಲೆ ಪಸರಿಸಿದರು. ಬಿಡ ಕೌನ್ಸಿಲರರು! ಅವರಿಗೆಲ್ಲ ಇದರೊಳಗಿನ ಮರ್ಮವೇನು ಗೊತ್ತು? ಹಿಂದುಸ್ಥಾನಕ್ಕೆ ‘ಸ್ವರಾಜ್ಯ’ವನ್ನು ದಾನಮಾಡಿದ, ಹಿಂದುಸ್ಥಾನಕ್ಕೆ ಒಳಿತು ಮಾಡುವದಕ್ಕಾಗಿ ಅಹರ್ನಿಶಿ ಯತ್ನಿಸುವ ಭಾರತ ಮಂತ್ರಿ ಮೊಂಟೆಗ್ಯೂ ಸಾಹೇಬರು ಹಿಂದುಸ್ಥಾನದೊಳಗಿನ ಸ್ವರಾಜ್ಯ ಚಾಲಕರಿಗೆ ಹೇಳದೆ-ಕೇಳದೆ, ವಿಲಾಯತಿಯಲ್ಲಿ ೭ ಬಡ್ಡಿ ದರದ ಸಾಲವನ್ನು ಜಾಹೀರು ಮಾಡಿ, ಒಂದೆರಡು ದಿವಸಗಳಲ್ಲಿ ಅಲ್ಲಿ ವಿಲಾಯತಿ ಸಾವಕಾರರಿಂದ ಪಡೆದರು. ಮತ್ತು ಇಷ್ಟೆಲ್ಲ ಕಾರಭಾರವು ಹಿಂದುಸ್ಥಾನ ಸರಕಾರವು ೬ ಬಡ್ಡಿ ದರದಿಂದ ಕೋಟಿಗಟ್ಟಲೆ ಸಾಲವನ್ನೆತ್ತುವಾಗ, ನಮ್ಮ ಮುಂಬಯಿ ಸರಕಾರವು ೬॥ ಬಡ್ಡಿ ದರದಿಂದ ಮುಂಬಯಿ ಪಟ್ಟಣದಲ್ಲೇ ಅಬ್ಜ ಸಾಲವನ್ನೆತ್ತಿದಾಗ! ಇದರ ಮೇಲಿಂದ ನಾ। ಲೊರೆನ್ಸ ಸಾಹೇಬರ ತರ್ಕವು ಎಷ್ಟರಮಟ್ಟಿಗೆ ಪ್ರಾಮಾಣಿಕವಿರುತ್ತದೆ, ಎಂಬುದು ತಿಳಿಯುವಹಾಗಿದೆ.

* * - * *

ಈ ತರ್ಕದಲ್ಲಿ ಇನ್ನೊಂದು ತತ್ವದ ಆವಿಷ್ಕರಣ ಮಾಡುವದು ಅವಶ್ಯಕತೋರುತ್ತದೆ. ನಾಮದಾರ ಸಾಹೇಬರು ಹೇಳುವ ನುಡಿಯಂತೆ, ಪರರಾಷ್ಟ್ರಗಳಲ್ಲಿ ಹಿಂದುಸ್ಥಾನದ ಬದನಾಮಿಯಾಗಿದೆ; ಸಾಲ ಸಿಗುವದು ದುರ್ಲಭವಾಗಿದೆಂದು ತಿಳಿಯುವಾ. ಆದರೆ, ದೀಪಾವಳಿ ಅಪರಿಮಿತ ಮಾಡಿ, ಘಟಾಕಿ, ಗರ್ನಲು ಮುಂತಾದವುಗಳನ್ನು ಹೊಡೆದು, ಮಂಟಪ ನಿರ್ಮಾಟನಲ್ಲಿ ನೀರಿನಂತೆ ಧನವ್ಯಯ ಮಾಡಿದರೆ, ನಮ್ಮ ಶ್ರೀಮಂತಿಕೆಯ ಪ್ರದರ್ಶನವಾಗಿ ನಮ್ಮ ಭದ್ರತೆಯು ಏರುವದೇನು? ಹಿಂದುಸ್ಥಾನ ಸಂಸಾರದ ಹತ್ತರ ಹಣವಿಲ್ಲೆಂದು ಪರ ರಾಷ್ಟ್ರಗಳಿಗೆ ಗೊತ್ತಿದ್ದಾಗ, ಹೀಗೆ ಪ್ರತ್ಯಕ್ಷದ ಅಪವ್ಯಯ ಮಾಡಿದ್ದನ್ನು ಕಣ್ಣಾರೆ ಕಂಡಮೇಲೆ, ನಮ್ಮಂಥ ದುಂದುಗಾರರಿಗೆ ಅವರು ಹ್ಯಾಗೆ ಸಾಲ ಕೊಡುವರು? ಪ್ರಚಂಡ ಸ್ವಾಗತ ಮಾಡಿದ ಬಗ್ಗೆ ನಮಗೆ ಕೃತಜ್ಞತೆಯನ್ನು ತೋರಿಸಿದರೂ, ಗಂಟು ಬಿಚ್ಚಿ ಕೊಡುವಾಗ, ಅವರು ಮತ್ತಿಷ್ಟು ವಿಚಾರ ಮಾಡಲಿಕ್ಕಿಲ್ಲೇನು? ನಿತ್ಯ ಖರ್ಚಿಗೆ ಹಣವಿಲ್ಲೆಂದು ಬೇಡಾಡುವ ಸದ್ಗೃಹಸ್ಥರು ಮದುವೆ-ಮುಂಜಿಯ ಪ್ರಸಂಗದಲ್ಲಿ ಮಂಟಪ ಶೃಂಗರಿಸಿ, ಬ್ರಾಹ್ಮಣರಿಗೆ ಸಡಿಲು ಕೈಯಿಂದ ದಕ್ಷಿಣೆ ಕೊಟ್ಟು, ಊರವರಿಗೆಲ್ಲ ತುಪ್ಪದ ಮಿಠಾಯಿ ಹಂಚಿದರೆ, ಊರವರು ಗೃಹಸ್ಥರು ಶ್ರೀಮಂತರೆಂದು ತಿಳಿಯುವರೋ? ದುಂದುಗಾರರೆಂದು ತಿಳಿಯುವರೋ? ಇಂಥ ಅಸಂಬದ್ಧ ಕಾರಣ ಪರಂಪರೆಯನ್ನು ನಾಮದಾರ ಲೊರೆನ್ಸರಂಥ ಜವಾಬದಾರ ಅಧಿಕಾರಿಗಳು ಗಂಭೀರ ರೀತಿಯಿಂದ ಕಾಯದೆ ಕೌನ್ಸಿಲಿನಲ್ಲಿ ಮಂಡಿಸುವದೆಂದರೆ, ಇವರು ಹುಡುಗಾಟಿಕೆ ಮಾಡುತ್ತಾರೋ, ಕೌನ್ಸಿಲು ಸಭಾಸದರ ಉಪಹಾಸ ಮಾಡುತ್ತಾರೋ, ತಿಳಿಯದು.

—✱—✱—

ಕುಮಟೆ ಗೌ। ಸಾ। ಹತ್ತು ಸಮಸ್ತರಿಂ.

ಸತ್ಯಮೇವಜಯತೆ !

(ಲೇಖಾಂಕ ೨.)

—✱—

[ಲೇಖಕ— ಒಬ ವ್ಯಾಪಾರಿ.]

ಮುಂಬಯಿ ಮುಂತಾದ ದೊಡ್ಡ ದೊಡ್ಡ ಶಹರಗಳಲ್ಲಿ ಪಾರಸಿ, ಭಾಟಿಯಾ, ಜೈನ ಮುಂತಾದ ಸಮಾಜದವರು ತಮ್ಮ ತಮ್ಮ ಸಮಾಜದ ಏಳಿಗೆಗಾಗಿ ಅಭಿಮಾನದಿಂದ, ಅವರು ಎಷ್ಟು ದೂರಿನ ನಿವಾಸಿಕರಾಗಿದ್ದರೂ ಸಮಾಜದ ಹಣ ಪೂರೈಕೆಯಿಂದ ಅವರ ಹೀನಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಎಷ್ಟು ತತ್ಪರರಾಗಿರುವರೆಂಬದು ಇಲ್ಲಿಯು ಅನುಭವಿಕ ಮುಖಂಡರಿಗೆ ತಿಳಿದದ್ದೇ ಮಾತು. ಅಷ್ಟೇಕೆ! ಇಲ್ಲೇ ಅತ್ತಿತ್ತ ಕಣ್ಣು ತಿರುವಿದರೆ, ಅಂಥ ಎಷ್ಟೋ ಉದಾಹರಣೆಗಳು ವಿಚಾರವಂತರಿಗೆ ಕಾಣದೆ ಉಳಿಯವು ಆದರೂ ತಮ್ಮ ಸಮಾಜದ ಹೀನಸ್ಥಿತಿಯನ್ನು ಕಣ್ಣಾರೆನೋಡುತ್ತ, ಅದರ ಕಾರಣವು ಯಾವದೆಂದು ತಿಳಕೊಳ್ಳಲಾರದಷ್ಟು ಅಸಮರ್ಥರೇನಲ್ಲದ ಮುಖಂಡರೇನು ಕಡಿಮೆ ಇಲ್ಲ. ಆದರೂ ಸಮಾಜೋದ್ಧಾರದ ಉಪಾಯಗಳು ಅವರಿಗೆ ತೋಚಬಾರದೆಂಬದು ಬಡ ಸಮಾಜದ ದುರ್ದೈವವು’ ಹಣ್ಣಾದ ಕೂದಲಿನ ಎಲ್ಲ ಭಜಕರೂ, ದಾಸ್ಯತ್ವದಲ್ಲಿ ಮುಳುಗಿದವರೂ, ಗತಾನುಗತಿಕರೂ, ತತ್ವರಹಿತರೂ, ಶ್ರೀದೇವರಲ್ಲಿ ಅಂಧಭಕ್ತಿ-ವಿಶ್ವಾಸವಿರುವವರೂ, “ ಅನ್ಯ ಮಂಬರರನ್ನು ೮ ಕಮಿಟಿಯಲ್ಲಿ ಸೇರಿಸಿ ಭಂಡಾರದ ಹಣಗಳನ್ನು ‘ಹಂಚಕಾರ-ಪಂಚಕಾರ’ ಮಾಡಿ, ದೇವರನ್ನು ಸುಲಿಯುವ ಉಪಾಯವನ್ನು ಮಾಡಿರುವರೆಂದು” ಅಪಮತಲಬಿ ಸ್ವಾರ್ಥಿಜನರು ಹೇಳಿದರೆ, ಅದನ್ನು “ಹೌದು; ಹೌದು”

(೩ನೇ ಪಾನಿನಮೇಲೆ ಮುಂದರಿಸಿದೆ.)

ಕಾನಡಾವೃತ್ತ.

ಗುರುವಾರ, ತಾರೀಖು ೨೭ ಮಾಹೆ ಅಕ್ಟೋಬರ ೧೯೨೧

ಗೋಳೀಬಾರಿನ ಅವಶ್ಯಕತೆಯಿತ್ತೋ?

ಧಾರವಾಡದ ಗೋಳೀಬಾರಿನ ಖಟ್ಲೆಯ ವಿಷಯು ಮುಂಬಯಿ ಇಲಾಖೆಯೊಳಗಿನ ಲೋಕಮತದೊಳಗೆ ಖಳವಳಉಂಟಾದವಷ್ಟು ಮೊದಲೆಂದೂ ಉಂಟಾಗಿದ್ದಿಲ್ಲ. ಆರೋಪಿತರ ತನಖಿ ನಡಿಸಿ, ನ್ಯಾಯಾಧೀಶ ಪೋಟರಫೀಲ್ಡ ಸಾಹೇಬರು ಕೊಟ್ಟ ತೀರ್ಪನ್ನು ಅವಲೋಕಿಸಿ, ಅದರ ಮೇಲಿನ ನಮ್ಮ ಮತವನ್ನು ನಾವು ನಮ್ಮ ಕಳೆದ ಸಂಚಿಕೆಯೊಳಗಿನ ಸ್ಫುಟ ವಿಚಾರದಲ್ಲಿ ವ್ಯಕ್ತಪಡಿಸಿದ್ದೇವೆ. ಧಾರವಾಡದ ಗೋಳೀಬಾರದ ಇಡೀ ಕಾಠಸ್ಥಾನವನ್ನು ಅವಲೋಕಿಸಿ, ಜನರಿಗೆ ಭೀತಿಯನ್ನೂ, ಚಿಂತೆಯನ್ನೂ, ಉಂಟುಮಾಡುವ ಒಂದು ಮಹತ್ವದ ಮುದ್ದೆಯು ಜನತೆಯ ಮುಂದೆ ಎದುರಾಗಿ ನಿಂತಿದೆ. ಅದು ಜನರ ಜೀವಿತದ ಸುರಕ್ಷಿತತೆಗೆ ನಿಕಟವಾಗಿ ಸಂಬಂಧಿಸಿರುವದು. ಪೋಲೀಸರು ಜನರ ಮೇಲೆ ಗುಂಡು ಹಾರಿಸಲಿಕ್ಕೆ ಎಷ್ಟರಮಟ್ಟಿಗೆ ಸ್ವತಂತ್ರರಿದ್ದಾರೆ; ಗೋಳೀಬಾರಮಾಡಲಿಕ್ಕೆ ಪರಿಸ್ಥಿತಿಯೂ, ಕಾರಣಗಳೂ ಎಷ್ಟು ಪ್ರಮಾಣದಿಂದ ಯಾವವಿಧದು ಇದ್ದರಾಯಿತು. ಶಾಂತತೆಯನ್ನೂ, ವ್ಯವಸ್ಥೆಯನ್ನೂ ಕಾಪಾಡಲಿಕ್ಕೆ ಗೋಳೀಬಾರು ಸರ್ವಸಾಧಾರಣವಾದ ಮತ್ತು ವಾಡಿಕೆಯ ಉಪಾಯವೇನು? ಈ ಪ್ರಶ್ನೆಗಳೊಳಗೆ ತೀರ ಮಹತ್ವದ ನಿರ್ಣಯಗಳು ಒಳಗೊಂಡಿವೆಂದು ಕಾಣುವದಿದೆ! ಈ ನಿರ್ಣಯಗಳ ಮೇಲೆಯೇ ಇನ್ನು ಮುಂದೆ ಸಾರ್ವಜನಿಕ ಜೀವಿತದ ಸುರಕ್ಷಿತತೆಯು ಅವಲಂಬಿಸಿದೆಂದು ಹೇಳುವದು ಯುಕ್ತವು. ಧಾರವಾಡದೊಳಗೆ ಸೆರೆ ಅಂಗಡಿಯ ಮುಂದೆ ನೆರೆದ ಜನರ ಸಂದಣಿಯು ಮೇಲೆ, ಗೋಳೀಬಾರ ಮಾಡುವ ಅವಶ್ಯಕತೆಯು ಇತ್ತೋ, ಎರಡು ವಿಷಯದ ಮೇಲೆ ದೃಷ್ಟಾಂತದ ದಶೆಯಿಂದ ಅಲ್ಪ ಚರ್ಚ ಮಾಡಿದರೆ, ಈ ಮುದ್ದೆಗಳ ಮಹತ್ವವು ತಿಳಿಯುವದು. ಈ ಗೋಳೀಬಾರ ಅನಾವಶ್ಯಕವಿತ್ತೆಂದು ಸಿದ್ಧಪಡಿಸಿದರೂ, ಅದಕ್ಕೆ ಕಾರಣರಾದವರಿಗೆ ಕಠಿಣ ಶಿಕ್ಷೆಯು ಸೂಕ್ತವು ದೊರೆಯದಿದ್ದರೆ, ಕ್ಷುಲ್ಲಕ ಕಾರಣದಿಂದ ಯಾವ ಪೋಲೀಸ ಅಧಿಕಾರಿಗೂ, ಜನರ ಗುಂಪಿನಮೇಲೆ ಮನ ಬಂದಂತೆ ಗೋಳೀಬಾರ ಮಾಡಲಿಕ್ಕೆ ಅಪ್ರತ್ಯಕ್ಷವಾಗಿ ಸರಕಾರವು ಪರವಾನಗಿಯನ್ನೇ ಕೊಟ್ಟಂತಾಗುವದಿಲ್ಲವೇ? ಆದಕಾರಣ ಜನರ ಜೀವಿತ ರಕ್ಷಣೆಯ ಅಸ್ಥ ಕರ್ತವ್ಯವನ್ನು ನ್ಯಾಯ್ಯವಾಗಿ ನಡಿಸದೇ ಕಾದ ಸರಕಾರದ ಕಣ್ಣರಿಕೆಗೆ ಈ ಮುದ್ದೆಯು ಸ್ಪಷ್ಟವಾಗಿ ಬರಬೇಕೆಂದು ಅದನ್ನು ನಾವು ಮುಂದಿಟ್ಟಿದ್ದೇವೆ.

ಇನ್ನು ಧಾರವಾಡದೊಳಗಿನ ಗೋಳೀಬಾರದ ಸಮಗ್ರ ಪ್ರಕರಣವನ್ನೇ ನೋಡುವ. ಜುಲೈ ೧ ನೇ ತಾರೀಖಿನ ದಿನ ಮಧ್ಯಾಹ್ನದ ಸುಮಾರಕ್ಕೆ ಊರೊಳಗೆ ಗಡಬಡಿ ಆಗುವ ಪೂರ್ವ ಚಿಹ್ನಗಳು ತೋರಿದ್ದರೆ, ಸರಕಾರಿ ಪುರಾವೆಯೇ ಗ್ರಾಹ್ಯವೆಂದು ಕಲ್ಪಿಸಿ, ನಾವು ಹೀಗೆ ಕೇಳುತ್ತೇವಲ್ಲ,— ಗೋಳೀಬಾರಿನ ಅವಶ್ಯಕತೆಯೇ ಉಂಟಾಗದಂತೆ, ಪೂರ್ವ ಯೋಜನೆಯನ್ನು ಮಾಡಲಿಕ್ಕೆ ಡಿ ಮೇಜಿಸ್ಟ್ರೇಟರ ಕೈಗಳನ್ನು ಯಾರು ಕಟ್ಟಿಟ್ಟಿದ್ದರು? ಪೋಲೀಸ ಸುಪರಿಂಟೆಂಡೆಂಟರೂ, ಸ್ಥಾನಿಕ ಅಧಿಕಾರಿಗಳೂ ಯಾಕೆ ಮಲಗಿದ್ದರು? ಊರೊಳಗಿನ ಮುಖಂಡರಿಗೆ ಕರಸಂದು, ಇಲ್ಲವೆ, ಅವರಿಗೆ ಭೆಟ್ಟಿಯಾಗಿ ಅವರ ಮುದ್ದತ್ತಿನಿಂದ ಊರೊಳಗೆ ದಂಗೆಯಾಗದಂತೆ, ಇರುವಂತೆ ಶಾಂತತೆಯು ಬಾಳಿರುವಂತೆ, ಅವರು ಯಾಕೆ ಪ್ರಯತ್ನಮಾಡಲಿಲ್ಲ? ತೀರ ಅನಿವಾರ್ಯವಾದ ಪಕ್ಷದಲ್ಲಿ ಮಾತ್ರ ಗೋಳೀಬಾರು ಸಮರ್ಥನೀಯವದೆಂದು ಹೇಳಬೇಕಾದಾಗ, ಅದರ ಗರಜು ಬೀಳದಂತೆ, ಮುಂಜಾಗ್ರತೆಯ ಎಲ್ಲ ಶಕ್ಯವಾದ ಉಪಾಯ, ಯೋಜನೆಯನ್ನು ಮಾಡದಿದ್ದರೆ, ಪ್ರತ್ಯಕ್ಷ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಮಾಡಲಿಲ್ಲೆಂಬ ಅಪರಾಧದಿಂದ ಎಂದೂ ಮುಕ್ತರಾಗರು. ಗೋಳೀಬಾರು ಮಾಡುವಾಗ ಮೆಜಿಸ್ಟ್ರೇಟರು ಊರಲ್ಲೇ ಇದ್ದರೂ, ಅವರಿಗೆ ಕರೆ ಕಳಿಸಲಿಕ್ಕೆ ವೇಳೆ ಇದ್ದರೂ, ಮೆಜಿಸ್ಟ್ರೇಟರು ಸಹ ಹಾಜರಿಲ್ಲದೆ ಅವಾಸ್ತವ ಪೋಲೀಸರು ಗುಂಡು ಹಾರಿಸಿದ್ದು ಎಂದೂ ಸಮರ್ಥನೀಯವಾಗದು. ಜನರಮೇಲೆ ಗುಂಡು ಹಾರಿಸುವ ಮತ್ತು ಜನರ ಪ್ರಾಣಹಾನಿಗೆ ನಿಶ್ಚಿತವಾಗಿ ಕಾರಣವಾಗುವ, ಭಯಂಕರ ಜವಾಬದಾರಿಯ ಕಲಸವನ್ನು ಪೋಲೀಸ ಫೌಜದಾರನ ವಶಕ್ಕೆ ಬಿಡುವದೆಂದರೆ, ಅದಕ್ಕಿಂತ ಹೆಚ್ಚು ಬೇಜಬಾಬದಾರ ಕೆಲಸವು ಮತ್ತೊಂದಿಲ್ಲೆಂದು ಹೇಳಬೇಕು. ಇನ್ನು ಆತ್ಮರಕ್ಷಣೆಗಾಗಿ ಫೌಜದಾರನ ಹುಕುಮಿನಿಂದ ಪೋಲೀಸರು ಗುಂಡು ಹಾರಿಸಿದರೆಂದು, ಕಾರಣವನ್ನು ಸಮರ್ಥನೀಯವಾಗುವಂತೆ, ಗ್ರಾಹ್ಯವಾಗುವಂತೆ ಪ್ರತಿಪಾದಿಸಿದ್ದರೆ ಶಿವಲಿಂಗಪ್ಪಾ ಫೌಜದಾರನಮೇಲೆ ಖಟ್ಲೆ ಮಾಡಿ ಮತ್ತು ತನ್ನ ಕೃತ್ಯದ ಸಮರ್ಥನೆಗಾಗಿ ಮತ್ತು ತನ್ನ ಬಚಾವಿಗಾಗಿ ಅವನು ಆತ್ಮರಕ್ಷಣೆಯ ಕಾರಣವನ್ನು ಪುರಾವೆಯ ಸಹಿತ ಮುಂದೆ ತರುವ ಬಗ್ಗೆ ಆ ಪುರಾವೆಯ ಸಿದ್ಧವಾದಾಗ ಸಮರ್ಥನೀಯವಾಗುವದು. ಧಾರವಾಡ ಖಟ್ಲೆಯೊಳಗಿನ ಆರೋಪಿಗಳಮೇಲೆ ಆರೋಪಗಳನ್ನು ಸಾಬೀತಪಡಿಸಲಿಕ್ಕೆ ಇಂಥ ಆತ್ಮರಕ್ಷಣೆಯ ಅಪ್ರಸ್ತುತ ಪುರಾವೆಯು ಬೇಕೆಂದು ತಂದಿದ್ದಾರೆಂದು ಆರೋಪಿತರು ಕಂಠರವದಿಂದ ಒದರುತ್ತಿದ್ದಾಗ, ಫೌಜದಾರನಮೇಲೆ ಸ್ವತಂತ್ರ ಖಟ್ಲೆ ಮಾಡಿ ಗೋಳೀಬಾರು ಆತ್ಮರಕ್ಷಣೆಗಾಗಿ ಮಾಡಲ್ಪಟ್ಟಿತ್ತೆಂದು ಸ್ವತಂತ್ರ ಪುರಾವೆಯಿಂದ ಸಿದ್ಧವಾಗುವ ತನಕ, ಲೋಕಮತವು ಹ್ಯಾಗೆ ಮನಗಾಣುವದು? ಈ ಮಾತು ಒತ್ತಟ್ಟಿಗಿರಲಿ. ಗೋಳೀಬಾರು ಮಾಡುವಂಥ ದಂಗೆಯಾದರೂ ಧಾರವಾಡದಲ್ಲಿ ಸಂಭವಿಸಿತ್ತೋ ಎಂಬ ಬಗ್ಗೆ, ಸರಕಾರ ತರ್ಫಿನ ಪುರಾವೆಯನ್ನೇ ಒಡೆದು ನೋಡುವ. ಈ ಪುರಾವೆಯು ಎಷ್ಟು ಸಂಶಯಾಸ್ಪದವೂ, ಅವಿಶ್ವಸನೀಯವೂ ಎಂಬ ಬಗ್ಗೆ ನ್ಯಾಯಾಧೀಶ ಪೋಟರಫೀಲ್ಡ ಸಾಹೇಬರ ತೀರ್ಪೇ ಹೇಳುವದು. ಲಿಂಗಾಯತ ಸಾಕ್ಷಿದಾರರಮೇಲೆ ಪೂರ್ಣ ವಿಶ್ವಾಸವಿಡಲಿಕ್ಕಾಗುವದಿಲ್ಲ. ಸರಾಯಿ ಮಕ್ತೇದಾರರ ಪುರಾವೆಯೂ ಪೂರ್ವಗ್ರಹಗಳಿಂದ ದೂಷಿತವಾದದ್ದು. ಬಾತಾಂ ಬಾಕಿ ಪೋಲೀಸರು ಮಾಡಿ ಕೊಟ್ಟ ಖಟ್ಲೆಯೊಳಗೆ ಪೋಲೀಸ ಸಾಕ್ಷಿದಾರರೇ ಕೊಟ್ಟ ಪುರಾವೆಯೇ ಉಳಿಯಿತ. ಈ ವಿಧದ ಪುರಾವೆಯನ್ನೇ ನಂಬಿ, ಅದರಮೇಲಿಂದ ಸಾಧಾರ ಅನುಮಾನಗಳನ್ನು ತೆಗೆದರೆ ಯಾವ ವಿಧದ ದಂಗೆಯು ಧಾರವಾಡದಲ್ಲಾಗಿತ್ತೆಂದು ನೋಡಿರಿ. ೨-೩ ಸಾವಿರ ಜನರು ಕೂಡಿ, ದಂಗಾಮಸ್ತಿ ಮಾಡಿದರೆ, ಅದು ಸಹ ಮೂರು ತಾಸು ನಡೆದರೆ, ಎಷ್ಟು ಭಯಂಕರ ಪರಿಣಾಮವೂ, ಅನರ್ಥವೂ ಆಗಬೇಕೋ, ಅದರೊಳಗಿನ ಒಂದು ಶತಾಂಶವಾದರೂ ಸಂಭವಿಸಿದ್ದು ಯಾಕೆ ಕಾಣುವದಿಲ್ಲ? ಮಾಲಮತ್ತೆಗೆ ೫೦-೦-೦ ರೂಪಾಯಿಗಿಂತ ಹೆಚ್ಚು ಲುಕ್ಸಾನು ಪಡಿಸದಿದ್ದ ದಂಗೆಗಾರರು ದಂಗೆ ಮಾಡುವಾಗ ಬಾಳೆಹಣ್ಣು ತಿನ್ನುತ್ತ ಹೊಡದಾಟ ಮಾಡುತ್ತಿದ್ದರೇನು? ಪೋಲೀಸರಿಗಾಗಲಿ, ಬೇರೆ ಜನರಿಗಾಗಲಿ, ದಂಗೆಗಾರರು ಮಾಡಿದ್ದೆಂದು ಹೇಳುವ ದುಖಾಪತ್ತು ನೋಡಿದಮೇಲಂತೂ, ಅವರು ದಂಗೆ ಮಾಡಿಲ್ಲ, ದಂಗೆಯ ನಾಟಕವನ್ನು ಬೇಕಾದರೆ ಮಾಡಿರಬಹುದೆಂದು ಹೇಳಲಾಗುವದು. ನೋವಿನ ಎಣ್ಣೆ ಸ್ವಲ್ಪ ಬಿಸಿ ಮಾಡೋಣ ಇವುಗಳಿಂದ "ಘಾಯ" ಹೊಂದಿದವರಿಗೆ ಅಲ್ಪ ಹೊತ್ತು ಸುಶ್ರೂಷೆ ಮಾಡಿದ ಕೂಡಲೇ, ಅವರು ಹುಶಾರು ಆದದ್ದು ನಿಜವಿದ್ದರೆ, ಈ ಡಾಕ್ಟರರು ಅಶ್ವಿನಿ ಕುಮಾರರೇ ಆಗಿರಬೇಕು. ಇಲ್ಲವೇ ನೋವಾದದ್ದು ಅತ್ಯಲ್ಪವಿರಬೇಕು. ಇಂಥ ದಂಗೆ ಮಾಡುವ ಜನರಮೇಲೆ ೧೦೦-೨೦೦ ಸಶಸ್ತ್ರ ಪೋಲೀಸರು ಹಾಜರಿದ್ದಾಗ, ಮೂರಾವರ್ತಿ ಗುಂಡು ಹಾರಿಸಬೇಕಾಯಿತೆಂದು ಯಾರಾದರೂ ಹೇಳಿದರೆ, ಜನರು ನಂಬುವದು ಹ್ಯಾಗೆ? ಇಲಿಗಳನ್ನು ಹಿಡಿಸಲಿಕ್ಕೆ ಕೃಪ್ರ ಕಾರಖಾನೆಯ ದೊಡ್ಡ ವರ್ಜನ ತೋಫುಗಳನ್ನು ತಂದು ಹಾರಿಸುವ ಅವಶ್ಯಕತೆಯು ಎಷ್ಟಿದೆಯೋ, ಅಷ್ಟೇ ಅವಶ್ಯಕತೆಯು ಧಾರವಾಡದ ದಂಗೆಗಾರರಮೇಲೆ ಮೂರಾವರ್ತಿ ತುಬಾಕಿ ಗುಂಡು ಹಾರಿಸಲಿಕ್ಕೆ ಉಂಟಾಗಿತ್ತೆಂದು ಹೇಳಬೇಕು. ಪೋಲೀಸರಿಗಾದ ಜಖಮು ನೋಡಿದರೆ, ಬಿನ್ ಹತ್ಯಾರೀ ಪೋಲೀಸರನ್ನು ಜನರೊಳಗೆ ಬಿಟ್ಟುಕೊಟ್ಟು ಅವರನ್ನು ಅತ್ತಿತ್ತ ಸೆಳಸಿದರೆ, ದಂಗೆ ಮುರಿಯಲಿಕ್ಕೆ ಆಗುತ್ತಿತ್ತೆಂದು ಹೇಳಬೇಕಾಗುತ್ತದೆ. ಸರಕಾರಿ ಪುರಾವೆಯಿಂದ ಗೋಳೀಬಾರಿನ ಅವಶ್ಯಕತೆಯು ಇಷ್ಟು ನಿರುಪಯೋಗಿಯಾಗುವಷ್ಟು ಧರವುಳಿಸಿದ್ದಾಗ, ಲೋಕಪಕ್ಷದ ಪುರಾವೆಯಿಂದ ಗೋಳೀಬಾರು ಬಯಂಕರ ಗುಸ್ತೆಯಾಗುವಷ್ಟು ಅಸಮರ್ಥನೀಯವೂ, ಅನಾವಶ್ಯಕವೂ ಆದದ್ದು ಅಯತಾರ್ಥವದೆಂದು ಹೇಳಲಿಕ್ಕಾಗದು.

ಧಾರವಾಡದ ಪ್ರಕರಣದ ಚೌಕಶಿಯು ಸ್ವತಂತ್ರ ಕಮೀಶನದಿಂದ ಆಗದಿದ್ದರೆ, ಮತ್ತು ಫೌಜದಾರನ ಮೇಲೆ ಸ್ವತಂತ್ರ ಖಟ್ಲೆ ಮಾಡಿ ಪೋಲೀಸರ ಗೋಳೀಬಾರಿನ ತನಖಿಯನ್ನು ನಡಿಸದಿದ್ದರೆ, ಅದರ ಪರಿಣಾಮವು ಕಲ್ಪನಾತೀತವಾಗಿ ಅಪಾಯಕರವಾಗುವದೆಂದು ನಮಗೆ ಭೀತಿಯುಂಟಾಗಿದೆ. ಗೋಳೀಬಾರು ಮಾಡಲಿಕ್ಕೆ ಪೋಲೀಸರು ಸ್ವತಂತ್ರರಿದ್ದಾರೆ. ಸಣ್ಣ ನೆವದಿಂದ ಜನರ ಮೇಲೆ ಗುಂಡುಹಾರಿಸಲಿಕ್ಕಾಗುತ್ತದೆ. ಗೋಳೀಬಾರು ಮಾಡುವ ಅವಶ್ಯಕತೆ ಇಲ್ಲದೆ, ಇತರ ಕುಶಲ ಉಪಾಯದಿಂದ, ಇಲ್ಲವೆ ಸಣ್ಣ ಲಾಠಿಗಳಿಂದ ಜನರ ಬೇಕಾಯದೇಶೀರ ಜಮಾವನ್ನು ಮುರಿಯಲಿಕೆ ಸಾಧ್ಯವಿದ್ದರೂ, ಅಂಥ ಸುಲಭ ಮತ್ತು ಸಮಂಜಸ ಉಪಾಯಗಳನ್ನು ನಡಿಸದೆ, ಅವುಗಳ ಬದಲು ತುಬಾಕಿಗನ್ನು ತಂದು ಗುಂಡು ಹಾರಿಸಿ, ಪ್ರಾಣಹಾನಿ ಮಾಡುವದು [ಅಪರಾಧವೇನಲ್ಲ ಎಂಬ ತಿಳುವಳಿಕೆಗಳು ತೀರ ಕಡಿಮೆ ಶಿಕ್ಷಣದ ಪೋಲೀಸರಂಥ ಕಲ್ಪಿತರಾಗಿಯ ನೌಕರರಲ್ಲಿ ಹಬ್ಬಿದರೆ ಪರಿಣಾಮವು ಎಷ್ಟು ಅನರ್ಥಕರವಾಗುವದೆ ಮ ಸರಕಾರಕ್ಕೆ ನಾವು ಹೇಳಬೇಕೇನು? ಈ ದೃಷ್ಟಿಯಿಂದಲೇ ಇದು ಬರೇ ಸುರಾಜ್ಯದ ಶಾಂತತೆಯ ಪ್ರಶ್ನೆಯಾಗಿ ತೋರಿಯದು. ಭೂತ

ಪಡೆಯ ಪ್ರಶ್ನೆಯಾಗುವದನ್ನು ಇದು ವ್ಯಾಪಕವಾಗು ವದು. ಇದನ್ನಷ್ಟು ಸರಕಾರವು ವಿಚಾರಿಸುವದೇನು?

ಸ್ಫುಟ ಸೂಚನೆಗಳು.

೧. ಸರಕಾರ ನವಕರರು ಪ್ರೊವಿನ್ಶಿಯಲ ತರಗತಿಯ ಸರ್ವಿಸದಲ್ಲಿದ್ದಾಗ, ಯಾವ ಜಿಲ್ಲೆಯಲ್ಲಿ ಅವರಿಗೆ ಜಮೀನ ಮಾಲಮತ್ತೆ ಇರುತ್ತದೋ, ಆ ಜಿಲ್ಲೆಯಲ್ಲಿ ಅವರನ್ನು ಹುದ್ದೆದಾರರಾಗಿ ನೇಮಿಸಬಾರದೆಂದು ಸ್ಪಷ್ಟವಾಗಿ ನೇಮವಿರುತ್ತಾ, ಅಂಥವರನ್ನು ತಮ್ಮ ತಮ್ಮ ಜಿಲ್ಲೆಯಲ್ಲಿ ನೇಮಿಸುವದೆಂದರೆ "ಪ್ರಮಾಣದೊಳಗಿನ ಬದನೆಕಾಯಿಗಳು ಪುರಾಣದಲ್ಲಿ" ಯೆಂದು ಹೇಳಿದಂತಾಗುವದಲ್ಲವೋ? ಇಂಥ ಬದನೆಕಾಯಿಗಳನ್ನು ಕುಮಟೆಯ ಒಬ್ಬ ನಾಗರಿಕನು ನಮ್ಮ ಮೊದಲನೇ ಸಂಚಿಕೆಯಲ್ಲಿ ಇಕೋ ನೋಡಿರಿ ಎಂದು ಹೇಳಿದಂತೆ, ಬೆಳಕಿಗೆ ತಂದಿರುವನು. ಕುಮಟೆಯ ಮುನಸೀಫ ಕೋರ್ಟಿನಲ್ಲಿ ವಿನಯಶೀಲರು, ಒಂದು ಮೊಕದ್ದಮೆಯಲ್ಲಿ, ಒಬ್ಬ ಪಕ್ಷಗಾರನ ಆಪ್ತರಿದ್ದಾರೆಂದು, ವಿಚಾರಣೆಯನ್ನು ಬೇರೆ ಕೋರ್ಟಿಗೆ ವರ್ಗಾಯಿಸಬೇಕೆಂದು ಪ್ರತಿಪಕ್ಷಿಯು ಅರ್ಜಿ ಮಾಡಿದ್ದಾನೆಂದು ಅವನು ತಿಳಿಸುತ್ತಾನೆ. ಸರಕಾರಿ ನಿಯಮವನ್ನು ಪಾಲಿಸದಿದ್ದದ್ದರ ಪರಿಣಾಮವು ಇದಾಗಿದೆಯಲ್ಲವೇ? ಅಮಲದಾರರಿಗೂ, ತಮ್ಮ ತಮ್ಮ ಊರಿನಲ್ಲಿ ಕಾರಭಾರ ನಡಿಸುವಾಗ, ತೊಂದರೆಗಳಾಗುತ್ತವೆಂದು ಅನುಭವವೂ ಬಂದಿರಬೇಕು. ಪರಕೀಯರಿದ್ದಷ್ಟು ಅಧಿಕಾರಿಗಳು ಜನರ ವಿಶ್ವಾಸಕ್ಕೆ ಒಮ್ಮೊಮ್ಮೆ ಪ್ರಿಯರಾಗ ಸಹ, ಯಾಕೆ ಪಾತ್ರರಾಗುತ್ತಾರೆಂದು ಕಾರಣಗಳನ್ನು ಸರಕಾರಕ್ಕೆ ಹೇಳುವದು ಬೇಡ. ಇಷ್ಟು ದಿವಸ ಆದದ್ದಾಯಿತು, ಇನ್ನು ಮುಂದೆ ಆದರೂ, ಈ ನಿಯಮವನ್ನು ಸಕ್ತ ರೀತಿಯಿಂದ ಸರಕಾರವು ಪಾಲಿಸುವ ನ್ಯಾಯ ವಿಚಾರವನ್ನು ಆದರಿಸುವದೇನು?

---

೨. ಚಿತಗಾಂಗ (ಬಂಗಾಲ) ಬ್ಯಾರಿಸ್ಟರ ಗುಪ್ತರವರು ಒಬ್ಬ ವಿಲ್ಯಾತಿ ಹೆಂಡತಿಯನ್ನು ಮದುವೆಯಾಗಿರುವರು. ಪತಿ–ಪತ್ನಿಗಳು ಸ್ವದೇಶ ಭಕ್ತರಾಗಿದ್ದಾರೆ. ಪತಿಗೆ ೧೯೩೦ ನೇ ಕಲಮಿನ ಅಸ್ತ್ರದಿಂದ ಮುಖಬಂದಿಯಾಗಲು, ಶ್ರೀ ಗುಪ್ತ ಪತ್ನಿಗಳು ಗಂಡಂದಿರ ಸ್ವದೇಶ ಪ್ರಸಾರದ ದೇಶಕಾರ್ಯವನ್ನು ತಾವಾಗಿ ಕೈಕೊಂಡರು. ಅವರಿಗೂ, ಅದೇ ೧೯೩೦ ನೇ ಕಲಮಿನ ಸುದರ್ಶನ ಚಕ್ರವು ಹಚ್ಚಲ್ಪಡಲು, ಡಿಸ್ಟ್ರಿಕ್ಟ ಮಾಜಿಸ್ಟ್ರೇಟರಿಗೆ ಅವರು ಝಣಝಣಿತ ಪತ್ರವನ್ನು ಬರೆದಿರುವರು "ಇಂಥ ಕ್ರಿಮಿ ಕಲಮಿನಿಂದ ತನಗೆ ಬಂದಿ ಮಾಡುವದು (un British) ಬ್ರಿಟಿಶರ ಹೆಸರಿಗೆ ಶೋಭಿಸುವದಿಲ್ಲ. ಖುದ್ದ ವಿಲ್ಯಾತಿಯಲ್ಲಿ ನೀವು ಇಂಥ ಬಂದಿ ಮಾಡುವಿರೇನು? ಹಿಂದುಸ್ಥಾನದೊಳಗಿನ ನಾವು ಬ್ರಿಟಿಶ ರಾಜ್ಯದಲ್ಲಿ ಇದ್ದೇವೋ, ಮತ್ತಲ್ಲಿದ್ದೇವೋ? ಮಹಾತ್ಮಾ ಗಾಂಧಿಗಳ ಆಜ್ಞೆ ಆಗುವ ತನಕ, ನಿಮ್ಮ ಹುಕುಮನ್ನು ಮುರಿಯುವ ಹಕ್ಕನ್ನು ನಾನು ಕಾಯ್ದಿಟ್ಟಿದ್ದೇನೆ." ಇತ್ಯಾದಿ ವಿಲ್ಯಾತದೊಳಗಿನ ಸ್ತ್ರೀಯರು ಎಷ್ಟು ದಿಟ್ಟರಿದ್ದಾರೆ ಮತ್ತು ಅವರಲ್ಲಿ ಎಷ್ಟು ಬಾಣೆದಾರತನವದೆ ಎಂದು ತಿಳಿಯಲಿಕ್ಕೆಲ್ಲ ಇದೊಂದು ದೃಷ್ಟಾಂತವು. ಅವಳಿಗಾದ ಅನ್ಯಾಯಕ್ಕಾಗಿ ಎಲ್ಲ ಹಿಂದಿಯರು ಅವಳಿಗೆ ಸಹಾನುಭೂತಿಯನ್ನು ತೋರಿಸುವರು. ೧೯೩೦ ನೇ ಕಲಮಿನ ಸುದರ್ಶನ ಚಕ್ರವು ಹೆಂಗಸರಿಗೂ, ಗಂಡಸರಿಗೂ ಒಂದೇ ಸವನೆ ಬಡಿಯುತ್ತದೆಂಬುದು ಕ್ಯಾದೆಯ ದೋಷವು. ಅದಕ್ಕೆ ಯಾವ ಉಪಾಯವು? ಶ್ರೀಮತಿ ಗುಪ್ತ ಪತ್ನಿಗಳು ಸ್ವದೇಶಿಯ ವ್ರತವನ್ನು ತಮ್ಮಷ್ಟಕ್ಕೆ ಪಾಲಿಸಿ, ಕಿತ್ತೆಯನ್ನು ಹಾಕಿಕೊಟ್ಟು ದೇಶಸೇವೆ ಮಾಡುವದೇ ಸ್ವಾತಂತ್ರ್ಯವು ಇನ್ನು ಅವರಿಗೆ ಉಳಿದದೆ.

---

೩. ಮುಂಬಯಿ ಸರಕಾರದ ಪ್ರೆಸನೋಟ ನಂಬರ 2,609 ನೇದೊಂದು ಸರ್ಕ್ಯುಲಾರವು ನಮ್ಮ ಕಾನಡಾ ದಕ್ಷಿಣಭಾಗದ ಡಿವಿಜನಲ ಫಾರೆಸ್ಟ ಆಫೀಸರರಿಂದ ಹೊರಡಿಸಲ್ಪಟ್ಟಿದೆ. ಅದರಲ್ಲಿ ಅವರ ಹದ್ದಿನ ಕುಮಟಾ–ಹೊನ್ನಾವರ–ಭಟ್ಕಳ ಮಹಾಲದೊಳಗಿನ ೨೦,೫೦೦ ರಷ್ಟು ಜಂಗಲ ಕ್ಷೇತ್ರವು ಬೇಲಿ ಗೂಟಗಳ ಬಗ್ಗೆ ಬಾಂಬುಗಳನ್ನು ರಯತರಿಗೆ ಉಚಿತವಾಗಿ ಒಯ್ಯುವ ದೆಸೆಯಿಂದ ಬಿಟ್ಟಿರುವದಾಗಿ ಜಾಹೀರಮಾಡಿಯದೆ! ಇಷ್ಟು ದೊಡ್ಡ ವಿಸ್ತೀರ್ಣ ಕ್ಷೇತ್ರವು ನೋಡಿದೊಡನೆ, ಜಂಗಲ ಖಾತೆಯು ರಯತರ ಮೇಲೆ ಈಗ ಉದಾರವಾಗಿದೆಂದು ಯಾರಿಗೂ ಭಾಸವಾಗದಿರದು. ಅಂತಃ ಸ್ಥಿತಿ ಬಲ್ಲಾದವರು ಈ ಅಧಿಕಾರಿಗಳ ಇಂಥ ಕೃತ್ರಿಮ ಸರ್ಕ್ಯುಲಾರನ್ನು ನೋಡಿ, ನಕ್ಕು, ಅವರನ್ನು ನಿಷೇಧಿಸದಿರರು. ಜಂಗಲಗಳೊಳಗಿನ ಬಾಂಬು ಹಿಂಡುಗಳೆಲ್ಲ ಕಳೆದ ವರ್ಷ ಕಟ್ಟೆ ಬಂದು ಪೂರ್ಣ ನಾಶವಾಗಿದ್ದು ಅಂತಃಕರಣಕ್ಕೆ ಗೊತ್ತಿದ್ದು, ರಯತರ ಹಕ್ಕು ಸವಲತ್ತುಗಳೆಲ್ಲನ್ನೆಲ್ಲ ಕ್ರಮವಾಗಿ ಹರಣಮಾಡಿದ ದ್ವೇಷದಿಂದ ಉರಿಯುತ್ತಿರುವ ಅವರ ಎದೆಯ ಮೇಲೆ ಈ ತರದ ಸರ್ಕ್ಯುಲಾರನಿಂದ ಎಣ್ಣೆ ಗರೆಯುವದು ಅತ್ಯಂತ ನಿಂದ್ಯಾಸ್ಪದವು, ಗರ್ಹಣೀಯವು. ಜಿಲ್ಹಾದ ಕಟ್ಟಿಗೆ ಕಡಿದು ಸಫಾಯಿ ಆದ ಜಂಗಲ ಕೂಪುಗಳಲ್ಲಿ ರಯತರಿಗೆ ಉಚಿತವಾಗಿ ದಾಗ–ಕುಂಬರಿ ಮಾಡಲಿಕ್ಕೆ ಅಪ್ಪಣೆ ಕೊಟ್ಟು, ಹೊಸ ಸಸಿಗಳನ್ನು ಬಿನ ಖರ್ಚಿನಿಂದ ನೆಟ್ಟುಕೊಂಡಂತೆ, ಸರ್ಕ್ಯುಲಾರದೊಳಗಿನ ಜಂಗಲ ಕ್ಷೇತ್ರದಲ್ಲಿದ್ದ ಕಟ್ಟೆ ಬಂದ ಬಾಂಬು ಹಿಂಡುಗಳನ್ನು ಬಿನ್ ಖರ್ಚಿನಿಂದ ಸಫಾಯಿ ಮಾಡಿಕೊಳ್ಳುವ ಅಧಿಕಾರಿಗಳ ಇದೊಂದು ಉಪಾಯವೆಂದು ತಿಳಿಯಲಾರದ ಭೋಳೆ ರಯತರು ಇನ್ನು ಯಾರೂ ಉಳಿಯಲಿಲ್ಲ. ಇದಿಷ್ಟು ಆ ಅಧಿಕಾರಿಗಳು ತಿಳಿದಿರಲಿ ಮತ್ತು ತಮ್ಮ ಕಾರಭಾರವನ್ನು ವಸ್ತುಸ್ಥಿತಿಗೆ ಸರಿಯಾಗಿ ಪ್ರಮಾಣಿಕತನದಿಂದ ನಡಿಸುವದೇ ಉತ್ತಮ ಉಪಾಯವೆಂದು ಸೂಚಿಸುವೆವು. ಈಗ ಆ ಜಂಗಲ ಅಧಿಕಾರಿಗಳ ಮೇಲಾಗಲಿ, ಅದಕ್ಕಾಗಿ, ಸರಕಾರದ ಮೇಲಾಗಲಿ ರಯತರಿಗೆ ಎಳ್ಳಷ್ಟು ವಿಶ್ವಾಸವಿಲ್ಲ. ತಮ್ಮ ಅನಾದಿಕಾಲದ ಜಂಗಲ ಹಕ್ಕು–ಸವಲತುಗಳನ್ನು ಪುನಃ ಗಳಿಸಬೇಕಾಗಿಯೂ, ಅದಕ್ಕೆ ಯೋಗ್ಯ ಉಪಾವೆಂದರೆ, ಮಹಾತ್ಮರ ಸ್ವರಾಜ್ಯಪ್ರಾಪ್ತಿಯ ಸಾಧನದಿಂದಲೇ ಎಂದು ಅವರು ಮನಗಂಡಿರುವರು. ಅಂದಮೇಲೆ, ಆ ಅಧಿಕಾರಿಗಳು ಇಂಥ ಸರ್ಕ್ಯುಲಾರಗಳನ್ನು ಹೊರಡಿಸಿ, ತಮ್ಮ ಉಪಹಾಸವನ್ನು ಮಾತ್ರ ಮಾಡಿಕೊಳ್ಳುವದು ಸರಿಯಲ್ಲವೆಂದು ಮತ್ತೊಮ್ಮೆ ಸೂಚಿಸುವೆವು.

---

೪. ಕುಮಟಾ–ಹೊನ್ನಾವರ ಟಾಂಗೆ ಕಂಪನಿಯ ಗಾಡಿ ಮತ್ತು ಕುದುರೆಗಳು ಯೋಗ್ಯವಿಲ್ಲದ್ದರಿಂದ, ಅವುಗಳನ್ನು ನಡಿಸಬಾರದೆಂದು ಹುಕುಮು ಆಗಿತ್ತೆಂದು ಎಕ್ಸಪ್ರೆಸ ಪತ್ರಿಕೆಯ ಬಾತ್ಮಿ ನಮಗೆ ದೊರೆದಿತ್ತು. ಕೆಲವು ದಿವಸ ಟಾಂಗೆ ಬಂದ ಇದ್ದದ್ದು ಜನರು ಕಂಡು ನೋಡಿರುವರು. ಆದರೆ, ಕಂಪನಿಯ ಮಾಲೀಕರು ಆ ಹುಕುಮಿಗೆ ವಿರೋಧವಾಗಿ ವರ್ತಿಸುತ್ತಾರೆಂಬ ಬಗ್ಗೆ ನಮ್ಮ ಕಡೆಗೆ ಆರು ಪ್ರಯಾಣಿಕರ ಟಿಕೇಟುಗಳನ್ನು ತಂದುಕೊಟ್ಟು ತಾವು ಹತ್ತಿದ ಟಾಂಗಗಾಡಿಯು ಆಳವೆಕೊಡಿಯ ಹತ್ತರ ಮುರಿದು ಬಿದ್ದು ಅಪಘಾತದಿಂದ ತಪ್ಪಿದ ವೃತ್ತಾಂತವನ್ನು ಬಹು ಕರುಣಾಸ್ಪದವಾಗಿ ತಿಳಿಸಿದರು. ಇದರಿಂದ ಕಂಪನಿಯ ಮಾಲೀಕರಿಗೆ ಹಣದ ಹೆಬ್ಬಾಕೆಯಾದಂತೆ, ಪ್ರಯಾಣಿಕರ ಸುರಕ್ಷಿತತೆಯ ಜವಾಬದಾರಿ ಇದ್ದಂತೆ ತೋರುವದಿಲ್ಲ. ತಮ್ಮ ಹುಕುಮನ್ನು ಕಂಪನಿಯವರು ಸರಿಯಾಗಿ ಪಾಲಿಸುತ್ತಾರೋ ಇಲ್ಲೆಂಬುದು, ಸ್ಥಾನಿಕ (ಕುಮಟಾ–ಹೊನ್ನಾವರ) ಪೋಲೀಸ ಅಧಿಕಾರಿಗಳು ಯಾಕೆ ನೋಡುವದಿಲ್ಲವೆಂಬುದು, "ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುವ" ಕಥೆಯಂಥಾಗಿರುವದೆಂದು ಎಲ್ಲರೂ ಅರಿತಿರುವರು. ನಾವು ಮೇಲಿಂದ ಮೇಲೆ ಕೊಟ್ಟ ಸೂಚನೆಗಳು ಇನ್ನೂ ಏನೂ ಪರಿಣಮಿಸಲಿಲ್ಲೆಂಬುದು ವಿಷಾದಕರವು. ಪ್ರಯಾಣಿಕರ ಸುರಕ್ಷಿತತೆ ಬಗ್ಗೆ ಅದರ ಮೇಲೆ ದೇಖರೇಖಿ ಇಡುವ ಅಧಿಕಾರಿಗಳು ಹೀಗೆ ಕಣ್ಣು ಮುಚ್ಚಿ ಕುಂತರೆ, ಪ್ರವಾಸಿಕರಿಗೆ ಅಪಘಾತವಾಗದುಳಿಯದು. ಆದು ಆದಮೇಲೆಯೇ ಇದು ಸುಧಾರಣೆ ಹೊಂದಬೇಕೆಂತಿದ್ದರೆ, ಯಾವ ಉಪಾಯ? ರಯತರು "ದಾ–ಬಾಜ" ಎಂದು ತಿಳಿಯುವ ನಮ್ಮ ಜಿಲ್ಹಾಧಿಪರಾದರೂ ಈಗ ಸಮ್ಮಂಧಪಟ್ಟ ಪೋಲಿಸ ಅಧಿಕಾರಿಗಳಿಗೆ ಅಂಜನ ಹಾಕದೆ ಉಳಿಯರೆಂದು ಪೂರ್ಣ ನಂಬುವೆವು.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಇಲ್ಲ. ಮೂಡಗಾಳಿ ಬೀಸಲಿಕ್ಕೆ ಹತ್ತಿದೆ. ಬೆಳೆ ಕಟಾವು ಭರದಿಂದ ಸಾಗಿದೆ. ರೋಗರಾಯಿ ಇದ್ದ ಹಾಗೆ.

ದವಸಧಾನ್ಯದ ಧಾರಣೆ ತೇಜಿಯಲ್ಲಿದೆ. ಘಟ್ಟದಿಂದ ಕೆಲಕೆಲವು ರಾಗಿ ಮುಂತಾದ ಧಾನ್ಯಾಲು ಬರುತ್ತದೆ.

ಗಿಬ್ಬ ಹೈಸ್ಕೂಲ ವಿದ್ಯಾರ್ಥಿಯಾಗಿದ್ದ ಶ್ರೀ ಶೇಷಪ್ಪಾ ವಾಸುದೇವ ಕಾಮತ—ಗೋಕರ್ಣರೆಂಬವರು B. Com. ಪರೀಕ್ಷೆಯಲ್ಲಿ ಉತ್ತೀರ್ಣರಾದರಂತೆ!

ಇಲ್ಲಿ ಸ್ಥಾಪಿಸಲ್ಪಟ್ಟ ವ್ಯಾಪಾರಿ ಸಂಘವು ಆರಂಭಶೂರವಾದ್ದಂತೆ ತೋರುತ್ತದೆ. ಕಾರ್ಯದರ್ಶಿಗಳೇ, ಈಗಾದರೂ ಸ್ವಲ್ಪ ಎಚ್ಚೇಳಿರಿ, ಕರ್ತವ್ಯಕ್ಕೆ ತೊಡಗಿರಿ!

ಕುಮಟಾ–ಹೊನ್ನಾವರ ಟಾಂಗೆ ಕಂಪನಿಯ ಲೈಸನ್ಸು ಸರಕಾರಿ ಹುಕುಮಿನಿಂದ ಬಂದ ಇದ್ದರೂ, ಕಳ್ಳತನದಿಂದ ನಡಿಸಲ್ಪಡುತ್ತದೆಂದೂ ಗಾಡಿಗಳು ಪ್ರತಿದಿನವೆಂಬಂತೆ ಮುರಿದು ಪ್ರಯಾಣಿಕರಿಗೆ ನಡೆದು ಹೋಗುವ ಪ್ರಸಂಗ ಬರುತ್ತದೆಂದೂ ಸುದ್ದಿಯೇ ಸುದ್ದಿ. ಇನ್ನುವರೆಗೆ ಅಪಘಾತವಾದದ್ದೇನಿಲ್ಲ. ಅಪಘಾತವಾಗದುಳಿಯದು, ಆದು ಆದರೆ ಜವಾಬದಾರರು ಯಾರು? ಅಪಘಾತದಿಂದ ಸಾಯುವವರೆಯೋ?

ಅದೇ ಕಂಪನಿಯಲ್ಲಿ ನೌಕರಿಗಿದ್ದ ಕೆಲ ಮಲಬಾರಿ ಜನರು ಚಲೋ ಟಾಂಗೆ ಕುದುರೆಗಳನ್ನು ಸ್ವತಂತ್ರವಾಗಿ ಭಾಡಿಗೆಗೆ ಇಟ್ಟಿರುವರಂತೆ! ಪ್ರಯಾಣಿಕರು ಅವುಗಳ ಪ್ರಯೋಜನ ಪಡೆದು ತಮ್ಮ ಜೀವಿತ್ವವನ್ನು (ಇಂಥ ಅಂದಾದುಂಧಿ ಕಾರಭಾರದಲ್ಲಿ) ಕಾಯ್ದುಕೊಳ್ಳುವದೇ ಲೇಸಲ್ಲವೇ?

ಸ್ಥಾನಿಕ ಮುನಿಸಿಪಾಲಿಟಿಯ ಕಾರ್ಯದರ್ಶಿಗಳಾಗಿದ್ದ ಶ್ರೀ ಬೋರಕರರು ಕಳೆದ ೨೦ ನೇ ತಾರೀಖಿಗೆ ಕೈಲಾಸವಾಸಿಗಳಾದರು. ಇಂಥ ಸುಶೀಲ, ಶಾಂತ ನಿಷ್ಠಾವಂತರು ಇನ್ನು ಸಿಗುವದು ದುರ್ಲಭ. ಅವರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಹೊನ್ನಾವರ— ಇಲ್ಲಿ ಕಟ್ಟಿಗೆ ಡಿಪೋದಲ್ಲಿ ಚಿಲ್ಲರೆ ಕಟ್ಟಿಗೆ ದಾಸ್ತಾನದಲ್ಲಿ ಇರುತ್ತಿದ್ದ ಗಸ್ತ ದಲಾಲ ತುಂಡುಗಳು ಬೇರೆ ಇಟ್ಟು ಗಂಟು ಗಂಟು ಮುದ್ರಿನ ಕಟ್ಟ ಕಟ್ಟಿಗೆಯನ್ನೇ ಮಾರುತ್ತಿದ್ದರು. ಈಗ ಮೊನ್ನೆ ತಾರೀಖು ೨೩ ನೇ ಯಿಂದ ದಾಸ್ತಾನಿದ್ದ ಕಟ್ಟಿಗೆ ತೊಲೆಗಳು ಕೊಡದೆ ಕಾಸ್ರಕೋಡ ಪ್ಲೇಂಟೇಶನ್ನದಲ್ಲಿ ಫೋರೆಸ್ಟ ಖಾತೆಯ ಮಾರಿಪತ ಕಡಿಸಿದ ಕೆಸುರಿನ ಗಿಡಗಳ ಕಿರಿಶಾಖೆಗಳ ತಲೆಹೊರೆ ಫೋರೆಸ್ಟ ಖಾತೆಯವರು ತಯಾರಿಸಿ, ಹೊನ್ನಾವರ ಡಿಪೋದಲ್ಲಿ ಮಣ ೧ಕ್ಕೆ ೦–೪–೦ ದರದಲ್ಲಿ ಕೊಡುತ್ತಾರೆ. ಈ ಬಗ್ಗೆ ಇಲ್ಲಿಯ ಶಹರ ನಿವಾಸಿಗಳು ಕೂಡಿ ಈ ದಿವ್ಸ ಮಾಮ್ಲೇದಾರ ಸಾಹೇಬರಿಗೆ ಈ ಬಗ್ಗೆ ಅರ್ಜಿ ಮಾಡಿಕೊಂಡ ನಂತರ ಸದರ ಕೆಸುರಿನ ಹೊರೆಗಳು ಮಣಕ್ಕೆ ೦–೩–೦ ಯಂತೆ ವಿಕ್ರಿ ಮಾಡಲ್ಪಡುವವೆಂದು ನೋಟಿಸು ಮೂಲಕ ಘಾಯಿಸ ಮಾಡಿರುತ್ತಾರೆ. ಈಗ ಮೊನ್ನೆಯಿಂದ ಜನರ ಕಡೆಯಿಂದ ೦–೪–೦ ದರದಿಂದ ಕೊಂಡ ಸುಮಾರು ೧೫೦ ಮಣದ ಬಾಬ್ತು ೧ ಆಣೆಯಂತೆ ರಿಫಂಡ ಜನರಿಗೆ ಫೋರೆಸ್ಟ ಖಾತೆಯವರು ಕೊಡುತ್ತಾರೋ, ಏನೋ ನೋಡಬೇಕು.

ದೇಶಭಕ್ತ ಜಯರಾಮಾಚಾರ್ಯರು ಸಿದ್ಧಾಪುರ

ವಿಂದ ಬಂದು ೨ ಕೀರ್ತನೆಗಳಾದವು. ೭ನಸ್ತ್ರೀಪ ವೃ ೨೩ ಸಾವಿರ ಕೂಡಿತ್ತು ಇವರ ಕೀರ್ತನೆಗಳ ಪರಿಣಾಮ ಬಸರಮೇಲೆ ಆಗಿ ಹರಿವಾಣವಲ್ಲಿ [illegible] ಸ್ತು ಬೆಳ್ಳಿ ಬಂಗಾರದ ಒಡವೆಗಳೂ, ಮರ ದಿವಸ [illegible] ರೇಶಿ೧॥ ಸಾವಿರಕ್ಕೆ ಮಿಕ್ಕಿ ಬೆಲೆಬಾಳುವ ವಸ್ತುಗಳು ಜಮೆ ಆದವು ಶ್ರೀ ಬಸ್ರೂರ, [illegible] ಇವರು ತಮ್ಮಲ್ಲಿಯ ಎಲ್ಲ ಪರದೇಶಿ ವಸ್ತ್ರಗಳ ಕೊಟ್ಟರು.

ಕಾರವಾರ— ಮ॥ ಹಬಿಬುಲ್ಲಾ ಖಾನರವರ ಮೇಲಿನ ರಾಜದ್ರೋಹದ ಖಟ್ಲೆಯ ಚೌಕಶಿಯ ಶಿರ್ಶಿ ಡಿಸ್ಟ್ರಿಕ್ಟ ಸಬ್ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ [illegible] ದ ಮಿ॥ ಕೂಯಿ ಮುಕ್ತರ್ಗುರವರ ಮು [illegible] ತಾ ೨೪ ನೇ ದಿವಸ ಪ್ರಾರಂಭವಾಯಿತು. [illegible] ಯು ಚರ್ಚೆಯು ಗ [illegible] ರವಾಗಿತ್ತು [illegible] ತರ್ಫೆನಿಂದ ವಕೀಲರಿಗೆ ಕೊಟ್ಟಿರ [illegible] ಲ್ಲಾದ ೬-೭ ಬಾಷಣಗಳಲ್ಲಿ [illegible] ಷಣಗಳೊಳಗಿನ ಕೆಲ ಆಕ್ಷೇಪಿತ ಭಾಷಣಗಳ [illegible] ಗೆ ಆಧಾರವ ಗಿರುತ್ತ [illegible] ದಿವಸ [illegible] ರು ಸಂಕ್ಷಿಗ [illegible] ಸಾದಿಲ್ವಾರ [illegible] ಗಾರರಾಗಿ [illegible] ರು ಭಾಷಣಗಳ ಟಿಪ್ಪಣಿಗಳನ್ನು [illegible] ಲೀಸರಾಗಿದ್ದರ [illegible] ರು ಸಾಕ್ಷಿ [illegible] ವ [illegible] ನೋಡಬೇಕು.

ಹೊನ್ನಾವರದ [illegible]

ಕರಾಚಿಯ ಠರಾವು.

[illegible]

[illegible] ಕಾನಡಾಜಿಲ್ಲಾ [illegible] ಹೊಂಬಸವಿ [illegible] ಬಜ ಕರ್ಕಿ [illegible] ಕಾರರ [illegible] ಯು [illegible] ಪಿಹಾರ ದಲ್ಲಿ [illegible] ಠರಾವು ಸಭೆಯ [illegible] ಎಲ್ಲವರು [illegible] ಆಸ್ಪರಶ ಸಿಪ್ರಿ [illegible] ವ ಹಾಗೂ ಧಾರೆ [illegible] ಠರಾವ [illegible] ಗಿ ಸಭೆ ಒಪ್ಪಿಕೊಂಡಿತು

೧ [illegible] ಸಭೆಯ [illegible] ಠರಾವು [illegible]

[illegible] ಗಂಗಾಧರರಾವ [illegible] ಉನ್ನತಿ [illegible] ಧನೆಯಲ್ಲಿ [illegible] ಅಭಿನಂದಿಸುತ್ತದೆ [illegible] ಪೂರ್ವಕ [illegible]

ಸೂಚಕ ಶ್ರೀ [illegible] ಸ್ವರ—ಸಾತಹಳ್ಳಿ
ಅನುಮೋದಕ ಶ್ರೀ [illegible]—ಕುಮಟಾ

[illegible] ಗಾಳಿಬಾರ [illegible] ದ [illegible] ಧಾರವಾಡ [illegible] ಅತುಲ ಧೈರ್ಯ, ಉತ್ಕಟ ದೇಶಾಭಿಮಾನ [illegible] ಬಗ್ಗೆ ಈ ಸಭೆಯು ಅವರನ್ನು [illegible] ಸುತ್ತದೆ [illegible] ಪ್ರಾಣ [illegible] ಗಿರ [illegible]

ಸೂಚಕ ಶ್ರೀ [illegible]
ಅನುಮೋದಕ ಶ್ರೀ [illegible]

ಹೊನ್ನಾವರ.

ಕೀರ್ತನಕೇಸರಿ [illegible] ರಾಮಾಚಾರ್ಯರ

ಪ್ರೋಗ್ರ್ಯಾಮ.

ಕೀರ್ತನೆ ತಾ ೨೯ ಹಳದೀಪುರದಲ್ಲಿ [illegible] ಗೋಕರ್ಣದಲ್ಲಿ [illegible] ಅಂಕೋಲೆಯಲ್ಲಿ [illegible] ಆಗುವವು

ಕುಮಟಾ—ಶಿರ್ಶಿ ಮೋಟರಲ್ಯಾನ.

ತಾ ೨೯ ರಿಂದ ೧೬ ಜನರು ಕುಳ್ಳುವ ಮೋಟಾರು ಕುಮಟೆಯಿಂದ-ಶಿರ್ಶಿಗೆ ಬಾಲು ಆಗುತ್ತದೆಂದು ಕುಮಟೆಯ ಹೊಸ ಕಂಪನಿಯವರು ತಿಳಿಸುತ್ತಾರೆ.

ಅಂಕೋಲೆಯೊಳಗೆ ಸಾರ್ವಜನಿಕ ಸಭೆ.

ಇಂಗ್ಲೀಷ ಶಾಲೆಯ ಕಾರಭಾರ.

(*G B M* ನಮ್ಮ ಖಾಸ ಬಾತ್ಮೀದಾರರಿಂದ)

[illegible] ದಲ್ಲಿ ಅಂಕೋಲೆಯ ಬಹುತರ ಎಲ್ಲ ಜಾತಿಯ [illegible] ತಮ್ಮ ಸಹಿನಿಂ [illegible] ಸಿದ ನಂತರ, ತಮ್ಮ [illegible] ಳಗಿನ ಸೂಚನೆಯಂತೆ ಈ ಸಾರ್ವಜನಿಕ ಸಭೆಯ ಚಳವಳಿಯ ಪೂರ್ವರಂಗದ [illegible] ಸಭೆಗೂಡ [illegible] ವಿಶ್ವಸನೀಯ ವರ್ತಮಾನ [illegible] ಸಭೆಯ ನೋಟೀಸು ಇಲ್ಲಿ ಜಾಹೀರ [illegible] ಕರಾವ ನಾಡಕರ್ಣಿ ಪ್ರಭೃತಿ [illegible] ಕಾರವಾರಕ್ಕೆ ಪ್ರಯಾಣ ಮಾಡಿದರು. ಅಲ್ಲಿ [illegible] ಅಧಿಕಾರಿಗಳ ಕಡೆಯಿಂದ ಈ ಸಭಾ ಪ್ರತಿಬಂಧ [illegible] ಗಳನ್ನು ದೊರಕಿಸಲಿಕ್ಕೆ ವಿಶ್ವಪ್ರಯತ್ನ ಮಾಡಿ [illegible] ಪೋಲಿಸರ ಕಡೆ [illegible] ಎಡವರ್ಡ ಶಾಲೆಯ ಪಟಾಂಗಣದಲ್ಲಿ ಸಭೆ [illegible] ಕೂಡದ [illegible] ಮಾಡಬೇಕೆಂದು [illegible] ಜಾತಗಾರರೊಡನೆ ತಮ್ಮ [illegible] ತ್ರದ [illegible] ನಂತರ ಸಾರ್ವಜ [illegible] ತರ [illegible] ಕಾನಡಾವೃತ್ತದೊಳಗಿನ ನೋಟೀಸಿನ [illegible] ಸಹಿ ಹಾಕಿದವರಿಗೆ ಅದನ್ನು ಹಿಂತಿರಗಿ ತಕ್ಕೊಳಲಿಕ್ಕೆ [illegible] ಅವಿಶ್ರಾಂತವಾಗಿ [illegible] ಪ್ರ ರೀತಿ [illegible] ಎನೂ ಕಚ್ಚ [illegible] ಕೇಳ ತ್ತನೆ [illegible] ಇದಾವರೂ [illegible] ವಿರೋಧಕರ ಪ್ರಯತ್ನಗಳ ನಿಷ್ಫಲವಾದಮೇಲೆ [illegible] ಕೂಡಿದ ನಂತರ ಸಭೆಯಲ್ಲಿ [illegible] ತವನ್ನಾದರೂ ಮಾಡಿಕೊಳ್ಳಲಿಕ್ಕೆ ಅವರು [illegible] ಸಾಹಜಕನ ಅದರ ಈ ವಿರೋಧಕರು ರಾ॥ ಶಂಕರರಾಯರ ಆಪ್ತ ಮಿತ್ರರಿದ್ದು ಅಲ್ಲಿ ಸಂವಹುವರಾದ್ದರಿಂದ ಈ [illegible] ಮೊದಲಿನ ಎರಡು ಪ್ರಯತ್ನಗಳಂತೆಯೇ ಶೀಲ ನಿಷ್ಫಲವಾಯಿತೆಂದು ಕೆಳಗೆ ಕೊಟ್ಟ ಸಭೆಯ ವೃತ್ತಾಂತದಿಂದ ಕಾಣುವದು. ಇರಲಿ ಹಾಗೂ ಹೀಗೂ ಮಾಡಿ ಸಭೆಗೂಡ [illegible] ತಾರೀಖಿನ ಆದಿತ್ಯವಾರವು ಉದಯವಾಯಿತು. ರಾ [illegible] ರಾ॥ ಶಂಕರರಾಯರಿಗೆ ಬೆಳಿಗ್ಗೆ [illegible], ಶಾಲೆಯೊಳಗಿನ [illegible] ಗಳನ್ನು ಸದ್ರಿ ಶಾಲೆಯ ಹಿತದ ಸಾರ್ವಜನಿಕ ಸಭೆಗಾಗಿ ಕೊಡಿರೆಂದ ಬೇಡಲು ತಮ್ಮ ಕಮಿಟಿಯ ಪರವಾನಗಿ ಇಲ್ಲದೆ ಕೊಡಲಿಕ್ಕಾಗುವದಿಲ್ಲೆಂದು ರಾ॥ ಶಂಕರರಾಯರು ತಿಳಿಸಿದರು. ಊರೊಳಗೆ ನಾಟಕ-ಸರ್ಕಸು ಆದರೆ ಮತ್ತು ಬೇರೆ ಸಾರ್ವಜನಿಕ ಸಭೆಯಾದರೆ, ಉಪಯೋಗಕ್ಕೆ [illegible] ಗಳು ಅದೇ ಶಾಲೆಗೆ ಸಂಬಂಧಿಸಿದ ಸಭೆಗೆ ಕೊಡ ಮಸ್ಸು, ಉದಾರತನವು ಅದರ [illegible] ಜಕರಲ್ಲಿ [illegible] ನೋಡಿ ನಿಷ್ಕಾರಣ ವಿರೋಧದ ಪರಿಮಾವಧಿಯಾಯಿತೆಂದು ನನಗೆ ಕಂಡಿತು. ಈ ಸಭಾ [illegible] ದೂರ ಸರಿದ್ದರೆ, [illegible] ವಿಘ್ನಗಳಿಗೆ ಶಾಂತ [illegible] ರಿಂದ ಎದುರಾಗಬೇಕೆಂದು ನಿಶ್ಚಯಮಾಡಿದ ಸಭಾ [illegible] ಪಕ್ಷದವರು ಅಲ್ಲಿಂದ ಇಲ್ಲಿಂದ [illegible] ಜು ಹಸೆಗಳನ್ನು ತಂದು, ಸದ್ರಿ ಪಟಾಂಗಣದಲ್ಲಿಯೇ ಮಧ್ಯಾನ್ಹ ೩ ಘಂಟೆಯಿಂದ ಸಭೆಯ ವ್ಯವಸ್ಥೆ ಮಾಡಹತ್ತಿದರು. ಮೆಲ್ಲಮೆಲ್ಲನೆ ಜನರು ಕೂಡಹತ್ತಿದರು. ಸರಾಸರಿ ೫ಘಂಟೆ ಸುಮಾರಕ್ಕೆ ಎಲ್ಲ ಜಾತಿಯ ನಾಗರಿಕರ ಸುಮಾರು ೪೦೦ ಜನರು ಕೂಡಿದರು. ಜನರು ಹೆಚ್ಚಾದ ಕಾರಣ ಮತ್ತೂ ಹಸೆಗಳನ್ನು ತಂದ ಪಸರಿಸಬೇಕಾಯಿತು. ಸಭೆಗೆ ಫೌಜದಾರ, ಆ॥ ಮಾಮಲೇದಾರ ಮಿ॥ ಜೈಲೂರ, ರಾ॥ ಒದ್ರೋದ್ದಿನ ಸಾಹೇಬ ಇನಾಮದಾರ, ರಾ॥ ವಿದ್ಯಾನಾಥ ಪ್ರಭು ಸಾವಕಾರ, ರಾ॥ ಲಕ್ಷ್ಮಣ ಶೆಟ್ಟಿ ರಾ॥ ರಾಮಚಂದ್ರ ವಿಠ್ಠಲ ನಾಡಕರ್ಣಿ ರಾ॥ ವಿಶ್ವನಾಥ ಮುರ್ಡೇಶ್ವರ [illegible] ನಾಡಕರ್ಣಿ ರಾ॥ ಕಾಡ್ರಿ ರಾ॥ ಮೋನು ನಾಯಕ [illegible] ರಾ॥ ಮುಕುಂದ ಪ್ರಭು ಸಿರೂರಕರ ಸಾವಕಾರ ರಾ॥ ವಿಶ್ವನಾಥ ಪ್ರಭು B A, ರಾ॥ ಮಾಧವರಾವ ಶ್ಯಾನಭಾಗ B A LL B ರಾ॥ ಅರಸ B A. ರಾ॥ ಶಾಂತಾರಾಮಪಂತ ಮರ್ಡಿ M A (ಆಹ್ವಾನಿತರು) ಮುಂತಾದ ಈಗಿನ ಶಿಕ್ಷಿತ ಜನರೂ ಸಭಿಕರಾಗಿಯೂ ಪ್ರೇಕ್ಷಕರಾಗಿಯೂ ನೆರೆದಿದ್ದರು. ರಾ॥ ಮಾಧವ ಶ್ಯಾನಭಾಗರಿಗೆ ಅಧ್ಯಕ್ಷರಾಗಿ ಆರಿಸಬೇಕೆಂದು ಸೂಚನೆ ಅನುಮೋದನೆಯಾಗಲು ವಿರೋಧಕರ ಆಕ್ಷೇಪವು ಇಲ್ಲಿಂದಲೇ ಪ್ರಾರಂಭವಾಯಿತು. ಅಧ್ಯಕ್ಷರ ಆರಿಸುವದ ಬಗ್ಗೆ ಸ್ವಲ್ಪ ಚರ್ಚೆಯಾಗಿ ರಾ॥ ಶ್ಯಾನಭಾಗರು ತಾವಾಗಿ ಅಧ್ಯಕ್ಷಪದವನ್ನು ಬೇರೆಯವರಿಗೆ ಸಂತೋಷದಿಂದ ಕೊಡಲಿಚ್ಛಿಸುತ್ತೇನೆಂದು ಹೇಳಲು ಕಟ್ಟಕಡೆಗೆ ತಮ್ಮ ವಿರೋಧವಿಲ್ಲೆಂದು ಆಕ್ಷೇಪಕರು ಒಪ್ಪಿದ ನಂತರ ಸಭೆಯ ಕೆಲಸ ಪ್ರಾರಂಭವಾಯಿತು. ಕಾನಡಾವೃತ್ತದೊಳಗಿನ ಸಭೆಯ ನೋಟೀಸು ಓದಿದ ನಂತರ ಆದರೊಳಗಿನ ಗುಪ್ತ ಕಮಿಟಿಯ ವಿಷಯವಾಗಿ ಆಕ್ಷೇಪಕರು ಸ್ವಲ್ಪ ವಾದವಿವಾದ ಮಾಡಿದ ನಂತರ ಅದರ ಬಗ್ಗೆ ಸ್ವತಂತ್ರ ಠರಾವು ತಂದು ಚರ್ಚೆ ಮಾಡಬಹುದೆಂದ ಅಧ್ಯಕ್ಷರು ಸೂಚಿಸಲು ಆಕ್ಷೇಪಕರು ಅದಕ್ಕೆ ಸಮ್ಮತರಾದರು. ನಂತರ ಈ ಕೆಳಗಿನ ಠರಾವು ರಾ॥ ಮುಕುಂದನಾರಾಯಣ ಪ್ರಭು ಸಿರೂರಕರರವರಿಂದ ಮಂಡಿಸಲ್ಪಟ್ಟಿತು. ಅದಕ್ಕೆ ರಾ॥ ಎ ಆರ್ ಕಾಡ್ರಿರವರು ಅನುಮೋದನವನ್ನಿತ್ತರು. ಈ ಠರಾವಿನ ಆಶಯವೇನೆಂದರೆ, "ಅಂಕೋಲೆಯ ಎಡವರ್ಡ ಇಂಗ್ಲೀಷ ಶಾಲೆಯ ಈ ಸಾರ್ವಜನಿಕ ಸಂಸ್ಥೆಯ ಈಗಿನ ಕಾರ್ಯಕಾರಿ ಕಮಿಟಿಯು ಬಹಳ ವರ್ಷ ಆಗಾಯಿತು. ಅದರ ಲೆಕ್ಕಪತ್ರಗಳನ್ನೂ ರಿಪೋರ್ಟುಗಳನ್ನೂ ಪ್ರಸಿದ್ಧಪಡಿಸದೆ ಇಟ್ಟಿದೆ. ಈಗ ಸಹ ಅದನ್ನು ಜನರ ಮುಂದಿಡಲಿಕ್ಕೆ ಸೆಕ್ರೆಟರಿ ರಾ॥ ಶಂಕರರಾವ ನಾಡಕರ್ಣಿಯವರು ತಾವು ಕಬೂಲ ಇಲ್ಲೆಂದು ಸಭೆಯ ತರ್ಫಿನ ನೋಟೀಸಿಗೆ ಪ್ರತ್ಯುತ್ತರವಾಗಿ ರಿಜಿಸ್ಟರ್ ಪತ್ರ ಬರೆದಿರುವರು. ಇದೆಲ್ಲ ನೋಡಿ ಈ ಸಭೆಗೆ ಬಹಳ ವಿಷಾದವಾಗುತ್ತದೆ. ಶಾಲೆಯ ಆಡಳಿತದ ಕೆಲಸವು ಸುವ್ಯವಸ್ಥಿತವಾಗಿ ಇನ್ನು ಮುಂದೆ ನಡಿಯುವಂತೆ ಕಾರ್ಯಕಾರಿ ಕಮಿಟಿಯ ಸಂಬಂಧವನ್ನೂ, ಸಾರ್ವಜನಿಕ ಸಂಬಂಧವನ್ನೂ ಆದರಂತೆ ಶಾಲಾ ಮಾಸ್ತರರ ಸಂಬಂಧವನ್ನೂ ಕೂಡಿಸಿಡಲಿಕ್ಕೆ ಸರಕಾರಿ ಮಾನ್ಯತೆಗೆ ಒಳಪಟ್ಟು ಕಾಯಂ ಕರಾರಿನ ಘಟನೆಯನ್ನು ಪ್ರಾಂತಿಕ ದೆಕ್ಕನ ಎಜುಕೇಶನ್ (ಗೋಖಲೇ) ಸೊಸಾಯಟಿಯ ಮಾದರಿಗನುಸರಿಸಿ ನಿವಡಣೂಕಿಯು ತಕ್ಷಣ ಅನುಭವಿಗಳಿಂದ ಸಿದ್ಧ

ತಿಸಬೇಕು. ಈ ಘಟನೆಯು ಶಾಲೆಯ ಮಂಜೂರದೆಯನ್ನು ಈಗಿನ ಕಾರ್ಯಕಾರಿ ಕಮಿಟಿಯವರು ತಯಾರಿಸಿ, ಡಿಸೆಂಬರ ಅಂತ್ಯದೊಳಗೆ ಪ್ರಸಿದ್ಧಪಡಿಸಬೇಕು" ಇದೇ ಅರ್ಥದ ಠರಾವಾಗಿರುವದು. ಈ ಠರಾವಿಗೆ ರಾ। ಯಶವಂತರಾವ ನಾಡಕರ್ಣಿ, ರಾ। ವಿಶ್ವನಾಥರಾವ ನಾಡಕರ್ಣಿ, ಮತ್ತು ರಾ। ಸುಬ್ರಾವ ನಾಡಕರ್ಣಿಗಳವರು ವಿರೋಧಿಸಿದರು. ಶ್ರೀ। ನಾಡಕರ್ಣಿಗಳ ಆಕ್ಷೇಪವೇನಂದರೆ, ಲೆಕ್ಕದ ಅಂಕೆಗಳು ಎಜುಕೇಶನ ಖಾತೆಯ ವಾರ್ಷಿಕ ರಿಪೋರ್ಟಿನಲ್ಲಿ ಇರುತ್ತವೆ. ಸ್ವತಂತ್ರ ರಿಪೋರ್ಟು ಪ್ರಕಟಿಸುವ ಅವಶ್ಯಕತೆ ಇಲ್ಲ. ಶಾಲೆಯು ಸಾರ್ವಜನಿಕವೋ ಏನೋ ಗೊತ್ತಿಲ್ಲ. ಈ ರೀತಿ ಆಕ್ಷೇಪವಾದ ಮೇಲೆ, ರಾ। ಬದ್ರೋದ್ದೀನ ಸಾಹೇಬರು, ಶಾಲೆಯು ಸಾರ್ವಜನಿಕವೋ ಕಾರ್ಯಕಾರಿ ಮೆಂಬರರ ಸ್ವತಂತ್ರ ಹಕ್ಕಿನದೋ, ಎಂದು ಮುಖ್ಯ ಮುದ್ದೆಯ ಪ್ರಶ್ನೆಯನ್ನು ಚರ್ಚೆ ಮಾಡಬೇಕೆಂದು ಸೂಚಿಸಿದರು. ಆ ನಂತರ ರಾ। ವಿಶ್ವನಾಥರಾವ ಪ್ರಭುರವರು ಠರಾವಿಗೆ ಪುಷ್ಟಿ ಕೊಟ್ಟು, ಈ ಮಹತ್ವದ ಮುದ್ದೆಯನ್ನು ಚರ್ಚಿಸಿದರು. ಆವರು, ರಾ। ವೆಂಕಟೇಶ ಲಕ್ಷ್ಮಣ ಕಾಮತ, ವೆಂಕಟೇಶ ಶೆಣ್ವಿ, ಪದ್ಮನಾಭ ಪ್ರಭು ವಗೈರೆರು ಮೆನೇಜರ ರಾ। ಶಂಕರರಾವ ನಾಡಕರ್ಣಿಯವರಿಗೆ ಕಮಿಟಿಗೆ ತಿಳಿಸಿ, ಈ ಸಭೆಯ ಮುಂದೆ ಲೆಕ್ಕಪತ್ರ ಹಾಜರ ಪಡಿಸಬೇಕೆಂದು ಕೊಟ್ಟ ನೋಟೀಸು, ಅದಕ್ಕೆ ರಾ। ಶಂಕರರಾವರು ಈ ಶಾಲೆಯು ತಮ್ಮ "ಕಮಿಟಿಯ ಸ್ವತಂತ್ರ ಹಕ್ಕಿಗೆ ಒಳಪಟ್ಟ" ದ್ದೆಂದೂ, ಲೆಕ್ಕಪತ್ರ ಹಾಜರಪಡಿಸಲಿಕ್ಕೆ ಬೇಕಿಲ್ಲೆಂದೂ ಕೊಟ್ಟ ಉತ್ತರವನ್ನು ಸವಿಸ್ತರವಾಗಿ ಸಭೆಗೆ ಓದಿ ಹೇಳಿದರು. ಮತ್ತು ಜನರ ಕಡೆಯಿಂದ ವಂತಿಗೆ ಕೂಡಿಸಿ ಸ್ಥಾಪಿಸಿದ ಈ ಸಂಸ್ಥೆಯು ಜನರ ತರ್ಫೆನಿಂದ ಕಾರ್ಯಕಾರಿ ಕಮಿಟಿಯು ಆರಿಸಲ್ಪಟ್ಟಿದ್ದಾಗ ಅದು ಅವರ ಸ್ವತಂತ್ರ ಹಕ್ಕಿಗೆ ಒಳಪಟ್ಟದ್ದು ಹ್ಯಾಗಾಗುವದು ತನಗೆ ತಿಳಿಯುವದಿಲ್ಲೆಂದು ಹೇಳಿದರು. ಈ ಶಾಲೆಯು ಸ್ಥಾವರ ಜಂಗಮ ಬದುಕು ಜನರದೋ, ಕಮಿಟಿ ಮೆಂಬರರದೋ, ನೀವೇ ನೋಡಿರಿ ಇದು ನಿಮ್ಮದೇ ಎಂದು ತನಗೆ ಕಾಣುತ್ತದೆ ಎಂದರು. ನಗರ ರಾ। ಲಕ್ಷ್ಮಣ ಗುಪ್ತೆರು ಒಂದು ಹಳೇ ಲೇಖವನ್ನು ಸಭೆಗೆ ಓದಿ ತೋರಿಸಿದರು. ಇದೇ ಈಗಿನ ಮೆನೇಜರ ರಾ। ಶಂಕರರಾಯರು—ಶಾಲೆಯು ತಮ್ಮ ಕಮಿಟಿಯ ಸ್ವತಂತ್ರ ಹಕ್ಕಿಗೆ ಒಳಪಟ್ಟದ್ದೆಂದು ಈಗ ತಿಳಿಸುವವರ— ಸುಮಾರು ೧೫ ವರುಷಗಳ ಹಿಂದೆ ಶಾಲೆಯ ಹಿತಚಿಂತಕರೆಂದು ತಮ್ಮ ಸಹಿನಿಂದ ತೆಗೆದ ಜಾಹೀರ ನೋಟೀಸು ಈ ಹಳೇ ಲೇಖವಾಗಿರುವದು. ಇವರೇ ಈ ನೋಟೀಸಿನಿಂದ ಶಾಲೆಯ ಸ್ಥಿತಿಯನ್ನು ಸುಧಾರಿಸಲಿಕ್ಕೆ ಉತ್ತಮ ವ್ಯವಸ್ಥೆ ಮಾಡಬೇಕೆಂದು ಸಾರ್ವಜನಿಕ ಸಭೆಯನ್ನು ೧೫ ವರುಷಗಳ ಹಿಂದೆ ಕರೆದಿದ್ದರು. ಆದರ ಮೇಲೆ ಮೃತಪಟ್ಟ ಪ್ರಮುಖರ ಸಹಿಗಳು ಸಹ ಇದ್ದುವು. ಅಂತೆ ಈ ಹಳೇ ಲೇಖವನ್ನು ಓದಿದ ಕೂಡಲೇ ಹಳೇ ಹಿತಚಿಂತಕರು ಹೊಸ ಮಾಲೀಕರಾದರೆಂದು ಸಭಿಕರಲ್ಲಿ ನಗೆಯುಂಟಾಯಿತು. ಶಾಲೆಯು ಸಾರ್ವಜನಿಕವೆಂದು ಬಹುತರ ಎಲ್ಲರ ಖಾತ್ರಿಯಾದಂತೆ ಕಂಡು ಬಂತು. ಆದರೂ ಆಕ್ಷೇಪಕರು ಸಣ್ಣ ಸಣ್ಣ ಖುಲಾಸೆಯನ್ನು ಹೇಳುತ್ತಲೇ ಇದ್ದರು. ಆಕ್ಷೇಪಕರಿಗೆ ಅಧ್ಯಕ್ಷರು ಬೇಕಾದಷ್ಟು ಹೊತ್ತು ಕೊಟ್ಟರು. ಕಟ್ಟಕಡೆಗೆ ವೋಟು ತಕ್ಕೊಳ್ಳಲು, ೧೪–೧೫ ಆಕ್ಷೇಪಕರ ಮತಗಳನ್ನು ಬಿಟ್ಟು ಉಳಿದ ೪೦೦ ಜನರ ಬಹುಮತದಿಂದ ಠರಾವು ಪಾಸಾಯಿತು. ಅನಂತರ ಈ ಠರಾವಿನ ನಕಲುಗಳನ್ನು ಈಗಿನ ಕಮಿಟಿಗೂ, ವರಿಷ್ಟ ಸರಕಾರಿ ಅಧಿಕಾರಿಗಳಿಗೂ ರವಾನಿಸಬೇಕೆಂದು ಠರಾವು ವಿರೋಧವಿಲ್ಲದೆ ಪಾಸಾಯಿತು. ಇಷ್ಟರೊಳಗೆ ಸಭೆಯ ಬಹುತರ ಎಲ್ಲ ಕೆಲಸವು ಮುಗಿಯಿತು. ಆದರೆ ಮೂಲ ಜಾಹೀರ ನೋಟೀಸಿನೊಳಗಿನ ಗುಪ್ತಕಮಿಟಿಯ ವಿಷಯವಾಗಿ ಆಕ್ಷೇಪಕರಿಗೆ ಠರಾವು ತರಲಿಕ್ಕೆ ರಾ। ಸುಬ್ರಾವ ಮತ್ತು ಯಶವಂತರಾವ ನಾಡಕರ್ಣಿಯವರು ಮುಂದೆ ಬರಲು, ಅಧ್ಯಕ್ಷರು ಕಾಗದ ವಗೈರೆ ಕೊಟ್ಟು, ಆದರ ಮೇಲೆ ಠರಾವು ಬರೆದು ಓದಲಿಕ್ಕೆ ಸೂಚಿಸಿದರೆಂದು ಕಾಣುತ್ತದೆ. ಆಕ್ಷೇಪಕರು ಅದನ್ನು ಬರದು ಸ್ವಷ್ಟ ಸರ್ಕಾರಿಕರಣಮಾಡಿ ತನ್ನ ಸ್ವಂತಕ್ಕೆ ಆಕ್ಷೇಪವನ್ನು ಹಿಂದೆ ತಕ್ಕೊಳ್ಳುತ್ತೇವೆಂದು ಹೇಳಿದರಂತೆ. ಒಟ್ಟಿಗೆ ಈ ಠರಾವು ಸಭೆಯ ಮುಂದೆ ಚರ್ಚೆಗೆ ಬರಲಿಲ್ಲ. ಇಲ್ಲಿಗೆ ವಸ್ತುತಃ ಸಭೆಯ ಕೆಲಸ ಮುಗಿಯಿತು. ಅನಂತರ ರಾ। ವಿಶ್ವನಾಥ ಪ್ರಭುರ ರಾಜಿನಾಮೆಯ ಖುಲಾಸೆ, ಅದಕ್ಕೆ ಸಂಬಂಧಿಸಿದ ಗುಪ್ತ ಕಮಿಟಿಗಳ ಮೇಲೆ ಮಾತುಕಥೆ ನಡೆದು, ಅಧ್ಯಕ್ಷರ ಆಭಾರಮನ್ನಿಸಿ "ಸಭೆ ವಿಸರ್ಜನವಾಯಿತು. ಸಭೆಯು ಸಾರ್ವಜನಿಕವಾಗಿ ಬಹಿರಂಗರಿಂದ ಶಾಲೆಯ ಪಟಾಂಗಣದಲ್ಲಿ ಕೂಡಿದ್ದರೂ, ಈಗಿದ್ದ ಶಾಲಾ ಕಮಿಟಿ ಮುಖ್ಯ ಅಧಿಕಾರಿ ಮೆಂಬರರೂ ಯಾ ಮ್ಯಾ। ಶಂಕರರಾವ ನಾಡಕರ್ಣಿರವರು ಗೈರ ಹಾಜರಾದದ್ದನ್ನು ನೋಡಿ, ಸಭಿಕರು ವಿಸ್ಮಿತರಾಗಿರಬಹುದು. ಸಾರ್ವಜನಿಕ ಸಭೆಯ ಬೆಳಕಿಗೆ ಇವರು ಹೆದರುತ್ತಾರೋ ಯಾ ತಾಂವೇ ದೊಡ್ಡ ಸರ್ವಾಧಿಕಾರಿಗಳೆಂದು ಅದನ್ನು ತಿರಸ್ಕರಿಸುತ್ತಾರೆ! ರಾ। ನಾಡಕರ್ಣಿಯವರು ಕಮಿಟಿಯನ್ನು ಸಹಾ ಕರಿಯದೇ, ತಾಂವೇ ಸ್ವಂತ ಜವಾಬದಾರಿಯಿಂದ ಸಾರ್ವಜನಿಕರ ನೋಟೀಸಿಗೆ ಉತ್ತರ ಕೊಡುತ್ತಾರೆ, ಆದರೆ ಬೇಕಾದ ಖರ್ಚುಗಳನ್ನು ಕೊಡಲಿಕ್ಕೆ ಅವರಿಗೆ ಕಮಿಟಿಯ ಸಮ್ಮತಿ ಬೇಕಂತೆ' ಮಹತ್ವದ ಕೆಲಸಗಳಿಗೆ ಅವರೊಬ್ಬರೇ ಸರ್ವಾಧಿಕಾರಿಗಳು' ಕ್ಷುಲ್ಲಕ ಕೆಲಸದ ಸಲುವಾಗಿ ಬೇಕಾಗುವದು ಮಾತ್ರ ಕಮಿಟಿಯೇನು? ಇರಲಿ. ಸತ್ಯದ ತಿಕ್ಕಿದಷ್ಟು ಪ್ರಕಾಶ ಹೊಳೆಯುವದು. ಸದ್ಯಕ್ಕೆ ಸಭೆಗೆ ಅವರ ಮುದ್ದಾಂ ಗೈರ ಹಾಜರಿದ್ದರೆಂದು ಜನರ ತಿಳುವಳಿಕೆಯಾದರೆ, ತಪ್ಪು ಯಾರದು?

ಕುಮಟೆ ಗೌ। ಸಾ। ಹತ್ತು ಸಮಸ್ತರು

ಸತ್ಯಮೇವಜಯತೆ !

(ಲೇಖಾಂಕ ೨)

[ಲೇಖಕ – ಬಡ ವ್ಯಾಪಾರಿ]

(೩ನೇ ಪಾನಿನಮೇಲಿಂದ ಮುಂದರಿಸಿದ್ದು)

ಎಂದು ನಂಬುವಷ್ಟು ಬೋಳೆಜನರೇ ಈ ಬಹುಮತದ ಠರಾವಿಗೆ ಪುರಸ್ಕರ್ತರಾಗಿರುವರು. ಈ ಠರಾವು ಶ್ರೀದೇವರನ್ನು ಸ್ಮರಿಸಿ ತಮ್ಮ ಸದಸದ್ವಿವೇಕಬುದ್ಧಿಯ ಸ್ವತಂತ್ರ ಮತಾಧಿಕಾರದ ಬಹುಮತದಿಂದ ಆಗಿದೆಂದು ಯಾರಾದರೂ ಹೇಳ್ಯಾರೇನು! ಇವು ಪಕ್ಷಾಂಧತೆಯ ಕಿಡಿಗೇಡಿಗಳ, ಸ್ವಾಮಿದ್ರೋಹಿ, ಸಮಾಜದ್ರೋಹಿಗಳಾಗಿ, ತಮ್ಮ ಸ್ವಾರ್ಥಸಾಧನದಲ್ಲಿ ಕುಶಲರಾಗಿರುವ ಆ ಕಮಿಟಿಯ ನೆಂಟ–ಬಂಟರೇ ಕೂಡಿ ಎಷ್ಟೋ ದಿವಸ ಪಡದೆಯೊಳಗೆ "ತಾಲೀಮು' ಮಾಡಿ, ಈ ಬಹುಮತವನ್ನು ಸುರಿಸಿಕೊಂಡರೆಂಬುದು ಎಲ್ಲರಿಗೂ ಗೊತ್ತಾದಮಾತಲ್ಲವೇ? ಈ ತಾಲೀಮು " ಖಾಸೆಯ ಮಾಸ್ತರರ್ಯಾರು? ಅವರು "ರಿಂಗಮಾಸ್ತರ" ರಾಗಿರುವರೇನು? ಉಚ್ಚಶಿಕ್ಷಣ ಪಡೆದವರೋ, ಸಾದಾ ಶಿಕ್ಷಣ ಪಡೆದವರೋ? ಪ್ರಜಾಪ್ರಭುತ್ವ (Democracy) ದ ಉಪಾಸಕರೋ, ನಿರಂಕುಶಪ್ರಭುತ್ವ (Autocracy) ದ ಬೋಧಕರೋ? ಉಚ್ಚ ಶಿಕ್ಷಣ ಪಡೆದವರಾಗಿ, ಆವಶ್ಯಕ ಪ್ರಜಾಪ್ರಭುತ್ವದ ಉಪಾಸನೆಯನ್ನು ತೊರೆದು, ಅರ್ಥಸ್ವಾರ್ಥಪರರಾಗಿ, ನಿರಂಕುಶ ಪ್ರಭುತ್ವವನ್ನೇ ಪುಷ್ಟೀಕರಿಸುವವರಾದರೆ, ಆದರಿಂದ ಮಹಾತ್ಮರು ಹೇಳುವಂತೆ, ಈಗಿನ ಶಿಕ್ಷಣಾಲಯಗಳು ನಿರುಪಯೋಗಿಗಳಾದ್ದರಿಂದ, ರಾಷ್ಟ್ರೀಯ ಶಿಕ್ಷಣದ ಆವಶ್ಯಕತೆಯು ಬಲ ಪಡುತ್ತದೆಲ್ಲವೇ? ಇರಲಿ.

ಈ ಬಹುಮತದ ಠರಾವಿಗೆ ಒಂದೆರಡು ಕಾಲ್ಪನಿಕ ಮುದ್ದೆಗಳು ಆಧಾರವಾಗಿರಬಹುದೆಂದು ಊಹಿಸಬಹುದು. ಅವುಗಳಲ್ಲಿ "ಭಂಡಾರ ದಹಣವು ಶಿಕ್ಕಶಿಕ್ಕವರಿಗೆ ಕೊಟ್ಟು ಹರಡಿಹಾಕುವದರಿಂದ, ಅದು ವರ್ಷಾಂತ್ಯಕ್ಕೆ ಒಟ್ಟುಗೂಡಿಸುವದು ಬಹು ಕಠಿಣವು, ಅದಕ್ಕೆ ತಕ್ಕ ಶಿಬಂದಿಯ ವ್ಯವಸ್ಥೆ ಮಾಡಬೇಕಾಯಿತು. ಅಷ್ಟಾದರೂ, ಕಂಗಾಲ ಸಮಾಜದಕ್ಕೆಗೆ ಒಮ್ಮೆ ಶಿಕ್ಕಿದಹಣಗಳು ತಿರುಗಿ ಬಂದಾವೆಂಬುದಾದರೂ ಅನುಮಾನಕರವು. ಹೀಗಾಗಿ, ಇದ್ದ ವ್ಯವಸ್ಥೆಯೇ ಯೋಗ್ಯವೆಂದೂ, ಶ್ರೇಯಸ್ಕರ"ವೆಂಬ, ಭಾವನೆಯಾಗಿರಬಹುದು. ಆದರೆ, ಸಮಾಜದ ಉದ್ಧಾರಕ್ಕಾಗಿ ಹಣಗಳು ಹರಡುವದೂ, ಒಟ್ಟುಗೂಡಿಸುವದೂ ತೀರ ಅವಶ್ಯಕವು. ಆದರಿಂದ ಹಣಗಳು ನಷ್ಟವಾಗುವವೆಂಬ ಕಲ್ಪನೆಯು ಯಾರಿಗಾದರೂ ಇದ್ದರೆ, ಅದು ಬುದ್ಧಿಭ್ರಮೆಯು. ಈ ಸಮಾಜದಲ್ಲಿ ದೇವತಾ ಹಣಗಳು ಅಪಹರಿಸುವ ವಿಚಾರವು ಇನ್ನೂ ತಲೆದೋರಲಿಲ್ಲ. ಬಹುಜನ ಸಮಾಜವು ತಾಂವು ಕೊಡತಕ್ಕ ಹಣಗಳಿಗೆ ಬಂದೆ ಬಿಸ್ಲಿಯಾದರೂ ಹೆಚ್ಚು ಕೂಡಿಸಿ, ದೇವರಿಗೆ ಕೊಡಬೇಕೆಂಬ ಭಕ್ತಿವಂತರೇ ಹೆಚ್ಚು ಇದ್ದಾರು. ಇದಲ್ಲದೇ ದೇವತಾ ಸಂಬಂಧವಿಲ್ಲದೆ, ಇಲ್ಲಿ ಅರ್ಬನ ಕೋಪರೇಟಿವ್ ಪತಪೇಢಿಯಿಂದ ನಡಿಯುವ ಹೆಚ್ಚಿನ ವ್ಯವಹಾರಗಳು ಬಡ ಸಮಾಜದವರದೇ ವಿಶೇಷವಾಗಿದ್ದು, ಹಣ ಅಪಹಾರವಾದ ಸಂಗತಿಯು ಯಾರೇನೂ ಇನ್ನೂ ಕೇಳಿದ್ದಿಲ್ಲ. ಕೊಡತಕೊಳ್ಳಲಿಕ್ಕೆ ವಿಲಂಬವಾಗಿರಬಹುದು. ಆದರೆ, ವ್ಯವಹಾರಗಳು ಅಭಿವೃದ್ಧಿಯಾಗಿ, ಬಡ್ಡಿಯ ಲಾಭದ ಪ್ರಮಾಣವು ವರ್ಷ ಪ್ರತಿ ವರುಷ ಏರಿ ಹೋದದ್ದು ಎಲ್ಲರಿಗೂ ಗೊತ್ತಾದ ಮಾತು. ಬಡ ಸಮಾಜಕ್ಕೆ ಆದರಿಂದ ಎಷ್ಟು ಪ್ರಯೋಜನವಾಗಿದೆ, ಎಷ್ಟು ಹಿತಕರವಾಗಿದೆ ಎಂಬುದು ಅವ್ಯಾಹತವಾಗಿ ನಡಿಯುವ ಆ ವ್ಯವಹಾರಗಳೇ ಸಾಕ್ಷಿ ಕೊಡುತ್ತವೆ. ಇಂಥ ಪರಿಸ್ಥಿತಿಯಲ್ಲಿ ಇದ್ದ ವ್ಯವಸ್ಥೆಯೇ ಯೋಗ್ಯವೆಂದು ಹೇಳುವವರು ಸ್ವಾರ್ಥಿಗಳು, ಆಪಮತಲಬಿ ಜನರ ಮಾತಿಗೆ ಬಲಿಬಿದ್ದವರು ಎಂದು ಹೇಳಿದ ಹೊರತು ಗತ್ಯಂತರವಿಲ್ಲ. ಪತಪೇಢಿಯಂಥ ವ್ಯವಸ್ಥೆಯಿಂದ ಬಡ ಸಮಾಜಕ್ಕೆ ಹಣ ಪೂರೈಕೆಯಾದರೆ, ಬಡ ಸಮಾಜವು ಸುಖಿಯಾಗಿ, ಪುಷ್ಟಿಯಾಗಿ ಭಂಡಾರದ ಹಣಗಳು ಸಹ ಇನ್ನಷ್ಟು ಬೆಳೆಯುವವೆಂಬುದರಲ್ಲಿ ಸಂದೇಹವಿಲ್ಲ. ಇಂಥ ಸನ್ಮಾರ್ಗದಿಂದಲೇ ಬಡ ಸಮಾಜವು ಶ್ರೀ ಭಂಡಾರವು, ಪುಷ್ಟಿ ಹೊಂದುವದು ಶ್ರೇಯಸ್ಕರವೋ, ಯಾ ಒಬ್ಬಿಬ್ಬ ವ್ಯಕ್ತಿಗಳೇ ಪೂರಾ ಹಣದ ಹಕ್ಕಿನ ಬಳಕೆದಾರರಾಗಿ, ಸಮಾಜವು ದಿನೇ ದಿನೇ ಕಂಗಾಲ ಆಗಗೊಡುವದು ಶ್ರೇಯಸ್ಕರವೋ ಎಂಬುದು ನ್ಯಾಯನೀತಿವಂತರು ವಿಚಾರ ಮಾಡತಕ್ಕ ಸಂಗತಿಯು. ಶ್ರೀ ಉತ್ಸವ ವರ್ಗಣಿಗಳಲ್ಲ ಸಮಾಜದ ಎಲ್ಲ ಘಟಕಗಳು ಪಕ್ಷಪಾತವಿಲ್ಲದೆ ನೆರವಾಗಿ ಅವುಗಳನ್ನು ಸಾಂಗ್ಯಪಡಿಸಬೇಕು, ಇಲ್ಲದಿದ್ದರೆ, ದಂಡಕ್ಕೆ ಗುರಿಯಾಗಬೇಕು. ಮತ್ತು ಹಣದ ಪ್ರಯೋಜನ ಮಾತ್ರ ಅಖಂಡ–ಮುಖಂಡರೇ ತಮ್ಮ ಹಕ್ಕಿನದ್ದೆಂದು ತಿಳಿಯಬೇಕು. ಇದು ತೀರ ಪಕ್ಷಪಾತವಲ್ಲವೇನು? ಶ್ರೀದೇವರಲ್ಲಿ ಎಲ್ಲ ಸಮಾಜವು ಸಮಾನ ಹಕ್ಕಿನದ್ದೆಂದೂ ಸಾಮತ್ವ ಭಾವನೆಯು ಇದ್ದರೆ, ಅದನ್ನು ರಹಿತ ಮಾಡಬೇಕೆಂದೂ ನೀತಿಯಪಾಠಗಳು ಬಡಿದು ಹೇಳುತ್ತವೆ. ಅದಕ್ಕೆ ವಿರೋಧವಾಗಿ ನಡಿಯುವದು ಸ್ವಾಮಿದ್ರೋಹವು.

ಆದ್ದರಿಂದ ಇಂಥ ಕುವಿಚಾರಗಳ ಅನುರೋಧದಿಂದ ಬಡ ಸಮಾಜದ ಉದ್ಧಾರವನ್ನು ಗೈಯ್ಯಬೇಕೆಂದು ನಾನು ಬೇಡುವೆನು. ಅದಕ್ಕಾಗಿ ನಿರ್ಣೀತ ಕಮಿಟಿಯು ರದ್ದಾಗಿ ಹೊಸ ಕಮಿಟಿಯು ಆರಿಸಲ್ಪಡಬೇಕು. ಅದು ಯುಕ್ತ, ಈ ಠರಾವು ಕೆಳಗೆ ಕೊಟ್ಟ ಕಾರಣಗಳ ಮೂಲಕ ಸಿಂಧುವಲ್ಲ —

೧– ಹತ್ತು ಸಮಸ್ತರ ಸಭೆಗೆ ಸಾಕಷ್ಟು ಮುದ್ದತ್ತಿನ ಲೇಖಿ ನೋಟೀಸು ತೆಗೆಯದೇ ವಿಷಯಗಳ ಪಟ್ಟಿ ಮಾಡದೆ ಸಭೆಕೂಡಿಸುವದು ಯೋಗ್ಯವಲ್ಲ.

೨– ಇಂಥ ಸಭೆಗಳಲ್ಲಿ ಪಕ್ಷಭೇದವಿದ್ದರೆ ತಮ್ಮ ಸ್ವಾರ್ಥಗಳನ್ನು ಸಾಧಿಸಲು, ಅಧಿಕಾರದಲ್ಲಿದ್ದ ಪಕ್ಷಕ್ಕೆ ಮೇಲಿನ ದೋಷಾರ್ಹ ಪದ್ಧತಿಯಿಂದ ಸಾಕಷ್ಟು ಇಂಬು ದೊರೆಯುತ್ತದೆ.

೩– ಹತ್ತು ಸಮಸ್ತರೆಂದರೆ, ಆ ದಿವಸ ನೆರೆದವರೆಲ್ಲರಾಗಿರುವರು. ಅವರೆಲ್ಲರೂ ಮತಸ್ವಾತಂತ್ರ್ಯವಿದ್ದವರೆ ಸರಿ. ಅದಕ್ಕೆ ವಿರೋಧವಾಗಿ ಮನೆಗೆ–ಯಾ ಕುಟುಂಬಕ್ಕೆ ಒಬ್ಬೊಬ್ಬರೇ ಮತವನ್ನು ಕೊಡಬೇಕೆಂದು ಅಧ್ಯಕ್ಷರು ಹತ್ತುದಾರಿಯ ಕಟ್ಟಪ್ಪಣೆಯ ಆಧಾರದ ಮತಗಳಿಂದ ಬಹುಮತ ಸಾಧಿಸಿಕೊಂಡರೆ, ಆ ಬಹುಮತವು ಸಿಂಧುವಾದದ್ದಲ್ಲ.

೪– ನಿರ್ಣೀತವಾದ ಕಮಿಟಿಯು ಆ ಕೆಲಸಕ್ಕೆ ಯೋಗ್ಯವಾದದ್ದಲ್ಲ. ನಿಃಪಕ್ಷಪಾತಿಯೂ ಅಲ್ಲ. ಆದರಿಂದ ಎಂದೂ ಬಡ ಸಮಾಜದ ಹಿತವಾಗುವದಿಲ್ಲ.

ಶ್ರೀ ಕಮಲಾಬಾಯಿ ಯ ಅಬಲಾ ಸಂಜೀವನಿ ಗುಳಿಗೆ

ಬರೇ ಸ್ತ್ರೀಯರಿಗೋಸ್ಕರ

ಪ್ರಾಯ ಬಂದಂದಿನಿಂದ ಪ್ರಸೂತಿಯ ವರಿಯಂತ ಎಲ್ಲ ಅಪಾಯಕರ ಮತ್ತು ತ್ರಾಸದಾಯಕ ಮನೋವೇಧಕ ರೋಗಗಳು ಈ ಗುಳಿಗೆಗಳಿಂದ ಗುಣ ಹೊಂದುತ್ತವೆ. ೨೫ ವರ್ಷಗಳದಾರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಾಗಿಲ್ಲ. ಸವಿಸ್ತರ ಮಾಹಿತಿಯ ಕೆಟಲಾಗು ಒಂದು ೦–೧–೬ ಸ್ಟ್ಯಾಂಪ ಕಳಿಸಿದರೆ ಉಚಿತ ಸಿಗುವದು ಬಾಟ್ಲಿ ೧ ರ ಕ್ರಯ ೧–೮–೦ ಟಪಾಲ ಖರ್ಚು ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ.

ಶ್ರೀ ಕಮಲಾಬಾಯಿ ಜಿ ಎಮ್ ಸಿ ಫಾರ್ಮಸಿ, ಕಾಲಬಾದೇವಿ ಎದುರಿಗೆ ನಂ ೬೫

ಡಾ. ನವರತ್ನಕರ.

ವಿದ್ಯುತ್‌ಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ.

ಇದರಿಂದ ಬಿಳಿ ಕೂದಲು ಕಾಗೆ ಕಪ್ಪಾಗುತ್ತವೆ ... — ಸುಲಭ ಹಚ್ಚೋಣ, ... ವ ಆಗ ಕ್ರಯವೇ ಸರಿ ಬಳಸಿದವರೆಲ್ಲರು ...

ಕ್ರಯ ... ಂ ಅಂಚೆ ವೆಚ್ಚ ಬೇರೆ ೧೨ ಕ್ಕೆ ೧೫–೮–೦.

ನವರತ್ನ ಮತ್ತು ಸನ್

... ಕಾಳಬಾದೇವಿ ರೋಡ ಮುಂಬಯಿ.

ಜ್ವರದ ಮೇಲಿನ ಪಾಟಣಕರ ಎಗ್ಯು ಮಿಕ್ಸ್ಚರ

... ವ ಲಕುಬ್ಧಿಯಾಗುತ್ತದೆ ಜ್ವರವು ಬಂದು ಜ್ವರವು ಬಿಡುತ್ತಿರೆ ಕ್ರಯ ೦–೧೨–೦ ದೊಡ್ಡ ವ್ಯಾಪಾರಸ್ಥರಿಗೆ ಲಗ್ಗ

ಪಾಟಣಕರ ವಾಸುದೇವ ಕಂಪನಿ ಮುಂಬಯಿ ೪

ಮ. ಗಾಂಧಿಯವರ ಅಪ್ಪಣೆ.

... ಯತಿ ವಸ್ತ್ರಾಲಿಗೆ ಬಹಿಷ್ಕಾರ.

ಸ್ವದೇಶಿ ಸಕಲ ಶೆಗಿಯುವ ರಾಟಾ(ಚರಕ), ಶುದ್ಧ ... ಮಹಾತ್ಮಾ ಗಾಂಧಿಯವರ ... ಟೋಪಿಗಳು ಬೇರೆ ತರದ ಸ್ವದೇಶೀ ವಸ್ತ್ರಾಲು ... ದಿಂದ ಸಿಗುವದು

ಸ್ವದೇಶಿ ಸಹಾಯಕೆಗೆಂದ ತಯಾರಮಾಡಿದ ಬೇರೆ ಬೇರೆ ನಮೂನೆಯು ... ವಿಧವು ಸದ್ಯದಲ್ಲಿ ಬರುವ ಗುಂಟು ವ್ಯಾಪಾರಸ್ಥರಿಗೆ ಭರಪೂರ ಕಮೀಶನ ಕೊಡಲ್ಪಡುವದು

ಕುಷ್ಟೆ ವಾಸುದೇವ ಪಾಂಡುರಂಗ ಶ್ಯಾನಭಾಗ, ಮತ್ತು ಬ್ರದರ್ಸ.

ಹೊನ್ನಾವರ ಜಿ ಕಾರವಾರ

Notice to Investors.

We undertake to negotiate business for our constituents in the following Securities on the Bombay Market for bona fide Investors as well as of a speculative nature. The Securities are STOCKS & SHARES GOLD SILVER etc. Usual commission is charged. *Please apply to Messrs*

Gunshekhar & Co.
RANI BUILDINGS,
Tardeo Road,
BOMBAY. 7.
Telegram – *Vayayanti.*

FREE. FREE.

Purchasers of ... tins of our ... Kingsworm Oint... price As 4 per tin or of ... Tins of Otto Mushkhina, Price As 12 per tube, will be sent.

A WRIST WATCH FREE

King George Coronation Co., BOMBAY No. 4.

ಸ್ಪೆಶಲ್ ಮೋಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ವಿಳಾಸದ ಮೇಲೆ ಬರೆಯಬಹುದು. ಸವಲತ್ತಿಯ ದರಗಳು ಇಟ್ಟಿರುವೆವು ನಮ್ಮ ಪತ್ತೆ —

ಗ್ಯಾತೋಂಡೇ ಬ್ರದರ್ಸ,

ಮೋಟರ ಡೀಲರ್ಸ, ಎಜೇಂಟ್ಸ್

ಕಾರವಾರ.

ಅನುಭವಸಿದ್ಧವಾದ ಔಷಧಗಳು !!!

ವಿಶ್ವಪ್ರಸಿದ್ಧ ... ಜಗತ್॥

ರಕ್ತಶುದ್ಧಿ 'ಧಾತುವೃದ್ಧಿಯಮೇಲೆ ಅತಿ ಉತ್ತಮ ... ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುಹೋಗುವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ ಉಪದಂಶವಿಕಾರ, ಮಸ್ತಕಶೂಲಿ, ಮುಂತಾದ, ಅನೇಕ ವಿಕಾರಗಳು, ನಿಶ್ಚಯದಿಂದ ಗುಣವಾಗಿ, ಶರೀರಕ್ಕೆ ಪುಷ್ಟತ್ವವೂ, ಕಾಂತಿಯೂ, ಸ್ಮರಣಶಕ್ತಿಯೂ, ಹೆಚ್ಚು ವೃದ್ಧಿಯಾಗಿ ರತಿಸುಖಕ್ಕೆ ಕಾರ್ಯ ಶಕ್ತಿಯನ್ನು ಕೊಡುತ್ತವೆ ಉತ್ತಮ ಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೮೪ ಕ್ಕೆ ರೂ. ೩–೦–೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ ಗುಳಿಗೆ ೩೦ ಕ್ಕೆ ರೂ. ೧–೦–೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ — ೧೪ ದಿವಸದ ಔಷಧಕ್ಕೆ ರೂ ೨–೦–೦ (೩) ಗಜಕರ್ಣನಾಶಕ ಮಲಮು — ಡಬ್ಬಿಗೆ ಆಣೆ ೦–೮–೦ (೪) ಮೂಲವ್ಯಾಧಿ ನಾಶಕಗುಳಿಗೆ — ಮೊಳೆ ಒಗೆದು ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨–೦–೦

ಅನುಮಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ।

ವಿಳಾಸ — **ವೈದ್ಯ ವ್ಹಿ. ಎಸ್ ನೋದಕ, ಮತ್ತು ಕಂಪನಿ, ಪೋಸ್ಟ ಸಿರಸಿ,**

ಜಿಲ್ಲಾ ಉತ್ತರಕಾನಡಾ

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ

ನವೀನ ಭಾರತ.

(ವಾರ್ಷಿಕ ವರ್ಗಣೀ ಅಂಚೇ ವೆಚ್ಚ ಸೇರಿ ರೂ ೩)

ಇದರಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ, ಮನೋವೇಧಕವಾಗಿಯೂ ಚರ್ಚಿಸಲ್ಪಡುವವು

ಸ್ವದೇಶೀ, ಬಹಿಷ್ಕಾರ, ಮದ್ಯಪಾನ ನಿಷೇಧ "ರಾಷ್ಟ್ರೀಯ ಶಿಕ್ಷಣ" ಮೊದಲಾದ ಲೇಖಗಳೂ ಪ್ರಕಟಿಸಲ್ಪಡುವವು ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆಯಾದರೂ ನೋಡಬೇಕು. ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ, ಜಾಹೀರಾತುಗಾರರಿಗೂ ಅತಿಶಯ ಅನುಕೂಲ

ವಿಳಾಸ— ನವೀನ ಭಾರತ ಕಾರ್ಯಾಲಯ,

ಬಾಗಲಕೋಟ (ಜಿ ವಿಜಾಪೂರ)

ಭಕ್ಷೀಸು ಯಾ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ದಲಿಯಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪುಷ್ಟಿ ಯಾಗಿ ಶರೀರವು ಕಾಂತಿಗೊಳಿಸುವದು. ಇದಲ್ಲದೆ ಕೆಮ್ಮು ದಮ್ಮು, ಕಫ, ವಾತ, ಪಿತ್ತ, ನಿದೆ ಇಲ್ಲದಿರೋಣ ಮಲವಿಸರ್ಜನೆ ಸರಿಯಾಗಿ ಆಗದಿರೋಣ ... ಸ್ತ್ರೀಯರ ಗರ್ಭದೋಷ, ಕುಡುಗರ ಹೊಟ್ಟೆ ... ಎಲ್ಲಾ ಬೇನೆಗಳು ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ. ೩೦ ತೊಲೆ ಡಬ್ಬಿ ೧ ಕ್ಕೆ ರೂಪಾಯಿ ೧

ಕೆರೇಕರ ಬ್ರದರ್ಸ, ಶಕ್ತಿವರ್ಧಕ ದಲಿಯಾ ಡಿಪೋ, ಕುಮಟಾ (ಕಾನಡಾ)

Printed and published by Krishnarao Keshav Shenvi at his Star of Kanara Press, Kumta

Reg No B. 1270.

ವರ್ಷ ೬.

ಕಾನಡಾವೃತ್ತ.

THE KANARA NEWS.

ಸಂಚಿಕೆ ೪.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಅಗಾವು
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0

ನರಪतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ.-
ಕನ್ನಡ, ಇಂಗ್ಲಿಷ ಸ್ಮಾಲ್ ಪೈಕಾ ಟೈಪಿನ(೧೫ ಎಮ್‌ರುಂದ) ೫ ಸಾಲುಗಳ ವರೆಗೆ ರೂ. 1-0-0
ಅನಂತರ ಪ್ರತಿ ಸಾಲಿಗೆ 0-2-0.
ಹೆಚ್ಚಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುತ್ತವೆ.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ದರ ಸಮ್ಮತಿ ತಿಳಿಸಲ್ಪಡುವದು

—[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖು ೩ ನೇ ನವಂಬರ ಸನ್ ೧೯೨೧ ನೇ ಇಸವಿ]—

ಖರೇ ಮಾಲು! ತಾಜಾ ಕಲ್ಪು!! ತ್ವರೆ ಗ್ಯಾರಂಟಿ!!!

ಒಮ್ಮೆಗೆಲಾದರೂ ಅನುಭವ ತೆಗೆದುಕೊಳ್ಳದೆ ಬಿಡಬೇಡಿರಿ.

ತಾರುಣ್ಯ ಸಂಜೀವನಿ ಗುಳಿಗೆಗಳು.

ಶುಕ್ಲಧಾತುವನ್ನು ಬೆಳಿಸಿ, ಪುರುಷರಿಗೆ ಸ್ತ್ರೀ ವಿಷಯವಾಗಿಯೂ, ಸ್ತ್ರೀಯರಿಗೆ ಪುರುಷ ವಿಷಯವಾಗಿಯೂ ಹರ್ಷಯುಕ್ತ ಶಕ್ತಿಯನ್ನು ಉಂಟುಮಾಡಿ, ದಿನೇ ದಿನೇ ಶರೀರದ ಜತನವನ್ನೂ ರೋಗಗಳನ್ನೂ ದೂರಪಡಿಸಿ, ಆಯುರಾರೋಗ್ಯವನ್ನೂ, ರತಿಯಲ್ಲಿ ವೆಗ್ಗಳವಾದ ಕುತೂಹಲವನ್ನೂ ತೋರಿಸುವ ಕ್ರೀಡಾ ಶಕ್ತಿಯ ಉತ್ಸಾಹವನ್ನೂ, ಸಂಭೋಗದಲ್ಲಿ ತೃಪ್ತಿಯನ್ನೂ, ಸೌಖ್ಯವನ್ನೂ ಕೊಟ್ಟು, ಮನಸ್ಸಿನ ಧೃಢತೆಯನ್ನೂ ಯೌವ್ವನದ ಕಳೆಯನ್ನೂ ದೊರಕಿಸಿ ಮುದಿತನವನ್ನು ನೀಗಿ ಬಲವನ್ನು ಉಂಟುಮಾಡುವದು. ದೌರ್ಬಲ್ಯವನ್ನು ನಿರಾಕರಿಸಿ, ಬಗೆಬಗೆಯ ರೋಗಗಳನ್ನು ನಾಶಮಾಡುವದು. ಜೀರ್ಣಜ್ವರ ಮಂದಾಗ್ನಿ, ಶುಕ್ಲಸ್ರಾವ, ಆಮಶಂಕೆ ಬಿಡದೇ ಇವುಗಳನ್ನು ನಾಶಮಾಡುವದು. ಇದು ಆರೋಗ್ಯಕ್ಕೆ ಅತ್ಯುತ್ತಮವಾದ ಔಷಧವಾಗಿಯೂ, ದೆ ಕಕಾಲಗಳಿಂದಲೂ, ಅತ್ಯಾಹಾರಗಳಿಂದಲೂ, ಸ್ತ್ರೀಯರಿಂದಲೂ, ದೇಹಪ್ರಕೃತಿಯಿಂದಲೂ, ಚಿಕ್ಕವಯಸ್ಸಿನಲ್ಲಿ ನಡಿಸುವ ಬಲಾತ್ಕಾರದ ಹಸ್ತಘರ್ಷಣದಿಂದಲೂ, ಅತಿವಿಷಯೋಪಭೋಗದಿಂದಲೂ, ಇಂದ್ರಿಯ ಶಿಥಿಲತ್ವ, ತಿಳುವು, ನಿಸ್ತೇಜವು ಆಗಿ ಯತ್ನವಿಲ್ಲದೆ ಸ್ಖಲನವಾಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ, ಸ್ವಪ್ನದಲ್ಲಿಯೂ ಸಹ ಹೋಗುವದಲ್ಲದೆ, ನಪುಂಸಕತ್ವ, ಶರೀರ ಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ, ತಲೆಯಲ್ಲಿಯೂ ನೋವು, ಮೈಬಿಸುವು, ನಿದ್ರೆಯಲ್ಲಿ ಭೀಕರವಾದ ಸ್ವಪ್ನ, ಅರಿವು, ಮರುವು ಮತ್ತು ಶರೀರದ ನಾನಾ ಮನಸ್ಸಿನ ಚೇತನ ಕುಂದಿ ಹೋಗುವದು, ಇವೆಲ್ಲವುಗಳ ಮೇಲೆ ರಾಮಬಾಣದಂತಿರುವದು. ೩೦ ಗುಳಿಗೆಗಳುಳ್ಳ ಸೀಸೆ ೧ಕ್ಕೆ ರೂ ೧॥ ನಂ ೧. ನಂ ೨ ಹೀಗೆ ಎರಡು ಸೀಸೆಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂಚು ೬೦ ಗುಳಿಗೆಗಳುಳ್ಳ ಸೀಸೆಗಳಿಗೆ ರೂ ೩ ಪೋಸ್ಟೇಜ ಬೇರೆ

ಎಮ್. ಜಿ. ಭಾಗ್ವತ್, ಆಯುರ್ವೇದಿಕ್ ಕೆಮಿಸ್ಟ,
ಕರ್ಕಿ. (ಕೆನರಾ.)

ಸತ್ಯಮೇವ ಜಯತೇ

(ಗುಣಬಾರದಿದ್ದರೆ ಹಣ ವಾಪಸು)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗುಣವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸ್ತಂಭಕ ಗರ್ಮಿ, (ಬಾಕಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಒಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟಕೀಲ ವಾತರೋಗ ಮುಂತಾದವು ಆತಿತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತವೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಟ ಖ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ

ವಿಳಾಸ – ಜಿ. ಎಲ್. ಜೋಶಿ ಕಂಪನಿ.
ಪೋಸ್ಟ— ಸಿರಸಿ. ಉತ್ತರ ಕಾನಡಾ.

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಹೆಂಗಸರ ಗರ್ಭಾಶಯದ ವಿಕಾರ, ಪರಮಾ, ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ದೇಶಿ ಔಷಧಗಳೂ, ಸ್ಟೇಶನರಿ, ಪರಿಮಳ್ಯಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೀ ಖಾದೀ ಟೊಪ್ಪಿಗೆಗಳೂ, ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾದೀತು.

ಎಸ್ ಎಲ್. ಧಾಕಪ್ಪ ಮತ್ತು ಬಂಧು
ಶಿರ್ಶಿ.

ಕಾರ್ಡಸ್ಸಾಜ ಫೋಟೋ.

ಮಹಾತ್ಮಾ ಗಾಂಧೀ, ಕೈ। ಲೋ। ಟಿಳಕ, ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾಯ ಇವರ ಉತ್ತಮ ಕಾರ್ಡ ಸ್ಸಾಜಿನ ಫೋಟೋಗಳು ನಮ್ಮಲ್ಲಿ ಸಿಗುವವು.

ಕ್ರಯ— ೧ಕ್ಕೆ ೬ಪೈ, ೧ ಡಜನ ಬೇಕಾದವರು ೫ ಆಣೆ ಸ್ಟಾಂಪುಗಳೂ ಮತ್ತು ೧೦೦ ಬೇಕಾದವರು ೧ ೧-೨-೦ ಮನಿಯಾರ್ಡರದ್ವಾರಾ ಹಣವು ಕಳುಹಿಸಬೇಕು. ಸೆಂಪಲಗಳು ಬೇಕಾದರೆ, ೨॥ ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ— ಸ್ಟಾರ ಓಫ್ ಕೆನರಾ ಪ್ರೆಸ್ಸ,
ಕುಮಟಾ (ಎನ್. ಕೆನರಾ,)

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

ಜ್ವರದ ಗುಳಿಗೆಗಳು ಕ್ರಯ — ೨೫ ಕ್ಕೆ ೦-೧೦-೦

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಟ್ಟು, ಉಂಚಿ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಉಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋ। ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬೇಜುಗಳು ದೊರೆಯುತ್ತವೆ. ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು ಡಜನ ೧ಕ್ಕೆ ೩-೦-೦. ಟಪಾಲ ಖರ್ಚು ಬೇರೆ.

ಪತ್ತೆ:— ಬಿ. ಎ. ಪೈ. ಹೊನ್ನಾವರ
(ಉತ್ತರ ಕಾನಡಾ)

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ

ಈ ವರ್ಷ ಶೇಕಡಾ ರೂ. ೧೨-೮-೦ ಇಟ್ಟಿದೆ. ಆದರೆ, ಇದೇ ನವಂಬರ ತಿಂಗಳ ಅಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧-೮-೦ ರ ಸವಲತಿ ದರ ಇಟ್ಟಿದೆ. ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು.

ಮಾಲಕ, ಸ್ಟಾರ ಓಫ್ ಕೆನರಾ ಪ್ರೆಸ್,
ಕುಮಟಾ.

ಜಗಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು

ಇಂಡಿಯಾ ಸರಕಾರದಲ್ಲಿ ಸ ೧೮೬೭ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರಿಜಿಸ್ಟರ ಮಾಡಲ್ಪಟ್ಟಿ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ... ರೋಗ ... ಮನವರಿಕೆಯಾಗಿ ... ನೇ ಇಸ್ವಿಯ ... ಬಾಟ್ಲಿಗಳ ... ಆರೋಗ್ಯಬಿಂದು ... ರೋಗಗಳು ... [illegible]

...

ಕನ್ ಇಲ್ಲ ಇದಕ್ಕೆ ಆರು ಆಣೆ ಖರ್ಚ ಬರುವದು ಒಂದು ಕಾಲು ತೊಲೆ ಬಾಟಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ ಖರ್ಚ ಎಂಟು ಆಣೆ ಬರುವದು ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ... ದೊರೆಯಲಿಕ್ಕಿಲ್ಲ ... ಕನ್ನಡ ... ಭಾಷೆಗಳಲ್ಲಿ ಛಾಪಿಸಿ ... ಪ್ರಕಾರ ಬಾಟ್ಲಿಯ ಸೋಬತ ... ಅಥವಾ ಕನ್ನಡದಲ್ಲಿ ... ನಾಮ ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್ ಎ ... ಅರ್ಕಶಫಾ ಹೆಡ್ ಅಫೀಸು ... ಪೂರ ... ಗಾಂವ

... ಯಿಂದ ... ಉಪಯೋಗಿಸುವ ಔಷಧಗಳು.

1 ... — ... ಕ್ರಮವಟ್ಟ ಕೆಲಸ ಮಾಡುವ ... ಅಜೀರ್ಣ ... ರಕ್ತಶುದ್ಧಿ ... ಮತ್ತು ... 40 ... [illegible]

2 ... [illegible] ... 0

3 ... — ... 0 1 0

4 ... [illegible]

5 ... [illegible]

ಎಸ್. ಗಣಪಯ್ಯಾ ಅಂಡ ಸನ್ಸ್

... ರಥಬೀದಿ ... ಮಂಗಳೂರ

ಸೂಚನೆ.

... ಸಿರಸಿಗೆ ... ಆದಿತ್ಯವಾರ ಗುರುವಾರ ... ಸುವ ವ್ಯವಸ್ಥೆ ಇಟ್ಟಿದೆ ... ರಿಯಿಂದ ಬೆಳಿಗ್ಗೆ ... ಮತ್ತು ಸಿರಸಿ ... ಹೊರಡುವದು ಹಾವೇರಿ ... ಅಥವಾ ಸಿರಸಿಯಲ್ಲಿ ಆರಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೀಟುಗಳು ಸಿರಸಿ ... ಹಾವೇರಿಯಲ್ಲಿ ಸ್ಟೇಶನದ ಹತ್ತರ ... ಸಿಗುವವು

ಎಸ್. ಎಚ್. ಥಾಕಪ್ಪಾ

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

... ಭಾಡಿಗೆ ... ವಗೈರೆ ... ಮತ್ತು ... ಬಹುದು

ಪುರುಷೋತ್ತಮ ವಿಕ್ರಮಯ್ಯ ಕ್ಯಾನಭಾಗ

ಹೆಗಡೇಕರ, ದುಕಾನ, ಕುಮುಟಾ.

बाजाच्या पेट्या.

तबला डग्गे नाटकी सामान



१ बाजाची हातपेटी किं ३० ४० ४० ५०, ७०

पायपेटी किं ... ७० १५०

तबला डग्गा जोड, किं १२, १ १८ २०

४ हार्मोनियम गाईड किं १। तबला गाईड आ १२

विशेष माहित करिता कॅटलॉग फुकट मिळेल

पत्रव्यवहार मराठीत अगर इंग्रजीत करावा

पत्ता— गोपाळ सखाराम आणि कंपनी

नं २६२ काळबादेवी रोड मुंबई

ಹಲ್ಲಿನ ಡಾಕ್ಟರ ಕೃಷ್ಣರಾವ ಮಾಳವಂಕರ.

ಜನ್ಮದ ... ಮತ್ತು ... ಹೊಸ ... ಹಲ್ಲುಗಳ ... ಹಲ್ಲುಗಳ ... ಹಲ್ಲುಗಳ ... ಸರಿಯಾಗಿ ... ಯೋಗ್ಯವಾಗಿ ಮಾಡಲಾಗುತ್ತದೆ

Javeri Mansion
near Marwadi Vidyalaya,
Sandhurst Road
BOMBAY No 4

ಸ್ವದೇಶ ... ವಿದೇಶ ...

ದಿ ಸ್ವದೇಶಿ ಇಂಕ ಸಪ್ಲಾಯರ್

... ಕೇರಿ

ಭಾರತೀಯ ಶಾಯಿ ಗುಳಿಗೆಗಳು

... ಉತ್ತಮ ... ವ್ಯಾಪಾರಸ್ಥರಿಗೆ ಯೋಗ್ಯ ... [illegible]

ಕೀರ್ತನಕೇಸರಿ
ದೇಶಭಕ್ತ ಜಯರಾಮಾಚಾರ್ಯರ ಆಗಮನ.

೫ ಸಾವಿರಕ್ಕೆ ಮಿಕ್ಕಿದ ಹಿಂದು-ಮುಸಲ್ಮಾನರ ಶ್ರೋತೃಸಮುದಾಯ

ಸಂಕೀರ್ತನೆಯ ರಹಸ್ಯ ಮಾರ್ಮಿಕತೆ
ಸ್ವದೇಶಿಯಿಂದಲೇ ಸ್ವರಾಜ್ಯ ಸಾಧನೆ
ಮೌ॥ ಅಲ್ಲೀಬಂಧುಗಳಿಗೆ ತ್ರಿವಾರ ಜಯಘೋಷ

ದೇಶಭಕ್ತ ಕೀರ್ತನ ಕೇಸರಿ ಜಯರಾಮಾಚಾರ್ಯರು ಇಲ್ಲಿಗೆ ಆಗಮಿಸಿ ತಮ್ಮ ಸ್ವಾರ್ಥತ್ಯಾಗ ಕ ಮಾರ್ಮಿಕ ಸಂಕೀರ್ತನೆಗಳಿಂದ ಆಬಾಲವೃದ್ಧರಲ್ಲಿ ಸಹ ಈಗಿನ ಪರಿಸ್ಥಿತಿಯ ... ಚೇತನವ ... ಮಾಡಿ, ... ದರ್ಶನ ಚಕ್ರವನ್ನು ... ದರದರನೆ ... ಮಾಡಿದ ತಿರುಗಿ ... ಪ್ರತ್ಯಕ್ಷವಾಗಿ ... ಸ್ವದೇಶಿ ಪ್ರಚಾರವು ... ಬಹಿಷ್ಕಾರದ ... ಸ್ವರಾಜ್ಯವು ... ಸಾಧ್ಯವೆ ... ನಮ್ಮ ... ಶ್ರೋತೃ ... ಈಗಿನ ಪರಿಸ್ಥಿತಿ ... ನಮ್ಮ ಆಳರಸರ ... ಕೀರ್ತನದ ಕಥೆಗಳನ್ನು ಸಮರ್ಪಕವಾಗಿ ... ಕತೆಯಿಂದ ಹೋಲಿಸಿ, ಹೊತ್ತು ಹೊತ್ತಿಗೆ ... ದರ್ಶಪರಿತ ಆಧಾರಗಳನ್ನು ಕೊಟ್ಟು ಸ್ವರಾಜ್ಯದ ... ನಮ್ಮ ಪರತಂತ್ರತೆ ... ತೂಗುಯ್ಯಾಲೆಯನ್ನು ... ಶ್ರೋತೃ ... ನೇದ ... ಅದರಿಂದ ಶ್ರೋತೃಸಮುದಾಯ ... ಉಲ್ಲಾಸ ... ಉತ್ಸೇಜಿತ ... ಪ್ರಸಂಗದಿಂದ ... ಒಬ್ಬರು ತಮ್ಮ ದಾಕ್ಷಿಣ್ಯದ ... ಯಿಂದ ... ಅವರ ಉಪದೇಶ ... ಸಕಲರಾಗಿ ... ಉಪಸ್ಥಿತರ ... ಹೃತ್ಪೂರ್ವಕ ಅಭಿನಂ... ಸ್ವಾತ್ರರಾಗುತ್ತಿರುವದು ಸಹಜವು.

ಮಹಾತ್ಮಾ ಗಾಂಧಿಯವರ
“ಆಶಾವಾದ.”

ಸ್ವದೇಶೀ ವ್ರತನಡಿಸಿರಿ ಸ್ವರಾಜ್ಯ ಗಳಿಸಿರಿ

ಆಶಾವಾದ ಅಂದರೆ ಆಸ್ತಿಕ್ಯಬುದ್ಧಿ. ನಾಸ್ತಿಕನಿರುವನು ತನೇ ನಿರಾಶಾವಾದಿಯಾಗಿರಬಹುದು. ಆಶಾವಾದಿ ಮನುಷ್ಯನು ಪರಮೇಶ್ವರನ ಅಂಜಿಕೆಯನ್ನು ... ನಮ್ರತನದಿಂದ ತನ್ನ ಶುದ್ಧ ಅಂತಃಕರಣದ ಮಧುರ ಧ್ವನಿಯನ್ನು ... ರಿಗೆ ಕೇಳಿಸುವನು ಹಾಗೂ ತಾನೂ ಅದರಂತೆ ನಡೆಯುವನು ... ಯಾವಾಗಲೂ ದೇವರು ಮಾಡುವದೆಲ್ಲವೂ ಒಳಿತಕ್ಕಾಗಿಯೇ ಎಂಬ ತಿಳಿದುಕೊಂಡಿರುವನು.

ನಿರಾಶಾವಾದಿಯು “ತಾನು ಮಾಡುತ್ತೇನೆ” ಈ ತರದ ಹೆಮ್ಮೆಯನ್ನು ಹಿಡಿಯುವನು ಮತ್ತು ಕಾರ್ಯಕ್ಕೆ ಕೆಟ್ಟು ನಿಷ್ಫಲ ಹೊಂದಿದಲ್ಲಿ ತನ್ನನ್ನಷ್ಟು ಬಿಟ್ಟು ಅನ್ಯರನ್ನು ದೂರುವನು. ಈಶ್ವರನು ಇರಲಿ ಇಲ್ಲವೇ ಇಲ್ಲದಿರಲಿ ಎಂಬ ... ಮಾತನ್ನಾಡಿ ... ಕಡೆಗೆ ಈ ಜಗತ್ತೇ ಕೆಡಕು ಮತ್ತು ನಾನೊಬ್ಬನೇ ಜಾಣನು ಆದರೆ ನನ್ನ ಬೆಲೆಯನ್ನು ಯಾರೂ ತಿಳಿದಿಲ್ಲ ಎಂತ ಹೇಳಿ ಆತ್ಮಘಾತವನ್ನು ಮಾಡಿಕೊಳ್ಳಲಿಕ್ಕೂ ಹಿಂಜರಿಯುವದಿಲ್ಲ. ಮತ್ತು ಹಾಗೆ ಮಾಡದಿದ್ದಾಗ್ಗ್ಯೂ ಆತನು ಜಗತ್ತಿನಲ್ಲಿ ಸತ್ತವನಂತೆ ಶೂನ್ಯವತ್ ಜೀವಿಸುವನು.

ಆಶಾವಾದಿಯು ಪ್ರೇಮದಲ್ಲಿ ಮಗ್ನನಾಗಿರುವನು. ಮತ್ತು ಯಾರಲ್ಲಿಯೂ ಹಗೆಯನ್ನು ಹಿಡಿಯದೇ ತಾನು ಭಯರಹಿತನಾಗಿ ಜಗದಲ್ಲಿ ಸಂಚರಿಸುತ್ತಿರುವನು. ಹಿಂಸಕ ಪ್ರಾಣಿಗಳ ಅಥವಾ ಹಿಂಸಾಪ್ರಿಯ ಮನುಷ್ಯರ ಅಂಜಿಕೆಯೂ ಆತನಿಗೆ ಕಾಣುವದಿಲ್ಲ. ಕಾರಣ ಆತನ ಆತ್ಮಕ್ಕೆ ... ವೆಂಬ ಭಯವೂ ಇಲ್ಲ ... ಶರೀರದ ಅಂಜಿಕೆಯೂ ಇಲ್ಲ. ಶರೀರದ ಚಿಂತೆಯೇ ಆತನಿಗೆ ಇರುವದು ಶಕ್ಯವಿಲ್ಲ. ಕಾರಣ ಶರೀರವೆಂಬುವದು ಕಾಚಿನ ಪಾತ್ರೆಯಂತಿರುವದೆಂಬುವದು ಆತನು ತಿಳಿದಿರುತ್ತಾನೆ. ಅದು ಎಂದಾದರೂ ಒಡದೇ ಒಡೆಯುವದು ಎಂತ ಆತನು ಅದರ ರಕ್ಷಣೆಕ್ಕೋಸುಗ ಯಾರ ಕಡೆಗೂ ಯಾಚನೆಗೆ ಹೋಗುವದಿಲ್ಲ. ಆತನು ಯಾರ ಅಂತಃಕರಣವನ್ನು ನೋಯಿಸುವದಿಲ್ಲ. ಮತ್ತು ಯಾರಿಗೂ ಬಡಿಯುವದಿಲ್ಲ. ತನ್ನ ಹೃದಯದ್ದೇ ಮಧುರ ಗಾನವನ್ನು ಯಾವಾಗಲೂ ಕೇಳುತ್ತ ಆತನು ಆನಂದಸಾಗರದಲ್ಲಿ ... ನಾಗಿ ತಿರುಗುವ...

ನಿ... ... ... ಜಗತ್ತು ... ದಿಂದ ... ಡಿದಂಥವನಾಗಿ, ... ನೇದ ... ತನ್ನ ಶತ್ರುಗಳೆಂದೆನಿಸುವರಿಗೆ ಅಂಜಿಕೆಯನ್ನು ಪಡಿಯುವನು ... ತನ್ನ ಹೃದಯದ ಮಧುರ ಗಾನವಂತೂ ಗೊತ್ತೇ ಇರದಿರಲು ಜೇನು ನೊಣದಂತೆ ... ಪ್ರಮಾಣವಾದ ಬಾಹ್ಯ ಭೋಗಗಳ ಉಪಭೋಗಕೊಳ್ಳುವದರಲ್ಲಿಯೇ ಆತನು ಸೋತುಹೋಗುವನು ಮತ್ತು ಪ್ರತಿದಿನವೂ ಮದ ... ತೆಯಿಲ್ಲದಗಳೆಯರ ಹೊಸ ಹೊಸ ಮೈತ್ರಿಯನ್ನು ಮಾಡಿ ದಿನಂಪ್ರತಿ ಅದನ್ನೂ ... ಯುತ್ತ ಹೋಗುವನು.

ಮೇಲಿನಂತೆ ನನ್ನ ವಿಚಾರಗಳು ಇರುವದರಿಂದ ಈ ವರ್ಷ ಸ್ವರಾಜ್ಯವು ನಮಗೆ ... ದೇ ಹೋದಲ್ಲಿ ನಾನು ಏನಾದರೂ ಆತ್ಮಘಾತ ಮಾಡಿಕೊಂಡೇನೆಂತ ಯಾರೂ ತಿಳಿಯಕೂಡದು. ವಿಷಯ ಸಂಗದಿಂದ ವಿಮುಕ್ತಿ ಹೊಂದುವದಕ್ಕಲ್ಲದೇ ಬೇರೆ ಯಾವದೇ ಪ್ರಸಂಗದಲ್ಲಿ ಆತ್ಮಘಾತ ಮಾಡುವದು ಮಹಾ ಪಾತಕವೆಂತ ನಾನು ಎಣಿಸುತ್ತೇನೆ ಮತ್ತು ಹಿಂದುಸ್ಥಾನವು ಸ್ವರಾಜ್ಯವನ್ನು ಗಳಿಸದೇ ಇದ್ದಲ್ಲಿ ನಾನೇಕೆ ಆತ್ಮಘಾತಮಾಡಿಕೊಳ್ಳಲಿ? ಹಿಂದುಸ್ಥಾನಕ್ಕೆ ಅಗತ್ಯವಿದ್ದರೆ ಅದು ಸ್ವರಾಜ್ಯವನ್ನು ಗಳಿಸುವದು. ಸ್ವರಾಜ್ಯದ ಬೆಲೆಯನ್ನು ಹಿಂದುಸ್ಥಾನವು ಈಗ ತಿಳಿದಿರುವದು. ಸ್ವರಾಜ್ಯದ ಸವಿಯನ್ನೂ ಅದು ನೋಡಿರುವದು. ಈಗ ಅದಕ್ಕೆ ಅವಶ್ಯವಿದ್ದರೆ ಬೆಲೆ ಕೊಡಬೇಕು ಮತ್ತು ಸ್ವರಾಜ್ಯವನ್ನು ತಕ್ಕೊಳ್ಳಬೇಕು. ಹಿಂದುಸ್ಥಾನವು ಯೋಗ್ಯ ಕರಿತರ ಬೆಲೆ ಕೊಟ್ಟೇತು ಯಾ ಕೊಡದೇ ನಿಲ್ಲುವದು. ಅದಕ್ಕೆ ಇಚ್ಛೆ ಇದ್ದರೆ, ಅದು ಸ್ವರಾಜ್ಯವನ್ನು ತಕ್ಕೊಳ್ಳುವದು ಅಥವಾ ತಕ್ಕೊಳ್ಳದೇ ಬಿಡುವದು. ಆದರೆ ಅದಕ್ಕಾಗಿ ನಾನು ಆತ್ಮಘಾತಮಾಡಿಕೊಳ್ಳುವ ಮಹತ್ವವೇನು?

ಆದರೆ ನನ್ನ ಮಿತ್ರರ ಬಳಿಯಲ್ಲಿ ಒಂದು ಸಂಗತಿಯನ್ನು ಹೇಳಿರುವೆನೆಂಬುವದು ನಿಜ. ಜನವರಿ ತಿಂಗಳಲ್ಲಿ ಸ್ವರಾಜ್ಯವು ದೊರೆಯದಿದ್ದಲ್ಲಿ ನೀವು ಏನು ಮಾಡುವಿರೆಂತ ನನಗೆ ಕೇಳುವದರಲ್ಲಿ ಬಂತು. ನಾನು ಅಂದದ್ದು — ಹಿಂದುಸ್ಥಾನದಮೇಲೆ ನನಗೆ ಇಷ್ಟು ನಂಬಿಗೆಯುಂಟಲ್ಲ. ಈಗಿನ ಡಿಸೆಂಬರದೊಳಗಾಗಿ ಹಿಂದುಸ್ಥಾನವು ಸ್ವರಾಜ್ಯವನ್ನು ಗಳಿಸೇ ಗಳಿಸುವದು ಎಂತ ನಾನು ಎಣಿಸಲೇ ಬೇಕು. ನಾನು ಜನವರಿಯಲ್ಲಿ ಏನು ಮಾಡೇನೆಂಬುವದು ನನ್ನಿಂದ ಈಗ ಹೇಳಲಾಗುವದಿಲ್ಲ. ನಾನು ಜೀವಂತವಿದ್ದಲ್ಲಿ ಒಂದೇ ಜನರ ಕಡೆಯಿಂದ ... ಎಲ್ಲಾದರೂ ಶಾಂತವಾದ ಜಾಗದಲ್ಲಿ ... ಅಥವಾ ಜನರ ಸ್ವರಾಜ್ಯ ತಂತ್ರವನ್ನು ಕೂಡ ... ವದಕ್ಕೆ ... ಮೆಟ್ಟಿಗೆ ನೆರವಾಗ ... ಒಂದಾನುವೇಳ್ಯ ಈ ವರ್ಷದಲ್ಲಿ ಸ್ವರಾಜ್ಯವನ್ನು ದೊರೆಕಿಸಲಿಕ್ಕೆ ನನ್ನಿಂದ ಕೂಡಲಿಲ್ಲವಾದರೆ ಮುಂದಿನ ವರ್ಷ ... ಇರುವದು ನನಗೆ ... ಕರವಾಗಿ ಕಾಣಲಿಕ್ಕಿಲ್ಲ ... ನನ್ನ ... ಕಷ್ಟವಾಗುವ ಸಂಭವವುಂಟಲ್ಲ. ಒಂದಾನ ವೇಳ್ಯ ನನಗೆ ... ವೂ ಬರಬಹುದು. ಒಂದಾನ ವೇಳ್ಯ ... ಇಚ್ಛೆ ... ನಾನು ಮಾಡಬಹುದು.

ಹಿಂದುಸ್ಥಾನದ ... ನ ಸ್ಥಿತಿ ... ನಾನು ಇಷ್ಟು ಸಹಿಸಿದ್ದೇನಲ್ಲ. ಆದರ ... ಗಳಿಂದ ನಾನು ... ಹೊಂದಲಿಲ್ಲವಾದರೆ ಅದಕ್ಕೆ ಇಷ್ಟೇ ಕಾರಣವುಂಟು. ಏನಂದರ ನಾನು ಜನತೆಯಲ್ಲಿ ಹುಟ್ಟಿರುವ ಆಸೆಯ ಬಲದಮೇಲೇನೇ ನಾನು ಬದುಕಿರುವೆನು. ಈ ದಿನ ನಾವು ಆತ್ಮಶುದ್ಧರಾಗುವೆವು. ಈ ಹೊತ್ತು ಕೋಟಿಗಟ್ಲೆ ಜನರಲ್ಲಿ ಸ್ವಲ್ಪವಾದರೂ ಚೈತನ್ಯವು ... ಗುವದು. ಅವರಿಗೆ ... ಎಳೆಯುವದರಿಂದಲೇ ನಾನು ಬದುಕಿರುವೆನು ... ಪೂರ್ಣ ಹೊಂದುವರೆ ಒಂದು ವರ್ಷವು ಸಾಕೆಂತ ನಾನು ಎಣಿಸುತ್ತೇನೆ ... ಡಿಸೆಂಬರದಲ್ಲಿ ... ವರ್ಷದ ಮುದತು ... ಮಾಡುವವನೂ ಹೇಳುವವನೂ ನಾನೇ ಒಬ್ಬನಾಗಿದ್ದೆ.

ಡಿಸೆಂಬರದಲ್ಲಿ ಎಲ್ಲವರೂ ಆ ವಚನವನ್ನು ಪುನಃ ... ಚ್ಚರಿಸಿದರು. ... ಸಭೆಯು ತನ್ನ ವಚನವನ್ನು ಕಾಪಾಡದಿದ್ದರೆ ನನ್ನಂಥವನ ಯಾವ ಹಾದು ಆ... ... ಹೇಳಲಿ? ... ಸಭೆಯು ತನ್ನ ... ನಗೆದರೆ ... ನನ್ನ ... ಹೊಂದಿತೆಂತಲೇ ... ಸಭೆಯ ಸಂಬಿಗೆಯಮೇಲೆ ನಾನು ಈ ... ಬರೆದೆನು. ಈಗ ... ಕಾರವಾಗದೇ ಹೋದಲ್ಲಿ ಮುಂದೇನು ಗತಿ? ಜನವರಿ ಮೊದಲನೇ ತಾರೀಖಿಗೆ ಸ್ವರಾಜ್ಯವು ... ಗದಿದ್ದಲ್ಲಿ ನನಗೆ ಎಷ್ಟರಮಟ್ಟಿಗೆ ದುಃಖವಾಗುವದೋ ಅಷ್ಟೇ ಪ್ರಮಾಣದ ... ಎಲ್ಲರಿಗೂ ... ನನಗೆ ಕಾಣುತ್ತದೆ. ಸ್ವರಾಜ್ಯದ ... ಇಲ್ಲದ ... ವೆಯು ... ಎಲ್ಲರಿಗೂ ಒಂದೇ ರೀತಿಯಾಗಿ ... ದಿಸುವದು.

ಇದರ ಅರ್ಥವು ನಿರಾಶಾವಾದವಲ್ಲವೇ? ಎಂತ ಒಬ್ಬ ಮಿತ್ರನ ... — ... ಆದರ ನನಗೆ ... ರಲ್ಲಿ ನಿರಾಶಾವಾದವು ಎಷ್ಟು ಮಾತ್ರಕ್ಕೂ ಕಾಣುವದಿಲ್ಲ. ಆದರೆ ಅದರಲ್ಲಿ ... ಒಳಗೊಂಡದ್ದನ್ನು ನೋಡುತ್ತೇನೆ. ಅದರಲ್ಲಿ ... ದೃಷ್ಟಿಯು ಇದ್ದದ್ದನ್ನು ನೋಡುತ್ತೇನೆ. ಎಲ್ಲಿ ಸೇವೆಯ ... ಇಲ್ಲವೋ ಅಲ್ಲಿ ಸೇವೆಯು ... ಉಪಯೋಗವೇ? ಯಾವ ಜೀವಿತದಲ್ಲಿ ಲಾಭವಿಲ್ಲವೋ ಆ ಜೀವಿತದಲ್ಲಿ ಉಪಯೋಗವೇನು? ಶರೀರವು ಜರ್ಜರವಾದಲ್ಲಿ ಅದನ್ನು “ವಸಂತ ಮಾಲತಿ” ಯಂಥ ಔಷಧಿಯಿಂದ ಕಾಪಾಡಿಕೊಳ್ಳುವದರ ಬದಲು ಗಂಗಾಜಲ ಪ್ರಾಶನದಿಂದ ಅದನ್ನು ಕ್ಷೀಣಮಾಡಿ ನಾಶಮಾಡಿಸುವದು ಏನು ಕೆಡಕು? ನನ್ನ ಬಾಯಿಯಿಂದ ... ಬೇರೆ ಏನೂ ... ಹೊರಬರಲಿಕ್ಕಿಲ್ಲವು. ಸ್ವದೇಶೀ ವ್ರತ ನಡಿಸಿರಿ ಸ್ವರಾಜ್ಯ ಗಳಿಸಿರಿ ಇದಷ್ಟಲ್ಲದೇ ಬೇರೆ ಏನೂ ನನಗೆ ಸೊಬಸದಿದ್ದಲ್ಲಿ ನನಗೆ ಬೇಸರವೇನು?

ನಾವು ಈಗ ... ಮೆಟ್ಟಿಗೆಯ ಮೇಲೆ ನಿಂತಿರುವೆವು. ಇಲ್ಲಿ ಸ್ವಲ್ಪ ... ರುಕೊಂಡ ಶಕ್ತಿ ಗಳಿಸಿದ ಹೊರತು ಮುಂದೆ ಹೆಜ್ಜೆ ಇಡುವದೆಂದರೆ ಕೆಳಗೆ ಬೀಳುವದೇ ಸರಿ ನನಗೆ ಒಳ್ಳೇ ಜ್ಞಾಪಕದಲ್ಲುಂಟು. ಏನೆಂದರೆ ನಾನು ಒಮ್ಮೆ ಸಿಂಹಗಡದ ಘಟ್ಟವನ್ನು ಏರ ಹೋಗ ಒಂದು ... ಯಲ್ಲಿ ನನ್ನ ಕಾಲು ಸೋತು ಹೋಗಿ ಮುಂದೆ ಹೆಜ್ಜೆ ಇಡಲಿಕ್ಕೇ ಆಗಲಿಲ್ಲ. ಅಲ್ಲಿ ಉಸುರುಕೊಂಡು ಸ್ವಲ್ಪ ಧೈರ್ಯ ಮಾಡಿಕೊಂಡಮೇಲೆ ನೇ ಮುಂದೆ ಕಾಲಿಡಬಂತು.

ಈ ಹೊತ್ತು ನಮ್ಮ ಸ್ಥಿತಿಯು ಕೂಡಾ ಹಾಗೇ ಆಗಿರುವದು. ಸ್ವದೇಶೀ ವ್ರತವು ಪೂರ್ಣ ಹೊಂದಿದ ಹೊರತು ಮುಂದೆ ಸಾಗುವರೆ ನಮಗೆ ಶಕ್ತಿಯೇ ಬರಲಾರದು. ... ದರಿಂದಲೇ ನನ್ನ ಬಾಳಿಕೆಯೂ ಸಮಾಜದಲ್ಲಿ ನನ್ನ ಅಸ್ತಿತ್ವವೂ ಸ್ವದೇಶೀಯಮೇಲೆ ಅವಲಂಬಿಸಿರತಕ್ಕದೆ. ಇದೇ ನನ್ನ ಚಿಕಿತ್ಸೆಯು. ಇದೇ ನನ್ನ ಈಹೊತ್ತಿನ ಮನೋದಶೆಯು. ನಾಳೆಯ ಮಾತು ಒಬ್ಬ ಪರಮೇಶ್ವರನೇ ಬಲ್ಲನು.

—ನವಜೀವನ

ಕಾನಡಾವೃತ್ತ.

ಗುರುವಾರ, ತಾರೀಖು ೩ ಮಾಹೆ ನವಂಬರ ೧೯೨೧

ದೇಶಬಂಧು
ಗಂಗಾಧರರಾವ ದೇಶಪಾಂಡೆ.

ಲೋಕಮಾನ್ಯರ ನಿಸ್ಸೀಮ ಭಕ್ತರಾದ, ಕರ್ನಾಟಕದ ತಿಲಕರಾದ, ಮಹಾತ್ಮಾ ಗಾಂಧಿಗಳ ಅತ್ಯಂತ ಪ್ರೀತಿಯ ಪಟ್ಟಶಿಷ್ಯರಾದ, ಲೋಕನಾಯಕರೊಳಗಿನ ಒಬ್ಬ ಅಗ್ರಣಿಗಳಾದ, ಕರ್ನಾಟಕ ಪ್ರಾಂತದ ಕೊಂಗ್ರೆಸ ಕಮಿಟಿಯ ಸನ್ಮಾನ್ಯ ಅಧ್ಯಕ್ಷರಾದ ದೇಶಬಂಧು ಗಂಗಾಧರರಾವ ದೇಶಪಾಂಡೇರವರು ಸರ್ಕಾರದ ದಬ್ಬಾಳಿಕೆಯ ಜಾಲಿನಲ್ಲಿ ಸಿಲುಕಿ, ರಾಜದ್ರೋಹ ಮಾಡಿದರೆಂಬ ಆಕ್ಷೇಪದಮೇಲೆ ಗಿರಫದಾರರಾದ ಸುದ್ದಿಯನ್ನು ಕೇಳಿದು, ಕರ್ನಾಟಕವು ಅವರ ಹೊಗಳಿಕೆಯ ಧನ್ಯವಾದಗಳನ್ನು ಹಾಡುತ್ತಿರುವಾಗ, ಸದ್ಯದ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ಅತ್ಯಂತ ವಿಷಾದದಿಂದ ಹೇಳಹ[illegible]ಸುತ್ತಿರುವದು. ಗಿರಫದಾರಿಯ ವಾರಂಟು ಹೊರಟ ಸುದ್ದಿಯನ್ನು ಕೇಳಿದಂದಿನಿಂದ ವಾರಂಟನ್ನು ಆನಂದದಿಂದ, ವಿನಯಶೀಲತೆಯಿಂದ ತಾವಾಗಿ ಸ್ವೀಕರಿಸಿ, ಕೋರ್ಟಿನ ಮುಂದೆ ಆರೋಪಿತರಾಗಿ ಇನ್ನು ತನಕ ಖಟ್ಲೆ ನಡಿಸುತ್ತಿರುವಾಗ, ಸತ್ಯಶೀಲ ದೇಶಪಾಂಡೆಯವರು, ಎಷ್ಟು ಉದಾತ್ತ ವರ್ತನವನ್ನು ತೋರಿಸಿದ್ದಾರೆಂದು ವಾಚಕರು ಅರಿತಿರಲಿಕ್ಕೆ ಸಾಕು. ಅವರ ಗಿರಫದಾರಿಯ ಪರವಾಗಿ, ಮಹಾತ್ಮಾಗಾಂಧಿಗಳು ತಮ್ಮ ಯಂಗ ಇಂಡಿಯಾ ಪತ್ರಿಕೆಯ ಕಳೆದ ೨೦ನೇ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿದ ವಿಚಾರಗಳನ್ನು ಎಲ್ಲರೂ ಮನನಮಾಡಬಹುದು. ಮಹಾತ್ಮರು ಹೇಳುವದೇನಂದರೆ— “ಸರಕಾರಿ ಬಹುಮಾನವನ್ನು ಪಡೆದ ಜನರ ನಾಮಾವಳಿಯು ದಿನೇ ದಿನೇ ಉದ್ದವಾಗುತ್ತ ನಡೆದರೆ ಒಂದು ಬದಿಯಿಂದ ಸರಕಾರದಿಂದ ದೊರೆತ ಕಿತಾಬುಗಳನ್ನು ನಾವು ತ್ಯಜಿಸುತ್ತಿರುವಾಗ, ಮತ್ತೊಂದು ಬದಿಯಿಂದ ನಮಗೆ ನಿಜವಾದ ಬಹುಮಾನಗಳನ್ನು ಕೊಡಿರಿ, ಎಂದು ಹೇಳದಂತೆ, ಜನರು ಸರಕಾರದವರ ಕೂಡ ಬೇಡಿಕೊಳ್ಳುತ್ತಿರುವದಂತಾಗಿದಲ್ಲವೇ? ಇಂಥ ದೊಡ್ಡ ಬಹುಮಾನವು ಈಗಲೇ ದೇಶಬಂಧು ದೇಶಪಾಂಡೆಯವರ ಪಾಲಿಗೆ ಬಂದಿದೆ. ಇವರ ಮತ್ತು ಬೇರೆ ಕೆಲವರ ಹೆಸರಿನ ಮೂರ್ತಿಗಳು ನನ್ನ ಮನಸ್ಸಿನ ಮುಂದೆ ಎದುರಾಗಿ ನಿಂತುಕೊಳ್ಳಲು, ದೇಶಕಾರ್ಯದಲ್ಲಿ ನಮಗೆ ನಿಶ್ಚಿತವಾಗಿ ಯಶಃಪ್ರಾಪ್ತಿಯಾಗುವದೆಂದು ಮನಸ್ಸು ಆಶ್ವಾಸಿಸುತ್ತದೆ. ನಾವು ಮಾತ್ರ ನಮ್ಮ ಸ್ಥೈರ್ಯವನ್ನು ಕಾದುಕೊಳ್ಳಬೇಕು. ಸರಕಾರದವರ ವಾರಂಟುಗಳು ನಮಗೆ ಹಿಡಿಯುವಾಗ, ಏನೂ ಗಲಬಿಲಿ ಮಾಡದೆ, ಏನೂ ಮನಸ್ಸಂತಾಪಕ್ಕೆ ಎಡೆ ಕೊಡದೆ, ನಾವು ಅವುಗಳನ್ನು ಸತ್ಕರಿಸಿದರೆ, ನಮಗೆ ಯಶಃಪ್ರಾಪ್ತಿಯಾಗದೆ ಎಂದೂ ಇರದು, ಎಂದು ನಮ್ಮ ಪಕ್ಷಕ್ಕೆ ನಮಗ ಆಶ್ವಾಸನೆಯು ಉಂಟಾಗುವದು. ಎಲ್ಲ ಪ್ರಡಾರಿಗಳನ್ನು ತುರುಂಗದೊಳಗೆ ಹಾಕಿದರೆ, ನಮ್ಮದು ಮುಂದೇನು ಗತಿ? ಎಂದು ದಿನಾಲು ಹಲವರು ಪತ್ರದ್ವಾರಾ ನನಗೆ ಕೇಳುತ್ತಿರುವರು. ಇಂಥ ಪ್ರಶ್ನಿಕರು ಸ್ವರಾಜ್ಯದ ವಿಷಯವಾಗಿ ತಮ್ಮ ಅಪಾತ್ರತೆಯನ್ನಲ್ಲಾದರೂ, ಅಶ್ರದ್ಧೆಯನ್ನು ವ್ಯಕ್ತಪಡಿಸುತ್ತಿರುವರೆಂದು ಹೇಳಬೇಕು. ಎಲ್ಲ ಮುಖಂಡರು ತೀರಿದರೇನಾಗುವದು? ಅವರು ತೀರಿದರೆ, ಇಲ್ಲವೆ ಸೆರೆಮನೆಯೊಳಗ ಸೇರಿದರೆ, ಇಂದ ಪ್ರಸಕ್ತಿಯಲ್ಲಿಯೂ ನಮ್ಮ ಕೆಲಸವನ್ನು ಅವ್ಯಾಹತವಾಗಿ ನಾವು ಮುಂದೆ ಸಾಗಿಸುವದರಲ್ಲಿಯೇ ನಮ್ಮ ಸ್ವರಾಜ್ಯದ ಪಾತ್ರತೆಯು ಇದೆಂದು ಕಂಡುಬರುವದು. ಪ್ರಡಾರಿಗಳು ಬಂದೀವಾಸದೊಳಗೆ ಬಿದ್ದರೆಂಬ ವಿಚಾರದ ಸ್ಫುರಣದಿಂದ ನಾವು ನಿಜವಾಗಿ ಹೆಚ್ಚು ಸುವ್ಯವಸ್ಥಿತ ರೀತಿಯಿಂದ ಇಮ್ಮಡಿ ಉತ್ಸಾಹದಿಂದ ಕೆಲಸಕ್ಕೆ ತೊಡಗಬೇಕು. (ಕಳೆದ ತಿಂಗಳ) ೫ ನೇ [illegible] ನಾವೂ ಕೈದು ಮಾಡಲ್ಪಡುವೆವೆಂದು ಗಟ್ಟಿ ವದಂತಿಯು ಹಬ್ಬಿತ್ತು. ಈ ಸುದ್ದಿಯು ನಿಜವಾಗಲೆಂದು ನನ್ನೊಬ್ಬ ಮಿತ್ರನಿಗೆ ನಿರಾಶೆಯಾಗಿದೆ. ಇದರಿಂದಲೇ [illegible] ಆತ್ಮವಿಶ್ವಾಸವೂ, ಕಾರ್ಯನಿಷ್ಠೆಯೂ ಪ್ರಬಲವಾಗಿವೆಯೆಂದು ಕಂಡುಬರುವದಿಲ್ಲವೇ? ಯಾವ ಬಗೆಯಿಂದ, ಯಾವದೇ ವಿಧದ ಅನ್ಯ ಸಹಾಯವಿಲ್ಲದೆ, ನಾವು ಉಸಿರಾಡುತ್ತೇವೆಯೋ, ಅದೇ ರೀತಿಯಿಂದ ಪರರ ಸಹಾಯವಿಲ್ಲದೆ, ನಮ್ಮ ಕಾಲಿನಮೇಲೆ ನಾವು ಎದ್ದು ನಿಲ್ಲತಕ್ಕದ್ದು. ಕರ್ನಾಟಕದ ವಿಷಯವಾಗಿ, ನನ್ನಲ್ಲಿದ್ದ ಕಲ್ಪನೆಗಳು ನಿಜವಾಗಿದ್ದರೆ, ದೇಶಬಂಧು ಗಂಗಾಧರರಾಯರ ಅಟಕೆಯಿಂದ, ಇಲ್ಲವೇ ಬಂದಿವಾಸದಿಂದ, ಪರದೇಶೀ ಬಟ್ಟೆಗಳಮೇಲೆ ಜನರು ಪೂರ್ಣವಾಗಿ ಬಹಿಷ್ಕಾರವನ್ನು ಇಡದೆ ಇರರು ಮತ್ತು ಖಾದಿಯ ಉತ್ಪತ್ತಿಯು ಬೆಳೆಯಲೇ ಬೇಕು. ತುರುಂಗದೊಳಗೆ ಹೋದ ಮತ್ತು ಹೋಗುವ ಪ್ರಡಾರಿಗಳ ಬಿಡುಗಡೆಯಾಗುವತನಕ, ಕರ್ನಾಟಕವು (ದೇಶಕಾರ್ಯವನ್ನು ತ್ಯಜಿಸಿ) ಸುಮ್ಮಗೆ ಕೂಡ್ರುವದು ಶಕ್ಯ ಸಂಗತಿಯಲ್ಲ.”

ದೇಶಬಂಧು ದೇಶಪಾಂಡೆಯವರ ಮೇಲಿನ ಆರೋಪದ ತನಿಖೆಯು ಕಾಯಿದೆಯಂತೆ ಸರಾಸ್ರಾಗಿ ಕೋರ್ಟಿನ ಮುಂದೆ ನಡೆಯುವದು. ಕಾಯಿದೆಯ ದೃಷ್ಟಿಯಿಂದ ಕೋರ್ಟು ತಮಗೆ ಯುಕ್ತಕಂಡ ನಿರ್ಣಯವನ್ನು ಕೊಡುವದು. ಅದರ ವಿಷಯವಾಗಿ ನಮಗೆ ಸದ್ಯಕ್ಕೇನೂ ಬರೆಯುವದಿಲ್ಲ. ಆದರೆ, ಇಂಥ ಮಹಾರಥಿ ಲೋಕಾಗ್ರಣಿಗಳ ಗಿರಫದಾರಿ, ಖಟ್ಲೆ ತನಿಖಿ, ಇವೆಲ್ಲವುಗಳಲ್ಲಿ ಒಳಗೊಂಡ ರಾಜಕೀಯ ಧೋರಣದ ವಿಷಯವೇ ಲೋಕಮತಕ್ಕೆ ಪ್ರಧಾನ ವಿಷಯವಾಗಿರುವದು. ವಕ್ತೃಗಳು ತಮ್ಮ ಭಾಷಣಗಳಿಂದ ಪಸರಿಸುತ್ತಿರುವರೆಂದು ಹೇಳುವ ಸರಕಾರದ ವಿಷಯ ಅಪ್ರೀತಿಯೂ, ಅಸಂತೋಷವೂ ಈ ಭಾಷಣಗಳಿಂದ ಹೆಚ್ಚಾಗುತ್ತದೋ, ಇಂಥ ರಾಜಕೀಯ ಖಟ್ಲೆಗಳಿಂದ ಹೆಚ್ಚಾಗುತ್ತದೋ? ಎಂಬುದನ್ನು ಸರಕಾರದ ಮಂತ್ರಿಮಂಡಲದೊಳಗಿನ ಮುತ್ಸದ್ದಿಗಳು ಇತಿಹಾಸದ ಪೂರ್ವಾನುಭವದಿಂದ ಕಂಡುಹಿಡಿಯಬೇಕಾಗಿತ್ತು. ಆದರೆ, ಅದು ಸರಕಾರದ ಸಲ್ಲಾಗಾರರಿಗೆ ಒಪ್ಪಿದ ಕೆಲಸವು. ಲೋಕಮತದ ದೃಷ್ಟಿಯಿಂದ ದೇ। ದೇಶಪಾಂಡೆಯವರಂಥ ಮುಖಂಡರ ಬಂದಿವಾಸದ ಅಂತಿಮ ಕಾರ್ಯಕಾರಣಗಳ್ಯಾವವೆಂದು ಜನತೆಯು ಶೋಧಿಸಬೇಕಾಗಿದೆ. ಅವುಗಳ ಮೀಮಾಂಸೆಯನ್ನು ಮಹಾತ್ಮಾ ಗಾಂಧಿಗಳು ತಮ್ಮ ಪ್ರತಿಭಾ ಸಂಪನ್ನ ನುಡಿಗಳಿಂದ ಮಾಡಿರುವರು. ದೇಶದೊಳಗಿನ ಮುಖಂಡರ ಬಂದಿವಾಸದಿಂದ, ನಮ್ಮೊಳಗಿನ ಆತ್ಮವಿಶ್ವಾಸವೂ, ಕಾರ್ಯನಿಷ್ಠೆಯೂ ಬಹು ಪ್ರಮಾಣದಿಂದ ವೃದ್ಧಿಗೊಂಡರೆ ಮಾತ್ರ, ಮುಂದಾಳುಗಳು ಸಹಿಸಿದ ಕಷ್ಟಗಳು ನಿಜವಾಗಿ ಸಫಲವಾಗುವವು. ಈ ಪರಿಣಾಮವು ಕೈಗೂಡದಿದ್ದರೆ, ಅದು ಅನುಯಾಯಿಗಳಾದ ನಮ್ಮದೆ ದೋಷವಾಗಿರುವದು. ಪ್ರಡಾರಿಗಳ ಕಷ್ಟಗಳನ್ನು ನಿರರ್ಥಕವಾಗಿ ಅವರಿಗೆ ನಾವು ಸಹಿಸಲಿಕ್ಕೆ ಹಚ್ಚಿದಂತಾಗುವದು. ಅವರ ಆತ್ಮಯಜ್ಞದ ಅನಂತ ಕಷ್ಟಗಳನ್ನು ಸಫಲವಾಗುವಂತೆ, ನಾವು ನಮ್ಮ ದೀರ್ಘೋದ್ಯೋಗದಿಂದ, ಸ್ವದೇಶಿಯಿಂದ, ಬಹಿಷ್ಕಾರದ ಅಸಹಯೋಗದಿಂದ ಮುಕ್ತಿಪಟ್ಟ ಸ್ಫೂರ್ತಿಯಿಂದ ಸತ್ಕರಿಸದಿದ್ದರೆ, ‘ಆತ್ಮೈವರಿಪುರಾತ್ಮನಃ’ ಎಂಬ ಭಗವದುಕ್ತಿಯನ್ನು ಹತಭಾಗಿಗಳಾದ ನಾವು ಸಕ್ರಿಯವಾಗಿ ಆಚರಿಸಿದಂತಾಗುವದು. ನಮ್ಮಲ್ಲಿ ಅಹಿಂಸೆಯೂ ಇರಬೇಕು, ವಿನಯಶೀಲತೆಯೂ ಇರಬೇಕು, ನಿಸ್ಪೃಹತೆಯೂ ಬೇಕು. ಅವುಗಳೊಂದಿಗೆ ದೇಶಕಾರ್ಯಕ್ಕಾಗಿ ಅನಂತ ಕಷ್ಟಗಳನ್ನು ಸಹಿಸುವ ಸಹನಶೀಲತೆಯೂ ದೀರ್ಘೋದ್ಯೋಗಿತೆಯೂ ಅವಶ್ಯವಾಗಿ ಬೇಕು. ನಮ್ಮ ನಿಪ್ರಗಳು ನಾವಾಗಿ ನಮ್ಮ ಬಂಧುಗಳು ನಾವಾಗಬೇಕು. ಆತ್ಮೋದ್ಧಾರವು ನಮ್ಮ ಧ್ಯೇಯವಲ್ಲವೇ? ಇಂಥ ವಿಚಾರ ಜಾಗ್ರತಿಯು ನಮ್ಮಲ್ಲಿ ಉಂಟಾದರೆ, ಅದು ನಿಸ್ಸೀಮ ಸ್ವದೇಶೀ ವ್ರತದ ಪರಿಪೂರ್ಣವಾದ ಆಚರಣೆಯಲ್ಲಿ ಇಳಿದರೆ, ನಮ್ಮ ದೇಶಪಾಂಡೆಗಳ, ನಮ್ಮ ಅಲ್ಲೀ ಬಂಧುಗಳ, ನಮ್ಮ ಜಗದ್ಗುರು ಶಂಕರಾಚಾರ್ಯರ [illegible] ಕಷ್ಟಗಳು ನಿಜವಾಗಿ

ಸಫಲವಾಗುತ್ತಿತ್ತು. ಅಷ್ಟೆ ಅಷ್ಟರಮಟ್ಟಿಗೆ ಸಫಲವಾದರೂ, ಲೋಕಮತದ ತೃಪ್ತಿಯಾಗುವದು, ಇದೇ ಈಗಿನ ರಾಷ್ಟ್ರದ ಆಕಾಂಕ್ಷೆಯು.

ಸ್ಫುಟ ಸೂಚನೆಗಳು.

೧. ಕರ್ನಾಟಕದ ಅಭಿವೃದ್ಧಿ ಜನತೆಯು ಆತಂಕಕಾರಣಗಳನ್ನು ಪ್ರಕ್ಷುಬ್ಧ ಮಾಡಿ ಬಿಟ್ಟಿರುವ, ಮತ್ತು ಪ್ರಸ್ತುತ ಎಲ್ಲ ಕಡೆಯಲ್ಲಿ ಚರ್ಚೆಯ ವಿಷಯವಾಗಿರುವ ಧಾರವಾಡದ ಗೋಳೀಬಾರ ಖಟ್ಲೆಯೊಳಗಿನ ನ್ಯಾಯಾಧೀಶ ಪ್ರೊಟರಫೀಲ್ಡರ ತೀರ್ಪಿನ ಸಂಪೂರ್ಣ ಪ್ರತಿಯು ಈಗ ನಮ್ಮ ಹಸ್ತಗತವಾಗಿದ್ದು, ಅವನ್ನು ನಾವು ಸಮಗ್ರ ಓದಿ ನೋಡಿರುವೆವು. ಆ ಜಡ್ಜಮೆಂಟು ಹೆಚ್ಚೆಚ್ಚು ಓದಿದ ಹಾಗೆ, ನ್ಯಾಯಾಧೀಶರ ಗ್ರಹದ ಏಕಪಕ್ಷಾಭಿನಿವೇಶವು ಅಧಿಕಾಧಿಕ ವ್ಯಕ್ತವಾಗುತ್ತದೆಂದೂ, ಅವರ ಬಹಳ ಧಾರವಾಡದ ವಾತಾವರಣದಿಂದ ಅಲಿಪ್ತ ಉಳಿದಂಥ ಬೇರೊಬ್ಬ ನಿಪುಣ ನ್ಯಾಯಾಧೀಶರಾಗಲಿ, ಅಥವಾ ಸ್ವತಂತ್ರ ಕಮಿಶನು ಆಗಲಿ ಈ ಚೌಕಶಿಯನ್ನು ನಡೆಸಿದ್ದರೆ, ತೀರ್ಪು ಈಗಾಗದಂತೆ ಆಗುತ್ತಿದ್ದಿತ್ತೆಂದು ಅನಿಸಲಿಕ್ಕೆ ಕಾರಣವಿದೆಂದೂ, ಹೇಳುವದು ಯಾರಿಗಾದರೂ ಸಹಜಪ್ರಾಪ್ತವು. ಪ್ರೊಟರಫೀಲ್ಡ ಸಾಹೇಬರ ಜಡ್ಜಮೆಂಟು ಯಾರಾದರೂ ಓದಿ ನೋಡಿದರೆ, ಅದರೊಳಗಿನ ಯುಕ್ತಿವಾದವೂ, ಅವರು ಗೊತ್ತುಪಡಿಸಿದ ಹಲವು ನಿರ್ಣಯಗಳೂ, ಎಷ್ಟು ಸದೋಷವಾಗಿವೆಯೆಂದು ಕಂಡುಹಿಡಿಯಲಿಕ್ಕೆ ಶ್ರಮ ಪಡೆಯಬೇಕಾಗಿಲ್ಲ. ಮನುಷ್ಯಪ್ರಾಣಿಯು ಸ್ವಭಾವತಃ ಸ್ಖಲನಶೀಲನು, ಆದರೆ ಕಣ್ಣುಮುರಿಗೆ ಬಟ್ಟೆಯೂ ಪಟಲವೂ ಬರಗೊಡದೆ, ನಿಷ್ಪಕ್ಷತೆಯಿಂದ ನೋಡಿದರೆ, ಸತ್ಯದ ಪ್ರಕಾಶವು ದೃಗ್ಗೋಚರವಾಗಿ ಯಥಾರ್ಥವಸ್ತುಸ್ಥಿತಿಯ ಜ್ಞಾನವಾಗುವದು ಅಸಾಧ್ಯವಾದ ಮಾತಲ್ಲ. ಈ ದೃಷ್ಟಿಯಿಂದಲೇ, ನ್ಯಾಯಾಧೀಶರ ಆ ತೀರ್ಪಿನೊಳಗಿನ ಜನರಿಗೆ ಅಸಮಾಧಾನಕಾರಕವಾಗಿ ಕಂಡುಬಂದ ಒಂದೆರಡು ಮುದ್ದೆಗಳನ್ನು ಇಲ್ಲಿ ಚರ್ಚಿಸಲಪೇಕ್ಷಿಸುವೆವು.

೨. ಗೋಳೀಬಾರದ ಸಮರ್ಥನೆಗಾಗಿ, ಫಿರ್ಯಾದಿಪಕ್ಷದಿಂದ ಮುಂದಿಡಲ್ಪಟ್ಟ ಹಕೀಕತ್ತಿನ ವೃತ್ತಾಂತವನ್ನು ಅನುಲಕ್ಷಿಸಿ, ಕಾಂಗ್ರೆಸ ಕಮಿಶನದವರಾಗಲಿ, ಅಲಿಪ್ತರಾಗಿ ನೋಡುವ ಸ್ವತಂತ್ರಜನರಾಗಲಿ ಕೇಳುವ ಒಂದೆರಡು ಮಹತ್ವದ ಪ್ರಶ್ನೆಗಳೆಂದರೆ – (೧) ಈ ೩೭ ಆರೋಪಿಗಳೆಲ್ಲರು ದಂಗೆಯಲ್ಲಿ ಸೇರಿದ್ದವರಾದರೆ, ಅವರಲ್ಲಿ ಇಬ್ಬರು ಬಿಟ್ಟು ಬಾಕಿ ೩೫ ಜನರು ಯಾವದೇ ರೀತಿಯಲ್ಲಿ ಘಾಯ ಹೊಂದಿರುವದಿಲ್ಲ, ಇದು ಹ್ಯಾಗೆ? (೨) ಸಶಸ್ತ್ರ ಪೋಲೀಸರು ಸುಮಾರು ೧೦೦ ಮಂದಿ ಹಾಜರಿದ್ದಲ್ಲಿ, ಜನರು ತಟ್ಟಿಗೆ ಬೆಂಕಿ ಹಚ್ಚುವ ವಗೈರೆ ಪ್ರತ್ಯಕ್ಷ ಅತ್ಯಾಚಾರಗಳನ್ನು ಪ್ರಯತ್ನಿಸಿದ್ದಾದರೆ, ಅಲ್ಲಿ ತಕ್ಷಣವೇ ಯಾರಿಗೂ ಕೈದು ಮಾಡಲಿಲ್ಲ, ಇದರ ಕಾರಣವೇನು? (೩) ಫಿರ್ಯಾದಿಪಕ್ಷದವರು ಪ್ರತಿಪಾದಿಸುವಂತೆ, ಸಾವಿರಗಟ್ಟಲೆ ಜನರು ದಂಗೆಯಲ್ಲಿ ಸೇರಿ ಮೂರು ತಾಸುಗಳವರೆಗೆ ಪೋಲೀಸರ ಮೇಲೆ ದೊಡ್ಡ ದೊಡ್ಡ ಕಲ್ಲುಗಳ ಮಳೆಸುರಿಸಿದ್ದಾದರೆ, ಬಹಳಜನ ಪೋಲೀಸರಿಗೆ ಉಗ್ರಸ್ವರೂಪದ ಘಾಯಗಳಾಗಿರಬೇಕಾಗಿದ್ದವು. ಹೀಗಿನ ಪ್ರಕಾರವು ಆಗಿರುತ್ತದೋ? — ಇವುಗಳೊಳಗಿನ ಮೊದಲನೇ ಪ್ರಶ್ನೆಯ ವಿಷಯದಲ್ಲಿ ಲಕ್ಷದಲ್ಲಿಡಬೇಕಾದ ಸಂಗತಿಯಾದರೆ, ದಂಗೆಯ ಸ್ಥಳದಲ್ಲಿ ನಿರ್ವಿವಾದವಾಗಿ ಹಾಜರಿದ್ದರೆಂಬವರೇ ಇಬ್ಬರು ಘಾಯ ಹೊಂದಿದವರಾಗಿದ್ದು, ಯಾವ ರೀತಿಯಲ್ಲಿಯೂ ಘಾಯವಾಗದೆ, ಇರುವ ಉಳಿದ ೩೫ ಜನರು ದಂಗೆಯ ಮೇಳದಲ್ಲಿ ಕಾಣಿಸಿದ್ದ ಕಥೆಯುಳ್ಳವರಾಗಲಿ, ಇಲ್ಲವೆ ಬೇರೆಕಡೆಯಲ್ಲಾಗಲಿ ಹಾಜರಿದ್ದರೆಂದು, ಕಾಂಗ್ರೆಸ ಕಮೀಶನಿನ್ನ ಮುಂದೆ ಪುರಾವೆಯು ದಾಖಲ ಆಗಿದೆ. ಇವರು ದಂಗೆಯಲ್ಲಿ ಸೇರಿದ್ದವರಾದರೆ ಇವರಿಗೆ ಗುಂಡು ತಾಗಿ ಯಾವದೇ ರೀತಿಯಲ್ಲಿ ಘಾಯವಾಗದೆ ಇವರು ಉಳಿದ ಬಗೆ ಹೇಗೆ ಎಂಬ ಪ್ರಶ್ನೆಗೆ ಪ್ರೊಟರಫೀಲ್ಡ ಸಾಹೇಬರ ಸಮರ್ಪಕ (?) ಉತ್ತರವೇನೆಂದರೆ, "ಈ ಆರೋಪಿಗಳು ದಂಗೆಯಲ್ಲಿ ಹಾಜರಿದ್ದರೂ ಇವರು ಹಿಂಬದಿಗೆ ನಿಂತುಕೊಂಡು ಮುಂದಿನ ಜನರಿಗೆ ಚೇತಹಿಸುತ್ತಿದ್ದರು. ಆದುದರಿಂದ ಇವರು ಘಾಯಹೊಂದಿರುವದಿಲ್ಲ!" ಇಂಥ ಯುಕ್ತಿವಾದದಿಂದ ತಮ್ಮ ನಿರ್ಣಯಗಳನ್ನು ಸಮರ್ಥಿಸಲಿಚ್ಛಿಸುವ ಗೃಹಸ್ಥರು ನಿಜವಾಗಿ ನ್ಯಾಯಾಧೀಶರು! ದಂಗೆಯ ಮುಖಂಡರೆಂದನ್ನುವ ಇವರು ಹಿಂದುಗಡೆಗೆ ನಿಂತುಕೊಂಡಿದ್ದರೆಂಬ ಸಂಗತಿ ಸಂಭವನೀಯವೆಂದು ಗ್ರಹಿಸುವದಾದರೂ,

ಕರಾಚಿ ಖಟ್ಲೆಯ ನಿರ್ಣಯ.

(ತಂತಿಯಿಂದ ಬಂದ ಬಾತ್ಮಿ)

ಅದೇ ಕಳೆದ ಮಂಗಳವಾರ ದಿವಸ ಶ್ರೀ ಶಂಕರಾಚಾರ್ಯರೊಬ್ಬರನ್ನು ಬಿಟ್ಟು, ಬಾಕಿ ಎಲ್ಲ ಮೌ। ಶೌಕತಅಲ್ಲಿ, ಮಹಮ್ಮದಅಲ್ಲಿ, ಡಾ। ಕಿಚಲು ಮುಂತಾದ ಮುಖಂಡರಿಗೆ ಎರಡು ವರ್ಷಗಳ ಕಠಿಣ ಶಿಕ್ಷೆ ವಿಧಿಸಲ್ಪಟ್ಟಿತೆಂದು ಮುದ್ದಾಂ ತಂತಿಯಿಂದ ತಿಳಿಯುತ್ತದೆ.

ಮಳೆಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳ, ಜ್ವರ, ಕೆಮ್ಮು, ಜಂತು, ಸಂಗ್ರಹಣಿ ಗರ್ಭಾಶಯದ ವಿಕಾರ ಪರಮಾ ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟಂಟ ಔಷಧಗಳೂ, ಸ್ಟೇಶನರಿ, ಪರಫ್ಯೂಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳಿ ಖಾದಿ ಟೊಪ್ಪಿಗೆಗಳೂ ಕಾಲೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು

ಎಸ್ ಎಲ್ ಧಾಕಪ್ಪ ಮತ್ತು ಬಂಧು
ಶಿರ್ಸಿ.

ಭಡತೀ ಭ್ರಾತೃಸಂಘದ

ಅನುಭವಸಿದ್ಧ ವಾದ

ಜ್ವರದ ಗುಳಿಗೆಗಳು ಕ್ರಯ — ೨೫ ಕ್ಕೆ ೦-೧೧-೦ ಉತ್ತಮ ನೀಲಗಿರಿ ಎಣ್ಣೆ, ಹಿಪ್ಪಳಿ ಹಿಪ್ಪಲಿ, ಇಂಚಿ ಕಾಬೂಲಿ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಉಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋ ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬ್ಯಾಜುಗಳು ದೊರೆಯುತ್ತವೆ. ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾಗಿರುವವು. ಡಜನ ೧ ಕ್ಕೆ ೩-೦-೦ ಟಪಾಲ ಖರ್ಚು ಬೇರೆ

ಪತ್ತೆ:— ಬಿ ಎ. ಪೈ ಹೊನ್ನಾವರ
(ಉತ್ತರ ಕಾನಡಾ)

ಸತ್ಯಮೇವ ಜಯತೇ

(ಗವರ್ನಮೆಂಟದ್ವಾರೆ ರಜಿ ಪರತು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗ ಶೀಘ್ರವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯ ಸ್ತಂಭಕ ಗರ್ಮಿ, (ಜಾಶಿ) ಗುಪ್ತಪ್ರದೇಶದಮೇಲೆ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧಗಳು ಕಟಿಶೂಲೆ ವಾತರೋಗ ಮುಂತಾದವು ಆಶ್ಚರ್ಯಕರ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ ಟಪಾಲು ಬೇರೆ ಅನುಮಾನಪತ್ರಿಕೆ ಔಷಧದ ಸಂಗಡ

ವಿಳಾಸ - **ಜಿ. ಎಲ್. ಜೋಶಿ ಕಂಪನಿ**
ಪೋಸ್ಟ— ಸಿರಸಿ. ಉತ್ತರ ಕಾನಡಾ

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ

ಈ ವರ್ಷ ಕಿಮ್ಮತ್ತು ರೂ ೧-೪-೦ ಇಟ್ಟಿದೆ. ಆದರೆ, ಇದೇ ನವಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧-೦-೦ ರ ಸವಲತಿ ದರ ಇಟ್ಟಿದೆ ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು

ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,
ಕುಮಟಾ.

ಆಳರಸರ ವಿಪನ್ನಾವಸ್ಥೆ!

(ಲೇಖಕ — ಪೂರ್ಮಿಕ)

ಆಳರಸರ ಕುಟಿಲ ನೀತಿಯು ಹೊರಬೀಳಹತ್ತಿದ ಹಿಂದೀ ಜನತೆಯಲ್ಲಿ ಪಂಜಾಬದ ಅತ್ಯಾಚಾರಗಳಿಂದ, ಖಿಲಾಫತ ಅನ್ಯಾಯದಿಂದ ನಡೆದ ಚಳವಳಿಯನ್ನು ಬಗ್ಗುಬಡಿಯಲಿಕ್ಕೆ ನಿಸ್ಸತ್ವ ಸುಧಾರಣೆಗಳನ್ನು ನಿರ್ಮಾಡಿಸಿ 'ನವಯುಗದ' ಗಾಳಿಯು ಸಂಚಾರವಾಗುತ್ತದೆಂದು ಡಂಗುರ ಹೊಡೆದರು, ಅದಕ್ಕಾಗಿ ಬಾದಶಹರ ಚಿಗಪ್ಪನವರಾದ ಡ್ಯೂಕ ಆಫ ಕನೊಟರವರಿಗೆ ಮುದಿ ಪ್ರಾಯದಲ್ಲಿ ಇಂಗ್ಲಂಡದಿಂದ ಮದ್ರಾಸಿನಲ್ಲಿ ಇಳಿಸಿ, ಕಲಕತ್ತಾ, ದಿಲ್ಲಿ, ಲಾಹೋರ, ಮುಂಬಯಿ ಮುಂತಾದವುಗಳಲ್ಲಿ, ದೀಪಾವಳಿ, ಗುಡಿ, ತೋರಣ ಫಲಾಹಾರ ಔತಣ, ಜಹಾಂಗೀ ಪಾರ್ಟಿ ಮುಂತಾದ ಸಮಾರಂಭದಿಂದ ಮೆರವಣಿಗೆಯನ್ನು ತೆಗೆದು, 'ಮರೆಯಿರಿ ಕ್ಷಮಿಸಿರಿ' ಎಂಬ ಅಷ್ಟಾಕ್ಷರೀ ಮಂತ್ರೋಪದೇಶವನ್ನು ಮಾಡಿ, ಭಾರತಪುತ್ರರನ್ನು ಮೋಹಿಸುವ ಯತ್ನ ಮಾಡಿದರು. ಆದರೆ ಆ ಯತ್ನವು ಸಫಲವಾಗಲಿಲ್ಲ ಮಹಾತ್ಮರ ಉಪದೇಶವನ್ನು ಸ್ಮರಿಸಿ ಜನತೆಯು ಡ್ಯೂಕ ಸಾಹೇಬರಿಗೆ ಸ್ವಾಗತವನ್ನೀಯಲಿಲ್ಲ ಆಳರಸರು ಈ ಸಂಗತಿಯನ್ನು ನಾನಾಪ್ರಕಾರದಿಂದ ಮುಚ್ಚಿ ಅಡಗಿಸಿದರೂ ಅದು ಕಟ್ಟಕಡೆಗೆ ಅವರ ಲಕ್ಷ್ಯಕ್ಕೆ ಬಂದೇ ಬಂತು! ಇತ್ತ, ಜನರೂ ಸಹ ಔತಣ ಪಾರ್ಟಿಗಳಿಂದ ಆದಷ್ಟು ನವಯುಗದ ಈ ಧಾರಣೆಯಿಂದ ದಿಪ್ಮೂಢರಾಗದೆ, ತಮ್ಮ ಚಳವಳಿಯನ್ನು ಯಥಾಸಾಂಗ ಮುಂದುವರಿಸಿದರು

* * * *

ಈಗೇನು ಮಾಡುವದು? ಈ ಚಳವಳಿಯ ಮರೆಮಾಡಲಿಕ್ಕೆ ಯುವರಾಜರ ವಿಜಯಂಗೈದರೆ ಅವರ ನಗುಮೋರೆಯಿಂದ ಹಿಂದುಸ್ತಾನದ ಸಾಧಾ ಜನರು ಮೋಹಿತರಾಗಿ, ನಮ್ಮ ಅತ್ಯಾಚಾರಗಳನ್ನು ಮರೆಯುವರು [illegible] ಎನಿಸಿ ಈಗಿನಿಂದಲೇ ಯುವರಾಜರು ಅನ್ಯದೇಶಗಳಿಗೆ ಜರುಗಿಸಿದ ಸಾಮ್ರಾಜ್ಯಸೇವೆ, ಪ್ರಜೆಗಳ ಬಗ್ಗೆ ಅವರಲ್ಲಿರುವ ಸಹಾನಭೂತಿ, ಅವರ ಚಾತುರ್ಯ, ಅವರ ರೂಪ, ಅವರ ಹಸ್ತಾಂದೋಲನ, ಅವರ ನಸುನಗೆ ಮಾಡುವ ಅವರ ಮೋರೆಯ ಮೋಹಕ ರೀತಿ, ಅವರ ಒಗೆಬಗೆಯ ಕುಣಿದಾಟ, ಹಿಂದೀ ಜನರ ಕಲ್ಯಾಣದ ಬಗ್ಗೆ ಅವರ ಅಂತರ್ಯಾಮದಲ್ಲಿ ವಾಸವಾಗಿರುವ ಇಚ್ಛೆ ಮುಂತಾದವುಗಳನ್ನು ವಿಸ್ತಾರತಃ ಬಣ್ಣಿಸಹತ್ತಿರುವರು ಅಲ್ಲಲ್ಲಿಯ ಎಂಗ್ಲೋ ಇಂಡಿಯನ ಪತ್ರಿಕೆಗಳಂತೂ ಈಗೀಗ ಯುವರಾಜರ ಗುಣಗಳನ್ನು ಪ್ರತಿದಿನ ಕಾಲಮುಗಟ್ಲೆ ಹಾಡುತ್ತಿರುವರು ಅವರ ಹತ್ತಿದ ಬೋಟು, ಸಂಗಡ ಬಂದ ಅತಿರಥಿ ಮಹಾರಥಿಗಳು. ಅವರು ಈ ವರೆಗೆ ಜಗತ್ತಿನ ಉದ್ಧಾರಾರ್ಥ ಮಾಡಿದ ಸೇವೆ ಬೋಟಿಯ ನಡೆದಾಟ ಮುಂತಾದ ಕ್ಷುಲ್ಲಕ ಸಂಗತಿಗಳ ಇತ್ಥಂಭೂತ ಹಕೀಕತು ಎಂಗ್ಲೋ ಇಂಡಿಯನ ಪತ್ರಗಳಲ್ಲಿ ಈಗ ಬೇಕಾದಷ್ಟು ಓದಬಹುದು

* * * *

ಆಳರಸರ ಸ್ತುತಿಪಾಠಕರಂತೂ ಸ್ವಾಗತದ ತಯಾರಿ ಮಾಡುವದರಲ್ಲಿ ಹಗಲಿರುಳು ಎಡೆಬಿಡದೆ ದುಡಿಯುತ್ತಿರುವರು ಮಂಟಪ ಪರ್ಮಟು ಗುಡಿ ತೋರಣ, ಪತಾಕೆ, ಮಾರ್ಗದಮೇಲೆ ಅಲ್ಲಲ್ಲಿ ನಯನಮನೋಹರ ತೋರಣಗಳು. ಔತಣ ಸಮಾರಂಭ ಯುವರಾಜರ ಆಗಮನದ ಹೊತ್ತಿಗೆ ಬಳಸಬೇಕಾದ ಉಡುಪು, ಮೊದಲಾದವುಗಳ ಸೈಲ್ಲ ವ್ಯವಸ್ಥೆ ಮಾಡುವದರಲ್ಲಿ ಯುವರಾಜರು ವಿಖ್ಯಾತಿಯಿಂದ ಹೊರಡುವ ಆ ಕಾಲ ಮೊದಲಿನಿಂದ ಕೊನೆಯವರು ಸ್ತುತಿಪಾಠಕರ ಆಗಮನದಲ್ಲಿ ಜನರು ಸೇರಿ, ಹಿಂದೀ ಜನತೆಯು ಸ್ವಾಗತವಾಗಬೇಕೆಂದು ಎಲ್ಲಿ ಜಾತ್ರೆ ಎಲ್ಲಿ ಓಡಬಗ್ಗರಿಗೆ ಊಟ ಎಲ್ಲಿ ದಾರುಪ್ರದರ್ಶನ, ಶಿಲಾಜ ಸ್ಮಾರಕ ಮೊದಲಾದವುಗಳನ್ನು ಹೂಡುತ್ತಿರುವರು. ಒಟ್ಟಿಗೆ "ಹಿಂದೀ ರಾಜ್ಯಪದ್ಧತಿಯು ಜನಸಮ್ಮತವಿದೆ ಅದಕ್ಕೆ ವಿರೋಧಿಸುವವರು ರಾಷ್ಟ್ರಮತವನ್ನು ಪ್ರತಿಪಾದಿಸುವದಿಲ್ಲ," ಎಂದು ಇಡೀ ಜಗತ್ತಿಗೆ ತೋರುವ ಅಕಟ ವಿಕಟ ಯತ್ನಗಳನ್ನು ಮಾಡುತ್ತಿರುವರು

* * * *

ಈ ತಯಾರಿಯಮೇಲಿಂದ ಮಿಸ್ಟರ ಗಾಂಧಿಯವರು ಇಷ್ಟು ಚಳವಳಿ ಮಾಡಿದರೇನಾಯಿತು? ಅವರಿಗೆ ಕೇಳುವರಾರು? ಸರಕಾರವು ಮಿ। ಗಾಂಧಿಯವರ ತುಂಟತನಕ್ಕೆ ಎಳ್ಳಷ್ಟು ಲಕ್ಷಗೊಡುವದಿಲ್ಲ ಅವರ ಕಾರಭಾರವು ಯಥಾಸಾಂಗ ನಡೆದಿದೆ ಸುಮ್ಮನೆ ನಾವು ಇವರನ್ನು ಹಿಂಬಾಲಿಸಿದರೆ, ದೀಪದಮೇಲೆ ಪತಂಗವು ಬೀಳುವ ಹಾಗೆ ಆಗುವದು ಸಾವಕಾಶವಾಗಿ ರೀತಿಯಂತೆ ನಡೆದರೆ, ನಮಗೇನಾದರೂ ಸಿಗಬೇಕಲ್ಲದೆ ಈ ಮಹಾತ್ಮರ ಸಂಗಡ ಹೋದರ ದೇಶವು ಬಳದ ಹೋಗುವದು'" ಎಂದು ಕೆಲವು 'ದೇಶಹಿತಕಾಂಕ್ಷಿ' ಸಹಕಾರವಾದಿಗಳು ಪ್ರತಿಪಾದಿಸಬಹುದು ಆದರ ಇವರಿಗೆ ಆಳರಸರ ಪರಿಸ್ಥಿತಿಯ ಕಲ್ಪನೆಯು ಇನ್ನೂ ಬಿರಲಿಲ್ಲ ನಿಜವಾಗಿ ಮಹಾತ್ಮರು ಹೇಳುವಂತೆ ಸರಕಾರವು ಬಲಹೀನವಾಗುತ್ತ ನಡೆದಿದೆ ಏನ ಮಾಡಬೇಕೆಂದು ಅವರಿಗೆ ತಿಳಿಯುವದಿಲ್ಲ ಯುವರಾಜರನ್ನು ಕರೆದಾಯಿತು ಕಾಂಗ್ರೆಸ ಕಮಿಟಿಯಂತು ಜನತೆಗೆ ಆಜ್ಞಾಪತ್ರವನ್ನು ಕೊಟ್ಟದೆ ಈಗ ಮಾನ ಕಾಯ್ದುಕೊಳ್ಳಬೇಕಾದರ ಮಹಾತ್ಮರಿಗೇ ಹೇಳಬೇಕು ಅಲ್ಲಿ ಬಂಧುಗಳನ್ನು ಗಿರಫದಾರ ಮಾಡಿದವು ಅವರ ಅವರವರನ್ನೇ ಲಕ್ಷಗಟ್ಲೆ ಜನರು ಮಾಡುತ್ತಿರುವರು ಹಿಡಿಯೋಣ ಎಂದರೆ ಯಾರಿಗೆ ಹಿಡಿಯುವದು ಯಾರಿಗೆ ಬಿಡುವದು ಈ ವಿಪತ್ತಿನಿಂದ [illegible] ಪುನಃ ಮಹಾತ್ಮರ ಹತ್ತರ ಮಾತ ಕಥೆಯನ್ನು [illegible] ಸಿದರಂತೆ ಕೆಲವು ದಿನಗಳ ಹಿಂದೆ ಪಂಡಿತ ಮಾಲವೀಯವರಿಗೆ ಲಾರ್ಡ ರೀಡಿಂಗ ದೊರೆಗಳು ಅತಿ ಅಗತ್ಯದ ತಂತಿಸಂದೇಶ ಕಳುಹಿ ಮಹಾತ್ಮರ ಹತ್ತರ ಪ್ರಸ್ತುತ ಚಳವಳಿಯನ್ನು ನಿಲ್ಲಿಸುವ ಮಾತಿನ [illegible] ಯುಗಳನ್ನು [illegible] ಪಂಡಿತಜೀಯವರು [illegible] ಅವರಿಗೆ ಚಿತ್ತೈಸಿ ಇಡೀ ಹಕೀಕತನ್ನು ನಿವೇದಿಸಿದರ [illegible] ರಾಷ್ಟ್ರದ ಹೇಳಿಕೆಯನ್ನು ಸಂಪೂರ್ಣವಾಗಿ [illegible] ಪೂರ್ಣ ಸುಧಾರಣೆಗಳನ್ನು [illegible] ವಿಳ್ಳವಂತೆ [illegible] ವೇಯ ನೀಡುವ [illegible] ಮಹಾತ್ಮರಿಗೆ ಗಿತ್ತಿ [illegible] ಮಾಡಬೇಕೆಂದೂ [illegible] ಆಗಮನದ [illegible] ಮನಃ ಸಾರ್ವತ್ರಿಕ [illegible] ಕೊಳ್ಳಬೇಕೆಂದೂ ಸೂಚಿಸಿದ್ದರೆಂದೂ [illegible] ಆಳರಸರ ಸ್ಥಿತಿಯು [illegible] ತೀರ ಸಮೀಪಿಸಿದೆ ಯುವರಾಜರ ಆಗಮನ [illegible] ಬಹಿಷ್ಕಾರ [illegible] ಲೆ ಆಳರಸರ ಆಸೆಯು ದೀಪಾವಳಿ ಆಗುವ [illegible] ವಿವಂಚನೆಯಲ್ಲಿ ಆಳರಸರ ಪರಿವಾರ ವಿಚಾರಮಾಡುತ್ತಿರುವರ ಮಹಾತ್ಮಾ ಗಾಂಧಿಯವರಂತು ಸತ್ಯಾಗ್ರಹವನ್ನು ಜಾರೀ ಮಾಡಿ ಶಾಂತತೆಯ ದಂಗೆ Peaceful rev lt) ಯು [illegible] ದಿವಸಗಳಲ್ಲಿ ಹುಟ್ಟುವದು. ಯುವರಾಜರ ಆಗಮನದ ಶುಭ ಪ್ರಸಂಗದಲ್ಲಿ ದಂಗೆಯು. ಶಾಂತತೆಯುದ್ಧಾ ಕಾಗಲೊಲ್ಲದು—ಪ್ರಾರಂಭವಾಗುವದೇನು ಕೌತುಕವಲ್ಲ

ಕರಾಚಿ ಖಟ್ಲೆಯ ಸೇಶನ

ಕೋರ್ಟಿನೊಳಗಿನ ಗೊಂದಲ.

ಖಟ್ಲೆಯು ಪ್ರಾರಂಭವಾದಾಗ ಎಲ್ಲ ಆರೋಪಿಗಳು ಖುರ್ಚೆಯ ಮೇಲೆ ಕೂತಿದ್ದರು. ಜಜ್ಜರು ಎದ್ದು ನಿಂತು ಆರೋಪಿಗಳಿಗೆ ಎದ್ದು ನಿಲ್ಲಲಿಕ್ಕೆ ಹೇಳಿದರು ಆಗ ಮಹಮ್ಮದಲ್ಲಿ ಮತ್ತು ಜಜ್ಜರ ನಡುವೆ ಕೆಳಗಿನ ಸಂಭಾಷಣೆಯಾಯಿತು

ಮಹಮ್ಮದಲ್ಲಿ – ನಾವು ಯಾಕೆ ಎದ್ದು ನಿಲ್ಲಬೇಕು

ಜಜ್ಜ – ಕೋರ್ಟಿಗೆ ಮರ್ಯಾದೆ ಕೊಡುವದರ ದೆಸೆಯಿಂದ.

ಎಲ್ಲರು – ನಾವು ಕೋರ್ಟಿಗೆ ಮರ್ಯಾದೆ ಕೊಡಲಿಚ್ಛಿಸುವದಿಲ್ಲ

ಆ ಮೇಲೆ ಜಜ್ಜರು ಆರೋಪಿಗಳು ಕೂತ ಖುರ್ಚೆಗಳನ್ನು ತೆಗೆಯಲಿಕ್ಕೆ ಶಿಪಾಯರಿಗೆ ಹೇಳಿದರು ಎಲ್ಲ ಆರೋಪಿಗಳು ಆ ಖುರ್ಚೆಗಳನ್ನು ತೆಗೆದು ಒಗೆದು ನೆಲದ ಮೇಲೆ ಖಾದಿ ಅಂಗಿಯನ್ನು ಹಾಕಿಕೊಂಡು ಕೂತರು ಇದನ್ನು ನೋಡಿ ಜಜ್ಜರಿಗೆ ಸಹನವಾಗದೆ ಪುನಃ ಎಲ್ಲರಿಗೂ ಎದ್ದು ನಿಲ್ಲಲಿಕ್ಕೆ ಹೇಳಿದರು

ಮೌ ಶೌಕತ ಅಲ್ಲಿ — ನಮಗೆ ಜುಲುಮೆಯಿಂದ ಎದ್ದು ನಿಲ್ಲಿಸಿದ ಹೊರ್ತು ನಾವು ನಿಲ್ಲುವದಿಲ್ಲ

ಆಮೇಲೆ ಜಜ್ಜರು ಪೋಲೀಸರಿಗೆ ತಮ್ಮ ಅಪ್ಪಣೆಯನು ಅಮಲಿನಲ್ಲಿ ತರಲಿಕ್ಕೆ ಹೇಳಿದರು ಪೋಲೀಸ ಸಾಹೇಬರು ಮೌ ಮಹಮ್ಮದ ಅಲ್ಲಿಯ ಹತ್ತರ ಹೋದ ಮೇಲೆ

ಮೌ ಮಹಮ್ಮದಲ್ಲಿಃ — ಯಾವ ಕಾಯದೆಯ ಪ್ರಕಾರ ಜಜ್ಜರು ಅಪ್ಪಣೆ ಕೊಟ್ಟಿರುತ್ತಾರೆ

ಕೋರ್ಟಿನ ಕಾರಕೂನರುಃ— ಇದು ಕೋರ್ಟಿನ ಅಪ್ಪಣೆ ಇರುತ್ತದೆ

ಎಲ್ಲರೂಃ— ನಾವು ಇದನ್ನು ಪಾಲಿಸುವದಿಲ್ಲ,

ಜಜ್ಜಃ— ಕೋರ್ಟಿಗೆ ಅಪಮಾನ ಮಾಡಿದ್ದರ ಸಲುವಾಗಿ ನಿಮ್ಮ ಮೇಲ ಖಟ್ಲೆ ಮಾಡುತ್ತೇನೆ

ಎಲ್ಲರೂಃ— ಅಗತ್ಯ ಮಾಡಬೇಕು

ಮುಂದೆ ಏನೂ ಆಗಲಿಲ್ಲ ಎಲ್ಲರೂ ಹಾಗೇ ಕೂತರು ಸ್ವಲ್ಪ ವೇಳೆಯ ನಂತರ ಮಹಮ್ಮದಲ್ಲಿಯವರು ಸರಕಾರೀ ವಕೀಲ ಮತ್ತು ಸಿ ಐಯ್ ಡಿ ಅಧಿಕಾರಿಯ ನಡುವೆ ಏನು ನಡೆದಿರುತ್ತದೆಂಬುದನ್ನು ತಿಳಿದುಕೊಳ್ಳುವದರ ದೆಸೆಯಿಂದ ಎದ್ದು ನಿಂತರು ಆಗ ಜಜ್ಜ — ನಾನು ಹೇಳಿದಂತೆ ಒಂದೇ ಸವನೆ ನೀವು ನಿಂತ ಹೊರತು ನಿಮ್ಮ ಮಾತಿನ ಕಡೆಗೆ ನಾನು ಲಕ್ಷ ಕೊಡುವದಿಲ್ಲ

ಮಹಮ್ಮದಲ್ಲಿಃ— ನೀನು ನಡೆದದೆಂದು ತಿಳಿದುಕೊಳ್ಳುವ ಕಾರಣ ನಾನು ಎದ್ದು ನಿಂತಿದ್ದೇನೆ

ಜಜ್ಜರುಃ— ಕೂಡ್ರಬೇಕು

ಮಹಮ್ಮದಲ್ಲಿ — ನಾನು ಕೂಡ್ರುವದಿಲ್ಲ

ಜಜ್ಜ — ಕೂಡ್ರಲಿಕ್ಕೇ ಬೇಕು

ಮಹಮ್ಮದಲ್ಲಿ ನನ್ನ ಮನಸ್ಸಿಗೆ ಬಂದಾಗ ಕೂಡ್ರುತ್ತೇನೆ

ಜಜ್ಜಃ— ನೀವು ಮೂರ್ಖನ ಹಾಗೆ ಮಾಡುತ್ತೀರಿ

ಮಹಮ್ಮದಲ್ಲಿಃ— ನಾನು ಏನ ಮಾಡುತ್ತೇನೆಂಬುದು ನನಗೆ ಪೂರ್ಣ ಗೊತ್ತದೆ ಅದರ ಉಸಾಬರಿಯನ್ನು ನೀವು ಮಾಡುವ ಕಾರಣವಿಲ್ಲ ಕೋರ್ಟಿಗೆ ಯಾವ ರೀತಿಯಿಂದಾದರೂ ಮರ್ಯಾದೆ ಕೊಡುವ ಇಚ್ಛೆಯು ನನಗಿರುವದಿಲ್ಲ ಆರೋಪಿಗಳ ಹೇಳಿಕೆ ನೀವು ಕೇಳದಿದ್ದರೆ, ತೀವ್ರವೇ ಶಿಕ್ಷೆಯನ್ನು ಕೊಟ್ಟು ಈ ನ್ಯಾಯದ ತಮಾಷೆಯನ್ನು ಮುಗಿಸಬೇಕು

ಈ ಪ್ರಕಾರ ವಾದವಿವಾದವು ಮುಗಿದ ಮೇಲೆ ಸರಕಾರೀ ವಕೀಲ ಮಿ ರೋಸ ಯಾಲಸ್ಟನ್ನರು ಮಹಮ್ಮದಲ್ಲಿಯ ಹತ್ತರ ಬಂದು ನೀವು ಯಾಕೆ ಎದ್ದು ನಿಲ್ಲುವದಿಲ್ಲವೆಂದು ಕೇಳಿದರು. ಅದಕ್ಕೆ ಮಹಮ್ಮದಲ್ಲಿ – ನನ್ನ ದೇಶಬಾಂಧವನೇ ನ್ಯಾಯಾಧೀಶನಾಗಿದ್ದ ಕೆಳಗಿನ ಕೋರ್ಟಿಗೇನೆ ನಾನು ಮರ್ಯಾದೆಯನ್ನು ಮಾಡಿಲ್ಲ ಅದ್ದರಿಂದ ಈ ಕೋರ್ಟಿಗೂ ನಾನು ಮರ್ಯಾದೆ ತೋರಿಸುವದಿಲ್ಲ

ಮಿ ಯಾಲಸ್ಟನ — ನಾನು ಮಾತ್ರ ನನ್ನಿಂದ ನಾನೇ ಎದ್ದು ನಿಲ್ಲುತ್ತೇನೆ.

ಮಹಮ್ಮದಲ್ಲಿ ಒಳ್ಳೇದು ನಿಮಗೆ ಅದರ ದೆಸೆಯಿಂದ ಪಗಾರ ಸಿಗುತ್ತದೆ

* * * *

ಕಡೆಯ ದಿವಸ ಶಿಕ್ಷೆ ವಿಧಿಸುವ ಕಾಲಕ್ಕೆ ಕೋರ್ಟಿನಲ್ಲಿಯೂ, ಸುತ್ತಮುತ್ತಲೂ ಪ್ರಚಂಡ ಜನಸಮುದಾಯವು ಕೂಡಿತ್ತು ಆರೋಪಿಗಳು ಉತ್ಸಾಹದಿಂದಲೂ, ಶಾಂತಚಿತ್ತದಿಂದಲೂ ತಮಗಾದ ಶಿಕ್ಷೆಯನ್ನು ಕೇಳಿಕೊಂಡರು ನಿರ್ಣಯವನ್ನು ಹೇಳಿದ ಕೂಡಲೇ ಜನರು "ಮಹಾತ್ಮಾ ಗಾಂಧಿಕಿ ಜಯ" 'ವಂದೇ ಮಾತರಂ' "ಅಲ್ಲಾ ಹೋ ಅಕಬರ' ಎಂಬ ಜಯಘೋಷದಿಂದ ಕೋರ್ಟನ್ನು ದುಮದುಮಿಸಿ ದೇಶಬಾಂಧವರನ್ನು ಅಭಿನಂದಿಸಿದರು. ಮೌ। ಮಹಮ್ಮದಲ್ಲಿಯವರು ಶಿಕ್ಷೆಯು ಮುದ್ದತು ಮುಗಿಯುವದರೊಳಗಾಗಿ ನಾವು ಸ್ವತಂತ್ರರಾಗುತ್ತೇವೆಂದು ಹೇಳಿದರು. ಮತ್ತು ಡಾ। ಕಿಚಲು ಅವರು ಅಹಮ್ಮದಾಬಾದ ಕಾಂಗ್ರೆಸದಲ್ಲಿ ಹಾಜರ ಇರುತ್ತೇನೆ ದು ಜಾಹೀರಪಡಿಸಿದರು'

ಸ್ತ್ರೀಯರಿಗೆ ಕೇಶ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಿಜಿಸ್ಟರ್ಡ)

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು [illegible] ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡತಕ್ಕ ಉಪಕರಣವಾದೀತು.

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ.)

ಈ ಆಯಿಲ್ ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ, ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ ಈ ಆಯಿಲ್ ಹೊಡೆದುಕೊಳ್ಳುತ್ತಲೇ ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ಹೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುತ್ತದೆ.

ಕೀಳು ದರದ ಎಣ್ಣೆಗಳನ್ನು ಕೊಂಡುಕೊಂಡು ತಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡಿಕೊಳ್ಳುವದಕ್ಕಿಂತ ಒಂದೇಯೊಂದು ಬಾರಿ ಈ “ ಕಾಮಿನಿಯಾ ಆಯಿಲ್ ” ಉಪಯೋಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ನಮಗೆ ಮೈಸೂರು ಪ್ರದರ್ಶನದಲ್ಲಿ “ ಸರ್ಟಿಫಿಕೇಟ್ ಆಫ್ ಮೆರಿಟ್ ” ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗ್ರಾಹಕರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಕ್ರಯ — ಸೀಸೆಗೆ ರೂಪಾಯಿ 1-0-0, ಸೀಸೆ 3ಕ್ಕೆ ರೂಪಾಯಿ 2-10-0, ವಿ ಪಿ ಖರ್ಚು 0-14-0.

ಅತಿ ಮನೋಹರವಾದ ಸುರಭಿಯು !

ಒಟ್ಟೋ-ದಿಲ್ ಬಹಾರ್ !! (ರಿಜಿಸ್ಟರ್ಡ)

ಈ ಸುಗಂಧದ್ರವ್ಯವು ಮಧುರ, ಕೋಮಲ, ಚಿರಸ್ಥಾಯಿ ಮತ್ತು ಅತ್ಯುತ್ತಮ ವೆ ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧಮಾಡುವದು ಇದರಲ್ಲಿ ಮದಿರೆಯ (ಆಲ್ಕೊಹೋಲಾ) ಸಂಪರ್ಕವಿಲ್ಲವು ಒಂದೇ ಒಂದು ಸಲ ನಿಮ್ಮ ಕೈ ಒಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವ್ಯದ ಕೆಲವು ಹನಿಗಳನ್ನು ಚಿಮುಕಿಸಿದರೆ ನಿಮ್ಮ ಸುತ್ತಲೂ ನೈಸರ್ಗಿಕವಾದೊಂದು ಪುಷ್ಪವಾಟಿಕೆಯು [illegible] ಇತರ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ, ಈ ಒಟ್ಟೋದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ ಮನಸ್ಸನ್ನು ತನ್ನ ಕಡೆಗೆ [illegible] ಸೆಳೆಕೊಳ್ಳುವದು ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ

ಸಣ್ಣ ಸೀಸೆ 1 ಕ್ಕೆ 0-8-0, 1 ಡ್ರಾಮಿನ (ಮಧ್ಯಮ) ಸೀಸೆ 1 ಕ್ಕೆ 0-12-0, ½ ಔನ್ಸಿನ ದೊಡ್ಡ ಸೀಸೆ 1 ಕ್ಕೆ 2-0-0 ಅಂಚೆಯ ವೆಚ್ಚ ಬೇರೆ 0-4-0

ಒಟ್ಟೋ ದಿಲ್ ಬಹಾರ್ ಪರಿಮಳ ಕಾರ್ಡುಗಳು ಡಜನ್ 1 ಕ್ಕೆ

Address - **The Anglo Indian Drug & Chemical Co,**

16, Market, **BOMBAY. 2.**

ವಿವಿಧ ವರ್ತಮಾನ.

—ಮಹಾಯುದ್ಧದ ಪೂರ್ವದಲ್ಲಿ ರೂಪಾಯಿಗೆ ೨-೩-೦ ಈ ಪ್ರಮಾಣದಲ್ಲಿದ್ದ ಜರ್ಮನ ನಾಣ್ಯವು (ಮಾರ್ಕು) ಈಗ ಇಳಿಇಳಿದು ೬೦-೭೦ ಕ್ಕೆ ಬಂದಿದೆ ಇದರಿಂದ ಪೇಟೆಯಲ್ಲಿ ಜರ್ಮನ ಮಾಲು ಕ್ಷಿಪ್ರಕ್ಕೆ ಇಳಿದು, ಹೋಲಿಸಿದರೆ ಅಗ್ಗವಾಗಿ ಹೋಗಿದೆ ಇದರಿಂದ ಬ್ರಿಟಿಶ ಉದ್ಯೋಗ ಧಂದೆಗಳನ್ನು ಪುನರುಜ್ಜೀವನ ಮಾಡಿ, ಜಗತ್ತಿನ ವ್ಯಾಪಾರವನ್ನು ಕೈವಶಮಾಡಿಕೊಳ್ಳಬೇಕೆಂದು ಮಾಡಿದ ಹವಣಿಕೆಗಳು ಬ್ರಿಟಿಶರ ಹೊಟ್ಟೆಯಲ್ಲಿ ಬೆಂಕಿಬಿದ್ದಿದೆ! ಮಾರ್ಕು ಅಗ್ಗವಾದದ್ದರಿಂದ, ಜರ್ಮನ ಸರಕಾರದಿಂದ ಇಂಗ್ಲಿಷರಿಗೆ ದೊರಕತಕ್ಕ ನುಕಸಾನಿಯ ರಕಮು ಸಹ ಕಡಿಮೆ ಯಾಗಿರುವದು ಅಂತೂ ಇಂತೂ ಬ್ರಿಟಿಶರ ದುರ್ದೈವ !

—ತುರ್ಕರ ಕಡೆಯಿಂದ ಅಂಗೋರಾ ಸರಕಾರಕ್ಕೂ ಒಪ್ಪಂದವಾಯಿತು. ಥ್ರೇಸ, ಸ್ಮರ್ನಾ ಪ್ರಾಂತಗಳನ್ನು ಗ್ರೀಕರು ಬಿಟ್ಟು ಕೊಡಬೇಕು, ಅಂಗೋರಾ ಸರಕಾರಕ್ಕೆ ಗುಂಡು ಸಾಮಾನುಗಳನ್ನು ಪೂರೈಸಬೇಕು, ಅವರ ಸೈನ್ಯವನ್ನು ಸಿದ್ಧಪಡಿಸಲಿಕ್ಕೆ ಯೋಗ್ಯ ಹುದ್ದೇದಾರರನ್ನು (ಅಧಿಕಾರಿಗಳನ್ನು) ಕೊಡಬೇಕು, ತುರ್ಕರು ಸಿರಿಯಾ ಪ್ರದೇಶದಲ್ಲಿ ರೇಲ್ವೆಮಾರ್ಗವನ್ನು ಮಾಡಲು ಫ್ರೆಂಚರಿಗೆ ಸಹಾಯ ಮಾಡಬೇಕು. ಫ್ರೆಂಚರಿಗೂ ತುರ್ಕರಿಗೂ ಒಪ್ಪಂದವಾದ ಸುದ್ದಿ ಕೇಳಿ ಬ್ರಿಟಿಶ ಪ್ರಧಾನಮಂಡಳವು ಚಿಂತಾಕ್ರಾಂತವಾಗಿದೆ ಮುಸಲ್ಮಾನ ಪ್ರಜೆಗಳ ಧರ್ಮರಕ್ಷಣದ ಸಹಾನುಭೂತಿಯು ವ್ಯಕ್ತವಾಗಲಿಕ್ಕಿಲ್ಲವೇನು !

—ತಂಜಾವರದಲ್ಲಿ ಅಧ್ಯಕ್ಷಸ್ಥಾನದಿಂದ ಭಾಷಣಮಾಡಿದ ಶ್ರೀಮಾನ್ ರಾಜಗೋಪಾಲಾಚಾರ್ಯರು ಜನರು ಯಾಕೂಬ ಹುಸೇನರವರ ಬಿಡುಗಡೆಯಾಗಿ, ೨ ವರ್ಷ ಸಾದಾ ಶಿಕ್ಷೆ ಯಾಯಿತು

—ಕಟ್ಟಕಡೆಗೆ ಇಂಡಿಯನ ಸಿವಿಲ ಸರ್ವಿಸ ಪರೀಕ್ಷೆಯು ಮುಂದಿನ ವರ್ಷ ಅಲಹಾಬಾದಿನಲ್ಲಿ ಜರಗುವದು ಇಲ್ಲಿ ಬರೇ ೮ ಜನರನ್ನು ಆರಿಸುವರಂತೆ ! ಈ ಎಂಟು ಜನರ ಜಾಗೆಗಳಿಗಾಗಿ ಎಷ್ಟೋ ಅರ್ಜಿಗಳು ದಾಖಲಾಗಿರುವವಂತೆ! ಆದರಿಂದ ಈ ಅರ್ಜಿಗಳೊಳಗಿಂದ ಎಲ್ಲ ಪ್ರಾಂತಗಳಿಂದ ಬರೇ ೩೦೦ ಉಮೇದ್ವಾರರಿಗೆ ಪರೀಕ್ಷೆಗೆ ಕೂಡ್ರಬೇಕೆಂದು ನಿರ್ಬಂಧಿಸಿರುವರಂತೆ ! ಮುಂಬಯಿ ಪ್ರಾಂತದ ಪಾಲಿಗೆ ಬರೇ ೨೫ ಉಮೇದ್ವಾರರು ಬಂದಿರುತ್ತಾರೆ.

—ಪಾರ್ಸಿ ಪಂಚಾಯತ ಕಡೆಯಿಂದ ಇಡೀ ಜ್ಞಾತಿಯ ಹೆಸರಿನಲ್ಲಿ ಕೊಡುವ ಮಾನಪತ್ರಕ್ಕೆ ಪಾರ್ಸಿಜನರು ಏಕಮತದಿಂದ ಒಪ್ಪುವದಿಲ್ಲೆಂದೂ, ಯುವರಾಜರು ಅಂಥ ಮಾನಪತ್ರವನ್ನು ಸ್ವೀಕರಿಸಬಾರದೆಂತಲೂ ಯುವರಾಜರ ಸೆಕ್ರೆಟರಿಗಳಾದ ಕ್ರೋಮರ ದೊರೆಗಳಿಗೆ ತಂತಿ-ಪತ್ರಗಳು ಹೋಗಿರುವವು ! ಇಂಥ ವಿವಾದಾಸ್ಪದ ಮಾನಪತ್ರವನ್ನು ಯುವರಾಜರು ಸ್ವೀಕರಿಸುತ್ತಾರೋ ಏನೋ ನೋಡಬೇಕು

—ಸದ್ಯಕ್ಕೆ ಮುಂಬಯಿ-ಮಾರ್ಮುಗೋವಾ ಲೈನಿಗೆ ಇಂಡಿಯನ ನೆಶನಲ ಸ್ಟೀಮ ನೆವಿಗೇಶನ ಕಂಪನಿಯವರು ಬೋಟು ಬಿಡುವವರಿದ್ದಾರಂತೆ ! ೧೨೦೦ ಜನರಿಗೆ ಸಾಕಾಗುವ ಒಂದು ಬೋಟಿಯನ್ನು ತರಿಸಿರುವರು

—ಪಂಜಾಬದ ಅನ್ಯಾಯವನ್ನು ವಿಚಾರಿಸುವ ನ್ಯಾಯದಾನವನ್ನು ಕೊಡಲಿಕ್ಕೆ ಹಿಂದುಸ್ಥಾನಕ್ಕೆ ಬಂದ ರೀಡಿಂಗ ದೊರೆಗಳು ಈ ಆರೇಳು ತಿಂಗಳು ವಿಚಾರಮಾಡಿ ೮೬ ಜನರ ಪ್ರಕರಣಗಳನ್ನು ಚೌಕಶಿ ಮಾಡಿ, ೩೦ ಜನರನ್ನು ದಯಾದ್ರ್ರರಾಗಿ ಮುಕ್ತ ಮಾಡಿರುವರು !

—‘ ನಿಮಗೆ ಖಡ್ಗದಿಂದ ಆಳಬೇಕೋ ಲೆಕ್ಕಣಿಗೆಯಿಂದ ಆಳಬೇಕೋ ’ ಎಂಬ ಲೇಖ ಇರುವ ಲೋರೆನ್ಸ ದೊರೆಗಳ ಮೂರ್ತಿಯನ್ನು ಸದ್ಯದ ಸ್ಥಳದಿಂದ ತೆಗೆದು ಇನ್ನೊಂದೆಡೆಯಲ್ಲಿಡಬೇಕೆಂದು ಲಾಹೋರ ಮ್ಯುನಿಸಿಪಾಲಿಟಿಯು ನಿರ್ಣಯಿಸಿತು. ಅದನ್ನು ಅಲ್ಲಿಯ ಡೆಪ್ಯುಟಿ ಕಮಿಶನರು ರದ್ದು ಪಡಿಸಿದರು. ಈಗ ಮಹಾತ್ಮಾ ಗಾಂಧಿಯವರು ಇಂಥ ಲೇಖವು ಸ್ವಾಭಿಮಾನದ್ಯೋತಕವಲ್ಲದ್ದರಿಂದ, ಅದನ್ನು ಜನರು ಸತ್ಯಾಗ್ರಹವನ್ನು ಆಚರಿಸಿ, ಸಾವಿಗೆ ಬದರದೆ ಕಿತ್ತು ಹಾಕಬೇಕೆಂದು ತಮ್ಮ ಲಾಹೋರದ ಭಾಷಣದಲ್ಲಿ ಉಪದೇಶಿಸಿದರು ಸ್ತ್ರೀಯರನ್ನು ಸಹ ಸತ್ಯಾಗ್ರಹೀ ಪಥಕದಲ್ಲಿ ಸಾಮೀಲಮಾಡಿಕೊಳ್ಳಬೇಕೆಂದರು

— ಕರಾಚಿ ಮುನಿಸಿಪಾಲಿಟಿಯು ಯುವರಾಜರಿಗೆ ಮಾನಪತ್ರವನ್ನು ಕೊಡಬಾರದೆಂದು ನಿರ್ಣಯಿಸಿರುವದು ! ಠರಾವು ಪಾಸುಮಾಡುವಾಗ ಅಸಹಕಾರಿ ಕೌನಸಿಲರು ಮುನಿಸಿಪಲ ಸಭಾಮಂದಿರದಲ್ಲಿ ಹಾಜರಿದ್ದರು. ಹಿಂದುಸ್ಥಾನದ ಅಖಿಲ ಸಭೆಯು ಕೂಡುವಾಗ ಕರಾಚಿಯ ಮುನಿಸಿಪಾಲಿಟಿಯು ರಾಷ್ಟ್ರೀಯ ಸಂಘದ ಧ್ವಜವನ್ನು ಹಾರಿಸಿ ಪಂಥ ಕೃತ್ಯವನ್ನು ಮಾಡಿದ ಬಗ್ಗೆ ಅಖಿಲರಾಷ್ಟ್ರವು ಆಭಾರಿಯಾಗಿರುವದು.

—ಅಮೃತಸರದಲ್ಲಿ ವೇಶ್ಯಾಸ್ತ್ರೀಯರ ಮನೆಗಳ ಮುಂದೆ ಪಿಕೆಟಿಂಗ ನಡೆದ್ದರಿಂದ ಅವರ ವ್ಯಾಪಾರವು ಪೂರ್ಣವಾಗಿ ಬಿದ್ದು ಹೋಯಿತು ಅನೇಕರು ಪಟ್ಟಣವನ್ನು ಬಿಟ್ಟು ಹಳ್ಳಿಗೆ ಹೋದರು.

ಒಟ್ಟಿಗೆ ಪ್ರಸ್ತುತ ರಾಜ್ಯವಸ್ಥೆಯ ನಾಶಮಾಡಲಿಕ್ಕೆ ಮಹಾತ್ಮರು ಈ ಜಾಲೀಮ ಮಾತ್ರೆಯನ್ನು ಉಪಯೋಗಿಸುವ ತಯಾರಿಯನ್ನು ಮಾಡುತ್ತಿರುವರು. ಇದರ ಪರಿಣಾಮವನ್ನು [illegible] ಭಾರತಖಂಡವು ಕುತೂಹಲತೆಯಿಂದ ನಿರೀಕ್ಷಿಸುತ್ತಿರುವದು. ಯುವರಾಜರು ಇನ್ನು ನಾಲ್ಕು ತಿಂಗಳು ಉಳಿಯುವವರಾದದರಿಂದ ಹಿಂದುಮೇಳ, ಅವರಿಗೆ ಈ ಜಗದ್ವಂದ್ಯ ಮಹಾತ್ಮರ ನೂತನ ಬಂಡಾಯದ ಅನುಭವವು ಸಿಕ್ಕೀತು.

---

೨. ಕರಾಚಿಯ ಖಿಲ್ಲೆಯ ನಿರ್ಣಯದಿಂದ ಮುಸಲಮಾನರಷ್ಟೇ ಅಲ್ಲ ಎಲ್ಲ ಧರ್ಮದವರ ಧರ್ಮಸ್ವಾತಂತ್ರ್ಯಕ್ಕೆ ಹ್ಯಾಗೆ ಅಪ್ರತ್ಯಕ್ಷವಾಗಿ ಪೆಟ್ಟು ತಗಲಿತೆಂದು ಕಳೆದ ಸಂಚಿಕೆಯಲ್ಲಿ ನಿವೇದಿಸಿದ್ದೇವೆ. ಇದರಿಂದ ಪ್ರಜೆಗಳಲ್ಲಿ ಅಸಮಾಧಾನವು ಉಂಟಾಗಿದ್ದರಿಂದ ಆ ನಿರ್ಣಯವನ್ನು ರದ್ದ ಪಡಿಸಬೇಕೆಂಬ ಉದ್ದೇಶದಿಂದ ಹಿಂದು ಮುಸಲಮಾನ ಜನರು ಮುಂದರಿದಿರುವರು. "ಒಂದೇ ತರದ ಖಿಲ್ಲೆಯಿಂದ ಸ್ಥಾಪಿಸಲ್ಪಟ್ಟ ಧರ್ಮಸ್ವಾತಂತ್ರ್ಯದ ಮೇಲಿನ ಸಂಕಟವನ್ನು ರದ್ದು ಪಡಿಸಿ, ಅದನ್ನು ಪೂರ್ಣ ಕಾಯುತ್ತೇವೆಂದು ಕಾಯಿದೆಶೀರ್ಮಕ್ಕತವಾಗಿ ಜಾಹೀರ ಪಡಿಸಿ ಮತ್ತು ಧರ್ಮಾಜ್ಞೆಯನ್ನು ಪಾಲಿಸಿದ ಅಪರಾಧಕ್ಕಾಗಿ ಶಿಕ್ಷೆ ವಿಧಿಸಲ್ಪಟ್ಟ ಅಲಿಬಂಧು ಮೊದಲಾದವರನ್ನು ಮುಕ್ತ ಮಾಡಿರಿ, ಇಲ್ಲವೆ ಬ್ರಿಟಿಷ ರಾಜ್ಯದಲ್ಲಿ ಧರ್ಮಸ್ವಾತಂತ್ರ್ಯವು ಸರಕಾರಕ್ಕೆ ಸಮ್ಮತವಿಲ್ಲೆಂದು ಸ್ಪಷ್ಟವಾಗಿ ಜಾಹೀರಪಡಿಸಿರಿ" [illegible] ದರ್ಜಾನ್ನು ಇವರು ಹಿರಿಯ ಲೆಜಿಸ್ಲೇಟಿವ್ [illegible] ಯಲ್ಲಿ ಚರ್ಚೆಯ ಬಗ್ಗೆ ಮಂಡಿಸಿ ಪಾಸುಮಾಡಿದ್ದಾರೆ. ಇದನ್ನಷ್ಟು ಧೈರ್ಯದಿಂದ ಮಾಡಿದ್ದ ಆ ಸಭಾಸದಾರಿಗೆ [illegible] ವಂದನೆಗಳು. ಆದರೆ, ಇಗಿನ ಸಾರ್ವಜನಿಕ [illegible] ಗಳ ಪರಿಸ್ಥಿತಿಯಲ್ಲಿ ಇಂಥ ಉಪಾಯ ವಿಧವು [illegible] ಸಾಧನವೆನ್ನು ತಾನು [illegible] ವೆಂದು ಹೇಳಲಾಗದು. [illegible] ಕರ್ಜ ಸಹಕಾರದ ಹೆಚ್ಚು ಸಾಧಾರಣ ಎಲ್ಲಿ [illegible] ಪಟ್ಟಿರುವದರಿಂದ, ಮೊದಲೇ ಪಿರಸ್ಥಾನದಲ್ಲಿರುವ ನೌಕರಶಾಹಿಗೆ ಕೋಪವಡಿಸುವ ಈ ವಿಷಯವನ್ನು ಚರ್ಚಿಸಿ, ಧೈರ್ಯದಿಂದ ಅಗ್ರಹ ಹಿಡಿಯುವದರ ದಪ್ಪಿರುವದ? ಆದರೆ, ಈ ಠರಾವು ಚರ್ಚೆಗ ಬಂದರೆ, ಅಸ್ಸೆಂಬ್ಲಿ ಸಭಾಸದರುಗಳು ಸರಕಾರದ ಜನ್ಮಕಬಿಡಿಯುವಾಗ ಮಾಡಬೇಕಾದ ಆವರ ಪೂರ್ವ ಸುವರಕ್ಕೆ ಸರಿಯಾದ ಚಮತ್ಕಾರಿಕ ವಿಧಾನಗಳೂ ಹೊಸ ಹೊಸ ಯುಕ್ತಿವಾದಗಳೂ ಕೇಳುವಂಥಾದ್ದಾಗುವವು ನೋಡ ಬೇಕು ಸೈಬಿಕೆ ಕನ್ನತಿಯೋಕ?

---

೩. ಪರದೇಶಿ ಬಟ್ಟೆಗಳ ಬಹಿಷ್ಕಾರದ ಪ್ರಭಾವವು ಇತ್ತೀಚೆ ಇಂಗ್ಲಂಡದಲ್ಲಿ ಕಂಡುಬರಹತ್ತಿದೆ. ನೂರಕೆಲಸವಿಲ್ಲದ ಕೂಲಿಕಾರರ ಪ್ರಶ್ನವನ್ನು ಸಮಾಧಾನಕರವಾಗಿ ಬಿಡಿಸುವದು ಕಠಿಣವಾಗಿದ್ದು, ಈಗಿನ ಬಹಿಷ್ಕಾರದಿಂದ ಕೂಲಿಕೆಲಸ ಕಡಿಮೆಯಾಗುತ್ತ ಅದು ಇನ್ನಷ್ಟು ಬಿರುಸಾಗುತ್ತ ನಡೆದದೆ. ಮೆಂಚೆಸ್ಟರದ ನೂಲಿನ ಕಾರಖಾನೆಯವರು, ತಮ್ಮ ಮಾಲಿಗೆ ಗಿರಾಕಿಗಳಿಲ್ಲದ್ದರಿಂದ, ವಾರಕ್ಕೆ ೫ ದಿವಸಗಳ ಬದಲಾಗಿ ೪ ದಿವಸ ಕಾರಖಾನೆಯನ್ನು ಚಾಲು ಇಡುವ ವಿಚಾರ ನಡಿಸಿರುವರಂತೆ! ಬರೇ ಎಂಗ್ಲೋ-ಇಂಡಿಯನ ಪತ್ರಗಳೊಳಗಿನ ನಮ್ಮ ಬಹಿಷ್ಕಾರದ ವಿಡಂಬನೆಯನ್ನು ಓದಿ, ಅದರ ಯಥಾಸ್ಥಿತ ಜ್ಞಾನವಿಲ್ಲದ ಅವರಿಗೆ ಅದರ ಪ್ರಭಾವವು ಕಾಲಾಂತರದಿಂ

ದ ಹೆಚ್ಚೆಚ್ಚು ಕಂಡುಬರುವದು. ಆದರೆ ತರ್ಕಕ್ಕೆ, ಹಿಂದುಸ್ಥಾನದಲ್ಲಿ ಮೇಯಿದ್ದು ಪ್ರಸ್ತುತಾಪದ ಇಂಥ ಪರಿಸ್ಥಿತಿಯನ್ನು ಕಂಡು, ಭಾರತಮಂತ್ರಿ ಮೊಂಟೆಗ್ಯೂಗಳ ಮೇಲೆ ಬೆಂಕಿ ಕಾರುತ್ತಿರುವರು. ಭಾ। ಮಂತ್ರಿಗಳ ಬದ್ಧದ್ವೇಷಿಗಳಾದ ಲಾರ್ಡ ಸಿಡನಹೆಮ ಸಾಹೇಬರು "ಮೊಂಟೆಗ್ಯೂ ಸಾಹೇಬರು ಭಾರತ ಮಂತ್ರಿಗಳಾದಂದಿನಿಂದ ಈ ದೇಶದಲ್ಲಿ ಸರಕಾರದ ಇಜ್ಜತು ಕ್ರಮೇಣ ನಷ್ಟವಾಗಿ, ಇವರ ದುರ್ಬಲತೆಯಿಂದಲೇ ಇಂಥ ಪ್ರಚಂಡ ಚಳವಳವು ಶಕ್ಯವಾಗಿದೆಯೆಂದೂ, ಇವರನ್ನು ಕಿತ್ತು ಹಾಕಿ, ಸಬ್ಬಾಳಿಕೆಯಿಂದ ಈ ಚಳವಳವನ್ನು ಬಡೆದು ಹಾಕಬೇಕೆಂದೂ" ಈಗ ಹೇಳುತ್ತಿರುವರು. ಒಟ್ಟಿಗೆ, ನಮ್ಮ ದೇಶದ ಸ್ವಾರ್ಥವನ್ನು ನಾವು ಸ್ವಾವಲಂಬನದಿಂದ ಸಾಧಿಸುವದು ಇವರಿಗ ಸೇರದಿರುವದೆಂದ ಮೇಲೆ ಬ್ರಿಟಿಷರು ಇಲ್ಲಿ ಬರೇ ನಮ್ಮ ಕಲ್ಯಾಣಕ್ಕಾಗಿ ರಾಜ್ಯವಾಳುತ್ತಿರುವರೆಂಬ ಇವರ [illegible] ಸ್ಪಷ್ಟವಾದಂತಾಯಿತಷ್ಟೆ!

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ [illegible] ತಾರೀಖಿನ ದಿನ ಇಲ್ಲಿಯ ಗಿ. ಹೈಸ್ಕೂಲಿನ ವಿದ್ಯಾರ್ಥಿಗಳು ಹೊನ್ನಾವರಕ್ಕೆ ಹೋಗುತ್ತಿರುವಾಗ ಹಳದಿಪುರದಲ್ಲಿ ಒಂದು ಮನೆ ಸುಡ ಹತ್ತಿದ್ದನ್ನು ಕಂಡು ತಕ್ಷಣವೇ ಪಯೋಸವಟ್ಟು ಬೆಂಕಿಯನ್ನು ನಂದಿಸಿದರು. ಆ ಬಳಿಕ ಅಲ್ಲಿ [illegible] ಸಹಾಯಕರ ಅಧ್ಯಕ್ಷತೆಯಲ್ಲಿ [illegible] ಸಭೆಯನ್ನು [illegible] ಕೂಡಿಸಿ ಭಾಷಣ ಮಾಡಿದರು. ಈ ಭಾಷಣಗಳ ಸುದ್ದಿಯು [illegible] ತಿಳಿದು [illegible] ಶಾಲಾ ಡಿರೆಕ್ಟರ [illegible] ಜನಾಬ [illegible] ಸಹಜವು ಸ್ವದೇಶೀ ಚಳವಳದಲ್ಲಿದ್ದರೂ, ಆದರ [illegible] ಉಪದೇಶ ಮಾಡುವದೆಂದರೆ, ವಿದ್ಯಾರ್ಥಿಗಳಿಗೆ [illegible] ರಾಜಕಾರಣ" ದಲ್ಲಿ [illegible] ಮಾಡಿದಂತಾಗಿಲ್ಲವೇ?

[illegible] ಕನ್ನಡ ಶಾಲೆಯಲ್ಲಿಯ ಮರಾಠಿ [illegible] ಪ್ರೀತ್ಯರ್ಥ ರಾ। ರಾ। [illegible] ರಾಮಚಂದ್ರ ಪೈ ರವರ ಅಧ್ಯಕ್ಷತೆ ಕೆಳಗೆ [illegible] ಸಭೆ ಕೂಡಿ ಅದು ದಾಷ್ಟಗಿಂದ [illegible] ಸಂಗವಾಯಿತಂತೆ. ಜೋಡಿ ಯಾರೂ [illegible] ಹಸ್ತಕ್ಷೇಪ ದಿಲ್ಲೆಂದು ತಿಳಿಯುತ್ತದೆ.

[illegible] ಯುವರಾಜರ ಸ್ವಾಗತಕ್ಕಾಗಿ ಇಲ್ಲಿ ಹರತಾಳವು ಸಂಪೂರ್ಣವಾಗಿ ಆಚರಿಸಲ್ಪಟ್ಟಿತು. ಆದಿನ ದಿವಸ ಬಜಾರವು ಶಾಂತ, ನಿರ್ಜನ ಪ್ರದೇಶವಾಗಿತ್ತು. ಗಾಡಿಕಾರರೂ, ತಲೆ ಹೊರೆಯುವರೂ, ಕೆಲಸಿದ ದೂಸರ ಜನ ಉದ್ಯೋಗಕ್ಕೆ ರಜೆ ಕೊಟ್ಟಿದ್ದರು.

[illegible] ದಿಸ್ಟ್ರಿಕ್ಟ ಜಡ್ಜರು ಇಲ್ಲಿ ಬಿಡಾರ ಮಾಡಿದ್ದು, ಕೋರ್ಟಿನ ಇನ್ಸ್ಪೆಕ್ಷನದ ಕೆಲಸವು ನಡೆದದೆ.

ಮೊದಲು ಜಾಹೀರ ಮಾಡಿದಂತೆ, ತಾ। ೧೩ ನೇ ಆದಿತ್ಯವಾರ ದಿವಸ ಸಾಯಂಕಾಲಕ್ಕೆ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ಶ್ರೀ ಮಾಧವ ರಾವ ಕಾನಭಾಗ ಇವರ ಅಧ್ಯಕ್ಷತೆಯ ಕೆಳಗೆ ಕುಮಟಾ ತಾಲೂಕಾ ಕೊಂಗ್ರೆಸ ಕಮಿಟಿಯ ಮೆಂಬರರ ಮಹಾ ಸಭೆಯು ಕೂಡಿ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು. ಸಭೆಗೆ ಅಜಮಾಸ ೩೦೦ ಮೆಂಬರರು ಹಾಜರ ಇದ್ದರು.

೧— "ಯಾವ ಸರಕಾರವು ಹಿಂದುಸ್ಥಾನದ ಆರ್ಥಿಕ ಸ್ಥಿತಿ, ಹಾಗೂ ರಾಜಕೀಯ ಅವನತಿಯನ್ನುಂಟು ಮಾಡುವದೋ, ಯಾವ ಸರಕಾರವು ರೌಲಟ ಆಕ್ಟದ ಚಳವಳಿಯಂಥ ಪ್ರಸಂಗದಲ್ಲಿ ನ್ಯಾಯದ ಆಕಾಂಕ್ಷೆಗಳನ್ನು ಮುರಿಯುವದಕ್ಕೆ ತನ್ನ ಸೈನಿಕರನ್ನೂ ಪೋಲೀಸರನ್ನೂ ಉಪಯೋಗಿಸುತ್ತಿರುವದೋ, ಯಾವ ಸರಕಾರವು ಹಿಂದುಸ್ಥಾನಕ್ಕೆ ಏನೂ ಅನ್ಯಾಯ ಮಾಡದಂಥ ಅರಬೀ, ಇಜಿಪ್ತಯನ್-ಮತ್ತು ತುರ್ಕರ ಸ್ವಾತಂತ್ರ್ಯ ಹರಣಕ್ಕಾಗಿ ತನ್ನ ಸೈನಿಕರನ್ನು ಉಪಯೋಗಿಸುತ್ತಿರುವದೋ, ಅಂಥಾ ಸರಕಾರದ ನೌಕರಿಯಲ್ಲಿರುವದು ಮತ್ತು ವಿಶೇಷತಃ ಲಷ್ಕರೀ ಸೈನಿಕನಾಗುವದು ಹಿಂದೀ ಜನರ ರಾಷ್ಟ್ರೀಯ ಸ್ವಾಭಿಮಾನಕ್ಕೆ ವಿರುದ್ಧವಾಗಿರುವದೆಂದು ಈ ಸಭೆಯ ಅಭಿಪ್ರಾಯವಿರುವದು.

ಪ್ರತಿಒಬ್ಬ ಸೈನಿಕನೂ ಇತರ ನೌಕರನೂ ಸರಕಾರದ ಸಮ್ಬಂಧವನ್ನು ಕಡಿದು ಹಾಕಿ ಉಪಜೀವನಕ್ಕಾಗಿ ಬೇರೆ ಉಪಾಯಗಳನ್ನು ನೋಡಿಕೊಳ್ಳುವದು ಅವನ ಕರ್ತವ್ಯವೆಂದು ಈ ಸಭೆಯ ಅಭಿಪ್ರಾಯವಿರುವದು."

ಈ ಠರಾವನ್ನು ಸಭೆಯಲ್ಲಿ ಹಾಜರ ಇದ್ದ ಬಹುತೇಕ ಎಲ್ಲಾ ಜನರು ಎದ್ದು ನಿಂತು ಸ್ಪಷ್ಟ ಉಚ್ಚಾರ ಮಾಡಿ, ಅದಕ್ಕೆ ತಮ್ಮ ತಮ್ಮ ಸಹಿಗಳನ್ನು ಕೊಟ್ಟಿರುವರು.

೨ ನೇ ಠರಾವು— ಕುಮಟಾ ತಾಲೂಕಾ ಕೊಂಗ್ರೆಸ ಕಮಿಟಿಯ ತರ್ಫೆನಿಂದ ಕರ್ನಾಟಕ ಪ್ರಾಂತಿಕ ಕಮಿಟಿಗೆ ಶ್ರೀ. ಶ್ರೀಪಾದರಾವ ವೆಂಕಟೇಶಯ್ಯಾ ಕಲ್ಯಾಣಪೂರಕರ ಇವರು ಪ್ರತಿನಿಧಿಯರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ.

೩ನೇ ಠರಾವು.— ಇದೇ ತಿಂಗಳ ತಾರೀಕ ೧೭ ನೇ ದಿವಸ ಮುಂಬಯಿ ಶಹರದಲ್ಲಿ ಯುವರಾಜರ ಆಗಮನವು ಆಗತಕ್ಕದಿರುವದರಿಂದ ಆ ದಿವಸ ಎಲ್ಲ ಹಿಂದೀ ಜನರು ಪೂರ್ಣ ಹರತಾಳ ಮಾಡಬೇಕಾಗಿ ಅಖಿಲ ಭಾರತೀಯ ಮಹಾಸಭೆಯ ಕಮಿಟಿಯ ಠರಾವು ಆದಂತೆ ಅದಕ್ಕನುಸರಿಸಿ ನಮ್ಮ ತಾಲೂಕಿನಲ್ಲಿ ಸಹ ಸದರಿ ದಿವಸ ಪೂರ್ಣ ಹರತಾಳ ಮಾಡಬೇಕಾಗಿ ಈ ಸಭೆಯು ನಿರ್ಣಯಿಸುತ್ತದೆ.

ಕಾರವಾರ— ಯುವರಾಜರ ಆಗಮನದ ತಾ। ೧೭ನೇ ದಿವಸ ಕಾಂಗ್ರೆಸಿನ ಆಜ್ಞೆಗೆ ಅನುಸಾರವಾಗಿ ಸಾರ್ವಜನಿಕ ಹರತಾಳವು ಆಚರಿಸಲ್ಪಟ್ಟಿತು. ಕಾಂಗ್ರೆಸ ಕಮಿಟಿಯ ಮಾಜೀ ಉಪಾಧ್ಯಕ್ಷರಾದ ರಾ। ಹರೀ ಬಾಬುರಾವ [illegible] ಇವರ ಮಾಲಿಕೆಯ ಕಾಮತ ಬ್ರದರ್ಸ ಇವರದೊಂದು ದುಕಾನು, ಮೆಸರ್ಸ ಮುಜುಮದಾರ ಕಸಬೇಕರ ಬ್ರದರ್ಸ ಇವರದೊಂದು ದುಕಾನು, ಹೀಗೆ ಸುಶಿಕ್ಷಿತರೆಂದೆನಿಸಿಕೊಳ್ಳುವವರ ಎರಡು ಅಂಗಡಿಗಳನ್ನು ಬಿಟ್ಟು ಉಳಿದ ಎಲ್ಲ ಅಂಗಡಿಗಳು ಬಂದ ಇದ್ದವು. ಹರತಾಳವು ಸ್ವೇಚ್ಛಾಪ್ರೇರಿತವಾಗಿರಬೇಕಾಗಿ ಕಾಂಗ್ರೆಸಿನ ಆಜ್ಞೆಯಿರುವದರಿಂದ, ಅವರಿಗೆ ಯಾರೂ ಹೆಚ್ಚಿನ ಆಗ್ರಹ ಮಾಡಲಿಕ್ಕೆ ಹೋಗಲಿಲ್ಲ. [illegible] ಎಲ್ಲ ವ್ಯಾಪಾರಿಬಂಧುಗಳ ದಿಶೆ ಒಂದಾದರೆ, ಇವರ ದಿಶೆ ಮತ್ತೊಂದೆಂಬದರಿಂದ "ಮ ದಾದೆಃ (ಹರೇಃ) ತೃತೀಯಃ ಪಂಥಾಃ" ಎಂಬದು ಸಿದ್ಧವಾಯಿತು!

ಪ। ಪ। ಜಯರಾಮಾಚಾರ್ಯರು ಸದ್ಯವೇ ಇಲ್ಲಿಗೆ ಬರುವ ತಮ್ಮ ಕಾರ್ಯಕ್ರಮವನ್ನು ಬದಲಾಯಿಸಿ, ದಾರವಾಡಕ್ಕೆ ಹೋಗಿ ಹಿಂದಿನಿಂದ ಬರುವೆವೆಂದು ಹೇಳಿರುವರಂತೆ. ಕೀರ್ತನ ಕೇಸರಿಯವರ ಆಗಮನದ ನಿರೀಕ್ಷಣೆಯಲ್ಲಿಯೇ ಜನರಿರುವರು.

ಹೋದ ೧೩ನೇ ತಾರೀಖಿಗೆ ಇಲ್ಲಿ ಬಂದ 'ಹಿಂದುಗರಿ' ಬೋಟಿಯ ಮೇಲೆ ಪಸಂಜರರಾದ [illegible] ಎಂಬವರು ಮಾರ್ಗದಲ್ಲಿ ಮದಿರಾಪಾನ ಮಾಡಿ ಅದರಿಂದ ಅವರಿಗೆ ಆವೇಶ ಬಂದು ಅವರಿಗೂ, ಅಸಿಸ್ಟಂಟ ಇಂಜಿನಿಯರರಿಗೂ ಕಲಹವಾಗಿ ಪರಸ್ಪರ ಹೊಯಿಮಾಡಿಕೊಂಡರು. ಸದ್ರಿ ಚೇಷ್ಟೆಯು ಬಹಳೇ ವೇಳೆ (ಸುಮಾರು ೨ ತಾಸು) ನಡೆದದ್ದರಿಂದ ಬೋಟಿಯ ಮೇಲಿನ ಇತರ ಜನರಿಗೆ ಬಹಳೇ ತ್ರಾಸು ಆಯಿತು. ಕಟ್ಟಕಡೆಗೆ ಅಲ್ಲಿದ್ದ ಚೀಫ ಆಫೀಸರರು ತಮ್ಮ ಖಲಾಸಿ ಜನರಿಂದ ಸದ್ರಿ ಜೆಂಟಲ್ಮನ ಸಾಹೇಬರಿಗೆ ಹಿಡಿಸಿ ಹಗ್ಗದಿಂದ ಕಟ್ಟಿ ಹಾಕಿಸಿ 'ಕೆಬಿನ'ದಲ್ಲಿ ಒಯ್ದು ಇಟ್ಟರು. ಬೋಟಿಯು ಕಾರವಾರ ಬಂದರದಲ್ಲಿ ಬಂದಮೇಲೆ ಅವರಿಗೆ ಬಿಡಿಸಿದರು. ಮ [illegible] ಪೋಲಿಸರ ಸಹಾಯದಿಂದ ಅವರಿಗೆ ಕೆಳಗೆ ಇಳಿಸಬೇಕಾದರೆ ಬಹಳೇ ಪ್ರಯಾಸವಾಯಿತು. ಇಂಥಾ ಮದಿರಾ ಪಾನದಿಂದ ಆಗುವ ಚೇಷ್ಟೆಗಳು ಇನ್ನು ಮುಂದೆ ಆಗದಂತೆ ಮಾಡುವ ಬಗ್ಗೆ ಅಧಿಕಾರಿಗಳು ಯೋಗ್ಯ ತಜವೀಜು ಮಾಡುವರೆಂದು ನಂಬುತ್ತೇವೆ.

ಈ ಬೋಟಿಯು ಹೋದ ಶನಿವಾರ ೧೨ ಘಂಟೆಗೆ ಬಿಡುವದು ಆದಿತ್ಯವಾರ ೯ ಘಂಟೆ ಸುಮಾರಕ್ಕೆ ಬಂತು. ಇಷ್ಟು ವೇಳೆ ಮಾರ್ಗಾಂತರದಲ್ಲಿ ವಸ್ತ್ರಿಲು ಇಳಿಸಲಿಕ್ಕೆ ನಿಲ್ಲಾವರೆಂಬ ಜಾಹೀರ ಮಾಡದೇ ಇದ್ದವರಿಂದ ಪ್ರಸಂಜರ ಜನರಿಗೆ ಊಟವಿಲ್ಲದೆ ಬಹಳೇ ತ್ರಾಸು ಆಯಿತಂತೆ. ಇದರ ಮೇಲಿಂದ ಜನರ ಸುಖ ವ ಅನುಕೂಲತೆಯ ಬಗ್ಗೆ ಬೋಟಿಯ ಅಧಿಕಾರಿಗಳ ಲಕ್ಷವು ಹೋಗತಕ್ಕಷ್ಟು ಇನ್ನೂ ಹೋಗಲಿಲ್ಲೆಂಬ ಸ್ಪಷ್ಟ ಕಾಣುತ್ತದೆ.

ಇಲ್ಲಿಯ ಜವಳಿ ಸಾವಕಾರರಾದ ಅಮ್ಮದಖಾನ ಇವರು ಹೋದ ತಿಂಗಳ ೩ ನೇ ತಾರೀಕಿಗೆ ಸಿವಿಲ ಹೊಸ್ಪಿಟಲಕ್ಕೆ ಹೋದಾಗ ಡಾ, ಸಾಲ್ಡಾನ್ಹಾ ಇವರು ಕೂತುಕೊಳ್ಳುವ ಖೋಲಿಯಲ್ಲಿ ಪ್ರವೇಶಿಸಿದರೆಂದು ಸದ್ರಿ ಡಾಕ್ಟರ ಸಾಹೇಬರು ಅವರಿಗೆ ಬೈದದ್ದು ಸಿವಿಲ್ ಸರ್ಜನರ ಮುಂದೆ ಎಳೆದದ್ದು ಬಗ್ಗೆ ಇಲ್ಲಿಯ ಶಹರ ಮೆಜಿಸ್ಟ್ರೇಟ ಮಿ ಗುಲ್ವಾಡಿ ಇವರ ಮುಂದೆ ಫಿರ್ಯಾದಿ ದಾಖಲಾಗಿತ್ತು. ಸದ್ರಿ ಫಿರ್ಯಾದಿಯು ಮೆಜಿಸ್ಟ್ರೇಟರು ಸ್ವತಃ ಮಾಡಿದ ಪೂರ್ವ ವಿಚಾರವು ಬಹಳೇ ದಿನ ನಡೆದು, ಮೈಮೇಲೆ ಕೈ ಹಾಕಿದ ಬಗ್ಗೆ ಫಿರ್ಯಾದಿಯನ್ನು ವಿಚಾರದ ಕಿವಾಯ ತೆಗೆದು ಹಾಕಿದರು. ಅವೇ ಫಿರ್ಯಾದಿಯಲ್ಲಿ ಅಪಮಾನ ಮಾಡಿದ ಬಗ್ಗೆ ವಿಚಾರ ನಡೆಯಿತು. ಫಿರ್ಯಾದಿ ತರ್ಫೆನಿಂದ ಸಿವಿಲಸರ್ಜನರ ವ ಡಾಕ್ಟರ ನಾಡಕರ್ಣಿ ಮುಂತಾದವರ ಆರೋಪಿಯು ಅಪಶಬ್ದಗಳನ್ನು ಆಡಿದ ಬಗ್ಗೆ ಸಾಕ್ಷಿಯೂ ಆಯಿತು. ಆಮೇಲೆ ಆರೋಪಿಯು ಸದ್ರಿ ಅಪಶಬ್ದಗಳನ್ನು (ಅಂದರೆ ಮುಂತಾದ) ತಾನು ಉಚ್ಚರಿಸಲಿಲ್ಲೆಂತ ನಕಾರಾರ್ಥವಾಗಿ ಜಬಾನಿ ಕೊಟ್ಟನು. ಹೀಗಿದ್ದರೂ ಮೆಜಿಸ್ಟ್ರೇಟರು ಸಿವಿಲ್‌ಸರ್ಜನ ವ ಡಾಕ್ಟರ ನಾಡಕರ್ಣಿ ಇವರ ಸಾಕ್ಷಿಯು ಪೂರ್ಣ ವಿಶ್ವಸನೀಯವೆಂತಲೂ ಆರೋಪಿಯ ಜಬಾನಿಯು ನಿಜವಲ್ಲೆಂತಲೂ ಹೇಳಿ ಆರೋಪಿಯು ಮನಸ್ಸಿನಲ್ಲಿ ಫಿರ್ಯಾದಿಗೆ ಅಪಮಾನ ಮಾಡುವ ಹೇತು ಇರಲಿಕ್ಕಿಲ್ಲವೆಂದು ತಾವೇ ಊಹಿಸಿ ಆರೋಪಿಗೆ ಡಿಸ್ಚಾರ್ಜ ಮಾಡಿಬಿಟ್ಟು ಕೊಟ್ಟರಂತೆ! ಆರೋಪಿಯು ಉಚ್ಚರಿಸಿದ ಅಪಶಬ್ದಗಳಿಂದ ಬೇರೆಯವರಿಗೆ ಅಪಮಾನವಾಗುವಂತಿದ್ದರೆ, ಅವನ ಹೇತು ಅಪಮಾನ ಮಾಡುವದು ಇಲ್ಲೆಂತ ಆರೋಪಿಯು ಹಾಗೆ ಹೇಳದೆ ಮೆಜಿಸ್ಟ್ರೇಟರಿಗೆ ಹ್ಯಾಗೆ ಕಲ್ಪನೆ ಮಾಡಲಿಕ್ಕೆ ಬಂತೆಂದು ಹೇಳುವದು ಕಠಿಣ.

ಹೊನ್ನಾವರ— ತಾ. ೧೬ನೇ ದಿವಸ ಯುವರಾಜರ ಆಗಮನದ ಸಂಬಂಧ ಶಾಂತತಾಮಯ ಹರತಾಳ ಆಚರಿಸುವದು ನಿಶ್ಚಯಿಸಿದಂತೆ ಆ ದಿವಸ ಹೊನ್ನಾವರ ಶಹರದೊಳಗಿನ ಎಲ್ಲಾ ದುಕಾನುಗಳು ಪೂರ್ಣದಿಂದ ಇಟ್ಟು ಅದೇ ದಿವಸ ಮಧ್ಯಾಹ್ನ ೩-೪ ಘಂಟೆ ಸಮಯಕ್ಕೆ ಟಪ್ಪರ ಹೋಲಿನಲ್ಲಿ ಸಭೆಸೇರಿ ಅಲ್ಲಿ ಶ್ರೀಯುತ ಕರ್ಕಿಯವರ ಭಾಷಣ ಮತ್ತು ಶ್ರೀ। ರಾಮಯ್ಯರ ಹರಿಕೀರ್ತನೆಯೂ ಆಯಿತು. ಸಭೆಗೆ ಬಹಳೇ ಜನರು ಕೂಡಿದ್ದರು.

ತಾಲೂಕಾ ಲೋಕಲ ಬೋರ್ಡ ಅಧ್ಯಕ್ಷ ಉದ್ಯಾವರ ಮುಕುಂದರಾವ ಇವರು ಮಂಕಿ ಪೋರೆಶ್ವರರಮೇಲೆ ೫೦೦ನೇ ಕಲಮಿನಂತೆ ದಾಖಲ ಮಾಡಿದ ಫಿರ್ಯಾದಿಯು ವಿಚಾರಕ್ಕೆ ತಾ ೧೪ ಕ್ಕೆ ಇತ್ತು. ದಾದಿಯಿಂದ ಫಿರ್ಯಾದ ವರಲ ತಕ್ಕೊಂಡಿರುತ್ತಾರಂತ.

ಇಲ್ಲಿಯ ಮುನ್ಸಿಫಂತ ಈ ವರೆಗೆ ೩೯೯-೪-೬ ಜಮಾ ಆಗಿರುತ್ತದೆ ಕಳೆದ ವಾರಲಾಗಾಯಿತು ವಾರ್ತೆಗಳನ್ನು ಒದಲಾಯಿಸಿ ಹೆಚ್ಚಿನ ವಾರ್ತೆಗಳನ್ನು ಮಾಡಿದ್ದರಿಂದ ಅಕ್ಕಿ ಲಿಲಾವು ವ ನಗದಿ ಹಣ ೩೪-೧-೬ ಕೂಡಿತು. ಸರಕಾರಿ ನೌಕರರು ಮಾತ್ರ ಮುಷ್ಟಿಫಂಡ ಕೊಡಬಾರದಾಗಿ ಅವರಿಗೆ ಮೇಲಿಂದ ಹುಕುಮ ಆಗಿ ಅದೆ ಎಂತ ಕೊಡಲಿಲ್ಲಾ. ಉದ್ಯೋಗಧಂದೆ ಕೆಲಸಕ್ಕೆ ಈ ಫಂಡು ಖರ್ಚ ಮಾಡುವರಿದ್ದದರಿಂದ ಇದಕ್ಕೆ ಪ್ರತಿಯೊಬ್ಬ ನಾಗರಿಕನು ತನ್ನಕೈಲಾದ ಮಟ್ಟಿಗೆ ಮದತ್ತ ಮಾಡುವದು ಅಗತ್ಯವಿರುತ್ತದೆ.

ದೇ। ಭ। ದೇಶಪಾಂಡೆಯವರ ಮೇಲಿನ ಖಟ್ಲೆಯು ಇದೇ ಒಬರದ ೨೨ನೇ ತಾರೀಕಿಗೆ ಇಟ್ಟಿದ್ದರಿಂದ, ಗದಗದ ಕರ್ನಾಟಕ ಪ್ರಾಂತಿಕ ಕಮಿಟಿಯು ತಾ. ೨೧ರ ಬದಲಾಗಿ ತಾ. ೨೪ನೇ ದಿವಸ ಕೂಡುವದೆಂದು ತಂತಿಯು ಬಂದದೆ.

ಗೋಕರ್ಣ—ಇಲ್ಲಿಯ ಪ್ರಸಿದ್ಧ ಸಾಧು ಸದಂಬೇಶ್ವರ ಇವರು ರಾಷ್ಟ್ರಕಾರ್ಯಕ್ಕೆಂತ ಕೀರ್ತನ ಕೇಸರಿಯವರಿಗೆ ೧೦೦ ರೂಪಾಯಿಯ ದೇಣಿಗಿಯನ್ನು ಕೊಟ್ಟರು. ದೇಣಿಗಿ ಕೊಡುವಕಾಲಕ್ಕೆ ಅವರು ಮಾಡಿದ ಭಾಷಣವು ಸ್ವರಾಜ್ಯ ಚಳವಳಿಕ್ಕೆ ವೇದಾಂತದ ಆಧಾರಕೊಟ್ಟು ಸ್ವಾನಿಕ ಚಳವಳಕ್ಕೆ ಬಳ್ಳೆ ಉತ್ತೇಜನಕ ಮತ್ತು ಅಮೂಲ್ಯವಾದ ಜ್ಞಾನದಾನ ಮಾಡಿದರು.

ಶ್ರೀಮತಿ ಗಂಗಾಬಾಯಿ ಸೋಹನಿ ಇವರು ಶ್ರೀಮಹಾಬಳೇಶ್ವರ ದೇವರಿಗೆ ಬೆಳ್ಳಿ ಚಂಬನ್ನೂ ರಾಷ್ಟ್ರಕಾರ್ಯಕ್ಕೆ ಒಂದು ಬೆಳ್ಳಿಹರಿವಾಣವನ್ನೂ ಕೊಟ್ಟರು.

ಶಿರಾಲಿ— ಮಾವತ್ತು ಈ ದೇಶಕ್ಕೆ ಯುವರಾಜರ ಆಗಮನ ಆಗುವದರಿಂದ ಕೊಂಗ್ರೆಸ ಕಾರ್ಯಕಾರಿ ಕಮಿಟಿಯ ಆಜ್ಞೆಯ ಮೇರಿಗೆ ಈ ಊರಲ್ಲಿ ಪೂರ್ಣ ಹರತಾಳವನ್ನು ಆಚರಿಸಿ, ಅವರ ಸ್ವಾಗತದ ನಿಷೇಧವರ ತರಾಪ್ತ ಮಾಡಾಯಿತು

ಸಿರ್ಸಿ— ಚಳಿಯು ಅತಿಶಯ ಬೀಳಹತ್ತಿದೆ. ಅದಿಕೆ ವ್ಯಾಪಾರವು ಭರದಿಂದ ನಡೆದದೆ.

ಕಳೆದ ತಾ ೧೧ನೇ ಶುಕ್ರವಾರ ೧೨ ಘಂಟೆಯ ಸುಮಾರಕ್ಕೆ ಊರಲ್ಲಿ ಮಹಾತ್ಮಾ ಗಾಂಧಿಯವರ ಫೋಟೋದ ಮೆರವಣಿಗೆಯಾಯಿತು.

ಬಜಾ ಅಂಗಡಿಯವರು ಕೂಡಿ ಇನ್ನು ಬಜಾ ಮಾಡಲಿಕ್ಕಿಲ್ಲೆಂದು ಪ್ರಮಾಣ ಮಾಡಿರುವರು ಕಲ್ಕ ಇದ್ದ ಚರಾ ಹುಡಿಯನ್ನು ನಾಶ ಮಾಡುವ ಉದ್ದೇಶ ವ್ಹಿಜಲಿನ್ನ ಕವಿಯುಡು ಸ್ವಾಧೀನ ಮಾಡಿರಾರು ಇದರಿಂದ ಈ ಊರಲ್ಲಿ [illegible]ವಿಕ್ಕೆ ಬರುತ್ತಿದ್ದು ಅಪಮಾನ ೧೫ [illegible] ಮದವೇ ಸಕ್ಕರೆಗೆ ಬಹಿಷ್ಕಾರವಾದಂತಾಯಿತು.

ವಿಕಟಂಗದ ಕೆಲಸವು ಸುವ್ಯವಸ್ಥಿತ ರೀತಿಯಿಂದ ಸೂಸೂತ್ರವಾಗಿ ನಡೆದದೆ. ೪೦-೪೫ ಸ್ವಯಂ ಸೇವಕರಿದ್ದು, ಎಲ್ಲರೂ ತಮ್ಮ ಕಾರ್ಯವನ್ನು ಬಹು ಜಾಗ್ರತೆಯಿಂದಲೂ, ಕುಶಲತೆಯಿಂದಲೂ, ಮಾಡುತ್ತಿರುವರು

ಇಲ್ಲಿ ತಾ ೧೩ನೇ ರವಿವಾರ ಶ್ರೀ। ವೆಂಕಟರಮಣ ನಾಡಗೇರಿ ಇವರ ಅಧ್ಯಕ್ಷತೆಯಲ್ಲಿ ಜಾಹೀರ ಸಭೆಕೂಡಿ ಸರಕಾರದಿಂದ ಶಿಕ್ಷೆ ಹೊಂದಿದ ಮೌ। ಹಬಿಬುಲ್ಲಾಖಾನರನ್ನು, ಅಲ್ಲಿಬಂಧು, ವಾ ಶಿಕಲು ಮೊದಲಾದವರನ್ನು ಮದ್ರಾಸದ ಜನಾಬ ಯಾಕೂಬ ಹುಸೇನರನ್ನು ಅಭಿನಂದಿಸುವ ಠರಾವುಗಳೂ ಪಾಸಾದವು.

ಸಿದ್ದಾಪುರ— ಇಲ್ಲಿ ಮಳೆ ಇಲ್ಲ. ಅಲ್ಲಲ್ಲಿ ರೋಗರಾಯಿಗಳು ಇದ್ದಾವೆ ತಾ. ೬-೧೧-೨೧ ಕ್ಕೆ ಪುನಃ ಶ್ರೀ। ಕರ್ಕಿಯವರ ಅಧ್ಯಕ್ಷತೆ ಕೆಳಗೆ ಜಾಹೀರ ಸಭೆ ಗೂಡಿ ಶ್ರೀ। ಮುದವತೇಕರರ ಭಾಷಣಗಳಾದವು ಮತ್ತು ಶ್ರೀ। ಕೃಷ್ಣಾ-ಅನಂತ ಬಜ ಕರ್ಕಿ ದೊಡ್ಡ ಮನೆ ಶ್ಯಾನಭಾಗ ವ ಹವಾಸೂರ ಪಾಟೀಲ ಈರನ್ನಾಕನು ಈ ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿರುತ್ತಾರೆ.

ಅಮದಾಬಾದದಲ್ಲಿ ಕೂಡುವ ಆಲ್ ಇಂಡಿಯಾ ಕಾಂಗ್ರೆಸ ಸಭೆಗೆ ಸಿದ್ದಾಪುರ ತಾಲೂಕ ವತಿಯಿಂದ ಇಲ್ಲಿಯ ಶ್ರೀ। ಡಿ. ಆರ್. ದಾಸ್ ವ ಶ್ರೀ। ಭಾಸ್ಕರ ವಿಷ್ಣು ಪ್ಪಾ ನಿಗಳೆ ಇವರನ್ನು ಪ್ರತಿನಿಧಿಗಳನ್ನಾಗಿ ಸರ್ವಾನುಮತದಿಂದ ಆರಿಸಿದರು, ಮತ್ತು ಪ್ರಾಂತಿಕ ಕೊಂ। ಕಮಿಟಿಗೂ ಇವರೇ ಪ್ರತಿನಿಧಿಗಳಾಗಿ ಆರಿಸಿದರು.

ಮತ್ತು ಜೇಮ್ಸ್ ಗ್ರೀನ್ ಶೋಪ್ (ಅಗ್ಗದ ಅಕ್ಕಿ ಅಂಗಡಿ) ತೆರೆಯುವ ಸಂಬಂಧದಿಂದ ಈ ತಾಲೂಕ ಜನರು ಕೊಟ್ಟ ವರ್ಗಣಿ ಬಾಬತು ಸುಮಾರು ೮೦೦ ರೂಪಾಯಿಗಳು ತಾಲೂಕ ಕಚೇರಿಯಲ್ಲಿದ್ದದ್ದು ಮರತ ತೆಗೆದುಕೊಂಡು ಅದನ್ನು ಸಾರ್ವಜನಿಕ ಹೋಲ್ ಕಟ್ಟುವ ಬಗ್ಗೆ ಖರ್ಚ ಮಾಡಬೇಕಾಗಿ ಸರ್ವಾನುಮತದಿಂದ ತರ[illegible]ಸಾಯಿತು.

ಕಾನಡಾಜಿಲ್ಲೆಯ ಪ್ರತಿನಿಧಿಗಳು.

ಅಮದಾಬಾದ ಕೊಂಗ್ರೆಸಿಗೆ ಪ್ರತಿನಿಧಿಗಳು

—ಕಾರವಾರ ಶ್ರೀ। ಗಣಪತ ಸದಾಶಿವ ನಾಡಕರ್ಣಿ, ಕುಮಟಾ ಶ್ರೀ। ಗಣಪತರಾವ ಮಾಸೂರಕರ, ಸಿರ್ಸಿ ಶ್ರೀ। ವಾಸುದೇವ ಕೊಲ್ಹಾಳಿ, ಮತ್ತು ಶ್ರೀ ಅಬ್ದುಲ ಸಮ್ಮದ (ಮುಸಲ್ಮಾನರ ವತಿಯಿಂದ) ಯಲ್ಲಾಪುರ ಶ್ರೀ। ಶಾಮರಾವ ಭಿಡೆ; ಹೊನ್ನಾವರ ಶ್ರೀ ವಾಸುದೇವ ಶ್ಯಾನಭಾಗ, ಶಿಂಗ್ರಿ ಪದಕೀ, ತಾಲೂಕ ಕಮಿಟಿ, ಸಿದ್ದಾಪುರ ಶ್ರೀ। ಗೋಪಾಳರಾವ ದೇಶಪಾಂಡೆ ಜಿಲ್ಲಾ ಕಮಿಟಿಯಿಂದ ಶ್ರೀ। ಮಂಜುನಾಥ ಕರ್ಕಿ, ಹೊನ್ನಾವರ, ಶ್ರೀಮತಿ ಸೌ। ಕಮಲಾಬಾಯಿ ಸತಿಹಿತ್ಲು, ಮತ್ತು ಶ್ರೀಮತಿ ಸೌ। ರಮಾಬಾಯಿ ಕಲ್ಯಾಣಪೂರ ಕುಮಟಾ, ಶ್ರೀಮತಿ ಸೌ। ಕೃಷ್ಣಾಬಾಯಿ ಬಿಡೂರ, ಇವರಲ್ಲದೆ ಇನ್ನೂ ೫ ಹೆಸರು ನಿರ್ವಾಚನ ಮಾಡಿ ಆದೆ.

ಕರ್ನಾಟಕ ಪ್ರಾಂತಿಕ ಕಮಿಟಿಗೆ

—ಕಾರವಾರ, ಶ್ರೀ। ಕೃಷ್ಣರಾವ ಹಳದೀಪೂರ, ಕುಮಟಾ ಶ್ರೀ। ಶ್ರೀಪಾದರಾವ ಕಲ್ಯಾಣಪೂರಕರ, ಸಿರ್ಸಿ ಶ್ರೀ। ವಾಸುದೇವರಾವ ಕೊಲ್ಹಾಳಿ, ಹಳಿಯಾಳ ಶ್ರೀ। ಶ್ಯಾಮರಾವ ಭಿಡೆ, ಮತ್ತು ಅಬ್ದುಲ್ ಕಾದರ [illegible], ಸಿದ್ದಾಪುರ, ಶ್ರೀ। ಗೋಪಾಳರಾವ ದೇಶಪಾಂಡೆ, ಹೊನ್ನಾವರ ಶ್ರೀ। ಬಿಡೂರ ರಾಘವೇಂದ್ರರಾವ, ಮತ್ತು ಶ್ರೀ। ಮಂಜುನಾಥ ಭಟ್ಟ ಕರ್ಕಿ, ಸ್ತ್ರೀಯರ ತರ್ಫೆನಿಂದ ಶ್ರೀಮತಿ ರಮಾಬಾಯಿ ಕಲ್ಯಾಣಪೂರ, ಈ ರೀತಿ ಪ್ರತಿನಿಧಿಗಳನ್ನು ಆರಿಸಲ್ಪಟ್ಟಿತು. ಸಭೆಗೆ ಸಿರ್ಸಿಯಿಂದ ಶ್ರೀ। ವಾಸುದೇವರಾವ ಧಾಕಪ, ಶ್ರೀ। ವಾಸುದೇವರಾವ ಕೊಲ್ಹಾಳಿ, ಅಬ್ದುಲ ಸಮದ ವಗೈರೆರು ಬಂದಿದ್ದರು.

ಲೋಕಮಾನ್ಯ ಟಿಳಕರ ದರ್ಶನ.

ಧಾರವಾಡ ಜಿಲ್ಲೆಯ ಗುತ್ತಲ ಎಂಬಲ್ಲಿಯ ಮಾರುತೀದೇವರ ವಿಗ್ರಹದ ಎದೆಯಮೇಲೆ ಅಶ್ವಿನ ವದ್ಯ ೧೪ ದಿವಸ ಲೋಕಮಾನ್ಯ ಟಿಳಕರ ಮುಖಮುದ್ರೆಯು ಕಾಣುತ್ತಿತ್ತಂತೆ' ಈ ವಾರ್ತೆಯನ್ನು ಕೇಳಿ, ಊರ ಜನರು ಹಿಂದೂ ಮುಸಲಮಾನ ಲಿಂಗಾಯತ ವ ಇತರ ಜಾತಿಯ ಜನರು ಬಂದು ದರ್ಶನವನ್ನು ಕೊಂಡು ಹೋದರಂತೆ! ಈ ಆಶ್ಚರ್ಯಕರ ದೃಶ್ಯವು ಮಾರನೇ ದಿನ ಪೂಜೆಯು ಆಗುವತನಕ ಕಾಣುತ್ತಿದ್ದು ಆಮೇಲೆ ಅದೃಶ್ಯವಾಯಿತೆಂದು ಧಾರವಾಡದ ವಿಜಯ ಪತ್ರದಿಂದ ತಿಳಿಯುತ್ತದೆ.

ಸರಕಾರಿ ನೌಕರಿಗೆ ರಾಜಿನಾಮೆ.

ಈ ಬ್ರಿಟಿಶ ಗವರ್ನಮೆಂಟಿನಲ್ಲಿ ತಮ್ಮ ಜನ್ಮಸಿದ್ಧ ಹಕ್ಕಿನ ಸಲುವಾಗಿಯೂ, ದೇಶಕಲ್ಯಾಣಕ್ಕಾಗಿಯು ಕಾದಾಡುತ್ತಿರುವ ನಮ್ಮ ದೇಶಬಾಂಧವರಿಗೆ ಅನ್ಯಾಯವಾಗಿ ನಾನಾತರದ ಕಷ್ಟಕೊಡುತ್ತಿರುವದು ನೋಡಿ ಇಂಥ ಗವರ್ನಮೆಂಟಿನ ನವಕರಿ ಮಾಡುವದು ಅಧರ್ಮವೆಂದು ತಿಳಿದು ನೋನ ಕೋಅಪರೇಶನ ತತ್ವಕ್ಕೆ ಒಳಪಟ್ಟು ನನಗಿರುವ ಗುಲಾಮಗಿರಿ ಮಾಸ್ತರಿ ನವಕರಿಗೆ ಇಂದೇ ರಾಜಿನಾಮೆ ಕೊಟ್ಟಿದ್ದೇನೆ ದುರ್ಮತಿ ಸಂ। ಕಾರ್ತಿಕ ಶುದ್ಧ 2 ಮಂಗಳವಾರ. ಭಾಸ್ಕರ ಶಂಕರಶಾಸ್ತ್ರಿ, ಗೋಕರ್ಣ

ಶ್ರೀ। ಕಮಲಾಬಾಯಿಯ ಅಬಲಾ ಸಂಜೀವನಿ ಗುಳಿಗೆ.

ಬರೇ ಸ್ತ್ರೀಯರಿಗೆ ಔಷಧ.

ಪ್ರಾಯ ಬಂದಂದಿನಿಂದ ಸ್ತ್ರೀಜಾತಿಯ ಸಾಯುಂತ ಎಲ್ಲ ಅಪಾಯಕರ ಮತ್ತು ತೀಕ್ಷ್ಣ ಮನೋವೇಧಕ ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ. ೨೫ ವರ್ಷಗಳದುರಭ್ಯ ಇವುಗಳ ಸೇವನೆಯಿಂದ ಯಾರಿಗೂ ಅಪಾಯವಾಗಿಲ್ಲ. ತಪಶೀಲ ಮಾಹಿತಿಯ ಕಟಲಾಗು ಬರೇ ೦-೨-೬ ಸ್ಟಾಂಪು ಕಳುಹಿಸಿದರೆ ಉಚಿತ ಸಿಗುವದು.

ಬಾಟ್ಲಿ ೧ ರ ಕ್ರಯ ೧-೮-೦ ಟಪಾಲ ಖರ್ಚ ಬೇರೆ ವ್ಯಾಪಾರಿಗಳಿಗೆ ಸೋಯಿಯ ದರ.

ಶ್ರೀ। ಕಮಲಾಬಾಯಿ ಜಿ ಎಮ್ ಸಿ ಫಾರ್ಮಸಿ ಕಾಳಬಾದೇವಿಯ ಎದುರಿಗೆ, ಮುಂಬಯಿ.

ಡಾ. ನವರತ್ನಕರ.

ವಿದ್ಯುತ್‌ಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ.

ಇದರಿಂದ ಬಿಳಿ ಬಣ್ಣದ ಕೂದಲು ಕಾಗೆ ಕಪ್ಪಾಗುತ್ತವೆ. ಈ ಕಲಾಪಿನಗುಣಗಳು — ಸುಲಭ ಹಚ್ಚೋಣ, ಇಂಮಾದ ಪರಿಮಳ, ಅಗ್ಗ ಕ್ರಯವೇ ಸರಿ ಬಳಸಿದವರೆಲ್ಲರು ಸಮಾಧಾನಪಟ್ಟಿರುವರು.

ಕ್ರಯ ೧-೦-೦ ಅಂಚೆ ವೆಚ್ಚ ಬೇರೆ ೧೨ ಕ್ಕೆ ೧೫-೮-೦.

ನವರತ್ನ ಮತ್ತು ಸನ್

199, ಕಾಳಬಾದೇವಿ ರೋಡ ಮುಂಬಯಿ.

ಜ್ವರದ ಮೇಲೆ ಪಾಟಣಕರ ಎಗ್ಯು ಮಿಕ್ಸ್ಚರ

ಮಲಶುದ್ಧಿಯಾಗುತ್ತದೆ, ಬೆವರು ಬಂದು ಜ್ವರವು ಬಿಡುತ್ತದೆ ಕ್ರಯ ೦-೧೨-೦ ರೋಕ ವ್ಯಾಪಾರಸ್ಥರಿಗೆ ಅಗ್ಗ

ಪಾಟಣಕರ ಮಾಯದೇವ ಕಂಪನಿ ಮುಂಬಯಿ ೪

ಮ. ಗಾಂಧಿಯವರ ಅಪ್ಪಣೆ.

ವಿಲಾಯತಿ ವಸ್ತ್ರಾಲಿಗೆ ಬಹಿಷ್ಕಾರ.

ನಮ್ಮಲ್ಲಿ ಸೂಕ್ತಿಗೆಯುವ ದಾಹಾಟೆ(ಚರಕ), ಶುದ್ಧ ಖಾದಿ ರಾಷ್ಟ್ರಗೀತೆ ಮಹಾತ್ಮಾ ಗಾಂಧಿಯವರ ಫೋಟೋಗಳು, ಬೇರೆ ತರದ ಸ್ವದೇಶೀ ವಸ್ತ್ರಾಲು ಸಹಾಯಕ ದರದಿಂದ ಸಿಗುವದು

ಕ್ರಾಂಡ ಸಾಲ ತಗೆದು ತಯಾರವಾದೀರ ಪೀಟಿಬೇರೆ ನವ ನಮೂನೆ ಖಾದಿಯ. ಸದ್ಯದಲ್ಲಿ ಬರುವರುಂಟು ವ್ಯಾಪಾರಸ್ಥರಿಗೆ ಭರಪೂರ ಕಮೀಶನ ಕೊಡುವೆವು.

ಕುಡ್ಲ ವಾಸುದೇವ ಪಾಂಡುರಂಗ ಶ್ಯಾನಭಾಗ, ಮತ್ತು ಬ್ರದರ್ಸ

ಹೊನ್ನಾವರ, ಜಿ ಕಾರವಾರ

ಅನುಭವಸಿದ್ಧವಾದ ಔಷಧಗಳು !!!

ವಿಶ್ವಸ್ಯ ಹಸ್ತ ಕೃತಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿಯಮೇಲೆ ಅತಿ ಉತ್ತಮ ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ.

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ದುರ್ಬಲತೆ, ನಪುಂಸಕತ್ವ, ಸ್ವಪ್ನಾವಸ್ಥೆ, ರಕ್ತದೂಷಿತರೋಗ, ಮೇಂದುವಿಕಾರ ನರಗಳ ಅಶಕ್ತತೆ, ಅಂಗವಿಸ್ತೇಜತ್ವ, ಧಾತುರೋಗು ವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉಪದಂಶವಿಕಾರ, ಮೂತ್ರಕಟ್ಟಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವು, ಕಾಂತಿಯೂ, ಸ್ಮರಣಶಕ್ತಿಯೂ, ಕೂಡ ವೃದ್ಧಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ. ಉತ್ತಮ ಗುಣಕ್ಕೆ ೪೨ ದಿವಸ ಬೇಕು. ಗುಳಿಗೆ ೮೪ ಕ್ಕೆ ರೂ ೪-೦-೦

(೧) ಬಾಲಾಮೃತಗುಟಿಕಾ:— ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ್ದು. ಗುಳಿಗೆ ೩೦ ಕ್ಕೆ ರೂ. ೧-೦-೦ (೨) ಸ್ವಪ್ನಾವಸ್ಥೆಮೇಲೆ ಚೂರ್ಣ:— ೧೪ ದಿವಸದ ಔಷಧಕ್ಕೆ ರೂ. ೨-೦-೦ (೩) ಗಜಕರ್ಣ ನಾಶಕ ಮಲಮ — ಡಬ್ಬಿಗೆ ಆಣೆ ೦-೮-೦. (೪) ಮೂಲವ್ಯಾಧಿ ನಾಶಕಗುಳಿಗೆ.— ಎಳು ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ. ೨-೦-೦.

ಅನುಮಾನಪತ್ರ ಔಷಧಿಯ ಸಂಗಡ. ಅಂಚೆ ವೆಚ್ಚ ಬೇರೆ

ವಿಳಾಸ:— ವೈದ್ಯ ವ್ಹಿ. ಎಸ್. ಮೋಡಕ, ಮತ್ತು ಕಂಪನಿ, ಪೋಸ್ಟ ಸಿರಸಿ, ಜಿಲ್ಲಾ ಉತ್ತರಕಾನಡಾ.

ರಾಷ್ಟ್ರೀಯ ಪಕ್ಷದ ವಾರಪತ್ರಿಕೆ.

ನವೀನ ಭಾರತ.

(ವಾರ್ಷಿಕ ವರ್ಗಣೀ ಅಂಚೇ ವೆಚ್ಚ ಸೇರಿ ರೂ. ೩.)

ಇದರಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ, ಮನೋವೇಧಕವಾಗಿಯೂ ಚರ್ಚಿಸಲ್ಪಡುವವು.

ಸ್ವದೇಶೀ, ಬಹಿಷ್ಕಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖಗಳೂ ಪ್ರಕಟಿಸಲ್ಪಡುವವು. ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಅವಶ್ಯವಾಗಿಯೂ ನೋಡಬೇಕು. ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿರುವದರಿಂದ, ಜಾಹೀರಾತುಗಾರರಿಗೂ ಅತಿಶಯ ಅನುಕೂಲ.

ವಿಳಾಸ— ನವೀನ ಭಾರತ ಕಾರ್ಯಾಲಯ, ಬಾಗಲಕೋಟೆ (ಜಿ. ವಿಜಾಪೂರ)

Notice to Investors.

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD SILVER etc Usual commission is charged *Please apply to Messrs*

Gunshekhar & Co.
IRANI BUILDINGS,
Tardeo Road,
BOMBAY. 7.

Telegrams- Vaijayanti.

FREE. FREE.

Purchasers of 36 tins of our well renowned Ringworm Ointment, price As 4 per tin or of 12 Phials of Otto Mushkhina, Price As 12 per tube will be sent.

A WRIST WATCH FREE

King George Coronation Co., BOMBAY No. 4.

ಸ್ಪೆಶಲ್ ಮೊಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ಪತ್ತೆಯಮೇಲೆ ಬರೆಕೊಳ್ಳಬಹುದು. ಸವಲತ್ತಿಯ ದರಗಳು ಇಟ್ಟಿರುವೆವು.

ನಮ್ಮ ಪತ್ತೆ.—

ಗ್ಯಾತೋಂಡೇ ಬ್ರದರ್ಸ,

ಮೊಟರ ಡೀಲರ್ಸ, ರಿಪೇರರ್ಸ.

ಕಾರವಾರ.

ಫಸ್ಟ್‌ಕ್ಲಾಸ ಯಶ ಸರ್ಟಿಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪೌಷ್ಟಿಯಾಗಿ ಶರೀರವು ಕಾಂತಿಗೊಳಿಸುವದು. ಇದಲ್ಲದೆ ಕೆಮ್ಮು ದಮ್ಮು, ಕಫ, ವಾತ,-ಪಿತ್ತ, ನಿದ್ದೆ, ಇಲ್ಲಾಗೋಣ, ಮಲ ವಿಸರ್ಜನೆ ಸರಿಯಾಗಿ ಆಗದಿರೋಣ, ಅಜೀರ್ಣ ಜ್ವರ, ಸ್ತ್ರೀಯರ ಗರ್ಭದೋಷ, ಹುಡುಗರ ಹೊಟ್ಟೆಯ ಎಲ್ಲಾ ಬೇನೆಗಳು ಬೇಗನೇ ಗುಣಹೊಂದುವವು. ಉಪಯೋಗಿಸಿ ನೋಡಿರಿ. ೨೦ ತೊಲೆ ಡಬ್ಬಿ ೧ ಕ್ಕೆ ರೂಪ್ಯಾ ೧

ಕೆರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ ಡಿಪೋ, ಕುಮಟಾ. (ಕಾನಡಾ)

Printed and pubushed by Krishnarao Keshav Shenvi at his Star of Karara Press, Kumta

Reg No B. 1270.

ವರ್ಷ ೭.

ಕಾನಡಾವೃತ್ತ.

THE KANARA NEWS.

ಸಂಚಿಕೆ ೭.

ಪತ್ರದ ವರ್ಗಣಿ:-

ಕುಮಟೆಯಲ್ಲಿ ಆಗಾವು ರೂಪಾಯಿ 2-4-0.

ಮನೆಯಾರ್ಡರಿಯಿಂದ ರೂ. 3-0-0.

ವ್ಹಿ. ಪಿ. ಅಂಚೆವೆಚ್ಚ ಸೇರಿ ರೂಪಾಯಿ 3-2-0

ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತುಗಳ ದರ:-

ಕನ್ನಡ, ಇಂಗ್ಲಿಷ ಪ್ರಾಣ್ಹಾ(ಗಅ ಎಮ್ ಟಾಪ್ಟ) ೫ ಸಾಲುಗಳ ವರೆಗೆ ರೂ. 1-0 0

ಅನಂತರ ಪ್ರತಿ ಸಾಲಿಗೆ 0-2-0.

ಹೆಚ್ಚಿಂಗದ ಸಾಲು ಎಷ್ಟು ಜೊತ್ತಿರುವದೋ ಆ ಮಾಪದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

[ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೨೪ ನೋಹ ನವಂಬರ ಸನ್ ೧೯೨೧ ನೇ ಇಸವಿ.]

...ಲ್ಲಿನ ಡಾಕ್ಟರ ಕೃಷ್ಣರಾವು ಆವಾತ.



...ಚಿನ್ನದ ರಾಜಮುಕುಟದ ಘಟ್ಟ ಮತ್ತು ಸಂಕವ ಕೆ...ದಲ್ಲಿ ಪಾರಂಗತರಾದ ಸ್ನಾವು ಸುಧಾರಿಸಿದ ಹೊಸ ಪದ್ಧ...ಯಿಂದ ಹಲ್ಲುಗಳನ್ನು ತೆಗದು ಹಾಕುವೆವು. ಇದೇ ಹ...ಕಡ್ಡಿ ಶುದ್ಧ ಮಾಡಿ ಚಿನ್ನ ಬೆಳ್ಳಿಯಿಂದ ತುಂಬಿ ಕೊಡು...ಡುವು, ಯಂತ್ರದಿಂದ ಹಲ್ಲುಗಳ ಮೇಲಿನ ಪೊಳೆವನ್ನು ...ದು ಅವುಗಳನ್ನು ಸ್ವಚ್ಛ ಹೊಳೆಯುವ ಹಾಗೆ ಮಾಡಿ...ಡುವೆವು ಹಲ್ಲುಕಡ್ಡಿಗಳನ್ನು ಔಷಧಹಚ್ಚಿ ನೋಯಿ...ದ ತೆಗದುಕೊಡುವೆವು. ಬಿದ್ದು ಹೋದ ಹಲ್ಲುಗಳ ಕಡ್ಡಿ...ನ್ನು ದುರುಸ್ತ ಮಾಡಿ ಸರಿಯಾಗಿ ಕೂಡಿಸಿಕೊಡುವೆವು ...ತಿ ಕೆಲಸವು ವಿಶ್ವಾಸದಿಂದ ಮತ್ತು ಅಗ್ಗವಾಗಿ ಮಾಡ...ಡುತ್ತದೆ.

Javeri Mansion

near Marwadi Vidyalaya,
Sandhurst Road.
BOMBAY No 4.

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾರ ವಗೈರೆ ವಿಚಾ...ಕೆಳಗಿನ ಪತ್ತೆಗೆ ಮುಕ್ತಾ ತಿಳಿದುಕೊಳ್ಳ...ಬಹುದು.

ಪುರುಷೋತ್ತಮ ಲಕ್ಷುಮಯ್ಯ ಕ್ಯಾನಭಾಗ.

...ಗಡೇಕರ, ದುಕಾನ, ಕುಮಟಾ.

...ಕಾರ್ಡಸ್ಯಾಜ ಫೋಟೋ.

...ಮಹಾತ್ಮಾ ಗಾಂಧಿ, ಕೈ। ಲೋ। ಟಿಳಕ, ...ಮೌಲಾನಾ ಶೌಕತ ಅಲ್ಲಿ, ದೇ। ಲಾಲಾ ಲಜಪತರಾ...ಯ ಇವರ ಉತ್ತಮ ಕಾರ್ಡ ಸ್ಯಾಜಿನ ಫೋಟೋಗ...ಳು ನಮ್ಮಲ್ಲಿ ಸಿಗುವವು

ಕ್ರಯ.— ೧ಕ್ಕೆ ೬ಪೈ, ೧ ಡಜನ ಬೇಕಾದವರು ೫ ...ಣೆ ಸ್ಟಾಂಪುಗಳೂ ಮತ್ತು ೧೦೦ ಬೇಕಾದವರು ೧-೧೨-೦ ...ಮನಿಯಾರ್ಡರದ್ವಾರಾ ಹಣವು ಕಳುಹಿಸಬೇಕು. ಸಂಪ...ಗಳು ಬೇಕಾದರೆ, ೨॥ ಆಣೆಯ ಸ್ಟಾಂಪುಗಳು ಕಳುಹಿ...ಬೇಕು.

ಪತ್ತೆ— ಸ್ಟಾರ ಆಫ್ ಕೆನರಾ ಪ್ರೆಸ್ಸ,

ಕುಮಟಾ (ಎನ್. ಕೆನರಾ,)

ಮೋಟಾರ.

ಹಾವೇರಿಯಿಂದ— ಶಿರಸಿಗೆ ಮತ್ತು ಶಿರಸಿಯಿಂದ ಹಾವೇರಿಗೆ, ಪ್ರತಿ **ಆದಿತ್ಯವಾರ-ಗುರುವಾರ** ಮೋಟಾರ ನಡಿಸುವ ವ್ಯವಸ್ಥೆ ಇಟ್ಟಿದೆ. ಹಾವೇರಿಯಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಶಿರಸಿಯಿಂದ ಮಧ್ಯಾಹ್ನ ೨ ಘಂಟೆಗೆ ಹೊರಡುವದು. ಹಾವೇರಿಯಲ್ಲಿ ಅಥವಾ ಶಿರಸಿಯಲ್ಲಿ ಆರಕ್ಕಿಂತ ಹೆಚ್ಚು ಜನರು ಸಿಕ್ಕರೆ ಬೇರೆ ದಿವಸಗಳಲ್ಲಿ ಸಹ ನಡಿಸುವೆವು

ಟಿಕೇಟುಗಳು ಶಿರಸಿಯಲ್ಲಿ ಕೇಪಗಿರಿರಾವ ಧಾಕಪ್ಪನವರ ಇವರ ಅಂಗಡಿಯಲ್ಲಿ, ಮತ್ತು ಹಾವೇರಿಯಲ್ಲಿ ಸ್ಟೇಶನದ ಹತ್ತರ ಕೇಳಕರರ ಬಂಗ್ಲೆಯಲ್ಲಿ ಸಿಗುವವು

ಕುಮಿಟ್. ಎಲ್. ಧಾಕಪ್ಪಾ

ಅಗ್ಗ] [ಅಗ್ಗ

ಮಳೆಗಾಲ ಮತ್ತು ಬಿಸಿಲು ದೆಸೆಯಿಂದ ಬೇಕಾಗುವ ಎಲ್ಲ ತರದ ಹೊಸ ಛತ್ರಿಗಳು, ಜ್ವರ, ಕೆಮ್ಮು, ಜಂತು, ಹೆಂಗಸರ ಗರ್ಭಾಶಯದ ವಿಕಾರ, ಪರಮಾ ಅಶಕ್ತತೆ ವಗೈರೆ ವಿಕಾರದ ಮೇಲೆ ಖಾತ್ರಿದಾಯಕ ಪೇಟೆಂಟ ಔಷಧಗಳೂ, ಸ್ಟೇಶನರಿ, ಮಣ್ಯ್ಯಾಮರಿ ವಗೈರೆ ಸಾಮಾನುಗಳೂ, ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗೆಗಳೂ ಕಂಬಳೀ ಟೊಪ್ಪಿಗೆಗಳೂ ಅಗದೀ ಕಡಿಮೆ ದರಕ್ಕೆ ಕೊಡಲಾಗುವದು.

ಎಸ್. ಎಲ್. ಧಾಕಪ್ಪ ಮತ್ತು ಬಂಧು

ಶಿರಸಿ.

ಭಡತೀ ಭ್ರಾತೃಸಂಘದ

ಅನುಭವಸಿದ್ಧವಾದ

ಜ್ವರದ ಗುಳಿಗೆಗಳು. ಕ್ರಯ.— ೨೫ ಕ್ಕೆ ೦-೧೦-೦.

ಉತ್ತಮ ನೀಲಗಿರಿ ಎಣ್ಣೆ, ಹಿತ್ತಾಳಿ ನಿಪ್ಪ, ಉಂಚಿ ಕಾಬೂಲೀ ಹಿಂಗು, ಇದಲ್ಲದೆ, ಗೋಕರ್ಣ ಮಹಾಬಲೇಶ್ವರ ದೇವರ ಫೋಟೋಗಳೂ, ಶ್ರೀ ಮಂದಿರದ ಫೋಟೋಗಳೂ, ಶಾಲೋಪಯೋಗಿ ಪುಸ್ತಕಗಳೂ, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋ. ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬ್ಯಾಜುಗಳು ದೊರೆಯುತ್ತವೆ. ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು. ಡಜನ ೧ ಕ್ಕೆ ೩-೦-೦. ಟಪಾಲ ಖರ್ಚು ಬೇರೆ.

ಪತ್ತೆ:— ಬಿ. ಎಂ. ಪೈ ಹೊನ್ನಾವರ

(ಉತ್ತರ ಕಾನಡಾ)

ಸತ್ಯಮೇವ ಜಯತೇ.

(ಗುಣಬಾರದಿದ್ದರೆ ಹಣ ಪರತು.)

ಧಾತುಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಗಟ್ಟಾಂಶವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯಸಂಚಿಕ ಗರ್ಮಿ, (ಚಾಶಿ) ಗುಪ್ತಪ್ರದೇಶದಲ್ಲಿ ಹುಟ್ಟಿರುವ ಎಲ್ಲತರದ ಒಕ್ಕೆಗಳು ಹುಣ್ಣುಗಳು ಪಿತ್ತದ ಬಾವೆಗಳು ಕಟಿಶೂಲಿ ವಾತರೋಗ ಮುಂತಾದವು ಆತಿತ್ವರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಟ ಖ. ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ

ವಿಳಾಸ:— **ಜಿ. ಎಲ್. ಜೋಶಿ ಕಂಪನಿ.**

ಪೋಸ್ಟ— ಶಿರಸಿ. ಉತ್ತರ ಕಾನಡಾ.

ಸವಲತು.

ಬಗ್ಗೋಣ ರಾಮಾ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ.

ಈ ವರ್ಷ ಕೇಕಡಾ ರೂ. ೧೨-೮-೦ ಇಟ್ಟಿದೆ. ಆದರೆ, ಇದೇ ನವಂಬರ ತಿಂಗಳ ಆಖೈರೊಳಗೆ, ಮುಂಗಡ ಹಣ ಕೊಡುವವರಿಗೆ ರೂಪ್ಯಾ ೧೧-೮-೦ ರ ಸವಲತಿ ದರ ಇಟ್ಟಿದೆ. ಅವಶ್ಯವಿದ್ದವರು ಇದರ ಪ್ರಯೋಜನ ಪಡೆಯಬಹುದು

ಮಾಲಕ, ಸ್ಟಾರ ಆಫ್ ಕೆನರಾ ಪ್ರೆಸ್,

ಕುಮಟಾ.

ಜಗತ್ಪ್ರಸಿದ್ಧವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯಾ ಸರಕಾರದಲ್ಲಿ ಸ. ೧೯೦೭ ನೇ ಇಸ್ವಿಯ ೨೫ ನೇ ಅಕ್ಟೋಬರದಲ್ಲಿ ರಜಿಸ್ಟರ ಮಾಡಲ್ಪಟ್ಟ

ಅರ್ಕಶಫಾ ಅಥವಾ ಆರೋಗ್ಯಬಿಂದು.

ಈ ಅರ್ಕಶಫಾ ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯಾಗಿ ತಾ ೧೦-೮-೧೯೦೮ನೇ ಇಸ್ವಿಯಿಂದ ತಾ|| ೧-೯-೧೯೧೮ ನೇ ಇಸ್ವಿಯವರಿಗೆ ಮೂವತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಮತ್ತು ಸನ್೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ ದೊಡ್ಡ ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು. ಅಂದ ಮೇಲೆ ಈ ಔಷಧವು ಎಷ್ಟು ಮೌಲ್ಯವಾನ ಅದೆ ಇದು ಯಾವತ್ತರು ತಾವೇ ಅನುಭವಕ್ಕೆ ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟು ಕೊಂಡು ಅಮೃತವೇ ಎಂದು ತಿಳಿದು ಸ್ವೀಕಾರಮಾಡುತ್ತಿರಬೇಕು ಈ ಆರೋಗ್ಯಬಿಂದು ಇಡೀ ಕರ್ನಾಟಕ ದೇಶಕ್ಕೆಲ್ಲಾ ಹೋಗಿ ರೋಗಿಗಳು ಈ ಅರ್ಕಶಫಾದಿಂದಲೇ ಗುಣಹೊಂದಿದ ಬಗ್ಗೆ ಮತ್ತು ಯಾವತ್ತು ರೋಗಕ್ಕೆ ಉಪಯೋಗ ಆದ [illegible] ಎಷ್ಟೋ, ಇನಾಮು ಸರ್ಟಿಫಿಕೇಟುಗಳು ಸಹ ದೊರೆದಿರುತ್ತವೆ. ಅವು ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ ಸ್ವೀಕರಿಸಿ ರೋಗರಹಿತರಾಗುವರೆಂದು ನಂಬುತ್ತೇನೆ. ರೋಗದ ಪರೀಕ್ಷೆಯ ಸಲುವಾಗಿ ಬೇರೆ ಡಾಕ್ಟರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅಂದ ಮೇಲೆ ಈ ಆರೋಗ್ಯಬಿಂದುವಿನ ಮೇಲೆ ಪಾರ್ಕ್ಟ ಮಾಡಿದೆ ಕೆಳಗೆ ಬರೆದ ರೋಗಗಳ ಮೇಲೆ ಉಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು.

ಕ್ಷಯರೋಗ, ಹತದರೋಗ, ಪಾಂಡುರೋಗ, ಗುಲ್ಮರೋಗ, ಮಲರೋಗ, ಮಹಾಮಾರಿ(ಕಾಲರಾ), ಪ್ಲೇಗು, ಚಳಿಜ್ವರ, ವಿಷಮಜ್ವರ, ಇನ್‌ಫ್ಲೂಯಂಜಾಜ್ವರ, ಅನೇಕಪ್ರಕಾರದಜ್ವರ ಗಂಡಮಾಲೆ, ಕಿವಿಶೂಲೆ, ಮೂಗಿನೊಳಗಿನ ಬಾವು, ಮೂರ್ಛೆ ರೋಗವು, ಕಣ್ಣಿನೊಳಗೆ ಹೂವು ಬೆಳೆಯೋದು, ಮತ್ತು ಕಣ್ಣುನೋವು, ಕೆಮ್ಮು, ದಮ್ಮು, ಶ್ವಾಸ, ಅಜೀರ್ಣ ಇದ್ದ ಲಿಪಿ, ಅಜೀರ್ಣ, ಹೊಟ್ಟೆಶೂಲಿ, ಪಿತ್ತಶೂಲಿ, ಅರಕಲೇಶೂಲಿ, ನಡಶೂಲಿ, ವಾತಶೂಲಿ, ರೇತ್ರಜಡತ್ವ, ಗುಪ್ತ ಸ್ತನಬೇನೆ, ಹುರುಕು ಕಜ್ಜಿ, ಗಜಕರ್ಣ, ಇಸಬು, ಕಡ್ಡು, ಭಾಜುವ ಗಾಯ, ನಾರಹುಣ್ಣು, ಸ್ತ್ರೀಯರ ಹೊಟ್ಟೆಶೂಲಿ, ಹಡದನಂಜು, ಸಣ್ಣ ಕೂಸುಗಳ ಬಾಲಗ್ರಹ, ಅರವಿ, ಮುಟ್ಟುದೋಷ, ಹೊಟ್ಟೆ ರೋಡ ದಾಗೋಣ, ಮೊಲೆಬೇಳೋಣ, ಸಣ್ಣ ಕೂಸುಗಳಿಗೆ ವೈದ್ಯರಿಗೂ ಕೂಡ ತಿಳಿಯದ ಇದ್ದ ಅನೇಕ ರೋಗಗಳು ಖಾತ್ರಿಯಿಂದ ಗುಣವಾಗುತ್ತವೆ. ಈ ಆರೋಗ್ಯಬಿಂದುವಿನ ಕ್ರಯ ಅಮೌಲ್ಯ ಕಂಡು ಬಂದಲ್ಲಿ ಬಡವರಿಗೂ ಧನವಂತರಿಗೂ ಸರಿಯಾಗಿ ಬಹಳ ಕಡಿಮೆ ಬೆಲೆ ಇಟ್ಟಿರುತ್ತದೆ. ಒಂದು ಕಾಲುತೊಲೆ ಬಾಟ್ಲಿ ಒಂದಕ್ಕೆ ಎರಡುರೂಪಾಯಿ. ನಮೂನೆ ಉದ್ದಕ್ಕೆ ಐದು ಆಣೆ ಹೂಸದ ಬಾಟ್ಲಿ ಒಂದಕ್ಕೆ ಎಂಟು ಆಣೆ ವಿ. ಪಿ ಖರ್ಚು ಬೇರೆ ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು ಬಾಟ್ಲಿಗಳು ಕಮಿಶನ್ ಕೊಡುತ್ತೇವೆ. ಇದಕ್ಕೆ ಒಂಬತ್ತು ಆಣೆ ಖರ್ಚು ಬರುವದು. ಒಂದರಿಂದ ಹನ್ನೊಂದನು ಬಾಟ್ಲಿಯರಿಗೆ ಕಮಿಶನ್ ಇಲ್ಲ ಇದಕ್ಕೆ, ಆರು ಆಣೆ ಖರ್ಚು ಬರುವದು. ಒಂದು ಕಾಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ. ಇದಕ್ಕೆ ಖರ್ಚು ಏಂಟು ಆಣೆ ಬರುವದು. ನಮ್ಮ ಔಷಧವು ಖೋಟಿ ಹೊರಟರೆ ಪರತ ತಕ್ಕೊಳ್ಳುತ್ತೇವೆ. ಮತ್ತು ಹೆಚ್ಚಿನ ಮಾಹಿತಿ ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ ಲಗತ ಇಡದ ಹೊರತು ದೊರೆಯಲಿಕ್ಕಿಲ್ಲ. ಅನುಪಾನದ ತ್ರಿಕೆಯು ಕನ್ನಡ, ಮರಾಠಿ, ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ. ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲಿಷ ಅಥವಾ ಕನ್ನಡದಲ್ಲಿ ನಾವು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್. ಎ. ಮುಲ್ಲಾ, ಸಂಪಾದಕ ಅರ್ಕಶಫಾ,
ಹೆಡ್ ಆಫೀಸು ಶಾಹಾಪೂರ, ಬೆಳಗಾಂವ.

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ.— ಬಹಳ ಶ್ರಮಪಟ್ಟು ಕೆಲಸ ಮಾಡುವ ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು ಮಲಬದ್ಧತೆ, ಶರೀರಗಳ ಘಳಿಕದಿಂದ ಅಶಕ್ತಿ ಹೊಂದಿದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದರೆ ರಕ್ತಶುದ್ಧಿ, ಧಾತುಪುಷ್ಟಿ ಮತ್ತು ಮುಖದಲ್ಲಿ ಕಾಂತಿ ಗೋಚರಿಸುವದು. 10 ದಿನ ಸೇವಿಸುವ ಲೇಹ ಡಬ್ಬಿ 1 ಕ್ಕೆ 1-14-0 3 ಡಬ್ಬಿಗಳಿಗೆ 4-12-0.

2 ಮಹಾಜ್ವರಾಂಕುಶ:— (ಖಾತ್ರಿ ಗುಣ):- ಇನ್‌ಫ್ಲೂಯಂಜಾ ಸಿಪಾಸಿಯಾ, ದಿವಸಕ್ಕೊಮ್ಮೆ ದ್ವಿತೀಯ ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಬಾಟ್ಲಿ 1 ಕ್ಕೆ [illegible]-0

3 ಬಾಲಗ್ರಹ ಗುಟಿಕೆ — ಕೂಸು ಮಕ್ಕಳ ಆಪತ್ಕಾಲ ರಕ್ಷಕ ಬಾಟ್ಲಿ 1 ರ ಕ್ರಯ 0 10 0

4 [illegible] .. ಇದು ಮಾಸಕ್ಕೆ ಶ್ರೇಷ್ಠ ಔಷಧಿ ಒಂದೇ ಗುಳಿಗೆಯಿಂದ ಕಫ ಕಟ್ಟು ಕರಗುವ ಅದ್ಭುತ ಗುಣ ಬಾಟ್ಲಿ 1 ರ ಕ್ರಯ, 0-10-0

5 [illegible] — ಆಯಾಸವನ್ನು ಉಂಟುಮಾಡದ ಸುಖವಿರೇಚಕ ಬಾಟ್ಲಿ 1 ಕ್ಕೆ 0 12-0

ಎಮ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡ್ರೊಗ್ಗಿಸ್ಟ್ಸ್ ರಥಬೀದಿ
ಮಂಗಳೂರ 'ದ ಕ.

ದೇಶ-ಭಕ್ತರಾಸಿರಾ! ಖಾದಿಯನ್ನೇ ಧರಿಸಿರಿ.

ಶುದ್ಧ ಖಾದೀ ಪೂರೈಕೆ.

ನಮ್ಮ ದುಕಾನಿನಲ್ಲಿ ಕೋಟಿನ ವ ಶೈರ್ಟಿನ ಬೇಕಾದಷ್ಟು ತರತರ ನಮೂನೆಯ ಶುದ್ಧ ಖಾದಿಯು ಕ್ರಮವರೆ ಹೊಸದಾಗಿ ಇಟ್ಟಿರುತ್ತದೆ ಲೋಕ ಗ್ರಾಹಕರಿಗೆ ಯೋಗ್ಯ ಸವಲತಿಯಿಂದ ಪೂರೈಸಲ್ಪಡುವದು ಬೇಕಾದವರು ಆರ್ಡರಿನ ಸಗಂಡ ¼ ಮುಂಗಡ ಹಣ ಕಳುಹಿಸಬೇಕು

ಈ ಶಿವಾಯ ಯಾವತ್ತೂ ದೇಶಭಕ್ತರ ಆಕರ್ಷಕ ಫೋಟೋಗಳೂ, ದೊಡ್ಡ ಸೈಜ ಫೋಟೋಗಳೂ, ಲೋಕಲ ಗಳೂ ಸ್ವರಾಜ್ಯ ಕೆಲೆಂಡರಗಳೂ ಸಹ ನಮ್ಮಲ್ಲಿ ಸಿಗುತ್ತವೆ.

ದಿ. ನ್ಯೂ ಎಂಪೋರಿಯಮ್,
ಜನರಲ್ ಮರ್ಚಂಟ್ಸ, ಹೊನ್ನಾವರ.

इमारती लाकडाचा लिलांव.

खाली सही करणार हे सावरगट्टी येथें (मद्रास सदर्न मराठा रेल्वे) खालीं नमूद केलेल्या इमारती लाकडाचा लिलांव तारीख १२ डिसेंबर सन १९२१ सोमवार रोजीं सकाळीं ७ ३०। वाजतां सुरु करून त्या दिवशीं व त्याचे पुढील दिवशीं करणार आहेत.

जात.		संख्या.	घनफूट.
सागवानी	तुळ्या	१२९६	२०७०१
सीसम	,,	१८९३	३४०५३
मत्ती	,,	८४	८८७
नाणा	,,	९९६	१४०७६
इतर जंगली	,,	१०६९	१५२३५
सागवानी	येळे	८००	—
जंगली	येळे	१४६८	—
कापीव लाकूड		—	३९६५

विशेष माहिती खाली सहि करणार यांजकडे मिळेल.

मु० गुंजी. } P. E. Aitchison.
ता ८-११-२१. } डि. फारेस्ट आफीस बेळगांव.

अलेंबिक.

व्हेजीटेबल टॉनिक सिरप— निर्दोष व शुद्ध वनस्पतींच्या सत्वाकांपासून बनविलेलें शक्तिवर्धक औषधी सरबत ह्याच्या सेवनानें बद्धकोष्ट अपचनादि विकार नष्ट होऊन मलकोष्ट शुद्धि होते. भूक लागते व अन्नाचें पचन होऊन शुद्ध रक्त व वीर्यवृद्धि होते. कि. रु. १-८-०

फेब्रोलीन— मलेरिया, हीव, सर्द किंवा दूषित हवेमुळें येणारे साथे, विषारी, अगर इतर ताप, इन्फ्लुएन्झा इ०वर खास गुणकारी. हे केवळ वनस्पतींचे—क्विनाईनचे दुष्परिणाम रहीत—औषध घेतल्यानें अशक्तपणा नयेतां घाम येऊन ताप उतरतो व रोग्यास त्वरीत आराम वाटतो. ३ औं. ब. कि. रु १-०-०

उंची कोलन वाटर व कस्तुरि मिश्र लव्हेंडर— परदेशी मालाला टक्कर देणारीं हीं सुगंधी द्रव्यें आमच्या स्वतःच्या कारखान्यांत तयार होणाऱ्या स्पिरिटमध्यें बनविलीं जात असल्यामुळें गुणांत श्रेष्ठ व किंमतींत स्वस्त आहेत. वि. मा. पत्रद्वारें.

अलेंबिक केमिकल वर्क्स क. लि.
नं. ५० प्रिन्सेस स्ट्रीट मुंबई.

ಜಾಹೀರ ನೋಟೀಸು.

ಈ ಜ್ಯಾಹೀರ ನೋಟಿಸ ಮೂಲಕ ಅಂಕೋಲಾ, ಕಾರವಾರ, ನಂದನಗದ್ದೆ, ಸುಂಕೇರಿ, ಕಡವಾಡ, ಕೋಡಿಬಾಗ, ಅಂಜೆದಿವ ಈ ಊರುಗಳ ಯಾವತ್ತು ಮುಸಲ್ಮಾನ ಧರ್ಮದ ಜನರಿಗೆ ತಿಳಿಸುವದೇನಂದರೆ—

೧೬-೧೧-೧೯೨೧ನೇ ತಾರೀಖಿನ ಮುಸ್ಲಿಮ ಹೆರಾಲ್ಡ್ ವಗೈರೆ ೭ ಗೃಹಸ್ಥರು ಸಹಿಸಿದ ಛಾಪಿ ಜ್ಯಾಹೀರ ನೋಟಿಸು ಮೇಲಿನ ಊರುಗಳಲ್ಲಿ ಪ್ರಕಟವಾಗಿದ ವಿಷಯದಲ್ಲಿ ಜ್ಯಾಹೀರ ಮಾಡುವದೇನಂದರೆ.

ಕಾನಡಾ ಡಿಸ್ಟ್ರಿಕ್ಟ ಕೋರ್ಟ ಅಪೀಲ ನಂಬರ ೧೧೪/೧೯೨೧ ನೇಗೆ ಆದ ಡಿಸ್ಟ್ರಿಕ್ಟ ಜಡ್ಜ ಸಾಹೇಬರ ಠರಾವಿನಂತೆ ಅಂಕೋಲಾ, ಕಾರವಾರ, ನಂದನಗದ್ದೆ, ಕೋಡಿಬಾಗ, ಕಟ್ಟಿಣಕೋಣ, ಕಡವಾಡ, ಅಂಜೆದಿವ, ಕೂಡಾ ಊರಿನ ಮುಸ್ಲಿಮ ಜಮಾತಿನವರು ಯೋಗ್ಯ ರೀತಿಯಿಂದ ನಡಿಸಿದ ಪ್ರಕಿಷ್ಟ ಇಲೇಕ್ಷನ್ನದಲ್ಲಿ ಹಜರತ್ತ ಸಾಹೇಬ ವಲ್ಲದ ಮುರ್ತುಜಾ ಸಾಹೇಬ ಇವರಿಗೆ ಕಾಜಿ ನೇಮಿಸಿ ಸದರಿ ನೋಟೀಸಿನಲ್ಲಿ ನಮೂದ ಇರುವ ಹಪಿಜುದ್ದೀನ ವಲ್ಲದ ಅಬ್ದುಲ ಕರೀಮ ಇವರಿಗೆ ಯಾರೂ ವೋಟ್ಸ ಕೊಡಲಿಲ್ಲಾ. ಸದರಿ ಡಿಸ್ಟ್ರಿಕ್ಟ ಜಡ್ಜ ಸಾಹೇಬರ ಠರಾವು ವ ಮೇಲಿನ ಇಲೇಕ್ಷನ ಠರವಿಸಿ ಉಭಯ ತರ್ಫಿನ ಕಕ್ಷಿದಾರರು ವ ಹೇಳಿಕೆಗಾರರು ಕೇಳಿ ಮೋಹದಬಾನ ಕಲ್ಲೇಕ್ಟರ ಸಾಹೇಬ ಬಹಾದ್ದೂರ ಕಾನಡಾದವರು ಇಲೇಕ್ಷನ್ನದಲ್ಲಿ ನೇಮಕ ಪಡೆದ ಸದರಿ ಹಜರತ್ತ ಸಾಹೇಬರಿಗೆ ಕಾಜಿಯಂತಾ ಕಬೂಲಮಾಡಿ ಅವರ ಹೆಸರು ರಿಕಾರ್ಡ ಆಫ್ ರೈಟ್ಸದಲ್ಲಿ ವ ಸರಕಾರಿ ರಿಕಾರ್ಡದಲ್ಲಿ ಸಹಾ ದಾಖಲ ಮಾಡುವಬಗ್ಗೆ ನಂಬರ ಸಿ.ಎ.ಎಲ್. ೧೧೪-೧೯-೧೯೨೧ನೇ ಹುಕುಂ ಕೊಟ್ಟಿರುತ್ತಾರೆ. ಮತ್ತು ಮೊದಲು ತಪ್ಪಿನಿಂದ ಶೇಕ ಹಾಫಿಜುದ್ದಿನನ ಹೆಸರು ದಾಖಲು ಆದದ್ದು ತೆಗೆದು ಹಾಕಿರುತ್ತಾರೆ. ಈಗ ಪುನಹಾ ಇಲೇಕ್ಷನ ಮಾಡಬೇಕಾಗಿ ಹೇಳುವದು ಗೈರ ಇರುವದರಿಂದ ಸದರಿ ಹಜರತ್ತ ಸಾಹೇಬ ಇವರ ನೇಮಣೂಕಿ ಕೋರ್ಟಿನಿಂದ ರದ್ದಪಡಿಸಿದ ಹೊರ್ತು ಪುನಹಾ ಇಲೇಕ್ಷನ ಮಾಡಲಿಕ್ಕೆ ಯಾರಿಗೂ ಹಕ್ಕು ಇರುವದಿಲ್ಲಾದರಿಂದ ಯಾರೂ ಇಲೇಕ್ಷನ ಮಾಡಬಾರದು. ವ ಸದರಿ ಛಾಪಿ ನೋಟಿಸಿನ ಪ್ರಕಾರ ಯಾರೂ ಇಲೇಕ್ಷನಕ್ಕೆ ಹಾಜರಾಗಿ ವೋಟ್ಸ ಕೊಡಬಾರದು. ಹಾಗೆ ಮಾಡಿದ ಪಕ್ಷಕ್ಕೆ ಸದರಿ ಇಲೇಕ್ಷನ ವ ನೇಮಣೂಕಿ ರದ್ದ ವ ಗೈರಕಾಯದೇಶೀರ ಎಂತಾ ಎಣಿಸಲಾದೀತು. ಅಂಥಾ ಇಲೇಕ್ಷನ ವ ನೇಮಣೂಕಿಯಿಂದ ಯಾರಿಗೂ ಯಾವದೂ ಹಕ್ಕು ಸಿಗಲಿಕ್ಕಿಲ್ಲಾ.

ಕಾರವಾರ— ತಾರೀಖು ೨೧-೧೧-೧೯೨೧.

ಸೈದ ಅಬ್ದುಲ ಕರೀಮ ಸೈದ ಜಮಾಲ, ಕಡವಾಡ, ಅಮ್ಮದಖಾನ ಉಮ್ಮರಖಾನ ದರಾಣ, ನಂದನಗದ್ದೆ. ಸೈದ ಛಮ್ರುದ್ದಿನ್ ಪೀರಜಾದೆ, ಅಂಕೋಲಾ. ಪೆನ್ಶನರ ಇಬ್ರಾಹಿಮಖಾನ, ಮುಹಮ್ಮದನ ಕವಿನ್ಸಿಟ ಮೆಂಬರ. ಶೇಕ ಹುಸೇನ ಶೇಕ ಹೈದರ, ಪೋಲಿಸ ಪೆನ್ಶನರ ಹವಾಲದಾರ, ಕಡವಾಡ. ಸೈಯದ ದಾವೂದ ಸೈದ ಅಬ್ದುಲ್ ರಹಿಮಾನ, ನಂದನಗದ್ದೆ. ಮುಲ್ಲಾಂ ಇಸ್ಮಾಯಿಲ್ ಮುಲ್ಲಾಂ ಸಾಲ್ಕೆ ಕಟ್ಟಿಣಕೋಣ. ಶೇಕ ಮೊಹಿದ್ದೀನ ವಲ್ಲದ ಶೇಕ ಅಲ್ಲಿ ಕಟ್ಟಿಣಕೋಣ. ಸೈದ ಅದಮ ಪಾಪವೇಶರ, ಕಾರವಾರ. ಅಬ್ದುಲ್ ಖಾದೀರ ಶೇಕ ಮುಹಮ್ಮದ, ಅಂಕೋಲಾ, ಶೇಕ ಕರಿಮ ಶೇಕ ಬಸಾಲತ, ಅಂಕೋಲಾ ಶೇಕ ಉಸಮಾನ ಶೇಕ ಮುಹಮ್ಮದ, ಅಂಕೋಲಾ.

(ಸೈಯದ ಅಲ್ಲಿಸಾಹೇಬ ಸೈಯದ ಪೀರ ಸಾಹೇಬ ಪೀರಜಾದೆ, ಅಂಕೋಲಾ.)

ಧಾರವಾಡದ ರಾಜದ್ರೋಹದ ತನಖಿಯ ಕಾಲಕ್ಕೆ ಆರೋಪಿ

ದೇ॥ ಭ॥ ಗಂಗಾಧರರಾವ ದೇಶಪಾಂಡೆಯವರ ಭಾಷಣ.

ನನ್ನ ಹೇಳಿಕೆಯ ಉದ್ದೇಶವು ದೋಷವನ್ನು ಕಡಿಮೆ ಮಾಡತಕ್ಕದ್ದಲ್ಲ. ನಾನು ನೂರಾರು ಸ್ಥಳಗಳಲ್ಲಿ ಭಾಷಣಗಳನ್ನು ಮಾಡಿದ್ದು, ನವಲಗುಂದದಲ್ಲಿ ಆಡಿದ ಮಾತುಗಳಿಂದಲೂ ತೀವ್ರತರವಾದ ಟೀಕೆಯನ್ನು ನಾನು ಸರಕಾರದ ವಿರುದ್ಧವಾಗಿ ಮಾಡಿರುವೆನು. ಹೀಗಿರಲಾಗಿ ನವಲಗುಂದದಲ್ಲಿ ಹೇಳಿರುವಂಥ ಉಪನ್ಯಾಸದ ಸಲುವಾಗಿ ನನ್ನನ್ನು ಕೋರ್ಟಿನ ಕಟ್ಟೆಯನ್ನು ಹತ್ತಿಸಿದ್ದು ನೋಡಿ ನನಗೆ ಆಶ್ಚರ್ಯವಾಗಿದೆ.

ನನಗೆ ಸರ ಜಾನಸೀಲಿಯವರು ಹೇಳಿದ ತತ್ವದಲ್ಲಿ ವಿಶ್ವಾಸವುಂಟು. 'ಬಹು ಕಾಲದವರೆಗೆ ಪರರ ಆಳಿಕೆಗೆ ಬಲಿಪಟ್ಟಿರುವದರಿಂದ ರಾಷ್ಟ್ರೀಯತ್ವದ ಹ್ರಾಸವಾಗುವದಕ್ಕೆ ಬಲಾಢ್ಯವಾದ ಕಾರಣವಾಗ ಬಲ್ಲದೆಂ'ದು ಅವರು ಹೇಳಿರುವರು. ಸರ ಹೆನ್ರಿ ಕ್ಯಾಂಬೆಲ್ ಬ್ಯಾನರ್‌ಮನರು 'ಸ್ವರಾಜ್ಯಕ್ಕೆ ಪ್ರತಿಯಾಗಿ ಸುರಾಜ್ಯ ಸಿಕ್ಕರೆ ಎಂದಿಗೂ ಜಗದಂ'ದು ಹೇಳಿರುವದನ್ನು ನಾನು ನಂಬಿರುವೆನು. ಆದಕಾರಣದಿಂದಲೂ ಪಾರ್ಲಿಮೆಂಟಿನವರಿಂದಲೂ ಸ್ವರಾಜ್ಯವೇ ಬ್ರಿಟಿಶ ಅಧಿಕಾರಿಗಳಿಂದ ದೊರೆಯುವದೆಂಬುದು ನಿಶ್ಚಿತವಾಗಿದೆ. ಆದರೆ ಆ [illegible]ಯಿಂದಲೂ ಸ್ವಾರ್ಥತ್ಯಾಗದಿಂದಲೂ ಅಲ್ಲದೇ ಬೇರೆ ಮಾರ್ಗದಿಂದ ಸ್ವರಾಜ್ಯವನ್ನು ಸ್ಥಾಪಿಸ ಸಾಗಿಸುವದು ಶಕ್ಯವಿಲ್ಲ. ಈ ಮೇರೆಗೆ ರಾಷ್ಟ್ರೀಯ ಸಭೆಯವರು ಅತ್ಯಾಚಾರ ರಹಿತವಾದ ಅಸಹಕಾರದಿಂದ ಸ್ವರಾಜ್ಯವನ್ನು ಸಂಪಾದಿಸಬೇಕೆಂದು ನಿರ್ಣಯಿಸಿರುವದು. ಈ ನಿರ್ಣಯದ ಮುಖ್ಯ ಭಾಗಗಳೆಂದರೆ ಈ ಸರಕಾರದವರು ಜನರ ವಿಶ್ವಾಸವನ್ನು ಕಳೆದುಕೊಂಡಿರುವದರಿಂದ ಈ ವರೆಗೆ ಯೋಜಿಸಿದ ಎಲ್ಲ ಉಪಾಯಗಳು ನಿಷ್ಫಲವಾದುದರಿಂದ "ಅಹಿಂಸಾತ್ಮಕ ಅಸಹಯೋಗದಿಂದ" ಇವೇ ಮೊದಲಾದವುಗಳಾಗಿವೆ. ಮೊದಲು ನಾನು ಈ ಉಪಾಯಕ್ಕೆ ಪ್ರತಿಕೂಲ ಮತವುಳ್ಳವನಾದರೂ ರಾಷ್ಟ್ರೀಯ ಸಭೆಯ ಆಜ್ಞೆಯೆಂದು ನಾನು ಅನುಸರಿಸಬೇಕಾಯಿತು. ನಂತರ ನವಂಬರ (೧೯೨೧) ತಿಂಗಳದಲ್ಲಿ ಅಹಿಂಸೆಯ ಮರ್ಯಾದೆಯಲ್ಲಿ ಈ ಚಲನವಲನೆಯು ಸಾಗುವವರೆಗೆ ಮುರಿದೊತ್ತುವ ಉಪಾಯವನ್ನು ಕೈಕೊಳ್ಳುವದಿಲ್ಲೆಂದು ಹಿಂದುಸ್ಥಾನದ ಸರಕಾರದವರು ಪ್ರಕಟನೆಯನ್ನು ಹೊರಡಿಸಿದರು. ಎಲ್ಲ ಪಕ್ಷದವರಲ್ಲಿ ಮತಭೇದವೆಂದರೆ ಕಾಲ ಮತ್ತು ಉಪಾಯಗಳ ವಿಷಯದಲ್ಲಿ, ಸರಕಾರದ ಪಕ್ಷದವರು ಹಿಂದೀ ಜನರು ಈಗಲೇ ಸ್ವರಾಜ್ಯವನ್ನನುಭವಿಸಲಿಕ್ಕೆ ಅಯೋಗ್ಯರೆಂತಲೂ ರಾಷ್ಟ್ರೀಯ ಸಭೆಯವರು ನಿಂತ ಕಾಲುಗಳ ಮೇಲೆ ನಿಂತಿರುವರೆಂದು ಭಿನ್ನ ಕಲ್ಪನೆಗಳಿರುವವು.

ಸರಕಾರದವರು ಕೋರ್ಟಿನದುರಿಗಿಟ್ಟಿರುವ ವಾರ್ತಾಪತ್ರದ ವರದಿಯಲ್ಲಿ ಬರೆದಿರುವಂತೆ ಅಲ್ಲ ೧೦೦೦-೧೨೦೦ ಜನರು ಇದ್ದಿಲ್ಲ. ಅಲ್ಲಿ ೩೦೦ ಜನರಿಗೆ ಸಾಲುವಷ್ಟು ಸಣ್ಣ ಸ್ಥಳವಿತ್ತು. ಆ ಸಭೆಯಲ್ಲಿ ಬ್ರಾಹ್ಮಣರೇ ವಿಶೇಷವಾಗಿ ಬಂದಿದ್ದರೆಂದು ಅದೇ ವಿವರದಲ್ಲಿ ಕಂಡಿದೆ. ಆದರೆ ಮಾಮಲೇದಾರರ ಹೊರ್ತಾಗಿ ಎಲ್ಲರೂ ಬ್ರಾಹ್ಮಣೇತರ ಸಾಕ್ಷಿಗಾರರಿರುವರು. ಅದರೊಳಗೂ ಲಿಂಗಾಯತರೇ ಬಹುಜನರಾಗಿರುವರು. ಮತ್ತು ಎಲ್ಲ ಜಾತಿಗಳಿಂದ ಪ್ರತಿಗಳಿಂದಲೂ ಪ್ರತಿನಿಧಿಗಳು ಬಂದಿದ್ದರೂ ನವಲಗುಂದದಿಂದ ಮಾತ್ರ ಸಾಕ್ಷಿಗಾರರನ್ನು ಕರೆದಿರುವರು. ನಾನು ತ್ವರೆಯಿಂದ ಭಾಷಣಗಳವರೆಗೆ ಮಾಡಿರುವದರಿಂದ ಪೋಲೀಸರ ಟಿಪ್ಪಣಿಯು ಭಿನ್ನಭಿನ್ನವಾಗಿ ಬರೆದುಕೊಂಡದ್ದಾಗಿರುವದು.

ಸರಕಾರವೆಂದರೆ ರಾಜ್ಯಪದ್ಧತಿಯೆಂಬ ಅರ್ಥದಲ್ಲಿ ಉಪಯೋಗಿಸಿರುವೆನು. ಮತ್ತು ರಾಜ್ಯಪದ್ಧತಿಯ ನಾಶವನ್ನು ಪ್ರತಿಪಾದನೆ ಮಾಡುವದರಿಂದ ರಾಜದ್ರೋಹವು ಸಂಭವಿಸಲಾರದು. ಈಗಿನ [illegible]ವಾಗಿ ಮಾಂಟೇಗೂ ಸಾಹೇಬರು ಕೂಡ 'ಈ ಪದ್ಧತಿಯು ಹೇವಂತವಾಗಿ ಉಳಿಯುವದು ಶಕ್ಯವೇ ಇಲ್ಲವೆಂದು ಸಾರಿರುವರು. ನಾಶವನ್ನು ಬಯಸುವದು ಶಾಂತತೆಯಮೇಲೆ ಆಧಾರಹೊಂದಿರುವವರೆಗೆ ಅಪರಾಧವಾಗಲಾರದು. ಅಧಿಕಾರಿಗಳ ವಿವರದಲ್ಲಿ ಒಂದಾದರೂ ಶಾಂತತಾ ಭಂಗವನ್ನು ಸೂಚಿಸುವ ಶಬ್ದವಿಲ್ಲ.

೧೫೦ ವರ್ಷಗಳ ಹಿಂದಿನ ಅನಿಯಂತ್ರಿತ ಆಳಿಕೆಯು ಆರಂಭವಾಗಿದೆಯೆಂದು ಹೇಳಿದ್ದು ಸತ್ಯವಾದದ್ದೆಂತಲೇ ನನ್ನ ಅಭಿಪ್ರಾಯವು. 'ಜೇಬುಂದಕಾರಿ' ಅಂದರೆ ಹೊಣೆಯಿಲ್ಲದ ಆಳಿಕೆಯು. ನಾನು 'ಈ ಸರಕಾರವನ್ನು ಬೊಗಿಸುವದಕ್ಕೆ ಸಿದ್ಧರಾಗಿರುವೆವೆಂ'ದು ಹೇಳಿದ್ದು ನಿಜ. ಆರಂಭದಿಂದ ಬೋಧಿಸುತ್ತಿರುವದರಿಂದ ಈ ರಾಜ್ಯವು ಬೇಡವೆಂದು ನಾನು ಅಂದದ್ದು ಸುಳ್ಳು. ಆದರೆ ಈ ರಾಜ್ಯಕರ್ತರು ತಾವು ಕೊಟ್ಟ ವಚನಗಳನ್ನು ಪಾಲಿಸಲಿಕ್ಕೆ ಅಸಮರ್ಥರಿರುವದರಿಂದ ಈ ಸರಕಾರವು ಬೇಡೆಂದು ನಾನು ಅಂದದ್ದರ ಸಾರಾಂಶವು. ರಾಣಿಯವರ ಪ್ರಕಟನೆಯನ್ನು ಅದನ್ನು ಅಲ್ಲಗಳೆದ ಕರ್ಜನ್ ಸಾಹೇಬರ ಭಾಷಣವನ್ನು ನೋಡಬಹುದು. ಈ ಸರಕಾರಕ್ಕೆ ನಾನು ರಾವಣ ಇಲ್ಲವೇ ಸೈತಾನೀ ರಾಜ್ಯವೆಂದು ಅಂದಿರುವ ಸಂಭವವೇ ಇಲ್ಲ. ಯಾಕಂದರೆ ಗಾಂಧಿಯವರ ಬಾಯಿಯಲ್ಲಿ ಶೋಭಿಸುವ ಶಬ್ದಗಳು ನನ್ನ ಬಾಯಿಯಲ್ಲಿ ಯೋಗ್ಯವಾಗಲಾರವೆಂದು ನಾನು ಮುಂಚಿತವಾಗಿಯೇ ನಿರ್ಣಯಿಸಿರುವೆನು. ಮತ್ತು 'ದೇವರಾಜ್ಯ' ವೆಂಬ ಶಬ್ದವನ್ನು ಧಾರವಾಡದ ಸಂಗತಿಗಳನ್ನು ಸಂಬಂಧಿಸಿ ಪ್ರಯೋಗಿಸಿರುವೆನು. ಸರ [illegible]ಕಾರಕಾರಣವೆಂದು ನಾನು ಹೇಳಿರುವ ಸಂಭವವಿಲ್ಲ. ಯಾಕಂದರೆ ಈಗಿನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಪಕ್ಷದವರು ಈ ವಿಷಯವನ್ನು ಸೇರಿಸಿರಲಿಲ್ಲ. ಮೇಲಾಗಿ ಕರಗಳನ್ನು ಕೊಡದಿರುವದು ಶಾಸನಗಳ ವಿರುದ್ಧವಾದದ್ದಲ್ಲ. ಕೌನ್ಸಿಲಗಳು ಅವಶ್ಯವಾದ ಹಣವನ್ನು ಪೂರೈಸುವದಿಲ್ಲೆಂಬ ಕಟ್ಟು ಹಿಡಿಯುತ್ತಿರುವ ಮೇರೆಗೆ ಕರ ಕೊಡುವದನ್ನು ನಿಲ್ಲಿಸಿ ಸರಕಾರದವರ ಲಕ್ಷ್ಯವನ್ನು ನಮ್ಮ ತೊಂದರೆಗಳ ಕಡೆಗೆ ಎಳೆದುಕೊಳ್ಳುವದು ನಿಯಮಾನುಸಾರವೆಂಬುದನ್ನು ಕೈ. ವಾ. ಗೋಖಲೆಯವರೇ ವ್ಯಕ್ತಮಾಡಿರುವರು. 'ಈ ಯುರೋಪಿಯನರನ್ನು ಹೊರಗೆ ಹಾಕಬೇಕಾದರೆ ೭ ಕೋಟಿ ರೂಪಾಯಿಗಳು ಬೇಕೆಂ'ದು ನಾನು ಅಂದೆನೆಂಬ ಆರೋಪವು ನನ್ನ ಬುದ್ಧಿಗೆ ಅಪಮಾನಕಾರಕವಾದದ್ದೆಂದು ನಾನು ತಿಳಿಯುತ್ತೇನೆ. ನಾನು ಹಾಗೆ ಅಂದಿರುವದಿಲ್ಲ. ಇದರಲ್ಲಿ ಟಿಪ್ಪಣಿಕಾರರು ಬುದ್ಧಿಪೂರ್ವಕ ಸುಳ್ಳು ಬರೆದುಕೊಂಡಿಲ್ಲವೆಂದು ಗ್ರಹಿಸಿದರೂ ಮಹತ್ವದ ತಪ್ಪು ಮಾಡಿರುವರೆಂದು ಹೇಳಬಹುದು. ಸಾಮಾನ್ಯವಾಗಿ "ಸಾತಕೋಟಿ" ಯ ಅರಿವೆಗಳನ್ನು ಪರದೇಶದಿಂದ ಬರಗೊಡದಿದ್ದರೆ ಮಾತ್ರ ನಮ್ಮ ಭೌತಿಕ ಸುಧಾರಣೆಯು ಮೂಲಕ್ಕೆ ದಕ್ಕಿಯಾಗುವದೆಂದು ಹೇಳುವ ವಾಡಿಕೆಯುಂಟು. ಇದನ್ನು ಬರೆದುಕೊಳ್ಳುವವರು 'ಸಾತ' ಅಂದರೆ ೭ ಎಂದು ಬರೆದುಕೊಂಡಿರುವ ಸಂಭವವುಂಟು. ನಾನು ಪೇಂಟರ ಮತ್ತು ಪೋಲೀಸ ಸಾಹೇಬರಿಗೆ ಕೊಲೆಯ ಆರೋಪಿತರೆಂದು ಅಂದಿದ್ದು ನಿಜವಲ್ಲ. ಜಿಲ್ಲಾ ಸಭೆಯ ಅಧ್ಯಕ್ಷರು ಕಳುಹಿಸಿದ ತಂತಿಯಲ್ಲಿ ಆ ಸಂಗತಿಯು ಕಂಡಿತ್ತು. ಅದನ್ನು ಆ ಸಂಪತ್ತಿನವರಿಗೆ ಹೇಳಿರುವೆನು. ಅಸಹಕಾರದಿಂದ ಸ್ವರಾಜ್ಯವನ್ನು ಸಂಪಾದಿಸುವದೇ ರಾಷ್ಟ್ರೀಯ ಸಭೆಯ ಧ್ಯೇಯವು. ಇದೇ ೧೨೪-ಅ ನೇ ಕಲಮಿನನ್ವಯವಾಗಿ ಅಪರಾಧವೆಂದು ನಿರ್ಣಯವಾದರೆ ಮುಂದೆ ವಾದವೇ ಇಲ್ಲ. ನಾನು ಅಪರಾಧಿಯೇ ಸರಿ. ಆದರೆ ರಾಜದ್ರೋಹದ ಸ್ವರೂಪವು ಜನರ ಜಾಗೃತಿಯು ಹೆಚ್ಚಿದ ಹಾಗೆ ಸ್ಥಿತ್ಯಂತರಗಳನ್ನು ಹೊಂದುವದು ಅವಶ್ಯವಾಗಿರುವದು. ಈಗಿನ ಸ್ಥಿತಿಯಲ್ಲಿ ಅದರಲ್ಲಿ ಹೆಚ್ಚುಕಡಿಮೆ ಆಗುವದು ಅಗತ್ಯವಾದದ್ದು. ಅಂಥ ವಾದಗ್ರಸ್ತವಾದ ಮಹತ್ವದ ವಿಷಯವನ್ನು ಅನುವಾದ ಮಾಡುವವ

ರಿಗೆ ಭಾಷೆಯನ್ನು ಪ್ರಯೋಗಿಸಲಿಕ್ಕೆ ಯೋಗ್ಯವಾದ ಅವಕಾಶವಿರಲೇ ಬೇಕು. ವೆಜ್ಜವುಡ್ ಸಾಹೇಬರು ಬ್ರಿಟಿಶ್ ಕಾಮನ್ ವೆಲ್ಥ್ ಎಂಬ ಪುಸ್ತಕದಲ್ಲಿ ಬರೆದಂತೆ ' ಒಬ್ಬನೆ ಕಪಟ, ಬಹುಕಾಲದ ಅನುಭವದ ಸಿದ್ಧವಾದ ಕ್ರೂರತನ ಇವೇ ಈ ನಿಸ್ಸಹಾಯವಾದ ನಿಬಿಡ ಪ್ರದೇಶಗಳಗೂಡ ವ್ಯವಹಾರ ಮಾಡುವ ಮಾರ್ಗಗಳಾಗಿವೆಂ ' ಒಟೀಕೆಯಂಥ ಕಠೋರ ನಿಂದೆಯು ಯಾವದೂ ಇರಲಾರದು. ಇಂಥ ಅಭಿಪ್ರಾಯಗಳುಳ್ಳವರು ಅನೇಕರಾಗಿರುವರು. ಅವರ ವಿರುದ್ಧ ಖಟ್ಲೆಗಳಾಗಿಲ್ಲ.

ನನ್ನ ಭಾಷಣವು ಸಹನಮಾಡಲಿಕ್ಕಾಗದಷ್ಟು ಕಠೋರವಾದದ್ದೆಂದು ನನ್ನ ನಂಬಿಗೆ ಇಲ್ಲ. ಈ ವಿಷಯದಲ್ಲಿ ಪೇಂಟರರು ಶಿವಲಿಂಗಪ್ಪನ ಕಾರ್ಯವನ್ನು ಸಮರ್ಥನ ಮಾಡುವ ಗೊಂದಲದಲ್ಲಿದ್ದ ಮೂಲಕ ಸ್ವತಂತ್ರ ವಿಚಾರಣಾ ಸಭೆಯನ್ನು ನಿಯಮಿಸಬೇಕೆಂದು ಹೇಳುತ್ತಿದ್ದ ನನ್ನನ್ನು ತೊಂದರೆಗೊಳಿಸಬೇಕೆಂದ ಟೀಕೆ ಮಾಡಿದ್ದು ಸ್ವಾಭಾವಿಕವೆಂದು ಹೇಳಬಹುದು. ಆದರೆ ಗವರ್ನರ ಸಾಹೇಬರೂ, ಅವರ ಮಂತ್ರಿಗಳೂ ಹೇಗೆ ಸಮ್ಮತಿಸಿದರೆಂಬುದನ್ನು ಊಹಿಸಲಿಕ್ಕೆ ಸಾಧ್ಯವಾಗಿರುವದಿಲ್ಲ. ನನ್ನನ್ನು ಸೆರೆಯಲ್ಲಿ ಕಳಿಸುವದರಿಂದ ದುಃಖವಿಲ್ಲ. ಆದರೆ ಇಂಥ ಅಸಂಗತ ಅರ್ಥವಿಲ್ಲದ ಕೆಲಸಗಳನ್ನು ತಕ್ಕೊಂಡ ಶಿಕ್ಷೆಯನ್ನು ವಿಧಿಸಿದರೆ ಈ ಕೋರ್ಟಿನ ಸದಸದ್ವಿವೇಕವು ಬಹಳ ದುರುಪಯೋಗ ಮಾಡಿಸುವದೆಂಬುದೇ ಖೇದಕಾರಕವಾದ ಸಂಗತಿಯು. ಈ ಪ್ರಕಾರದ ಬಹುಮಾನವು ಕೆಲಕೆಲವರಿಗೂ ಹಿತವಾಗಲಾರದು. ನಾನು ಮಹಾತ್ಮರ ಆಜ್ಞೆಯನ್ನು ಪಾಲಿಸಿ ಅವರ ಪ್ರೀತಿಗೆ ಪಾತ್ರನಾದೆನೆಂಬ ಸಂಗತಿ ಸಮಾಧಾನವಾಗಿದೆ. ನನ್ನ ಮೇಲಿನ ಖಟ್ಲೆಯಿಂದ ಜನರ ಚಳವಳಿಯು ಹೆಚ್ಚು ಬಲಗೊಳ್ಳುತ್ತಿರುವದು. ನಾನು ಸೆರೆಮನೆಗೆ ಹೋದರೆ ನನ್ನ ತಪಸ್ಸು ಪ್ರಕಾಶಗೊಂಡು ನನ್ನ ಅನುಕೂಲವಾಗುವದು. ಸರಕಾರದವರು ಇನ್ನೂ ಹೆಚ್ಚು ಜನರ ಕಷ್ಟಪಡಿಸುವದಕ್ಕೆ ನಿಂತಿರುವದನ್ನು ನೋಡಿದರೆ ಜನರು ಅವರನ್ನು ಬಿಡುತ್ತಿರುವದು. ನಾನು ತಿರುಗಿ ಬಂದ ನಂತರ ಇದೇ ಕೆಲಸವನ್ನೇ ಮಾಡುವೆನು. ಜನರಿಗೆ ಹೊಸ ವಿಚಾರ ಹೇಳಿಸುವವರೆಗೆ ನಾನು ನಿಶ್ಚಯಿಸಿದ್ದೇನೆ. ನಾನು ದೇಶದ್ರೋಹಿಯಲ್ಲವೆಂದು ತಿಳಿಸುವೆನು.

ತಾ ೧೯-೧೧-೨೧

ಸರಕಾರದ ವಕೀಲರು ತಮ್ಮ ಪಕ್ಷದ ವಾದವನ್ನು ಹೇಳಿದ ನಂತರ ಮೇ। ಭಾ। ಗಂಗಾಧರರಾಯರು ಒಳ್ಳೇ ಮನೋವೇಧಕವಾಗಿ ನಾಲ್ಕು ಮಾತುಗಳನ್ನು ಹೇಳಿದರು.

ಪಂಚರ ಅಭಿಪ್ರಾಯ.

ಉಭಯ ಪಂಚರೂ ಆರೋಪಿತರು ನಿರ್ದೋಷಿಗಳೆಂದು ಹೇಳಿದರು. ಕಾರಣಗಳು — ೧ ಪೋಲೀಸರ ಟಿಪ್ಪಣಿಯುಳ್ಳಷ್ಟು ಸಾಕ್ಷೀಗಾರರನ್ನು ಕರೆದಿಲ್ಲ ೨ ಸರಕಾರದ ಅಧಿಕಾರಿಗಳ ಮತ್ತು ಇತರ ಒಬ್ಬಿಬ್ಬರ ಸಾಕ್ಷಿಗಳ ಹೊರತಾಗಿ ಪ್ರಮಾಣಗಳಿಲ್ಲ. ಮತ್ತು ಇವರು ನಂಬಿಗೆಗೆ ಪಾತ್ರರಿಲ್ಲ ೩ ಸಾವಿರಾರು ಜನರನ್ನು ಬಿಟ್ಟು ಒಬ್ಬಿಬ್ಬರನ್ನೇ ಕರೆದದ್ದು ನಂಬಿಗೆಗೆ ಬಾಧೆ ತರುವಂಥದು. ಇತ್ಯಾದಿ

ಯುವರಾಜರ ಭಾಷಣ

" ನೀವು ನನ್ನ ಸ್ವಾಗತವನ್ನು ಮನಃಪೂರ್ವಕವಾಗಿ ಮಾಡಿದ ಬಗ್ಗೆ ನಾನು ನಿಮ್ಮ ಆಭಾರಿಯಾಗಿರುವೆನು. ನಾನು ಬಹಳ ದಿವಸದಿಂದ ಹಿಂದೆ ಸ್ಥಾನಕ್ಕೆ ಬರಬೇಕೆಂಬ ಇಚ್ಛೆಯನ್ನು ತಾಳಿದ್ದೆನು. ಹಿಂದ ಸ್ಥಾನದಲ್ಲಿ ಏನಿದೆ, ಅದು ಹಿಂದೆ ಏನು ಮಾಡಿತ್ತು, ಮತ್ತು ಮುಂದೆ ಏನು ಮಾಡಬಹುದು, ಎಂಬ ಸಂಗತಿಯನ್ನು ಪ್ರತ್ಯಕ್ಷ ನೋಡಬೇಕೆಂದು ನನ್ನ ಇಚ್ಛೆಯಿದೆ.

ನಿಮ್ಮ ದೂರುಗಳನ್ನು ತಿಳಕೊಳ್ಳಬೇಕೆಂತಲೂ, ನಿಮ್ಮ ಆಕಾಂಕ್ಷೆಗಳ ಮಾಹಿತಿಯನ್ನು ಕೊಳ್ಳಬೇಕೆಂತಲೂ ನಾನು ಯೋಚಿಸಿರುವೆನು. ನೀವು ನನ್ನ ಪರಿಚಯವನ್ನು ನಾನು ನಿಮ್ಮ ಪರಿಚಯವನ್ನು ಮಾಡಿಕೊಳ್ಳಬೇಕೆಂಬುದೇ ನನ್ನ ಉದ್ದೇಶವು.

ನಾನು ಪಾಶ್ಚಾತ್ಯ ದೇಶದಿಂದ ಪೌರ್ವಾತ್ಯ ದೇಶಕ್ಕೆ ಬಂದಿರುವೆನು. ನಾನು ಹೊಸಬನೂ ತರುಣನೂ ಇರುವದರಿಂದ, ಹಿಂದುಸ್ಥಾನದ ಹೃದ್ಗತವು ನನಗೆ ತಿಳಿಯುವದೋ ಇಲ್ಲವೆಂಬುದಾಗಿ ನನಗೆ ಚಿಂತೆ. ಆದರೆ ಪ್ರೇಮದಿಂದಲೂ, ಸಹಾನುಭೂತಿಯಿಂದಲೂ, ನೋಡುವವರಿಗೆ ಹೃದ್ಗತವು ತಿಳಿಯದಿರುವದು ಅಸಾಧ್ಯವಲ್ಲೆಂಬುದು ನನ್ನ ಮತವು.

ಯಾಕಂದರೆ ಚಿಕ್ಕಂದಿನಿಂದ ಹಿಂದುಸ್ಥಾನದ ಪ್ರೇಮವು ನನ್ನ ಅಂತಃಕರಣದಲ್ಲಿ ವಾಸವಾಗಿಯದೆ. ವಿಕ್ಟೋರಿಯಾ ಮಹಾರಾಣಿಯವರಿಗೆ ಈ ದೇಶದ ವಿಷಯ ಇದ್ದ ಪ್ರೇಮದಲ್ಲಿಯೇ ನಾನು ಬೆಳೆದು ದೊಡ್ಡವನಾಗಿರುವೆನು. ಎಡ್ವರ್ಡ ಬಾದಶಹರು ಇದೇ ಪ್ರೇಮದ ಮೂಲಕ ಯುವರಾಜರಿರುವಾಗ, ಹಿಂದುಸ್ಥಾನಕ್ಕೆ ಬಂದು, ನಿಮ್ಮ ಮನೋಗತವನ್ನು ತಿಳಿದು ಕೊಂಡರು. ಮತ್ತು ಅದೇ ಪ್ರೇಮವು ಅವರಲ್ಲಿ ಅವರ ಅಂತ್ಯಕಾಲದವರೆಗೂ ಉಳಿತು. ಇಂಥ ಪ್ರೇಮದ ಪೂರ್ಣ ಮನಸ್ಸಿನಿಂದ ನಾನು ಹಿಂದುಸ್ಥಾನದಲ್ಲಿ ಕಾಲಿಟ್ಟಿರುವೆನು. ಆದದರಿಂದಲೇ ಹಿಂದುಸ್ಥಾನದ ಮನೋಗತವು ನನಗೆ ತಿಳಿದ ಬಿಡದು.

ಮುಂಬಯಿ ಶಹರವು ಅದ್ವಿತೀಯವಿರುವದು. ಈ ಶಹರಕ್ಕೆ ಅಲೌಕಿಕವಾದದ್ದೊಂದು ಕಾಂತಿಯಿರುವದು. ಮುಂಬಯಿ ಪಟ್ಟಣವು ಹಿಂದ ಸ್ಥಾನದ ಪ್ರವೇಶ ದ್ವಾರವಿರುವದು. ಇದೇ ದ್ವಾರದಿಂದ ಅಸಂಖ್ಯ ಜನರು ಬಂದು ಹೋಗಿರುವರು. ಪೂರ್ವ-ಪಶ್ಚಿಮದ ಸಂಯೋಗವನ್ನು ಮಾಡಿ ಹಿಂದುಸ್ಥಾನಕ್ಕೆ ಬ್ರಿಟಿಶ ಸಾಮ್ರಾಜ್ಯದಲ್ಲಿ ಒಂದು ಸ್ಥಾನವನ್ನು ದೊರಕಿಸಿ ಕೊಟ್ಟಿರುವದು. "

ಇದೇ ಪ್ರಕಾರದ ಮುಂಬಯಿ ಪಟ್ಟಣದ ಬಹಳೇ ಸ್ತುತಿ ಮಾಡಿ ಯುವರಾಜರು ತಮ್ಮ ಭಾಷಣವನ್ನು ಮುಗಿಸಿದರು.

ಮುಂಬಯಿಯೊಳಗಿನ ವಾರ್ತೆ.

ಯುವರಾಜರ ಸ್ವಾಗತ.

ಕಳೆದ ಗುರುವಾರ ಬೆಳಿಗ್ಗೆ ೧೦॥ ಘಂಟೆ ಸಮಯಕ್ಕೆ ಯುವರಾಜರು ಮುಂಬಯಿ ಬಂದರದಲ್ಲಿ ಇಳಿದು, ಅಲ್ಲಿ ಉತ್ತರ ಬಾಜೂ ಕಟ್ಟಿರುವಾದಿ ಅಪ್ಪೊಲೋ ಬಂದರದಮೇಲೆ ಕಟ್ಟಿದ ವಿಶಾಲವಾದ ಮಂಟಪದಲ್ಲಿ ಬಂದು, ಸಂಸ್ಥಾನಿಕರು, ಸಾಹುಕಾರ, ಸರದಾರ ಮುಂತಾದವರ ಭೆಟ್ಟಿ ಕೊಂಡರು. ಆ ಬಳಿಕ ಮ। ಶ್ರೀ। ಜಾರ್ಜ ಬಾದಶಹರು ಕಳಿಸಿದ ಸಂದೇಶವನ್ನು ಓದಿ ಹೇಳಿದರು. ಮುಂಬಯಿ ಮ್ಯುನಿಸಿಪಾಲಿಟಿಯ ವತಿಯಿಂದ ಒಂದು ಮಾನಪತ್ರವು ಅರ್ಪಿಸಲಾಗಿ, ಯುವರಾಜರು ಮುಂಬಯಿಪುರಿಯನ್ನು ಹೊಗಳಿ, ತಮ್ಮ ಪ್ರೀತಿ-ಸಹಾನುಭೂತಿದರ್ಶಕ ಶಬ್ದಗಳಿಂದ ಕೂಡಿದ ಭಾಷಣವನ್ನು ಮಾಡಿದರು. ಸಮಾರಂಭಕ್ಕೆ ಯುರೋಪಿಯನ್ನರು, ಪಾರ್ಸಿ, ಯಹುದಿ ಕ್ರಿಶ್ಚನ ಜನರೇ ಹೆಚ್ಚಾಗಿದ್ದರು. ಅಲ್ಲಿಂದ ಹೊರಟ ಮೆರವಣಿಗೆಯು ಕೋಟದಿಂದ ಹ್ಯಾದು, ಧೋಬಿತಲಾವ, ಪ್ರಿನ್ಸೆಸರೋಡ, ಕ್ವೀನ್ಸರೋಡ ಮೊದಲಾದ ಹಿಂದುತರ ವಸ್ತಿಯಿಲ್ಲದ ಭಾಗದಿಂದಲೇ ಸಾಗಿತು. ಧೋಬಿತಲಾವದಿಂದ ಪ್ರಿನ್ಸೆಸರೋಡ ಇಷ್ಟು ವಸ್ತಿಯಿದ್ದ ಭಾಗವಿದ್ದು ಅದನ್ನು ಜನರು ಶೃಂಗರಿಸಿದ್ದಿಲ್ಲ. ಆ ಭಾಗದಲ್ಲಿ ಯುವರಾಜರಿಗೆ ಹರತಾಳದ ಸ್ವಲ್ಪ ದರ್ಶನವಾಗಿದ್ದಿರಬೇಕು !

ಹೋಳಿಯ ಸಮಾರಂಭ.

ಅದೇ ಕಾಲಕ್ಕೆ ಇನ್ನೊಂದು ದಿಕ್ಕಿಗೆ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಪರದೇಶೀ ಬಟ್ಟೆಯ ಹೋಳಿಯು ನಡೆದಿತ್ತು. ಆ ಕಾಲಕ್ಕೆ ಮಹಾತ್ಮರು ಒಂದು ಬಹು ಸ್ಫೂರ್ತಿದಾಯಕ ಭಾಷಣವನ್ನು ಮಾಡಿ, ಜನರಿಗೆ ಸ್ವರಾಜ್ಯ ಸಂಪಾದನೆಗೆ ಅವಶ್ಯವಿದ್ದ ಸ್ವದೇಶೀ, ಹಿಂದುಮುಸಲ್ಮಾನರ ಐಕ್ಯ, ಮತ್ತು ಅಹಿಂಸೆಯ ವರ್ತನವನ್ನು ಪಾಲಿಸಬೇಕೆಂದು ಉಪದೇಶಿಸಿದರು. ಈ ಉಪದೇಶವನ್ನು ಎಲ್ಲವರೂ ಪಾಲಿಸಿದರೆ, ತಾನು ೩೧ ನೇ ಡಿಸೆಂಬರದ ಒಳಗೆ ಸ್ವರಾಜ್ಯವನ್ನು ಗಳಿಸುವೆನು, ಇಲ್ಲವೆ ಜೈಲಿಗೆ ಹೋಗುವೆನು, ಇಲ್ಲವೆ ಇಹಲೋಕದ ಯಾತ್ರೆಯು ಮುಗಿಸುವೆನೆಂದು ತಮ್ಮ ನಿರ್ಧಾರವನ್ನು ವ್ಯಕ್ತಗೊಳಿಸಿದರು. ಈ ಸಮಾರಂಭಕ್ಕೆ ಪ್ರಖರ ಬಿಸಲಿನಲ್ಲಿ ೧-೧॥ ಲಕ್ಷ ಜನರು ಕೂಡಿ ಶಾಂತ ರೀತಿಯಿಂದ ಮಹಾತ್ಮರ ಉಪದೇಶವನ್ನು ಕೇಳಿಕೊಂಡರು.

ಅಶಾಂತತೆಗೆ ಪ್ರಾರಂಭ.

೧ ಬ್ರಿಟಿಶ ಸರಕಾರವು ಖಿಲಾಫತ ವಿಷಯದಲ್ಲಿ ಮುಸಲ್ಮಾನರಿಗೆ ಕೊಟ್ಟ ವಚನದ ಭಂಗ ಮಾಡಿದ ಸಂಗತಿಯು ಸರ್ವಶ್ರುತವಿದೆ ಈ ಪ್ರಕರಣದಿಂದ ಬ್ರಿಟಿಶ ಪ್ರಸ್ತುತನಕ್ಕೆ ತಗಲಿದ ಕಲಂಕವು ಕಡಿಮೆ ಯಾಗುವದರ ಬದಲು ಅದು ಇನ್ನಷ್ಟು ಕಲಂಕಿತವಾಗುತ್ತಿದೆಯೆಂಬ ದುಶ್ಚಿನ್ಹಗಳು ಕಾಣುತ್ತಿವೆ. ಕಳೆದ ವರ್ಷ ಐರ್ಲಂಡದಲ್ಲಿ ರಾಷ್ಟ್ರೀಯ ಪಕ್ಷವು ಸ್ವಾತಂತ್ರ್ಯಕ್ಕಾಗಿ ತೀವ್ರ ಅಸಹಕಾರದ ಚಳವಳವನ್ನು ನಡಿಸಿದ್ದರಿಂದ, ಅವರನ್ನು ಸಮಾಧಾನ ಮಾಡಿ ಶಾಂತಗೊಳಿಸಲು ಎಂದ ಮಿಲ್ನರ ಕಮಿಶನದ ಮನೂ ಕಾಟ ಸಾಗನೆ ಅಂತ್ಯದಲ್ಲಿ ಬ್ರಿಟಿಶ ಸರಕಾರವು ಐರ್ಲಂಡಕ್ಕೆ ಸ್ವಾತಂತ್ರ್ಯದ ದಾನ್ಯ ನ ಕೊಡಬೇಕಾಯಿತು ಆ ಪ್ರಕಾರ ಬ್ರಿಟಿಶ ಮಂತ್ರಿಮಂಡಳದ ಆಮಂತ್ರಣದ ಮೇರೆಗೆ, ಬ್ರಿಟಿಶ ಮತ್ತು ಐರ್ಲಂಡದ ಪರಸ್ಪರ ಸಂಬಂಧವನ್ನು ಚರ್ಚಿಸಿ ನಿಶ್ಚಯಿಸಲು, ಅಲ್ಲಿ ಪಾಕಾ ಎಂಬ ಸಂಘ ಪಕ್ಷದ ಹಿಟ್ಟ ಮುಂದಾಳುಗಳು ತಮ್ಮ ಶಿಷ್ಟ ಮಂಡಳದೊಂದಿಗೆ ಕಳೆದ ಜುಲೈ ತಿಂಗಳಲ್ಲಿ ಲಂಡನ್ನಕ್ಕೆ ಹೋದರು ಐರ್ಲಂಡದ ಸ್ವಾತಂತ್ರ್ಯವು ಕೊನೆ ಸಂತಾಯಿತೆಂದು ಎಲ್ಲರೂ ಭಾವಿಸಿದರು ಅ ೪ ೫ ತಿಂಗಳ ತನಕ ಚರ್ಚೆ ನಡೆದು ತೀವ್ರ ಮತಭೇದದ ಮೂಲಕ ಶಿಷ್ಟಮಂಡಳವು ನಿರಾಶೆಯಿಂದ ಮರಳಿ ಬರಬೇಕಾಯಿತೆಂಬುದು ಅತಿ ಶೋಚನೀಯವು ಈ ತನಕ ಕೈಸೇರಿದ ಮಾಹಿತಿಯ ಮೇಲಿಂದ, ಬ್ರಿಟಿಶರ ಅಪ್ರಶಸ್ತ ಆಕಾಂಕ್ಷೆಯೇ ಈ ಶೋಚನೀಯ ಪ್ರಸಂಗಕ್ಕೆ ಕಾರಣವಾಗಿದೆಂದು ಲೋಕಮತವಾಗಿದೆ ಕೇವಲು ಉದಾರ ಆಶ್ವಾಸನೆಗಳನ್ನು ಕೊಟ್ಟು ಪ್ರತ್ಯಕ್ಷ ಕೃತಿಯ ಕಾಲವು ಸಮೀಪಿಸಿದ ಕೂಡಲೆ, ಒಂದಿಲ್ಲೊಂದು ಅಡಚಣೆಯನ್ನು ಮುಂದೊಡ್ಡಿ ಅದರ ಸ್ವಾತಂತ್ರ್ಯತ್ವವನ್ನು ತಗ್ಗಿಸುವದು ಇದೊಂದು ತರದ ಪ್ರಸ್ತುತನವೆಂದು ಎಣಿಸಲ್ಪಡುತ್ತದೆಂಬಷ್ಟು ಅದರೆ, ಇಂಥ ಅದೂರ ದೃಷ್ಟಿಯ ಮುತ್ಸದ್ದಿತನದಿಂದ ಕ್ರಮೇಣ ಪತ್ತುಗೇಡಾಗಿ ಅಧಃಪಾತ ಹೊಂದುವಂತಾಗುತ್ತದೆಂದು ಅವರು ಮರೆಯಬಾರದು ಆದದರಿಂದಲೇ ಲೋಕದಲ್ಲಿ ಇಂಥ ಅನೇಕರನ್ನು ಹೊಂದಿ ಸರ್ವನಾಶವನ್ನು ಸಾಧಿಸದೇಡಿರೆಂದು ವಿನ್ಸ್ಟೆಂಟ್ಯಾನ ಚಿರೋಲರಂಥ ಪ್ರತಿಗಾಮಿ ಘೋರ ಸಾಮ್ರಾಜ್ಯವಾದಿಯು ಸಹ ಬ್ರಿಟಿಶ ಮಂತ್ರಿಮಂಡಳಕ್ಕೆ ಇಷಾರತು ಕೊಟ್ಟಿರುವರು' ಆದರೆ ಸ್ವಾರ್ಥ ಕ್ಕೆ ಕಣ್ಣಿಲ್ಲ ಈ ಬುದ್ಧಿಯು ಬ್ರಿಟಿಶ ಮುತ್ಸದ್ದಿಗಳಿಗಿನ್ನೂ ಆ ಸಾಮ್ರಾಜ್ಯದಲ್ಲಿ ಇಷ್ಟು ಅಸಂತೋಷವು ಹುಟ್ಟಿದರೂ ಎಂದೂ ಉಪ್ಪವಿಸುತ್ತಿಲ್ಲ.

೨ ಅಕೋಲೆಯಲ್ಲಿ ಕೂಡಿದ ಅಖಿಲ ಮಹಾರಾಷ್ಟ್ರೀಯ ಪರಿಷತ್ತಿನಲ್ಲಿ ಟಿಳಕಾನುಯಾಯಿಗಳು ಮಾಡಿದ ಠರಾವುಗಳನ್ನು ಇನ್ನೊಂದೆಡೆಯಲ್ಲಿ ಹಾಕಿರುವೆವು. ಈ ಠರಾವುಗಳನ್ನು ಓದಿದರೆ, ಇವು ಸಹಕಾರಿಯೂ ಇಲ್ಲ, ಗಾಂಧಿಯವರ ಶುದ್ಧ ಅಸಹಕಾರಿಯೂ ಅಲ್ಲ, ಇದೊಂದು ತರದ "ಅರ್ಧ ಗ ತ್ರ ಅಸಹಕಾರ'ದ ತೃತೀಯ ಪಂಥವೆಂದು ಹೇಳಬಹುದು ಈ ಪಂಥವು ಹೊಸದಾಗಿ ಈಗ ಜನ್ಮವೆತ್ತಿ ದುದೇನಿಲ್ಲ. ಕಲಕತ್ತೆಯ ಕೊಂಗ್ರೆಸದಲ್ಲಿ ಗಾಂಧಿಯವರ ಅಸಹಕಾರದ ಠರಾವು ಪಾಸಾದಂದಿನಿಂದ ಮಹಾತ್ಮರ ಕಾರ್ಯಕ್ರಮದ ಕೆಲ ಸಂಗತಿಗಳ ರಾಷ್ಟ್ರೀಯ ಪಕ್ಷದಲ್ಲಿ ತೀವ್ರ ಮತಭೇದವಿತ್ತು ಅದೇ ಹಳೇ ಮತಭೇದಗಳ ಸಣ್ಣ ದೊಡ್ಡ ಸ್ವರಗಳು ಅಕೋಲೆಯಲ್ಲಿ ಏಕತ್ರವಾಗಿ, ಸುಸಂಘಟಿತವಾದ ಈ ತೃತೀಯ ಪಂಥವು ಹೊರಟಿರುವದು ಮತ್ತು ಅದು ಅಹಮ್ಮದಾಬಾದದಲ್ಲಿ ಕೂಡುವ ಕೊಂಗ್ರೆಸದ ಒಪ್ಪಿಗೆಯನ್ನು ಪಡೆಯಬೇಕೆಂದು ಹವಣಿಸುತ್ತಿರುವದು. ಈ ಪಂಥಕ್ಕೆ ಬರುವ ೩೧ ನೇ ತಾರೀಖಿನೊಳಗೆ ಸ್ವರಾಜ್ಯ ಸಿಗುವ ಆಶೆಯೂ, ಶ್ರದ್ಧೆಯೂ ಮಹಾತ್ಮರಿಗೆ ಇದ್ದಂತೆ, ಇಲ್ಲೇ ಇಲ್ಲ ಸ್ವರಾಜ್ಯ ಗಳಿಸುವ ಅವಧಿಯನ್ನು ನಿರ್ದಿಷ್ಟ ಮಾಡಿದ್ದು ಮಹಾ ದೊಡ್ಡ ತಪ್ಪೆಂದು ಈ ಪಂಥದ ಮತವಾಗಿದೆ. ಈ ಪಂಥಕ್ಕೆ ಕಾಯಿದೆ ಕೌನ್ಸಿಲ ಬಹಿಷ್ಕಾರ, ನ್ಯಾಯ ಕೋರ್ಟಿನ ಬಹಿಷ್ಕಾರ, ಶಾಲೆ-ಕಾಲೇಜ ಬಹಿಷ್ಕಾರದ ಸಮ್ಮತವಿಲ್ಲ ಇಷ್ಟಾದರೂ ಕೌನ್ಸಿಲುಗಳಲ್ಲಿ ಸೇರಿ ಸರಕಾರವನ್ನು ಅಡ್ಡಗಟ್ಟುವದು, ಅದಷ್ಟು ಪಂಚಾಯತು ಕೋರ್ಟುಗಳನ್ನು ಸ್ಥಾಪಿಸುವದು, ಅದಷ್ಟು ಹೆಚ್ಚ ರಾಷ್ಟ್ರೀಯ ಶಾಲೆ ಕಾಲೇಜುಗಳನ್ನು ಪ್ರಸ್ಥಾಪಿಸುವದು, ಸ್ವದೇಶೀ ಪ್ರಸಾರ ಇತ್ಯಾದಿ ಸಂಗತಿಗಳು— ಈ ಹೊಸ ಪಂದಕ್ಕೆ ಪೂರ್ಣ ಸಮ್ಮತವಿರುವವು ಮಹಾತ್ಮರ ಎಲ್ಲ ಪರದೇಶಿ ಒಸ್ತ್ರಗಳ ಬಹಿಷ್ಕಾರದ ಬದಲು ಬರೆ ಬ್ರಿಟಿಶರ ಪದಾರ್ಥಯಾನವತ್ತು ವ್ಯಾಪಾರಿಗಳ ಬಹಿಷ್ಕಾರವಿರಬೇಕಂದು ಇವರು ನಿಶ್ಚಯಿಸಿರುವರು ಮಹಾನದಾದರೂ ಪರದೇಶಿ ಸರಕುಗಳು ಬೇಕಾದ ಪಕ್ಷದಲ್ಲಿ, ಬೇರೆ ರಾಷ್ಟ್ರಗಳಿಂದ ಸಲಿಸಬಹುದೆ, ಬ್ರಿಟಿಶ ರಾಷ್ಟ್ರದಿಂದ ಪಡ್ಡಿನ ಸಹಾಯವನ್ನು ಕೂಡ್ಡ ಬಾರದೆಂದು ಇವರು ನಿಶ್ಚಯಿಸಿದಂತಾಗಿದೆ ಇದರೊಳಗೆ ಬ್ರಿಟಿಶರ ದ್ವೇಷವಲ್ಲ ಆ ದೊಡ್ಡ ಜವರ ಮ್ಹಾತ್ಮೆ ಧರ್ಮನ್ನು ಅಡ್ಡಗಟ್ಟಿ, ಅವರ ಒತ್ತಾಸೆನ್ನು ನಮ್ಮ ಸಂಕಷ್ಟಗಳ ಕಡೆಗೆ ಸೆಳೆಯುಕೊಂಡ. ಅವುಗಳನ್ನು ಪರಿಹರಿಸಿಕೊಳ್ಳುವ ಸಾಧನವೆಂದು ಬಹಿಷ್ಕಾರವು ಉಪಾಯವಾಗಿರುತ್ತದೆ ಒಟ್ಟಿನ, ಈ ಅಕೋಲೆಯ ಪರಿಷತ್ತಿನಿಂದ ಮಹಾರಾಷ್ಟ್ರಿಯರ ಈವರೆಗಿನ ಅಸ್ಪಷ್ಟ ಮತಭೇದವು ಸ್ಫುಟವಾದಂತಾಗಿದೆ

೩ ಸದ್ಯಕ್ಕೆ ಅಮೇರಿಕೆಯಲ್ಲಿ ವ್ಯಾಖ್ಯಾನ ಮುಗಿಸಿ ಮಾತೃಭೂಮಿಗೆ ಹಿಂತಿರುಗಿದ ಡಾ। ನಂದಾಯಣರಾವ ಹರ್ಡೀಕರರು ನಮ್ಮ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಸೆಕ್ರೆಟರಿ ಜಾಗೆಯಮೇಲೆ ನೇಮಿಸಲ್ಪಟ್ಟಿರುವರೆಂದು ತಿಳಿಯಲು ನಮಗೆ ಅತ್ಯಂತ ಸಂತೋಷವಾಗುತ್ತದೆ ಇವರು ಶೀರ ಸಾಮಾನ್ಯ ಸ್ಥಿತಿಯವರಿದ್ದು ಕೇವಲ ಸ್ವಪರಾಕ್ರಮದಿಂದ ಸಂಕಟ ಪರಂಪರೆಯನ್ನು ಲೆಕ್ಕಿಸದೆ, ತಮ್ಮ ಸಂಪಾದನೆಯ ಸಂಸಾರಿಕ ಮಾರ್ಗವನ್ನು ಸ್ವಾರ್ಥತ್ಯಾಗಪೂರ್ವಕ ತ್ಯಜಿಸಿ, ಪೂರ್ಣವಾಗಿ ರಾಷ್ಟ್ರಕಾರ್ಯಕ್ಕೆ ವಹಿಸಿಕೊಂಡ ಬಗ್ಗೆ ಇಡೀ ಕರ್ನಾಟಕ ಪ್ರಾಂತವು ಅವರಿಗೆ ಅತ್ಯಂತ ಋಣಿಯಾಗಿರುವದು ಇವರು ಕಳೆದ ೪-೫ ವರ್ಷಗಳಲ್ಲಿ ಸ್ವಾತಂತ್ರ್ಯ ದೇವಿಯ ನಿವಾಸಸ್ಥಾನವಾದ ಅಮೇರಿಕಾ ಖಂಡದಲ್ಲಿ ದೇಶಭಕ್ತ ಲಾಲಾ ಲಜಪತರಾಯರ ಸಹಕೃತ್ವದಲ್ಲಿ ಹಿಂದವಾತೆಯ ಪರಿಸ್ಥಿತಿಯನ್ನು ಅಮೇರಿಕೆಯಲ್ಲಿ ತಿಳಿಸಿಹೇಳಲು ಪರಿಶ್ರಮದಿಂದ ದುಡಿದವರ, ಇದಲ್ಲದೆ ಕಳೆದ ವರ್ಷ ದೇಶಭಕ್ತ ಲಾಲಾಜಿಯವರು ಇಲ್ಲಿ ಬಂದಮೇಲೆ, ಇವರು ತಮ್ಮ ಸಹಕಾರಿ ಮಿತ್ರರಿಂದ ಹಿಂದೀ ಚಳವಳಿಯನ್ನು ಅಲ್ಲಿ ಅವ್ಯಾಹತ ನಡೆಸಿರುವರು, ಇಂಥ ಅನುಭವಿಕ, ಉತ್ಸಾಹಿ ತರುಣರು ಸೆಕ್ರೆಟರಿಗಳಾದದ್ದು ನಮ್ಮ ಪ್ರಾಂತಿಕ ಕಮಿಟಿಯ ಸುದೈವವು ಇನ್ನು ೪ ೫ ದಿವಸಗಳಲ್ಲಿ ಇವರು ಮುಂಬಯಿಗೆ ಶ್ರೀಮತಿ ಸರೋಜಿನಿ ನಾಯಡೂ ಮುಂತಾದವರ ಸಹವಾಸ ನಮ್ಮ ಪ್ರಾಂತದ ಎಲ್ಲ ಜಿಲ್ಹೆಗಳ ಪರಿಸ್ಥಿತಿಯನ್ನು ತಿಳಿಕೊಳ್ಳುವ [illegible] ಬರುವವರಿದ್ದಾರೆಂದು ಕೇಳುತ್ತೇವೆ ಇವರಿಗೆ ಅಲ್ಲಲ್ಲಿಯ ರಾಷ್ಟ್ರೀಯ ಮುಖಂಡರು ಬೆಟ್ಟಿಯಾಗಿ, ತಮ್ಮ ಚಳವಳಿಯ ಅನುಭವಗಳನ್ನೂ, [illegible]ನ್ನೂ, ಅವರಿಗೆ ತಿಳಿಸಿ ಅವರಿಂದ ಯೋಗ್ಯ ಉಪದೇಶ ಹೊಂದಿ, ರಾಷ್ಟ್ರೀಯ ಚಳವಳಿಯ ರಥವನ್ನು ವೇಗದಿಂದ ನಡಿಸುವರೆಂದು ತುಂಬಾ ಕೋರುತ್ತೇವೆ

೪ ಈಗ ಕಳೆದ ೩-೪ ವರ್ಷಗಳಿಂದ ಹಿಂದುಸ್ಥಾನ ಸರಕಾರವು ಹಿಂದುಸ್ಥಾನದಲ್ಲಿ ಉದ್ಯೋಗಧಂದೆಗಳನ್ನು ಸ್ಥಾಪಿಸಿ ಭರತಭೂಮಿಯನ್ನು ಉದ್ಧರಿಸಬೇಕೆಂದು ಚಟಪಟಿಸುತ್ತಿರುವದು. ಅದಕ್ಕಾಗಿ ಉದ್ಯೋಗ್ಗ ಧಂದೆಗಳ ಖಾತೆಯೊಂದು ನಿರ್ಮಾಣವಾಯಿತು ಈ ಖಾತೆಯು ಯಾವ ಧಂದೆಗಳನ್ನು ಪುನರುಜ್ಜೀವನ ಮಾಡಿತು, ಯಾವ ಉದ್ಯೋಗಗಳನ್ನು ಹಿಂದುಸ್ಥಾನದಲ್ಲಿ ಆಮದು ಮಾಡಿತು, ಎಂಬ ಚರ್ಚೆಯನ್ನು [illegible] ಮಾಡುವದವಶ್ಯವಿಲ್ಲ, ಅವಕಾಶವೂ ಇಲ್ಲ — ಧಂದೆ ಖಾತೆಯಲ್ಲಿ ನಮ್ಮ ಜಿಲ್ಲೆಯೊಳಗಿನ 'ಕಲ್ಗು' ಮೀನು ಧಂದೆಯನ್ನು ಪರೀಕ್ಷಿಸುವದಕ್ಕಾಗಿ ಮಿ। ಪೋಕ ಸಾಹೇಬರ ನೇಮಣೂಕಿಯಾಗಿತ್ತೆಂದು ನಮ್ಮ ವಾಚಕರ ಧ್ಯಾನದಲ್ಲಿರಬಹುದು ಈ ಸಾಹೇಬರ ಮೀನು ಕಡುವವರಿಗೆ ಯಾವ ಯಾವ [illegible]ಗಳಿರುವವೆಂಬವರ ಊಹಾಪೋಹವು ಈ ಮೊದಲೇ ಆಗಿದೆ. ಈ ಸಾಹೇಬರು ನೇಮಣೂಕಿಯಾಗಿ ಬಂದ ಕೂಡಲೆ, ಅಘನಾಶಿನಿ ನದಿಯೊಳಗಿನ ಕಲ್ಲಗು ತೆಗೆಯಬಾರದಾಗಿ ವಿಧಿಸಿ ಮೀನುಗಾರರ ಇದ್ದ ಉದರನಿರ್ವಾಹದ ಉಪಾಯವನ್ನು ಕಸಕೊಂಡರು ಈ ಹುಕುಮು ಈಗ ರದ್ದಾಗಿದೆಂದು ನಾವು ಕೇಳುತ್ತೇವೆ ಕಲ್ಲಗು ಮೀನಿನ ಎಲ್ಲ ಪ್ರಯೋಗಗಳು ಪೂರ್ಣವಾಗಿ, ಅದರೊಳಗಿದ್ದ ಎಲ್ಲ ಅಮೂಲ್ಯ ಸಾಮುಗ್ರಿಗಳ ಶೋಧವು ಮಿ। ಪೋಕರವರು ಹಚ್ಚಿ, ಈ ಹುಕುಮು ರದ್ದಾಗಿದ್ದರೆ, ಮೀನುಗಾರರು ಸಾಹೇಬರಿಗೆ ಅತಿಶಯ ಋಣಿಯಾಗದಿರರು. ತಮ್ಮ ಶೋಧಗಳನ್ನೂ, ತಾವು ಕಳೆದ ೨-೩ ವರ್ಷಗಳಿಂದ ಮಾಡಿದ ಪ್ರಯೋಗಗಳನ್ನೂ ಮಿ। ಪೋಕರವರು ಪ್ರಕಟಿಸಿದರೆ, ಮೀನುಗಾರರಿಗೆ ಹೊಸ ಜ್ಞಾನದಾನ ಮಾಡಿದ ಶ್ರೇಯಸ್ಸು ಹೊಂದಿದಂತಾಗುವದು! ತಜ್ಞರು ಮಾಡಿದ ಶೋಧಗಳು ತಜ್ಞರ ಸಂಗಡಲೇ ಹೋದರೆ, ತಜ್ಞರಿಗಾಗಿ ಸಾವಿರಗಟ್ಲೆ ರೂಪಾಯಿ ವೆಚ್ಚ ಮಾಡಿದ್ದು ಹೊಳೆಯಲ್ಲಿ ಹಾಕಿದಂತಾಗುವದು ಸರಕಾರವು ಮಿ। ಪೋಕ ಸಾಹೇಬರ ಕಾರಭಾರದ ರಿಪೋರ್ಟನ್ನು ಪ್ರಕಟಿಸಿ, ಮೀನು ಧಂದೆಯನ್ನು ನಮ್ಮ ಜಿಲ್ಲೆಯಲ್ಲಿ— ಉದ್ಯೋಗವಿಲ್ಲದ ಜಿಲ್ಹೆಯಲ್ಲಿ— ಪುನರುಜ್ಜೀವನ ಮಾಡುವರಾಗಿ ನಾವು ನೆರೆ ನಂಬಿದ್ದೇವೆ

ಸ್ಥಾನಿಕ ವೃತ್ತಾಂತ.

ಕುಮಟಾ— ಹೋದ ವಾರ ಬೀಳಹತ್ತಿದ ಅಲ್ಲಲ್ಲಿ ಜ್ವರದ ರೋಗದಿಂದ ಜನ ಬಳಲುವರು.

ಗಿಬ್ಸ ಹ್ಯಾಯ್ಸ್ಕೂಲಿನ ೬ ವಿದ್ಯಾರ್ಥಿಗಳು ಹಳದೀಪುರದಲ್ಲಿ ಸ್ವದೇಶೀ ವ್ರತದ ಕುರಿತು ಭಾಷಣ ಮಾಡಿದ ಸುದ್ದಿಯು ಮಿ। ಕಲೆಕ್ಟರ ಸಾಹೇಬರಿಗೆ ತಿಳಿದು ಅವರು ಶಾಲಾಧಿಕಾರಿಗಳಿಗೆ ಸವಾಲು ಕೇಳಿದ ಸಂಗತಿಯನ್ನು ನಾವು ಹಿಂದೆ

[illegible] ಪ್ರಕರಣದ ವಿಚಾರ [illegible] ನಡೆ ಕೆಲ ವಾಕ್ಯ ಲೇಖಿ ಮಾಫಿ ಕೊಟಿಪತ್ತೇವೆಂದು ಕೇಳಿದರೂ ಅದನ್ನೊಪ್ಪಿಕೊಳ್ಳಸದೆ ಕಳೆದ ತಿಂಗಳು ಈ ಊರು ಹುಡುಗರು ಕಾರಾಗೃಹ [illegible]

ಆದೇಶ ಪಿಪಾಸ ಸಂಜ [illegible] ಸಂಗತಿಯು ಊರಿನ ತಿಳಿದುಕೊಳ್ಳವೇ [illegible] ನಗರ [illegible] ಸಂದರ್ಭ [illegible] ವಿದ್ಯಾರ್ಥಿಗಳು [illegible] ಯಾಯಿತು ಮರ್ಯಾದ [illegible] ಶಕ್ತಿ ಮತ್ತು [illegible] ಕಾಂತೆ [illegible] ಅದೇ ನಡೆಸಿ [illegible] ಇಲ್ಲಿ ಒಂದು ರಾಷ್ಟ್ರೀಯ ಶಾಲೆಯನ್ನು ಸ್ಥಾಪಿಸಬೇಕೆಂದು [illegible] ಕರರು ಪ್ರತಿಪಾದಿಸಿದರು.

ಈ ಚಳವಳದಿಂದ ಅಧಿಕಾರಿಗಳು [illegible] ಈಗ ಮಾಡಿ [illegible] ಹಚ್ಚಿಕೊಳ್ಳಬೇಕೆಂದು ಕಾಲೆಜು ಸುಪರಿಂಟೆಂಡೆಂಟರು [illegible] ಹೀರ [illegible] ಕಟ್ಟಿರವರಂತೆ ಅವರ [illegible] ಹೋಗಿವೆ [illegible]

ಧಿಸ್ಸಿಸ ಮಾಸ [illegible] ಕಾ [illegible] ಅಧ್ಯಕ್ಷರು [illegible] ಈ ದಿವಸ ಇಲ್ಲಿ [illegible] ಲಕ್ಷದಲ್ಲಿ [illegible] ಕೌನ್ಸಿಲು ಗಳನ್ನು [illegible] ನಡೆಸಿದ [illegible] ಒಳ್ಳೇದು [illegible] ದು ರಾಷ್ಟ್ರೀಯ [illegible] ಸ್ಥಾಪಿತವಾ [illegible] ಆಗಬೇಕೆ [illegible] ಶುಭ ಮುಹೂರ್ತದ [illegible] ಲಿಡವೆಂದು [illegible] ಕೃತ್ಯ [illegible]

ಈ ವಾರದಲ್ಲಿ ಮಹಿಳಾ [illegible] ಕೊಡಿ [illegible] ಗಾಂಧಿ [illegible] ರೂಪಾಯಿ [illegible]

ಹೊನ್ನಾವರ— [illegible] ಕೋರ್ಟಿನಲ್ಲಿ ಛಟಕಳದ [illegible] ಮೋಹನ [illegible] ಇನ್ನೊಬ್ಬರಿಗೆ [illegible] ಮೂವರಿಗೆ ೫ ವರ್ಷದ ಕಾರಾಗೃಹವು ವಿಧಿಸಲ್ಪಟ್ಟಿತು.

ಕಾನಡ [illegible] ನೇ ತಾರೀಖಿನ [illegible] ಒಬ್ಬ ಪಿಯರಿ [illegible] ಮುಂದಿನ ತನಖಿ [illegible] ಯು ನೈರಾಜ್ಯ [illegible]

ಬರ್ ಇಂಡಿಯಾ ಕಾಂಗ್ರೆಸ ಕಮಿಟಿಗೆ ನಮ್ಮ ಜಿಲ್ಲೆಯ ಪ್ರತಿನಿಧಿಯಾಗಿ [illegible] ಆರಿಸಲ್ಪಟ್ಟಿರುವರು.

ಬರುವ ಅಹಮ್ಮದಾಬಾದ ಕಾಂಗ್ರೆಸ್ಸಿಕ್ಕೆ ನಮ್ಮ ಜಿಲ್ಲೆಯು ವತಿಯಿಂದ [illegible] ಮತ್ತು [illegible] ಕಾಂಗ್ರೆಸ ಕಮಿಟಿಯ [illegible] ಈ ಪ್ರಕಾರ ೧೧ ಪ್ರತಿನಿಧಿಗಳು [illegible] ಹೋಗುವರಿದ್ದಾರೆ.

ಸಿದ್ದಾಪುರ— ಇಲ್ಲಿಯ ಕಾಂಗ್ರೆಸ ಚಳವಳ ನಡೆಸುವ ಪ್ರಮುಖರಿಗೆ [illegible] ಕಾಡೇರಿಗೆ ಬಂಗ್ಲೆಗೆ ಕರೆಸಿಕೊಂಡು [illegible] ಚಳವಳ [illegible] ನಡೆಸಬಾರದೆಂದು [illegible]

ಲ್ಯಾಂಡ [illegible] ಕಚೇರಿಯಲ್ಲಿ [illegible] ಇನ್ನು ಹೊಸ [illegible] ಲ್ಲವಂತೆ [illegible] ಕ್ಷರಿ [illegible] ಕೆಂತೆ.

ಗೋಕರ್ಣ— ಕಳೆದ ಅರಸನಡೆಯಲ್ಲಿ [illegible] ಖಂಡಿನಲ್ಲಿ ಜಮಾಯಿಸಿದ ಬೆಟ್ಟಿಗ ಅಕ್ಕಿ [illegible] ೧೯ [illegible] ತಂಗನಕಾಯಿ [illegible] ಪ್ರತಿ ಅಕ್ಕಿ, ಕಾಯಿ ಎರಡರಿಂದ [illegible] ರೂಪಾಯಿ [illegible] ಜಮಾ [illegible] ಈ ಕ್ಷೇತ್ರದ [illegible] ವಿದ್ಯಾ [illegible] ತೀರ್ಥ ಸ್ವಾಮಿ [illegible] ಬಡವರು [illegible] ಬಗ್ಗೆ [illegible] ರೂ ಕೊಟ್ಟರು [illegible]

ವಿವಿಧ ವರ್ತಮಾನ.

— [illegible] ಬಹಿಷ್ಕಾರದ ಮೂಲಕ, ಇಂಗ್ಲಂಡದ ವ್ಯಾಪಾರವು ಮಂದವಾಗಿದ್ದು, [illegible] ಹೊಸ [illegible] ಅವಧಿಯು ಮೊದಲಿನ [illegible] ರಿಂದ [illegible] ಆ ರಾಷ್ಟ್ರ [illegible] ತಮ್ಮ ಕೆಲಸದ ಅವಧಿ [illegible]

[illegible] ಸರಕಾರವು [illegible] ಸ್ವರಾಜ್ಯ [illegible]

— [illegible] ಕಾಲೇಜು [illegible] ತಿಂಗಳು [illegible] ದಿವಸ [illegible]

[illegible] ತಮ್ಮ [illegible] ಮಹಿಳೆ [illegible] ಅಧಿಕಾರಿಗಳಿಗೆ [illegible] ಹಿಂದೆ [illegible]

— [illegible] ಜಂಗಲ [illegible] ರೂಪಾಯಿ [illegible] ವೇಷವನ್ನು [illegible] ಸಂಗತಿಯು [illegible] ದವಾಗಿದೆ.

— ದಿಲ್ಲಿಯ [illegible] ಜನರು [illegible] ಅಂಗಡಿಗಳು [illegible] ಜನರು ಅಂಗಡಿಗಾರರು [illegible] ಮಾಡಿದ [illegible] ಕೊಂಡ ಕೊಳ್ಳಬಾರದೆಂದು [illegible]

— ಪಂಜಾಬ ಪ್ರಾಂತದಲ್ಲಿ [illegible] ತಿಂಗಳ [illegible] ಒಬ್ಬ [illegible] ಚಳವಳ ಸಂಬಂಧವಾದ [illegible] ಪಂಜಾಬಿನ ಲಾಹೋರ [illegible] ಜಿಲ್ಲೆಗಳಲ್ಲಿಯ [illegible]

[illegible] ಪಂಜಾಬಿನಲ್ಲಿಯೂ [illegible] ಪ್ರಾಂತಗಳಲ್ಲಿಯೂ ಇರುವ ಖಿಲಾಫತ್ [illegible] ಕಾಂಗ್ರೆಸ್ [illegible] ಸಂಘಗಳು [illegible] ಸ್ವಾತಂತ್ರ್ಯ [illegible] ಕಾನೂನಿಗೆ ವಿರುದ್ಧ [illegible] ಗವರ್ನರ [illegible]

— ಫ್ರೆಂಚ ಸರಕಾರವು ಕೆನಾಲಿಸ್ಟ ಸರಕಾರದ [illegible] ಮುಖಂಡರು [illegible] ಈ ಬಗ್ಗೆ [illegible] ಪರರಾಷ್ಟ್ರೀಯ [illegible] ರ್ಫನರು ಚಿಂತಾಗ್ರಸ್ತರಾಗಿದ್ದಾರೆ!

— [illegible] ಹಿಂದೂಸ್ಥಾನ ಸರಕಾರವು [illegible] ಗ್ರೀಕರ ಪಕ್ಷವನ್ನು ಬಿಟ್ಟುಕೊಟ್ಟು [illegible] ತೀರಿಸಬೇಕೆಂದು ಉಪದೇಶ ಮಾಡುತ್ತಿದೆ!

— ದೇ॥ ಭ॥ ಗಂಗಾಧರರಾವ ದೇಶಪಾಂಡೆಯವರಿಗೆ ಕೃಷ್ಣವಾಸದ ಮಾನವು [illegible] ಬಗ್ಗೆ ಗದಗದ ಜನರು [illegible] ಸಭೆಯಲ್ಲಿ ಅಭಿನಂದನ ಮಾಡಿದರು. ಆ ಪ್ರಸಂಗದಲ್ಲಿ [illegible] ಎಂಬುವರು ತಿಂಗಳಿಗೆ ೧೫೦ ರೂ [illegible] ತಮ್ಮ [illegible] ರಾಜೀನಾಮೆಯನ್ನು [illegible]

— ಬಂಗಾಲದ ಅಸಹಕಾರಿತಾವಾದಿಗಳು [illegible] ಬಾಬು ಜಿತೇಂದ್ರಲಾಲ [illegible] ರಾಜದ್ರೋಹದ ಖಟ್ಲೆಗೆ ಪ್ರಾರಂಭವಾಗಿದೆ.

— ಆಸಾಮ ಪ್ರಾಂತದಲ್ಲಿ ದಬ್ಬಾಳಿಕೆಯು ಭರದಿಂದ [illegible] ಗಳಿಕ್ಕೆ ಬದ್ಧವಿಲ್ಲವೆಂದು ಅವರಿಗೆ ಶಿಕ್ಷೆಯಾಯಿತು [illegible] ಚಳವಳವನ್ನು [illegible] ಬೆಂಗಳೂರು [illegible] ಮಾಸದ ಶಿಕ್ಷೆ ವಿಧಿಸಲ್ಪಟ್ಟಿತು.

— [illegible] ದೇವಸ್ಥಾನಗಳ ವಿಷಯಕ ಸರಕಾರದ [illegible] ಅಲ್ಲಿಯ ಚಳವಳಿಗೆ [illegible] ಸಹಾಯಿಯ [illegible] ಸತ್ಯಾಗ್ರಹಕ್ಕೆ ಪ್ರಾರಂಭ ಮಾಡಿದ್ದಾರೆ!

— ಈ ಸತ್ಯಾಗ್ರಹದ [illegible] ಜನರು [illegible] ಬಹಳ [illegible] ಅರೋಪಗಳಲ್ಲಿ ಕೆಲವು [illegible] ಮತ್ತು ಕೆಲವು [illegible] ಪ್ರೆಸಿಡೆಂಟರು [illegible] ಇದ್ದಾರೆ.

— ಧಾರವಾಡದ ದಂಗೆಯ ಖಟ್ಲೆಯಲ್ಲಿ [illegible] ಜನರು ಹಾಯಕೋರ್ಟಿಕ್ಕೆ ಅಪೀಲ ಮಾಡಿದ [illegible] ಅಪೀಲ ಮಂಜೂರಾಗಿದೆ. [illegible] ಜಾಮೀನ ಸಿಕ್ಕಿಲ್ಲ!

— ಮಹಾತ್ಮಾ ಗಾಂಧಿಯವರು ಗುಜರಾಥದಲ್ಲಿ ಸಾರ್ವತ್ರಿಕ ಸತ್ಯಾಗ್ರಹವನ್ನು ಕೈಕೊಳ್ಳುವರು [illegible] ಮಾಡಿದ ನಿರ್ಣಯದ [illegible] ಪ್ರಾಂತದಲ್ಲಿ ಸತ್ಯಾಗ್ರಹ [illegible]

— [illegible] ಮೇಲಿನ [illegible] ಬೆಳಗಾವಿ [illegible] ಒಂದಿನ [illegible] ಅಪ್ಪಣೆ [illegible] ಕೊಟ್ಟಿದ್ದಾರೆ!

— ಸರಕಾರದ ಸ್ವಯಂಸೇವಕ ಮಂಡಳಗಳನ್ನು [illegible] ಹಿಂದೂಸ್ಥಾನದ [illegible] ಮಾಡಿದ್ದಾರೆ.

ದಾದಾಭಾಯಿಯವರ ಸ್ವರಾಜ್ಯ.

[ಲೇಖಕ — ಸೀತಾರಾಮ]

(೨೧ನೇ ಸಂಚಿಕೆಯಿಂದ ಮುಂದರಿದದ್ದು)

"ನಾವು ಹಿಂದೀ ನಿವಾಸಿಗಳು, ಬ್ರಿಟಿಶ ನಿಶಾನಿಯ ಕೆಳಗೆ ಜೀವಿಸುವವರಾದ ಬ್ರಿಟಿಶ ನಾಗರಿಕರೂ ಬ್ರಿಟಿಶ ಅರಸರ ಪ್ರಜೆಗಳೂ ಇದ್ದು, ಸ್ವತಂತ್ರರಾಗಿರುವ ಹಕ್ಕು ಅದೆ." ಎಂದಿಷ್ಟು ವಿಶದವಾಗಿಯೂ ಸ್ಪಷ್ಟವಾಗಿಯೂ ನಿಸ್ಸಂದೇಹವಾಗಿಯೂ ಪಿತಾಮಹರು ಸಿದ್ಧಮಾಡಿರುತ್ತಾರೆ. ಈ ಸಿದ್ಧಾಂತದ ವಿಷಯವಾಗಿ ಏನೂ ಶಂಕೆಯು ಉಳಿಯಬಾರದೆಂದು "ನಾನು ಹಿಂದೀ ಎಂಬುದರಿಂದಲೇ ಬ್ರಿಟಿಶ ನಾಗರಿಕನಿದ್ದೇನೆ" ಈ ತತ್ವದ ಮೇಲಿಂದ ಇಂಗ್ಲಂಡದ ಪಟ್ಟಿಯಲ್ಲಿ ನನ್ನ ಹೆಸರು ದಾಖಲು ಮಾಡುವದರ ಸಂಬಂಧವಾಗಿ ಬಂದ ಹರಕತ್ತು ತೆಗೆದು ಹಾಕುವದರ ಸಂಬಂಧವಾಗಿ ತಮ್ಮ ಸ್ವಂತ ಉದಾಹರಣೆಯನ್ನೇ ತೆಗೆದುಕೊಂಡು ತಮ್ಮ ಭಾಷಣದಲ್ಲಿ ಕೊಟ್ಟಿರುತ್ತಾರೆ. ಇದಲ್ಲದೆ, ಅವರು ಪಾರ್ಲಿಮೆಂಟಿನ ಮೆಂಬರರಾಗಿ ಆರಿಸಲ್ಪಟ್ಟು ಪಾರ್ಲಮೆಂಟಿನ ಮೆಂಬರರಾಗಿ ಪಾರ್ಲಮೆಂಟಿನಲ್ಲಿ ಕೂತು ೩–೪ ವರುಷ ಕೆಲಸ ಸಹ ಮಾಡಿರುತ್ತಾರೆ. ಇದು ಸರ್ವಶ್ರುತವಿದೆ. ಮತ್ತು ಇದಾದರೂ "ನಾವು ಬ್ರಿಟಿಶ ಸ್ವತಂತ್ರ ನಾಗರಿಕರಿದ್ದೇವೆ" ಎಂಬ ಅವರ ಅಂಬೋಣವನ್ನು ಪ್ರತ್ಯಕ್ಷವಾಗಿ ಸಿದ್ಧಪಡಿಸುವ ಬಲವಾದ ಉತ್ತಮೋತ್ತಮ ಉದಾಹರಣೆಯಿದೆ.

ಈ ಪ್ರಕಾರ ನಾವು ಬ್ರಿಟಿಶ ಸ್ವತಂತ್ರ ನಾಗರಿಕರಿದ್ದು ನಮಗೆ "ಸ್ವರಾಜ್ಯ" ಮಾತ್ರ ಇಲ್ಲವೇನು? ಯಾಕೆ ಇಲ್ಲ? ಸ್ವರಾಜ್ಯವದೆಯೋ ಇಲ್ಲೋ? ಸ್ವತಂತ್ರ ಬ್ರಿಟಿಶ ನಾಗರಿಕರಿಗೆ ಸ್ವರಾಜ್ಯವಿರ ಬಾರದಿಲ್ಲವೇನು ಎಂಬ ಪ್ರಶ್ನೆ ವಿರೋಧಾಭಾಸ ಪ್ರಶ್ನೆ ಮಾಡಿದ್ದೆನು. ಮತ್ತು ಈ ವಿಷಯ ಕ್ಷುಲ್ಲಕವೆಂದು ಅಲಕ್ಷ ಮಾಡದೆ ತಮ್ಮತಮ್ಮೊಳಗೆ ಚರ್ಚಿಸಿ ಉತ್ತರವನ್ನು ನಿಶ್ಚಯಿಸಿಕೊಳ್ಳಲಿಕ್ಕೆ ಸವಿನಯ ಪ್ರಾರ್ಥನೆಯನ್ನು ಹಿಂದಿನ ಲೇಖದಲ್ಲಿ ಮಾಡಿಕೊಂಡಿದ್ದೆನು ಮತ್ತು ಈ ವಿಷಯವಾಗಿ ಸೂಚಿಸಿದ ಕೆಲ ಪ್ರಶ್ನೆಗಳನ್ನು ಕರ್ನಾಟಕ ಬಾಂಧವರ ಮುಖಾಂತರ ಇಡೀ ಹಿಂದೀ ರಾಷ್ಟ್ರದ ಮುಂದಿಡುವೆನೆಂದು ಆಶ್ವಾಸನ ಕೊಟ್ಟಿದ್ದೆನು. ನಾನು ಪ್ರಾರ್ಥಿಸಿದಂತೆ ಕರ್ನಾಟಕ ಬಾಂಧವರು ಚರ್ಚಿಸಿರಲಿಕ್ಕೆ ಸಾಕೆಂದು ತಿಳಿಯುತ್ತೇನೆ.

ಇದೇ ಬರುವ ಡಿಸೆಂಬರದಲ್ಲಿ ಮಹತ್ವದ— ಅತಿ ಮಹತ್ವದ— ರಾಷ್ಟ್ರೀಯ ಸಭೆಯು ಸೇರತಕ್ಕದ್ದು. ಸಭೆಯು ವೇಳೆಯು ತೀರ ಸಮೀಪಿಸಿ ಬಂದು ಅದೆ. ಇಂಥ ಸಮಯವು ಪದೇ ಪದೇ ಬರುವದಿಲ್ಲ. ಈ ವಿಷಯವು, ನನ್ನ ಮತದಿಂದ ಯಾಕಾಗವಲ್ಲದು, ಮಹತ್ವದದೆ. ರಾಷ್ಟ್ರವು ಇದನ್ನು ಚರ್ಚಿಸಬೇಕು. ಎಂದೇ ಈ ಅತೀ ಉತ್ತಮ ಸಂಧಿಯಲ್ಲಿ —ಸುಸಮಯದಲ್ಲಿ—ನನಗೆ ಸೂಚಿಸಿದ ಪ್ರಶ್ನೆಗಳನ್ನು ರಾಷ್ಟ್ರದ ಮುಂದೆ ಇಡುವ ಸಾಹಸ ಮಾಡಿರುವೆನು. ಆದ್ದರಿಂದ ಕೆಳಗಿನ ಪ್ರಶ್ನೆಗಳನ್ನು ಶಾಂತ—ಸಾವಧಾನ—ವೃತ್ತಿಯಿಂದ ಲಕ್ಷಗೊಟ್ಟು ಓದಿ ಮನನಮಾಡಬೇಕೆಂತಲೂ ಯೋಗ್ಯವಾದ ಬಗೆಹರಿಕೆಯನ್ನು ಮಾಡಬೇಕೆಂದೂ ಇಡೀ ರಾಷ್ಟ್ರಕ್ಕೇನೇ ಪ್ರಾರ್ಥಿಸುತ್ತೇನೆ.

ಪ್ರಶ್ನೆಗಳು:—

೧ ದಾದಾಭಾಯಿಯವರು ಹೇಳುವಂತೆ "ನಾವು ಬ್ರಿಟಿಶ ಸ್ವತಂತ್ರ ನಾಗರಿಕರೆಂದು" ಹಾನ ನಮಗೆ ಇತ್ತೆಂದೆಯೋ ಇಲ್ಲೋ?

೨ ಇತ್ತಿದ್ದರೆ ನಮಗೆ ಯಾಕೆ ಸ್ವಾತಂತ್ರ್ಯವಿಲ್ಲ?

೩ ಕೊಟ್ಟ ದಾನವು ಹಿಂತಿರುಗಿ ತೆಗೆಸುಕೊಂಡರೆ ಏನು? ಇದ್ದರೆ ಯಾವಾಗ? ಯಾರು?

೪ ತೆಗೆದುಕೊಂಡರೆ ಎಂದರೆ ತೆಗೆದುಕೊಳ್ಳಲಿಕ್ಕೆ ಬಂದೀತೋ?

೫ ಹಿಂತಿರುಗಿ ತೆಗೆದುಕೊಳ್ಳಲಿಲ್ಲವಾದರೆ ನಮಗೆ ಸ್ವಾತಂತ್ರ್ಯವ್ಯಾಕಿಲ್ಲ?

೬ ೧೮೬೮ ನೇ ಇಸವಿಯಲ್ಲಿ ನಾವು ಸ್ವತಂತ್ರರಿರುವದಕ್ಕೆ ಯೋಗ್ಯರಿದ್ದರೆ, ಈಗ ದಾನ, ವಚನ, ಗಳವೇ (ಲೆ) ವಿಶ್ವಾಸವಿಟ್ಟು ನಡೆದದ್ದರಿಂದ ಅಲ್ಲವೋ?

೭ ಆಗ ಛತ್ರಪತೀ ಶಿವಾಜೀಯಂತ ಬೊರೆಂದ್ದರೆಂಬದರಿಂದ ನಾವು ಯೋಗ್ಯರಿದ್ದೇವೆಂದು ಬ್ರಿಟಿಶ ಸ್ವತಂತ್ರ ನಾಗರಿಕರ ಹಕ್ಕು ಕೊಡಲ್ಪಟ್ಟಿತೇ?

೮ ಬ್ರಿಟಿಶ ಸಾಮ್ರಾಜ್ಯದಲ್ಲಿ ಯಾರಿಗೆ ಮಹತ್ವ ಹೋಸವೇ?

೯ ಕೊಡಲ್ಪಟ್ಟ ಸ್ವಾತಂತ್ರ್ಯದ ದಾನವು ಮರಳ ತೆಗೆದುಕೊಳ್ಳಲಿಲ್ಲವೆಂಬುದು ನಿಜವಾದದ್ದಲ್ಲೋ?

೧೦ ದಾದಾಭಾಯಿಯವರಿಗೆ ಸ್ವತಂತ್ರ ಬ್ರಿಟಿಶ ನಾಗರಿಕರೆಂದೇ ಪಾರ್ಲಮೆಂಟಿನಲ್ಲಿ ತೆಗೆದುಕೊಳ್ಳಲಿಲ್ಲವೇ?

೧೧ ನಮಗೆ ಸ್ವತಂತ್ರ ಬ್ರಿಟಿಶ ನಾಗರಿಕರನ್ನಾಗಿ ಮಾಡಿಕೊಂಡು ಪಾಲುಗಾರರನ್ನಾಗಿ ಸೇರಿಸಿಕೊಂಡಮೇಲೆ ಪಾಲುಗಾರರ ಸಮ್ಮತಿಯು ಹೊರ್ತು ಕೊಟ್ಟ ದಾನ ರದ್ದು ಮಾಡಬಂದೀತೇ?

೧೨ ಇಂಗ್ಲಂಡ, ಸ್ಕಾಟಲಂಡ, ಐಯರ್ಲಂಡದವರೊಳಗಿಂದ ಯಾವ ಪ್ರಮಾಣದಮೇಲೆ ಪಾರ್ಲಿಮೆಂಟಿನ ಮೆಂಬರರು ಆರಿಸಲ್ಪಡುತ್ತಾರೋ ಅದೇ ಪ್ರಮಾಣದಿಂದ ನಮಗೆ ಯಾಕೆ ತೆಗೆದುಕೊಳ್ಳಲಿಲ್ಲ?

೧೩ ನಮಗೆ ಆದರಂತೆ ಕೆನಡಾ, ಆಫ್ರಿಕಾ, ಆಸ್ಟ್ರೇಲಿಯಾ ವಗೈರೆ ಸಾಮ್ರಾಜ್ಯದೊಳಗಿನ ಎಲ್ಲ ರಾಜ್ಯದೊಳಗಿನವರಿಗೆ ಯಾಕೆ ಮೆಂಬರರನ್ನಾಗಿ ತೆಗೆದುಕೊಳ್ಳಲಿಲ್ಲ?

೧೪ ಇವರೆಲ್ಲವರಿಗೆ ತೆಗೆದುಕೊಳ್ಳದ್ದರಿಂದ ಈಗಿನ ಪಾರ್ಲಿಮೆಂಟು ಅಪೂರ್ಣ, ಅಲ್ಪ ಸಂಖ್ಯಾಕರದ್ದು ಅಲ್ಪ ಜನ ಕೂಡಿದ್ದು ಅಲ್ಲವೋ?

೧೫ ಇಂಥ ಪಾರ್ಲಮೆಂಟಿಗೆ ಸಾಮ್ರಾಜ್ಯದಮೇಲೆ ಅಧಿಕಾರ ನಡಿಸುವ ಹಕ್ಕು ಉಂಟೋ? ಹ್ಯಾಗೆ, ಎಲ್ಲಿಂದ ಬಂತು?

೧೬ ಇಂಗ್ಲಂಡ ಐಯರ್ಲಂಡ, ಸ್ಕಾಟಲಂಡದವರ ಹೊರ್ತು ಬಾಕಿ ಉಳಿದ ಸಾಮ್ರಾಜ್ಯದೊಳಗಿನ ಬ್ರಿಟಿಶ ನಿಶಾನಿಯ ಕೆಳಗೆ ಜೀವಿಸುವ ನಾಗರಿಕರು ಅವರ ಪ್ರತಿನಿಧಿಗಳಲ್ಲದ ಪಾರ್ಲಿಮೆಂಟಿನ ಠರಾವುಗಳನ್ನು ಮನ್ನಿಸಲೇ ಬೇಕೆ? ಇದಕ್ಕೇನು ಆಧಾರವದೆಯೋ?

೧೭ ಈ ಅಲ್ಪ ಸಂಖ್ಯಾಕರ ಮತದಂತೆ ಬಾಕಿ ಎಲ್ಲ ಸಾಮ್ರಾಜ್ಯದೊಳಗಿನ ರಾಜ್ಯದಲ್ಲಿಯ ರಹಿವಾಸಿಗಳು ನಡಿಯಬೇಕಾದರೆ, ನಮ್ಮನ್ನೆಲ್ಲಾ ಸಾಮ್ರಾಜ್ಯದ ಪಾಲುಗಾರರನ್ನಾಗಿ ಯಾಕೆ ಮಾಡಿಕೊಂಡರು?

೧೮ ಪಾಲುಗಾರರ ಸಮ್ಮತಿಯ ಹೊರ್ತು— ಯಾ ಎಲ್ಲರೂ ಕೂಡಿದ ಪಾರ್ಲಮೆಂಟಿನ ಸಮ್ಮತಿಯ ಹೊರ್ತು— ಯುದ್ಧ, ಕರಾರು, ತಹನಾಮೆ, ಒಪ್ಪಂದ ಮಾಡಬಂದೀತೇ?

೧೯ ಹೀಗೆ ಮಾಡಿದರೆ, ನಾವೆಲ್ಲಾ ಪಾಲುಗಾರರು ಅದಕ್ಕೆ ತಲೆ ಬಗ್ಗಿಸಲೇ ಬೇಕೇ?

೨೦ ಇಂಥ ಸಮ್ಮತವಿಲ್ಲದ ಸಂಗತಿಗಳಲ್ಲಿ ಸಮ್ಮತವಿಲ್ಲೆಂದು ಹೇಳಿದಲೆ ತಪ್ಪಾದೀತೇ?

೨೧ ನಮ್ಮ ಪಾಲುಗಾರರಾದ ಬ್ರಿಟಿಶ, ಸ್ಕಾಟಿಶ, ಐರಿಶ ಬ್ರಿಟಿಶ ಸ್ವತಂತ್ರ ನಾಗರಿಕರಿಗೂ ನಮ್ಮಂತೆ ಸ್ವರಾಜ್ಯವಿಲ್ಲವೇ?

೨೨ ಅವರಿಗೆ ಸ್ವರಾಜ್ಯವಿದೆಯಾದರೆ ಅವರಂತೆ ಇದ್ದ ಬ್ರಿಟಿಶ ಸ್ವತಂತ್ರ ನಾಗರಿಕರಾದ ನಮಗೆ ಯಾಕಿಲ್ಲ?

೨೩ ಅವರಂತೆ ನಾವು ಸ್ವತಂತ್ರರಲ್ಲವೇ?

೨೪ ಅವರು ಮಾತ್ರ ಪಾರ್ಲಮೆಂಟಿನಲ್ಲಿ ಕೂತು ಸಾಮ್ರಾಜ್ಯದ ಕಾರಭಾರ ನಡಿಸಬೇಕ್ಯಾಕೆ?

೨೫ ನಾವು ಸಹ ಸಮಭಾಗಿದಾರರಾಗಿದ್ದು ನಾವ್ಯಾಕೆ ಪಾರ್ಲಮೆಂಟಿನಲ್ಲಿ ಕೂತು ಸಾಮ್ರಾಜ್ಯದ ಕಾರಭಾರ ನಡಿಸಬಾರದು?

೨೬ ಪಿತಾಮಹರ ಹೇಳಿಕೆಯಂತೆ ನಾವು ಬ್ರಿಟಿಶ ನಾಗರಿಕರೆಂದು ನಿಶ್ಚಯಿಸಲ್ಪಟ್ಟರೆ, ಎಷ್ಟು ಆನಂದ, ಎಷ್ಟು ಉತ್ಸಾಹ, ಎಷ್ಟು ಧೈರ್ಯ ಬಂದಾವೀತೆಂಬುದನ್ನು ಯಾರು ಹೇಳಲು ಶಕ್ಯರು?

೨೭ ಇಷ್ಟೊತ್ತಿನ ವರೆಗೆ ನಾವು ಪರತಂತ್ರರು ನಮಗೆ "ಸ್ವರಾಜ್ಯ" ವಿಲ್ಲವೆಂದು ಗ್ರಹಿಸಿಕೊಂಡಿದ್ದು ತಪ್ಪೇ? ತಪ್ಪಲ್ಲವೋ?

೨೮ ದಾದಾಭಾಯಿಯವರು ಹೇಳಿದ ಕಡೆ ಲಕ್ಷಿಸದೇ ನಮಗೆ ಇದ್ದದ್ದನ್ನೇ ನಾವು ರಾಷ್ಟ್ರೀಯ ಸಭೆಯವರೂ ತಿರುತಿರುಗಿ ಬೇಡಿಕೊಳ್ಳುವದ್ದೇ? ತಪ್ಪಲ್ಲ?

೨೯ ನಾವು ಸ್ವರಾಜ್ಯ ಸಂಪಾದಿಸಬೇಕೇ?

೩೦ ಸಂಪಾದಿಸುವದಲ್ಲ ನಮಗೆ ದಾದಾಭಾಯಿ ಕೊಡಲ್ಪಟ್ಟದೆ? ಬ್ರಿಟಿಶ ನಿಶಾನಿಯ ಕೆಳಗೆ ಹೋದ ಕ್ಷಣಕ್ಕೆ ನಮಗೆ ಪ್ರಾಪ್ತವಾಗಿ ಅದೆ?

೩೧ ಸಂಪಾದಿಸಬೇಕೋ? ಕಬಜೆ ತೆಗೆದುಕೊಂಡು ಉಪಭೋಗ ತೆಗೆದುಕೊಳ್ಳಬೇಕು?

೩೨ ಇದನ್ನು ನಿಶ್ಚಯಿಸುವರಾ?

೩೩ ಸ್ವತಂತ್ರರಿಗೆ ಸ್ವರಾಜ್ಯವಿರುವದಿಲ್ಲವೇ?

೩೪ ಸ್ವರಾಜ್ಯವದೆಯಾದರೆ ಮತ್ತೆ ಬೇಡುವದ್ಯಾಕೆ?

೩೫ ಲೋಕಮಾನ್ಯರು, ಸ್ವರಾಜ್ಯವಿದು ನನ್ನ ಜನ್ಮಸಿದ್ಧ ಹಕ್ಕೆಂದದ್ದು ಇದರಿಂದಲೇ ಏನು?

೩೬ ಯಾವ ರೀತಿಯಿಂದ ವಿಚಾರ ಮಾಡಿದರೂ ನಮಗೆ ಸ್ವರಾಜ್ಯವದೆ ಎಂಬುದರಿಂದಲೇ ಲೋಕಮಾನ್ಯರ ಹೀಗೆನ್ನುತ್ತಿದ್ದರೋ?

೩೭ ಪಿತಾಮಹರು, ಮತ್ತು ಲೋಕಮಾನ್ಯರು ಧೈರ್ಯದಿಂದ ಹೇಳಿದಂತೆ ನಾವೆಲ್ಲವರು ಸ್ವತಂತ್ರ ಬ್ರಿಟಿಶ ನಾಗರಿಕರೆಂದು ಈಗಲಾದರೂ ರಾಷ್ಟ್ರೀಯ ಸಭೆಯ ಮುಖಾಂತರ ಹೇಳಲಿಕ್ಕೇನು ಅಡ್ಡಿ?

೩೮ ಹೇಳಿದರೆ ತಪ್ಪಾದೀತೇ?

೩೯ ಗುನ್ಹೆಯಾದೀತೇ?

೪೦ ಸ್ವಯಂ ನಿರ್ಣಯ ನಮಗೆ ಲಾಗು ಇಲ್ಲವೇ?

೪೧ ಯುರೋಪಕ್ಕೆ ಮಾತ್ರ ಲಾಗು?

೪೨ ಸರಕಾರ ತಗ್ಗೆತ್ತಿಸುತ್ತಿರುವರ ಮತದಂತೆ ರಾಜ್ಯಕಾರಭಾರ ನಡಿಸಬೇಕಲ್ಲವೆ?

೪೩ ಹೀಗೆ ನಡಿಸದಿದ್ದರೆ ಮುಂದೇನು ಮಾಡಬೇಕು?

೪೪ ಇದನ್ನು ಈಗಲಾದರೂ ನಿಶ್ಚಯಿಸುವದು ಜಗತ್ತಿಗೆ ಹಿತಕರವಲ್ಲವೇ?

೪೫ ಸ್ವತಂತ್ರ ನಾಗರಿಕರ ಹಕ್ಕು ಮತ್ತೆ ಕೊಡಬೇಕೇ?

೪೬ ಮಾಂಟಗ್ಯೂರ ಗಡಬಡಿಗೆ ಏನನ್ನಬೇಕು?

೪೭ ಹಿಂದೆಯೋ ಈ ಹಕ್ಕು ಕೊಟ್ಟು ಹೋಗಿದೆಯಲ್ಲವೋ?

೪೮ ಪಕ್ತ ಕಬಜೆ ಮಾತ್ರ ನಡಿಯಬೇಕಲ್ಲವೇ?

ಈ ಪ್ರಶ್ನೆ ಮಾಲಿಕೆಯು ಬೆಳೆಯುತ್ತ ಬಂತು ಆದ್ದರಿಂದ ಇಲ್ಲಿಗೆ ಮುಗಿಸುವೆನು. ಈ ವಿಷಯ ಮತ್ತಿಷ್ಟು ಚರ್ಚಿಸಬೇಕೆಂತು ಅದೆ. ಈ ಪ್ರಶ್ನ ಮಾಲಿಕೆಯಿಂದ ಈ ವಿಷಯದ ಮಹತ್ವ ವಾಚಕ ಸಜ್ಜನರ ಲಕ್ಷಕ್ಕೆ ಬಾರದಿರದು. ಇದು ಮಹತ್ವವೆಂದು ಕಂಡರೆ, ರಾಷ್ಟ್ರೀಯ ಸಭೆಯು ಕೂಡಿದಾಗ ಎಲ್ಲ ಮುಖಂಡರು ಚರ್ಚಿಸಿ ನಿಶ್ಚಯಿಸ್ಯಾರೆಂದು ತಿಳಿಯುತ್ತೇನೆ.

——:(O):——

ಜೇಡಹುಳದ ಮನೆಯಲ್ಲಿ ಮಹಾತ್ಮರ ಹೆಸರು.

ಕಲಕತ್ತಾ ನಗರದಲ್ಲಿ ಮೌಲಾನಾ ಶರತಮೇಲಿನ ಒಂದು ಬೀದಿಯ ವಿಚಾರಣೆಯು ಹೊರಟಾಗ್ಗೆ, ಒಂದು ಮನೆಯಲ್ಲಿ ಜೇಡಹುಳವು, ಅಜ್ಞಾನಕೀಟಕ ಜೇಡಹುಳವು, ತನ್ನ ಜಾಳಿಗೆಯ ಮನೆಯನ್ನು ಕಟ್ಟುವಾಗ್ಗೆ ಮಹಾತ್ಮರ ಹೆಸರನ್ನು ಎರಡು ಕಡೆಗೆ ಹೆಣೆದಿಡುವದೆಂದು ಊರ ತುಂಬಾ ಸುದ್ದಿ ಹಬ್ಬಿತು. ಈ ಚಮತ್ಕಾರವನ್ನು ನೋಡಲು ಜನರ ಗುಂಪಿಗೆ ಗುಂಪೇ ಹೊರಟಿತು. ನಾನೂ ಹೋಗಿದ್ದೆನು. ಮನೆಯ ಮಾಲಕನು ಈ ಪರಮೇಶ್ವರೀ ಚಮತ್ಕಾರವನ್ನು ನೋಡಲಿಕ್ಕೆ ಟಿಕೀಟು ಇಟ್ಟಿದ್ದನು. ಆ ಬಂದ ಉತ್ಪನ್ನವನ್ನು ಅಂಗೋರಾ ಫಂಡಿಗೆ ಕೊಡುವ ನಿರ್ಣಯವಾಗಿದೆ.

ಡೇಲೀ ಎಕ್ಸಪ್ರೆಸ.

ಕೌನ್ಸಿಲ್ ರಿಪೋರ್ಟ ತಾ ೨೪—೧೧—೨೧

—ವಿಜಯ ಧಾರವಾಡ.

ಶ್ರೀ ಕಮಲಾಬಾಯಿಯ ಅಜಲು ಸಂಜೀವನ ಗುಳಿಗೆ

ಖರೇ ಸ್ತ್ರೀಯರ...

ಪ್ರಾಯ ಬಂದಂದಿನಿಂದ ಪ್ರಸೂತಿಯ ಪರಿಯಂತ ಎಲ್ಲ ಅವಯವಗಳ ತೀಕ್ಷ್ಣ ... ರೋಗಗಳು ಈ ಗುಳಿಗೆಗಳಿಂದ ಗುಣ ಬರುತ್ತವೆ ... ಗಳದಾರಿದ್ಯ ಇವುಗಳ ಸೇವನೆಯಿಂದ ಯಾರಿಗೂ ಅಸಮಾಧಾನವಿಲ್ಲ ... ಬಾಟಲಿ ೧ ರ ಕ್ರಯ ೧—೮—೦ ... ವ್ಯಾಪಾರಿಗಳಿಗೆ ಸೋಯಿಯ ದರ

ಶ್ರೀ ಕಮಲಾಬಾಯಿ ... ಕಾಳಬಾದೇವಿಯ ಎದುರಿಗೆ ಮುಂಬಯಿ

ಡಾ. ನವರತ್ನಕರ

ವಿದ್ಯುತ್‌ಶಕ್ತಿಯ ಹಿಂದಿ ಕೂದಲಿನ ಬಣ್ಣ

ಪಕ್ಕಾ ಕಲಾಪ.

ಇದರಿಂದ ಬಿಳಿ ಬಣ್ಣದ ಕೂದಲು ಕರೆ ... ತ್ರವೆ ಈ ಕಲಾಪಿನ ಗುಣಗಳು — ... ಇಂಪಾದ ಪರಿಮಳ, ... ರೆಲ್ಲರು ಸವಾಧಾನಪಟ್ಟಿರುವರು

ಕ್ರಯ ೧—೪—೦ ಅಂಚೆ ವೆಚ್ಚ ಬೇರೆ

೧೨ ಕ್ಕೆ ೧೫—೮—೦

ನವರತ್ನ ಮತ್ತು ಸನ್

೧೦೧ ಕಾಳಬಾದೇವಿ ರೋಡ ಮುಂಬಯಿ

ಅನುಭವಸಿದ್ಧವಾದ ಔಷಧಗಳು!!!

ನಿಷ್ಪ್ರಹಸ್ಯ ತೃಣಂ ಜಗತ್॥

ರಕ್ತಶುದ್ಧಿ, ಧಾತುವೃದ್ಧಿ ಯವೇಲೆ ಅತಿ ಉತ್ತಮ ಪ್ರವಾಳ, ಕೇಶರ, ಅಮರಸತ್ವ, ಶಿಲಾಜಿತು, ಮತ್ತು ವನಸ್ಪತಿ ಮಿಶ್ರಿತ

ಧಾತುಪೌಷ್ಟಿಕ ಗುಳಿಗೆ.

ಇದರಿಂದ ಕ್ಷೀಣತೆ, ಗುರ್ಬಲತೆ, ನಪುಂಸಕತ್ವ, ಸ್ವಪ್ನಾವಸ, ರಕ್ತದೂಷಿತರೋಗ, ಮೇಂದುವಿಕಾರ, ನರಗಳ ಅಶಕ್ತತೆ, ಅಂಗನಿಸ್ತೇಜತ್ವ, ಧಾತುರೋಗು ವದು, ತಲೆತಿರುಗುವದು, ಜೀರ್ಣಜ್ವರ, ಅಗ್ನಿಮಾಂದ್ಯ, ಉದರದಂಡವಿಕಾರ, ಮೂತ್ರಕಳಿಲಿ, ಮುಂತಾದ, ಅನೇಕ ವಿಕಾರಗಳು, ಶೀಘ್ರದಿಂದ ಗುಣವಾಗಿ, ಶರೀರಕ್ಕೆ ದೃಢತ್ವವು, ಕಾಂತಿಯೂ, ಸ್ಮರಣಶಕ್ತಿಯೂ, ಕಾಕದ ವೃದಿಯಾಗಿ ರತಿಸುಖಕ್ಕೆ ಕಾಯಂ ಶಕ್ತಿಯನ್ನು ಕೊಡುತ್ತದೆ ಉತ್ತಮ್ಮಗುಣಕ್ಕೆ ೪೨ ದಿವಸ ಬೇಕು ಗುಳಿಗೆ ೬೪ ಕೆ ರೂ ೪—೦—೦

(೧) ಬಾಲಾಮೃತಗುಟಿಕಾ — ಚಿಕ್ಕ ಮಕ್ಕಳ ಎಲ್ಲ ರೋಗಗಳಮೇಲೆ ಅತಿ ಉತ್ತಮವಾದ್ದು ಗುಳಿಗೆ ೩೦ ಕ್ಕೆ ರೂ ೧—೦—೦ (೨) ಸ್ವಪ್ನಾವಸ್ಥಮೇಲೆ ಚೂರ್ಣ ೧೫ದಿವಸದ ಔಷಧಕ್ಕೆ ರೂ ೨—೦—೦ (೩) ಗಜಕರ್ಣನಾಶಕ ಮಲಮು — ಡಬ್ಬಿಗೆ ಆಣೆ ೦—೮—೦ (೪) ಮೂಲವ್ಯಾಧಿ ನಾಶಕಗುಳಿಗೆ — ಎಳು ಬಗೆಯ ಮೂಲವ್ಯಾಧಿಗೆ ಗುಳಿಗೆ ೩೦ ಕ್ಕೆ ರೂ ೨—೦—೦

ಅನುಮಾನಪತ್ರ ಔಷಧಿಯ ಸಂಗಡ ಅಂಚೆ ವೆಚ್ಚ ಬೇರೆ

ವಿಳಾಸ — ವೈದ್ಯ ವ್ಹಿ. ಎಸ್ ಮೋದಕ. ಮತ್ತು ಕಂಪನಿ, ಪೋಸ್ಟ ಸಿರಸಿ, ಜಿಲ್ಲಾ ಉತ್ತರಕಾನಡಾ.



ಮಲಶುದ್ಧಿ ಯಾಗುತ್ತದೆ, ಬೆವರು ಬಂದು ಜ್ವರವು ಬಿಡುತ್ತದೆ ಕ್ರಯ ... ರೋಕ ವ್ಯಾಪಾರಸ್ಥರಿಗೆ ಅಗ್ಗ

ಪಾಟಣಕರ ವಾಸುದೇವ ಕಂಪನಿ ಮುಂಬಯಿ ೪

ಸ್ವದೇಶಿಯೇ ಹಿಂದುಸ್ಥಾನದ ಪ್ರಾಣವು.

ಇದರಿಂದಲೇ ನಮ್ಮ ದೇಶದ ಭಾಗ್ಯೋದಯವಾಗುವದು.

... ಛತ್ರಿ (ಬರಕ) ಓಕಾಪು ... ಪೋಶಾಕುಗಳು ... ತೆ, ಮಹಾತ್ಮಾ ಗಾಂಧಿ ... ಲೋಕಮಾನ್ಯ ಟಿಳಕ ... ಸಿ ಆರ್ ದಾಸ ... ಫೋಟೋ ವ ಲೋಕ್ಸ್‌ಗಳು ... ಹ್ಯಾಟು ...

ಕುಡ್ವ ವಾಸುದೇವ ಪಾಂಡುರಂಗ ಕಾಮತ ಭಾಗ, ಮತ್ತು ಬ್ರದರ್ಸ

ಕೋನಾವರ, ಜಿ ಕಾರವಾರ

Notice to Investors.

We undertake to negotiate business for our constituents in the following Securities on the Bombay Market for ready delivery as well as of a speculative nature The Securities are STOCK & SHARES, GOLD SILVER etc Usual commission is charged *Please apply to Messrs*

Gunshekhar & Co.
IRANI BUILDINGS,
Tardeo Road,
BOMBAY. 7.
Telegrams– *Vayayanti.*

FREE. FREE.

Purchasers of 36 tins of our Ringworm Ointment at price As 4 per tin or of 12 Pots of Otto Mushkhina, Price As 12 per tube, will be sent

A WRIST WATCH FREE

King George Coronation Co., BOMBAY No. 4.

ರಷ್ಟ್ರೀಯ ಪಕ್ಷದ ವಾರಪತ್ರಿಕೆ

ನವೀನ ಭಾರತ.

(ವಾರ್ಷಿಕ ವರ್ಗಣೀ ಅಂಚೇ ವೆಚ್ಚ ಸಹಿತ ...)

ಇದರಲ್ಲಿ ಸಾಮಾಜಿಕ, ರಾಜಕೀಯ ವಿಷಯಗಳು ನಿಷ್ಪಕ್ಷಪಾತದಿಂದಲೂ, ... ಚರ್ಚಿಸಲ್ಪಡುವವು

ಸ್ವದೇಶೀ, ಬಹಿಷ್ಕಾರ, ಮದ್ಯಪಾನ ನಿಷೇಧ, ರಾಷ್ಟ್ರೀಯ ಶಿಕ್ಷಣ ಮೊದಲಾದ ಲೇಖ ಗಳೂ ಪ್ರಕಟಿಸಲ್ಪಡುವವು. ಕರ್ನಾಟಕದ ಉನ್ನತಿಯನ್ನಪೇಕ್ಷಿಸುವವರು ಇದನ್ನು ಒಮ್ಮೆ ನೋಡಬೇಕು ಕರ್ನಾಟಕದ ಭಾಗಗಳಲ್ಲಿ ಇದರ ಪ್ರಸಾರವಿ ... ಜಾಹೀರಾತು ಗಳಿಗಾಗಿ ...

ವಿಳಾಸ— ನವೀನ ಭಾರತ ಕಾರ್ಯಾಲಯ ಬಾಗಲಕೋಟ (ಜಿ ವಿಜಾಪುರ)

ಸ್ಪೆಶಲ್ ಮೊಟರ ಬಂಡಿಗಳು ನಮ್ಮಲ್ಲಿ ಬಾಡಿಗೆಗೆ ಸಿಗುವವು.

ಬೇಕಾದವರು ಕೆಳಗಿನ ವಿಳಾಸಯಮೇಲೆ ಬರಕೊಳ್ಳಬಹುದು ಸವಲತ್ತಿಯ ದರಗಳು ಇಟ್ಟಿರುವೆವು

ನಮ್ಮ ಪತ್ತೆ—

ಗ್ವಾತೋಂಡೇ ಬ್ರದರ್ಸ,

ಮೊಟರ ಡೀಲರ್ಸ, ರಿಪೇರರ್ಸ

ಕಾರವಾರ.

ಭಕ್ಷಿಸು ಯಾ ಸರ್ಟೀಫಿಕೇಟು ಪಡೆದಿರುವ

ಶಕ್ತಿವರ್ಧಕ ಹಲವಾ.

ಇದರ ಸೇವನೆಯಿಂದ ರಕ್ತಶುದ್ಧಿ ಧಾತುಪೌಷ್ಟಿ ಯಾಗಿ ಶರೀರವು ಕಾಂತಿಗೊಳಿಸುವದು ಇದಲ್ಲದೆ ... ದಮ್ಮು, ಕಫ, ವಾತ, ಪಿತ್ತ ನಿವೆ ... ವಿಸರ್ಜನೆ ಸರಿಯಾಗಿ ಆಗದಿರೋಣ, ... ಸ್ತ್ರೀಯರ ಗರ್ಭದೋಷ, ... ಬೇನೆಗಳು ಬೇಗನೇ ಗುಣಹೊಂದುವವು ಉಪಯೋಗಿಸಿ ನೋಡಿರಿ ... ತೊಲೆ ಡಬ್ಬಿ ೧ ಕ್ಕೆ ರೂಪಾಯಿ

ಕರೇಕರ ಬ್ರದರ್ಸ, ಶಕ್ತಿವರ್ಧಕ ಹಲವಾ ಡಿಪೋ, ಕುಮಟಾ (ಕಾನಡಾ)

...Keshav Shenvi at his Star of Kanara Press, Kumta

Reg. No B. 1270. Thursday, 15th. December 1921.

ಕಾನಡಾವೃತ್ತ.

THE KANARA NEWS.

ವರ್ಷ ೬.

ಸಂಚಿಕೆ ೦೦.

ಪತ್ರದ ದರಗಳು.-

ಊರ ಒಳಗೆ ಒಂದು ವರ್ಷಕ್ಕೆ ರೂಪಾಯಿ 2-4-0.

ಪರಊರಿಗೆ ರೂ 3-0-0.

ಒಂದು ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता॥

ಪ್ರತಿ ಗುರುವಾರಕ್ಕೆ ಹೊರಡಿಸಲ್ಪಡುವದು.

ಜಾಹಿರಾತು ಮೊದಲಿನ ದರ.-

ಕನ್ನಡ, ಇಂಗ್ಲಿಷ ಸ್ಥಳಕ್ಕೆ ಲಾಯಿನಿಗೆ ಮೊದಲನೇ ವೇಳೆಗೆ ರೂ.

ಹೆಚ್ಚಿನ ಕಾಲಗಳಿಗೆ ಕಡಿಮೆ ದರ.

ಎಲ್ಲ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ಗೊತ್ತುಮಾಡಿಕೊಳ್ಳತಕ್ಕದ್ದು.

ಕುಮಟಾ— ಕಾನಡಾವೃತ್ತ ಗುರುವಾರ, ತಾರೀಖ ೧೫ ನೇ ಮಾಹೆ ಡಿಸೆಂಬರ ಸನ್ ೧೯೨೧ ನೇ ಇಸವಿ

ಹಲ್ಲಿನ ಡಾಕ್ಟರ ಕೃಷ್ಣ ರಾವ ಆನಂತ.



ಇವರು ರಾಜವ ಛಾಪಿನ ಪಟ್ಟಿ ಮತ್ತು ಸಂಕರ ಕೆ ದಲ್ಲಿ ಮಾಲಂಗಳ ಕಾವು ಧರಿಸಿದ ಹೊಸ ಪದ್ಧತಿಯಿಂದ ಹಲ್ಲುಗಳನ್ನು ತೆಗೆದು ಹಾಕುವರು. ಇದೇ ಪದ್ಧತಿಯಿಂದ ಶುದ್ಧವಾದ ಚನ್ನ ಬೆಳ್ಳಿಯಿಂದ ತುಂಬಿ ಕೊಡುವರು, ಯಂತ್ರದಿಂದ ಹಲ್ಲುಗಳ ಮೇಲಿನ ಪೊಳವನ್ನು ತೆಗೆದು ಅವುಗಳನ್ನು ಸ್ವಚ್ಛ ಹೊಳೆಯುವ ಹಾಗೆ ಮಾಡಿಕೊಡುವರು. ಹಲ್ಲುಕಟ್ಟುಗಳನ್ನು ಔಷಧ ಹಚ್ಚಿ ನೋವು ತೆಗೆದುಕೊಡುವರು. ಬಿದ್ದು ಹೋದ ಹಲ್ಲುಗಳ ಕಟ್ಟನ್ನು ದುರುಸ್ತ ಮಾಡಿ ಸರಿಯಾಗಿ ಕೂಡಿಸಿಕೊಡುವರು. ಈ ಕೆಲಸವು ನಿಶ್ಚಯದಿಂದ ಮತ್ತು ಅಗ್ಗವಾಗಿ ಮಾಡಲ್ಪಡುತ್ತದೆ.

Javeri Mansion
near Marwadi Vidyalaya,
Sandhurst Road,
BOMBAY No 4

ಗ್ಯಾಸ ದೀಪಗಳು

ಭಾಡಿಗೆಗೆ ಇಟ್ಟಿರುವೆವು.

ಬೇಕಾದವರು ಭಾಡಿಗೆಯ ದರವಾಗ ವಗೈರೆ ಮಾಹಿತಿಗಾಗಿ ಪತ್ರ ಮುಖಾಂತರ ಕೇಳಿಕೊಳ್ಳಬೇಕು.

ಈಶ್ವರೋತ್ತಮ ಲಕ್ಷ್ಮಣ ಭಟ್ಟ ಕ್ಯಾನಭಾಗ

ಗಡೇಕರ, ದುಕಾನ, ಕುಮಟಾ.

ನಾರ್ದನಸ್ವಾಜ ಫೋಟೋ.

ಮಹಾತ್ಮಾ ಗಾಂಧಿ, ಲೋ. ಟಿಳಕ ಬಾಬಾ ಶೌಕತ ಅಲ್ಲಿ, ಡಾ. ಲಾಲಾ ಲಜಪತರಾಯ ಇವರ ಊತ್ತಮ ಕಾಗದ ಸ್ವದೇಶಿ ಫೋಟೋಗಳು ಸಿಗುವವು.

ಕ್ರಯ ೧ ಕ್ಕೆ ಒಂದು ೧ ಡಜನ ಬೇಕಾದವರು ೫ ಸ್ಟಾಂಪುಗಳು ಮತ್ತು ೧೦೦ ಬೇಕಾದವರ ೧-೧೨-೦ ಮನಿಆರ್ಡರದ್ವಾರಾ ಹಣವು ಕಳುಹಿಸಬೇಕು. ನಮೂನೆ ಬೇಕಾದವರು ಅರ್ಧ ಆಣೆಯ ಸ್ಟಾಂಪುಗಳು ಕಳುಹಿಸಬೇಕು.

ಪತ್ತೆ.— ಸ್ವಾರಸಿಫ ಕೆನರಾ ಪ್ರೆಸ್ಸ,
ಕುಮಟಾ (ಎನ್ ಕೆನರಾ.)

ಮೋಟಾರ.

ಕಾರವಾರಿನಿಂದ— ಶಿರಸಿಗೆ ಮತ್ತು ಶಿರಸಿಯಿಂದ ಕಾರವಾರಕ್ಕೆ, ಪ್ರತಿ ಆದಿತ್ಯವಾರ-ಗುರುವಾರ ಮೋಟಾರ ಸರ್ವಿಸ ವ್ಯವಸ್ಥೆ ಮಾಡಿದೆ. ಕಾರವಾರಿನಿಂದ ಬೆಳಿಗ್ಗೆ ೯ ಘಂಟೆಗೆ ಮತ್ತು ಶಿರಸಿಯಿಂದ ಪ್ರಾತಃಕಾಲ ೭ ಘಂಟೆಗೆ ಹೊರಡುವದು. ದಾರಿಯಲ್ಲಿ ಎಲ್ಲಾ ಸ್ಥಳಗಳಲ್ಲಿ ಅರಸಿಂದ ಮುಟ್ಟಿಸುವ ವ್ಯವಸ್ಥೆ ಮಾಡಿ ದಿನಗಳಲ್ಲಿ ಹಣ ಕೊಡಬೇಕು.

ಟಿಕೀಟುಗಳು ಶಿರಸಿಯಲ್ಲಿ ಶೆಣೈ ಪಾಂಡುರಂಗ ನವರ ಅಂಗಡಿಯಲ್ಲಿ, ಮತ್ತು ಕಾರವಾರದಲ್ಲಿ ಸ್ಟೇಶನದ ಹತ್ತಿರ ಕೇಳಿಕೊಳ್ಳಬೇಕು.

ಎಸ್. ಎಲ್. ಧಾಕಪ್ಪ

[ಅಗ್ಗ] [ಅಗ್ಗ]

ಮಳೆಗಾಲ ಮತ್ತು ಬಿಸಿಲು ದಿವಸಗಳಲ್ಲಿ ಬೇಕಾಗುವ ಎಲ್ಲ ತರದ ಕೊಡೆ ಛತ್ರಿಗಳು, ಜ್ವಾನ್ ಕೆವಮ್ಯಾ, ಕಂಬಳಿ, ಕಂಗಾರಿ ರುಮಾಲುಗಳು, ಎಲ್ಲ ತರದ ಪಾಟೀಲ ಸಾಬೂನು, ಅತ್ತರ ವಗೈರೆ, ಔಷಧಗಳು, ಸ್ಟೇಶನರಿ ಸಾಮಾನು ವಗೈರೆ ಸಾಮಾನುಗಳು ಮಹಾತ್ಮಾ ಗಾಂಧಿಯವರ ಬಿಳೇ ಖಾದೀ ಟೊಪ್ಪಿಗೆಗಳು ಕರಿಯ ಟೊಪ್ಪಿಗೆಗಳು ಖಾದೀ ಕಮೀಜು ವಗೈರೆ ಕೊಡಲ್ಪಡುವದು.

ಎಸ್ ಎಲ್ ಧಾಕಪ್ಪ ಮತ್ತು ಬಂಧು
ಶಿರಸಿ

ಭಡತೀ ಭ್ರಾತೃಸಂಘದ

ಅನುಭವಸಿದ್ಧ ಮಾತ್ರೆ

ಜ್ವರದ ಗುಳಿಗೆಗಳು ಕ್ರಯ — ಒಂದಕ್ಕೆ ೦-೧-೦ ಉತ್ತಮ ಸೀಬೀಗಾಗಿ ಸಿಗುವ ಶಿಲಾಜಿತ್ತು, ಇಂಗು, ಇವಲ್ಲದೆ ಗೋಕರ್ಣ ಮಹಾಬಳೇಶ್ವರ ದೇವರ ಫೋಟೋಗಳೂ, ಶ್ರೀ ಮ ದಿಡದ ಫೋಟೋಗಳೂ ಕಾಗದಗಳು, ಸ್ಟೇಶನರಿ ಸಾಮಾನುಗಳೂ ಯೋಗ್ಯ ಬೆಲೆಗೆ ದೊರೆಯುತ್ತವೆ.

ಪತ್ತೆ— ಭಡತೀ ಭ್ರಾತೃಸಂಘ,
ಗೋಕರ್ಣ.

Khilafat & National Leaders' badges.

ನಮ್ಮಲ್ಲಿ ಖಿಲಾಫತ ಮತ್ತು ಮಹಾತ್ಮಾ ಗಾಂಧಿ, ಲೋ. ಟಿಳಕ, ಶೌಕತ ಅಲ್ಲಿ, ಮಹಮ್ಮದ ಅಲ್ಲಿಯವರ ಸುಂದರವಾದ ಬ್ಯಾಜುಗಳು ದೊರೆಯುತ್ತವೆ. ಕೋಟಿಗೆ ಮತ್ತು ಟೊಪ್ಪಿಗೆಗೆ ಹಚ್ಚಲಿಕ್ಕೆ ಯೋಗ್ಯವಾದಂಥವು. ಒಂದು ೧ ಕ್ಕೆ ೩-೦-೦ ಟಪಾಲ ಖರ್ಚು ಬೇರೆ.

ಪತ್ತೆ — ಬಿ ಎ. ಶೈ ಹೊನ್ನಾವರ
(ಉತ್ತರ ಕಾನಡಾ)

ಸತ್ಯಮೇವ ಜಯತೇ

(೧೫ ವರ್ಷದಿಂದ ಪ್ರಸಿದ್ಧ ಪಡೆದದ್ದು.)

ಧಾತು-ಪೌಷ್ಟಿಕ ಕಾಮೋತ್ತೇಜಕ ಇಂದ್ರಿಯ ಸ್ತಂಭಕವಾದ

ಮದನೋದ್ಭವ ಗುಳಿಗೆ.

ಇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಶ್ರೀಗಾತ್ರ ಸ್ವಪ್ನದೋಷ ಮೊದಲಾದವು ಈ ಗುಳಿಗೆಯ ಸೇವನೆಯಿಂದ ಸಂಪೂರ್ಣವಾಗಿ ಧಾತುಪೌಷ್ಟಿಕ ವೀರ್ಯವರ್ಧಕ ರಕ್ತಶೋಧಕ, ಕಾಮೋತ್ತೇಜಕ ಮನೋಲ್ಲಾಸಕ ಇಂದ್ರಿಯ ಸ್ತಂಭಕ ಗುಣ. (ಜಾತಿ) ಗುಪ್ತವ್ಯಾಧಿಯಿಂದ ಹುಟ್ಟಿರುವ ಎಲ್ಲತರದ ಬಕ್ಕೆಗಳು ಹುಣ್ಣುಗಳು ಪಿತ್ತದ ಬಾಧೆಗಳು ಕಟೀಕೂಲ ವಾತರೋಗ ಮುಂತಾದವು ಅತಿಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪ ರೂಪಾಯಿ. ಟ ಖ ಬೇರೆ ಅನುಪಾನಪತ್ರಿಕೆ ಔಷಧದ ಸಂಗಡ.

ವಿಳಾಸ— **ಜಿ. ಎಲ್. ಜೋಶಿ ಕಂಪನಿ**
ಪೋಸ್ಟ— ಸಿರಸಿ. ಉತ್ತರ ಕಾನಡಾ.

ಸವಲತ್ತು.

ಬಗ್ಗೋಣಕಾರರಾದ ತಿಮ್ಮಣ್ಣ ಪಂಡಿತರ

ದುಂದುಭಿ ಸಂವತ್ಸರದ ಪಂಚಾಂಗವು

ತಯಾರಾಗುತ್ತಲಿದೆ

ಈ ವರ್ಷ ಕೇವಲ ರೂ. ೧೩ ಆ-೦ ಇಟ್ಟಿದೆ. ಆದರೆ, ಇದೇ ಡಿಸೆಂಬರ ತಿಂಗಳ ಆಖೈರದೊಳಗೆ, ಮುಂಗಡ ಹಣ ಕೊಡುವವರಿಗೆ ರೂಪಾಯಿ ೧೧-೮ ೦ ರ ಸವಲತ್ತಿ ದರ ಇಟ್ಟಿದೆ. ಅಪೇಕ್ಷಿಸಿದವರು ಇದರ ಪ್ರಯೋಜನ ಪಡೆಯಬಹುದು.

ಮಾಲಕ, ಸ್ವಾರಸಿಫ ಕೆನರಾ ಪ್ರೆಸ್ಸ,
ಕುಮಟಾ.

ಜಾಸ್ತಿ [illegible]ಪ್ಪವಾದ ಅನೇಕ ರೋಗಗಳಿಗೆ ಒಂದೇ ಔಷಧವು.

ಇಂಡಿಯ ಸರಕಾರದಲ್ಲಿ ಸ ೧೯೦೬ ನೇ ಇಸ್ವಿಯ ೨೫ ನೇ ಆಕ್ಟಿನಂತೆ ರ[illegible]ಸ್ಟರ್ ಆ.

ಅ[illegible] ಅಥವಾ ಆರೋಗ್ಯಬಿಂದು.



[illegible] ಎಂಬ ಔಷಧವು ಯಾವತ್ತು ರೋಗಕ್ಕೆ ಮನವರಿಕೆಯ ೧೯೦೮ ನೇ ಇಸವಿಯಿಂದ ತಾ|| ೧೯೧೮ ನೇ ಇಸ್ವಿಯವರೆಗೆ [illegible] ಸಾವಿರ ಬಾಟ್ಲಿಗಳು ಖರ್ಚಾದವು ಮತ್ತು ಸನ್ ೧೯೧೮ ನೇ ಇಸ್ವಿಯ ಅಕ್ಟೋಬರ್ ತಿಂಗಳಲ್ಲಿ ಇನ್‌ಫ್ಲೂಯೆಂಜಾ ಜ್ವರಕ್ಕೆ ಒಂದೇ ತಿಂಗಳಲ್ಲಿ ಒಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂತು ಈವತ್ತಿನವರಿಗೆ ಸಣ್ಣ [illegible] ಬಾಟ್ಲಿಗಳು ಕೂಡಿ ಮೂವತ್ತೊಂಭತ್ತು ಸಾವಿರ ಬಾಟ್ಲಿಗಳು ಖರ್ಚಾದವು ಅಂದ ಮೇಲೆ ಈ ಔಷಧವು [illegible] ಆದೆ ಇದು ಯಾವತ್ತರು [illegible] ತಂದು ಪ್ರತಿಯೊಬ್ಬರು ತಮ್ಮ ಸಂಗ್ರಹದಲ್ಲಿ ಒಂದು ಬಾಟ್ಲಿ ಇಟ್ಟು ಕೊಂಡು [illegible] ಸ್ವೀಕಾರಮಾಡುತ್ತಿರಬೇಕು. ಈ ಆರೋಗ್ಯಬಿಂದು ಇಡೀ ಕರ್ನಾಟಕದೇಶಕ್ಕೆಲ್ಲಾ [illegible] ಈ [illegible]ದಿಂದಲೇ [illegible] ಬಗ್ಗೆ [illegible] ರೋಗ[illegible] ಪ್ರಯೋಗ ಆದ ಪ್ರಯುಕ್ತ ಎಷ್ಟೋ [illegible] ಸರಟಿಫಿಕೇಟುಗಳು ಸಹ ದೊರೆದಿರುತ್ತವೆ [illegible] ಬರೆಯಲಿಕ್ಕೆ ಕಾಗದವು ಸಾಲದು. ಇಂಥ ಅಮೌಲ್ಯವಾದ ಈ ಔಷಧವನ್ನು ಎಲ್ಲರೂ [illegible] ರೋಗರಹಿತರಾಗುವರೆಂದು ನಂಬುತ್ತೇನೆ. [illegible] ಸಲುವಾಗಿ ಬೇರೆ ಡಾಕ್ಟರರ ಮತ್ತು ವೈದ್ಯರ ಜರೂರು ಬೀಳುವದಿಲ್ಲ. ಅದರ ಮೇಲೆ ಈ ಆರೋಗ್ಯಬಿಂದುವಿನ ಮೇಲೆ [illegible] ಮಾಡದೆ ಕೆಳಗೆ ಬರೆದ ರೋಗಗಳ [illegible] ಪಯೋಗಮಾಡಿ ರೋಗನಿವಾರಣ ಮಾಡಿಕೊಳ್ಳಬೇಕು.

ರೋಗದ ನಾಮಗಳು

[illegible], ಪಡದರೋಗ, ಪಾಂಡುರೋಗ, ಗುಲ್ಮರೋಗ, ಮುಖರೋಗ, ಮಹಾಮಾರಿ (ಕಾಲರಾ), ಪ್ಲೇಗು, [illegible] ಜ್ವರ ಇನ್‌ಫ್ಲೂಯೆಂಜಾಜ್ವರ [illegible] ಗಂಟಲುನೋವು [illegible] ಮೂಗಿನೊಳಗಿನ [illegible] ರೋಗವು, ಕಣ್ಣಿನೊಳಗೆ ಹೂವು [illegible] ಕಣ್ಣುನೋವು [illegible], ದಮ್ಮು [illegible] ಹೊಟ್ಟೆಶೂಲಿ [illegible] ವಾತಶೂಲಿ, [illegible] ಗಜಕರ್ಣ, [illegible] ಸ್ತ್ರೀಯರ ಮುಟ್ಟಿನ [illegible], [illegible] ಬಾಲಗ್ರಹ, [illegible] ದೊಡ್ಡರೋಗ [illegible] ವೈದ್ಯರಿಗೂ [illegible] ಖಾತ್ರಿಯಿಂದ [illegible] ಈ ಆರೋಗ್ಯಬಿಂದುವಿನ [illegible] ಧನವಂತರಿಗೂ [illegible] ಇಟ್ಟಿರುತ್ತದೆ ಒಂದು ತೊಲೆ ಬಾಟ್ಲಿ [illegible] ನಮೂನೆ [illegible] ಬಾಟ್ಲಿ ಒಂದಕ್ಕೆ [illegible] ಒಂದು ಡಜನ್ ಬಾಟ್ಲಿಗಳು ತಕ್ಕೊಂಡರೆ ನಾಲ್ಕು [illegible] ಕಮಿಶನ್ ಕೊಡುತ್ತೇವೆ ಇದಕ್ಕೆ [illegible] ಖರ್ಚು ಬರು[illegible] ಒಂದರಿಂದ [illegible] ಬಾಟ್ಲಿಯವರಿಗೆ ಕಮಿಶನ್ ಇಲ್ಲ ಇದಕ್ಕೆ [illegible] ಖರ್ಚು [illegible] ಒಂದು ಕೊಲು ತೊಲೆ ಬಾಟ್ಲಿ ಮೂರು ತೆಗೆದುಕೊಂಡರೆ ಒಂದು ಬಾಟ್ಲಿ ಕಮಿಶನ್ ಕೊಡುತ್ತೇವೆ ಇದಕ್ಕೆ [illegible] ಬರುವದು ನಮ್ಮ ಔಷಧವು [illegible] ಬರೆ ಪರತ ತಕ್ಕೊಳ್ಳುತ್ತೇವೆ ಮತ್ತು [illegible] ವ ಕ್ಯಾಟಲಾಗು ಬೇಕಾದಲ್ಲಿ ಪೋಸ್ಟ ತಿಕೀಟ [illegible] ದೊರೆಯಲಿಕ್ಕಿಲ್ಲ [illegible] ಕನ್ನಡ ಮರಾಠಿ ಮುಸಲ್ಮಾನಿ ಭಾಷೆಗಳಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿಯು ಸೋಬತ ಸಿಗುವವು ನಿಮ್ಮ ವಿಳಾಸ ಇಂಗ್ಲೀಷ [illegible] ನಾದು ಮತ್ತು ಪೋಸ್ಟ ವಗೈರೆ ಸ್ಪಷ್ಟವಾಗಿ ಬರೆಯುತ್ತಿರಬೇಕು

ಎಚ್. ಎಂ ಮುಲ್ಲಾ, ಸಂಪಾದಕ ಆರೋಗ್ಯ[illegible],
ರೆಡ್ ಆಫೀಸು ಶಹಾಪೂರ, ಬೆಳಗಾಂವ

ಖ್ಯಾತಿಯಿಂದ ಗುಣಪಡಿಸುವ

ಔಷಧಗಳು.

1 ಮಹಾಮದನ ಕಾಮೇಶ್ವರಿ ಲೇಹ — [illegible] ಕ್ರಮಪಡದೆ ಕೆಲಸ ಮಾಡುವ [illegible] ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು [illegible] ಶರೀರ[illegible] ದಿಂದ ಅಶಕ್ತಿ [illegible] ಪ್ರಕೃತಿಯ [illegible] ಪ್ರಸಿದ್ಧ [illegible] ರಕ್ತಶುದ್ಧಿ, ಧಾತುಪುಷ್ಟಿ [illegible] 40 [illegible] ಡಬ್ಬಿ 1ಕ್ಕೆ 1-12 0 [illegible] 4 1 0

2 ಮಹಾಜ್ವರಾಂಕುಶ — ([illegible]) ಇನ್‌ಫ್ಲುಯೆಂಜಾ [illegible] ದಿವಸಕ್ಕೊಮ್ಮೆ [illegible] ಜ್ವರಗಳ [illegible] 1 ಕ್ಕೆ 0-5-0

3 [illegible] — [illegible] ಅಪಸ್ಮಾರ [illegible] 10ಕ್ಕೆ 0 10 0

4 [illegible] ಔಷಧಿ ಒಂದೇ ಗುಣದಿಂದ [illegible] ಗುಣ ಬಾಟ್ಲಿ 1 ರ ಕ್ಕೆ 0 10 0

5 [illegible] — [illegible] ಬಾಟ್ಲಿ 1ಕ್ಕೆ 0 12 0

ಎಸ್. ಗಣಪಯ್ಯಾ ಎಂಡ ಸನ್ಸ್
ನೆಟಿವ್ ಡ್ರಗ್ಗಿಸ್ಟ್ಸ [illegible]
[illegible]

೧೯೨೨ ನೇ ಸಾಲಿನ

"ಸ್ವರಾಜ್ಯ ಡಾಯರಿ"!

[illegible] ಆಕೃತಿಯ ಮಾದ್ಯಂತ ಇತಿಹಾಸವೂ ಹಿಂದ[illegible] ಸ್ಥಿತಿಯೂ, ಸಂಖ್ಯಾರೂಪದಲ್ಲಿ ಇದರಲ್ಲಿ ವರ್ಣಿತವಾಗಿದೆ.

ಈ ಮಹತ್ವವುಳ್ಳ ಡಾಯರಿಯಲ್ಲಿ ಸುಪ್ರಸಿದ್ಧ ದೇಶಭಕ್ತರ ಜನ್ಮತಿಥಿ, ರಾಷ್ಟ್ರೀಯ ಪುಣ್ಯ ದಿನ ಪಂಜಾಬ ಕೊಲೆಯ ದಿನಗಳೂ, ಪ್ರತಿ ದಿನಕ್ಕೊಂದು ಆಚರಣೆಗೆ ಯೋಗ್ಯವಾದ ನೀತಿವಾಕ್ಯಗಳೂ, ಸುಪ್ರಸಿದ್ಧ ದೇಶಭಕ್ತರ ಭಾವಚಿತ್ರಗಳೂ ಸಮಾವೇಶಗೊಂಡಿವೆ ಬೆಲೆ ೦—೯—೦ ಟಪಾಲ ಹಾಶಲ ಬೇರೆ

ಬೇಕಾದವರು ಕೆಳಗಿನ ಪತ್ತೆಗೆ ಇದೇ ಡಿಸೆಂಬರ ೩೦ ರ ಒಳಗೆ ಆರ್ಡರಗಳನ್ನು ರಜಿಸ್ಟರ ಮಾಡಬೇಕು

ದಿ. ನ್ಯೂ ಎಂಪೋರಿಯಮ್,
ಜನರಲ್ ಮರ್ಚಂಟ್ಸ. ಹೊನ್ನಾವರ.

ನಸಸಿನವಿಶ[illegible]!
[illegible] ಬಹಳ ದಿವಸ! [illegible] ೨೯ ೧೧ [illegible]!!

ಗುರುವಾರ!!

ಈ ದಿನವೇ

ಕನ್ನಡ ನವಜೀವನವು

[illegible] ಮಹಾತ್ಮಾ ಗಾಂಧಿಯವರು [illegible] ಬರೆಯುತ್ತಿರುವ [illegible] ನಿಮ್ಮ [illegible] "ಕನ್ನಡ ನವಜೀವನ" [illegible] ಮಹಾತ್ಮರು [illegible] "ಯಂಗ ಇಂಡಿಯಾ" "ನವಜೀವನ" [illegible] ಭಾಷಾಂತರ [illegible] ಈ ರಾಷ್ಟ್ರೀಯ ಜಾಗೃತಿ [illegible] ಮಹಾತ್ಮರ ಸಂದೇಶವನ್ನರಿತುಕೊಳ್ಳುವ [illegible]ಯುಳ್ಳವರು ಕೂಡಲೇ ವರ್ಗಣಿ ಹಣವನ್ನು ಸಲ್ಲಿಸಬೇಕು. ಯಾಕಂದರೆ ಮೊದಲಿಗೆ ನಿಯಮಿತ ಪ್ರತಿಗಳು ಹೊರಡುವವು. ನೀವು ತ್ವರೆ ಮಾಡದಿದ್ದರೆ ಹಿಂದುಗಡೆಗೆ ನಿರಾಶೆಯಾಗಬಹುದು. ವಾರ್ಷಿಕ ವರ್ಗಣಿ ರೂ ೪ ೦—೦ [illegible]

ಸೂಚನೆ:— ವ್ಹಿ ಪಿ ಯಿಂದ ಪತ್ರಿಕೆಯನ್ನು ಕಳಿಸುವ ಪದ್ಧತಿಯು ನಮ್ಮಲ್ಲಿಲ್ಲ. ಚಂದಾದಾರರಾಗ ಲಿಚ್ಛಿಸುವವರು ವರ್ಗಣಿ ಹಣವನ್ನು ಮುಂಗಡ ಸಲ್ಲಿಸತಕ್ಕದ್ದು. ಜಾಹೀರಾತು ಕೊಡಲಿಚ್ಛಿಸುವವರೂ ಏಜನ್ಸೀ ಬೇಕಾದವರೂ ಶೀಘ್ರ ಪತ್ರದಲ್ಲಿ ಬರೆದು ಕೊಳ್ಳಬೇಕು. ಸಾಲ ಏಜನ್ಸೀ ತೆಗೆದುಕೊಂಡವರಿಗೆ ಬಹು ಲಾಭ!

ವ್ಯವಸ್ಥಾಪಕ "ಕನ್ನಡ ನವಜೀವನ"
ಬಾಗಲಕೋಟೆ
ಜಿಲ್ಲಾ ವಿಜಾಪೂರ

अलेंबिक.

वेजीटेबल टॉनिक, सिरप— निर्दोष व शुद्ध वनस्पतीच्या सत्त्वाकर्षापासून बनविलेले शक्तिवर्धक औषधी सरबत ह्याच्या सेवनानें बद्धकोष्ठ अपचनादि विकार नष्ट होऊन साफ कोष्टशुद्धि होते भूक लागते व अन्नाचे पचन होऊन शुद्ध रक्त व वीर्यवृद्धि होते. कि रु १ ८-०

फेब्रोलीन— मलेरिया, हींव, सर्दी किंवा दूषित हवेमुळे येणारे साथे, विषारी, अगर इतर ताप, इन्फ्लुएन्झा इ०वर खात्र गुणकारी हे केवळ वनस्पतींचे—क्विनाईनचे दुष्परिणाम रहित—औषध घेतल्याने अशक्तपणा न येता घाम येऊन ताप उतरतो व रोग्यास त्वरित आराम वाटतो २ औं० बा० कि. रु १ ०-०

उंची कोलन वॉटर व कस्तुरिमिश्र लव्हेंडर— परदेशी मालाला टक्कर देणारी ही सुगंधी द्रव्ये आमच्या स्वतन्त्र्यां कारखान्यात तयार होणाऱ्या स्पिरिटमध्ये बनविलीं जात असल्यामुळे गुणात श्रेष्ठ व किमतीत स्वस्त आहेत वि. मा पत्रद्वारे

अलेंबिक केमिकल वर्क्स कं० लि०
नं ५० प्रिन्सेस स्ट्रीट मुंबई.

ಸತ್ಯವೇ ಪರಮೇಶ್ವರನು.

ಮಹಾತ್ಮಾ ಗಾಂಧಿಗಳ ಸತ್ಯದ ಮೀಮಾಂಸೆ.

ಇಂಗ್ಲಿಷ ಧರ್ಮಶಾಸ್ತ್ರದಲ್ಲಿ ಒಂದು ಕಥೆಯಿದೆ. ಅದರ [illegible] ಒಬ್ಬ ನ್ಯಾಯಾಧೀಶನು ಸತ್ಯವೆಂದರೆ ಏನು [illegible] ಪ್ರಶ್ನೆ ಮಾಡಿದನು. ಈ ಪ್ರಶ್ನೆಗೆ ಉತ್ತರ [illegible] ಹಿಂದೂ ಧರ್ಮಶಾಸ್ತ್ರಗಳಲ್ಲಿ ಹರಿಶ್ಚಂದ್ರರಾಯನು ಸತ್ಯಾಚರಣೆಯಲ್ಲಿ ಸರ್ವಸ್ವವನ್ನು ಅರ್ಪಿಸಿದನು, ಹಾಗು ಸ್ತ್ರೀ ಪುತ್ರರ ಸಹಿತ ಚಾಂಡಾಳನಿಗೆ ಮಾರಿಕೊಂಡು, ಅವನ ದಾಸನಾದನೆಂದು ಹೇಳಿರುವರು (ಆಗ ಅಸ್ಪೃಶ್ಯತೆಯು [illegible] ವಾಗಿತ್ತು!) ಇಮಾಮ ಹಸನ, ಮತ್ತು ಹುಸೇನ ಇವರು ಸತ್ಯಕ್ಕಾಗಿ ಆತ್ಮಯಜ್ಞವನ್ನು ಮಾಡಿದರು. ಹೀಗಿದ್ದರೂ ಆ ನ್ಯಾಯಾಧೀಶನ ಪ್ರಶ್ನೆಗೆ ಉತ್ತರ [illegible]ಲ್ಲಿಲ್ಲ. ಹರಿಶ್ಚಂದ್ರರಾಯರಿಗೆ ಸ್ವಬುದ್ಧಿಗ್ರಗೋಚರವಾದ ಸತ್ಯಕ್ಕಾಗಿ ಆತ್ಮಯಜ್ಞ ಮಾಡಿದರು, ಆದರೆ ಅವರು ಅ[illegible]ವರಾದರು. ಇಮಾಮ ಹುಸೇನರವರು ತಮಗೆ ಗೊತ್ತಿದ್ದ ಸತ್ಯಕ್ಕಾಗಿ ಪ್ರಾಣಾಹುತಿಯನ್ನು ಕೊಟ್ಟರು. ಆದರೆ ಹರಿಶ್ಚಂದ್ರರಾಯರ ಸತ್ಯವಾಗಲೀ, ಇಮಾಮ ಹುಸೇನರ ಸತ್ಯವಾಗಲೀ, ನಮಗೇನು?

ಈ ಸಂಕುಚಿತ ಸತ್ಯದ ಹೊರತು ಶುದ್ಧ ಸತ್ಯವೆಂಬುದೊಂದು ಉಂಟು. ಅದು ಅಖಂಡವು, ಸರ್ವವ್ಯಾಪಕವು, ಅವಿನಾಶಿಯು. ಯಾಕೆಂದರೆ ಸತ್ಯವೇ ಪರಮೇಶ್ವರನು ಅಥವಾ ಪರಮೇಶ್ವರನೇ ಸತ್ಯವು. ಉಳಿದವುಗಳೆಲ್ಲ [illegible] ಹೀಗೆಯೇ ಕತೆಯಲ್ಲಿ ಕಂಡುಬರುವದು ಪರಿಮಿತವಾದ ಸಂಕುಚಿತ ಸತ್ಯವು. ಆದ್ದರಿಂದ ಸತ್ಯವನ್ನರಿತು [illegible]ನ ಸಾಧನಗಳಿಂದ ಸತ್ಯಾಚರಣ ಮಾಡುವವನೇ ಪರಮೇಶ್ವರನ ಸಾಕ್ಷಾತ್ಕಾರ ಹೊಂದುತ್ತಾನೆ. ಅದರಿಂದಲೇ ಅವನು ತ್ರಿಕಾಲದರ್ಶಿಯಾಗಿ, ಈ ನಶ್ವರ ದೇಹದಲ್ಲಿಯೇ [illegible] ಮೋಕ್ಷ ಹೊಂದುತ್ತಾನೆ.

ಇಂಥ ಒಬ್ಬನಾದರೂ ಸತ್ಯಾಚರಣಿಯು ಡಿಸೆಂಬರ ೧೧ ನೇ ತಾರೀಖಿನೊಳಗೆ ತಯಾರಾದರೆ ಇಂದಿಗೆ ಸ್ವರಾಜ್ಯ ಸಿಕ್ಕಿತೆಂದು ಖಾತ್ರಿಯಿಂದ ತಿಳಿಯಬಹುದು.

ನಮ್ಮೊಳಗಿನ ಹಲವರು ಖರೇ ಸತ್ಯಾಗ್ರಹಿಗಳು, ಸತ್ಯಾಚರಣದಲ್ಲಿ ಆಗ್ರಹ ಹಿಡಿಯುವವರು, ಆದರೂ ನಾವು ಈ ಸತ್ಯಕ್ಕೆ (ಸತ್ಯ ಮಾತಾಡುವ ಸ್ಥಿತಿಗೆ) ಮುಟ್ಟಿಲ್ಲವಾದ್ದರಿಂದ ಸತ್ಯ ವ್ರತದ ಪಾಲನೆಯು ಸುಲಭವಲ್ಲೆಂದು ತಿಳಿಯುವದು.

"ನೀವು ಸತ್ಯ ವ್ರತದ ಪಾಲನೆ ಮಾಡುತ್ತೀರಿ, ಹೀಗಿದ್ದು ಕ್ರೀಯುತ [illegible] ತಂತಿಯ ಅರ್ಥವನ್ನು ಸ್ವಪಕ್ಷಮತದಂತೆ ನೀವು ಮಾಡಿದಿರಿ, ಹಿಂಗಾಲದ ೧೫ ಲಕ್ಷಗಳ ಬದಲು [illegible] ಲಕ್ಷವೆಂದು ಪ್ರಕಟಿಸಿದಿರಿ. ಈ ಸಂಗತಿಯಲ್ಲಿ ನೀವು ಸೂಕ್ಷ್ಮ ಅಸತ್ಯದ ಗ್ರಹಣ ಮಾಡಲಿಲ್ಲೇನು?" ಎಂದು ಒಬ್ಬ ಗೆಳೆಯನು ಪ್ರಶ್ನಿಸಿದನು. ನನ್ನ ಪಕ್ಷದ ಅರ್ಥಕ್ಕಾಗಿ ನಾನು ವಿಪರ್ಯಾಸ ಮಾಡಿಲ್ಲ, ನನಗೆ ಬೇಕಾದ ಅರ್ಥ ಮಾಡಿಕೊಳ್ಳುವದು ನನ್ನ ಉದ್ದೇಶವಿಲ್ಲ. ಆದರೆ ಆ ತಂತಿಯ ಅರ್ಥ ಮಾಡುವದರಲ್ಲಿ ಗಾಬರಿಯಾಯಿತು, ಈ ತಂತಿಯು ರಾತ್ರಿ ೧೨ ಬಡಿದು ಹೋದ ಮೇಲೆ ನನಗೆ ಸಿಕ್ಕಿತು. ಇದನ್ನೇನು ಅರ್ಥಸಮರ್ಥನೆಗಾಗಿ ಬರೆದಿಲ್ಲ. ಆದರೆ ಸತ್ಯವು ಕೊಲಿಗೆ [illegible] ತೇಜಸ್ವಿಯಿರುತ್ತದೆ. ತ್ರಿಕಾಲದಲ್ಲಿಯೂ ಸತ್ಯಾಚರಣ ಮಾಡುವವನು ಎಂದು [illegible] ಸತ್ಯಾಚರಣೆಯು ಎಚ್ಚರ ತಪ್ಪಿದಾಗ [illegible] ಅವನ ಅಸತ್ಯಾಚರಣಕ್ಕಾಗಲಿ, [illegible] ಧರ್ಮಕ್ಕಾಗಲೀ [illegible] ನಾನು ಸತ್ಯದ ಭಾಗವನ್ನು [illegible] ತ್ತೇನೆ.

ಸತ್ಯದ ಆಗ್ರಹ ಹಿಡಿಯುವ [illegible] ನನಗೆ [illegible] ನಾನು [illegible] ಅಸತ್ಯವನ್ನಾಡುವದು [illegible] ನನ್ನ [illegible] ನನ್ನೆದುರಿಗೆ ಒಂದು ಸತ್ಯ [illegible] ಸುಳ್ಳು ಮಾತಾಡಿದ್ದು, ಆ ಪ್ರಸಂಗವನ್ನು ಬಿಟ್ಟರೆ, ನಾನು ಅಸತ್ಯವಾಡಿದ್ದು ನನ್ನ ಜ್ಞಾಪಕದಲ್ಲಿಯೇ ಇಲ್ಲ. ಸತ್ಯವನ್ನು ಆಡುವದು, ಸತ್ಯವನ್ನು ಆಚರಿಸುವದು ನನ್ನ ಸ್ವಭಾವಗುಣವಾಗಿದೆ. ಚಿಕ್ಕಂದಿನಿಂದ ನಾನು ತಿಳಿಯುವ ಸತ್ಯದ ವಕೀಲಿ ಮಾಡುವದಿಲ್ಲ. ಗೊತ್ತಿಲ್ಲದೆ ಅತಿಶಯೋಕ್ತಿಯಾಗಬಹುದು, ಆತ್ಮಶ್ಲಾಘೆಯಾಗಬಹುದು, ಸ್ವಕಾರ್ಯ ವರ್ಣನೆ ಮಾಡುವವರಲ್ಲಿ ರಸೋತ್ಪನ್ನವಾಗುವಂಥಾದ್ದೇನೂ ಆಗಬಹುದು. ಈ ಎಲ್ಲ ಸಂಗತಿಗಳ ಮೇಲೆ ಅಸತ್ಯದ ನೆರಳು ಬೀಳುತ್ತದೆ, ಹಾಗು ಅವು ಸತ್ಯದ ಪರೀಕ್ಷೆಯಲ್ಲಿ ಇಳಿಯುವದಿಲ್ಲ. ಸತ್ಯಮಯ ಜೀವನವು ಸ್ಫಟಿಕಮಣಿಯಂತೆ ಇರುವದು. ಅಸತ್ಯವು ಅಲ್ಲಿ ಎಂದೂ ಹೋಗಲಾರದು. ಸತ್ಯಾಚರಣೆಗೆ ಯಾರೂ ಮೋಸಮಾಡಲಾರನು. ಯಾಕೆಂದರೆ ಅಲ್ಲಿ ಅಸತ್ಯವಾಡುವದು ಅಶಕ್ಯವು. ಜಗತ್ತಿನಲ್ಲಿ ಅಸಿಧಾರಾ ವ್ರತವಿದ್ದರೆ, ಅದು ಸತ್ಯ ವ್ರತವೇ. ಲಕ್ಷಗಟ್ಟಲೆ ಜನರು ಅದನ್ನು ಮಾಡುತ್ತಾರೆ. ಆದರೆ, ಜನ್ಮದಲ್ಲಿ ಒಬ್ಬನಾದರೂ ಯಶಸ್ವಿಯಾಗುವದು. ಆದರೂ [illegible] ನನ್ನ ಹತ್ತರ ಯಾರಾದರೂ ಅಸತ್ಯವನ್ನಾಡಿದರೆ, ಅವನ ಮೇಲೆ [illegible]ಗುವದಕ್ಕಿಂತ, ನಾನು ನನ್ನ ಮೇಲೆಯೇ ಸಂತಾಪಗೊಳ್ಳುತ್ತೇನೆ. ಯಾಕೆಂದರೆ, ನನ್ನಲ್ಲಿ ಎಲ್ಲಾದರೂ ಸಹ [illegible] ಅಸತ್ಯವು ಅಡಗಿಕೊಂಡಿರಬೇಕೆಂದು ನಾನು [illegible]ತ್ತೇನೆ.

ಸತ್ಯವು ಸತ್ ಶಬ್ದದಿಂದ ಉತ್ಪತ್ತಿಯಾಗಿದೆ. ಸತ್ ಅಂದರೆ ಇರುವದು. ತ್ರಿಕಾಲದಲ್ಲಿಯೂ ಒಂದೇ ರೂಪದಲ್ಲಿ ಪರಮೇಶ್ವರನೊಬ್ಬನೇ ಇದ್ದಾನೆ. ಸತ್ಯದ ಸ್ತುತಿ ಮಾಡಿ, ಅದನ್ನು ತನ್ನ ಅಂತಃಕರಣದಲ್ಲಿ ಸಾಕ್ಷಾತ್ಕಾರ ಮಾಡಿಕೊಟ್ಟವರಿಗೆ ನಾನು ಶತಶಃ ಪ್ರಣಾಮ ಮಾಡುವೆ. ಆ ಸತ್ಯದ ಸೇವೆಗಾಗಿ ನಾನು ಹೆಣಗಾಡುತ್ತೇನೆ. ಅದರ ಸಾಧನೆಗಾಗಿ ಹಿಮಾಚಲದ ಉನ್ನತ ಶಿಖರದ ಮೇಲಿಂದ ಬೀಳುವದು ದಯಾರಿಯಿರುತ್ತದೆಂದು ನನಗೆ ತೋರುತ್ತದೆ. ಹೀಗಿದ್ದರೂ ನಾನು ಆ ಸತ್ಯದಿಂದ ನಾನು ಬಹು ದೂರವಿರುವೆನೆಂದು ನಾನು ಅರಿತಿರುವೆನು. [illegible] ನನ್ನ ಅಸತ್ಯ [illegible] ವೆಂದು ನನಗೆ ಭಾಸವಾಗುತ್ತದೆ. [illegible] ಶುದ್ಧ ಸತ್ಯವನ್ನರಿಯುವ [illegible] ನನ್ನ ಗರ್ವದ ಪರಿಣಾಮವಾಗಿ [illegible] ತುಳಸೀದಾಸರು [illegible] ಕೊಂಡಿದ್ದು ನಿಜ, [illegible] ಕ್ಕಾಗಿ ಯತ್ನಿಸ[illegible] ಗ [illegible] ತೆಗೆಯ [illegible] ಕೇವಲ ಸತ್ಯ [illegible] ಸತ್ಯದ [illegible] ಬನಿಗೆ [illegible] ಇರುವದಿಲ್ಲ, [illegible] ಅಥವಾ [illegible] ನಲ್ಲಿ ಸತ್ಯವು ತುಂಬಿಕೊಂಡಿರುವದರಿಂದ, [illegible] ಸತ್ಯ [illegible] ಬ ದ [illegible] ಈ ಸತ್ಯ [illegible] ಎಂಬುತ್ತ [illegible]ಕೊಂಡಿದೆ.

ಸತ್ಯಪಕ್ಷ ಪ್ರೇಮಿಗಳು, ಸತ್ಯ[illegible] ಸತ್ಯದ ಪ್ರತ್ಯಕ್ಷ [illegible]ದ, ಅ[illegible] ವಂತಾದ ಎಲ್ಲ [illegible] ಗಳ ಸಮಾವೇಶವು ಅದರೊಳಗಾಗುತ್ತದೆ. [illegible] ತೆಗೆಗೆ [illegible] ಹೇಳುವದು ಸತ್ಯ [illegible] ಮಾಡಿದರೆ, ಅದರ ಸತ್ಯವನ್ನು [illegible] ಸತ್ಯದ [illegible] ಸತ್ಯವು [illegible] ಸತ್ಯ ಗೊತ್ತಿ[illegible] [illegible] ಎಂದು [illegible] ಸತ್ಯ [illegible] ಯಾಕೆಂದರೆ, ಅವನು ಹೇಳಿದ್ದನ್ನೇ ಎಲ್ಲರೂ ನಮ್ಮತಿಸಬೇಕು. ಶೂದ್ರ [illegible] ಪ್ರಕಾಶವನ್ನು ತೋರಿಸುವ ಅವಶ್ಯಕತೆಯೇನಿಲ್ಲ. ಸತ್ಯವು ಸ್ವಯಂಸಿದ್ಧವಿದೆ. ಇಂಥ ಸತ್ಯಾಚರಣವು ಈ ವಿಷಮ ಕಾಲದಲ್ಲಿ [illegible] ಕಠಿಣ ಕರ್ಮವಿರುವದು, ಆದರೂ ಅಶಕ್ಯವಲ್ಲೆಂದು ನಾನು ತಿಳಿಯುತ್ತೇನೆ. ಇಂಥ ಸತ್ಯಾಗ್ರಹೀ ನಮ್ಮೊಳಗೆ ತಯಾರಾದರೆ ನಾವು ಸ್ವರಾಜ್ಯವನ್ನು ಗಳಿಸಬಹುದು. ನಾವು ಮಾತ್ರ ನಿಷ್ಕಪಟ ರೀತಿಯಿಂದ ನಡೆಯಬೇಕು. ಸತ್ಯವನ್ನು ಕೇವಲ ಮೆರೆದು ಸಾಲದು, ನಮ್ಮಲ್ಲಿ ಸತ್ಯವು ರೂಪಾಯಿಗೆ ಒಂದು ಆಣೆಯಷ್ಟು ಇದ್ದರೂ ಸತ್ಯವೇ ಇರಬೇಕು. ಅಲ್ಪ ಸತ್ಯದಲ್ಲಿ ಯಾರೂ ತಿಳಿದು ಯಾ ತಿಳಿಯದೆ ಅಸತ್ಯವನ್ನು ಸೇರಿಸಬಾರದು. ಈ ಧರ್ಮಯುದ್ಧದಲ್ಲಿ ಎಲ್ಲರೂ ಸತ್ಯಾಚರಣ ಮಾಡಬೇಕೆಂದು ನನ್ನ ಮಹದಾಕಾಂಕ್ಷೆಯಿದೆ.

ಪ್ರಕಟನೆ.

ಈ ಲೇಖದ ಮೂಲಕ ಯಾವತ್ತೂ ಜನರಿಗೆ ತಿಳಿಸುವದೇನೆಂದರೆ— ಗೋವೆಯಲ್ಲಿ ಫೋಂಡಾ ಮಹಾಲಕ್ಕೆ ಸೇರಿದ ವೆಲಿಂಗ ಗ್ರಾಮದ ಶ್ರೀ ಲಕ್ಷ್ಮೀ ನರಸಿಂಹ [illegible]ನದಲ್ಲಿ ಬಾಯಿ ಬಾಳಾ ಬಾಪು ವೆಲಿಂಗಕರ [illegible] ಇವರು ಬಹಳ ವರ್ಷಗಳ ಹಿಂದೆ ತೆರೆದ ಸದಾವರ್ತವು ಇನ್ನೂ ನಡೆಯುತ್ತದೆ, ಎಲ್ಲ ಯಾತ್ರಸ್ಥರಿಗೆ ಅಲ್ಲಿ ಆಶ್ರಯ ಸಿಗುವದು.

ಡಾ ಶ್ರೀಧರ ಎನ್ ನಾಯಿಕ
ಪನವೇಲಕರ, ಶ್ರೀ ಲಕ್ಷ್ಮೀ ನರಸಿಂಹ
ದೇವಸ್ಥಾನದ ಅಧಳತೇದಾರ ಕಮಿಸಾಂವರ ಕಮೀಟಿಯ ಅಧ್ಯಕ್ಷ,
ಪಣಜಿ, ಗೋವೆ

ಜಾಹೀರನಾಮೆ.

ಗೋವೆಯ ಸರಕಾರದ ಕಟ್ಟಳೆಗಳ ಪ್ರಕಾರ ಫೋಂಡಾ ಮಹಾಲದೊಳಗಿನ ವೆಲಿಂಗ ಗ್ರಾಮದ ಶ್ರೀ ಲಕ್ಷ್ಮೀ ನರಸಿಂಹ ದೇವರ ಯಾವತ್ತು ಮಹಾಜನರು ಮತ್ತು ಅನ್ಯ ಜಕ್ತರ ಕುಟುಂಬದೊಳಗಿನ ಸ್ತ್ರೀ ಪುರುಷರ ಹೆಸರುಗಳ ಯಾದಿಯನ್ನು ಸರಕಾರದ ಕಡೆಗೆ ಕಳಿಸಬೇಕು. ಆದ್ದರಿಂದ ಈ ಲೇಖದ ಮೂಲಕ ಸದರಿ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಜನರಿಗೆ ವಿನಂತಿ ಮಾಡುವದೇನಂದರೆ, ಅವರ [illegible] ಕುಟುಂಬಗಳೊಳಗಿನ ಎಲ್ಲರ ಹೆಸರು, ವಯಸ್ಸು ಮತ್ತು ಅಂದಾಜ ಉತ್ಪನ್ನ ಪ್ರಕೃತಿ ಮಾಹಿತಿಯನ್ನು ಇದೇ ಡಿಸೆಂಬರ ತಿಂಗಳ ೩೧ ನೇ ತಾರೀಖಿನ ಒಳಗಾಗಿ ಕೆಳಗೆ ಸಹಿ ಮಾಡುವವರ ಹೆಸರಲ್ಲಿ ಬರೆದು ಕಳಿಸಬೇಕು.

ಡಾ ಶ್ರೀಧರ ಎನ್. ನಾಯಿಕ
ಪನವೇಲಕರ, ಶ್ರೀ ಲಕ್ಷ್ಮೀ ನರಸಿಂಹ
ದೇವಸ್ಥಾನದ ಅಧಳತೇದಾರ ಕಮಿಸಾಂವರ ಕಮೀಟಿಯ ಅಧ್ಯಕ್ಷ,
ಪಣಜಿ, ಗೋವೆ.

ಮಹಾತ್ಮಾ ಗಾಂಧಿಯವರ ಟಿಪ್ಪಣಿಗಳು.

(ಕನ್ನಡ ನವಜೀವನದಿಂದ

ಸತ್ಯದ ವಿಷಯಾ

[illegible] ಸರಕಾರ ಲಷ್ಕರೀ ಜನರ [illegible] ದ್ದರು, ಶಾಂತತೆಯನ್ನು ಸ್ಥಾಪಿಸಲಿಕ್ಕೆ [illegible] ಯತ್ನಿಸಿಸಲಿಲ್ಲ ಆದರೆ ಜನರೇ ತಮ್ಮ ತಮ್ಮೊಳಗೆ [illegible] ಕಯನ್ನುಂಟುಮಾಡಿಕೊಂಡರು ಎಂಬದಾಗಿ ನಾನು ಮತ ಕಟ್ಟಿದೆ ಆದರೆ ನಾನನ್ನುವದೆಲ್ಲ ಸಕ್ಕದೆಂದು ಮುಂಬೈ ಸರಕಾರದವರು ಜಾಹೀರಪಡಿಸಿದ್ದಾರೆ ಈ ಜಾಹೀರನಾಮೆಯು ಬಗ್ಗೆ [illegible] ನನಗೆ ವಿಷಾದವೆನಿಸುತ್ತದೆ, ನನ್ನ ಮನಸಿನಲ್ಲಿ ಸಹ ಈ ತರದ [illegible] ವು ಹೊರಟಿತೆಂದು ತಿಳಿದಿರಲಿಲ್ಲ [illegible] ಗಳನ್ನಲ್ಲದೇ ಇನ್ನು ಒಂದು [illegible] ನನ್ನವರೆ [illegible] ಈ ಸಂಗತಿಯನ್ನು ನಾನು ಹೀಂದ ಹೇಳಿರಲಿಲ್ಲ ಈಗ್ಗೆ ಮಾತ್ರ ಹೇಳುವೆನು. [illegible] ರಕ್ಷಿಸ [illegible] ಪೋಲೀಸರಲ್ಲಿಯೂ ಲಷ್ಕರೀ ಜನರಲ್ಲಿಯೂ [illegible] ದಿನ ದಿವಸ ಮುಂಬೈಯಲ್ಲಿ [illegible]

[illegible]

ಮುಂದೆ ಬಪ್ಪಿದ್ದಾರೆ ಆದರೆ ಈ ಸಂಗತಿಯನ್ನು ನಾನಿಲ್ಲಿ ವಿವೇಚಿಸುವದಿಲ್ಲ ಪೋಲೀಸ ಅಥವಾ ಲಷ್ಕರೀ ಜನರಲ್ಲಿ [illegible] ಅವನನ್ನು ನಿಂದಿಸಲೂ ಇಚ್ಛಿಸುವದಿಲ್ಲ ಈ ಹೊತ್ತು ಇಲ್ಲದಿದ್ದರೆ ನಾಳಿನ ದಿವಸವಾದರೂ ಸತ್ಯ ಮತ್ತು ಪ್ರಾಮಾಣಿಕತನದ ತ್ರಾಡಿಗೆ [illegible] ಜನರನ್ನು [illegible] ಆದರೆ [illegible] ಜನರೇ ಇದ್ದಾರ ಇಂಗ್ಲಿಷ ಜನರು ಕೂಡ ಒಂದಿಲ್ಲೊಂದು ದಿನ ನಮ್ಮ ಪಕ್ಷಕ್ಕೆ ಬರುವರು, ಆದರೆ ಅಸಹಕಾರಿಗಳು ಮಾತ್ರ ಅಹಿಂಸಾ ತತ್ವವನ್ನು [illegible] ಉದ್ದಾಮತನದಿಂದ ಜನರನ್ನು [illegible] ಮತ್ತು ಲಷ್ಕರೀ ಜನರು [illegible]

[illegible]

ಅಪರಾಧಿಗಳು ಯಾರು ?

[illegible]

ಯಾವ [illegible] ನಂಬಿಗೆಯನ್ನು [illegible] ವಾದರೂ [illegible] ಆವರ ವಶದಲ್ಲಿ ಬೀಳಬಾರದು ಹೀಗೆ [illegible] ನಾವು ಎಂದಿಗೂ ಸ್ವರಾಜ್ಯವನ್ನು ಲಭಿಸೆವು ನಾವು [illegible] ಸತ್ಯವಾಗಿಯೂ ಅಹಿಂಸಾ ಧರ್ಮವನ್ನು ಪಾಲಿಸಿದರೆ ತಪ್ಪು ತಡೆಗಳನ್ನೆಂದೂ [illegible] ಪೋಲೀಸರೇ ಆಗಲಿ ನಾವೇ ಆಗಲಿ, [illegible] ಪಲ್ಲಿರುವಂಥ ಉರಿಯನ್ನು ಹೆಚ್ಚಿಸುತ್ತಲಿದ್ದರೆ [illegible] ಇಂಥ ಉರಿಯನ್ನು ನೋಂದಿಸ [illegible] ಬೇಗನೆ ನಾವು ಸ್ವತಂತ್ರರಾಗಬೇಕ [illegible] ನಿರ್ವಾಹ ಬಿಟ್ಟು ಬಿಡುವದೇ ಲೇಸು

ಹೊನ್ನಾವರ ಶಹರ ಮುನ್ಸಿಪಾಲಿಟಿ

ಹಿಂದುಸ್ಥಾನದ [illegible] ಸಂಪತ್ತು ದಿನೇ ದಿನೇ [illegible] ಹಿಂದುಸ್ಥಾನದಲ್ಲಿ ನಮ್ಮ ಹಿರಿಯರ ಕಾಲಗಳಲ್ಲಿ [illegible] ವಿದ್ಯೋಗಿಕ [illegible]

[illegible]

(ಮುಂದರಿಯುವದು)

(☞ ೬ ನೇ ಪಾನಿನಿಂದ ಮುಂದರಿಸಿದ್ದು)
ಸುವ ಸಮಾರಂಭವು ಕೊನೆಗಂಡಿತು. ಆದೇ ಕಾಲಕ್ಕೆ ಶ್ರೀ ಮಿಣಾಕನೆಕರರು ರೂ ೩೦೧ ದೇಣಿಗೆ ಕೊಟ್ಟದ್ದಲ್ಲದೆ, ೨೫ ವಿದ್ಯಾರ್ಥಿಗಳಿಗೆ ಉಳಕೊಳ್ಳಲಿಕ್ಕೆ ಒಂದು ವರ್ಷದ ತನಕ ಬೋರ್ಡಿಂಗವಾಗಿ ಸ್ವಂತ ಮನೆ ಕೊಡುವದಾಗಿ ಜಾಹೀರ ಮಾಡಿದರು. ಶಾಲೆಯ ಪಟದ ಮೇಲೆ ಸುಮಾರು ೩೦ ವಿದ್ಯಾರ್ಥಿಗಳ ಹೆಸರುಗಳು ನೋಂದಾಗಿವೆ. ಈ ಶಾಲೆಯು ಸುರುವಾಗಲಿಕ್ಕೆ ದಲಾಲ ಶ್ರೀ ಸಿತಾರಾಮ ಭಾಗವತ ಇವರ ಮಾಳಿಗೆಯ ಮೇಲೆ ಇಟ್ಟಿರುತ್ತದೆ.

ಕಾರವಾರದಿಂದ ಇಲ್ಲಿಗೆ ಬಂದ ಮದುವೆ ದಿಬ್ಬಣದೊಳಗಿನ ೧೦–೧೨ ವರ್ಷದ ಒಬ್ಬ ಹುಡುಗನು, [illegible] ಶುಕ್ರವಾರ ಸಂಜೆಸುಮಾರಿಗೆ ಇಲ್ಲಿಯ ವಿಠೋಬ ದೇವಸ್ಥಾನದ ಕೆರೆಯಲ್ಲಿ ಬಿದ್ದು ಮುಳುಗಿ ಸತ್ತನು! ಪಾಪ!

ಇಲ್ಲಿಯ ರಾಷ್ಟ್ರೀಯ ಶಾಲೆಯ ಬಗ್ಗೆ ಫಂಡು ಕೂಡಿಸುವರೆ, ಕಳೆದ ಮಂಗಳವಾರ ದಿವಸ ಕೊಂಗ್ರೆಸ ಕಮಿಟಿಯ ಕಾರ್ಯಕಾರೀ ಮೆಂಬರರ ಸಭೆ ಕೂಡಿ, ಈ ಕೆಳಗಿನ ಮೆಂಬರರು ಫಂಡು ಕೂಡಿಸಲಿಕ್ಕೆ ನೇಮಕರಾಗಿರುವರು — ಶ್ರೀ ಶ್ರೀಪಾದರಾವ ಕಲ್ಯಾಣಪುರ, ಶ್ರೀ ಗಣಪತರಾವ ಮಣಕೀಕರ, ಶ್ರೀ ಜಿ ಜಿ ಶಾಸ್ತ್ರೀ, ವಕೀಲ, ಮಿ॥ ಅಲ್ಲಿ ಅಹಮದ ಸಾಹೇಬ, ಶ್ರೀ ಕಾಗಾಲ ಗೋವಿಂದ ಪೈ, ಶ್ರೀ ಪುಂಡಲೀಕ ಕೇಶವ ಕಾನಡೆ, [illegible], ಶ್ರೀ ಸುಬ್ರಾಯ ವೆಂಕಟರಮಣ ಹೆಗಡೆ ಊರಕೇರಿ.

ಗೋಕರ್ಣ— ಈ ವಾರದಲ್ಲಿ [illegible] ಜವಾ ಆದ ಬೆಸ್ತಗಿ ಅಕ್ಕಿ ಕೊಳಗ ೨೬ [illegible] ನಗ ೬೧೨ ಆಣೆ ವೈಕ ಅಕ್ಕಿ [illegible] ಬಂದ ರೂಪಾ ೩೧೧॥ ಕೊಬ್ಬರಿ ೧೯ ೮೦ ಈ ವಾರದಲ್ಲಿ ಜಮಾ ಆಗಿವೆ.

ಹೊನ್ನಾವರ— ಅಲ್ಲಲ್ಲಿ "ಅವತಾನ" ಸಭೆಗಳನ್ನು ಕೂಡಿಸಿ ಮಾಮಲೇದಾರ ಶಿರಸ್ತೇದಾರ ಸಾ॥ [illegible] ವಕೀಲ, ವ ಇತರ ಜನರಿಗೆ ವ ಸರಕಾರ ಚಳವಳದ ಅನಿಷ್ಟಗಳನ್ನು ಬೋಧಿಸುವ ಪರಿಪಾಠವು ನಡೆದದೆ. ಅಸಹಕಾರ ಚಳವಳದ ಸತ್ಯವು ಸೂರ್ಯನಂತೆ ಬೆಳಗುತ್ತಿರುವಾಗ, ಇವರ ಬೋಧನೆಗಳನ್ನು ಕೇಳಿ, ಜನರು ಮನಸ್ಸಿನಲ್ಲಿ [illegible] ನಕ್ಕರೆ ಏನೇ ಆಶ್ಚರ್ಯ!

ಕಳೆದ ಶನಿವಾರ ಸಂಜೆಗೆ ಇಲ್ಲಿಯ ಹೈಸ್ಕೂಲು ಮತ್ತು ಕುಮಟಾ ಗಿಬ್ಬ ಹೈಸ್ಕೂಲಿನ ಹುಡುಗರೊಳಗೆ "ಫುಟಬೋಲ" ಆಟವಾಯಿತು. ಹೊನ್ನಾವರದವರ ಆಟದ ಶಿಸ್ತು, ಕುಶಲತೆಯು ಗೋಲಕೀಪರ ಮಿ॥ ಟಿ ಎಚ್ ಗಾಂವಕರ ಇವರ ಅಸಾಧಾರಣ ಚಾತುರ್ಯವೂ ಪ್ರಶಂಸನೀಯವಿದ್ದವು. ಕುಮಟೆಯವರು ೧೧ ಸಾರೆ ಗೋಲಾಗುವ ಚೆಂಡನ್ನು ಇವರು ಚಾತುರ್ಯದಿಂದ ತಪ್ಪಿಸಿದರು. ೭ ನೇ ಸಾರೆ ಇವರು ಒಂದೇ ಕೈಯಿಂದ ಹೊಡೆದ ಚೆಂಡು ೫೦ ಯಾರ್ಡು ಎತ್ತರಕ್ಕೆ ಮತ್ತು ೬೫ ಯಾರ್ಡು ದೂರ ಬಿದ್ದದ್ದನ್ನು ನೋಡಿ ಎಲ್ಲರೂ "ಶಾಬಾಸ" ಎಂದರು. ಇದೇ ರೀತಿಯಿಂದ ಆಟವು ಮುಗಿಯಿತು.

ಕಾನಡಾ [illegible] ಬುಕ್ಕೆಯು ಜಗವರಿ [illegible] ಉತ್ತದೆ.

ಪುಣೆ ಕೊಪ್ಪರಿಗೆಗಳಿಗಿಂತ ಉತ್ತಮ

ಕೊಪ್ಪರಿಗೆಗಳು.

ನಮ್ಮಲ್ಲಿ ಪುಣೆ ಕೊಪ್ಪರಿಗೆಗಳಿಗಿಂತ ಉತ್ತಮ ಕೊಪ್ಪರಿಗೆಗಳು ತಯಾರ ಮಾಡಿಕೊಡುತ್ತೇವೆ. ಬೇಕಾದವರು ಮಾಡಿಸಿಕೊಳ್ಳಬಹುದು. ಎಗ್ರಿಕಲ್ಚರಲ ಫಾರ್ಮಿನ ಅಧಿಕಾರಿಗಳು ಸಹ ನಮ್ಮಲ್ಲಿಯೇ ಮಾಡಿಸಿಕೊಂಡಿರುವರು. ಬೇಕಾದವರು ಕೆಳಗಿನ ಪತ್ತೆಯ ಮೇಲೆ ಪತ್ರವ್ಯವಹಾರ ಮಾಡಬಹುದು.

ಪತ್ತೆ — ಕಾರ್ಪೆಂಟರ ರಾಮಾ ಚೆಟ್ಟನಾಯ್ಕ,
ಕುಮಟಾ (ಎನ್ ಕೆನರಾ)

ಸ್ತ್ರೀಯರಿಗೆ ಶೀಲ ಭೂಷಣವೇ ಭೂಷಣ

ಕಾಮಿನಿಯಾ ತೈಲ. (ರಜಿಸ್ಟರ್ಡ)

ಮುದುಮಾರ ಗುಂಗುರು ಗುಂಗುರಾಗಿರುವ ನೀಳವೆ ಮೆಂತ ಸುಭಿಕವಾದ ಕೇಶದಾ [illegible] ಕೇಶರಾಶಿ ಸ್ತ್ರೀಯರಿಗೆ ಒದಗಿಸ [illegible] (ರಜಿಸ್ಟರ್ಡ)

ಕಾಮಿನಿಯಾ [illegible] ಶೃಂಗಾರವನ್ನು ಹೇಗೆ ಕೊಡುತ್ತದೆಯೋ [illegible] ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಹಾಗೆಯೇ ಮಾನಸಿಕ ಪರಿಶ್ರಮ [illegible] ಆಗತ್ಯದ ಸಹಕಾರಿಯಾಗಿರುತ್ತದೆ [illegible] ಕೊಡದ ಕೊಳ್ಳುತ್ತಲೇ ವ ಸ್ವಸ್ಥದ [illegible] ನೆಯು ಶಾಂತಗಾಗಿ, ಮನಸ್ಸು [illegible] ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ಹೊಡೆಯು ತೊಡಗಿದ ಬಳಿಕ ಎಂದಿಗೂ ಜಗ್ಗಿ ಬಿದ್ದು ಹೋಗಲಾರವು. ಬದಲೆ, ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು.

ಕೀಳು ತರದ ಎಣ್ಣೆಗಳನ್ನು ಕೊಂಡುಕೊಂಡು [illegible] ಹಣವನ್ನು ಹಾಳುಮಾಡಿಕೊಳ್ಳುವದಕ್ಕಿಂತ ಒಂದೇ ಒಂದು ಬಾರಿ ಈ ಕಾಮಿನಿಯಾ ಆಯಿಲ ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ಬಗೆಯಿಂದ ನಮಗೆ [illegible] ಪ್ರದರ್ಶನದಲ್ಲಿ "ಸರ್ಟಿಫಿಕೇಟ ಒಫ್ ಮೆರಿಟ" ಅಥವಾ ಯೋಗ್ಯತಾಪತ್ರವು, ಇತರ ನೂರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಕ್ರಯ — ಸೀಸೆಗೆ ರೂಪಾಯಿ 1 0 0, ಸೀಸೆ 3ಕ್ಕೆ ರೂಪಾಯಿ 2 10 0 [illegible] ಖರ್ಚು 0 14 0

ರವಾದ ಸುರಭಿಯು!

[illegible]ಲ್ ಬಹಾರ್ !! (ರಜಿಸ್ಟರ್ಡ)

ಅತ್ಯುತ್ತಮವು [illegible] ಪರೀಕ್ಷಿಸಿ [illegible] ಸೌಗಂಧಿಕ [illegible] ಗಳಿಂದ [illegible] ಈ ದ್ರವ್ಯದ ಕೆಲವು ಹನಿಗಳನ್ನು [illegible] ಈ [illegible] ಬೇರೆ ಯಾವ [illegible] ದ್ರವ್ಯಗಂಧವು ಕೇಗೂ ಇರಲಿ ಈ [illegible] ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.
0-12-0, 1 [illegible] ಸೀಸೆ 1 ಕ್ಕೆ 2-0 0 [illegible]
[illegible] ಡಜನ್ 1 ಕ್ಕೆ 0 12 0

[illegible]llan Drug & Chemical Co,
16 Market BOMBAY. 2.

ಸ್ವರ ಗ್ಯಾಯಿ!
ಕಳೆದೆ ಬಿಡಬೇಡಿರಿ.

ಎಳಿಗೆಗಳು.

[illegible] ಪುರುಷ ವಿಷಯವಾಗಿಯೂ ಹಸ್ತ [illegible] ಗಳನ್ನು ದೂರಪಡಿಸಿ [illegible] ಉತ್ಸಾಹವನ್ನು [illegible] ಯೌವ್ವನದ ಕಳೆಯನ್ನೂ [illegible] ರೋಗಗಳ [illegible] ಇವುಗಳನ್ನು [illegible] ಶೇಕಡಾ [illegible] ಸ್ವಲ್ಪ [illegible] ನ [illegible] ಕೆಲ [illegible] ಮೊದಲು [illegible] ನಂ ೧ ನಂ ೨ ಹೀಗೆ ೨ ತರ ಸೀಸೆಗಳಿಗೆ ರೂ ೧ ಪೋಸ್ಟೇಜ ಬೇರೆ.

ಎವರ್ಗ್ರೀನ್ ಕೆಮಿಸ್ಟ್,
ಕಕ್ಕೆ. (ಕೆನರಾ)

ರಾಗದ ಪೆಟ್ಟಿಗೆಗಳು.

ತಬಲೆ ಜೋಡಿ ಇತ್ಯಾದಿ ಗಾಯನ ಸಾಮಾನು.



೧ ರಾಗದ ಪೆಟ್ಟಿಗೆ ಕಿಂ ೩೦, ೪೦, ೪೫ ೬೦ ೭೦
೨ „ [illegible] ಪೆಟ್ಟಿಗೆ ಕಿಂ ೭೫, ೭೫, ೧೪೦, ೧೬೦
೩ ತಬಲ ಜೋಡಿ ಕಿಂ ೧೩ ೧೫ ೧೮, ೨೦,
೪ ಹ [illegible] ಗ್ರಾಫ ಕಿಂ ೧, ತಬಲೆಗೆ [illegible] ಕಿಂ ೧೨ ೮

ಸಿಕ್ಷಣ [illegible] ನಮ್ಮ ಕ್ಯಾಟಲಾಗ ಪುಕ್ಕಟೆ ಕೊಡುವೆವು.
ವಸ್ತ್ರ [illegible] ದಾರಿಯಿಂದ ಇಲ್ಲವ [illegible]

ಪತ್ತೆ — ಗೋಪಾಳ ಸಖಾರಾಮ ಮತ್ತು
ಕಂಪನಿ, ನಂ ೨೬೨,
ಕಾಳಬಾದೇವಿ ರೋಡ, ಮುಂಬಯಿ

ಆಶ್ರಯದಾತರಿಗೆ ವಿನಂತಿ.

ಮುಂದಿನ ವಾರದ, ಅಂದರೆ, ತಾ ೨೨ ನೇ ಡಿಸೆಂಬರದ ಸಂಚಿಕೆಯು ಅನಿವಾರ್ಯ ಪಕ್ಷದಿಂದ [illegible] ಬಂದ ಇಡಬೇಕಾಗಿದೆ. ಆದ್ದರಿಂದ, ಕರ್ನಾಟಕವೃತ್ತವು ಬರುವ ೨೯ ನೇ ತಾರೀಖಿಗೆ [illegible] ವಾಚಕರಿಗೆ ಭೆಟ್ಟಿ ಕೊಡ[illegible] [illegible]. —ವಿನಂತಿ.

ಕರ್ನಾಟಕವೃತ್ತ

ಗುರುವಾರ ತಾರೀಖು ೧೫ ಮಾಹೆ ಡಿಸೆಂಬರ ೧೯೨೧

ಆಯರ್ಲಂಡವು ಸ್ವತಂತ್ರ ಸಂಸ್ಥಾನವಾಗುವದು.

ಬ್ರಿಟಿಷ ಸಾಮ್ರಾಜ್ಯದ ಇತಿಹಾಸದೊಳಗೆ ಚಿರಸ್ಮರಣೀಯವಾಗುವಂಥ ಒಂದು ಸಂಗತಿಯು ಸಂಭವಿಸಿದೆ. ಸಾಮ್ರಾಜ್ಯದೊಳಗೆ [illegible] ತಂತ್ರ ಘಟಕಗಳಾಗಿ ದುರ್ದೈವದಿಂದ [illegible] ಜ್ಯವಿಹೀನರಾದ ಇಜಿಪ್ತ, ಹಿಂದುಸ್ಥಾನ [illegible] ತ್ತು ಆಯರ್ಲಂಡ ಈ ಮೂರು ದೇಶಗಳ [illegible] ಗಿಂತ ಒಂದಕ್ಕೆ ಅಂದರೆ [illegible] ನವರಾಗಿ ಇಂಗ್ಲಂಡದ [illegible] ಆಯರ್ಲಂಡಕ್ಕೆ ವಸಾಹತಿಯ ಸ್ವರಾಜ್ಯದ ಮಾದರಿಯ, ಅದಕ್ಕಿಂತ ಹೆಚ್ಚು ಸ್ವಯತ್ತತೆಯ ಸ್ವಾತಂತ್ರ್ಯವನ್ನು ಕೊಡಬೇಕೆಂದು ಬಾದಶಹರ ಮಂತ್ರಿಮಂಡಲವೂ, ಆಯರ್ಲಂಡದ ಬಹುಸಂಖ್ಯಾಕ ಸಿನ್‌ಫೇನ್ ಪಕ್ಷದ ಮುಖಂಡರೂ ಪಂಚಾಯತಿಯಿಂದ ಉಭಯತರ ಒಪ್ಪಿಗೆಯಿಂದ ನಿರ್ಣಯಿಸಿಕೊಂಡಿರುವರು. ಆಯರ್ಲಂಡದ ಸ್ವರಾಜ್ಯದ ಒಪ್ಪಂದದ ಕರಾರಿನ ೧೮ ಕಲಮುಗಳ ಕಚ್ಚಾ ಮಸೂದೆಯು ಜಾಹೀರಾಗಿದೆ. ಅದನ್ನು ನೋಡಿ ಸಮುದ್ರದಾಚೆಯ [illegible] ಹಿಂದೀಯರೂ ಇಜಿಪ್ಶಿಯನರೂ ಮನಃಪೂರ್ವಕವಾಗಿ ಆಯರ್ಲಂಡಕ್ಕೆ ಅಭಿನಂದಿಸಿ ತಮಗೂ ಈ ಸ್ವರಾಜ್ಯದ ಭಾಗ್ಯವು ಬೇಗ ಪ್ರಾಪ್ತವಾಗಲೆಂದು ಬಯಸುವರು. ಒಪ್ಪಂದದ ಸುದ್ದಿಯನ್ನು ತಿಳಿದ ಕೂಡಲೇ ಬಾದಶಹರು ಹಿಗ್ಗಿ ತಮ್ಮ ಮುಖ್ಯ ಪ್ರಧಾನರಿಗೆ ತಂತಿಯಿಂದ ಸಂದೇಶವನ್ನು ಕಳಿಸಿದ್ದೇನಂದರೆ— 'ಈ ಗಹನತರವಾದ ವರ್ತಮಾನವನ್ನು ಕೇಳಿ ನನಗೆ ಅತ್ಯಾನಂದವಾಗಿದೆ. ಕಠಿಣ ಪ್ರಾಯವಾದ ಮತ್ತು ದೀರ್ಘ ಕಾಲ ನಡೆದ ಆಯರಿಶ ವಾಟಾಘಾಟಿಯು ತುದಿಯಲ್ಲಿ ಯಶಸ್ವಿಯಾಗಿ ಕೊನೆಗೊಂಡಿತೆಂದು ನಿಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುವೆನು. ಈ ವ್ಯವಹಾರದಲ್ಲಿ ನೀವು ಬಹಳೇ ತಾಳ್ಮೆ [illegible] ಸಾಧನೋಪಾಯವನ್ನು ತೋರಿಸಿದ್ದರಿಂದ ಇದೆಲ್ಲ ಫಲಪ್ರಾಪ್ತಿಯಾಗಿದೆ. ಇಷ್ಟು ದೊಡ್ಡ ಕಾರ್ಯಸಿದ್ಧಿಯಲ್ಲಿ ಬೆಲಫಾಸ್ಟದೊಳಗೆ ನಾನು ಮಾಡಿದ ಭಾಷಣದಿಂದ ಒಪ್ಪಂದದ ಕಾರ್ಯದಲ್ಲಿ ನಾನು [illegible] ಮಾಡಿದೆನೆಂದು ತಿಳಿದು [illegible] ಉತ್ತೇಜಕಹರಿ [illegible] ನನ್ನ ಪ್ರಜೆಗಳ [illegible] ಎಂದಿಲ್ಲೊಂದು ಜೆಗಳ ಸ್ವರಾಜ್ಯವು ಇಷ್ಟ ಪ್ರಾಪ್ತವಾಗಿದೆಯೆಂದು ಅರಿತು ನನ್ನ ಮನಸ್ಸಿನೊಳಗೆ [illegible] ಬಗ್ಗೆ ಆದರವು, ಅಭಿಮಾನವೂ ಹುಟ್ಟುವದಲ್ಲವೇ?' ಮುಖ್ಯ ಪ್ರಧಾನರಾದ ಲ್ಯಾಯ್ಡ ಜಾರ್ಜ ಸಾಹೇಬರಂತೂ ಆಯರ್ಲಂಡದ ಒಪ್ಪಂದವು ತನ್ನ ಕೈಯಿಂದ ಸಾಮೋಪಚಾರದಿಂದ ನೆರವೇರಿತೆಂದು ಮಹದಾನಂದವಾಗುವದು ಸಹಜಿಕವು. ನಿರಪರಾಧಿ ಆಯರಿಶರು, ಬಹು ವರ್ಷಗಳ ವರೆಗೆ ಅನ್ಯಾಯದಲ್ಲಿ ಹೋರಾಡಿ [illegible] ಯಿಂದ [illegible] ಕ್ಕೆ ಸಹ ಪ್ರವೃತ್ತರಾದದ್ದನ್ನು ಕಂಡು ದಬ್ಬಾಳಿಕೆಯಿಂದ ಅವರಿಗೆ ಮತ್ತಷ್ಟು ಅನ್ಯಾಯ [illegible] ಹೆಚ್ಚಳಮಾಡಿ ತುದಿಯಲ್ಲಿ ಅವರಿಗೆ ನ್ಯಾಯದಾನವನ್ನು ಮಾಡಿದರೆ [illegible] ಸ್ವತಂತ್ರ್ಯದ ನಿರ್ಬಂಧಗಳಿಂದ ಅವರಿಗೆ ಬಿಡಿಸಿದರೆ ನ್ಯಾಯಾಧೀಶರಿಗಾಗುವ [illegible] ಆನಂದವೇ ಮುಖ್ಯ ಪ್ರಧಾನರಿಗಾಗಿದೆ. ಆಯರ್ಲಂಡದ ಸ್ವರಾಜ್ಯಕ್ಕೆ ಒಪ್ಪಿಗೆಯನ್ನು ಕೊಡದೆ [illegible] ದೊಳಗಿನ ದೇಶಭಕ್ತರು ಅವರಿಗೆ [illegible] ಮಾಡಿದ್ದರಿಂದಲೇ ಒಪ್ಪಂದದ [illegible] ವಿಘ್ನಕರ್ತರ ಆತಂಕಗಳನ್ನು [illegible] ಹೆಚ್ಚಿನದರಿಂದ [illegible] ಈ ಒಪ್ಪಂದವು [illegible] ಎಂದು [illegible] ಹಟ [illegible] ತನ್ನ ಹಾದಿಯನ್ನು ಹಿಡಿಯುತ್ತ [illegible] ಆಯರ್ಲಂಡದ ಪಾರ್ಲಿಮೆಂಟಿಗೂ ಬ್ರಿಟಿಷ ಪಾರ್ಲಿಮೆಂಟಿಗೂ ಈ ಮಸೂದೆಯು [illegible] ವಾಗಿ ಅದು ಸ್ಥಿರವಾಗಲೆಂದು ನಾವು ಹಾರೈಸುತ್ತೇವೆ.

ಈ ಒಪ್ಪಂದದ ಕರಾರಿನಂತೆ ಆಯರ್ಲಂಡದೇಶದ ರಾಜಕೀಯ ಅಭಿದಾನವು ಸಹ ಬದಲಾಗುವದು. ಅದಕ್ಕೆ ಇನ್ನು ಮುಂದೆ "Irish Free State" ಆಯರ್ಲಂಡದ ಸ್ವತಂತ್ರ ಸಂಸ್ಥಾನವು ಎಂಬ ಹೆಸರು ಪ್ರಾಪ್ತವಾಗುವದು. ಅಲ್ಸ್ಟರವು ಅದರೊಳಗೆ ಸೇರಲಿ, ಸೇರದಿರಲಿ ಆಯರ್ಲಂಡಕ್ಕೆ ಸ್ವತಂತ್ರ ಪಾರ್ಲಿಮೆಂಟು ದೊರೆಯುವದು. ಸ್ವಸಂರಕ್ಷಣೆಯ ವ್ಯವಸ್ಥೆಯನ್ನು ಈ ಸಂಸ್ಥಾನವು ಮಾಡುವ ತನಕ ಬ್ರಿಟಿಷ ಆರಮಾರವು ಅದನ್ನು ಕಾಪಾಡುವದು. ಆದಕ್ಕೆ ವ್ಯಾಪಾರೀ ಸ್ವಾತಂತ್ರ್ಯವು ಪ್ರಾಪ್ತವಾಗುವದು. ಒಂತಸ್ತು ಕಾರಭಾರದೊಳಗೆ ವಸಾಹತಿಯ ಸ್ವರಾಜ್ಯದ ರಾಜ್ಯಪದ್ಧತಿಯು ಅಮಲಿನಲ್ಲಿ ಬರುವದು. ಎಲ್ಲ ಆಯರಿಶ ಜನರು ಸ್ವರಾಜ್ಯದೊಳಗಿನ ಬಾದಶಹರ [illegible] ಪ್ರಜೆಗಳಾಗುವರು. ಒಟ್ಟಿಗೆ ಆಯರ್ಲಂಡದ ಸ್ವರಾಜ್ಯದ ಭಾಗ್ಯೋದಯವು ನಿಶ್ಚಿತವಾಗಿ ಈಗ ಆಗುವದು.

ತುದಿಯು ಸವಿಯಾದರೆ ಎಲ್ಲವೂ ಸವಿ ಎಂದು ಹೇಳಿದಂತೆ ಈಗಾದ ಒಪ್ಪಂದವು ಸವಿಯೇ ಸರಿ. ಆದರೆ ೧೮೦೧ ನೇ ಇಸ್ವಿಯಲ್ಲಿ ಸರಾಸರಿ ೧೨೦ ವರ್ಷಗಳ ಹಿಂದೆ ಚಿಕ್ಕ ಪಿಟ್ಟರೆಂಬ ಮುಖ್ಯ ಪ್ರಧಾನರು ಆಯರಿಶ ಸಭಾಸದರಿಗೆ ಲಂಚಬಾದ್ಯವನ್ನು ಸಹ ಕೊಟ್ಟು ಅವರ ಕೈಯಿಂದಲೇ ಆಯರ್ಲಂಡದ ಪಾರ್ಲಿಮೆಂಟನ್ನು ನಾಶಪಡಿಸಿ ಅದರ ಸ್ವರಾಜ್ಯವನ್ನು ಮುಳುಗಿಸಿದ್ದರು. ಅಂದಿನಿಂದ ಇಂದಿನ ತನಕ ನಷ್ಟವಾದ ಸ್ವರಾಜ್ಯವನ್ನು ಪುನಃ ಪ್ರಾಪ್ತಪಡಿಸಿಕೊಳ್ಳಲಿಕ್ಕೆ ಆಯರಿಶ ಜನರು ಎಷ್ಟು ಭಗೀರಥ ಪ್ರಯತ್ನ ಮಾಡಿದರು. ಜೀವದಮೇಲೆ ಹಂಗು ತೊರೆದು ಪ್ರಾಣಹಾನಿಗೆ ಸಹ ಬೆದರದೆ ಎಷ್ಟು ನಿರ್ಧಾರದಿಂದ ಹೋರಾಡಿದರು ಮತ್ತು ಬ್ರಿಟಿಷ ಸರಕಾರವು ಅವರ ದೇಶಭಕ್ತಿಯ ಪ್ರಯತ್ನಗಳನ್ನೆಲ್ಲ ಎಷ್ಟು ಅನ್ಯಾಯದಿಂದ ಒಮ್ಮೊಮ್ಮೆ ನಿರ್ದಯತೆಯಿಂದ ತಿರಸ್ಕರಿಸಿದರು ಎಂಬುದೆಲ್ಲ ಈಗ ಇತಿಹಾಸದ ವಿಷಯವಾಗಿರುವದು. ಕಳೆದ ಅರ್ಧ ಶತಕದಿಂದಂತೂ ಸ್ವರಾಜ್ಯಪ್ರಾಪ್ತಿಯ ಪರಾಕಾಷ್ಠೆಯ ಪ್ರಯತ್ನಗಳನ್ನು ಅವರು ಮಾಡಿದರೂ ಸತ್ತಾಧಾರಿ ಬ್ರಿಟಿಷ ಮುತ್ಸದ್ದಿಗಳ ಮುಂದೆ ಅವರ ಆಟವೇನೂ ಯಾಕೆ ಸಾಗಲಿಲ್ಲ? ಅವರ ಸನದಶೀರ ಪ್ರಯತ್ನಗಳೆಲ್ಲ ನಿಷ್ಫಲವಾಗಿ ಕಟ್ಟಕಡೆಗೆ ಈಗೀಗ ಕಟ್ಟಾ ಸ್ವದೇಶೀ ವ್ರತದ ಮತ್ತು ಅತ್ಯಾಚಾರಿ ಧರ್ಮದ ಸಿನ್‌ಫೇನ್ ಪಕ್ಷವು ಪ್ರಬಲವಾಗಿ ಕೊಲೆಗಡಕ ಸಾಮ್ರಾಜ್ಯವು ಆಯರ್ಲಂಡದೊಳಗೆ ಬಹಳ ಮತ್ತರ್ಕ ಕಣ್ಣಿಗೆ ಬೀಳುತ್ತಿತ್ತಲ್ಲವೇ? ನೀವು ನಮ್ಮನ್ನು ಕೊಂದರೆ ನಾವು ನಿಮ್ಮನ್ನು ಕೊಲ್ಲುವೆವು ಎಂಬಂತೆ ಮುಯ್ಯಿಗೆ ಮುಯ್ಯಿ ತೀರಿಸುವ ದಂಡ ನೀತಿಯನ್ನು ಸಹ ಬ್ರಿಟಿಷ ಕಾರಭಾರಿಗಳು ಅಂಗೀಕರಿಸಿ ರಕ್ತಪಾತದ ಪಾತಕದೊಳಗೆ ತಮ್ಮ ಕೈಗಳನ್ನು ಸಹ ಸಂಕಾರವು ಸಿದ್ಧಮಾಡಿಕೊಳ್ಳಲಿಲ್ಲವೇ?" ಇಂಥ ಅತ್ಯಾಚಾರಿ ಅಸಹಕಾರಿಗಳಾದ ಸಿನ್‌ಫೇನ್ ಪಕ್ಷದ ಮುಖಂಡರ ಕೂಡ ಸಂಧಾನವನ್ನು ನಡಿಸುವದು ಯುಕ್ತವೂ, ಅವಶ್ಯಕವೂ, ನ್ಯಾಯ್ಯವೂ ಎಂದು ಈಗಿನ ಒಪ್ಪಂದದಿಂದ ಜಗತ್ತಿಗೆ [illegible] ಪಡಿಸಿದ ಬ್ರಿಟಿಷ ಸರಕಾರವು ಅನತ್ಯಾಚಾರಿ ಅಸಹಕಾರಿಗಳಾದ ಹಿಂದೀಯರ ಕೂಡ [illegible] ಕ್ಕೆ ಇನ್ನು ತನಕ ಒಪ್ಪಿದಿದ್ದ [illegible] ದುರ್ದೈವವು [illegible] ಬಹರದಿಂದ ಮತ್ತೂ ಅದ ಭಯ [illegible] ಬರುವೆಂಬ ಕಲ್ಪನೆಯ ಭೀತಿಯು [illegible] [illegible] ಮನಸ್ಸು ಮತ್ತೂ [illegible] [illegible] ದಾರ [illegible] ಮುತ್ಸದ್ದಿಗಳ [illegible] [illegible] ತಲೆ [illegible] ಸಬೇಕಾಗುವದು. [illegible]

ಹಿಂದೀ ನವರೆಗೆ ಉಂಟಾದ ಅನ್ಯಾಯವನ್ನು ದೂರಪಡಿಸಲಿಕ್ಕಾಗದಿದ್ದರೂ ಈಗಾದರೂ ತಮ್ಮ ಉದಾರತನವು ಸ್ವಾತಂತ್ರ್ಯವಾಯಿತೆಂದು ಅಂತು ಅವರು ಧನ್ಯರೆನ್ನಿಸಿಕೊಳ್ಳಲಿ [illegible] ಆದರೆ ಈ ಉದಾರತನವು ಮತ್ತಷ್ಟು ತನವು ಹಿಂದೂಸ್ಥಾನದ ಮತ್ತು ಅಜಸ್ರದ ಅನ್ಯಾಯವನ್ನು ದೂರಪಡಿಸುವ ತನಕ ಅದರ ಕಲಂಕವು ಪರಿಮಾರ್ಜನೆಯಾಗದು. ಮೊನ್ನೆಯೇ ಮಾಂಟೆಗ್ಯೂ ಸಾಹೇಬರು ನಾಲ್ಕು ಆಣೆ ಸ್ವರಾಜ್ಯದ ದಾನವನ್ನು ಮಾಡಿರುವಾಗ, ಸುಧಾರಣಾ ಕಾಯಿದೆಯು ಈಗ ಮಾತ್ರ ಅಮಲಿನಲ್ಲಿ ಬಂದಿರುವಾಗ, ಪೂರ್ತಿಯಾದ ಸ್ವರಾಜ್ಯದ ಕಾಯಿದೆಯನ್ನು ಪರ್ಯಾಲೋಚಿಸಬೇಕಾಗುವ ಸಂಧಾನವನ್ನು ಹಿಂದೀಯರಕೂಡ ಈಗ ಹಮ್ಮಿಕೊಳ್ಳುವದು ಎಂದು ಕುಂಟ ನೆವವನ್ನು ಮುಂದೊಡ್ಡುವವರಿಗೆ ಕಳೆದ ವರುಷ ಐರ್ಲಂಡದ ಎಂಟು ಆಣೆ ಸ್ವರಾಜ್ಯದ ಕಾಯಿದೆಯನ್ನು ಘೋಷಿಸಿ ಒಂದೇ ವರುಷದೊಳಗೆ ಮತ್ತೊಂದು ಭಕ್ಕಮ ಸ್ವರಾಜ್ಯದ ಕಾಯಿದೆಯನ್ನು ಐರ್ಲಂಡಕ್ಕಾಗಿ ಅದೇ ಬ್ರಿಟಿಶರ ಪಾರ್ಲಿಮೆಂಟು ಮಂಜೂರ ಮಾಡಿಸಬೇಕಾಗಿದೆಂದು "ನಾವು ಎಚ್ಚರಿಕೆಯನ್ನು ಕೊಡಬೇಕೇನು? ಐರ್ಲಂಡದ ಒಪ್ಪಂದದ ಸುದ್ದಿಯನ್ನು ಕೇಳಿ ನಮ್ಮ ಗವರ್ನರ್ ಜನರಲ್ ಸಾಹೇಬರಿಗೂ ಆನಂದವೆನಿಸಿದೆ. ಅವರೂ ಲಿಬರಲ್ ಪಕ್ಷದ ಮುತ್ಸದ್ದಿಗಳೇ. ವರ್ತಮಾನಕಾಲವು ಅಪೂರ್ವವಾಗಿ ಪ್ರಾಸಂಗಿಕವಾಗ್ಗಿದೆ. ಯುವರಾಜರು ಇಲ್ಲಿಗೆ ಬಂದು ದೇಶದೊಳಗೆ ಪರ್ಯಟನ ಮಾಡುತ್ತಿದ್ದಾರೆ. ಇಂಥ ಭಾಗ್ಯವಂತ ಭಾವೀ ಅರಸರ ಸ್ವಾಗತವು ನಮ್ಮಲ್ಲಿದ್ದಾಗ ಹಿಂದೀ ಸ್ವರಾಜ್ಯದ ವಿಷಯವಾಗಿ ಸಂಧಾನದ ಚರ್ಚೆಯನ್ನು ನಡಿಸಲಿಕ್ಕೆ ಎಲ್ಲ ಪಕ್ಷದ ಮುಖಂಡರ ಪರಿಷತ್ತನ್ನು ರೀಡಿಂಗ ಸಾಹೇಬರು ಕೂಡಿಸುವದನ್ನು ಯೋಚಿಸುವರೋ? ಐರ್ಲಂಡದ ಒಪ್ಪಂದದಿಂದ ಸಾಮ್ರಾಜ್ಯದ ಹಿತವಾಗುವದೆಂದು ಅವರ ನಂಬಿಗೆ ಇದ್ದರೆ ಹಿಂದೀ ಜನರ ಒಪ್ಪಂದದಿಂದ ಅವರ ಭವಿಷ್ಯವು ಭದ್ರವಾಗಿ ಜಗತ್ತಿಗೆಲ್ಲ ಕಲ್ಯಾಣಕರವಾಗುವದೆಂದು ಅದಕ್ಕಾಗಿ ಹಿಂದೀಯರ ಅನ್ಯಾಯವನ್ನು ಸ್ವರಾಜ್ಯ ದಾನದಿಂದ ದೂರಪಡಿಸಬೇಕೆಂದು ಸಹಾನುಭೂತಿಯ ಭಾವನೆಯು ಅವರಲ್ಲಿದ್ದರೆ ಅವರು ವಿಲಂಬ ಮಾಡದೆ ಹಿಂದೀ ಮುಖಂಡರ ಸಮ್ಮೇಲನವನ್ನು ಕೂಡಿಸಿ ಅದರೊಳಗೆ ಸಂಧಾನದ ಚರ್ಚೆಯನ್ನು ನಡಿಸುವದು ಮತ್ತು ಸಾಮ್ರಾಜ್ಯದೊಳಗಿನ ಈ ಮಹತ್ವದ ಪ್ರಶ್ನೆಯನ್ನು ಬಿಡಿಸಿದ ಕೀರ್ತಿಯನ್ನು ತಮ್ಮ ಸೆರಗಿಗೆ ಕಟ್ಟಿಕೊಳ್ಳುವರು. ನೋಡುವ ಅವರ ಭಾಗ್ಯವು ಎಷ್ಟು ಬಲವತ್ತರವಿದೆಂದು.

ಸ್ಫುಟ ಸೂಚನೆಗಳು.

೧. ಈ ಸಮಯ ಯುವರಾಜರನ್ನು ಕಾಣಲಿಕ್ಕೆ ಕರೆಸಿದ [illegible] ಇದ್ದರೆ [illegible] ಅಶ್ಯದವಾಗಿದೆಂದು ಕೇಳಬ [illegible] ದೇವನಾದ ಭಕ್ತ ಪ್ರತಿಷ್ಠ [illegible] ನ್ನು ದಬ್ಬಾಳಿಕೆಯು [illegible] ದ ಕ್ರಮವು ಸರ್ವತ್ರ ಪಸರಿಸನೆ ನಡೆದಿದೆ [illegible] ಶಿವರ ಅಸಹಕಾರದ ಚಳವಳಿಯು ಶಾಂತತಾಭಂಗ, [illegible] ವಿರುವದೆಂಬ ಅಧಿಕಾರವೇ ವೃಥಾ ಅಪರಾಧ ಹೊ [illegible]

ದೇ। ಪಂಡಿತ ಮೋತಿಲಾಲ ನೆಹರು.

[illegible] ಪತ್ನಿಯು ಕಸಮಿಂದ ಕಳೆದ [illegible] ಸ್ವಾತಂತ್ರ್ಯ [illegible]

"ನನ್ನ ಸ್ವೈರಿಯವಾದ ನೌಕರಶಾಹಿಯು ಹುಟ್ಟು ಹಿಡಿದವನಾಗಿರುವ ನೀನು ನ್ಯಾಯಾಧೀಶನಾಗಿದ್ದ ನಿನ್ನ ಕೋರ್ಟನ್ನು ನಾನು ನ್ಯಾಯದ ಕೋರ್ಟೆಂದು ಎಣಿಸುವದಿಲ್ಲ ಮತ್ತು ನಿನ್ನ ಪ್ರಶ್ನೆಗಳಿಗೆ ಏನೊಂದು ಉತ್ತರ ಕೊಡುವದಿಲ್ಲ" ಎಂದು ಪಂಡಿತರು ನ್ಯಾಯಾಧೀಶರಿಗೆ ಹೇಳಿದರು. ಕೂಡಲೇ ನ್ಯಾಯಾಧೀಶರು ಅವರಿಗೆ ಆರು ತಿಂಗಳ ಸಾದಾ ಶಿಕ್ಷೆಯನ್ನು ಕೊಟ್ಟು ಅವರ ಪತ್ನಿಯನ್ನು ೧-೨ ದಿನಗಳಲ್ಲಿ ಮುಗಿಸಿದರು. ಪಂಡಿತರು ಶಿಕ್ಷೆಯನ್ನು ಆನಂದದಿಂದ ಸ್ವೀಕರಿಸಿದರು.

೨. [illegible] ನ್ನು ಕಿತ್ತೊಗೆಯಲಿಕ್ಕೆ ಸರಕಾರವು ತನ್ನ ಸರ್ವಶಕ್ತಿಯನ್ನು ವಿನಿಯೋಗ ಮಾಡುವದೆಂದು ಲಾರ್ಡ ರೀಡಿಂಗ ಸಾಹೇಬರೇ ಈ ಹೊಸ ದಬ್ಬಾಳಿಕೆಯ ಡಂಗುರವನ್ನು ಸಾರಿದರು. ಇದರ ಪರಿಣಾಮವು ಈಗಲೇ ಬಂಗಾಲ, ಸಂಯುಕ್ತ ಪ್ರಾಂತ, ದಿಲ್ಲೀ, ಪಂಜಾಬ ಮೊದಲಾದ ಪ್ರಾಂತಗಳಲ್ಲಿ ದೃಗ್ಗೋಚರವಾಗಹತ್ತಿದೆ. ೧೯೦೮ನೇ ಇಸ್ವಿಯ ದಬ್ಬಾಳಿಕೆಯ ಕಾಲಕೀರ್ದಿಯಲ್ಲಿ ಹುಟ್ಟಿದ ಸಭಾಬಂದಿ ಮೊದಲಾದ ಕಟು-ಕಾಯಿದೆಗಳಿಗೆ ಈಗ ಹೊಸಜೀವವು ಬಂದಿತು. ಮುಕ್ತ ನಾಗರಿಕತ್ವದ ಸಾಮಾನ್ಯ ಹಕ್ಕುಗಳು [illegible] ಕಾಯಿದೇಶೀರವೆಂ [illegible] ನ ಜಾಮೀನುದಾರರಾಗಿದೆ. ಇಂದು ಅಸಹಕಾರದ [illegible] ಮಹಾತ್ಮರನ್ನು [illegible] ಕಲಕತ್ತಾ ಕೊಂಗ್ರೆಸ [illegible] ಅಧ್ಯಕ್ಷರಾಗಿದ್ದ ಸಂಭಾವಿತ ದೇ। ಭ। ಲಾಲಾ [illegible] ಸೇನೆಯು, ಅಖಿಲ ಭಾರತ ರಾಷ್ಟ್ರೀಯ ಸಭೆಯ [illegible] ಅಧ್ಯಕ್ಷರಾಗಿದ್ದ ಸುಪ್ರಸಿದ್ಧ ದೇಶಭಕ್ತ ಪಂಡಿತ ಮೋತಿಲಾಲ ನೆಹರು ಮೊದಲಾದ ಮೊದಲನೇ ಶ್ರೇಣಿಯ ಲೋಕನಾಯಕರು ಈ ಅನ್ಯಾಯದ ಪ್ರತಿಬಂಧಗಳನ್ನು ಧಿಕ್ಕರಿಸಿ ಆನಂದದಿಂದ ಅಧಿಕಾರಿಗಳ ಸೆರೆಯಾಳುಗಳಾಗಿರುವರು. ಬರುವ ಅಹಮ್ಮದಾಬಾದ ಕೊಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟ ಬಂಗಾಲದ ವಿಖ್ಯಾತ ದೇಶಭಕ್ತ ದಾಸರನ್ನು ಸರಕಾರವು ಸೆರೆಯೊಳು ಬಂದಿಸಿದೆ. ದಿನೇ ದಿನೇ ಅಸಂಖ್ಯ ಸಣ್ಣ ದೊಡ್ಡ ದೇಶಸೇವಕರು ಕಾರಾಗೃಹವಾಸವನ್ನು ಸತ್ತ್ವಶೀಲರಂತೆ ಶಾಂತ ಪ್ರಸನ್ನ ಮುದ್ರೆಯಿಂದ ಸ್ವೀಕರಿಸುತ್ತಿರುವರು. ಈ ಪ್ರಕಾರ ಸುವ್ಯವಸ್ಥೆಯ ಮತ್ತು ಶಾಂತತೆಯ ನೆವದಿಂದ ದೇಶಸೇವಕರನ್ನು ಬಂದಿಯಲ್ಲಿಟ್ಟು ಚಳವಳಿಯನ್ನು ಬಡಿದು ಹಾಕುವದು ಶಕ್ಯವೆಂದು ರೀಡಿಂಗ ಸಾಹೇಬರು ತಿಳಿದಿದ್ದರೆ, [illegible] ತಿಂಗಳ [illegible] ಸದಿಂದ ಈ ದೇಶದ ಪರಿಸ್ಥಿತಿಯು ಮತ್ತು ಜನ ಮನಸ್ಸಿನ ಅಂತರಂಗವು ಅವರಿಗೆ ಗೊತ್ತಾಗಲಿಲ್ಲೆಂದು ಹೇಳಬೇಕಾಗುತ್ತದೆ. ಸ್ವರಾಜ್ಯವು ಆದೀತು, ಎಷ್ಟು ಆತ್ಮತ್ಯಾಗ ಮಾಡಿ ಅದನ್ನು ಗಳಿಸಬೇಕೆಂಬ ಕರ್ತವ್ಯವು ದೇಶದಲ್ಲಿ ಸ್ಥಿರವಾಗಿ ನೆಲೆಗೊಂಡಮೇಲೆ, ದೇಶಸೇವಕರನ್ನು ಸೆರೆಯಲ್ಲಿಟ್ಟು, ಅದನ್ನು ಕಿತ್ತೊಗೆಯುವದು ಶಕ್ಯವೇನು? ಹಳೇ ಲೋಕನಾಯಕರ ನಿರ್ಗಮನದ ಬಳಿಕ, ಹೊಸ ಲೋಕನಾಯಕರನ್ನು ನಿರ್ಮಿಸುವ ಶಕ್ತಿಯು ಸ್ವಭಾವತಃ ಜಾಗ್ರತವಾದ ಪ್ರತಿ ಒಂದು ದೇಶದಲ್ಲಿ ಇದ್ದೇ ಇರುವದು. ಅನೊಂದು ಸರ್ವಸಾಮಾನ್ಯ ನಿಸರ್ಗದ ನಿಯಮವಿದೆ. ಕೋಳಿಯನ್ನು ಬಚ್ಚಿಟ್ಟರೆ ಸೂರ್ಯೋದಯವು ತಡೆಯುವದೇನು?

೫. ಬಂಗಾಳ, ಸಂಯುಕ್ತ ಪ್ರಾಂತ, ದಿಲ್ಲಿ, ಪಂಜಾಬದಲ್ಲಿ ದಬ್ಬಾಳಿಕೆಯ ಸತ್ರವು ಪ್ರಾರಂಭವಾಗಿದೆಂದು ಕೇಳಿ ಮಹಾತ್ಮಾ ಗಾಂಧಿಯವರಿಗೆ ಬಹು ಹರುಷವಾಗಿದೆ. ದೇ। ಭ। ಲಾಲಾಜಿ, ಪಂಡಿತ ಮೋತಿಲಾಲ ನೆಹರು ಇಂಥ ಕೊಂಗ್ರೆಸದ ಆಧಾರಸ್ತಂಭಗಳು ಅರಸರ ಸೆರೆ ಬಿದ್ದರೆಂಬ ಸುದ್ದಿಯು ಮಹಾತ್ಮರಿಗೆ ತಿಳಿದು, ಹಿಂದುಸ್ಥಾನವು ಶೀಘ್ರವೇ ಸ್ವರಾಜ್ಯವನ್ನು ಸ್ಥಾಪಿಸುವದೆಂಬ ಅವರ ಆಶೆಯೂ, ಆನಂದವೂ ದ್ವಿಗುಣಿತವಾಗಿದೆ. ಪವಿತ್ರ ದೇಶಸೇವೆಯನ್ನು ಮಾಡಿದ ಅಪರಾಧಕ್ಕಾಗಿ, ದೇಶಭಕ್ತರನ್ನು ಸೆರೆಹಿಡಿಯುವ ಅರಸರ ಕ್ರಮವು ಹೀಗೆಯೇ ಅವ್ಯಾಹತವಾಗಿ ಮುಂದುವರಿದರೆ, ಮತ್ತು ಜನತೆಯು ಎಂಥ ಉದ್ವೇಗಕರ ಪ್ರಸಂಗಗಳಲ್ಲಿ ಸಹ ತಮ್ಮ ಶಾಂತ ವೃತ್ತಿಯು ವಿಚಲವಾಗದಂತೆ ಸತ್ತ್ವಶೀಲರಂತೆ ನಡೆಸಿದರೆ, ನಾವು ಸ್ವರಾಜ್ಯವನ್ನು ಶೀಘ್ರವೇ ಸ್ಥಾಪಿಸಬಹುದೆಂದು ಮಹಾತ್ಮರ ಅಂದೋಲನವಾಗಿದೆ. ಇಂಥ ಪ್ರಸಂಗದಲ್ಲಿ ಆಯಾ ಕೊಂಗ್ರೆಸ ಕಮಿಟಿಗಳ ಕಾರ್ಯಕಾರಿ ಮಂಡಳಿಗಳು ಸೆರೆಬಿದ್ದರೆ, ಇತರ ಮಂದಿ ದರು ಆ ಖಾಲಿಬಿದ್ದ ಜಾಗೆಗಳನ್ನು ತುಂಬಿ ಚಳವ

